ಕರ್ನಾಟಕ ಸರ್ಕಾರ

# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು ಸಂಪುಟ–೧


ಲೇಖಕರು

**ಪಂ. ದೀನ್ ದಯಾಳ್ ಉಪಾಧ್ಯಾಯ**



ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಬೆಂಗಳೂರು, ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು–೫೬೦ ೦೫೬

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೩೦

ವಿಚಾರ ಸಾಹಿತ್ಯಮಾಲೆ – ೪೬

ಪ್ರಧಾನ ಸಂಪಾದಕರು

**ಡಾ. ಪ್ರಧಾನ್ ಗುರುದತ್ತ**

# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು

## ಸಂಪುಟ ೧

**ಸಂಪಾದಕ ಮಂಡಳಿ**

ಡಾ. ಪ್ರಧಾನ್ ಗುರುದತ್ತ (ಅಧ್ಯಕ್ಷ)
ಶ್ರೀ ಎಸ್.ಆರ್. ರಾಮಸ್ವಾಮಿ (ಸದಸ್ಯರು)
ಡಾ. ಜಿ.ಬಿ. ಹರೀಶ್ (ಸದಸ್ಯರು)
ಡಾ. ಮಂಗಳಾ ಶ್ರೀಧರ್ (ಸದಸ್ಯರು)
ಶ್ರೀ ಪಿ.ಎಂ. ರಮೇಶ್ (ಸದಸ್ಯರು)



# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು

## ಸಂಪುಟ ೧

**ಪಂ॥ ದೀನ್ ದಯಾಳ್ ಉಪಾಧ್ಯಾಯ**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**DĪN DAYĀL UPĀDHYĀYA AVARA SAMAGRA BAREHAGAḶU (Samputa 1) (Complete Works of Pandit Deendayal Upadhaya, Vol.I)** Consisting of the Kannada translation of **Jagadguru Shankaracharya, Yavana Vijeta Chandra Gupta, Bhagavan Sri Krishna, Swatantrya Sadhane mattu Siddhi** and the Monograph on the same author by **Dr. Mahesh Chandra Sharma;** Editor-in-Chief : **Dr. Pradhan Gurudatta;** Published by **Sri P. Narayana Swamy, Registrar, Kuvempu Bhasha Bharathi Pradhikara;** Kalagrama, Jnana Bharathi, Behind Bangalore University Campus, Mallattahalli, Bangalore - 560 056 ; 2012 ; Pp. xxvi + 428 (Photographs: 8pages Including) ; Price : Rs. 125/-

© : ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು

ಪ್ರಥಮ ಮುದ್ರಣ : ೨೦೧೨
ಪುಟಗಳು : xxvi + ೪೨೮ (ಚಿತ್ರಸಂಪುಟ ೮ ಪುಟಗಳು ಸೇರಿ)
ಬೆಲೆ : ರೂ. ೧೨೫/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು - ೫೬೦ ೦೫೬

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಶ್ರೀ ವಿಶ್ವನಾಥ್ ಶೆಟ್ಟಿಗಾರ್**

**ISBN : 978-93-80415-19-2**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು - ೫೬೦೦೨೦. ದೂ : ೨೩೩೪೨೭೨೪

**ಜಗದೀಶ್ ಶೆಟ್ಟರ್**
ಮುಖ್ಯ ಮಂತ್ರಿ

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು - ೫೬೦ ೦೦೧

ಸಿಎಂ/ಪಿಎಸ್/೯೪/೨೦೧೨

ದಿನಾಂಕ : ೧೦-೧೦-೨೦೧೨

## ಮೊದಲ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ನಿರಂತರವಾಗಿ ಉಪಯುಕ್ತ ಪುಸ್ತಕಗಳ ಪ್ರಕಟಣೆಯೂ ಸೇರಿದಂತೆ ಕನ್ನಡ ನಾಡು ಹಾಗೂ ನುಡಿಯ ವಿಕಾಸಕ್ಕೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಸಂತಸದ ಸಂಗತಿ.

ರಾಷ್ಟ್ರಕವಿ ಕುವೆಂಪುರವರ ಹೆಸರಿನಲ್ಲಿರುವ ಭಾಷಾ ಭಾರತಿ ಪ್ರಾಧಿಕಾರ ತನ್ನ ಹೆಸರನ್ನು ಅನ್ವರ್ಥ ಮಾಡಿಕೊಳ್ಳುವ ರೀತಿಯಲ್ಲಿ ಕ್ರಿಯಾಶೀಲವಾಗಿರುವುದು ಶ್ಲಾಘನೀಯ. ವಿಲ್ ಡ್ಯೂರಾಂಟ್‌ರವರ **"ನಾಗರಿಕತೆಯ ಇತಿಹಾಸ",** ಜೆ.ಡಿ. ಬರ್ನಾಲ್‌ರವರ **"ಇತಿಹಾಸದಲ್ಲಿ ವಿಜ್ಞಾನ"** ಮುಂತಾದ ಸಂಪುಟಗಳ ಕನ್ನಡ ಅನುವಾದ, ಡಾ. ಬಿ.ಆರ್. ಅಂಬೇಡ್ಕರ್‌ರವರ ಕೃತಿಗಳ ಪರಿಷ್ಕೃತ ಆವೃತ್ತಿಗಳ ಪ್ರಕಟಣೆ, ಭಾರತೀಯ ವಿದ್ಯಾಭವನದ ಸಹಯೋಗದೊಂದಿಗೆ ಹಲವಾರು ಗ್ರಂಥಗಳ, ವೈದ್ಯವಿಜ್ಞಾನ, ವಿಜ್ಞಾನ ತಂತ್ರಜ್ಞಾನಗಳಿಗೆ ಸಂಬಂಧಪಟ್ಟಂತಹ ಬಹುಕ್ಷೇತ್ರಗಳ ಉಪಯುಕ್ತ ಪ್ರಕಟಣೆಗಳ ಹಾಗೂ ಇತರ ಅಗತ್ಯ ಚಟುವಟಿಕೆಗಳ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವ್ಯಕ್ತಪಡಿಸಿರುವ ಬದ್ಧತೆ ಶ್ಲಾಘನೀಯ.

ಕನ್ನಡ ನಾಡಿನ ಜನತೆ ಪ್ರಾಧಿಕಾರದ ಚಟಿವಟಿಕೆಗಳಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಎಲ್ಲ ಪ್ರಕಟಣೆಗಳನ್ನು ಪ್ರೀತಿ ವಿಶ್ವಾಸದಿಂದ ಸ್ವಾಗತಿಸಲಿ ಎಂದು ಆಶಿಸುತ್ತಾ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಎಲ್ಲ ರೀತಿಯಲ್ಲಿಯೂ ಶುಭ ಹಾರೈಸುತ್ತೇನೆ.

**(ಜಗದೀಶ್ ಶೆಟ್ಟರ್)**

ಕರ್ನಾಟಕ ಸರ್ಕಾರ

**ಗೋವಿಂದ ಕಾರಜೋಳ**
ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

೫ ಅಕ್ಟೋಬರ್ ೨೦೧೦

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿರುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ಬಸವರಾಜು,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಬಸವರಾಜು)

ಕರ್ನಾಟಕ ಸರ್ಕಾರ

**ಕೆ.ಆರ್. ರಾಮಕೃಷ್ಣ**
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ



ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಆರ್. ರಾಮಕೃಷ್ಣ)

## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ-ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ-ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ **'ಶ್ರೀ ರಾಮಾಯಣ ದರ್ಶನಂ'** ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ.ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'**ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ-ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. **'ಕುವೆಂಪು ಭಾಷಾ ಭಾರತಿ'** ಕುವೆಂಪು ಸಾಹಿತ್ಯದ ಪ್ರಚಾರ-ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ-ಗರಿಮೆಗಳನ್ನು ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.



ವಿಲ್ ಡ್ಯೂರಾಂಟ್ ಅವರು **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ, ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ-ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ - ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ. ಪಂ. ದೀನ್‌ದಯಾಳ್ ಉಪಾಧ್ಯಾಯರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆಯೂ ಇಂಥ ಇನ್ನೊಂದು ಯೋಜನೆ.

ಪಂ. ದೀನ್ ದಯಾಳ್ ಉಪಾಧ್ಯಾಯ ಅವರು ಅಪ್ರತಿಮ ದೇಶಭಕ್ತರೂ, ಆದರ್ಶ ಚಿಂತಕರೂ, ಸಮಾಜ ಸುಧಾರಕರೂ, ಪ್ರಬುದ್ಧ ತತ್ವಜ್ಞಾನಿಯೂ, ಮೇಧಾವಿ ಅರ್ಥಶಾಸ್ತ್ರಜ್ಞರೂ, ರಾಷ್ಟ್ರನಿರ್ಮಾಪಕರೂ, ಮೌಲ್ಯನಿಷ್ಠ ಪತ್ರಕರ್ತರೂ, ಉತ್ತಮ ಸಾಹಿಯೂ ಆಗಿದ್ದ ಮಹಾನ್‌ವ್ಯಕ್ತಿಯಾಗಿದ್ದರು. ನಾಡಿನ ಹಿತಚಿಂತನೆಯೇ ಸದಾ ಅವರ ಧ್ಯೇಯವಾಗಿತ್ತು. ಸದೃಢ ಭಾರತವನ್ನು ರೂಪಿಸಬೇಕೆಂಬ ಅವರ ಅಭಿಪ್ಸೆಯೇ ಅವರು ಹಿಂದೀ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ರಚಿಸಿದ ಗ್ರಂಥಗಳಲ್ಲಿ, ತಾವೇ ಸಂಪಾದಿಸುತ್ತಿದ್ದ ಪತ್ರಿಕೆಗಳಲ್ಲಿನ ಅವರ ಲೇಖನಗಳಲ್ಲಿ ಮೈದಳೆದಿರುತ್ತಿತ್ತು. ಜನಸಂಘದಂಥ ರಾಷ್ಟ್ರೀಯ ರಾಜಕೀಯ ಪಕ್ಷವೊಂದರ ಪ್ರಧಾನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಅವರು ಕಾರ್ಯನಿರ್ವಹಿಸುತ್ತ ಇದ್ದರೂ, ಅವರ ಚಿಂತನ-ಮಂಥನಗಳು ಪಕ್ಷಾತೀತವಾಗಿ, ಕಾಲಾತೀತವಾಗಿ ಇದ್ದುವೆಂಬುದಕ್ಕೆ ಅವರ ಬರೆಹಗಳು ಅಸಂದಿಗ್ಧ ಸಾಕ್ಷ್ಯವನ್ನು ನುಡಿಯುತ್ತವೆ. ಅವರ ಹೆಸರಿನಲ್ಲಿ ಸಂಶೋಧನ ಸಂಸ್ಥೆಗಳೂ, ವಿಶ್ವವಿದ್ಯಾನಿಲಯವೂ ಸ್ಥಾಪಿತವಾಗಿವೆ ಎಂಬುದು ಅವರ ಸಿದ್ಧಿ-ಸಾಧನೆಗಳನ್ನು ಸಾರಿಹೇಳುವ ಸಂಗತಿಗಳೇ ಆಗಿವೆ. ಅವರ ಜೀವನ ಚರಿತ್ರೆಯನ್ನೂ, ಸಮಗ್ರ ಕೃತಿಗಳನ್ನೂ ಸುಮಾರು ಎಂಟು ಸಂಪುಟಗಳಲ್ಲಿ ಹೊರತರುವ ಯೋಜನೆಗೆ ಕರ್ನಾಟಕ ಸರ್ಕಾರ ಅನುಮೋದನೆಯನ್ನು ನೀಡಿದ್ದು, ಮೊದಲ ಕಂತಾಗಿ, ೨೦ ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದೆ. (ಸರ್ಕಾರದ ಆದೇಶ ಸಂಖ್ಯೆ : ಕಸಂ.ವಾಪ್ರ೨೧೧:ಕಸಧ:೨೦೧೦ ಬೆಂಗಳೂರು,

ದಿನಾಂಕ: ೧೩.೦೪.೨೦೧೦) ಮೊದಲ ಕಂತಿನಲ್ಲಿ ನಾಲ್ಕು ಸಂಪುಟಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಉಳಿದ ಸಂಪುಟಗಳು ಶೀಘ್ರದಲ್ಲಿಯೇ ಬಿಡುಗಡೆಯಾಗಲಿವೆ.

ಇದಕ್ಕಾಗಿ–ಮಾಹಿತಿ ಸಂಗ್ರಹ, ಅನುವಾದ ಮತ್ತು ಸಂಪಾದನ ಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಈ ಕೆಳಕಂಡಂತೆ ಸಂಪಾದನ ಸಮಿತಿಯೊಂದನ್ನು ರಚಿಸಿಕೊಳ್ಳಲಾಯಿತು:

೧. ಡಾ. ಪ್ರಧಾನ್ ಗುರುದತ್ತ (ಅಧ್ಯಕ್ಷರು)
೨. ಶ್ರೀ ಎಸ್.ಆರ್. ರಾಮಸ್ವಾಮಿ (ಸದಸ್ಯರು)
೩. ಡಾ. ಜಿ.ಬಿ. ಹರೀಶ್ (ಸದಸ್ಯರು)
೪. ಡಾ. ಮಂಗಳಾ ಶ್ರೀಧರ್ (ಸದಸ್ಯರು)
೫. ಶ್ರೀ ಪಿ.ಎಂ. ರಮೇಶ್ (ಸದಸ್ಯರು)

ನವದೆಹಲಿಯ ದೀನ್‌ದಯಾಳ್ ಉಪಾಧ್ಯಾಯ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಮಹೇಶ ಚಂದ್ರ ಶರ್ಮಾ ಅವರನ್ನು ವಿಶೇಷ ಆಹ್ವಾನಿತರನ್ನಾಗಿ ಕರೆಸಿಕೊಂಡು, ಆಗಿರುವ ಕಾರ್ಯ ಮತ್ತು ಆಗಬೇಕಾಗಿರುವ ಕಾರ್ಯಗಳ ಬಗ್ಗೆ ಸಲಹೆ–ಸೂಚನೆಗಳನ್ನು ಪಡೆದುಕೊಳ್ಳಬೇಕೆಂದು ನಿರ್ಧರಿಸಲಾಯಿತು. ಅದರಂತೆ ದಿನಾಂಕ : ೧೭.೧೨.೨೦೧೨ರಂದು ಡಾ. ಮಹೇಶ ಚಂದ್ರ ಶರ್ಮಾ, ಶ್ರೀ ದತ್ತಾತ್ರೇಯ ಹೊಸಬಾಳೆ, ಮತ್ತು ಶ್ರೀ ವಾದಿರಾಜ್ ಅವರ ಉಪಸ್ಥಿತಿಯಲ್ಲಿ ಸಂಪಾದಕ ಸಮಿತಿಯ ಸಭೆ ನಡೆಯಿತು. ಈ ಸಭೆಯ ಸಲಹೆ–ಸೂಚನೆಗಳಂತೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲು ಕ್ರಮಕೈಗೊಳ್ಳಲಾಯಿತು. ಡಾ. ಜಿ.ಬಿ. ಹರೀಶ್ ಅವರ ನೇತೃತ್ವದಲ್ಲಿ ನವದೆಹಲಿಯ ಪತ್ರಾಗಾರ, ಲಕ್ನೋ ಮತ್ತು ಮಥುರಾ ಮತ್ತು ನಗಲಾ ಚಂದ್ರಭಾನ್ ಮುಂತಾದ ಸ್ಥಳ ಗಳಲ್ಲಿನ ಅಧ್ಯಯನ ಕೇಂದ್ರಗಳು, ದೆಹಲಿಯ ದೀನ್ ದಯಾಳ್ ಉಪಾಧ್ಯಾಯ ಸಂಶೋಧನ ಸಂಸ್ಥೆ, ಮುಂಬಯಿಯ ರಾವ್ ಭಾವೂ ಮಾಳಗಿ ಅಧ್ಯಯನ ಕೇಂದ್ರ, ಮಾಜಿ ಉಪರಾಷ್ಟ್ರಪತಿಗಳಾದ ಶ್ರೀ ಬಿ. ಶೇಖಾವತ್ ಅವರಿಂದ ಮತ್ತು ಇನ್ನಿತರ ಮೂಲಗಳಿಂದ, **'ರಾಷ್ಟ್ರಧರ್ಮ', 'ಪಾಂಚಜನ್ಯ'** ಮೊದಲಾದ ಪತ್ರಿಕೆಗಳ ಹಳೆಯ ಸಂಚಿಕೆಗಳಿಂದ ಮಾಹಿತಿಯನ್ನು ಸಂಗ್ರಹಿಸಲು ಕ್ರಮ ಕೈಗೊಳ್ಳಲಾಯಿತು.

ಪಂ. ದೀನ್‌ದಯಾಳ್ ಉಪಾಧ್ಯಾಯರನ್ನು ಕುರಿತಂತೆ ಡಾ. ಮಹೇಶ ಚಂದ್ರ ಶರ್ಮಾ ಅವರು ಹಿಂದಿಯಲ್ಲಿ ರಚಿಸಿರುವ ಗ್ರಂಥವನ್ನು ಅನುವಾದಿಸಿ ಬಳಸಿಕೊಳ್ಳಲು ಅನುಮತಿಯನ್ನು ಕೋರಲಾಯಿತು. ಅದಕ್ಕೆ ಡಾ. ಶರ್ಮಾ ಅವರು ಅನುಮತಿಯನ್ನು ನೀಡಿದ್ದಲ್ಲದೆ. ದೀನ್‌ದಯಾಳ್ ಉಪಾಧ್ಯಾಯ ಅವರ ಇತರ ಎಲ್ಲ ಕೃತಿಗಳನ್ನೂ ಅನುವಾದಿಸಿಕೊಳ್ಳಲು ಯಾವುದೇ ಅಡ್ಡಿ ಇಲ್ಲವೆಂದೂ ತಿಳಿಸಿದರು. ಸಂಪಾದಕ ಸಮಿತಿಯ ಸದಸ್ಯರಾದ ಶ್ರೀ ಎಸ್.ಆರ್. ರಾಮಸ್ವಾಮಿ ಅವರು ಈ ಮೊದಲೇ ರಾಷ್ಟ್ರೋತ್ಥಾನ ಪ್ರಕಾಶನದ ವತಿಯಿಂದ ಪ್ರಕಟವಾಗಿರುವ **'ವಿಚಾರ ರಶ್ಮಿ',** ಮತ್ತು **'ಯವನ ವಿಜೇತ ಚಂದ್ರಗುಪ್ತ'** (ಅನು: ಶ್ರೀ ಶಿವರಾಮು) ಕೃತಿಗಳ ಕನ್ನಡ ಅನುವಾದಗಳನ್ನು ಬಳಸಿಕೊಳ್ಳಲು ರಾಷ್ಟ್ರೋತ್ಥಾನ ಪ್ರಕಾಶನದ ವತಿಯಿಂದ ಅನುಮತಿಯನ್ನು ಕೊಡಿಸಿಕೊಟ್ಟಿದ್ದಾರೆ. ಉಳಿದ ಗ್ರಂಥಗಳನ್ನು ಮತ್ತು ಸಂಗ್ರಹಿಸಲಾದ ಇಂಗ್ಲಿಷ್ ಮತ್ತು ಹಿಂದೀ ಲೇಖನಗಳನ್ನು ನಾಡಿನ ಹಿರಿ–ಕಿರಿಯ ವಿದ್ವಾಂಸರ ನೆರವಿನಿಂದ ಭಾಷಾಂತರಿಸಿಕೊಳ್ಳಲು ಏರ್ಪಾಡು ಮಾಡಿಕೊಳ್ಳಲಾಯಿತು. ಈ ದಿಕ್ಕಿನಲ್ಲಿ



ಸಹಕರಿಸಿರುವ ಅವರೆಲ್ಲರಿಗೂ ಪ್ರಾಧಿಕಾರ ಕೃತಜ್ಞವಾಗಿದೆ.

ಮೊದಲ ಹಂತದಲ್ಲಿ ಈ ಕೆಳಕಂಡಂತೆ ನಾಲ್ಕು ಸಂಪುಟಗಳನ್ನು ಹೊರತರಲಾಗುತ್ತಿದೆ:

**ಸಂಪುಟ–೧**
೧. ಜಗದ್ಗುರು ಶಂಕರಾಚಾರ್ಯ
೨. ಯವನ ವಿಜೇತ ಚಂದ್ರಗುಪ್ತ
೩. ಭಗವಾನ್ ಶ್ರೀಕೃಷ್ಣ
೪. ಸ್ವಾತಂತ್ರ್ಯದ ಸಾಧನೆ ಮತ್ತು ಸಿದ್ಧಿ
ಮತ್ತು
೫. ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರನ್ನು ಕುರಿತ ಡಾ. ಮಹೇಶ ಚಂದ್ರ ಶರ್ಮಾ ಅವರ ಪುಸ್ತಕದ ಅನುವಾದ

**ಸಂಪುಟ–೨**
೧. ಭಾರತೀಯ ಅರ್ಥನೀತಿ
೨. ರಾಷ್ಟ್ರ ಜೀವನದ ದಿಕ್ಕು

**ಸಂಪುಟ–೩**
೧. ಏಕಾತ್ಮ ಮಾನವದರ್ಶನ
ಮತ್ತು
ಏಕಾತ್ಮ ಮಾನವದರ್ಶನದ ಬಗೆಗಿನ ಚಿಂತನೆಗಳು

**ಸಂಪುಟ–೪**
೧. ಎರಡು ಯೋಜನೆಗಳು
೨. ಅಪಮೌಲ್ಯೀಕರಣ

**ಸಂಪುಟ–೫**
೧. ರಾಜಕೀಯ ದಿನಚರಿ
೨. ವಿಚಾರ ರಶ್ಮಿ

ಈ ಸಂಪುಟಗಳನ್ನು ಈಗ ಬಿಡುಗಡೆ ಮಾಡಲಾಗುತ್ತಿದೆ. ಉಳಿದ ಸಂಪುಟಗಳನ್ನು ಶೀಘ್ರವಾಗಿ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗಿದೆ.

ಈ ಯೋಜನೆಗೆ ಚಾಲನೆ ದೊರೆತದ್ದೂ, ಅದು ಕಾರ್ಯರೂಪಕ್ಕೆ ಬಂದದ್ದೂ, ಅದಕ್ಕೆ ಅನುದಾನ ಬಿಡುಗಡೆಯಾದ್ದೂ ಮಾಜಿ ಮುಖ್ಯ ಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪ ಅವರಿಂದ, ಝಾರ್ಖಂಡ್ ಸರ್ಕಾರ ಈಚೆಗೆ ದೀನ್‌ದಯಾಳ್ ಉಪಾಧ್ಯಾಯರ ಸಮಗ್ರ ಕೃತಿಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿದೆಯಾದರೂ, ಇದನ್ನು ಮೊದಲ ಬಾರಿಗೆ (ಕನ್ನಡದಲ್ಲಿ) ಸಾಧಿಸಿದ ಹಿರಿಮೆ ಕರ್ನಾಟಕಕ್ಕೆ ಲಭಿಸಲು ಅವರು ಮೂಲ ಕಾರಣರಾಗಿದ್ದಾರೆ. ಇದಕ್ಕಾಗಿ ನಾವು ಅವರಿಗೆ ಕೃತಜ್ಞರೂ, ಋಣಿಗಳೂ ಆಗಿದ್ದೇವೆ. ಈ ಸಂಪುಟಗಳು ಅವರಿಗೆ ಸಂತೋಷ ಮತ್ತು ತೃಪ್ತಿಯನ್ನು ನೀಡುತ್ತವೆಂದು ನಂಬಿದ್ದೇವೆ.

ಮತ್ತೊಬ್ಬ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ.ವಿ. ಸದಾನಂದ ಗೌಡ ಅವರು ಈ ಯೋಜನೆಯ ಕಾರ್ಯಪ್ರಗತಿಯ ಬಗ್ಗೆ ಸಂತೋಷವನ್ನು

ವ್ಯಕ್ತಿಪಡಿಸಿ, ಬೆಂಬಲ ನೀಡುತ್ತ ಬಂದಿದ್ದಾರೆ. ಅವರಿಗೂ ಪ್ರಾಧಿಕಾರ ಕೃತಜ್ಞವಾಗಿದೆ.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ ಶೆಟ್ಟರ್ ಅವರು ಈ ಸಂಪುಟಗಳ ಬಗ್ಗೆ ಅಪಾರ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಇದು ಪ್ರಾಧಿಕಾರದ ವಿಶೇಷ ಸಂತೋಷಕ್ಕೆ ಕಾರಣವಾಗಿದೆ. ಅವರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಈ ದಿಕ್ಕಿನಲ್ಲಿ ಉದ್ದಕ್ಕೂ ಮಾರ್ಗದರ್ಶನ–ಸಹಾಯ–ಸಹಕಾರಗಳನ್ನು ನೀಡುತ್ತ ಬಂದಿರುವ ಶ್ರೀ ಮೈ.ಚ. ಜಯದೇವ್ ಅವರಿಗೆ ಪ್ರಾಧಿಕಾರ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಹಾಗೂ ಸಣ್ಣ ನೀರಾವರಿ ಖಾತೆ ಸಚಿವರಾದ ಸನ್ಮಾನ್ಯ ಶ್ರೀ ಗೋವಿಂದ ಎಂ. ಕಾರಜೋಳ ಅವರು ನಮ್ಮ ಪ್ರಾಧಿಕಾರದ ಕಾರ್ಯಯೋಜನೆಗಳು ಬಹುಮುಖವೂ, ಅರ್ಥಪೂರ್ಣವೂ, ವೈವಿಧ್ಯಮಯವೂ ಆಗಲು ಕಾರಣವಾಗಿದ್ದಾರೆ. ಅವರ ಸತತ ಪ್ರೋತ್ಸಾಹ ಮತ್ತು ಮೆಚ್ಚಿಕೆಯ ಫಲವಾಗಿಯೇ ಸಂಸ್ಥೆ ಹೊಸ ಹೊಸ ಯೋಜನೆಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿದೆ. ಇದಕ್ಕಾಗಿ ಪ್ರಾಧಿಕಾರ ಅವರಿಗೆ ಕೃತಜ್ಞವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳಾದ ಸನ್ಮಾನ್ಯ ಶ್ರೀ ಬಸವರಾಜು ಅವರು ಪ್ರಾಧಿಕಾರದ ಕಾರ್ಯಚಟುಚಟಿಕೆಗಳ ವಿಷಯದಲ್ಲಿ ವೈಯಕ್ತಿಕವಾಗಿ ಆಸಕ್ತಿವಹಿಸಿ, ನಾವು ಮುನ್ನಡೆಯಲು ಸತತವಾಗಿ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಅವರಿಗೂ ನಮ್ಮ ವಂದನೆಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೂತನ ಆಯುಕ್ತರಾದ ಸನ್ಮಾನ್ಯ ಶ್ರೀ ಕೆ.ಆರ್. ರಾಮಕೃಷ್ಣ ಅವರು ಪ್ರಾಧಿಕಾರದ ಕಾರ್ಯಚಟುವಟಿಕೆಗಳನ್ನು ಮೆಚ್ಚಿ, ತಮ್ಮ ಅಮೂಲ್ಯವಾದ ಸಲಹೆ–ಸೂಚನೆಗಳಿಂದ ನಮ್ಮನ್ನು ಉಪಕೃತರನ್ನಾಗಿಸಿದ್ದಾರೆ. ಅವರಿಗೂ ನಮ್ಮ ವಂದನೆಗಳು.

ಸಂಪಾದನ, ಮುದ್ರಣ, ವಿನ್ಯಾಸ, ಮಾಹಿತಿ ಅಳವಡಿಕೆಗಳ ವಿಚಾರದಲ್ಲಿ ಸಕಾಲಿಕವಾದ ಮತ್ತು ಸಂದರ್ಭೋಚಿತವಾದ ಮಾರ್ಗದರ್ಶನ ಸಹಾಯ–ಸಹಕಾರ ನೀಡುತ್ತ ಬಂದಿರುವ ಸಂಪಾದನ ಸಮಿತಿಯ ಹಿರಿಯ ಸದಸ್ಯರಾದ ಶ್ರೀ ಎಸ್.ಆರ್. ರಾಮಸ್ವಾಮಿ ಅವರು ಮೂಲ ಗ್ರಂಥಗಳ ಉದ್ಧರಣಗಳಲ್ಲಿಯೇ ಉಳಿದುಹೋಗಿರುವ ದೋಷಗಳನ್ನು ಪರಿಷ್ಕರಿಸುವಲ್ಲಿ ವಿಶೇಷವಾಗಿ ನೆರವು ನೀಡಿದ್ದಾರೆ. ಅವರಿಗೆ ಹಾಗೂ ಎಲ್ಲ ಸಹಕಾರ ನೀಡಿರುವ ಸಂಪಾದನ ಸಮಿತಿಯ ಇತರ ಸದಸ್ಯರಿಗೆ, ವಿಶೇಷವಾಗಿ ಡಾ. ಜಿ.ಬಿ. ಹರೀಶ್ ಅವರಿಗೆ, ನಾನು ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸಬಯಸುತ್ತೇನೆ. ಈ ಸಂಪುಟದಲ್ಲಿ ಅಚ್ಚಿಸಲಾಗಿರುವ ಅಪೂರ್ವ ಭಾವಚಿತ್ರಗಳನ್ನು ರಾಷ್ಟ್ರೋತ್ಥಾನ ಪ್ರಕಾಶನ ವಿಭಾಗದವರು ಒದಗಿಸಿದ್ದಾರೆ. ಇದಕ್ಕಾಗಿ ಅವರಿಗೆ ನಮ್ಮ ವಿಶೇಷ ವಂದನೆಗಳು

ಪ್ರಾಧಿಕಾರದ ಕೆಲಸ ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಶ್ರೀ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ಈ ಸಂಪುಟಗಳು ಸುಂದರವಾಗಿ ಹೊರಬರಲು ಕಾರಣರಾಗಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೂ, ಸುಂದರವಾದ



ಮುಖಪುಟದ ವಿನ್ಯಾಸವನ್ನು ಸಿದ್ಧಪಡಿಸಿರುವ ಶ್ರೀ ವಿಶ್ವನಾಥ್ ಶೆಟ್ಟಿಗಾರ್ ಅವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಕೃತಜ್ಞತೆಗಳು

೧. 'ರಾಷ್ಟ್ರ ಧರ್ಮ' ಪತ್ರಿಕೆಯ ಹಳೆಯ ಸಂಚಿಕೆಗಳನ್ನು ಒದಗಿಸಿದ 'ಪ್ರಜ್ಞಾ ಪ್ರವಾಹ' ಸಂಸ್ಥೆಯ ಮುಖ್ಯಸ್ಥರಾಗಿದ್ದ ದಿ॥ ಡಾ. ಉಪೇಂದ್ರ ಶೆಣೈ ಅವರಿಗೆ;
೨. 'ಪಾಂಚಜನ್ಯ' ಹಿಂದೀ ವಾರಪತ್ರಿಕೆಯ ಸಂಚಿಕೆಗಳನ್ನು ಒದಗಿಸಿದ ಸಂಪಾದಕ ವರ್ಗಕ್ಕೆ;
೩. 'ಆರ್ಗನೈಸರ್' ಇಂಗ್ಲಿಷ್ ವಾರಪತ್ರಿಕೆಯ ಸಂಚಿಕೆಗಳನ್ನು ಒದಗಿಸಿದ ಸಂಪಾದಕ ಶ್ರೀ ಬಾಲಶಂಕರ್ ಅವರಿಗೆ;
೪. ಮಥರಾ ಸಮೀಪದ ನಗಲಾ ಚಂದ್ರಭಾನ್‌ನಲ್ಲಿರುವ ಪಂ॥ ದೀನ್ ದಯಾಳ್ ಜನ್ಮಸ್ಥಾನ್ ಸ್ಮಾರಕ ಸಮಿತಿಯ ನಿರ್ದೇಶಕರಿಗೆ;
೫. 'ರೀಸರ್ಚ್ ಅಂಡ್ ಡೆವಲಪ್‌ಮೆಂಟ್ ಫೌಂಡೇಶನ್ ಫಾರ್ ಇಂಟೆಗ್ರಲ್ ಹ್ಯೂಮನಿಸಂ' ಸಂಸ್ಥೆಯ ನಿರ್ದೇಶಕರಾದ ಡಾ. ಮಹೇಶ್ ಚಂದ್ರ ಶರ್ಮಾ ಅವರಿಗೆ;
೬. ದೆಹಲಿ ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ರಾಕೇಶ್‌ಸಿನ್ಹಾ ಅವರಿಗೆ;
೭. ಡಾ. ಶ್ಯಾಮಾಪ್ರಸಾದ್ ಮುಖರ್ಜಿ ರೀಸರ್ಚ್ ಪೌಂಡೇಶನ್‌ನ ನಿರ್ದೇಶರಾದ ಶ್ರೀ ತರುಣ್ ವಿಜಯ್ ಅವರಿಗೆ;
೮. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿಂದಿನ ಸರ್ ಸಂಘ–ಚಾಲಕರಾದ, ದಿ॥ ಕು.ಸೀ. ಸುದರ್ಶನ್ ಅವರಿಗೆ;
೯. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಹ–ಸರ್‌ಕಾರ್ಯವಾಹಕರಾದ ಶ್ರೀ ದತ್ತಾತ್ರೇಯ ಹೊಸಬಾಳೆ ಅವರಿಗೆ;
೧೦. 'ಫೌಂಡೇಶನ್ ಫಾರ್ ಇಂಡಿಕ್ ರೀಸರ್ಚ್ ಸ್ಟಡೀಸ್' ಸಂಸ್ಥೆಯ ಪದಾಧಿಕಾರಿಗಳಿಗೆ ಹಾಗೂ ಈ ಸಂಸ್ಥೆಯ ಗ್ರಂಥಪಾಲರಾದ ಶ್ರೀಮತಿ ನಂದಿನಿ ಅವರಿಗೆ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳ ಸಂಪಾದಕ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತಾರೆ.



## ಪರಿವಿಡಿ

ಮೊದಲ ಮಾತು v
ಶುಭಾಕಾಂಕ್ಷೆ vi
ಹಾರೈಕೆ vii
ಪ್ರಾಸ್ತಾವಿಕ ನುಡಿ viii
ಪೀಠಿಕೆ x
ಕೃತಜ್ಞತೆಗಳು xvi

**ಸಂಪುಟ ೧**
**ಭಾಗ ೧**

**೧. ಜಗದ್ಗುರು ಶ್ರೀ ಶಂಕರಾಚಾರ್ಯ**
ಅನು. : **ಶ್ರೀ ಡಿ.ಎನ್. ಶ್ರೀನಾಥ್**

ಮನೋಭಿಲಾಷೆ ೧
೧. ಬಾಲ್ಯಾವಸ್ಥೆ ೪
೨. ಜನನ ೮
೩. ಆಕಾಂಕ್ಷೆ ೧೫
೪. ಧ್ಯೇಯ ಪಥ ೨೦
೫. ಗುರುಗಳ ಸಾನಿಧ್ಯದಲ್ಲಿ ೨೫
೬. ಶಿಕ್ಷಣ: ಮಾಯೆ ಮತ್ತು ಜಗತ್ತು ೩೧
೭. ಬಂಧನದಿಂದ ಬಿಡುಗಡೆ ೩೮
೮. ಸಾಮಾನ್ಯ ಜನರ ಸಾಕ್ಷಾತ್ಕಾರ ೪೪
೯. ದಿಗ್ವಿಜಯ ಪಯಣ ೫೪
೧೦. ಪ್ರಯಾಗದಲ್ಲಿ ೬೨
೧೧. ಕುಮಾರಿಲ ಭಟ್ಟ ೬೭
೧೨. ಮಂಡನಮಿಶ್ರರೊಂದಿಗೆ ಶಾಸ್ತ್ರದ ಚರ್ಚೆ ೭೧

೧೩. ಭಾರತಿಯ ಸಂದೇಹ ನಿವಾರಣೆ ೮೩
೧೪. ವೈವಿಧ್ಯದಲ್ಲಿ ಏಕತೆ ೮೮
೧೫. ರಾಷ್ಟ್ರ, ಧರ್ಮ ಮತ್ತು ಸಂಪ್ರದಾಯಗಳು ೯೬
೧೬. ಹಿಮಾಲಯದ ಶಿಖರಗಳಲ್ಲಿ ೧೦೩
೧೭. ಧ್ಯೇಯ ಸಾಧನೆ ೧೦೬
೧೮. ಮಹಾತತ್ತ್ವದಲ್ಲಿ ವಿಲೀನ ೧೧೦

**೨. ಯವನ ವಿಜೇತ ಚಂದ್ರಗುಪ್ತ**
ಅನು. : **ಶ್ರೀ ಶಿವರಾಮು**

ಪೂರ್ವಪರಿಚಯ ೧೧೭
೧. ಮೇಲೆದ್ದ ಹೊಗೆ ೧೨೨
೨. ಸೆರಗಿನಲ್ಲಿ ಕೆಂಡ ೧೨೫
೩. ಸುದ್ದಿ ಮುಟ್ಟಿತು ೧೩೧
೪. ಅನಲ ಅನಿಲರ ಸಮಾಗಮ ೧೩೬
೫. ಅಮಾತ್ಯಮಿತ್ರನೆಡೆಗೆ ೧೩೯
೬. ಕೌಟಿಲ್ಯಶಪಥ ೧೪೧
೭. 'ಜಗಜ್ಜೇತ'ನ ತೇಜೋವಧೆ ೧೪೫
೮. ಸಫಲತೆಗೆ ಕಾರ್ಯತಂತ್ರ ೧೪೮
೯. ಸಿಂಹಾಸನದಡಿಯ ಸಿಡಿಮದ್ದು ೧೫೨
೧೦. ನಾಡಿನ ಉಳಿವಿಗಾಗಿ ೧೫೫
೧೧. ಸೆಲೆಯೂಕನ ಸರದಿ ೧೬೦
೧೨. ಶ್ರೀಸಾಮಾನ್ಯನ ಮನ ೧೬೩
೧೩. ಸಿಂಧೂ ತೀರದ ಸ್ವಾಗತ ೧೬೫
೧೪. ಕನಸು ನನಸಾಯಿತು ೧೬೯
ಉಪಸಂಹಾರ ೧೭೨

**೩. ಭಗವಾನ್ ಶ್ರೀಕೃಷ್ಣ** ೧೭೫–೧೮೮
ಅನು. : **ಡಾ. ಪ್ರಧಾನ್ ಗುರುದತ್ತ**

**೪. ಸ್ವಾತಂತ್ರ್ಯದ ಸಾಧನೆ ಮತ್ತು ಸಿದ್ಧಿ** ೧೮೭–೨೦೦
ಅನು. : **ಡಾ. ಪ್ರಧಾನ್ ಗುರುದತ್ತ**



**ಚಿತ್ರ ಸಂಪುಟ** ೨೦೧–೨೦೮

## ಭಾಗ ೨

**೫. ಪಂಡಿತ್ ದೀನ್ ದಯಾಳ್ ಉಪಾಧ್ಯಾಯ :**
**ಡಾ. ಮಹೇಶ ಚಂದ್ರ ಶರ್ಮಾ**
ಅನು. : **ಡಾ. ಪ್ರಧಾನ್ ಗುರುದತ್ತ**
**ಡಾ. ಜಿ. ಶಾಂತಕುಮಾರಿ**
**ಡಾ. ಸುಮಾರಾವ್**

**ಅಧ್ಯಾಯ ೧**
ಕಷ್ಟಮಯ ಬಾಲ್ಯ ಹಾಗೂ ಮೇಧಾವಿ ವಿದ್ಯಾರ್ಥಿ ಜೀವನ ೨೧೧

**ಅಧ್ಯಾಯ ೨**
ರಾಷ್ಟ್ರೀಯ ಸ್ವಯಂಸೇವಕ ಸಂಘದೊಡನೆ ಸಂಬಂಧ ೨೨೨

**ಅಧ್ಯಾಯ ೩**
ಲೇಖಕ ಹಾಗೂ ಪತ್ರಕರ್ತ ೨೨೮

**ಅಧ್ಯಾಯ ೪**
ರಾಜಕೀಯದಲ್ಲಿ ಸಂಸ್ಕೃತಿಯ ರಾಯಭಾರಿ ೨೪೩

**ಅಧ್ಯಾಯ ೫**
ರಾಷ್ಟ್ರೀಯ ಅಖಂಡತೆಯ ರಾಜನೀತಿ ೨೫೭

**ಅಧ್ಯಾಯ ೬**
ಪ್ರಜಾತಂತ್ರದ ಮುನ್ನಡೆ ೨೮೮

**ಅಧ್ಯಾಯ ೭**
ಆರ್ಥಿಕ ಚಿಂತನೆ ೩೦೨

**ಅಧ್ಯಾಯ ೮**
ಏಕಾತ್ಮ ಮಾನವವಾದದ ದ್ರಷ್ಟಾರರು ೩೪೮

**ಅಧ್ಯಾಯ ೯**
ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿಯಾಗಿ
ಮತ್ತು ಅಧ್ಯಕ್ಷರಾಗಿ ೩೭೧

**ಅಧ್ಯಾಯ ೧೦**
ಮಹಾಪ್ರಯಾಣ ೪೦೨

**ಅನುಬಂಧಗಳು :**
೧. ಪ್ರಮುಖ ವರ್ಷಗಳು ೪೧೭
೨. ಕೃತಿಗಳ ವಿವರಣಾತ್ಮಕ ಸೂಚಿ ೪೧೯
೩. ದೀನ್ ದಯಾಳ್ ಉಪಾಧ್ಯಾಯ ಅವರನ್ನು ಕುರಿತ ಕೃತಿಗಳ ವಿವರಣಾತ್ಮಕ ಸೂಚಿ ೪೨೩



# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು

## ಸಂಪುಟ ೧

### ಭಾಗ ೧

೧. ಜಗದ್ಗುರು ಶಂಕರಾಚಾರ್ಯ
೨. ಯವನ ವಿಜೇತ ಚಂದ್ರಗುಪ್ತ
೩. ಭಗವಾನ್ ಶ್ರೀಕೃಷ್ಣ
೪. ಸ್ವಾತಂತ್ರ್ಯ ಸಾಧನೆ ಮತ್ತು ಸಿದ್ಧಿ

### ಚಿತ್ರ ಸಂಪುಟ

### ಭಾಗ ೨

೫. ಪಂಡಿತ್ ದೀನ್ ದಯಾಳ್ ಉಪಾಧ್ಯಾಯ :
ಡಾ. ಮಹೇಶಚಂದ್ರ ಶರ್ಮಾ

**Blank Page**



# ಭಾಗ ೧

## ೧. ಜಗದ್ಗುರು ಶಂಕರಾಚಾರ್ಯ

ಅನು : ಶ್ರೀ ಡಿ.ಎನ್. ಶ್ರೀನಾಥ್

**Blank Page**





ದೀನ್ ದಯಾಳ್ ಉಪಾಧ್ಯಾಯರ ಸ್ವಹಸ್ತಾಕ್ಷರವಿರುವ ಭಾವಚಿತ್ರ (೧೯೬೬)

X

## ಮನೋಭಿಲಾಷೆ

ನಮ್ಮ ರಾಷ್ಟ್ರ ನಿರ್ಮಾಪಕರಲ್ಲಿ ಜಗದ್ಗುರು ಶ್ರೀ ಶಂಕರಾಚಾರ್ಯರ ಸ್ಥಾನ ತುಂಬ ಉನ್ನತ ಮಟ್ಟದ್ದಾಗಿದೆ. ಅನೇಕ ವಿದ್ವಾಂಸರು ಅವರನ್ನು ಆಧುನಿಕ ಹಿಂದೂ ಧರ್ಮದ ಜನಕರೆಂದೇ ಹೇಳಿದ್ದಾರೆ.

ಜನ ಸಾಮಾನ್ಯರು ಸ್ವಾಮಿ ಶಂಕರಾಚಾರ್ಯರನ್ನು ಬೌದ್ಧ ಧರ್ಮವನ್ನು ನಾಶಮಾಡಿದವರು ಮತ್ತು ಹಿಂದೂ ಧರ್ಮದ ಸಂಸ್ಥಾಪಕರೆಂದು ನೋಡಿದರೆ, ಅನೇಕ ವಿದ್ವಾಂಸರಿಗೆ ಅವರಲ್ಲಿ "ಪ್ರಚ್ಛನ್ನ ಬೌದ್ಧ"ರು ಕಾಣಿಸುತ್ತಾರೆ. ಸತ್ಯಾಂಶ ಇಬ್ಬರ ಚಿತ್ರಗಳ ಹಿಂದಿದೆ. ಯಾಕೆಂದರೆ ಅವರ ಯುಗದ ಸಂಪೂರ್ಣ ಸಹಸ್ರ ವರ್ಷಗಳ ಇತಿಹಾಸ ಕೇಂದ್ರಾಪಗಾಮಿ ಬೌದ್ಧ ಧರ್ಮ ಮತ್ತು ಕೇಂದ್ರಾಭಿಮುಖಿ ಹಿಂದೂ ಧರ್ಮದ ಪಾರಸ್ಪರಿಕ – ಸಂಘರ್ಷ ಮತ್ತು ಸಮನ್ವಯದ ಇತಿಹಾಸವಾಗಿದೆ.

ಜಗದ್ಗುರು ಶ್ರೀ ಶಂಕರಾಚಾರ್ಯರ ಜನನ, ಬೌದ್ಧ ಧರ್ಮ ಕ್ಷಿಣಿಸುತ್ತಿದ್ದ ಸಮಯದಲ್ಲಾಗಿತ್ತು. ಧರ್ಮದ ಹೆಸರಿನಲ್ಲಿ ಅನಾಚಾರ ಹಬ್ಬುತ್ತಿತ್ತು. ಬೌದ್ಧ ಧರ್ಮಕ್ಕೆ ರಾಜಾಶ್ರಯ ಕೊಡುವ ಕೇಂದ್ರೀಯ ಶಕ್ತಿ ದುರ್ಬಲಗೊಳ್ಳುತ್ತಿತ್ತು. ಅನೇಕ ವರ್ಷಗಳ ಕಾಲ ರಾಜಾಶ್ರಯದ ಅನುಭೋಗಿಯಾದ್ದರಿಂದಾಗಿ ಬೌದ್ಧರಿಗೆ ಅಧಿಕಾರದ ಹಂಬಲವಿತ್ತು. ಅವರು ಅಧಿಕಾರ ಕೈತಪ್ಪಿಹೋಗಲು ಬಯಸುತ್ತಿರಲಿಲ್ಲ. ವಿರೋಧಿಗಳು ಈ ಪರಿಸ್ಥಿತಿಯ ಲಾಭವನ್ನು ಪಡೆದರು. ಅವರು ಕುಸಿಯುತ್ತಿದ್ದ ಬೌದ್ಧರ ಅಧಿಕಾರವನ್ನು ಉನ್ನತಿಗೊಯ್ಯುವ ನಾಯಕರಾಗಿ ಭಾರತವನ್ನು ಪ್ರವೇಶಿಸಿದರು. ಅವರು ಬಾಡುತ್ತಿದ್ದ ಬೌದ್ಧ ಅಧಿಕಾರವನ್ನು ಮೇಲೆತ್ತುವವರಾಗಿ ಭಾರತದಲ್ಲಿ ಪ್ರವೇಶಿಸಿದರು. ಭಾರತೀಯ ಬೌದ್ಧರು ಅಧಿಕಾರದ ಲೋಭದಲ್ಲಿ ತಾವು, ಪರರು ಎಂಬ ವಿವೇಕ ಮರೆತು ಅವರನ್ನು ಸತ್ಕರಿಸಿದರು. ಅವರಿಗೆ ಎಲ್ಲ ವಿಧದ ಸಹಕಾರವನ್ನು ಕೊಟ್ಟರು. ಪ್ರಖರ ರಾಷ್ಟ್ರೀಯತೆಯ ಪೋಷಕ ಹಿಂದೂ ಸಾಮ್ರಾಜ್ಯವು ಇದನ್ನು ಸಹಿಸದಾಯಿತು ಮತ್ತು ಕುಮಾರಿಲ ಭಟ್ಟರ ಮೂಲಕ ಪ್ರಜ್ವಲಿತ ಹಿಂದೂ ಸಮಾಜ ಇದನ್ನು ಸಹಿಸದಾಯಿತು. ಕುಮಾರಿಲ ಭಟ್ಟರ ಮೂಲಕ ಪ್ರಜ್ವಲಿತಗೊಂಡ ಕಿಡಿ ಶಂಕರಾಚಾರ್ಯರ ರೂಪದಲ್ಲಿ ದವಾಗ್ನಿಯಾಗಿ ಪ್ರಕಟಗೊಂಡಿತು.

ಈ ದವಾಗ್ನಿಯು ಹಿಂದೂ ಧರ್ಮದ ಒಳ–ಹೊರಗೆ ನಾಲ್ಕೂ ಕಡೆ ಬೆಳೆಯುವ ಪೊದೆ ಮಳ್ಳುಗಳನ್ನು ಭಸ್ಮಗೊಳಿಸಿತು. ಈ ಅಗ್ನಿಯಲ್ಲಿ ಬೆಂದು

ಹಿಂದೂ ಧರ್ಮ ಈ ಮೊದಲಿಗಿಂತಲೂ ಹೆಚ್ಚು ಕಾಂತಿಯುಕ್ತಗೊಂಡು ಅಪರಂಜಿಯಾಗಿ ಹೊರಬಂದಿತು. ಧರ್ಮ ಮತ್ತು ದೇಶದ ರಕ್ಷಣೆಯಾಯಿತು. ಸ್ವಾಮಿ ಶಂಕರಾಚಾರ್ಯರು ಬುದ್ಧನಿಗೆ ಹಿಂದೂ ಧರ್ಮದ ಅವತಾರಗಳ್ಲಿ ಸ್ಥಾನ ಕಲ್ಪಿಸಿ ಬೌದ್ಧರ ಕೇಂದ್ರಾಪಗಾಮಿ ದೃಷ್ಟಿಯನ್ನು ಬದಲಿಸಿದರು. ಅನಂತರ ಮನೆ–ಮನೆಗಳಲ್ಲಿ ದೇಶದ ಝೇಂಕಾರ ಮೊಳಗಲು ಪ್ರಾರಂಭವಾಯಿತು.

ಶಂಕರಾಚಾರ್ಯರು ಇಷ್ಟೇ ಅಲ್ಲದೆ ಇಡೀ ಹಿಂದೂ–ರಾಷ್ಟ್ರವನ್ನು ಏಕಸೂತ್ರದಲ್ಲಿ ಪೋಣಿಸಿ ಅದನ್ನು ಸಂಘಟಿಸಲು ಪ್ರಯತ್ನಿಸಿದರು. ಅವರು ದೇಶದ ನಾಲ್ಕೂ ಮೂಲೆಗಳಲ್ಲಿ ನಾಲ್ಕು ಪುಣ್ಯ ಕ್ಷೇತ್ರಗಳ ಬಗ್ಗೆ ಶ್ರದ್ಧೆಯನ್ನು ಕೇಂದ್ರೀಕರಿಸುತ್ತಾ ಇಡೀ ಭಾರತದೇಶದ, ಮಾತೃಭೂಮಿಯ ಪ್ರತಿಮೆಯನ್ನು ಎಲ್ಲ ಜನರ ಮನದಲ್ಲಿ ಅಂಕಿತಗೊಳಿಸಿದರು. ಪಂಚದೇವರುಗಳ ಪೂಜೆಯನ್ನು ಪ್ರಾರಂಭಿಸಿದರು ವಿಭಿನ್ನ ಸಂಪ್ರದಾಯಗಳ ಬಗ್ಗೆ ಮತ್ತು ಆರಾಧ್ಯ ದೇವತೆಗಳ ಭಾವನೆಯನ್ನು ಬೆಳೆಸಿದರು. ಅಲ್ಲದೆ, ಎಲ್ಲ ದೇವತೆಗಳ ಬಗ್ಗೆ, ತಮ್ಮ–ತಮ್ಮ ಇಷ್ಟದೇವರುಗಳ ಮೂಲಕ ಅದೇ ರೀತಿಯ ಶ್ರದ್ಧೆ ಮತ್ತು ಗೌರವವನ್ನು ವ್ಯಕ್ತಪಡಿಸಲು ಪ್ರೇರೇಪಿಸಿದರು. ಈ ಪ್ರಕಾರ ಪ್ರತಿಯೊಬ್ಬರು ಐದು ದೇವರುಗಳನ್ನು – ವಿಷ್ಣು, ಶುಕ್ರ, ಶಕ್ತಿ, ಗಣಪತಿ ಮತ್ತು ಸೂರ್ಯನನ್ನು ಪೂಜಿಸುತ್ತಾರೆ. ತಮ್ಮ ಶ್ರದ್ಧೆಯಂತೆ ತಮ್ಮ ಇಷ್ಟದೇವರನ್ನು ಮಧ್ಯದಲ್ಲಿಟ್ಟು ಮತ್ತು ನಾಲ್ಕು ಕಡೆ ನಾಲ್ಕು ಇತರ ದೇವರುಗಳನ್ನಿಟ್ಟು ಪೂಜೆ ಮಾಡುವ ಬಗ್ಗೆ ಅವನಿಗೆ ವಿನಾಯಿತಿ ಇದೆ. ಅವರು ನಾಲ್ಕು ಪುಣ್ಯಕ್ಷೇತ್ರಗಳಂತೆಯೇ, ಸಮಾಜದ ಧರ್ಮ ಮಾರ್ಗವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಮತ್ತು ಶಿಸ್ತನ್ನು ಕಾಯ್ದಿಟ್ಟುಕೊಳ್ಳಲು ನಾಲ್ವರು ಶಂಕರಾಚಾರ್ಯರ ಅಧ್ಯಕ್ಷತೆಯಲ್ಲಿ ಭಾರತದ ನಾಲ್ಕು ಮೂಲೆಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು.

ಜಗದ್ಗುರು ಶಂಕರಾಚಾರ್ಯರ ಹೊಸ ಆವೃತ್ತಿಯನ್ನು ಪ್ರಕಟಿಸುತ್ತಿರುವ ಈ ಸಂದರ್ಭದಲ್ಲಿ ನಮಗೆ ತುಂಬಾ ಸಂತೋಷವಾಗುತ್ತದೆ. ಇಂದಿಗೆ ಸುಮಾರು ಇಪ್ಪತ್ತಮೂರು ವರ್ಷಗಳ ಹಿಂದೆ ಇದು ಪ್ರಥಮ ಬಾರಿಗೆ ಪ್ರಕಟಗೊಂಡಿತ್ತು. ಕಳೆದ ಸಾಕಷ್ಟು ದಿನಗಳಿಂದ ಇದಕ್ಕೆ ಬೇಡಿಕೆ ಬರುತ್ತಿತ್ತು. ಆದರೆ ಕೆಲವು ತೊಂದರೆಗಳಿಂದಾಗಿ ಇದರ ಪುನರ್‌ಮುದ್ರಣ ಶೀಘ್ರ ಸಾಧ್ಯವಾಗಿರಲಿಲ್ಲ. ಕಡೆಗೆ ನಾವು ಈ ತೊಂದರೆಗಳನ್ನೆಲ್ಲಾ ಗೆದ್ದು ಈ ಪುಸ್ತಕವನ್ನು ಹೊಸ ಸಿಂಗಾರದೊಂದಿಗೆ ಪ್ರಸ್ತುತ ಪಡಿಸುತ್ತಿದ್ದೇವೆ.

ಪಂಡಿತ್ ದೀನ್‌ದಯಾಳ್ ಉಪಾಧ್ಯಾಯರ ಸಶಕ್ತ ಲೇಖನಿಯಿಂದ ವಿಶೇಷವಾಗಿ ಮೂಡಿ ಬಂದ ಈ ಪಾವನ ಚರಿತ್ರೆ ನಮಗೆ ಸಂತ ಮಹಾ ಪುರುಷನ ದರ್ಶನವನ್ನಷ್ಟೇ ಮಾಡಿಸದೆ, ಮಹಾನ್ ಹಿಂದೂ ಧರ್ಮವನ್ನು ಕಾಲಕ್ಕನುಗುಣವಾಗಿ ಪ್ರತಿಷ್ಠಾಪಿಸಿ, ಹಿಂದೂ ರಾಷ್ಟ್ರಕ್ಕೆ ಹೊಸ ಚೈತನ್ಯ ಕೊಡುವ ಓರ್ವ ಮಹಾನ್



ಸಂಘಟಕನ ಜೀವನಾದರ್ಶನವನ್ನು ಪ್ರಸ್ತುತ ಪಡಿಸುತ್ತದೆ. ಈ ಅಗ್ನಿದಿವ್ಯ ಪಥದಲ್ಲಿ ಸಾಗುವಂತಹವರನ್ನು ಪ್ರೇರೇಪಿಸಿ ಅವರ ಮಾರ್ಗವನ್ನು ಸುಗಮಗೊಳಿಸುತ್ತದೆ. ಜಗದ್ಗುರು ಶ್ರೀ ಶಂಕರಾಚಾರ್ಯರಂತಹ ಮಹಾಪುರುಷರಿಂದಾಗಿ ನಮ್ಮ ಹೆಸರು 'ಅಮೃತಸ್ಯ ಪುತ್ರಾಃ' ಎಂದು ಸಾರ್ಥಕವಾಗಿದೆ.

ಜ್ಞಾನ, ಕರ್ಮ ಮತ್ತು ಭಕ್ತಿಯನ್ನು ಯೋಗ್ಯರೀತಿಯಲ್ಲಿ ಸಮನ್ವಯಗೊಳಿಸುವ ಹಾಗೂ ವೈವಿಧ್ಯದಲ್ಲಿ ಏಕತೆಯ ಸೂತ್ರಗಳನ್ನು ಹುಡುಕಿ ಅವುಗಳನ್ನು ಪುಷ್ಟೀಕರಿಸಿ ಸಮಾಜ ಮತ್ತು ರಾಷ್ಟ್ರವನ್ನು ಸಂಘಟಿಸುವ ಮಹಾಪುರುಷರ ಜೀವನ ಚರಿತ್ರೆಯನ್ನು ಪುಸ್ತಕರೂಪದಲ್ಲಿ ಬರೆದ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರು ಸ್ವತಃ ಜೀವನ ಪರ್ಯಂತ ಅದೇ ಮಾರ್ಗದಲ್ಲಿ ಸಾಗಿದರು. ಈ ಜೀವನ ಚರಿತ್ರೆಯಲ್ಲಿ ನಮಗೆ, ದೇಶದ ಪರಿಸ್ಥಿತಿ ಕಂಡು ತಪ್ಪಸ್ಸನ್ನು ಮಾಡಿ ಪವಿತ್ರಗೊಂಡ ಆ ಮಹಾನ್ ಅಂತಃಕರಣದ ನೋವಿನ ಅನುಭವವಾಗುತ್ತದೆ.

# ೧. ಬಾಲ್ಯಾವಸ್ಥೆ

ಶಿಶು ಶಂಕರನ ಪಾಲನೆ–ಪೋಷಣೆಯಲ್ಲಿ ತಾಯಿ ಆರ್ಯಾಂಬಾ ತನ್ನನ್ನೇ ಮರೆತುಬಿಟ್ಟಳು. ಪ್ರಾತಃಕಾಲದಿಂದ ಹಿಡಿದು ಸಂಜೆವರೆಗೆ ಅವನನ್ನು ನೋಡಿಕೊಳ್ಳುತ್ತಿದ್ದಳು. ದಿನ ಕಳೆದದ್ದೇ ತಿಳಿಯುತ್ತಿರಲಿಲ್ಲ. ನೋಡು–ನೋಡುತ್ತಿದ್ದಂತೆಯೇ ಒಂದು ವರ್ಷ ಕಳೆದು ಹೋಯಿತು. ತಂದೆ–ತಾಯಿಗೆ, ಶಂಕರನು ನಿನ್ನೆ ತಾನೇ ಹುಟ್ಟಿದ್ದಾನೆಂದು ಅನ್ನಿಸುತ್ತಿತ್ತು.

ಶಂಕರನನ್ನು ಕಂಡು ನೆರೆಹೊರೆಯವರು ಮತ್ತು ಬಂಧು–ಬಾಂಧವರು ತುಂಬಾ ಸಂತೋಷಪಡುತ್ತಿದ್ದರು. ಹಾಗಂತ ಚಿಕ್ಕ ಮಕ್ಕಳು ಎಲ್ಲರಿಗೂ ಪ್ರಿಯರೇ, ಆದರೆ ಶಂಕರ ಎಲ್ಲರಿಗೂ ಎಷ್ಟೊಂದು ಪ್ರಿಯನಾಗಿದ್ದನೆಂದರೆ, ಅವನನ್ನು ಸದಾ ತಮ್ಮ ಬಳಿಯೇ ಇಟ್ಟುಕೊಳ್ಳಬೇಕೆಂಬುದು ಎಲ್ಲರ ಇಚ್ಛೆಯಾಗಿರುತ್ತಿತ್ತು. ಎಲ್ಲರೂ ಅವನಿಗೆ ಉಣಿಸಲು ಬಯಸುತ್ತಿದ್ದರು. ಜನ ಶಂಕರನನ್ನು ಪ್ರೀತಿಯಿಂದ ನೋಡಿದಾಗ, ಓಡಿಬಂದು ಅವನನ್ನು ಬರಸೆಳೆದುಕೊಂಡಾಗ ಆರ್ಯಾಂಬಾಳಿಗೆ ಅತೀವ ಆನಂದವಾಗುತ್ತಿತ್ತು. ಅವಳು ತನ್ನನ್ನು ಜಗತ್ತಿನಲ್ಲಿ ಎಲ್ಲರಿಗಿಂತ ಸುಖಿಯೆಂದು ತಿಳಿಯುತ್ತಿದ್ದಳು.

ಒಂದು ವರ್ಷದ ಅನಂತರ ಶಂಕರನ ಮೊದಲ ಹುಟ್ಟುಹಬ್ಬ ಆಚರಿಸಲಾಯಿತು. ಎಲ್ಲೆಡೆಯಲ್ಲಿಯೂ ಸಂತೋಷದ ವಾತಾವರಣ ಹಬ್ಬಿತ್ತು. ಎಲ್ಲರೂ ತಮ್ಮ ಶುಭಕಾಮನೆಗಳನ್ನು ವ್ಯಕ್ತಪಡಿಸಿದರು. ಹಿರಿಯರು ಅವನಿಗೆ ಚಿರಂಜೀವಿಯಾಗಿರುವಂತೆ ಆಶೀರ್ವದಿಸಿದರು. ವಾಸ್ತವವಾಗಿಯೂ ಇಂದು ಶಂಕರರು ಅಮರರಾಗಿದ್ದಾರೆ. ಶಾರೀರಿಕವಾಗಿ ಜಗತ್ತಿನಲ್ಲಿ ಯಾರೂ ಅಮರರಾಗಿರುವುದಿಲ್ಲ. ಯಾರ ಯಶಸ್ಸು–ಕೀರ್ತಿ ಅಮರವಾಗಿರುವುದೋ ಅವರೇ ಅಮರರಾಗಿರುತ್ತಾರೆ. ಜಗತ್ತಿನಲ್ಲಿ ಹಿಂದೂ ಜನಾಂಗ ಜೀವಂತವಾಗಿರುವವರೆಗೆ ಶಂಕರರ ಹೆಸರು ಚಿರಸ್ಥಾಯಿಯಾಗಿರುತ್ತದೆ. ಶಂಕರರು ಸಮನ್ವಯದ ಸಂಜೀವಿನಿಯನ್ನು ಕುಡಿಸಿ ಹಿಂದೂ ಜನಾಂಗವನ್ನು ಅಮರಗೊಳಿಸಿದ್ದಾರೆ.

'ಬೆಳೆಯುವ ಪೈರು ಮೊಳಕೆಯಲ್ಲಿ' ಎಂಬ ನಾಣ್ಣುಡಿಯಂತೆ ಬಾಲಕ ಶಂಕರನನ್ನು ನೋಡಿದವರು, ಇವನು ಭವಿಷ್ಯದಲ್ಲಿ ಖಂಡಿತ ಮಹಾಪುರುಷನೇ ಆಗುತ್ತಾನೆಂದು ಕಲ್ಪಿಸಿಕೊಳ್ಳುತ್ತಿದ್ದರು. ಅವನ ಪ್ರತಿಭೆ ಕ್ರಮೇಣ ಬೆಳಕಿಗೆ



ಬರಲಾರಂಭಿಸಿತು. ಹೀಗಾಗಿ ಅವಳು ಕಡೆಗೆ ಸೋಮದೇವನಿಗೆ ಹೇಳಿದಳು, "ಅಣ್ಣಾ ಸೋಮದೇವ ! ಹರಿ ಇನ್ನು ಚಿಕ್ಕವನು; ಇನ್ನೊಂದೆರಡು ವರ್ಷ ಆಡಿಕೊಂಡು ತಿಂದುಕೊಂಡು ಇರಲು ಬಿಡಬಾರದೇ! ಆಮೇಲೆ ಗುರುಕುಲಕ್ಕೆ ಹೋಗುವುದಂತೂ ಇದ್ದೇ ಇದೆ".

"ಆಪ್ತರಿಗೆ ಬಾಲಕ ಸದಾ ಚಿಕ್ಕವನಾಗಿಯೇ ಕಾಣಿಸುತ್ತಾನೆ, ಸಹೋದರಿ !" ಸೋಮದೇವ ಹೇಳಿದ, "ಈಗ ಸಾಧ್ಯವಾದಷ್ಟು ಚಿಕ್ಕ ವಯಸ್ಸಿನಲ್ಲಿಯೇ ಬಾಲಕನನ್ನು ಗುರುಗಳ ಬಳಿಗೆ ಕಳುಹಿಸಬೇಕು. ಎಲ್ಲೆಡೆಯಲ್ಲಿಯೂ ನಾಸ್ತಿಕವಾದಿ ಬೌದ್ಧರು ಮತ್ತು ವಾಮಮಾರ್ಗಿಗಳ ಪ್ರಭಾವ ಎಷ್ಟೊಂದು ಹೆಚ್ಚುತ್ತಿದೆಯೆಂದರೆ ಚಿಕ್ಕ ವಯಸ್ಸಿನಲ್ಲಿಯೇ ವೈದಿಕ ಧರ್ಮದ ಉತ್ತಮ ಸಂಸ್ಕಾರಗಳು ಉಂಟಾಗದಿದ್ದರೆ ಕುಮಾರ್ಗದಲ್ಲಿ ಹರಿದುಹೋಗುವ ಭಯವಿದೆ. ಈ ವೇದ–ವಿರೋಧಿಗಳ ನಾಶವೆಂದಾಗುವುದೋ?" ಹೀಗೆಂದು ಸೋಮದೇವ ನಿಟ್ಟುಸಿರುಬಿಟ್ಟು ಹೊರಡಲು ಹೊರಳಿದರು. ಹರಿದೇವ ಆರ್ಯಾಂಬಾಳ ಪಾದ ಮುಟ್ಟಿ ನಮಸ್ಕರಿಸಿದ. ಆರ್ಯಾಂಬಾ ಸಹ ಆಶೀರ್ವದಿಸಿದಳು, ಆದರೆ ಅವಳ ಮನಸ್ಸಿನಲ್ಲಿ ಉತ್ಸಾಹವಿರಲಿಲ್ಲ. ಮನಸ್ಸು ಮುದುಡಿತ್ತು. ಕಣ್ಣುಗಳಲ್ಲಿ ಕಣ್ಣೀರು ಉಕ್ಕಿತು. ಅವಳಿಗೆ ಮಗನ ಅಭಾವ ಕಾಡಿತು. ಅವಳು ಭಾರವಾದ ಮನಸ್ಸಿನಿಂದ ಮತ್ತು ಒತ್ತಿಬಂದ ಗಂಟಲಿನಿಂದ ದೇವರಲ್ಲಿ ಪ್ರಾರ್ಥಿಸಿದಳು. ಅವಳು ಓರ್ವ ಪುತ್ರನಿಗಾಗಿ ಯಾಚಿಸಿದಳು, ತನಗಾಗಿ ಯಾಚಿಸಲಿಲ್ಲ. ತನ್ನ ಧರ್ಮಕ್ಕಾಗಿ ಮತ್ತು ತನ್ನ ದೇಶಕ್ಕಾಗಿ ಯಾಚಿಸಿದಳು. ಅವಳು ಭಗವಾನ್ ಶಂಕರನನ್ನು ಆರಾಧಿಸಲು ನಿಶ್ಚಯಿಸಿದಳು. ತನ್ನ ಈ ಧರ್ಮಭಾವನೆಯಿಂದ ಪ್ರೇರಿತಗೊಂಡ ಕಾಮನೆಯನ್ನು ದೇವರು ಖಂಡಿತ ಪೂರೈಸುತ್ತಾನೆಂಬ ನಂಬಿಕೆ ಅವಳಿಗಿತ್ತು.

ಈ ಕಠಿಣ ತಪಶ್ಚರ್ಯೆಯಲ್ಲಿ ಅವಳಿಗೆ ಶಿವಗುರು ಸಹಕರಿಸಿದ. ಅವರ ಆರಾಧನೆ ನಿರಂತರ ಸಾಗುತ್ತಿತ್ತು. ಅವರಿಗೆ ತಮ್ಮ ಅಸ್ತಿತ್ವದ ಅರಿವೇ ಇರಲಿಲ್ಲ. ರಾತ್ರಿ ದೇವರ ಭಜನೆಗೈಯುತ್ತಿರುವಾಗ ಅವರನ್ನು ನಿದ್ರಾದೇವಿ ಯಾವಾಗ ತನ್ನ ಮಡಿಲಿನಲ್ಲಿ ಅಡಗಿಸಿಟ್ಟುಕೊಳ್ಳುತ್ತಿದ್ದಳೋ ಹಾಗೂ ಯಾವಾಗ ಭಗವಾನ್ ಬುದ್ಧನ ಗೃಹತ್ಯಾಗದಂತೆ, ಯಾರಿಗೂ ತಿಳಿಯದಂತೆ ಅವರನ್ನು ತ್ಯಜಿಸಿ ಹೋಗುತ್ತಿದ್ದಳೋ ತಿಳಿಯದು. ಪ್ರಾತಃಕಾಲ ಉಷೆಯೊಂದಿಗೆ ಭಗವಾನ್ ಅಂಶುಮಾಲಿ ಜಗತ್ತನ್ನು ಎಚ್ಚರಗೊಳಿಸುತ್ತಾ ತನ್ನ ಕಿರಣಗಳಿಂದ ಅವರ ದ್ವಾರವನ್ನು ಬಡಿದಾಗ ಅವರಾಗಲೇ ಎಚ್ಚೆತ್ತು ತಪಸ್ಸಿನಲ್ಲಿ ಮಗ್ನರಾಗಿರುವುದನ್ನು ಕಾಣುತ್ತಿದ್ದರು. ಉಷೆ ಸೂರ್ಯದೇವನ ಜೊತೆ ಬಿಟ್ಟು ಈ ದಂಪತಿಗಳ ಸೇವೆಗೈಯುವುದನ್ನು ತನ್ನ ಅದೃಷ್ಟವೆಂದು ಬಗೆಯುತ್ತಿದ್ದಳು. ಅವರ ಅಂಗಳ ತೇಜಃಪುಂಜದಿಂದ ಆವರಿಸಿ ಕಂಗೊಳಿಸುತ್ತಿತ್ತು. ಮಧ್ಯಾಹ್ನ ಸೂರ್ಯದೇವ ಅವರೊಂದಿಗೆ ತಪಸ್ಸು ಮಾಡುವ ಸ್ಪರ್ಧೆಗಿಳಿಯುತ್ತಿದ್ದ,

ಆದರೆ ಶಿವಗುರು ಮತ್ತು ಆರ್ಯಂಬಾರ ತಪ್ಪಸ್ಸಿನೆದುರು ಅವನ ತಪಸ್ಸು ಸಪ್ಪೆಯಾಗುತ್ತಿತ್ತು, ಅವನು ಸೋತು ಲಜ್ಜೆಯಿಂದ ಕೆಂಪು ಮುಖ ಮಾಡಿಕೊಂಡು ಆಗಸದ ಮರೆಗೆ ಓಡಿಬಿಡುತ್ತಿದ್ದ. ಭಗವಾನ್ ಶಿವನೇ ಹುಲಿಯ ಚರ್ಮ ಹೊದ್ದು ತನ್ನ ಭಕ್ತರನ್ನು ರಕ್ಷಿಸಲು ಬಂದಿದ್ದಾನೆಂಬಂತೆ ರಾತ್ರಿ ಚಂದ್ರ ಉದಯಿಸುತ್ತಿದ್ದ. ರಾತ್ರಿಯೆಲ್ಲಾ ಭಗವತಿ ಗಿರಿಜೆಯೊಂದಿಗೆ ತನ್ನ ಭಕ್ತರನ್ನು ರಕ್ಷಿಸುತ್ತಿದ್ದ. ಅವರ ಕಠಿಣ ತಪಶ್ಚರ್ಯವನ್ನು ಕಂಡು ಗಿರೀಶ–ನಂದಿನಿ ಕಣ್ಣೀರು ಹರಿಸುತ್ತಿದ್ದರು. ಭಗವಾನ್ ಶಿವ ಅಟ್ಟ ಹಾಸಗೈಯುತ್ತಿದ್ದ. ಉಮಾಳ ಕಣ್ಣೀರು ಇಬ್ಬನಿಯಾಗಿ ಬೀಳುತ್ತಿದ್ದವು. ಭಗವಂತನ ಹಾಸ ಪೂರ್ವಾಕಾಶದಲ್ಲಿ ಹಬ್ಬುತ್ತಿತ್ತು. ಅದೆಷ್ಟೋ ದಿನಗಳವರಗೆ ಈ ಕ್ರಮ ಸಾಗಿತು. ಭಗವಾನ್ ಶಿವನ ಚಂದ್ರ–ಕಲೆಗಳು ಕ್ಷೀಣಿಸಿದವು. ಕಲೆರಹಿತ ಕಲಾನಾಥನ ಕಲ್ಪನೆಯೇ ಅವನನ್ನು ವ್ಯಥಿತಗೊಳಿಸಿತು. ಅವನು ಈ ಬ್ರಾಹ್ಮಣ ದಂಪತಿಗಳ ತಪ್ಪಸ್ಸಿನೆದುರು ತಲೆಬಾಗಬೇಕಾಯಿತು.

ಒಮ್ಮೆಲೆ ಶಿವಗುರುವಿಗೆ ತನ್ನಿಚ್ಛೆ ಪೂರ್ಣಗೊಂಡಿತೆಂದು ಅನ್ನಿಸಿತು. ಆರ್ಯಂಬಾಳ ಒಳ ಮನಸ್ಸು 'ಇನ್ನು ತನಗೆ ತಪಸ್ಸು ಮಾಡುವ ಆವಶ್ಯಕತೆಯಿಲ್ಲ, ತನಗೆ ಪುತ್ರ ರತ್ನನೊಬ್ಬ ದೊರೆಯುವನು' ಎಂದು ಕೂಗಿ–ಕೂಗಿ ಹೇಳಿತು. ಆತ್ಮದ ಕರೆ ಪರಮಾತ್ಮನ ವಾಣಿಯೇ ಆಗಿರುತ್ತದೆಂಬುದು ಅವರಿಗೆ ತಿಳಿದಿತ್ತು. ಅವರು ದೇವರ ಈ ಇಂಗಿತದಂತೆಯೇ ನಡೆಯುವುದು ಶ್ರೇಯಸ್ಕರವೆಂದು ಅರಿತರು.

ಶಿವಗುರು ಮತ್ತು ಆರ್ಯಂಬಾ ತಮ್ಮ ಮನೆಗೆ ಮರಳಿ ಬಂದರು. ಈಗ ಅವರ ಜೀವನ ನೀರಸವಾಗಿರಲಿಲ್ಲ. ನಿರುದ್ದೇಶದಿಂದ ಅತ್ತ–ಇತ್ತ ಅಲೆಯುವ ಜೀವನದಂತೆ ಈಗ ಅವರ ಜೀವನವಿರಲಿಲ್ಲ. ಹಿಂದೂ ಧರ್ಮದ ಬಗ್ಗೆ ಮಹತ್ವದ ಜ್ಞಾನವಿದ್ದ ಶಿವಗುರು, ಭಾವಿ ಬಾಲಕನ ಜನನಕ್ಕೂ ಮೊದಲು ಸಂಸ್ಕಾರಗಳನ್ನೆಲ್ಲಾ ಯಾಥಾವಿಧಿ ಪೂರೈಸಿದರು. ಅವರಿಗೆ ಮನುಷ್ಯನ ಜೀವನ ಸಂಸ್ಕಾರಗಳಿಂದ ಅವಲಂಬಿತಗೊಂಡಿದೆಯೆಂದು ತಿಳಿದಿತ್ತು. ಅವರ ಜೀವನದ ಬಯಕೆ ಪೂರ್ಣಗೊಳ್ಳುವುದರಲ್ಲಿತ್ತು. ಹೀಗಿರುವಾಗ ಅವರು ಹೇಗೆ ಅಜಾಗರೂಕರಾಗಿತ್ತಾರೆ? ಅಲ್ಲದೆ ಅವರು ದೇಶ ಮತ್ತು ಸಮಾಜ್ಕಕಾಗಿ ಓರ್ವ ಸರ್ವಜ್ಞ ಪುತ್ರನನ್ನು ಯಾಚಿಸಿದ್ದರು. ಅವನನ್ನು ಸರ್ವಜ್ಞನನ್ನಾಗಿ ಮಾಡುವಲ್ಲಿ ತಮ್ಮ ಕಡೆಯಿಂದ ನ್ಯೂನತೆಯನ್ನು ಹೇಗೆ ಮಾಡುತ್ತಾರೆ?

ಕೊನೆಗೆ ಆ ದಿನವೂ ಬಂದಿತು. ಆರ್ಯಂಬಾರ ಬದುಕಿನ ಇಚ್ಛೆ ಪೂರ್ಣಗೊಂಡಿತು. ದೇಶದ ಯುಗ–ಯುಗದ ಆಸೆಯೂ ಪೂರೈಸಿತು. ವೈಶಾಖ ಶುಕ್ಲ ದಶಮಿಯಂದು ಆರ್ಯಾಂಬಾಳ ಗರ್ಭದಿಂದ ಓರ್ವ ಪುತ್ರ ರತ್ನನ ಜನನವಾಯಿತು. ಮಗುವನ್ನು ಭಗವಾನ್ ಶಂಕರರ ವರವೆಂದು ತಿಳಿದು ಮಗುವಿಗೆ 'ಶಂಕರ' ಎಂದು ನಾಮಕರಣ ಮಾಡಲಾಯಿತು. ಭಗವಾನ್ ಶಂಕರನನ್ನು ಕುರಿತು



ತಪಸ್ಸು ಮಾಡಿ, ಭಗೀರಥ ಭಾರತಕ್ಕೆ ಗಂಗೆಯನ್ನು ತಂದು ಸಮಸ್ತ ಪೂರ್ವಿಕರನ್ನು ಉದ್ಧರಿಸಿದ. ಇಂದು ಗಂಗೆ ಭಾರತದ ಸುಖಸಂಪತ್ತಿನ ಗಣಿಯಾಗಿದ್ದಾಳೆ. ಅವಳು ಈ ಧರ್ಮವನ್ನು ಉದ್ಧರಿಸಿ ನಮ್ಮ ಸಭ್ಯತೆ–ಸಂಸ್ಕೃತಿ ಹಾಗೂ ರಾಷ್ಟ್ರೀಯ ಭಾವನೆಯನ್ನು ಉನ್ನತೀಕರಿಸಿದಳು.

* * * *

# ೨. ಜನನ

ಶಿವಗುರುಗಳು ಎಲ್ಲ ವಿಧದಲ್ಲೂ ಅನುಕೂಲವುಳ್ಳವರಾಗಿದ್ದಾಗ್ಯೂ ಸುಖಿಯಾಗಿರಲಿಲ್ಲ. ತಮ್ಮ ಸುಶೀಲ ಹಾಗೂ ವಿದುಷಿ ಪತ್ನಿ ಆರ್ಯಾಂಬಾಳ ಶೂನ್ಯ ಮಡಿಲನ್ನು ಕಂಡು ಅವರು ತಮ್ಮ ಬದುಕಿನಲ್ಲಿ ಅಪೂರ್ಣತೆಯ ಭಾವನೆಯನ್ನು ಅನುಭವಿಸುತ್ತಿದ್ದರು. ತಮ್ಮ ನೆರೆಹೊರೆಯ ಹಾಗೂ ಸಂಬಂಧಿಕರ ಮಕ್ಕಳು ಅವರ ಮನೆಗೆ ಬಂದಾಗ ಆರ್ಯಾಂಬಾ ತುಂಬ ಹಂಬಲಿಕೆಯಿಂದ ಮಕ್ಕಳನ್ನು ಎತ್ತಿಕೊಂಡು ಗಂಟೆಗಟ್ಟಲೆ ಅವರೊಂದಿಗೆ ಆಟವಾಡುತ್ತಿದ್ದಳು. ಅವರಿಗೆ ಸ್ನಾನ ಮಾಡಿಸುತ್ತಿದ್ದಳು, ಕೈ–ಬಾಯಿ ತೊಳೆಸುತ್ತಿದ್ದಳು, ಶೃಂಗಾರ ಮಾಡುತ್ತಿದ್ದಳು, ಮಕ್ಕಳೊಂದಿಗೆ ಇಷ್ಟೊಂದು ಶ್ರಮವಹಿಸಿದ ಅನಂತರ ಕೊನೆಗೆ ಮಕ್ಕಳು ತಮ್ಮ–ತಮ್ಮ ಮನೆಗೆ ಹೋದಾಗ ಅವಳ ಹೃದಯ ಇದ್ದಕ್ಕಿದ್ದಂತೆ ಶೂನ್ಯತಾ ಭಾವನೆಯನ್ನು ತಾಳುತ್ತಿತ್ತು. ಅವಳು ಬಾಗಿಲ ಬಳಿ ಅದೆಷ್ಟೋ ಹೊತ್ತು ಶೂನ್ಯವನ್ನು ದೃಷ್ಟಿಸುತ್ತಾ ನಿಂತು ಬಿಡುತ್ತಿದ್ದಳು. ಅವಳ ಈ ಸ್ಥಿತಿ ಕಂಡು ಶಿವಗುರುಗಳು 'ಇವಳಿಗೂ ಒಂದು ಮಗು ಇದ್ದಿದ್ದರೆ!' ಎಂದು ಯೋಚಿಸುತ್ತಿದ್ದರು. ಹಬ್ಬ–ಹರಿದಿನಗಳು ಬಂದು ವ್ಯರ್ಥವಾಗಿ ಹೊರಟು ಹೋಗುತ್ತಿದ್ದವು. ಪೇಟೆಗೆ ಹೋಗಿ ಹೊಸ ವಸ್ತುವನ್ನು ಖರೀದಿಸಿ ಮನೆಗೊಯ್ಯಬೇಕೆಂಬ ವಿಚಾರವೇ ಅವರ ಮನಸ್ಸಿಗೆ ಎಂದೂ ಬರುತ್ತಿರಲಿಲ್ಲ. ಅವರು ಎಂದೂ ಜಾತ್ರೆ–ಪ್ರದರ್ಶನಗಳಿಗೆ ಹೋಗುತ್ತಿರಲಿಲ್ಲ. ನದಿಗೆ ಸ್ನಾನಕ್ಕೆ ಹೋಗುವಾಗ ಚಿಕ್ಕ–ಚಿಕ್ಕ ಮಕ್ಕಳು ತಮ್ಮ ತಂದೆ–ತಾಯಿಯ ಬೆರಳುಗಳನ್ನು ಹಿಡಿದು ಹೋಗುವುದನ್ನು ನೋಡುತ್ತಿದ್ದರು. ಆಗ ಅವರೂ ತಮ್ಮ ಕೈಗಳ ನಾಲ್ಕು ಬೆರಳುಗಳನ್ನು ಮಡಚಿಕೊಂಡು ಒಂದು ಬೆರಳನ್ನು ಹಾಗೇ ಇಳಿಬಿಡುತ್ತಿದ್ದರು. ಆದರೆ ಆಸರೆಹೀನ ಬೆರಳು ತುಂಡಾಗಿ ಕೆಳಗೆ ಬೀಳಲು ಬಯಸುತ್ತಿದೆಯೇನೋ ಎಂದು ಮರು ಕ್ಷಣವೇ ಲಜ್ಜೆಯಿಂದಾಗಿ, ಮೇಲು ಹೊದಿಕೆಯ ಅಂಚಿನಿಂದ ಕೈಯನ್ನು ಅಡಗಿಸಿಟ್ಟುಕೊಳ್ಳುತ್ತಿದ್ದರು. ವಯಸ್ಸು ವೃದ್ಧಿಸಿದಂತೆ ಮಗುವಿನ ಕೊರತೆ ಬ್ರಾಹ್ಮಣ ದಂಪತಿಗಳನ್ನು ಕಾಡಿತು. ಅವರು ಪುತ್ರ ಪ್ರಾಪ್ತಿಗೆ ಸರ್ವವನ್ನೂ ಮಾಡಲು ಸಿದ್ಧರಾಗಿದ್ದರು.

ಇಂದು ಆರ್ಯಾಂಬಾ ನಿತ್ಯಕ್ಕಿಂತಲೂ ಹೆಚ್ಚು ದುಃಖಿಯಾಗಿದ್ದಳು. ನೆರೆಮನೆಯ ಸೋಮದೇವನ ಪುತ್ರ ಹರಿದೇವ ಗುರುಕುಲಕ್ಕೆ ಹೋಗುವವನಿದ್ದ. ಇದುವರೆಗೆ



ಅವನು ಅವರ ಮನೆಗೆ ಬರುತ್ತಿದ್ದ, ಅವನಿಂದಾಗಿ ಅವಳು ತನ್ನ ಮನಸ್ಸನ್ನು ಹಗುರ ಮಾಡಿಕೊಳ್ಳುತ್ತಿದ್ದಳು, ಕೆಲವು ಕ್ಷಣ ತನ್ನನ್ನೇ ಮರೆತುಬಿಡುತ್ತಿದ್ದಳು. ಹರಿದೇವ ಈಗಲೇ ಗುರುಕುಲಕ್ಕೆ ಹೋಗಬಾರದೆಂದು ಆರ್ಯಾಂಬಾ ಬಯಸುತ್ತಿದ್ದಳು. ಆರ್ಯಾಂಬಾ ಅವನ ಬುದ್ಧಿವಂತಿಕೆಯ ಮಾತುಗಳನ್ನು ಕೇಳಿದಾಗ ಒಂದೆಡೆ ಅವಳ ಹೃದಯ ಸಂತೋಷದಿಂದ ಪರಿಪೂರ್ಣಗೊಂಡರೆ ಇನ್ನೊಂದೆಡೆ ಅವಳನ್ನು ಅನೇಕ ದುರ್ವಿಚಾರಗಳು ಬಂದು ಘೇರಾಯಿಸುತ್ತಿದ್ದವು. ಅಲ್ಪ ವಯಸ್ಸಿನಲ್ಲಿಯೇ ಬುದ್ಧಿಶಕ್ತಿಯನ್ನು ಪ್ರಕಟಗೊಳಿಸುವಂತಹ ವ್ಯಕ್ತಿಗಳು ಅಲ್ಪಾಯುಗಳಾಗಿರುತ್ತಾರೆ ಎಂದು ಬಲ್ಲವರು ಹೇಳುತ್ತಾರೆ ಈ ಬಗ್ಗೆ ಯೋಚಿಸಿ ಅವಳು ಇದ್ದಕ್ಕಿದ್ದಂತೆ ಕಂಪಿಸುತ್ತಿದ್ದಳು; ತನ್ನ ಶಂಕರನ ದೀರ್ಘಾಯಸ್ಸಿಗೆ ಹರಕೆ ಹೊರುತ್ತಿದ್ದಳು.

ಶಂಕರನ ಈ ಅಸಾಧಾರಣ ಬುದ್ಧಿಶಕ್ತಿಯನ್ನು ಕಂಡು ಶಿವಗುರುಗಳು ಮೂರು ವರ್ಷಕ್ಕೆ ಮೊದಲೇ ಅವನಿಗೆ ಉಡಿದಾರ ಶಾಸ್ತ್ರ ಮಾಡಿಸಿ ಅಕ್ಷರಾಭ್ಯಾಸವನ್ನು ಪ್ರಾರಂಭಿಸಿದರು. ಶಂಕರ ಒಂದು ಬಾರಿ ಹೇಳಿದ ಪಾಠವನ್ನು ನೆನಪಿಟ್ಟುಕೊಳ್ಳುತ್ತಿದ್ದುದ್ದನ್ನು ಕಂಡು ಗುರುಗಳಿಗೆ ತುಂಬಾ ಆಶ್ಚರ್ಯವಾಯಿತು. ಅವನು 'ಏಕಶ್ರುತಿಧರ'ನಾಗಿದ್ದ– ಅಂದರೆ, ಯಾವುದೇ ಸಂಗತಿಯನ್ನು ಒಮ್ಮೆ ಮಾತ್ರ ಕೇಳಿದಾಗ್ಯೂ ಅವನು ತನ್ನ ಸ್ಮೃತಿ–ಪಟಲದಲ್ಲಿ ಅಂಕಿತಗೊಳಿಸಿಕೊಂಡು ಬಿಡುತ್ತಿದ್ದ. ಶಂಕರ ಐದನೇ ವಯಸ್ಸಿನವರೆಗೆ ಸಮಸ್ತ ಲೌಕಿಕ ಸಾಹಿತ್ಯವನ್ನು ಅಧ್ಯಯನ ಮಾಡಿ ಮುಂದಕ್ಕೆ ವೇದಾಧ್ಯಯನಕ್ಕೆ ಸಿದ್ಧನಾದ. ಅವನ ಅಪ್ರತಿಮ ಸಾಮರ್ಥ್ಯವನ್ನು ಕಂಡು ಅವನ ಗುರುಗಳಿಗೆ ಅತೀವ ಸಂತೋಷವಾಗಿತ್ತು. ಜನ ಶಂಕರನ ವಿದ್ಯಾಭ್ಯಾಸದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದಾಗ ಗುರುಗಳಿಗೆ ಜನ ತಮ್ಮನ್ನೇ ಪ್ರಶಂಸಿಸುತ್ತಿದ್ದಾರೆಂದು ಅನ್ನಿಸಿ ಅವರು ಅತ್ಯಂತ ಪ್ರಸನ್ನರಾಗುತ್ತಿದ್ದರು. ತಾವು ಹೇಗೆ ಶಂಕರನಿಗೆ ವ್ಯಾಕರಣವನ್ನು ಬೋಧಿಸಿದೆವು, ಛಂದಸ್ಶಾಸ್ತ್ರವನ್ನು ಹೇಗೆ ಹೇಳಿಕೊಟ್ಟೆವು ಹಾಗೂ ಶಂಕರ ಹೇಗೆ ಎರಡೇ ವರ್ಷಗಳಲ್ಲಿ ಎಲ್ಲವನ್ನೂ ಅಧ್ಯಯನ ಮಾಡಿದ ಎಂದು ಗುರುಗಳು ಹೇಳುತ್ತಿದ್ದರು. ತಾವು ಶಂಕರನ ಗುರುವಾದ್ದರಿಂದ ತಮ್ಮನ್ನು ತಾವು ಧನ್ಯರೆಂದು ತಿಳಿಯುತ್ತಿದ್ದರು. ಸಮರ್ಥ ವ್ಯಕ್ತಿ ತನ್ನ ಯಶಸ್ಸನ್ನು ಮಾತ್ರ ಹೆಚ್ಚಿಸಿಕೊಳ್ಳುವುದಿಲ್ಲ, ಪ್ರತಿಯಾಗಿ ತನ್ನ ಪರಿಸರಕ್ಕೆ ಬರುವ ಎಲ್ಲರ ಯಶಸ್ಸಿನ ವೃದ್ಧಿಗೂ ಕಾರಣಕರ್ತನಾಗುತ್ತಾನೆ. ಹೀಗಾಗಿಯೇ ಎಲ್ಲರೂ ಒಂದಲ್ಲ ಒಂದು ವಿಧದ ಪ್ರತ್ಯಕ್ಷ ಅಥವಾ ಪರೋಕ್ಷ ಸಂಬಂಧ ಸ್ಥಾಪನೆಗೆ ಅಥವಾ ಜನರಿಗೆ ಈ ಬಗ್ಗೆ ತೋರ್ಪಡಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅನೇಕ ಶಿಷ್ಯರಿಗೆ ಶಿಕ್ಷಣವನ್ನು ನೀಡಿದಾಗ್ಯೂ ಗುರುಗಳು, ಶಂಕರನನ್ನು ಹೊರೆತುಪಡಿಸಿ, ಬೇರ್‍ಯಾರಿಗೂ ಬೋಧಿಸಿಯೇ ಇಲ್ಲವೆಂಬಂತೆ ಉಳಿದ ಶಿಷ್ಯರ ಹೆಸರನ್ನು ಹೇಳುತ್ತಿರಲಿಲ್ಲ.

ಶಂಕರ ವಿದ್ಯೆ ಮತ್ತು ಬುದ್ಧಿಶಕ್ತಿಯಲ್ಲಿ ಮಾತ್ರ ಮುಂದಿರದೆ ಅವನ ಸ್ವಭಾವವೂ

ತುಂಬಾ ಮಧುರವಾಗಿತ್ತು. ಅವನನ್ನು ಒಮ್ಮೆ ಭೇಟಿಯಾದವರು ಸದಾ ಅವನ ವಶವಾಗಿ ಉಳಿದುಬಿಡುತ್ತಿದ್ದರು. ಅವನೆಷ್ಟು ಧಾರಾಳ ಮತ್ತು ವಿಶಾಲ ಮನಸ್ಸಿನವನಾಗಿದ್ದನೆಂದರೆ, ಅವನ ಮನಸ್ಸಿನಲ್ಲಿ ಪ್ರತಿಯೊಬ್ಬರಿಗೂ ಪ್ರತ್ಯೇಕ ಸ್ಥಾನವಿತ್ತು. ಹೀಗಾಗಿ ಪ್ರತಿಯೊಬ್ಬರು ತಮ್ಮ ಹೃದಯದಲ್ಲಿ ಅವನಿಗೆ ಸ್ಥಾನವನ್ನು ಕೊಟ್ಟರು. ಅವನು ತನ್ನ ಪ್ರೀತಿಯ ವ್ಯವಹಾರ ಮತ್ತು ಹೃದಯ ವೈಶಾಲ್ಯದಿಂದಾಗಿಯೇ ತನ್ನ ಸುತ್ತ-ಮುತ್ತಲಿನ ಜನರ ಶ್ರದ್ಧೆ ಮತ್ತು ವಿಶ್ವಾಸವನ್ನು ಗಳಿಸಲು ಸಾಧ್ಯವಾಯಿತು. ಇದೇ ಅವನ ಯಶಸ್ಸಿನ ಗುಟ್ಟು. ವಿದ್ಯೆ ಮತ್ತು ಬುದ್ಧಿಯಿಂದ ಮನುಷ್ಯನ ವಿಲಕ್ಷಣತೆಯು ಅಭಿವ್ಯಕ್ತಗೊಳ್ಳುತ್ತದೆ. ಅವನ ಬಗ್ಗೆ ಕುತೂಹಲದ ಅನುಭವವಾಗುತ್ತದೆ. ಆದರೆ ಶ್ರದ್ಧೆ ಮತ್ತು ಮಮತೆಯ ಅನುಭವವಾಗಿರುವುದಿಲ್ಲ. ಅದಕ್ಕಾಗಿ ಕಾರ್ಯಗಳು, ಬುದ್ಧಿಬಲದಿಂದ ಮಾತ್ರವಲ್ಲದೆ ಹೃದಯದ ಬಲದಿಂದ ನಡದಿವೆ. ಅದೃಷ್ಟವಶಾತ್ ಶಂಕರ ಈ ಎರಡು ದೃಷ್ಟಿಯಿಂದಲೂ ಮುಂದಿದ್ದ. ಹೀಗಾಗಿ ಕಾಲಟಿ ಮತ್ತು ಅದರ ಸುತ್ತ-ಮುತ್ತ ಪ್ರದೇಶದ ದೊಡ್ಡವರು ಮತ್ತು ಚಿಕ್ಕವರನ್ನೆದೆ ಎಲ್ಲರೂ ಅವನನ್ನು ತಮ್ಮ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದರು, ಬಯಸುತ್ತಿದ್ದರು. ಈ ಪ್ರೀತಿಯಿಂದಾಗಿಯೇ ಅವನು ಎಲ್ಲರ ಚರ್ಚೆಗೆ ಕಾರಣನಾಗಿದ್ದ. ಈ ಮಧ್ಯೆ ಅವನಿಗೆ ಜೀವನಪರ್ಯಂತ ಅವನ ಜೊತೆಯನ್ನು ಬಿಡದ ಗೆಳೆಯರೂ ಸಿಕ್ಕರು. ಅವರಲ್ಲಿ ಚಿತ್‌ಸುಖ ತುಂಬಾ ಪ್ರಸಿದ್ಧನಾಗಿದ್ದಾನೆ.

ಐದನೇ ವಯಸ್ಸಿನಲ್ಲಿ ಶಂಕರನಿಗೆ ಉಪನಯನ ಸಂಸ್ಕಾರ ನಡೆಯಿತು. ಬಾಲಕ ಶಂಕರ ವೇದಾಧ್ಯಯನಕ್ಕಾಗಿ ಗುರುಕುಲಕ್ಕೆ ಹೋದ. ಆರ್ಯಂಬಾಳೆದುರು ಆರು ವರ್ಷದ ಹಿಂದಿನ ಚಿತ್ರ ಸುಳಿಯಿತು. ಅವಳು ಇಂದು ಮತ್ತೆ ದೇವರಲ್ಲಿ ಶಂಕರ ವೇದಾಧ್ಯಯನ ಮಾಡಿ ವೈದಿಕ ಧರ್ಮವನ್ನು ಪುನರುತ್ಥಾನ ಮಾಡುವಲ್ಲಿ ಸಮರ್ಥನಾಗಲಿ ಎಂದು ಪ್ರಾರ್ಥಿಸಿದಳು. ಶಂಕರ ಗುರುಕುಲಕ್ಕೆ ಹೋದದ್ದರಿಂದಾಗಿ ಮನೆ ಬಿಕೋ ಎನ್ನಿಸುತ್ತಿತ್ತು. ಆದರೆ ಆರ್ಯಂಬಾಳಿಗೆ ದುಃಖವಿರಲಿಲ್ಲ, ಆದರೆ ಆ ಮನೆ ಅವಳನ್ನೇ ತಿನ್ನಲು ಬರುತ್ತಿತ್ತು. ತನ್ನ ಪುತ್ರ ಜ್ಞಾನಪ್ರಾಪ್ತಿಗಾಗಿ ಗುರುಕುಲಕ್ಕೆ ಹೋಗಿದ್ದಾನೆಂಬುದು ಅವಳಿಗೆ ತಿಳಿದಿತ್ತು. ತನ್ನ ಪುತ್ರನ ಭವ್ಯ ಭವಿಷ್ಯದ ಕಲ್ಪನೆಗಳಲ್ಲಿಯೇ ಅವಳ ಮತ್ತು ಶಿವಗುರುಗಳ ಸಮಯ ಕಳೆದುಹೋಗುತ್ತಿತ್ತು.

ಶಂಕರ ಲೌಕಿಕ ವಿದ್ಯೆಯನ್ನು ಎಷ್ಟು ತ್ವರಿತವಾಗಿ ಗಳಿಸಿದ್ದನೋ ಅಷ್ಟೇ ತ್ವರಿತವಾಗಿ ವೇದಗಳು ಮತ್ತು ವೇದಾಂಗಗಳ ಅಧ್ಯಯನವನ್ನೂ ಮಾಡಿದ. ಈಗ ಶಂಕರ ಕೇವಲ ಅಧ್ಯಯನವನ್ನಷ್ಟೇ ಅಲ್ಲ, ತನ್ನ ಸಂಗಾತಿ ವಿದ್ಯಾರ್ಥಿಗಳಿಗೆ ಅಧ್ಯಾಪನ ಕಾರ್ಯವನ್ನು ಕೈಗೊಳ್ಳುತ್ತಿದ್ದ. ಅವನು ಈ ವೇಳೆಯಲ್ಲಿ 'ಬಾಲಬೋಧ ಸಂಗ್ರಹ'ವೆಂಬ ಗ್ರಂಥವನ್ನೂ ರಚಿಸಿದ. ಈ ಗ್ರಂಥ ಚಿಕ್ಕ ವಯಸ್ಸಿನಲ್ಲಿಯೇ ಅವನಲ್ಲಿ ಅದೆಷ್ಟು ವಿಲಕ್ಷಣ ಬುದ್ಧಿಶಕ್ತಿಯಿತ್ತು ಎಂಬುದಕ್ಕೆ ಸಾಕ್ಷಿಯಾಗಿ ಜಗತ್ತಿನಲ್ಲಿ ಇಂದೂ



ಇದೆ. 'ಬಾಲಬೋಧ'ದಲ್ಲಿ ವಿಷಯವನ್ನು ಎಷ್ಟು ಸರಳವಾಗಿ ಪ್ರಸ್ತುತ ಪಡಿಸಲಾಗಿದೆಯೆಂದರೆ, ಅದು ವಾಸ್ತವವಾಗಿಯೂ 'ಬಾಲಬೋಧ'ವೇ ಆಗಿದೆ.

ತಾಯಿಯ ಹಾಲಿನೊಂದಿಗೆ ಅವನು ಸಮಸ್ತ ವಿದ್ಯೆಯನ್ನೂ ಕುಡಿದಂತೆ ತೋರಿತ್ತಿತ್ತು ಅಥವಾ ಅವನೇ ಅನಂತರ ತಿಳಿಸಿದಂತೆ, ಸಮಸ್ತ ಜ್ಞಾನವೂ ಈ ಮೊದಲೇ ಮೆದುಳಿನಲ್ಲಿ ಸಂಚಿತಗೊಂಡು ಅಜ್ಞಾನದ ಆವರಣ ಸ್ವತಃ ದೂರವಾಗುವಂತೆ ವೇದ-ಮಂತ್ರಗಳ ಅರ್ಥ ತಮ್ಮಷ್ಟಕ್ಕೆ ತಾವೇ ಗೋಚರಗೊಳ್ಳುತ್ತಿದ್ದವು. ಅವನು ಈ ಚಿಕ್ಕ ವಯಸ್ಸಿನಲ್ಲಿ ಅಧ್ಯಯನದೊಂದಿಗೆ ಸುತ್ತ ಮುತ್ತ ಕಾಣಬರುವ 'ಭೇದ'ದ (ರಹಸ್ಯದ) ಜಾಗದಲ್ಲಿ ವಾಸ್ತವಿಕ ಅಬೇಧ್ಯವನ್ನು ಕಂಡ. ಈ ಬೇಧ ಮೇಲು ನೋಟಕ್ಕೆ ಮಾತ್ರವಿದ್ದು ಅಸತ್ಯವಾಗಿದೆ, ವಾಸ್ತವವಾಗಿ ನಾವೆಲ್ಲರೂ ಒಂದೇ ಹಾಗೂ ಅದೇ ಸತ್ಯ, ಅದನ್ನೇ ವೇದಗಳು ಸಾರಿ-ಸಾರಿ ಹೇಳುತ್ತವೆ ಎಂಬುದನ್ನು ಮನಗಂಡ, ಗುರುತಿಸಿದ. ಗುರುಕುಲದಲ್ಲಿ ಬರುವ ಅನೇಕ ನಾಸ್ತಿಕವಾದಿ ಬೌದ್ಧರು ಮತ್ತು ಇತರರೊಂದಿಗೆ ಈ ಆಧಾರದ ಮೇಲೆಯೇ ಶಾಸ್ತ್ರಾರ್ಥ ಕೈಗೊಂಡ. ಶಾಸ್ತ್ರಾರ್ಥದಲ್ಲಿ ಅವನು ವೈಶಿಷ್ಟ್ಯದಿಂದ ತನ್ನ ಎದುರಾಳಿಗಳ ವಿಶ್ವಾಸವನ್ನು ಗಳಿಸಿ ತನ್ನ ಅಭಿಪ್ರಾಯವನ್ನು ಸಮರ್ಥಿಸುತ್ತಿದ್ದುದನ್ನು ನೋಡಿ ಅವನ ಗುರುವರ್ಗಕ್ಕೆ ಶಂಕರ ಖಂಡಿತ ವೈದಿಕ ಧರ್ಮವನ್ನು ಭಾರತದಲ್ಲಿ ಪ್ರಚಾರ ಮಾಡುತ್ತಾನೆ, ಅವನು ಎಲ್ಲೆಡೆಯಲ್ಲಿಯೂ ಶಾಸ್ತ್ರಾರ್ಥದಲ್ಲಿ ಅಜೇಯನಾಗಿರುತ್ತಾನೆ ಎಂಬ ವಿಶ್ವಾಸ ಉಂಟಾಯಿತು.

ಗುರುಕುಲದ ಶಿಕ್ಷಣ ಪದ್ಧತಿ ಇಂದಿಗಿಂತ ಭಿನ್ನವಾಗಿತ್ತು. ರಾಷ್ಟ್ರ ಸ್ವತಂತ್ರಗೊಂಡಾಗ ಶಿಕ್ಷಣವನ್ನು ವಾಸ್ತವಿಕ ಉದ್ದೇಶಗಳಿಗನುಸಾರವಾಗಿ ನೀಡಲಾಗುತ್ತದೆ. ಬಾಲಕನ ಸುಪ್ತ ಶಕ್ತಿಗಳನ್ನು ವಿಕಾಸಗೊಳಿಸಲು ಹಾಗೂ ಸಮಾಜದ ಚೈತನ್ಯಪೂರ್ಣ ಘಟಕಗಳನ್ನಾಗಿಸಲು ಮತ್ತು ಯೋಗ್ಯ ನಾಗರಿಕರನ್ನಾಗಿ ಮಾಡಲು ಶಿಕ್ಷಣವನ್ನು ಕೊಡಲಾಗುತ್ತದೆ. ಆ ಶಿಕ್ಷಣದಲ್ಲಿ ಸಮಾಜದಿಂದ ಸಂಬಂಧ ವಿಚ್ಛೇಧನವಾಗುವುದಿಲ್ಲ, ಬದಲಾಗಿ ಹೆಜ್ಜೆ-ಹೆಜ್ಜೆಗೂ ನಮ್ಮ ಬಗ್ಗೆ ಸಮಾಜದ ಎಷ್ಟು ಋಣವಿದೆ, ಆ ಸಮಾಜದ ಬಗ್ಗೆ ಕರ್ತವ್ಯಗಳೇನು ಎಂಬುದನ್ನು ನೆನಪಿಸಲಾಗುತ್ತದೆ. ಹೀಗಾಗಿ ನಮ್ಮಲ್ಲಿ ಗುರುಕುಲದಲ್ಲಿ ವಾಸಿಸುವ ಪ್ರತಿಯೊಬ್ಬ ವಿದ್ಯಾರ್ಥಿ-ಅವನು ರಾಜನ ಮಗನಾಗಿರಲಿ- ಅಥವಾ ಬಡವನ ಮಗನಾಗಿರಲಿ ಹಳ್ಳಿಗೆ ಹೋಗಿ, ಭಿಕ್ಷೆ ಯಾಚಿಸಿ ತರುತ್ತಿದ್ದ. ಇಂಥ ವಟುವಿನಲ್ಲಿ ಹಳ್ಳಿಯ ಜನರ ಬಗ್ಗೆ ಅದೆಷ್ಟು ಗೌರವ, ಅದೆಷ್ಟು ವಿನಯ, ಅದೆಷ್ಟು ಶ್ರದ್ಧೆ ಮತ್ತು ಅದೆಷ್ಟು ಆತ್ಮೀಯತೆ ಇರುವುದು? 'ಬ್ರಹ್ಮಚಾರಿ'ಯ 'ಭಿಕ್ಷಾಂ ದೇಹಿ' ಎಂಬ ಧ್ವನಿ ಕೇಳಿದೊಡನೆಯೇ ಗೃಹಿಣಿ ಓಡಿಬಂದು ಭಿಕ್ಷೆ ಹಾಕಲು ಬಂದಾಗ ಯಾರ ಶಿರ ಕೃತಜ್ಞತೆಯ ಭಾರದಿಂದ ಭಾಗುವುದಿಲ್ಲ ? ಅವನ ಜೀವನದ ಬಗ್ಗೆ ಚಿಂತೆಮಾಡುವವರನ್ನು ಸುಖಿಯಾಗಿಸಲು

ಯಾರು ಜೀವಮಾನವಿಡೀ ಪ್ರಾಣವನ್ನು ಪಣವಾಗಿಟ್ಟು ಪ್ರಯತ್ನಿಸುವುದಿಲ್ಲ? ವಿದ್ಯಾರ್ಥಿ ವರ್ಗ, ಸಮಾಜಕ್ಕಿಂತ ಭಿನ್ನವಾದ ವರ್ಗವಾಗಿದೆ. ಆ ಭಾವನೆ ಅವನ ಮನಸ್ಸಿಗೆ ಹೇಗೆ ಬರುವುದು? ಪರಾಧೀನ ರಾಷ್ಟ್ರದ ವಿದ್ಯಾರ್ಥಿಗಳಂತೆ ನಮ್ಮ ಸಮಾಜದಲ್ಲಿ ಪ್ರತ್ಯೇಕ ವರ್ಗ ಸೃಷ್ಟಿಸುವವರು, ಸಮಾಜದಿಂದ ಪ್ರತ್ಯೇಕಗೊಂಡು ಅದರ ಬಗ್ಗೆ ಶ್ರದ್ಧೆಯನ್ನಿಟ್ಟುಕೊಳ್ಳದವರು, ಪರಕೀಯ ಭಾವನೆಯಿಂದ ಕೂಡಿ ವಿನಯಹೀನರಾದವರು ಹಾಗೂ ಮಾನಸಿಕ ದಾಸ್ಯದಿಂದ ಬಂಧಿಸಲ್ಪಟ್ಟ ವಿದ್ಯಾರ್ಥಿಗಳು ಅಂದು ಇರುತ್ತಿರಲಿಲ್ಲ. ತಮ್ಮ ಮೆದುಳನ್ನು ವಿದೇಶಿಯರ ಕೈಗಳಲ್ಲಿ ಅಡವಿಟ್ಟಿದ್ದರಿಂದಾಗಿ ಯಾರ ವೈಚಾರಿಕ ಶಕ್ತಿ ದಿವಾಳಿಯಾಗಿದೆಯೋ, ಸ್ವಾರ್ಥದ ಹಾಗೂ ಆದರ್ಶಹೀನ ಜೀವನವು ಯಾರ ಹೃದಯದ ರಸವನ್ನು ಶುಷ್ಕಗೊಳಿಸಿದೆಯೋ, ಯಾರ ಭಾವನೆಗಳು ಮರಗಟ್ಟಿವೆಯೋ ಹಾಗೂ ಯಾರ ವೇದನೆಗಳು ಮಂದಗೊಂಡಿವೆಯೋ, ಆಲಸ್ಯದ ಸಾಮ್ರಾಜ್ಯ ಕಂಡು ಅಲ್ಲಿಂದ ಪುರುಷಾರ್ಥ, ಉದ್ಯೋಗ ಮತ್ತು ಕರ್ಮಣ್ಯತೆ ಕಾಲು ಕಿತ್ತಿವೆಯೋ, ಅಂಥ ವಿಚಾರಶೂನ್ಯ, ಭಾವನಾರಹಿತ, ಕರ್ಮರಹಿತ ವಿದ್ಯಾರ್ಥಿಗಳು ಆ ಕಾಲದಲ್ಲಿರಲಿಲ್ಲ.

ಗುರುಕುಲದಲ್ಲಿ ವಾಸಮಾಡುವಾಗ ತಮ್ಮ ಅಲ್ಪ ಜೀವನದಲ್ಲಿ ನೆರೆಹೊರೆಯವರ ಶ್ರದ್ಧೆ ಶಂಕರನ ಮೇಲೆ ಎಷ್ಟಿತ್ತು ಎಂಬುದು ಒಂದು ಸಣ್ಣ ಘಟನೆಯಿಂದ ತಿಳಿದು ಬರುತ್ತದೆ. ಒಂದು ದಿನ ಶಂಕರ ಭಿಕ್ಷೆ ಯಾಚಿಸುತ್ತಾ ಓರ್ವ ಬಡವನ ಮನೆ ಬಾಗಿಲಿಗೆ ಹೋಗಿ 'ಭಿಕ್ಷಾಂ ದೇಹಿ' ಎಂದ. ಮನೆಯಲ್ಲಿ ಬ್ರಾಹ್ಮಣನ ಹೆಂಡತಿ ಮಾತ್ರ ಇದ್ದಳು, ಅವಳಿಗೆ ಬ್ರಹ್ಮಚಾರಿಗೆ ಏನು ಕೊಡುವುದೆಂಬ ಸಮಸ್ಯೆ ಎದುರಾಯಿತು. ಮನೆಯಲ್ಲಿ ಏನೂ ಇರಲಿಲ್ಲ. ಬ್ರಹ್ಮಚಾರಿಯನ್ನು ಬರಿಗೈಯಲ್ಲಿ ಕಳುಹಿಸುವುದು ಮಹಾಪಾಪವಾಗಿತ್ತು. ಕಡೆಗೆ ಮನೆಯಲ್ಲಿ ಎಂಟು–ಹತ್ತು ನೆಲ್ಲಿಕಾಯಿಗಳಿರುವುದು ತಿಳಿಯಿತು. ಬ್ರಾಹ್ಮಣನ ಹೆಂಡತಿ ಒಂದು ನೆಲ್ಲಿಕಾಯಿಯನ್ನು ತಂದು ಶಂಕರನೆದುರು ಹಿಡಿದಳು. ಅವಳ ಕಣ್ಣುಗಳು ತುಂಬಿ ಬಂದವು. ಅವಳು ತನ್ನ ಮನಸ್ಸಿನ ದುಃಖವನ್ನು ಮರೆಮಾಚಲು ತುಂಬ ಪ್ರಯತ್ನಿಸಿದಳು. ಆದರೆ ಶಂಕರ, ಅವಳ ಮನಸ್ಸಿನಲ್ಲಿ ಖಂಡಿತ ಏನೋ ದುಃಖವಿದೆ ಎಂದು ಅರಿತ. ಯಾರು ತಮ್ಮ ಸ್ವಾರ್ಥವನ್ನು ನಾಶಮಾಡಿಕೊಂಡಿದ್ದಾರೋ, ಯಾರು ತಮ್ಮ ಹೃದಯದಲ್ಲಿ ವಾಸ್ತವಿಕ ಸಹಾನುಭೂತಿ ಮತ್ತು ಸಂವೇದನೆಯನ್ನು ಅನುಭವಿಸಿದ್ದಾರೋ, ಯಾರ ಆತ್ಮ ಇನ್ನೊಬ್ಬರ ಆತ್ಮದೊಂದಿಗೆ ಸಮರಸಗೊಂಡಿದೆಯೋ, ಅಂತಹವನಿಂದ, ಆ ಬಡ ಬ್ರಾಹ್ಮಣನ ಹೆಂಡತಿಯ ನೋವು ಮರೆಯಾಗಲು ಹೇಗೆ ಸಾಧ್ಯ! ಶಂಕರನ ಮನಸ್ಸು ಸಹ ಆ ಬಡ ಬ್ರಾಹ್ಮಣನ ಹೆಂಡತಿಯ ಮನಸ್ಸಿನೊಂದಿಗೆ ರೋದಿಸಿತು.

"ಅಮ್ಮಾ! ನಿಮಗ್ಯಾವ ದುಃಖವಿದೆ?" ಶಂಕರ ಕೇಳಿದ.

"ಏನಿಲ್ಲ ಮಗು! ದುಃಖವೇಕೆ? ಇಂದು ಭಿಕ್ಷೆಯಲ್ಲಿ ಈ ನೆಲ್ಲಿಕಾಯಿ ಇದೆ" ಎಂದಾಗ ಅವಳ ಕಣ್ಣುಗಳು ಕಣ್ಣೀರಿನಿಂದ ಒದ್ದೆಯಾದವು, ಅವಳು ತನ್ನನ್ನು ತಾನು ತಡೆದುಕೊಳ್ಳದಾದಳು.



"ಅಮ್ಮಾ, ತನ್ನವರಿಂದ ದುಃಖವನ್ನು ಮರೆಮಾಚಲಾಗುವುದೇ?" ಶಂಕರ ತುಂಬ ಆದರದಿಂದ ಹೇಳಿದ. ಅವಳು ತನ್ನ ತಾಯಿಯೇ ಆಗಿದ್ದಳೆಂಬಂತೆ ಸ್ನೇಹದಿಂದ ಆಗ್ರಹಿಸಿದ. ಕಡೆಗೆ ಆ ಬ್ರಾಹ್ಮಣನ ಹೆಂಡತಿ, "ಬ್ರಾಹ್ಮಣ ಅಲ್ಪ ಸಂತೋಷಿ, ದಿನಕ್ಕೆಷ್ಟು ಬೇಕೋ ಅಷ್ಟನ್ನೇ ಸಂಪಾದಿಸುತ್ತಾನೆ, ಬೇಕಾದುದಕ್ಕಿಂತಲೂ ಹೆಚ್ಚು ಸಂಗ್ರಹಿಸಿ ಮನೆಯಲ್ಲಿಟ್ಟುಕೊಳ್ಳುವುದನ್ನು ಕಳ್ಳತನವೆಂದು ತಿಳಿಯುತ್ತಾನೆ. ಹೀಗಾಗಿ ನಾನು ನಿನಗೆ ಭಿಕ್ಷೆ ನೀಡಲು ಇಂದು ನೆಲ್ಲಿಕಾಯಿ ಮಾತ್ರವಿತ್ತು. ಹೀಗಾಗಿ ನನಗೆ ದು:ಖವಾಗಿದೆ" ಎಂದು ಹೇಳಿದಳು. ಶಂಕರನಿಗೆ ಬ್ರಾಹ್ಮಣ ಪರಿವಾರದ ಬಡತನ ನೋವುಂಟು ಮಾಡಿತು. ಆದರೆ ಸಹಾನುಭೂತಿಯನ್ನು ಮಾತ್ರ ವ್ಯಕ್ತಪಡಿಸುವುದರಿಂದ ಅಥವಾ ಸಮಾಧಾನದ ಒಂದೆರಡು ಶಬ್ದಗಳನ್ನು ಹೇಳುವುದರಿಂದ ಏನು ಲಾಭ? ನಾನು ಪ್ರತ್ಯಕ್ಷವಾಗಿ ಇವಳ ದು:ಖವನ್ನು ದೂರಮಾಡದಿದ್ದರೆ ಏನು ಉಪಯೋಗ? ಸಹಾನುಭೂತಿಯನ್ನು ಮಾತ್ರ ವ್ಯಕ್ತಪಡಿಸುವುದು ಮನಸ್ಸಿನ ದೌರ್ಬಲ್ಯವಷ್ಟೇ. ಶಕ್ತಿಯಿದ್ದಾಗ್ಯೂ ಕಾರ್ಯವೆಸಗದಿರುವುದು ಶಕ್ತಿದಾತನಾದ ಭಗವಂತನ ಬಗ್ಗೆ ತೋರುವ ಕೃತಘ್ನತೆಯಾಗಿದೆ ಎಂದು ಯೋಚಿಸಿದ. ಹೀಗಾಗಿ ಅವನು ಆ ಬ್ರಾಹ್ಮಣ ಪರಿವಾರದ ಬಡತನವನ್ನು ಮತ್ತು ಅವಳ ದು:ಖವನ್ನು ದೂರಮಾಡಲು ನಿಶ್ಚಯಿಸಿದ. ಅವನು ಸ್ವತ: ಬ್ರಹ್ಮಚಾರಿಯಾಗಿದ್ದು, ತಾನೇ ಭಿಕ್ಷೆ ಯಾಚಿಸಿ ತನ್ನ ಜೀವನ ನಿರ್ವಹಣೆಯನ್ನು ಮಾಡಿಕೊಳ್ಳುತ್ತಿದ್ದ. ಆದರೆ ಮನಸ್ಸು 'ಭಿಕ್ಷುಕ' ಅಥವಾ 'ಬಡವ' ಅಲ್ಲವೆಂಬುದು ಅವನಿಗೆ ತಿಳಿದಿತ್ತು. ಅವನಿಗೆ ತನ್ನ 'ಕಾರ್ಯ'ದ ಬಗ್ಗೆ ವಿಶ್ವಾಸವಿತ್ತು.

ಸರಿ, ಅವನು ಮುಂದಿನ ಮನೆಗೆ ಹೋದ. ಅದೊಂದು ಶ್ರೀಮಂತ ಕುಟುಂಬವಾಗಿತ್ತು. ಶಂಕರ ಶ್ರೀಮಂತರ ಮನೆಯ ಬಾಗಿಲಿಗೆ ಹೋಗುತ್ತಿದ್ದುದು ತುಂಬ ವಿರಳವಾಗಿತ್ತು. ಇಂದು ಶಂಕರ ತಮ್ಮ ಮನೆ ಬಾಗಿಲಿಗೆ ಬಂದಿದ್ದನ್ನು ಕಂಡ ಶ್ರೀಮಂತ, ಯಾವ ಜನ್ಮದ ಪುಣ್ಯವೋ ಇಂದು ಒಬ್ಬ ಬ್ರಹ್ಮಚಾರಿ, ಅದೂ ತೀಕ್ಷ್ಣ ಬುದ್ಧಿಯುಳ್ಳ ಹಾಗೂ ಮೃದುಭಾಷಿಯಾದ ಶಂಕರ ತಮ್ಮಲ್ಲಿಗೆ ಭಿಕ್ಷೆಯಾಚಿಸಲು ಬಂದಿದ್ದಾನೆ ಎಂದು ಯೋಚಿಸಿದ. ಅಂದು ಶ್ರೀಮಂತರು, ಯೋಗ್ಯರಾದವರು ತಮ್ಮ ಮನೆ ಬಾಗಿಲಿಗೆ ಬರಬೇಕೆಂದು ಕಾತರಿಸುತ್ತಿದ್ದರು. ಶಂಕರ 'ಭಿಕ್ಷಾಂ ದೇಹಿ' ಎಂದು ಯಾಚಿಸುವುದಕ್ಕೂ ಮೊದಲೇ ಆ ಶ್ರೀಮಂತ ಭಿಕ್ಷೆಯೊಂದಿಗೆ ಬಂದ. ಶಂಕರ ಭಿಕ್ಷೆಗೆ ಕೈ ಚಾಚುವುದಕ್ಕೆ ಬದಲಾಗಿ ಕೈಯನ್ನು ಹಿಂದಕ್ಕೆಳೆದುಕೊಂಡು ಮುಗುಳ್ನಗುತ್ತಾ ಹಾಸ್ಯದೊಂದಿಗೆ ಮಧುರ ಸ್ವರದಲ್ಲಿ ಹೇಳಿದ, "ಯಾರು ತಮ್ಮ ಸಮಾಜದವರನ್ನು ತಮ್ಮವರೆಂದು ತಿಳಿಯುವುದಿಲ್ಲವೋ, ಯಾರ ಹೃದಯದಲ್ಲಿ

ತಮ್ಮವರ ಬಗ್ಗೆ ಪ್ರೀತಿ, ಮಮತೆ ಇಲ್ಲವೋ ಅಂತಹವರು ನೀಡಿದ ಅನ್ನ ತಿಂದರೆ ಧರ್ಮ ಮಾಡುವ ಮನಸ್ಸು ಹುಟ್ಟುವುದೇ?"

ಆ ಶ್ರೀಮಂತನಿಗೆ ಶಂಕರನ ಮಾತಿನ ಅರ್ಥ ತಿಳಿಯಲಿಲ್ಲ. ಯಾಕೆಂದರೆ ಅವನ ಬುದ್ಧಿಯನ್ನು ಅವನ ಸಂಪತ್ತಿನ ಆವರಣ ದಟ್ಟವಾಗಿ ಆವರಿಸಿತ್ತಲ್ಲ! ಅವನು ಶಾರೀರಿಕವಾಗಿ ಮಾತ್ರ ದಢೂತಿಯಾಗಿರಲಿಲ್ಲ, ಬೌದ್ಧಿಕವಾಗಿಯೂ ದಢೂತಿಯಾಗಿದ್ದ. "ನಾನು ನನ್ನನ್ನು ಸಮಾಜದ ಓರ್ವ ತುಚ್ಛ ಸೇವಕನೆಂದೇ ತಿಳಿಯುತ್ತೇನೆ, ಬ್ರಹ್ಮಚಾರಿಗಳೇ!" ಎಂದ ಶ್ರೀಮಂತ.

"ಆದರೆ ನಿನ್ನ ಪಕ್ಕದಲ್ಲಿ ಇಷ್ಟೊಂದು ಬಡ ಕುಟುಂಬವಿದೆ. ನೀನು ಮಾತ್ರ ಸುಖ ಮತ್ತು ವೈಭವದ ಜೀವನ ಸಾಗಿಸುತ್ತಾ ನಿನ್ನನ್ನು ಸಮಾಜ ಸೇವಕನೆಂದು ಹೇಳಿಕೊಂಡು ನಿನ್ನ ನೀನು ಧರ್ಮದ ಬಗ್ಗೆ ಜಂಬಗೊಳ್ಳುತ್ತಿರುವುದು ಎಂಥಾ ವಿಡಂಬನೆ?" ಶಂಕರ ದುಃಖದಿಂದ ಹೇಳಿದ.

ಶ್ರೀಮಂತನಿಗೆ ಈ ಮಾತುಗಳು ನಾಟಿದವು. ಅವನಿಗೆ ಒಮ್ಮೆಲೇ ತನ್ನ ಪರಿಸ್ಥಿತಿಯ ಅರಿವಾಯಿತು. ಕರ್ತವ್ಯ–ಅಕರ್ತವ್ಯದ ಅರಿವು ಮಾಡಿತು. ನಿದ್ರೆ ಮಾಡುತ್ತಿರುವವನು ಜಾಗೃತಗೊಂಡಾಯಿತು. ಅವನು ಶಂಕರನಲ್ಲಿ ಕ್ಷಮೆಯಾಚಿಸಿದ. ಶ್ರೀಮಂತ ತನ್ನ ಹಣದಿಂದ ಬಂಗಾರದ ನೆಲ್ಲಿಕಾಯಿಗಳನ್ನು ಮಾಡಿಸಿ ಆ ಬ್ರಾಹ್ಮಣನ ಮನೆಯನ್ನು ತುಂಬಿದನೆಂದು ಹೇಳುತ್ತಾರೆ. ಭವಿಷ್ಯದಲ್ಲಿ ಹಣವನ್ನು ಸಾಧನೆಯೆಂದು ಮಾತ್ರ ತಿಳಿದು ಉಪಯೋಗಸುವೆ, ನನ್ನ ಜೀವನದಲ್ಲಿ ಸಮಾಜ ಮತ್ತು ಧರ್ಮಕ್ಕಾಗಿಯೇ ಹಣಕ್ಕೆ ಪ್ರಮುಖ ಸ್ಥಾನವನ್ನು ಕೊಡುವೆ ಎಂದೂ ಶ್ರೀಮಂತ ನಿಶ್ಚಯಿಸಿದ. ವಾಸ್ತವಿಕ ಸಹಾನುಭೂತಿಯಿಂದ ಅವತರಿಸಿದ ಗಾಢ ವೇದನೆಯ ಮನಸ್ಸಿನಿಂದ ಉದ್ಭವಿಸಿದ ವಾಣಿಯ ಪ್ರಭಾವವೇ ಇಂಥದ್ದಾಗಿರುತ್ತದೆ.

ಶಂಕರ ತನ್ನ ಎಂಟನೇ ವಯಸ್ಸಿನವರೆಗೆ ಗುರುಕುಲದಲ್ಲಿಯೇ ಇದ್ದ. ಸಮಸ್ತ ವೇದ ಶಾಸ್ತ್ರಗಳಲ್ಲಿ ಪೂರ್ಣ ಪಾರಂಗತನಾದ್ದರಿಂದ ಅವನಿಗೆ 'ಆಚಾರ್ಯ' ಬಿರುದನ್ನು ಕೊಡಲಾಯಿತು. ಶಿವಗುರುವಿನ ಪುತ್ರ ಶಂಕರ ಶಂಕರಾಚಾರ್ಯನಾದ. ಆದರೆ ಶಿವಗುರುವಿನ ಹಣೆಯಲ್ಲಿ ಈ ಸುಖವೆಲ್ಲಿ ಬರೆದಿತ್ತು! ''ನಮ್ಮ ಮನಸ್ಸಿನಲ್ಲಿರುವುದೊಂದಾದರೆ ವಿಧಾತನ ಮನಸ್ಸಿನಲ್ಲಿರುವುದು ಬೇರೊಂದು.''

* * * *



## ೩. ಆಕಾಂಕ್ಷೆ

ಶಂಕರಾಚಾರ್ಯರು ಗುರುಕುಲದಿಂದ ಮರಳಿ ಬರುವುದಕ್ಕೂ ಮೊದಲೇ ಶಿವಗುರುಗಳು ಇಹಲೋಕ ತ್ಯಜಿಸಿದ್ದರು. ಶಂಕರಾಚಾರ್ಯರು ತಮ್ಮ ತಂದೆಯನ್ನು ತುಂಬಾ ಪ್ರೀತಿಸುತ್ತಿದ್ದರು. ಹೀಗಾಗಿ ತಂದೆಯ ಸಾವಿನಿಂದ ಅವರಿಗೆ ತುಂಬ ದುಃಖವಾಯಿತು. ಆದರೆ ಇನ್ನೊಂದೆಡೆ ದೇವರು ತಮ್ಮ ಬಂಧನವನ್ನು ಕ್ರಮೇಣ ಕಡಿತಗೊಳಿಸುತ್ತಿದ್ದಾನೆಂಬ ವಿಶ್ವಾಸ ಮೂಡಿತು. ಹೀಗಾಗಿ ಮನೆಯ ಪರಿಧಿಯಿಂದ ಹೊರಬಂದು ದೇಶವನ್ನು ತಮ್ಮ ಮನೆಯೆಂದು ತಿಳಿದು ಕಾರ್ಯವೆಸಗುವ ಅವರ ನಿರ್ಧಾರ ಮತ್ತೂ ದೃಢವಾಯಿತು. ಅವರು ತಮ್ಮ ತಂದೆಯವರ ಅಂತ್ಯ ಸಂಸ್ಕಾರದ ಕರ್ಮಗಳನ್ನು ಮಾಡುವಾಗ ದೇಹದ ನಶ್ವರತೆಯ ಬಗ್ಗೆ ಸತತವಾಗಿ ಚಿಂತನೆ ಮಾಡುತ್ತಿದ್ದರು. ಮನುಷ್ಯ ಒಂದಲ್ಲ ಒಂದು ದಿನ ಸಾಯಲೇಬೇಕು, ಹೀಗಿರುವಾಗ ಅವರು ಹುಳು–ಹುಪ್ಪಟೆಗಳಂತೆ ಕ್ಷುದ್ರತೆಯಿಂದ ಕೂಡಿದ ಮತ್ತು ಸ್ವಾರ್ಥದಿಂದ ಪರಿಪೂರ್ಣವಾದ ಜೀವನವನ್ನು ಸಾಗಿಸಿ ಯಾಕೆ ಸಾಯಬೇಕೆಂದು ಅವರು ಯೋಚಿಸುತ್ತಿದ್ದರು. ಈ ಜೀವನವನ್ನು ಹಾಗೂ ಈ ಜೀವನದ ಅಲ್ಪ–ಸ್ವಲ್ಪ ಸುಖವನ್ನೇ ಸರ್ವಸ್ವ ಮತ್ತು ಸತ್ಯವೆಂದು ತಿಳಿದಿದ್ದರಿಂದಾಗಿ ಮನುಷ್ಯ ಅವುಗಳ ಹಿಂದೆ ಬಿದ್ದಿರುತ್ತಾನೆ. ಈ ನಶ್ವರ ಶರೀರವನ್ನು ತ್ಯಜಿಸಬೇಕಾಗಿ ಬಂದಾಗ ಅವನಿಗೆ ದುಃಖವಾಗುತ್ತದೆ. ಇದಕ್ಕಿಂತಲೂ, ಒಂದು ಮಹಾನ್ ಧ್ಯೇಯದೊಂದಿಗೆ ಸತ್ಯಮಾರ್ಗದಲ್ಲಿ ಜೀವನವಿಡೀ ಮುಂದುವರಿಯುತ್ತಾ ಸಾಗುವುದು ಹಾಗೂ ಆ ಧ್ಯೇಯಕ್ಕಾಗಿಯೇ ಜೀವನವನ್ನು ಕೊನೆಗೊಳಿಸುವ ಅಗತ್ಯವುಂಟಾದರೆ ಶಾಂತಿಯೊಂದಿಗೆ, ಸಂತೋಷದೊಂದಿಗೆ – ಹಾವು ತನ್ನ ರಕ್ಷಣೆಗೆ ಪೊರೆ ಧರಿಸುವಂತೆ ಹಾಗೂ ಒಂದು ದಿನ ಅದಕ್ಕಾಗಿಯೇ ಆ ಪೊರೆಯನ್ನು ತ್ಯಜಿಸಿಬಿಡುವಂತೆ–ಅದನ್ನು ತ್ಯಜಿಸಲು ಸಿದ್ಧರಿರಬೇಕು. ಹಾವಿಗೆ ಪೊರೆಯ ಬಗ್ಗೆ ಪ್ರೀತಿಯಿರುವುದಿಲ್ಲ. ಹೀಗಾಗಿ ಅದಕ್ಕೆ ದುಃಖವಾಗುವುದಿಲ್ಲ. ಈ ವಿಚಾರಗಳೆಲ್ಲವೂ ಅವನೆದುರು ಶ್ಮಶಾನ ವೈರಾಗ್ಯದಂತಿರಲಿಲ್ಲ. ಆದರೆ ಇವುಗಳ ಆಧಾರದಲ್ಲಿಯೇ ಅವರು ತಮ್ಮ ಭಾವಿ ಜೀವನದ ಕಟ್ಟಡವನ್ನು ನಿರ್ಮಿಸಲು ನಿರ್ಧಾರಮಾಡಿದ್ದರು.

ಅವರು ತಮ್ಮ ತಾಯಿಯ ಪ್ರೀತಿ ಹಾಗೂ ತಂದೆಯವರ ವಾರ್ಷಿಕ ಶ್ರಾದ್ಧವನ್ನು ಮಾಡುವುದಕ್ಕಾಗಿ ವರ್ಷವಿಡಿ ಮನೆಯಲ್ಲಿಯೇ ಉಳಿದರು. ಈ ನಡುವೆ ತಾಯಿಯವರ

ಅಭಿಪ್ರಾಯಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳಲು ತುಂಬ ಪ್ರಯತ್ನಮಾಡಿದರು. ಆರ್ಯಂಬಾ ಸ್ವತಃ ವಿದುಷಿಗಳಾಗಿದ್ದರು. ಅವರು ತಮ್ಮ ದೇಶ ಮತ್ತು ಧರ್ಮವನ್ನು ಪ್ರೀತಿಸುತ್ತಿದ್ದರು. ಶಂಕರನಿಂದ ವೈದಿಕ ಧರ್ಮದ ಉದ್ಧಾರವಾಗಲೆಂದು ಬಯಸುತ್ತಿದ್ದರು. ಆದರೆ ಅವರು ಶಂಕರ ಮನೆ–ಮಠ ತೊರೆದು ಕಾರ್ಯವೆಸಗಬೇಕೆಂದು ಬಯಸುತ್ತಿರಲಿಲ್ಲ. ಶಂಕರ ವಿವಾಹ ಮಾಡಿಕೊಳ್ಳಬೇಕು, ಗೃಹಸ್ಥ ಜೀವನ ಸಾಗಿಸಬೇಕು; ಅದರೊಂದಿಗೆ ಸಾಧ್ಯವಾದಷ್ಟೂ ವೈದಿಕ ಧರ್ಮದ ಉತ್ಥಾನಕ್ಕಾಗಿ ಪ್ರಯತ್ನಿಸಬೇಕೆಂದು ಅವರು ಬಯಸುತ್ತಿದ್ದರು. ಈ ಬಗ್ಗೆ ಅವರ ಯಾವ ದೋಷವೂ ಇರಲಿಲ್ಲ. ಕಾರಣ, ಮೊದಲನೆಯದಾಗಿ ತಂದೆ–ತಾಯಿಗಳಿಗೆ ಮಗನ ಬಗ್ಗೆ ಸಹಜ ಪ್ರೀತಿಯಿರುತ್ತದೆ. ಇದಕ್ಕೆ ತಾಯಿ ಆರ್ಯಂಬಾ ಅಪವಾದವಾಗಲು ಹೇಗೆ ಸಾಧ್ಯವಿತ್ತು? ಎರಡನೆಯದಾಗಿ, ಆಗಿನ ಕಾಲದಲ್ಲಿನ ಹಿಂದೂಗಳು ಸನ್ಯಾಸ ಸ್ವೀಕರಿಸಿ ದೇಶ ಸೇವೆ ಗೈಯುವ ಗೊಡ್ಡು ಆದರ್ಶವನ್ನು ಮರೆತದ್ದು ಮಾತ್ರವಲ್ಲದೆ, ಅದನ್ನು ಕೆಡುಕೆಂದೂ ಭಾವಿಸುತ್ತಿದ್ದರು. ಕಾರಣ ಬೌದ್ಧರು ತಮ್ಮ ಧರ್ಮದಲ್ಲಿ ಸನ್ಯಾಸಕ್ಕೆ ಪ್ರಮುಖ ಸ್ಥಾನವನ್ನು ನೀಡಿದ್ದರು. ಹೀಗಾಗಿ ಶಂಕರಾಚಾರ್ಯರ ತಾಯಿ, ಸಾಮಾನ್ಯವಾಗಿ ಅಪ್ರಚಲಿತ ಸನ್ಯಾಸ ಧರ್ಮದ ಆಶ್ರಯವನ್ನು ತೆಗೆದುಕೊಳ್ಳಬಾರದೆಂದು ಬಯಸುತ್ತಿದ್ದರು.

ತಾಯಿ ಆರ್ಯಂಬಾ ಮತ್ತು ಅವರ ಉಳಿದ ಸಂಬಂಧಿಕರು ಶಂಕರನ ಈ ಪ್ರವೃತ್ತಿಯನ್ನು ಕಂಡು ವ್ಯಗ್ರರಾದರು. ಒಂದು ದಿನ ಅವರ ಓರ್ವ ಸಹೋದರ ಜಯದೇವ ಅವರನ್ನು ಭೇಟಿಯಾಗಲು ಬಂದ. ಶಂಕರ ಮನೆಯಲ್ಲಿ ಇರದಿದ್ದನ್ನು ಕಂಡು ಕೇಳಿದ, "ಸಹೋದರ ಶಂಕರನೆಲ್ಲಿ?"

"ಎಲ್ಲಿದ್ದಾನೆಂದು ಏನು ಹೇಳಲಿ?" ಆರ್ಯಂಬಾ ನಿಟ್ಟುಸಿರು ಬಿಡುತ್ತಾ ಹೇಳಿದರು, "ಅವನಾದರೂ ಮನೆಯಲ್ಲಿ ಎಲ್ಲಿರುತ್ತಾನೆ; ಎಲ್ಲೆಲ್ಲಿ ಅಲೆದಾಡುತ್ತಿರುತ್ತಾನೋ ಗೊತ್ತಿಲ್ಲ?"

"ಸಹೋದರಿ, ಅಲ್ಲಿ–ಇಲ್ಲಿ ಅಂತ ಅಲೆದಾಡೋದು ಸರಿಯಲ್ಲ! ಈಚೆಗೆ ನಾಸ್ತಿಕವಾದಿ ಬೌದ್ಧರು ಮತ್ತು ವಾಮಮಾರ್ಗಿಗಳು ಅಲೆದಾಡುತ್ತಿದ್ದಾರೆ. ಅವರ ಕೈಗೆ ಬಿದ್ದರೆ ಒಳ್ಳೆಯದಲ್ಲ. ಶಂಕರ ವೇದ–ಶಾಸ್ತ್ರಗಳಲ್ಲಿ ತುಂಬ ಪಾರಂಗತನಾಗಿದ್ದಾನೆಂದು ಕೇಳಿರುವೆ" ಜಯದೇವ ಹೇಳಿದ.

"ಅದೇನೋ ಸರಿಯಪ್ಪ. ಅವನು ವೇದ–ಶಾಸ್ತ್ರಗಳಲ್ಲಿ 'ಆಚಾರ್ಯ'ನೇ ಆಗಿದ್ದಾನೆ. ಆದರೆ ಅವನು ಆಚಾರ್ಯನಾಗಿದ್ದರಿಂದ ನನಗೇನು ಬಂತು? ಅವನಂತೂ ಮನೆಯಲ್ಲಿರಲು ಬಯಸುವುದೇ ಇಲ್ಲ. ದೇಶದಲ್ಲಿ ಎಷ್ಟೊಂದು ಮತ–ಧರ್ಮಗಳು ಹರಡಿವೆಯೆಂದರೆ ಜನ ವಾಸ್ತವಿಕವಾದ ವೈದಿಕ ಧರ್ಮವನ್ನು ಮರೆತುಬಿಟ್ಟಿದ್ದಾರೆ. ಒಂದೇ 'ಸತ್ಯ ಧರ್ಮ'ದ ಆಶ್ರಯಕ್ಕೆ ಹೋಗದಿದ್ದುದರಿಂದಾಗಿ ಪರಸ್ಪರ ಕಚ್ಚಾಡಿ



ದುರ್ಬಲರಾಗುತ್ತಿದ್ದಾರೆ. ಹೀಗಾಗಿ, ಮನೆಯನ್ನು ತ್ಯಜಿಸಿ ವಾಸ್ತವಿಕ ಹಿಂದೂ ಧರ್ಮದ ಪ್ರಚಾರ ಮಾಡಬೇಕಾಗುವುದೆಂದು ಹೇಳುತ್ತಾನೆ. ಈಗ ನೀನೇ ಹೇಳಪ್ಪ, ನಾನೇನು ಮಾಡಲಿ?"

ಜಯದೇವ ಏನೋ ಯೋಚಿಸಿ ಹೇಳಿದ: "ಅವನಿನ್ನೂ ಮಗು, ಹೀಗಾಗಿ, ದೇಶ ಮತ್ತು ಧರ್ಮದ ಮಾತುಗಳನ್ನಾಡುತ್ತಾನೆ. ನೀನು ಅವನಿಗೆ ಮದುವೆ ಮಾಡಿಬಿಡು. ಮನೆ–ಮಠದ ಜಂಜಾಟದಲ್ಲಿ ಬಿದ್ದು ಎಲ್ಲವನ್ನೂ ಮರೆತುಬಿಡ್ತಾನೆ".

ಇನ್ನು ಶಂಕರಾಚಾರ್ಯರಿಗೆ ಅತಿ ಶೀಘ್ರದಲ್ಲಿಯೇ ವಿವಾಹ ಮಾಡಿಬಿಡಬೇಕೆಂದು ಆರ್ಯಂಬಾ ಸಹ ನಿರ್ಧರಿಸಿದರು. ಅವರ ಸನ್ಯಾಸತ್ವನ್ನು ತಡೆಯಲು ತಾಯಿಗೆ ಇದೊಂದೇ ಉಪಾಯ ಕಂಡಿತು. ಅತ್ತ ಶಂಕರಚಾರ್ಯರ ಮನಸ್ಸಿನಲ್ಲಿ ಸನ್ಯಾಸ ಸ್ವೀಕರಿಸುವ ಇಚ್ಛೆ ನಿತ್ಯ ಬಲಗೊಳ್ಳುತ್ತಾ ಸಾಗುತ್ತಿತ್ತು. ಇನ್ನು ತಾಯಿಯ ಅಪ್ಪಣೆ ಪಡೆಯುವುದನ್ನಷ್ಟೇ ಬಯಸುತ್ತಿದ್ದರು. ಒಂದು ದಿನ ಶಂಕರಚಾರ್ಯರು ತಮ್ಮ ತಾಯಿಯೊಂದಿಗೆ ನದಿಯಲ್ಲಿ ಸ್ನಾನ ಮಾಡಲು ಹೋಗುತ್ತಿದ್ದರು. ಆಗ ಶಂಕರಚಾರ್ಯರು ತಾಯಿಯೆದುರು ತಮ್ಮ ಸನ್ಯಾಸ ಸ್ವೀಕರಿಸುವ ಬಗ್ಗೆ ಇಚ್ಛೆ ವ್ಯಕ್ತಪಡಿಸುತ್ತಾ ಹೇಳಿದರು: "ಅಮ್ಮಾ! ನಾನು ವೈದಿಕ ಧರ್ಮವನ್ನು ಉದ್ಧಾರ ಮಾಡಬೇಕೆಂಬುದು ಸದಾ ನಿನ್ನ ಬಯಕೆಯಾಗಿದೆ. ನಾನು ಸನ್ಯಾಸ ಸ್ವೀಕರಿಸಿ, ನನ್ನ ಜೀವನದ ಕಾರ್ಯವನ್ನು ಪ್ರಾರಂಭಿಸಲು ಅನುಮತಿ ಕೊಡು".

ಆರ್ಯಂಬಾಗೆ ಆಘಾತವಾಯಿತು. ಆದರೆ ಅವರು ತಮ್ಮನ್ನು ಸಂಭಾಳಿಸಿಕೊಂಡು ಹೇಳಿದರು: "ಮಗು! ಮಗು! ಇದೇನು ಹೇಳುತ್ತಿರುವೆ? ನೀನು ನಿನ್ನ ವಯಸ್ಸಾದ ತಾಯಿಯನ್ನು ಬಿಟ್ಟು ಹೋಗುವೆಯಾ? ನಿನ್ನ ಪಾಲಿನ ಪಿತೃಋಣವಿಲ್ಲವೇ?"

"ಇದೆ, ಅಮ್ಮ! ಪಿತೃಋಣವಿದೆ, ನಾನು ಅದನ್ನೇ ತೀರಿಸಲೋಸುಗವೇ ಸನ್ಯಾಸ ಸ್ವೀಕರಿಸಲು ಬಯಸುತ್ತೇನೆ. ತಂದೆಯವರು ಯಾವ ಧರ್ಮವನ್ನು ಜೀವಮಾನವಿಡೀ ನಿರ್ವಹಿಸಿದರೋ, ಆ ಧರ್ಮ ನಾಶವಾದರೆ, ತಂದೆಯವರಿಗೆ ದುಃಖವಾಗುದಿಲ್ಲವೇ, ಹೇಳು? ಆ ಧರ್ಮದ ರಕ್ಷಣೆಯಿಂದಲೇ ಅವರಿಗೆ ಶಾಂತಿ ಸಿಗುವುದು. ಮತ್ತೆ ನನ್ನ ತಂದೆ ಅವರ ತಂದೆ, ಅವರ ತಂದೆಯ ತಂದೆಯವರ ಕಡೆಗೂ ನೋಡು, ಸಾವಿರಾರು ವರ್ಷಗಳ ಚಿತ್ರ ಕಣ್ಣೆದುರಿಗೆ ಮೂಡುತ್ತದೆ. ಭಗವಾನ್ ಕೃಷ್ಣ ಈ ಧರ್ಮದ ರಕ್ಷಣೆಗಾಗಿ ಜೀವನವನ್ನೇ ಮುಡಿಪಾಗಿಟ್ಟ. ಕೌರವ–ಪಾಂಡವರ ನಡುವೆ ಯುದ್ಧವನ್ನು ಮಾಡಿಸಿದ. ಅವನು ತನ್ನ ಜೀವನದಲ್ಲಿ ಧರ್ಮವನ್ನು ಸ್ಥಾಪಿಸಿದ್ದನ್ನು ಜನ ಕ್ರಮೇಣ ಮರೆತರು. ಶಾಕ್ಯ ಮುನಿಯ ಸಮಯದ ಹೊತ್ತಿಗೆ ಮತ್ತೆ ಧರ್ಮದಲ್ಲಿ ದೋಷಗಳು ಬಂದವು. ಅವರೂ ಈ ದೋಷಗಳನ್ನು ದೂರ ಮಾಡುವ ಪ್ರಯತ್ನ ಮಾಡಿದರು. ಆದರೆ ಇಂದಿಗೂ ವಾಸ್ತವಿಕ ಅಭಿಪ್ರಾಯಗಳನ್ನು

ಜನ ಮರೆತು ವ್ಯರ್ಥವಾಗಿಯೇ ನಾಸ್ತಿಕತೆಯ ವಾದವನ್ನು ಪ್ರಚಾರ ಮಾಡುತ್ತಿದ್ದಾರೆ. ಅಮ್ಮ! ಪೂರ್ವಿಕರೆಲ್ಲರ ಋಣ ನಮ್ಮ ಮೇಲಿದೆಯೋ, ಇಲ್ಲವೋ?"

"ಈ ವಿದ್ವತ್‌ಪೂರ್ಣ ವಿಚಾರಗಳು ನಮಗೇನು ತಿಳಿದಿದೆ ಶಂಕರ? ಆದರೆ ನನ್ನ ಶ್ರಾದ್ಧ ಸಂಸ್ಕಾರಗಳನ್ನು ಯಾರು ಮಾಡುತ್ತಾರೆ, ಹೇಳು? ಪಿತೃಗಳಿಗೆಲ್ಲಾ ನೀರು ಬಿಡುವವರು ಯಾರು?" ಆರ್ಯಾಂಬಾ ಹೇಳಿದರು.

"ನಾನು ಸಂಸ್ಕಾರ ಮಾಡ್ತೀನಿ; ಅಮ್ಮ, ನಾನು ಮಾಡ್ತೀನಿ. ನನ್ನ ಪಿತೃಗಳಿಗೆ ನಾನು ನೀರು ಬಿಡುವೆ".

"ಮತ್ತೆ ನಿನ್ನ ಅನಂತರ?"

"ನನ್ನ ಅನಂತರ ಇಡೀ ಹಿಂದೂ ಸಮಾಜವೇ ಇದೆ. ಅದು ನಿನ್ನ ಹೆಸರನ್ನು ಸ್ಮರಿಸುತ್ತದೆ. ನಿನ್ನ ಗುಣಗಾನ ಮಾಡುತ್ತದೆ. ನಿಜವಾದ ಶ್ರಾದ್ಧ ಅಂದರೆ ಇದೇ. ಒಂದು ವೇಳೆ ಹಿಂದೂ ಸಮಾಜ ನಾಶವಾದರೆ, ನೀನೇ ಹೇಳಮ್ಮ ಎರಡು ಕೈ, ಎರಡು ಕಾಲಿನವರು ನಿನ್ನ ವಂಶದಲ್ಲಿ ಹುಟ್ಟಿದ ಮಾತ್ರಕ್ಕೆ ಅವನು ನಿನಗೆ ನೀರು ಬಿಡುವನೆ? ನಿನ್ನ ಹೆಸರನ್ನು ಸ್ಮರಿಸುವನೆ?"

ತಾಯಿ ಆರ್ಯಾಂಬಾ ಮೌನವಾಗಿದ್ದರು. ತರ್ಕ ಮತ್ತು ಭಾವನೆ ಎಂದಿಗೂ ಒಟ್ಟಾಗಿ ನಡೆಯುವುದಿಲ್ಲ, ಮನುಷ್ಯ ಭಾವನೆಗಳ ಹಿಂದೆ ಸಾಗುತ್ತಾನೆ. ಅವನು ಭಾವನೆಗಳ ದಾಸನಲ್ಲ. ಜನರಿಗೆ ಈ ರೀತಿ ತೋರ್ಪಡಿಸಲು ಮತ್ತು ತನ್ನ ಅಹಂಕಾರವನ್ನು ಶಾಂತಗೊಳಿಸಲೋಸುಗವೇ ತನ್ನ ಭಾವನೆಗಳಿಗನುಸಾರವಾಗಿ ತರ್ಕವನ್ನು ಉಪಯೋಗಿಸುತ್ತಾನೆ. ತರ್ಕದಿಂದ ಕಾರ್ಯವೆಸಗುವುದಿಲ್ಲ. ತರ್ಕದಿಂದ ಮಾನ್ಯಗೊಂಡಾದ ಮೇಲೂ ಹೃದಯ ಸಹಕಾರ ಕೊಡದವರೆಗೂ ತರ್ಕ ಹೆಳವ. ಆರ್ಯಾಂಬಾರಿಗೆ ಬೌದ್ಧಿಕ ದೃಷ್ಟಿಯಿಂದ ಶಂಕರಾಚಾರ್ಯರ ಮಾತುಗಳು ಮಾನ್ಯವಾಗಿದ್ದವು. ಆದರೆ ಅವರ ಮನಸ್ಸು ಇದೆಲ್ಲಾ ವ್ಯರ್ಥವೆಂದು ಹೇಳುತ್ತಿತ್ತು. ಪುತ್ರನ ಮೋಹದ ಮುಂದೆ ಸರ್ವವೂ ಅಲ್ಪವೇ ಎಂಬುದನ್ನು ಶಂಕರಾಚಾರ್ಯರು ಅರಿತಿದ್ದರು. ಹೀಗಾಗಿ ಅವರು ಬೇರೆ ಉಪಾಯವನ್ನು ಮಾಡಿದರು.

ತಾಯಿ ಮತ್ತು ಮಗ ಈ ರೀತಿ ಮಾತನಾಡಿಕೊಳ್ಳುತ್ತಾ ನದಿಗೆ ಬಂದರು. ಶಂಕರಾಚಾರ್ಯರು ಸ್ನಾನ ಮಾಡಲು ನದಿಗಿಳಿದರು. ಕೆಲವೇ ಕ್ಷಣಗಳಲ್ಲಿ ಅವರು ಇದ್ದಕ್ಕಿದ್ದಂತೆ ಚೀರಿಕೊಂಡರು, "ಅಮ್ಮಾ, ಅಮ್ಮಾ! ಮೊಸಳೆ ನನ್ನ ಕಾಲನ್ನು ಹಿಡಿದುಕೊಂಡಿದೆ. ನಾನಿನ್ನು ಹೋದೆ. ನಿನ್ನ ಪಾಲಿಗಂತೂ ನಾನು ಸತ್ತೆ. ಅಮ್ಮಾ, ನೀನೀಗ ನನಗೆ ಸನ್ಯಾಸ ಸ್ವೀಕರಿಸಲು ಅನುಮತಿಯಿತ್ತರೆ ಬಹುಶಃ ದೇವರು ನನ್ನನ್ನು ದೇಶ ಮತ್ತು ಜನಾಂಗಕ್ಕಾಗಿ.... ಬೇಗ ಹೇಳಮ್ಮ!"

ಆರ್ಯಾಂಬಾ ಕಕ್ಕಾಬಿಕ್ಕಿಯಿಂದ ನಿಂತರು, ಏನು ಹೇಳಬೇಕೆಂದು ತೋಚುತ್ತಲೇ ಇರಲಿಲ್ಲ. ಶಂಕರಾಚಾರ್ಯರು ಮತ್ತೆ ಹೇಳಿದರು: "ಅಮ್ಮ ಹೇಳು, ಯೋಚಿಸಲು



ಈಗ ಸಮಯವೆಲ್ಲಿದೆ? ಒಂದು ಕ್ಷಣ ತಡಮಾಡಿದರೆ ಮೊಸಳೆ ಖಂಡಿತ ನನ್ನನ್ನು ಮುಗಿಸಿಬಿಡುತ್ತದೆ. ಆಮೇಲೆ ನೀನು ಜೀವನವಿಡೀ ಯೋಚಿಸುತ್ತಿರುತ್ತೀಯೆ."

ಆರ್ಯಾಂಬಾರೆದುರು ಅನ್ಯ ಮಾರ್ಗವೇ ಇರಲಿಲ್ಲ. ಮಗ ಸಾಯುವುದಕ್ಕಿಂತಲೂ ಅವನು ಸನ್ಯಾಸಿಯಾಗಿ ಬದುಕಿರುವುದೇ ಲೇಸು. ಅವರು ಶಂಕರಚಾರ್ಯರಿಗೆ ಕೂಡಲೇ ಸನ್ಯಾಸತ್ವ ಸ್ವೀಕರಿಸಲು ಅನುಮತಿಯಿತ್ತರು, ಆದರೆ ಸಾಯುವ ವೇಳೆಗೆ ಮಗ ತಮ್ಮ ಬಳಿಯಿರಬೇಕೆಂದು ಪ್ರತಿಜ್ಞೆ ಮಾಡಿಸಿಕೊಂಡರು. ಮೊಸಳೆ ಕಾಲುಗಳನ್ನು ಬಿಟ್ಟಿತು. ಶಂಕರಾಚಾರ್ಯರು ನದಿಯಿಂದ ಸನ್ಯಾಸಿಗಳಾಗಿ ಹೊರಬಂದರು.

ಈ ಕಥೆ ಎಷ್ಟು ನಿಜವೋ ಹೇಳುವುದು ಕಷ್ಟ. ಮೊಸಳೆ ಕಾಲು ಹಿಡಿದಾಗಲೂ ಶಂಕರಾಚಾರ್ಯರಿಗೆ ಹಾನಿಮಾಡದಿರುವುದು ಹಾಗೂ ಸನ್ಯಾಸತ್ವ ಸ್ವೀಕರಿಸಲು ಅನುಮತಿ ಸಿಕ್ಕಿದೊಡನೆಯೇ ಅವರ ಕಾಲುಗಳನ್ನು ಬಿಡುವುದು ಆಶ್ಚರ್ಯದ ಘಟನೆಯೇ ಆಗಿದೆ. ಹಾಂ, ಒಂದು ಮಹತ್ವದ ಉದ್ದೇಶ ಪೂರ್ತಿಗಾಗಿ ಶಂಕರಾಚಾರ್ಯರಂತಹ ರಾಷ್ಟ್ರ ನಿರ್ಮಾಪಕರು ಮತ್ತು ದಾರ್ಶನಿಕರು ಈ ನಾಟಕವಾಡುವುದು ಆಶ್ಚರ್ಯದ ಸಂಗತಿಯಲ್ಲ. ಏನಾದರೂ ಆಗಲಿ, ಪರಿವಾರದ ಸ್ನೇಹವೆಂಬ ನದಿಯಲ್ಲಿ ವೈಯಕ್ತಿಕ ಸ್ವಾರ್ಥದ ಯಾವ ಮೊಸಳೆ ಶಂಕರಾಚಾರ್ಯರನ್ನು ಹಿಡಿದುಕೊಳ್ಳಲು ಬಯಸುತ್ತಿತ್ತೊ ಅದರಿಂದ ಅವರು ಅವಶ್ಯವಾಗಿ ಮುಕ್ತಗೊಂಡರು. ಈ ಘಟನೆ, ಅದು ಸತ್ಯವಾಗಿರಲಿ ಅಥವಾ ಮಿಥ್ಯೆಯಾಗಿರಲಿ, ಹಿಂದೂ ಸಮಾಜದ ಇತಿಹಾಸವನ್ನೇ ಬದಲಿಸಿತು.

* * * *

# ೪. ಧ್ಯೇಯ ಪಥ

ಇಂದು ಶಂಕರ ಸನ್ಯಾಸಿಯಾಗಿದ್ದ. ಅವನ ವಿಶಾಲ ಹೃದಯದ ಹಸಿವು ಮತ್ತು ಇಡೀ ದೇಶದ ಸಾಮರಸ್ಯವುಳ್ಳ ಆತ್ಮಗಳ ಕರೆ–ಇವು ಪರಿವಾರದ ಒಂದು ಸಣ್ಣ ಪರಿಧಿಯಲ್ಲಿ ಶಾಂತಗೊಳ್ಳಲು ಹೇಗೆ ಸಾಧ್ಯವಿತ್ತು? ಶಂಕರ ತನ್ನ ಪುರಾತನ ಆದರ್ಶಗಳನ್ನು ತಿಳಿದಿದ್ದ. ಅದೇನೆಂದರೆ:

**ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।**
**ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥**

ಅದರ ಪ್ರಕಾರ ಶಂಕರ ಆತ್ಮಕ್ಕಾಗಿ ಎಲ್ಲವನ್ನೂ ತ್ಯಜಿಸಿ ಸನ್ಯಾಸಿಯಾದ. ಅವನ ಆತ್ಮದ ಕರೆ ಏನಾಗಿತ್ತು, ಅದು ಹೇಗೆ ಶಾಂತಗೊಂಡಿತು – ಈ ಪ್ರಶ್ನೆಗೆ ಉತ್ತರವನ್ನು ಅವನ ಭಾವಿ ಕರ್ಮಣ್ಯ ಜೀವನವೇ ನೀಡುತ್ತದೆ.

ಸನ್ಯಾಸ ಸ್ವೀಕರಿಸಿ, ತನ್ನ ತಾಯಿಗೆ ನಮಸ್ಕರಿಸಿ, ಗುರುವಿನ ಶೋಧನೆಗೆ ಶಂಕರಾಚಾರ್ಯರು ಹೊರಟರು. ಅಂತ:ಕರಣದ ಶ್ರೀಮಂತಿಕೆಯೇ ಅವರ ಏಕಮಾತ್ರ ಹಣವಾಗಿತ್ತು. ಆತ್ಮವಿಶ್ವಾಸದ ಪ್ರಬಲತೆಯೇ ಅವರ ಮಹತ್ವದ ಶಕ್ತಿಯಾಗಿತ್ತು. ಕುಶಲ ಪಾಂಡಿತ್ಯ ಬುದ್ಧಿಯೇ ಅವರಿಗೆ ಮಾರ್ಗದರ್ಶನ ಮಾಡುತ್ತಿತ್ತು. ಮನಸ್ಸಿನಲ್ಲಿ ತಮ್ಮ ಕಾರ್ಯದ ಬಗ್ಗೆ ಇದ್ದ ಅಪಾರ ಶ್ರದ್ಧೆ ಮತ್ತು ದೇವರ ಆಸರೆ ಅವರ ಶಕ್ತಿಯಾಗಿತ್ತು. ಅವರು ತುಂಬ ಶಾಂತಿಯನ್ನು ಹಾಗೂ ತಮ್ಮೊಳಗೆ ಒಂದು ವಿಧದ ಚೈತನ್ಯ ಶಕ್ತಿಯನ್ನು ಅನುಭವಿಸುತ್ತಿದ್ದರು. ಇದೇ ಅವರಿಗೆ ಸ್ಫೂರ್ತಿಯನ್ನು ಕೊಡುತ್ತಿತ್ತು. ಭಗವಾನ್ ಅಚ್ಯುತರೇ ಖುದ್ದು ತಮ್ಮ ಅಂತರಾತ್ಮದಲ್ಲಿ ಪ್ರಕಟಗೊಂಡಿದ್ದಾರೆಂದು ಅವರಿಗೆ ತಿಳಿಯಿತು. ಆಗಲೇ ಅವರು ಅಚ್ಯುತಾಷ್ಟಕವೆಂಬ ಹೆಸರಿನಲ್ಲಿ ಭಕ್ತಿ–ಭಾವದಿಂದ ಪರಿಪೂರ್ಣವಾದ ಕವನವನ್ನು ರಚಿಸಿದರು. ತಮ್ಮ ಆತ್ಮದ ಪ್ರೇರಣೆಯಂತೆ ಭಗವಾನ್ ಗೋವಿಂದಪಾದರ ಆಶ್ರಮದೆಡೆಗೆ, ಅವರಿಂದ ವಿಧಿಪೂರ್ವಕವಾಗಿ ಸನ್ಯಾಸವನ್ನು ಸ್ವೀಕರಿಸಲು ಹೊರಟರು.

ಮಾರ್ಗದ ಕಷ್ಟಗಳ ಬಗ್ಗೆ ಚಿಂತಿಸದೆ, ಹಸಿವು–ನೀರಡಿಕೆಯ ಬಗ್ಗೆ ಗಮನ ಕೊಡದೆ ಈ ಚಿಕ್ಕ ಸನ್ಯಾಸಿ ತನ್ನ ಧ್ಯೇಯ ಪಥದೆಡೆಗೆ ಸಾಗುತ್ತಲೇ ಇದ್ದ. ಅವನ ಈ



ಶ್ರದ್ಧೆಯನ್ನು ಕಂಡು ಜನರಿಗೆ ಆಶ್ಚರ್ಯವಾಗುತ್ತಿತ್ತು. ಅವರ ಮುಖದ ಕಾಂತಿಯನ್ನು ಕಂಡು ಜನ, ನರನಾರಾಯಣರಲ್ಲಿ ಒಬ್ಬರು ಅವರತರಿಸಿದ್ದಾರೆಂದು ಭಾವಿಸುತ್ತಿದ್ದರು. ಅವರು ಉತ್ತರದೆಡೆಗೆ ಹೊರಟು ಗೋಕರ್ಣ ತೀರ್ಥಕ್ಕೆ ಬಂದರು. ನಗರದ ಗಲ್ಲಿಗಳಲ್ಲಿ ಹಾದುಹೋಗುತ್ತಿರುವಾಗ ಹಿಂದಿನಿಂದ ಯಾರೋ ಕರೆದರು: "ಶಂಕರ! ಓ ಶಂಕರ! ಎಲ್ಲಿಗೆ ಹೋಗುತ್ತಿದ್ದೀಯಾ?"

ಶಂಕರಾಚಾರ್ಯರು ನಿಂತರು, ಅಷ್ಟರಲ್ಲಿ ಅವರನ್ನು ಕರೆದ ವ್ಯಕ್ತಿಯೂ ಅವರ ಬಳಿಗೆ ಬಂದ. ಅವನು ಅವರ ಹಳೆ ಕಾಲಟಿಯ ಸಹಪಾಠಿ ಮತ್ತು ಮಿತ್ರನಾಗಿದ್ದ ವಿಷ್ಣುಶರ್ಮನಾಗಿದ್ದ. ವಿಷ್ಣುಶರ್ಮ, ಶಂಕರರನ್ನು ಆಪಾದಮಸ್ತಕ ಗಮನಿಸುತ್ತಾ ಹೇಳಿದ, "ಶಂಕರ, ಇದ್ಯಾವ ವೇಷವನ್ನು ಹಾಕಿಕೊಂಡಿದ್ದೀಯಾ?"

ಶಂಕರಾಚಾರ್ಯರು ವಿಷ್ಣುಶರ್ಮನನ್ನು ನೋಡಿ ಮಗುಳ್ನಕ್ಕರು.

" ಇಲ್ಲೇಕೆ ಅಲೆಯುತ್ತಿರುವೆ, ಶಂಕರಣ್ಣ?" ವಿಷ್ಣುಶರ್ಮ ವ್ಯಗ್ರನಾಗಿದ್ದ. ಶಂಕರಾಚಾರ್ಯರು ಅವನ ಒಂದು ಪ್ರಶ್ನೆಗೂ ಉತ್ತರಿಸಿರಲಿಲ್ಲ. ಆದರೆ ವಿಷ್ಣುಶರ್ಮ ಈ ರಹಸ್ಯವನ್ನರಿಯಲು ತುಂಬಾ ವ್ಯಾಕುಲಗೊಳ್ಳುತ್ತಿದ್ದ.

"ವಿಷ್ಣು, ನಾನು ಸನ್ಯಾಸವನ್ನು ಸ್ವೀಕರಿಸಿದ್ದೇನೆ!" ಶಂಕರಾಚಾರ್ಯರು ಶಾಂತಚಿತ್ತರಾಗಿ ಹೇಳಿದರು.

"ಸನ್ಯಾಸ? ಶಂಕರ, ಇದೇನು ಹೇಳುತ್ತಿರುವೆ? ತಮಾಷೆ ಮಾಡ್ತಿಲ್ಲ ತಾನೆ?" ವಿಷ್ಣುಶರ್ಮನಿಗೆ ಆಶ್ಚರ್ಯವಾಯಿತು.

"ತಮಾಷೆಯಲ್ಲ, ವಿಷ್ಣು! ನಾನು ನಿಜವನ್ನೇ ಹೇಳುತ್ತಿರುವೆ. ಅಮ್ಮ ಅನುಮತಿ ನೀಡಿದರು".

ಶಂಕರಾಚಾರ್ಯರು ಗಂಭೀರ ಸ್ವರದಲ್ಲಿ ಹೇಳಿದರು.

"ಹಾಗಾದ್ರೆ ಧ್ರುವನಂತೆ ಕಾಡಿಗೆ ಹೋಗಿ ತಪಸ್ಸು ಮಾಡ್ತೀಯಾ?" ವಿಷ್ಣು ಶರ್ಮ ಕೇಳಿದ.

"ಇಲ್ಲಪ್ಪ, ಕಾಡಿಗೆ ಹೋಗಲ್ಲ. ಸನ್ಯಾಸ ಅಂದರೆ ಜಗತ್ತನ್ನು ತ್ಯಜಿಸಿ ಕಾಡಿನಲ್ಲಿ ತಪಸ್ಸು ಮಾಡುವುದಲ್ಲ. ನಾನು 'ಕರ್ಮದ ಸನ್ಯಾಸ'ವನ್ನು ಸ್ವೀಕರಿಸಿದ್ದೇನೆ. ಅಂದರೆ ಕರ್ಮ–ಕಾಯಕವನ್ನು ತ್ಯಜಿಸದೆ, ಕರ್ಮವೆಸಗುವುದು. ದೇಶ ಮತ್ತು ಧರ್ಮದ ಕಾಯಕ ಮಾಡುವುದು, ಇದೇ ವಾಸ್ತವಿಕ. ಹಾಗೂ ಇವು ಮನುಷ್ಯನನ್ನು ಕರ್ಮಫಲದ ಬಂಧನದಿಂದ ಕಟ್ಟಿಹಾಕುವುದಿಲ್ಲ"

"ಆದ್ರೆ ಶಂಕರ, ಇದು ಸನ್ಯಾಸವನ್ನು ಸ್ವೀಕರಿಸುವ ವಯಸ್ಸೇ?"

"ವಿಷ್ಣು, ಶುಭ ಕಾರ್ಯವೆಸುಗುವುದಕ್ಕೂ ಒಂದು ವಯಸ್ಸು ನಿರ್ಧಾರವಾಗಿರುವುದೇ? ಪ್ರೇರಣೆ ಬಲವಾದಾಗ, ವಿಚಾರಗಳು ಮತ್ತು ಭಾವನೆಗಳು ಪವಿತ್ರಗೊಂಡಾದ ಕೂಡಲೇ, ಆ ಶುಭ ಸಮಯದಲ್ಲಿಯೇ ಪುಣ್ಯ ಕಾರ್ಯಕ್ಕೆ

ತೊಡಗಿಕೊಳ್ಳಬೇಕು...."

ವಿಷ್ಣುಶರ್ಮ ಅವರ ಮಾತನ್ನು ತಡೆದು ಹೇಳಿದ: "ನನ್ನ ಅಭಿಪ್ರಾಯ ಗೃಹಸ್ಥಾಶ್ರಮಕ್ಕೆ ಸಂಬಂಧಿಸಿದ್ದಾಗಿದೆ. ಸನ್ಯಾಸವನ್ನು ಆನಂತರವೇ ತೆಗೆದುಕೊಳ್ಳಬಲ್ಲೆ".

"ಸರಿ ವಿಷ್ಣು? ಬ್ರಹ್ಮಚರ್ಯೆ, ಗೃಹಸ್ಥಾಶ್ರಮ, ವಾನಪ್ರಸ್ಥಾಶ್ರಮ ಮತ್ತು ಸನ್ಯಾಸ– ಈ ಕ್ರಮದಲ್ಲಿ ನಾಲ್ಕೂ ಆಶ್ರಮಗಳನ್ನು ಪಾಲಿಸುವುದು ಸಾಮಾನ್ಯ ವ್ಯವಸ್ಥೆ, ಆದರೆ ವರ್ಣಾಶ್ರಮ ವ್ಯವಸ್ಥೆ ಸಮಾಜದ ಏಳಿಗೆಗಾಗಿ ಸಮಾಜದ ಮೂಲಕ ನಿರ್ಮಾಣಗೊಂಡ ವ್ಯವಸ್ಥೆಯಾಗಿದೆ. ನಾವೇ ಮಾಡಿಕೊಂಡ ನಿಯಮಗಳಿಗೆ ನಾವೇ ಒಡೆಯರು, ದಾಸರಲ್ಲ" ಶಂಕರಾಚಾರ್ಯರು ಹೇಳಿದರು.

"ವ್ಯವಸ್ಥೆಯನ್ನು ಪಾಲಿಸುವುದರಿಂದಲೇ ಸಮಾಜ ಉಳಿಯುವುದೇ?" ವಿಷ್ಣು ಶರ್ಮ ಹೇಳಿದ: "ನಾವೇ ರಚಿಸಿಕೊಂಡ ನಿಯಮಗಳನ್ನು ನಾವೇ ಪಾಲಿಸದಿದ್ದರೆ, ಅಂಥ ನಿಯಮಗಳಿಂದ ಉಪಯೋಗವಾದರೂ ಏನು?"

ಶಂಕರಾಚಾರ್ಯರು ಉತ್ತರಿಸಿ. "ವ್ಯವಸ್ಥೆ ಮತ್ತು ನಿಯಮಗಳು ಸಮಾಜದ ಸೃಷ್ಟಿಗಾಗಿಯೇ ಇರುತ್ತವೆ. ಮಹತ್ವ, ನಿಯಮ ಮತ್ತು ವ್ಯವಸ್ಥೆಗಲ್ಲ. ಪ್ರತಿಯಾಗಿ, ನಿಯಮ ಮತ್ತು ವ್ಯವಸ್ಥೆಗಳು ಸಮಾಜದ ಸಂಘಟನೆಗೆ ಮತ್ತು ಜೀವನಕ್ಕಾಗಿ ಇವೆ. ಒಂದು ವೇಳೆ ಸಾಮಾಜಿಕ ಬದುಕಿಗೆ ಗಡಿಯನ್ನು ಸ್ಥಾಪಿಸಿಕೊಳ್ಳುವ ಅಗತ್ಯವಿದ್ದರೆ ಮರ್ಯಾದಾಪುರುಷೋತ್ತಮನಾದ ಶ್ರೀರಾಮನಂತೆ ಎಲ್ಲೆಗಳಲ್ಲಿ ಕಟ್ಟಿಹಾಕಲಾಗುತ್ತವೆ. ಒಂದು ವೇಳೆ ಎಲ್ಲೆಗಳನ್ನು ಉಲ್ಲಂಘಿಸುವ ಅಗತ್ಯವುಂಟಾದರೆ ಯೋಗೇಶ್ವರನಾದ ಕೃಷ್ಣನಂತೆ ಎಲ್ಲೆಗಳನ್ನು ಉಲ್ಲಂಘಿಸಲಾಗುತ್ತದೆ. ಉಲ್ಲಂಘನೆ ಮತ್ತು ಪಾಲನೆ– ಈ ಎರಡರ ಹಿಂದೆ ಸಮಾಜದ ಸಂಘಟನೆಯ ಭಾವನೆ ಮಾತ್ರವಿದೆ. ಸಮಾಜದ ಅಸ್ತಿತ್ವವನ್ನು ಕಾಯ್ದಿಟ್ಟುಕೊಳ್ಳುವ ಅಭಿಲಾಷೆ ಮಾತ್ರವಿದೆ. ವ್ಯವಸ್ಥೆ ಮತ್ತು ನಿಯಮಗಳು ಸಾಧ್ಯವಲ್ಲ, ಸಾಧನಗಳು. ಸಾಧ್ಯತೆಗಳನ್ನು ಗಳಿಸಲು ಸಹಾಯಕವಾಗುವವರೆಗೆ ಮಾತ್ರ ಸಾಧನಗಳು ಉಪಯೋಗವಾಗುತ್ತವೆ. ಕಂದಾಚಾರದಂತೆ ನಡೆಯುವುದರಿಂದ ಏನು ಉಪಯೋಗ?"

"ಹಾಗಾದ್ರೆ, ನೀನು ಗೃಹಸ್ಥಾಶ್ರಮಕ್ಕೆ ಪ್ರವೇಶಿಸುವುದಿಲ್ಲವೇ?" ವಿಷ್ಣು ಪ್ರಶ್ನಿಸಿದ.

"ಇಲ್ಲ ವಿಷ್ಣು! ಇಂದು ಗೃಹಸ್ಥಾಶ್ರಮದ ಸಮಸ್ಯೆಗಳಲ್ಲಿ ಸಿಲುಕಿಕೊಳ್ಳಲು ಸಮಯವಿಲ್ಲ. ಇಂದು ನಮ್ಮೆಲ್ಲಾ ಶಕ್ತಿಗಳನ್ನು ಸಮಾಜದ ಹಿತಕ್ಕಾಗಿ ತೊಡಗಿಸುವ ಆವಶ್ಯಕತೆ ಇದೆ. ಗೃಹಸ್ಥ ಜೀವನ ಮತ್ತು ಸನ್ಯಾಸತ್ವ–ಎರಡು ಸಾಧನಗಳು. ಇಂದು ಈ ಎರಡನೆಯದೇ ಯೋಗ್ಯವಾಗಿದೆ. ಕಾರ್ಯ ಎಷ್ಟೊಂದು ಹೆಚ್ಚಿದ್ದು ಸಮಯ ಎಷ್ಟೊಂದು ಕಡಿಮೆಯಿದೆಯೆಂದರೆ ಬೇರಾವುದೇ ಮಾರ್ಗವೂ ಇಲ್ಲ. ನೋಡು ವಿಷ್ಣು, ಬೌದ್ಧರು ತಮ್ಮ ಸನ್ಯಾಸತ್ವದ ಬಗ್ಗೆ ಬಡಾಯಿಕೊಚ್ಚಿಕೊಳ್ಳುತ್ತಾರೆಂಬುದು ನಿನಗೆ ತಿಳಿದಿಲ್ಲ. ವೈದಿಕ ಧರ್ಮದಲ್ಲಿ ಸನ್ಯಾಸವೇ ಇಲ್ಲವೆಂದು ಅವರು ತಿಳಿಯುತ್ತಾರೆ.



ವೈದಿಕ ಧರ್ಮದಲ್ಲಿಯೂ ಸನ್ಯಾಸವಿದೆ, ಅದು ಅವರಿಗಿಂತ ಶ್ರೇಷ್ಠವಾಗಿದೆ ಎಂಬುದನ್ನು ಅವರಿಗೆ ತೋರಿಸಬೇಕು. ಸನ್ಯಾಸತ್ವದ ಸ್ವರೂಪವನ್ನು ವಿಕೃತಗೊಳಿಸಲಾಗಿದ್ದು, ಅದನ್ನು ಸುಧಾರಣೆ ಮಾಡಬೇಕಾಗಿದೆ."

"ಹಾಗಾದ್ರೆ, ಬೌದ್ಧ ಸನ್ಯಾಸಿಗಳಂತೆ ಒಂದು ಮಠದ ಸ್ವಾಮಿಯಾಗಿರುತ್ತೀಯಾ?" ವಿಷ್ಣುಶರ್ಮಾ ಜುಗುಪ್ಸೆಯ ಸ್ವರದಲ್ಲಿ ಕೇಳಿದ.

"ಇಲ್ಲ ವಿಷ್ಣು!" ಶಂಕರ ದೃಢಚಿತ್ತದಿಂದ ಹೇಳಿದ, "ಮಠದಲ್ಲಿರುವುದು ಮತ್ತು ಸಮಾಜಕ್ಕೆ ಭಾರವಾಗಿ ಜೀವನ ಸಾಗಿಸುವುದು ಸನ್ಯಾಸ ಧರ್ಮದ ಆದರ್ಶವಲ್ಲ. ಸನ್ಯಾಸಿಯ ಜೀವನ ನಿಷ್ಕ್ರಿಯತೆ, ಸಂತೋಷ ಮತ್ತು ಸುಖದ್ದಲ್ಲ. ಪ್ರತಿಯಾಗಿ, ಸತತವಾಗಿ ಕರ್ಮವೆಸಗುವ ಹಾಗೂ ಕಷ್ಟ ಮತ್ತು ದುಃಖದ ಜೀವನವಾಗಿದೆ. ಸನ್ಯಾಸಿಯ ಕೆಲಸ ಸಮಾಜದ ಭಾರವನ್ನು ಹೆಚ್ಚಿಸುವುದಲ್ಲ. ಪ್ರತಿಯಾಗಿ, ಸಮಾಜದ ಭಾರವನ್ನು ಹಗುರಗೊಳಿಸುವುದಾಗಿದೆ. ಇಂದು ಬೌದ್ಧ ಸನ್ಯಾಸಿಗಳ ಅಂಧಾನುಕರಣೆಯನ್ನು ಬಹಳಷ್ಟು ಹಿಂದುಗಳು ಮಾಡುತ್ತಿರುವುದು ನನಗೆ ತಿಳಿದಿದೆ. ಅವರೆದುರು ವಾಸ್ತವಿಕ ಆದರ್ಶಗಳನ್ನು ವ್ಯವಹಾರದಲ್ಲಿ ಪರಿಪಕ್ವಗೊಳಿಸಿ, ಪ್ರತ್ಯಕ್ಷವಾಗಿ ತೋರಿಸಬೇಕಾಗುತ್ತದೆ".

"ಹಾಗಾದ್ರೆ ಶಂಕರ, ನೀನು ದೊಡ್ಡಕಾರ್ಯವನ್ನೇ ಮಾಡುತ್ತಿದ್ದೀಯಾ! ನನ್ನಿಂದ ತಪ್ಪಾಯ್ತು, ನಿನ್ನನ್ನು ಶಂಕರನೆಂದಲ್ಲಾ, ಶಂಕರಾಚಾರ್ಯರೆಂದು ಹೇಳಬೇಕು." ವಿಷ್ಣುಶರ್ಮ ಮೆಲ್ಲನೆ ಚಿಟಕಿಹೊಡೆದು ಹೇಳಿದ.

"ನನಗೇಕೆ ಲಜ್ಜೆಯನ್ನುಂಟುಮಾಡುತ್ತಿದ್ದೀಯಪ್ಪ!" ಶಂಕರ ಸ್ವಲ್ಪ ದುಃಖದಿಂದ ಹೇಳಿದ, "ನಿನ್ನ ಶಂಕರನೊಂದಿಗೆ ಇಂಥ ಶಿಷ್ಟಾಚಾರವನ್ನು ತೋರಿಸಿ ಅವನನ್ನು ನಿನ್ನಿಂದ ಬೇರೆಮಾಡಲು ಬಯಸುತ್ತೀಯಾ?"

"ನೀನೀಗ ಬೇರೆಯೇ ಆಗಿದ್ದೀಯೆ? ನಿನ್ನವರು ಯಾರು? ಪರರು ಯಾರು?" ವಿಷ್ಣುಶರ್ಮ ದುಃಖದಿಂದ ಹೇಳಿದ.

"ವಿಷ್ಣು, ನಾನು ಬೇರೆಯಾಗಿಲ್ಲ!" ಶಂಕರಾಚಾರ್ಯರು ಹೇಳಿದರು, "ಈ ಸನ್ಯಾಸದಲ್ಲಿ ಪ್ರತ್ಯೇಕತೆ ಇಲ್ಲ, ಪ್ರತಿಯಾಗಿ ನನ್ನದು ಎಂಬ ಆತ್ಮೀಯತೆ ಇದೆ. ವೈರಾಗ್ಯವಿಲ್ಲ, ಪ್ರೀತಿಯಿದೆ. ಹಾಂ, ಈ ಪ್ರೇಮದಲ್ಲಿ ಅನುರಾಗವಿಲ್ಲ, ಬಂಧನವಿಲ್ಲ, ಮೋಹವಿಲ್ಲ. ಇದರಲ್ಲಿ ಸಂಕುಚಿತ ದೃಷ್ಟಿಯಿಲ್ಲ, ವೈಶಾಲ್ಯ ಇದೆ. ದೌರ್ಬಲ್ಯವಿಲ್ಲ, ಬಲವಿದೆ. ವ್ಯಕ್ತಿಗಾಗಿ ಸಮಾಜದ ತ್ಯಾಗವಿಲ್ಲ, ಸಮಾಜಕ್ಕಾಗಿ ವ್ಯಕ್ತಿಯ ಅನುರಾಗವಿದೆ....".

ವಿಷ್ಣು ಶಾಂತ ಚಿತ್ತದಿಂದ ಕೇಳುತ್ತಿದ್ದ. ಅವನ ಮೆದುಳಿನಲ್ಲಿ ಇದ್ದಕ್ಕಿದ್ದಂತೆ ವಿಚಾರಗಳ ಅಲೆಯೇ ಎದ್ದಿತು. ಭೂತ, ಭವಿಷ್ಯ ಮತ್ತು ವರ್ತಮಾನ–ಈ ಮೂರು ಅವನ ಕಣ್ಣಿನಿಂದ ದೂರವಾದವು. ಅವನ ಹಾವ–ಭಾವ ಮತ್ತು ಕೈ–ಸಂಜ್ಞೆಯಿಂದ,

ಅವನು ಒಂದು ಮಹತ್ವದ ನಿಶ್ಚಯ ಮಾಡಿಕೊಂಡಿದ್ದಾನೆಂದು ತಿಳಿಯಿತು.

ಅವನು ಶಂಕರಾಚಾರ್ಯರಿಗಿಂತ ವಯಸ್ಸಿನಲ್ಲಿ ದೊಡ್ಡವನಾಗಿದ್ದ. ಕಾಲಟಿಯಲ್ಲಿ ಅವನೂ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗ ಅವನಿಗೆ ಶಂಕರಾಚಾರ್ಯರೊಂದಿಗೆ ಗೆಳೆತನವಿತ್ತು. ಅವನು ಶಂಕರರನ್ನು ಪ್ರೀತಿಸುತ್ತಿದ್ದ. ಅವನ ಬಗ್ಗೆ ಶ್ರದ್ಧೆ ತಾಳಿದ್ದ. ಶಂಕರರ ಪ್ರೀತಿಯ ಮಾತುಗಳನ್ನು ಕೇಳಿ ಅವನ ಹೃದಯ ತುಂಬಿಬಂದಿತು. ಶಂಕರಾಚಾರ್ಯರು ಹೀಗೆ ಏಕಾಂತವಾಗಿ ಸಂಚಾರ ಕೈಗೊಳ್ಳುವುದನ್ನು ಅವನಿಂದ ಸಹಿಸಲು ಸಾಧ್ಯವಿರಲಿಲ್ಲ. ಹೀಗಾಗಿ ಅವನೂ ಶಂಕರಾಚಾರ್ಯರೊಂದಿಗೆ ಹೊರಡಲು ನಿಶ್ಚಯಿಸಿದ.

"ಶಂಕರ, ನಾನು ನಿನ್ನೊಂದಿಗೆ ಬರುವೆ!" ಎಂದ ವಿಷ್ಣುಶರ್ಮ

"ನೀನೇನು ಮಾಡ್ತೀಯಪ್ಪಾ?" ಶಂಕರಾಚಾರ್ಯರು ಶಾಂತಸ್ವರದಲ್ಲಿ ಕೇಳಿದರು.

"ನಾನೇನು ಮಾಡ್ತೀನಾ? ಸಮಾಜ ನಿನ್ನದು ಮಾತ್ರವೇ? ನನ್ನದಲ್ವಾ? ಅದರ ಬಗ್ಗೆ ನಿನ್ನದಷ್ಟೇ ಕರ್ತವ್ಯವೇ? ನನ್ನ ಯಾವ ಕರ್ತವ್ಯವೂ ಇಲ್ಲವೇ?" ವಿಷ್ಣುಶರ್ಮ ನಿಂದನೆಯ ಸ್ವರದಲ್ಲಿ ಹೇಳಿದ. ಶಂಕರಾಚಾರ್ಯರು ನಿರುತ್ತರರಾಗಿದ್ದರು. ವಿಷ್ಣುಶರ್ಮ ಸಹ ಅವರನ್ನು ಹಿಂಬಾಲಿಸಿದ.

ವಿಷ್ಣುಶರ್ಮ ಮತ್ತು ಶಂಕರ–ಇಬ್ಬರೂ ಗುರುಗಳನ್ನರಸುತ್ತಾ, ನಾಲ್ಕೂ ದಿಕ್ಕಿಗೆ ಸಂಚರಿಸಿದರು. ನರ್ಮದಾ ತೀರದಲ್ಲಿ ಯೋಗಿ ಗೋವಿಂದಪಾದರ ದರ್ಶನವಾಯಿತು. ಭಗವದ್ ಗೋವಿಂದಪಾದರು ಶಂಕರಾಚಾರ್ಯರನ್ನು ನೋಡಿದೊಡನೆಯೇ ಅವರೆಡೆಗೆ ಆಕರ್ಷಿತರಾದರು. ಭಗವಂತನ ಪ್ರೇರಣೆಯಂತೆ ಅವರು ಶಂಕರನ ದಾರಿಯನ್ನು ಬಹಳ ದಿನಗಳಿಂದ ನಿರೀಕ್ಷಿಸುತ್ತಿದ್ದರೆಂದು ಹೇಳಲಾಗುತ್ತದೆ. ಶಂಕರರನ್ನು ಕಂಡೊಡನೆಯೇ ಅವರ ಮುಖ ಅರಳಿತು. ಶಿಷ್ಯ ಗುರುಗಳ ಆತ್ಮದ ಅಭಿವ್ಯಕ್ತಿಯಾಗಿಯೇ ಇರುತ್ತಾನೆ. ಅವರ ಅಂತಃಕರಣದ ಪ್ರವೃತ್ತಿಗೆ ಪೂರಕವಾಗಿರುತ್ತಾನೆ. ಹೀಗಿರುವಾಗ ಪರಿಸ್ಪರ ಯಾಕೆ ಗುರುತಿಸಬಾರದು? ಅವರ ಸೂತ್ರ ಮೊದಲೇ ಸಂಧಿಸಿರುತ್ತದೆ. ಯಾರಿಗೂ ಕೂಡಿಸುವ ಅಗತ್ಯವಿರುವುದಿಲ್ಲ. ಭಗವದ್ ಗೋವಿಂದಪಾದರು ಶಂಕರರನ್ನು ನೋಡಿ ನೆಮ್ಮದಿಯಿಂದ ಉಸಿರಾಡಿದರು. ಅನಂತರ ಶಂಕರರ ಆಶ್ರಮ ಪ್ರವೇಶದ ಏರ್ಪಾಡಿನಲ್ಲಿ ತೊಡಗಿದರು.

* * * *



## ೫. ಗುರುಗಳ ಸಾನಿಧ್ಯದಲ್ಲಿ

ಭಗವದ್ ಗೋವಿಂದಪಾದರಿಗೆ ಶಂಕರರಂತಹ ಪ್ರತಿಭಾವಂತ ಶಿಷ್ಯರು ಸಿಕ್ಕರು. ಹಿಂದೂ ಧರ್ಮದ ಪುನರುತ್ಥಾನದ ಕಾರ್ಯದಲ್ಲಿ ತೊಡಗಿಸಿಕೊಂಡ ಈ ಮಹಾನ್ ವ್ಯಕ್ತಿಯನ್ನು ಶಂಕರರು ತಮ್ಮ ಗುರುಗಳನ್ನಾಗಿ ಮಾಡಿಕೊಂಡರು. ಇವರು ಯಾರಾಗಿದ್ದರು? ಈ ಪ್ರಶ್ನೆ ನಮ್ಮ ಮನಸ್ಸಿನಲ್ಲಿ ಉದ್ಭವಿಸುತ್ತಿರಬಹುದು. ಹೀಗಾಗಿ ಈ ಗುರು ಪರಂಪರೆಯ ಇತಿಹಾಸವನ್ನು ತಿಳಿಯುವುದು ಆವಶ್ಯಕವಾಗಿದೆ.

ಶಂಕರರ ಹೆಸರಿನೊಂದಿಗೆ ಅದ್ವೈತ ಮತ್ತು ವೇದಾಂತಗಳ ಅವಿಚ್ಛಿನ್ನ ಸಂಬಂಧ ಅದೆಷ್ಟು ಕೂಡಿಕೊಂಡಿದೆಯೆಂದರೆ, ಶಂಕರರನ್ನೇ ತತ್ವಶಾಸ್ತ್ರದ ಜನಕನೆಂದು ತಿಳಿಯುತ್ತಿದ್ದೇವೆ. ಆದರೆ ವಸ್ತುಸ್ಥಿತಿ ಹೀಗಿಲ್ಲ. ಹಾಗಂತ ಎಲ್ಲ ತತ್ವಶಾಸ್ತ್ರಗಳಂತೆ ವೇದಾಂತ ತತ್ವ ಇತ್ಯಾದಿಗಳ ಸ್ರೋತ ವೇದಮಂತ್ರವೇ ಆಗಿದ್ದಾಗ್ಯೂ ಇದನ್ನು ಜಗತ್ತಿನೆದುರು ಪ್ರಕಟಗೊಳಿಸಿದವರು ಮಹರ್ಷಿ ಬಾದರಾಯಣರಾಗಿದ್ದರು. ಮಹರ್ಷಿ ಬಾದರಾಯಣರ ಕಾಲದಲ್ಲಿ ವೈಧಿಕ ಧರ್ಮಾನುಯಾಯಿಗಳಲ್ಲಿ ಮುಖ್ಯವಾಗಿ ಮೂರು ತತ್ವಶಾಸ್ತ್ರಗಳು ಪ್ರಚಲಿತವಾಗಿದ್ದವು – ಕಣಾದನ ವೈಶೇಷಿಕ ದರ್ಶನ, ಗೌತಮರ ನ್ಯಾಯ ದರ್ಶನ ಮತ್ತು ಕಪಿಲರ ಸಾಂಖ್ಯ ದರ್ಶನ. ಅಲ್ಲದೆ ಅವೈದಿಕ ಮತಾನುಯಾಯಿಗಳೂ ಸಹ ತಮ್ಮ–ತಮ್ಮ ದರ್ಶನದ ಬಗ್ಗೆ ಪ್ರತಿಪಾದಿಸಿದ್ದರು. ಅವುಗಳಲ್ಲಿ ಮೂರು–ಚಾರ್ವಕರ ನಾಸ್ತಿಕ ದರ್ಶನ. ಜೈನರ ಅರ್ಹತ್ ದರ್ಶನ ಮತ್ತು ಬೌಧ್ಧರ ತಥಾಗತ ದರ್ಶನಗಳು –ತುಂಬ ಪ್ರಸಿದ್ಧವಾಗಿವೆ. ಕೊನೆಯ ದರ್ಶನ, ದೇವರನ್ನು ನಂಬುತ್ತಿರಲಿಲ್ಲ, ವೇದಗಳನ್ನು ನಂಬುತ್ತಿರಲಿಲ್ಲ. ಅವರು ವೈದಿಕ ಪರಂಪರೆಗನುಸಾರವಾಗಿ ರಚಿಸಲ್ಪಟ್ಟ ಸಾಮಾಜಿಕ ನಿಯಮಗಳನ್ನು ಸಹ ವಿರೋಧಿಸುತ್ತಿದ್ದರು. ಚಾರ್ವಾಕ ಮತಾನುಯಾಯಿಗಳಂತೂ ಯಾವುದೇ ಕಟ್ಟುಪಾಡುಗಳನ್ನೂ ಒಪ್ಪಲು ಸಿದ್ಧರಿರಲಿಲ್ಲ. ಸುಖ ಮತ್ತು ಶಾಂತಿಯ ಕೊಳಲನುದುತ್ತಾ ತಮ್ಮ ಸುಖದೆದರು ಜಗತ್ತಿನ ಯಾವುದೇ ವಿಷಯದ ಬಗ್ಗೆ ಚಿಂತಿಸದೆ ಜೀವನ ಸಾಗಿಸುವುದು ಅವರ ಏಕಮಾತ್ರ ಧ್ಯೇಯವಾಗಿತ್ತು. ಅವರ ಸಿದ್ಧಾಂತ–ವಾಕ್ಯವೇ ಹೀಗಿತ್ತು.

**ಯಾವಜ್ಜೀವೇತ್ ಸುಖಂ ಜೀವೇತ್ ಋಣಂ ಕೃತ್ವಾ ಘೃತಂ ಪಿಬೇತ್।**
**ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ॥**

ಉಳಿದ ಅವೈದಿಕ ದರ್ಶನಗಳಲ್ಲಿ ನೈತಿಕತೆಯ ಸ್ಥಾನ ಮೇಲ್ಮಟ್ಟದ್ದಲ್ಲಿತ್ತು. ಆದರೆ ತನ್ನ ಪರಂಪರೆಯ ಬಗ್ಗೆ ಪೂರ್ಣರೂಪದದಲ್ಲಿ ದುರ್ಲಕ್ಷ್ಯಗೊಂಡಿತ್ತು. ವೈದಿಕ ದರ್ಶನಗಳಲ್ಲಿ ಕಣಾದರ ಭೌತಿಕವಾದ, ಕಪಿಲರ ದ್ವೈತವಾದ ಮತ್ತು ಗೌತಮರ ನೀರಸ ತರ್ಕದ ಆಸರೆ ಪಡೆದು ಜಗತ್ತನಲ್ಲಿ ದ್ವೈಧೀಭಾವ, ಅನಾಸ್ಥೆ ಮತ್ತು ಅಪನಂಬಿಕೆಯನ್ನು ಪ್ರಚುರಪಡಿಸುತ್ತಿದ್ದರು. ಭಗವಾನ್ ಶ್ರೀಕೃಷ್ಣನ ಗೀತೆ ಮತ್ತು ಮಹಿರ್ಷಿ ವೇದವ್ಯಾಸರು ಹೇಳಿದ ಮಾರ್ಗವನ್ನು ಜನ ಮರೆಯುತ್ತಿದ್ದರು. ಹದಿನೆಂಟು ಅಕ್ಷೌಹಿಣಿ ಸೈನ್ಯವನ್ನು ಕಳೆದುಕೊಂಡು, ಅತ್ಯಂತ ಶ್ರಮ ಮತ್ತು ತ್ಯಾಗ ಮಾಡಿಯೂ ಭಗವಾನ್ ಶ್ರೀಕೃಷ್ಣ ಸ್ಥಾಪಿಸಿದ ಆ ಧರ್ಮ ಹೆಚ್ಚು ದಿನದವರೆಗೆ ಉಳಿಯಲಿಲ್ಲ. ಇಡೀ ದೇಶ, ದೇಶಕ್ಕೆ ಹಿತವಲ್ಲದ ಕಾರ್ಯಗಳಿಂದ ಸರ್ವನಾಶದೆಡೆಗೆ ಸಾಗುತ್ತಿತ್ತು. ಇಂಥ ವೇಳೆಯಲ್ಲಿ ದೇಶದ ಸಮಸ್ಯೆ ಮತ್ತು ದೋಷಗಳನ್ನು ಹೋಗಲಾಡಿಸಲು ಮತ್ತು ವೇದಗಳ ಸಾರಗರ್ಭಿತ ಅರ್ಥವನ್ನು ಹೇಳಲು ಮೂರು ಹೊಸ ದರ್ಶನಗಳು ರಚಿತಗೊಂಡವು; ಅವು ಯಾವುದೆಂದರೆ ಪತಂಜಲಿಯ ಯೋಗ ದರ್ಶನ, ಜೈಮಿನಿಯ ಮೀಮಾಂಸೆ ದರ್ಶನ ಮತ್ತು ಬಾದರಾಯಣನ ವೇದಾಂತ ದರ್ಶನ.

ಇವುಗಳಲ್ಲಿ ವೇದಾಂತದ ಸ್ಥಾನ ಪ್ರಮುಖವಾಗಿದೆ. ಯುಗ–ಯುಗಾಂತರಗಳಿಂದ ಹಿಂದೂಸ್ಥಾನದ ಮಹಾಪುರಷರು ಇದರಲ್ಲಿಯೇ ಶಾಂತಿಯನ್ನು ಪಡೆದಿದ್ದಾರೆ. ಇದರ ಆಸರೆಯೆಂದರೆ ಜೀವಮಾನವಿಡಿ ಲೋಕಹಿತದ ಕಾರ್ಯವೆಸಗುತ್ತಾ ನೈಷ್ಕರ್ಮದ (ಫಲಾಪೇಕ್ಷೆಯಿಲ್ಲದ ಕೆಲಸ) ಸಿದ್ಧಾಂತಗಳನ್ನು ಪ್ರತಿಪಾದಿಸಿರುವುದು. ದೇಶದಲ್ಲಿರುವ ಧರ್ಮಗಳು ವೇದಸಮ್ಮತವಾಗಿರಲಿಲ್ಲ ಮತ್ತು ಅವುಗಳನ್ನು ಧರ್ಮಶಾಸ್ತ್ರಗಳು ಪೋಷಿಸುತ್ತಿರಲಿಲ್ಲ. ಅವರು ಹಿಮಾಲಯದ ಕಣಿವೆಯಲ್ಲಿರುವ ಬದರಿಕಾಶ್ರಮದಲ್ಲಿ ತಮ್ಮ ತಂದೆ ಬದರಿಯವರ ಮಾರ್ಗದರ್ಶನದಲ್ಲಿ ಸಮಸ್ತ ವೇದ, ಉಪನಿಷತ್, ಸಂಹಿತೆ, ಬ್ರಾಹ್ಮಣ ಮತ್ತು ಸ್ಮೃತಿಗಳನ್ನು ಅಧ್ಯಯನ ಮಾಡಿದರು. ವೇದಗಳ ಕರ್ಮಕಾಂಡ–ಪ್ರಧಾನ ಮತ್ತು ಜ್ಞಾನಕಾಂಡ – ಪ್ರಧಾನ ಭಾಗಗಳನ್ನು ವಿಭಜಿಸಿ ಜ್ಞಾನಕಾಂಡವನ್ನು ಪ್ರತಿಪಾದಿಸಿದರು. ಕರ್ಮಕಾಂಡ ಪ್ರಬಲಗೊಂಡಿದ್ದರಿಂದಾಗಿ ಅದರ ವಾಸ್ತವಿಕ ರಹಸ್ಯವನ್ನು ತಿಳಿಯದೆ ಯಜ್ಞ–ಯಾಗಾದಿ ಕರ್ಮಗಳಲ್ಲಿಯೇ ಸಂತೋಷವಾಗಿರುವವರು ಮತ್ತು ಜೀವನದಲ್ಲಿ ದಯೆ, ಪ್ರೀತಿ, ಪ್ರೇಮ, ಸಹಾನುಭೂತಿರಹಿತ ವ್ಯವಹಾರವನ್ನು ವ್ಯಕ್ತಪಡಿಸುವ ಗರ್ವಿಷ್ಠ ಜನರ ನಡೆತೆಯನ್ನು ನೋಡಿಯೇ ಭಗವಾನ್ ಬುದ್ಧರಿಗೆ ವೈದಿಕ ಧರ್ಮದ ಬಗ್ಗೆ ಜುಗುಪ್ಸೆಯಾಗಿತ್ತು. ಹೀಗಾಗಿ, ಅವರು ತಮ್ಮ ಅಹಿಂಸಾಪ್ರಧಾನ ಧರ್ಮವನ್ನು ಉಪದೇಶಿಸಿದರು. ಆದರೆ ಭಗವಾನ್ ಬುದ್ಧರ ಅನುಯಾಯಿಗಳು, ವೇದಗಳನ್ನು ಪೂರ್ಣವಾಗಿ ಬಹಿಷ್ಕರಿಸಿದ್ದರಿಂದಾಗಿ ಶೂನ್ಯವಾದದಂತಹ ಅವಾಸ್ತವಿಕ ಮತ್ತು



ಅಮಂಗಳಕಾರಿ ಸಿದ್ಧಾಂತಕ್ಕೆ ತಲುಪಿದರು. ಮಹರ್ಷಿ ಬಾದರಾಯಣರು ಪ್ರತಿಪಾದಿಸಿದ ತತ್ವಗಳು ಈ ದೋಷದಿಂದ ದೂರವಿದ್ದವು. ಅವರು ಶೂನ್ಯಕರ್ಮಕಾಂಡದ ವ್ಯರ್ಥತೆಯ ಬಗ್ಗೆ ಹೇಳುತ್ತಾ ಪರಮ ಜ್ಞಾನದಿಂದ ಹುಟ್ಟಿದ ಅದ್ವೈತವನ್ನೇ ಪ್ರತಿಪಾದಿಸಿದರು.

ಭಗವಾನ್ ಶ್ರೀಕೃಷ್ಣನ ಬಾಯಿಯಿಂದ ಹೊರಟ ಅಮೃತವಾಣಿ ಮತ್ತು ಜೀವನದ ನಿಜವಾದ ತಾತ್ಪರ್ಯವನ್ನು ಹೇಳುವ 'ಶ್ರೀಮದ್‌ಭಗವದ್ಗೀತೆ'ಯನ್ನು ಮಹರ್ಷಿ ಬಾದರಾಯಣರೇ 'ಮಹಾಭಾರತ'ದಿಂದ ಬೇರ್ಪಡಿಸಿ, ಅದಕ್ಕೊಂದು ಸ್ವತಂತ್ರ ಅಸ್ತಿತ್ವವನ್ನು ಕೊಟ್ಟರು. ಶ್ರುತಿ, ಸ್ಮೃತಿ, ಉಪನಿಷದ್ ಮತ್ತು 'ಶ್ರೀಮದ್‌ಭಗವದ್ಗೀತೆ'ಯ ಅರ್ಥವನ್ನು ಸುಸ್ಪಷ್ಟಗೊಳಿಸಲು ಹಾಗೂ ಮೇಲುನೋಟಕ್ಕೆ ನೋಡುವುದರಿಂದಾಗಿ ಈ ಗ್ರಂಥಗಳಲ್ಲಿ ಪರಸ್ಪರ ವಿರೋಧ ಕಾಣುವವರ ವಿರೋಧಾಭಾಸವನ್ನು ಶಮನಗೊಳಿಸಲೋಸುಗವೇ ಅವರೇ ಖುದ್ದು ವೇದಾಂತ ಸೂತ್ರಗಳನ್ನು ರಚಿಸಿದರು. ಈ ಗ್ರಂಥದಲ್ಲಿ ವೇದಾಂತ ಸೂತ್ರಗಳನ್ನು ಸಂಪೂರ್ಣವಾಗಿ ತರ್ಕದ ಮೂಲಕ ತಿಳಿಯಪಡಿಸಲಾಗಿದೆ. ಉಪನಿಷದ್, ವೇದಾಂತ ಸೂತ್ರ ಮತ್ತು ಗೀತೆ–ಇವು ನಮ್ಮ ಧರ್ಮದ 'ಪ್ರಸ್ಥಾನತ್ರಯಿ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಧರ್ಮದ ಪ್ರತಿಯೊಬ್ಬ ಆಚಾರ್ಯರೂ ಇದರ ಸಹಾಯ ಪಡೆದೇ ತಮ್ಮ–ತಮ್ಮ ಧರ್ಮವನ್ನು ಪ್ರತಿಪಾದಿಸಿದ್ದಾರೆ. ಉಪನಿಷದ್ ಶ್ರುತಿ–ಪ್ರಸ್ಥಾನ, ಶ್ರೀಮದ್‌ಭಗವದ್ಗೀತೆ, ಸ್ಮೃತಿ–ಪ್ರಸ್ಥಾನ ಮತ್ತು ವೇದಾಂತ–ಸೂತ್ರ ನ್ಯಾಯ–ಪ್ರಸ್ಥಾನವೆಂದು ಕರೆಯಲ್ಪಡುತ್ತವೆ.

ಮಹಿರ್ಷಿ ಬಾದರಾಯಣರು ಈ ಧರ್ಮವನ್ನು ಸರ್ವವಿಧದಲ್ಲೂ ಪ್ರಾಣ–ಪ್ರತಿಷ್ಠೆ ಮಾಡಿ ತಮ್ಮ ಪುತ್ರರು ಮತ್ತು ಶಿಷ್ಯರಾದ ಶುಕದೇವ ಮುನಿಗಳಿಗೆ ಇದರ ಶಿಕ್ಷಣ ನೀಡಿದರು. ಶುಕದೇವರು ಸಹ ಶಂಕರಾಚಾರ್ಯರಂತೆ ಬಾಲ್ಯದಲ್ಲಿಯೇ ಸನ್ಯಾಸತ್ವವನ್ನು ಸ್ವೀಕರಿಸಿದ್ದರು. ಅವರು ಜೀವನ ಪರ್ಯಂತ ಈ ವೇದಾಂತ ಪ್ರಧಾನ ವೈದಿಕ ಧರ್ಮವನ್ನು ಪ್ರಚಾರ ಮಾಡಿದರು. ಅವರು ಬದರಿಕಾಶ್ರದಲ್ಲಿ ಅನೇಕ ಶಿಷ್ಯರಿಗೆ ಇದರ ಶಿಕ್ಷಣ ನೀಡಿ, ಮಹರ್ಷಿ ಬಾದರಾಯಣರ ವೇದಾಂತ–ಸೂತ್ರಗಳ ಒಂದು ವಿಸ್ತೃತ ಮತ್ತು ತಿದ್ದುಪಡಿಮಾಡಿದ ಪರಿಷ್ಕೃತ ಆವೃತ್ತಿಯನ್ನು ಸಿದ್ಧಪಡಿಸಿದರು, ಶುಕದೇವರಿಗೆ ಉಪವರ್ಷ ಮತ್ತು ಗೌಡಪಾದರೆಂಬ ಇಬ್ಬರು ಪ್ರಧಾನ ಶಿಷ್ಯರಿದ್ದರು. ಇದರಲ್ಲಿ ಗೌಡಪಾದರ ಬಗ್ಗೆ ಹೆಚ್ಚು ತಿಳಿಯುವ ಆವಶ್ಯಕತೆ ಇದೆ. ಕಾರಣ, ಇವರ ಪರಂಪರೆಯನ್ನೇ ಶಂಕರಾಚಾರ್ಯರು ಸಮರ್ಥಿಸಿದರು.

ಗೌಡಪಾದರು ದಕ್ಷಿಣ ಭಾರತದವರಾಗಿದ್ದರು. ಜೀವನದಲ್ಲಿ ಮಹಾನ್ ಕಾರ್ಯ ಮಾಡಬೇಕೆಂಬುದು ಅವರ ಬಾಲ್ಯದ ಇಚ್ಛೆಯಾಗಿತ್ತು. ಹೀಗಾಗಿ ಮಹರ್ಷಿ ಪತಂಜಲಿಯವರ ಬಳಿಗೆ ವಿದ್ಯಾಧ್ಯಯನಕ್ಕೆ ಹೊರಟರು. ಮಹರ್ಷಿ ಪತಂಜಲಿಗಳು ವ್ಯಾಕರಣದ ಪ್ರಕಾಂಡ ಪಂಡಿತರಾಗಿದ್ದಾರೆ. ಅವರು ಪಾಣಿನಿಯ ವ್ಯಾಕರಣದ

ಬಗ್ಗೆ ಒಂದು ಮಹಾಭಾಷ್ಯವನ್ನು ರಚಿಸಿದ್ದರು. ಇದರಿಂದಾಗಿ ಇವರ ಕೀರ್ತಿ ಎಷ್ಟು ಪಸರಿಸಿತೆಂದರೆ, ವಿದ್ಯಾರ್ಥಿಗಳು ದೂರ–ದೂರದಿಂದ ಅವರ ಬಳಿ ಅಧ್ಯಯನಕ್ಕಾಗಿ ಬರುತ್ತಿದ್ದರು. ಒಮ್ಮೆ ಅವರ ಈ ವಿದ್ಯಾರ್ಥಿಗಳ ಸಂಖ್ಯೆ ವೃದ್ಧಿಸಿ ಒಂದು ಸಾವಿರವಾಯಿತು. ಇಷ್ಟೊಂದು ಸಂಖ್ಯೆಯ ವಿದ್ಯಾರ್ಥಿಗಳಿಗೆ ಬೋಧಿಸುವುದು ಅಸಾಧ್ಯವಾಗಿತ್ತು. ಹೀಗಾಗಿ, ಅವರು, ಎಲ್ಲ ವಿದ್ಯಾರ್ಥಿಗಳಿಗೆ ಒಮ್ಮೆಲೇ ಬೋಧಿಸಲು ಸಾಧ್ಯವಾಗುವಂತಹ ಒಂದು ಯಂತ್ರವನ್ನು ಆವಿಷ್ಕರಿಸಿದರು. ಅವರು ತಮ್ಮ ಶಿಷ್ಯರಿಗೆ, ಯಾರೂ ಆ ಯಂತ್ರಕ್ಕೆ ಕೈ ಹಾಕಬೇಡಿ ಎಂದು ಎಚ್ಚರಿಸಿದ್ದರು: ಆದರೆ ಚಂಚಲ ಸ್ವಭಾವದ ಶಿಷ್ಯನೊಬ್ಬ ಕುತೂಹಲದಿಂದ, ಅವರಿಲ್ಲದ ವೇಳೆಯಲ್ಲಿ ಆ ಯಂತ್ರಕ್ಕೆ ಕೈ ಹಾಕಿದ, ಆ ಯಂತ್ರದ ಬಗ್ಗೆ ಅವನಿಗೆ ತಿಳಿವಳಿಕೆಯೇ ಇರಲಿಲ್ಲ. ಅಜ್ಞಾನದಿಂದಾಗಿ ಅವನ ಕೈ ಯಂತ್ರದ ಒಂದು ಸೂಕ್ಷ್ಮ ಸ್ಥಾನವನ್ನು ಸ್ಪರ್ಶಿಸಿತು, ಆಗ ಇದ್ದಕ್ಕಿದ್ದಂತೆ ದೊಡ್ಡ ಸ್ಫೋಟವುಂಟಾಗಿ ಕ್ಷಣ ಮಾತ್ರದಲ್ಲಿಯೇ ಆ ಸಾವಿರ ವಿದ್ಯಾರ್ಥಿಗಳು ಸುಟ್ಟು ಭಸ್ಮವಾದರು. ಇದನ್ನು ಕಂಡು ಪತಂಜಲಿಯವರಿಗೆ ತುಂಬ ದುಃಖವಾಯಿತು. ತಮ್ಮ ಒಂದು ಸಾವಿರ ವಿದ್ಯಾರ್ಥಿಗಳ ನಾಶ ಮತ್ತು ತಮ್ಮ ಪರಿಶ್ರಮ ವ್ಯರ್ಥವಾದುದ್ದನ್ನು ಕಂಡು ಶೋಕಿಸುತ್ತಾ ಅವರು ನಿಂತಿದ್ದರು. ಆಗಲೇ ಎದುರಿನಿಂದ ತಮ್ಮ ಶಿಷ್ಯ ಗೌಡಪಾದ ಬರುತ್ತಿರುವುದನ್ನು ನೋಡಿದರು. ಮಹರ್ಷಿಗಳ ಮುಖದಲ್ಲಿ ಹರ್ಷ ಮತ್ತು ದುಃಖದ ರೇಖೆಗಳು ಮೂಡಿದವು. ಗೌಡಪಾದ ತನ್ನ ಸಹಪಾಠಿಗಳ ಭಸ್ಮಕಂಡು ರೋದಿಸಿದ, ದುಃಖದೊಂದಿಗೆ ಅವನ ಮನಸ್ಸು ಕಂಪಿಸಿತು. ಕಾರಣ, ಅವನು ಗರುಗಳ ಅನುಮತಿಯಿಲ್ಲದೆ ತರಗತಿ ಬಿಟ್ಟು ಹೊರಹೋಗಿದ್ದ, ಅಕಸ್ಮಾತ್ ಅವನು ತನ್ನ ಸಹಪಾಠಿಗಳಿಂದಾಗಿಯೇ ಸಿಕ್ಕಿಬಿದ್ದಿದ್ದ! ತಾನು ಶಿಸ್ತು ಭಂಗಗೊಳಿಸಿದೆನೆಂಬ ಕಾರಣದಿಂದ ಅವನು ಮನಸ್ಸಿನಲ್ಲಿ ನೊಂದುಕೊಳ್ಳುತ್ತಿದ್ದ. ಅವನಿಗೆ ಮಹರ್ಷಿಗಳನ್ನು ತಲೆಯೆತ್ತಿ ನೋಡುವ ಧೈರ್ಯವಾಗುತ್ತಿರಲಿಲ್ಲ. ಗೌಡಪಾದ ತಲೆತಗ್ಗಿಸಿ ಮೌನಿಯಾಗಿ ನಿಂತಿದ್ದ. ಮಹರ್ಷಿ ಪತಂಜಲಿಗಳು ಧೀರ–ಗಂಭೀರ ಸ್ವರದಲ್ಲಿ ಹೇಳಿದರು: "ಗೌಡಪಾದ!"

ಒಮ್ಮೆಲೇ ಗೌಡಪಾದ ಕೆಡಕಿನ ಭಯದಿಂದ ಆಪಾದಮಸ್ತಕ ಕಂಪಿಸಿದ.

"ಗೌಡಪಾದ ! ನೀನು ಶಿಸ್ತನ್ನು ಭಂಗಗೊಳಿಸಿ ಪಾಪ ಕಾರ್ಯವೆಸಗಿದ್ದೀಯ, ಅದಕ್ಕೆ ನೀನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲೇಬೇಕು. ಕೆಡಕುತನದ ಹಿಂದೆ ಒಮ್ಮೊಮ್ಮೆ ಒಳಿತೂ ಮರೆಯಾಗಿರುತ್ತದೆ. ಹೋಗು ಓಬ್ಬ ಯೋಗ್ಯ ಶಿಷ್ಯನನ್ನು ಹುಡುಕಿ ಅವನಿಗೆ 'ಮಹಾಭಾಷ್ಯ'ವನ್ನು ಬೋಧಿಸು. ನೀನು ಬೋಧಿಸದವರೆಗೂ 'ಮಹಾಭಾಷ್ಯ' ನಿನಗೆ ಸ್ಮರಣೆಯಲ್ಲಿರುವುದು. ನಾನಂತೂ ಇನ್ನು ಯಾರಿಗೂ 'ಮಹಾಭಾಷ್ಯ'ವನ್ನು ಬೋಧಿಸುವುದಿಲ್ಲ; ಆಯಿತು, ಹೋಗು"

ಗೌಡಪಾದ ಗುರುಗಳಿಗೆ ನಮಸ್ಕರಿಸಿ ಅಶಾಂತ ಮನಸ್ಸಿನಿಂದ ಅಲ್ಲಿಂದ



ಹೊರಟುಹೋದ. ಅವನ ಮನಸ್ಸು ವ್ಯಗ್ರಗೊಂಡಿತ್ತು. ಅವನ ಮೇಲೆ 'ಮಹಾಭಾಷ್ಯ'ದ ಶಿಕ್ಷಣದ ಹೊರೆಯಿತ್ತು. ಅವನು ಬಯಸಿದ್ದರೆ ಯಾರಿಗೂ ಬೋಧಿಸುತ್ತಿರಲಿಲ್ಲ. ಈ ರೀತಿ ಅದು ಅವನಿಗೆ ಜೀವನವಿಡಿ ಸ್ಮರಣೆಯಲ್ಲಿರುತ್ತಿತ್ತು. ಆದರೆ ನಾವಿಂದು ಅವನನ್ನು ಯಾವ ಹೆಸರಿನಿಂದ ಕರೆಯುತ್ತಿದ್ದೆವು? 'ಮಹಾಭಾಷ್ಯ'ವಂತೂ ರಾಷ್ಟ್ರದ ಸ್ವತ್ತಾಗಿತ್ತು. ಅದನ್ನು ಭವಿಷ್ಯದ ಪೀಳಿಗೆಗೆ ಸುರಕ್ಷಿತವಾಗಿಟ್ಟು ಅವರಿಗೆ ತಲುಪಿಸುವ ವ್ಯವಸ್ಥೆ ಮಾಡುವುದು ಅವನ ಕರ್ತವ್ಯವಾಗಿತ್ತು. ಅವನು ತನ್ನ ಜ್ಞಾನಕ್ಕಾಗಿ ಇಡೀ ರಾಷ್ಟ್ರವನ್ನು ಈ ಅಮೂಲ್ಯ ನಿಧಿಯಿಂದ ವಂಚಿತವಾಗಿಡುವಷ್ಟು ಸ್ವಾರ್ಥಿಯಾಗಿರಲಿಲ್ಲ. ಪರಿಣಾಮಸ್ವರೂಪವಾಗಿ, ಅಲ್ಲಿ–ಇಲ್ಲಿ ಅಂತ ಇಡೀ ದೇಶದಲ್ಲಿ ಯೋಗ್ಯ ಶಿಷ್ಯನ ಶೋಧನೆಯಲ್ಲಿ ಸಂಚರಿಸುತ್ತಿದ್ದ. ಆದರೆ 'ಮಹಾಭಾಷ್ಯ'ವನ್ನು ಒಮ್ಮೆ ಓದಿ ಅರ್ಥಮಾಡಿಕೊಂಡು, ಅನಂತರ ಅದನ್ನು ಮತ್ತೊಬ್ಬರಿಗೂ ಬೋಧಿಸುವಂತಹ ಯೋಗ್ಯ ವ್ಯಕ್ತಿ ಸಿಗಲಿಲ್ಲ. ತಾನು ಯಾರೆದುರು ತನ್ನ ಹೃದಯವನ್ನು ಬಿಚ್ಚಿಡುವುದೆಂದು ಅವನಿಗೆ ತಿಳಿಯುತ್ತಿರಲಿಲ್ಲ. ಹೀಗೆ ಸಂಚರಿಸುತ್ತಿದ್ದ ಅವನಿಗೆ ಕೊನೆಯಲ್ಲಿ ಉಜ್ಜಯಿನಿಯ ಸಮೀಪ ವ್ಯಕ್ತಿಯೊಬ್ಬ ಭೇಟಿಯಾದ, ಅವನನ್ನು ನೋಡಿದೊಡನೆ ಗೌಡಪಾದರ ಮನಸ್ಸು ಅವನೆಡೆಗೆ ಒಂದೇ ಸಮನೆ ಸೆಳೆಯಿತು. ಅವರಿಗೆ, ತಾವು ಇಷ್ಟು ದಿನಗಳಿಂದ ಅರಸುತ್ತಿದ್ದ ವ್ಯಕ್ತಿ ಇವನೇ ಎಂದು ವಿಶ್ವಾಸ ಮೂಡಿತು. ಅವನ ಹೆಸರು ಚಂದ್ರಶರ್ಮ ಆಗಿದ್ದು, ಅವನು ಪೂರ್ವ ಭಾರತದವನಾಗಿದ್ದ. ಅವನ ಮನಸ್ಸಿನಲ್ಲಿ ವ್ಯಾಕರಣ ಓದುವ ಬಗ್ಗೆ ತೀವ್ರ ಇಚ್ಛೆಯಿತ್ತು. ಅವನು ಮಹರ್ಷಿ ಪತಂಜಲಿಯ ಹೆಸರು ಕೇಳಿ ಅವರ ಬಳಿ ವ್ಯಾಕರಣ ಅಭ್ಯಾಸ ಮಾಡಲು ಹೋಗುತ್ತಿದ್ದ. ಗೌಡಪಾದರು ಅವನಿಗೆ ವ್ಯಾಕರಣವನ್ನು ಬೋಧಿಸಿದರು. ತಮ್ಮ ನಿಧಿಯನ್ನು ಅವನಿಗೊಪ್ಪಿಸಿ ಅವರು ಒಂದು ಅಪೂರ್ವಶಾಂತಿಯನ್ನು ಅನುಭವಿಸಿದರು. ಅನಂತರ ಅವರು ಹಿಮಾಲಯದಲ್ಲಿ ಶ್ರೀ ಬದರಿಕಾಶ್ರಮಕ್ಕೆ ಹೊರಟುಹೋದರು. ಅಲ್ಲಿ ಶುಕದೇವ ಮುನಿಗಳಿಂದ ವೇದಾಂತ ಧರ್ಮದ ಶಿಕ್ಷಣ ಪಡೆದು 'ಗೌಡಪಾದಚಾರ್ಯ'ರಾದರು. ಅವರು ಅನೇಕ ಗ್ರಂಥಗಳಿಗೆ ಭಾಷ್ಯ ಬರೆದರು ಹಾಗೂ ಸಾಂಖ್ಯ ಮತ್ತು ಯೋಗವನ್ನು ವೇದಾಂತದೊಂದಿಗೆ ಸಮನ್ವಯಗೊಳಿಸುವ ದೃಷ್ಟಿಯಿಂದ ಅನೇಕ ಗ್ರಂಥಗಳನ್ನು ರಚಿಸಿದರು.

ಶಂಕರಾಚಾರ್ಯರ ಗುರುಗಳಾದ ಗೋವಿಂದಪಾದರು ಈ ಗೌಡಪಾದಾಚಾರ್ಯರ ಶಿಷ್ಯರಾಗಿದ್ದರು. ಪುರಾತನ ಗ್ರಂಥಗಳಿಂದ, ಗೋವಿಂದಪಾದರು ಗೌಡಪಾದಾಚಾರ್ಯರು ಪತಂಜಲಿಯ 'ಮಹಾಭಾಷ್ಯ'ವನ್ನು ಬೋಧಿಸಿದ್ದ ಅದೇ ಚಂದ್ರಶರ್ಮರಾಗಿದ್ದರು ಎಂದು ತಿಳಿದುಬರುತ್ತದೆ. ಚಂದ್ರಶರ್ಮರವರು 'ಮಹಾಭಾಷ್ಯ'ವನ್ನು ಲಿಪಿಬದ್ಧಗೊಳಿಸಿದರು. ಆದರೆ ಶುಷ್ಕ ವ್ಯಾಕರಣದಿಂದ ಅವರ ಆತ್ಮಕ್ಕೆ ಶಾಂತಿ ಸಿಗಲಿಲ್ಲ. ಫಲಸ್ವರೂಪವಾಗಿ ಅವರೂ

ಬದರಿಕಾಶ್ರಮಕ್ಕೆ ಹೊರಟು ಹೋದರು. ಅಲ್ಲಿ ಗೋವಿಂದಪಾದರು ನರ್ಮದೆಯ ತೀರದ ಅಮರಕಾಂತದಲ್ಲಿ ತಮ್ಮ ಆಶ್ರಮವನ್ನು ಸ್ಥಾಪಿಸಿದ್ದರು. ಅವರು ಕೆಲವು ದಿನ ಅಮರಕಾಂತದಲ್ಲಿದ್ದು ತಮ್ಮ ಶಿಷ್ಯರಿಗೆ ಧರ್ಮ ಮತ್ತು ಶಾಸ್ತ್ರಗಳ ಶಿಕ್ಷಣವನ್ನು ನೀಡುತ್ತಿದ್ದರು.

ಶಂಕರರು ಈ ಮಹಾನ್ ಪರಂಪರೆಯನ್ನು ಪ್ರವೇಶಿಸಿದರು. ಅವರು ಭಗವದ್ ಗೋವಿಂದಪಾದಾಚಾರ್ಯರಿಂದ ವೇದಾಂತ ಶಿಕ್ಷಣವನ್ನು ಪಡೆದರು. ಶಂಕರರು ವೇದಾಂತ ಶಿಕ್ಷಣವನ್ನು ಪಡೆದು ತಮ್ಮ ಶಿಷ್ಯರಿಗೆ ಮಾತ್ರ ಬೋಧಿಸಿ ಸಂತೋಷ ಪಡಲಿಲ್ಲ, ಪ್ರತಿಯಾಗಿ ತಮ್ಮಿಡೀ ಜೀವನವನ್ನು ಆಚರಣೆಯಲ್ಲಿ ಪ್ರಕಟಗೊಳಿಸುತ್ತಾ ಇಡೀ ರಾಷ್ಟ್ರವನ್ನು ಈ ಮಂತ್ರದಿಂದ ಸಂಶುದ್ಧಗೊಳಿಸಿದರು. ಅವರು ಹರಡಿದ ಜ್ಞಾನದ ಬೆಳಕಿನಿಂದ ದಿಗಂತಗಳು ಆಲೋಕಗೊಂಡವು. ಇದನ್ನು ಹೇಗೆ ಕೈಗೊಂಡರು? ಇದಕ್ಕುತ್ತರವನ್ನು ಅವರ ಭಾವೀ ಜೀವನ ಕೊಡುತ್ತದೆ.

ಭಗವಾನ್ ಗೋವಿಂದಪಾದರು ಶಂಕರರಿಗೆ ವಿಧಿವತ್ತಾಗಿ ಸನ್ಯಾಸ–ಧರ್ಮದ ದೀಕ್ಷೆಯನ್ನು ನೀಡಿದರು. ಶಂಕರರು ಕರ್ಮ–ಸನ್ಯಾಸವನ್ನು ಸ್ವೀಕರಿಸಿ ಅವರ ಆಶ್ರಮದಲ್ಲಿ ವಾಸಿಸಿದರು. ಶಂಕರರಂತಹ ತೀಕ್ಷ್ಣ ಬುದ್ಧಿಯ ಶಿಷ್ಯನಿಗೆ ಬೋಧಿಸುವುದು ಅತ್ಯಂತ ಕಠಿಣ ಕಾರ್ಯವಾಗಿತ್ತು. ಆದರೆ ಗೋವಿಂದಪಾದರು ಸಂಪೂರ್ಣ ಶಾಸ್ತ್ರವನ್ನು ತುಂಬ ಯೋಗ್ಯ ರೀತಿಯಲ್ಲಿ ಬೋಧಿಸಿದರು. ಅವರಿಗೆ ಶಂಕರರು ಧರ್ಮವನ್ನು ರಕ್ಷಿಸುತ್ತಾರೆಂಬ ವಿಶ್ವಾಸವಿತ್ತು. ಹೀಗಾಗಿ ಅದರಲ್ಲಿ ನ್ಯೂನತೆಗಳನ್ನು ಬಿಡುವುದೆಂದರೆ ಭಾವೀ ರಾಷ್ಟ್ರದ ಜೀವನದಲ್ಲಿ ನ್ಯೂನತೆ ಬಿಡುವುದೇ ಆಗುತ್ತಿತ್ತು. ಹೀಗಾಗಿ ತುಂಬ ಎಚ್ಚರಿಕೆಯಿಂದ ವೇದಾಂತ ಧರ್ಮದ ಅಂಗಾಂಗಳ ಶಿಕ್ಷಣಗಳನ್ನು ನೀಡಿದರು. ತಮ್ಮ ಮಾತುಕತೆ ಮತ್ತು ತಮ್ಮ ನಡತೆಯಿಂದ ಶಂಕರರು ಧರ್ಮ ಪ್ರಚಾರದ ಕಾರ್ಯದಲ್ಲಿ ಯೋಗ್ಯರಾಗುವಂತೆ ಸಂಸ್ಕಾರಗೊಳಿಸಿದರು. ಅವರು ಶಂಕರರಿಗೆ ಬೋಧಿಸುವಾಗ ಸೂತ್ರಗಳ ಅರ್ಥವನ್ನು ಎಷ್ಟು ತನ್ಮಯರಾಗಿ ಹೇಳುತ್ತಿದ್ದರೆಂದರೆ, ಅವರು ತಮ್ಮ ಆತ್ಮವನ್ನು ಶಂಕರರೆದರು ಹೊರತೆಗೆದಿಡಲು ಬಯಸುತ್ತಿದ್ದರೆಂದು ತೋರುತ್ತಿತ್ತು. ಅವರು ಪಕ್ಷಪಾತದ ಆರೋಪವನ್ನು ಸಹಿಸಿಕೊಂಡಿದಾಗ್ಯೂ, ಶಂಕರರಿಗೆ ವಿಶೇಷವಾಗಿ ಶಿಕ್ಷಣವನ್ನು ನೀಡಿದರು. ಕಾರಣ, ಶಂಕರರು ಅವರ ಮತ್ತು ರಾಷ್ಟ್ರದ ಭಾವೀ ಆಶಾಕೇಂದ್ರವಾಗಿದ್ದರು.

* * * *



## ೬. ಶಿಕ್ಷಣ: ಮಾಯೆ ಮತ್ತು ಜಗತ್ತು

ಸನ್ಯಾಸಿಯ ಧರ್ಮವೇನು? ಕಡೆಯ ಪಕ್ಷ ಅವರು ಅದನ್ನೇನು ಅರ್ಥಮಾಡಿಕೊಂಡರು? ಇದು ಶಂಕರರ ಇಡೀ ಜೀವನದಿಂದಲೇ ತಿಳಿದು ಬರುತ್ತದೆ. ಆದರೆ ಅಮರಕಾಂತದ ಬದುಕಿನ ಒಂದು ಘಟನೆಯು ಆ ಬಗ್ಗೆ ಹೆಚ್ಚು ಬೆಳಕು ಚೆಲ್ಲುತ್ತದೆ. ಆಗ ಭಗವದ್ ಗೋವಿಂದಪಾದರು ಬದರಿಕಾಶ್ರಮಕ್ಕೆ ಹೋಗಿದ್ದರು. ಆಗ ಶಂಕರಾಚಾರ್ಯರೇ ಆಶ್ರಮದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಮಳೆಗಾಲವಾಗಿತ್ತು. ಆ ವರ್ಷ ಮೇಘರಾಜ ಅಹಂಕಾರಿ ಮತ್ತು ವ್ಯಾಕುಲ ಮನುಷ್ಯನಂತೆ ಜೀವನದ ಯಥಾರ್ಥತೆಗಳನ್ನು ತನ್ನೊಳಗೆ ಹಿಡಿದು ನಿಲ್ಲಿಸದಾದ. ಅವನ ಕ್ರೋಧಾವೇಶ ತಾಳಿದ. ಹಿಂದು–ಮುಂದು ನೋಡದೆ ನಿರಂತರವಾಗಿ ಮಳೆಗೆರೆದ. ಗುಡುಗು–ಮಿಂಚಿನ ಆರ್ಭಟ ನಡೆಯಿತು; ಜನ ಘರ್ಜನೆ ಕೇಳಿ ಕಿವಿ ಮುಚ್ಚಿಕೊಳ್ಳುತ್ತಿದ್ದರು. ಮಿಂಚಿನ ತೀಕ್ಷ್ಣ ರೇಖೆ ಕ್ಷಣಕಾಲ ಕಾಣಿಸುತ್ತಿತ್ತು. ಜನರ ಕಣ್ಣುಗಳು ಕೋರೈಸುತ್ತಿದ್ದವು, ವರ್ಷಧಾರೆ ಮತ್ತೆ ಪ್ರಾರಂಭವಾಗುತ್ತಿತ್ತು. ಮೆಲ್ಲ–ಮೆಲ್ಲನೆ ನೀಡಿದ ಜ್ಞಾನದಂತೆ, ಮೆಲ್ಲನೆ ಬೀಳುವ ಮಳೆಯಿಂದ ಪೃಥ್ವಿಯ ನೀರಡಿಕೆ ಇಂಗುತ್ತದೆ, ಅದರ ಉತ್ಪಾದನಾ ಶಕ್ತಿ ವೃದ್ಧಿಸುತ್ತದೆ. ಕೃಷಿ ವೃದ್ಧಿಸುತ್ತದೆ. ಜನರಿಗೆ ಸಂತೋಷವಾಗುತ್ತದೆ. ಆದರೆ ಗ್ರಹಿಸುವವರ ಧಾರಣ ಶಕ್ತಿಯನ್ನು ಅಂದಾಜು ಮಾಡದೆ ಕೊಟ್ಟದಾನ ದುಃಖಕ್ಕೆ ಕಾರಣವಾಗುವಂತೆ, ಅಕ್ಕ–ಪಕ್ಕದ ಭೂಮಿ ಅಗಾಧ ಜಲರಾಶಿಯನ್ನು ಅರಗಿಸಿಕೊಳ್ಳದಾಯಿತು. ಅವಳು ಅದನ್ನೆತ್ತಿಕೊಂಡು ನರ್ಮದೆಗೆ ಎಸೆದಳು. ಅವಳೂ ನೀಚ ಮನುಷ್ಯನಂತೆ ಕುದಿದು ಓಟಕಿತ್ತಳು. ತೀರದಲ್ಲಿ ವಾಸಿಸುವವರನ್ನು ಸರ್ವನಾಶ ಮಾಡಲೋಸುಗವೇ ದೌಡಾಯಿಸಿ ಬರುತ್ತಿದ್ದಾಳೆಂದು ತೋರುತ್ತಿತ್ತು. ನರ್ಮದೆಯ ಪ್ರವಾಹ ಕ್ಷಣ–ಕ್ಷಣವೂ ವೃದ್ಧಿಸುತ್ತಿತ್ತು. ಮೇಘರಾಜ ಪ್ರಳಯದ ದುರ್ದಿನಗಳಂತೆ ನಿಲ್ಲುವ ಬಗ್ಗೆ ತುಟಿ ಎರಡುಮಾಡುತ್ತಿರಲಿಲ್ಲ. ಶಾಂತಿಕಾಲದಲ್ಲಿ ಬದುಕನ್ನು ಕೊಡುವ ನರ್ಮದೆಯೂ ರುದ್ರದೇವರಂತೆ ತಾಂಡವ ನೃತ್ಯಗೈದಳು. ನರ್ಮದೆಯಲ್ಲಿ ಪ್ರವಾಹ ಬಂದಿತು. ನೆರೆಹೊರೆಯ ಹಳ್ಳಿಗಳು ಕೊಚ್ಚಿ ಹೋದವು. ಸಾವಿರಾರು ಜನ ಮನೆ–ಮಠ ಕಳೆದುಕೊಂಡರು. ಅದೆಷ್ಟೋ ವರ್ಷಗಳಿಂದ ಕೊಟ್ಟಿದ್ದ ಐಶ್ವರ್ಯವನ್ನು ನರ್ಮದೆ ಒಂದೇ ಆವೇಶದಲ್ಲಿ ಕೊಳ್ಳೆಹೊಡೆದಳು. ನರ್ಮದೆಯಲ್ಲಿ ಸಂಪತ್ತು ಹರಿದುಹೋಗುತ್ತಿತ್ತು. ಅದರೊಂದಿಗೆ

ಸಾವಿನ ಈ ಭೀಕರತೆಯಲ್ಲಿಯೂ ಗಂಡು–ಹೆಣ್ಣುಗಳ ಹಣದಾಸೆ ಮಾತ್ರ ಜೀವಂತವಾಗಿದ್ದು, ಇನ್ನೂ ಅದನ್ನು ಹಿಂಬಾಲಿಸಿ ಓಡುತ್ತಿರುವಂತೆ ಕೊಚ್ಚಿ ಹೋಗುತ್ತಿದ್ದರು. ಅನೇಕ ಗೋವುಗಳು ನೀರಿನ ಸೆಳೆತಕ್ಕೆ ಸಿಕ್ಕು ತಮ್ಮ ಪ್ರಾಣವನ್ನು ರಕ್ಷಿಸಿಕೊಳ್ಳುವ ವ್ಯರ್ಥ ಪ್ರಯತ್ನಮಾಡುತ್ತಿದ್ದವು. ಆದರೆ ಕಡೆಗೆ ಅಲೆಗಳ ಹೊಡೆತಕ್ಕೆ ಆಘಾತಗೊಂಡು ಇಹಲೋಕ ತ್ಯಜಿಸುತ್ತಿದ್ದವು. ಅವುಗಳ ಗಗನ ಭೇದಿಸುವ ಭೀಷಣ 'ಅಂಬಾ' ಕೂಗನ್ನು ನರ್ಮದೆ ತನ್ನ ಭೀಷಣ ಅಲೆಗಳಲ್ಲಿ ಒತ್ತಿ ಹಿಡಿಯಲು ಪ್ರಯತ್ನಿಸುತ್ತಿದ್ದಳು. ಆದರೆ ಕಿವಿಯಿದ್ದವರು ಕೇಳುತ್ತಿದ್ದರು. ಆಕಾಶವೂ ಖಂಡಿತ ಬಿರಿಯುತ್ತಿತ್ತು. ಆದರೆ ದುಷ್ಟ ನರರಂತೆ, ಅದು ನಯ–ವಿನಯ, ಆಕ್ರೋಶ ಮತ್ತು ಆರ್ತನಾದ ಕೇಳಿ ಮತ್ತೂ ಹೆಚ್ಚು ಕ್ರೋಧವನ್ನು ಹೊರಗೆಡವುತ್ತ ಸಾವಿನ ಮಳೆಗರೆಯುತ್ತಿತ್ತು. ಹಾಂ, ಈ ಆಕ್ರೋಶ ಕೇಳಿ ಶಂಕರಾಚಾರ್ಯರ ಹೃದಯ ಚೂರಾಗುತ್ತಿತ್ತು. ಅವರಿಗೆ ತಮ್ಮ ಆಶ್ರಮದಲ್ಲಿ ಕೂತಿರುವುದು ಕಷ್ಟವಾಯಿತು.

ಸಮಸ್ತ ಜಗತ್ತನ್ನು ಮಾಯೆ ಎಂದು ತಿಳಿಯುವ ಶಂಕರರು ಅದೆಷ್ಟೋ ದಿನಗಳನ್ನು ಪ್ರವಾಹ ಪೀಡಿತರ ಸೇವೆಯಲ್ಲಿ ಕಳೆದರು. ನಮಗಿದರಿಂದ ಏನು ಪ್ರಯೋಜನ? ನಾವು ಪರಮ ಸತ್ಯವನ್ನರಸುವಲ್ಲಿ ಮತ್ತು ಬ್ರಹ್ಮಜ್ಞಾನವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳುವಲ್ಲಿ ನಮ್ಮ ಸಮಯವನ್ನು ಕಳೆಯಬೇಕೆಂದು ಆಶ್ರಮವಾಸಿಗಳು ಹೇಳುತ್ತಿದ್ದರು. ಆದರೆ ಪರಮ ಸತ್ಯವೆಂದರೇನೆಂದು ಶಂಕರರಿಗೆ ತಿಳಿದಿತ್ತು. ಆಗಸದಲ್ಲಿ ಬೇಕಾದರೆ ಹೂವು ಅರಳಲಿ, ಆದರೆ ದೇವರ ದರ್ಶನ ಅಸಾಧ್ಯ, ಅದಕ್ಕಾಗಿ ಕೆಳಗೆ ಪೃಥ್ವಿಯಲ್ಲಿಯೇ ನಮ್ಮ ಅಕ್ಕ–ಪಕ್ಕ, ನಮ್ಮ ದೇಶವಾಸಿಗಳ ಹೃದಯಗಳನ್ನು ತಡಕಾಡ ಬೇಕಾಗುವುದು. ಯಾರಿಗೆ ನೊಂದವರ ಕರೆಯಲ್ಲಿ ದೇವರ ನುಡಿ ಕೇಳಿಸುವುದಿಲ್ಲವೋ, ಅವರ ಕಿವಿಗಳು ದೇವರ ಶಾಂತ ಸ್ವರವನ್ನು ಕೇಳಲಾರೆವು. ಯಾರು ದುರ್ಬಲರು ಮತ್ತು ನೊಂದವರ ಆತ್ಮವನ್ನು ಅರಿಯಲಾರರೋ ಅವರು ದೇವರ ದರ್ಶನ ಮಾಡಲು ಹೇಗೆ ಸಾಧ್ಯ?

**ನಾನು ನಿನ್ನನ್ನರಸುತ್ತಿದ್ದೆ ಆಗಸ ಮತ್ತು ವನದಲ್ಲಿ;**
**ನೀನರಸುತ್ತಿದ್ದೆ ನನ್ನನ್ನು ದೀನನೊಬ್ಬನ ದೇಶದಲ್ಲಿ.**

ಈ ಸಿದ್ಧಾಂತವನ್ನು ಶಂಕರಾಚಾರ್ಯರು ಜೀವನದಲ್ಲಿ ನಿರ್ವಹಿಸಿದರು ಅವರು ಆಶ್ರಮವಾಸಿಗಳೊಂದಿಗೆ ನೊಂದವರ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮಹಾಪುರುಷರು ಕಾರ್ಯವೊಂದನ್ನು ಕೈಗೆತ್ತಿಕೊಂಡಾಗ ಪ್ರಕೃತಿಯ ಪ್ರಬಲ ಶಕ್ತಿಗಳೂ ಅವರೆದುರು ತಲೆಬಾಗುತ್ತವೆ. ಅವರು ಈ 'ನರ್ಮದಾಷ್ಟಕ'ವನ್ನು ರಚಿಸಿ ನರ್ಮದೆಯನ್ನು ಸ್ತುತಿಸಿದರು. ಇದರಿಂದ ಅವಳ



ಕ್ರೋಧಾವೇಶ ಶಾಂತಗೊಂಡಿತೆಂದು ಹೇಳುತ್ತಾರೆ:

ಸಬಿಂದುಸಿಂಧುರಸ್ಖಲತ್ತರಂಗಭಂಗರಂಜಿತಂ
ದ್ವಿಷತ್ಸು ಪಾಪಜಾತಕಾರಿವಾರಿಸಂಯುತಂ
ಕೃತಾಂತದೂತಕಾಲಭೂತಭೀತಿಹಾರಿವರ್ಮದೇ
ತ್ವದೀಯಪಾದಪಂಕಜಂ ನಮಾವಿ ದೇಮಿ ನರ್ಮದೇ ॥ 1 ॥

ತ್ವದಂಬುಲೀನದೀನಮೀನದಿವ್ಯಸಂಪ್ರದಾಯಕಂ
ಕಲೌ ಮಲೌಷಭಾರಹರಿ ಸರ್ಮಾ ತೀರ್ಥ ನಾಯಕಮ್ ।
ಸುಮುತ್ಸ್ಯಕಚ್ಛನಕ್ರಚಕ್ರವಾಕಚಕ್ರಶರ್ಮದೇ
ತ್ವದೀಯಪಾದಪಂಕಜಂ ನಮಾಮಿ ದೇವಿ ನರ್ಮದೇ ॥ 2 ॥

ಮಹಾಗಭೀರ ನೀರಪೂರಪಾಪಭೂತಭೂತಲಂ
ಧ್ವನತ್ಸಮಸ್ತಪಾತಕಾರಿದಾರಿತಾಪದಾಜಲಮ್
ಜಗಲ್ಲಯೇ ಮಹಾಭಯೇ ಮೃಕಂಡುಸೂನುಹರ್ಮ್ಯದೇ
ತ್ವದೀಯಪಾದಪಂಕಜಂ ನಮಾಮಿ ದೇವಿ ನರ್ಮದೇ ॥ 3 ॥

ಗತಂ ತದೈವಮೇ ಭಯಂ ತ್ವದಂಬು ದೀಕ್ಷಿತಂ ಯದಾ
ಮುಕಂಡುಸೂನುಶೌನಕಾಸುರಾರಿಸೇವ ಸರ್ವದಾ ।
ಪುನರ್ಭವಾಬ್ಧಿಜನ್ಮಜಂ ಭವಾಬ್ಧಿದುಃಖವರ್ಮದೇ
ತ್ವದೀಯಪಾದಪಂಕಜಂ ನಮಾವಿ ದೇವಿ ನರ್ಮದೇ ॥ 4 ॥

ಅಲಕ್ಷ ಲಕ್ಷಕಿನ್ನರಾಮರಾಸುರಾದಿಪೂಜಿತಂ
ಸುಲಕ್ಷನೀರತೀರಧೀರಪಕ್ಷಿಲಕ್ಷಕೂಜಿತಂ ।
ವಸಿಷ್ಠಶಿಷ್ಟ ಪಿಪ್ಲಾದಿಕರ್ದಮಾದಿಶರ್ಮದೇ
ತ್ವದೀಯಪಾದಪಂಕಜಂ ನಮಾವಿ ದೇವಿ ನರ್ಮದೇ ॥ 5 ॥

ಸನತ್ಕುಮಾರ ನಾಸಿಕೇತ ಕಶ್ಯಪಾದಿಷಟ್ಪದೈರ್
ಧೃತ ಸ್ವಕೀಯ ಮಾನಸೇಷು ನಾರದಾದಿ ಷಟ್ಪದೈಃ

ರವೀಂದ್ದುರನಿಂತದೇವದೇವರಾಜಕರ್ಮಶರ್ಮದೇ
ತ್ವದೀಯಪಾದಪಂಕಜಂ ನಮಾವಿ ದೇವಿ ನರ್ಮದೇ ॥ 6 ॥

ಅಲಕ್ಷಲಕ್ಷಲಕ್ಷಲಪಾಪಲಕ್ಷಸಾರಸಾಯುಧಂ
ತತಸ್ತು ಜೀವಜಂತು ತಂತು ಭುಕ್ತಿಮುಕ್ತಿದಾಯಕಮ್
ವಿರಿಂಚಿವಿಷ್ಣುಶಂಕರಸ್ವಕೀಯಧಾಮವರ್ಮದೇ
ತ್ವದೀಯಪಾದಪಂಕಜಂ ನಮಾವಿ ದೇವಿ ನರ್ಮದೇ ॥ 7 ॥

ಅಹೋ ಧೃತಂ ಸ್ವನಂ ಶ್ರುತಂ ಮಹೇಶಿಕೇಶಜಾತಟೇ
ಕಿರಾತಸೂತ ಬಾಡಬೇಷು ಪಂಡಿತೇ ಶಠೇ ನಟೇ।
ದುರಂತಪಾಪತಾಪಹಾರಿ ಸರ್ವಜಂತುಶರ್ಮದೇ
ತ್ವದೀಯಪಾದಪಂಕಜಂ ನಮಾವಿ ದೇವಿ ನರ್ಮದೇ ॥ 8 ॥

ಇದಂ ತು ನರ್ಮದಾಷ್ಟಕಂ ತ್ರಿಕಾಲಮೇವ ಯೇ ಸದಾ
ಪಠಂತಿ ತೇ ನಿರಂತರಂ ನ ಯಾಂತಿ ದುರ್ಗತಿಂ ಕದಾ
ಸುಲಭ್ಯದೇಹದುರ್ಲಭಂ ಮಹೇಶಧಾಮ ಗೌರವಂ
ಪುನರ್ಭವಾ ನರಾ ನ ವೈ ವಿಲೋಕಯಂತಿ ರೌರವಮ್ ॥ 9 ॥

ಗೋವಿಂದಗುರುಗಳು ಮರಳಿ ಬಂದಾಗ ಶಂಕರರ ಈ ಸೌಹಾರ್ದ ಸುದ್ದಿ ಕೇಳಿ ತುಂಬಾ ಸಂತೋಷಗೊಂಡರು. ಶಂಕರರು 'ಸ್ವರ್ವಾತ್ಮೈಕ್ಯ'ದ ಸ್ಥಿತಿಯನ್ನು ಪಡೆದಿದ್ದಾರೆ. ಹೀಗಾಗಿ ಈಗ ಅವರಿಗೆ ಧರ್ಮಕಾರ್ಯರ್ಥ ದೇಶ ಸಂಚಾರಕ್ಕೆ ಅನುಮತಿ ಕೊಡಬೇಕು ಎಂದು ಅವರಿಗೆ ವಿಶ್ವಾಸ ಮೂಡಿತು. ಆದರೆ ಶಂಕರರು ಈ ಮಹಾನ್ ಕಾರ್ಯಕ್ಕೆ ಹೊರಡುವುದಕ್ಕೂ ಮೊದಲು ಗೋವಿಂದಪಾದರು ಅವರಿಗೆ ತಮ್ಮ ಗುರುಗಳಾದ ಗೌಡಪಾದರ ದರ್ಶನ ಮಾಡಿಸುವುದು ಯೋಗ್ಯವೆಂದು ತಿಳಿದರು. ತಮ್ಮ ಮನಸ್ಸಿನ ಈ ವಿಚಾರವನ್ನು ಅವರು ಮರುಕ್ಷಣವೇ ಶಂಕರರಿಗೆ ಹೇಳಿದರು. ಇದನ್ನು ಕೇಳಿದೊಡನೆಯೇ ಶಂಕರರು ಸಂತೋಷದಿಂದ ಕುಣಿದರು. ತಮ್ಮ ಅದೃಷ್ಟವೇ ಎಂದು ತಿಳಿದರು. ಅವರ ಕಾಲಗಳು ಭೂಮಿಯ ಮೇಲಿರಲಿಲ್ಲ. ಇಂದು ಅವರು ತಮ್ಮ ಜನ್ಮ–ಜನ್ಮಾಂತರದ ಪುಣ್ಯ ಉದಯಿಸಿ ಬಂದಂತೆ ತಮ್ಮನ್ನು ಧನ್ಯರೆಂದು ಭಾವಿಸಿಕೊಳ್ಳುತ್ತಿದ್ದರು.

ಗೋವಿಂದಗುರು ಮತ್ತು ಶಂಕರರು ಬದರಿಕಾಶ್ರಮದ ಯಾತ್ರೆ ಕೈಗೊಂಡರು. ಅಮರಕಾಂತದಿಂದ ಹಿಡಿದು ಹಿಮಾಲಯದವರೆಗಿನ ದೀರ್ಘ ಪ್ರಯಾಣವನ್ನು



ಹೂವಿನ ಮೇಲೆ ನಡೆದಂತೆ ಪೂರೈಸಿದರು. ಅವರಿಗೆ ಮಾರ್ಗದ ಆಯಾಸದ ಬಗ್ಗೆ ಗಮನವೇ ಇರಲಿಲ್ಲ. ತಮ್ಮ ಪರಮ ಪೂಜ್ಯ ಗುರುಗಳ ಧ್ಯಾನದಲ್ಲಿ ಮಗ್ನರಾಗಿ ಮುಂದೆ ಸಾಗುತ್ತಿದ್ದರು. ಯಾರ ಗಮನ ಸತತವಾಗಿ ತಮ್ಮ ಗುರಿಯೆಡೆಗಿರುವುದೋ ಅವರಿಗೆ ಮಾರ್ಗದ ಕಷ್ಟಗಳು ಕಾಡಿಸುವುದಿಲ್ಲ. ಅವರ ಗಮನ ತಮ್ಮ ಕಾಲುಗಳೆಡೆಗಿರಲಿಲ್ಲ. ಗಮನವಿಲ್ಲದಿದ್ದರೆ ಸುಖ–ದುಃಖದ ಅರಿವಾದರೂ ಹೇಗಾಗುತ್ತದೆ?

ಬದರಿಕಾಶ್ರಮದಲ್ಲಿ ಭಗವಾನ್ ಗೌಡಪಾದಚಾರ್ಯರು ಬ್ರಹ್ಮನಿಷ್ಠೆಯಲ್ಲಿ ತಲ್ಲೀನರಾಗಿದ್ದರು. ಗೋವಿಂದಪಾದರು ಶಂಕರಾಚಾರ್ಯರ ಪರಿಚಯ ಮಾಡಿಸಿದರು. ಶಂಕರರು ತಮ್ಮ ಪರಮ ಪೂಜ್ಯ ಗುರುಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಗೋವಿಂದಗುರುಗಳಂತೆ ಗೌಡಪಾದಚಾರ್ಯರಿಗೂ ಶಂಕರರನ್ನು ನೋಡಿ, ಇವನು ಖಂಡಿತವಾಗಿ ವೈದಿಕ ಧರ್ಮವನ್ನು ಉದ್ಧರಿಸುತ್ತಾನೆಂಬ ವಿಶ್ವಾಸವುಂಟಾಯಿತು. ಶಂಕರರಲ್ಲಿ ಅವರಿಗೆ ಅಲೌಕಿಕ ಪ್ರತಿಭೆ ಮತ್ತು ಅಸಾಧಾರಣ ಬುದ್ಧಿಶಕ್ತಿಯ ಭಾಸವಾಯಿತು. ಅದಕ್ಕಿಂತಲೂ ಹೆಚ್ಚಾಗಿ ಅವರು, ಶಂಕರರಲ್ಲಿ ತಮ್ಮ ದೇಶ ಮತ್ತು ಧರ್ಮದ ಸ್ಥಿತಿ ಕಂಡು ರೋದಿಸುವ ಹೃದಯವಿದ್ದು ಅವರಿಗೆ ಈ ಪರಿಸ್ಥಿತಿಯನ್ನು ದೂರಮಾಡುವ ಒಂದು ಅತ್ಯಂತ ತೀಕ್ಷ್ಣ ಆಕಾಂಕ್ಷೆ ಇರುವುದು ಕಾಣಿಸಿತು. ಆದಾಗ್ಯೂ ಅವರು ಶಂಕರರನ್ನು ಅಪಕ್ವತೆಯಲ್ಲಿ ಕಳಹಿಸಲು ಬಯಸುತ್ತಿರಲಿಲ್ಲ. ಯಾರೆಂದರೆ ಅವರಿಗೆ, ಓರ್ವ ಉತ್ತಮ ಕಾರ್ಯಕರ್ತ ಸಮಾಜವನ್ನು ಅವನತಿಯ ಹಳ್ಳದಿಂದ ಹೊರತೆಗೆದು ಹಿಮಾದ್ರಿಯ ಉತ್ತುಂಗ ಶಿಖರದ ಮೇಲೆ ಕೂರಿಸಬಲ್ಲ, ಅದೇ ಓರ್ವ ಅಯೋಗ್ಯ ಕಾರ್ಯಕರ್ತ ಸಮಾಜದ ಮಾರ್ಗದಲ್ಲಿ ವಿಘ್ನತಂದೊಡ್ಡುತ್ತಾನೆ, ಒಂದಲ್ಲ ಒಂದು ದಿನ ತನ್ನ ವೈಯಕ್ತಿಕ ಸ್ವಾರ್ಥ, ಕೀರ್ತಿ ಮತ್ತು ಯಶಸ್ಸಿಗಾಗಿ ಧರ್ಮಕ್ಕೆ ಅಹಿತವನ್ನುಂಟು ಮಾಡಲು ಸಿದ್ಧನಾಗುತ್ತಾನೆಂಬ ವಿಷಯ ತಿಳಿದಿತ್ತು. ಅಹಂಕಾರ ಪ್ರತಿಯೊಬ್ಬ ವ್ಯಕ್ತಿಯನ್ನೂ ಅವನತಿಯ ಸುಳಿಗೆ ಸಿಲುಕಿಸುತ್ತದೆ. ಆದರೆ ಸಮಾಜದ ಕಾರ್ಯಕರ್ತನ ಅಹಂಕಾರ ಅವನೊಂದಿಗೆ ಇಡೀ ಸಮಾಜದಲ್ಲಿ ಹರಡಿ ಸುತ್ತ–ಮುತ್ತಲಿನ ಪರಿಸರವನ್ನು ವಿಷಮಯಗೊಳಿಸುತ್ತದೆ. ಶಂಕರರು ಅಹಂಕಾರ ಇತ್ಯಾದಿ ದುರ್ಗಣಗಳಿಂದ ಬಹುದೂರವಿದ್ದಾರೆಂಬುದು ಅವರಿಗೆ ತಿಳಿದಿತ್ತು. ಆದರೂ ಅವರು ಶಂಕರರನ್ನು ತಮ್ಮ ಬಳಿ ನಾಲ್ಕು ವರ್ಷಗಳವರೆಗಿಟ್ಟುಕೊಂಡು, ಅವರೇ ಶಿಕ್ಷಣವನ್ನು ಕೊಟ್ಟರು. ಶಂಕರರಲ್ಲಿದ್ದ ದೋಷಗಳನ್ನು ಆಯ್ದು–ಆಯ್ದು ಹೊರಗೆಸೆದರು.

ಶಂಕರರ ಜೀವನದಲ್ಲಿ ಈ ನಾಲ್ಕು ವರ್ಷಗಳು ಅತ್ಯಂತ ಮಹತ್ವದ್ದಾಗಿ ರುಜುವಾತಾಯಿತು. ಇಲ್ಲಿಯ ಶಿಕ್ಷಣ, ಅವರ ಜೀವನದ ಅತ್ಯಮೂಲ್ಯ ಶಿಕ್ಷಣವಾಗಿತ್ತು. ಭಾರತೀಯ ಸಂಸ್ಕೃತಿ ಮತ್ತು ಜೀವನದ ಮಾನದಂಡವಾದ ಹಿಮಾಲಯದ ಮಡಿಲಲ್ಲಿ

ಕುಳಿತು, ಶಂಕರರು ವೈಶಾಲ್ಯ ಮತ್ತು ದೃಢಚಿತ್ತದಿಂದ ಪಾಠ ಓದಿದ್ದರೆ ಇದರಲ್ಲೇನು ಆಶ್ಚರ್ಯ? ಅವರು ಹಿಮದ ಬೆಟ್ಟಗಳ ತೇಜಸ್ಸಿನಲ್ಲಿ ತಮ್ಮ ಧರ್ಮದ ಉಜ್ವಲತೆಯನ್ನು ಕಂಡರು. ಜೀವನವನ್ನು ಹಿಮದಂತೆಯೇ ಸ್ವಚ್ಛವಾಗಿಟ್ಟುಕೊಳ್ಳಲು ಅವರ ಪ್ರಯತ್ನವಿರುತ್ತಿತ್ತು. ಅವರಿಗೆ ಹಿಮದ, ಬಿಸಿಲಿನ ಬೇಗೆಯಲ್ಲಿ ಸಹಕರಿಸಲು ಸಾಧ್ಯವಾಗುತ್ತಿರಲಿಲ್ಲ. ಅದು ಶಂಕರರ ಪ್ರಕಾಶಮಾನವಾದ ಜೀವನವನ್ನು ನೋಡಿ ಲಜ್ಜೆಯಿಂದ ಕರಗಿ, ಅವರೆದುರಿಂದ ಹರಿದು ಓಡಿಹೋಗಲು ಪ್ರಯತ್ನಿಸುತ್ತಿತ್ತು. ಅದು ಆಳವಾದ ಹೊಂಡದಲ್ಲಿ ತನ್ನ ಮುಖ ಮುಚ್ಚಿಕೊಂಡು ಲಜ್ಜೆಯನ್ನು ಕಳೆದುಕೊಳ್ಳಲು ಬಯಸುತ್ತಿರುವಂತೆ ತೋರುತ್ತಿತ್ತು. ಅವರಿಗೆ ಭಗವತಿ ಭಾಗೀರಥಿಯ ಕಲ–ಕಲ ಸ್ವರ ದೂರದ ವರೆಗೆ ಕೇಳಿಸುತ್ತಿತ್ತು. ಹಿಮಾಲಯ ಭಾರಿ ಬಿರುಗಾಳಿ ಮತ್ತು ಸುಂಟರಗಾಳಿಯಲ್ಲಿ ತಲೆಎತ್ತಿ ನಿಂತಿರುತ್ತದೆ. ಅದೇ ಬೇಸಿಗೆಯಲ್ಲಿ ತನ್ನ ಶರೀರವನ್ನು ಕರಗಿಸಿಕೊಂಡು ಭಾರತದ ಅಗಣಿತ ಪುರಷರು–ಮಹಿಳೆಯರು ಅದರಿಂದ ಜೀವನ ಮತ್ತು ಪುಣ್ಯ ಲಾಭವನ್ನು ಪಡೆಯಲೆಂದು ಭಾಗೀರಥಿಗೆ ಜೀವದಾನ ಮಾಡುತ್ತದೆ. ಶಂಕರರು ಹಿಮಾದ್ರಿಯ ಈ ಮೂಕ ದೇಶ ಭಕ್ತಿಯನ್ನು ನೋಡಿ ಶ್ರದ್ಧೆಯಿಂದ ಅದರೆದರು ತಲೆಬಾಗಿದರು. ಬಹುಶಃ ಆ ಕ್ಷಣದಿಂದಲೇ ತಮ್ಮ ಜೀವನದಲ್ಲಿ ಬರುವ ವಿಪತ್ತುಗಳು ಮತ್ತು ಕಷ್ಟಗಳ ಬಗ್ಗೆ ಚಿಂತಿಸದೆ ಮೆಲ್ಲ–ಮೆಲ್ಲನೆ ಕರಗಿ ದೇಶಸೇವೆ ಗೈಯುವ ವ್ರತವನ್ನು ಕೈಗೊಂಡರು.

ಶಂಕರಾಚಾರ್ಯರು ಅಲ್ಲಿಯೇ ಇದ್ದು ತಮ್ಮ ಪರಮ ಪೂಜ್ಯ ಗುರುಗಳ ಆದೇಶದಂತೆ ಹಾಗೂ ಅವರ ಮಾರ್ಗದರ್ಶನದಲ್ಲಿ ಅನೇಕ ಗ್ರಂಥಗಳನ್ನು ರಚಿಸಿದರು. ಒಂದು ದಿನ ಶಂಕರಾಚಾರ್ಯರು ಗೌಡಪಾದಾಚಾರ್ಯರಿಂದ ಅವರ 'ಮುಂಡಕೋಪನಿಷದ್–ಕಾರಿಕಾ' ಬಗ್ಗೆ ಭಾಷ್ಯ ಬರೆಯಲು ಅನುಮತಿ ಯಾಚಿಸಿದರು. ಅವರ ಅನುಮತಿ ದೊರೆತ ಮೇಲೆ ಅವರು ಅದೆಷ್ಟು ತನ್ಮಯತೆ ಮತ್ತು ಸಾಮರ್ಥ್ಯದಿಂದ ಸರಳ ಮತ್ತು ಸರಸ ಭಾಷೆಯಲ್ಲಿ ಭಾಷ್ಯವನ್ನು ಬರೆದರೆಂದರೆ ಗೌಡಪಾದಾಚಾರ್ಯರು ಅದನ್ನು ಓದಿ ತುಂಬ ಸಂತೋಷಗೊಂಡರು. ಅವರು ಆಗಲೇ ಶಂಕರಾಚಾರ್ಯರಿಗೆ 'ವೇದಾಂತ–ಪ್ರಸ್ಥಾನತ್ರಯಿ'ಯ ಬಗ್ಗೆ ಭಾಷ್ಯ ಬರೆಯಲು ಹೇಳಿದರು. ಅವರ ಆಜ್ಞೆಯಂತೆ ಶಂಕರಾಚಾರ್ಯರು ಜಗತ್ ಪ್ರಸಿದ್ಧವಾದ ಷೋಡಷ ಭಾಷ್ಯಗಳನ್ನು ಬರೆದರು. ನಾಲ್ಕು ವರ್ಷಗಳ ಅಲ್ಪ ಅವಧಿಯಲ್ಲಿ ಅಧ್ಯಯನದೊಂದಿಗೆ ಇಷ್ಟೊಂದು ಭಾಷ್ಯಗಳನ್ನು ಬರೆಯುವುದು ತುಂಬ ಆಶ್ಚರ್ಯಕರ ಸಂಗತಿಯೇ ಆಗಿದೆ ಹಾಗೂ ಭಾಷ್ಯಗಳ ಭಾಷೆ, ಅದರ ಒಂದೊಂದು ಶಬ್ದಗಳ ಮಹತ್ವ ಹಾಗೂ ಅವುಗಳ ನಿರೂಪಣೆ, ಭಾವನೆಗಳ ಆಳವನ್ನು ನೋಡಿದಾಗ ಈ ಕೆಲಸ ಅತಿಮಾನುಷವೆಂದು ಅನ್ನಿಸುತ್ತದೆ. ಇಂದು ಶ್ರೇಷ್ಠ ಲೇಖಕರು ಸಹ ಈ ವೇಗವನ್ನು ಕಂಡು ಆಶ್ಚರ್ಯ ಪಡುತ್ತಾರೆ. 'ವೇದಾಂತ ಸೂತ್ರ'ದ ಮೇಲೆ ಅವರು ಬರೆದ ಭಾಷ್ಯ ಅದ್ವಿತೀಯವಾಗಿದೆ.



ಇದುವರೆಗೆ ಅನೇಕ ವಿದ್ವಾಂಸರು ಅನೇಕ ಭಾಷ್ಯಗಳನ್ನು ಬರೆದಿದ್ದಾರೆ. ಆದರೆ ವಿಷಯುಗಳ ಮೌಲಿಕತೆ, ಗಹನತೆ, ಸಾಂದ್ರತೆ ಮತ್ತು ಸರಳತೆಯಲ್ಲಿ ಶಂಕರಾಚಾರ್ಯರಿಗೆ ಸರಿಗಟ್ಟುವವರು ಯಾರೂ ಇಲ್ಲ. ಶಂಕರರ ಭಾಷ್ಯ ಪುರಾತನ ಮಾತ್ರವಲ್ಲ, ಅಷ್ಟೇ ಪ್ರಾಮಾಣಿಕವೂ ಹೌದು.

ಭಗವದ್ ಗೌಡಪಾದಾಚಾರ್ಯರು ಶಂಕರರ ಭಾಷ್ಯಗಳನ್ನು ನೋಡಿ ಎಷ್ಟು ಸಂತೋಷಪಟ್ಟರೆಂದರೆ, ಅವರನ್ನು ತಮ್ಮ ಗುರುಗಳು ಮತ್ತು ಪರಮ ಪೂಜ್ಯರಾದ ಶುಕರ ಮತ್ತು ಮಹರ್ಷಿ ಬಾದರಾಯಣರ ದರ್ಶನ ಮಾಡಿಸಲು ಶಂಕರರನ್ನು ಕೈಲಾಸ ಪರ್ವತಕ್ಕೆ ಕರೆದೊಯ್ದರೆಂದು ಹೇಳಲಾಗುತ್ತದೆ. ವೇದಾಂತದ ಆದಿ ಲೇಖಕರ ದರ್ಶನದಿಂದ ಶಂಕರರು ಧನ್ಯತಾ ಭಾವನೆಯನ್ನು ತಾಳಿದರು. ಆಗಲೇ 'ಧನ್ಯಾಷ್ಟಕಾ' ವನ್ನು ರಚಿಸಿದರು. ಈ ಜನಶ್ರುತಿಯಲ್ಲಿ ಸತ್ಯಾಂಶ ಎಷ್ಟೇ ಅಲ್ಪವಾಗಿದ್ದಾಗ್ಯೂ, ಶಂಕರರು ಮಹರ್ಷಿ ಬಾದರಾಯಣರನ್ನು ಅವರ ಕೃತಿಗಳ ಮೂಲಕ ಅವಶ್ಯವಾಗಿ ಸಾಕ್ಷಾತ್ಕರಿಸಿಕೊಂಡಿದ್ದಾರೆಂಬುದಂತೂ ನಿಶ್ಚಿತ.

ಶಂಕರಾಚಾರ್ಯರು ತಮ್ಮ ಈ ಕಾರ್ಯವನ್ನು ಪೂರೈಸಿ ದೇಶ ಸಂಚಾರಕ್ಕೆ ಹೊರಡಲು ಗುರುಗಳಿಂದ ಅನುಮತಿ ಪಡೆದರು. ಗುರುಗಳು ಅವರಿಗೆ ಆಶೀರ್ವದಿಸಿದರು. ಅವರ ಯಶಸ್ಸಿಗೆ ಶುಭಕಾಮನೆಗಳನ್ನು ಹೇಳಿದರು. ದೇವರ ಆಶೀರ್ವಾದ ಮತ್ತು ಪೂರ್ವಜರ ಪುಣ್ಯ ಅವರೊಂದಿಗಿತ್ತು. ಶಂಕರರು ಗುರುಗಳ ಆಶೀರ್ವಾದ ಪಡೆದು ಅವರೆದುರು ತಲೆಬಾಗಿದರು. ಅವರ ಆಜ್ಞೆಯನ್ನು ಶಿರಸಾ ಪಾಲಿಸಿದರು. ತಮ್ಮ ಕೈಯಲ್ಲಿ ಭಗವಧ್ವಜ, ದಂಡ ಮತ್ತು ಕಮಂಡಲ ಹಿಡಿದು ಅವರು ತಮ್ಮ ಧರ್ಮಯಾತ್ರೆಯನ್ನು ಪ್ರಾರಂಭಿಸಿದರು.

* * * *

# ೭. ಬಂಧನದಿಂದ ಬಿಡುಗಡೆ

ಶಂಕರಾಚಾರ್ಯರು ಗುರುಗಳ ಅನುಮತಿ ಪಡೆದು ಯಾತ್ರೆಗೆ ಸಿದ್ಧತೆ ಮಾಡಿಕೊಂಡಿದ್ದರು. ಆಗಲೇ ತಮ್ಮ ಸಂಬಂಧಿಯಾದ ಅಗ್ನಿಶರ್ಮ ಬರುತ್ತಿರುವುದನ್ನು ಕಂಡರು. ಅವರ ಹೃದಯ ಕೆಡುಕಿನ ಭಯದಿಂದ ಬಡಿದುಕೊಂಡಿತು. ತಮ್ಮ ಸಂಬಂಧಿ ಅಗ್ನಿಶರ್ಮ ಬರಲು ಬೇರ್‍ಯಾವ ಕಾರಣವಿಲ್ಲವೆಂಬುದು ಅವರಿಗೆ ತಿಳಿದಿತ್ತು. ಕಾಲಟಿಯ ಅದೆಷ್ಟೊ ಚಿತ್ರಗಳು ಒಂದೊಂದಾಗಿ ಅವರ ಕಣ್ಣೆದುರಿಗೆ ಸುಳಿದವು. ಅವರು ಅಗ್ನಿಶರ್ಮನಿಗೆ ಅಭಿವಂದಿಸಿ ಕ್ಷೇಮ ಸಮಾಚಾರವನ್ನು ಕೇಳಿದರು. ಆದರೆ ಅಗ್ನಿಶರ್ಮ ಶಾಂತವಾಗಿ ನಿಂತಿದ್ದ.

"ಹೇಳಪ್ಪ ಎಲ್ಲರೂ ಕ್ಷೇಮ ತಾನೆ? ಯಾಕೆ ಮೌನಿಯಾಗಿ ನಿಂತಿರುವೆ?" ಶಂಕರಾಚಾರ್ಯರು ಆಗ್ರಹಪೂರ್ವಕವಾಗಿ ವಿಚಾರಿಸಿದರು.

ಅಗ್ನಿಶರ್ಮ ಬಹಳಷ್ಟು ಹಣವನ್ನು ಹೊರತೆಗೆದು ಶಂಕರಾಚಾರ್ಯರ ಎದುರಿಗಿಡುತ್ತಾ ಹೇಳಿದ, "ಈ ಹಣವನ್ನು ತಾಯಿ ಆರ್ಯಂಬಾ ನಿನಗೆ ಕಳುಹಿಸಿದ್ದಾರೆ. ಅವರೀಗ ತಮ್ಮ ಕೊನೆಯ ದಿನಗಳನ್ನು ಎಣಿಸುತ್ತಿದ್ದಾರೆ".

ಶಂಕರಾಚಾರ್ಯರಿಗೆ ಸಿಡಿಲು ಬಡಿದಂತಾಯಿತು. ಅವರು ದಿಕ್ಕುತೋಚದವರಂತೆ ನಿಂತುಬಿಟ್ಟಿದ್ದರು. ಅವರಿಗೆ ತಾಯಿಯ ಬಗ್ಗೆ ಪ್ರೀತಿ ಇತ್ತು. ಅವರು ಇಹಲೋಕ ತ್ಯಜಿಸಲು ಬಯಸುತ್ತಿದ್ದ ಬಗ್ಗೆ ಶಂಕರಾಚಾರ್ಯರಿಗೆ ದುಃಖವಿರಲಿಲ್ಲ. ಆದರೆ ತಾವು ತಮ್ಮ ಧರ್ಮಯಾತ್ರೆಯನ್ನು ಈಗ ಪ್ರಾರಂಭಿಸಲು ಸಾಧ್ಯವಿಲ್ಲವೆಂದು ದುಃಖಿತರಾಗಿದ್ದರು. ಅವರು ಶಾಂತಚಿತ್ತದಿಂದ ತಮ್ಮನ್ನು ದೇವರಿಗರ್ಪಿಸಿಕೊಂಡರು. ನಾನು ನಿಮ್ಮ ಸಾವಿನ ವೇಳೆಯಲ್ಲಿ ನಿಮ್ಮ ಬಳಿಗೆ ಅವಶ್ಯ ಬರುತ್ತೇನೆಂದು ಸನ್ಯಾಸ ಸ್ವೀಕರಿಸುವ ವೇಳೆಯಲ್ಲಿ ತಾಯಿಯ ಬಳಿ ಅವರು ಪ್ರತಿಜ್ಞೆ ಮಾಡಿದ್ದರು. ಹೀಗಾಗಿ ಈಗ ಅವರು ಆ ಪ್ರತಿಜ್ಞೆಯಂತೆ ಕಾಲಟಿಗೆ ಹೋಗಬೇಕಾಗಿತ್ತು.

ತಾಯಿ ಕಳುಹಿಸಿದ ಹಣವನ್ನು ಶಂಕರಾಚಾರ್ಯರಾದರೂ ಏನು ಮಾಡುತ್ತಾರೆ ? ಅವರಂತೂ ಸನ್ಯಾಸಿಗಳಾಗಿದ್ದರು. ಈಗ ಆ ಸಂಪತ್ತು ಅವರದಾಗಿರದೆ ರಾಷ್ಟ್ರದ್ದಾಗಿತ್ತು. ಹೀಗಾಗಿ ಆ ಹಣದಿಂದ ಅವರು ಬದರಿಕಾಶ್ರಮದಲ್ಲಿಯೇ ಶ್ರೀ ಬದರಿನಾಥನ ಮಂದಿರವನ್ನು ಕಟ್ಟಿಸಿದರು ಹಿಮಾಲಯದ ತಪ್ಪಲಿನಲ್ಲಿ



೧೩,೦೦೦ಅಡಿ ಎತ್ತರದಲ್ಲಿ ಇಂದಿಗೂ ಈ ಭವ್ಯ ಮಂದಿರ ನಿಂತಿದೆ. ಅದರೊಂದಿಗೆ ಶಂಕರರು ಅಡಿಪಾಯ ಹಾಕಿದ್ದ ವಿಶಾಲ ಹಿಂದೂರಾಷ್ಟ್ರವೂ ನಿಂತಿದೆ. ನಮ್ಮ ಪ್ರಮುಖ ತೀರ್ಥಕ್ಷೇತ್ರಗಳಲ್ಲಿ ಬದರೀ ತೀರ್ಥಕ್ಕೆ ಅತ್ಯಂತ ಪ್ರಮುಖ ಸ್ಥಾನವಿದೆ. ಭಾರತದ ಮೂಲೆ–ಮೂಲೆಗಳಿಂದ ಹಿಮ ಮತ್ತು ಚಳಿಯ ಬಗ್ಗೆ ಚಿಂತಿಸದೆ, ಕಾಡು ಮತ್ತು ಬೆಟ್ಟಗಳ ಬಗ್ಗೆಯೂ ಚಿಂತಿಸದೆ ಸಹಸ್ರಾರು ಸಂಖ್ಯೆಯಲ್ಲಿ ಹಿಂದೂಗಳು ಶ್ರೀಬದರೀನಾಥನ ದರ್ಶನಕ್ಕಾಗಿ ಹೋಗುತ್ತಾರೆ. ಅತ್ಯಂತ ಶ್ರದ್ಧೆ–ಭಕ್ತಿಯಿಂದ ಶ್ರೀಬದರೀನಾಥನಿಗೆ ನಮಿಸುತ್ತಾರೆ. ಆಗ ಅರಿವಿಲ್ಲದಂತೆಯೇ ಶಂಕರಾಚಾರ್ಯರು ಮತ್ತು ತಾಯಿ ಆರ್ಯಂಬಾಳಿಗೆ ತಮ್ಮ ಶ್ರದ್ಧೆಯ ಹೂಗಳನ್ನು ಅರ್ಪಿಸುತ್ತಾರೆ. ದೇವರಿಗೆ ನೈವೇದ್ಯ ಮಾಡುವ ಚಿನ್ನದ ಪಾತ್ರೆಗಳು ಶ್ರೀ ಶಂಕರಾಚಾರ್ಯರಿಂದ ಕೊಡಲ್ಪಟ್ಟಿವೆ. ಇದುವರೆಗೂ ಅಗ್ನಿಶರ್ಮನ ವಂಶಜರೇ ಈ ಮಂದಿರದಲ್ಲಿ ಪೂಜೆ ಮಾಡುವ ಅಧಿಕಾರವನ್ನು ಹೊಂದಿದ್ದಾರೆ.

ಶಂಕರಾಚಾರ್ಯರು ಬದರೀನಾರಾಯಣ ಮಂದಿರವನ್ನು ನಿರ್ಮಿಸಲು ಪ್ರಾರಂಭಿಸಿ ತಮ್ಮ ಮಿತ್ರರಾದ ವಿಷ್ಣುಶರ್ಮರವರೊಂದಿಗೆ ಕಾಲಟಿಗೆ ಹೊರಟು ಹೋದರು. ಈಗ ವಿಷ್ಣುಶರ್ಮ ಸಹ ಸನ್ಯಾಸಿಯಾಗಿದ್ದು ಅವರ ಹೆಸರು ಚಿತ್ಸುಖಾಚಾರ್ಯನೆಂದಾಗಿತ್ತು. ಶಂಕರಾಚಾರ್ಯರು ತಮ್ಮ ತಾಯಿಯನ್ನು ನೋಡಲು ತುಂಬ ಉತ್ಸುಕರಾಗಿದ್ದರು. ಹೀಗಾಗಿ ಮಾರ್ಗದ ಒಂದೊಂದು ಹೆಜ್ಜೆಯೂ ಒಂದೊಂದು ಹರಿದಾರಿಯಂತೆ ಕಾಣುತ್ತಿತ್ತು. ಮಾರ್ಗ ಎಷ್ಟು ದೀರ್ಘವಾಗಿತ್ತೆಂದರೆ, ಎಷ್ಟು ನಡೆದರೂ ಸವೆಯುತ್ತಲೇ ಇರಲಿಲ್ಲ. ಹಾಗಂತ ಕಡಿಮೆ ದೂರವೇನಿರಲಿಲ್ಲ. ಬದರಿಕಾಶ್ರಮದಿಂದ ಕಾಲಟಿಗೆ ಸುಮಾರು ೧೮೦೦ ಮೈಲಿಗಳ ಅಂತರವಿದೆ. ಆಗ ರೈಲು ಇರಲಿಲ್ಲ, ವಿಮಾನಗಳಿರಲಿಲ್ಲ. ಸಂಪೂರ್ಣ ಮಾರ್ಗವನ್ನು ಕಾಲ್ನಡಿಗೆಯಲ್ಲಿಯೇ ಸವೆಸಬೇಕಾಗಿತ್ತು. ಅದೆಷ್ಟು ದಿನಗಳು ಹಿಡಿದಿರಬಹುದು! ಈ ದಿನಗಳಲ್ಲಿ ಶಂಕರಾಚಾರ್ಯರು ಪ್ರಯಾಣಿಸುವಾಗ ಅವರ ಮನಃಸ್ಥಿತಿ ಏನಾಗಿದ್ದಿರಬಹುದು? ಅವರಿಗೆ ನಿಮ್ಮ ತಾಯಿ ಕೊನೆಯುಸಿರೆಳೆಯುತ್ತಿದ್ದಾರೆಂದು ಹೇಳಲಾಗಿತ್ತು. ಇತ್ತ ಅವರು ಒಂದೊಂದು ಹೆಜ್ಜೆಯನ್ನೂ ಲೆಕ್ಕಹಾಕುತ್ತಿದ್ದರು. ಅವರ ಕಾಲುಗಳು ನೆಲವನ್ನು ಸ್ಪರ್ಶಿಸುತ್ತಿರಲಿಲ್ಲ. ನೆಲವನ್ನು ಸ್ಪರ್ಶಿಸಲೂ ಸಮಯ ಹಿಡಿಯುತ್ತದೆಯಲ್ಲವೇ? ಅವರು ಹಾರಿಹೋದಂತೆ ಸಾಗುತ್ತಿದ್ದರು. ಅವರಿಗೆ ವಿಶ್ರಾಂತಿಯ ಬಗ್ಗೆ ಚಿಂತೆಯಿರಲಿಲ್ಲ. ಹಸಿವು ಮತ್ತು ನೀರಡಿಕೆ ಇಂಗಿಹೋಗಿದ್ದವು. ಅವರು ದೌಡಾಯಿಸುತ್ತಾ ಹೇಗೋ ಕಾಲಟಿಗೆ ಬಂದರು. ದೇವರ ಕೃಪೆಯಿಂದ ತಾಯಿಯ ಅಂತಿಮ ದರ್ಶನ ಪಡೆದರು. ಮನೆಯೊಳಗೆ ಕಾಲಿಟ್ಟ ಕೂಡಲೇ ಓಡಿ ಬಂದು ತಾಯಿಯ ಚರಣಗಳನ್ನು ಹಿಡಿದುಕೊಂಡರು. ತಾವು ಸನ್ಯಾಸಿಗಳು, ಸರ್ವರಿಗೂ ನಮಿಸಲು ಯೋಗ್ಯರಾದವರು ಎಂಬುದನ್ನೂ ಮರೆತುಬಿಟ್ಟಿದ್ದರು.

ಇಲ್ಲ ಮರೆತಿರಲಿಲ್ಲ. ಎಷ್ಟೇ ದೊಡ್ಡವರಾದ್ದಾಗ್ಯೂ, ತಾಯಿಗೆ ಅದೇ ಶಂಕರರು; ತಾಯಿ ತಾಯಿಯೇ; ಅವಳು ಸರ್ವವಿಧದಲ್ಲಿಯೂ ಆದರಣೀಯಳು. ತಾಯಿಯೇ ಪೂಜ್ಯಳು ಎಂದು ಅವರಿಗೆ ತಿಳಿದಿತ್ತು. ತಾಯಿ ಆರ್ಯಂಬಾ ಅವರನ್ನು ಅಪ್ಪಿಕೊಂಡಳು, ಹರ್ಷಾತಿರೇಕದಿಂದಾಗಿ ಅವರ ಕಣ್ಣೀರು ಹರಿಯಿತು.

ಶಂಕರಾಚಾರ್ಯರು ತಾಯಿಯ ಸೇವೆಯನ್ನು ಮನಸಾರೆ ಮಾಡಿದರು. ಅವರು ಸದಾ ತಾಯಿಯ ಮಂಚದ ಬಳಿಯೇ ಕೂತಿರುತ್ತಿದ್ದರು, ಅವರಿಗೆ ಔಷದಿ ಕುಡಿಸುತ್ತಿದ್ದರು. ಗಾಳಿ ಹಾಕುತ್ತಿದ್ದರು. ತಾನು ನಿತ್ಯ ಪೂರ್ಣಾ ನದಿಯಲ್ಲಿ ಸ್ನಾನ ಮಾಡುವುದಾಗಿ ತಾಯಿಯವರು ವ್ರತ ಕೈಗೊಂಡಿದ್ದರು. ಈಗ ಅವರು ನಿತಾಂತ್ರಗೊಂಡಿದ್ದರು. ನದಿಯ ಸಮೀಪಕ್ಕೆ ಹೋಗುವಷ್ಟೂ ಶಕ್ತಿ ಅವರಲ್ಲಿರಲಿಲ್ಲ. ನದಿ ದೂರವಿದ್ದುದರಿಂದ ಆರ್ಯಂಬಾ ತುಂಬಾ ಚಿಂತಿತರಾಗಿದ್ದರು. ನನ್ನ ಅಂತ್ಯ ಕಾಲದಲ್ಲಿ ನನ್ನ ವ್ರತವನ್ನು ಮುರಿಯಬೇಕಾಗುತ್ತದೆಯೆಂದು ಯೋಚಿಸುತ್ತಿದ್ದರು. ಅವರು ಈ ರೀತಿ ಚಿಂತಿಸುತ್ತಿರುವುದನ್ನು ಕಂಡು ಶಂಕರಾಚಾರ್ಯರು ಹೇಳಿದರು, " ಅಮ್ಮಾ, ನಿನೇಕೆ ಚಿಂತಿಸುವೆ? ಇದುವರೆಗೆ ನೀನು ನದಿಯ ಬಳಿಗೆ ಹೋಗುತ್ತಿದ್ದೆ. ಈಗ ನದಿಯೇ ನಿನ್ನ ಬಳಿಗೆ ಬರುತ್ತದೆ" ಆರ್ಯಂಬಾರಿಗೆ ಅರ್ಥವಾಗಲಿಲ್ಲ. ಆದರೆ ಅವರು ತಮ್ಮ ಪುತ್ರನ ಮಾತನ್ನು ನಂಬಿದರು. ಕಾರಣ ಅವರಿಗೆ ಶಂಕರಾಚಾರ್ಯರಲ್ಲಿ ಅಲೌಕಿಕ ಶಕ್ತಿಯಿದೆ ಎಂಬುದು ತಿಳಿದಿತ್ತು.

ಮಾರನೇ ದಿನ ಪ್ರಾತಃಕಾಲ ಶಂಕರಾಚಾರ್ಯರು ಹೆಗಲ ಮೇಲೆ ಕೊಡವಿಟ್ಟುಕೊಂಡು ಹೊರಡಲುನುವಾದಾಗ ಆರ್ಯಂಬಾ ಕೇಳಿದರು, "ಶಂಕರ, ಎಲ್ಲಿಗೆ ಹೋಗುತ್ತಿರುವೆ?"

"ನದಿಯನ್ನು ತೆಗೆದುಕೊಳ್ಳಲು ಹೋಗುತ್ತಿದ್ದೇನೆ, ಅಮ್ಮಾ". ಶಂಕರಾಚಾರ್ಯರು ಉತ್ತರಿಸಿದರು.

"ಬೇಡ, ಮಗು ಬೇಡ, ನದಿಯ ಬಳಿಗೆ ಹೋಗಬೇಡ, ನದಿಯಲ್ಲಿ ಮೊಸಳೆಯಿದೆ. ಆರ್ಯಂಬಾ ಹೆದರಿ ಹೇಳಿದರು".

ಶಂಕರಾಚಾರ್ಯರು ನುಗುತ್ತಾ ಹೇಳಿದರು, "ಅಮ್ಮಾ ಅದು ಸತ್ತು ಹೋಯ್ತು! ನಾನೀಗ ಮತ್ತೆ ಸನ್ಯಾಸವನ್ನು ತೆಗೆದುಕೊಳ್ಳಬೇಕಿಲ್ಲ?"

ಶಂಕರಾಚಾರ್ಯರು ನದಿಯ ಬಳಿಗೆ ಹೋದರು. ಒಂದು ಮಡಿಕೆಯಲ್ಲಿ ನೀರು ತುಂಬಿದರು. ನದಿಯಲ್ಲಿ ಕೆಲವು ಬಳ್ಳಿಗಳನ್ನು ಹೇಗೆ ಕಟ್ಟಿರೆಂದರೆ, ನದಿ ಪ್ರವಾಹ ಹೊರಳಿತು! ಅಂದು ತಾಯಿ ಆರ್ಯಂಬಾ ಕೊಡದ ನೀರಿನಿಂದ ಸ್ನಾನ ಮಾಡಿದರು. ಉಳಿದ ನೀರನ್ನು ಬಾಗಿಲ ಬಳಿ ಹಾಕಿದರು. ಮಾರನೆಯ ದಿನ, ಪೂರ್ಣಾ ನದಿಯ ಜಲ ಶಂಕರಾಚಾರ್ಯರ ಮನೆ ಬಾಗಿಲಿನ ಮೆಟ್ಟಿಲುಗಳನ್ನು ಸ್ಪರ್ಶಿಸುತ್ತಿರುವುದನ್ನು ಎಲ್ಲರೂ ನೋಡಿದರು. ಅವರು ಬಳ್ಳಿಗಳಿಂದ ತಡೆಯೊಡ್ಡಿದ್ದು



ಉಪಯೋಗಕ್ಕೆ ಬಂದಿತು. ಆದರೆ ಜನರಿಗೆ ಈ ರಹಸ್ಯವೆಲ್ಲಿ ತಿಳಿದಿತ್ತು? ಅವರು ಶಂಕರಾಚಾರ್ಯರ ಅತಿಮಾನುಷ ಕೆಲಸದ ಬಗ್ಗೆ ನಾನಾ ರೀತಿಯಲ್ಲಿ ಚರ್ಚಿಸಲಾರಂಭಿಸಿದರು.

ಒಂದು ದಿನ ಆರ್ಯಂಬಾ ಶಂಕರಾಚಾರ್ಯರಿಗೆ ಹೇಳಿದರು, " ಶಂಕರ! ನೀನು ಧರ್ಮವನ್ನು ತಿಳಿದವನು. ದೇಶದಲ್ಲೆಲ್ಲಾ ಧರ್ಮದ ಪ್ರಚಾರ ಮಾಡುವವನು. ನನಗೂ ಧರ್ಮದ ಬಗ್ಗೆ ಸ್ವಲ್ಪ ಹೇಳು. ಸಾಯುವ ವೇಳೆಯಲ್ಲಿ ಸ್ವಲ್ಪ ಶಾಂತಿ ಸಿಗಲಿ".

ಶಂಕರಾಚಾರ್ಯರು ತಾಯಿಯ ಆದೇಶ ಪಡೆದು ಅವರಿಗೆ ಅದ್ವೈತದ ವಿಚಾರಗಳನ್ನು ಅತ್ಯಂತ ಸರಳ ಮತ್ತು ನೇರ ಭಾಷೆಗಳಲ್ಲಿ ಹೇಳಲು 'ತತ್ವಬೋಧ' ಎಂಬ ಒಂದು ಸರಳ ಗ್ರಂಥವನ್ನು ರಚಿಸಿದರು. ಎಲ್ಲವನ್ನೂ ಕೇಳಿದ ತಾಯಿ ಆರ್ಯಂಬಾ ಹೇಳಿದರು: "ಇವೆಲ್ಲಾ ಉನ್ನತ ವಿಚಾರಗಳು, ಶಂಕರ! ದೇಶದ ಜನರೆಲ್ಲಾ ಈ ವಿಚಾರಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವೇ? ನನಗೆ ಭಗವಾನ್ ಶ್ರೀಕೃಷ್ಣನ ಬಗ್ಗೆಯೇ ಹೇಳು".

ಶಂಕರಾಚಾರ್ಯರು 'ಕೃಷ್ಣಾಷ್ಟಕ' ರಚಿಸಿ ತಾಯಿಗೆ ಓದಿ ಹೇಳಿದರು. ಅಂದೇ ಅವರು, ವೇದಾಂತದ ತತ್ವಶಾಸ್ತ್ರಕ್ಕೆ ಭಕ್ತಿಯ ಕುರುಹು ಸಿಗುವವರೆಗೆ ಅದು ಜನ ಸಾಮಾನ್ಯರ ಉಪಯೋಗಕ್ಕೆ ಬರಲಾರದು ಎಂದು ಅರಿತುಕೊಂಡರು. ಇದೇ ವೇಳೆಗೆ ಭಕ್ತರ ಭಿನ್ನ-ಭಿನ್ನ ಇಷ್ಟದೇವತೆಗಳ ಹಿಂದೆ ಓರ್ವ ಪರಬ್ರಹ್ಮನ ಪ್ರತಿಷ್ಠಾಪನೆ ಮಾಡಬೇಕೆಂದೂ ನಿಶ್ಚಯಿಸಿದರು ಆರ್ಯಂಬಾ 'ಕೃಷ್ಣಾಷ್ಟಕ'ವನ್ನು ಕೇಳಿ ಎಷ್ಟೊಂದು ಭಕ್ತಿಭಾವದಲ್ಲಿ ಮೈಮರೆತರೆಂದರೆ, ದೇವರ ಧ್ಯಾನ ಮಾಡುತ್ತಿರುವಾಗಲೇ ಅವರ ಆತ್ಮ ಭಗವಂತನಲ್ಲಿ ಐಕ್ಯಗೊಂಡಿತ್ತು. 'ಕೃಷ್ಣಾಷ್ಟಕ' ಮುಗಿಸಿದ ಕೂಡಲೇ ತಮ್ಮೆದುರು ತಾಯಿಯ ನಿರ್ಜೀವ ಶರೀರ ಬಿದ್ದಿರುವುದನ್ನು ಶಂಕರಾಚಾರ್ಯರು ನೋಡಿದರು. ತಾಯಿಯವರ ಸಾವಿನ ಅನಂತರ ಅವರ ಅಂತಿಮ ಸಂಸ್ಕಾರ ಮಾಡುವುದು ಅವರ ಕರ್ತವ್ಯವಾಗಿತ್ತು. ಯಾಕೆಂದರೆ, ಹೀಗೆ ಅವರು ಪ್ರತಿಜ್ಞೆ ಮಾಡಿಬಿಟ್ಟಿದ್ದರು. ಅವರು ಸನ್ಯಾಸಿಗಳಾಗಿದ್ದರು. ಸನ್ಯಾಸಿಗಳಿಗೆ ಶವಸಂಸ್ಕಾರ ಮಾಡಲು ಅನುಮತಿ ಇಲ್ಲವೆಂಬುದು ಅವರಿಗೆ ಗೊತ್ತಿತ್ತು. ಈ ಸಮಸ್ಯೆ ಅವರೆದುರಿಗೂ ಉದ್ಭವಿಸಿತ್ತು. ತಾಯಿ ಆರ್ಯಂಬಾ, ಅವರಿಂದ ತಮ್ಮ ಅಂತ್ಯ ಸಂಸ್ಕಾರ ಮಾಡಿಸಿಕೊಳ್ಳುವ ಬಗ್ಗೆ ಪ್ರತಿಜ್ಞೆ ಮಾಡಿಸಿಕೊಂಡಾಗ ಈ ಸಮಸ್ಯೆ ಅವರೆದುರೂ ಬಂದಿತ್ತು. ಅಂತಿಮ ಸಂಸ್ಕಾರದ ಪ್ರತಿಜ್ಞೆ ಮತ್ತು ಸನ್ಯಾಸ ಎರಡೂ ಒಟ್ಟಿಗೆ ನಡೆಯಲಾರವು, ಹೀಗಾಗಿ ಶಂಕರ ಸನ್ಯಾಸದ ವಿಚಾರವನ್ನು ತ್ಯಜಿಸಿಬಿಡುತ್ತಾನೆ ಎಂದು ಅವರು ಯೋಚಿಸುತ್ತಿದ್ದರು. ಆದರೆ ಶಂಕರಾಚಾರ್ಯರು ಸನ್ಯಾಸ ಧರ್ಮವನ್ನು, ಈ ಮಾರ್ಗದಿಂದ ಸಾಗಿದರೆ ದೇಶ, ಜನಾಂಗ ಮತ್ತು ಧರ್ಮದ ಕೆಲಸಗಳನ್ನು ಹೆಚ್ಚೆಚ್ಚು ಮಾಡಬಹುದೆಂಬ

ಉದ್ದೇಶದಿಂದ ಸ್ವೀಕರಿಸಿದ್ದರು. ಆದರೆ ಅವರು ಸನ್ಯಾಸವನ್ನೇ ಸರ್ವಸ್ವವೆಂದು ತಿಳಿದಿರಲಿಲ್ಲ. ತಾಯಿಯ ಎದುರು ಮಾಡಿದ ಪ್ರತಿಜ್ಞೆ ಅವರ ದೇಶ ಸೇವೆಯ ಕಾರ್ಯದಲ್ಲಿ ವಿಘ್ನವುಂಟುಮಾಡುವುದಿಲ್ಲವೆಂಬುದೂ ಅವರಿಗೆ ತಿಳಿದಿತ್ತು. ಹೀಗಾಗಿ ಅವರು ವಾಸ್ತವಿಕ ಸನ್ಯಾಸವನ್ನು ಸ್ವೀಕರಿಸಿದರು; ತೋರ್ಪಡಿಕೆಗಾಗಿ ಸನ್ಯಾಸವನ್ನು ಸ್ವೀಕರಿಸಲಿಲ್ಲ. ತಾಯಿಯ ಅಂತ್ಯಸಂಸ್ಕಾರ ನೆರವೇರಿಸಿದ್ದರಿಂದ ಸನ್ಯಾಸ ಧರ್ಮದಿಂದ ಹೊರದೂಡಲ್ಪಟ್ಟ ಶ್ರೀಮಚ್ಛಂಕರಾಚಾರ್ಯರ ಜೀವನದೊಂದಿಗೆ ಯಾವ ಪರಮ ನೈಷ್ಠಿಕ ಸನ್ಯಾಸಿ ಹೋಲಿಕೆ ಮಾಡುವ ಸಾಹಸ ಮಾಡುತ್ತಾನೆ? ಶಂಕರಾಚಾರ್ಯರಂತೆ ಇನ್ಯಾವ ಸನ್ಯಾಸಿ ದೇಶಸೇವೆಗೈದಿದ್ದಾರೆ? ಹಾಗಿಲ್ಲದೆ, ಶಂಕರಾಚಾರ್ಯರು ವಾಸ್ತವಿಕ ಸನ್ಯಾಸಿಗಳಾಗಿದ್ದರು; ಮನಸ್ಸಿನಿಂದ ಪರಿಪೂರ್ಣರಾದ ಸನ್ಯಾಸಿಗಳಾಗಿದ್ದರು. ವಾಸ್ತವವಾಗಿ ಅವರು ಬಟ್ಟೆಯನ್ನು ಬಣ್ಣಗೊಳಿಸಿ ಆಡಂಬರ ತೋರುವ ಸನ್ಯಾಸಿಗಳಾಗಿರಲಿಲ್ಲ. ಹೀಗಾಗಿಯೇ ಇಂದಿಗೂ ಅವರು ಸನ್ಯಾಸಿಗಳೆದುರು ಆದರ್ಶಪ್ರಾಯ ಸನ್ಯಾಸಿಗಳಾಗಿದ್ದಾರೆ.

ಶಂಕರರ ಈ ಕಾರ್ಯದಿಂದಾಗಿ ಅವರ ವಂಶದವರು ಮತ್ತು ಕುಟುಂಬದವರು ಅವರೊಂದಿಗೆ ಮನಸ್ತಾಪಗೊಂಡರು. ಯಾರೂ ಆರ್ಯಂಬಾರ ಶವವನ್ನೆತ್ತುವಲ್ಲಿ ಸಹಕರಿಸಲಿಲ್ಲ. ಆದರೆ ದೃಢ ಸ್ವಭಾವದ, ದೃಢ ಪ್ರತಿಜ್ಞೆಯ, ನಿರ್ಭೀತ ಮತ್ತು ಅಂತಃಕರಣದಲ್ಲಿ ಪ್ರತಿಷ್ಠಾಪನೆಗೊಂಡ ಸತ್ಯದೆದರು ಜಗತ್ತಿನ ಬಗ್ಗೆ ಚಿಂತಿಸದ ಶಂಕರಾಚಾರ್ಯರು ಖುದ್ದಾಗಿ, ಏಕಾಂಗಿಯಾಗಿಯೇ ಸಂಸ್ಕಾರಗಳನ್ನು ವಿಧಿವತ್ತಾಗಿ ಪೂರೈಸಿದರು. ತಮ್ಮ ಮನೆಯ ಅಂಗಳದಲ್ಲಯೇ ಚಿತೆಯನ್ನು ಸಿದ್ಧಪಡಿಸಿ ತಮ್ಮ ಬಲಿಷ್ಠ ಭುಜಗಳಿಂದಲೇ ತಾಯಿಯ ಶವವನ್ನೆತ್ತಿ ಚಿತೆಯ ಮೇಲಿಟ್ಟು ವೇದ ಮಂತ್ರಗಳನ್ನುಚ್ಛರಿಸುತ್ತಾ ಅಗ್ನಿಸಂಸ್ಕಾರ ಮಾಡಿದರು. ಆಗಲೇ ಅವರು 'ಮಾತೃ-ಸ್ತುತಿ' ಎಂಬ ಕವನವನ್ನು ರಚಿಸಿದರು. ಅವರ ಹೃದಯದಲ್ಲಿ ತಾಯಿಯ ಬಗ್ಗೆ ಅದೆಷ್ಟು ಪ್ರೀತಿ ಮತ್ತು ಶ್ರದ್ಧೆಯಿತ್ತೆಂದರೆ ಅದು ಈ ಕವಿತೆಯ ಒಂದೊಂದು ಅಕ್ಷರದಿಂದಲೂ ತೊಟ್ಟಿಕ್ಕುತ್ತದೆ.

ಅವರು ತಾಯಿಯ ಅಂತ್ಯಸಂಸ್ಕಾರ ಇನ್ನೂ ಮುಗಿಸಿದ್ದರಷ್ಟೆ, ಆಗಲೇ ಶಂಕರಾಚಾರ್ಯರ ಬಳಿಗೆ ಸದಾನಂದನೆಂಬ ವ್ಯಕ್ತಿಯೊಬ್ಬ ಬಂದು, ಭಗವದ್ ಗೋವಿಂದಪಾದರು ಅಮರಕಾಂತಕ್ಕೆ ಬಂದು ಅಸ್ವಸ್ಥರಾಗಿ ರುಗ್ಣಶಯ್ಯೆಯಲ್ಲಿರವ ಸಮಾಚಾರವನ್ನು ಹೇಳಿದ. ಅವರು ಇಹಲೋಕವನ್ನು ತ್ಯಜಿಸುವುದಕ್ಕೂ ಮೊದಲು ಶಂಕರಾಚಾರ್ಯರನ್ನು ಭೇಟಿಯಾಗಲು ಬಯಸುತ್ತಿದ್ದರು. ಹೀಗಾಗಿ ಆ ವ್ಯಕ್ತಿಯ ಮೂಲಕ ಅವರು ಕರೆಕಳುಹಿಸಿದ್ದರು. ಸುದ್ದಿ ತಿಳಿಯುತ್ತಲೇ ಶಂಕರಾಚಾರ್ಯರು ಅಮರಕಾಂತದೆಡೆಗೆ ದೌಡಾಯಿಸಿದರು. ಒಂದು ತಿಂಗಳಲ್ಲಿ ಬಹು ಕಷ್ಟದಿಂದ ಅಮರಕಾಂತಕ್ಕೆ ಹೋದರು. ಅಲ್ಲಿಗೆ ಹೋದಾಗ ಭಗವದ್ ಗೋವಿಂದಪಾದರು



ಮೂರ್ಛಾವಸ್ಥೆಯಲ್ಲಿದ್ದರು. ಆದರೆ ತಮ್ಮ ಪ್ರೀತಿಯ ಶಿಷ್ಯ ಶಂಕರರ ಧ್ವನಿ ಕೇಳುತ್ತಲೇ ಕಣ್ಣುಗಳನ್ನು ತೆರೆದರು. ಒಮ್ಮೆ ಶಕ್ತಿ ಮೀರಿ, ಆರೋಗ್ಯಕರ ಸ್ಥಿತಿಯಲ್ಲಿರುವಂತೆ ಎದ್ದು ನಿಂತರು. ಶಂಕರಾಚಾರ್ಯರನ್ನು ಎದೆಗಪ್ಪಿಕೊಂಡರು. ಶಂಕರಾಚಾರ್ಯರಿಗೆ ಅಂತಿಮ ಸಂದೇಶ ನೀಡಿದರು. ಅವರಿಗೆ ದಿಗ್ವಿಜಯ ಪ್ರಾರಂಭಿಸುವ ಆದೇಶವನ್ನು ಹಾಗೂ ಯಶಸ್ಸನ್ನು ಗಳಿಸುವಂತೆ ಆಶೀರ್ವದಿಸಿದರು. ನಂತರ 'ಓಂ'ಕಾರವನ್ನು ಉಚ್ಚರಿಸುತ್ತಾ ಇಹಲೋಕ ತ್ಯಜಿಸಿದರು. ಅವರ ಸ್ಥಾನದಲ್ಲಿ ಶಂಕರಾಚಾರ್ಯರೇ ಶಿಷ್ಯಸಮೂಹಕ್ಕೆ ಗುರುಗಳಾಗಿದ್ದರು.

* * * *

# ೮. ಜನ ಸಾಮಾನ್ಯರ ಸಾಕ್ಷಾತ್ಕಾರ

ಶಂಕರಾಚಾರ್ಯರು ಇಷ್ಟೊಂದು ದಿನಗಳಲ್ಲಿ ರಾಷ್ಟ್ರದ ಸಂಪೂರ್ಣ ಪರಿಸ್ಥಿತಿಯನ್ನು ಪೂರ್ಣವಾಗಿ ಅಧ್ಯಯನ ಮಾಡಿದ್ದರು. ಬಹುಪಾಲು ಭಾರತ ದೇಶದ ಸಂಚಾರವನ್ನು ಪೂರೈಸಿದ್ದರು. ಸಂಪೂರ್ಣ ಶಾಸ್ತ್ರಗಳನ್ನು ಅಧ್ಯಯನ ಮಾಡಿದ್ದರು. ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಯ ವರೆಗಿನ ಜನರ ವಿಚಾರಗಳೇನು, ಅವರ ಭಾವನೆಗಳೇನು ಹಾಗೂ ಅವರು ಬಯಸುವುದೇನು ಎಂಬ ಬಗ್ಗೆ ಅವರಿಗೆ ತಿಳಿದಿತ್ತು. ಮಗ ರೋಗಿಯಾದಾಗ ತಾಯಿಯ ಹೃದಯ ಚಡಪಡಿಸುತ್ತದೆ. ಅವಳಿಗೆ ವೇದನೆಯಂತೂ ಆಗುತ್ತದೆ. ಆದರೆ ಅದು ಯಾವ ರೋಗ, ಅದಕ್ಕೆ ಔಷಧಿ ಏನು ಎಂಬುದು ಅವಳಿಗೆ ತಿಳಿದಿಲ್ಲ. ವೈದ್ಯರಿಗೆ ರೋಗಿಯ ರೋಗದ ಲಕ್ಷಣ ಮತ್ತು ಚಿಕಿತ್ಸೆಯ ಬಗ್ಗೆ ಅರಿವಿರುತ್ತದೆ. ಆದರೆ ಅವರ ಮನಸ್ಸಿನಲ್ಲಿ ರೋಗಿಯ ಬಗ್ಗೆ ಯಾವುದೇ ಪ್ರೀತಿ ಇರುವುದಿಲ್ಲ, ಮನಸ್ಸಿನಲ್ಲಿ ಯಾವುದೇ ಸಂವೇದನೆ ಇರುವುದಿಲ್ಲ. ಅವರು ಉದಾಸೀನತೆ ಮತ್ತು ನಿರಾಸಕ್ತಿಯಿಂದ ರೋಗಿಗೆ ಚಿಕಿತ್ಸೆ ಮಾಡುತ್ತಾರೆ. ಶಂಕರಾಚಾರ್ಯರಲ್ಲಿ ತಮ್ಮ ರಾಷ್ಟ್ರ ಮತ್ತು ಸಮಾಜದ ಬಗ್ಗೆ ತಾಯಿಯಂತಹ ಸ್ನೇಹವಿತ್ತು, ಅಂತೆಯೇ ಬುದ್ಧಿವಂತ ವೈದ್ಯರಂತೆ ಶಾಸ್ತ್ರದ ಜ್ಞಾನವೂ ಇತ್ತು. ದೇಶದ ದುರ್ದೆಶೆಯನ್ನು ಕಂಡು ಅವರ ಮನಸ್ಸು ರೋದಿಸಿದಾಗ, ಮನಸ್ಸನ್ನು ಶಾಂತಗೊಳಿಸಿಕೊಳ್ಳಲು ಮತ್ತು ತೋಚಿದ್ದನ್ನು ಮಾಡಲು ಅವರು ಸಿದ್ಧರಾಗಲಿಲ್ಲ, ಬದಲಾಗಿ ಓರ್ವ ದಾರ್ಶನಿಕರಂತೆ ಈ ದುರ್ದೆಶೆಗೆ ಕಾರಣವನ್ನು ವಿವೇಚಿಸಿದರು, ವಿಷಯಗಳ ಯುಕ್ತಾ–ಯುಕ್ತತೆಗಳನ್ನು ಅರಿತರು. ರೋಗದ ಲಕ್ಷಣಗಳನ್ನು ತಿಳಿದರು. ಅನಂತರ ಯೋಗ್ಯ ಚಿಕಿತ್ಸೆಯನ್ನು ಮಾಡಿದರು. ಅವರು ಮಾತೃಸ್ನೇಹದಿಂದ ಉತ್ಪತ್ತಿಯಾದ ತನ್ಮಯತೆಯೊಂದಿಗೆ ಹಾಗೂ ಬುದ್ಧಿವಂತ ಮತ್ತು ಯೋಗ್ಯ ವೈದ್ಯರ ಅಧಿಕೃತ ಜ್ಞಾನ ಮತ್ತು ಆತ್ಮವಿಶ್ವಾಸದೊಂದಿಗೆ, ಸೇವಾಭಾವದೊಂದಿಗೆ ಸಮಾಜದ ಚಿಕಿತ್ಸೆ ಮಾಡಲು ನಿಶ್ಚಯಿಸಿದರು. ಅವರು ಇಡೀ ದೇಶದಲ್ಲಿ ಎರಡು ವಿಧದ ಭಿನ್ನಾಭಿಪ್ರಾಯಗಳು ಹರಡುತ್ತಿರುವುದನ್ನು ಗಮನಿಸಿದರು. ಮೊದಲನೆಯದಾಗಿ, ಅವೈದಿಕ ಮತ್ತು ಪುರಾತನ ಪರಂಪರೆಯನ್ನು ನಾಶಮಾಡುವ ಬೌದ್ಧ ಇತ್ಯಾದಿ ಧರ್ಮಗಳು; ಎರಡನೆಯದಾಗಿ, ಮೇಲೆ ತಿಳಿಸಿದ ಧರ್ಮಗಳಿಂದಾಗಿ ಪ್ರತಿಕ್ರಿಯೆಯ ರೂಪದಲ್ಲಿ ಅಥವಾ ವೈದಿಕ ಧರ್ಮದ ರಕ್ಷಣೆಗಾಗಿ ಹುಟ್ಟಿದ ಧರ್ಮ.



ಅಂತರರಾಷ್ಟ್ರೀಯ ಪ್ರವೃತ್ತಿಗಳು ಒಂದೆಡೆ ಅವರ ಮನಸ್ಸಿಗೆ ನೋವುಂಟುಮಾಡುತ್ತಿದ್ದರೆ, ಇನ್ನೊಂದೆಡೆ ರಾಷ್ಟ್ರೀಯ ವೃತ್ತಿಯ ಜನರೂ ಉತ್ತಮ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಳ್ಳದೆ ಏನಾದರೂ ಎಸಗುತ್ತಿದ್ದರು. ಅಲ್ಲದೆ ತಮ್ಮ–ತಮ್ಮ ತಮಟೆ ಹಿಡಿದು ತಮ್ಮ–ತಮ್ಮ ರಾಗವನಷ್ಟೇ ಆಲಾಪಿಸುತ್ತಿಲ್ಲ, ಪ್ರತಿಯಾಗಿ ತಮ್ಮ ರಾಗವಷ್ಟೇ ಕೇಳಿಸಬೇಕು, ಅದೇ ಮಧುರವೆಂದು ತಿಳಿದು ಮತ್ತೊಬ್ಬರ ಬಾಯಿ ಮುಚ್ಚಿಸುವಲ್ಲಿ ಹಾಗೂ ತಮ್ಮ ತಮಟೆ ಮುರಿಯುವಲ್ಲಿಯೂ ವ್ಯರ್ಥವಾಗಿಯೇ ತಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬ ಬಗ್ಗೆ ದುಃಖವಾಗುತ್ತಿತ್ತು. ಭಗವಾನ್ ಬುದ್ಧನಿಂದ ಹಿಡಿದು ಇದುವರೆಗೆ, ಸಾವಿರ ವರ್ಷದಿಂದ ಸಮಾಜದಲ್ಲಿರುವ ಸಂಸ್ಕಾರಗಳನ್ನು ಅವಹೇಳನ ಮಾಡುತ್ತಿದ್ದಾರೆ. ಇದ್ದಕ್ಕಿದ್ದಂತೆ ಸಂಪ್ರದಾಯಕ್ಕೆ ವಿರುದ್ಧವಾಗಿ ಸಾಗುವ ಪ್ರಯತ್ನವೆಸಗುತ್ತಾ ವೈದಿಕ ಯುಗವನ್ನು ತರುವ ಸ್ವರ್ಣ–ಸ್ವಪ್ನವನ್ನು ಕಾಣುತ್ತಿದ್ದಾರೆ, ಇನ್ನು ಕೆಲವರು ಈ ಸಂಸ್ಕಾರಗಳನ್ನೇ ಸರ್ವಸ್ವವೆಂದು ತಿಳಿದು ಗಂಗೆಯನ್ನು ಸಂಧಿಸುವ ಕೊಳಕು ನಾಲೆಯನ್ನೇ ಗಂಗೆಯೆಂದು ತಿಳಿದು ಅದರಲ್ಲಿಯೇ ಮುಳುಗೆದ್ದು ಪುಣ್ಯ–ಪ್ರಸಾದವನ್ನು ಲೂಟಿಮಾಡುವ ಭ್ರಮೆಯಲ್ಲಿ ಬಿದ್ದು ಆತ್ಮವಂಚನೆ ಮಾಡಿಕೊಳ್ಳುತ್ತಿದ್ದಾರೆ. ಅವರು ಮೊದಲು, ಯಾರಲ್ಲಿ ಈ ರಾಷ್ಟ್ರದ ಒಳಿತಿಗಾಗಿ ಕಲ್ಯಾಣ ಭಾವನೆ ಇತ್ತೋ, ಯಾರು ಋಷಿ–ಮುನಿಗಳಿಂದ ರಚಿಸಲ್ಪಟ್ಟ ವೈದಿಕ ಧರ್ಮದ ಪುನರುದ್ಧಾರವನ್ನು ಬಯಸುತ್ತಿದ್ದರೋ ಅಂತಹ ದ್ವಿತೀಯ ಶ್ರೇಣಿಯವರನ್ನು ಒಂದು ಮಾರ್ಗಕ್ಕೆ ತರಲು ನಿಶ್ಚಯಿಸಿದರು. ಅವರನ್ನು ಒಂದುಗೂಡಿಸಿ ಅವರಲ್ಲಿ ಏಕಸೂತ್ರದ ಭಾವನೆಯನ್ನು ಸೃಷ್ಟಿಸಬೇಕು. ಅನಂತರ ಇಂದು, ಯಾರು ಭ್ರಮೆಯಿಂದಾಗಿ ತಮ್ಮ ಪುರಾತನ ಪರಂಪರೆಯಿಂದ ದೂರವಾಗಿ ಅವರ ಅರಾಷ್ಟ್ರೀಯ ಪ್ರವೃತ್ತಿಗಳಿಗೆ ಬಲಿಯಾಗಿದ್ದಾರೋ, ಅಂತಹವರ ಅರಾಷ್ಟ್ರೀಯ ಪ್ರವೃತ್ತಿಯನ್ನು ದೂರಮಾಡಿ ಅವರನ್ನು ತಮ್ಮಲ್ಲಿ ಸೇರಿಸಿಕೊಳ್ಳಬೇಕೆಂದು ನಿಶ್ಚಯಿಸಿದರು. ಅವರ ಕಾರ್ಯಯೋಜನೆ ಸಿದ್ಧವಾಗಿತ್ತು. ಚಳವಳಿಯ ರೂಪರೇಷೆಗಳು ನಿಶ್ಚಿತಗೊಂಡಿದ್ದವು. ಒಮ್ಮೆ ಧ್ಯೇಯ ಮತ್ತು ಮಾರ್ಗ ನಿಶ್ಚಿತಗೊಂಡಾದ ಮೇಲೆ, ನಿಷ್ಠೆಯಿಂದ, ಶ್ರದ್ಧೆಯಿಂದ ಕಾರ್ಯಕೈಗೊಳ್ಳುವಂತಹವರಿಗೆ ಗುರಿಯೆಡೆಗೆ ಮುಂದುವರಿಯುವಲ್ಲಿ ತಡವಾಗುವುದಿಲ್ಲ. ಅವರ ಜೀವನ–ನೌಕೆ ಮತ್ತೆ ಯಾವುದೇ ಅನುಮಾನ–ಸಂದೇಹದ ಸುಳಿಗೆ ಸಿಲುಕುವುದಿಲ್ಲ ಹಾಗೂ ವಿರೋಧಿಗಳು ಎತ್ತುವ ಬಿರುಗಾಳಿಗೆ ತೂರಾಡುವುದಿಲ್ಲ. ಜ್ಞಾನಮಯ ಶ್ರದ್ಧೆಯ ಚುಕ್ಕಾಣಿ, ಸರ್ವಸುಳಿಗಳಿಂದಲೂ ಪಾರು ಮಾಡುತ್ತದೆ. ಆತ್ಮವಿಶ್ವಾಸದ ಹಾಯಿ, ಏಳುವ ಬಿರುಗಾಳಿಯಲ್ಲೂ ಅದರ ಗತಿಯನ್ನು ವೃದ್ಧಿಸುತ್ತದೆ.

ಇಡೀ ಭಾರತ ದೇಶದಲ್ಲಿ ಚಳಿವಳಿ ಪ್ರಾರಂಭಿಸುವುದಕ್ಕೂ ಮೊದಲು ತಮ್ಮ ಚಳವಳಿಯಲ್ಲಿ ತಮಗೆ ಸಹಕಾರ ನೀಡುವ ಸಂಗಾತಿಗಳನ್ನು ಸಿದ್ಧಪಡಿಸಬೇಕೆಂದು

ಶಂಕರಾಚಾರ್ಯರು ನಿರ್ಧರಿಸಿದರು. ಇದಕ್ಕೆ ಶ್ರೀ ಕಾಶಿಕ್ಷೇತ್ರದಂತಹ ಹೆಚ್ಚು ಉಪಯುಕ್ತ ಸ್ಥಳ ಇನ್ನಾವುದಿರಲು ಸಾಧ್ಯವಿತ್ತು? ಕಾಶಿ ಯುಗ–ಯುಗಾಂತರಗಳಿಂದ ಭಾರತದ ಸಾಂಸ್ಕೃತಿಕ ಕೇಂದ್ರವಾಗಿದೆ. ಭಾರತದ ಆತ್ಮವೇ ಕಾಶಿಯಲ್ಲಿ ವಾಸಮಾಡುತ್ತದೆಯೆಂದರೆ ಅತಿಶಯೋಕ್ತಿಯಲ್ಲ. ಕಾಶಿಯಲ್ಲಿ ಶ್ರೇಷ್ಠ ವಿದ್ವಾಂಸರ ಕೂಟವೇ ಕಲೆತಿರುತ್ತಿತ್ತು. ವಿದ್ಯಾರ್ಥಿಗಳು ಬಹುದೂರದಿಂದ ವಿದ್ಯಾಧ್ಯಯನಕ್ಕಾಗಿ ಇಲ್ಲಿಗೆ ಬರುತ್ತಿದ್ದರು. ಗುರುಗಳ ಆಶ್ರಯದಲ್ಲಿ ಹನ್ನೆರಡು–ಹದಿನೈದು ವರ್ಷಗಳಿದ್ದು ತಮ್ಮ–ತಮ್ಮ ಮನೆಗೆ ಮರಳಿ ಹೋಗುತ್ತಿದ್ದರು. ಒಬ್ಬ ದೂರದ ದಕ್ಷಿಣದಿಂದ ಬಂದರೆ, ಇನ್ನೊಬ್ಬ ಉತ್ತರದ ಕಾಶ್ಮೀರದಿಂದ ಬರುತ್ತಿದ್ದ. ಒಬ್ಬ ಥಾರ್ ಮರುಭೂಮಿಯನ್ನು ದಾಟಿ ಸೌವೀರದಿಂದ ಬಂದರೆ, ಇನ್ನೊಬ್ಬ ಪೂರ್ವದಿಂದ ಅನೇಕ ನದಿಗಳನ್ನು ದಾಟುತ್ತಾ ಪ್ರಾಗ್ಜ್ಯೋತಿಷದಿಂದ ಬರುತ್ತಿದ್ದ. ಬೇರೆ–ಬೇರೆ ಪ್ರಾಂತ್ಯಗಳಿಂದ ಬಂದ ಈ ಜನ ಇಲ್ಲಿ ತಮ್ಮ ಆಯುಸ್ಸಿನ ಅತ್ಯಂತ ಸಂಸ್ಕಾರಮಯ ವರ್ಷಗಳನ್ನು ಕಳೆಯುತ್ತಿದ್ದರು. ಎಲ್ಲರೂ ಓರ್ವ ಗುರುಗಳ ಅಧ್ಯಕ್ಷತೆಯಲ್ಲಿ ಸಹೋದರರಂತೆ ವಾಸಿಸುತ್ತಿದ್ದರು. ಜೊತೆ–ಜೊತೆಯಲ್ಲಿ ಕೂರುತ್ತಿದ್ದರು, ಏಳುತ್ತಿದ್ದರು, ಆಡುತ್ತಿದ್ದರು, ಊಟ ಮಾಡುತ್ತಿದ್ದರು ಮತ್ತು ನಿದ್ರಿಸುತ್ತಿದ್ದರು–ಒಂದಲ್ಲ, ಎರಡಲ್ಲ, ಇಡೀ ಇಪ್ಪತ್ತೈದು ವರ್ಷಗಳವರೆಗೆ! ಹೀಗಿರುವಾಗ ಇವರಲ್ಲಿ ಪ್ರೀತಿ ಯಾಕೆ ಹುಟ್ಟಬಾರದು? ಇಂತಹವರನ್ನು ನೋಡಿ ಭೇದ–ಭಾವನೆಗಳು ಹೆದರುತ್ತವೆ. ಭಿನ್ನತೆಗಳು ನಶಿಸಿ ಹೋಗುತ್ತವೆ. ಸಂಕುಚಿತ ಭಾವನೆಗಳು ತೊಲಗುತ್ತವೆ ಹಾಗೂ ಪ್ರಾಂತೀಯ ಭಾವನೆಗಳು ಸಮೀಪದಲ್ಲಿ ಸುಳಿಯಲಾರವು. ಈ ವಟು–ಸಂಪ್ರದಾಯದ ಪರಂಪರೆಯು ಇಡೀ ಭಾರತಕ್ಕೆ ಒಂದು ರಾಷ್ಟ್ರೀಯತೆಯ ಷರಾಯಿಯನ್ನು ತೊಡಿಸಿತ್ತು. ಅದನ್ನು ಒಂದೇ ವಿಚಾರ, ಒಂದೇ ಆಚಾರ ಮತ್ತು ಏಕತೆಯ ಸೂತ್ರದಲ್ಲಿ ಸೇರಿಸಿತ್ತು, ಸ್ವಾಮಿ ಶಂಕರಾಚಾರ್ಯರ ಕಾಲದಲ್ಲಿ ಈ ಪರಂಪರೆಯಂತೂ ಇತ್ತು. ಆದರೆ ಅಲ್ಪ ಪ್ರಮಾಣದಲ್ಲಿ ಕ್ಷೀಣಿಸಿತ್ತು. ಮತ್ತೆ ಅಲ್ಲಿಯೂ ವಿಭಿನ್ನ ಭಾವನೆಗಳನ್ನು ಪ್ರತಿಪಾದಿಸಲಾಗುತ್ತಿತ್ತು. ಸಂಪೂರ್ಣ ಶರೀರದಲ್ಲಿ ಹೃದಯದ ರಕ್ತವೇ ಹರಿಯುವುದು. ಹೀಗಾಗಿ ಅವರು ಪ್ರಪ್ರಥಮವಾಗಿ ಹೃದಯವನ್ನೇ ಶುದ್ಧಗೊಳಿಸಲು ನಿರ್ಧರಿಸಿದರು. ಅನಂತರ ಶುದ್ಧ ರಕ್ತ ಸುಗಮವಾಗಿ ಎಲ್ಲ ರಕ್ತನಾಳಗಳಿಗೆ ಮತ್ತು ಮೆದುಳಿಗೆ ಹರಿಯುಲು ಸಾಧ್ಯವಾಗುತ್ತದೆ, ಹಾಂ, ಒಂದು ವೇಳೆ ರಕ್ತನಾಳಗಳಲ್ಲಿ ತೊಂದರೆಗಳುಂಟಾದಲ್ಲಿ, ಅವುಗಳನ್ನು ಸರಿಪಡಿಸಬೇಕಾಗುವುದು. ಆದರೆ ಮೊದಲು ಹೃದಯದೆಡೆಗೇ ಗಮನಕೊಡಬೇಕಾದ ಅಗತ್ಯವಿದೆ. ಶುದ್ಧ ರಕ್ತವೇ ರಕ್ತನಾಳಗಳಿಗೆ ಪ್ರಾಣವನ್ನು ಕೊಡುತ್ತದೆ. ಶ್ರೀ ಶಂಕರಾಚಾರ್ಯರು ಎರಡೂ ಕೆಲಸಗಳನ್ನು ಮಾಡಿದರು. ಕಾಶಿ ಕ್ಷೇತ್ರದಲ್ಲಿ ತಮ್ಮ ಧರ್ಮವನ್ನು ಸ್ಥಾಪಿಸಿದರು, ಅಲ್ಲಿಂದ ಆವಾಗಮನದ ಪರಂಪರೆಯನ್ನು ಪುಷ್ಟೀಕರಿಸಿದರು.



ಶಂಕರಾಚಾರ್ಯರು ತಾವು ನಿರ್ಧರಿಸಿದಂತೆ ಭಗವದ್ ಗೋವಿಂದಪಾದರ ಶಿಷ್ಯರೊಂದಿಗೆ ವಾರಾಣಸಿಯಲ್ಲಿ ಬೀಡುಬಿಟ್ಟರು. ಭಗವತಿ ಭಾಗೀರಥಿಯ ತೀರದಲ್ಲಿ ಒಂದಲ್ಲ, ಹತ್ತು–ಹತ್ತು ಅಶ್ವಮೇಧ ನಡೆಯಿತು. ಭಾರತದ ಏಕಾಧಿಪತ್ಯ ಸಾಮ್ರಾಜ್ಯದ ಘೋಷಣೆಯಾಯಿತು. ಅಲ್ಲಿಯೇ ಅದೇ ದಶಾಶ್ವಮೇಧ ಘಾಟ್‌ನಲ್ಲಿ ಅವರು ಈ ಅಳಿಸಿಹೋಗುತ್ತಿರುವ ಸಾಮ್ರಾಜ್ಯಗಳು ಮತ್ತು ಭಾರತದ ಏಕತೆಯ ಪ್ರಶ್ನೆ ಬಗ್ಗೆ ಅವಶ್ಯವಾಗಿ ವಿಚಾರಮಾಡಿರಬಹುದು. ಅಲ್ಲಿ ಅವರು ಒಂದು ವೇಳೆ, ಸಾಂಸ್ಕೃತಿಕ ಏಕತೆಯಿಲ್ಲದೆ ಹಾಗೂ ವಿಚಾರಗಳಿಲ್ಲದೆ ಏಕಾಧಿಪತ್ಯ ಸಾಮ್ರಾಜ್ಯದ ರಾಜಕೀಯ ಒಗ್ಗಟ್ಟು ಸ್ಥಿರಗೊಳ್ಳಲಾರದು ಎಂದು ನಿರ್ಣಯಸಿದ್ದರೆ ಆಶ್ಚರ್ಯವೇನು! ರಾಜಕೀಯ ಏಕತೆಯ ಮೂಲದಲ್ಲಿ ಸಾಂಸ್ಕೃತಿಕ ಏಕತೆ ಬೇಕು. ಸಾಂಸ್ಕೃತಿಕ ಏಕತೆ ಸ್ಥಾಪನೆಗೊಂಡರೆ, ರಾಜಕೀಯ ಏಕತೆಗೆ ಪ್ರಯತ್ನಿಸುವ ವೀರರು ಜನ್ಮ ತಾಳುತ್ತಾರೆ. ಸಾಂಸ್ಕೃತಿಕ ಏಕತೆಯಿರುವಂತೆ ರಾಜಕೀಯ ಭಿನ್ನತೆಗಳು ರಾಷ್ಟ್ರದ ಕತ್ತುಹಿಚುಕಲಾರವು. ಅದರ ಶರೀರವನ್ನು ದುರ್ಬಲಗೊಳಿಸಬಹುದು ಆದರೆ ಆತ್ಮವನ್ನು ನಾಶಗೊಳಿಸಲು ಸಾಧ್ಯವಿಲ್ಲ. ಒಂದು ವೇಳೆ ಆತ್ಮ ಬಲಾಢ್ಯವಾಗಿದ್ದರೆ ಅದು ಶರೀರದ ಬಗ್ಗೆ ಚಿಂತಿಸುವುದು. ಅಲ್ಲಿ ಕುಳಿತಿರುವಂತೆ ಮಾಂಧಾತಾ, ಭರತ, ರಘು, ರಾಮ, ಯುಧಿಷ್ಠಿರ, ಕೌಟಿಲ್ಯ, ಚಂದ್ರಗುಪ್ತ, ಪುಷ್ಯಮಿತ್ರ, ಶಾತಕರ್ಣಿ, ನವನಾಗ, ಭಾರಶಿವ, ವಾಕಾಟಕ, ಪ್ರವರಸೇನ, ಸಮುದ್ರಗುಪ್ತ, ಚಂದ್ರಗುಪ್ತ ವಿಕ್ರಮಾದಿತ್ಯ ಮುಂತಾದವರ ದಿಗ್ವಿಜಯದ ದೃಶ್ಯಗಳು ಒಂದಾದ ಮೇಲೆ ಒಂದರಂತೆ ಅವರ ಕಣ್ಣುಗಳೆದುರು ಚಲನಚಿತ್ರದಂತೆ ಮೂಡಿದವು. ಅವರಂತಹ ಚತುರಂತ, ಏಕರಾಷ್ಟ್ರ ಸಾಮ್ರಾಜ್ಯವನ್ನು ಸ್ಥಾಪಿಸುವ ಆದರ್ಶ ಅವರೆದುರೂ ಬಂದಿತು. ಆದರೆ ಮೇಲೆ ತಿಳಿಸಿದ ಸಾಮ್ರಾಜ್ಯಗಳಿಗಿಂತ ಹೆಚ್ಚು ಬಲಶಾಲಿಯಾದ, ವ್ಯಾಪಕವಾದ ಮತ್ತು ಪ್ರಭಾವಿ ಸಾಮ್ಯಾಜ್ಯಗಳು ಬಂದವು. ಅವರು ಮನಸ್ಸಿನಲ್ಲಿಯೇ ಭೂಮಿಗೆ ಬದಲು ವಿಚಾರಗಳ ದೃಷ್ಟಿಯಿಂದ ಏಕರಾಷ್ಟ್ರತ್ವವನ್ನು ಪಡೆಯುವ ಸಂಕಲ್ಪವನ್ನು ಪುನರುಚ್ಚರಿಸಿದರು. ಜಾಹ್ನವಿ ಕಲ–ಕಲ ಹರಿಯುತ್ತಾ ಅವರನ್ನು ಸಮರ್ಥಿಸಿದಳು. ಅವಳ ಅಲೆಗಳು ಕುಣಿದು–ಕುಣಿದು ಅವರ ಈ ಶುಭ ಸಂಕಲ್ಪಕ್ಕೆ ಅವರನ್ನು ಅಭಿನಂದಿಸಲು ಪ್ರಯತ್ನಿಸಿದಳು. ಪುಣ್ಯ ವರ್ಷಧಾರೆಯ ಸ್ವಚ್ಛ ಜಲರಾಶಿಯು ಅವರನ್ನು ಮೀಯಲು ಆಹ್ವಾನಿಸಿತು. ಅದು ಅವರಲ್ಲಿ ಭಗೀರಥನ ದಣಿವಿರದ ಶ್ರಮವನ್ನು ಬಿತ್ತಲು ಬಯಸುವಂತೆ ತೋರುತ್ತಿತ್ತು. ಆ ಸಮಸ್ತ ಋಷಿಗಳ ತೇಜಸ್ಸನ್ನು ತುಂಬಲು ಬಯಸಿತು. ಆದ್ದರಿಂದ ಬಹುಶಃ ಗಂಗಾ ಜಲದಲ್ಲಿ ಪವಿತ್ರತೆಯಿದೆ, ಪಾಪಿಗಳನ್ನು ಪಾರುಮಾಡುವ ಶಕ್ತಿಯಿದೆ, ಪುಣ್ಯದ ಕಾರ್ಯ ಮಾಡುವ ಸಾಮರ್ಥ್ಯವಿದೆ. ಶಂಕರಾಚಾರ್ಯರು ಸ್ನಾನ ಮಾಡಿ ಹೊರಟಾಗ ಅವರ ತೇಜಸ್ಸು ದ್ವಿಗುಣಗೊಂಡಿತ್ತು. ಅವರ ಮನಸ್ಸಿನ ದೃಢ ನಿಶ್ಚಯ ತನ್ನ ಸಂಪೂರ್ಣ ತೇಜಸ್ಸಿನೊಂದಿಗೆ ಮೂಡಿದಂತೆ ತೋರುತ್ತಿತ್ತು. ಅವರಿಗೆ ತಮ್ಮ ವಿಚಾರ–ಅಭಿಪ್ರಾಯಗಳ ಪ್ರತಿಬಿಂಬ ಗಂಗೆಯಲ್ಲಿ ಕಾಣಿಸಿತು. ತಮ್ಮ ಆಧ್ಯಾತ್ಮಿಕ

ಜಗತ್ತಿನ ಅಭಿವ್ಯಕ್ತಿ ಗಂಗೆಯ ರೂಪದಲ್ಲಿ ಅವರೆದುರಿಗಿತ್ತು. ಜಗತ್ತಿನಂತೆಯೇ ಗಂಗೆಯ ಜಲ ಎದುರಿಗೆ ಓಡಿಹೋಗುತ್ತಿತ್ತು. ಪ್ರತಿ ಕ್ಷಣವೂ ಪರಿವರ್ತನೆಯ ಗುಣ ಹೊಂದಿದ್ದಾಗ್ಯೂ ಅದೆಷ್ಟು ಅಭಿನ್ನತೆ, ಅದೆಷ್ಟು ಕ್ಷಣಿಕ! ಆದರೂ ಗಂಗೆ ಅದೆಷ್ಟು ಶಾಂತಳಾಗಿ ಹರಿಯುತ್ತಿದ್ದಳು. ಅನೇಕ ಜಲಕಣಗಳ ಸಮೂಹ ಎದುರಿಗೆ ಬಂದು, ಕ್ಷಣಕಾಲ ಆಟವಾಡುತ್ತದೆ, ಮತ್ತೆ ಮುಂದುವರಿಯುತ್ತಾ ಸಾಗುತ್ತದೆ. ಈಗ ಅದರ ಜಾಗವನ್ನು ಬೇರೆ ಜಲಕಣಗಳು ಹಿಡಿಯುತ್ತವೆ. ಇವುಗಳ ಅಸ್ತಿತ್ವ ಮೊದಲ ಜಲ ಕಣಗಳಿಗಿಂತ ಭಿನ್ನವಾಗಿರುತ್ತದೆ. ಆದರೆ ಜೀವನದಲ್ಲಿ ಸಮಾನತೆಯಿರುತ್ತದೆ, ಅವನ್ನೇ ಹಿಂಬಾಲಿಸುವ ಇಚ್ಛೆಯಿರುತ್ತದೆ. ಮನದಲ್ಲಿ ಇವುಗಳೊಂದಿಗೇ ಕೂಡಿಕೊಂಡು, ಅದೇ ಪರಂಪರೆಯಲ್ಲಿ, ಅದೇ ರೀತಿಯಲ್ಲಿ ಸಾಗರಕ್ಕೆ ಹೋಗಿ ಸೇರುವ ಆಕಾಂಕ್ಷೆ ಇರುತ್ತದೆ. ಆದ್ದರಿಂದ ಕಾಶಿಯ ಗಂಗೆ ಮತ್ತು ಹರಿದ್ವಾರದ ಗಂಗೆ ಒಂದೇ. ಎರಡನ್ನೂ ಯಾರು ತಾನೇ ಬೇರೆ ಎಂದು ಹೇಳುತ್ತಾರೆ? ಅವುಗಳಲ್ಲಿ ಎಷ್ಟೊಂದು ಭಿನ್ನತೆಯಿದೆ, ಆದರೂ ಅವು ಸಮಾನವಾಗಿವೆ, ಅವುಗಳ ಹರಿವು ಸಮಾನವಾಗಿದೆ, ಧ್ಯೇಯ ಒಂದೇ ಆಗಿದೆ, ಪುಣ್ಯದಾಯಿನಿ ಮತ್ತು ಪಾಪನಾಶಿನಿ ಶಕ್ತಿಯೂ ಸಮಾನವಾಗಿದೆ. ಇದೇ ಭೇದದಲ್ಲಿ ಅಭೇದ, ಭಿನ್ನತೆಯಲ್ಲಿ ಅಭಿನ್ನತೆ, ವೈವಿಧ್ಯದಲ್ಲಿ ಏಕತೆ–ಇದನ್ನೇ ಅವರು ಜಗತ್ತಿಗೆ ಹೇಳಲು ಬಯಸುತ್ತಿದ್ದರು. ಗಂಗೆಯಲ್ಲೇಳುವ ಸುಳಿ ಮತ್ತು ಅಲೆಗಳು ನಿಜವಲ್ಲ, ಅವು ವಾಯುವಿನಿಂದ ಆಗುತ್ತವೆ. ಅವು ಮೇಲ್ನೋಟಕ್ಕೆ ಮಾತ್ರ, ಅವು ಮಿಥ್ಯೆ, ಶಾಶ್ವತವಲ್ಲ ನಶ್ವರ, ಮಿಥ್ಯೆ, ಕಪಟ ಮತ್ತು ಮಾಯೆ! ಹಾಂ, ನಾವಿಕನಂತೂ ಸುಳಿಯಿಂದ ಪಾರಾಗಲೇಬೇಕಾಗುತ್ತದೆ. ಗಂಗೆ, ಗೋದಾವರಿಯಲ್ಲಿ ಪರಿವರ್ತನೆಯ ಪ್ರವಾಹ ಹರಿಯುವಂತೆ ರಾಷ್ಟ್ರದ ಸ್ವರೂಪವೂ ಪರಿವರ್ತನಾಶೀಲವಾಗಿದೆ. ಈ ಪರಿವರ್ತನೆಯನ್ನು ತಡೆಯಲು ಬಯಸಿದರೆ, ರಾಷ್ಟ್ರವನ್ನು ನಿಂತ ನೀರಿನಂತೆ ಕೊಳಕು ಮತ್ತು ಕೀಟಾಣುಗಳಿಂದ ಪರಿಪೂರ್ಣಗೊಳಿಸಿದಂತಾಗುತ್ತದೆ. ಅಂತೆಯೇ ಇದರ ಹರಿವಿನೊಂದಿಗೆ ಸಂಬಂಧ ವಿಚ್ಛೇದನೆಗೊಂಡರೆ, ಇದರ ಜೀವನ ರಸವನ್ನು ಶುಷ್ಕಗೊಳಿಸುವ ಪ್ರಯತ್ನವಾಗುತ್ತದೆ. ಹಿಂದೂ ರಾಷ್ಟ್ರ ಮತ್ತು ಹಿಂದೂ ಧರ್ಮದ ಸನಾತನ ಸ್ರೋತ ಅದೇ ವಿಧದಲ್ಲಿ ನಿರಂತರವಾಗಿ ಹರಿಯುತ್ತಿರಬೇಕು, ಅದಕ್ಕೆ ಎಲ್ಲಿಯೂ ತಡೆಯುಂಟಗಬಾರದು, ಪರಿವರ್ತನೆ ನಿರಂತರವಾಗಿ ಘಟಿಸುತ್ತಲೇ ಇರುಬೇಕು ಎಂದು ಅವರು ಬಯಸುತ್ತಿದ್ದರು. ಆದರೆ ಆ ಬಾಹ್ಯ ಹೆಸರು–ರೂಪಾತ್ಮಕ ಪರಿವರ್ತನೆಗಳ ಮರೆಯಲ್ಲಿ ಸ್ಥಿರ ಸತ್ಯವನ್ನು ಮತ್ತು ರಾಷ್ಟ್ರದ ವಾಸ್ತವಿಕ ಆತ್ಮದ ದರ್ಶನವನ್ನು ಮಾಡಲು ಅವರಿಗೆ ಸಾಧ್ಯವಾಯಿತು. ಈ ಸಂದರ್ಭದಲ್ಲಿ ಅವರು ಗಂಗಾ ಸ್ತೋತ್ರವನ್ನು ರಚಿಸಿದರು. ಇದು ಅವರ ಭಾವನೆಗಳ ಸ್ಪಷ್ಟ ಅಭಿವ್ಯಕ್ತಿಯಾಗಿದೆ.

ಶಂಕರಾಚಾರ್ಯರು ಕೆಲವು ಸಮಯದವರೆಗೆ ಕಾಶಿಯಲ್ಲಿದ್ದರು. ಅಲ್ಲಿ



ಅವರ ಪ್ರತಿಯೊಂದು ಕ್ಷಣವೂ ಗುರಿಯ ಕ್ಷೇತ್ರವನ್ನು ಸಿದ್ಧಪಡಿಸುವಲ್ಲಿ ಕಳೆದುಹೋಗುತ್ತಿತ್ತು. ಅವರು ತಮ್ಮ ಸುತ್ತ–ಮುತ್ತ ತಮ್ಮಂತೆಯೇ ವಿಚಾರಮಾಡುವ ಹಾಗೂ ತಮ್ಮ ಹಾಗೇಯೇ ಆ ವಿಚಾರಗಳನ್ನು ಸತ್ಯಸೃಷ್ಟಿಯಲ್ಲಿ ಮಾರ್ಪಾಟು ಮಾಡುವ ವ್ರತ ಕೈಗೊಳ್ಳುವಂತಹ ದೃಢಚಿತ್ತದ ವ್ಯಕ್ತಿಗಳನ್ನು ಕಲೆಹಾಕಲು ಪ್ರಾರಂಭಿಸಿದರು. ಅವರ ಶಿಷ್ಯಮಂಡಳಿ ಕ್ರಮೇಣ ಹೆಚ್ಚುತ್ತಾ ಹೋಯಿತು. ಅವರಲ್ಲಿ ಪದ್ಮಪಾದನಿಗೆ ಶಂಕರಾಚಾರ್ಯರ ಬಗ್ಗೆ ತುಂಬ ಶ್ರದ್ಧಾ–ಭಕ್ತಿಯಿತ್ತು. ಈ ಶ್ರದ್ಧಾ–ಭಕ್ತಿಯ ಬಲದಿಂದ ಪದ್ಮಪಾದ, ಗುರುಗಳ ಕರೆಗೆ ಗಂಗೆಯಲ್ಲಿ ಬೆತ್ತಲೆ ಕಾಲುಗಳಲ್ಲಿ ಪ್ರವೇಶಿಸಿದ. ಅಗಾಧ ಜಲರಾಶಿಯಲ್ಲಿ ಹೆಜ್ಜೆ–ಹೆಜ್ಜೆಗೂ ಪದ್ಮ ಪುಷ್ಪಗಳು ಸಿಗುತ್ತಾ ಹೋದವು. ಪದ್ಮಪಾದ ಅವುಗಳ ಮೇಲೆ ಹೆಜ್ಜೆಗಳನ್ನಿಡುತ್ತಾ ಆನಂದದಿಂದ ಗಂಗೆಯನ್ನು ದಾಟಿದ. ಆದ್ದರಿಂದಲೇ ಅವನಿಗೆ ಪದ್ಮಪಾದನೆಂದು ನಾಮಕರಣ ಮಾಡಲಾಯಿತೆಂದು ಹೇಳುತ್ತಾರೆ. ತಮ್ಮ ಗುರಿ ಮತ್ತು ತಮ್ಮ ನಾಯಕರಲ್ಲಿ ಶ್ರದ್ಧೆ ಇಟ್ಟು ನಾಯಕರ ಆದೇಶ ಸಿಕ್ಕಿದೊಡನೆ ಹಿಂದೆ–ಮುಂದೆ ನೋಡದೆ ಓಡಿ ಬರುವವರನ್ನು ಯವುದೇ ಕಷ್ಟಗಳು, ವಿಘ್ನಗಳು ತಡೆಯಲಾರವು. ಯಾರಿಗೆ ಶ್ರದ್ಧೆಯ ಆಸರೆ ಇರುತ್ತದೆಯೋ ಅವರನ್ನು ಯಾರು ತಾನೇ ಮುಳುಗಿಸಲು ಸಾಧ್ಯ? ಅಂತಹವರಿಗೆ ಮಾರ್ಗದಲ್ಲಿ ಮುಳ್ಳುಗಳು ಸಿಗುವುದಿಲ್ಲ, ಮಾರ್ಗದ ಶೂಲಗಳೂ ಹೂವಾಗಿ ಪರಿವರ್ತನೆಗೊಳ್ಳುತ್ತವೆ. ವಿಪತ್ತುಗಳನ್ನು ದೊಡ್ಡದಾಗಿ ಮಾಡುವ ಶ್ರದ್ಧಾಹೀನರು ಮತ್ತು ಸಂಶಯಪಡುವ ವ್ಯಕ್ತಿಗಳ ಮಾರ್ಗದಲ್ಲಿ ಸದಾ ಅಲಂಘ್ಯ ಪರ್ವತ ಮತ್ತು ಅಸೀಮ ಸಾಗರವಿರುತ್ತದೆ. ಯಾಕೆಂದರೆ ಅವರ ಗಮನ ಅವರ ಗುರಿಯೆಡೆಗಿರದೆ ಅವರ ಪಾದಗಳೆಡೆಗಿರುತ್ತದೆ. ಅವರ ಮನಸ್ಸಿನಲ್ಲಿ ತಮ್ಮ ಧ್ಯೇಯ–ದೇವರ ಧ್ಯಾನವಿರದೆ, ಕಾಲ್ಪನಿಕ ಕಷ್ಟಗಳ ದಾನವರು ಬಾಯಿ ತೆರೆದುಕೊಂಡು ಅವರೆಡೆಗೇ ಸದಾ ಓಡಿಬರುತ್ತಿರುವಂತೆ ಕಾಣಿಸುತ್ತದೆ.

ಪದ್ಮಪಾದನಷ್ಟೇ ಅಲ್ಲ, ಇನ್ನೂ ಅನೇಕ ಶಿಷ್ಯರು ಅವರನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದರು. ಅವರ ಒಂದು ಸಂಕೇತಕ್ಕೆ ತಮ್ಮ ಜೀವನವನ್ನೇ ಅರ್ಪಿಸುವುದನ್ನು ತಮ್ಮ ಅದೃಷ್ಟವೆಂದು ತಿಳಿಯುತ್ತಿದ್ದರು. ವೇದಾಂತದಂತಹ ನೀರಸ ವಿಷಯವನ್ನು ಪ್ರತಿಪಾದಿಸುವ ಆಚಾರ್ಯ ಶಂಕರರಲ್ಲಿ ಅದೆಷ್ಟು ಆತ್ಮೀಯತೆ ಇತ್ತೆಂಬುದು ಅವರ ಶಿಷ್ಯಮಂಡಳಿಗೆ ತಿಳಿದಿತ್ತು. ಅವರೆಂದೂ ಗುರುಗಳ ದರ್ಪವನ್ನು ತೋರಿಸಲಿಲ್ಲ. ಪ್ರತಿಯಾಗಿ ಸಮಯಬಂದಾಗ ಅವರು ತಮ್ಮ ಶಿಷ್ಯರ ಸೇವೆ–ಶುಶ್ರೂಷೆಯನ್ನು ಮಾಡಿದರು. ಕುಷ್ಠ ರೋಗ ಬಂದಾಗ ಅವರು ಉದಂಕನ ಸೇವೆ ಮಾಡಿದರು. ತಮ್ಮ ಸೇವೆಯಿಂದ ಅವನನ್ನು ಆ ಭೀಷಣ ರೋಗದಿಂದ ಮುಕ್ತಗೊಳಿಸಿದರು. ಹಸ್ತಾಮಲಕ ಅವರ ಆತ್ಮೀಯತೆಯಿಂದಾಗಿಯೇ ತನ್ನ ಅಶಾಂತ ಮನಃಸ್ಥಿತಿಯನ್ನು ತ್ಯಜಿಸಿ ಗುಣಮುಖನಾದ. ತಮ್ಮ ಶಿಷ್ಯರೊಂದಿಗೆ ಅವರ ಸಂಬಂಧ

ಗುರು–ಶಿಷ್ಯರ ಸಂಬಂಧದಂತಿರದೆ ಸಹೋದ್ಯೋಗಿಗಳಂತಿತ್ತು. ಎಲ್ಲರೂ ಒಂದೇ ಮಾರ್ಗದ ಪಯಣಿಗರಾಗಿದ್ದರು. ಇಂಥ ಪ್ರೀತಿ–ಪ್ರೇಮ ಮತ್ತು ಹೃದಯ ವೈಶ್ಯಾಲದಿಂದಾಗಿಯೇ ಅವರ ಸುತ್ತ ಮುತ್ತ ಅತ್ಯಂತ ಶ್ರದ್ಧಾಳುಗಳು ಕಲೆತರು; ಅವರ ಜೀವನ ಮತ್ತು ಧ್ಯೇಯದೊಂದಿಗೆ ಸಮಾನಮನಸ್ಕರ ಸಮೂಹ ಏಕತ್ರಗೊಂಡಿತ್ತು. ಅವರು ಈ ಬಲದಿಂದಲೇ ಭವಿಷ್ಯದಲ್ಲಿ ತಮ್ಮ ಧರ್ಮ ಪ್ರಚಾರದ ಕಾರ್ಯವನ್ನು ಅತ್ಯಂತ ಸರಳವಾಗಿ ಮಾಡಲು ಸಾಧ್ಯವಾಯಿತು.

ಅವರು ಇಲ್ಲಿದ್ದು ಭಕ್ತಿಭಾವದಿಂದ ಕೂಡಿದ ಕೆಲವು ಕೃತಿಗಳನ್ನು ರಚಿಸಿದರು. 'ಪ್ರಸ್ಥಾನ ತ್ರಯಿ'ಯ ಬಗ್ಗೆಯಂತೂ ಅವರ ಭಾಷ್ಯ ಈ ಮೊದಲೇ ಪ್ರಸಿದ್ಧವಾಗಿತ್ತು. ಅವರ ಭಾಷ್ಯದ ಬಗ್ಗೆ ಕಾಶಿಯ ಪಂಡಿತರಲ್ಲಿ ಸಾಕಷ್ಟು ಚರ್ಚೆಯಾಯಿತು. ಕಮಲ ತಾನು ಅರಳುವ ಬಗ್ಗೆ ಎಂದೂ ಡಂಗುರ ಸಾರುವುದಿಲ್ಲ, ಎಲ್ಲೂ ಜಾಹೀರಾತು ಹೊರಡಿಸುವುದಿಲ್ಲ, ಅದರ ಕೆಲಸ ಅರಳುವುದು. ದುಂಬಿಗಳು ತಾವೇ ಅದರ ಸುತ್ತ–ಮುತ್ತ ಸುತ್ತುತ್ತವೆ. ಮಹಾಪುರುಷರಿಗೂ ತಮ್ಮ ಹೆಸರಿನ ಬಗ್ಗೆ ಡಂಗುರ ಹೊಡೆಸಿಕೊಳ್ಳಬೇಕಾಗುವುದಿಲ್ಲ. ಅವರು ಕಾರ್ಯಕ್ಷೇತ್ರಕ್ಕಿಳಿಯುತ್ತಾರೆ. ಅವರ ಸಹೋದ್ಯೋಗಿಗಳು ಮತ್ತು ವಿರೋಧಿಗಳು ತಮ್ಮಷ್ಟಕ್ಕೇ ತಾವೇ ಅವರ ಸುತ್ತ–ಮುತ್ತ ಕಲೆಯುತ್ತಾರೆ. ಶಂಕರಾಚಾರ್ಯರ ಸುತ್ತ–ಮುತ್ತಲೂ ಪಂಡಿತರ ಗುಂಪು ಕಲೆಯಿತು. ಒಬ್ಬರು ಅವರೊಂದಿಗೆ ಶಾಸ್ತ್ರದ ಬಗ್ಗೆ ಚರ್ಚಿಸಲು ಬಂದರೆ, ಇನ್ನೊಬ್ಬರು ಅವರ ಕಾರ್ಯದಲ್ಲಿ ಸಹಕರಿಸಲು ಬರುತ್ತಿದ್ದರು. ಒಬ್ಬರು ಕುತೂಹಲದಿಂದ ಬಂದರೆ, ಇನ್ನೊಬ್ಬರು ಕುತರ್ಕದ ಕೆಸರಿನಿಂದ ಅವರನ್ನು ಕಳಂಕಿತಗೊಳಿಸುವ ಬಯಕೆಯಿಂದ ಬರುತ್ತಿದ್ದರು. ಆದರೆ ಬಂದವರೆಲ್ಲಾ ಆಚಾರ್ಯರಿಗೆ ಆಪ್ತರಾಗಿಯೇ ಹೋಗುತ್ತಿದ್ದರು. ಶ್ರೇಷ್ಠ ವಿದ್ವಾಂಸರು ತಲೆ ಎತ್ತಿಕೊಂಡು ಬರುತ್ತಿದ್ದರು, ಆದರೆ ಮರಳಿ ಹೋಗುವಾಗ ಕಣ್ಣುಗಳನ್ನು ತಗ್ಗಿಸಿಕೊಂಡು ಹೋಗುತ್ತಿದ್ದರು. ಶಂಕರಾಚಾರ್ಯರನ್ನು ನಿಂದಿಸಲು ಬರುತ್ತಿದ್ದರು, ಆದರೆ ಸ್ತುತಿ ಮಾಡುತ್ತಾ ಮರಳಿ ಹೋಗುತ್ತಿದ್ದರು. ಬಂದವರೆನ್ನೆಲ್ಲಾ ಅವರು ತಮ್ಮ ಬಳಿ ಪ್ರೀತಿಯಿಂದ ಕೂರಿಸಿಕೊಳ್ಳುತ್ತಿದ್ದರು. ಅವರ ಮನಸ್ಸಿನ ವಿಚಾರಗಳನ್ನು ಕೇಳಿ, ಅನಂತರ ನಿರಹಂಕಾರದ ಭಾವನೆಯಿಂದ ಅವನ ಸಂದೇಹಗಳನ್ನು ಪರಿಹರಿಸುತ್ತಿದ್ದರು. ಕುದಿಯುವ ಹಾಲಿಗೆ ತಣ್ಣನೆ ನೀರನ್ನು ಚಿಮುಕಿಸುವುದರಿಂದ ಶಾಂತವಾಗುವಂತೆ, ವಿರೋಧಿಗಳ ವಿರೋಧ ಅವರ ಸಿಹಿಮಾತುಗಳಿಂದ ತಣ್ಣಗಾಗುತ್ತಿತ್ತು. ಜ್ಞಾನಿಗಳಲ್ಲಿ ಶ್ರೇಷ್ಠರಾದ, ಸರ್ವ ವೇದ–ವೇದಾಂಗದಲ್ಲಿ ಪರಮ ವಿದ್ವಾಂಸರಾದ ಶಂಕರಾಚಾರ್ಯರು ಜನರನ್ನು ತಮ್ಮ ಜ್ಞಾನದಿಂದಲ್ಲ, ತಮ್ಮ ಪ್ರೀತಿಯಿಂದ ಗೆದ್ದರು; ಅವರು ಜನರ ಮೆದುಳನಲ್ಲ, ಅವರ ಹೃದಯವನ್ನು ಗೆದ್ದರು. ಹೃದಯವನ್ನು ಗೆದ್ದಾದ ಅನಂತರ ಮೆದುಳು ತನ್ನಷ್ಟಕ್ಕೆ ತಾನೇ ವಶವಾಗುತ್ತದೆ, ಯಾಕೆಂದರೆ



ಮೆದುಳು ಹೃದಯದ ದಾಸ.

ಎಲ್ಲೆಡೆಯಲ್ಲೂ ಶಂಕರಾಚಾರ್ಯರ ಯಶಸ್ಸು–ಕೀರ್ತಿ ವ್ಯಾಪಿಸುತ್ತಿತ್ತು. ಅಂತೆಯೇ ಅವರ ಶಿಷ್ಯ–ಮಂಡಳಿಯೂ ವೃದ್ಧಿಸುತ್ತಿತ್ತು.

"ಈಗ ಇನ್ನೂ ಎಷ್ಟು ದಿನಗಳವರೆಗೆ ಕಾಶಿಯಲ್ಲಿಯೇ ಕೂತಿರೋಣ, ಆಚಾರ್ಯರೇ" ಅದೊಂದು ದಿನ ಚಿತ್ಸುಖ ಹೇಳಿದ.

"ಇಡೀ ಭಾರತದಲ್ಲಿ ಕೆಲಸ ಮಾಡಬೇಕಾಗಿದೆ, ಎಲ್ಲೆಡೆಯಲ್ಲಿಯೂ ಧಾರ್ಮಿಕ ಅನಾಚರಗಳ ಸುದ್ದಿ ಹೆಚ್ಚುತ್ತಿವೆ".

"ವಿಷ್ಣು, ಧೈರ್ಯತಾಳು!" ಶಂಕರಾಚಾರ್ಯರು ಶಾಂತಚಿತ್ತದಿಂದ ಹೇಳಿದರು. ಅವರು ಚಿತ್ಸುಖನನ್ನು ಈಗಲೂ ವಿಷ್ಣು ಎಂದೇ ಹೇಳುತ್ತಿದ್ದರು.

ಶಂಕರಾಚಾರ್ಯರು ಹೇಳಿದರು, "ಚಳವಳಿಗೆ ಯೋಗ್ಯವಾದ ಶಕ್ತಿಯನ್ನು ಒಟ್ಟುಮಾಡಿಕೊಳ್ಳದೇ ಚಳವಳಿಯನ್ನು ಪ್ರಾರಂಭಿಸಿ ಅಪಯಶಸ್ಸು ಮತ್ತು ನಿರಾಸೆಯನ್ನು ಖರೀದಿಸಬೇಕೆಂದಿದ್ದೀಯಾ? ಇಂದು ಪ್ರತಿಯೊಬ್ಬನೂ ತಮ್ಮ ಧರ್ಮ ಅಖಿಲ ಭಾರತೀಯ ಮಟ್ಟಕ್ಕೆ ಹೋಗಬೇಕೆಂದು ಬಯಸುತ್ತಾನೆ. ಈ ಇಚ್ಛೆ ಸಹಜವೂ ಹೌದು. ನಮ್ಮ ವಿಚಾರಗಳ ಲಾಭವನ್ನು ನಮ್ಮ ದೇಶ–ಬಾಂಧವರಿಗೇಕೆ ಕೊಡಬಾರದು? ಅವರನ್ನು ಸೀಮಿತದಲ್ಲಿ, ಸಂಕುಚಿತದಲ್ಲಿಟ್ಟುಕೊಳ್ಳುವ ಆವಶ್ಯಕತೆಯೇನಿದೆ? ಆದರೆ ಅವರ ಸಿದ್ಧಾಂತಗಳು ಎಲ್ಲೆಡೆಯಲ್ಲೂ ವ್ಯಾಪಿಸಲು ಸಾಧ್ಯವಿಲ್ಲ. ಅವರ ಈ ಅಪಯಶಸ್ಸಿಗೆ ಕಾರಣ–ಅವರ ಆ ಸಿದ್ಧಾಂತಗಳ ಮಿಥ್ಯತೆ, ಜನರ ಭಾವನೆಗಳಿಗೆ ವ್ಯತಿರಿಕ್ತವಾದ ವಿಚಾರಗಳು ಸಾರಹೀನತೆಯಷ್ಟೇ ಅಲ್ಲ, ಪ್ರತಿಯಾಗಿ ಅವರ ದೌರ್ಬಲ್ಯವೂ ಹೌದು, ಅವರ ಕಾರ್ಯ ಪದ್ಧತಿಯಲ್ಲಿ ದೋಷವೂ ಇದೆ. 'ಅಖಿಲ ಭಾರತೀಯ' ಎಂಬ ಹೆಸರು ಕೊಡುವುದರಿಂದ ಹಾಗೂ ಬಯಸುವುದರಿಂದ ಮಾತ್ರ ಯಾವುದೇ ಕಾರ್ಯ 'ಅಖಿಲ ಭಾರತೀಯ' ವಾಗಲಾರದು. ಅದಕ್ಕಾಗಿ ಆ ಪ್ರಕಾರದಲ್ಲಿಯೇ ಪ್ರಯತ್ನಿಸಬೇಕಾಗುತ್ತದೆ. ಇಡೀ ಸಮಾಜವನ್ನು ರಚಿಸಬೇಕು, ಅದಕ್ಕೆ ವ್ಯವಸ್ಥೆ ಮಾಡಬೇಕು. ಎಲ್ಲ ಧರ್ಮವನ್ನೂ ಸಮನ್ವಯಗೊಳಿಸಬೇಕು, ಅದೇ ರೀತಿ ಶಕ್ತಿಯೂ ಸಂಗ್ರಹಗೊಳ್ಳಬೇಕು".

ಚಿತ್ಸುಖನ ಸಮಸ್ಯೆಗೆ ಪರಿಹಾರ ಸಿಕ್ಕಿತು. ಸಂಶಯ–ರಹಿತರಾದ ಮೇಲೆ ಕಾರ್ಯಮಾಡುವ ಶಕ್ತಿ ವೃದ್ಧಿಸುತ್ತದೆ. ಇಲ್ಲದಿದ್ದಲ್ಲಿ ಸಂಶಯಗಳು ಮನೋವೃತ್ತಿಯನ್ನು ಕೆದಕುತ್ತಿರುತ್ತವೆ, ಅವು ಕಾಲುಹಿಡಿದು ಎಳೆಯಲು ಪ್ರಯತ್ನಿಸುತ್ತವೆ. ಇಡೀ ಶಿಷ್ಯ–ಮಂಡಳಿ ಮತ್ತೂ ಶೀಘ್ರಗತಿಯಲ್ಲಿ ಕಾರ್ಯದಲ್ಲಿ ತೊಡಗಿಸಿಕೊಂಡಿತು. ಯಾಕೆಂದರೆ ಅವರ ಕಾರ್ಯದ ಮೇಲೆಯೇ ಯಶಸ್ಸು ಅವಲಂಬಿತವಾಗಿತ್ತು.

ಶಂಕರಾಚಾರ್ಯರ ಮನಸ್ಸಿನಲ್ಲಿ ಎಂದೂ ಚಿಕ್ಕವರು–ದೊಡ್ಡವರು ಮತ್ತು ಸ್ಪೃಶ್ಯರು–ಅಸ್ಪೃಶ್ಯರು ಎಂಬ ವಿಚಾರವೇ ಬರಲಿಲ್ಲ. ವಾಸ್ತವವಾಗಿ ಸ್ಪೃಶ್ಯ–ಅಸ್ಪೃಶ್ಯರ

ಸಮಸ್ಯೆ ಇಂದಿನದೇ ಆಗಿದೆ, ಆ ವೇಳೆಯಲ್ಲಿ ಅದರ ಅಸ್ತಿತ್ವವೇ ಇರಲಿಲ್ಲ. ಆದರೂ ಒಂದು ಘಟನೆಯನ್ನು ಇಲ್ಲಿ ವರ್ಣಿಸುವುದಗತ್ಯ. ಒಮ್ಮೆ ಶಂಕರಾಚಾರ್ಯರು ಜಳಕ ಮಾಡಲು ಹೋಗುತ್ತಿದ್ದರು. ಆಗಲೇ ಓರ್ವ ಚಾಂಡಾಲ ಎದುರಾದ. ಅವರ ಶಿಷ್ಯರು ಅವನಿಗೆ ದೂರ ಸರಿಯಲು ಹೇಳಿದರು. ಚಾಂಡಾಲ ಇದ್ದಕ್ಕಿದ್ದಂತೆ ಹೊರಳಿ ಶಂಕರಾಚಾರ್ಯರಿಗೆ ಹೇಳಿದ: "ಸರ್ವಾತ್ಮೈಕ್ಯದ ಮತ್ತು ಅದ್ವೈತದ ಬಗ್ಗೆ ಮಾತನಾಡುವುದು ಮತ್ತು ಆಚಾರಣೆಯಲ್ಲಿ ಬೇಧಭಾವನೆ ತೋರುವುದು–ಇದೆಂತಹ ಸಂಪ್ರದಾಯ ಆಚಾರ್ಯರೇ? ಇಂಥ ಆಡಂಬರವೇಕೆ? ನಿಮ್ಮ ಸನ್ಯಾಸದ ದೊಣ್ಣೆ ಮತ್ತು ಕಮಂಡಲ ಎಲ್ಲ ಮೋಸದ ಜಾಲವೆಂದು ನಾನು ತಿಳಿಯಲೇ? ಮತ್ತೆ ನೀವು ಯಾವುದಕ್ಕೆ ದೂರ ಸರಿಯುವಂತೆ ಹೇಳುತ್ತಿದ್ದೀರಿ? ಶರೀರಕ್ಕಾ? ಅದಂತೂ ನಶ್ವರ. ನನ್ನ ಮತ್ತು ನಿಮ್ಮ ಶರೀರದಲ್ಲಿ ಯಾವ ಅಂತರವಿದೆ? ಒಂದೇ ರೀತಿಯ ಅವಯವಗಳಿವೆ, ಒಳ–ಹೊರಗಿನ ರಚನೆಯೂ ಒಂದೇ ರೀತಿ ಇದೆ. ಆದಾಗ್ಯೂ ಶರೀರ ಸತ್ಯವಲ್ಲ, ಮಾಯೆಯಾಗಿದೆ. ಅದರ ಮೋಸಕ್ಕೆ ಸಿಲುಕಿ 'ಅಭೇದ'ದ ಹೆಸರಿನಲ್ಲಿ 'ಭೇದ' ಭಾವನೆಯನ್ನು ಸೃಷ್ಟಿಸುತ್ತಿದ್ದೀರಾ? ಒಂದು ವೇಳೆ ನೀವು ಆತ್ಮಕ್ಕೆ ದೂರ ಸರಿಯುವಂತೆ ಹೇಳುತ್ತಿದ್ದರೆ, ಆತ್ಮ ಎಲ್ಲರ ಶರೀರದಲ್ಲಿ ಒಂದೇ. ಅದು ಪುರಾವೆ, ಸಾಕ್ಷಿ; ಅದು ನಿರ್ಲಿಪ್ತ, ಅದಕ್ಕೆ ಯಾರ ಸಂಗವೂ ಆವರಿಸುವುದಿಲ್ಲ. ಆತ್ಮ ಯಾರ ಸ್ಪರ್ಶದಿಂದಲಾದರೂ ಅಪವಿತ್ರವಾಬಲ್ಲದೆ?".

ಶಂಕರಾಚಾರ್ಯರು ಎಲ್ಲವನ್ನೂ ಶಾಂತಚಿತ್ತದಿಂದ ಆಲಿಸಿದರು. ಅವರಿಗೆ ತಮ್ಮ ಶಿಷ್ಯನ ತಪ್ಪಿಗೆ ತುಂಬಾ ಪಶ್ಚಾತ್ತಾಪವಾಯಿತು. ಆಗಲೇ ಅವರು "ಮನೀಷಪಂಚಕ' ಎಂಬ ಹೆಸರಿನಿಂದ ಐದು ಪ್ರಸಿದ್ಧ ಶ್ಲೋಕಗಳನ್ನು ರಚಿಸಿದರು. ಆ ಚಾಂಡಾಲನನ್ನು ತನ್ನ ಗುರುವೆಂದು ಕರೆದರು. ಇಷ್ಟೊಂದು ಜ್ಞಾನವಿರುವ ಚಾಂಡಾಲ ಶಿವನ ಪ್ರತಿಕೃತಿಯೇ ಇರಬಹುದು. ಶಂಕರಾಚಾರ್ಯರ ಸ್ವಭಾವ ಅದೆಷ್ಟು ನಿರಹಂಕಾರವಾಗಿತ್ತು. ವಿನಮ್ರತೆಯಿಂದ ಕೂಡಿತ್ತು! ಅವರು ಅತ್ಯಂತ ಕೆಳಮಟ್ಟದವರನ್ನೂ ತಮ್ಮವರನ್ನಾಗಿ ಮಾಡಕೊಳ್ಳಲು ಸಿದ್ಧರಾಗಿರುತ್ತಿದ್ದರು. ಅವರಿಂದ ಪಾಠ ಕಲಿಯುತ್ತಿದ್ದರು. ಅವರನ್ನು ಗೌರವಿಸುತ್ತಿದ್ದರು. ಅದಕ್ಕಾಗಿಯೇ 'ವಿದ್ಯಾ ದದಾತಿ ವಿನಯಮ್' ಎಂದು ಹೇಳಿರುವುದು.

ಶಂಕರಾಚಾರ್ಯರ ಕಾರ್ಯ ಭರದಿಂದ ಸಾಗುತ್ತಿತ್ತು. ಈಗ ಅವರನ್ನು ಕಾಶಿಯ ಪ್ರಸಿದ್ಧ ವಿದ್ವಾಂಸರಲ್ಲಿ ಒಬ್ಬರೆಂದು ಪರಿಗಣಿಸಲಾಯಿತು. ಅವರು ಆಗಲೇ ಜನರ ಹೃದಯ ಸಮ್ರಾಟರಾಗಿದ್ದರು. ಅತ್ತ ಕಾಶಿ ರಾಜರೂ ಅವರ ಶಿಷ್ಯರಾಗಿದ್ದರು. ಕಾಶಿಯ ರಾಜರು ಮತ್ತು ಬಡವರ ಹೃದಯದಲ್ಲಿ ಯಾರು ಇಷ್ಟೊಂದು ಸ್ಥಾನವನ್ನು ಪಡೆದಿದ್ದರೋ, ಅಂತಹವರ ಯಶಸ್ಸು, ಕೀರ್ತಿ ಎಲ್ಲೆಡೆಯಲ್ಲೂ ವ್ಯಾಪಿಸಲು ಪ್ರಾರಂಭಿಸಿದರೆ, ಇದರಲ್ಲೇನು ಆಶ್ಚರ್ಯ? ಅವರ ಶಿಷ್ಯಮಂಡಳಿಯೂ ಈಗ



ಎಷ್ಟೊಂದು ವೃದ್ಧಿಸಿತ್ತೆಂದರೆ, ಅವರು ಅಲ್ಲಲ್ಲಿ ತಮ್ಮ ಶಿಷ್ಯರನ್ನು ಉಳಿಯಲು ಬಿಟ್ಟು, ಅವರು ಇಡೀ ಭಾರತದಲ್ಲಿ ಒಂದೇ ವಿಚಾರಧಾರೆಯನ್ನು ಹುಟ್ಟುಹಾಕಲು ಸಾಧ್ಯವಿತ್ತು. ಆದ್ದರಿಂದ ಒಂದು ದಿನ ಅವರು ತಮ್ಮ ದಿಗ್ವಜಯದ ವಿಚಾರವನ್ನು ಬಹಿರಂಗಗೊಳಿಸಿದರು. ಇಡೀ ಶಿಷ್ಯಮಂಡಳಿ ಆನಂದದಿಂದ ಕುಣಿಯಿತು. ಆದರೆ ಶಂಕರಾಚಾರ್ಯರ ಮುಖಮುದ್ರೆ ಶಾಂತವಾಗಿತ್ತು, ಧ್ಯಾನಮಗ್ನವಾಗಿತ್ತು.

* * * *

# ೯. ದಿಗ್ವಿಜಯದ ಪಯಣ

ಶಂಕರಾಚಾರ್ಯರ ದಿಗ್ವಿಜಯದ ಘೋಷಣೆ ಒಬ್ಬರಿಂದ ಒಬ್ಬರಂತೆ ಇಡೀ ನಗರದಲ್ಲಿ ವ್ಯಾಪಿಸಿತು. ಇಂಥ ಸುದ್ದಿಗಳು ಗಾಳಿಯ ವೇಗಕ್ಕಿಂತಲೂ ತೀವ್ರವಾಗಿ ದೌಡಾಯಿಸುತ್ತವೆ. ಅವರಿಗೆ ಸಂಪೂರ್ಣವಾಗಿ ಸಹಕರಿಸುವವರೆಲ್ಲಾ ಅವರ ಬಳಿಗೆ ಬಂದರು. ಅವರು ಸಭೆಯಲ್ಲಿ ಕಲೆತಿದ್ದ ಎಲ್ಲರೆದುರು ಒಂದು ಚಿಕ್ಕ ಭಾಷಣವನ್ನು ಹೀಗೆ ಮಾಡಿದರು:

"ಬಂಧುಗಳೇ! ಇಂದು ನಮ್ಮಲ್ಲಿರುವ ಪ್ರತಿಯೊಬ್ಬರೂ ನಮ್ಮ ತತ್ವ ಸಿದ್ಧಾಂತಗಳನ್ನು ಎಲ್ಲೆಡೆಯಲ್ಲಿ ಪ್ರಚಾರ ಮಾಡಲು ಉತ್ಸುಕರಾಗಿದ್ದಾರೆ. ಕಳೆದ ಸಾವಿರ ವರ್ಷಗಳಲ್ಲಿ ನಮ್ಮ ಧರ್ಮದ ಸ್ಥಿತಿ–ಗತಿ ವಿಚಿತ್ರವಾಗಿದೆ. ಅದರ ಬೇರುಗಳನ್ನು ಅನೇಕ ವಿಧದಲ್ಲಿ ಟೊಳ್ಳು ಮಾಡಲು ಪ್ರಯತ್ನಿಸಲಾಗಿದೆ. ಆದರೆ ಅದು ತನ್ನೆಲ್ಲಾ ಶಕ್ತಿಯನ್ನು ತೊಡಗಿಸಿ ತನ್ನ ಮೇಲಿನ ಆಘಾತಗಳನ್ನೆಲ್ಲಾ ನಿಲ್ಲಿಸಿದೆ. ನಮ್ಮ ಧರ್ಮವನ್ನು ಒಳಗಿನಿಂದ ಮತ್ತು ಹೊರಗಿನಿಂದ–ಯಾರಿಂದಲೂ ನಷ್ಟಗೊಳಿಸಲು ಸಾಧ್ಯವಾಗಿದಿಲ್ಲ ಎಂಬ ಅಭಿಮಾನ ನಮಗಿದೆ. ಇಲ್ಲಿಯೇ ಸಮೀಪದಲ್ಲಿ ಸಾರಾನಾಥವಿದೆ. ಅಲ್ಲಿ ಒಂದು ದಿನ ಭಗವಾನ್ ಬುದ್ಧರು 'ಧರ್ಮಚಕ್ರ ಪ್ರವರ್ತ್ತನೆ'ಯನ್ನು ಘೋಷಿಸಿದ್ದರು. ಅವರು ಪುರಾತನ ಪರಂಪರೆಯ ಬಗ್ಗೆ ಉದಾಸೀನರಾಗಿದ್ದು, ಹೊಸ ವಿಧಾನದಿಂದ ಧರ್ಮವನ್ನು ಸ್ಥಾಪಿಸಿದರು; ಅವರ ಅನುಯಾಯಿಗಳು ಈ ಉದಾಸೀನತೆಯನ್ನು ವಿರೋಧದಲ್ಲಿ ಬದಲಿಸಿದರು. ಆಕ್ರಮಣಕಾರಿ ವಿದೇಶಿಯರು ಈ ವಿರೋಧದ ಲಾಭ ಪಡೆದು ನಮ್ಮ ಮನಸ್ಸನ್ನು ಆಘಾತಗೊಳಿಸಿ ನಮ್ಮನ್ನು ನಾಶಪಡಿಸಲು ಪ್ರಯತ್ನಿಸಿದರು. ಆದರೆ ಯಾವ ನದಿಯ ಸ್ರೋತ, ಅಕ್ಷಯ ಹಿಮರಾಶಿಯ ಅಡಿಯ ಹಿಮಾದ್ರಿಯ ಗರ್ಭದಲ್ಲಿ ಇಲ್ಲವೋ ಅದು ಮಳೆಗಾಲದಲ್ಲಿ ಎಷ್ಟೇ ಉಕ್ಕಿ ಹರಿದಾಗ್ಯೂ ಅಕ್ಕ ಪಕ್ಕದ ಪ್ರದೇಶಗಳನ್ನು ಜಲಮಯಗೊಳಿಸುತ್ತದೆ. ಆದರೆ ಗ್ರೀಷ್ಮ ಕಾಲದಲ್ಲಿ ಅದು ಬತ್ತಿಹೋಗುತ್ತದೆ; ಅದರ ಪ್ರವಾಹ ಅನವರತವಾಗಿರಲಾರದು. ಈ ಶ್ರೇಯಸ್ಸು ಗಂಗೋತ್ರಿಯಿಂದ ಹುಟ್ಟಿದ ಗಂಗೆಗೇ ಲಭಿಸುತ್ತದೆ. ಇಂದು ವೇದ ವಿರೋಧಿ ಧರ್ಮ ಅಂತಿಮ ಅವಸ್ಥೆಯಲ್ಲಿದೆ. ಇನ್ನೊಂದೆಡೆ ಹಿಂದೂ ಧರ್ಮದ ಉತ್ಥಾನಕ್ಕಾಗಿಯೂ ಪ್ರಯತ್ನಗಳು ನಡೆದಿವೆ. ನಾವು ಈ ಎಲ್ಲಾ ಪ್ರಯತ್ನಗಳನ್ನು ಸಮನ್ವಯಗೊಳಿಸಬೇಕಾಗಿದೆ, ಒಂದುಗೂಡಿಸಬೇಕಾಗಿದೆ. ಮಹರ್ಷಿ ಕೌಟಿಲ್ಯರು



ಯಾವ ರಾಷ್ಟ್ರ ಮಂದಿರದ ತಳಪಾಯವನ್ನು ಹಾಕಿದ್ದರೋ ಮತ್ತು ಯಾವ ರಾಷ್ಟ್ರ ಮಂದಿರದ ನಿರ್ಮಾಣ ಕಾರ್ಯವನ್ನು ಇಷ್ಟು ದಿನಗಳಿಂದ ಅನೇಕ ಆತ್ಮವಿಜಯಿ ಋಷಿ ಮುನಿಗಳು, ದಿಗ್ವಿಜಯ ಸಾಧಿಸಿದ ಸಾಮ್ರಾಟರೂ, ಕವಿಗಳೂ, ಕಲಾಕಾರರೂ, ಸಾಹಿತಿಗಳೂ, ಸ್ಮೃತಿಕಾರರೂ, ಪುರಾಣಗಳನ್ನು ರಚಿಸಿದವರೂ, ಧರ್ಮಶಾಸ್ತ್ರಗಳನ್ನು ರಚಿಸಿದವರೂ ಮಾಡಿಕೊಂಡು ಬರುತ್ತಿರುವರೋ, ಇಂದು ಆ ಮಂದಿರದಲ್ಲಿ ರಾಷ್ಟ್ರಪುರುಷರ ಪ್ರತಿಮೆಗಳನ್ನು ಸ್ಥಾಪಿಸಿ ಅವರನ್ನೆಲ್ಲಾ ಆಹ್ವಾನಿಸಬೇಕಿದೆ. ಈ ಸೌಭಾಗ್ಯ ನಮಗೆ ಲಭಿಸಿರುವುದಕ್ಕೆ ನಾವು ದೇವರಿಗೆ ಧನ್ಯವಾದಗಳನ್ನು ಅರ್ಪಿಸೋಣ. ನಾವು ಪೂರ್ವಿಕರ ಪ್ರಗತಿಪಥದಲ್ಲಿ ಸಾಗಿ ಅವರ ಕಾರ್ಯಗಳನ್ನು ಪೂರ್ಣಗೊಳಿಸೋಣ. ಈ ಮಂದಿರದ ಪ್ರಥಮ ಪೂಜಾರಿಗಳಾಗೋಣ. ಅನಂತರ ಬರುವ ಪೀಳಿಗೆಗಳು ಈ ಮಂದಿರದಲ್ಲಿ ಅನಂತ ಕಾಲ ಪೂಜಾಕಾರ್ಯಗಳನ್ನು ಮಾಡಲು ಸಾಧ್ಯವಾಗುವಂಥ ವ್ಯವಸ್ಥೆಯನ್ನು ಮಾಡಿ ಹೋಗೋಣ. ನಾವು ಪ್ರತಿಪಾದಿಸಿರುವ ಸಿದ್ಧಾಂತಗಳು ವೇದಸಮ್ಮತವಾಗಿವೆ, ಸತ್ಯವಾಗಿವೆ, ಶಾಶ್ವತವಾಗಿವೆ, ಜನಹಿತಕಾರಿಯಾಗಿವೆ, ಲೋಕಹಿತಕಾರಿಯಾಗಿವೆ. ಆದರೆ ಸಿದ್ಧಾಂತಗಳನ್ನಷ್ಟೇ ತರ್ಕದ ತಕ್ಕಡಿಯಲ್ಲಿ ತೂಗುತ್ತಿರುವುದರಿಂದ, ಅವುಗಳ ವಾಸ್ತವಿಕತೆ ಮತ್ತು ಸೌಂದರ್ಯದ ಬಗ್ಗೆ ನಮ್ಮ–ನಮ್ಮಲ್ಲೇ ಚರ್ಚಿಸುತ್ತಾ ಮನಸ್ಸಿನಲ್ಲಿಯೇ ಮುದಗೊಳ್ಳುವುದರಿಂದ ಅಥವಾ ಕಲ್ಪನೆಯ ಕೋಟೆಗಳನ್ನು ಕಟ್ಟುವಲ್ಲಿ ಸಮಯವನ್ನು ವ್ಯಯಮಾಡುವುದರಿಂದ ಯಾವುದೇ ಉಪಯೋಗವಿಲ್ಲ. ಆ ಸಿದ್ಧಾಂತಗಳನ್ನು ಆಚರಣೆಯಲ್ಲಿ ತರುವ ಆವಶ್ಯಕತೆಯಿದೆ. ನಮ್ಮ ಐಶ್ವರ್ಯ, ಗೃಹ, ಭೂಮಿ ಮತ್ತು ಧರ್ಮದ ರಕ್ಷಣೆಗಾಗಿ ನಮ್ಮ ಸಂದೇಶಗಳನ್ನು ದೇಶದ ಮೂಲೆ–ಮೂಲೆಗಳಿಗೆ, ಮನೆ–ಮನೆಗಳಿಗೆ ತಲುಪಿಸಬೇಕಾಗುತ್ತದೆ. ದೇಶದ ದುರ್ದಶೆಯನ್ನು ಕಂಡು, ದೀನ–ದುಃಖಿಗಳ ಮೇಲೆ ಗುಂಪು ಕಟ್ಟಿಕೊಂಡು ದುಷ್ಟ ದಾನವರು ಅನಾಚಾರವೆಸಗುತ್ತಿರುವುದನ್ನು ಕಂಡು ಎರಡು ಹನಿ ಕಣ್ಣೀರು ಸುರಿಸುವುದಕ್ಕೆ ಬದಲು, ದೇಹಕ್ಕೆ ಕಷ್ಟಕೊಟ್ಟು ಡಾಂಭಿಕರ ಅಹಂಕಾರವನ್ನು ನಾಶಪಡಿಸಬೇಕಾಗುತ್ತದೆ. ದುಷ್ಟರ ದುಷ್ಟತನವನ್ನು ಚೂರು–ಚೂರು ಮಾಡಬೇಕಾಗುತ್ತದೆ. ನಮ್ಮ ಧೈರ್ಯದೆದುರು ಉದ್ಧಟರ ಅಹಂಕಾರ ನಾಶವಾಗುತ್ತದೆ. ದುಷ್ಟರ ಬೇಳೆ ಬೇಯಲಾರದು ಹಾಗೂ ತಾಮಸಿ ಚೋರರು ಚೆಲ್ಲಾಪಿಲ್ಲಿಯಾಗುತ್ತಾರೆ. ಯಾರಿಗೆ ತಮ್ಮ ಧರ್ಮದ ಬಗ್ಗೆ ಪ್ರೀತಿಯಿದೆಯೋ, ಯಾರ ಧಮನಿಗಳಲ್ಲಿ ತಮ್ಮ ಪೂರ್ವಜರ ರಕ್ತ ಹರಿಯುವುದೋ, ಯಾರಿಗೆ ತಮ್ಮ ಕೆಲಸಗಳ ಬಗ್ಗೆ ಶ್ರದ್ಧೆಯಿರುತ್ತದೆಯೋ, ಯಾರ ಮನಸ್ಸಿನಲ್ಲಿ ಆತ್ಮವಿಶ್ವಾಸದ ಬೇರು ಆಳವಾಗಿ ಬೇರೂರಿರುತ್ತದೆಯೋ, ಯಾರ ಹೃದಯದಲ್ಲಿ ಉತ್ಸಾಹದ ಸಮುದ್ರ ಪುಟಿದೇಳುತ್ತಿರುತ್ತದೆಯೋ ಯಾರು ಗೌರವ–ಸಮ್ಮಾನ ಮತ್ತು ಸಂತೋಷವನ್ನು ಬೀಳ್ಕೊಟ್ಟುಬಿಟ್ಟಿದ್ದಾರೋ, ಯಾರು ಕಷ್ಟಗಳನ್ನು ಪಾಣಿಗ್ರಹಣ

ಮಾಡಿಕೊಂಡಿರುವವರೋ, ಅಂತಹವರು ಈ ದೇಶದ ಕೆಲಸಗಳಿಗಾಗಿ, ಪುಣ್ಯ ಕೆಲಸಗಳಿಗಾಗಿ ನನ್ನೊಂದಿಗೆ ಬನ್ನಿ. ದೇವರ ಆಶೀರ್ವಾದ, ನಮ್ಮ ಪೂರ್ವಿಕರ ಪುಣ್ಯ–ಪ್ರತಾಪ, ಅನೇಕ ತಪಸ್ವಿಗಳ ತಪಸ್ಸಿನ ಪ್ರಭಾವ ಮತ್ತು ವೀರರ ಬಲಿದಾನ ನಮ್ಮೊಂದಿಗಿದೆ. ಯಶಸ್ಸು ನಮ್ಮ ಮಾರ್ಗವನ್ನು ಸ್ವಚ್ಛಗೊಳಿಸುತ್ತಾ ಸಾಗುತ್ತದೆ ಎಂಬ ವಿಶ್ವಾಸ ನಮಗಿದೆ. ಬರುವವರು ಬನ್ನಿ."

ಶಂಕರ ಸ್ವಾಮಿಗಳು ಶಂಖದಿಂದ ಧ್ವನಿಗೈದರು. ಸುತ್ತ ಮುತ್ತಲಿನ ವಾತಾವರಣ ಪ್ರತಿಧ್ವನಿಸಿತು. ಕಿವಿಗಳಿಗೆ ಎಣ್ಣೆ ಹಾಕಿಕೊಂಡು ಕುಳಿತಿದ್ದ ಅಕರ್ಮಣ್ಯರ ಕಿವಿಯ ರಂಧ್ರಗಳಲ್ಲಿಯೂ ಧ್ವನಿ ತುಂಬಿತು. ವಿರೋಧಿಗಳ ಹೃದಯ ಕಂಪಿಸಿತು, ಒಳ್ಳೊಳ್ಳೆಯ ಗುರುಗಳೆಲ್ಲಾ ಕಪಟ ಮರೆತು ಹಿಂದಕ್ಕೆ ಸರಿದರು. ಮತಾಂತರ ವಾದಿಗಳು ಹರಕೆ ಹೊರಲಾರಂಭಿಸಿದರು. ಜಗತ್ತು ರೆಕ್ಕೆ ಕತ್ತರಿಸಿದ ಪಕ್ಷಿಯಂತೆ ಒದ್ದಾಡಿತು. ಆಡಂಬರ, ವಿಸ್ಮಯಗಳಿಂದ ಗುಟ್ಟುರಟ್ಟಾಗುವುದನ್ನು ಕಂಡು ಕಳೆಗುಂದಿತು. 'ಅನೇಕತೆ' ಮತ್ತು 'ವಿರೋಧ'ಗಳು ಪ್ರಸ್ತುತ ಏನೂ ಸಾಧ್ಯವಾಗದಿದ್ದನ್ನು ಕಂಡು ಬಾಲ ಮುದುರಿಕೊಂಡು ಹಿಂದಕ್ಕೆ ಸರಿದವು. ಭೇದ–ಭಾವನೆ ತನ್ನ ಸುಳಿಯಲ್ಲಿಯೇ ಸುತ್ತಲಾರಂಭಿಸಿತು, ಪುಕ್ಕಲುತನ ಭಯಪಟ್ಟಿತು. ಹೇಡಿತನ ಓಟಕಿತ್ತಿತ್ತು ಮತ್ತು ಕ್ರೂರತೆಗೆ ಗರಬಡಿಯಿತು. ಅದೇ ಶಂಖ ಧ್ವನಿಯು ಸಹಕಾರಿಗಳ ಮನಸ್ಸನ್ನು ಪ್ರೇರೆಪಿಸಿತು, ಕರ್ಮಯೋಗಿಗಳ ಕೈಗೆ ದೋಣಿಯ ಹುಟ್ಟು ಬಂದಂತಾಯಿತು, ಗುರುಮಂತ್ರಗಳ ಪ್ರಭಾವದಿಂದ ಉತ್ತಮರೊಂದಿಗೆ ಧೈರ್ಯದಿಂದ ನಿಲ್ಲುವ ಸಾಮರ್ಥ್ಯ ಅಪರಿಚಿತರಿಗೂ ಬಂದಿತು; ಸಮನ್ವಯದ ಭಾವನೆ ಇಡೀ ಗಗನದಲ್ಲಿ ಪ್ರತಿಧ್ವನಿಯೊಂದಿಗೆ ವ್ಯಾಪಿಸಿತು. ಸರಳತೆ ಮತ್ತು ಶಾಂತಿ ಮಂತ್ರದ ಘೋಷಣೆಯಿಂದ ಖಂಡಿತವಾದತ್ವವೂ ನೇರವಾಗಿ ಹೇಳಲು ಸಿದ್ಧವಾಯಿತು; ಅನ್ಯೋನ್ಯತೆಯು ಮನಃಸ್ತಾಪವನ್ನು ನಾಶಪಡಿಸಿ, ಆನಂದವನ್ನು ಆಚರಿಸಿತು. ಶೂರತ್ವ ತಲೆಯಲ್ಲಿ ಆಸೀನವಾಗಿತ್ತು, ವೀರತ್ವ ಮುಂದುವರಿದು ಮಾತನಾಡಿತು, ದಯೆ ಮನ ಬಿಚ್ಚಿ ದಾನಮಾಡಿತು, ಏಕತೆ ಮತ್ತು ಅದ್ವೈತ ಆನಂದಾತಿರೇಕದಲ್ಲಿ ಮೈಮರೆತವು.

ಸ್ವಾಮಿ ಶಂಕರಾಚಾರ್ಯರು ತಮ್ಮ ದಿಗ್ವಿಜಯಕ್ಕಾಗಿ ಪಯಣ ಹೊರಟರು. ಕಾಶಿಯ ರಾಜ ರತನ್‌ಸಿಂಹ ಅವರೊಂದಿಗಿದ್ದರು. ನ್ಯಾಯ ಮತ್ತು ಸತ್ಯದ ಹಿಂದೆ 'ಶಕ್ತಿ' ಇರುವುದ ಅಗತ್ಯವಾಗಿದೆ. ಸತ್ಯವಿಲ್ಲದ ಶಕ್ತಿ ಕುರುಡಾಗುತ್ತದೆ, ಶಕ್ತಿ ಇಲ್ಲದ ಸತ್ಯ ಹೆಳವಾಗುತ್ತದೆ ಎಂಬುದು ಅವರಿಗೆ ತಿಳಿದಿತ್ತು. ತಾಳ್ಮೆಯ ಭೂಮಿ ಭಾರತದಲ್ಲಿ ಅವರಿಗೆ ತಮ್ಮ ಪ್ರಾಣದ ಬಗ್ಗೆ ಭಯವಿರಲಿಲ್ಲ, ಜೀವನದ ಬಗ್ಗೆ ಮೋಹವೂ ಇರಲಿಲ್ಲ. ಆದರೆ ಅವರು ಇಡೀ ಭಾರತದಲ್ಲಿ ಜನಾಂದೋಳನ ಮಾಡಲು ಹೊರಟಿದ್ದರು. ಆದ್ದರಿಂದ ಜನರನ್ನು ಆಕರ್ಷಿಸಲು, ಆ ಪ್ರಭಾವವನ್ನು ಅವರ ಮೇಲೆ ಪರಿಣಾಮಕಾರಿಯಾಗಿ ಸ್ಥಾಪಿಸಲು ಶೀಘ್ರವಾಗಿ ಅವರು ಸಜ್ಜುಗೊಳಿಸುಕೊಂಡು ಹೊರಡುವ ಆವಶ್ಯಕತೆ ಇತ್ತು.



ಸಜ್ಜುಗೊಳಿಸುಕೊಂಡು ಹೊರಡುವ ಆವಶ್ಯಕತೆ ಇತ್ತು. ತಮ್ಮ ಆಂದೋಳನವನ್ನು ಯಶಸ್ವಿಗೊಳಿಸಲು ಈ ಅಲಂಕಾರದಿಂದ ಶಂಕರಾಚಾರ್ಯರು ತಮ್ಮನ್ನು ಅಲಂಕರಿಸಿಕೊಂಡರು, ಎಲ್ಲ ಸಾಮಾಗ್ರಿಗಳನ್ನು ಏಕತ್ರಗೊಳಿಸಿಕೊಂಡರು. ಆದಾಗ್ಯೂ ಅವರು ಸ್ವತಃ ಈ ಎಲ್ಲದರಿಂದ ನಿರ್ಲಿಪ್ತರಾಗಿದ್ದರು. ಅವರಿಗೆ ಛತ್ರ, ಚಾಮರ, ಅಸ್ತ್ರ–ಶಸ್ತ್ರಗಳಿಂದೇನು ಲಾಭ? ಅವರು ವೈರಾಗ್ಯದ ಕವಚವನ್ನು ಧರಿಸಿದ್ದರು. ಜ್ಞಾನದ ಗುರಾಣಿ ಹಿಡಿದಿದ್ದರು. ಪ್ರಸ್ಥಾನತ್ರಯಿಯೇ ಅವರ ಶಸ್ತ್ರಗಳಾಗಿದ್ದವು. ಶಿಷ್ಯ ವರ್ಗವೇ ಅವರ ಸೈನ್ಯವಾಗಿತ್ತು. ಈ ಸೈನ್ಯ ಗಂಗೆಯ ತೀರದಲ್ಲಿ ಹಾಡುತ್ತಾ ಸಾಗುತ್ತಿತ್ತು:

ಭಗವತಿ ತವ ತೀರೇ ನೀರಮಾತ್ರಾಶನೋಽಹಂ
ವಿಗತವಿಷಯತೃಷ್ಣ ಕೃಷ್ಣಮಾರಾಧಯಾಮಿ ।
ಸಕಲಕಲುಷಭಂಗೇ ಸ್ವರ್ಗಸೋಪಾನಸಂಗೇ
ತರಲತತರಂಗೇ ದೇವಿ ಗಂಗೇ ! ಪ್ರಸೀದ ॥೧॥

ಭಗವತೀ ಭವಲೀಲಾಮೌಲಿಮಾಲೇ ತವಾಂಭಃ
ಕಣಮಣುಪರಿಮಾಣಂ ಪ್ರಾಣಿನೋ ಯೆ ಸ್ಪೃಶಂತಿ
ಅಮರನಗರನಾರೀ ಚಾಮರಗ್ರಾಹಿಣೀನಾಂ
ವಿಗತಕಲಿಕಲಂಕಾತಂಕಮಕೇ ಲುಠಂತಿ ॥೨॥

ಬ್ರಹ್ಮಾಂಡಂ ಖಂಡಯಂತೀ ಹರಶಿರಸಿ ಜಟಾವಲ್ಲಿಮುಲ್ಲಾಸಯಂತೀ
ಸ್ವರ್ಲೋಕಾದಾಪತಂತೀ ಕನಕಗಿರಿಗುಹಾಗಂಡಶೈಲಾತ್‌ಸ್ರವಂತೀ
ಕ್ಷೋಣಿಪೃಷ್ಠೇ ಲುಠಂತೀ ದುರಿತಚಯಚಮೂರ್ನಿಭರಂ ಭರ್ತ್ಸಯಂತೀ
ಪಾಥೋಧಿಂ ಪೂರಯಂತೀ ಸುರನಗರಸರಿತ್ಪಾವನೀ ನಃ ಪುನಾತು ॥೩॥

ಮಜ್ಜನ್ಮಾತಂಕ ಕುಮ್ಭಚ್ಯುತಮದಮದಿರಾ ಮೋದಮತ್ತಾಲಿಜಾಲಂ
ಸ್ನಾನೈಃ ಸಿದ್ಧಂಕಾನಾನಾಂ ಕುಚಯುಗವಿಗಲತ್ಕುಂಕುಮಾಸಂಗಮಿದಮ್ ।
ಸಾಯಂ ಪ್ರಾತರ್ಮುನೀನಾಂ ಕುಶಕುಸುಮಚಯೈಶ್ಛನ್ನತೀರಸ್ಥ ನೀರಂ,
ಪಾಯಾನ್ನೋ ಗಾಂಗಮಭ್ಯಃ ಕರಿಕಲಭಕರಾಕ್ರಾಂತರ್ಹಸ್ತಾತರಂಗಮ್ ॥೪॥

ಆದಾವಾದಿಪಿತಾಮಹಸ್ಯ ನಿಯಮವ್ಯಾಪಾರಪಾತ್ರೇಜಲಂ
ಪಶ್ಚಾತ್ಪನ್ನಶಾಯಿನೋ ಭಗವತಃ ಪಾದೋದಕಂ ಪಾವನಮ್ ।

ಭೂಯಃ ಶಮ್ಭುಜಟಾವಿಭೂಷಣಮಣಿರ್ಜಹ್ನೋರ್ಮಹರ್ಷೇರಿಯಂ
ಕನ್ಯಾ ಕಲ್ಮಷನಾಶಿನೀ ಭಗವತೀ ಭಾಗೀರಥೀ ಭೂತಲೇ ॥ ೫ ॥

ಶೈಲೇಂದ್ರಾವತಾರಿಣೀ ನಿಜಜಲೇ ಮಜ್ಜಜ್ಜನೋತ್ತಾರಿಣೀ
ಪಾರಾವಾರವಿಹಾರಿಣೀ ಭವಭಯಶ್ರೇಣೀಸಮುತ್ಸಾರಿಣೀ ।
ಶೇಷಾಂಗೈರನುಕಾರಿಣೀ ಹರಶಿರೋವಲ್ಲೀದಲಾಕಾರಿಣೀ
ಕಾಶೀಪ್ರಾಂತವಿಹಾರಿಣೀ ವಿಜಯತೇ ಗಂಗಾ ಮನೋಹಾರಿಣೀ ॥ ೬ ॥

ಕುತೋಽವೀಚಿರ್ವೀಚಿಸ್ತವ ಯದಿ ಗತಾ ಲೋಚನಪಥಂ
ತ್ವತಾಪೀತಾ ಪೀತಾಂಬರಪುರನಿವಾಸಂ ವಿತರಸಿ ।
ತ್ವದುತ್ಸಂಗೇ ಗಂಗೇ ಪತತಿ ಯದಿ ಕಾಯಸ್ತನುಭೃತಾಂ
ತದಾ ಮಾತಃ ಶಾತಕ್ರತವಪದಲಾಭೋಽಪ್ಯತಿಲಘುಃ ॥ ೭ ॥

ಗಂಗೇ ತ್ರೈಲೋಕ್ಯಸಾರೇ ಸಕಲಸುರವಧೂಧೌತವಿಸ್ತೀರ್ಣತೋಯೇ
ಪೂರ್ಣಬ್ರಹ್ಮಸ್ವರೂಪೇ ಹರಿಚರಣರಜೋಹಾರಿಣಿ ಸ್ವರ್ಗಮಾರ್ಗೇ ।
ಪ್ರಾಯಶ್ಚಿತ್ತಂ ಯದಿ ಸ್ಯಾತ್ತವಜಲಕಣಿಕಾ ಬ್ರಹ್ಮಹತ್ಯಾದಿ ಪಾಪೇ
ಕಸ್ತ್ವಾಂ ಸ್ತೋತುಸಮರ್ಥಸ್ತ್ರಿಜಗದಘಹರೇ ದೇವಿ ಗಂಗೇ ಪ್ರಸೀದ ॥ ೮ ॥

ಮಾತಃ ಶಾಂಭವಿ ಶಂಭುಸಂಗಮಿಲಿತೇ ಮೌಲಾ ನಿಧಾಯಾಂಜಲಿಂ
ತ್ವತ್ತೀರೇ ವಪುಷೋಽವಸಾನಸಮಯೇ ನಾರಾಯಣಾಂಘ್ರಿದ್ವಯಮ್
ಸಾನಂದಂ ಸ್ಮರತೋ ಭವಿಷ್ಯತಿ ಮಮಪ್ರಾಣಪ್ರಾಯಾಣೋತ್ಸವೇ
ಭೂಯಾದ್ಭಕ್ತಿರವಿಚ್ಯುತಾ ಹರಿಹರಾದ್ವೈತಾತ್ಮಿಕಾ ಶಾಶ್ವತೀ ॥ ೯ ॥

ಗಂಗಾಷ್ಟಕಮಿದಂ ಪುಣ್ಯಂ ಯಃ ಪಠೇತ್ಪ್ರಯತೋ ನರಃ ॥
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕಂ ಸ ಗಚ್ಛತಿ ॥ ೧೦ ॥

ಗಂಗಾತೀರದ ಉತ್ತರದೆಡೆಗೆ ಈ ತರುಣ ತಪಸ್ವಿಗಳ ಗುಂಪು ಮುಂದುವರಿಯಿತು. ಅವರು ರಾಷ್ಟ್ರ – ಭಾಗೀರಥಿಯೊಂದಿಗೆ ಅದರ ಉದ್ಗಮದಿಂದ, ಪೂರ್ವದ ಇತಿಹಾಸದೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಳ್ಳಲು ಬಯಸುತ್ತಿದ್ದರು, ಬಹುಶಃ ಇದಕ್ಕಾಗಿ ಶಂಕರಾಚಾರ್ಯರು ಮೇಲ್ಭಾಗದೆಡೆಗೆ ಹೊರಟರು. ಹಳ್ಳಿ–ಹಳ್ಳಿಯಲ್ಲಿ ಜನ ಅವರ ದರ್ಶನ ಪಡೆಯಲು, ಮಾರ್ಗದಲ್ಲಿ ಬರುತ್ತಿದ್ದರು. ಆಚಾರ್ಯರ



ಉಪದೇಶಾಮೃತವನ್ನು ಸವಿದು ತೃಪ್ತರಾಗುತ್ತಿದ್ದರು. ಶೈವರು ಅವರನ್ನು ಸಾಕ್ಷಾತ್ ಶಂಕರನ ಅವತಾರವೆಂದು ನಂಬಿದರೆ, ವೈಷ್ಣವರು ಅವರಲ್ಲಿ ವಿಷ್ಣುವಿನ ಕಾಂತಿಯನ್ನು ಕಾಣುತ್ತಿದ್ದರು. ಎಲ್ಲ ದೇವರು–ದೇವತೆಗಳು ಒಂದೇ ಪರಬ್ರಹ್ಮನ ಭಿನ್ನ–ಭಿನ್ನ ಸ್ವರೂಪ–ಇದನ್ನೇ ಅವರು ಜನರಿಗೆ ಹೇಳುತ್ತಿದ್ದರು. ರಾಮೇಶ್ವರಂನಲ್ಲಿ ಶಿವನ ಪ್ರತಿಷ್ಠೆ ಮತ್ತು ಉಪಾಸನೆ ಕೈಗೊಂಡು ಸಮುದ್ರ ದಾಟಿ ಲಂಕೆಯನ್ನು ವಿಜಯಗೈಯುವ ರಾಮ ಮತ್ತು ರಾಮನ ಹೆಸರು ಹಿಡಿದು ಹಾಲಹಲವನ್ನು ಕುಡಿದ ಶಿವನಲ್ಲಿ ವಿರೋಧ? ಸತಿಯ ಶವವನ್ನು ಹೆಗಲುಗಳಲ್ಲಿ ಹೊತ್ತು ಭಾರತವನ್ನು ಸಂಚರಿಸಿದ ಶಿವ ಮತ್ತು ಮತ್ತೊಂದು ಜನ್ಮದಲ್ಲೂ ಶಿವನನ್ನು ವರಿಸುವ ಇಚ್ಛೆಯಿಂದ ಘೋರ ತಪಸ್ಸನ್ನು ಮಾಡುವ ಗಿರಿಜೆಯಲ್ಲಿ ಯಾವ ಅಂತರ? ಎಲ್ಲವೂ ಒಂದೇ.  ಯಾರು ವೈಷ್ಣವರೋ ಅವನು ಶೈವ. ಹಾಗೂ ಅದೇ ಶಕ್ತಿಯೂ ಹೌದು. ಒಬ್ಬರ ಪೂಜೆ ಮತ್ತು ಇನ್ನೊಬ್ಬರ ವಿರೋಧ–ಇದು ಹೇಗೆ ಸಾಗಲು ಸಾಧ್ಯ? ಅದಕ್ಕಾಗಿ ಅಲ್ಲಲ್ಲಿ ಪಂಚದೇವರುಗಳ ಪೂಜೆಗೈಯಲು ಆದೇಶಿಸಿದರು. ಹಾಂ, ಅವರವರ ಇಷ್ಟದೇವರನ್ನು ಮಧ್ಯದಲ್ಲಿಟ್ಟುಕೊಳ್ಳಲು ಅವಕಾಶವಿತ್ತು. ಯಾರೂ ದೊಡ್ಡವರಲ್ಲ, ಯಾರೂ ಚಿಕ್ಕವರಲ್ಲ. ಶಿವ ಭಕ್ತರು ವಿಷ್ಣುವನ್ನು ಪೂಜಿಸಲಿ. ಪರಮ ವೈಷ್ಣವರೂ ಶಿವನನ್ನು ಪೂಜಿಸಲಿ–ಅರ್ಚಿಸಲಿ, ಇದೇ ಅವರ ಸಂದೇಶವಾಗಿತ್ತು. ಈ ಸಂದೇಶವನ್ನು ಗ್ರಾಮವಾಸಿಗಳು ತುಂಬಾ ಆಸಕ್ತಿಯಿಂದ ಕೇಳಿ, ಇದನ್ನು ಅರಿತುಕೊಂಡರು. ಅವರ ವಾಣಿಯ ಪ್ರಭಾವ ಎಷ್ಟಿತ್ತೆಂದರೆ ಅವರ ಬಾಯಿಯಿಂದ ಹೊರಟ ಮಾತು ಮನಸ್ಸಿನಲ್ಲಿ ಮನೆಮಾಡಿಬಿಡುತ್ತಿತು. ಅದು ಹೃದಯದಲ್ಲಿ ಸ್ಥಿರವಾಗಿ ಬೇರೂರಿಬಿಡುತ್ತಿತ್ತು.

ಸಾಂಧ್ಯಗಗನದಲ್ಲಿ ಕೆಂಪು ಬಣ್ಣ ಪಸರಿಸಿದಾಗ ಹಾಗೂ ಶ್ರಮದಿಂದ ದಣಿದ ಸೂರ್ಯ ನಿದ್ರಿಸಲು ಹೋದಾಗ ಶಂಕರ ಸ್ವಾಮಿಯವರ ಶಿಷ್ಯ–ಮಂಡಳಿಯೂ ಗಂಗೆಯ ತೀರದಲ್ಲಿ ತನ್ನ ಬಿಡಾರ ಹೂಡುತ್ತಿತ್ತು. ಶಿಷ್ಯರೆಲ್ಲಾ ನಿತ್ಯ ಕರ್ಮದಿಂದ ಮುಕ್ತರಾಗಿ ಶಾಂತ ವಾತಾವರಣದಲ್ಲಿ ಧ್ಯಾನಮಗ್ನರಾಗುತ್ತಿದ್ದರು. ಶೀತಲ ವಾಯು ಸಹ ಶಾಂತಿ ಭಂಗವಾಗುವ ಭಯದಿಂದ ಒಂದೆಡೆ ಸ್ಥಿರವಾಗಿ ನಿಂತುಬಿಡುತ್ತಿತ್ತು. ಈ ನೀರವ ವಾತಾವರಣದಲ್ಲಿ ಕಲ್ಪನಾ–ಚಕ್ಷುಗಳೆದುರು ಅನೇಕ ದೃಶ್ಯಗಳು ಮೂಡಿ ಹೊರಟುಹೋಗುತ್ತಿದ್ದವು. ಭಾರತದೇಶದ ಭವ್ಯ ಚಿತ್ರ ಕಣ್ಣೆದುರು ಪ್ರತ್ಯಕ್ಷಗೊಳ್ಳುತ್ತಿತ್ತು. ತಾವು ಒಗ್ಗಟ್ಟಿನಿಂದ ಶಾಂತಿ, ತಾಳ್ಮೆ ಮತ್ತು ಸಮನ್ವಯದ ಶಿಕ್ಷಣವನ್ನು ನೀಡುತ್ತಿದ್ದೇವೆ ಎಂದು ಅವರಿಗೆ ಅನ್ನಿಸುತ್ತಿತು. ಗಂಗೆ ಅವರ ಕಿವಿಯಲ್ಲಿ ಯಾರಿಗೂ ತಿಳಿಯದಂತೆ ಏನೋ ಹೇಳಿ ಹೋಗುತ್ತಿದ್ದಳು; ಅವಳ ತೀರದಲ್ಲಿ ಭಾರಶಿವರು ಮತ್ತು ಗುಪ್ತರು ವಿದೇಶಿ ದುರಾಚಾರಿಗಳನ್ನು ದೂರಕ್ಕೆ ಅಟ್ಟಿ ಯಜ್ಞ ಮಾಡಿದ್ದರು. ಬಹುಶಃ ತನ್ನ ಹಿಂದಿನ ಈ ದಿನಗಳನ್ನು ನೆನಪಿಸಿ ಹೋಗುತ್ತಿದ್ದಳೇನೋ. ಅವರು ಗಂಗೆಯನ್ನೇ ತಮ್ಮ ರಾಜಮುದ್ರೆಯನ್ನಾಗಿ ಮಾಡಿಕೊಂಡಿದ್ದರು. ಯಾಕೆಂದರೆ ಗಂಗೆ ಕೊಳಕು

ಕಾಲುವೆಯನ್ನೂ ತನ್ನಲ್ಲಿ ಸೇರಿಸಿಕೊಂಡು ತನ್ನಂತೆಯೇ ಪಾವಿತ್ರ್ಯ ಹಾಗೂ ಪುಣ್ಯವನ್ನು ಕರುಣಿಸುವ ಸಾಮರ್ಥ್ಯ ಹೊಂದಿದ್ದು ಭಾರತದ ಆತ್ಮದ ಪ್ರತೀಕವಾಗಿದ್ದಾಳೆ. ಗಂಗೆಯೇ ಭಾರತದ ಅಭಿವ್ಯಕ್ತಿಯಾಗಿದ್ದಾಳೆ. ಅವಳು ಇತಿಹಾಸದ ಪ್ರತಿಮೂರ್ತಿಯಾಗಿದ್ದಾಳೆ, ಜ್ಞಾನದ ಜನನಿಯಾಗಿದ್ದಾಳೆ ಹಾಗೂ ಸಂಸ್ಕೃತಿಯನ್ನು ಪೋಷಿಸುವವಳಾಗಿದ್ದಾಳೆ. ಆಚಾರ್ಯ ಶಂಕರರು ಅವರಿಗೆ ಗುಪ್ತರ ಸುವರ್ಣಯುಗದ ಅನೇಕ ಘಟನೆಗಳನ್ನು ಹೇಳುತ್ತಿದ್ದರು, ಅನೇಕ ವೃತ್ತಾಂತಗಳನ್ನು ತಿಳಿಸುತ್ತಿದ್ದರು. ಇತಿಹಾಸವನ್ನು ವಿವೇಚಿಸಿ ಹೇಳುತ್ತಿದ್ದರು. ಶಕರು ಮತ್ತು ಹೂಣರ ಅನಾಗರಿಕತೆಯಿಂದ ಮುಕ್ತಗೊಳಿಸಲು ಯಾವ ರೀತಿಯಲ್ಲಿ ಹಿಂದೂ ಧರ್ಮಕ್ಕೆ ಪ್ರೇರಣೆ ಲಭಿಸಿತು, ಆ ಕಾಲದ ರಾಷ್ಟ್ರವೀರರು ಎಲ್ಲ ಧರ್ಮಗಳನ್ನೂ ತ್ಯಜಿಸಿ 'ಏಕಂ ಸದ್ವಿಪ್ರಾ ಬಹುಧಾ ವದಂತಿ' ಯ ಸಿದ್ಧಾಂತವನ್ನು ಮರೆಯಿಸಿ, ಹಿಂದೂ ಧರ್ಮದ ಏಳಿಗೆಯನ್ನೇ ತಮ್ಮ ರಾಷ್ಟ್ರದ ಕರ್ತವ್ಯವೆಂದು ತಿಳಿದರು ಎಂಬುದನ್ನೆಲ್ಲಾ ಅವರಿಗೆ ತಿಳಿಸುತ್ತಿದ್ದರು. ಈ ಪಾವನ ಇತಿಹಾಸ ಮತ್ತು ಪುರಾಣಗಳ ಬಗ್ಗೆ ಪ್ರವಚನವನ್ನು ಕೇಳಲು ಸಪ್ತರ್ಷಿಗಳು ಮತ್ತು ಇನ್ನಿತರ ಋಷಿಗಳು ನೀಲಾಕಾಶದಿಂದಿಳಿದು ಬಂದು ಭಾಗೀರಥಿಯ ಜಲದಲ್ಲಿ ಅಡಗಿ ಕೂತು ಮೌನವಾಗಿ ಆಲಿಸುತ್ತಿದ್ದರು. ಅವರು ಆನಂದದ ಅತಿರೇಕದಲ್ಲಿ ಹರ್ಷ ಧ್ವನಿಗೈದಾಗ ಗಂಗಾಜಲ ಕಲ–ಕಲ ಸದ್ದು ಮಾಡುತ್ತಿತ್ತು. ಮೀನುಗಳು 'ಭಪಾಕ್' ಸದ್ದಿನೊಂದಿಗೆ ನೀರಿನಿಂದ ಮೇಲೆ ಹಾರಿ–ಕುಣಿದು ಮತ್ತೆ ಒಳಗೆ ಸೇರಿಕೊಂಡುಬಿಡುತ್ತಿದ್ದವು. ಕಥಾಪ್ರಸಂಗ ಮತ್ತು ವಾರ್ತಾಲಾಪ ಮುಗಿದಾಗ ಶಿಷ್ಯಗಣ ನಿದ್ರಿಸುತ್ತಿತ್ತು, ಆದರೆ ಋಷಿ–ಮುನಿಗಳು ಅಲ್ಲಿಯೆ ಕೂತು ರಾತ್ರಿಯಿಡೀ ವಿಚಾರ–ವಿನಿಮಯ ಮಾಡಿಕೊಳ್ಳುತ್ತಿದ್ದರು. ಪ್ರಾತಃಕಾಲ ಶಂಕರಾಚಾರ್ಯರ ಕಾರ್ಯದ ಬಗ್ಗೆ ಸಂಶಯವನ್ನು ದೂರಮಾಡಿಕೊಂಡು ತಮ್ಮ–ತಮ್ಮ ಮನೆಗಳಿಗೆ ಹೊರಟುಹೋಗುತ್ತಿದ್ದರು. ಶಂಕರಾಚಾರ್ಯರೂ ತಮ್ಮ ಶಿಷ್ಯರೊಂದಿಗೆ ಮುಂದುವರಿದು ಹೋಗುತ್ತಿದ್ದರು; ಸೂರ್ಯದೇವನೂ ಅವರನ್ನು ಹಿಂಬಾಲಿಸುತ್ತಿದ್ದ; ಅವನು ಆಚಾರ್ಯರ ಮುಂದೆ ಇರುವ ಉದ್ಧಟತನವನ್ನು ಹೇಗೆ ತಾನೇ ಮಾಡಬಲ್ಲ! ಆದ್ದರಿಂದ ಆಚಾರ್ಯರು ಮಧ್ಯಾಹ್ನದ ವೇಳೆಯಲ್ಲಿ ವೃಕ್ಷಗಳ ನೆರಳಿನಲ್ಲಿ ತಂಗುತ್ತಿದ್ದರು; ಸೂರ್ಯನಿಗೆ ತನ್ನ ಕರ್ತವ್ಯದಲ್ಲಿ ಅಡ್ಡಿಯಾಗಬಾರದೆಂದು, ಮುಂದಕ್ಕೆ ಹೋಗಲು ಅನುವು ಮಾಡಿಕೊಡುತ್ತಿದ್ದರು. ವೃಕ್ಷಗಳು ತಮ್ಮ ನೆರಳನ್ನು ನಾಲ್ಕೂ ದಿಕ್ಕಿನಿಂದ ಒಟ್ಟು ಮಾಡಿಕೊಂಡು ಸ್ವಾಮಿ ಶಂಕರಾಚಾರ್ಯರ ಚರಣಗಳಲ್ಲಿ ಅರ್ಪಿಸಿ ಬಿಡುತ್ತಿದ್ದವು. ಅಥವಾ ಇಂಥ ಮಹಾನ್ ಪುರುಷನು ತಮ್ಮಲ್ಲಿಗೆ ಬಂದಿದ್ದಕ್ಕೆ ಸಂಕೋಚದಿಂದಾಗಿ ಮುಜುಗರವನ್ನು ಅನುಭವಿಸುತ್ತಿದ್ದವು. ಇದು ಅವರ ನಿತ್ಯ ಕಾರ್ಯವಾಗಿತ್ತು. ಅವರು ಮುಂದುವರಿದಂತೆಯೇ ಅವರ ಶಿಷ್ಯರ ಸಂಖ್ಯೆಯೂ ವೃದ್ಧಿಸುತ್ತಿತ್ತು.

ಅವರು ಕಾಶಿಯಿಂದ ಹೊರಟು ಚರಣಾದ್ರಿಘಡಕ್ಕೆ ಬಂದರು.



ಚರಣಾದ್ರಿಘಡದಲ್ಲಿ ವಿಂಧ್ಯಾಚಲ ಗಂಗೆಯಲ್ಲಿ ಮೀಯಲು ಇಳಿಯುತ್ತಾನೆ. ಅವನು ಮಹರ್ಷಿ ಅಗಸ್ತ್ಯನ ಆಜ್ಞೆಯಿಂದಾಗಿ ತಲೆಬಾಗಿದ್ದಾನೆ. ಈ ಉತ್ತರ ಮತ್ತು ದಕ್ಷಿಣದವರನ್ನು ಒಂದುಗೂಡಿಸುವವನ ಚರಣಗಳನ್ನು ಚುಂಬಿಸಿ ಗಂಗೆಯೂ ಧನ್ಯಳಾದೆನೆಂದು ತಿಳಿಯುತ್ತಾಳೆ. ಸಹೋದರನಿಗೆ ರಾಜ್ಯವನ್ನು ಕೊಟ್ಟು, ಲೋಕ ಕಲ್ಯಾಣಕ್ಕಾಗಿ ತಾನೇ ಸನ್ಯಾಸಿಯ ಜೀವನವನ್ನು ಸಾಗಿಸಿದ ಮಹಾತ್ಮಾ ಭರ್ತೃ–ಹರಿಯ ಸ್ಮೃತಿಯಲ್ಲಿ ಗೌರವದಿಂದ ತಲೆಬಾಗಿ ಶಿಷ್ಯಮಂಡಳಿ ಪ್ರಯಾಗವನ್ನು ತಲುಪಿತು. ಕಾಶಿಯ ಅನಂತರ ಸ್ವಾಮಿ ಶಂಕರಾಚಾರ್ಯರು ಕೆಲವು ದಿನ ತಂಗಿದ್ದ ಮೊದಲ ಸ್ಥಳ 'ಪ್ರಯಾಗ'ವಾಗಿದೆ.

* * * *

# ೧೦. ಪ್ರಯಾಗದಲ್ಲಿ

ಶಂಕರಾಚಾರ್ಯರು ಪ್ರಯಾಗವನ್ನು ಪ್ರವೇಶಿಸಿದ ದಿನ ಧನ್ಯವಾಗಿದೆ. ಇಂದಿಗೂ ನಾವು ಆ ದಿನದಂದು ಜಾತ್ರೆ ಸೇರುತ್ತೇವೆ. ಆದರೆ ನಮ್ಮಲ್ಲಿ ಎಷ್ಟು ಜನರಿಗೆ ಇಂಥ ಒಂದು ಸಭೆಗೆ ಶಂಕರಾಚಾರ್ಯರು ಬಂದಿದ್ದು, ಅಲ್ಲಿಯೇ ಅವರು ತಮ್ಮ ಧರ್ಮವನ್ನು ಪ್ರತಿಪಾದಿಸಿದ್ದರೆಂಬುದು ತಿಳಿದಿದೆ? ನಮ್ಮ ರಾಷ್ಟ್ರೀಯ ಜೀವನದಲ್ಲಿ ಜಾತ್ರೆಗಳಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಅವುಗಳು ನಮ್ಮ ಮನಸ್ಸಿನಲ್ಲಿ ಬಾಲ್ಯಕಾಲದಿಂದಲೂ ವಿಶಾಲ ಭಾವನೆಯ ಮತ್ತು ವ್ಯಾಪಕತೆಯ ಸಂಸ್ಕಾರಗಳನ್ನು ಮೂಡಿಸಿವೆ. ಹೀಗಾಗಿ ಅವು ಜೀವಮಾನವಿಡಿ ನಮ್ಮೊಂದಿಗಿರುತ್ತವೆ. ಜಾತ್ರೆಗಳು ನಡೆಯುವ ಸ್ಥಾನಗಳ ಬಗ್ಗೆ ನಮ್ಮ ಮನಸ್ಸಿನಲ್ಲಿ ಒಂದು ಪಾವಿತ್ರ್ಯದ ಮತ್ತು ಶ್ರದ್ಧೆಯ ಭಾವನೆ ಸೃಷ್ಟಿಯಾಗುತ್ತದೆ. ಐತಿಹಾಸಿಕ ಮಹಾಪುರುಷನ ಅಥವಾ ಘಟನೆಯ ಸ್ಮೃತಿಯಲ್ಲಿ ಜಾತ್ರೆ ನಡೆದಾಗ ಅದು ನಮ್ಮ ಬದುಕಿನ ಒಂದು ಅಂಗವೇ ಆಗಿಬಿಡುತ್ತದೆ. ಅಂಥ ಮಹಾಪುರುಷನ ಸಂಪೂರ್ಣ ಜೀವನ ಒಮ್ಮೆಲೆ ನಮ್ಮ ಕಣ್ಣುಗಳೆದುರು ಸುಳಿದುಹೋಗುತ್ತದೆ. ಮತ್ತೆ ನೀವು ಯಾವುದೇ ಜಾತ್ರೆಗೆ ಹೋಗಿ, ಅಲ್ಲಿ ನಿಮಗೆ ಭಾರತದ ಮೂಲೆ–ಮೂಲೆಗಳಿಂದ ಬಂದ ಸಾಧು–ಸಂತರು ಭೇಟಿಯಾಗುತ್ತಾರೆ. ಶ್ರೇಷ್ಠ ವಿದ್ವಾಂಸರು ಭೇಟಿಯಾಗುತ್ತಾರೆ. ಎಲ್ಲೆಡೆಯಿಂದ, ಎಲ್ಲ ವಯಸ್ಸಿನವರು, ಎಲ್ಲ ಕ್ಷೇತ್ರದವರು ಹಾಗೂ ಭಾರತದ ಪ್ರತಿಯೊಂದು ಸ್ಥಳದಿಂದಲೂ ಅಲ್ಲಿ ಬಂದುಸೇರುವ ಜನರ 'ಭಾರತೀಯತೆಯ ಸಾಕ್ಷಾತ್ಕಾರ' ಜಾತ್ರೆಯಲ್ಲಿ ಆಗದೆ ಇನ್ನೆಲ್ಲಿ ಆಗಲು ಸಾಧ್ಯ? ಇಂಥ ಜಾತ್ರೆಗಳಿಗೆ ಬಂದ ವಿದ್ವಾಂಸರು ತಮ್ಮ–ತಮ್ಮ ಅಭಿಪ್ರಾಯಗಳನ್ನು ಪ್ರತಿಪಾದಿಸುತ್ತಿದ್ದರು. ಅವು ಸಹಜವಾಗಿ ಇಡೀ ಭಾರತದಲ್ಲಿ ವ್ಯಾಪಿಸಿಬಿಡುತ್ತಿದ್ದವು. ನಮ್ಮ ಆರ್ಥಿಕ ಜೀವನದ ಮೇಲೆ ಈ ಜಾತ್ರೆಗಳ ಪ್ರಭಾವವನ್ನು ಸಹಜವಾಗಿಯೇ ತಿಳಿಯಬಹುದು. ಮಾಘಮಾಸದ ಅಮಾವಾಸ್ಯೆಯ ದಿನದಂದು. ಇಂದಿಗೂ ಯಾತ್ರಿಕರು ಗಂಗೆಯಲ್ಲಿ ಮಿಂದು ತಮ್ಮ ಜೀವನದಲ್ಲಿ ಪುಣ್ಯಭಾವನೆಯನ್ನು ಒಯ್ಯುತ್ತಾರೆ. ಆದರೆ ಆ ದಿನಗಳಲ್ಲಿ ಸಾಧು–ಸಂತರ ದರ್ಶನ ಮತ್ತು ಅವರ ಉಪದೇಶಗಳಿಂದ ತಮ್ಮ ಮನಸ್ಸನ್ನು ಸ್ವಚ್ಛಗೊಳಿಸಿಕೊಂಡು ಪುನೀತರಾಗುವ ಅವಕಾಶ ಪ್ರತಿಯೊಬ್ಬರಿಗೂ ಲಭಿಸುತ್ತಿತ್ತು. ಆ ವರ್ಷ ಬರುವ ಯಾತ್ರಿಕರು ತಮ್ಮನ್ನು ಧನ್ಯರೆಂದು ತಿಳಿಯುತ್ತಿದ್ದರು. ಅವರಿಗೆ ತಮ್ಮ ವರ್ಷಗಟ್ಟಲೆಯ ಕೊಳಕನ್ನು ತೊಳೆಯಲು ಅವಕಾಶ ದೊರೆಯುತ್ತಿತ್ತು.



ಅಂದು ಜನ ಬಂದು ಪಿತೃ–ತರ್ಪಣ ಮಾಡುತ್ತಾರೆ. ಇಂದು ಅವರ ವಾಸ್ತವಿಕ ತರ್ಪಣವಾಯಿತು. ಇಂದು ಅವರು ನೀರಿನ ಎರಡು ಹನಿಗಳನ್ನು ಬೊಗಸೆಗಳಲ್ಲಿ ಹಿಡಿದು ಪಿತೃಗಳಿಗೆ ಅರ್ಪಿಸಲಿಲ್ಲ, ಬದಲಾಗಿ ತಮ್ಮ ಹೃದಯದಿಂದಲೂ ತರ್ಪಣ ಕೊಟ್ಟರು. ಪೂರ್ವಿಕರ ಸ್ಮೃತಿಯನ್ನು ಸದಾ ಕಾಯ್ದಿಟ್ಟುಕೊಳ್ಳುವುದು, ಅವರ ಪರಂಪರೆಯನನ್ನು ಮುಂದುವರಿಸಿಕೊಂಡು ಹೋಗುವುದು, ಅವರ ಧರ್ಮ, ಜ್ಞಾನ, ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಾದ ಅಭಿವೃದ್ಧಿಯನ್ನು ವೃದ್ಧಿಸುವುದು, ಅವರ ಆತ್ಮದಲ್ಲಿ ಒಂದಾಗಿ ಅವರ ಆದರ್ಶಗಳನ್ನು ರಕ್ಷಿಸುವಂತೆ ಜೀವನ ಸಾಗಿಸುವುದೇ ತರ್ಪಣದ ವಾಸ್ತವಿಕ ಉದ್ದೇಶವಾಗಿದೆ. ಇಂದು ಆ ಉದ್ದೇಶ ನೆರವೇರಿತು, ಯಾಕೆಂದರೆ ಸ್ವಾಮಿ ಶಂಕರಾಚಾರ್ಯರು ಅವರಿಗೆ ತಮ್ಮ ಇಡೀ ಪುರಷಾರ್ಥಗಳ ಆತ್ಮವನ್ನು ಸಾಕ್ಷಾತ್ಕಾರ ಮಾಡಿಸಿದ್ದರು.

ಮಾಘಮಾಸದ ಜಾತ್ರೆಯಂತೂ ಮುಕ್ತಾಯವಾಯಿತು, ಆದರೆ ಸ್ವಾಮಿ ಶಂಕರಾಚಾರ್ಯರು ಅಲ್ಲಿ ಇನ್ನೂ ಕೆಲವು ದಿನ ಉಳಿದರು. ಜಾತ್ರೆ ಹಾಗೆಯೇ ನಡೆಯುತ್ತಿತ್ತು. ; ಈಗ ಜಾತ್ರೆ ಸಂಗಮದಿಂದ ಭಾರದ್ವಾಜ ಆಶ್ರಮಕ್ಕೆ ಬಂದಿತ್ತು. ಪ್ರಯಾಗದ ಭೂಮಿ ಹೆಜ್ಜೆ–ಹೆಜ್ಜೆಗೂ ಪವಿತ್ರವಾದುದು. ಕಾರಣ ಅಲ್ಲಿ ಪ್ರಜಾಪತಿ ಬಹ್ಮ ಯಜ್ಞ ಮಾಡಿದ್ದ. ಹೀಗಾಗಿ ಅದರ ಹೆಸರು 'ಪ್ರಯಾಗ'ವೆಂದಾಯಿತು. ಆದರೆ ಭಾರದ್ವಾಜ ಆಶ್ರಮ ಇನ್ನೂ ಹೆಚ್ಚು ಪವಿತ್ರವಾಗಿತ್ತು. ಅಲ್ಲಿ ನಾಲ್ಕೂ ವೇದಗಳ ನಿಯಾಮಕ ಬ್ರಹ್ಮನ ಮುಖದಿಂದ ಹಾಗೂ ಅವನ ಪ್ರತಿನಿಧಿಯಾಗಿ ಅನೇಕ ಕುಲಪತಿಗಳು, ಆಚಾರ್ಯರು ಮತ್ತು ವೇದಶಾಸ್ತ್ರಜ್ಞರ ಮುಖದಿಂದ ಸತತವಾಗಿ ಶ್ರುತಿಸ್ವರೂಪಿಣಿ ಸರಸ್ವತಿಯ ಸ್ರೋತ ಹರಿಯುತುತ್ತಿತ್ತು. ಆ ಸರಸ್ವತಿಯಲ್ಲಿ ನಮ್ಮ ವಟುಗಳು ಮಿಂದು ತಮ್ಮ ಬದುಕಿನ ಪಾವಿತ್ರ್ಯ ಮತ್ತು ಪುರಷಾರ್ಥ ಭಾವನೆಗಳೊಂದಿಗೆ ಪುಣ್ಯ ಸಂಪಾದಿಸುತ್ತಿದ್ದರು. ಈ ಭಾರದ್ವಾಜನ ಆಶ್ರಮದಲ್ಲಿ ಒಂದು ಶ್ರೇಷ್ಠ ವಿದ್ಯಾಕೇಂದ್ರವಿತ್ತು. ಅಲ್ಲಿ ಸಹಸ್ರಾರು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು. ಭಗವಾನ್ ಶ್ರೀರಾಮನ ಚರಣಧೂಳಿಯಿಂದ ಪವಿತ್ರಗೊಂಡ ಭಾರದ್ವಾಜ ಆಶ್ರಮ ಬೌದ್ಧರ–ಕಾಲದಿಂದಲೂ ಮಹತ್ವವನ್ನು ಪಡೆದಿದೆ. ಆ ದಿನಗಳಲ್ಲಿ ಅಲ್ಲಿ ಸರಸ್ವತಿಯು ಇಂದಿನಂತೆ ಲುಪ್ತಳಾಗಿದ್ದಳು. ಆಚಾರ್ಯ ಶಂಕರರು ಅದೆಷ್ಟೋ ಬಾರಿ ಅದೇ ಜಾಗದಲ್ಲಿ ಮತ್ತೆ ಸರಸ್ವತಿಯನ್ನು ಹರಿಸಿದರು. ಅವರು ವೇದಾಂತ–ಸೂತ್ರಗಳನ್ನು ಬೋಧಿಸಲು ಪ್ರಾರಂಭಿಸಿದರು. ಸೂತ್ರಗಳ ಭಾಷ್ಯ ಮತ್ತು ಅವುಗಳ ವಿಶದೀಕರಣ ಸದಾ ನಡೆಯುತ್ತಿತ್ತು. ಸರಸ್ವತಿಯ ಆ ಸ್ವಚ್ಛ ಜ್ಞಾನದ ಧಾರೆಯಲ್ಲಿ ಮೀಯಲು ಸಾವಿರಾರು ಜನರ ಗುಂಪು ಕಲೆತಿರುತ್ತಿತ್ತು. ವೇದಾಂತದ ಜಿಜ್ಞಾಸುಗಳು ದೂರ–ದೂರದಿಂದ ಬರಲಾರಂಭಿಸಿದರು. ಅವರ ಅನೇಕ ವಿರೋಧಿಗಳೂ ಅವರೊಂದಿಗೆ ತರ್ಕ ಮಾಡಲು ಬಂದರು; ಅವರ ಶಿಷ್ಯರಾಗಿ ಉಳಿದರು. ಅದೆಷ್ಟೋ ಬಾರಿ,

'ತರ್ಕ' ಮತ್ತು 'ಶಾಸ್ತ್ರದ ಚರ್ಚೆ' ಇತ್ಯಾದಿ ಶಬ್ದಗಳನ್ನು ಕೇಳಿ ಅವರಲ್ಲಿ ಹೆಚ್ಚು ವಾದ–ವಿವಾದವಾಗುತ್ತಿತ್ತೆಂಬ ಕಲ್ಪನೆ ನಮಗಾಗುತ್ತದೆ. ಆದರೆ ಇದು ಶಂಕರಾಚಾರ್ಯರ ಮಾರ್ಗವಾಗಿರಲಿಲ್ಲ. ಅವರು ಇಂಥ ವಿವಾದಗಳಿಂದ ದೂರವಿರುತ್ತಿದ್ದರು. ಕಾರಣ, ತರ್ಕದಿಂದ ಮತ್ತು ನಮ್ಮ ಜ್ಞಾನದಿಂದ ಒಮ್ಮೆ ವಿರೋಧಿಗಳ ಬಾಯಿ ಮುಚ್ಚಿಸಿದಾಗ್ಯೂ ಅವರು ನಮ್ಮವರಾಗುವುದಿಲ್ಲ. ತರ್ಕದಿಂದ ಮಿತ್ರರಾಗುವುದಿಲ್ಲ, ಆದರೆ ಶತ್ರುವಾಗಬಹುದು ಎಂಬುದು ಅವರಿಗೆ ತಿಳಿದಿತ್ತು. ತರ್ಕಕ್ಕಾಗಿ ತರ್ಕಮಾಡುವವರೊಂದಿಗೆ ಅವರೆಂದೂ ಮಾತನಾಡಲಿಲ್ಲ. ಹಾಂ, ಮನಸ್ಸಿನಲ್ಲಿ ನಿಜವಾದ ಸಂಶಯ ಹೊತ್ತು ಬಂದಾಗ ಮತ್ತು ಮನಸ್ಸಿನಲ್ಲಿ ದೇಶ ಮತ್ತು ಧರ್ಮದ ಬಗ್ಗೆ ನಿಜವಾದ ಪ್ರೀತಿಯಿರುವಂತಹವರು ಬಂದಾಗ ಸಂದೇಹಗಳನ್ನು ನಿವಾರಿಸುತ್ತಿದ್ದರು. ಅವರ ಮೇಲೆ ತಮ್ಮ ಸಾಮರ್ಥ್ಯದ, ಮಾರ್ಗದ ವಾಸ್ತವಿಕತೆಯ ಮತ್ತು ತಮ್ಮ ಹೃದಯದ ದೃಢತೆ ಹಾಗೂ ನಿಸ್ವಾರ್ಥತೆಯ ಮುದ್ರೆಯನ್ನೊತ್ತಲು ತಡವಾಗುತ್ತಿರಲಿಲ್ಲ. ಇಲ್ಲಿಯೂ ತಮ್ಮ ಶಿಷ್ಯರ ಸಂಖ್ಯೆಯನ್ನು ಸಾಕಷ್ಟು ಹೆಚ್ಚಿಸಿಕೊಂಡರು.

ಶಂಕರಾಚಾರ್ಯರ ಅಲೌಕಿಕ ಜ್ಞಾನಪುಂಜದ ಕಾಂತಿಯಿಂದ ಮಾತ್ರವೇ ಪ್ರಯಾಗ ಜಗಮಗಿಸಲಿಲ್ಲ. ಬದಲಾಗಿ ಅವರ ಸ್ನೇಹಸ್ನಿಗ್ಧ ಹೃದಯದ ರಸ–ಧಾರೆಯಿಂದ ಸಿಂಚನಗೊಂಡು ಸರಸಮಯವಾಯಿತು. ಒಂದು ದಿನ ಅವರ ಶಿಷ್ಯನೊಬ್ಬ ಅಕ್ಷಯವಟವನ್ನು ನೋಡಲು ಹೋದ ಈ ವಟವೃಕ್ಷ ಸೃಷ್ಟಿಯ ಆದಿಕಾಲದಿಂದ ತನ್ನ ಜಾಗದಲ್ಲೇ ನಿಂತಿತ್ತು. ಪ್ರಳಯ ಕಾಲದಲ್ಲಿ ಸಮಸ್ತ ಸೃಷ್ಟಿ ನಾಶವಾದರೂ ವಟವೃಕ್ಷ ಹಾಗೇಯೇ ನಿಂತಿತ್ತು. ಆಗ ಮಾರ್ಕಂಡೇಯ ಋಷಿಗಳು ಇದನ್ನೇ ಆಶ್ರಯಿಸಿದ್ದರು. ಆ ವಟವೃಕ್ಷದ ಕೆಳಗೆ ಅವರು ಕುಷ್ಠರೋಗಿಯೊಬ್ಬನನ್ನು ನೋಡಿದರು. ಅವನಿಡೀ ದೇಹ ಬಿಳುಪಾಗಿತ್ತು. ಕಣ್ಣುಗಳಿಗೆ ಸೂರ್ಯನಡೆಗೆ ನೋಡುವ ಶಕ್ತಿ ಇರಲಿಲ್ಲ. ಅವನು ಜೀವನದ ಬಗ್ಗೆ ನಿರಾಸೆಗೊಂಡಿದ್ದು ಆತ್ಮಹತ್ಯೆಯಂತಹ ನೀಚ ಕೃತ್ಯದಿಂದ ತನ್ನ ದಯನೀಯ ಸ್ಥಿತಿಯಿಂದ ಬಿಡುಗಡೆ ಪಡೆಯಲು ಬಯಸುತ್ತಿದ್ದ. ಶಿಷ್ಯ ಅವನನ್ನು ಆತ್ಮಹತ್ಯೆಯಿಂದ ತಡೆದು ಅವನನ್ನು ಶಂಕರಾಚಾರ್ಯರ ಬಳಿಗೆ ಕರೆತಂದ. ಆಚಾರ್ಯರು ಅವನನ್ನು ಖಂಡಿತ ಗುಣಪಡಿಸುವರೆಂಬ ವಿಶ್ವಾಸ ಅವನಿಗಿತ್ತು. ಜನ ಅವನನ್ನು ನೋಡಿ ದೂರ ಓಡಲಾರಂಭಿಸಿದರು. ಯಾವ ಪೀಡೆಯನ್ನು ಕರೆತಂದೆ ಎಂದು ಶಿಷ್ಯರು ಶಾಪ ಹಾಕಿದರು. ಆದರೆ ಆಚಾರ್ಯರು ಸಂತೋಷದಿಂದ ಅವನನ್ನು ಸ್ವಾಗತಿಸಿದರು. ಅವನನ್ನು ಔಷಧಿಗಳಿಂದ ಉಪಚರಿಸಿದರು. ಮಹಾಪುರುಷರ ಅಲೌಕಿಕ ಶಕ್ತಿಯಿಂದಾಗಿ ಅವನು ಗುಣಮುಖನೂ ಆದ. ಅವನ ದೇಹದ ಮೇಲಿನ ಕಲೆಗಳೂ ಕಣ್ಮರೆಯಾದವು. ಶಂಕರಾಚಾರ್ಯರು ಅವನ ಜೀವನಕ್ಕೆ ತಮ್ಮ ಜೀವನವನ್ನು ಹಾಕಿ ಅವನಿಗೆ ಜೀವದಾನ ಮಾಡಿದರು. ಅವನಿಗೆ ಉದಂಕನೆಂದು ನಾಮಕರಣ ಮಾಡಿ, ಅವನನ್ನು ಶಿಷ್ಯನನ್ನಾಗಿ ಮಾಡಿಕೊಂಡರು. ತಮ್ಮ ಸಮಾಜದ ಕೆಳವರ್ಗದ ಜನರ ಬಗ್ಗೆಯೂ ಅವರ ಹೃದಯದಲ್ಲಿ ಅದೆಷ್ಟು ಪ್ರೀತಿಯಿತ್ತು, ಅದೆಷ್ಟು ಸಹೃದಯತೆ ಇತ್ತು! ಅದಕ್ಕಾಗಿಯೇ ಸಮಾಜ ಅವರಾದಾಯಿತು. ಅವರು ಸಮಾಜದ ಸೇವಕರಾದರೆ, ಸಮಾಜವೂ ಅವರ ಸೇವಕನಾಯಿತು.



ಅವರು ಪ್ರಯಾಗದಲ್ಲಿ ವಾಸಿಸುತ್ತಿರುವಾಗಲೇ ಅವರ ಯಮುನಾಷ್ಟಕ, ಪ್ರಯಾಗಾಷ್ಟಕ, ಮಾಧವಾಷ್ಟಕ, ಲಕ್ಷ್ಮೀ–ನೃಸಿಂಹ ಪಂಚರತ್ನ ಮತ್ತು ವೇದಸಾರ ಶಿವಸ್ತೋತ್ರಗಳು ಕವಿತೆಗಳ ರೂಪದಲ್ಲಿ ಪ್ರಕಟಗೊಂಡವು. ಪ್ರಯಾಗಾಷ್ಟಕದ ಒಂದೊಂದು ಅಕ್ಷರವೂ ಶಂಕರಾಚಾರ್ಯರಿಗೆ ಪ್ರಯಾಗ ಮತ್ತು ಯಮುನೆಯ ಬಗ್ಗೆ ಇದ್ದ ಶ್ರದ್ಧೆಯ ಸಾಕಾರ ಮೂರ್ತಿಯಾಗಿದೆ. ಇದರೊಂದಿಗೆ ನಮ್ಮ ಪ್ರಾಚೀನ ಸ್ಮೃತಿಗಳು ಅಡಗಿಕೊಂಡಿವೆ; ಈ ಅಷ್ಟಕಗಳನ್ನು ಓದಿದರೆ ಅವು ಒಮ್ಮೆಲೇ ಜಾಗೃತಗೊಳ್ಳುತ್ತವೆ ಹಾಗೂ ಹೃದಯ ಸ್ವಾಭಿಮಾನ, ಶ್ರದ್ಧೆ ಮತ್ತು ಭಕ್ತಿಯಿಂದ ತುಂಬಿತುಳುಕುತ್ತದೆ.

ಆ ವಟವೃಕ್ಷವನ್ನು, ಅಕ್ಷಯವಟವನ್ನು ಇಂದಿಗೂ ಪ್ರಯಾಗದ ಕೋಟೆಯಲ್ಲಿ ನೋಡಬಹುದು, ಆದರೆ ಈಗ ಅದು ಮೋಟು ಮರವಾಗಿದೆ. ಇದನ್ನು ಅಕ್ಬರ್ ಕಡಿಸಿದ. ಜಹಂಗೀರ್ ಇದನ್ನು ಕಡಿಸಿ, ಮೇಲಿನಿಂದ ಬಿಸಿ ಎಣ್ಣೆಯನ್ನು ಸುರಿಸಿದ, ಆದರೆ ಈ ಅಕ್ಷಯ ವಟವೃಕ್ಷ ಅಕ್ಷಯ ಹಿಂದೂ ಸಮಾಜದಂತೆ ಕಡಿದಾಗ ಮತ್ತೆ–ಮತ್ತೆ ಹಸಿರಾಗುತ್ತದೆ.

ಪ್ರಯಾಗದಲ್ಲಿ ಶಂಕರಾಚಾರ್ಯರು ಒಂದು ದೊಡ್ಡ ವಿಜಯವನ್ನೇ ಸಾಧಿಸಿದರು. ಅದನ್ನು ವರ್ಣಿಸದಿದ್ದರೆ ಶಂಕರಾಚಾರ್ಯರ ಪ್ರಯಾಗ ಯಾತ್ರೆಯ ವೃತ್ತಾಂತ ಅಪೂರ್ಣವಾಗುತ್ತದೆ. ಈ ವಿಜಯವನ್ನು ಪ್ರಭಾಕರಾಚಾರ್ಯರ ಮೇಲೆ ಸಾಧಿಸಲಾಗಿತ್ತು. ಪ್ರತಿಷ್ಠಾನಪುರಿ ಗಂಗೆಯ ಎಡಭಾಗದ ತೀರದಲ್ಲಿದೆ. ಅದು ಪ್ರಾಚೀನ ಕಾಲದಲ್ಲಿ ಸೋಮವಂಶಿ ರಾಜರುಗಳ ರಾಜಧಾನಿಯಾಗಿತ್ತು. ಪ್ರತಿಷ್ಠಾನಪುರಿಯಲ್ಲಿ ಕುಮಾರಿಲಭಟ್ಟರ ಶಿಷ್ಯ ಪ್ರಭಾಕರಾಚಾರ್ಯ ವಾಸಿಸುತ್ತಿದ್ದ. ಪ್ರಭಾಕರ ಹೆಸರಿಗೆ ಮಾತ್ರ ಕುಮಾರಿಲಭಟ್ಟರ ಶಿಷ್ಯನಾಗಿದ್ದ; ಆದರೆ ಅವನು ಕರ್ಮಕಾಂಡದಲ್ಲಿಯೂ ತನ್ನ ಹೊಸ ಮಾರ್ಗವನ್ನು ಕಂಡುಕೊಂಡಿದ್ದ. ಅವನು ಕರ್ಮಕಾಂಡವನ್ನು ಜೀವನದ ಸಾರ–ಸರ್ವಸ್ವವೆಂದು ತಿಳಿದಿದ್ದ. ಸ್ವಾಮಿ ಶಂಕರಾಚಾರ್ಯರೇ ಖುದ್ದು ಅವನ ಬಳಿಗೆ ಹೋದರು. ಇಷ್ಟು ಶ್ರೇಷ್ಠ ಮಹಾಪುರುಷರು ಖುದ್ದಾಗಿ ತನ್ನನ್ನು ಭೇಟಿಯಾಗಲು ಬಂದದ್ದನ್ನು ಕಂಡು ಪ್ರಭಾಕರಾಚಾರ್ಯ ಗರ್ವದಿಂದ ಬೀಗಿದ. ಅವನು ಆಕಾಶಕ್ಕೇರಿದ. ತಾನೋರ್ವ ಮಹಾನ್ ವ್ಯಕ್ತಿ, ಅದಕ್ಕೇ ಶಂಕರಾಚಾರ್ಯರಂತಹವರು ನನ್ನನ್ನು ಭೇಟಿಯಾಗಲು ಬರುತ್ತಾರೆ ಎಂದು ಅವನು

ತಿಳಿದ. ಈಗಂತೂ ಅವರು ನನ್ನಲ್ಲಿಗೆ ಬಂದೇ ಇದ್ದಾರೆ, ಅವರನ್ನು ಗೆದ್ದು ಅವರ ಶಿಷ್ಯರ ಸಮೇತ ನನ್ನ ಧರ್ಮಕ್ಕೆ ದೀಕ್ಷೆ ಮಾಡಿಕೊಂಡು ಬಿಡುತ್ತೇನೆಂದು ಯೋಚಿಸಿದ. ಆದರೆ ಅತಿಯಾಸೆ ಗತಿಗೇಡು ಎಂಬ ಗಾದೆಯಂತಾಯಿತು ಅವನ ಸ್ಥಿತಿ. ಅವನು ಶಂಕರಾಚಾರ್ಯರನ್ನು ಗೆದ್ದು ಶಿಷ್ಯರನ್ನಾಗಿ ಮಾಡಿಕೊಳ್ಳಲು ಹೊರಟ. ಆದರೆ ತಾನೇ ಸೋತು ಶಿಷ್ಯನಾದ. ಅಷ್ಟೇ ಅಲ್ಲ, ಅವನ ಸಮಸ್ತ ಅಗ್ರಹಾರವೇ ಶಂಕರರ ಧರ್ಮದಲ್ಲಿ ದೀಕ್ಷೆಗೊಂಡಿತು.

ಪ್ರಭಾಕರನನ್ನು ಗೆಲ್ಲುವಲ್ಲಿ ಶಂಕರರ ಜ್ಞಾನವಷ್ಟೇ ಮಾತ್ರವಲ್ಲ, ಬದಲಾಗಿ ಪ್ರಭಾಕರನ ಜೀವನದೊಂದಿಗೆ ಘನಿಷ್ಠ ಸಂಬಂಧವಿದ್ದ ಘಟನೆಯೊಂದು ತುಂಬಾ ಸಹಕರಿಸಿತು. ಪ್ರಭಾಕರನಿಗೆ ಪೃಥ್ವೀಧರನೆಂಬ ಒಬ್ಬ ಮಗನಿದ್ದ. ಅವನು ಐದನೇ ವಯಸ್ಸಿನಲ್ಲಿಯೇ ಮಾತನಾಡುವುದು–ನಡೆಯುವುದನ್ನು ನಿಲ್ಲಿಸಿಬಿಟ್ಟಿದ್ದ. ಅವನು ಧ್ಯಾನಮಾಡುತ್ತಿರುವ ಯೋಗಿಯಂತೆ ಶಾಂತ ಚಿತ್ತದಿಂದ ಕುಳಿತಿರುತ್ತಿದ್ದ. ಪ್ರಭಾಕರ ಅನೇಕ ವಿಧದಲ್ಲಿ ಪ್ರಯತ್ನಿಸಿದ, ಔಷಧೋಪಚಾರಗಳನ್ನು ಮಾಡಿಸಿದ. ಆದರೆ ಫಲ ಮಾತ್ರ ನೀಡಲಿಲ್ಲ. ಪೃಥ್ವೀಧರನಲ್ಲಿ ತಿಳಿವಳಿಕೆ ಮತ್ತು ಜ್ಞಾನದ ಅಭಾವವಿರಲಿಲ್ಲ, ಆದರೆ ಅವನದ್ದು ವಿಕ್ಷಿಪ್ತ ಪರಿಸ್ಥಿತಿಯಾಗಿತ್ತು ಎಂಬುದನ್ನು ಶಂಕರಾಚಾರ್ಯರು ಗಮನಿಸಿದರು. ಇದಕ್ಕೆ ಕಾರಣ ಅವನಿಗೆ ತನ್ನ ಸುಪ್ತ ಭಾವನೆಗಳನ್ನು ವ್ಯಕ್ತಗೊಳಿಸುವ ಅವಕಾಶ ಸಿಗುತ್ತಿರಲಿಲ್ಲ. ಯಾರೂ ಅವನೊಂದಿಗೆ ಪ್ರೀತಿಯಿಂದ ಮಾತನಾಡುತ್ತಿರಲಿಲ್ಲ, ಅವನನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಿರಲಿಲ್ಲ. ಶಂಕರಾಚಾರ್ಯರು ಅವನೊಂದಿಗೆ ಆತ್ಮೀಯತೆಯಿಂದ ಮಾತನಾಡಿದರು. ಬಾಲಕನಿಗೆ ಪ್ರೀತಿಯ ಹಸಿವೆ ಇರುತ್ತದೆ, ಅವನಿಗೆ ಹೃದಯದ ಪ್ರೀತಿಯ ಅರಿವಿರುತ್ತದೆ. ಆದ್ದರಿಂದ ಅವನು ಶಂಕರರ ಸಮೀಪಕ್ಕೆ ಬಂದ. ಆಚಾರ್ಯರು ಕ್ರಮೇಣ ಸರಳ ಪ್ರಶ್ನೆಗಳನ್ನು ಹಾಕಿ ಅವನ ಮನಸ್ಸಿನ ಗೂಢ ಸಂಗತಿಗಳನ್ನು ಹೊರಗೆ ತಂದರು. ಅವನ ಮನಸ್ಸಿನಲ್ಲಿ ವೇದಾಂತದ ಗೂಢ ಸಿದ್ಧಾಂತಗಳು ಈ ಮೊದಲೇ ಹೆಪ್ಪುಗಟ್ಟಿ ಕೂತಿವೆ ಎಂಬ ವಿಚಾರ ತಿಳಿಯಿತು. ಅಷ್ಟು ಘೋರ ಕರ್ಮಕಾಂಡವೆಸಗುವವನ ಮನೆಯಲ್ಲಿ ಶಾಂತಿ ಸಿಗಲು ಹೇಗೆ ಸಾಧ್ಯ? ಅವನು ಶಂಕರಾಚಾರ್ಯರೆದುರು ತನ್ನ ಹೃದಯವನ್ನು ಬಿಚ್ಚಿಟ್ಟು ಶಾಂತಿಯನ್ನು ಪಡೆದ. ಶಂಕರಾಚಾರ್ಯರು ಅವನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿ ಅವನಿಗೆ 'ಹಸ್ತಾಮಲಕ' ಎಂಬ ಹೆಸರನ್ನು ನೀಡಿದರು. ಯಾಕೆಂದರೆ ಅವನ ಸಂಪೂರ್ಣ ಜ್ಞಾನ ಕೈಯಲ್ಲಿಟ್ಟ ನೆಲ್ಲಿಕಾಯಿಯಂತೆ ಸುಸ್ಪಷ್ಟವಾಗಿತ್ತು.

ಪ್ರತಿಷ್ಠಾನಪುರಿ ಇಂದಿಗೂ ಭಗ್ನಾವಶೇಷದ ಸ್ಥಿತಿಯಲ್ಲಿದೆ. ಅದನ್ನು ಈಗ ಝೂಂಸಿ ಎಂದು ಕರೆಯುತ್ತಾರೆ. ಒಂದು ಕಾಲದಲ್ಲಿ ಅಗ್ನಿಯ ಜ್ವಾಲೆಗೆ ಸಿಲುಕಿದ್ದರಿಂದಾಗಿಯೇ ಅದರ ಹೆಸರು ಬದಲಾಗಿ 'ಝೂಂಸಿ' ಎಂದಾಯಿತು. (ಝೂಂಸಿ ಅಂದರೆ ಕಂದುಹೋದ ಎಂದರ್ಥವಾಗುತ್ತದೆ)



# ೧೧. ಕುಮಾರಿಲ ಭಟ್ಟ

ಪ್ರತಿಷ್ಠಾನಪುರಿಯಲ್ಲಿ ಪ್ರಭಾಕರಾಚಾರ್ಯರಿಗೆ ತಮ್ಮ ಧರ್ಮದ ದೀಕ್ಷೆ ನೀಡಿ ಶಂಕರ ಸ್ವಾಮಿಗಳು ಪೂರ್ವಮೀಮಾಂಸಕರ ಒಂದು ವರ್ಗವನ್ನಂತೂ ತಮ್ಮೆಡೆಗೆ ಸೇರಿಸಿಕೊಂಡಿದ್ದರು. ಆದರೆ ಅವರಲ್ಲಿ ಇನ್ನೂ ಬಹಳಷ್ಟು ಮೀಮಾಂಸಕರು, ಉಳಿದಿದ್ದರು. ಇವರಲ್ಲಿ ತಮ್ಮ ಪುರಾತನ ಪರಂಪರೆಯ ಬಗ್ಗೆ ಪೂರ್ಣ ಪ್ರಮಾಣದ ಪ್ರೀತಿಯಿರುತಿದ್ದದ್ದು ಈ ಮೀಮಾಂಸಕರ ವಿಶೇಷತೆಯಾಗಿತ್ತು. ಇವರಿಗೆ ವೇದಗಳ ಬಗ್ಗೆ ಅಳಿಯದ ಶ್ರದ್ಧೆಯಿತ್ತು. ರಾಷ್ಟ್ರದ ಬಗ್ಗೆ ಅಪಾರ ಭಕ್ತಿಯಿತ್ತು. ಇವರಲ್ಲಿ ಧಾರ್ಮಿಕ ಮತಾಂಧತೆಯನ್ನೂ ಅಪಾರವಾಗಿ ಕಾಣಬಹುದಿತ್ತು. ಗುರುಗಳು ಮತ್ತು ವೈದಿಕ ಧರ್ಮದ ಪುನರುದ್ಧಾರದಲ್ಲಿ ಜೀವನವನ್ನೇ ಕಳೆದುಕೊಂಡ ಕುಮಾರಿಲರ ಸ್ಮೃತಿ ಪ್ರಯಾಗದಲ್ಲಿ ಆಗಲೂ ಬಿಸಿಯಾಗಿತ್ತು. ಕುಮಾರಿಲರೇ ತಗ್ಗುಮುಗ್ಗಾದ ಕಾಡುಗಳನ್ನು ಕಡಿದು ಅವರಿಗಾಗಿ ಮಾರ್ಗವನ್ನು ಸ್ವಚ್ಛಗೊಳಿಸಿದ್ದಾರೆಂಬ ವಿಷಯ ಸ್ವಾಮಿ ಶಂಕರಾಚಾರ್ಯರಿಗೆ ಚೆನ್ನಾಗಿ ತಿಳಿದಿತ್ತು. ಬಂಗಾಳ, ಬಿಹಾರ, ಮಧ್ಯಪ್ರದೇಶ, ಶೂರಸೇನ ಇತ್ಯಾದಿ ಪ್ರಾಂತ್ಯಗಳಲ್ಲಿ ಬೌದ್ಧರನ್ನು ಬುಡಸಹಿತ ಕಿತ್ತೆಸೆದ ಶ್ರೇಯಸ್ಸು ಕುಮಾರಿಲಭಟ್ಟರಿಗೇ ಸಲ್ಲುತ್ತದೆ. ಅವರ ಪ್ರಯತ್ನಗಳ ಫಲವಾಗಿಯೇ ಎಲ್ಲೆಡೆಯಲ್ಲೂ ಮತ್ತೆ ವೈದಿಕ ಧರ್ಮಕ್ಕೆ ಮನ್ನಣೆ ಸಿಗುತ್ತಿತ್ತು. ಆದರೂ ವೈದಿಕ ಧರ್ಮ ಇನ್ನೂ ಜನರ ಧರ್ಮವಾಗಿರಲಿಲ್ಲ. ಕಳೆದ ಶತಮಾನದ ಸಂಸ್ಕಾರಗಳು ಎಷ್ಟು ದಟ್ಟವಾಗಿದ್ದುವೆಂದರೆ ಅವುಗಳನ್ನು ಅಳಿಸಲು ಸಾಧ್ಯವಿರಲಿಲ್ಲ. ಆಚಾರ್ಯ ಶಂಕರರು ಈ ಸಮಸ್ಯೆಯ ಬಗ್ಗೆ ಚಿಂತಿಸುತ್ತಿರುವಾಗ, ಒಮ್ಮೆಲೆ ಅವರ ಬಾಯಿಯಿಂದ, "ಒಂದು ವೇಳೆ ಕುಮಾರಿಲ, ಇಂದು ನೀನಿದ್ದಿದ್ದರೆ!" ಎಂಬ ವಾಕ್ಯ ಹೊರ ಹೊಮ್ಮಿತ್ತು. ಕುಮಾರಿಲರಂತಹ ಅದ್ವಿತೀಯ ವಿದ್ವಾಂಸ ಮತ್ತು ದಣಿಯದ ಶ್ರಮವಹಿಸುವ ಸಹಾಯಕನಿಂದಾಗಿ ಶಂಕರಾಚಾರ್ಯರು ಬಹು ಬೇಗನೆ ತಮ್ಮ ಕೆಲಸಗಳನ್ನು ಪೂರೈಸಿಕೊಳ್ಳುತ್ತಿದ್ದರು. ಇಂದು ಅವರಿಗೆ ಅವನಿಲ್ಲದಿರುವುದು ಅಸಹ್ಯವೆನಿಸುತ್ತಿತ್ತು. ಆಚಾರ್ಯರ ಉದ್ಗಾರ ಬಳಿಯೇ ಕೂತಿದ್ದ ಉದಂಕನಿಗೆ ಅರ್ಥವಾಗಲಿಲ್ಲ. ಅವನು ವಿನಯದಿಂದ ಕೇಳಿದ, "ಆಚಾರ್ಯರೇ ನೀವು ಯಾರನ್ನು ಸ್ಮರಿಸಿದಿರಿ? ಈ ಕುಮಾರಿಲರು ಯಾರು?"

"ಉದಂಕ, ನಿನಗೆ ಕುಮಾರಿಲರು ಗೊತ್ತಿಲ್ಲವೇ?" ಆಚಾರ್ಯರು ಸ್ವಲ್ಪ

ಕ್ಷೋಭೆಗೊಂಡು ಹೇಳಿದರು.

ಉದಂಕ ಶಾಂತನಾಗಿದ್ದ, ಅವನ ದೃಷ್ಟಿಗಳು ಜಿಜ್ಞಾಸಾಭಾವನೆಯನ್ನು ವ್ಯಕ್ತಪಡಿಸುತ್ತಿದ್ದುವು.

"ಉದಂಕ, ನಮ್ಮ ಮಾರ್ಗದಿಂದ ಯಾವ ಮಹಾಪುರುಷ ಸಮಸ್ತ ಅಡ್ಡಿಗಳನ್ನು ದೂರಮಾಡಿದನೋ, ಅವನ ಬಗ್ಗೆ ನಾವು ತಿಳಿಯದಿರುವುದು ನಮ್ಮ ದುರಾಷ್ಟವೇ ಸರಿ!" ಎಂದರು ಆಚಾರ್ಯರು. ಉದಂಕನಿಗೆ ತನ್ನ ಅಜ್ಞಾನದ ಬಗ್ಗೆ ಮನಸ್ಸಿನಲ್ಲೇ ದುಃಖವಾಯಿತು. ಅದಕ್ಕಿಂತಲೂ ಮಿಗಿಲಾಗಿ ತನ್ನ ಅಜ್ಞಾನ ಬಹಿರಂಗಗೊಂಡ ಆ ಜಿಜ್ಞಾಸಾ–ಮನೋವೃತ್ತಿಯ ಬಗ್ಗೆಯೂ ದುಃಖವಾಗುತ್ತಿತ್ತು.

ಆಚಾರ್ಯರು ಮತ್ತೆ ಹೇಳಿದರು: "ಕುಮಾರಿಲರು ಕಳೆದ ಶತಮಾನದಲ್ಲಿ ಪೂರ್ವಮೀಮಾಂಸೆಯ ಓರ್ವ ಪ್ರಕಾಂಡ ವಿದ್ವಾಂಸರಾಗಿದ್ದರು. ಅವರ ಬಳಿ ವಿದ್ಯೆ– ಬುದ್ಧಿಯಷ್ಟೇ ಅಲ್ಲ, ಓರ್ವ ರಾಷ್ಟ್ರಪ್ರೇಮಿಯ ಹೃದಯವೂ ಇತ್ತು. ಎಲ್ಲೆಡೆಯಲ್ಲೂ ಧರ್ಮದ ಅವನತಿ ಕಂಡು ಅವರ ಹೃದಯ ಗೋಳಾಡುತ್ತಿತ್ತು. ಅನಾಚಾರ ನೋಡಿ ಅವರ ಮನಸ್ಸಿಗೆ ತೀವ್ರ ನೋವಾಗುತ್ತಿತ್ತು. ಆದರೆ ಅವರು ದುಃಖ ಮತ್ತು ದುರಾವಸ್ಥೆ ಕಂಡು ಕೈಕಟ್ಟಿ ಕುಳಿತುಕೊಳ್ಳುವರಾಗಿರಲಿಲ್ಲ. ಅವರ ಜೀವನದಲ್ಲಿ ಅದೃಷ್ಟವಾದಿಗಳ ನಿಷ್ಕ್ರಿಯತೆ ಇರಲಿಲ್ಲ. ಅವರು ಕರ್ಮಯೋಗಿಗಳಾಗಿದ್ದರು, ಪರಿಶ್ರಮಿಗಳಾಗಿದ್ದರು, ಪುರುಷಾರ್ಥ ಸಾಧಿಸಲು ಅರಿತಿದ್ದರು. ನೊಂದ ಅಃತಕರಣವು ಅವರ ಪರಿಶ್ರಮಕ್ಕೆ ದೃಢ ನಿಶ್ಚಯ ತಾಳುವ ಸಾಮರ್ಥ್ಯ ನೀಡಿತು. ಧರ್ಮಸ್ಥಾಪನೆ ಮಾಡುವ ಬಯಕೆಯು ಅವರಿಗೆ ಕಷ್ಟವನ್ನು ಸಹಿಸುವ ಸಾಮರ್ಥ್ಯವನ್ನೂ ನೀಡಿತು. ಅವರು ವೇದಗಳ ಪತನದಿಂದ ದುಃಖಿಯಾದ ಮತ್ತು ವ್ಯಗ್ರಳಾದ ರಾಜಕುಮಾರಿಯ ವಚನಗಳನ್ನು– 'ಕೋ ವಾನು ವೇದಾನುದ್ಧರಿಷ್ಯತಿ' ತಮ್ಮ ಜೀವನದಲ್ಲಿ ಕೇಳಿದ್ದರು. ಆ ಮಾತುಗಳು ಅವರ ಕಿವಿಗಳಲ್ಲಿ ಸತತವಾಗಿ ಪ್ರತಿಧ್ವನಿಸುತ್ತಿದ್ದುವು. ಆ ಶಬ್ದಗಳು ಅವರು ನೆಮ್ಮದಿಯಿಂದ ಕೂರಲು ಬಿಡುತ್ತಿರಲಿಲ್ಲ. ಅವು ಅವರನ್ನು ತಲೆಯ ಮೇಲೆ ಪ್ರೇತವೊಂದು ಸವಾರಿ ಮಾಡಿರುವಂತೆ ನಿರಂತರವಾಗಿ ಕರ್ಮವೆಸಗಲು ಪ್ರೇರೇಪಿಸುತ್ತಿದ್ದವು".

ಉದಂಕ ಏಕಾಗ್ರತೆಯಿಂದ ಕೇಳುತ್ತಿದ್ದ. ಆಚಾರ್ಯರು ಅವನನ್ನು ನೋಡಿ ಸ್ವಲ್ಪ ತಡೆದು ಮತ್ತೆ ಹೇಳಿದರು: "ಕುಮಾರಿಲರು ವೇದಗಳನ್ನು ವಿರೋಧಿಸುವವರನ್ನು ನಾಶ ಮಾಡಲು ನಿರ್ಧರಿಸಿದರು. ಬೌದ್ಧರು ಅವರ ಕಣ್ಣುಗಳಿಗೆ ಶೂಲದಂತೆ ಚುಚ್ಚುತ್ತಿದ್ದರು. ಅವರಿಗೆ ಅವರನ್ನು ನಾಶಮಾಡಬೇಕಾಗಿತ್ತು. ಶತ್ರುವಿನ ರಹಸ್ಯವನ್ನರಿತು ಅವರನ್ನು ಸಹಜವಾಗಿ ಸೋಲಿಸಬಹುದು. ಆದ್ದರಿಂದ ಅವರು ಛದ್ಮವೇಷ ಧರಿಸಿ ವೇದ–ವಿರೋಧಿ ಬೌದ್ಧ ಧರ್ಮದ ಶಿಕ್ಷಣ ಪಡೆಯಲು ಒಂದು ಮಠಕ್ಕೆ ಹೋದ. ಅವರ ತ್ಯಾಗ, ಸಂಯಮ ಅದೆಷ್ಟು ಅಧಿಕವಾಗಿತ್ತು! ಇದರಿಂದಾಗಿ ಅವರು ತಮ್ಮ



ಜೀವನಕ್ಕಿಂತಲೂ ಪ್ರಿಯವಾದ ಧರ್ಮದ ಬಗ್ಗೆ ಅತ್ಯಂತ ಕಹಿ ಟೀಕೆ–ಟಿಪ್ಪಣಿಯನ್ನು ಕೇಳುತ್ತಿದ್ದರು. ಆದರೆ ವೇದನೆಯನ್ನು ಎಲ್ಲಿಯವರೆಗೆ ಅದುಮಿಡಲು ಸಾಧ್ಯ? ಅಗ್ನಿಯನ್ನು ಎಲ್ಲಿಯವರೆಗೆ ಮುಚ್ಚಿಡಲು ಸಾಧ್ಯ? ಅದೊಂದು ದಿನ ಅದು ಸಿಡಿಯಿತು. ಬೌದ್ಧ ಗುರುವಿನ ಬಾಯಿಯಿಂದ ವೇದಗಳ ಬಗ್ಗೆ ನಿಂದನೆ ಕೇಳಿ ಅವರ ಹೃದಯ ಸಿಡಿಯಿತು. ಅವರು ರೋದಿಸಿದರು. ಎಷ್ಟು ರೋದಿಸಿದರೆಂದರೆ ಕೊನೆಗೆ ಎರಡು ಹನಿ ಕಣ್ಣೀರು ಕೆಳಗೆ ಬಿತ್ತು. ಮನೆಯಿಂದ ಹೊರಗಟ್ಟಿದ ವ್ಯಕ್ತಿಯಂತೆ ಆ ಎರಡು ಹನಿ ಕಣ್ಣೀರು ರಹಸ್ಯವನ್ನು ಬಯಲುಮಾಡಿತು. ಅಹಿಂಸೆಯ ಬಡಾಯಿ ಕೊಚ್ಚುವ ಬೌದ್ಧರು ಅವರನ್ನು ಹಿಂಸಿಸಿದರು. ಅವರ ಪ್ರಾಣವನ್ನು ಹರಣಮಾಡಲು ನಿರ್ಧರಿಸಿದರು. ಆದರೆ ಅವರು ಪ್ರಾಣಕ್ಕೆ ಪ್ರತಿಯಾಗಿ ಒಂದು ಕಣ್ಣನ್ನು ಕೊಟ್ಟು ಅಲ್ಲಿಂದ ಪಾರಾದರು."

ಉದಂಕನ ಮುಖದಲ್ಲಿ ಶೋಕ ಮತ್ತು ಹರ್ಷದ ಸಹಾನುಭೂತಿಸೂಚಕ ಭಾವನೆಗಳು ಸ್ಪಷ್ಟವಾಗಿ ಕಾಣಿಸುತ್ತಿದ್ದವು. ಒಮ್ಮೆ ಬೌದ್ಧರ ಕುಕರ್ಮದಿಂದಾಗಿ ಆಚಾರ್ಯರಿಗೂ ಸಾವನ್ನು ಎದುರಿಸಬೇಕಾದ ಸಂದರ್ಭವೊದಗಿತ್ತು. ಆದರೆ ಆ ಘಟನೆಯನ್ನು ಸಹಜವಾಗಿ ಹತ್ತಿಕ್ಕಿಕೊಂಡು, ಅವರು ಅದೇ ರೀತಿಯ ಶಾಂತಚಿತ್ತದಿಂದ ಹೇಳುತ್ತಾ ಹೋದರು:

"ಕುಮಾರಿಲಭಟ್ಟರು ಬೌದ್ಧ ಧರ್ಮದ ಜ್ಞಾನವನ್ನು ಪಡೆದಿದ್ದರು. ಅವರಿಗೆ ಬೌದ್ಧರಲ್ಲಿ ಅಡಗಿದ್ದ ದುರ್ಭಾವನೆಗಳು ಮತ್ತು ಅವರ ರಾಷ್ಟ್ರವಿರೋಧಿ ಮನೋಭಾವನೆಗಳ ಅರಿವಾಗಿತ್ತು. ಹೀಗಾಗಿ ಈಗ ಅವರಿಗೆ ರಾಷ್ಟ್ರದಲ್ಲಿ ವ್ಯಾಪಿಸಿದ ಈ ವಿಷ ಹೆಚ್ಚು ನೋವುಂಟುಮಾಡಿತು. ಅವರು ಇಡೀ ಭಾರತದಲ್ಲಿ ಸಂಚರಿಸಿ ಬೌದ್ಧ ಧರ್ಮವನ್ನು ಖಂಡನೆ ಮಾಡಿ ಮತ್ತು ಬೌದ್ಧ ಧರ್ಮದ ಪ್ರತಿಕ್ರಿಯಾಸ್ವರೂಪವಾದ ಕರ್ಮಕಾಂಡವನ್ನು ಪ್ರತಿಪಾದಿಸಲು ಪ್ರಾರಂಭಿಸಿದರು. ನಾಸ್ತಿಕವಾದ ಗೋಳಿಟ್ಟಿತು. ಈ ವಿಪತ್ತಿಗೆ ಸಹಾಯ ಮಾಡಲು ಅದಕ್ಕೆ ಯಾವ ದೇವರೂ ಇರಲಿಲ್ಲ. ರಕ್ಷಕನೂ ಇರಲಿಲ್ಲ. ಬೌದ್ಧರ ಬಳಿ ಎಲ್ಲಿ ಅಧಿಕಾರದ ಶಕ್ತಿಯಿತ್ತೋ, ಅಲ್ಲಿ ಆ ಶಾಸನ ಶಕ್ತಿಯಿಂದ ಅವರನ್ನು ಹತ್ತಿಕ್ಕಲು ಬಯಸಿತು. ಆದರೆ ಮುಕ್ತ ಆತ್ಮದ ಕರೆಯನ್ನು ಯಾವುದೇ ದಾನವೀ ಶಕ್ತಿ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ. ಮೋಸದ ಜಗತ್ತು ನಿರ್ಭೀಕತೆಯ ಕತ್ತುಹಿಸುಕಲಾರದು. ಕುಮಾರಿಲರು ಎಲ್ಲ ಅಡ್ಡಿ–ವಿಘ್ನಗಳಿಂದ ಪಾರಾದರು. ಅಲ್ಲದೆ ಪ್ರತಿಯಾಗಿ ತಮ್ಮ ಆತ್ಮವಿಶ್ವಾಸ, ಆತ್ಮಶ್ರದ್ಧೆ ಮತ್ತು ಅಖಂಡಿತ ತರ್ಕಗಳ ಆಧಾರದಿಂದ ರಾಜನೆದುರೇ ಬೌದ್ಧರನ್ನು ಪರಾಜಯಗೊಳಿಸಿದರು. ತರ್ಕಕ್ಕೆ ಕಾಲು ನಿಲ್ಲದ್ದನ್ನು ಕಂಡು ಬೌದ್ಧರು ಯಕ್ಷಿಣಿ ವಿದ್ಯೆ ಮತ್ತು ಕೈಚಳಕದ ಮೊರೆಹೋದರು. ಅದರಲ್ಲಿಯೂ ಅವರನ್ನು ತರಾಟೆಗೆ ತೆಗೆದುಕೊಂಡಾಗ ಅವರು ಹೆದರಿದರು. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕಾಗುತ್ತದೆ. ಹೀಗಾಗಿ

ಕುಮಾರಿಲರೂ ಬೌದ್ಧರನ್ನು ಪರಾಜಯಗೊಳಿಸಲು ಅಲ್ಲಲ್ಲಿ ಚಮತ್ಕಾರಗಳು ಇತ್ಯಾದಿಗಳನ್ನು ಪ್ರದರ್ಶಿಸಿ ತಮ್ಮ ಪಾಲಿನ ತಕ್ಕಡಿ ಭಾರವಾಗಿರುವಂತೆ ನೋಡಿಕೊಂಡರು."

ಉದಂಕನಿಗೆ ಕುಮಾರಿಲರ ವಿಜಯ ಗಾಥೆ ಕೇಳಿ ಮನಸ್ಸಿಗೆ ಸಂತೋಷವಾಗುತ್ತಿತ್ತು.

"ಆದರೆ ಉದಂಕ! ಛದ್ಮವೇಷ ಧರಿಸಿ ಗುರುಗಳ ಬಳಿ ಶಿಕ್ಷಣ ಪಡೆದು ಪಾಪಕಾರ್ಯವೆಸಗಿದೆ ಎಂದು ಅವರ ಆತ್ಮ ಸದಾ ಅವನನ್ನು ಕೊರೆಯುತ್ತಿತ್ತು".

"ಇದರಲ್ಲಿ ಪಾಪದ ಮಾತೇನು ಬಂತು ಆಚಾರ್ಯರೇ!" ಉದಂಕ ಅವರ ಮಾತನ್ನು ಮಧ್ಯದಲ್ಲಿ ತಡೆದು ಹೇಳಿದ.

"ಉದಂಕ, ನಿಜ ಹೇಳಬೇಕೆಂದರೆ, ಯಾವುದೇ ಪಾಪಕಾರ್ಯ ನಡೆದಿಲ್ಲ!" ಆಚಾರ್ಯರು ಹೇಳಿದರು: "ಆದರೆ ಕುಮಾರಿಲರು ಕರ್ಮಕಾಂಡಿಯಾಗಿದ್ದರು. ಧ್ಯೇಯದ ಒಳಿತು-ಕೆಡುಕಿನಿಂದ ಸಾಧನೆಗಳ ಒಳಿತು-ಕೆಡುಕುಗಳನ್ನು ನಿರ್ಣಯಿಸಲಾಗುತ್ತದೆ. ಸಾಧನೆಗೆ ಯಾವುದೇ ಸ್ವತಂತ್ರ ಅಸ್ತಿತ್ವವಿಲ್ಲವೆಂಬುದನ್ನು ಕುಮಾರಿಲರು ಮರೆತರು. ಆದ್ದರಿಂದ ಅವರು ಪ್ರಾಯಶ್ಚಿತ್ತ ಮಾಡಿಕೊಳ್ಳಲು ನಿರ್ಧರಿಸಿದರು. ಇದೇ ಪ್ರಯಾಗದ ತಪೋಭೂಮಿಯಲ್ಲಿ ತುಷಾಗ್ನಿಯಲ್ಲಿ ಪ್ರವೇಶಿಸಿ ತಮ್ಮ ಶರೀರವನ್ನು ಬೂದಿಗೊಳಿಸಿಕೊಂಡರು. ಅವರು ಸಾಕಷ್ಟು ಸಾಧನೆ ಮಾಡಿ ಹೋದರು. ಆದರೆ ಇನ್ನೂ ಸಾಧನೆ ಮಾಡಬಹುದಿತ್ತು". ಆಚಾರ್ಯರು ಮತ್ತು ಉದಂಕ-ಇಬ್ಬರೂ ಸ್ವಲ್ಪ ಬೇಸರಗೊಂಡರು. ಸ್ವಲ್ಪ ಹೊತ್ತಿನ ಅನಂತರ ಉದಂಕ ಹೇಳಿದ, "ಆಚಾರ್ಯರೇ, ಇನ್ನು ಉಳಿದ ಕಾರ್ಯವನ್ನು ನಾವು ಪೂರೈಸುತ್ತೇವೆ".

ಆಚಾರ್ಯರು ಸಮ್ಮತಿಸೂಚಕವಾಗಿ ತಲೆಯಾಡಿಸಿದರು. ಅವರು ಸ್ವಲ್ಪ ಹೊತ್ತು ಶಾಂತರಾಗಿದ್ದು ಮತ್ತೆ ಹೇಳಿದರು: "ಕುಮಾರಿಲರ ಶಿಷ್ಯ ಮಂಡನಮಿಶ್ರರ ಮಿಥಿಲೆಯಲ್ಲಿದ್ದಾರೆ. ಅವರು ಶ್ರೇಷ್ಠ ವಿದ್ವಾಂಸರು. ಒಂದು ವೇಳೆ ಅವರ ಸಹಕಾರ ಸಿಕ್ಕರೆ, ಪೂರ್ವಮೀಮಾಂಸಕರೆಲ್ಲರ ಸಹಕಾರ ಸಿಗುತ್ತದೆ. ಅವರೇ ಈಗ ಅವರ ಮುಖಂಡರು. ಇನ್ನು ಇಲ್ಲಿಂದ ಮಿಥಿಲೆಗೆ ಹೋಗಬೇಕಾಗುವುದು."

* * * *



## ೧೨. ಮಂಡನಮಿಶ್ರರೊಂದಿಗೆ ಶಾಸ್ತ್ರದ ಚರ್ಚೆ

ಆಚಾರ್ಯ ಶಂಕರರು ಪೂರ್ವದೆಡೆಗೆ ಹೊರಟು ಮಗಧವನ್ನು ತಲುಪಿದರು. ಮಗಧ ಹಳೆಯ ದಿನಗಳನ್ನು ನೆನಪಿಸುತ್ತಿತ್ತು. ಪಾಟಲಿಪುತ್ರದ ಭಗ್ನಾವಶೇಷಗಳು, ಮೌರ್ಯ ಸಾಮ್ರಾಟ ಚಂದ್ರಗುಪ್ತನ ಮತ್ತು ಅಶೋಕನ ಗುಣಗಾನಮಾಡುತ್ತಿದ್ದವು. ಗುಪ್ತರ ಕಾಲದ ವೈಭವ ಇನ್ನೂ ಅತ್ತ-ಇತ್ತ ಚದುರಿತ್ತು. ಪ್ರಯಾಗದಲ್ಲಿ ಸಮ್ರಾಟ ಸಮುದ್ರಗುಪ್ತನ ಶೌರ್ಯ ಸ್ತಂಭಾಕಾರದಲ್ಲಿ ಎದೆಯೊಡ್ಡಿನಿಂತಿತ್ತು. ಅವನ ಕೋಮಲ ಹಾಗೂ ಸಂವೇದನಾಪೂರ್ಣ ಅಂತಃಕರಣದ ನೋಟ ಮಗಧದಲ್ಲಿ ಕಾಣ ಬರುತ್ತಿತ್ತು. ಧರ್ಮದ್ರೋಹಿಗಳು ಮತ್ತು ರಾಷ್ಟ್ರದ ಶತ್ರುಗಳನ್ನು ಯಾವ ಕೈ ಕಠೋರವಾಗಿ ಮತ್ತು ಕ್ರೂರವಾಗಿ ದಮನಮಾಡಿತ್ತೋ, ಅದೇ ಕೈಯಿಂದ ನುಡಿಸಿದ ವೀಣೆಯಿಂದ ಹೊರಟ ಸ್ವರ-ಮಾಧುರಿ, ಹಿಂದೂ ಹೃದಯದ ಸಹಜ ಪ್ರವೃತ್ತಿಯನ್ನು ಅಭಿವ್ಯಕ್ತಿಗೊಳಿಸುತ್ತಾ ಇದುವರೆಗೆ ಮಗಧದ ಕವಿಗಳಲ್ಲಿ ಪ್ರತಿಧ್ವನಿಸುತ್ತಿತ್ತು. ಆದ್ದರಿಂದಲೇ ಕವಿಯ ಬಾಯಿಯಿಂದ 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ' ಎಂಬ ಉಕ್ತಿ ಹೊರಟಿತು. ಮಗಧ ಈ ಉಕ್ತಿಯ ಪ್ರತ್ಯಕ್ಷ ಪ್ರತಿಮೆಯೇ ಆಗಿತ್ತು.

ಶಂಕರಾಚಾರ್ಯರು ಮಂಡನಮಿಶ್ರನನ್ನು ಭೇಟಿಯಾಗಲು ಒಬ್ಬರೇ ಹೊರಟಿದ್ದರು, ತಮ್ಮ ಶಿಷ್ಯರ ಗುಂಪನ್ನು ಹಿಂದೆಯೇ ಬಿಟ್ಟಿದ್ದರು. ಶಿಷ್ಯಸಮೂಹದಲ್ಲಿನ ಅಧಿಕ ಸಂಖ್ಯೆಯು ಮಂಡನಮಿಶ್ರನ ಮೇಲೆ ಯಾವುದೇ ಪ್ರಭಾವ ಬೀರಲು ಸಾಧ್ಯವಿರಲಿಲ್ಲ. ಆಚಾರ್ಯರು ನಗರವನ್ನು ತಲುಪಿ, ಬಾವಿಯ ಬಳಿ ನೀರು ಸೇದುತ್ತಿದ್ದ ಓರ್ವ ದಾಸಿಯನ್ನು ಮಂಡನಮಿಶ್ರನ ಮನೆ ವಿಳಾಸದ ಬಗ್ಗೆ ಕೇಳಿದರು. ದಾಸಿ ಈ ಕೆಳಕಂಡ ಶ್ಲೋಕಗಳಲ್ಲಿ ಉತ್ತರಿಸಿದಳು.

ಸ್ವತಃ ಪ್ರಮಾಣಂ ಪರತಃ ಪ್ರಮಾಣಂ
ಕೀರಾಂಗನಾ ಯತ್ರ ಗಿರೋ ಗಿರಂತಿ ।
ದ್ವಾರಸ್ಥ ನೀಡಾಂತರ ಸನ್ನಿರುದ್ಧಾ
ಜಾನೀಹಿ ತನ್ಮಂಡನಮಿಶ್ರಧಾಮ ॥ 1 ॥

ಫಲಪ್ರದಂ ಕರ್ಮ, ಫಲ ಪ್ರದೋಷಃ
ಕೀರಾಂಗನಾ ಯತ್ರ ಗಿರೋ ಗಿರಂತಿ ।
ದ್ವಾರಸ್ಥ ನೀಡಾಂತರ ಸನ್ನಿರುದ್ಧಾ
ಜಾನೀಹಿ ತನ್ಮಂಡನಮಿಶ್ರಧಾಮ ॥ 2 ॥

ಜಗದ್ ಧ್ರುವಂ ಸ್ಯಾಜ್ಜಗದ ಧ್ರುವಂ ಸ್ಯಾತ್
ಕೀರಾಂಗನಾ ಯತ್ರ ಗಿರೋ ಗಿರಂತಿ ।
ದ್ವಾರಸ್ಥ ನೀಡಾಂತರ ಸನ್ನಿರುದ್ಧಾ
ಜಾನೀಹಿ ತನ್ಮಂಡನಮಿಶ್ರಧಾಮ ॥ 3 ॥

ಯಾರ ದ್ವಾರದ ಪಂಜರದಲ್ಲಿರುವ ಗಿಳಿ ಮತ್ತು ಮೈನಾ ಈ ರೀತಿ ಸಂಸ್ಕೃತದಲ್ಲಿ ಚರ್ಚೆ ಮಾಡುವವೋ, ಅಲ್ಲಿ ಅವಶ್ಯವಾಗಿ ದಿನವಿಡೀ ತ್ವತ್ವಶಾಸ್ತ್ರಕ್ಕೆ ಸಂಬಂಧಿಸಿದ ಚರ್ಚೆಯೇ ನಡೆಯುತ್ತಿರಬಹುದು. ಇದರಿಂದಾಗಿ ಪಕ್ಷಿಯೂ ಆ ಶಬ್ದಗಳನ್ನು ಹಾಗೂ ವಾಕ್ಯ ಸಮೂಹಗಳನ್ನು ಹಾಗೆಯೇ ಉಚ್ಚಾರಣೆ ಮಾಡಲು ಪ್ರಾರಂಭಿಸಿವೆ. ಮಂಡನ ಮಿಶ್ರ ಅದೆಷ್ಟು ಶ್ರೇಷ್ಠ ವಿದ್ವಾಂಸನಾಗಿದ್ದ! ದಾಸಿಯ ಬಾಯಿಯಿಂದ ಈ ಉತ್ತರ ಕೇಳಿ ಅವರ ಆನಂದಕ್ಕೆ ಪಾರವೇ ಇರಲಿಲ್ಲ. ಯಾರ ಸೇವಕ–ಸೇವಕಿಯರು ಹಾಗೂ ಗಿಳಿ–ಮೈನಾ ಸಹ ದೇವವಾಣಿ ಸಂಸ್ಕೃತದಲ್ಲಿ ಮಾತನಾಡುವರೋ, ಆ ಪ್ರಕಾಂಡ ಪಂಡಿತನ ಸಹಕಾರ ಪುರಾತನ ಪರಂಪರೆ, ದೇವವಾಣಿ ಮತ್ತು ವೈದಿಕ ಧರ್ಮವನ್ನು ಪುನರುದ್ಧಾರಗೊಳಿಸುವಲ್ಲಿ ಎಷ್ಟೊಂದು ಉಪಯೋಗಕ್ಕೆ ಬರುವುದು! ಅವರು ಇಂಥ ಮಾಹಾಪುರುಷನನ್ನು ಭೇಟಿಯಾಗಲು ಕಾತರಗೊಂಡರು. ಅವರು ತಮ್ಮ ಮನ ಬಿಚ್ಚಿ ಅವರೆದುರು ಇಡಲು ಬಯಸುತ್ತಿದ್ದರು. ತಮ್ಮ ಮನಸ್ಸಿನ ವ್ಯಥೆ ಮತ್ತು ಧರ್ಮದ ಬಗ್ಗೆ ಇರುವ ಭಾವನೆಗಳನ್ನು ನೋಡಿ ಮಂಡನಮಿಶ್ರರು ತಮ್ಮವರಾಗದೆ ಇರಲಾರರೆಂಬ ವಿಶ್ವಾಸ ಅವರಿಗಿತ್ತು. ಅವರು ಒಂದು ಕ್ಷಣವೂ ನಿಲ್ಲದೆ ಆ ದಾಸಿಯೊಂದಿಗೆ ನೇರವಾಗಿ ಮಂಡನಮಿಶ್ರರ ಮನೆಗೆ ಹೋದರು.

ತಾವು ಬರುವ ಸೂಚನೆ ಕೊಡಲು ಹಾಗೂ ಭೇಟಿಯಾಗುವ ಶಿಷ್ಟಾಚಾರದಲ್ಲಿ ಸಮಯವನ್ನು ವ್ಯರ್ಥಗೊಳಿಸುವ ಧೈರ್ಯ ಅವರಲ್ಲಿರಲಿಲ್ಲ. ಅವರು ದಡದಡನೆ–ಅದು ತಮ್ಮ ಮನೆಯೇ ಎಂಬಂತೆ ಒಳ ಹೋದರು. ಅವರು ಯಾವುದೇ ಹಿಂದೂಗಳ ಮನೆಯನ್ನು ಪರರ ಮನೆಯೆಂದು ತಿಳಿಯುತ್ತಿರಲಿಲ್ಲ. ಹೀಗಿರುವಾಗ ಮಂಡನಮಿಶ್ರರಂತೂ ತಮ್ಮ ಹಾಗೆಯೇ ವೈದಿಕ ಧರ್ಮವನ್ನು ಪ್ರೀತಿಸುತ್ತಿದ್ದರು.



ಅವರ ಮನೆಯನ್ನು ತಮ್ಮ ಮನೆಯೆಂದು ಹೇಗೆ ತಾನೇ ಭಾವಿಸದೆ ಇದ್ದಾರು?* ಮಂಡನ ಮಿಶ್ರರು ಆಗ ಶ್ರಾದ್ಧ–ಕರ್ಮ ಮಾಡುತ್ತಿದ್ದರು. ಶ್ರಾದ್ಧದ ವೇಳೆಯಲ್ಲಿ ಯಾವುದೇ ಸನ್ಯಾಸಿಯ ಉಪಸ್ಥಿತಿ ನಿಷಿದ್ಧ. ಹೀಗಾಗಿ ಈ ಆಗಂತುಕ ಸನ್ಯಾಸಿ ಹೇಳದೆ–ಕೇಳದೆ ಒಳಬಂದದ್ದನ್ನು ಕಂಡು ಅವರ ಹುಬ್ಬುಗಳ ಗಂಟಿಕ್ಕಿಕೊಂಡವು. ತಮ್ಮ ಕಾಲದ ಓರ್ವ ಮಹಾನ್ ವ್ಯಕ್ತಿ ತನ್ನೆದುರು ನಿಂತಿದ್ದಾನೆಂಬ ವಿಷಯ ಅವರಿಗೇನು ತಿಳಿದಿತ್ತು! ಅವರು ಕೋಪಿಸಿಕೊಂಡಿದ್ದನ್ನು ನೋಡಿ ಸ್ವಾಮಿ ಶಂಕರರು ಶಾಂತರಾಗಿ, ಮೃದು ಧ್ವನಿಯಲ್ಲಿ ಹೇಳಿದರು, "ಮಿಶ್ರರೇ ಕ್ಷಮಿಸಿ! ಒಂದೇ ಹಾದಿಯ ಯಾತ್ರಿಕರಲ್ಲಿ ಪರಸ್ಪರ ಕ್ರೋಧವೇಕೇ?"

"ಸನ್ಯಾಸಿಗಳೇ, ಒಂದೇ ಹಾದಿ ಎಂದರೇನು?" ಮಂಡನಮಿಶ್ರರಿಗೆ ವಿಷಯ ತಿಳಿಯಲಿಲ್ಲ, ಹೀಗಾಗಿ ಸ್ವಲ್ಪ ರೇಗುತ್ತಾ, ಜುಗುಪ್ಸೆಯ ಸ್ವರದಲ್ಲಿ ಹೇಳಿದರು: "ಮೊದಲನೆಯದಾಗಿ, ಅನುಮತಿ ಪಡೆಯದೆ ಮನೆಯೊಳಗೆ ಪ್ರವೇಶಿಸಿದಿರಿ; ಎರಡನೆಯದಾಗಿ ಈ ಒಗಟು?"

"ಮಂಡನಾಚಾರ್ಯರೆ, ಇದು ಒಗಟಲ್ಲ! ನಾವಿಬ್ಬರೂ ಒಂದೇ ವೈದಿಕ ಧರ್ಮದ ಪುನರುದ್ಧಾರಕ್ಕೆ ಪ್ರಯತ್ನಿಸುವವರು, ನಾವಿಬ್ಬರೂ ಒಂದೇ ಮಾರ್ಗದ ಅನುಯಾಯಿಗಳು" ಶಂಕರಾಚಾರ್ಯರು ದೃಢಚಿತ್ತರಾಗಿ ಹೇಳಿದರು.

ವೈದಿಕ ಧರ್ಮದ ಹೆಸರು ಕೇಳಿ ಮಂಡನ ಮಿಶ್ರರ ಕ್ರೋಧ ಸ್ವಲ್ಪ ಶಾಂತಗೊಂಡಿತು. ಆದರೂ ಶಂಕರಾಚಾರ್ಯರ ಈ ನಡತೆ ಅವರಿಗೆ ಅರ್ಥವಾಗುತ್ತಿರಲಿಲ್ಲ. ಹೀಗಾಗಿ ಅವರು ಹೇಳಿದರು; "ನೀವು ವೈದಿಕ ಧರ್ಮದ ವಿಚಾರಗಳನ್ನು ಚೆನ್ನಾಗಿ ಹೇಳುತ್ತೀರಿ, ಆದರೆ ನಿಮ್ಮ ನಡತೆ ಬೌದ್ಧರಂತೆಯೇ ಇದೆ. ವೈದಿಕ ಧರ್ಮದಲ್ಲಿ ಸನ್ಯಾಸವೆಲ್ಲಿದೆ? ಅಲ್ಲದೆ ಸನ್ಯಾಸಿ ಮಾಡುವ ಶ್ರಾದ್ಧಕರ್ಮದಲ್ಲಿ ಉಪಸ್ಥಿತಿಗೊಳ್ಳುವುದು ವೇದ–ವಿರೋಧಿ ಕಾರ್ಯವಾಗಿದೆ, ಯತಿಗಳೇ!"

"ದ್ವಿಜಶ್ರೇಷ್ಠರೇ, ಈ ಎಲ್ಲ ವಿಚಾರಗಳ ಬಗ್ಗೆಯೇ ಮಾತನಾಡಲು ತಮ್ಮ ಬಳಿಗೆ ಬಂದಿದ್ದೇನೆ. ಮತ್ತೆ......" ಅಷ್ಟರಲ್ಲಿ ಅಲ್ಲಿ ಉಪಸ್ಥಿತ ಬ್ರಾಹ್ಮಣರಲ್ಲಿ ಓರ್ವ ಬ್ರಾಹ್ಮಣ ಎದ್ದು ಬಂದು ಶಂಕರಾಚಾರ್ಯರ ಪಾದಗಳಿಗೆ ನಮಸ್ಕರಿಸಿ. ಮಂಡನ ಮಿಶ್ರರಿಗೆ ಹೇಳಿದ, "ಮಿಶ್ರರೇ, ದೇವರಿಗೆ ಧನ್ಯವಾದ ಹೇಳಿ! ನಿಮ್ಮೆದರು ಸ್ವಾಮಿ ಶಂಕರಾಚಾರ್ಯರು ನಿಂತಿದ್ದಾರೆ."

---

* ೧. ಯಾರ ದ್ವಾರದ ಪಂಜರದಲ್ಲಿ ಕುಳಿತ ಗಿಳಿ ಮತ್ತು ಮೈನಾ 'ವೇದ ಸ್ವಯಂ ಪ್ರಮಾಣಗಳು ಅಥವಾ ವೇದಗಳಿಗೆ ಬೇರೆ ಸಾಕ್ಷಿ ಏಕೆ ಬೇಕು'

೨. ಕರ್ಮಫಲ ಕೊಡುವುದಾಗಿರುತ್ತವೆಯೋ ಅಥವಾ ಫಲದ ದೋಷಗಳೇನು?

೩. ಜಗತ್ತು ನಿತ್ಯವೋ ಅಥವಾ ಅನಿತ್ಯವೋ, ಎಂದು ಇದನ್ನೆಲ್ಲ ಚರ್ಚೆ ಮಾಡುತ್ತವೆಯೋ. ಅದನ್ನು ನೀವು ಮಂಡನ ಮಿಶ್ರರ ಮನೆಯೆಂದು ತಿಳಿಯಿರಿ.

ಸ್ವಾಮಿ ಶಂಕರಾಚಾರ್ಯರ ಹೆಸರು ಕೇಳಿ ಮಂಡನರು ಮಿಶ್ರರು ಕಕ್ಕಾ-ಬಿಕ್ಕಿಯಾದರು. ತಮ್ಮ ನಡತೆಯ ಬಗ್ಗೆ ಲಜ್ಜೆಗೊಂಡು ಹೇಳಿದರು: "ಆಚಾರ್ಯರೇ ಕ್ಷಮಿಸಿ ಅವರವರಿಗೆ ಅವರದೇ ಆದ ಸಿದ್ಧಾಂತಗಳಿವೆ. ನಮಗೆ ನಿಮ್ಮ ಮಾರ್ಗ ಒಪ್ಪಿಗೆಯಿಲ್ಲ".

ಮಂಡನಮಿಶ್ರರು ಈ ವೇಳೆಯಲ್ಲಿ ಶ್ರಾದ್ಧಕರ್ಮದಲ್ಲಿ ತೊಡಗಿದ್ದಾರೆ, ದೇಶ ಮತ್ತು ಧರ್ಮದ ಬಗ್ಗೆ ಈಗ ಮಾತನಾಡಲು ಯೋಗ್ಯವಾದ ಚಿತ್ತವಿಲ್ಲವೆಂಬುದನ್ನು ಸ್ವಾಮಿ ಶಂಕರಾಚಾರ್ಯರು ಗಮನಿಸಿದರು. ಹೀಗಾಗಿ ಶಾಂತ ಸ್ವರದಲ್ಲಿ ಹೇಳಿದರು, "ನೀವು ಶ್ರಾದ್ಧ ಕರ್ಮದಿಂದ ಮುಕ್ತರಾದ ಮೇಲೆ ನಾವಿಬ್ಬರೂ ಸೇರಿ ಇಂದಿನ ಪರಿಸ್ಥಿತಿಯಲ್ಲಿ ದೇಶ ಮತ್ತು ಧರ್ಮದ ಕಾರ್ಯಗಳನ್ನು ಹೇಗೆ ಮಾಡಬಹುದೆಂಬ ವಿಚಾರದ ಬಗ್ಗೆ ವಿಚಾರ ಮಾಡೋಣ" ಹೀಗೆಂದು ಅವರು ಹೊರಗೆ ಹೊರಟು ಹೋದರು.

ಮಂಡನಮಿಶ್ರರು ವಿಧಿವತ್ತಾಗಿ ಶ್ರಾದ್ಧಕರ್ಮವನ್ನು ಪೂರೈಸಿದರು. ಬ್ರಾಹ್ಮಣರಿಗೆ ಊಟ ಹಾಕಿಸಿರು, ದಕ್ಷಿಣೆ ಕೊಟ್ಟು ಬೀಳ್ಕೊಟ್ಟರು. ಸ್ವಾಮಿ ಶಂಕರಾಚಾರ್ಯರ ಊಟ-ವಸತಿಗೆ ವ್ಯವಸ್ಥೆ ಮಾಡಿದರು. ಅಷ್ಟರಲ್ಲಿ ಅವರ ಶಿಷ್ಯರೂ ಬಂದರು. ಮಾಹಿಷ್ಮತಿಯ ನಿವಾಸಿಗಳಲ್ಲೂ ಆಚಾರ್ಯರ ಆಗಮನದ ಸುದ್ದಿ ಹರಡಿತ್ತು, ಅವರ ಗುಂಪುಗಳು ಆಚಾರ್ಯರ ದರ್ಶನಕ್ಕಾಗಿ ಬರಲಾರಂಭಿಸಿದವು.

ಮೂರನೇ ಜಾವ ಮಂಡನಮಿಶ್ರರು ಮತ್ತು ಸ್ವಾಮಿ ಶಂಕರಾಚಾರ್ಯರು ಪರಸ್ಪರ ಶಾಸ್ತ್ರದ ಚರ್ಚೆ ಮಾಡಲು ಕುಳಿತರು. ಆ ಚರ್ಚೆ ಎಂಥದ್ದಾಗಿತ್ತೆಂದರೆ ದೇಶದ ಇಬ್ಬರು ವಿದ್ವಾಂಸರು, ಇಬ್ಬರು ದೇಶಭಕ್ತರು ತಮ್ಮ ರಾಷ್ಟ್ರದ ಸಮಸ್ಯೆಗಳ ಬಗ್ಗೆ ಪರಿಹಾರವನ್ನು ಕಂಡುಹಿಡಿಯಲು ಮನಸ್ಸಿನಲ್ಲಿ ಉತ್ತಮ ಇಚ್ಛೆ ಮತ್ತು ಸದ್ಭಾವನೆಯೊಂದಿಗೆ ಕುಳಿತಿದ್ದರು. ಒಬ್ಬರನ್ನೊಬ್ಬರು ಸೋಲಿಸುವ ಇಚ್ಛೆ ಇರಲಿಲ್ಲ. ತಮ್ಮ ಅಭಿಪ್ರಾಯಗಳಿಗೆ ಅಂಟಿಕೊಂಡಿರುವ ದುರಾಗ್ರಹವಿರಲಿಲ್ಲ; ವಿರೋಧಿಯನ್ನು ಅವಮಾನಿಸಲು ಎಲ್ಲವನ್ನೂ ಮಾಡುವ ಸಿದ್ಧತೆ ಇರಲಿಲ್ಲ. ಅಲ್ಲಿ ಪರಸ್ಪರ ಅರಿಯುವ ಉತ್ಕಟ ಬಯಕೆ, ಸತ್ಯವನ್ನರಸುವ ಜಿಜ್ಞಾಸೆ ಮತ್ತು ಆ ಸತ್ಯಮಾರ್ಗದಲ್ಲಿ ಸಾಗುವ ಅಭಿಲಾಷೆ ಇತ್ತು. ಮಂಡನಮಿಶ್ರರ ಹೆಂಡತಿ ಭಾರತಿ ಸ್ವತಃ ಓರ್ವ ವಿದುಷಿಯಾಗಿದ್ದಳು. ಅವಳು ಮಧ್ಯದ ಆಸನದಲ್ಲಿ ಕುಳಿತಳು. ಆಗ ಮಾಹಿಷ್ಮತಿಯೇ ತೀರ್ಥರಾಜ ಪ್ರಯಾಗವಾಗಿದೆ ಎಂದು ಭಾಸವಾಗುತ್ತಿತ್ತು. ಒಂದೆಡೆ ಭಗವಾನ್ ಶಂಕರನ ಜಟೆಗಳಿಂದ ಸ್ರವಿಸುವ ಗಂಗಾಧಾರೆಯ ಪ್ರವಾಹವಿದ್ದರೆ, ಇನ್ನೊಂದೆಡೆ ಸರ್ವ ತರು-ಪುಂಜ ತಮಾಚ್ಛನ್ನತರಣಿ-ತನುಜಳಂತೆ ಪೂರ್ವದ ಸೂರ್ಯ, ಯಜ್ಞ-ಯಾಗಾದಿಗಳನ್ನು ಆರಂಭಿಸುವ, ಪ್ರಕಾಂಡ ಪಂಡಿತ ಮತ್ತು ಪ್ರಚಂಡ ಕರ್ಮಕಾಂಡಿಯಾದ ಮಂಡನ ಮಿಶ್ರರ ಕಾಂತಿಹೀನ ವಾಣಿಯ ನೀಲಿ ಯಮುನಾಧಾರೆ ಹರಿಯುತ್ತಿತ್ತು. ಈ ಇಬ್ಬರ ಮಧ್ಯೆ ಸರಸ್ವತಿಯ ಅವತಾರದಂತಿದ್ದ ಭಾರತಿಯಂತೂ ಉಪಸ್ಥಿತಳಿದ್ದಳು. ಈ ತೀರ್ಥರಾಜ ಪ್ರಯಾಗದ ತ್ರಿವೇಣಿ ಸಂಗಮದಲ್ಲಿ ಮಿಂದು ತಮ್ಮ ಮನಸ್ಸನ್ನು ನಿರ್ಮಲಗೊಳಿಸಿಕೊಳ್ಳಲು ಅನೇಕ ಜನ ಪುರುಷರು-ಮಹಿಳೆಯರು ಉಪಸ್ಥಿತರಿದ್ದರು. ಈ ಪ್ರವಾಹ ಅದೆಷ್ಟೋ ದಿನಗಳವರೆಗೆ ನಡೆಯಿತು. ಆದರೆ ಇಲ್ಲಿ ತಾತ್ಪರ್ಯದಿಂದಷ್ಟೇ ಸಂತೋಷ ಪಡಬೇಕಾಗುತ್ತದೆ.



ಮೊದಲು ಸ್ವಾಮಿ ಶಂಕರಾಚಾರ್ಯರೇ ಹೇಳಿದರು: "ಮಿಶ್ರ ಶ್ರೇಷ್ಠ! ಇಂದಿನ ದೇಶದ ಸ್ಥಿತಿ ನಿಮ್ಮಿಂದ ಮುಚ್ಚುಮರೆಯಾಗಿಲ್ಲ. ಭಟ್ಟಪಾದಚಾರ್ಯ ಕುಮಾರಿಲರು ತನ್ನ ಜೀವನದ ಸರ್ವಸ್ವವನ್ನೇ ಈ ಧರ್ಮದ ಸೇವೆಗೆ ಅರ್ಪಿಸಿದರು; ಜೀವನದ ಒಂದೊಂದು ಕ್ಷಣವನ್ನು ವೈದಿಕ ಧರ್ಮದ ಪುನರ್ ಸ್ಥಾಪನೆಗೆ ಮತ್ತು ವೇದ-ವಿರುದ್ಧದ ಧರ್ಮದ ಖಂಡನೆ ಮಾಡುವುದರಲ್ಲಿಯೇ ಕಳೆದ ಅವರಿಗೆ ಯಶಸ್ಸು ಸಿಕ್ಕಿತು, ಆದರೆ ಇಂದೂ ಸಹ ಬೌದ್ಧ ಧರ್ಮ ವಾಯುವ್ಯ ಪ್ರಾಂತ್ಯಗಳಲ್ಲಿದ್ದು ಈ ರಾಷ್ಟ್ರದ ವಿಪತ್ತಿಗೆ ಕಾರಣವಾಗಿದೆ. ಬನ್ನಿ, ನಾವಿಬ್ಬರೂ ಸೇರಿ ಈ ರಾಷ್ಟ್ರ ವಿರೋಧಿಗಳನ್ನು ಕೊನೆಗೊಳಿಸೋಣ. ಇಡೀ ಭಾರತದೇಶದಲ್ಲಿ ಹಿಂದೂ ಧರ್ಮದ ಪ್ರಚಾರ ಮಾಡೋಣ, ಭಟ್ಟಪಾದರ ಅಪೂರ್ಣ ಕೆಲಸಗಳನ್ನು ಪೂರ್ಣಗೊಳಿಸೋಣ. ಅವರ ಆತ್ಮಕ್ಕೆ ಶಾಂತಿ ಕೊಡೋಣ"

"ಸರಿ, ಶಂಕರಾಚಾರ್ಯರೇ!" ಮಂಡನ ಮಿಶ್ರ ಹೇಳಿದ, "ವೇದ ವಿರೋಧಿ ಧರ್ಮವಂತೂ ನಾಶವಾಗಲೇ ಬೇಕು ಹಾಗೂ ವೈದಿಕ ಧರ್ಮದ ಸ್ಥಾಪನೆಯೂ ಆಗಬೇಕು. ಇದನ್ನು ನಾನೂ ಬಯಸುತ್ತೇನೆ. ಆದರೆ ಪ್ರತಿಕ್ರಿಯಾತ್ಮಕ ಆಧಾರದಲ್ಲಿಯಂತೂ ನಾವಿಬ್ಬರೂ ಒಟ್ಟಿಗೆ ಬರಲಾರೆವು. ನೀವು ಪ್ರಚಾರ ಮಾಡುತ್ತಿರುವ ಧರ್ಮ ವೈದಿಕ ಧರ್ಮವಲ್ಲ. ಮನೆ-ಮನೆಯಲ್ಲಿಯೂ ನಡೆಯುವ ಹವನ ಮತ್ತು ಅಗ್ನಿಹೋತ್ರದಿಂದ ಕೆಂಪು ಆಗಸ ಧೂಮಮಯವಾದಾಗಲೇ, ವೇದ ಮಂತ್ರಗಳ ಸ್ವರಲಹರಿ ವಾಯಮಂಡಲವನ್ನು ಪವಿತ್ರಗೊಳಿಸಿದಾಗಲೇ ವೈದಿಕ ಧರ್ಮದ ಪ್ರಚಾರವಾಗುವುದು. ನಿಮ್ಮ ಪಂಚಾಯತನ ದೇವತೆಗಳು ಮತ್ತು ನಿಮ್ಮ ವೇದಾಂತಗಳಿಗೆ ಸ್ಥಾನ ಅದರಲ್ಲಿ ಎಲ್ಲಿದೆ ಆಚಾರ್ಯರೇ?"

ಶಂಕರಾಚಾರ್ಯರು ಈ ಟೀಕೆಯನ್ನು ಕೇಳಿ ಶಾಂತರಾಗಿ ಹೇಳಿದರು: "ನಾನು ವೈದಿಕ ಯುಗದ ಕನಸನ್ನು ಕಾಣಬಲ್ಲೆ. ವೇದಾಧ್ಯಯನ ಮಾಡುವವರು ಮತ್ತು ಕರ್ಮಕಾಂಡ ಮಾಡುವ ಋಷಿ-ಮುನಿಗಳ ರಕ್ತವೇ ನನ್ನ ನರ-ನಾಡಿಗಳಲ್ಲಿ ಹರಿಯುತ್ತಿದೆ. ದೇಶದಲ್ಲಿ ಎಲ್ಲೆಲ್ಲೂ ಯಜ್ಞ-ಯಾಗಾದಿಗಳು ನಡೆಯುತ್ತಿದ್ದು, ಎಲ್ಲರೂ ಒಂದೇ ಮಾರ್ಗದಲ್ಲಿ ಸಾಗುತ್ತಾ ಹಾಗೂ ಒಬ್ಬನೇ ದೇವರನ್ನು ಪ್ರಸನ್ನಗೊಳಿಸಲು ಯಜ್ಞ-ಹವನ ಮಾಡುತ್ತಿದ್ದ ಆ ದಿನಗಳು ವಾಸ್ತವವಾಗಿ ಅದೆಷ್ಟು ಚೆನ್ನಾಗಿದ್ದಿರಬಹುದು. ಆದರೆ ಮಂಡನಾಚಾರ್ಯರೇ! ಯಜ್ಞ, ಹವನ, ಸಂಧ್ಯಾವಂದನೆ, ಉಪಾಸನೆ

ಇತ್ಯಾದಿಗಳು ಮನಸ್ಸನ್ನು ಶುದ್ಧವಾಗಿಟ್ಟುಕೊಳ್ಳಲು ಹಾಗೂ ಕೆಟ್ಟ ಭಾವನೆಗಳನ್ನು ಹೊರತೆಗೆದು ಮನಸ್ಸಿನಲ್ಲಿ ಶ್ರೇಷ್ಠ ಭಾವನೆಗಳನ್ನು ತುಂಬಿಸಿಕೊಳ್ಳುವ ಸಾಧನಗಳು ಮಾತ್ರ. ಆದರೆ ಅವು ಸಾಧ್ಯವಾದುವಂತೂ ಅಲ್ಲ. ಸಾಧನ ಜೀವನವಲ್ಲ, ಧ್ಯೇಯವೇ ಜೀವನ".

"ಹಾಗಾದರೆ, ಯಜ್ಞ–ಯಾಗಾದಿಗಳನ್ನು ಪ್ರಚಾರ ಮಾಡದೆ ಮತ್ತು ಆರ್ಯರ ಪುರಾತನ ಪದ್ಧತಿಗಳನ್ನು ಮತ್ತೆ ಪಾಲಿಸದೆ, ಧರ್ಮದ ಉದ್ಧಾರವಾಗುವುದೆಂದು ನೀವು ತಿಳಿಯುತ್ತೀರಾ?" ಮಂಡನಮಿಶ್ರರು ಕೇಳಿದರು.

"ಯಾಕಾಗುವುದಿಲ್ಲ!" ಶಂಕರ ಸ್ವಾಮಿಗಳು ಹೇಳಿದರು: "ಸಾಧನಗಳು ದೇಶ–ಕಾಲಾನುಸಾರ ಬದಲಾಗುತ್ತವೆ. ಯಾವುದೋ ಒಂದು ದೇಶ ಮತ್ತು ಕಾಲದಲ್ಲಿ ಗೋಧಿಯನ್ನು ಉಪಯೋಗಿಸಿಯೇ ಶರೀರ ಸದೃಢವಾಗಿರುತ್ತದೆ; ಇನ್ನೆಲ್ಲೋ ಅಕ್ಕಿ ತಿಂದು ಸದೃಢವಾಗಿರುತ್ತದೆ. ಬೇಸಿಗೆ ಕಾಲದಲ್ಲಿ ಶೀತಲ ವಸ್ತುಗಳನ್ನು ಉಪಯೋಗಿಸುವುದು ಅವಶ್ಯವಾಗುತ್ತದೆ. ಅದೇ ಶೀತ ಕಾಲದಲ್ಲಿ ಉಷ್ಣದ ವಸ್ತುಗಳನ್ನು ಉಪಯೋಗಿಸಬೇಕಾಗುತ್ತದೆ. ಒಂದು ವೇಳೆ ವೈದಿಕ ಧರ್ಮದ ಆತ್ಮ ಜೀವಂತವಾಗಿದ್ದರೆ, ಅದು ಸದಾ ಗೆಲುವು ಮತ್ತು ಸಹನಶೀಲ ಮನೋವೃತ್ತಿಗೆ ಸಂಬಂಧಿಸಿದಂತೆ ಸುಂದರ ಸಮನ್ವಯವಾಗಿರುತ್ತದೆ. ಒಂದು ವೇಳೆ ಪುರಾತನ ಪರಂಪರೆಯೊಂದಿಗೆ ಸಂಬಂಧ ಕೂಡಿಕೊಂಡಿದ್ದರೆ, ವೈದಿಕ ಧರ್ಮವೂ ಇರುತ್ತದೆ. ಬಾಹ್ಯ ಸಂಗತಿಗಳಿದ್ದಾಗ್ಯೂ ಆತ್ಮ ನಾಶವಾದರೆ ವೈದಿಕ ಧರ್ಮವೂ ನಾಶವಾಗುತ್ತದೆ".

"ಹಾಗಾದರೆ ಆ ಹಳೆಯ ದಿನಗಳು ಮರಳಿ ಬರಲಾರವೇ?" ಮಂಡನ ಮಿಶ್ರರು ದುಃಖದಿಂದ ಕೇಳಿದರು.

"ಕಳೆದು ಹೋದ ಸಮಯ ಮತ್ತೆ ಮರಳಿ ಬರಲಾರದು, ಮಿಶ್ರರೆ ! ಗಂಗೆ ಅದೆಷ್ಟೇ ಪ್ರಯತ್ನಿಸಿದಾಗ್ಯೂ ಒಮ್ಮೆ ಬಯಲಿಗೆ ಹರಿದು ಬಂದರೆ ಆ ಪ್ರವಾಹವನ್ನು ಮತ್ತೆ ಮರಳಿ ಬೆಟ್ಟದೆಡೆಗೆ ಒಯ್ಯಲಾರೆವು. ರಾಷ್ಟ್ರ ಮುಂದುವರಿದಿದೆ. ಕಳೆದ ಒಂದು ಸಾವಿರ ವರ್ಷದಲ್ಲಿ ರಾಷ್ಟ್ರಕ್ಕೆ ಅದೆಷ್ಟೋ ಸಂಸ್ಕಾರಗಳು ಆಗಿವೆ. ತನ್ನ ಅಸ್ತಿತ್ವದ ರಕ್ಷಣೆಗಾಗಿ ರಾಷ್ಟ್ರ ಅನೇಕ ರೀತಿಯಲ್ಲಿ ಪ್ರಯತ್ನಿಸಿದೆ. ತನ್ನ ಸುಪ್ತ ಶಕ್ತಿಯನ್ನು ಜಾಗೃತಗೊಳಿಸಿ ಅನೇಕ ದಿಕ್ಕುಗಳಲ್ಲಿ ತೊಡಗಿಸಿಕೊಂಡಿದೆ. ಅಲ್ಲಿ ಕೈಗೊಂಡ ಪುರುಷಾರ್ಥ ರಾಷ್ಟ್ರದ ಸಂಪತ್ತು ಆಗಿದೆ; ರಾಷ್ಟ್ರದ ಸ್ಫೂರ್ತಿ ಕೇಂದ್ರವಾಗಿದೆ, ಅದನ್ನು ಬಿಡಲು ಸಾಧ್ಯವಾಗುವುದಿಲ್ಲ. ನಮ್ಮ ಶಕ್ತಿಗಳನ್ನು ವಿನಿಯೋಗಿಸುವ ದಿಕ್ಕು ಅದೆಷ್ಟೋ ಬಾರಿ ನಮ್ಮ ಅನುಸಾರವಾಗಿಲ್ಲ, ಶತ್ರುಗಳಿಗನುಸಾರವಾಗಿ ನಿರ್ಣಯಿಸಲ್ಪಟ್ಟಿದೆ. ಅವರು ಯಾವ ದಿಕ್ಕಿನಿಂದ ಆಕ್ರಮಣ ಮಾಡಿದರೋ, ನಾವು ಅದೇ ದಿಕ್ಕಿನಲ್ಲಿ ಪ್ರತೀಕಾರ ಕೈಗೊಂಡೆವು. ಅವರು ಯಾವ ಮಗ್ಗುಲಿನಲ್ಲಿ ದುರ್ಬಲವೆಂದು ಕಾಣಿಸಿದರೋ ನಾವು ಅದೇ ದಿಕ್ಕಿನಲ್ಲಿ ಪ್ರತಿ ಆಕ್ರಮಣ ಕೈಗೊಂಡೆವು.



ನದಿಯ ಮಾರ್ಗ ನದಿಯ ಇಚ್ಛೆಗನುಸಾರವಾಗಿರದೆ, ಭೂಮಿಯ ಸಮತಲದ ಮೇಲೆ ಅವಲಂಬಿತವಾಗಿರುತ್ತದೆ. ಹಾಂ! ಅದರ ಒಂದು ಧ್ಯೇಯ, ಅದರ ಜೀವನ ಪ್ರವೃತ್ತಿ ಹಾಗೂ ಅದರ ಧರ್ಮ ಸಮುದ್ರವನ್ನು ಸೇರುವುದಾಗಿದೆ; ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಒಂದು ವೇಳೆ ಯಾರಾದರೂ ತಡೆಯಲು ಪ್ರಯತ್ನಿಸಿದರೂ ಆ ದುರ್ಬುದ್ಧಿ ನಾಶವಾಗಬೇಕಾಗುತ್ತದೆ. ನಮ್ಮ ರಾಷ್ಟ್ರೀಯ ಜೀವನದ ಭಾಗೀರಥಿ ಪ್ರವಾಹವೂ ಕಳೆದ ಸಹಸ್ರ ವರ್ಷಗಳಲ್ಲಿ ವೈದಿಕ ಜೀವನದ ಹಿಮಾಲಯದಿಂದ ಕೆಳಗಿಳಿದು ಪೌರಾಣಿಕ ಜೀವನದ ಮಧ್ಯದೇಶದ ಸಮತಲ ಭೂಮಿಯಲ್ಲಿ ಅತ್ತ–ಇತ್ತ ಹರಿಯುತ್ತಾ ಸಮುದ್ರದೆಡೆಗೆ ಮುಂದುವರಿದಿದೆ. ಇಂದು ಗಂಗೆಯ ಶಬ್ದ ಕೇಳಿಸದಿದ್ದರೆ ದುಃಖವನ್ನಾಚರಿಸುವ ಕಾರಣವಿಲ್ಲ, ಶಾಂತ ಕಲ–ಕಲ ಧ್ವನಿಯೂ ಗಂಗೆಯ ಧ್ವನಿಯೇ ಆಗಿದೆ. ಸಾವಿರ ವರ್ಷಗಳಲ್ಲಿ ನಮ್ಮ ಬದಲಾದ ಸ್ವರೂಪದಿಂದಾಗಿ ನಮಗೆ ಭಯ ಪಡುವ ಯಾವುದೇ ಕಾರಣವಿಲ್ಲ. ಶಿಶುವಿನ ಕೋಮಲತೆಯ ಸ್ಥಾನವನ್ನು ಯುವಕರ ಬಲಿಷ್ಠತೆ ಮತ್ತು ಕಠೋರತೆ ತೆಗೆದುಕೊಂಡಿದ್ದಿರೆ, ಬಾಲ್ಯದ ಕೋಮಲತೆಗೆ ರೋಧಿಸುವ ಕಾರಣವಿಲ್ಲ ಮತ್ತು ಬಾಹ್ಯೋಪಕರಣಗಳಿಂದ ಅದನ್ನು ಉತ್ಪಾದಿಸುವ ಅವಶ್ಯಕತೆಯೂ ಇಲ್ಲ. ಸಾವಿರ ವರ್ಷಗಳಲ್ಲಿ ನಾವು ಯಾವ ಪ್ರವೃತ್ತಿಗಳನ್ನು ಅಭಿವೃದ್ಧಿಪಡಿಸಿದ್ದೇವೆಯೋ, ಅವುಗಳನ್ನು ನಾಶಪಡಿಸಲೂ ಸಾಧ್ಯವಿಲ್ಲ ಹಾಗೂ ಅವುಗಳನ್ನು ನಾಶಮಾಡುವ ಅವಶ್ಯಕತೆಗಳೂ ಇಲ್ಲ, ಯಾವ ಮಾಪಕ ಚಿಹ್ನೆಗಳನ್ನು ಅಭಿವೃದ್ಧಿಪಡಿಸಿದ್ದೇವೆಯೋ ಯಾರ ರಕ್ಷಣೆ ಮಾಡಲೋಸುಗ ನಮ್ಮ ರಾಷ್ಟ್ರದ ವೀರರು ತಮ್ಮ ಪ್ರಾಣವನ್ನೇ ಪಣವಾಗಿಟ್ಟರೋ, ಆ ಮಾಪಕ ಚಿಹ್ನೆಗಳನ್ನು ನಾವಿಂದು ನಾಶವಾಗಲು ಬಿಡುತ್ತೇವೆಯೇ?".

ಮಂಡನ ಮಿಶ್ರ ಈ ಆವೇಶದ ಮಾತುಗಳನ್ನು ಕೇಳಿ ಸ್ವಲ್ಪ ಸಾವರಿಸಿಕೊಂಡು ಕುಳಿತು ಅನಂತರ ಹೇಳಿದರು, "ಯಾವುದೇ ಭ್ರಮಾಪೂರ್ಣ ಆದರ್ಶವನ್ನು ತೆಗೆದುಕೊಂಡು ಅದಕ್ಕೆ ತ್ಯಾಗಮಾಡುವುದು, ತ್ಯಾಗಕ್ಕೆ ಮೊರೆಯಿಟ್ಟು ಆ ಭ್ರಮೆಗಂಟಿಕೊಂಡಿರುವುದು ಎಷ್ಟರಮಟ್ಟಿಗೆ ನ್ಯಾಯಸಂಗತ, ಆಚಾರ್ಯರೇ? ಆದರ್ಶಕ್ಕಾಗಿ ಮಾಡಿದ ತ್ಯಾಗ ಅದನ್ನು ವಾಸ್ತವಿಕಗೊಳಿಸುವುದಿಲ್ಲ. ಆದರ್ಶ ಸ್ವತಃ ಸತ್ಯವಾಗಿರುತ್ತದೆ. ಭ್ರಷ್ಟ ಹಾದಿಯಲ್ಲಿ ಸಾಗುವಾಗ ಆಗುವ ಪರಿಶ್ರಮದಿಂದಾಗಿ ಹೇಯ ಮಾರ್ಗ ಪ್ರಶಸ್ತವಾಗಲು ಸಾಧ್ಯವಾಗುವುದಿಲ್ಲ, ವಿದ್ವಾಂಸರಿಗೂ ಇದು ಪ್ರಶಸ್ತವಾಗಬಾರದು" ಮಂಡನ ಮಿಶ್ರನ ಸ್ವರ ಕೊನೆಗೆ ಉತ್ತೇಜಿತಗೊಂಡಿತು.

"ಮಿಶ್ರ ಶ್ರೇಷ್ಠರೇ, ನೀವು ಸತ್ಯ ಹೇಳುತ್ತಿದ್ದೀರಿ!" ಆಚಾರ್ಯಶಂಕರರು ಶಾಂತಚಿತ್ತರಾಗಿ ಹೇಳಿದರು, "ತಾಗ್ಯ, ಆತ್ಮಾಹುತಿ ಮತ್ತು ಬಲಿದಾನಗಳನ್ನು ಒಂದು ಸತ್ಯದ ಆದರ್ಶಪ್ರಾಪ್ತಿಗಾಗಿ ಕೈಗೊಂಡಾಗಲೇ ಅದಕ್ಕೆ ಬೆಲೆ ಸಿಗುತ್ತದೆ. ಇಲ್ಲದಿದ್ದಲ್ಲಿ, ಅವು ನಮ್ಮ ಭಯಾನಕ ಭ್ರಾಂತಿಯನ್ನು ಮತ್ತೂ ಭಯಾನಕ ಗೊಳಿಸುತ್ತವೆ. ಹುತಾತ್ಮರ

ಪ್ರಖರ ಬೆಳಕಿನಿಂದ ಜನ ಸಾಮಾನ್ಯರ ಕಣ್ಣುಗಳು ಕೋರೈಸಬಹುದು. ಇದರಿಂದಾಗಿ ಆ ಪ್ರಕಾಶಗೊಂಡ ವಸ್ತುವಿನ ಸ್ವರೂಪದ ಬಗ್ಗೆ ಸರಿಯಾದ ನಿರ್ಣಯ ತೆಗೆದುಕೊಳ್ಳಲಾಗುವುದಿಲ್ಲ, ಆದರೆ ಯಾರು ವಿಚಾರ ಮಾಡುವವಂತಹವರೋ, ಸೂಕ್ಷ್ಮದರ್ಶಿಗಳೋ, ಅವರು ಈ ಬೆಳಕಿನಲ್ಲಿ ಆದರ್ಶಗಳ ಸತ್ಯಾಸತ್ಯತೆಯನ್ನು ಮತ್ತೂ ಸ್ಪಷ್ಟವಾಗಿ ತಿಳಿದುಕೊಳ್ಳಬಲ್ಲರು. ನೀವು ವಿಚಾರವಂತ ಪುರುಷರಂತೆ ಈ ತ್ಯಾಗದ ಹೊದಿಕೆಯನ್ನು ಸರಿಸಿ ಆದರ್ಶದ ಪರೀಕ್ಷೆಯನ್ನು ಮಾಡುವ ವಿಚಾರವನ್ನು ಉಚಿತವಾಗಿಯೇ ಮಾಡಿದ್ದೀರ".

ಆಚಾರ್ಯ ಶಂಕರರು ತಮ್ಮ ವಿಚಾರಗಳನ್ನು ಒಪ್ಪುತ್ತಿರುವುದನ್ನು ಕಂಡು ಮಂಡನ ಮಿಶ್ರ ಮನಸ್ಸಿನಲ್ಲಿಯೇ ಸಂತೋಷಗೊಂಡಿದ್ದ. ಅವನು ತನ್ನ ವಿಷಯವನ್ನು ಮತ್ತೆ ತಿಳಿಯಪಡಿಸುವ ಇಚ್ಛೆಯಿಂದ ಹೇಳಿದ, "ಸರಿ ಆಚಾರ್ಯರೇ!, ನಾವು ಸತ್ಯಾದರ್ಶವನ್ನು ಪ್ರತಿಷ್ಠಾಪಿಸಲೋಸುಗವೇ ಪ್ರಯತ್ನಿಸಬೇಕು. ಅದು ಆರ್ಯ ಪೂರ್ವಿಕರ ವೇದ ಯೋಗ್ಯ ಕರ್ಮಕಾಂಡದ ಮಾರ್ಗವಾಗಲು ಸಾಧ್ಯ. ಬನ್ನಿ, ನಾವು ಅದರಲ್ಲಿಯೇ ಸೇರಿಕೊಳ್ಳೋಣ"

"ಹೌದು, ಮಿಶ್ರ ಶ್ರೇಷ್ಠ!" ಆಚಾರ್ಯ ಶಂಕರರು ಹೇಳಿದರು, "ಆರ್ಯರು ವೈದಿಕ ಮಾರ್ಗವನ್ನೇ ನಾವು ಅನುಸರಣೆ ಮಾಡೋಣ. ಉಪನಿಷದ್‌ಗಳ ಜ್ಞಾನ–ಗಂಗೆಯ ಧವಲಧಾರೆಯ ಆದಿ ಸ್ರೋತ್ರ, ಅನಂತ ರತ್ನಗಳ ಭಂಡಾರ, ಪೃಥ್ವಿಯ ಮಾನದಂಡ ಶೈಲರಾಜ ಹಿಮವಂತನಂತೆ ಅಪಾರ ಜ್ಞಾನದ ಭಂಡಾರ, ಜ್ಞಾನಲೋಕದ ಮಾನದಂಡ–ಎಲ್ಲವೂ ಅಲೌಕಿಕ ವೇದಗಳಲ್ಲಿಯೇ ಇದೆ. ಗಗನಚುಂಬಿ ಗಿರಿರಾಜನ ತಪ್ಪಲುಗಳಲ್ಲಿ ತಪಸ್ಸು ಮಾಡುತ್ತಾ, ಅದರ ಶೈಲಶೃಂಗಗಳೊಂದಿಗೆ ಎತ್ತರಕ್ಕೇಳುತ್ತಾ ಜ್ಞಾನಾಕಾಶವನ್ನು ಚುಂಬಿಸಿ ಯಾವ ವೇದಾಂತ ಸೂತ್ರಗಳನ್ನು ರಚಿಸಲಾಯಿತೋ, ಅವುಗಳೆಲ್ಲವೂ ವೇದ ವಿರುದ್ಧವೇ? ಆ ಮಹರ್ಷಿ ಬಾದರಾಯಣರು ಆರ್ಯಪಥದ ಪಥಿಕರಾಗಿರಲಿಲ್ಲವೇ? ವ್ಯಾಮೋಹಕ್ಕೊಳಗಾದ ಅರ್ಜುನನ ಅಕರ್ಮಣ್ಯತೆಯನ್ನು ನಾಶಗೊಳಿಸಿ ಅವನಲ್ಲಿ ಮತ್ತೆ ಪುರುಷಾರ್ಥದ ಶಕ್ತಿ ತುಂಬಿದ ಶ್ರೀಮದ್ಭಗವದ್ಗೀತೆ ವೇದಯೋಗ್ಯವಾದುದಲ್ಲವೇ? ಜ್ಞಾನ, ಕರ್ಮ ಮತ್ತು ಭಕ್ತಿಯ ಈ ತ್ರಿವೇಣಿ ಸಂಗಮದಲ್ಲಿ ಮಿಂದು ಯಾರ ಪಾಪಕರ್ಮಗಳು ತಾನೇ ನಾಶವಾಗುವುದಿಲ್ಲ? ಕಳೆದ ಸಾವಿರ ವರ್ಷಗಳಲ್ಲಿ ಯಾವ ಧರ್ಮವು ಏಳಿಗೆಯನ್ನು ಸಾಧಿಸಿದೆಯೋ ಅದು ವೈದಿಕ ಧರ್ಮವೇ ಆಗಿದೆ; ಯಾವ ಆದರ್ಶದಲ್ಲಿ ಸಾಗಿದ್ದೇವೆಯೋ ಅದು ವೈದಿಕ ಆದರ್ಶವೇ ಆಗಿದೆ, ಮಂಡನಾಚಾರ್ಯರೇ!"

ಆಚಾರ್ಯರೇ, ಇವೆಲ್ಲಾ ಸತ್ಯವೇ ಆಗಿದೆ! ಆದರೆ ಬೌದ್ಧರಂತೆ ಯಜ್ಞ–ಹವನ ತ್ಯಜಿಸಿ ನಡೆಸಿದ ಪೂಜಾ–ಅರ್ಚನೆ ವೈದಿಕ ಪದ್ಧತಿಯೇ?" ಮಂಡನ ಮಿಶ್ರ ಅಲ್ಪ–ಸ್ವಲ್ಪ ಒಪ್ಪಿಕೊಳ್ಳುತ್ತಾ ಹೇಳಿದ.



ಆಚಾರ್ಯ ಶಂಕರರು ಉತ್ತರಿಸಿದರು, "ಈ ಪದ್ಧತಿ ಬೌದ್ಧರದ್ದಲ್ಲ, ಮಂಡನಾಚಾರ್ಯರೇ! ಬೌದ್ಧರಿಂದಾಗಿ ನಾವು ಯಜ್ಞ–ಹವನಗಳನ್ನು ತ್ಯಜಿಸಿಲ್ಲ. ನಮಗೆ ಬೌದ್ಧರಿಗಿಂತಲೂ ಮೊದಲು ನಮ್ಮ ಜೀವನದಲ್ಲಿ ಯಜ್ಞ–ಹವನ ಇತ್ಯಾದಿ ಬಾಹ್ಯ ಕರ್ಮಕಾಂಡಗಳೊಂದಿಗೆ ಅಂತರಾತ್ಮದ ಸಾಕ್ಷಾತ್ಕಾರದ ಪ್ರವೃತ್ತಿ ಕಂಡುಬರುತ್ತದೆ. ಒಂದು ವೇಳೆ ಬೌದ್ಧಧರ್ಮದ ಉದಯವಾಗದಿದ್ದರೂ ನಾವು ಈ ಎಲ್ಲ ಪದ್ಧತಿಗಳನ್ನು ಅಭಿವೃದ್ಧಿಪಡಿಸುತ್ತಿದ್ದೆವು. ಬಾಹ್ಯ ಯಜ್ಞದ ಜಾಗದಲ್ಲಿ ಆತ್ಮಯಜ್ಞಕ್ಕೆ ಸಂಬಂಧಿಸಿದ ಉತ್ತಮ ಆದರ್ಶಗಳನ್ನಂತೂ ಉಪನಿಷದ್ ಮತ್ತು ಬ್ರಾಹ್ಮಣಗಳು ಸ್ವತಃ ಮುಂದಿರಿಸಿವೆ. ಭಕ್ತಿ ಪ್ರೇರಣೆ ಸನಾತನ ಪ್ರೇರಣೆಯಾಗಿದೆ. ಇಂದು ನಮಗೆ ಅದರ ವಿಕಸನಗೊಂಡ ರೂಪ, ಜನಸಾಮಾನ್ಯರ ಪೂಜೆ ಇತ್ಯಾದಿ ಪದ್ಧತಿಯಲ್ಲಿ ಲಭಿಸುತ್ತದೆ. ಅದಕ್ಕೊಂದು ಆಕಾರವನ್ನು ಕೊಡುವುದು ಮತ್ತು ಅದರಲ್ಲಿ ಪರಿಷ್ಕರಣೆ ಮಾಡುವುದು ನಮ್ಮ ಕೆಲಸವಾಗಿದೆ. ಅದು ವೈದಿಕ ಪದ್ಧತಿಯೇ. ಮನೆ–ಮನೆಯಲ್ಲಿ ನಡೆಯುವ ಶಿವನ ಪೂಜೆಯ ಹಿಂದೆ ನಿಮಗೆ ವೈದಿಕ ರುದ್ರನ ಸ್ತುತಿ ಕೇಳಿಸುವುದಿಲ್ಲವೇ? ಭಾಗವತ ಧರ್ಮಿಯಾದ ವಾಸುದೇವನ ಪೂಜಾರಿಗಳೂ ಸಹ ವಿಷ್ಣುವನ್ನೇ ಆರಾಧಿಸುತ್ತಾರೆ. ಪುರಾಣಗಳಲ್ಲಿ ಮತ್ತು ಉಪಪುರಾಣಗಳಲ್ಲಿಯೂ ವೈದಿಕ ಋಷಿಗಳ ಮಹಿಮೆಯನ್ನು ಹಾಡಲಾಗಿದೆ. ಯಾವ ರಾಜರುಗಳ ಆದರ–ಪೂರ್ವಕ ಹಾಡುಗಳಿಂದ ನಮ್ಮ ಸುತರು ಗಗನ ಮಂಡಲವನ್ನೇ ಪ್ರತಿಧ್ವನಿಗೊಳಿಸಿದರೋ ಅವರು ವೈದಿಕ ಧರ್ಮಾವಲಂಬಿಗಳೇ! ಆಗಿದ್ದರು. ಈ ಸಾವಿರ ವರ್ಷಗಳಲ್ಲಿ ಭಾರತದ ಜನಸಮುದಾಯ ಪೂರ್ವ ಪರಂಪರೆಯೊಂದಿಗೆ ಸಂಬಂಧವಿಟ್ಟುಕೊಳ್ಳಲಿಲ್ಲವೇ! ಅವರ ಮನಸ್ಸಿನಲ್ಲಿ ತಮ್ಮ ಪೂರ್ವಿಕರ ಬಗ್ಗೆ ಶ್ರದ್ಧೆ ಹುಟ್ಟುವಂತೆಮಾಡಿಲ್ಲವೆ? ಈ ಪರಂಪರೆಯನ್ನು ಮುರಿಯುವ ಅವಶ್ಯಕತೆಯಿಲ್ಲ. ಇದು ಭಾರತೀಯ ಮಸ್ತಿಷ್ಕದ ವಿಕಾಸವಾಗಿದೆ. ಆಸಿಂಧು–ಸಿಂಧು ಪರ್ಯಂತ ಭಾರತ ಭೂಮಿಯ ಕೋಟಿ–ಕೋಟಿ ಮಕ್ಕಳಿಗೆ ತಾಯಿಯು ಕೊಟ್ಟ ಮೊಲೆ ಹಾಲಿದೆ. ಪರಿಪುಷ್ಟಗೊಂಡ ಸತ್‌ಪುತ್ರರು ಕೈಗೊಳ್ಳುವ ಮಾತೆಯರ ಉಪಾಸನಾ–ವಿಧಿಯಿದೆ, ಆರಾಧನೆಯಿದೆ. ಈ ಸಹಸ್ರ ವರ್ಷಗಳಲ್ಲಿ ವಿಕಸಿತಗೊಂಡ ರಾಷ್ಟ್ರದ ಅಂತಃಕರಣ ಚತುಷ್ಟಯದಂತೆ ನಮ್ಮ ನಾಲ್ಕೂ ಗೃಹಗಳ ಕಲ್ಪನೆಯನ್ನು ತ್ಯಜಿಸಲು ಸಾಧ್ಯವೇ? ನಾವು ಅದನ್ನು ಬಿಡಲಾರೆವು, ಅದನ್ನು ಜನಸಾಮಾನ್ಯರೂ ಬಿಡುವುದಿಲ್ಲ. ಯಾಕೆಂದರೆ ಅದರಲ್ಲಿ ಅವರು ಮಾತೃಭೂಮಿಯ ಆಕಾರವನ್ನು ನೋಡುತ್ತಾರೆ. ಪ್ರಜಾಪತಿ ದಕ್ಷನ ಯಜ್ಞದಲ್ಲಿ ಸ್ವಾಭಿಮಾನದ ರಕ್ಷಣೆ ಮಾಡಿಕೊಳ್ಳಲೋಸುಗ ಆತ್ಮಾಹುತಿಯನ್ನು ಮಾಡಿಕೊಂಡ ಸತಿಯ ಶವದ ಅಂಗಾಂಗಗಳು ಇಂದು ಸಂಪೂರ್ಣ ಭಾರತದಲ್ಲಿ ಅಲ್ಲಲ್ಲಿ ಹರಡಿಬಿದ್ದಿವೆ. ಶಾಕ್ತರ ಆ ತೀರ್ಥಕ್ಷೇತ್ರಗಳಲ್ಲಿ ಇಂದಿಗೂ, ಕಣ್ಣಿದ್ದವರು ದಕ್ಷ ಪ್ರಜಾಪತಿಯ ಯಜ್ಞದಿಂದೇಳುವ ಜ್ವಾಲೆಯನ್ನು ನೋಡಬಹುದು. ಆ ಜ್ವಾಲೆಗಳಿಂದ ಪ್ರತ್ಯಕ್ಷಗೊಳ್ಳುವ ತಾಯಿಯ

ಮೂರ್ತಿಯೆದರು ಯಾರ ತಲೆ ಬಾಗಲಾರರು? ಮಂಡನಾಚಾರ್ಯರೇ, ಬೌದ್ಧಧರ್ಮದ ರಾಷ್ಟ್ರ ವಿರೋಧಿ ಪ್ರವೃತ್ತಿಗಳನ್ನು ಈ ರಾಷ್ಟ್ರೀಯ ಕಲ್ಪನೆಗಳು ತಡೆದಿವೆ! ಇವನ್ನು ಬಿಟ್ಟು ರಾಷ್ಟ್ರದ ಅಭಿವೃದ್ಧಿ ಹೇಗೆ ಸಾಧ್ಯವಾಗುವುದು?" ಸ್ವಾಮಿ ಶಂಕರಾಚಾರ್ಯರು ಸ್ವಲ್ಪ ತಡೆದರು. ಮಂಡನಮಿಶ್ರರು ಮುಗ್ಧಮನಸ್ಸಿನಿಂದ ಕೇಳುತಿದ್ದರು. ಆಚಾರ್ಯರು ಮತ್ತೆ ಹೇಳಲು ಪ್ರಾರಂಭಿಸಿದರು: "ಒಂದು ವೇಳೆ ನಮ್ಮ ಈ ಅಭಿವೃದ್ಧಿ ಪರಕೀಯರ ಅನುಕರಣೆಯಂತಾಗಿದ್ದರೆ. ಅದು ನಮ್ಮ ಸ್ವಾವಲಂಬನೆ, ಆತ್ಮಾಭಿಮಾನ ಮತ್ತು ಆತ್ಮವಿಶ್ವಾಸವನ್ನು ನಾಶಗೊಳಿಸುವಂತಹದ್ದಾಗುತ್ತಿತ್ತು; ಅದು ನಮ್ಮೊಳಗೆ ಆತ್ಮಗೌರವನ್ನು ಪ್ರಜ್ವಲಗೊಳಿಸುತ್ತಿರಲಿಲ್ಲ. ಅದು ಪುರಾತನ ಪರಂಪರೆಯನ್ನು ಚೂರು-ಚೂರುಮಾಡುತ್ತಿತ್ತು ಹಾಗೂ ರಾಷ್ಟ್ರವಿರೋಧಿ ಪ್ರವೃತ್ತಿಗಳ ಹುಟ್ಟಿಗೆ ಕಾರಣವಾಗುತ್ತಿತ್ತು. ಆಗ ನಾವು ಅದನ್ನು ಬೇರು ಸಹಿತ ಕಿತ್ತೆಸೆಯುತ್ತಿದ್ದೆವು. ಅದರ ಬಗ್ಗೆ ಸ್ವಲ್ಪವೂ ಮೋಹವಿಟ್ಟುಕೊಳ್ಳುತ್ತಿರಲಿಲ್ಲ. ಆದರೆ ಅದು ತನ್ನ ಪೂರ್ವಜರ ಪರಂಪರೆಯನ್ನೇ ಪುಷ್ಟೀಕರಿಸುವುದಾಗಿದೆ. ಪೂರ್ವಜರು ಬಿತ್ತಿದ ಬೀಜವೇ ವೃಕ್ಷದ ರೂಪವನ್ನು ಧರಿಸಿದೆ. ಬೀಜದ ಹಳೆ ಆಕಾರ ನಷ್ಟವಾದುದ್ದನ್ನು ಕಂಡು ಶೋಕವನ್ನಾಚರಿಸಬೇಕಿಲ್ಲ. ಅದರ ಪರಿವರ್ತಿತ ಮತ್ತು ವಿಕಸಿತಗೊಂಡ ರೂಪವನ್ನು ಗುರುತಿಸಿ. ವೃಕ್ಷದಲ್ಲಿ ಬೀಜವನ್ನು ಕಾಣಿರಿ. ವೃಕ್ಷಕ್ಕೆ ನೀರುಣಿಸುವುದರಿಂದ ಮತ್ತೆ ಫಲ ಮತ್ತು ಬೀಜಗಳು ಲಭಿಸುತ್ತವೆ. ಕಡಿಯುವುದರಿಂದ ಅಥವಾ ಬೇರನ್ನು ಅಗೆಯುವುದರಿಂದ ಈ ಬೀಜ ಸಿಗುವುದಿಲ್ಲ. ಇಂದಿನ ಹಿಂದೂ ಧರ್ಮ ತನ್ನ ಪುರಾತನ ಆರ್ಯ ಧರ್ಮ ವಿಕಸಿತ ರೂಪವೇ ಆಗಿದೆ. ಬನ್ನಿ, ಇದನ್ನು ಬೆಳಸೋಣ, ವೃದ್ಧಿಸೋಣ. ಇಡೀ ಭಾರತದಲ್ಲಿ ಅದ್ವೈತವನ್ನು ಪ್ರಚಾರ ಮಾಡೋಣ. ಭಾರತದ ಪ್ರಜೆಗಳನ್ನು ಒಂದು ಸೂತ್ರದಲ್ಲಿ ಹೆಣೆಯೋಣ".

"ಹಾಗಾದರೆ ಯಜ್ಞ ಹವನಗಳು ಇನ್ನಿಲ್ಲದಂತೆ ನಷ್ಟಗೊಳ್ಳುತ್ತವೆಯೇ, ಆಚಾರ್ಯರೇ?" ಮಂಡನಮಿಶ್ರರು ಸ್ವಲ್ಪ ವ್ಯಗ್ರಗೊಂಡು ಕೇಳಿದರು. ಆಚಾರ್ಯ ಶಂಕರರ ಮಾತುಗಳು ಅವರನ್ನು ಗೆದ್ದಿದ್ದವು. ಆದರೆ ಮನಸ್ಸಿನಲ್ಲಿದ್ದ ಸಂಸ್ಕಾರಗಳು ಬಲಪ್ರಯೋಗ ಮಾಡುತ್ತಿದ್ದವು, "ಮಿಶ್ರರೆ, ಅವು ಯಾಕೆ ನಾಶವಾಗುತ್ತವೆ? ಯಜ್ಞಕ್ಕೆ ನಮ್ಮ ಜೀವನದಲ್ಲಿ ಸ್ಥಾನವಿದೆ, ಅದು ಮಹತ್ವದ್ದು, ಹೀಗಾಗಿ ಅದನ್ನು ಮಾಡಿಕೊಂಡೇ ಬರಬೇಕು. ನಮ್ಮ ಸಂಪೂರ್ಣ ಬದುಕೇ ಯಜ್ಞಮಯವಾಗುವುದು. ಆದಿಭೌತಿಕ ಶಕ್ತಿ ಆದಿವೈದಿಕ ಭಾವನೆಗಳನ್ನು ಪುಷ್ಟೀಕರಿಸಿದಾಗ, ಆಧ್ಯಾತ್ಮಿಕ ದೃಷ್ಟಿ ಜನ್ಮತಾಳುತ್ತದೆ. ಇದೇ ಯಜ್ಞ, ನಮ್ಮ ಬಳಿ ಏನಿದೆಯೋ, ನಾವೇನು ಮಾಡುತ್ತೇವೆಯೋ, ಅದು ನಮ್ಮ ಜೀವನದ ಉಪಭೋಗಕ್ಕಾಗಿ ಅಲ್ಲ, ಮಾನವನ ಆದರ್ಶ ಗುಣಗಳನ್ನು ಪಡೆಯಲೋಸುಗ ಮಾಡುತ್ತೇವೆ. ಇದೇ ಯಜ್ಞಕ್ಕೆ ಸಂಬಂಧಿಸಿದ ಭಾವನೆಯಾಗಿದೆ.



ಜಗತ್ತಿನಲ್ಲಿರುವ ಸತ್ಯ, ಶಿವ-ಎಲ್ಲವೂ ದೇವರ ಆವಿಷ್ಕಾರವೇ ಆಗಿದೆ. ಜೀವನದ ಕ್ರಿಯೆಗಳನ್ನು ಅದಕ್ಕೆ ಸಮರ್ಪಿಸುವುದೇ ಯಜ್ಞ, ಮಿಶ್ರ ಶ್ರೇಷ್ಠರೇ!" ಆಚಾರ್ಯರು ಹೇಳಿದರು.

"ಸರಿಯೇ ಆಚಾರ್ಯರೇ?" ಮಂಡನಮಿಶ್ರರು ಚೇತರಿಸಿಕೊಳ್ಳುತ್ತಾ ಹೇಳಿದರು: "ಆದರೆ ಸಿದ್ಧಾಂತಕ್ಕೆ ಒಂದು ವ್ಯಾವಹಾರಿಕ ಸ್ವರೂಪವೂ ಇರುತ್ತದೆ. ಆದರ್ಶಗಳನ್ನು ಪಡೆಯಲು ಸಾಧನಗಳೂ ಬೇಕು; ಜೀವನದಲ್ಲಿ ಇಂಥ ಯಜ್ಞಮಯ ದೃಷ್ಟಿಯನ್ನು ಸೃಷ್ಟಿಸಿಕೊಳ್ಳಲು ಉಪಯುಕ್ತವಾದ ಸಂಸ್ಕಾರಗಳೂ ಅಗತ್ಯವಾಗಿವೆ. ಇವಿಲ್ಲದೆ ಅದರ ಅಪೇಕ್ಷಿಸಲ್ಪಟ್ಟ ವಿಚಾರಗಳಲ್ಲಿ ನಾವು ಯಶಸ್ಸು ಪಡೆಯುವುದು ಹೇಗೆ?"

"ಮಿಶ್ರ ಶ್ರೇಷ್ಠರೇ, ನೀವು ವಾಸ್ತವಿಕ ಸಂಗತಿಯನ್ನೇ ಹೇಳಿದಿರಿ?" ಶಂಕರಾಚಾರ್ಯರು ಹೇಳಿದರು, "ನಾವು ಸಾಧನಾರೂಪದ ಸಂಸ್ಕಾರಗಳನ್ನು ತ್ಯಜಿಸುವುದಿಲ್ಲ. ನಮ್ಮ ಯಜ್ಞ-ಹವನ ಇತ್ಯಾದಿಗಳು ಇದೇ ರೂಪದಲ್ಲಿರುತ್ತವೆ. ಪ್ರತಿಯೊಬ್ಬರೂ ಪಂಚ-ಯಜ್ಞಗಳನ್ನು ಮಾಡುತ್ತಾರೆ, ನಮ್ಮ ಇಡೀ ಧಾರ್ಮಿಕ ಕಾರ್ಯಗಳಿಗೆ ಯಜ್ಞ-ಹವನಗಳು ಆವಶ್ಯಕವಾಗುತ್ತವೆ. ಜೀವನದ ಸಂಪೂರ್ಣ ಸಂಸ್ಕಾರಗಳು, ವಿಧಿಪೂರ್ವಕ ಹವನ-ಯಜ್ಞಗಳ ಮೂಲಕವೇ ನಡೆಯುತ್ತವೆ. ಇವುಗಳ ಶುದ್ಧ ಮತ್ತು ಸಾತ್ವಿಕ ಸ್ವರೂಪ ನಮ್ಮದೇ ಆಗಿದ್ದು, ಅದು ನಮ್ಮದೇ ಆಗಿರುತ್ತದೆ. ಆದರೆ ಮಿಶ್ರರೇ, ನಾವು ಹಠಮಾರಿಗಳಲ್ಲವೇ? ಒಂದು ವೇಳೆ ಬೇರೆ ಸಾಧನಗಳಿಂದಲೂ ಮೇಲೆ ತಿಳಿಸಿದಂತಹ ಭಾವನೆ ನಿರ್ಮಾಣಗೊಂಡರೆ ನಮಗೇಕೆ ಅಡ್ಡಿಯಾಗಬೇಕು?

ಮಂಡನಮಿಶ್ರರು ಹೇಗೆ ಅಡ್ಡಿ ಮಾಡಿಯಾರು?

ಅವರ ಬತ್ತಳಿಕೆಯಲ್ಲಿ ಈಗ ತರ್ಕದ ಬಾಣಗಳು ಮುಗಿದು ಹೋಗಿದ್ದವು. ಅವರು ಶಂಕರರೆಂಬ ಸರಸ್ವತಿಯಲ್ಲಿ ಮಿಂದು ತಮ್ಮ ಸಮಸ್ತ ಸಂದೇಹ-ಸಂಶಯಗಳನ್ನು ಪರಿಹರಿಸಿಕೊಂಡಿದ್ದರು. ಆದರೆ ಅವರಿಗೆ ಮಹಿರ್ಷಿ ಜೈಮಿನಿಯ ಬಗ್ಗೆ ತುಂಬಾ ಗೌರವವಿತ್ತು. ಅವರ ಹೃದಯ ಆಗಿಂದಾಗ್ಯೆ ಅವರನ್ನು ಹಿಂದಕ್ಕೆಳೆಯುತ್ತಿತ್ತು. ಕಡೆಗೆ ಅವರು ಹೇಳಿಯೇಬಿಟ್ಟರು: "ಆಚಾರ್ಯರೇ , ತಾವು ಹೇಳುವುದಂತೂ ಸರಿಯೇ, ನಿಮ್ಮ ವಿಚಾರಗಳೆಲ್ಲವೂ ನನಗೆ ಸಹಮತವೇ. ಆದರೆ ಮಹರ್ಷಿ ಜೈಮಿನಿಗಳಂತಹ ವಿದ್ವಾಂಸರು ಈ ಸಂಗತಿಗಳನ್ನೆಲ್ಲಾ ಯೋಚಿಸಿರಲು ಸಾಧ್ಯವಿರಲಿಲ್ಲವೇ? ಅವರ ಮನಸ್ಸಿನಲ್ಲಿ ದೇಶ ಮತ್ತು ಧರ್ಮದ ಬಗ್ಗೆ ಪ್ರೀತಿಯಿರಲಿಲ್ಲವೇ?"

ಈ ತರ್ಕ ತುಂಬಾ ವಕ್ರವಾಗಿತ್ತು. ಮಹರ್ಷಿಗಳ ವಿದ್ವತ್ತು ಮತ್ತು ದೇಶ-ಪ್ರೇಮದಲ್ಲಿ ಸಂದೇಹ ಮಾಡಲು ಸಾಧ್ಯವಿರಲಿಲ್ಲ. ಪ್ರತ್ಯಕ್ಷವಾಗಿ ಭಿನ್ನಮಾರ್ಗವನ್ನು

ಅವಲಂಬಿಸಲೇಬೇಕಿತ್ತು. ಆದರೆ ಶಂಕರಾಚಾರ್ಯರಿಗೆ ಶಾಸ್ತ್ರಗಳ ಬಗ್ಗೆ ಅಪಾರ ಜ್ಞಾನವಿತ್ತು. ಕಡಿಮೆಯಿಲ್ಲಿಲ್ಲ. ಅವರು ಮಹರ್ಷಿ ಜೈಮಿನಿಗಳ ವಾಕ್ಯಗಳನ್ನೇ ಉದಾಹರಿಸಿ, ತಮ್ಮ ಮತವನ್ನು ಪ್ರತಿಪಾದಿಸಿದರು. ಸ್ವತಃ ಮಹರ್ಷಿ ಜೈಮಿನಿಗಳೇ ಪ್ರತ್ಯಕ್ಷರಾಗಿ ಶಂಕರಾಚಾರ್ಯರ ಮತವನ್ನು ಪುಷ್ಟೀಕರಿಸಿದರೆಂದು ಜನಶ್ರುತಿಯಿದೆ. ಈಗ, ಮಂಡನಮಿಶ್ರರು ಆಚಾರ್ಯರ ಚರಣಗಳಿಗೆ ತಲೆಬಾಗಿದರು. ಆಚಾರ್ಯರೂ ಆನಂದಭಾಷ್ಪವನ್ನು ಹರಿಸುತ್ತಾ ಅವರನ್ನು ಸ್ವೀಕರಿಸಿದರು. ರಾಷ್ಟ್ರದ ಸಂವೇದನೆಯಿಂದ ಅವನ ಹೃದಯ ಈ ಮೊದಲೇ ತುಂಬಿತ್ತು. ಪ್ರಸ್ತುತ ಅವರಿಗೆ ನಿಶ್ಚಿತ ಮಾರ್ಗವೂ ಲಭಿಸಿತು. ಅವರು ಶಂಕರರಂತೆಯೇ ಸನ್ಯಾಸವನ್ನು ಸ್ವೀಕರಿಸಿ, ಜೊತೆಗೆ ಬರಲು ಸಿದ್ಧರಾದರು.

ಶಂಕರ ಸ್ವಾಮಿಗಳ ಚರ್ಚೆ ದೂರ–ದೂರದವರೆಗೆ ಪಸರಿಸಿತು. ನೋಡು–ನೋಡುತ್ತಿದ್ದಂತೆಯೇ ಜನ ಅವರ ಧರ್ಮದಲ್ಲಿ ದೀಕ್ಷೆ ಪಡೆಯಲು ಸಿದ್ಧರಾದರು. ಕಾರಣ, ಅವರು ಮಂಡನಾಚಾರ್ಯರಂತಹ ಪ್ರಕಾಂಡ ಪಂಡಿತರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡಿದ್ದರು. ಆದರೆ ಶಂಕರಾಚಾರ್ಯರು ಪ್ರಸ್ತುತ ಪರಿಸ್ಥಿತಿಗಳನ್ನು ಇನ್ನೂ ಧೈರ್ಯದಿಂದ ಎದುರಿಸಬೇಕಿತ್ತು.

* * * *



# ೧೩. ಭಾರತಿಯ ಸಂದೇಹ ನಿವಾರಣೆ

ಭಾರತಿ ತನ್ನೆದುರು ತನ್ನ ಪತಿಯ ಪರಾಜಯವನ್ನು ಹಾಗೂ ಅವರು ಪ್ರತಿಜ್ಞೆಯಂತೆ ಸನ್ಯಾಸಿಯಾಗುವುದನ್ನು ನೋಡಿದಳು. ಅವಳ ಪತಿ ಖಂಡಿತವಾಗಿ ಸೋತಿದ್ದರು. ಆದರೆ ಇನ್ನೂ ಸಂದೇಹ ನಿವಾರಣೆಯಾಗಿರಲಿಲ್ಲ. ಪತಿ ಮತ್ತು ಪತ್ನಿಯ ವಿಚಾರಗಳಲ್ಲಿ ಅಂತರವಿದ್ದು, ಪತಿ ತನ್ನ ವಿಚಾರಗಳಿಂದಾಗಿ ಸನ್ಯಾಸ ಸ್ವೀಕರಿಸುವುದು ಹಾಗೂ ಪತ್ನಿ ಗೃಹಸ್ಥ ಧರ್ಮವನ್ನು ಪಾಲಿಸುವುದು ಅವಳಿಗೆ ಅರ್ಥವಾಗುತ್ತಿರಲಿಲ್ಲ. ಆದ್ದರಿಂದ ಅವಳೂ ಸ್ವಾಮಿ ಶಂಕರಾಚಾರ್ಯರೊಂದಿಗೆ ಶಾಸ್ತ್ರದ ಬಗ್ಗೆ ಚರ್ಚೆ ಮಾಡಲು ನಿಶ್ಚಯಿಸಿದಳು.

“ಆಚಾರ್ಯರೇ, ನೀವಂತೂ ನನ್ನ ಪತಿಯ ಬಾಯಿಯನ್ನು ಮುಚ್ಚಿಸಿದ್ದೀರಿ. ಆದರೆ ನೀವಿನ್ನೂ ಅವರನ್ನು ಪೂರ್ಣ ಪ್ರಮಾಣದಲ್ಲಿ ಗೆದ್ದಿಲ್ಲ. ಪತ್ನಿ ಪತಿಯ ಅರ್ಧಾಂಗಿನಿಯಾಗಿರುತ್ತಾಳೆ. ನೀವು ನನ್ನೊಂದಿಗೆ ಶಾಸ್ತ್ರದ ಬಗ್ಗೆ ಚರ್ಚೆ ಮಾಡಿ ನನ್ನನ್ನು ಸೋಲಿಸುವವರೆಗೂ, ನೀವು ಅವರ ಅರ್ಧ ಭಾಗವನ್ನು ಗೆದ್ದಿಲ್ಲವಾದ್ದರಿಂದ, ಅವರು ಪ್ರತಿಜ್ಞೆಗೆ ಅನುಸಾರವಾಗಿ ಸನ್ಯಾಸಿಯಾಗಲಾರರು” ಎಂದಳು ಭಾರತಿ.

ಭಾರತಿಯ ಆಹ್ವಾನ ಕಂಡು ಆಚಾರ್ಯರು ಸ್ವಲ್ಪ ಯೋಚಿಸಿದರು. ಅನಂತರ ಸ್ವಲ್ಪ ಹೊತ್ತಾದ ಮೇಲೆ ಹೇಳಿದರು: “ಭಾರತಿ, ಇದು ಸರಿಯೇ, ಆದರೆ ನಿನ್ನೊಂದಿಗೆ ಶಾಸ್ತ್ರದ ಬಗ್ಗೆ ಚರ್ಚೆ ಹೇಗಾಗುತ್ತದೆ? ನೀನು ಹೆಣ್ಣಲ್ಲವೇ?”

ಈ ಮಾತು ಕೇಳುತ್ತಲೇ ಭಾರತಿ ಇದ್ದಕ್ಕಿದ್ದಂತೆ ಆವೇಶಕ್ಕೊಳಗಾದಳು. ಅವಳ ನಾರೀತ್ವದ ಅಭಿಮಾನ ಜಾಗೃತಗೊಂಡಿತ್ತು. ಆದರೆ ಅವಳು ತನ್ನ ಆವೇಶವನ್ನು ಹತ್ತಿಕ್ಕಿಕೊಂಡು ಶಾಂತಿಯಿಂದ ಹೇಳಿದಳು: “ನಾನು ಹೆಣ್ಣಾಗಿದರೆ ಏನಾಯ್ತು ಆಚಾರ್ಯರೇ? ಹೆಣ್ಣಿಗೆ ವಿಚಾರಗಳಿರುವುದಿಲ್ಲವೇ? ಅವಳ ಮನಸ್ಸಿನಲ್ಲಿ ಸಂಶಯಗಳ ಬಿರುಗಾಳಿ ಏಳಲು ಸಾಧ್ಯವಿಲ್ಲವೇ? ಅವಳಲ್ಲಿಯೂ ಮೆದುಳಿದೆ, ಹೃದಯವಿದೆ, ಅಲ್ಲದೆ ಅವಳೂ ರಾಷ್ಟ್ರದ ಒಂದು ಭಾಗ. ಅವಳಿಗೂ ರಾಷ್ಟ್ರದ ಬಗ್ಗೆ ಜವಾಬ್ದಾರಿ ಇದೆ, ಆ ಜವಾಬ್ದಾರಿಯನ್ನು ನಿರ್ವಹಿಸುವ ಅಧಿಕಾರ ಅವಳಿಗೂ ಇದೆ”.

“ದೇವಿ, ನಾನಿದನ್ನು ಒಪ್ಪುತ್ತೇನೆ!” ಆಚಾರ್ಯರು ಹೇಳಿದರು, “ಆದರೆ ಕೆಲವು ಚಾಲ್ತಿಯಲ್ಲಿರುವ ಪದ್ಧತಿಗಳ ಬಗ್ಗೆಯೂ ಚಿಂತನೆ ಮಾಡಬೇಕಾಗುವುದು?”

"ನೀವು ಚಾಲ್ತಿಯಲ್ಲಿರುವ ಪದ್ಧತಿಗಳನ್ನು ರಕ್ಷಿಸುವುದು ತುಂಬಾ ಆಶ್ಚರ್ಯದ ಸಂಗತಿಯಾಗಿದೆ, ಆಚಾರ್ಯರೇ!" ಭಾರತಿ ವ್ಯಂಗ್ಯವಾಗಿ ಹೇಳಿದಳು. ಅನಂತರ ಶಾಂತಚಿತ್ತದಿಂದ ಹೇಳಿದಳು: "ಮತ್ತೆ ಆಚಾರ್ಯರೇ, ಮಹಿಳೆಯರೊಂದಿಗೆ ಶಾಸ್ತ್ರಗಳ ಚರ್ಚೆ ನಡೆದಿಲ್ಲವೇ? ಗಾರ್ಗಿ ಮತ್ತು ಯಾಜ್ಞವಲ್ಕ್ಯರ ಸಂವಾದ ನಿಮಗೆ ತಿಳಿದಿಲ್ಲವೇ? ಗಾರ್ಗಿ ಪುರಷಳಾಗಿದ್ದಳೇ? ಅವಳ ಶಾಸ್ತ್ರದ ಚರ್ಚೆ ವಿಷಯವೂ ಒಂದು ಸಾಮಾನ್ಯ ವಿಷಯಕ್ಕೆ ಸಂಬಂಧಿಸಿದ್ದಾಗಿರಲಿಲ್ಲ, ಅದು ಆತ್ಮಕ್ಕೆ ಸಂಬಂಧಿಸಿದ ಚರ್ಚೆಯಾಗಿತ್ತು. ಜನಕ ಮತ್ತು ಸುಲಭಾರ ಶಾಸ್ತ್ರದ ಚರ್ಚೆಯ ವಿಷಯವಂತೂ ತುಂಬಾ ಪ್ರಸಿದ್ಧವಾಗಿದೆ. ಸುಲಭಾ ಸಹ ಪುರುಷಳಾಗಿರಲಿಲ್ಲ. ಜನಕ ಮತ್ತು ಯಾಜ್ಞವಲ್ಕ್ಯರೂ ಸಹ ಸಾಮಾನ್ಯ ಪುರುಷರಾಗಿರದೆ ಶ್ರೇಷ್ಠ ಮಹಾತ್ಮರಾಗಿದ್ದರು. ಈ ಮಹಾತ್ಮರು ಮಹಿಳೆಯರೊಂದಿಗೆ ಚರ್ಚಿಸಿದ್ದರು. ಹೀಗಿರುವಾಗ ನೀವೇಕೆ ನನ್ನೊಂದಿಗೆ ಚರ್ಚಿಸಲಾರಿರಿ?"

ಸರಸ್ವತಿಯೂ ಯುಕ್ತಿ ಮತ್ತು ಉದಾಹರಣೆಗಳಿಂದ ತನ್ನ ಪಕ್ಷವನ್ನು ಸಮರ್ಥಿಸಿಕೊಂಡಿದ್ದಳು. ಆಚಾರ್ಯರ ಬಳಿ ಯಾವುದೇ ಉತ್ತರವಿರಲಿಲ್ಲ. ಕಡೆಗೆ ಅವರು ವಾದ–ವಿವಾದಕ್ಕೆ ಅನುಮತಿ ಕೊಡಲೇಬೇಕಾಯಿತು.

ಅನಂತರ ಅದೇ ರೀತಿಯಲ್ಲಿ ಸಭೆ ಸೇರಿತೆಂದು ಹೇಳುತ್ತಾರೆ. ಇಷ್ಟು ಶ್ರೇಷ್ಠ ಆಚಾರ್ಯರಿಂದ ತನ್ನ ಪತಿ ಪರಾಜಯಗೊಂಡ ಅನಂತರ ಭಾರತಿ ಶಾಸ್ತ್ರದ ಬಗ್ಗೆ ಚರ್ಚಿಸಲು ಸಿದ್ಧಳಾಗಿರುವುದನ್ನು ಕೇಳಿ ಜನರು ಎಲ್ಲೆಡೆಯಿಂದಲೂ ಕುತೂಹಲದಿಂದ ಬಂದು ಕಲೆತರು. ಜನ ನಾನಾ ರೀತಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿಲಾರಂಭಿಸಿದರು. ಒಬ್ಬರು, "ಭಾರತಿ ಅದೇನು ಆಹಾರ ಸೇವಿಸಿ ಆಚಾರ್ಯರೊಂದಿಗೆ ಶಾಸ್ತ್ರದ ಬಗ್ಗೆ ಚರ್ಚಿಸಲು ಹೊರಟಿದ್ದಾಳೆ? ಯಾರ ಎದುರು ಕಾಶಿಯ ವಿದ್ವಾಂಸರ ಆಟವೂ ನಡೆಯಲಿಲ್ಲವೋ, ಹಾಗೂ ಅಷ್ಟು ಶ್ರೇಷ್ಠ ವಿದ್ವಾಂಸರಾದ ಮಂಡನಮಿಶ್ರರೂ ಯಾರಿಗೆ ಸೋತರೋ, ಅಂತಹವರೊಂದಿಗೆ ಇವಳು ಹೆಣ್ಣಾಗಿ ಗೆಲ್ಲುವಳೇ?" ಎಂದರೆ, ಇನ್ನೊಬ್ಬರು "ನೋಡಪ್ಪ, ಭಾರತಿ ಸಾಕ್ಷಾತ್ ಸರಸ್ವತಿಯ ಅವತಾರವಾಗಿದ್ದಾಳೆ. ಆಚಾರ್ಯರು ವಿದ್ವಾಂಸರನ್ನು ಗೆದ್ದಿರಬಹುದು, ಆದರೆ ಸರಸ್ವತಿಯನ್ನು ಎಲ್ಲಿ ಗೆಲ್ಲುತ್ತಾರೆ? ಆಚಾರ್ಯರು ಈಗ ಖಂಡಿತ ಸೋಲುತ್ತಾರೆ?"ಎನ್ನುತ್ತಿದ್ದರು. ಈ ರೀತಿ ಜನ ತಮ್ಮ–ತಮ್ಮ ಬುದ್ಧಿಶಕ್ತಿಗನುಸಾರವಾಗಿ ತರ್ಕಿಸುತ್ತಿದ್ದರು.

ಭಾರತಿ ಮತ್ತು ಶಂಕರಾಚಾರ್ಯರ ಮಧ್ಯೆ ಶಾಸ್ತ್ರಗಳ ಚರ್ಚೆ ಅನೇಕ ದಿನಗಳು ನಡೆದವು. ಭಾರತಿ, ಅಗೆದು–ಅಗೆದು ತತ್ವಶಾಸ್ತ್ರದ ಒಂದೊಂದು ವಿಷಯವನ್ನೂ ಹೊರತೆಗೆದು ಅದರ ಬಗ್ಗೆ ಪೂರ್ಣವಾಗಿ ಚರ್ಚಿಸಿದಳು. ಶಂಕರಾಚಾರ್ಯರು ಸಹಜವಾಗಿ ಉತ್ತರಿಸುತ್ತಿದ್ದರು. ಆದರೆ ಮನಸ್ಸಿನಲ್ಲಿ 'ಈ ಬಾರಿ ಉತ್ತಮರೊಂದಿಗೆ ಬಾಂಧವ್ಯವುಂಟಾಗಿದೆ' ಎಂದು ಅವಶ್ಯವಾಗಿ ಯೋಚಿಸುತ್ತಿದ್ದರು. ತಮ್ಮ ಮಾರ್ಗದ ಬಗ್ಗೆ ಅವರಿಗೆ ಪೂರ್ಣ ವಿಶ್ವಾಸವಿತ್ತು, ಶ್ರದ್ಧೆಯಿತ್ತು. ಹೀಗಾಗಿ ಯಾವುದೇ ಪ್ರಶ್ನೆಗೆ ಉತ್ತರಿಸಲು ಅವರಿಗೆ ವಿಶೇಷವಾದ ಕಷ್ಟ ಉಂಟಾಗುತ್ತಿರಲಿಲ್ಲ. ಯಾರ ಮನಸ್ಸು ಸ್ವಚ್ಛವೋ, ಅವರಿಗೆ ಪ್ರತಿಯೊಂದು ವಸ್ತುವೂ–ಆ ವಸ್ತು ಒಳ್ಳೆಯದಾಗಿರಲಿ ಅಥವಾ ಕೆಟ್ಟದ್ದಾಗಿರಲಿ, ಅಥವಾ ಕಠಿಣವಾಗಿರಲಿ ಅಥವಾ ಕೋಮಲವಾಗಿರಲಿ, ಚಿಕ್ಕದಾಗಿರಲಿ ಅಥವಾ ದೊಡ್ಡದಾಗಿರಲಿ–ಸ್ಪಷ್ಟವಾಗಿ ಗೋಚರಿಸುತ್ತದೆ. ಈ ರೀತಿ ಯಾರಿಗೆ ತಮ್ಮ ಧ್ಯೇಯ ಮತ್ತು ಮಾರ್ಗದ ಬಗ್ಗೆ ಸ್ಪಷ್ಟ ಜ್ಞಾನವಿದೆಯೋ, ಯಾರೆದುರು ತಮ್ಮ ಜೀವನದ ಕಲ್ಪನೆಗಳು ಸ್ಪಷ್ಟವಾಗಿವೆಯೋ, ಅವರು ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದಂತೆ ಯೋಗ್ಯವಾದ ಮತ್ತು ಸ್ಪಷ್ಟವಾದ ಉತ್ತರವನ್ನು ಕೊಡಬಲ್ಲರು.



ಭಾರತಿ ಎಲ್ಲ ವಿಷಯುಗಳ ಬಗ್ಗೆ ಚರ್ಚೆಮಾಡಿ ಮುಗಿಸಿದಳು. ಶಂಕರಾಚಾರ್ಯರು ಸೂಕ್ತ ಉತ್ತರವನ್ನು ಕೊಟ್ಟರು. ಕಡೆಗೆ ಭಾರತಿ ಹೇಳಿದಳು, "ನೀವು ಸಿದ್ಧಾಂತಗಳನ್ನೆಲ್ಲಾ ಉಚಿತವಾಗಿಯೇ ಇಟ್ಟಿದ್ದೀರಿ, ಆಚಾರ್ಯರೇ; ಆದರೆ ನಿಮ್ಮ ಮಾಯೆ, ಬ್ರಹ್ಮ ಮತ್ತು 'ಸರ್ವಾತ್ಮೈಕ್ಯ'ದ ಸಿದ್ಧಾಂತ ಸನ್ಯಾಸಿಗಳಿಗೆ ಸತ್ಯವಾಗಬಲ್ಲದು. ಜಗತ್ತಿನಲ್ಲಿ ವಾಸಿಸುವ ಗೃಹಸ್ಥರು, ನಿಮ್ಮ ನೈಷ್ಕರ್ಮ್ಯ ಸಿದ್ಧಾಂತವನ್ನು ಒಪ್ಪುವುದಿಲ್ಲ. ತಮ್ಮ ಆಚಾರಣೆಯಲ್ಲಿ ವೇದಾಂತವನ್ನೂ ತರಲಾರರು. ಹೀಗಾಗಿ ನನಗೆ ಇದರಲ್ಲಿ ಕಾರ್ಯರೂಪಕ್ಕೆ ತರಲಾರದ ದೋಷ ಕಂಡುಬರುತ್ತದೆ".

ಆಚಾರ್ಯ ಶಂಕರರು ಇದಕ್ಕೇನು ಉತ್ತರಿಸುತ್ತಾರೆ? ಅವರಂತೂ ಬಾಲ್ಯದಲ್ಲಿಯೇ ಸನ್ಯಾಸವನ್ನು ಸ್ವೀಕರಿಸಿದ್ದರು. ಅವರು ಸನ್ಯಾಸಿಯಾಗಿದ್ದಾಗ್ಯೂ ಜಗತ್ತಿನಿಂದ ಪಲಾಯನಗೈದಿರಲಿಲ್ಲ, ತಮ್ಮ ಜೀವನದಲ್ಲಿಯೂ ಕಾರ್ಯರೂಪಕ್ಕೆ ತರಲಾಗದ್ದನ್ನು ಪ್ರದರ್ಶಿಸಿದರು. ಆದರೆ ಜಗತ್ತು ಯಾವುದನ್ನು ಜಗತ್ತೆಂದು ತಿಳಿಯುವುದೋ ಅಲ್ಲಿ ಅವರು ವಾಸ್ತವವಾಗಿಯೂ ಪ್ರವೇಶಿಸಿರಲಿಲ್ಲ. ಸಿದ್ಧಾಂತಗಳು ಸನ್ಯಾಸಿಗಳಿಗಷ್ಟೇ ಅಲ್ಲದೆ ಜನಸಾಮಾನ್ಯರಿಗೂ ಇವೆ ಎಂಬುದು ಅವರ ದೃಢ ನಿಲುವಾಗಿತ್ತು. ಈ ನಿಲುವನ್ನೇ ಭಾರತಿ ಕಿತ್ತೆಸೆಯಲು ಬಯಸುತ್ತಿದ್ದಳು. ಇವೆಲ್ಲವಕ್ಕೂ ಶಬ್ದಗಳಲ್ಲಿ ಉತ್ತರಿಸಲು ಸಾಧ್ಯವಿರಲಿಲ್ಲ; ಇದು ಆಚರಣೆಯ ಸಂಗತಿಯಾಗಿತ್ತು. ಇದಕ್ಕೆ ಉತ್ತರವನ್ನು ಕರ್ಮವೆಸಗಿಯೇ ಕೊಡಬಹುದಾಗಿತ್ತು. ಆದ್ದರಿಂದ ಆಚಾರ್ಯರು ವೇದಾಂತದ ಆಚಾರಣೆಯನ್ನು ತೋರಿಸಲು ಆರು ತಿಂಗಳ ಕಾಲಾವಕಾಶ ಕೇಳಿದರು.

ಜನಶ್ರುತಿಯಂತೆ ಆಚಾರ್ಯರು ಭಾರತಿಯಿಂದ ಬೀಳ್ಕೊಂಡು ಕಾಡಿಗೆ ಬಂದರು. ಅಲ್ಲಿ ತಮ್ಮ ಆತ್ಮವನ್ನು ತಮ್ಮ ಶರೀರದಿಂದ ಹೊರತೆಗೆದು ಓರ್ವ ಮೃತ ರಾಜನ ಶರೀರದೊಳಗೆ ಪ್ರವೇಶ ಮಾಡಿಸಿದರು. ಮೃತ ರಾಜ ಇದ್ದಕ್ಕಿಂದ್ದಂತೆ ಜೀವಂತಗೊಂಡ. ಎಲ್ಲೆಡೆಯಲ್ಲಿಯೂ ಸಂತೋಷ ಉಕ್ಕಿತು. ಮಹಾರಾಣಿಯರ ದುಃಖದ ಕಣ್ಣೀರು ಆನಂದ ಭಾಷ್ಪವಾಗಿ ಹರಿಯಿತು. ಪ್ರಜೆಗಳಲ್ಲಿ ಎಲ್ಲೆಡೆಯಲ್ಲಿಯೂ ಹರ್ಷದ ಅಲೆ ಹಬ್ಬಿತು. ಶಂಕರಾಚಾರ್ಯರು ರಾಜನ ಶರೀರದ ಮೂಲಕ ರಾಜ್ಯದ

ಕಾರ್ಯಭಾರವನ್ನೆಲ್ಲಾ ಮಾಡಲಾರಂಭಿಸಿದರು; ಜಗತ್ತಿನ ಅನುಭವ ಪಡೆಯಲಾರಂಭಿಸಿದರು. ಈಗ ರಾಜ ಹಿಂದಿನ ರಾಜನಾಗಿರಲಿಲ್ಲ, ಅವನ ಬದುಕಿನಲ್ಲಿ ಪರಿವರ್ತನೆ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಈಗ ಅವನ ಜೀವನ ಪೂಜನೀಯವಾಗಿತ್ತು. ರಾಜನಾಗಿದ್ದಾಗ್ಯೂ ಅವನು ಸಾತ್ವಿಕ ವೃತ್ತಿಯಿಂದ ಪರಿಪೂರ್ಣ ಜೀವನವನ್ನು ಸಾಗಿಸುತ್ತಿದ್ದ. ರಾಜ್ಯಭಾರವೂ ಈ ಮೊದಲಿಗಿಂತ ಹೆಚ್ಚು ಸಮರ್ಥವಾಗಿ ನಡೆಯುತ್ತಿತ್ತು. ಪ್ರಜೆಗಳ ಸುಖ–ಸಮೃದ್ಧಿ ವೃದ್ಧಿಸುತ್ತಿತ್ತು. ಮಂತ್ರಿಗಳು ರಾಜನಲ್ಲಿಯ ಈ ಪರಿವರ್ತನೆಯನ್ನು ಕಂಡು, ರಾಜನ ಮೃತ ಶರೀರದಲ್ಲಿ ಅವಶ್ಯವಾಗಿಯೂ ಮಹಾತ್ಮರೊಬ್ಬರು ಪ್ರವೇಶಿಸಿದ್ದಾರೆಂದು ಮನಗಂಡರು. ಮಹಾತ್ಮನ ಆತ್ಮ ಮತ್ತೆ ಮರಳಿ ತನ್ನ ಹಿಂದಿನ ಶರೀರದಲ್ಲಿ ಪ್ರವೇಶಿಸಬಾರದೆಂಬ ಉದ್ದೇಶದಿಂದ ಅವರು ನಾಲ್ಕು ಕಡೆಗೂ ಓಡಿಸಿ, 'ಎಲ್ಲಿಯಾದರೂ ಯಾವುದೇ ಶವ ಸಿಕ್ಕರೂ ಅದನ್ನು ಕೂಡಲೇ ಸುಟ್ಟುಹಾಕಿ' ಎಂದು ಆದೇಶಿಸಿದರು. ರಾಜಪುರುಷರು ಅತ್ತ–ಇತ್ತ ಶವವನ್ನು ಹುಡುಕಲು ಪ್ರಾರಂಭಿಸಿದರು.

ಸ್ವಾಮಿ ಶಂಕರಾಚಾರ್ಯರ ಶಿಷ್ಯರು ಆರು ತಿಂಗಳವರೆಗೆ ಮರಳಿ ಬರುವ ದಾರಿ ಕಾಯಲಾರಂಭಿಸಿ ಅವರ ಶವವನ್ನು ರಕ್ಷಿಸಿದರು. ಈಗ ಇಷ್ಟು ದಿನಗಳಾದರೂ ಶಂಕರಾಚಾರ್ಯರು ಮರಳಿ ಬರದಿದ್ದಾಗ ಅವರು ಚಿಂತೆಗೀಡಾದರು. ಆಚಾರ್ಯರು ಅವಶ್ಯವಾಗಿ ರಾಜ್ಯದ ಮೋಹಕ್ಕೊಳಗಾಗಿದ್ದಾರೆ ಎಂದು ಯೋಚಿಸಿದರು. ಆದ್ದರಿಂದ ಅವರ ಇಬ್ಬರು ಶಿಷ್ಯರು ಹುಡುಕುತ್ತಾ–ಹುಡುಕುತ್ತಾ ಆ ರಾಜ್ಯಕ್ಕೆ ಹೋದರು. ಕಡೆಗೆ ಯಾರಿಗೂ ತಿಳಿಯದಂತೆ ಅರಮನೆಗೂ ಹೋದರು. ಅಲ್ಲಿ ರಾಜಪರಿವಾರದೊಂದಿಗೆ ಕೂತಿದ್ದ ರಾಜ, ಎಲ್ಲಾ ವಿಧದ ಸುಖದಲ್ಲಿ ಮುಳುಗಿದ್ದ ಮತ್ತು ರಾಜ್ಯದ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದ. ಶಿಷ್ಯನೊಬ್ಬ ಒಂದು ಶ್ಲೋಕ ಬರೆದು ಆಚಾರ್ಯರಿಗೆ ತಮ್ಮ ಕಾರ್ಯ ಹಾಗೂ ವಾಸ್ತವಿಕ ಜೀವನದ ಸ್ಮರಣೆಯನ್ನು ಮಾಡಿಸಿದ. ಉಳಿದವರಿಗೆ ಏನೊಂದೂ ಅರ್ಥವಾಗಲಿಲ್ಲ. ಆದರೆ ಆಚಾರ್ಯರಿಗೆ ಪೂರ್ವ ಸ್ಮೃತಿ ಒಮ್ಮೆಲೆ ಜಾಗೃತಗೊಂಡಿತು. ಅವರು ಪ್ರಾಣಾಯಾಮ ಮಾಡಿದರು. ಮರುಕ್ಷಣವೇ ಸುಖವಾಗಿದ್ದ ರಾಜ ಸಾವನ್ನಪ್ಪಿದ. ಎಲ್ಲೆಡೆ ಮತ್ತೆ ಗೋಳಾಟ ಉಂಟಾಯಿತು.

ಅತ್ತ ರಾಜಪುರಷರು ಶವವನ್ನರಸುತ್ತಾ ಶಂಕರಾಚಾರ್ಯರ ಶವವನ್ನು ಪಡೆದರು. ಅವರು ಶವವನ್ನು ಸುಡಲು ಚಿತೆಯನ್ನು ಸಿದ್ಧಪಡಿಸಿದರು, ಚಿತೆಯ ಮೇಲೆ ಶವವನ್ನಿಟ್ಟರು. ಶಿಷ್ಯರು ಗೋಳಾಡಿದರು. ಆಗಲೇ ಶಂಕರಾಚಾರ್ಯರು ಇದ್ದಕ್ಕಿದ್ದಂತೆ ಕಣ್ಣುಗಳನ್ನು ಉಜ್ಜಿಕೊಂಡು 'ಓಂ' ಧ್ವನಿಯನ್ನು ಉಚ್ಚಾರಣೆ ಮಾಡುತ್ತಾ ಎದ್ದು ಕೂತರು. ರಾಜ ಪುರುಷರು ಭಯದಿಂದ ಓಟಕಿತ್ತರು. ಶಿಷ್ಯಗಣ ಸಂತೋಷವನ್ನಾಚರಿಸಿತು.



ಪರಕಾಯ ಪ್ರವೇಶದ ಮೂಲಕ ಸರ್ವ ವಿಧದ ಅನುಭವ ಪಡೆದು ಮರಳಿ ಮಾಹಿಷ್ಮತಿಗೆ ಬಂದರು* ಭಾರತಿಗೆ ತಮ್ಮ ವೇದಾಂತದ ವ್ಯಾವಹಾರಿಕ ಸ್ವರೂಪವನ್ನು ತಿಳಿಯಪಡಿಸಿದರು. ಎಲ್ಲ ರೀತಿಯಲ್ಲಿಯೂ ಅವಳ ಸಂದೇಹ ನಿವಾರಣೆ ಮಾಡಿದರು. ಸರಸ್ವತಿಯ ಅಂತಃಕರಣವೂ ಈಗ ಸಂಶಯರಹಿತವಾಗಿತ್ತು. ಆದ್ದರಿಂದ ಅವಳೂ ತನ್ನ ಪತಿಯೊಂದಿಗೆ ಸನ್ಯಾಸವನ್ನು ಸ್ವೀಕರಿಸಿದಳು. ಈ ರೀತಿ ಎಲ್ಲರೂ ದಿಗ್ವಿಜಯಕ್ಕಾಗಿ ಮುಂದುವರಿದು ನಡೆದರು. ಮಂಡನಮಿಶ್ರರು ಮತ್ತು ಅವರ ಅನೇಕ ಶಿಷ್ಯರು ಈಗ ಶಂಕರಾಚಾರ್ಯರೊಂದಿಗಿದ್ದರು. ಆದರೆ ಈಗ ಮಂಡನಮಿಶ್ರರು ಸುರೇಶ್ವರಾಚಾರ್ಯರಾಗಿದ್ದರು.

* * * *

---

* ಪರಕಾಯ ಪ್ರವೇಶದ ಜನಶ್ರುತಿ ಎಷ್ಟು ಸತ್ಯವೆಂದು ಹೇಳುವುದು ಕಷ್ಟ. ಯೋಗದ ಬಗ್ಗೆ ಅನೇಕ ಚಮತ್ಕಾರಗಳನ್ನು ಹೇಳಲಾಗುತ್ತದೆ. ಜನ ಕಣ್ಣಾರೆ ಕಂಡದ್ದೆಂದು ವರ್ಣಿಸುತ್ತಾರೆ. ಅದರಂತೆ ಶಂರಾಚಾರ್ಯರಂತಹ ಯೋಗಿಗಳಿಗೆ ಯಾವುದೂ ಅಸಂಭವವೆಂದು ತೋರುವುದಿಲ್ಲ. ಆದರೆ ಯೋಗಿಯ ಕ್ರಿಯೆಗಳು ಮತ್ತು ಚಮತ್ಕಾರಗಳನ್ನು ಬಿಟ್ಟರೂ, ಈ ಜನಶ್ರುತಿಯ ಮೂಲದಲ್ಲಿ ಶಂಕರಾಚಾರ್ಯರು ತಮ್ಮ ವೇದಾಂತದ ಆಚರಣೆಯನ್ನು ಕಾರ್ಯತಃ ತೋರಿಸಲು ರಾಜ ಅಮರುಕನಿಂದ ಅವರ ರಾಜ್ಯದ ಅಧಿಕಾರ ಸೂತ್ರವನ್ನು ಆರು ತಿಂಗಳಮಟ್ಟಿಗೆ ತಮ್ಮ ಕೈಗೆ ತೆಗೆದುಕೊಂಡಿದ್ದಿರಬಹುದೆಂಬ ಸತ್ಯವಂತೂ ಖಂಡಿತವಾಗಿ ಇರಬಹುದು. ಪ್ರಜೆಗಳ ಹಿತದಿಂದ ರಾಜ್ಯವಾಳುವ ರಾಜನು ಇಂಥ ಶ್ರೇಷ್ಠ ಆಚಾರ್ಯರಿಗೆ ಅಧಿಕಾರ ಸೂತ್ರವನ್ನು ಒಪ್ಪಿಸುವುದು ಅಸಂಭವವೆಂದೇನೂ ಅನ್ನಿಸುವುದಿಲ್ಲ. ಶಂಕರಾಚಾರ್ಯರು ರಾಜ್ಯಭಾರವನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸಿದರು ಎಂಬುದು ಸತ್ಯ. ಎದುರಿಗೆ ಬಂದ ರಾಜ್ಯಭಾರದ ಕಾರ್ಯದಲ್ಲಿ ಒಮ್ಮೆ ಅವರು ತಮ್ಮನ್ನೇ ಮರೆತಿದ್ದೂ ಸ್ಪಷ್ಟ. ಆದರೂ ಆರು ತಿಂಗಳ ಅನಂತರ ಈ ರಾಜ್ಯ ಮತ್ತು ಐಶ್ವರ್ಯವನ್ನು ತ್ಯಜಿಸಿ ಮತ್ತೆ ಅದೇ ಸನ್ಯಾಸಿಯ ವೇಷದಲ್ಲಿ ಬಂದರು. ಇದರಿಂದ ಅವರ ನಿಸ್ಪೃಹತೆ ಮತ್ತು ತ್ಯಾಗದ ಭಾವನೆಯನ್ನು ಊಹಿಸಬಹುದು.

# ೧೪. ವೈವಿಧ್ಯದಲ್ಲಿ ಏಕತೆ

ಸ್ವಾಮಿ ಶಂಕರಾಚಾರ್ಯರಿಗೆ ಈಗ ಒಬ್ಬ ಅತ್ಯುತ್ತಮ ಕಾರ್ಯಕರ್ತ ಸಿಕ್ಕಿದ್ದ. ಸಹಸ್ರಾರು ಜನ ಅವರ ಅನುಯಾಯಿಗಳಾಗಿದ್ದರು. ಆದರೆ ಇಷ್ಟರಿಂದ ಅವರಿಗೆ ಸಂತೋಷವೆಲ್ಲಿ ಸಿಗುವುದು? ಅವರು ಇಡೀ ಭಾರತ ದೇಶಕ್ಕೆ ಏಕತೆಯ ಭಾವನೆಯನ್ನು ಮನದಟ್ಟುಮಾಡಿಸಲು ಬಯಸುತ್ತಿದ್ದರು. ಇಡೀ ಜನ–ಸಮುದಾಯಕ್ಕೆ ಅದ್ವೈತದ ಪಾಠವನ್ನು ಬೋಧಿಸಲು ಬಯಸುತ್ತಿದ್ದರು. ಈ ಧ್ಯೇಯದ ವೈಶಾಲ್ಯಕ್ಕೆ ಹೋಲಿಸಿದರೆ ಇನ್ನೂ ಅವರ ಕಾರ್ಯ ಅಪೂರ್ಣವಾಗಿತ್ತು. ಆದರೆ ಅವರಿಗೆ ತಮ್ಮ ಕಾರ್ಯದ ಬಗ್ಗೆ ಹಾಗೂ ತಮ್ಮ ಶಕ್ತಿಯ ಬಗ್ಗೆ ವಿಶ್ವಾಸವಿತ್ತು. ದೇವರ ಬಗ್ಗೆ ಶ್ರದ್ಧೆಯಿತ್ತು. ತಮಗೆ ಯಶಸ್ಸು ಅವಶ್ಯವಾಗಿ ಸಿಗುತ್ತದೆಂಬುದು ಅವರಿಗೆ ತಿಳಿದಿತ್ತು. ಹೀಗಾಗಿ ಅವರು ಯಶಸ್ಸು ಮತ್ತು ಅಪಯಶಸ್ಸಿನ ಬಗ್ಗೆ ಚಿಂತಿಸದೆ ತಮ್ಮ ಕಾರ್ಯದಲ್ಲಿ ಮಗ್ನರಾದರು. ಯಾರು ಸರ್ವವನ್ನೂ ಸಮರ್ಪಿಸಿ ತಮ್ಮ ಕಾರ್ಯದಲ್ಲಿ ತಲ್ಲೀನರಾಗುತ್ತಾರೋ ಹಾಗೂ ಯಾರ ಜೀವನದ ಪ್ರತಿಯೊಂದು ಕಾರ್ಯದಲ್ಲಿ ಅವರ ಧ್ಯೇಯ ಹಾಗೂ ಕಾರ್ಯವೇ ಕಂಡುಬರುವುದೋ. ಅವರು ಯಶಸ್ಸಿನ ಹಾದಿಯನ್ನು ನಿರೀಕ್ಷಿಸಬೇಕಿಲ್ಲ, ಯಶಸ್ಸು ಸ್ವತಃ ಅವರ ಪಾದಗಳನ್ನು ಚುಂಬಿಸುತ್ತದೆ. ಸ್ವಾಮಿ ಶಂಕರಾಚಾರ್ಯರಿಗೂ ಅವರ ಅಲ್ಪ ಜೀವನದಲ್ಲಿ ಈ ಅನುಭವವೇ ಆಯಿತು.

ಸ್ವಾಮಿ ಶಂಕರಾಚಾರ್ಯರು ಮಾಹಿಷ್ಮತಿಯಿಂದ ದಕ್ಷಿಣದೆಡೆಗೆ ಸಾಗಿದರು. ಅವರು ಸಾಗಿದ ದಾರಿಯಲ್ಲಿ ಭೇಟಿಯಾಗುತ್ತಿದ್ದ ಜನರೆಲ್ಲರೂ ಅವರಿಗೆ ಆಪ್ತರಾಗಿಬಿಡುತ್ತಿದ್ದರು. ಅವರನ್ನು ಅನೇಕ ದೇವರುಗಳ ಪೂಜಾರಿಗಳು ಭೇಟಿಯಾದರು. ಅವರು ತಮ್ಮ–ತಮ್ಮ ದೇವಿ–ದೇವತೆಗಳನ್ನೇ ಸರ್ವಸ್ವವೆಂದು ತಿಳಿಯುತ್ತಿದ್ದರು. ಸ್ವಾಮಿ ಶಂಕರಾಚಾರ್ಯರು ಯಾವ ದೇವರನ್ನೂ ಖಂಡಿಸಲಿಲ್ಲ. ಜನರ ಶ್ರದ್ಧೆಯನ್ನು ನಾಶಪಡಿಸಲಿಲ್ಲ. ಶ್ರದ್ಧೆ ಒಂದು ದೈವೀ ಗುಣ, ಅಂಥ ಶ್ರದ್ಧೆಯನ್ನು ನಾಶಪಡಿಸುವುದು ಒಂದು ಸದ್ಗುಣವನ್ನು ನಾಶಪಡಿಸಿದಂತೆ. ಆದ್ದರಿಂದ ಅವರು ಶ್ರದ್ಧೆಯನ್ನು ನಾಶಪಡಿಸದೇ ಶ್ರದ್ಧೆಯ ಕೇಂದ್ರವನ್ನಷ್ಟೇ ಬದಲಾಯಿಸಿದರು. ಚಿಕ್ಕ–ಪುಟ್ಟ ದೇವರು–ದೇವತೆಗಳ ಪೂಜೆ ಅನಂತ ಜ್ಞಾನಮಯ ಪರಮಪಿತನ ಪೂಜೆಯೇ ಆಗಿದೆ. ಯಾಕೆಂದರೆ ಅವನ ಕರೆ ಎಲ್ಲೆಡೆಯಲ್ಲಿಯೂ ಪ್ರಕಟಗೊಳ್ಳುತ್ತದೆ; ಜಡ–



ಚೇತನದಲ್ಲಿ ಅವನೇ ವ್ಯಾಪಿಸಿದ್ದಾನೆ. "ಹಿಂದೂ ಹೃದಯದ ಪ್ರೇರಣೆಯೊಂದು ಎಲ್ಲ ಉಪಾಸನಾವಿಧಾನಗಳ ಹಿಂದಿದೆ. ಭಿನ್ನ–ಭಿನ್ನ ಪೂಜಾ ಪದ್ಧತಿಗಳ ಹಿಂದೆ ಆ ಪರಮ ದಯಾಮಯಿ ಪರಮಾತ್ಮನ ಬಗ್ಗೆ ಒಂದೇ ವಿಧವಾದ ಕೃತಜ್ಞತಾ ಭಾವನೆಯಿದೆ. ಅವನೇ ನಮಗೆ ಧನ–ಧಾನ್ಯಗಳು, ಅಪಾರ ಭೂಮಿ ಮತ್ತು ಎಲ್ಲ ವಿಧದ ಸುಖ–ಸಾಧನಗಳನ್ನು ಕೊಟ್ಟಿದ್ದಾನೆ. ಸತ್ಯವನ್ನರಸುವ ಪ್ರಕೃತಿಯ ರಹಸ್ಯಮಯ ಕಾರ್ಯಗಳನ್ನು ಅರಿಯುವ ಪ್ರವೃತ್ತಿಯ ಪರಿಣಾಮವೆಂದರೆ, ಹೊರನೋಟಕ್ಕೆ ಕಾಣುವ ಭಿನ್ನತೆಯೇ ಆಗಿದೆ. ನಮ್ಮ ವೈದಿಕ ಪರಂಪರೆಯನ್ನು ರಕ್ಷಿಸುವ ಅಭಿಲಾಷೆಯು ನಮ್ಮ ರಾಷ್ಟ್ರೀಯ ಜೀವನವನ್ನು ಸ್ವಾಧೀನದಲ್ಲಟ್ಟುಕೊಳ್ಳುತ್ತ, ಅಭಿವೃದ್ಧಿಯ ಅತ್ಯುನ್ನತ ಸ್ಥಿತಿ ದೊರೆಯುವಂತೆ ಮಾಡುವ ಮಹತ್ವಾಕಾಂಕ್ಷೆ ಒಂದೆಡೆ ಆದಿತ್ಯನ ಉಪಾಸನೆಯ ರೂಪ ಪಡೆದರೆ, ಇನ್ನೊಂದೆಡೆ ಶಕ್ತಿ–ಆರಾಧನೆಯ ರೂಪ ಪಡೆಯಿತು. ಮತ್ತೊಂದೆಡೆ ಗಣೇಶನನ್ನು ಆರಾಧ್ಯ ದೇವನೆಂದು ಬಗೆದು ಭಾರತದ ಮೂಲೆ–ಮೂಲೆಗಳಲ್ಲಿ ದ್ವಾದಶ ಗಣಪತಿಯ ಮಂದಿರಗಳನ್ನು ನಿರ್ಮಿಸಿತು. ಮಗದೊಂದು ಕಡೆ ಹದಿನೆಂಟು ಜ್ಯೋತಿರ್ಲಿಂಗಗಳನ್ನು ಸ್ಥಾಪಿಸಿ ಭಾರತದ ಭೂಮಿಯನ್ನು ಪ್ರದಕ್ಷಿಣೆ ಹಾಕುವ ಪ್ರಯತ್ನ ಮಾಡಲಾಯಿತು; ಮತ್ತೆಲ್ಲೋ ಅದು ಭಗವಂತ ವಾಲ್ಮೀಕಿಯ ಆದಿಕಾವ್ಯದ ರೂಪದಲ್ಲಿ ಹೊರಹೊಮ್ಮಿತು; ಮಗುದೆಲ್ಲೋ ಶ್ರೀಮದ್ಭಾಗವತದ ಮಧುರ ಕಥೆಯಿಂದ ಜನ–ಸಮುದಾಯವನ್ನು ವ್ಯಾಕುಲಗೊಳಿಸಿತು; ಇನ್ನೆಲ್ಲೋ ಯೋಗಾಸನ ಮಾಡುತ್ತ ವರ್ಷಗಟ್ಟಲೇ ಒಂದೊಂದು ಆಸನದಲ್ಲಿ ಕಳೆಯುವ ಯೋಗಿಗಳನ್ನು ಸೃಷ್ಟಿಸಿತು; ಮತ್ತೆಲ್ಲೋ ಕಠೋರ ಕತ್ತಿಯಿಂದ, ಕ್ರೂರತೆಯ ಶಿರಚ್ಛೇದನ ಮಾಡಿ, ಯಮನನ್ನು ದುರ್ಬಲತೆಯ ಕೈಯಿಂದ ಮುಕ್ತಗೊಳಿಸಿದ ಕಾಪಾಲಿಕರನ್ನು ಕೃತಕೃತ್ಯಗೊಳಿಸಿತು. ಮಗದೆಲ್ಲೋ ಸರಸ್ವತಿಯನ್ನು ಸತತವಾಗಿ ಸೇವೆಗೈಯುವ ಸಾಹಿತಿಗಳ ಮೂಲಕ ಸೃಷ್ಟಿಯನ್ನು ಸೀಮಿತಗೊಳಿಸುವ ಶ್ರೇಯಸ್ಸನ್ನು ಕೊಟ್ಟಿತು; ಮತ್ತೆಲ್ಲೋ ಅನಾಚಾರ ಮತ್ತು ಅನ್ಯಾಯದ ಆಕ್ರಮಣಕಾರಿ ಶತ್ರುಗಳ ಸೈನ್ಯವನ್ನು ನಾಶಪಡಿಸಿ ಪ್ರಜೆಗಳಿಗೆ ಕೃಪೆ ತೋರುವ ರಾಜರುಗಳಿಗೆ ರಾಜ್ಯಲಕ್ಷ್ಮಿಯ ಪ್ರಸಾದ ಸಿಕ್ಕಿತು" ಎಂದು ಅವರು ಹೇಳಿದರು.

ಶಾಕ್ತರು, ಶೈವರು, ವೈಷ್ಣವರು, ಗಾಣಪತ್ಯರು, ಆದಿತ್ಯೋಪಾಸಕರು ಮುಂತಾದವರೆಲ್ಲರೂ ಒಂದೇ ಶಕ್ತಿಯ ಆರಾಧಕರು. ಅದೇ ಸಹಸ್ರಾನನ, ಸಹಸ್ರಬಾಹು, ಸಹಸ್ರಪಾದ, ಸಹಸ್ರಾಕ್ಷ ರಾಷ್ಟ್ರಪುರುಷನನ್ನು ಭಿನ್ನ–ಭಿನ್ನ ರೂಪದಲ್ಲಿ ಪೂಜಿಸುತ್ತಾರೆ.

ಸ್ವಾಮಿ ಶಂಕರಾಚಾರ್ಯರ ಈ ಸದುಪದೇಶದಿಂದಾಗಿ ಜನರಿಗೆ ತಮ್ಮ ವಸ್ತುವನ್ನು ತ್ಯಜಿಸದೆಯೂ ಶ್ರೇಷ್ಠವಸ್ತುವೊಂದು ಸಿಕ್ಕಂತಾಯಿತು. ಜೀವನದ ಅಗಾಧತೆಯೊಂದಿಗೆ, ಧ್ಯೇಯದ ಶ್ರೇಷ್ಠತೆಯೊಂದಿಗೆ ಆಚರಣೆ ಹಾಗೂ ಗರಿಮೆಯೊಂದಿಗೆ ಅವರ ಸಂಬಂಧ ಬೆಸೆಯಿತು. ಮೇಲೆ ಹತ್ತುವ ಬಯಕೆಯಿಂದ

ಮೇಲಿನ ಮೆಟ್ಟಿಲ ಮೇಲೆ ಕಾಲಿಡುವವನು, ತಾನೇ ಸ್ವತಃ ಕೆಳಗಿನ ಮೆಟ್ಟಿಲನ್ನು ತ್ಯಜಿಸುತ್ತಾನೆ. ಕೆಳಗಿನ ಮೆಟ್ಟಿಲ ನೆನಪೇ ಅವನಿಗಿರುವುದಿಲ್ಲ. ಅದನ್ನು ತ್ಯಜಿಸುವುದು ಅವನಿಗೆ ಕಷ್ಟವೆನಿಸುವುದಿಲ್ಲ. ಸ್ವಾಮಿ ಶಂಕರಾಚಾರ್ಯರು ಇದೇ ರೀತಿಯಲ್ಲಿ ಇಡೀ ಜನ ಸಮುದಾಯವನ್ನು ಮೇಲಕ್ಕೆತ್ತಿದರು. ಚಿಕ್ಕ–ಪುಟ್ಟ ಧ್ಯೇಯದ ಹೊಂಡದಲ್ಲಿ ಕೊಳೆಯುವ ಪ್ರವಾಸಿಗನ ಸಂಬಂಧವನ್ನು ವಿಶಾಲ ರಾಷ್ಟ್ರ–ಗಂಗೆಯೊಂದಿಗೆ ಬೆಸೆದರು. ಕೊಳಕು ಸ್ವತಃ ತಾನಾಗಿಯೇ ನಷ್ಟವಾಯಿತು. ಬದುಕಿನಲ್ಲಿ ಪಾವಿತ್ರ್ಯ ಪ್ರವೇಶಿಸಿತು. ಹಿಂದೂ ಹೃದಯದ ಅಗಾಧ ಶ್ರದ್ಧೆ ದೇವಿ–ದೇವತೆಗಳ ಚಿಕ್ಕ–ಪುಟ್ಟ ಪಾತ್ರೆಗಳಲ್ಲಿ ತುಂಬಲಾರದೆ ಇದ್ದುದ್ದರಿಂದಾಗಿ ಅದು ಉಕ್ಕಿ, ಇತರರ ಬಗ್ಗೆ ಟೀಕೆ ಮಾಡುತ್ತಿತ್ತು. ಈಗ ಅದಕ್ಕೆ ವಿಶಾಲವಾದ ಏಕತ್ವದ ಅದ್ವೈತ ಸಾಗರದಲ್ಲಿ ಸ್ಥಾನ ಸಿಕ್ಕಿತು. ಹಿಂದೂ ಸಂಸ್ಕೃತಿಯ ಬಳ್ಳಿ ಸಹನೆಯ ನೀರು ಕುಡಿದು ಮತ್ತೆ ತೂರಾಡಿತು.

ಅದೆಷ್ಟೋ ಜನರು ವಿರೋಧ ಭಾವನೆಗಳನ್ನು ಹೊತ್ತು ಸ್ವಾಮಿ ಶಂಕರಾಚಾರ್ಯರ ಬಳಿಗೆ ಬರುತ್ತಿದ್ದರು, ಆದರೆ ಅವರೆದುರು ಆಗಮಿಸುತ್ತಲೇ ಅವರ ವಿರೋಧ ಪಲಾಯನ ಮಾಡಿಬಿಡುತ್ತಿತ್ತು. ಇಷ್ಟೊಂದು ಶ್ರೇಷ್ಠ ಚಿಂತಕರೂ, ಧರ್ಮ, ವಿಜ್ಞಾನ, ಸಾಹಿತ್ಯ, ಚರಿತ್ರೆ ಮತ್ತು ಪುರಾಣಗಳ ಪ್ರಕಾಂಡ ವಿದ್ವಾಂಸರೂ ರಾಷ್ಟ್ರದ ಆತ್ಮದೊಂದಿಗೆ ಏಕಾತ್ಮದ ಅನುಭವ ಪಡೆದಿದ್ದವರೂ ಆದ ಶಂಕರಾಚಾರ್ಯರನ್ನು ಸಹ ಜನರು ತಿಳಿವಳಿಕೆ ಹೇಳಿ ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ತಮ್ಮ ಕಾರ್ಯದಲ್ಲಿ ಸಂಶೋಧನೆ ಕೈಗೊಳ್ಳುವ ಬಗ್ಗೆ ಅನೇಕ ಸಲಹೆಗಳನ್ನು ಅವರೆದುರಿಗಿಡುವ ಉದ್ಧಟತನವನ್ನೂ ಮಾಡುತ್ತಿದ್ದರು. ಆದರೆ ಸ್ವಾಮಿ ಶಂಕರರ ಮಾರ್ಗ ಎಷ್ಟೊಂದು ಸರ್ವಾಂಗ ಪೂರ್ಣವಾಗಿತ್ತೆಂದರೆ ಅಲ್ಲಿ ಯಾರ ಎಳೆತಕ್ಕೂ ಆಸ್ಪದವಿರಲಿಲ್ಲ. ಅವರೆದುರು ಎದೆಯೊಡ್ಡಿ ಬರುತ್ತಿದ್ದವರು, ಕಡೆಗೆ ನಾಚಿಕೊಂಡು ಮರಳಿ ಹೋಗುತ್ತಿದ್ದರು.

* * * * * *

ಸ್ವಾಮಿ ಶಂಕರಾಚಾರ್ಯರು ದಕ್ಷಿಣದಲ್ಲಿ ಸಂಚಾರ ಮಾಡುತ್ತ ಕಡೆಗೆ ಕಾಂಚಿಗೆ ಬಂದರು. ಕಾಂಚಿಯನ್ನು ದಕ್ಷಿಣದ ಕಾಶಿಯೆಂದು ಹೇಳಲಾಗಿದೆ. ಉತ್ತರದಂತೆ ಅದು ದಕ್ಷಿಣದ ಸಾಂಸ್ಕೃತಿಕ ಕೇಂದ್ರವಾಗಿದೆ. ಅದು ಕೇವಲ ಸಾಂಸ್ಕೃತಿಕ ಮತ್ತು ಧಾರ್ಮಿಕ ಕೇಂದ್ರವಷ್ಟೇ ಆಗಿರಲಿಲ್ಲ. ಪ್ರತಿಯಾಗಿ ಎಲ್ಲಾ ವಿಧದ ಧನ–ಧಾನ್ಯದಿಂದ ಪರಿಪೂರ್ಣವಾಗಿತ್ತು. ಇದಕ್ಕೆ ಪಲ್ಲವರ ರಾಜಧಾನಿಯಾಗಿರುವ ಅದೃಷ್ಟ ಲಭಿಸಿತ್ತು. ತನ್ನ ಪ್ರಖರ ಪ್ರತಾದಿಂದ ಮಹಾರಾಜ ಪುಲಿಕೇಶಿಯ ಪ್ರತಿಮೆಯನ್ನು ಲುಪ್ತಗೊಳಿಸಿದ ಸಮ್ರಾಟ ನೃಸಿಂಹ ವರ್ಮನ ಕೀರ್ತಿಯಿಂದ ಕಾಂಚಿ ಅಂದೂ ಕಂಗೊಳಿಸುತ್ತಿತ್ತು. ಕಾಂಚಿಪುರಿಯ ಪೇಟೆಗಳಲ್ಲಿ, ಎತ್ತರವಾದ ಅರಮನೆಗಳಲ್ಲಿ, ಸೌಧಗಳಲ್ಲಿ, ಉಪ್ಪರಿಗೆಗಳಲ್ಲಿ ಹಾಗೂ ರಾಜಮಾರ್ಗಗಳ ಹೆಬ್ಬಾಗಿಲುಗಳು ಮತ್ತು ಭಿತ್ತಿಗಳಲ್ಲಿ



ಅನಂತ ಲಕ್ಷ್ಮಿ ಮಳೆಗರೆಯುತ್ತಿದ್ದಳು. ಸರಸ್ವತಿಯ ಸ್ವರ ಕಾಂಚಿಯನ್ನು ಕಾಶಿಯನ್ನಾಗಿಸಿತ್ತು. ಲಕ್ಷ್ಮಿಯ ಸಂಭ್ರಮವು ಅದಕ್ಕೆ ಪಾಟಲಿಪುತ್ರದ ವೈಭವವನ್ನು ಕೊಟ್ಟಿತ್ತು. ಸ್ವಾಮಿ ಶಂಕರಾಚಾರ್ಯರು ಕಾಂಚಿಯಲ್ಲಿ ಕೆಲವು ದಿನಗಳಿದ್ದರು. ಎಲ್ಲೆಡೆಯಲ್ಲಿ ಅವರ ಪಾಂಡಿತ್ಯದ ಕೀರ್ತಿ–ಪತಾಕೆ ಹರಡಿತ್ತು. ಸಂಪೂರ್ಣ ದಕ್ಷಿಣಾಪಥದಲ್ಲಿ ಅವರ ವಾಣಿ ಪ್ರತಿಧ್ವನಿಸಿತು. ಎಲ್ಲೆಡೆಯಲ್ಲೂ ಅವರ ಅನುಯಾಯಿಗಳೇ ಕಾಣಿಸುತ್ತಿದ್ದರು. ಶಂಕರಾಚಾರ್ಯರು ಜೀವನದಲ್ಲಿ ಮಾಡಬೇಕಾಗಿದ್ದ ಕೆಲಸಗಳೆಲ್ಲವೂ ಪೂರ್ಣವಾದುವೆಂದು ಅನ್ನಿಸುತ್ತಿತ್ತು. ಆದರೆ ಜನಸಮುದಾಯದ ಜ್ಞಾಪಕ–ಶಕ್ತಿ ಅಲ್ಪವೆಂಬುದು ಶಂಕರಾಚಾರ್ಯರಿಗೆ ತಿಳಿದಿತ್ತು. ಅವರ ಭಾವನೆಗಳು ಒಂದೆಡೆ ಕ್ಷಣಿಕ ಆವೇಶದಲ್ಲಿ ಪ್ರಚಂಡ ಅಲೆಗಳಂತೆ ಎದ್ದು ಇಡೀ ಜಗತ್ತನ್ನೇ ನೆನಸಿಬಿಡುವ ಪ್ರಯತ್ನವೆಸಗಿದರೆ ಇನ್ನೊಂದೆಡೆ ತೀರಕ್ಕೆ ಡಿಕ್ಕಿಹೊಡೆದು ಚೂರು–ಚೂರಾಗಬಹುದು; ಕಡೆಗೆ ಅದರ ಗುರುತೂ ಕಾಣಿಸುವುದಿಲ್ಲ. ಆದ್ದರಿಂದ, ಜನ ಸಮುದಾಯದ ಏಕತ್ವದ ಭಾವನೆಗಳನ್ನು ಯುಗ–ಯುಗಾಂತರಗಳವರೆಗೂ ಕಾಯ್ದಿಡಬೇಕಾದಂತಹ ವ್ಯವಸ್ಥೆ ಮಾಡುವುದು ಅವಶ್ಯಕ. ಸಮಾಜದಲ್ಲಿ ಬಂದಿರುವ 'ವಿಚಾರ' ಮತ್ತು 'ಆಚರಣೆ'ಯ ಅಲೆ ಸದಾ ಇರಲಿ; ಆಗಲೇ ಸಮಾಜದ ಸಂಘಟನೆ ದೃಢಗೊಳ್ಳುವುದು, ಶಾಶ್ವತಗೊಳ್ಳುವುದು, ಇಲ್ಲದಿದ್ದಲ್ಲಿ ನೀರಿನ ಗುಳ್ಳೆಯಂತೆ ಕ್ಷಣಿಕವಾಗಿ, ನಾಶಗೊಳ್ಳುತ್ತದೆ. ಆದ್ದರಿಂದ ಅವರು ಸಮಾಜಕ್ಕೆ ಸ್ಫೂರ್ತಿ ನೀಡುವ ಜೀವನ ಸ್ರೋತದ ಹಾಗೂ ಪ್ರತಿಯೊಬ್ಬರ ಶ್ರದ್ಧಾಕೇಂದ್ರವಾದ 'ಮಠ'ವನ್ನು ಸ್ಥಾಪಿಸುವ ಬಗ್ಗೆ ವಿಚಾರ ಮಾಡಿದರು. ಮಠಗಳು ಮೋಜುಮಾಡುವ ಮಠಾಧಿಪತಿಗಳು ಮತ್ತು ಮುಖಸ್ತುತಿ ಮಾಡುವ ಚೇಲಾಗಳ ರಂಗಭೂಮಿಯಲ್ಲ; ಬದಲಾಗಿ ಸಮಾಜದ ವಾಸ್ತವಿಕ ಸೇವಕ, ದೇಶದ ಚುಕ್ಕಾಣಿ ನಡೆಸುವ, ಜ್ಞಾನಿ, ವಿದ್ವಾಂಸ, ನಿಸ್ವಾರ್ಥಿ, ನಿಸ್ಪೃಹ ಮತ್ತು ದೃಢನಿಶ್ಚಯದ ಕಾರ್ಯಕರ್ತರನ್ನು ಶಿಕ್ಷಿತರನ್ನಾಗಿ ಮಾಡಿ ಅವರನ್ನು ದೇಶದೆಲ್ಲೆಡೆ ಕಳುಹಿಸಲೋಸುಗ ಮಠಗಳನ್ನು ಸ್ಥಾಪಿಸಿದರು. ಅವರು ಕಾಂಚಿಯಲ್ಲಿಯೇ ಮೊದಲ ಮಠವನ್ನು ಸ್ಥಾಪನೆ ಮಾಡಿದ್ದರೆಂದು ಹೇಳುತ್ತಾರೆ. ಆದರೆ ಅವರು ಸ್ಥಾಪನೆ ಮಾಡಿದ ಶೃಂಗೇರಿ ಮಠವೇ ಹೆಚ್ಚು ಪ್ರಸಿದ್ಧಿಯಾಗಿದ್ದು, ಅದು ಇಂದಿನವರೆಗೂ ನಡೆದುಕೊಂಡು ಬರುತ್ತಿದೆ. ಅವರು ಸುರೇಶ್ವರಾಚಾರ್ಯರನ್ನು ಪ್ರಥಮ ಬಾರಿಗೆ ಶೃಂಗೇರಿ ಮಠದ ಮಠಾಧೀಶರನ್ನಾಗಿ ನೇಮಿಸಿದರು. ದಕ್ಷಿಣಕ್ಕೆ ಜ್ಞಾನದ ದಿಕ್ಕನ್ನು ಕೊಟ್ಟ, ಆ ಭಾಗದ ಜನರಿಗೆ ಧರ್ಮದ ಪಾಠವನ್ನು ಬೋಧಿಸಿದ, ಅವರಿಗೆ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಕಲ್ಪಿಸಿದ ಸುರೇಶ್ವರಾಚಾರ್ಯರು ಉತ್ತರದ ಮಿಥಿಲೆಯ ಬ್ರಾಹ್ಮಣರಾಗಿದ್ದರು. ಉತ್ತರದಲ್ಲಿನ ಜೋಶಿ ಮಠಕ್ಕೆ ದಕ್ಷಿಣದ ಆಚಾರ್ಯ ಬ್ರಾಹ್ಮಣರನ್ನು ನೇಮಿಸಲಾಯಿತು. ಅವರು ಜೀವನದ ಒಂದೊಂದು ಕ್ಷೇತ್ರದಲ್ಲೂ ಭಾರತದ

ಏಕತೆಯನ್ನು ಕಾಯ್ದಿಟ್ಟುಕೊಳ್ಳುವಲ್ಲಿ ಅದೆಷ್ಟು ಎಚ್ಚರಿಕೆಯಿಂದ ಪ್ರಯತ್ನಿಸಿದ್ದರು! ಆದ್ದರಿಂದಲೇ ಇಂದಿಗೂ ಸಹ ಚೈತನ್ಯಮಯ ಭಾರತದ, ಸ್ಪಷ್ಟ ಹಾಗೂ ಅಖಂಡ ರೂಪ ನಮ್ಮ ಆರಾಧ್ಯ ದೈವವಾಗಿದೆ.

ಸ್ವಾಮಿ ಶಂಕರಾಚಾರ್ಯರು ದಕ್ಷಿಣದ ಕಾರ್ಯಗಳನ್ನು ಮುಗಿಸಿ, ಅನಂತರ ತಮ್ಮ ಮುಖವನ್ನು ಉತ್ತರದೆಡೆಗೆ ಹೊರಳಿಸಿದರು. ಅವರ ಕೀರ್ತಿಯನ್ನು ಕೇಳಿದ ರಾಜಾ ಸುಧನ್ವ ಅವರನ್ನು ಹಿಂಬಾಲಿಸಿದ.ಅಷ್ಟರಲ್ಲಿ ಶಂಕರಾಚಾರ್ಯರ ಹೆಸರು ಎಲ್ಲೆಡೆಯಲ್ಲಿಯೂ ಪ್ರಸಿದ್ಧಿಯನ್ನು ಪಡೆದಿತ್ತು. ಆದ್ದರಿಂದ ಅವರು ಸಾಗಿದೆಡೆಯಲ್ಲಿ ಅವರ ದರ್ಶನಕ್ಕಾಗಿ ಜನ–ಸಾಗರ ಅಪಾರ ಸಂಖ್ಯೆಯಲ್ಲಿ ಮುಗಿಬೀಳುತ್ತಿತ್ತು. ವಿಶಾಲ ಜನ–ಸಭೆಗಳಲ್ಲಿ ಭಾಷಣ ಮಾಡುವುದು, ಗುಂಪಿಗೆ ಗುಂಪನ್ನೇ ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುವುದು ಅವರ ನಿತ್ಯ ಕಾಯಕವಾಗಿತ್ತು. ಅವರು ಭಾಷಣ ಮಾಡಲು ನಿಂತಾಗ ತಮ್ಮ ಭಾವನೆಗಳಿಗೆ ಸ್ವಾರಸ್ಯಕರವಾದ ಶಬ್ದಗಳು ಮತ್ತು ಕಠಿಣ ಭಾಷೆಯ ಹೊದಿಕೆಯನ್ನು ಹೊಂದಿಸುತ್ತಿರಲಿಲ್ಲ. ತಮ್ಮ ನೇರ–ಸರಳ ಶಬ್ದಗಳಲ್ಲಿ ತಮ್ಮ ಹೃದಯದ ಭಾವನೆಗಳನ್ನು ಅವರೆದುರು ಇಡುತ್ತಿದ್ದರು. ಜನತಾ ಜನಾರ್ದನರೆದುರು ಆತ್ಮನಿವೇದನೆ ಮಾಡಿಕೊಳ್ಳುತ್ತಿದ್ದರು; ಅವರೆದುರು ಹೃದಯ ಬಿಚ್ಚಿಡುತ್ತಿದ್ದರು. ಜನ ಆ ತೆರೆದಿಟ್ಟ ಹೃದಯದಲ್ಲಿ ತಮ್ಮ ಬಗ್ಗೆ ಪ್ರೀತಿ, ದೇಶಕ್ಕಾಗಿ ಪರಿತಪಿಸುವ ಭಾವನೆ ಮತ್ತು ಧರ್ಮಕಾರ್ಯಕ್ಕಿರುವ ಅವರ ಶ್ರದ್ಧೆಯನ್ನು ಕಾಣುತ್ತಿದ್ದರು. ಅಲ್ಲಿ ಹುಡುಕಿದರೂ ಸ್ವಾರ್ಥ ಸಿಗುತ್ತಿರಲಿಲ್ಲ. ಎಲ್ಲೂ ಅಹಂಕಾರ ಸಿಗುತ್ತಿರಲಿಲ್ಲ. ತಾನೇ ಶ್ರೇಷ್ಠ ಎಂಬ ಗರ್ವವೂ ಇರಲಿಲ್ಲ. ಆ ಹೃದಯದಲ್ಲಿ ಜನರಿಗೆ ತಮ್ಮ ಪ್ರತಿಬಿಂಬವೇ ಕಾಣಿಸುತ್ತಿತ್ತು. ಅಲ್ಲಿ ಅವರಿಗೆ ಸ್ಥಾನ ಸಿಗುತ್ತಿತ್ತು ಹಾಗೂ ಅವರು ಶಂಕರಾಚಾರ್ಯರಿಗೆ ಆಪ್ತರಾಗಿಬಿಡುತ್ತಿದ್ದರು. ಅನೇಕ ಮತಾವಲಂಬಿಗಳು ಅವರ ಬಳಿ ಬಂದರು, ಆದರೆ ಎಲ್ಲರೂ ಅವರಿಗೆ ಆಪ್ತರಾಗಿ ಉಳಿದರು. ಶಿವನನ್ನು ಹೊರತುಪಡಿಸಿ ಬೇರೆ ಯಾವ ದೇವರ ಉಪಾಸನೆಯನ್ನೇ ತಿಳಿಯದ ಶೈವ ಮತಾವಲಂಬಿಗಳು ಮಧ್ಯಾರ್ಜುನದಲ್ಲಿ ಸಂಪರ್ಕಕ್ಕೆ ಬಂದರು. ವೈಷ್ಣವರ ಬಗ್ಗೆ ಅವರಿಗೆ ಘೋರ ವಿರೋಧವಿತ್ತು. ಈ ವಿರೋಧ ಅದೆಷ್ಟೋ ಬಾರಿ ಕಲಹದ ರೂಪ ತಾಳಿಬಿಡುತ್ತಿತ್ತು. ಸ್ವಾಮಿ ಶಂಕರಾಚಾರ್ಯರು ಅವರ ವಿರೋಧವನ್ನು ಶಾಂತಗೊಳಿಸಿದರು. ಅವರಿಗೆ ಶಿವನ ವಾಸ್ತವಿಕ ರೂಪದ ಅರಿವನ್ನು ತಿಳಿಯಪಡಿಸಿದರು. ಒಂದು ವೇಳೆ ಶಿವ ವಾಸ್ತವವಾಗಿ ದೇವಾಧಿದೇವನಾಗಿದ್ದರೆ. ಸರ್ವಜ್ಞನಾಗಿದ್ದರೆ, ಅವನು ಅಂತರ್ಯಾಮಿ, ಸರ್ವವ್ಯಾಪಿ ಅನಂತ ಚೈತನ್ಯಯುಕ್ತ ಪರಮಬ್ರಹ್ಮನನ್ನು ಹೊರತುಪಡಿಸಿ ಇನ್ಯಾರೂ ಆಗಲು ಸಾಧ್ಯವಿಲ್ಲ. ಅಲ್ಲದೆ ವೈಷ್ಣವರೂ ಅವರ ಶಿವನನ್ನೇ ಪೂಜಿಸುತ್ತಾರೆ. ರೂಪ ಭಿನ್ನತೆಯಿಂದಾಗಿ ಮಾತ್ರ ಬಾಹ್ಯ ಭೇದ ಕಾಣಿಸುತ್ತದೆ. ಅದರಿಂದಾಗಿ ಯಾರಿಗೆ ವಾಸ್ತವಿಕ ಸ್ವರೂಪದ ಜ್ಞಾನವಿದೆಯೋ,



ಅವರಂತೂ ಕಾದಾಟ ಮಾಡಲೇಬಾರದು, ಅಜ್ಞಾನಿಗಳು ಕಾದಾಟ ಮಾಡಿದರೆ ಅದು ಬೇರೆ ವಿಷಯ ಎಂದು ಅವರು ಹೇಳಿದರು. ಸ್ವಾಮಿ ಶಂಕರಾಚಾರ್ಯರ ತರ್ಕ ಶಿವಭಕ್ತರಿಗೆ ಒಪ್ಪಿಗೆಯಾಯಿತು. ಅವರ ಮನಸ್ಸಿನಿಂದ ಕಲ್ಮಷ ದೂರವಾಯಿತು. ಸಂಪೂರ್ಣ ಸಮಾಜ ಶಿವನ ಪೂಜೆಗೈದು ಪರಿಪೂರ್ಣಗೊಂಡಿತು ಆಚಾರ್ಯರು ಮಧ್ಯಾರ್ಜುನದಲ್ಲಿ ಶಿವನ ಪೂಜೆ–ಅರ್ಚನೆಗೈದು ವಿದರ್ಭದೆಡೆಗೆ ಹೊರಟರು. ಈಗಲೂ ವಿದರ್ಭರಾಜ ನಳನ ವೃತ್ತಾಂತಗಳು ಅವರಿಗೆ ಅಲ್ಲಲ್ಲಿ ಕೇಳಿಬರುತ್ತಿದ್ದವು. ಅವರು ಅಲ್ಲಿಯೂ ಅನೇಕ ಉಪಾಸಕರನ್ನು ಪರಾಜಯಗೊಳಿಸಿದರು. ಲಕ್ಷ್ಮೀ ಉಪಾಸಕರು ಲಕ್ಷ್ಮಿಯನ್ನಷ್ಟೇ ಆರಾಧ್ಯ ದೇವತೆಯೆಂದು ನಂಬಿ ದಿನವಿಡೀ ಹಣದ ಬಗ್ಗೆಯೇ ಯೋಚಿಸುತ್ತಿದ್ದರು. ಸ್ವಾಮಿ ಶಂಕರಾಚಾರ್ಯರು ಲಕ್ಷ್ಮಿಯ ವಾಸ್ತವಿಕ ಉಪಯೋಗವನ್ನು ತಿಳಿಸುತ್ತಾ, ಲಕ್ಷ್ಮಿಯ ಜೀವನದ ಧನ್ಯತೆ ವಿಷ್ಣುವಿನ ಸೇವೆಯಲ್ಲಿದೆ; ಶೇಷಶಾಯಿ ಭಗವಾನ್ ವಿಷ್ಣುವಿನ ಕಾಲುಗಳನ್ನು ಒತ್ತುತ್ತಿರುವುದೇ ಅವಳ ಜೀವನದ ಕಾರ್ಯವಾಗಿದೆ. ಆದ್ದರಿಂದ ಒಂದು ವೇಳೆ ಧರ್ಮಕ್ಕಾಗಿ ಹಣದ ಉಪಯೋಗವಾಗದಿದ್ದರೆ, ದೇಶಸೇವೆಗೆ ಆಗದಿದ್ದರೆ ಹಣವನ್ನು ಸಂಪಾದಿಸುವುದು ವ್ಯರ್ಥವೇ ಆಗುತ್ತದೆ. ಹಣ ಸಾಧನ ಮಾತ್ರ, ಸಾಧ್ಯವಲ್ಲ ಎಂದರು. ಸ್ವಾಮಿ ಶಂಕರಾಚಾರ್ಯರ ವ್ಯಕ್ತಿತ್ವ ಮತ್ತು ವಾಣಿಯ ಪ್ರಭಾವವು ಅಂಧಕಾರ ಆವರಿಸಿದ್ದ ಉಲೂಕವಾಹಿನಿಯ ಅನುಚರರ ಹೃದಯದಲ್ಲಿಯೂ ಬೆಳಕನ್ನುಂಟುಮಾಡಿತು. ಅವರಿಗೂ ಜೀವನದಲ್ಲಿ ಸ್ವಲ್ಪ ಶಾಂತಿ ದೊರೆತ ಬಗ್ಗೆ ಮತ್ತು ಸಂದೇಹ ನಿವಾರಣೆಯಾದ ಬಗ್ಗೆ ನೆಮ್ಮದಿಯುಂಟಾಯಿತು.

ಸ್ವಾಮಿ ಶಂಕರಾಚಾರ್ಯರು ತಮ್ಮ ಜ್ಞಾನದ ಬೆಳಕಿನಿಂದ ದಿಗಂತಗಳನ್ನೆಲ್ಲಾ ಬೆಳಗುತ್ತ, ಮಾರ್ಗದ ವಿಘ್ನಗಳನ್ನೆಲ್ಲಾ ತಮ್ಮ ಪುರುಷಾರ್ಥದಿಂದ ಹಿಮ್ಮೆಟ್ಟುತ್ತ ಜಗನ್ನಾಥ ಧಾಮಕ್ಕೆ ಹೋದರು. ಅಲ್ಲಿ ಭಾರತದ ಮೂಲೆ–ಮೂಲೆಗಳಿಂದ ಜಗನ್ನಾಥನ ದರ್ಶನಕ್ಕೆ ಆಗಮಿಸಿದ ಯಾತ್ರಿಕರು ಕಲೆತಿದ್ದರು. ಎಲ್ಲರೂ ತಮ್ಮತಮ್ಮ ಭೇದ–ಭಾವನೆಯನ್ನು ಮರೆತು, ತುಂಬು ಪ್ರೀತಿಯಿಂದ ಸೇರಿ, ಒಂದೇ ವಿಧದ ಭಕ್ತಿ–ಭಾವನೆಯಿಂದ ದೇವರೆದುರು ತಲೆಬಾಗುತ್ತಿದ್ದರು. ಇಂದಿನಂತೆಯೇ ಅಂದೂ ಸಹ "ಜಗನ್ನಾಥನ ಪ್ರಸಾದ, ಜಾತಿ–ಗೀತಿ ಎನಬೇಡ" ಎಂಬ ಪರಂಪರೆ ಪ್ರಚಲಿತದಲ್ಲಿತ್ತು. ಚಿಕ್ಕವರು–ದೊಡ್ಡವರು, ಶ್ರೀಮಂತರು–ಬಡವರು, ಬ್ರಾಹ್ಮಣರು–ಶೂದ್ರರು, ವಿದ್ಯಾವಂತರು–ಅವಿದ್ಯಾವಂತರು– ಎಲ್ಲರೂ ಒಂದೇ ಭಾವನೆಯಿಂದ ಪ್ರಸಾದವನ್ನು ಸೇವಿಸಿದಾಗ, ಗರ್ಜಿಸುವ ಸಮುದ್ರ ಉಚ್ಚ ಸ್ವರದಲ್ಲಿ ಭಾರತದ ಏಕತೆಯನ್ನು ದೂರದ ಪೂರ್ವ ದ್ವೀಪಗಳವರೆಗೂ ಸಾರುತ್ತಿತ್ತು. ಮಹಾಸಾಗರದ ಈ ಅಮೃತವಾಣಿಯೇ ಅನೇಕ ಭಾಗಗಳಲ್ಲಿ ಹಂಚಿಹೋಗಿದ್ದ ದ್ವೈಪಾಯನ ನಾಗರಿಕತೆ ಮತ್ತು ಸಂಸ್ಕೃತಿಯನ್ನು ಏಕಸೂತ್ರದಲ್ಲಿ ಹೆಣೆದಿತ್ತು. ಮಾತೃಭೂಮಿಯ ಏಕತೆಯ

ಪ್ರಭಾವ ದ್ವೀಪಾಂತರ ನಿವಾಸಿಗಳ ಏಕತೆಯ ಮೇಲೇಕೆ ಉಂಟಗಬಾರದು?

ಶೃಂಗೇರಿ ಮತ್ತು ಕಾಂಚಿಯಲ್ಲಿ ದಕ್ಷಿಣ ಭಾಗಕ್ಕಾಗಿ ಮಠವನ್ನು ಸ್ಥಾಪಿಸಿದಂತೆಯೇ ಜಗನ್ನಾಥಪುರಿಯಲ್ಲಿಯೂ ಪೂರ್ವ–ಪ್ರದೇಶಗಳ ಮಾರ್ಗದರ್ಶನಕ್ಕಾಗಿ ಗೋವರ್ಧನ ಮಠವನ್ನು ಸ್ಥಾಪಿಸಿದರು. ಶೃಂಗೇರಿ ಮಠದಿಂದ ಹೊರಬಂದಂತೆಯೇ ಗೋವರ್ಧನ ಮಠದಿಂದಲೂ ಅದೇ ಭಾವನೆಯಿಂದ ಪ್ರೇರಿತರಾಗಿ ಸನ್ಯಾಸಿಗಳು ಹೊರಬರುತ್ತಿದ್ದರು. ಅದಕ್ಕಾಗಿಯೇ ದಕ್ಷಿಣ ಮತ್ತು ಪೂರ್ವ ಭಾಗಗಳು ಒಂದಾದವು.

ಅವರು ಪುರಿಯಿಂದ ಕಾಶಿ ಮಾರ್ಗವಾಗಿ ಪಶ್ಚಿಮ ಪ್ರಾಂತ್ಯಗಳ ದಿಗ್ವಿಜಯಕ್ಕೆ ಹೊರಟರು. ಪೂರ್ವದಲ್ಲಿದ್ದ ಪರಿಸ್ಥಿತಿಯೇ ಪಶ್ಚಿಮದಲ್ಲಿತ್ತು. ಸೂರ್ಯ ಹೋದಲೆಲ್ಲಾ ಬೆಳಕನ್ನೇ ಕೊಡುತ್ತಾನೆ. ಅವರು ತಮ್ಮ ಏಕಸೂತ್ರದ ಸಂದೇಶವನ್ನು ಸಾರುತ್ತಾ ದ್ವಾರಕಾಪುರಿಗೆ ಹೋದರು. ದೇಶದ ಅಭಿವೃದ್ಧಿಯ ಭಾವನೆಯಿಂದ ಕ್ಷುದ್ರ ಕಳಂಕವನ್ನು ಸಹಿಸಿಯೂ, ಯುದ್ಧ ತ್ಯಜಿಸಿ ರಣಭೂಮಿಯಿಂದ ಓಡಿಹೋದ, ರಣವಿಮುಖನಾಥ ಕೃಷ್ಣನು ಸ್ಥಾಪಿಸಿದ ದ್ವಾರಕಾ ದೇಶಭಕ್ತಿ, ಧಾರ್ಮಿಕ ಭಾವನೆ, ಏಕತ್ವದ ಮಹತ್ವಾಕಾಂಕ್ಷೆ ಮತ್ತು ಅತ್ಯುನ್ನತ ಕಲ್ಪನಾ ಶಕ್ತಿಗಳಿಗೆ ಸಾಕ್ಷಿಯಾಗಿ ನಿಂತಿತ್ತು. ಬಹು ಸ್ಫೂರ್ತಿಯಿಂದ ಪಶ್ಚಿಮದ ಸಮುದ್ರ ಈ ಭಾವನೆಗಳನ್ನು ಹತ್ತಿಕ್ಕುವ ಇಚ್ಛೆಯಿಂದ ಮೇಲೇಳುತ್ತಿತ್ತು. ಆದರೆ ತೀರಕ್ಕೆ ಬಡಿದು ಚೂರು–ಚೂರುಗುತ್ತಿತ್ತು. ಪಶ್ಚಾತ್ತಾಪಪಟ್ಟು ಮೌನವಾಗುತ್ತಿತ್ತು. ರೋದಿಸುತ್ತ, ಗರ್ಜಿಸುತ್ತ ಮರಳಿ ಹೋಗುತ್ತಿತ್ತು. ಆದರೆ ಮಾತೃಭೂಮಿಯ ಒಗ್ಗಟ್ಟನ್ನು ಭಗ್ನಗೊಳಿಸಲು ಸಾಧ್ಯವಾಗುತ್ತಿರಲಿಲ್ಲ. ಇಲ್ಲಿಯೂ ಸ್ವಾಮಿ ಶಂಕರಾಚಾರ್ಯರು ಒಂದು ಮಠವನ್ನು ಸ್ಥಾಪಿಸಿದರು.

ಆಚಾರ್ಯರು ದ್ವಾರಕಾಪುರಿಯಿಂದ ಮತ್ತೆ ಉತ್ತರದೆಡೆಗೆ ಹೊರಟರು. ಅವರ ಮಾರ್ಗವನ್ನು ಅತ್ಯಂತ ಭಯಾನಕ ಮರುಭೂಮಿಯೂ ತಡೆಯದಾಯಿತು. ಸೂರ್ಯನ ತೀವ್ರ ತಾಪದಿಂದ ಮರಳಿನ ಕಣಗಳು ಕೆಂಪಗಾಗುತ್ತಿದ್ದವು. ಆದರೆ ಆಚಾರ್ಯ ಶಂಕರರು ಶಾಂತಚಿತ್ತದಿಂದ ಮುಂದುವರಿಯುತ್ತಲೇ ಇದ್ದರು. ಅವರು ಶೀತ ಮತ್ತು ತಾಪದ ಪ್ರಭಾವದಿಂದ ಮುಕ್ತರಾಗಿದ್ದರು. ಮರುಭೂಮಿ ನೀರನ್ನು ಕಮರಿಸಿ ಬಿಡುತ್ತಿತ್ತು. ಆದರೆ ಅವರ ಮನಸ್ಸಿನ ತಾಪಕ್ಕೆ ಸೋಲುತ್ತಿತ್ತು. ಸೂರ್ಯ, ಮುಖ ಮುಚ್ಚಿಕೊಂಡು ಪಲಾಯನ ಮಾಡಲು ಪ್ರಯತ್ನಿಸುತ್ತಿದ್ದ. ಭೂಮಿ ತಣ್ಣಗಾಗುತ್ತಿತ್ತು, ಶಂಕರಾಚಾರ್ಯರು ಮತ್ತೆ ಮುಂದುವರಿಯುತ್ತಿದ್ದರು. ಈ ಭೀಷಣ ಮರುಭೂಮಿಯನ್ನು ದಾಟಿ ಪಂಚನದಿಗಳ ನಾಡಿಗೆ ಹೋದರು;ಅಲ್ಲಿ ಅಂಗೈಯ ಐದು ಬೆರಳುಗಳಂತೆ ಐದೂ ನದಿಗಳು ಹರಿಯುತ್ತಿದ್ದವು. ಪಂಚನದಿಯ ಗರ್ಭದಲ್ಲಿ ಅದೆಷ್ಟೋ ಅತೀತವಡಗಿದೆ. ಆ ಅತೀತದ ಸ್ಮೃತಿ ಮೆದುಳಿನಲ್ಲಿ ಒಂದರ ಅನಂತರ ಒಂದರಂತೆ ಚಿತ್ರವತ್ತಾಗಿ ಮೂಡುತ್ತದೆ. ಆ ಚಿತ್ರಗಳು ಎಷ್ಟು ವೇಗವಾಗಿ



ಮೂಡುತ್ತವೆಂದರೆ ಅವುಗಳನ್ನು ಸ್ಪಷ್ಟಗೊಳಿಸುವುದು ಕಷ್ಟವಾಗುತ್ತದೆ. ವೈದಿಕ ಸಾಮಗಾನವನ್ನು ಪ್ರತಿಧ್ವನಿಗೈಯುತ್ತಾ ಸರಸ್ವತಿಯು ಕಲ–ಕಲನೆ ಹರಿಯುತ್ತಿದ್ದಳು. ಇಲ್ಲಿ ವೇದ –ವಿರೋಧಿ ಬೌದ್ಧರ ಪ್ರಾಬಲ್ಯವಿತ್ತು. ಇದನ್ನು ಕಂಡು ಶಂಕರಾಚಾರ್ಯರು ಕ್ಷುಬ್ಧರಾದರು. ಪುರುವಿನ ಪ್ರಚಂಡ ಪೌರುಷವನ್ನು ಎಲ್ಲಿ ವಿಪಾಶಾ ಗುಣಗಾನ ಮಾಡುತ್ತಿದ್ದಳೋ, ಚಂದ್ರಗುಪ್ತನ ಶೌರ್ಯ ಮತ್ತು ಚಾಣಕ್ಯನ ಬುದ್ಧಿವಂತಿಕೆಯೆದುರು ಯಾವ ಸಿಂಧು ಸಹ ತಲೆ ಬಾಗಿತ್ತೋ, ಅಲ್ಲಿ ಕೆಲವರ ರಾಷ್ಟ್ರ ವಿರೋಧಿ ಪ್ರವೃತ್ತಿಗಳಿಂದಾಗಿ ಬಾಹ್ಯ ಆಕ್ರಮಣಗಳು ನಡೆಯುತ್ತಲೆ ಇರುವುದನ್ನು ಆಚಾರ್ಯರು ಸಹಿಸಲು ಸಾಧ್ಯವಿರಲಿಲ್ಲ. ಈ ವೇದ–ವಿರೋಧಿಗಳನ್ನು ಕೊನೆಗೊಳಿಸುವುದು ಅವರ ನಿರ್ಧಾರವಾಗಿತ್ತು. ವಾಸ್ತವವಾಗಿ, ಇಲ್ಲಿಯೇ ಅವರಿಗೆ ಈ ಅವಕಾಶ ಲಭಿಸಿತ್ತು. ಇದುವರೆಗೆ ಅವರು ಹಿಂದೂತ್ವದಲ್ಲಿ ಏಕತೆಯನ್ನು ನಿರ್ಮಾಣಮಾಡುವ, ಅವರನ್ನು ಸಂಘಟಿಸುವ ಮತ್ತು ತಮ್ಮ ಶಕ್ತಿಯನ್ನು ಒಟ್ಟುಗೂಡಿಸುವ ಕೆಲಸವನ್ನಷ್ಟೇ ಮಾಡಿದ್ದರು. ಈಗ ಮನಃಶಕ್ತಿಯನ್ನು ರೂಪಿಸಿಕೊಂಡ ಅನಂತರ ಬಾಹ್ಯ ಶತ್ರುಗಳೆಡೆಗೆ ಗಮನ ಕೊಡುವುದು ಆವಶ್ಯಕವಾಯಿತು.

* * * *

## ೧೫. ರಾಷ್ಟ್ರ, ಧರ್ಮ ಮತ್ತು ಸಂಪ್ರದಾಯಗಳು

ಸ್ವಾಮಿ ಶಂಕರಾಚಾರ್ಯರು ತಮ್ಮ ಅಪೇಕ್ಷೆಯನ್ನು ಪೂರ್ಣಗೊಳಿಸಲು ಹೆಚ್ಚು ದಿನ ಅಲ್ಲಿಯೇ ಉಳಿಯಬೇಕಾದ ಸಂದರ್ಭವುಂಟಾಗಲಿಲ್ಲ. ತಕ್ಷಶಿಲೆಗೆ ಬಂದೊಡನೆಯೇ ಅವರು ಬೌದ್ಧ ವಿದ್ವಾಂಸರನ್ನು ಎದುರಿಸಬೇಕಾಯಿತು. ಬೌದ್ಧರು ಅವರನ್ನು ತರ್ಕಶಾಸ್ತ್ರದ ಪ್ರಕಾಂಡ ಪಂಡಿತರೆಂದು ತಿಳಿಯುತ್ತಿದ್ದರು. ತಾವು ಶಬ್ದಗಳನ್ನು ಜಗ್ಗಾಡಿ ಹಾಗೂ ಸೂಕ್ಷ್ಮ ವಿಚಾರಗಳನ್ನೆತ್ತಿ ಅತ್ಯಂತ ಶ್ರೇಷ್ಠ ವಿದ್ವಾಂಸರನ್ನೂ ಖಂಡಿತವಾಗಿ ಶಾಸ್ತ್ರಗಳ ಚರ್ಚೆಯಲ್ಲಿ ಸೋಲಿಸುತ್ತೇವೆ ಎಂಬ ವಿಶ್ವಾಸ ಅವರಿಗಿತ್ತು. ಶಬ್ದಾರ್ಥಗಳ ಬಗ್ಗೆ ವ್ಯಾಖ್ಯೆ ನೀಡುವುದು ಹಾಗೂ ತಮ್ಮ ವಾಕ್ಸಂಪತ್ತನ್ನು ಪ್ರದರ್ಶನ ಮಾಡುವುದು ಅವರ ಕೆಲಸವಾಗಿಬಿಟ್ಟಿತ್ತು. ಅವರ ನಡುವೆಯೂ ಹುರುಳಿಲ್ಲದ ವಾದ–ವಿವಾದಗಳೇ ನಡೆಯುತ್ತಿದ್ದವು. ಹೀಗಿರುವಾಗ ಇತರರನ್ನು ಈ ಸುಳಿಯಲ್ಲಿ ಸಿಗಿಸುವಲ್ಲಿ ಅವರೇಕೆ ತಪ್ಪಿಸಿಕೊಳ್ಳುತ್ತಾರೆ! ಆದರೆ ಸ್ವಾಮಿ ಶಂಕರಾಚಾರ್ಯರು ಈ ಸುಳಿಯಲ್ಲಿ ಸಿಲುಕಿಕೊಳ್ಳುವವರಾಗಿರಲಿಲ್ಲ. ಅವರೆದುರು ಶ್ರೇಷ್ಠ ವಿದ್ವಾಂಸರ ಬೇಳೆಯೇ ಬೆಯ್ಯುವುದು ಕಷ್ಟವಾಗಿತ್ತು. ಅವರು ಶಬ್ದಗಳನ್ನು ಹಿಂಬಾಲಿಸದೆ, ಆಚರಣೆಯನ್ನು ಕೈಗೊಳ್ಳುವುದರ ಹಿಂದಿರುತ್ತಿದ್ದರು. ಅವರೆಂದೂ ಶುಷ್ಕ ತರ್ಕವನ್ನು ಆಶ್ರಯಿಸಲಿಲ್ಲ. ಅವರಿಗೆ ತರ್ಕ ಮಾಡುವುದು ತಿಳಿದಿರಲಿಲ್ಲವೆಂದಲ್ಲ ಅಥವಾ ಅವರ ಸಿದ್ಧಾಂತಗಳು ತರ್ಕಸಮ್ಮತವಾಗಿರಲಿಲ್ಲವೆಂದಲ್ಲ. ಪ್ರತಿಯಾಗಿ ಕರ್ಮಣ್ಯತೆಯ ಗಿಡ ತರ್ಕದ ಮರುಭೂಮಿಯಲ್ಲಿ ತೊನೆದಾಡದೆ, ಭಾವನೆಯ ಕಣಿವೆಯಲ್ಲಿ ತೊನೆದಾಡುತ್ತದೆ; ಶಬ್ದಗಳ ಗೋಜಲು ಆಚರಣೆಯನ್ನು ಕಕ್ಕಾಬಿಕ್ಕಿಗೊಳಿಸುತ್ತದೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಆದ್ದರಿಂದ ಅವರು ಶಬ್ದಾಡಂಬರದಿಂದ ದೂರವೇ ಇರುತ್ತಿದ್ದರು. ಬೌದ್ಧ ಮಂಡಳಿಯು ಈ ಪ್ರಕಾಂಡ ಪಂಡಿತರೊಂದಿಗೆ ಶಾಸ್ತ್ರಗಳ ಬಗ್ಗೆ ಚರ್ಚಿಸಲು ಸಜ್ಜಾಗಿ ಕುಳಿತಿತ್ತು. ಪ್ರಿಯದರ್ಶಿ ಅಶೋಕನ ಆಡಳಿತದ ಕಾಲದಲ್ಲಿ ಎಲ್ಲೆಡೆಯಲ್ಲಿಯೂ ಬೌದ್ಧರೇ ಕಾಣಿಸುತ್ತಿದ್ದರು. ಹೀಗಾಗಿ ಬೌದ್ಧ ಮಂಡಳಿಯವರು ಸುವರ್ಣ ಕನಸನ್ನು ಕಾಣಲಾರಂಭಿಸಿದರು. ತಾವು ಶಂಕರಾಚಾರ್ಯರನ್ನು ಬೌದ್ಧರನ್ನಾಗಿಸುತ್ತೇವೆ ಎಂಬ ವಿಶ್ವಾಸ ಅವರಿಗಿತ್ತು. ಅವರಿಗೆ ಶಂಕರಾಚಾರ್ಯರ ವ್ಯಕ್ತಿತ್ವದ ಪರಿಚಯವೂ ಇತ್ತು. ಅವರ ಪ್ರಭಾವ ಎಷ್ಟಿದೆಯೆಂಬುದೂ ಅವರಿಗೆ ತಿಳಿದಿತ್ತು. ಅವರು ಬೌದ್ಧರಾದರೆ ಮತ್ತೊಮ್ಮೆ ಇಡೀ ಭಾರತ ದೇಶ ಬೌದ್ಧಮಯವಾಗುತ್ತದೆ ಎಂಬ ಯೋಚನೆ



ಅವರಿಗಿತ್ತು. ಎರಡೂ ಕಡೆ ಸಭೆ ಜರುಗಿದವು. ಬೌದ್ಧ ಭಿಕ್ಷುಗಳೇ ಹೇಳಿಕೆಯ್ನು ಪ್ರಾರಂಭಿಸಿದರು:

"ಆಚಾರ್ಯ ಶಂಕರರೇ! ಇಂದು ನಿಮ್ಮಂತಹ ಮಹಾಪುರುಷರು ನಮ್ಮ ನಡುವೆ ಇರುವುದು ಹಾಗೂ ಸತ್ಯವನ್ನರಿಯುವ ಬಯಕೆಯಿಂದ ನಮ್ಮೊಂದಿಗೆ ಸಂಭಾಷಣೆ ಮಾಡಲು ಸನ್ನದ್ಧರಾಗಿ ಬಂದಿರುವುದು ನಮಗೆ ಅತ್ಯಂತ ಸಂತೋಷದ ವಿಷಯವಾಗಿದೆ. ಈ ದುಃಖದಿಂದ ಕೂಡಿದ ಜಗತ್ತಿನಲ್ಲಿ ಶಾಂತಿಯ ಮಾರ್ಗವಿದ್ದರೆ ಅದು ಭಗವಾನ್ ಬುದ್ಧರ ಮಾರ್ಗವೇ ಆಗಿರಲು ಸಾಧ್ಯ. ಜೀವಿಗಳನ್ನು ಹಿಂಸಿಸುವುದರಿಂದ ದೂರವಿರಿ, ಸೇವೆಯ ಆದರ್ಶವನ್ನು ನಿಮ್ಮೆದುರಿಗಿಟ್ಟುಕೊಳ್ಳಿ, ವೈದಿಕ ಕರ್ಮಕಾಂಡದ ಜಂಜಡದಲ್ಲಿ ಬಿದ್ದು, ನಿಮ್ಮ ನೈತಿಕ ಜೀವನವನ್ನು ದೂಷಿಸಿಕೊಳ್ಳಬೇಡಿ ಹಾಗೂ ಸಂಘಂ ಶರಣಂ ಗಚ್ಛಾಮಿ, ಬುದ್ಧಂ ಶರಣಂ ಗಚ್ಛಾಮಿ, ಧಮ್ಮಂ ಶರಣಂ ಗಚ್ಛಾಮಿ ಎಂದು ಉಚ್ಚರಿಸುತ್ತಾ ನಿರ್ವಾಣ ಸ್ಥಾನಕ್ಕೆ ಬಾಧ್ಯರಾಗಿ".

"ನಿಮ್ಮ ಹೇಳಿಕೆಗೆ ನನ್ನ ಸಂಪೂರ್ಣ ಸಹಮತವಿದೆ, ಧರ್ಮ ಭಿಕ್ಷುಗಳೇ" ಸ್ವಾಮಿ ಶಂಕರರು ಹೇಳಿದರು: "ಭಗವಾನ್ ಬುದ್ಧರು ನನ್ನ ಪೂರ್ವಿಕರೇ ಆಗಿದ್ದರು. ಅವರ ಸಹೃದಯತೆ, ಮನುಷ್ಯರ ಒಳಿತಿನ ಬಗ್ಗೆ ಅವರಿಗಿರುವ ಕಾಳಜಿ, ಸಮಾಜದ ದುಃಖವನ್ನು ಹೋಗಲಾಡಿಸುವ ಬಗೆಗಿನ ಕಾತರತೆ, ಗುರಿಸಾಧನೆಗಾಗಿ ಕಠಿಣ ಜೀವನ ಸಾಗಿಸುವ ಅವರ ಸಿದ್ಧತೆ, ಅವರ ತಪಸ್ಸು, ವೈರಾಗ್ಯ, ಅವರ ಶಾಂತವಾದ ಮತ್ತು ಕುತೂಹಲದ ನಡೆ ಯಾರಿಗೆ ತಾನೇ ಅನುಕರಣೆಯಾಗುವುದಿಲ್ಲ? ಅವರು ನಮ್ಮ ರಾಷ್ಟ್ರದ ಮಹಾಪುರುಷರಾಗಿದ್ದರು. ಅವರೆದುರು ಪ್ರತಿಯೊಬ್ಬ ರಾಷ್ಟ್ರಭಕ್ತನೂ ತಲೆಬಾಗುತ್ತಾನೆ. ನಮಗೆ ಭಗವಾನ್ ಬುದ್ಧರ ಬಗ್ಗೆ ವಿರೋಧವಿಲ್ಲ. ಅವರ ನೈತಿಕ ಆದರ್ಶಗಳ ಬಗ್ಗೆಯೂ ವಿರೋಧವಿಲ್ಲ. ಆದರೆ ಭಿಕ್ಷುಶ್ರೇಷ್ಠರೇ, ಸ್ವಲ್ಪ ಯೋಚಿಸಿ, ಇಂದು ನಾವು ಅವರ ಆದರ್ಶಗಳನ್ನು ಪಾಲಿಸುತ್ತಿದ್ದೇವೆಯೇ? ಇಂದು ನಾವು ಅವರ ಆತ್ಮದ ಕರೆಯನ್ನು ಕೇಳುತ್ತಿರುವೆವೇ? ಅವರು ತಮ್ಮ ಸಮಾಜದ ದುಃಖವನ್ನು ನೋಡಿಯೇ ದಯೆಯಿಂದ ಕರಗಿಹೋಗಿದ್ದರು. ಇಂದು ನಾವು ಆ ಸಮಾಜದ ಸುಖ–ದುಃಖದ ಬಗ್ಗೆ ಯೋಚಿಸುತ್ತಿದ್ದೇವೆಯೇ? ಯಾವ ವೃದ್ಧನ ಕಂಪಿಸುವ ಶರೀರ ಭಗವಾನ್ ಬುದ್ಧನ ಕೋಮಲ ಹೃದಯ ಕಂಪಿಸುವಂತೆ ಮಾಡಿತ್ತೋ. ಆ ವೃದ್ಧನಾದರೂ ಯಾರು? ಅವನ ಶರೀರದಲ್ಲಿ ಪುಣ್ಯಮಯಿ ಭಾರತಭೂಮಿಯ ಧೂಳಿನ ಕಣಗಳು ಯೌವನದಲ್ಲಿ ಒಯ್ಯಾರದಿಂದ ಬೀಗುತ್ತಿದ್ದವು, ಅದೇ ಕಣಗಳು ವೃದ್ಧಾಪ್ಯದಲ್ಲಿ ತಾಯಿಯ ಮಡಿಲಿನಲ್ಲಿ ವಿಲೀನಗೊಳ್ಳಲು ತವಕಿಸುತ್ತಿದ್ದವು. ಈ ತಾಯಿಯ ಕೋಟಿ–ಕೋಟಿ ಮಕ್ಕಳ ಜೀವನವನ್ನು ಸುಖಮಯಗೊಳಿಸಲೋಸುಗವೇ ಭಗವಾನ್ ಬುದ್ಧರು ಘೋರ ತಪಸ್ಸನ್ನು ಮಾಡಿದರು; ಕಠಿಣತಮ ಕಷ್ಟಗಳನ್ನು

ಸಹಿಸಿದರು. ಕಡೆಗೆ ಬುದ್ಧತ್ವ ಗಳಿಸಿ ಅವರಿಗೇ ಜ್ಞಾನದ ಬೆಳಕನ್ನು ನೀಡುತ್ತಾ ತಮ್ಮ ಜೀವನವನ್ನು ಸವೆಸಿದರು. ಇಂದು ಅವರ ಭಾವನೆಗಳು ನಮ್ಮನ್ನು ಸ್ಪರ್ಶಿಸಿಯೂ ಇಲ್ಲವೆಂದು ತಿಳಿಯುತ್ತದೆ. ನಾವು ನಮ್ಮ ಕಣ್ಣಾರೆ ಶಕರು ಮತ್ತು ಹೂಣರ ಅನಾಚಾರಗಳನ್ನು ನೋಡುವುದಿಲ್ಲವೇ? ಇಂಥ ಪಾಶವೀಕೃತ್ಯಗಳನ್ನು ನೋಡಿ ನಮ್ಮ ಹೃದಯವೇಕೆ ರೋದಿಸುವುದಿಲ್ಲ? ನಮ್ಮ ಈ ಬಂಧು-ಬಾಂಧವರ ದುಃಖಕ್ಕೆ ಶೂನ್ಯ ಕಣ್ಣುಗಳಲ್ಲಿ ಎರಡು ಹನಿ ಕಣ್ಣೀರೂ ಉಳಿದಿಲ್ಲವೇ?"

"ಆಚಾರ್ಯರೇ, ಬೌದ್ಧ ಧರ್ಮ ವಿಶ್ವದಲ್ಲಿ ಪ್ರಸಾರಗೊಳ್ಳಬಾರದೆಂದು ನೀವು ಬಯಸುತ್ತೀರಾ? ಕಾಡಿನ ಮತ್ತು ಅನಾಗರಿಕ ಜಾತಿಗಳಿಗೆ ನಾಗರಿಕತೆಯ ಪಾಠ ಬೋಧಿಸುವುದು ಬೇಡವೇ?" ಒಬ್ಬ ಭಿಕ್ಕು ಇದ್ದಕ್ಕಿದ್ದಂತೆ ಹೇಳಿದ. ಎಲ್ಲರೂ ಶಂಕರಾಚಾರ್ಯರನ್ನು ಪ್ರಶ್ನಾರ್ಥಕ ದೃಷ್ಟಿಯಿಂದ–ಈ ಪ್ರಶ್ನೆ ಎಲ್ಲರ ಪ್ರಶ್ನೆಯೆಂಬಂತೆ–ನೋಡಿದರು.

"ಭಿಕ್ಷುವೃಂದದವರೇ, ಯಾಕೆ ಬೋಧಿಸಬಾರದು?" ಸ್ವಾಮಿ ಶಂಕರಾಚಾರ್ಯರು ಒತ್ತುಕೊಡುತ್ತಾ ಹೇಳಿದರು: "ದೇವರ ಮಾತುಗಳನ್ನು ಜಗತ್ತಿಗೆ ಖಂಡಿತ ತಿಳಿಸಲೇ ಬೇಕು. 'ಕೃಣ್ವಂತೋ ವಿಶ್ವಮಾರ್ಯಮಾ' –ಇದು ನಮ್ಮ ಅತ್ಯಂತ ಪ್ರಾಚೀನ ಸಿದ್ಧಾಂತ. ಅವರ ಪ್ರಕಾರ ಖಂಡಿತವಾಗಿಯೂ ಇಡೀ ಮಾನವ ಕುಲವನ್ನೇ ಮೇಲಕ್ಕೆತ್ತಬೇಕು. ಆದರೆ ಶ್ರೇಷ್ಠರೇ, ಇಂದು ಒಡೆದ ಪಾತ್ರೆ ಹಿಡಿದು ವಿಶ್ವದ ನೀರಡಿಕೆಯನ್ನು ಇಂಗಿಸಲು ಹೊರಟ್ಟಿದ್ದೀರಿ. ಸ್ವತಃ ಅಂಧಕಾರವನ್ನು ಹೊದ್ದು ಸ್ನೇಹ–ವಿಹೀನ ದೀಪದಿಂದ ವಿಶ್ವವನ್ನು ಪ್ರಕಾಶಗೊಳಿಸಲು ಬಯಸುತ್ತೀರಿ. ಇದೆಂಥ ವಿಡಂಬನೆಯಾಗಿದೆ !"

"ನಮಗೆ ನಿಮ್ಮ ಮಾತಿನ ಅರ್ಥ ತಿಳಿಯುತ್ತಿಲ್ಲ ಆಚಾರ್ಯರೆ !" ಭಿಕ್ಕುಗಳು ಮಧ್ಯದಲ್ಲಿಯೇ ಹೇಳಿದರು.

"ಶಕರು ಮತ್ತು ಹೂಣರ ಜೀವನವನ್ನು ನಾವು ಬೆಳಗಲಿಲ್ಲವೇ?" – ಇನ್ನೊಬ್ಬ ಭಿಕ್ಕು ಪ್ರಶ್ನಿಸಿದ.

"ಇದೇ ನಿಮ್ಮ ಭ್ರಮೆ", ಸ್ವಾಮಿ ಶಂಕರಾಚಾರ್ಯರು ಹೇಳಿದರು: "ಶಕರು ಮತ್ತು ಹೂಣರು ಬೌದ್ಧ ಧರ್ಮದಲ್ಲಿ ಯಾಕೆ ದೀಕ್ಷೆಗೊಳ್ಳಲಿಲ್ಲವೆಂದರೆ, ಅವರಿಗೆ ಬೌದ್ಧ ಧರ್ಮ ಪ್ರಿಯವಾಗಿತ್ತು ಅಥವಾ ಅವರಿಗೆ ಭಗವಾನ್ ಬುದ್ಧನ ಬಗ್ಗೆ ಪ್ರೀತಿ ಇತ್ತು ಅಥವಾ ಅವರು ತಮ್ಮ ಜೀವನವನ್ನು ಉಜ್ವಲ ಗೊಳಿಸಿಕೊಳ್ಳಲು ಬಯಸುತ್ತಿದ್ದರು. ಆದರೆ ಅವರು ಬೌದ್ಧ ಧರ್ಮವನ್ನು ತಮ್ಮ ರಾಜಕೀಯದ ಹಿಡಿತದಲ್ಲಿ ಇಟ್ಟುಕೊಂಡರು. ಅವರು ಬೌದ್ಧ ಧರ್ಮವನ್ನು ಸ್ವೀಕರಿಸಿದ ಮೇಲೆ, ಅವರು ನಮ್ಮವರಾದರು ಎಂದು ನೀವು ತಿಳಿದಿರಿ".

"ಆಚಾರ್ಯರೆ, ಪರರನ್ನು ನಮ್ಮವರನ್ನಾಗಿ ಮಾಡಿಕೊಳ್ಳಬಾರದೇ?" – ಮಧ್ಯದಲ್ಲಿಯೇ ಯುವ ಭಿಕ್ಕುವೊಬ್ಬ ಕೇಳಿದ.



"ಧೈರ್ಯವಾಗಿರು, ಯುವಕ" ಸ್ವಾಮಿ ಶಂಕರಾಚಾರ್ಯರು ಹೇಳಿದರು, "ಪರರನ್ನು ಬೇಕಾದಷ್ಟು ನಿಮ್ಮವರನ್ನಾಗಿ ಮಾಡಿಕೊ, ನಿನ್ನನ್ನು ಯಾರು ತಡೆಯುತ್ತಾರೆ? ಆದರೆ ಪರರು ನಿಮ್ಮವರಾದಾಗ ತಾನೇ ಈ ಮಾತು! ಮತ್ತೆ ನೀನು ಅವರನ್ನು ನಿಮ್ಮವನನ್ನಾಗಿ ಮಾಡಿಕೊಂಡೆ ಅಥವಾ ಅವರು ನಿನ್ನನ್ನು ತಮ್ಮವನನ್ನಾಗಿ ಮಾಡಿಕೊಂಡು ದೇಶಭಾಂಧವರಿಂದ ದೂರಮಾಡಲು ಪ್ರಯತ್ನಿಸಿದರೋ? ಈ 'ನಮ್ಮತನ'ದಿಂದಾಗಿಯೇ ನೀನು ಅವರ ದಬ್ಬಾಳಿಕೆಗಳಿಗೆ ಸಹಕಾರ ಕೊಡುತ್ತಿದ್ದೆ. ನೀನು ಕನಿಷ್ಠ ಬೌದ್ಧಧರ್ಮವನ್ನು ಪುನರ್‌ಸಂಸ್ಕರಿಸಿದೆ, ಜೊತೆಗೆ ಭಾರತದ ಸ್ವಾತಂತ್ರ್ಯದ ಕತ್ತನ್ನು ಹಿಸುಕುತ್ತಿದ್ದೆ. ಒಬ್ಬನನ್ನು ನೋಡಿದೆ. ಆದರೆ ಇನ್ನೊಬ್ಬನೆಡೆಗೆ ಗಮನವನ್ನು ಕೊಡವುದಂತೂ ದೂರವಾಯಿತು, ಪ್ರತಿಯಾಗಿ ಅವನಿಗೆ ಸಹಾಯವನ್ನೇ ಮಾಡಿದೆ".

"ನೀನು ಮಾಡಿದ್ದೆಲ್ಲವೂ ಧರ್ಮವನ್ನು ಪ್ರೀತಿಸುವ ಒಬ್ಬ ವ್ಯಕ್ತಿಯ ದೃಷ್ಟಿಯಿಂದ ಮಾಡಿದೆ. ಅದರಲ್ಲಿ ರಾಜಕೀಯವನ್ನೇಕೆ ತರುತ್ತೀಯಾ?". ಧರ್ಮ ಬಿಕ್ಕು ಹೇಳಿದ.

"ಅಶ್ವಘೋಷನನ್ನು ಬಲಪೂರ್ವಕವಾಗಿ ಪಾಟಲೀಪುತ್ರದಿಂದ ಹಿಡಿದು ತಂದಿದ್ದಕ್ಕೆ ಅವನಿಗೆ ಧರ್ಮದ ಬಗ್ಗೆ ಇದ್ದ ಪ್ರೀತಿಯೇ ಕಾರಣವಾಗಿತ್ತು. ಶಾಸಕರಿಗೆ ಯಾವುದೇ ಧರ್ಮವಿರುವುದಿಲ್ಲ, ಭಿಕ್ಕು ಶ್ರೇಷ್ಠರೇ", ಆಚಾರ್ಯ ಶಂಕರರು ಮುಂದುವರಿಸಿದರು, "ತಮ್ಮ ಆಡಳಿತದ ಬೇರುಗಳನ್ನು ಬಲಗೊಳಿಸುವುದು ಮತ್ತು ಅದಕ್ಕಾಗಿ ಎಲ್ಲ ವಿಧದ ಮೋಸವೆಸಗುವುದೇ ಅವರ ಧರ್ಮವಾಗಿದೆ. ಅದಕ್ಕಾಗಿಯೇ ಈ ಶಾಸಕರ ಈ ಕಪಟಗಳು. ಒಂದು ವೇಳೆ ಭಾರತ ದೇಶದ ಪುರಾತನ ಪರಂಪರೆಯೇ ಮುಂದುವರಿದುಕೊಂಡು ಬಂದರೆ ಹಾಗೂ ಅದರ ಸಾಮಾಜಿಕ ವ್ಯವಸ್ಥೆಯೂ ಮುಂದುವರಿದುಕೊಂಡು ಬಂದರೆ, ಇದು ಸದಾ ಕಾಲಕ್ಕೂ ನಮ್ಮ ಹಿಡಿತದಲ್ಲಿ ಇರಲಾರದೆಂಬುದು ಅವರಿಗೆ ತಿಳಿದಿತ್ತು. ಇದಕ್ಕೆ ವಿರುದ್ಧವಾಗಿ ಸ್ವಾತಂತ್ರ್ಯದ ಬಯಕೆಯನ್ನು ಸಮಾಪ್ತಿಗೊಳಿಸುವ ಅತ್ಯಂತ ಸರಳ ಮಾರ್ಗವೆಂದರೆ, ರಾಷ್ಟ್ರದ ಸಂಸ್ಕೃತಿ ಮತ್ತು ನಾಗರಿಕತೆಯ ವಿನಾಶಮಾಡುವುದಾಗಿದೆ. ನೀವು ಅವರ ಕೈಗೊಂಬೆಯಾದಿರಿ ಹಾಗೂ ಸರ್ವ ವಿಧದಲ್ಲಿಯೂ ಈ ದೇಶದ ವ್ಯವಸ್ಥೆ ಮತ್ತು ಪರಂಪರೆಗಳನ್ನು ನಾಶಗೊಳಿಸಿಸಲು ಪ್ರಯತ್ನಿಸಿದಿರಿ. ಒಂದು ವೇಳೆ ಈ ಪರಂಪರೆಗಳು ನಾಶವಾಗಿಬಿಟ್ಟಿದ್ದರೆ, ಭಾರತದ ಭಾಗ್ಯ-ಸೂರ್ಯ ಅಸ್ತಂಗತನಾಗಿ ಬಿಡುತ್ತಿದ್ದ. ಆದರೆ ಇಂದಿಗೂ ಅವನು ಪ್ರಖರ ತೇಜಸ್ಸಿನೊಂದಿಗೆ ಪ್ರಕಾಶಿಸುತ್ತಿದ್ದಾನೆ. ಇದರ ಶ್ರೇಯಸ್ಸು ಯಾರಿಗಿದೆ? ಅದೇ ಪುರಾತನ ಪರಂಪರೆಯ ಬಗ್ಗೆ ಅಭಿಮಾನವಿಟ್ಟುಕೊಂಡಿರುವ ಶಕಾರಿ ವಿಕ್ರಮಾದಿತ್ಯನಿಗೆ, ನಾಗವಾಕಾಟಕರಿಗೆ, ಗಂಗರಿಗೆ, ಗುಪ್ತರಿಗೆ, ಯಶೋಧರ್ಮನಿಗೆ, ಯಶೋವರ್ಮನಿಗೆ ಮತ್ತು ಹರ್ಷನಿಗೆ ಸಲ್ಲುತ್ತದೆ.

ಪರಂಪರೆಯಿಂದ ಶೂನ್ಯವಾಗಿರುವ ಹೃದಯದಲ್ಲಿ ಸ್ವಾತಂತ್ರ್ಯದ ಇಚ್ಛೆ ಜಾಗೃತಗೊಂಡ ಒಂದೇ ಒಂದು ಉದಾಹರಣೆಯನ್ನು ಹೇಳಿ, ನೋಡೋಣ".

ಭಿಕ್ಷುವರ್ಗ ತಲೆತಗ್ಗಿಸಿ ಮೌನದಿಂದ ಕೂತಿತ್ತು. ತನ್ನ ಕಾರ್ಯದ ಬಗ್ಗೆ ಅದಕ್ಕೆ ಬಹುಶಃ ಪಶ್ಚಾತಾಪವಾಗುತಿತ್ತು. ಶಂಕರ ಸ್ವಾಮಿಗಳು ಶಾಂತ ಚಿತ್ತದಿಂದ ಮತ್ತೆ ಹೇಳಿದರು: "ನಿಮ್ಮ ಸತ್ಯದ ಸಿದ್ಧಾಂತ ಯಾರ ಗೌರವಕ್ಕೆ ಯೋಗ್ಯವಾಗಿಲ್ಲವೆಂದಲ್ಲ. ಭಗವಾನ್ ಬುದ್ಧರು ನಮಗೂ ಪೂಜ್ಯರು; ಜಗತ್ತಿನ ದುಃಖದಿಂದ ನಾವೂ ಪಾರಾಗಲು ಬಯಸುತ್ತೇವೆ; ನಿಮ್ಮ ಪೂಜೆ–ಅರ್ಚನೆಯಂತೂ ಭಕ್ತಿ–ಭಾವ ದೃಷ್ಟಿಯಿಂದ ಪ್ರತಿಯೊಬ್ಬರಿಗೂ ಅಗತ್ಯವಾಗಿದೆ. ನಿಮ್ಮಲ್ಲಿ ಮತ್ತು ನಮ್ಮಲ್ಲಿ ಭೇದವೆಲ್ಲಿದೆ? ನೀವೂ ಸಹ ಹಿಂದೂಗಳೇ. ಹೀಗಿರುವಾಗ ಮತ್ತೇಕೆ ಶಾಸ್ತ್ರಗಳ ಬಗ್ಗೆ ವಾದ–ವಿವಾದ, ಭಿಕ್ಷು ವೃಂದದವರೇ?"

"ಏನಂದಿರಿ, ನಾವು ಬೌದ್ಧರಲ್ಲ, ಹಿಂದುಗಳು?" ಇದ್ದಕ್ಕಿದ್ದಂತೆ ಓರ್ವ ಭಿಕ್ಷು ಹೇಳಿದ.

"ಹೌದು, ನೀವು ಹಿಂದೂಗಳೂ ಹೌದು, ಬೌದ್ಧರೂ ಹೌದು, ನೀವು ಹಿಂದೂಗಳೂ ಹೌದು, ವೈಷ್ಣವರೂ ಹೌದು; ನೀವು ಹಿಂದೂಗಳೂ ಹೌದು; ಶೈವರೂ ಹೌದು, ನೀವು ಎಲ್ಲವೂ ಹೌದು" ಶಂಕರ ಸ್ವಾಮಿಗಳು ಹೇಳಿದರು.

"ಇದೆಂಥಾ ತೊಡಕಿನ ವಿಚಾರ, ಆಚಾರ್ಯರೇ!" ಭಿಕ್ಷುಗಣ ಗೊಂದಲಕ್ಕೊಳಗಾಯಿತು.

"ತೊಡಕಿನ ವಿಚಾರವೆಲ್ಲಿ, ಬಂಧುಗಳೇ" ಸ್ವಾಮಿ ಶಂಕರರು ಸ್ನೇಹದಿಂದ ಹೇಳಿದರು, "ನೀವು ಈ ಪುಣ್ಯ–ಭೂಮಿ ಹಿಂದೂಸ್ಥಾನದ ನಿವಾಸಿಗಳಾಗಿದ್ದ ಆರ್ಯರ ಸಂತಾನವಾಗಿದ್ದೀರ; ನೀವು ಪುರಾತನ ಪರಂಪರೆಗಳನ್ನು ನಂಬುವವರು; ನೀವು ರಾಮ ಮತ್ತು ಕೃಷ್ಣನ ಸಂತಾನ, ಹೀಗಾಗಿ ನೀವು ಹಿಂದೂಗಳು. ನೀವು ಭಗವಾನ್ ಬುದ್ಧನ ಆತ್ಮವನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದೀರ, ಹೀಗಾಗಿ ನೀವು ಬೌದ್ಧರು, ವಿಷ್ಣುವಿನ ಅವತಾರವಾದ ಭಗವಾನ್ ಬುದ್ಧನ ಪೂಜಾರಿಯಾಗಿದ್ದರಿಂದ ವೈಷ್ಣವರು ಮತ್ತು ರಾಷ್ಟ್ರದ ಶಿವನ ಆರಾಧನೆ ನಿಮ್ಮನ್ನು ಶೈವರನ್ನಾಗಿಯೂ ಮಾಡುವುದು."

"ನೀವು ವೇದದ ಮಾತುಗಳನ್ನು ಹೇಳುತ್ತಿದ್ದೀರಿ, ಆಚಾರ್ಯರೇ?" ಓರ್ವ ಭಿಕ್ಷು ಹೇಳಿದ.

"ಒಂದು ವೇಳೆ ನಿಮ್ಮ ವಿಚಾರಗಳು ವೇದಗಳೊಂದಿಗೆ ಹೊಂದಿಕೊಳ್ಳುವುದಾದರೆ, ಅದು ನಮಗೇಕೆ ಅಡ್ಡಿಯಾಗಬೇಕು?" ಆಚಾರ್ಯರು ನಗುತ್ತಾ ಹೇಳಿದರು, "ಪ್ರಾಚೀನತೆಯ ಗೌರವಕ್ಕಾಗಿ ಜನ ಕಾತರಿಸುತ್ತಾರೆ, ನೀವು ಗೌರವವನ್ನು ಹಾಳುಮಾಡಿಕೊಳ್ಳುವುದಕ್ಕೇ ಸನ್ನದ್ಧರಾಗಿದ್ದೀರ?"



"ಇಲ್ಲ ಆಚಾರ್ಯರೇ, ನಾವೇನೂ ಮಾಡಲು ಬಯಸುವುದಿಲ್ಲ". ಭಿಕ್ಷು–ವೃಂದ ಒಮ್ಮೆಲೇ ಹೇಳಿತು.

"ಮತ್ತೇನು.....ಪ್ರಾಚೀನ ಕಾಲದಿಂದಲೂ ನಾವೆಲ್ಲರೂ ಒಂದೇ ಪ್ರವಾಹದ ಜಲಕಣಗಳಾಗಿದ್ದೇವೆ. ಆ ನದಿಯ ಹೆಸರೇ ಆರ್ಯ ಆಗಿದೆ, ಹಿಂದೂ ಆಗಿದೆ. ಇದೇ ನಮ್ಮ ಗೌರವದ ಚಿಹ್ನೆಯಾಗಿದೆ, ಗೌರವ–ಸಮ್ಮಾನದ ಕೊಡುಗೈ ದಾನಿಯಾಗಿದೆ. ಬನ್ನಿ, ಇದಕ್ಕಾಗಿ ನಾವು ನಮ್ಮ ಸಂಪೂರ್ಣ ಶಕ್ತಿಯನ್ನು ಸಮರ್ಪಿಸೋಣ. ದೇವರು ಸದಾ ನಮ್ಮ ರಕ್ಷಣೆಯನ್ನು ಮಾಡಿದ್ದಾನೆ, ನಮ್ಮ ಸಮಾಜವನ್ನು ಪಾಲಿಸಿದ್ದಾನೆ, ಇದಕ್ಕೆ ಜೀವನ–ಶಕ್ತಿಯನ್ನು ದಾನ ಮಾಡಿದ್ದಾನೆ. ರಾಜಕುಮಾರ ಸಿದ್ಧಾರ್ಥ ಬುದ್ಧತ್ವ ಗಳಿಸಿ ದೇವತ್ವದ ಸ್ವರೂಪವನ್ನು ಸಾಕ್ಷಾತ್ಕಾರ ಮಾಡಿಕೊಂಡ, ತನ್ನ ಸದುಪದೇಶದಿಂದ ಈ ಪುರಾತನ ಸಮಾಜದ ಬಳ್ಳಿಯನ್ನು ವಿಕಸಿತಗೊಳಿಸಿದ. ಅವರು ಖಂಡಿತವಾಗಿಯೂ ಭಗವಾನ್ ವಿಷ್ಣುವಿನ ಅವತಾರವಾಗಿದ್ದರು. ಬನ್ನಿ, ನಾವೆಲ್ಲಾ ಅವರಿಗೆ ನಮಸ್ಕರಿಸೋಣ. ಬುದ್ಧ ಆತ್ಮ ಸಾಕ್ಷಾತ್ಕಾರ ಮಾಡಿಕೊಂಡ ಗಯಾ ನಮಗೆ ತೀರ್ಥಕ್ಷೇತ್ರದಂತೆ. ಆ ಸ್ಥಳ ನಮ್ಮ ಪರಂಪರೆಯ ಪ್ರವಾಹವನ್ನು ತಡೆಯದಂತಾಗಲಿ, ಅದು ನಿರಂತರವಾಗಿ ದಾನಮಾಡುವಂತಹದ್ದಾಗಲಿ. ಆ ಪವಿತ್ರ ಜಾಗದ ಬಗ್ಗೆ, ನಮ್ಮ ಪ್ರಾಚೀನ ಜೀವನದ ಮತ್ತು ಪೂರ್ವಿಕರ ಬಗ್ಗೆ ನಮ್ಮ ಜೀವನದಲ್ಲಿ ಶ್ರದ್ಧೆ ಮೂಡಲಿ. ಆದ್ದರಿಂದ ಪ್ರತಿಯೊಬ್ಬ ಭಾರತೀಯನೂ ಗಯಾದಲ್ಲಿಯೇ ಪಿತೃವಿಗೆ ತರ್ಪಣ ನೀಡುತ್ತಾನೆ. ಅಲ್ಲಿಯೇ ಪಿತೃಶ್ರಾದ್ಧ ಮಾಡುತ್ತ ತನ್ನ ಜೀವನದ ಸಂಪೂರ್ಣ ಶ್ರದ್ಧೆಯನ್ನು ಪೂರ್ವಿಕರ ಚರಣಗಳಲ್ಲಿ ಅರ್ಪಿಸುತ್ತಾನೆ".

ಶಂಕರಾಚಾರ್ಯರ ಘೋಷಣೆ ಕೊನೆಗೊಂಡಿತು. ಎಲ್ಲೆಡೆಯಲ್ಲೂ"ಹಿಂದೂಗೆ ಜಯವಾಗಲಿ, 'ಭಗವಾನ್ ಬುದ್ಧರಿಗೆ ಜಯವಾಗಲಿ', 'ವೇದಗಳಿಗೆ ಜಯವಾಗಲಿ' ಎಂಬ ಘೋಷಣೆಗಳು ಕೇಳಿಬಂದವು. ಜಯಘೋಷಗಳಿಂದ ಹತ್ತೂ ದಿಕ್ಕುಗಳು ತುಂಬಿದವು. ಆಚಾರ್ಯ ಶಂಕರರು ಶಂಖ ಧ್ವನಿಯನ್ನು ಊದಿದರು. ಯಾರ ಕಿವಿಗಳಿಗೆ ಶಂಖದ ಆ ಅಮೃತ ಧ್ವನಿ ಮುಟ್ಟಿತೋ ಅವರು ಧನ್ಯರಾದರು, ಅಲ್ಲಿಯೇ ತಮ್ಮನ್ನು ತಾವು ಹಿಂದೂ ಎಂದು ಹೇಳಿಕೊಂಡರು. ಆಚಾರ್ಯರ ವಿಜಯ–ಗಾಥೆ ಎಲ್ಲೆಡೆಯಲ್ಲಿಯೂ ಹಬ್ಬಿತು, ರಾಷ್ಟ್ರೀಯತೆಯ ಅಲೆಯೊಂದೂ ಎದ್ದಿತು. ಅದರಲ್ಲಿ ಲಕ್ಷಾಂತರ ಬೌದ್ಧರು ಮಜ್ಜನ ಮಾಡಿದರು. ತಮ್ಮ ಮನದ ಕೊಳಕನ್ನು, ಸಂಕುಚಿತ ರಾಷ್ಟ್ರವಿರೋಧಿ ಮನೋವೃತ್ತಿಯನ್ನು ತೊಳೆದು ಹಾಕಿದರು, ಈಗ ಅವರ ಹೃದಯ ಸ್ನೇಹಮಯಗೊಂಡಿತ್ತು, ಸ್ವಚ್ಛವಾಗಿತ್ತು. ಭಾರತದ ಸಮನ್ವಯ–ಸಂಸ್ಕೃತಿಯ ಪುಸ್ತಕದ ಹೊಸ ಅಧ್ಯಾಯವೊಂದು ತೆರೆಯಿತು. ಮನೆಯಿಂದ ಮುನಿಸಿಕೊಂಡು ಹೋದ ಬಾಲಕನನ್ನು ಇಂದು ಸ್ವಾಮಿ ಶಂಕರಾಚಾರ್ಯರು

ಮತ್ತೆ ಮನೆಗೆ ಕರೆತಂದರು. ಆ ದಿನ ಎಷ್ಟೊಂದು ಸಂತೋಷದಾಯಕ ದಿನವಾಗಿದ್ದಿರಬಹುದು!

* * * *



## ೧೬. ಹಿಮಾಲಯದ ಶಿಖರಗಳಲ್ಲಿ

ಆಚಾರ್ಯ ಶಂಕರರು ತಕ್ಷಶಿಲೆಯಿಂದ ಕಾಶ್ಮೀರದೆಡೆಗೆ ಸಾಗಿದರು. ಮಹರ್ಷಿ ಕಶ್ಯಪರ ಭೂಮಿಯಾದ ಕಾಶ್ಮೀರದ ವಕ್ಷಸ್ಥಳದಲ್ಲಿ ಅರ್ಜುನ ಗಿಡಗಳ ಪಾತಿಗಳಷ್ಟೇ ಅಲ್ಲ, ಕಾವ್ಯ ಮತ್ತು ಕಲೆಗಳೂ ಸಹ ಕ್ರೀಡೆಯಾಡುತ್ತಿದ್ದವು. ತನ್ನ ಪ್ರಾಕೃತಿಕ ಸೌಂದರ್ಯದಿಂದ ಅದು ಒಂದೆಡೆ ನಂದನ-ಕಾನನವನ್ನು ನಾಚಿಸುತ್ತಿದ್ದರೆ, ಇನ್ನೊಂದೆಡೆ ಸಾಹಿತ್ಯ ಮತ್ತು ಸಂಸ್ಕೃತಿಯ ಶುದ್ಧ ಮತ್ತು ಸರಳ ಪ್ರಾಕೃತಿಕ ಸೌಂದರ್ಯದಿಂದಾಗಿ ಸ್ವಯಂ ಸರಸ್ವತಿಯೇ ಅಲ್ಲಿ ಶೋಭಾಯಮಾನವಾಗಿದ್ದಳು. ಶ್ರೀನಗರದ ಶಾರದಾ ಮಂದಿರ ಅತ್ಯಂತ ಪ್ರಸಿದ್ಧವಾಗಿತ್ತು. ಶ್ರೇಷ್ಠ ಪಂಡಿತರು ಬಂದು ಶಾರದೆಯ ಚರಣಗಳಲ್ಲಿ ತಲೆ ಬಾಗುತ್ತಿದ್ದರು. ಅವಳ ವರದಹಸ್ತವನ್ನು ಬಯಸುತ್ತಿದ್ದರು. ಆದರೆ ಅವರು ನಿರಾಶರಾಗಬೇಕಾಗುತ್ತಿತ್ತು. ಯುಗ-ಯುಗಗಳಿಂದ ಶಾರದಾ ಮಂದಿರದೊಳಗೆ ಯಾರೂ ಪ್ರವೇಶಿಸಲು ಸಾಧ್ಯವಾಗಿರಲಿಲ್ಲ. ಶಾರದೆಯ ವರ ಪಡೆಯದೆ ಯಾರು ತಾನೇ ಜಗದ್ಗುರುಗಳಾಗಲು ಸಾಧ್ಯವಿತ್ತು?

ಆಚಾರ್ಯ ಶಂಕರರು ಶಾರದೆಯನ್ನು ಧ್ಯಾನಿಸದೆ ಮಂದಿರದೆಡೆಗೆ ಮುಂದುವರಿದು ಹೋಗುತ್ತಿದ್ದರು. ಪ್ರಕೃತಿ-ನಟಿಯು ಶೃಂಗಾರ ಮಾಡಿಕೊಂಡು ಅವರನ್ನು ಮೋಹಗೊಳಿಸಲು ಬಯಸಿತು; ಅರಳಿದ ಹೂಗಳು ನಕ್ಕು ಅವರನ್ನು ಸ್ವಾಗತಿಸಿ ಅವರೊಂದಿಗೆ ಎರಡು ಮಾತಗಳನ್ನಾಡಲು ಬಯಸಿದವು. ಮೊಗ್ಗುಗಳು ಬಿರಿದು ಮೆಲ್ಲನೆ ಕಿವಿಗಳಲ್ಲಿ ತಮ್ಮ ಪ್ರೇಮ-ಭರಿತ ರಾಗಗಳನ್ನು ಹೇಳಿ ಕರ ಸ್ಪರ್ಶದ ತಮ್ಮ ಆಸೆಯನ್ನು ವ್ಯಕ್ತಪಡಿಸಿದವು; ಅಪ್ಸರೆಯರು ಸರೋವರಗಳಲ್ಲಿ ತಮ್ಮ ರೂಪವನ್ನು ನೋಡಿಕೊಳ್ಳುವ ನೆಪದಲ್ಲಿ ಕೆಳಗಿಳಿದು ಬಂದರು. ಗಂಧರ್ವರು ಪಕ್ಷಿಗಳ ಸ್ವರದಲ್ಲಿ ಹಾಡಿದರು, ಆದರೆ ಯಾರಿಂದಲೂ ಆಚಾರ್ಯರನ್ನು ತಡೆಯಲಾಗಲಿಲ್ಲ. ಅವರು ಸತ್ಯವನ್ನು ಸಾಕ್ಷಾತ್ಕರಿಸಿಕೊಂಡಿದ್ದರು; ಹೀಗಿರುವಾಗ ಅವು ಸ್ಥೂಲ ದೃಷ್ಟಿಗೆ ಅದೆಷ್ಟೇ ಮೋಹಕವೆನಿಸಿದಾಗ್ಯೂ, ಜಗತ್ತಿನ ಮಿಥ್ಯಾರೂಪ ಅವರನ್ನು ಆಕರ್ಷಿಸಲು ಹೇಗೆ ಸಾಧ್ಯವಿತ್ತು? ಅವರು ಧ್ಯೇಯವಾದಿ ತರುಣರಂತೆ ತಮ್ಮ ಧ್ಯೇಯಪಥದೆಡೆಗೆ ಮುಂದುವರಿಯುತ್ತಲೇ ಇದ್ದರು. ನಿರಂತರ ಸಾಗುವುದರಿಂದಲೇ ಅಂತಿಮ ಯಶಸ್ಸು ಲಭಿಸುತ್ತದೆಂಬುದು ಅವರಿಗೆ ತಿಳಿದಿತ್ತು. ಅವರ ಧವಳ ಯಶಸ್ಸು ಹಿಮಶಿಖರಗಳಲ್ಲಿ ಪಸರಿಸಿತ್ತು. ಪ್ರಾತಃಕಾಲ ಬಾಲಸೂರ್ಯನ

ಸ್ವರ್ಣ ರಶ್ಮಿಗಳು ಹಿಮಾಚ್ಛಾದಿತ ಶೃಂಗಗಳಲ್ಲಿ ಬಿದ್ದಾಗ ಕೇಸರದ ಪಾತಿಗಳ ಪಡಿನೆರಳು ಮತ್ತು ಆಚಾರ್ಯ ಶಂಕರರ ದೃಢ ನಿರ್ಧಾರಗಳ ತೇಜಸ್ಸು ಜೊತೆ-ಜೊತೆಯಾಗಿ ಹಿಮಾಲಯದ ಶಿಖರಗಳಲ್ಲಿ ಕಂಗೊಳಿಸುತ್ತಿದ್ದವು. ಉಷೆ ಬೀಳ್ಕೊಂಡು ಹೊರಡುವಾಗ ತನ್ನ ಕರದಿಂದ ಕೇಸರದ ತಿಲಕವನ್ನು ಭಾರತ ಮಾತೆಯ ಹಣೆಗಿಟ್ಟು ಹೋಗುತ್ತಿದ್ದಳು. ಆಚಾರ್ಯ ಶಂಕರರು ಮುಂದುವರಿದು ಹೋಗುತ್ತಿದ್ದರು. ಭಾರತೀಯ ಆತ್ಮದ ಆಧ್ಯಾತ್ಮಿಕ, ಆದಿದೈವಿಕ ಮತ್ತು ಆದಿಭೌತಿಕ ಸ್ವರೂಪ ಇಡೀ ದೃಶ್ಯದಲ್ಲಿ ನರ್ತಿಸುತ್ತಿತ್ತು.

ಆಚಾರ್ಯರು ಶ್ರೀನಗರವನ್ನು ತಲುಪುವಷ್ಟರಲ್ಲಿ ನಾಲ್ಕೂ ದಿಕ್ಕಿನ ವಿದ್ವಾಂಸರೂ ಸಹ ಅಲ್ಲಿಗೆ ಬಂದರು. ಶಂಕರಾಚಾರ್ಯರ ವಿಜಯಪತಾಕೆ ಇಡೀ ಭಾರತದಲ್ಲಿ ಹಾರಾಡಿದಾಗ್ಯೂ ಕಾಶ್ಮೀರದ ಶಾರದಾ ಭಕ್ತರು ಅವರೆದುರು ತಲೆಬಾಗಲು ಸಿದ್ಧರಿರಲಿಲ್ಲ. ಶಂಕರಾಚಾರ್ಯರು ಸರಸ್ವತಿಯ ಅವತಾರವಾಗಿದ್ದ ಭಾರತಿಯನ್ನು ಶಾಸ್ತ್ರದ ಚರ್ಚೆಯಲ್ಲಿ ಗೆದ್ದಿದ್ದರು. ಆದರೆ ಅವರ ದೃಷ್ಟಿಯಲ್ಲಿ ಈ ಬಹುಶ್ರುತಿ ಸತ್ಯದ ಮೌಲ್ಯ ಏನೇನೂ ಇರಲಿಲ್ಲ. ಅವರಿಗೆ ಕಿವಿಗಳಿಗಿಂತ ಕಣ್ಣುಗಳ ಬಗ್ಗೆ ಹೆಚ್ಚು ವಿಶ್ವಾಸವಿತ್ತು. ಆಚಾರ್ಯ ಶಂಕರರರೂ ಅವರನ್ನು ತಮ್ಮ ಮತಕ್ಕೆ ದೀಕ್ಷೆಗೊಳಪಡಿಸಿಕೊಳ್ಳದೆ ಬಿಡುವರೇ? ಮಸ್ತಿಷ್ಕದಲ್ಲಿ ವಿಕೃತಿ ಇದ್ದು ಉಳಿದ ಶರೀರ ದಷ್ಟ-ಪುಷ್ಟವಾಗಿದ್ದರೆ ಉಪಯೋಗವಿಲ್ಲ. ಕಾಶ್ಮೀರ ಭಾರತದ ಪ್ರಾಕೃತಿಕ ದೃಷ್ಟಿಯಿಂದ ಮಾತ್ರವಲ್ಲ, ಜ್ಞಾನ ಮತ್ತು ವಿಜ್ಞಾನದ ದೃಷ್ಟಿಯಿಂದಲೂ ಮಸ್ತಿಷ್ಕವೇ ಆಗಿತ್ತು.

ಆಚಾರ್ಯ ಶಂಕರರು ಮಂದಿರದೆಡೆಗೆ ಸಾಗಿದರು. ಅಲ್ಲಿ ಅನೇಕ ವಿದ್ವಾಂಸರು ಆಗಲೇ ಉಪಸ್ಥಿತರಿದ್ದರು. ಇತರ ವಿದ್ವಾಂಸರಂತೆ ಶಂಕರಾಚಾರ್ಯರೂ ಶಾರದಾ ಮಂದಿರದಿಂದ ಹತಾಶರಾಗಿ ಅವಮಾನಗೊಂಡು, ಸೋತು ತಲೆತಗ್ಗಿಸಿಕೊಂಡು ಮರಳಿ ಬರುತ್ತಾರೆಂದು ಅವರೆಲ್ಲಾ ಯೋಚಿಸುತ್ತಿದ್ದರು. ಆಚಾರ್ಯರ ಪಾದಗಳು ದ್ವಾರದೆಡೆಗೆ ಮುಂದುವರಿಯುತ್ತಿದ್ದಂತೆಯೇ ಅಲ್ಲಿ ಉಪಸ್ಥಿತರಿದ್ದ ಜನರ ಉತ್ಸುಕತೆಯೂ ಹೆಚ್ಚಾಗುತ್ತಿತ್ತು. ಶಂಕರಾಚಾರ್ಯರು ಖಂಡಿತವಾಗಿಯೂ ಸೋಲುತ್ತಾರೆ, ಆಗ ಅವರು ಕೆಳಗೆ ಬಿದ್ದು ತಮ್ಮ ಮಟ್ಟಕ್ಕೆ ಬಂದು ನಿಲ್ಲುತ್ತಾರೆ ಎಂದು ನಂಬಿದವರ ಮನಸ್ಸಿನ ಸಂತೋಷವೂ ಹೆಚ್ಚುತ್ತಿತ್ತು. ಅವರಿಗೆ ಆ ಸಮಯ ಸಮೀಪಿಸುತ್ತಿದೆಯೆಂದು ಭಾಸವಾಗುತ್ತಿತ್ತು. ಶಂಕರಾಚಾರ್ಯರು ದ್ವಾರವನ್ನು ಪ್ರವೇಶಿಸಿ, ಕೈಚಾಚಿದರು. ನೂರಾರು ಕೈಗಳು ಅವರ ಚಾಚಿದ ಕೈಯನ್ನು ನೋಡಿದವು. ಆ ಕೈ ಮರಳಿಬರಲಿಲ್ಲ, ಪ್ರತಿಯಾಗಿ ಅದು ದ್ವಾರದ ಬಾಗಿಲನ್ನು ಹಿಂದಕ್ಕೆ ತಳ್ಳಿದ್ದನ್ನು ನೋಡಿದವು. ಬಾಗಿಲು ತೆರೆದುಕೊಂಡಿತು. ಆಚಾರ್ಯರು ಸಹಜವಾಗಿ ಒಳಗೆ ಪ್ರವೇಶಿಸಿದರು. ನಾಲ್ಕೂ ಕಡೆಯಿಂದ ಶಂಕರಾಚಾರ್ಯರಿಗೆ ಜಯಘೋಷಗಳು ಮೊಳಗಿದವು. ಅವರ ವಿರೋಧಿಗಳ ಮುಖ ಕಳೆಗುಂದಿತ್ತು. ಜನರ ಹರ್ಷ ಧ್ವನಿ



ಗಗನವನ್ನು ಭೇದಿಸುತ್ತಿತ್ತು. ಆದರೆ ವಿದ್ವಾಂಸರ ಕಾಲ ಕೆಳಗಿನ ಭೂಮಿ ಕುಸಿಯುತ್ತಿತ್ತು; ಅವರು ಕೆಳಗೆ ಕುಸಿದು ಬೀಳುತ್ತಿದ್ದರು.

ಆಚಾರ್ಯ ಶಂಕರರು ಶಾರದೆಯ ಪೂಜೆಗೈದು ಹೊರ ಬಂದರು. ಜನರು ಶ್ರದ್ಧಾ-ಭಕ್ತಿಯಿಂದ ಅವರ ದರ್ಶನ ಪಡೆದರು. ಅವರ ಮುಖಾರವಿಂದದಲ್ಲಿ ಅಲೌಕಿಕ ಕಾಂತಿಯೊಂದು ವ್ಯಾಪಿಸಿತ್ತು. ಅವರ ಆ ತೇಜಸ್ಸನ್ನು ಕಂಡ ಜನ ತಮ್ಮನ್ನು ತಾವು ಸಮರ್ಥರೆಂದುಕೊಂಡರು. ಆದರೆ ಹಿಮಾದ್ರಿಯಿಂದ ಅವರ ತೇಜಸ್ಸನ್ನು ಸಹಿಸಿಕೊಳ್ಳಲು ಸಾಧ್ಯಾವಾಗಲಿಲ್ಲ. ಅದು ಗ್ಲಾನಿಯಿಂದ ದ್ರವಿಸಿತು. ಆಚಾರ್ಯ ಶಂಕರರು ಆಗಲೇ ನೆರೆದಿದ್ದ ಜನರಿಗೆ ಉಪದೇಶ ನೀಡಿದರು. ಇಲ್ಲಿಯೂ ಭಾರತದ ಏಕತೆ ಮತ್ತು ಆತ್ಮದ ಸತ್ಯದ ಬಗ್ಗೆ ಸಂದೇಶ ಸಾರಿದರು. ಅಲ್ಲಿ ಕಲೆತಿದ್ದ ಅನೇಕ ವಿದ್ವಾಂಸರು ಈಗ ಅವರ ಭಕ್ತರಾಗಿಬಿಟ್ಟಿದ್ದರು; ಆಚಾರ್ಯರು ಅವರೆನ್ನೆಲ್ಲಾ ಆದರಪೂರ್ವಕವಾಗಿ ತಮ್ಮೊಂದಿಗೆ ಸೇರಿಸಿಕೊಂಡರು. ಆಚಾರ್ಯರು ಜಗದ್ಗುರುಗಳಾಗಿದ್ದರು. ಆದರೂ ವಿದ್ವಾಂಸರನ್ನು ಗೌರವಿಸುವುದು ತಮ್ಮ ಕರ್ತವ್ಯವೆಂದು ತಿಳಿಯುತ್ತಿದ್ದರು. ಅವರ ಈ ಆಚರಣೆಯೇ, ಚಿಕ್ಕವರು-ದೊಡ್ಡವರು ಎಲ್ಲರನ್ನೂ ಅವರ ಪಾಶದಲ್ಲಿ ಬಂಧಿಸಿತ್ತು. ಮಾಯೆಯ ಮಿಥ್ಯೆಯ ಬಗ್ಗೆ ಡಂಗೂರ ಸಾರುವವ ವಾಸ್ತವವಾಗಿ ಅದೆಷ್ಟು ಮಾಯಾವಿಯಾಗಿದ್ದ? ಅವರ ಜೀವನದ ವಿರೋಧಾಭಾಸಗಳು ಅನೇಕರಿಗೆ ಅರ್ಥವಾಗುತ್ತಿರಲಿಲ್ಲ ಅವರ ಜೀವನದ ಬಗ್ಗೆ ಭ್ರಮೆಯ ಅಭಿಪ್ರಾಯಗಳನ್ನು ಸೃಷ್ಟಿಸಿಕೊಳ್ಳುತ್ತಾರೆ.

ಶಂಕರಾಚಾರ್ಯರು ಕೆಲವು ದಿನ ಕಾಶ್ಮೀರದಲ್ಲಿ ಉಳಿದರು. ಅವರು ಉಳಿದುಕೊಂಡಿದ್ದ ಸ್ಥಳ ಇಂದಿಗೂ ಶಂಕರಾಚಾರ್ಯರ ಬೆಟ್ಟವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಆದರೆ ಒಂದೇ ಬೆಟ್ಟವನ್ನು ಶಂಕರಾಚಾರ್ಯರ ಬೆಟ್ಟವೆನ್ನುವುದು ತಪ್ಪಾಗುತ್ತದೆ. ಕಾರಣ, ಅವರ ಚರಣಗಳು ಸ್ಪರ್ಶಿಸಿದ ಸ್ಥಳಗಳೆಲ್ಲವೂ ಅವರ ಸ್ಥಳಗಳು, ಭಾರತದ ಸ್ಥಳಗಳು, ಆ ಚರಣಗಳು ಆಸಿಂಧು-ಸಿಂಧು ಭಾರತದ ಕಣ-ಕಣಗಳನ್ನೂ ಸ್ಪರ್ಶಿಸಿದ್ದವು.

* * * *

# ೧೭. ಧ್ಯೇಯ ಸಾಧನೆ

ಇಡೀ ಉತ್ತರ ಮತ್ತು ಪಶ್ಚಿಮ, ಭಾರತೀಯ ಸಂಸ್ಕೃತಿಯ ಸಮನ್ವಯ–ಸುಧೆಯನ್ನು ಪಾನ ಮಾಡಿತ್ತು. ಇದುವರೆಗೆ ದೂರದ ಪ್ರಾಗ್‌ಜ್ಯೋತಿಷ ಪ್ರಾಂತ್ಯಕ್ಕೆ ಶಂಕರರ ಧ್ವನಿ ಇನ್ನೂ ತಲುಪಿರಲಿಲ್ಲ. ಆದ್ದರಿಂದ ಆಚಾರ್ಯರು ಪೂರ್ವದೆಡೆಗೆ ಪ್ರಯಾಣ ಬೆಳೆಸಿದರು. ಅವರ ಶಿಷ್ಯವರ್ಗ ಅವರೊಂದಿಗಿತ್ತು. ಅವರು ಅನೇಕ ನದಿಗಳನ್ನು ದಾಟಿ ಪ್ರಾಗ್‌ಜ್ಯೋತಿಷಕ್ಕೆ ಹೋದರು. ಅಲ್ಲಿ ಶಾಕ್ಯ ಧರ್ಮ ಬಹು ಪ್ರಚಾರದಲ್ಲಿತ್ತು. ಇಂದಿನಂತಯೇ ಅಂದೂ ಸಹ ಕಾಮರೂಪದ ಕಾಮಾಖ್ಯಾ ದೇವಿಯ ಮಂದಿರ ಎಲ್ಲಡೆಯಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು. ದೂರದ ಭಾಗಗಳಿಂದ ಯಾತ್ರಿಕರು ದೇವಿಯ ದರ್ಶನ ಪಡೆಯಲು ಬರುತ್ತಿದ್ದರು. ಆದರೆ ಶಕ್ತಿಯ ಶುದ್ಧ ಮತ್ತು ಸಾತ್ತ್ವಿಕ ಸ್ವರೂಪವನ್ನು ಸಾಕ್ಷಾತ್ಕಾರಿಸಿಕೊಳ್ಳುವ ಸ್ಥಾನದಲ್ಲಿ ಮಂತ್ರ–ತಂತ್ರದ ಸುಳಿಯಲ್ಲಿ ಸಿಲುಕಿ ವಾಮಮಾರ್ಗದ ಸುಳಿಯಲ್ಲಿ ಮುಳುಗಿ ಬಿಡುತ್ತಿದ್ದರು. ಇವರು ಜೀವನ ಮತ್ತು ರಾಷ್ಟ್ರದ ವಾಸ್ತವಿಕ ಶಕ್ತಿಯ ಮಾರ್ಗದಲ್ಲಿ ಸಾಗದೆ ತಂತ್ರ–ಶಕ್ತಿಯನ್ನು ಹಿಂಬಾಲಿಸಿ, ತಮ್ಮ ದಾರಿ ಮರೆತು ಧ್ಯೇಯದಿಂದ ದೂರ ಹೋಗಿಬಿಡುತ್ತಿದ್ದರು.

ಭಗವಾನ್ ಶಂಕರರ ಚರಣಗಳನ್ನು ಮಾನಸರೋವರವು ಸ್ವಚ್ಛಗೊಳಿಸಿ, ಜ್ಞಾನ ಮತ್ತು ಭಕ್ತಿಯ ಚರಣಾಮೃತವನ್ನು ಸಿಂಧು ಮತ್ತು ಬ್ರಹ್ಮಪುತ್ರೆಯ ಮೂಲಕ ಭಾರತಕ್ಕೆ ರವಾನಿಸುತ್ತದೆ. ಎರಡೂ ನದಿಗಳ ಬಾಹುಪಾಶಗಳಲ್ಲಿ ಬಂಧಿಲ್ಪಟ್ಟ ಭಾರತ ಯುಗಾಂತರಗಳಿಂದ ಶಿವನನ್ನು ಆರಾಧಿಸುತ್ತಿತ್ತು. ಪಶ್ಚಿಮಕ್ಕೆ ಶಿವನ ಪ್ರಸಾದ ಶುದ್ಧರೂಪದಲ್ಲಿ ಲಭಿಸಿತು. ಆದ್ದರಿಂದ ಅಲ್ಲಿ ಜ್ಞಾನದ ಸ್ವಚ್ಛಧಾರೆ ಹರಿಯುತ್ತಿತ್ತು. ಆದರೆ ಪೂರ್ವದಲ್ಲಿ ಮಾನಸ ಸರೋವರದಿಂದ ಹೊರಟ ಬ್ರಹ್ಮಪುತ್ರ ಟಿಬೆಟ್ಟಿನ ಬೆಟ್ಟ–ಗುಡ್ಡಗಳಲ್ಲಿ ತನ್ನ ವಾಸ್ತಾವಿಕ ಸ್ವರೂಪವನ್ನು ಮರೆತು ಸರ್ಪಿಣಿಯಾದಾಗ ಅವಳು ಶಿವನ ಜ್ಞಾನದ ಶೇವಣಿಯನ್ನೂ ಶುದ್ಧವಾಗಿಟ್ಟುಕೊಳ್ಳದಾದಳು. ಹೀಗಾಗಿ ಟಿಬೆಟ್ಟಿನ ಮಂತ್ರ–ಮೋಡಿಯಿಂದ ಮಿಶ್ರಿತಗೊಂಡ ಶಾಕ್ತವಾದ ಪೂರ್ವದಲ್ಲಿ ಪ್ರಚಲಿತಗೊಂಡಿತು, ಅದರಲ್ಲಿ ಜ್ಞಾನದ ಶುಭ್ರ ಬೆಳದಿಂಗಳಿರಲಿಲ್ಲ, ಪ್ರತಿಯಾಗಿ ಅಜ್ಞಾನದ ಹಸಿರು ಅಡಗಿತ್ತು. ಅಲ್ಲಿ ಕುಂಕುಮದ ಸ್ವರ್ಣಿಮ ಮತ್ತು ಆಹ್ಲಾದಕಾರಕ ಶೀತಲ ಸೌರಭವಿರಲಿಲ್ಲ, ಪ್ರತಿಯಾಗಿ ಚಹಾದ ಮಣ್ಣಿನ ಮತ್ತು ತಾಪದ ಮಾದಕತೆಯಿತ್ತು. ಆಚಾರ್ಯ ಶಂಕರರು ಈ ವಿಕೃತಿಯನ್ನು ಸಹಿಸದಾದರು.



ಅವರಿಗೆ ವಿದೇಶಿ ಪ್ರಭಾವ ಭಾರತೀಯರ ಬದುಕಿಗೆ ಘಾತಕವೆಂದು ಭಾಸವಾಯಿತು. ಆದ್ದರಿಂದ ಅವರು ತಮ್ಮ ಜೀವನವನ್ನು ಪಣಕ್ಕೊಡ್ಡಿಯೂ ಅದನ್ನು ಬೇರು ಸಮೇತ ಕಿತ್ತೊಗೆಯುವುದೇ ತಮ್ಮ ಕರ್ತವ್ಯವೆಂದು ಬಗೆದರು.

ಕಾಮರೂಪದಲ್ಲಿ ಆಚಾರ್ಯ ಶಂಕರರು ತುಂಬಾ ಕಷ್ಟವನ್ನು ಅನುಭವಿಸಬೇಕಾಯಿತು. ಅಲ್ಲಿಯ ಶಾಕ್ತಮತವಾದಿಗಳು ಮಂತ್ರಮೋಡಿ ಮತ್ತು ವಾಮಮಾರ್ಗದ ಭೋಗಾಭಿಲಾಷೆಯ ಪ್ರಭಾವದಿಂದಾಗಿ ಬೌದ್ಧಿಕವಾದಕ್ಕೆ ತಿಲಾಂಜಲಿಯಿತ್ತಿದ್ದರು. ಜೀವನದ ಅನೈತಿಕತೆ, ಧಾರ್ಮಿಕ ಆಚರಣೆಯ ಮುಸುಕನ್ನು ಧರಿಸಿ ನೈತಿಕತೆಯನ್ನು ಪ್ರತಿಪಾದಿಸಿದಾಗ ಸುಧಾರಣೆಯ ಕೆಲಸ ಕಠಿಣವಾಗುತ್ತದೆ. ಪಾಪ–ಕಾರ್ಯವನ್ನು ಪುಣ್ಯವೆಂದು ತಿಳಿದು ಅದನ್ನು ಮಾಡುವ ವ್ಯಕ್ತಿಯನ್ನು ಪುಣ್ಯಮಾರ್ಗದಲ್ಲಿ ತರುವುದು ಕಷ್ಟವಾಗುತ್ತದೆ. ಶಾಕ್ತಮತವಾದಿಗಳ ಜೀವನದಲ್ಲಿ ವಾಮಮಾರ್ಗದ ಪ್ರವೇಶದಿಂದಾಗಿ ಶ್ರದ್ಧೆ ಮತ್ತು ಭಕ್ತಿಯ ಶಕ್ತಿಯೊಂದಿಗೆ ಭೋಗಲಾಲಸೆಯ ದುರಾಗ್ರಹವೂ ಬಂದಿತ್ತು. ಈ ಲಾಲಸೆ ರಾಷ್ಟ್ರ ಜೀವನವನ್ನು ಜರ್ಜರಿತಗೊಳಿಸಿತ್ತು. ಇಡೀ ಶರೀರ ದಷ್ಟಪುಷ್ಟವಾಗಿದಾಗ್ಯೂ ಬೆನ್ನಿನಲ್ಲಿರುವ ಹುಣ್ಣಿನಂತೆ ಪ್ರಾಗ್‌ಜ್ಯೋತಿಷ ಪ್ರಾಂತ್ಯ ಕೆಲಸ ಮಾಡುತ್ತಿತ್ತು.

ಆಚಾರ್ಯ ಶಂಕರರು ದೃಢ ಚಿತ್ತದ ವ್ಯಕ್ತಿಗಳಾಗಿದ್ದರು. ಹೀಗಾಗಿ ಅವರು ಕಾರ್ಯದ ಕಾಠಿಣ್ಯದಿಂದಾಗಿ ಹಿಂದಕ್ಕೆ ಸರಿಯುವವರಾಗಿರಲಿಲ್ಲ. ಇಲ್ಲಿಯ ಮುಂದಾಳುಗಳು ಮತ್ತು ವಿದ್ವಾಂಸರು ಹಠವಾದಿಗಳಾಗಿದ್ದುದ್ದನ್ನು ಗಮನಿಸಿದರು. ಅವರು ತರ್ಕದ ತಕ್ಕಡಿಯಲ್ಲಿ ತೂಗತ್ತ, ಸದಾ ಮೋಸವೆಸಗುವುದನ್ನೇ ತಮ್ಮ ಕರ್ತವ್ಯವೆಂದು ತಿಳಿಯುತ್ತಿದ್ದರು. ಸತ್ಯವನ್ನು ನೋಡಿಯೂ, ಅದನ್ನು ನೋಡಲು ಬಯಸುತ್ತಿರಲಿಲ್ಲ. ಆಚಾರ್ಯ ಶಂಕರರ ಸಿದ್ಧಾಂತಗಳು ಅರ್ಥವಾಗುವಂತಿದ್ದು, ತರ್ಕ ಸಮ್ಮತವಾಗಿದ್ದಾಗ್ಯೂ ಅವರು ಅವುಗಳನ್ನು ಅರ್ಥಮಾಡಿಕೊಳ್ಳಲು ಬಯಸುತ್ತಿರಲಿಲ್ಲ. ಯಾಕೆಂದರೆ, ಅರ್ಥ ಮಾಡಿಕೊಂಡರೆ ಅವರ ಸ್ವಾರ್ಥಕ್ಕೆ ಮತ್ತು ಮುಂದಾಳತ್ವಕ್ಕೆ ಆಘಾತವುಂಟಾಗುತ್ತಿತ್ತು. ಧರ್ಮದ ಮರೆಯಲ್ಲಿ ಯಾವ ಅನಾಚಾರಗಳನ್ನು ಆಚರಣೆಗೆ ತರಲಾಗಿತ್ತೋ, ಅವುಗಳ ಸಂಸ್ಕಾರಗಳು, ಅವರ ಜೀವನದ ಮೇಲೆ ಪ್ರಭಾವ ಬೀರಿದ್ದವು. ಇಚ್ಛಾಶಕ್ತಿ ಅದೆಷ್ಟು ದುರ್ಬಲಗೊಂಡಿತ್ತೆಂದರೆ, ಅದು ಅನಾಚಾರಗಳ ಮೇಲೆ ಗೆಲವು ಸಾಧಿಸಲು ಅಸಮರ್ಥವಾಗಿತ್ತು. ಇಂಥ ವೇಳೆಯಲ್ಲಿ ತಮ್ಮ ಅನಾಚಾರಗಳನ್ನು ಧರ್ಮೋಚಿತ ಮತ್ತು ನ್ಯಾಯೋಚಿತವೆಂದು ಮನದಟ್ಟು ಮಾಡುವುದೇ ತಮ್ಮ ಉನ್ನತ ಸ್ಥಾನ ಮತ್ತು ಮುಂದಾಳತ್ವವನ್ನು ಕಾಯ್ದಿಟ್ಟುಕೊಳ್ಳುವ ಏಕಮಾತ್ರ ಮಾರ್ಗವಾಗಿತ್ತು. ಆಚಾರ್ಯಶಂಕರರು ಅವರ ಈ ದುರಾಗ್ರಹವನ್ನು ಕೆಲವೇ ದಿನಗಳಲ್ಲಿ ಗುರುತಿಸಿದರು. ಹೀಗಾಗಿ ಆಚಾರ್ಯ ಶಂಕರರು ಅವರ ಬಗ್ಗೆ ಶ್ರಮವಹಿಸಿ ತಮ್ಮ ಶಕ್ತಿಯನ್ನು ವ್ಯರ್ಥಮಾಡಿಕೊಳ್ಳುವುದು

ಉಚಿತವಲ್ಲವೆಂದು ತಿಳಿದರು. ಇದಕ್ಕೆ ಪ್ರತಿಯಾಗಿ ಸಾಮಾನ್ಯ ಜನರ ಜೀವನದಲ್ಲಿ ಭೋಗಲಾಲಸೆಯ ಸಂಸ್ಕಾರಗಳೂ ಅಷ್ಟೊಂದು ಬಲವಾಗಿರಲಿಲ್ಲ. ಅವರೆದುರು ಅಹಂಕಾರ ಮತ್ತು ಸ್ವಾರ್ಥದ ಪ್ರಶ್ನೆಯೂ ಇರಲಿಲ್ಲ. ಶಬ್ದಾಡಂಬರದ ಮತ್ತು ಮೋಹಕ ಸಿದ್ಧಾಂತಗಳ ವೈಭವಕ್ಕೆ ಬಲಿಯಾಗಿದ್ದರೂ, ಸಾಮಾನ್ಯ ಜನರು ಜೀವನದ ಏಳಿಗೆಯ ಸಂಗತಿಗಳನ್ನು ಸಹಜವಾಗಿಯೇ ಅರ್ಥ ಮಾಡಿಕೊಳ್ಳುತ್ತಿದ್ದರು. ಅವರ ಜೀವನದಲ್ಲಿ ಈಗಲೂ ಲೋಕ ಕಲ್ಯಾಣದ ಭಾವನೆಯಿತ್ತು.

ಸಾಮಾನ್ಯ ಜನರ ಈ ವಾಸ್ತವಿಕ ಮನೋವೃತ್ತಿಯನ್ನು ಕಂಡು ಭಗವಾನ್ ಶಂಕರರು ಅವರ ನಡುವೆಯೇ ತಮ್ಮ ಕಾರ್ಯವನ್ನು ಕೈಗೊಂಡರು ಅವರಿಗೆ ಜ್ಞಾನದ ಸತ್ಯ–ಮಾರ್ಗವನ್ನು ತೋರಿಸಿದರು. ಅವರು ಅಂಧರಾಗಿ ಜೀವನದ ಯಾವ ಅಪವಿತ್ರತೆಯ ಹಿಂದೆ ದೌಡಾಯಿಸತ್ತಿದ್ದರೋ ಅದರ ನಗ್ನ ಸ್ವರೂಪವನ್ನೇ ಅವರೆದುರಿಗಿಟ್ಟರು. ಅವರ ಸಾತ್ತ್ವಿಕ ಭಾವನೆಗಳನ್ನು ಜಾಗೃತಗೊಳಿಸಿದರು, ಆತ್ಮದ ವಾಸ್ತವಿಕತೆ ಮತ್ತು ದೇವರ ನಿಜವಾದ ಭಕ್ತಿಯನ್ನು ಪರಿಚಯಿಸಿದರು. ಜನ ಸಾಮಾನ್ಯರು ಶಂಕರಾಚಾರ್ಯರ ಉಪದೇಶಗಳ ಮಹತ್ವವನ್ನು ಅರಿಯಲಾರಂಭಿಸಿದರು. ಈಗ ಅವರಿಗೆ ತಮ್ಮ ತಪ್ಪಿನ ಅರಿವಾದಂತೆ ಕಂಡಿತು. ಜನರು ಭಾರತೀಯ ಅಭಿನ್ನತೆಯನ್ನು ಸಾಕ್ಷಾತ್ಕಾರಗೊಳಿಸಿಕೊಂಡಂತೆಯೇ, ಅವರ ಜೀವನದಲ್ಲಿ ಅಪವಿತ್ರತೆಯ ಜಾಗದಲ್ಲಿ ಪವಿತ್ರತೆಯ ಉದಯವಾಗಲಾರಂಭಿಸಿತು.

ಶಂಕರಾಚಾರ್ಯರ ಸುತ್ತ–ಮುತ್ತ ಕ್ರಮೇಣ ಜನರು ಕಲೆಯಲಾರಂಭಿಸಿದರು. ಅವರ ಶಿಷ್ಯರ ಸದ್‌ವ್ಯವಹಾರ, ಸಹಾನುಭೂತಿ ಮತ್ತು ಪ್ರೀತಿಯ ವರ್ತನೆ ಜನರ ಮನದಲ್ಲಿ ತನ್ನ ಸ್ಥಾನವನ್ನು ಸ್ಥಾಪಿಸಿಕೊಂಡಿತು. ಮನಸ್ಸು ಮೆದುಳಿನ ದ್ವಾರ. ಆದ್ದರಿಂದ ಮನಸ್ಸನ್ನು ಗೆದ್ದ ಮೇಲೆ ಮಸ್ತಿಷ್ಕವನ್ನು ಗೆಲ್ಲಲು ತಡವಾಗಲಿಲ್ಲ. ಸ್ವಾಮಿ ಶಂಕರಾಚಾರ್ಯರ ಶುದ್ಧ ವೇದಾಂತ ತತ್ತ್ವಗಳು ಪ್ರಾಗ್‌ಜ್ಯೋತಿಷ ಪ್ರಾಂತ್ಯದ ಹಳ್ಳಿ–ಹಳ್ಳಿಗಳಲ್ಲಿ ಮತ್ತು ಮನೆ–ಮನೆಗಳಲ್ಲಿ ಚರ್ಚೆಯ ವಿಷಯವಾಯಿತು. ಅಲ್ಲದೆ ಜನರೂ ಅದನ್ನು ಆಚರಿಸಲು ಪ್ರಾರಂಭಿಸಿದರು.

ಜನರ ಶ್ರದ್ಧೆ ಶಂಕರಾಚಾರ್ಯರ ಬಗ್ಗೆ ಹರಿದಂತೆಯೇ ಹಳೆಯ ಕಂದಾಚಾರದ ಬಲಿಷ್ಠ ಮಂದಾಳುಗಳಿಗೆ ಗೌರವ ಕೊಡುವುದು ಕಡಿಮೆಯಾಯಿತು. ತಾವು ನಿರ್ಮಿಸಿದ ಅರಮನೆಯ ಇಟ್ಟಿಗೆಗಳನ್ನು ಯಾರೋ ಹೊರ ತೆಗೆಯುತ್ತಿದ್ದಾರೆ, ಅರಮನೆಯ ಶಿಖರದಲ್ಲಿ ಕೂತಿದ್ದ ತಾವು ಇದ್ದಕ್ಕಿದ್ದಂತೆ ಒಂದು ದಿನ ನೆಲಕ್ಕೆ ಬೀಳುತ್ತೇವೆ ಎಂಬುದು ಅವರಿಗೆ ತಿಳಿಯಿತು. ಅವರಿಗೆ, ಶಂಕರಾಚಾರ್ಯರ ವಿರುದ್ಧ ಜನರೆದರು ನಿಲ್ಲುವಷ್ಟು ಶಕ್ತಿ ಮತ್ತು ಶ್ರದ್ಧೆಯಂತೂ ಇರಲಿಲ್ಲ. ಅವರು ದ್ವೇಷದಿಂದಾಗಿ ಸತ್ಯ ಮಾರ್ಗವನ್ನು ಅವಲಂಬಿಸದೆ ಮಿಥ್ಯಾಮಾರ್ಗವನ್ನು ಅವಲಂಬಿಸಿದರು. ಅದೊಂದು ದಿನ ಓರ್ವ ಕಾಪಾಲಿಕನಿಂದ (ಶೈವ ಸಾಧು) ಅವರ ಶಿರಚ್ಛೇದ



ಮಾಡಿಸುವ ಪ್ರಯತ್ನವನ್ನೂ ಮಾಡಲಾಯಿತು. ಆದರೆ ಅದು ಅವರ ಶಿಷ್ಯರ ಮುಂಜಾಗರೂಕತೆಯಿಂದ ಕೈಗೂಡಲಿಲ್ಲವೆಂದು ಹೇಳಲಾಗುತ್ತದೆ.

ಆಚಾರ್ಯ ಶಂಕರರಂತೂ ಆಗ ಪಾರಾದರು. ಆದರೆ ಆಭಿನವ ಗುಪ್ತ ಅವರನ್ನು ತನ್ನ ಮಾರ್ಗದಿಂದ ಹೊರಹಾಕುವುದನ್ನೇ ಬಯಸುತ್ತಿದ್ದ. ಅವನು ಅನೇಕ ವ್ಯವಸ್ಥೆಗಳನ್ನು ಮಾಡಿ ಅವರಿಗೆ ಅಹಿತವನ್ನುಂಟುಮಾಡಲು ಬಯಸಿದ. ಪ್ರಾಗ್‌ಜ್ಯೋತಿಷದ ಹವಾಗುಣದ ಪ್ರಭಾವವೂ ಆಚಾರ್ಯರ ಬಲಿಷ್ಠ ಶರೀರದ ಮೇಲೆ ಬಿತ್ತು. ಕಡೆಗೆ ಅವರು 'ನಾಡಿವ್ರಣ' ರೋಗಕ್ಕೆ ತುತ್ತಾದರು. ಶಿಷ್ಯರು ಅವರು ರೋಗಗ್ರಸ್ತರಾಗಿರುವುದನ್ನು ಕಂಡು ಅವರು ಪ್ರಾಗ್‌ಜ್ಯೋತಿಷವನ್ನು ಬಿಟ್ಟು ಇತರ ಆರೋಗ್ಯಕರ ಸ್ಥಳಕ್ಕೆ ಹೋಗುವಂತೆ ಮನವಿ ಮಾಡಿಕೊಂಡರು. ಆದರೆ ಆಚಾರ್ಯರಿಗೆ ಇದು ಒಪ್ಪಿಗೆ ಇರಲಿಲ್ಲ. ಯಾಕೆಂದರೆ ಇನ್ನೂ ಅವರ ಕಾರ್ಯ ಪ್ರಾಗ್‌ಜ್ಯೋತಿಷದಲ್ಲಿ ಪೂರ್ಣಗೊಂಡಿರಲಿಲ್ಲ. ಆಗ ಅವರು, "ದೇವರು ಈ ದೇಹವನ್ನು ವಿಶೇಷ ಕಾರ್ಯ ಪೂರ್ಣಗೊಳಿಸಲು ಕೊಟ್ಟಿದ್ದಾನೆ. ಆ ಕಾರ್ಯವನ್ನು ಮಾಡುವ ಬದಲು ನಾನು ನನ್ನ ದೇಹದ ಬಗ್ಗೆ ಚಿಂತಿಸುತ್ತಾ ಕೂತರೆ ಅದು ದೇವರ ಇಚ್ಛೆಗೆ ವಿರುದ್ಧವಾಗುತ್ತದೆ" ಎಂದರು. ಶಿಷ್ಯರು ಎಷ್ಟೇ ಆಗ್ರಹಿಸಿದರೂ ಆಚಾರ್ಯರು ಚಿಕಿತ್ಸೆಯನ್ನೂ ಮಾಡಿಸಿಕೊಳ್ಳದಾದರು. ಯಾಕೆಂದರೆ ಅದಕ್ಕೂ ಅವರಿಗೆ ಸಮಯವಿರಲಿಲ್ಲ. ಅವರ ಕಾರ್ಯ ನಿರಂತರವಾಗಿ ಸಾಗುತ್ತಿತ್ತು. ಕ್ರಮೇಣ ಅವರು ಇಡೀ ಪೂರ್ವ ದಿಕ್ಕಿನಲ್ಲಿ ಸಂಚರಿಸಿ ಅದ್ವೈತದ ಪ್ರಚಾರವನ್ನು ಮಾಡಿದರು.

ಈಗ ಅವರ ಕಾರ್ಯ ಪೂರ್ಣಗೊಂಡಿತ್ತು. ಪದ್ಮಪಾದನ ಶುಶ್ರೂಷೆಯಿಂದ ಅವರ ಖಾಹಿಲೆ ಕ್ರಮೇಣ ಸುಧಾರಿಸಿತು. ತಾಯಿಯ ಈ ವಾಮ ಅಂಗವನ್ನು ವಾಮ ಮಾರ್ಗದ ರಕ್ತ–ರೋಗದಿಂದ ಮುಕ್ತಗೊಳಿಸಿ ಇಡೀ ದೇಹದಂತೆ ಕಾಂತಿಯುಕ್ತಗೊಳಿಸಿತು. ಈ ಅಂತಿಮ ಕಾರ್ಯವನ್ನು ಕೈಗೊಂಡ ಅನಂತರ ಅವರಿಗೆ ಈಗ ತಮ್ಮ ಜೀವನದ ಉದ್ದೇಶ ಈಡೇರಿದೆಯೆಂಬ ಅನುಭವವಾಯಿತು. ಆದ್ದರಿಂದ ಹಿಮಾಲಯಕ್ಕೆ ಹೋಗಿ ಚಿಂತನ, ಮನನ ಮತ್ತು ತಪಸ್ಸು ಮಾಡುವ ಬಗ್ಗೆ ಯೋಚಿಸಿದರು.

* * * *

## ೧೮. ಮಹಾತತ್ತ್ವದಲ್ಲಿ ವಿಲೀನ

ಭಾರತೀಯರ ಜೀವನದಲ್ಲಿ ಹಿಮಾಲಯಕ್ಕೆ ತನ್ನದೇ ಆದ ವಿಶೇಷ ಸ್ಥಾನ ಮತ್ತು ಆಕರ್ಷಣೆಯಿದೆ. ಅದರ ಬಗ್ಗೆ ಪ್ರತಿಯೊಬ್ಬ ಭಾರತೀಯನ ಶಿರ ಕೃತಜ್ಞತೆಯ ಭಾರದಿಂದ ಬಾಗುತ್ತದೆ. ಹಿಮಾಲಯ ತಾಯಿಯ ಕಾವಲುಗಾರನಂತೆ ದೃಢ ನಿಶ್ಚಯದಿಂದ ನಿಂತಿದೆ, ಅದೆಷ್ಟೋ ಅಸಭ್ಯ ಜನರು ಅದರ ಮೇಲೆ ಪ್ರಹಾರ ಮಾಡಿದರು. ಅದು ಪೆಟ್ಟು ತಿಂದು–ತಿಂದು ಕಲ್ಲಾಗಿದೆ, ಆದರೆ ಅವರನ್ನು ಒಳ ಬರಲು ಹಿಮಾಲಯ ಬಿಡಲಿಲ್ಲ. ಅದು ಉತ್ತರ ಭಾಗದ ಜನರ ಶರೀರವನ್ನು ಭೇಧಿಸುವ ಹಿಮ–ವಾಯವನ್ನು ತಾನೇ ಸ್ವತಃ ಕುಡಿಯುತ್ತದೆ. ತನ್ನ ದೇಹವನ್ನು ಹಿಮಮಯಗೊಳಿಸಕೊಂಡು ದಧೀಚಿಯಂತೆ ನಮ್ಮನ್ನು ರಕ್ಷಿಸುತ್ತದೆ. ಉದ್ಧಟ ದಕ್ಷಿಣ ಸಾಗರ ಮೋಡವಾಗಿ ಭಾರತದ ಎಲ್ಲೆಯನ್ನು ದಾಟುವ ವಿಫಲ ಪ್ರಯತ್ನ ಮಾಡುತ್ತದೆ. ಆದರೆ ಅದು ಈ ಕಾವಲುಗಾರನಿಂದ ಪಾರಾಗಲಾರದು. ಅದು ಪ್ರಾರ್ಥಿಸುತ್ತದೆ. ಅಂಗಲಾಚುತ್ತದೆ. ಕಣ್ಣೀರು ಸುರಿಸುತ್ತದೆ, ಕೂಗುತ್ತದೆ, ಕಿರುಚುತ್ತದೆ, ಹುಬ್ಬುಗಂಟಿಕ್ಕುತ್ತದೆ, ರೋದಿಸುತ್ತದೆ. ಆದರೆ ಈ ಕಲ್ಲು ಹೃದಯದ ಕಾವಲುಗಾರನ ಮನಸ್ಸು ಕರಗುವುದಿಲ್ಲ. ಸೋಲನ್ನು ಒಪ್ಪಿಕೊಂಡು ಸಮುದ್ರಕ್ಕೆ ಲಜ್ಜಿತವಾಗಿ ಮರಳಿ ಹೋಗುತ್ತದೆ. ಮತ್ತೆ ಹಿಮಾಲಯ, ಸಾಗರದ ಉದ್ಧಟತನಕ್ಕೆ ದಂಡ ಸ್ವರೂಪದಲ್ಲಿ ಜಲ ಪಡೆದು ನಮಗೆ ಕೊಡುತ್ತದೆ, ತಾನೇ ಇಟ್ಟುಕೊಳ್ಳುವುದಿಲ್ಲ. ಬೇಸಿಗೆಯಲ್ಲಿ ಸೂರ್ಯನ ಪ್ರಚಂಡ ಕರಗಳಿಂದ ಇಡೀ ಭಾರತ ಭೂಮಿ ಸುಟ್ಟಾಗ, ಅವಳ ಮಕ್ಕಳು ಶುಷ್ಕ ಕಂಠದಿಂದ ಹೊರಳಾಡುತ್ತವೆ. ಆಗ ಹಿಮಾಲಯವೇ ತನ್ನ ಶರೀರವನ್ನು ಕರಗಿಸಿ–ಕರಗಿಸಿ ನಮಗೆ ಜಲ ದಾನಮಾಡುತ್ತದೆ. ಗಂಗಾ, ಯಮುನಾ ಮತ್ತು ಸಿಂಧು ಅಮೃತ ಕಲಶದೊಂದಿಗೆ ಅದರ ಮಡಿಲಿನಲ್ಲಿಳಿದು ನಮಗೆ ಜೀವದಾನ ಮಾಡುತ್ತವೆ. ಮುಂಜಾನೆ ಸುವರ್ಣ ರಶ್ಮಿಗಳು ಹಿಮಾಲಯಕ್ಕೆ ಜಳಕ ಮಾಡಿಸಿದಾಗ ಅದು ಸುವರ್ಣ ಕಾಂತಿಯನ್ನು ಕಸಿದುಕೊಂಡು ಅನಂತ ರತ್ನಗಳು ಮತ್ತು ನಾನಾ ರೀತಿಯ ಶಕ್ತಿವರ್ಧಕ ಔಷಧಿಗಳನ್ನು ನಮಗೆ ಕೊಡುತ್ತದೆ. ಶಂಕರಾಚಾರ್ಯರ ಹೃದಯದಲ್ಲಿ ಹಿಮಾಲಯದ ಮಹತ್ವ ಕೇವಲ ಈ ಲೌಕಿಕ ದೃಷ್ಟಿಯಿಂದ ಮಾತ್ರವೇ ಇರಲಿಲ್ಲ, ಪ್ರತಿಯಾಗಿ ಅವರು ಅದನ್ನು ತಮ್ಮ ಸತ್ಯ–ಸಿದ್ಧಾಂತಗಳ ಸಾಕಾರ ಮಂತ್ರ ಪ್ರತೀಕದಂತೆ ನೋಡುತ್ತಿದ್ದರು. ಸಂಪೂರ್ಣ ವಿಶ್ವದ ಸಮೃದ್ಧಿಯನ್ನು ವೃದ್ಧಿಸುತ್ತಲೂ,



ಅದರಿಂದ ನಿರ್ಲಿಪ್ತಗೊಂಡು, ವಿರಕ್ತ, ಶಾಂತ ಮತ್ತು ಧ್ಯಾನಸ್ಥ ಕರ್ಮಯೋಗಿಯ ರೂಪದಲ್ಲಿ ಅವರೆದುರು ಹಿಮಾಲಯ ನಿಂತಿತ್ತು. ಅವರು ಆ ಮನೋವೃತ್ತಿಯನ್ನು ತಮ್ಮ ಹೃದಯದಲ್ಲಿ ಅಳವಡಿಸಿಕೊಳ್ಳಲು ಬಯಸುತ್ತಿದ್ದರು.

ಭಗವಾನ್ ಶಂಕರರಿಗೆ ಹಿಮಾಲಯ ಸ್ವರ್ಗದ ಪವಿತ್ರ ಭೂಮಿ, ಅನೇಕ ತಪಸ್ವಿಗಳ ತಪೋಭೂಮಿ ಮತ್ತು ಪುರುಷಾರ್ಥ ಸಾಧಿಸುವವರ ಕರ್ಮಭೂಮಿಯಾಗಿತ್ತು. ಭಗವಾನ್ ಶಂಕರರ ನಿವಾಸ ಸ್ಥಾನ ಅವರಂತೆಯೇ ಯೋಗಮಯವಾಗಿದ್ದಾಗ್ಯೂ ಸರ್ವತ್ರವಿತ್ತು; ಸೌಮ್ಯವಾದ್ದಾಗ್ಯೂ ಭೀಷಣವಾಗಿತ್ತು, ಶಾಂತವಾಗಿದ್ದಾಗ್ಯೂ ಸಿಂಹನಾದದಿಂದ ಪರಿಪೂರ್ಣಗೊಂಡಿತ್ತು, ದಯಾಳುವಾಗಿದ್ದಾಗ್ಯೂ ಕಾಠಿಣ್ಯವನ್ನು ಹೊಂದಿತ್ತು, ಅಲ್ಪದಾನಿಯಾಗಿದ್ದಾಗ್ಯೂ ಅತಿಶಯ ಶ್ರೀಮಂತ, ಅನೇಕರ ಸಾವಿಗೆ ಕಾರಣವಾಗಿದ್ದಾಗ್ಯೂ ಜೀವನದಾತ. ನಾರುಮಡಿ ಧರಿಸಿದ್ದಾಗ್ಯೂ, ದಿಂಗಬರ; ಹಿಮಾಂಶುಧಾರಿಯಾಗಿದ್ದಾಗ್ಯೂ ಉಗ್ರ, ಹಿಮಾಲಯದ ವೈಶಾಲ್ಯ ಅವರನ್ನು ಆಕರ್ಷಿಸಿತ್ತು. ಅದರ ಶ್ರೇಷ್ಠ ಗುಣಗಳು ಅವರನ್ನು ಕರೆಯುತ್ತಿದ್ದವು–ಅದನ್ನು ಅವರು ಮೋಕ್ಷದ ಮೆಟ್ಟಿಲುಗಳನ್ನಾಗಿ ಮಾಡಿಕೊಳ್ಳಲು ಬಯಸುತ್ತಿರುವಂತೆ ತೋರುತ್ತಿತ್ತು. ಅವರು ಹಿಮಾಲಯದ ಗಾಂಭಿರ್ಯವನ್ನು ಪಾನಮಾಡಲು ಬಯಸುತ್ತಿದ್ದರು. ಜಗದ್ಗುರು ಶಂಕರಾಚಾರ್ಯರು ಹಿಮಾಲಯಕ್ಕೆ ಜಯಕಾರ ಹಾಕದೆ ದಿಗ್ವಿಜಯಿಗಳೆಂದು ಕರೆಸಿಕೊಳ್ಳಲು ಹೇಗೆ ಸಾಧ್ಯ? ಹಿಮಾಲಯ ತಲೆ ಎತ್ತಿ ನಿಂತಿತ್ತು, ಅವರು ಹಿಮಾಲಯಕ್ಕೆ ತಮ್ಮ ಜೀವನದಲ್ಲಿಯೂ ವಿಶ್ವದ ಮಾನದಂಡವಾಗುವ ಸಾಮರ್ಥ್ಯವಿದೆ, ತಾವು ಸಹ ಅದರಂತೆ ಉನ್ನತ್ತ, ವಿಶಾಲ, ಗಂಭೀರ ಮತ್ತು ಅಖಂಡ ಕರ್ಮಮಯ ವೈರಾಗ್ಯ ಜೀವನವನ್ನು ಸಾಗಿಸಬಲ್ಲೆ ಎಂದು ಹೇಳಲು ಬಯಸುತ್ತಿದ್ದರು. ಜೀವನದಲ್ಲಿ ಸದಾ ಮಹತ್ವದ ಭಾರ ಹೊತ್ತು ಜಗತ್ತಿನಲ್ಲಿ ತಮ್ಮ ಶಿಷ್ಯರಿಗೆ ಗುರುಸ್ಥಾನದಲ್ಲಿದ್ದು, ಸದಾ ಹಿರಿಮೆಯ ಅನುಭವವನ್ನೇ ಪಡೆದಿದ್ದ ಶಂಕರಾಚಾರ್ಯರು ಹಿಮಾಲಯದ ಮಡಿಲಿನಲ್ಲಿ ಆತ್ಮಸಮರ್ಪಣೆಯ ಸುಖವನ್ನು ಅನುಭವಿಸಲು ಬಯಸುತ್ತಿದ್ದರು. ತಮ್ಮ ಪರಮಗುರುಗಳಾದ ಭಗವದ್ ಗೌಡಪಾದಚಾರ್ಯರ ದರ್ಶನಕ್ಕಾಗಿ, ಅವರು ಒಮ್ಮೆ ಬದರಿಕಾಶ್ರಮಕ್ಕೆ ಹೋಗಿದ್ದರು. ಆದರೆ ಮಾತೆ ಆರ್ಯಂಬಾರ ಸಂದೇಶವು ಅವರನ್ನು ಶೀಘ್ರವೇ ಕರೆಸಿಕೊಂಡಿತ್ತು. ಆಗ ಅವರು ಹಿಮಾಲಯದ ಪ್ರವಾಸವನ್ನು ಕೈಗೊಳ್ಳದಾದರು. ಪೂಜ್ಯ ಹಿಮಾದ್ರಿಯ ಗುಹೆಗಳಿಂದ ಗೂಢತಮ ಜ್ಞಾನವನ್ನು ಸೆಳೆದು ತರುವ ಬದಲು, ತಮ್ಮ ಅಂತರಂಗದ ಗಹನ ತೊಡಕುಗಳನ್ನು ಬಗೆಹರಿಸಿಕೊಂಡು ಅದೇ ಜ್ಞಾನವನ್ನು ಪಡೆದಿದ್ದರು. ಆದರೆ ಇದರಿಂದ ಅವರಿಗೆ ತೃಪ್ತಿಯಾಗುತ್ತಿರಲಿಲ್ಲ. ಹಿಮಾಲಯ ಅವರನ್ನು ಜೀವಮಾನವಿಡಿ ಸ್ವಾಗತಿಸುತ್ತಿತ್ತು. ಈಗ ಭಾವನೆಯ ಇಂಥ ಮಾರ್ಗದಲ್ಲಿ ಕರ್ತವ್ಯ ಅಡ್ಡ ಬರುತ್ತಿರಲಿಲ್ಲ. ಆದ್ದರಿಂದ

ಅವರು ಬದರಿಕಾಶ್ರಮದೆಡೆಗೆ ಹೊರಟರು.

ಆಚಾರ್ಯ ಶಂಕರರು ಬದರಿಕಾಶ್ರಮದಲ್ಲಿ ಹೆಚ್ಚುದಿನವಿರಲು ಸಾಧ್ಯವಾಗಲಿಲ್ಲ. ಅಲ್ಲಿಂದ ಅವರು ಕೇದಾರನಾಥದೆಡೆಗೆ ಪ್ರಯಾಣ ಬೆಳೆಸಿದರು. ಅವರೆದುರು ಪಾಂಡವರ ಸ್ವರ್ಗಯಾತ್ರೆ ಇತ್ತು. ಅವರಿಗೆ ಅದೇ ಮಾರ್ಗದಲ್ಲಿ ಯಾರೋ ಕರೆಯುತ್ತಿದ್ದಾರೆ ಎಂದು ಭಾಸವಾಯಿತು. ಈ ಕರೆಯನ್ನು ತಡೆಯಲು ಸಾಧ್ಯವಾಗುತ್ತಿರಲಿಲ್ಲ. ಯಮನ ಕೈಯನ್ನು ಯಾರು ತಾನೇ ಹಿಡಿದು ನಿಲ್ಲಿಸಿದ್ದಾರೆ! ಸರಿ ಅದೊಂದು ದಿನ ಆಚಾರ್ಯ ಶಂಕರರು ಧ್ಯಾನಮಗ್ನರಾಗಿ ಸಮಾಧಿಸ್ಥರಾದರು. ಎಲ್ಲ ಶಿಷ್ಯರೂ ನೋಡುತ್ತಲೇ ನಿಂತುಬಿಟ್ಟರು. ವೇದಾಂತದ ತತ್ವಗಳನ್ನು ತಿಳಿದಿದ್ದೂ ಅವರ ಹೃದಯ ಅಚಾರ್ಯರ ಶರೀರಕ್ಕಾಗಿ ಚಡಪಡಿಸಿತು. ಅವರ ಕಣ್ಣುಗಳು ರೋದಿಸಿದವು. ಆದರೆ ಹಿಮಾಲಯದ ಥಂಡಿಯಲ್ಲಿ ಬಿಸಿ ಕಣ್ಣೀರಿನ ಹನಿಗಳು ಹಿಮಗೊಳ್ಳಲು ತಡವಾಗಲಿಲ್ಲ.

ಆಚಾರ್ಯ ಶಂಕರರು ಭಾರತದೇಶದ ಅವತಾರ ಪುರುಷರಲ್ಲಿ, ಮಹಾಪುರುಷರಲ್ಲಿ ಒಬ್ಬರಾಗಿದ್ದಾರೆ. ನಮ್ಮ ರಾಷ್ಟ್ರ ಜೀವನದ ನಿರ್ಮಾಣಕ್ಕೆ ಅವರ ಕೊಡುಗೆ ಅಪಾರವಾಗಿದೆ ಅವರ ಸ್ಥಾನ ಧರ್ಮ ಮತ್ತು ತತ್ವಶಾಸ್ತ್ರದ ಕ್ಷೇತ್ರದಲ್ಲಿ ತುಂಬ ಉನ್ನತವಾಗಿದೆ. ಅವರು ನೀಡಿದ ಪ್ರಸ್ಥಾನತ್ರಯಿ ಸದಾ ಧ್ರುವತಾರೆಯಂತೆ ಕಾರ್ಯ ನಿರ್ವಹಿಸುತ್ತಿದೆ. ಅವರ ಅನಂತರವೂ ಅನೇಕ ಆಚಾರ್ಯರು ಬಂದರು. ಅವರ ಸಿದ್ಧಾಂತಗಳಿಗೆ ತಿದ್ದುಪಡಿ ಮಾಡಬಯಸಿದವರೂ, ಪರಿಷ್ಕರ ಮಾಡಬಯಸಿದವರೂ, ಅವರನ್ನು ವಿರೋಧಿಸುವವರೂ ಬಂದರು. ಆದರೆ ಪ್ರತಿಯೊಬ್ಬರೂ ಪ್ರಸ್ಥಾನತ್ರಯಿಯನ್ನು ಆಶ್ರಯಿಸಬೇಕಾಗಿದೆ. ಅವರೆಲ್ಲರೂ ಪ್ರಸ್ಥಾನತ್ರಯಿಯಿಂದಲೇ ತಮ್ಮ ಅಭಿಪ್ರಾಯವನ್ನು ಪ್ರತಿಪಾದಿಸಿದ್ದಾರೆ. ಆಚಾರ್ಯರು ಆತ್ಮದ ಶ್ರೇಷ್ಠತೆ, ಭಾವನೆಗಳ ಶಾಂತತೆ, ಮಸ್ತಿಷ್ಕದ ದೃಢತೆ ಮತ್ತು ಬುದ್ಧಿಯ ತೀಕ್ಷ್ಣತೆಯಲ್ಲಿ ಅಪ್ರತಿಮರಾಗಿದ್ದರು. ಅವರ ವಿಚಾರಗಳು ಉದಾತ್ತವಾಗಿದ್ದವು, ಅವರ ಪ್ರತಿಭೆ ಸರ್ವತೋನ್ಮುಖಿಯಾಗಿತ್ತು. ಅವರ ತರ್ಕ ಸೂಕ್ಷ್ಮವಾಗಿದ್ದು, ಅವರ ತಾತ್ವಿಕ ದೃಷ್ಟಿಕೋನ ಎಲ್ಲರಿಗೂ ತಿಳಿಯಲು ಯೋಗ್ಯವಾಗಿತ್ತು. ಇದರಲ್ಲಿ ಅವರ ಸರಿಸಮಾನತೆಗೆ ನಿಲ್ಲುವವರು ಯಾರು? ಅವರು ತಾತ್ವಿಕ ಗಾಂಭೀರ್ಯ ಮತ್ತು ಧಾರ್ಮಿಕ ಭಾವುಕತೆಯಲ್ಲಿ ಭಗವಾನ್ ಬುದ್ಧನಿಗಿಂತಲೂಎರಡು ಹೆಜ್ಜೆ ಮುಂದೆಯೇ ಇದ್ದರು. ಅವರ ಜೀವನದ ಆದರ್ಶಗಳು ಸಾಹಸ ಮತ್ತು ಸಾಮರ್ಥ್ಯದಿಂದಕೂಡಿದ್ದವು; ಅದು ಇಡೀ ಸಮಾಜಕ್ಕೆ ಪ್ರಾಣವನ್ನು ಮತ್ತು ಚೈತನ್ಯವನ್ನು ತುಂಬಿತು. ಅವರು ಸಮಾಜದ ವಿಭಿನ್ನ ಮತಗಳು, ತತ್ವಗಳು ಮತ್ತು ಸಂಪ್ರಾದಾಯಗಳ ಮೂಲಭೂತ ಏಕತೆಯನ್ನು ತರ್ಕ–ಶುದ್ಧವಾಗಿ ಮತ್ತು ಆಕರ್ಷಕವಾಗಿ ಇಟ್ಟರು. ಅವುಗಳ ಮುಖಾಂತರ ರಾಷ್ಟ್ರದ ಸಮಸ್ಯೆಗಳನ್ನು ಸಮದೃಷ್ಟಿಯಿಂದ ಬಗೆಹರಿಸಿದರು. ಅವರು ತಮ್ಮ ಟೀಕೆ–ಟಿಪ್ಪಣಿಗಳಿಂದ ಪ್ರಾಚೀನ ವಾಙ್ಮಯದ ಸ್ವರೂಪವನ್ನು ವ್ಯಕ್ತಗೊಳಿಸಿದರು. ಇದರಿಂದಾಗಿ



ತತ್ಕಾಲೀನ ಸಮಸ್ತ ವಿಚಾರಗಳ ಏಕತೆ ನಾಶವಾಗಿ, ಪ್ರಗತಿವಾದದ–ವಿಚಾರಗಳ ಪ್ರಶ್ನೆಗಳಿಗೆ ಉತ್ತರ ಸಿಕ್ಕಿತು. ಆಚಾರ್ಯರ ವ್ಯಾಖ್ಯೆಗಳು ಅತ್ಯಂತ ಸರಳವಾಗಿವೆ. ಸರಸವಾಗಿವೆ, ಮತ್ತು ಸುಸ್ಪಷ್ಟವಾಗಿವೆ. ಮೇಲೆ ತಿಳಿಸಿದ ಗುಣಗಳಿಂದಾಗಿ ಅವು ಇಂದಿಗೂ ಜಗತ್ತಿನ ತತ್ವಜ್ಞಾನಿಗಳಿಗೆ ಕಿರೀಟಪ್ರಾಯವಾಗಿವೆ.

ಭಾರತೀಯ ರಾಷ್ಟ್ರ–ಜೀವನದಲ್ಲಿ ಭಗವಾನ್ ಶ್ರೀಕೃಷ್ಣನ ಅನಂತರ ಆಚಾರ್ಯರ ಆವಿರ್ಭಾವ ರಾಷ್ಟ್ರದ ಮೂಲಭೂತ ಏಕತೆಗೆ ವ್ಯಾವಹಾರಿಕ ಸ್ವರೂಪವನ್ನು ಕೊಡುವಲ್ಲಿ ಸಮರ್ಥವಾಯಿತು. ಭಗವಾನ್ ಶ್ರೀಕೃಷ್ಣ ಗೀತೆಯ ಮೂಲಕ ವಿಭಿನ್ನ ವಿಚಾರಧಾರೆಗಳಲ್ಲಿ ಅಭಿನ್ನತೆ, ಸಮಾನತೆಯನ್ನು ತರುವಲ್ಲಿ ಪ್ರಯತ್ನಿಸಿದ ಹಾಗೂ ರಾಷ್ಟ್ರದ ಈ ಅಭಿನ್ನತೆಯನ್ನು ಧರ್ಮರಾಜ ಯುಧಿಷ್ಠಿರನ ಚತುಸ್ಸಾಗರಪರ್ಯಂತ ಸಾಮ್ರಾಜ್ಯದ ರೂಪದಲ್ಲಿ ಸ್ಥಾಪಿಸಿದ. ಆಚಾರ್ಯ ಶಂಕರರು ಧರ್ಮರಾಜನಂತೆ ಯಾವುದೇ ರಾಜಕೀಯ ಮಹಾಪುರುಷನನ್ನು ಭಾರತೀಯ ಏಕತೆಯ ಪ್ರತೀಕವಾಗಿ ರೂಪಿಸದಿದ್ದಾಗ್ಯೂ, ರಾಷ್ಟ್ರ–ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಏಕತೆಯನ್ನು ನಿರ್ಮಿಸಿ ಹಾಗೂ ಆ ಏಕತೆಯ ಸಂಸ್ಕಾರಗಳನ್ನು ಹಾಕುವ ಪರಂಪರೆಯನ್ನು ಪುಷ್ಟೀಕರಿಸಿ ಸಾಂಸ್ಕೃತಿಕ ಜೀವನದ ಅಭಿನ್ನತೆಗೆ ಶಕ್ತಿಕೊಟ್ಟರು. ಅದರಿಂದಾಗಿ ಇದುವರೆಗೆ ಛಿದ್ರ–ವಿಚ್ಛಿನ್ನವಾಗಿದ್ದಾಗ್ಯೂ, ಭಾರತ ಆಂತರಿಕ ಏಕತೆಯನ್ನು ವಾಸ್ತವಿಕತೆಯಾಗಿ ಮಾರ್ಪಾಟುಮಾಡಲು ಹಂಬಲಿಸಿದೆ. ಅನೇಕತೆಯಲ್ಲಿ ಏಕತೆ–ನಮ್ಮ ಈ ಪುರಾತನ ಸಿದ್ಧಾಂತವನ್ನು ಆಚಾರ್ಯ ಶಂಕರರೇ ಆತ್ಮಿಕ, ಭೌತಿಕ, ನೈತಿಕ, ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ತಂದು ತಮ್ಮ ಅದ್ವೈತದ ಸಿದ್ಧಾಂತಗಳನ್ನು ಪ್ರತಿಪಾದಿಸಿ, ಅವುಗಳನ್ನು ವ್ಯಾವಹಾರಿಕ ಜಗತ್ತಿಗೆ ತಂದರು. ಈ ಸಿದ್ಧಾಂತವೇ ಮಾನವನ ಶಾಂತಿ ಮತ್ತು ಕಲ್ಯಾಣಕ್ಕೆ ಕಾರಣವಾಗಿದೆ.

ಆಚಾರ್ಯ ಶಂಕರರ ಸಿದ್ಧಾಂತಗಳು ಮತ್ತು ಪ್ರಯತ್ನಗಳಿಂದಾಗಿ ಭಾರತದೇಶ ಒಂದೆಡೆ ಸಂಪ್ರದಾಯವಾದಿ ಕರ್ಮಕಾಂಡದ ಹಾಗೂ ಇನ್ನೊಂದೆಡೆ ನಾಸ್ತಿಕವಾದಿ ಜಡವಾದದ ಸುಳಿಯಲ್ಲಿ ಬೀಳುವುದರಿಂದ ತಪ್ಪಿಸಿಕೊಂಡಿತು. ಆಚಾರ್ಯ ಶಂಕರರು ಭಾರತದೇಶವನ್ನು ಉದ್ಧಾರಮಾಡಿದರು. ನಾವೂ ನಮ್ಮ ಈ ಮಹಾನ್ ರಾಷ್ಟ್ರ–ಪುರುಷನಿಗೆ ಬಗ್ಗೆ ಇದಕ್ಕಿಂತಲೂ ಉತ್ತಮವಾದ ಇನ್ಯಾವ ಶ್ರದ್ಧಾಂಜಲಿಯನ್ನು ಅರ್ಪಿಸಲು ಸಾಧ್ಯ? ಅವರ ಈ ಏಕತೆಯ ಸಿದ್ಧಾಂತವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮತ್ತೆ ಭಾರತದೇಶವನ್ನು ಅಭ್ಯುದಯಗೊಳಿಸಬೇಕು, ವೈಭವಗೊಳಿಸಬೇಕು, ಇದೇ ನಾವು ಅವರಿಗೆ ಅರ್ಪಿಸುವ ಶ್ರದ್ಧಾಂಜಲಿ. ಆಚಾರ್ಯ ಶಂಕರರ ಅಖಂಡ ಕರ್ಮಮಯ ಜೀವನದಿಂದ ನಮ್ಮ ಜೀವನಕ್ಕೂ ಕರ್ಮದ ಸ್ಫೂರ್ತಿ ದೊರೆಯಬೇಕು, ನಮ್ಮ ಪುರುಷಾರ್ಥ, ದೃಢನಿಷ್ಠೆ ಮತ್ತು ತ್ಯಾಗದ ಬಲದಿಂದ ಅದ್ವೈತದ ಸತ್ಯ ಸಿದ್ಧಾಂತಗಳ ಮೂಲಕ ಇಡೀ ಜಗತ್ತಿಗೆ ವಾಸ್ತವಿಕ

ಶಾಂತಿಯ ಸುಖ ಕೊಟ್ಟು ಅವರನ್ನು ಜಗದ್ಗುರುಗಳ ವಾಸ್ತವಿಕ ಸ್ಥಾನದಲ್ಲಿ ಕೂರಿಸಬೇಕು. ಇದೇ ಅವರಿಗೆ ನಮ್ಮ ಪುಣ್ಯಸ್ಮರಣೆ ಹಾಗೂ ಅವರಿಗೆ ನಾವು ಮಾಡುವ ವಾಸ್ತವಿಕ ಪೂಜೆ ಮತ್ತು ಅರ್ಚನೆಯಾಗಿದೆ.

* * * *

# ೨. ಯವನ ವಿಜೇತ ಚಂದ್ರಗುಪ್ತ

ಅನು : **ಶ್ರೀ ಶಿವರಾಮ್**

BLANK PAGE

## ಪೂರ್ವಪರಿಚಯ

ಪರಮಪಾವನ ಭರತಭೂಮಿಯ ಐತಿಹಾಸಿಕ ಪರಂಪರೆ ಬಹು ಹಿರಿದು. ಅದರಲ್ಲಿ ಅನೇಕ ಸೋಲು ಗೆಲುವುಗಳ, ಏಳುಬೀಳುಗಳ ಕಾಲ ಖಂಡಗಳಿವೆ. ಆದರೂ, ಉನ್ನತಿಯಿರಲಿ, ಅವನತಿಯಿರಲಿ, ಅದರ ರಾಷ್ಟ್ರೀಯ ಚೈತನ್ಯಕ್ಕೆ ಕುಂದು ಬಂದಿಲ್ಲ; ಪ್ರಗತಿಯೇ ಇರಲಿ, ಪರಾಗತಿಯೇ ಇರಲಿ, ಅದರ ಆತ್ಮಶಕ್ತಿ ದೃಢಗೊಳ್ಳುತ್ತಲೇ ಬಂದಿದೆ. ಸೋಲೊದಗಿದಾಗ ಅದು ಕಾಲಚಕ್ರದ ದಿಕ್ಕನ್ನೇ ತಿರುಗಿಸುವಂಥ ಕರ್ಮಠ ವೀರರಿಗೆ ಜನ್ಮವಿತ್ತಿದೆ. ಅವರು ತಮ್ಮ ಮನೋಬಲ, ಸ್ವಾಭಿಮಾನ ಮತ್ತು ನೀತಿನಿಪುಣತೆಯಿಂದ ರಾಷ್ಟ್ರೀಯ ಆತ್ಮದ ಸುಪ್ತಶಕ್ತಿಯನ್ನು ಎಚ್ಚರಿಸಿದ್ದಾರೆ. ಈ ಶಕ್ತಿಯು ಅನ್ಯಾಯ, ಅತ್ಯಾಚಾರಗಳ ಭೀಷಣ ಬಿರುಗಾಳಿಯಲ್ಲೂ ಕದಲಲಿಲ್ಲ; ಅದರ ಪ್ರಶಾಂತ ಮುಖಮುದ್ರೆ ಬದಲಾಗಲಿಲ್ಲ. ಅಗಸ್ತ್ಯನಂತೆ ಅಪಾರ ಕಷ್ಟಸಂಕಟಗಳ ವಿಂಧ್ಯ ಗಿರಿಯನ್ನೇ ಮೆಟ್ಟಿ ಅದು ಪಾರಾಗಿ ಬಂದಿತು; ಮಹಾಸಾಗರದ ಅಸೀಮ ಉದ್ದಂಡ ಶಕ್ತಿಯನ್ನೂ ಮೂರೇ ಮೂರು ಗುಟುಕಿನಲ್ಲಿ ಕುಡಿದು ಮುಗಿಸಿತು. ಅದೇ ರೀತಿ, ವೈಭವದಿಂದ ಮೆರೆದ ಶಾಂತಿಸಮಯದಲ್ಲಿ ಋಷಿ ಮುನಿಗಳು, ಜ್ಞಾನಿಗಳು ಹುಟ್ಟಿಬಂದರು; ಆತ್ಮದ ದೈವೀಶಕ್ತಿಯ ಅನುಭೂತಿ ಪಡೆದು ಮಾನವಹಿತಕ್ಕಾಗಿ ಸತ್ಯಸಿದ್ಧಾಂತಗಳನ್ನು ಮಂಡಿಸಿದರು. ಇಂತಹದೇ ಒಂದು ಕಾಲಾವಧಿ ೨೪೦೦ ವರ್ಷಗಳ ಹಿಂದೆ ಆಗಿಹೋಯಿತು. ಆಗ ಚಂದ್ರಗುಪ್ತ ಮತ್ತು ಚಾಣಕ್ಯರು ಒಗ್ಗೂಡಿ ನಡೆಸಿದ ಪ್ರಯತ್ನಗಳಿಂದ ಸಮಾಜದ ರಚನಾತ್ಮಕ ಶಕ್ತಿ ಎಚ್ಚೆತ್ತಿತು. ಅದರಿಂದ ಅಲಿಕಸುಂದರ ಅಲೆಕ್ಸಾಂಡರ್‌ನನ್ನು ಭಾರತದಿಂದ ಹೊರಗಟ್ಟಿದುದಷ್ಟೇ ಅಲ್ಲ, ಒಂದು ವಿಶಾಲ ಸಾಮ್ರಾಜ್ಯವನ್ನೇ ಅವರು ಕಟ್ಟಲು ಸಮರ್ಥರಾದರು.

ಚಂದ್ರಗುಪ್ತ ಮತ್ತು ಚಾಣಕ್ಯರು ತಮ್ಮ ಮನಸ್ಸಿನಲ್ಲಿ ಒಂದು ಭವ್ಯ ಸಾಮ್ರಾಜ್ಯದ ಕನಸನ್ನು ಕಂಡು ಹೊರಟಿದ್ದರು. ಅದನ್ನು ಇಬ್ಬರೂ ಸೇರಿ ಪೂರ್ಣಗೊಳಿಸಿದರು. ಒಬ್ಬನು ತನ್ನ ಅಜೇಯ ಬಾಹುಬಲದಿಂದಲೂ, ಮತ್ತೊಬ್ಬನು ತನ್ನ ಪ್ರಚಂಡ ಬುದ್ಧಿಬಲದಿಂದಲೂ ಅದನ್ನು ನನಸುಮಾಡಿ ತೋರಿಸಿದರು. ಅಲಿಕಸುಂದರನ ಆಕ್ರಮಣಕ್ಕೆ ಭಾರತದಲ್ಲಿ ಹೆಜ್ಜೆಹೆಜ್ಜೆಗೂ ಹೊಡೆತ ಬಿತ್ತು. ಅಜೇಯನೆನೆಸಿಕೊಂಡಿದ್ದ

ಪಶ್ಚಿಮದ ಆ ವೀರ ಸೋತು ಹಿಂದೋಡಬೇಕಾಯಿತು. ಅಷ್ಟರಮಟ್ಟಿಗೆ ದೇಶ ಸೈನಿಕವಾಗಿ ಸಮರ್ಥವಾಗಿತ್ತು. ಆದರೂ ಆಗ ಭಾರತವು ಪೂರ್ತಿ ಶಕ್ತಿಯುತವಾಗಿತ್ತೆಂದು ಹೇಳುವ ಸ್ಥಿತಿಯಲ್ಲಿರಲಿಲ್ಲ. ಸಮಾಜವು ಒಗ್ಗಟ್ಟಿಲ್ಲದೆ, ಹರಿದುಹಂಚಿ ಹೋಗಿ ವೈಯಕ್ತಿಕ ಸ್ವಾರ್ಥದಲ್ಲಿ ಮುಳುಗಿತ್ತು. ಚಂದ್ರಗುಪ್ತ ಚಾಣಕ್ಯರು ದೇಶದ ನಾಡಿ ಹಿಡಿದು ನೋಡಬಲ್ಲ ಕುಶಲ ವೈದ್ಯರಾಗಿದ್ದರು. ಅವರು ಈ ಅವಲಕ್ಷಣಗಳಿಂದ ದೇಶದ ಬಲ ದಿನದಿನಕ್ಕೂ ಕ್ಷೀಣಿಸುತ್ತಿರುವುದನ್ನು ಗುರುತಿಸಿದರು. ದೇಶಹಿತದಲ್ಲೇ ತಮ್ಮ ಹಿತವನ್ನು ಕಾಣುವಷ್ಟು ಅವರ ಬಾಳು ರಾಷ್ಟ್ರಜೀವನದಲ್ಲಿ ಲೀನವಾಗಿದ್ದುದರಿಂದ, ಭಾರತದ ನಿಷ್ಕ್ರಿಯ ನೋವು ಅವರಿಗೂ ಇರಿಯಿತು. ಪರ್ವತಕ ರಾಜನೇನೋ ತನ್ನ ಪ್ರಚಂಡ ಸೇನಾಸಾಮರ್ಥ್ಯದಿಂದ ಅಲಿಕಸುಂದರನನ್ನು ಹಣ್ಣುಮಾಡಿ ಅವನು ಸ್ನೇಹದ ಭಿಕ್ಷೆಗೆ ಕೈಚಾಚುವಂತೆ ಮಾಡಿದ್ದ. ಅಲ್ಲದೆ, ಮಗಧದ ಅಗಾಧ ಸೈನ್ಯದ ಕೆಚ್ಚು ಕಲಿತನಗಳ ಕಥೆ ಕೇಳಿಯೇ ಅಲಿಕಸುಂದರನ ಸೇನೆ ಎದೆಗೆಟ್ಟು ಹೆಜ್ಜೆ ಹಿಂದಿಟ್ಟಿತ್ತು. ಆದರೆ, ರಾಷ್ಟ್ರೀಯ ದೃಷ್ಟಿಯಿಂದ ಇವೆರಡೂ ರಾಜ್ಯಗಳು ತೀರ ಪೊಳ್ಳಾದುದನ್ನು ಚಂದ್ರಗುಪ್ತ–ಚಾಣಕ್ಯರು ಅರಿತಿದ್ದರು. ಅಂತೆಯೇ ಅವರು ಭಾರತದ ದುರ್ಬಲತೆಯನ್ನು ತೊಡೆದು ಹಾಕಿ, ಶಕ್ತಿಶಾಲಿ ರಾಷ್ಟ್ರ ಕಟ್ಟುವ ಸಂಕಲ್ಪ ತೊಟ್ಟರು. ಭಾರತದೊಳಗಿನ ಸಣ್ಣಪುಟ್ಟ ರಾಜ್ಯಗಳೆಲ್ಲವನ್ನೂ ಒಂದುಗೂಡಿಸುವುದಲ್ಲದೆ, ಶತ್ರುಗಳನ್ನು ಗಡಿಯಿಂದಾಚೆಗೆ ಆದಷ್ಟು ಹೆಚ್ಚು ದೂರದಲ್ಲಿಡಲು ಗಾಂಧಾರ (ಅಫಘಾನೀಸ್ತಾನ್), ಪಾರಸ್ (ಪರ್ಶಿಯಾ), ತುರ್ಕೀಸ್ತಾನ, ಕುಸ್ತಾನ್ (ಖೋತಾನ್) ಇತ್ಯಾದಿಗಳನ್ನು ವಶಪಡಿಸಿಕೊಳ್ಳುವುದು ಭಾರತವನ್ನು ವೈಭವಶಿಖರಕ್ಕೆ ಒಯ್ಯುವ ಶಕ್ತಿಸೋಪಾನದ ಮೊದಲ ಮಜಲಾಗಿತ್ತು. ವಿಜಯದನಂತರ, ಕೈಸೇರಿದ ಸಾಮ್ರಾಜ್ಯದೊಳಗೆ ಶಾಂತಿ ಸುವ್ಯವಸ್ಥೆಗಳನ್ನು ಸ್ಥಾಪಿಸುವುದು ಅದರ ಮುಂದಿನ ಮೆಟ್ಟಿಲಾಗಿತ್ತು.

ಚಂದ್ರಗುಪ್ತನ ಸಾಮ್ರಾಜ್ಯದಲ್ಲಿ ವಿದೇಶಿ ಯವನರು ಸಹ ಮುಕ್ತಕಂಠದಿಂದ ಹೊಗಳುವಷ್ಟು ಸುಸಜ್ಜಿತ, ಸಮರ್ಥ್ಯ ಮತ್ತು ದಕ್ಷ ಆಡಳಿತ ಯಂತ್ರವಿದ್ದಿತು. ಅವನ ಆಳ್ವಿಕೆಯಲ್ಲಿ ನೆಲಸಿದ್ದ ಶಾಂತಿ, ಸಮೃದ್ಧಿ, ವ್ಯವಸ್ಥೆಗಳನ್ನು ಕುರಿತು ಸೆಲ್ಯೂಕಸನ ರಾಯಭಾರಿಯಾಗಿದ್ದ ಮೆಗಾಸ್ತನೀಸನು ಸುಂದರವಾಗಿ ವಿವರಿಸಿದ್ದಾನೆ. ಅದರಲ್ಲಿ ಸ್ವಲ್ಪ ಭಾಗ ಮಾತ್ರ ಕೈಗೆ ಸಿಕ್ಕಿದೆ. ಅದೇ ನಮಗೆ ಈಗಿರುವ ಆಧಾರ. ಇನ್ನು ನಿಜಕ್ಕೂ ಆ ಸಾಮ್ರಾಜ್ಯ ಅದೆಷ್ಟು ವೈಭವಪೂರ್ಣವಾಗಿತ್ತೆಂಬುದನ್ನು ನಾವೇ ಕಲ್ಪಿಸಿಕೊಳ್ಳಬೇಕು.

ಪಾಟಲಿಪುತ್ರ ಚಂದ್ರಗುಪ್ತಮೌರ್ಯನ ರಾಜಧಾನಿ. ಗಂಗಾತೀರದಲ್ಲಿ ಹದಿನೈದು ಮೈಲಿಗಳ ದೂರ ಹಬ್ಬಿದ್ದ ನಗರ ಅದು. ರಾಜಧಾನಿಯ ವಿಶಾಲತೆ, ಸ್ವಚ್ಛತೆ, ಸಿರಿ ಸಮೃದ್ಧಿಗಳಿಂದಲೇ ಇಡೀ ಸಾಮ್ರಾಜ್ಯದ ವೈಭವವನ್ನು ಅಂದಾಜು ಮಾಡಬಹುದು.



ಪಾಟಲಿಪುತ್ರದಲ್ಲಿ ೪೫೦ ರತ್ನಖಚಿತ ಮಹಲು–ಮಂದಿರಗಳಿದ್ದವು. ಅಂದಮೇಲೆ ಪ್ರತ್ಯಕ್ಷ ಚಕ್ರವರ್ತಿಯ ಅರಮನೆಯ ಸೊಬಗು ಹಾಗೂ ರತ್ನಭಂಡಾರದ ಸಂಪತ್ತಿನ ಬಗ್ಗೆ ಹೇಳುವುದೇನಿದೆ! ಪೇಟೆಬೀದಿಗಳ ಸ್ವಚ್ಛತೆ, ಅಂಗಡಿಮುಂಗಟ್ಟುಗಳ ಅಚ್ಚುಕಟ್ಟು ಮನಸೆಳೆಯುವಂತಿತ್ತು. ಸಣ್ಣಪುಟ್ಟ ಗಲ್ಲಿಗಳನ್ನೂ ನಿರ್ಮಲವಾಗಿಡುವ ಏರ್ಪಾಡಿತ್ತು. ಅದು ಜಗತ್ತಿನ ಆಗಿನ ಪ್ರಮುಖ ನಗರಗಳಲ್ಲೊಂದಾಗಿತ್ತು. ದೂರದೇಶಗಳ ವರ್ತಕರು ಅಲ್ಲಿಗೆ ವ್ಯಾಪಾರಕ್ಕಾಗಿ ಬರುತ್ತಿದ್ದರಲ್ಲದೆ, ಜಗತ್ತಿನ ಎಲ್ಲ ರಾಷ್ಟ್ರಗಳ ರಾಜದೂತರೂ ಚಂದ್ರಗುಪ್ತನ ಆಸ್ಥಾನದಲ್ಲಿರುತ್ತಿದ್ದರು.

ಆಡಳಿತದ ಉತ್ತಮ ವ್ಯವಸ್ಥೆಯ ದೃಷ್ಟಿಯಿಂದ ಸಮ್ರಾಟನು ತನ್ನ ವಿಶಾಲ ಸಾಮ್ರಾಜ್ಯವನ್ನು ಐದು ಭಾಗಗಳಾಗಿ ವಿಂಗಡಿಸಿದ್ದನು. ಪೂರ್ವ ಭಾಗದ ಆಡಳಿತಕ್ಕೆ ರಾಜಧಾನಿಯಾದ ಪಾಟಲಿಪುತ್ರವೇ ಕೇಂದ್ರವಾಗಿತ್ತು. ಉತ್ತರದಲ್ಲಿ ತಕ್ಷಶಿಲೆ ಮತ್ತು ಕೌಶಾಂಬಿ, ಮಧ್ಯಭಾರತದಲ್ಲಿ ಉಜ್ಜಯನಿ ಹಾಗೂ ದಕ್ಷಿಣದಲ್ಲಿ ಮಹಿಶೂರು ಶಾಸನ ಪ್ರತಿನಿಧಿಗಳ ಕೇಂದ್ರಗಳಾಗಿದ್ದವು. ಕೇಂದ್ರದಲ್ಲಿ ಹಾಗೂ ಪ್ರತಿಯೊಂದು ಪ್ರಾಂತದಲ್ಲೂ ಮಂತ್ರಿಮಂಡಲಗಳ ಮೂಲಕ ಆಡಳಿತ ಜರುಗುತ್ತಿತ್ತು. ಸ್ವತಃ ಸಮ್ರಾಟನೇ ಆಗಾಗ ಸಾಮ್ರಾಜ್ಯದುದ್ದಗಲಕ್ಕೂ ಸಂಚಾರ ಕೈಗೊಳ್ಳುತ್ತಿದ್ದ. ದೇಶದ ಎಲ್ಲ ಕಡೆಗಳಲ್ಲೂ ಗ್ರಾಮ ಪಂಚಾಯತುಗಳು ಸ್ಥಾನೀಯ ಆಡಳಿತದ ಹೊಣೆ ಹೊತ್ತಿದ್ದವು. ನಗರಗಳಲ್ಲಿ ಇಂದಿನ ರೀತಿಯಲ್ಲೇ ಪುರಸಭೆಗಳ ಮೇಲ್ವಿಚಾರಣೆಯಿತ್ತು. ರಸ್ತೆಯ ಮೇಲೆ ಸ್ವಲ್ಪ ಕೊಳಕು ನೀರು ಚೆಲ್ಲಿದರೂ ಸಾಕು, ಅಂಥವರಿಗೆ ಕೂಡಲೇ ದಂಡ ವಿಧಿಸುತ್ತಿದ್ದರು. ಸ್ವಚ್ಛತೆಯು ಕಡೆಗೆ ಅಷ್ಟೊಂದು ಕಟಾಕ್ಷವಿತ್ತು. ಮನೆಗಳನ್ನು ಪೂರ್ವಯೋಜನೆಯಂತೆಯೇ ಕಟ್ಟುತ್ತಿದ್ದರಲ್ಲದೆ, ಅದಕ್ಕೆ ಮೊದಲು ಆರೋಗ್ಯಾಧಿಕಾರಿಯಿಂದ ಅನುಮತಿ ಪಡೆಯಲೇಬೇಕಾಗಿತ್ತು. ಈಗಿನ ಭಾರಿ ಭಾರಿ ಪಟ್ಟಣಗಳಂತೆ ಪಾಟಲಿಪುತ್ರವು ಅಸ್ತವ್ಯಸ್ತವಾಗಿರಲಿಲ್ಲ.

ಭಾರತದ ಅನೇಕ ಹೆದ್ದಾರಿಗಳು ಆದುದು ಮೌರ್ಯರ ಕಾಲದಲ್ಲಿ. ಅವುಗಳ ಇಬ್ಬದಿಗಳಲ್ಲೂ ನೆರಳಿಗಾಗಿ ಸಾಲುಮರಗಳನ್ನು ಬೆಳೆಸಿದ್ದರು. ಮಾರ್ಗದ ನಡುನಡುವೆ ಯಾತ್ರಿಕರು ತಂಗಲು ಧರ್ಮಶಾಲೆಗಳೂ, ಬಾವಿಗಳೂ ಇದ್ದವು. ಭಾರತದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ವರ್ತಕರು ನಿರಾತಂಕವಾಗಿ ತಮ್ಮ ಸರಕುಗಳನ್ನು ಸಾಗಿಸುತ್ತಿದ್ದರು. ಲೂಟಿ, ಕಳವು, ಸುಲಿಗೆ ಹೇಳಹೆಸರಿಲ್ಲದಂತಾಗಿದ್ದವು. ಊರುಗಳಲ್ಲಿನ ಜನ ಮನೆಗೆ ಬೀಗವನ್ನೇ ಹಾಕುತ್ತಿರಲಿಲ್ಲ. ಒಂದುವೇಳೆ ಕಳುವಾದರೂ ರಾಜಭಟರು ಕೂಡಲೇ ಪತ್ತೆ ಹಚ್ಚುತ್ತಿದ್ದರು. ಅವರಿಗೂ ಸುಳಿವು ಸಿಕ್ಕದಿದ್ದಲ್ಲಿ, ರಾಜ್ಯಕೋಶದಿಂದ ಪ್ರಜೆಯ ಹಾನಿಯನ್ನು ತುಂಬಲಾಗುತ್ತಿತ್ತು. ನಿಜಸಂಗತಿಯೆಂದರೆ, ಸರ್ವ ಬಗೆಯ ಸುವ್ಯವಸ್ಥೆ ಹಾಗೂ ಜೀವನಾನುಕೂಲತೆಗಳಿರುವಲ್ಲಿ ಜನಹಿತಕ್ಕೆ

ವಿರುದ್ಧವಾದ, ಅಲ್ಲಸಲ್ಲದ ಹೀನಕೃತ್ಯಗಳಿಗೆ ಯಾರು ತಾನೆ ಕೈಹಾಕುತ್ತಾರೆ?

ಯೋಗ್ಯ ನ್ಯಾಯದಾನದ ಪದ್ಧತಿಯೂ ಆ ರಾಜ್ಯದಲ್ಲಿತ್ತು. ನ್ಯಾಯಾಂಗ ಹಾಗೂ ಶಾಸಕಾಂಗಗಳಿಗೆ ಬೇರೆಬೇರೆಯೇ ಅಧಿಕಾರಿಗಳಿದ್ದರು. ನ್ಯಾಯದೆದುರಿನಲ್ಲಿ ಎಲ್ಲರೂ ಸರಿಸಮಾನರೇ! ಅಪರಾಧಿಯಾದವನು ರಾಜಪುತ್ರನೇ ಆಗಿದ್ದರೂ ಶಿಕ್ಷೆ ತಪ್ಪುತ್ತಿರಲಿಲ್ಲ. ಸಮಾಜಘಾತುಕ ಕೃತ್ಯ ನಡೆಸಿದವರು ಅತ್ಯುಗ್ರ ಶಿಕ್ಷೆಗೆ ಗುರಿಯಾಗುತ್ತಿದ್ದರು. ಸ್ವತಃ ಸಮ್ರಾಟ ಚಂದ್ರಗುಪ್ತನೇ ನ್ಯಾಯತೀರ್ಮಾನಕ್ಕೆ ಕೂರುತ್ತಿದ್ದನು. ಆದ್ದರಿಂದ ನ್ಯಾಯಗಳಿಕೆಗಾಗಿ ಯಾವ ಪ್ರಜೆಯಾದರೂ ಸಮ್ರಾಟನತನಕ ಹೋಗಬಹುದಾಗಿತ್ತು.

ಜ್ಞಾನ ಹಾಗೂ ವಿದ್ಯಾಪ್ರಸಾರದ ಕಡೆಗೂ ಚಂದ್ರಗುಪ್ತನು ವಿಶೇಷ ಗಮನವಿತ್ತಿದ್ದನು. ಲೋಕಪ್ರಸಿದ್ಧ ತಕ್ಷಶಿಲಾ ಮತ್ತು ನಾಲಂದಾ ವಿಶ್ವವಿದ್ಯಾಲಯಗಳಂತೂ ಎಲ್ಲರಿಗೂ ಗೊತ್ತಿರುವ ವಿಷಯ. ಜತೆಗೆ ಜನಹಿತ ಹಾಗೂ ರಾಷ್ಟ್ರಹಿತದ ಸಮಸ್ಯೆಗಳನ್ನು ಪರಿಹರಿಸಲು ಊರೂರಿನಲ್ಲಿಯೂ ಪರಿಷತ್ತುಗಳಿದ್ದವು. ಅವುಗಳಲ್ಲಿ ವಿದ್ವಾಂಸರಿಗೆ ಯೋಗ್ಯ ಪುರಸ್ಕಾರ ದೊರೆಯುತ್ತಿತ್ತು. ಸಮಾಜದಲ್ಲಿನ ಸಮಷ್ಟಿ ಜೀವನದ ಭಾವನೆಯೇ ರಾಷ್ಟ್ರಜೀವನದ ಮೂಲಾಧಾರವೆಂಬುದನ್ನು ರಾಜನು ಮನಗಂಡಿದ್ದನು. ಅದಕ್ಕಾಗಿ ಬಗೆಬಗೆಯ ಪ್ರಚಾರಸಾಧನಗಳನ್ನು ಬಳಸುತ್ತಿದ್ದರಲ್ಲದೆ, ಕೆಲವು ಮಹತ್ವದ ಸಂಗತಿಗಳ ಬಗ್ಗೆ ಸರಕಾರವೇ ಕಾನೂನುಗಳನ್ನು ರಚಿಸಿತ್ತು. ಊರಲ್ಲಿ ಒಂದು ಮನೆಗೆ ಬೆಂಕಿ ತಗುಲಿದರೆ, ಅದನ್ನು ಆರಿಸಲು ನೆರವಾಗುವುದು ಊರೊಟ್ಟಿನ ಕರ್ತವ್ಯಗಳಲ್ಲಿ ಒಂದು. ಅದನ್ನು ಕಡೆಗಣಿಸಿದವರನ್ನು ಸರಕಾರ ಕಠಿಣವಾಗಿ ಶಿಕ್ಷಿಸುತ್ತಿತ್ತು. ಕೆರೆ ಕಟ್ಟುವ ಅಥವಾ ಕಾಲುವೆ ತೋಡುವ ಸಾರ್ವಜನಿಕ ಉಪಯೋಗದ ಕಾರ್ಯಗಳಲ್ಲಿ ಎಲ್ಲರೂ ಬಂದು ದುಡಿಯಲೇ ಬೇಕಾಗುತ್ತಿತ್ತು. ಜನರು ತಮ್ಮೊಬ್ಬರ ಹಿತಕ್ಕಿಂತ ಸಮಾಜದ ಹಿತವೇ ದೊಡ್ಡದೆಂದು ಭಾವಿಸುತ್ತಿದ್ದರು. ಅವರಿಗೆ ಅದೇ ರೀತಿಯ ಶಿಕ್ಷಣ–ಸಂಸ್ಕಾರವೂ ಚಿಕ್ಕಂದಿನಿಂದಲೇ ದೊರೆಯುತ್ತಿತ್ತು.

ಚಂದ್ರಗುಪ್ತನ ಆಡಳಿತ ವ್ಯವಸ್ಥೆಯು ಏನೊಂದೂ ಕುಂದುಕೊರತೆಗಳಿಲ್ಲದೆ ಆದರ್ಶವಾಗಿತ್ತು. ಅದರಿಂದಾಗಿಯೇ ಪಾಶ್ಚಾತ್ಯ ವಿದ್ವಾಂಸರೂ ಸಹ ಅದನ್ನು ಬಾಯ್ತುಂಬ ಹೊಗಳದೆ ವಿಧಿಯಿಲ್ಲವಾಗಿದೆ. ಒಳ್ಳೆಯದೇನೇ ಇದ್ದರೂ, ಅದೆಲ್ಲ ಯೂರೋಪಿನಿಂದಲೇ ಬಂದಿರಬೇಕೆಂದುಕೊಳ್ಳುವವರಂತೂ ಇಪ್ಪತ್ತನಾಲ್ಕು ಶತಮಾನಗಳ ಹಿಂದೆಯೇ ಮೌರ್ಯರ ಆಡಳಿತವು ಅಷ್ಟೊಂದು ಮೇಲ್ಮೆ ಸಾಧಿಸಿದ್ದಾದರೂ ಹೇಗೆಂದು ಬೊಟ್ಟು ಕಚ್ಚುತ್ತಾರೆ. ಇಂದಿನ ವಿಜ್ಞಾನದ ಸಾಧನ ಸೌಲಭ್ಯಗಳೊಂದೂ ಇರದಿದ್ದರೂ, ಚಂದ್ರಗುಪ್ತನು ಅತ್ಯಾಧುನಿಕ ಆಡಳಿತ ಪದ್ಧತಿಯನ್ನು ಜಾರಿಗೆ ತಂದಿದ್ದ. ನಮಗೆ ಇದರ ವಿವರಗಳೆಲ್ಲವೂ ಪೂರ್ತಿಯಾಗಿ ಅರ್ಥವಾಗ



ಬೇಕಾದಲ್ಲಿ, ಚಂದ್ರಗುಪ್ತ ಸಾರ್ವಭೌಮನ ಪ್ರಧಾನಮಂತ್ರಿ, ಸಹಯೋಗಿ ಹಾಗೂ ಗುರುವಾಗಿದ್ದ ವಿಷ್ಣು ಗುಪ್ತ ಕೌಟಿಲ್ಯನ ಅಪೂರ್ವ ಗ್ರಂಥವಾದ 'ಅರ್ಥಶಾಸ್ತ್ರ'ವನ್ನು ಓದಬೇಕು. ರಾಷ್ಟ್ರ ಶಕ್ತಿಶಾಲಿಯಾಗಲು ಬೇಕಾದ ಎಲ್ಲ ಅಂಶಗಳ ವಿವರಣೆ ಅದರಲ್ಲಿದೆ. ಕೇವಲ ತತ್ವಬೋಧಕನೊಬ್ಬನ ಮನೋವಿಲಾಸದ ಕಾಲ್ಪನಿಕ ಸಿದ್ಧಾಂತ ಅದಲ್ಲ. ಸೂಕ್ಷ್ಮಮತಿ ಋಷಿಯು, ಯಥಾರ್ಥವಾದಿ ಚಿಂತಕನ, ಕ್ರಾಂತಿಕಾರಿ ಕರ್ಮಯೋಗಿಯೊಬ್ಬನ ವಿಚಾರಸಾರ ಅದರಲ್ಲಿದೆ. ರಾಷ್ಟ್ರದ ಏಳುಬೀಳುಗಳ ಕಾರಣಗಳನ್ನು ಆಳವಾಗಿ ಚಿಂತಿಸಿ ಸ್ವತಃ ತಾನೇ ಒಂದು ಸಾಮ್ರಾಜ್ಯವನ್ನು ಸೃಜಿಸಿದ ಚಾಣಾಕ್ಷ ತಪಸ್ವಿಯ ಸಫಲ ಪ್ರಯೋಗ ಅದರಲ್ಲಿ ವರ್ಣಿತವಾಗಿದೆ. ವ್ಯವಹಾರದ ಒರೆಗಲ್ಲ ಮೇಲೆ ಯಶಸ್ವಿಯಾದ ಮನೋವಿಜ್ಞಾನದ, ರಾಜಕಾರಣದ, ಅರ್ಥನೀತಿಯ ಸತ್ಯಸಿದ್ಧಾಂತಗಳೇ ಅವು. ಓರ್ವ ವಿಖ್ಯಾತ ವಿದ್ವಾಂಸರ ಅಭಿಪ್ರಾಯದಲ್ಲಿ ಈ ಗ್ರಂಥವು ಕೌಟಿಲ್ಯನು ದೇಶಕ್ಕಿತ್ತ ಅಧಿಕಾರ ಪತ್ರವಾಗಿದೆ; ನಾವು ಬಳಕೆಗೆ ತರಬಲ್ಲ ಮಹಾ ಜ್ಞಾನಭಂಡಾರ ಆಗಿದೆ.

ಒಂದು ರೀತಿಯಲ್ಲಿ ಭರತಮಾತೆ ಸದಾ ಸ್ವರ್ಣದಾತೆಯಂತೂ ಹೌದು. ಆದರೆ ಚಂದ್ರಗುಪ್ತಮೌರ್ಯನ ಕಾಲದ ಶಾಂತಿ, ಸಮೃದ್ಧಿ ಸುವ್ಯವಸ್ಥೆಗಳಿಂದಾಗಿ ಆಕೆ ರತ್ನಧಾತ್ರಿಯೇ ಆದಳು. ನಾಲ್ದೆಸೆಗೂ ಸುಖಸಂಪದದ ರಾಜ್ಯವೇ ಹರಡಿತ್ತು. ಚಂದ್ರಗುಪ್ತ, ಚಾಣಕ್ಯರ ರಾಷ್ಟ್ರೀಯ ಪ್ರಯತ್ನಗಳಿಂದಾಗಿಯೇ ಅಂದು ಭಾರತದಲ್ಲಿ ಅಗಾಧ ಶಕ್ತಿ ಸಂಚಯವಾಯಿತು. ಅದನ್ನು ಅವಲಂಬಿಸಿಯೇ ಮುಂದೆ ಅಶೋಕ ಚಕ್ರವರ್ತಿಯು ರಾಷ್ಟ್ರೀಯತೆಗಿಂತಲೂ ಮುಂದೆ ಹೋಗಿ ವಿಶ್ವಕಲ್ಯಾಣದ ಹಾದಿಯಲ್ಲಿ ಹೆಜ್ಜೆಯಿಡಲು ಸಾಧ್ಯವಾಯಿತು. ಇಂಥ ಪ್ರಚಂಡ ರಾಷ್ಟ್ರಶಕ್ತಿಯನ್ನು ಕಟ್ಟಿದ ಆ ಇಬ್ಬರು ಮಹಾಪುರುಷರಲ್ಲಿ ಒಬ್ಬನ ಕಥೆ ಇದು. ಆ ರಾಷ್ಟ್ರಶಕ್ತಿಯ ಸೂತ್ರಚಾಲಕನಾಗಿ ಜಗತ್ತಿನೆದುರು ಕಂಗೊಳಿಸಿದ ಚಕ್ರಾಧಿಪತಿ ಚಂದ್ರಗುಪ್ತಮೌರ್ಯನ ಪುಣ್ಯಚರಿತ್ರೆ ಇದು.

# ೧. ಮೇಲೆದ್ದ ಹೊಗೆ

ಈಗ ಬರುವ ವರ್ಣನೆ ಇಪ್ಪತ್ತೈದು ಶತಮಾನಗಳ ಹಿಂದಿನದು. ಅಂದಿನಿಂದ ಇಂದಿನವರೆಗೆ ಸೂರ್ಯನ ಸುತ್ತ ನಮ್ಮ ಭೂಮಿ ಎರಡೂವರೆ ಸಾವಿರ ಬಾರಿ ಪ್ರದಕ್ಷಿಣೆ ಹಾಕಿದೆ. ಹಾಗೆಯೇ ಭಾರತದ ಭಾಗ್ಯಚಕ್ರವೂ ಅದೆಷ್ಟು ಬಾರಿ ತಿರುಗಿದೆಯೋ! ಆಗ ಮಹಾಪದ್ಮನಂದರು ಮಗಧವನ್ನಾಳುತ್ತಿದ್ದರು. ಭಾರತ ಸ್ವತಂತ್ರವಾಗಿತ್ತು. ಇಲ್ಲಿನ ವ್ಯಾಪಾರ ಬಹು ಚೆನ್ನಾಗಿ ಬೆಳೆದಿತ್ತು. ದೇಶವಿದೇಶಗಳ ಮಾರುಕಟ್ಟೆಗಳಲ್ಲಿ ಇಲ್ಲಿನ ಸಾಮಗ್ರಿಗಳೇ ತುಂಬಿ ತುಳುಕುತ್ತಿದ್ದವು. ಏನೇ ತಯಾರಿಸಲಿ, ಇಡೀ ಲೋಕದ ಮನಸ್ಸನ್ನು ಸೂರೆಗೊಳ್ಳುವಂಥ ಅದ್ಭುತ ಕಲ್ಪಕತೆ, ಕುಶಲತೆ, ಹಿಂದು ಶಿಲ್ಪಿಗಳಿಗಿತ್ತು. ರಾಜನು ಸಹ ಇಲ್ಲಿನ ಕಲೆಗಾರಿಕೆಗೆ, ವ್ಯಾಪಾರಕ್ಕೆ ಅಪಾರ ಪ್ರೋತ್ಸಾಹ ನೀಡುತ್ತಿದ್ದ. ನೀಡದೆ ಮತ್ತೇನು? ಅದರಿಂದ ಅವನ ದೇಶಕ್ಕೇ, ಅವನ ಪ್ರಜೆಗಳಿಗೇ ಲಾಭವಾಗುತ್ತಿತ್ತು. ಇಷ್ಟೆಲ್ಲ ಬೆಳೆದು ನಿಂತ ವ್ಯಾಪಾರದಿಂದಾಗಿ ದೇಶದ ತುಂಬೆಲ್ಲ ಐಶ್ವರ್ಯವೇ ಐಶ್ವರ್ಯ; ಬೊಕ್ಕಸವೂ ತುಂಬಿ ತುಳುಕುತ್ತಿತ್ತು. ರಾಜ ಭಂಡಾರದಲ್ಲಿ ಮಹಾಪದ್ಮವರಹಗಳಿದ್ದುದ ರಿಂದಲೇ ಅವನಿಗೆ ಮಹಾಪದ್ಮನಂದ ಎಂದು ಹೆಸರಾಯಿತು. ಮಹಾಪದ್ಮ ನಮ್ಮ ಕಲ್ಪನೆಗೂ ಎಟುಕದ ಸಂಖ್ಯೆ! ಅಂದಿನ ಸಂಪತ್ತನ್ನು ಇಂದು ಜಗತ್ತಿನ ಎಲ್ಲ ಜನರಿಗೂ ಹಂಚಿದರೆ, ಪ್ರತಿಯೊಬ್ಬನಿಗೂ ಐವತ್ತುಲಕ್ಷ ರೂಪಾಯಿ ಬರುತ್ತದೆ. ಭಾರತದಲ್ಲಿ ಮಾತ್ರ ಹಂಚಿದ್ದಾದರೆ, ಒಬ್ಬೊಬ್ಬನ ಭಾಗಕ್ಕೂ ಎರಡೂವರೆ ಕೋಟಿ ರೂ! ಓ, ಎಷ್ಟು ಹಣ ಇದ್ದಿರಬೇಕು! ಆಗಿನ ಸ್ವತಂತ್ರ ಹಿಂದುಸ್ಥಾನದ ಜನ ಎಷ್ಟೊಂದು ಸುಖದಿಂದಿದ್ದಿರಬೇಕು! ಇಂದು ಹಿಂದುಸ್ಥಾನದಲ್ಲಿರುವ ಲಕ್ಷಾಧೀಶರನ್ನು ಬೆರಳ ಮೇಲೆ ಎಣಿಸಿಬಿಡಬಹುದು; ಇನ್ನು ಕೋಟ್ಯಾಧೀಶ್ವರ ಮಾತೇಕೆ? ಉಳಿದ ನಮ್ಮಂಥವರ ವಾರ್ಷಿಕ ಆದಾಯ ಎಂದರೆ ಸರಾಸರಿ ಐವತ್ತಾರು ರೂ!

ಮಗಧದ ಆಗಿನ ರಾಜಧಾನಿ ಕುಸುಮಪುರ, ಅದೇ ಈಗಿನ ಪಟ್ನಾ. ಮೊದಲಿನ ಕುಸುಮಪುರ ನಂತರ ಪಾಟಲಿಪುತ್ರ ಎಂದಾಯಿತು. ಅದರ ಅಪಭ್ರಂಶವೇ ಪಟ್ನಾ. ಆಗಿನದು ನಿಜಕ್ಕೂ ಕುಸುಮಪುರವೇ ಆಗಿತ್ತು. ಹೂವಿನ ಸುಗಂಧಕ್ಕೆ ದುಂಬಿ ಮನಸೋಲುತ್ತದೆ; ಅದರ ಸುತ್ತ ಸುತ್ತುತ್ತದೆ; ಅದರ ಯಶೋಗಾನ ಆಲಾಪಿಸಿ, ಗೌರವಗೀತೆ ಹಾಡುತ್ತದೆ; ಕಡೆಗದರ ಮಧು ಸವಿದು ಸಂತೃಪ್ತಿಗೊಳ್ಳುತ್ತದೆ. ಹಾಗೆಯೇ



ಕುಸುಮಪುರದ ವೈಭವ ಹಾಗೂ ವ್ಯಾಪಾರಗಳಿಂದಾಗಿ ದೂರ ದೂರದಿಂದ ಯಾತ್ರಿಕರೂ, ವರ್ತಕರೂ ಬರುತ್ತಿದ್ದರು; ಎಲ್ಲೆಲ್ಲೂ ಅವರದೇ ಸಂದಣಿ. ಅಲ್ಲಿನ ಸೌಂದರ್ಯ ಸವಿದು ಕಣ್ಣು ತೃಪ್ತಿಗೊಳ್ಳುತ್ತಿತ್ತು; ವ್ಯಾಪಾರದಿಂದ ಕಿಸೆ ತುಂಬುತ್ತಿತ್ತು; ಅವರೆಲ್ಲರ ಆಸೆ ಆಕಾಂಕ್ಷೆಗಳೂ ನೆರವೇರುತ್ತಿದ್ದವು. ಹೊರಗೆ ಎಲ್ಲಿ ಹೋದರೂ ಕುಸುಮಪುರದ ಕಲಾಸಂಪತ್ತಿನ ಧನಸಮೃದ್ಧಿಯ ಯಶೋಗಾನ ಹಾಡುತ್ತಿದ್ದರು. ದೇಶವಿದೇಶಗಳ ರಾಯಭಾರಿಗಳು ಅಲ್ಲಿಯ ರಾಜನ ಆಸ್ಥಾನದಲ್ಲಿರುವುದೇ ತಮ್ಮ ಸೌಭಾಗ್ಯವೆಂದು ಭಾವಿಸುತ್ತಿದ್ದಂತಹ ಸ್ಥಿತಿಯಿತ್ತು.

ಮಹಾಪದ್ಮನಂದರ ಸಂತತಿಯವರು ಬಹು ವಿಚಕ್ಷಣೆಯಿಂದ ರಾಜ್ಯಾಡಳಿತ ನಡೆಸುತ್ತಿದ್ದರು. ರಾಜರೇ ಆಗಿದ್ದರೂ ಸಹ, ತಾವು ಪ್ರಜಾಜನರ ಸೇವಕರೇ ಹೊರತು ಒಡೆಯರಲ್ಲವೆಂದು ತಿಳಿದು ಅವರು ನಡೆಯುತ್ತಿದ್ದರು. ನಮ್ಮಲ್ಲಿನ ರಾಜರ ಆದರ್ಶವೇ ಅದು. ಜನಹಿತ ಹಾಗೂ ಜನಸೇವೆಯೇ ತನ್ನ ಕರ್ತವ್ಯವೆಂದು ರಾಜನಿಗೆ ಅರಿವಿದ್ದುದರಿಂದ ಸಣ್ಣಪುಟ್ಟ ನೌಕರರವರೆಗೆ ಎಲ್ಲರೂ ಅದನ್ನೇ ಪಾಲಿಸುತ್ತಿದ್ದರು. ಆದರೆ ಇದೇ ಸ್ಥಿತಿ ಬಹುದಿನ ಉಳಿಯಲಿಲ್ಲ. ನಂದವಂಶದ ಕೊನೆಯ ರಾಜ ಧನಾನಂದ ತೀರ ವಿಷಯಲಂಪಟನಾದ. ರಾಜಕಾರ್ಯಗಳಿಂದ ಅವನ ಮನಸ್ಸು ವಿಲಾಸದತ್ತ ತಿರುಗಿತು. ಕುಡಿತ ಕುಣಿತ, ಆಮೋದ–ಪ್ರಮೋದಗಳಲ್ಲೇ ಅವನು ದಿನಗಳೆಯುತ್ತಿದ್ದ. ಒಮ್ಮೆ ವಸಂತೋತ್ಸವವಾದರೆ ಇನ್ನೊಮ್ಮೆ ಹೋಲಿಕೋತ್ಸವ; ಅಂತೂ ಒಂದಲ್ಲ ಒಂದು ಹೆಸರಿನಲ್ಲಿ ಜನತೆಯ ಹಣವನ್ನು ಪೋಲು ಮಾಡತೊಡಗಿದ. ತಾನೇ ಪ್ರಜೆಗಳ ದುಡ್ಡಿನ ಮಾಲಿಕನೆಂದುಕೊಂಡ. ಅಂಥ ದುರ್ವ್ಯಸನಿ ರಾಜನಿಗೆ ಬೇರೆಯವರ ಹಿತನುಡಿಗಳೂ ಸರಿಬೀಳುವುದಿಲ್ಲ. ಅವನು ಹೇಳಿದ್ದಕ್ಕೆಲ್ಲಾ ಹೂಗುಡುತ್ತಾ ಮುಖಸ್ತುತಿ ಮಾಡುವ ಭಟ್ಟಂಗಿಗಳ ಬಲೆಯಲ್ಲೇ ಅವನು ಬಿದ್ದಿರುತ್ತಾನೆ.

ಸುದೈವದಿಂದ, ಈ ರಾಜನ ಮಂತ್ರಿ ಕಾತ್ಯಾಯನನು ಬಹು ಯೋಗ್ಯ ವ್ಯಕ್ತಿಯಾಗಿದ್ದ. ರಾಕ್ಷಸನೆಂಬುದು ಅವನ ಇನ್ನೊಂದು ಹೆಸರು; ಹೆಸರಿಗೆ ಮಾತ್ರ ರಾಕ್ಷಸ ಅಷ್ಟೆ. ಘನವಿದ್ವಾಂಸನೂ, ನೀತಿ ನಿಪುಣನೂ ಆಗಿದ್ದ ಆ ಬ್ರಾಹ್ಮಣನು ನಂದ ರಾಜ್ಯಭಾರವನ್ನು ತುಂಬ ಜಾಣ್ಮೆಯಿಂದ ನಿಭಾಯಿಸುತ್ತಿದ್ದ. ಅವನ ಸ್ವಾಮಿಭಕ್ತಿ–ರಾಜಭಕ್ತಿಗೆ ಎಣೆಯೇ ಇರಲಿಲ್ಲ. ರಾಜನ ದುರವಸ್ಥೆ ಕಂಡು ರಾಕ್ಷಸ ಮನಸ್ಸಲ್ಲೆ ಹಳಹಳಿಸುತ್ತಿದ್ದ. ರಾಜನು ರಾಜಕಾರ್ಯಗಳಲ್ಲಿ ತೊಡಗಬೇಕೆಂದು ಅವನು ಹಂಬಲಿಸುತ್ತಿದ್ದ. ಆದರೆ, ರಾಜನಾದ ನಂದನು ಅಂತಃಪುರದಿಂದ ಹೊರಗೆ ಕಾಲಿಡುತ್ತಲೇ ಇರಲಿಲ್ಲ. ಮಹಾಮಂತ್ರಿಯಾದ ರಾಕ್ಷಸನಿಗೂ ದೊರೆಯ ದರ್ಶನ ಸಿಕ್ಕಬೇಕಾದರೆ ಸಾಕು ಸಾಕಾಗಿಹೋಗುತ್ತಿತ್ತು.

ಇಷ್ಟು ಕರ್ತವ್ಯಶಾಲಿಯಾದ ಮಂತ್ರಿಯಿದ್ದರೂ ರಾಜಕಾರಣವನ್ನು ರಾಜನೇ ದುರ್ಲಕ್ಷಿಸಿದ್ದರಿಂದಾಗಿ ರಾಜ್ಯದ ತುಂಬ ಗೊಂದಲ, ಗಡಿಬಿಡಿ ಎದ್ದಿತು. ಪ್ರಜೆಗಳು ದುಃಖಿತರಾದರು. ಪ್ರಜೆಗಳ ರಂಜನ ಮಾಡುವವನಿಗೇ ರಾಜನೆಂದು ಹೆಸರು. ರಾಜಾ ನಂದನಾದರೋ ಪ್ರಜಾರಂಜನೆಗೆ ಬದಲು ತನ್ನೊಬ್ಬನ ಮನೋರಂಜನೆ ಮಾಡಿಕೊಳ್ಳುತ್ತಿದ್ದ. ಭಾರತದ ಎಲ್ಲ ಆದರ್ಶ ದೊರೆಗಳೂ, ಸ್ವತಃ ಧನಾನಂದನ ಪೂರ್ವಜರೂ, ಪಾಲಿಸುತ್ತಿದ್ದ ಶ್ರೀರಾಮಚಂದ್ರನ ಆದರ್ಶಗಳನ್ನು ಅವನು ಮರೆತುಬಿಟ್ಟ. ರಾಮನ ಆದರ್ಶವೆಂದರೆ ಪ್ರಜಾಪೂಜೆಯೇ ಹೊರತು ಪ್ರಜೆಗಳ ಪೀಡನೆಯಲ್ಲ. ಹೀಗೆ ಪ್ರಜಾಸೇವೆಗೆ ನಿಂತ ರಾಮನನ್ನು ಪ್ರಜೆಗಳೂ ತಮ್ಮ ಒಡೆಯನೆಂದು ಒಪ್ಪಿ, ಅವನನ್ನು ಪೂಜಿಸುವುದೇ ತಮಗೊಂದು ಭಾಗ್ಯವೆಂದುಕೊಂಡರು. ಇಲ್ಲಿ ರಾಜನಾದ ನಂದನಿಗೇ ಪ್ರಜೆಗಳನ್ನು ಕಂಡರೆ ಆದರವಿರಲಿಲ್ಲ; ಆದ್ದರಿಂದ ಪ್ರಜೆಗಳಿಗೂ ಅವನ ಮೇಲಿನ ನಿಷ್ಠೆ ತಾನಾಗಿ ನಶಿಸತೊಡಗಿತು. ಅವರ ಕಷ್ಟನಷ್ಟಗಳನ್ನು ಕೇಳುವವರೇ ಇರಲಿಲ್ಲ. ಪ್ರಜೆಗಳು ರಾಜನ ತನಕ ಹೋಗುವುದಂತೂ ಒತ್ತಟ್ಟಿಗುಳಿಯಿತು. ತನ್ನ ರಾಗಭೋಗಗಳನ್ನು ಬಿಟ್ಟು ಬಂದು ಪ್ರಜೆಗಳ ಕಷ್ಟಸುಖ ಕೇಳುವಷ್ಟು ಸಮಯವಾದರೂ, ಪಾಪ ಆ ರಾಜನಿಗೆಲ್ಲಿತ್ತು?

ಪ್ರಜೆಗಳಿಗೆ ಹಿಂದಿನ ರಾಜರ ಕಾಲದಲ್ಲಿ ತಾವು ಅನುಭವಿಸುತ್ತಿದ್ದ ರಕ್ಷಣೆ ಅಧಿಕಾರಿಗಳನ್ನು ಒಮ್ಮಿಂದೊಮ್ಮೆಗೆ ಕಸಿದುಕೊಂಡಂತಾಯಿತು. ಸುಖ ಶಾಂತಿ, ಗೌರವದ ಬದುಕು ಅವರಿಗೆ ಅಭ್ಯಾಸವಾಗಿಹೋಗಿತ್ತು. ಈಗಂತೂ ಅವೊಂದೂ ಅವರ ಹತ್ತಿರ ಸಹ ಸುಳಿಯುತ್ತಿರಲಿಲ್ಲ. ಸುತ್ತಲೂ ರಾಜನ ವಿಲಾಸಕೃತ್ಯಗಳನ್ನೇ ನೋಡಿ ನೋಡಿ ಪ್ರಜೆಗಳ ನೈತಿಕ ಭಾವನೆಯೂ ಕುಸಿಯುತ್ತಿತ್ತು. ಅನಾಚಾರಗಳನ್ನು ಕಂಡು ಅವರ ಮನಸ್ಸು ಉರಿದೇಳುತ್ತಿತ್ತು. ಆತ್ಮಗೌರವವನ್ನು ಅಳಿಸಲು ಹೊರಟವರಿಗೂ, ಅದನ್ನು ಉಳಿಸಿಕೊಳ್ಳಲು ನಿಂತವರಿಗೂ ಸಹಜವಾಗಿಯೇ ಹೋರಾಟ ಮೊದಲಾಯಿತು. ಸ್ಥಾನ ಸ್ಥಾನದಲ್ಲೂ ಆಕಾಶದೆಡೆಗೆ ಏಳುತ್ತಿದ್ದ ಅಸಂತೋಷದ ಹೊಗೆಕಂಬಗಳು ಕೆಳಗೆ ಭೀಷಣರೋಷದ ಬೆಂಕಿ ಧಗಧಗಿಸುತ್ತಿದೆ ಯೆಂಬುದನ್ನು ಸಾರಿಹೇಳುತ್ತಿದ್ದವು. ಇದೇ ಧೂಮಕುಂಡದ ನಡುವೆ ಭವ್ಯ ಮೂರ್ತಿಯೊಂದು ಮೂಡಿಬರುತ್ತಿದ್ದುದನ್ನು ಜನರು ಕಂಡರು. ಆತನೇ ಚಂದ್ರಗುಪ್ತಮೌರ್ಯ, ನಮ್ಮ ಕಥಾನಾಯಕ.



## ೨. ಸೆರಗಿನಲ್ಲಿ ಕೆಂಡ

ಚಂದ್ರಗುಪ್ತನು ಮೋರಿಯ ಕ್ಷತ್ರಿಯ ಕುಲದವನು. ಮೊದಲು ಈ ಕುಲದವರು ಮೋರ್ ಪರ್ವತದ ತಪ್ಪಲಿನಲ್ಲಿ ವಾಸಿಸುತ್ತಿದ್ದರು. ಚಂದ್ರಗುಪ್ತನಾದರೋ ರಾಜಾ ನಂದನ ಸೇನೆಯಲ್ಲಿ ಕೆಲಸಕ್ಕಿದ್ದ ಸರ್ವಸಾಮಾನ್ಯ ಯೋಧ. ಆದರವನು ಸಾಹಸವೃತ್ತಿಯ ಪರಾಕ್ರಮಿ ಯೋಧನಾಗಿದ್ದ. ಅವನ ನರನಾಡಿಗಳಲ್ಲಿ ದೇಶ ಪ್ರೇಮ ಸದಾ ದುಮದುಮಿಸುತ್ತಿತ್ತು. ನೆರೆಹೊರೆಯವರ ಪ್ರೀತ್ಯಾದರಗಳಿಗೂ ಅವನು ಪಾತ್ರನಾಗಿದ್ದ. ಅವನ ಗೆಳೆಯರಿಗೂ ಅವನಲ್ಲಿ ಅಪಾರ ಸ್ನೇಹ, ಶ್ರದ್ಧೆ. ಶಸ್ತ್ರಾಸ್ತ್ರಗಳ ಪ್ರಯೋಗದಲ್ಲಂತೂ ಅವನದು ಸಿದ್ಧಹಸ್ತ. ಅದರಲ್ಲೂ ಬಾಣ ಮತ್ತು ಶೂಲಪ್ರಯೋಗದಲ್ಲಿ ಅವನನ್ನು ಸರಿಗಟ್ಟಬಲ್ಲವರೇ ಇರಲಿಲ್ಲ. ಅವನ ಗುರಿತಪ್ಪದ ಎಸೆತ ಕಂಡು, ಅವನ ಅರ್ಜುನನ ಅವತಾರವೆಂದೇ ಸಂಗಡಿಗರೆಲ್ಲರೂ ಹೇಳುತ್ತಿದ್ದರು.

ಆದರೆ ಈ ಶಸ್ತ್ರಾಸ್ತ್ರಸಿದ್ಧಿಗಿಂತಲೂ ಮಿಗಿಲಾದ ಮತ್ತೊಂದು ಸಂಗತಿ ಅವನಲ್ಲಿತ್ತು. ಅದೆಂದರೆ ಅವನ ಮನೋದಾರ್ಢ್ಯ, ನಿರ್ಭಯತೆ ಹಾಗು ಆತ್ಮವಿಶ್ವಾಸ. ಅವನು ಮಗಧರಾಜ್ಯದ ಅತ್ಯಾಚಾರಗಳ ಕಡೆಗೆ ತನ್ನ ಗೆಳೆಯರ ಗಮನ ಸೆಳೆದು, ಅವನ್ನು ಪ್ರತಿಭಟಿಸಲು ಕರೆ ಕೊಡುತ್ತಿದ್ದ. ಅಗ ಅವರೆನ್ನುತ್ತಿದ್ದರು: 'ಅಣ್ಣ, ನೀನಾದರೆ ಅವುಗಳನ್ನು ವಿರೋಧಿಸಿ ಬದುಕಬಲ್ಲೆ. ಏಕೆಂದರೆ ನೀನೆಸೆವ ಶೂಲ ಶತ್ರುವಿನ ಕರುಳು ಬಗೆದು ಹೊರಬರಬಲ್ಲದು, ಹಗೆಯು ಎಲ್ಲೇ ಅಡಗಿರಲಿ, ನೀ ಬಿಡುವ ಬಾಣ ಅವನ ತಲೆ ಹಾರಿಸಿ ನೆಲಕ್ಕೆ ಕೆಡಹಬಲ್ಲವು. ಆದರೆ, ನಾವು ಯಾವ ಧೈರ್ಯದಿಂದ ಅವನನ್ನು ವಿರೋಧಿಸೋಣ? ಅಷ್ಟು ಕುಶಲತೆಯಾದರೂ ನಮಗೆಲ್ಲಿದೆ?" ಆಗ ಚಂದ್ರಗುಪ್ತನು ಅವರಿಗೆ ಧೈರ್ಯ ಹೇಳುತ್ತಿದ್ದ– ಶಸ್ತ್ರ ಬಲಕ್ಕಿಂತ ಮನೋಬಲ ದೊಡ್ಡದು; ಆತ್ಮವಿಶ್ವಾಸವಿದ್ದವನೇ ಹೆಚ್ಚು ಶಕ್ತಿಶಾಲಿ; ನಾವೆಂದಿಗೂ ಅನ್ಯಾಯ ಅತ್ಯಾಚಾರಗಳನ್ನು ಸಹಿಸೆವೆಂದು ನಿಶ್ಚಯಿಸಿದರೆ ಸಾಕು, ಅದಕ್ಕಿಂತ ಮಿಗಿಲಾದ ಸಾಮರ್ಥ್ಯ ಇನ್ನೊಂದಿಲ್ಲ. ಒಮ್ಮೆ ಮನುಷ್ಯನು ಭಯ ತೊರೆದು ನಿಂತನೆಂದರೆ, ಅವನನ್ನು ತುಳಿಯಲು ಯಾವ ಶಕ್ತಿಗೆ ತಾನೆ ಸಾಧ್ಯ?

ಒಂದು ದಿನ ಚಂದ್ರಗುಪ್ತ ತನ್ನ ಏಳೆಂಟು ಗೆಳೆಯರೊಡನೆ ಇದೇ ರೀತಿ ಮಾತುಕತೆಯಾಡುತ್ತ ಕುಳಿತಿದ್ದ. ಅವರ ನಡುವೆ ಒಬ್ಬ ವೃದ್ಧನೂ ಇದ್ದ. ಅವನ ಸುತ್ತ ಇದ್ದ ಆ ತರುಣರ ದಷ್ಟಪುಷ್ಟ ದೇಹ, ವಿಶಾಲ ಎದೆಯನ್ನು ನೋಡಿದರೆ ಅವರೆಲ್ಲರೂ ನಿತ್ಯ ಅಂಗಸಾಧನೆ ಮಾಡುತ್ತಿದ್ದವರೆಂದು ಧಾರಾಳವಾಗಿ ಹೇಳಬಹುದಾಗಿತ್ತು. ರಾಜಾನಂದನ ವಿಲಾಸ ಹಾಗೂ ಅತ್ಯಾಚಾರಗಳ ಕಾಕದೃಷ್ಟಿ ಇನ್ನೂ ಪ್ರಜೆಗಳ ಆಟ–ಊಟಗಳ ಮೇಲೆ ಬಿದ್ದಿರಲಿಲ್ಲ. ಅವರ ನೈತಿಕ ಆದರ್ಶ ಇನ್ನೂ ಮೇಲ್ಮಟ್ಟದಲ್ಲೇ ಇತ್ತು. ದುರ್ಬಲತೆಯನ್ನು ಒಂದು ಪಾಪವೆಂದೇ ಅವರು ಭಾವಿಸಿದ್ದರು. ಆದ್ದರಿಂದ ಪ್ರತಿಯೊಬ್ಬನೂ ಬಲಿಷ್ಠನಾಗಲು ಶಕ್ತಿಮೀರಿ ಪ್ರಯತ್ನಿಸುತ್ತಿದ್ದ. ಊಟತಿಂಡಿಗಳಿಗೆ ಯಾವುದೇ ಕೊರತೆಯೂ ಇರಲಿಲ್ಲ. ಅದರಲ್ಲಿ ಜನರು ಕಾರ್ಪಣ್ಯವನ್ನೂ ತೋರಿಸುತ್ತಿರಲಿಲ್ಲ.

ಆ ಗುಂಪಿನ ಮಧ್ಯೆ ಕುಳಿತಿದ್ದ ಆ ಮುದುಕನು ಅವರಿಗೆ ಹಿಂದಿನ ರಾಜ ಕಾಲದ ಸ್ಥಿತಿಗತಿಗಳನ್ನು ತಿಳಿಯಹೇಳುತ್ತಿದ್ದ. ಮೊದಲು ರಘುಮಹಾರಾಜನ ದಿಗ್ವಿಜಯದ ವೃತ್ತಾಂತ ಹೇಳಿದ. ನಂತರ ಶ್ರೀರಾಮನು ರಾವಣನೊಡನೆ ಮಾಡಿದ್ದ ಯುದ್ಧ ಮತ್ತು ರಕ್ಷಸ ವಧೆಯ ರಹಸ್ಯ ತಿಳಿಸಿದ. ನಡುವೆ,

"ಏನಜ್ಜ, ರಾವಣನು ಸೀತಾದೇವಿಯನ್ನು ಕದಿಯದಿದ್ದರೂ ರಾಮನು ರಾವಣನ ಜೊತೆಗೆ ಯುದ್ಧಕ್ಕೆ ಹೋಗುತ್ತಿದ್ದನೇ?" ಎಂದೊಬ್ಬ ಯುವಕ ಕುತೂಹಲದಿಂದ ಕೇಳಿದ.

"ಹೋಗದೆ ಇರುತ್ತಿರಲಿಲ್ಲ ಮಗು! ಭಾರತದ ಧರ್ಮಸಂಸ್ಕೃತಿಗಳನ್ನು ಅಳಿಸಿಹಾಕಲು ಹೊರಟಿದ್ದ ರಾಕ್ಷಸರನ್ನು ಒಂದು ಪಿಳ್ಳೆಯೂ ಉಳಿಯದಂತೆ ನಿಶ್ಶೇಶಗೊಳಿಸುವುದೇ ರಾಮನ ಧ್ಯೇಯವಾಗಿತ್ತು. ರಾವಣನೇನಾದರೂ ಸೀತೆಯನ್ನು ಹಿಂದಿರುಗಿಸಿದ್ದರೂ, ಯುದ್ಧ ಹೂಡಲು ರಾಮನು ಬೇರೊಂದು ಕಾರಣ ಹುಡುಕುತ್ತಿದ್ದ. ಅವನೊಂದು ಏಕಛತ್ರ ಸಾಮ್ರಾಜ್ಯ ಸ್ಥಾಪಿಸಬೇಕಾಗಿತ್ತು. ಅದಿಲ್ಲದೆ ದೇಶಕ್ಕೆಲ್ಲಿ ಸುಖಶಾಂತಿ?"

"ಹಾಗಾದರೆ ಈಗ ಏಕಛತ್ರಾಧಿಷ್ಠಿತ ಚಕ್ರವರ್ತಿ ಇಲ್ಲವೆ?"

"ಇಲ್ಲಪ್ಪ. ಇಂದು ಅಂಥವರು ಯಾರೂ ಇಲ್ಲ. ಆದ್ದರಿಂದಲೇ ಅಲಿಕಸುಂದರನು ಭಾರತದ ಮೇಲೆ ಆಕ್ರಮಣ ನಡೆಸಬೇಕೆಂದಿದ್ದಾನಂತೆ. ಇದುವರೆಗಾದರೋ, ಭಾರತದ ಮೇಲೆ ಆಕ್ರಮಣ ಮಾಡುವುದು ಹಾಗಿರಲಿ, ಮನಸ್ಸಿನಲ್ಲಿ ಸಹ ಯಾರಿಗೂ ಆ ಯೋಚನೆ ಬರುತ್ತಿರಲಿಲ್ಲ." ಹೇಳಹೇಳುತ್ತಾ ಅಜ್ಜನ ಗಂಟಲು ಬಿಗಿದುಕೊಂಡಿತು; ಅವನ ಆ ಒಣಗಿ ಸುಕ್ಕುಗಟ್ಟಿದ್ದ ಕಣ್ಣುಗಳಿಂದಲೂ ಎರಡು ತೊಟ್ಟು ಕಣ್ಣೀರು ಇಳಿಯಿತು.



"ಈಗ ಭಾರತದಲ್ಲಿ ಅನೇಕ ಸಣ್ಣಪುಟ್ಟ ರಾಜರಿದ್ದಾರಲ್ಲ, ಅವರೆಲ್ಲ ಒಟ್ಟಾಗಿ ಸೇರಿ ಅಲಿಕಸುಂದರನೆದುರು ಹೋರಾಡುವುದಿಲ್ಲವೇನಜ್ಜಾ?" ಎಂದು ವಿಜಯಗುಪ್ತ ಪ್ರಶ್ನಿಸಿದ.

"ಸೇರದಿದ್ದರೆ ಹೇಗೆ? ಶತ್ರುವಿನ ವಿರುದ್ಧ ಎಲ್ಲರೂ ಸೇರಿಯೇ ಯುದ್ಧ ಮಾಡಬೇಕು" ಎಂದು ವಿನಯಮಿತ್ರನೆಂದ.

"ಹಾಗಲ್ಲ ವಿನಯ! ಶತ್ರು ಅವರೆಲ್ಲರ ಜೊತೆಗೆ ಒಂದೇ ಸಲಕ್ಕೆ ಎಲ್ಲಿ ಯುದ್ಧಕ್ಕೆ ನಿಲ್ಲುತ್ತಾನೆ? ಅವನು ಒಬ್ಬೊಬ್ಬರನ್ನಾಗಿಯೇ ಮುಗಿಸುತ್ತಾನೆ. ಅಲ್ಲದೆ, ಪಕ್ಕದ ರಾಜ್ಯದ ಮೇಲೆ ದಾಳಿಯಾದರೆ ನಾವೂ ಯುದ್ಧಕ್ಕೆ ಹೋಗಿ ಹೋರಾಡಬೇಕೆನ್ನುವಷ್ಟು ಬುದ್ಧಿ ಇಲ್ಲಿನ ರಾಜರಿಗಾದರೂ ಎಲ್ಲಿದೆ? ದುರ್ಜನರು ಪಕ್ಕದವನಿಗೆ ಕಷ್ಟ ಬಂದರೆ ಹಿಗ್ಗುತ್ತಾರೆ; ಸ್ವಲ್ಪ ಒಳ್ಳೆಯತನವಿದ್ದವರು ತಮ್ಮ ರಾಜ್ಯವನ್ನಷ್ಟೆ ಉಳಿಸಿಕೊಳ್ಳುವ ಯೋಚನೆ ಮಾಡುತ್ತಾರೆ; ಆದರೆ ಎಂದೆಂದಿಗೂ ಬೇರೆಯವರ ಸಹಾಯಕ್ಕೆ ಹೋಗುವುದಿಲ್ಲ" ಎಂದು ಚಂದ್ರಗುಪ್ತ ಹೇಳಿದ.

ಆಗ ವೃದ್ಧ ಕಣ್ಣೊರೆಸಿಕೊಳ್ಳುತ್ತಾ ಬಾಯಿ ಹಾಕಿದ– "ಇದರಲ್ಲಿ ಇನ್ನೂ ಒಂದು ತೊಂದರೆಯಿದೆ. ಈ ಚಿಕ್ಕಪುಟ್ಟ ರಾಜರೆಲ್ಲರೂ ಸಮಾನರು. ಅವರೆಲ್ಲ ಒಂದುಕಡೆ ಕೂಡಿದರೆ ಆಗ ಅವರಿಗೆಲ್ಲ ಮುಖಂಡನಾಗಿ ಯಾರನ್ನು ಮಾಡಬೇಕು? ಇಂಥ ತುರ್ತು ಪರಿಸ್ಥಿತಿಯಲ್ಲಿ ಮೇಲುಕೀಳುಗಳೆನ್ನೆಣಿಸಬಾರದು ಅನ್ನುವಷ್ಟು ಜ್ಞಾನವಾದರೂ ಅವರಿಗೆಲ್ಲಿದೆ? ಈಗ ಭಾರತದಲ್ಲೆಲ್ಲ ಅತಿ ದೊಡ್ಡದಾಗಿರುವುದು ಮಗಧರಾಜ್ಯ. ಅದೇನಾದರೂ ಮನಸ್ಸು ಮಾಡಿದರೆ, ಉಳಿದೆಲ್ಲ ರಾಜರೂ ಅವರ ಮಾಂಡಲಿಕರಾದಾರು; ಭಾರತದಲ್ಲಿ ಏಕಛತ್ರ ರಾಜ್ಯವೂ ಆದೀತು. ಅಂಥ ಪ್ರಬಲ ರಾಜ್ಯ ಮಾತ್ರ ಅಲಿಕಸುಂದರನಂತಹ ಶತ್ರುವನ್ನು ಎದುರಿಸಬಲ್ಲದೇ ಹೊರತು, ಇನ್ನಾರಿಂದಲೂ ಆ ಕಾರ್ಯ ಸಾಧ್ಯವಿಲ್ಲ."

"ಅಂದರೆ ಭಾರತವನ್ನು ರಕ್ಷಿಸುವ ಜವಾಬ್ದಾರಿ ಮಗಧದ ಮೇಲಿದೆ ಅಂದ ಹಾಗಾಯಿತು"– ವಿಶ್ವಗುಪ್ತನೆಂದ.

"ಹೌದು, ಮಗಧದ್ದೇ!" ಎಂದು ದೃಢಸ್ವರದಲ್ಲಿ ಹೇಳಿದ. ವೃದ್ಧನು ಒಂದು ಕ್ಷಣ ಬಿಟ್ಟು ತಗ್ಗಿದ ಧ್ವನಿಯಲ್ಲಿ ನಿರಾಶೆಯಿಂದ, "ಆದರೆ ನಮ್ಮ ರಾಜನಿಗೆ ಅಷ್ಟೊಂದು ಬಿಡುವೆಲ್ಲಿದೆ?" ಎಂದ.

"ಹಾಗಾದರೆ ನಾವೆಲ್ಲ ಗ್ರೀಕರ ಗುಲಾಮರಾಗಿ ಹೋಗುತ್ತೇವೆ!" ವಸುಮಿತ್ರ ಉದ್ವೇಗದಿಂದ ನುಡಿದ. ಈ ಮಾತು ಕೇಳುತ್ತಲೆ ಎಲ್ಲರ ಮುಖವೂ ಬಾಡಿತು; ಎದೆಬಡಿತ ಜೋರಾಯಿತು; ಒಮ್ಮೆಗೇ ಎಲ್ಲರ ಬಾಯಿಂದ ಉದ್ಗಾರ ಹೊರಬಿತ್ತು– "ಗುಲಾಮರು!... ಗ್ರೀಕರಿಗೆ?"

"ಹೌದು. ಮಗಧಸಿಂಹಾಸನದ ಮೇಲೆ ನಿಷ್ಕ್ರಿಯನಾದ ವಿಷಯಲಂಪಟ ರಾಜನಿದ್ದಾನೆಂದೇ ಇಂಥ ಅಧೋಗತಿ" ಎಂದು ವೃದ್ಧನು ಆವೇಶದಿಂದ ನುಡಿದ.

ತತ್‌ಕ್ಷಣ ಖಡ್ಗದ ಹಿಡಿಯ ಮೇಲೆ ಚಂದ್ರಗುಪ್ತನ ಮುಷ್ಟಿ ಬಿಗಿದುಕೊಂಡಿತು– ಗ್ರೀಕರು ತಮ್ಮನ್ನು ಗುಲಾಮರನ್ನಾಗಿ ಮಾಡಲು ಎದುರಿಗೆ ಬರುತ್ತಿರುವರೋ ಅನ್ನುವಂತೆ, ಅವನು ಅವರೊಡನೆ ಯುದ್ಧಕ್ಕೆ ಸಿದ್ಧನಾದಂತೆ! ಅವನ ಹುಬ್ಬು ಗಂಟಿಕ್ಕಿತು.

"ಭಾರತವರ್ಷಕ್ಕೆ ದಾಸ್ಯವೆ? ಇಲ್ಲ ಎಂದಿಗೂ ಸಾಧ್ಯವಿಲ್ಲ!"– ರೋಷದಿಂದ ಸೀಳುಶಬ್ದಗಳಲ್ಲಿ ನುಡಿದ.

"ಎಂದೆಂದಿಗೂ ಸಾಧ್ಯವಿಲ್ಲ" ಎಂದು ಎಂಟು ಕಂಠಗಳೂ ಒಮ್ಮೆಗೇ ಗರ್ಜಿಸಿದವು.

"ಸಾಧ್ಯವಿಲ್ಲವೆ? ಹೇಗೆ?" ವೃದ್ಧನು ನಸುನಕ್ಕು ಹಾಸ್ಯವಾಗಿ ಕೇಳಿದ. ಒಂದು ಕ್ಷಣ ಎಲ್ಲರೂ ಮೌನವಾದರು; ಯಾವುದೋ ಆಳವಾದ ಯೋಚನೆಯಲ್ಲಿ ಮುಳುಗಿದಂತೆ ಕಂಡರು. ಅತ್ತ ಭಾರತೀಯ ಸ್ವಾತಂತ್ರ್ಯದ ಮಹತ್ತರ ಹೊಣೆಗಾರಿಕೆಯ ಹಿಮಾಲಯದಂಥ ಭಾರ! ಇತ್ತ ಧನಾನಂದನ ನಿಶ್ಶಕ್ತ ಹೆಗಲು!! ಅವನು ಆ ಜವಾಬ್ದಾರಿ ಸರಿಯಾಗಿ ನಿರ್ವಹಿಸುತ್ತಿಲ್ಲವೆಂಬುದು ಅವರಿಗೆ ಅರಿವಾಯಿತು.

"ನಾವು ಮಗಧದ ರಾಜನನ್ನೇ ಬದಲಾಯಿಸಿಬಿಡೋಣ" ಎಂದು ಸಮಸ್ಯೆಯನ್ನೇ ಬಗೆಹರಿಸಿದಷ್ಟು ಹೆಮ್ಮೆಯ ಸ್ವರದಲ್ಲಿ ಅರಿಮರ್ದನ ಹೇಳಿದ. ಎಲ್ಲರ ಕಣ್ಣೂ ಅವನೆಡೆಗೇ ತಿರುಗಿತು. ನಂತರ ಸುತ್ತಲೂ ನೋಡಿದರು. ಎಲ್ಲರ ದೃಷ್ಟಿಯೂ ಚಂದ್ರಗುಪ್ತನ ಮೇಲೆ ನೆಟ್ಟಿತು.

"ಚಂದ್ರಗುಪ್ತನೇ ನಮ್ಮ ಮಹಾರಾಜ" ಎಂಬ ಮಾತು ಎಲ್ಲರ ಬಾಯಿಂದ ಹೊರಬಿತ್ತು. ಮರುಕ್ಷಣವೇ,

"ಮಹಾರಾಜ ಚಂದ್ರಗುಪ್ತನಿಗೆ ಜಯವಾಗಲಿ!"

"ಮಗಧೇಶ ಚಂದ್ರಗುಪ್ತನಿಗೆ ಜಯವಾಗಲಿ!"

ಎಂಬ ಜಯಘೋಷಗಳಿಂದ ಅವರಿದ್ದ ಜಾಗ ಮೊಳಗಿತು. ಆ ಸಣ್ಣ ಪಡೆಯು ಒಂದೇ ಕ್ಷಣದಲ್ಲಿ ಸೈನಿಕನಾಗಿದ್ದ ಚಂದ್ರಗುಪ್ತನನ್ನು ಮಹಾರಾಜ ಪಟ್ಟಕ್ಕೇರಿಸಿಬಿಟ್ಟಿತ್ತು! ಆದರೆ ಅವನು ಮಹಾರಾಜನಾಗುವುದು ಅಷ್ಟು ಸುಲಭವಲ್ಲವೆಂಬುದು ಅವರಿಗೇನು ಗೊತ್ತು?

ಇದ್ದಕ್ಕಿದ್ದಂತೆ ಅಮಾತ್ಯರಾಕ್ಷಸನು ನಾಲ್ವರು ರಾಜಭಟರೊಡನೆ ಅಲ್ಲಿಗೆ ಧಾವಿಸಿ ಬಂದ. ಆಗ ತಮ್ಮ ನಿಶ್ಚಯವನ್ನು ಘೋಷಿಸಿ, ಡಂಗೂರ ಸಾರಿದ್ದರಿಂದ ಎಂಥ ಮಹಾಪರಾಧವಾಯಿತೆಂಬುದು ಆ ಗೆಳೆಯರಿಗೆ ಅರಿವಾಯಿತು.



"ಸೈನಿಕರೇ, ಮಗಧೇಶ ಚಂದ್ರಗುಪ್ತ ಯಾರವನು?" ಎಂದು ಅಮಾತ್ಯನು ಅಧಿಕಾರವಾಣಿಯಲ್ಲಿ ಕೇಳಿದ. ಅವನ ಸ್ವರದಲ್ಲಿ ಅಗಾಧ ಕ್ರೋಧ ತುಂಬಿತ್ತು; ಮರುಕ್ಷಣವೇ ತಿರಸ್ಕಾರದ ದನಿಯಲ್ಲಿ ನುಡಿದ– "ಮ–ಹಾ–ರಾ–ಜ ಚಂದ್ರಗುಪ್ತ!"

ಸೈನಿಕರೆಲ್ಲರೂ ಭಯಾಶ್ಚರ್ಯಗಳಿಂದ ಪ್ರತಿಮೆಗಳಂತೆ ನಿಂತರು. ಏನು ಉತ್ತರ ಹೇಳಬೇಕೋ ಒಬ್ಬರಿಗೂ ತಿಳಿಯಲಿಲ್ಲ. ಸ್ವತಃ ಮಹಾರಾಜ ನಂದನೇ ಆಗ ಅಲ್ಲಿಗೆ ಬಂದಿದ್ದರೂ ಅವರಿಗೆ ಅಷ್ಟು ಕಷ್ಟವಾಗುತ್ತಿರಲಿಲ್ಲ; ಬದಲಾಗಿ, ತಮ್ಮ ನಿಶ್ಚಯ ಅಷ್ಟು ಬೇಗ ಪೂರ್ತಿಯಾಗುತ್ತಿತ್ತೆಂಬ ಆನಂದವಾದರೂ ಆಗುತ್ತಿತ್ತು; ಅಂದೇ, ಅಲ್ಲಿಯೇ ಚಂದ್ರಗುಪ್ತನು ಮಹಾರಾಜ ಚಂದ್ರಗುಪ್ತನಾಗಿ ಹೋಗುತ್ತಿದ್ದ. ಆದರೆ ಆಗ ಎದುರಿಗಿದ್ದವನು ಅಮಾತ್ಯ ರಾಕ್ಷಸ! ಅವನೊಡನೆ ಅವರು ಏನು ಹೇಳಿಯಾರು? ಹೇಳುವ ಧೈರ್ಯ ತಾನೆ ಯಾರಿಗೆ? ಅಮಾತ್ಯನ ಕೂದಲು ಸಹ ಕೊಂಕಿಸಬಾರದೆಂದು ವಿವೇಕವೂ ಒತ್ತಿ ಹೇಳುತ್ತಿತ್ತು. ಏಕೆಂದರೆ ಗ್ರೀಕರನ್ನೆದುರಿಸಲು ಚಂದ್ರಗುಪ್ತನಂತಹ ಸಾಹಸಿ ಹಾಗೂ ಪರಾಕ್ರಮಿ ರಾಜನ ಅಗತ್ಯವಿದ್ದಂತೆಯೇ ಅಮಾತ್ಯರಾಕ್ಷಸನಂತಹ ರಾಜಕಾರಣ ಕುಶಲನಾದ ಜನಪ್ರಿಯ ಮುತ್ಸದ್ದಿ ಮಂತ್ರಿಯ ಅಗತ್ಯವೂ ಇತ್ತು. ಒಂಟಿಯಾಗಿದ್ದರೆ ಮಾತ್ರ ಇಬ್ಬರೂ ಅಪೂರ್ಣರೇ.

"ಅಮಾತ್ಯಶ್ರೇಷ್ಠರೇ! ಗ್ರೀಕರು ಭಾರತದ ಮೇಲೆ ದಂಡೆತ್ತಿ ಬರುತ್ತಿದ್ದಾರೆ"– ಅರಿಂದಮನು ತನ್ನಲ್ಲಿದ್ದ ಧೈರ್ಯವನ್ನೆಲ್ಲಾ ಕೂಡಿಸಿಕೊಂಡು ಹೇಳಿದ.

"ಹುನ್ನಿ, ನನಗೆ ಗೊತ್ತಿದೆ! ಆದರೆ ಅದರಿಂದ ಸೈನಿಕ ಚಂದ್ರಗುಪ್ತನು ಮಹಾರಾಜ ಚಂದ್ರಗುಪ್ತನಾಗಲಾರ" ಎಂದು ಅಮಾತ್ಯನು ಸಿಡಿಲಿನಂತೆ ಗರ್ಜಿಸಿದ.

ಆ ಎಂಟು ಸೈನಿಕರೂ ಸೆರೆಯಾಳುಗಳಾದರು. ಅವರ ಮೇಲೆ ರಾಜದ್ರೋಹದ ಆಪಾದನೆಗಾಗಿ ಮೊಕದ್ದಮೆ ನಡೆಯಿತು. ಸೈನಿಕ ಚಂದ್ರಗುಪ್ತನು ರಾಜದ್ರೋಹಕ್ಕೆ ಪ್ರಯತ್ನಿಸಿದನೆಂದು ಕೇಳಿ ರಾಜಾ ಧನಾನಂದನು ಕೆರಳಿ ಕೆಂಡವಾದ. ಚಂದ್ರಗುಪ್ತನನ್ನು ಶೂಲಕ್ಕೇರಿಸಲು ಆಜ್ಞೆ ಮಾಡಿದ. ಚಂದ್ರಗುಪ್ತನಿಗೆ ಸಾವಿನ ಭಯವೇನೂ ಇರಲಿಲ್ಲ. ವೀರನಾದ ಅವನಿಗೆ ದೇಶಕ್ಕಾಗಿ ಮಡಿಯುವ ಸೌಭಾಗ್ಯ ಎಲ್ಲರಿಗೂ ಬರುವುದಿಲ್ಲವೆಂಬುದು ಚೆನ್ನಾಗಿ ತಿಳಿದಿತ್ತು. ತಾನು ಸಮ್ರಾಟನಾಗಬೇಕೆಂಬ ಬಯಕೆ ಅವನಿಗಿದ್ದುದೂ ಅಷ್ಟರಲ್ಲಿಯೇ ಇತ್ತು. ಅವನಂತೂ ಭಾರತವನ್ನು ಗ್ರೀಕರಿಂದ ಉಳಿಸಿ ಪುನಃ ಶಾಂತಿ ಸ್ಥಾಪಿಸುವುದಕ್ಕಾಗಿ ಮುಳ್ಳಿನ ಕಿರೀಟವನ್ನಾದರೂ ಹೊತ್ತುಕೊಳ್ಳಲು ಸಿದ್ಧನಿದ್ದ. ಆದರೆ ದೇಶ ರಕ್ಷಣೆಯನ್ನೂ ಮಾಡಲಾಗದೆ ಪರಮಪಾಪಿಯಾದ ಈ ಕ್ಷುದ್ರ ರಾಜನಿಂದ ಸಾವಿಗೀಡಾಗಬೇಕಾಯಿತಲ್ಲಾ ಎಂಬುದೊಂದೇ ಅವನ ದುಃಖ. ಯುದ್ಧಕ್ಕೆ ಹೋಗಿ ಹೋರಾಡುತ್ತಾ ರಣರಂಗದಲ್ಲಾದರೂ ಸತ್ತಿದ್ದರೆ, ವೀರಗತಿಯಾದರೂ ಸಿಗುತ್ತಿತ್ತೆಂಬ ಯೋಚನೆ

ಅವನದು. ಏನಾದರೂ ಸರಿಯೆ, ವ್ಯರ್ಥವಾಗಿ ತಾನು ಸಾಯಬಾರದೆಂದು ಸೆರೆಯೊಳಗೇ ನಿರ್ಧರಿಸಿದ.

ಹೊರಗೆ ಜನತೆ ನಂದನ ಬಗ್ಗೆ ಬೇಸತ್ತಿದ್ದರು. ಅಲ್ಲದೆ, ಅವನ ಅತ್ಯಾಚಾರಗಳಿಂದ ನರಳಿ ಅವರಿಗೆ ಸಾಕಾಗಿತ್ತು. ಮೇಲಾಗಿ, ಸ್ವತಃ ವೀರರೂ, ದೇಶಪ್ರೇಮಿಗಳೂ ಆದವರು ಇಂಥ ದುರ್ವ್ಯಸನಿಯಾದ ರಾಜನನ್ನು ಹೇಗೆ ತಾನೆ ಸಹಿಸಿಯಾರು? ರಾಜಾನಂದನು ತೊಲಗಿದರೆ ಸಾಕು ಎಂದೇ ಎಲ್ಲರೂ ಅಂದುಕೊಳ್ಳುತ್ತಿದ್ದರು. ಆದರೆ ಪ್ರತಿಯೊಬ್ಬರೂ, ತಾವೊಬ್ಬರೇ ಹಾಗೆ ಯೋಚಿಸುತ್ತಿರುವುದಾಗಿಯೂ, ತಮ್ಮೊಬ್ಬರಿಂದ ಏನೊಂದೂ ಸಾಗದೆಂದೂ ತಿಳಿದಿದ್ದರು. ಹೀಗಾಗಿ ಯಾರೂ ಬಾಯಿ ಬಿಡುತ್ತಿರಲಿಲ್ಲ, ಮುಂದಾಗುತ್ತಿರಲಿಲ್ಲ. ಎಲ್ಲರಲ್ಲೂ ಒಂಟಿತನದ ಭಾವನೆಯೇ ಬೆಳೆದುಹೋಗಿತ್ತು. ಪ್ರಜೆಗಳು ಚಂದ್ರಗುಪ್ತನನ್ನೇ ತಮ್ಮ ರಕ್ಷಕನೆಂದೂ, ಮುಂದಾಳುವೆಂದೂ ಭಾವಿಸತೊಡಗಿದರು; ಅದೂ ಅವರವರ ಮನಸ್ಸಿನೊಳಗೇ! ಜನತೆ ತನ್ನೊಡನೆ ಸಂಪರ್ಕಕ್ಕೆ ಬರಲು, ಒಮ್ಮತವುಳ್ಳವರೆಲ್ಲರೂ ಒತ್ತಟ್ಟಿಗೆ ಸೇರಿ ತಮ್ಮ ಒಗ್ಗಟ್ಟಿನ ಶಕ್ತಿಯ ಅರಿವು ಮಾಡಿಕೊಳ್ಳಲು ಮತ್ತು ಒಬ್ಬನ ಮುಂದಾಳುತನದಲ್ಲಿ ಕೆಲಸ ನಡೆಸಲು ಚಂದ್ರಗುಪ್ತನು ಅದುವರೆಗೆ ಯಾವುದೇ ಯೋಜನೆಯನ್ನೂ ಮಾಡಿರಲಿಲ್ಲ. ಆದ್ದರಿಂದ ನಂದನ ಆಳ್ವಿಕೆ ಜನಮತವು ಎಷ್ಟೇ ವಿರುದ್ಧವಾಗಿದ್ದರೂ ಆ ಬಿಡಿಬಿಡಿಯಾದ ಜನಜಂಗುಳಿಯನ್ನು ನಂಬಿ ಅವನು ರಾಜನಾಗುವುದು ಸಾಧ್ಯವಿರಲಿಲ್ಲ. ಆದರೂ ಅವನಿಗೆ ಸ್ವಲ್ಪ ಲಾಭವೇನೋ ಆಯಿತು; ಅವನನ್ನು ಹೆಚ್ಚು ದಿನ ತಡೆದಿರಲು ಸೆರೆಮನೆಯ ಗೋಡೆಗಳಿಗಾಗಲಿಲ್ಲ. ಕಗ್ಗತ್ತಲು ಕವಿದಿದ್ದ ಒಂದು ರಾತ್ರಿ ಅವನು ಹೇಗೋ ತಪ್ಪಿಸಿಕೊಂಡು ಹೊರಗೋಡಿದ. ಆಗ ಕೆಟ್ಟ ಕನಸು ಕಂಡ ನಂದನು ತಟ್ಟನೆ ಚೀರಿ ಎದ್ದುಕುಳಿತ. ಅವನ ಹಿಡಿತಕ್ಕೆ ಹೊರಗಾದ ಚಂದ್ರಗುಪ್ತನ ರೂಪದಲ್ಲಿ ಅವನ ಮೃತ್ಯು ಮಾರಿನಗೆ ನಗುತ್ತಿತ್ತು.



## ೩. ಸುದ್ದಿ ಮುಟ್ಟಿತು

ನಾವಿಂದು ಕಾಶಿ, ಪ್ರಯಾಗ ಇತ್ಯಾದಿ ದೊಡ್ಡ ದೊಡ್ಡ ವಿಶ್ವವಿದ್ಯಾಲಯಗಳ ಹೆಸರು ಕೇಳುತ್ತೇವೆ. ಅದೇ ರೀತಿಯ ಒಂದು ವಿಶ್ವವಿದ್ಯಾಲಯವು ಹಿಂದೆ ತಕ್ಷಶಿಲೆಯಲ್ಲಿತ್ತು. ಆ ಸ್ಥಳ ಪಂಜಾಬಿನಲ್ಲಿದೆ. ಆ ವಿಶ್ವವಿದ್ಯಾಲಯ ಬಹು ದೊಡ್ಡದು; ಇಂದಿನ ವಿಶ್ವವಿದ್ಯಾಲಯಗಳಿಗಿಂತಲೂ ಭಾರಿಯಾಗಿತ್ತು. ಅದರಲ್ಲಿ ಹತ್ತು ಸಾವಿರಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಜ್ಞಾನಾರ್ಜನೆ ಮಾಡುತ್ತಿದ್ದರು. ಇಂದು ಲಕ್ನೊ, ಕಾಶಿ, ಪ್ರಯಾಗ ಈ ಮೂರು ವಿಶ್ವವಿದ್ಯಾಲಯಗಳನ್ನು ಸೇರಿಸಿದರೂ ಅಷ್ಟು ವಿದ್ಯಾರ್ಥಿಗಳಾಗುವುದಿಲ್ಲ. ಅಮಾತ್ಯ ರಾಕ್ಷಸನು ಓದಿದ್ದೂ ಇಲ್ಲಿಯೇ. ಆತನಿಲ್ಲಿ ವಿದ್ಯಾರ್ಥಿಯಾಗಿದ್ದಾಗ ವಿಷ್ಣುಗುಪ್ತನೆಂಬ ಮತ್ತೊಬ್ಬ ಬ್ರಾಹ್ಮಣ ಬಾಲಕನೂ ಅವನ ಸಹಪಾಠಿಯಾಗಿದ್ದ. ವಿಷ್ಣುಗುಪ್ತ ತೀಕ್ಷ್ಣಬುದ್ಧಿಯ ಚುರುಕು ವಿದ್ಯಾರ್ಥಿ. ಆದರೆ ಅವನಿಗೆ ಧಾರಾಳವಾಗಿ ಬುದ್ಧಿಶಕ್ತಿ ನೀಡಿದ ಬ್ರಹ್ಮನು, ಶರೀರಸೌಂದರ್ಯ ಕೊಡುವಾಗ ಕೈಯನ್ನು ಏಕೋ ಹಿಂತೆಗೆದುಕೊಂಡುಬಿಟ್ಟಿದ್ದ. ಮನಬುದ್ಧಿಗಳಲ್ಲಿ ಸ್ಥಳವಿಲ್ಲದೆ ಅಜ್ಞಾನಾಂಧಕಾರವು ಹೊರಗಿಳಿದುಬರುತ್ತಿದೆಯೋ ಅನ್ನುವ ಹಾಗೆ ಅವನ ಮೈಬಣ್ಣ ಕಾಡಿಗೆಯಂತೆ ಕಪ್ಪು. ವಿಷ್ಣುಗುಪ್ತನೂ ರಾಕ್ಷಸನೂ ಜೀವದ ಗೆಳೆಯರು. ಇವರಿಬ್ಬರಿಗೂ ರಾಜನೀತಿ ಮತ್ತು ಸಮಾಜ ಶಾಸ್ತ್ರಗಳಲ್ಲಿ ಹೆಚ್ಚಿನ ಆಸಕ್ತಿಯಿದ್ದುದೇ ಅದಕ್ಕೆ ಕಾರಣವಿದ್ದಿರಬಹುದು. ರಾಷ್ಟ್ರಶಕ್ತಿಯ ಮೂಲ ವಿವೇಚನೆಯನ್ನು ಕುರಿತು ಅವರಿಬ್ಬರಲ್ಲೂ ಘಂಟೆಗಟ್ಟಲೆ ಚರ್ಚೆ ನಡೆಯುತ್ತಿತ್ತು. ಈ ವಿಷ್ಣುಗುಪ್ತನೇ ಮುಂದೆ ಚಾಣಕ್ಯ ಅಥವಾ ಕೌಟಿಲ್ಯನೆಂಬ ಹೆಸರಿನಿಂದ ವಿಖ್ಯಾತನಾದವನು.

ಶಿಕ್ಷಣ ಪೂರೈಸಿದ ಮೇಲೆ ರಾಕ್ಷಸನು ಮಗಧದಂತಹ ದೊಡ್ಡ ರಾಜ್ಯದ ಮಂತ್ರಿ ಪದವಿಗೇರಿದ. ಆದರೆ ಚಾಣಕ್ಯನಾದರೋ ಈ ಎಲ್ಲ ಜಂಜಾಟಗಳಿಂದ ದೂರವಾಗಿ ಒಂದು ಸರಳ ಕುಟೀರದಲ್ಲಿ ನೆಲಸಿದ. ಅಲ್ಲಿ ಜ್ಞಾನಾರ್ಜನೆಯಲ್ಲೆ ಮನನೆಟ್ಟು ದಿನಗಳೆಯುತ್ತಿದ್ದನಲ್ಲದೆ, ಕಲಿಯಲು ಬಂದ ವಿದ್ಯಾರ್ಥಿಗಳಿಗೂ ವಿದ್ಯಾದಾನ ಮಾಡುತ್ತಿದ್ದ.

ಒಂದು ದಿನ ಇದ್ದಕ್ಕಿದ್ದಂತೆ ಶಿಷ್ಯನೊಬ್ಬ ಬಂದು ಚಾಣಕ್ಯನಿಗೆ ಕೇಳಿದ: 'ಆರ್ಯ! ಯವನರು ಭಾರತದೊಳಗೆ ನುಗ್ಗಿದ್ದಾರೆ.'

ಆರ್ಯ ಚಾಣಕ್ಯನ ಹಣೆಯಲ್ಲಿ ನಿರಿಗೆಗಳೆದ್ದವು. ಬಿಡುಗಣ್ಣಿನಿಂದ ಅವನು ಶಿಷ್ಯನ ಕಡೆಗೆ ನೋಡಿದ. ನಂತರ ನಿಧಾನವಾಗಿ ಮರುದನಿ ಹೊರಟಿತು– "ಯವನರು ಭಾರತದೊಳಕ್ಕೆ ನುಗ್ಗಿದ್ದಾರೆ!" ಯಾವುದೋ ಗಹನ ಚಿಂತೆಯಲ್ಲಿ ಮುಳುಗಿದಂತೆ ಪುನಃ ಅರೆನಿಮಿಷ ಮೌನ. ನಂತರ,

"ಭಾರತದ ಹೆಬ್ಬಾಗಿಲಲ್ಲಿಯಾರೂ ತಡೆಯಲಿಲ್ಲವೆ?" ಎಂದು ಪ್ರಶ್ನಿಸಿದ.

"ಗಡಿನಾಡಿನಲ್ಲಿ ಅಶ್ವಕನು ಜೀವನದ ಹಂಗುತೊರೆದು ಹೋರಾಡಿದ ಗುರುದೇವ! ಆದರೆ ಅವನ ಕೋಟೆಗೆ ಅಲಿಕಸುಂದರನ ಮುತ್ತಿಗೆ ಬಲವಾಗಿತ್ತು. ಇತ್ತ ತಕ್ಷಶಿಲೆಯ ದೊರೆ ಅಂಭಿಕನು ಮೊದಲೇ ಹಗೆಯೊಡನೆ ಕೈಜೋಡಿಸಿದ್ದ. ಅಗತಿಕನಾಗಿ ಅಶ್ವಕನು ಅಲಿಕಸುಂದರನಲ್ಲಿ ಸಂಧಿಯಾಚನೆ ಮಾಡಿದ. ದೇಶಿಯ ರಾಜರ ವಿರುದ್ಧ ಶತ್ರುವಿಗೆ ಸಹಾಯ ಮಾಡುವ ಕರಾರಿಗೊಪ್ಪಿದ; ದುರ್ಗದ ದ್ವಾರ ತೆರೆದುಕೊಂಡಿತು. ಅಶ್ವಕನು ತನ್ನ ಅನುಚರರೊಡನೆ ಹೊರಬಿದ್ದನು. ಸ್ವಲ್ಪ ದೂರ ನಡೆದು, ನಂತರ ಬೀಡುಬಿಟ್ಟನು. ಜನ್ಮಭೂಮಿಯಾದ ಭಾರತದಲ್ಲಿ ಸಂಚರಿಸಿ ಆಕ್ರಮಣಕಾರಿಯ ವಿರುದ್ಧ ಜನರನ್ನು ಎತ್ತಿಗಟ್ಟಬೇಕೆಂಬುದು ಅವನ ಯೋಚನೆಯಾಗಿತ್ತು....."

"ಸರಿಯಾಗಿಯೇ ಯೋಚಿಸಿದ, ಅದೀಗ ರಾಜನೀತಿ" ಎಂದು ನಡುವೆಯೇ ಆರ್ಯ ಚಾಣಕ್ಯ ಉದ್ಗರಿಸಿದ.

"ಆದರೆ ಆರ್ಯ! ಅವನು ಹಾಗೆ ಮಾಡಲಾಗಲಿಲ್ಲ. ಅಲಿಕಸುಂದರನಿಗೆ ಅದರ ಸುಳಿವು ಹತ್ತಿತ್ತು. ಒಂದು ರಾತ್ರಿ ಅಶ್ವಕನು ನಿದ್ರೆಯಲ್ಲಿದ್ದಾಗ ಅವನ ಮೇಲೆ ಅನಿರೀಕ್ಷಿತ ಆಕ್ರಮಣವಾಯಿತು; ವಿಶ್ವಾಸಘಾತಕವಾಗಿ ಹೋಯಿತು. ಕಡುಗಲಿ ಅಶ್ವಕನು ಕ್ಷಣಮಾತ್ರದಲ್ಲಿ ವ್ಯೂಹ ರಚಿಸಿದನು. ಸ್ತ್ರೀಯರನ್ನೂ, ಶಿಶುಗಳನ್ನೂ ನಡುವೆ ನಿಲ್ಲಿಸಿ ಉಳಿಸಿದವರು ಸುತ್ತಲೂ ನಿಂತು ಯವನರೊಡನೆ ಹೋರಾಡತೊಡಗಿದರು. ಆದರೆ ಅಲಿಕಸುಂದರನ ಸೈನ್ಯ ಬಹು ದೊಡ್ಡದಿತ್ತು. ಪುರುಷರೆಲ್ಲ ಮಡಿದು ಮಲಗಿದರು. ನಂತರ ಸ್ತ್ರೀಯರು ಶಸ್ತ್ರ ಕೈಗೆತ್ತಿಕೊಂಡರು; ಅನಂತರ ಎಳೆಯ ಬಾಲಕರ ಸರದಿ ಬಂತು..." ಹೇಳಹೇಳುತ್ತ ಶೀಲಭದ್ರನ ಎದೆ ಉಬ್ಬಿತು; ಹೆಮ್ಮೆಯಿಂದ ತಲೆ ಮೇಲೆತ್ತಿದ.

"ಮುಂದೇನಾಯಿತು ಶೀಲಭದ್ರ?" ಎಂದನು ಆರ್ಯ ಚಾಣಕ್ಯ.

"ಪೂಜ್ಯರೆ! ಮುಂದೆ ಶತ್ರುವಿನ ದಾರಿ ಸುಗಮವಾಯಿತು. ಆದರೆ ವಿತಸ್ತಾ (ಝೇಲಂ) ನದಿಯ ತೀರದಲ್ಲಿ ರಾಜಾ ಪರ್ವತಕನು (ಪೋರಸ್) ಎದುರಾದನು: ಘನಘೋರ ಯುದ್ಧವಾಯಿತು. ಅಲಿಕಸುಂದರನು ತನ್ನಲ್ಲಿದ್ದ ಬುದ್ಧಿಯನ್ನೆಲ್ಲ ಒರೆಹಚ್ಚಿ



ನೋಡಿದ. ಆದರೆ ಅವನ ಆಟ ಸಾಗಲಿಲ್ಲ. ಆಗ ನದಿಯ ಎದುರುಬದುರು ದಡಗಳಲ್ಲಿ ಅವರಿಬ್ಬರ ಸೇನೆಗಳೂ ಒಂದಕ್ಕೊಂದು ಮುಖಮಾಡಿ ನಿಂತಿದ್ದವು. ಮಳೆ ಧಾರಾಕಾರವಾಗಿ ಬೀಳುತ್ತಿತ್ತು. ಅಲಿಕ ಸುಂದರನು ಮಳೆಯಲ್ಲಿ ತಾನು ನದಿ ದಾಟುವಿದಿಲ್ಲವೆಂಬಂತೆ ನಟಿಸುತ್ತಾ, ಆಹಾರ ಸಾಮಗ್ರಿಗಳನ್ನು ಸಂಗ್ರಹಿಸಲು ಪ್ರಾರಂಭಿಸಿದ. ಆದರೆ ಒಂದು ಕಾಳರಾತ್ರಿ ನೀರು ಬರುತ್ತಿದ್ದ ದಿಕ್ಕಿನಲ್ಲಿ ಇಪ್ಪತ್ತು ಮೈಲಿಗಳು ಅವನು ಸೇನೆಯೊಡನೆ ಸಾಗಿಹೋದ. ನೀರು ಕಡಿಮೆಯಿದ್ದ ಜಾಗ ನೋಡಿ ನದಿಯನ್ನು ಹಾದು ಅದೇ ರಾತ್ರಿ ಪರ್ವತಕನ ಮೇಲೆ ದಾಳಿ ಮಾಡಿದ. ಪರ್ವತಕನ ಸೈನ್ಯವೇನೂ ಮೈಮರೆತಿರಲಿಲ್ಲ. ಆಕ್ರಮಣಕ್ಕೆ ಸರಿಯಾದ ಉತ್ತರವೇ ಸಿಕ್ಕಿತು. ಪರ್ವತಕನ ಆನೆಗಳು ಶತ್ರುಸೈನ್ಯವನ್ನು ತೊತ್ತಳತುಳಿದವು. ಕುದುರೆ ಸವಾರನನ್ನು ಸೊಂಡಲಿನಿಂದೆತ್ತಿ ನೆಲಕ್ಕೆ ಅಪ್ಪಳಿಸಿದುವು. ನೆಲ ಕಾಣದಿದ್ದಾಗ ಶತ್ರುಸೈನಿಕರನ್ನು ಮೇಲೆತ್ತಿ ಮಾಹುತನ ಬಳಿ ಹಿಡಿಯುತ್ತಿದ್ದವು; ಅವನು ಕೂಡಲೇ ಅವನ ತಲೆ ಕತ್ತರಿಸುತ್ತಿದ್ದ. ರಕ್ತಮಾಂಸಗಳ ಕೆಸರಿನಲ್ಲಿ ಆನೆಗಳ ಭೀಷಣ ನರ್ತನವೇ ನಡೆದಿತ್ತು. ತನ್ನ ಸೇನೆಗಾಗುತ್ತಿದ್ದ ದುರ್ಗತಿ ಕಂಡು ಅಲಿಕಸುಂದರನು ಗಾಬರಿಗೊಂಡ. ಅವನ ಹಿಂದುಳಿದಿದ್ದ ಸೈನ್ಯವನ್ನು ಪೂರ್ವತೀರಕ್ಕೆ ಕರೆಸಿಕೊಂಡ. ಆದರೆ ಅದರಿಂದ ಎಳ್ಳಷ್ಟೂ ಲಾಭವಾಗಲಿಲ್ಲ. ಕಡೆಗವನು ಸೋತು, ಪರ್ವತಕನೆದುರು ಗೆಳೆತನಕ್ಕಾಗಿ ಕೈ ನೀಡಿದ.

"ಅಂದರೆ ಅಲಿಕಸುಂದರನು ಪರಾಜಿತನಾದ!"– ಹಿಗ್ಗಿನಿಂದ ಆರ್ಯ ಚಾಣಕ್ಯ ನಡುವೆಯೇ ನುಡಿದ.

"ಹೌದು! ಅವನಂತೂ ಸೋತ. ಆದರೆ ಅದರಿಂದ ಭಾರತಕ್ಕೇನೂ ಲಾಭವಾಗಲಿಲ್ಲ. ಅವನ ಮುನ್ನಡೆ ಇನ್ನೂ ನಿಂತಿಲ್ಲ. ಪರ್ವತಕನು ದುರಾಶಾಗ್ರಸ್ತ ನೆಂಬುದನ್ನು ಯವನದೊರೆ ಕಂಡುಕೊಂಡ. ಆದ್ದರಿಂದ– ನಡಿ, ನಾವಿಬ್ಬರೂ ಹೊರಟು ಪೂರ್ವಭಾರತವನ್ನೇ ಗೆಲ್ಲೋಣ; ನೀನು ಭಾರತದ ಸಮ್ರಾಟನಾಗು ನಾನು ಜಗತ್ತಿನ ಸಮ್ರಾಟನಾಗುತ್ತೇನೆ– ಎಂದು ಅಲಿಕಸುಂದರ ಸಲಹೆ ಮಾಡಿದ."

"ಎಂಥ ಮೂರ್ಖ ಈ ಪರ್ವತಕ! ರಾಜನೀತಿಯ ಗಂಧವೇ ಇಲ್ಲ" ಎಂದು ಉದ್ವಿಗ್ನನಾಗಿ ಚಾಣಕ್ಯನೆಂದ.

"ಗುರುವರ್ಯ! ಅಲಿಕಸುಂದರ ಮುಂದೆ ಬರುತ್ತಿದ್ದಾನೆ. ಅವನ ಸೈನಿಕರು ಗ್ರಾಮಗ್ರಾಮಗಳಲ್ಲಿ ಅತ್ಯಾಚಾರವೆಸಗುತ್ತಿದ್ದಾರೆ; ಹಳ್ಳಿಗಾಡುಗಳಿಗೆ ಬೆಂಕಿಯಿಟ್ಟು ಸುಟ್ಟಿದ್ದಾರೆ. ಯಾರಾದರೂ ತಲೆ ಎತ್ತಿದರೆ ಸಾಕು ಕತ್ತರಿಸಿ ಕೆಡಹುತ್ತಾರೆ. ಊರೂರುಗಳು ಸೂರೆಹೋಗುತ್ತಿವೆ; ಜನರ ಹಣ ದೋಚಿಕೊಂಡು, ಅವರನ್ನು ಬಲಾತ್ಕಾರದಿಂದ ದುಡಿಸುತ್ತಿದ್ದಾರೆ. ಮುಗ್ಧ ಹಸುಳೆಗಳನ್ನು ಬಲಿಗೊಟ್ಟು ಯವನರು

ತಮ್ಮ ಹಬ್ಬಗಳನ್ನು ಆಚರಿಸುತ್ತಿದ್ದಾರೆ. ಗೋವಂಶ ನಾಶವಾಗುತ್ತಿದೆ. ಪೂಜ್ಯರೇ! ಇದುವರೆಗೆ ಕಂಡು ಕೇಳಿಲ್ಲದಂಥ ಅನಾಚಾರಗಳಾಗುತ್ತಿವೆ!" ಎಂದು ಆವೇಶದಿಂದ ಶೀಲಭದ್ರನೆಂದ.

ಆರ್ಯ ಚಾಣಕ್ಯ ನಿಶ್ಶಬ್ದನಾದನು. ಆ ತಪೋವಂತನು ಕುಳಿತ ಜಾಗ ಬಿಟ್ಟು ಕದಲಲಿಲ್ಲ. ಅವನ ಮುಖಭಾವ, ಈಟಿನೋಟಗಳನ್ನು ನೋಡಿದರೆ, ಯಾವುದೋ ವಿಚಾರಚಕ್ರ ಅವನ ತಲೆಯಲ್ಲಿ ಸುತ್ತುತ್ತಿದೆ ಎಂದು ಭಾವಿಸಬಹುದಾಗಿತ್ತು. ಕೆಲಹೊತ್ತು ಕಳೆದ ನಂತರ ಅವನ ಮಾತು ಕೇಳಿಬಂತು; "ಮಗು, ಶೀಲಭದ್ರ! ಮಹಾರಾಜ ಪರ್ವತಕನು ಅಲಿಕಸುಂದರನನ್ನು ಸೋಲಿಸಿದ್ದು ಒಳ್ಳೆಯದೇ ಆಯಿತು. ಹಿಂದುಗಳೊಡನೆ ಸೆಣೆಸುವುದು ಸುಲಭವಲ್ಲವೆಂಬುದು ಆ ಯವನ ರಾಜನಿಗೆ ಮನದಟ್ಟಾಗಿರಲೂ ಸಾಕು. ಇದರಿಂದ ಅವನು ಅಜೇಯನೆಂಬ ನಂಬಿಕೆ ಅವನ ಸೈನಿಕರಿಗೂ ಹಾರಿಹೋಗಿದೆ. ಈಗವರ ಆತ್ಮವಿಶ್ವಾಸ ಸಡಿಲಗೊಂಡಿರುವುದರಲ್ಲಿ ಸಂಶಯವೇ ಇಲ್ಲ. ಆದರೆ ಅದನ್ನು ಬುಡಸಹಿತವೇ ಕಿತ್ತೆಸೆಯಬೇಕು. ನೀನು ಮಾಡಬೇಕಾದ ಕೆಲಸ ಇದು: ಇಲ್ಲಿಂದ ಪರ್ವತಕನ ಸೇನಾ ಶಿಬಿರಕ್ಕೆ ಹೋಗು. ಅಲ್ಲಿನ ಸೈನಿಕರ ಮೂಲಕ ಅಲಿಕಸುಂದರನ ಸೇನೆಯಲ್ಲಿ ಮಗಧದ ಸೈನ್ಯ ಅಗಾಧ ಸಂಖ್ಯೆಯಲ್ಲಿದೆ, ಅದರ ಶಕ್ತಿ ಪ್ರಚಂಡವಾಗಿದೆ; ಜಗತ್ತಿನಲ್ಲಾರೂ ಅದರೆದುರು ನಿಲ್ಲಲಾರರು; ಅಲ್ಲಿ ಪರ್ವತಕನ ಆನೆಗಳ ನಾಲ್ಕರಷ್ಟು ಸಂಖ್ಯೆಯಲ್ಲಿ ಆನೆಗಳಿದ್ದು, ಅವಕ್ಕೇ ಒಂದು ಪ್ರತ್ಯೇಕ ನಗರವನ್ನೆ ನಿರ್ಮಿಸಿದ್ದಾರೆ; ಅಲ್ಲಿನ ಮಂತ್ರಿಯಾದ ರಾಕ್ಷಸನ ಬಳಿ ಮನುಷ್ಯರನ್ನು ಜೀವಸಹಿತ ನುಂಗುವ ರಾಕ್ಷಸರದ್ದೇ ಪ್ರತ್ಯೇಕ ಸೈನ್ಯವಿದೆ; ಮಳೆ ಒಮ್ಮೆ ಶುರುವಾದರೆ ತಿಂಗಳುಗಟ್ಟಲೆ ಬಿಡುವುದಿಲ್ಲ; ಮಗಧವನ್ನು ಮುಟ್ಟಲು ಇನ್ನು ೧೮೦ ನದಿಗಳನ್ನು ದಾಟಬೇಕು; ಒಂದೊಂದು ನದಿಯೂ ಅಸಂಖ್ಯ ಜನರನ್ನು ಬಲಿ ತೆಗೆದುಕೊಳ್ಳುತ್ತದೆ– ಇತ್ಯಾದಿ ಇತ್ಯಾದಿ ಸುದ್ದಿ ಹಬ್ಬಿಸು. ಅದರಿಂದ ಅವನ ಸೇನೆಗೆ ಎದೆನಡುಕ ಹುಟ್ಟುತ್ತದೆ. ಧಾವಿಸಿ ಹೋಗು."

"ಆದರೆ ನಾನು ಹೇಗೆ ಸುಳ್ಳಾಡಲಿ?"

"ಹಸುಳೆ! ಸತ್ಯಾಸತ್ಯಗಳನ್ನು ಕುರಿತು ಚಿಂತಿಸುತ್ತ ಕೂರಲು ಈಗ ಸಮಯವಿಲ್ಲ. ಎಲ್ಲಕ್ಕಿಂತ ಹಿರಿಯ ಸತ್ಯವೆಂದರೆ ನಮ್ಮ ರಾಷ್ಟ್ರದ ಹಿತ ಹಾಗೂ ಅದರ ಸ್ವಾತಂತ್ರ್ಯ. ಇಂದು ಈ ಸುಳ್ಳು–ಸತ್ಯಗಳ ಹೆಸರಿನಲ್ಲಿ ಕೈಕಟ್ಟಿ ಕುಳಿತರೆ, ನಾಳೆ ಇಡೀ ದೇಶ ಮ್ಲೇಚ್ಛರ ಪಾಲಾಗುತ್ತದೆ; ಆಗ ಅವರ ಅತ್ಯಾಚಾರ, ಗೋವಧೆಗಳೇ ಸತ್ಯವಾಗುತ್ತವೆ. ಆದ್ದರಿಂದ ನಾನೆಂದುದೇ ಈಗ ಸತ್ಯ; ಅದನ್ನೇ ಪಾಲಿಸು, ಹೊರಡು ಅಷ್ಟುಹೊತ್ತಿಗೆ ನಾನು ಮಗಧಕ್ಕೆ ಹೋಗಿ ಅಲಿಕಸುಂದರನಿಗೆ ಸ್ವಾಗತದ ಸಿದ್ಧತೆ ಮಾಡಿಸುತ್ತೇನೆ. ಅವನಿಗೆ ಎಂದೂ ಎಲ್ಲೂ ದೊರೆತಿಲ್ಲದಂಥ ಸ್ವಾಗತ ಸಿಗುವಂತೆ ಮಾಡುತ್ತೇನೆ."



"ಆರ್ಯ! ಮಗಧದಿಂದ ಸೈನಿಕನೊಬ್ಬ ಇತ್ತ ಬಂದಿದ್ದಾನೆ. ಯವನರನ್ನು ಎದುರಿಸಿ ಅವರನ್ನು ಭಾರತದಿಂದಾಚೆಗೆ ಪೂರ್ತಿಯಾಗಿ ಹೊರದಬ್ಬಬೇಕೆಂದು ಅವನು ಜನರಿಗೆ ಹೇಳುತ್ತಿದ್ದಾನೆ. ತಾನು ಹೋದಲ್ಲೆಲ್ಲ ಪರ್ವತಕನಿಗೆ ಛೀಮಾರಿ ಹಾಕುತ್ತಿದ್ದಾನೆ. ಪರ್ವತಕನು ಯವನರ ಕುತಂತ್ರಕ್ಕೆ ಬಲಿಯಾಗಿದ್ದಾನೆಂದೂ, ಅವನು ಭಾರತದ ಚಕ್ರವರ್ತಿ ಆಗಬೇಕಿದ್ದರೆ ತನ್ನ ಸ್ವಂತ ಸಾಮರ್ಥ್ಯದಿಂದ ಆಗಬೇಕಿತ್ತೇ ಹೊರತು ಪರಕೀಯರಿಗೆ ನೆರವಾಗಿ ನಿಂತು ಭಾರತವನ್ನು ದಾಸ್ಯಕ್ಕೆ ನೂಕುವುದು ಹಿಂದುವಿಗೆ ಶೋಭಿಸುವುದಿಲ್ಲ– ಎಂದೂ ಆ ಯೋಧ ಹೇಳುತ್ತಿದ್ದಾನೆ.'

ಚಾಣಕ್ಯನ ಕಣ್ಣುಗಳು ಒಮ್ಮೆಗೇ ಉತ್ಸುಕತೆಯಿಂದ ಮಿಂಚಿದವು. ಕೂಡಲೇ, "ಅವನನ್ನು ನನ್ನಲ್ಲಿಗೆ ಕರೆದು ತಾ. ಅವನಿಂದ ನಮಗೆ ಉಪಯೋಗವಾಗಬಹುದು" ಎಂದು ನುಡಿದ.

"ಈಗಲೇ ಹೊರಟೆ. ಅವನಿಲ್ಲಿ ಹತ್ತಿರದಲ್ಲೇ ಕೆಲವರನ್ನು ಕೂಡಿಸಿಕೊಂಡು ಮಾತನಾಡುತ್ತಿದ್ದಾನೆ. ಒಂದು ಸಲ ಅವನ ಜೊತೆ ಮಾತನಾಡಿದರೆ ಸಾಕು, ಜನ ಅವನ ಕಡೆಗೆ ಒಲಿಯುತ್ತಾರೆ. ಅಂಥ ಆಕರ್ಷಕ ವ್ಯಕ್ತಿ ಆತ."

"ನಿಸ್ವಾರ್ಥ ದೇಶಭಕ್ತಿಯೇ ಆ ಆಕರ್ಷಣೆಗೆ ಕಾರಣ. ಒಳ್ಳೆಯದು, ಸ್ವಲ್ಪ ಕರೆದುಕೊಂಡಾದರೂ ಬಾ. ಅವನ ರಹಸ್ಯ ನಾನೂ ಒಂದಷ್ಟು ನೋಡುತ್ತೇನೆ."

# ೪. ಅನಲ ಅನಿಲರ ಸಮಾಗಮ

ಗುರುವಿಗೆ ನಮಸ್ಕರಿಸಿ ಶೀಲಭದ್ರ ಹೊರಹೊರಟ. ಈಗಂತೂ ಆರ್ಯ ಚಾಣಕ್ಯನ ಮನಸ್ಸಿನಲ್ಲಿ ವಿಚಾರದ ಬಿರುಗಾಳಿಯೇ ಎದ್ದಿತ್ತು. ಭಾರತದೊಳಕ್ಕೆ ವಿದೇಶಿ ರಾಜನ ಪ್ರವೇಶ– ಅದೂ ಇಲ್ಲಿನ ರಾಜನಿಂದ ಸೋತನಂತರ ಸಹ! ಪರ್ವತಕನ ಕಡುಮೂರ್ಖತೆ ಕಂಡು ಕೌಟಿಲ್ಯನ ಮನಸ್ಸು ಕ್ರೋಧದಿಂದ ಉರಿದೇಳುತ್ತಿತ್ತು. 'ಶತ್ರುವನ್ನು ಬೇರುಸಹಿತ ಕಿತ್ತೊಗೆಯಬೇಕು. ಇದೇ ರಾಜನೀತಿ. ಸಾಧ್ಯವಿದ್ದರೆ ಅವನ ರಾಜ್ಯಕ್ಕೂ ನುಗ್ಗಬೇಕು. ಹಗೆಯು ತಾನು ಎಷ್ಟೇ ಹಿತವಂತನಂತೆ ತೋರಿಸಿಕೊಂಡರೂ, ಒಳ್ಳೆಯ ಸಮಯದಲ್ಲೆ ಮೋಸವಾಗುತ್ತದೆ. ಸರಿ, ಇನ್ನು ಆಗಿಹೋದುದರ ಬಗ್ಗೆ ಅಳುವುದರಿಂದೇನು ಲಾಭ? ಈಗ ಮಾಡಬೇಕಾಗಿರುವುದು ಮುಂದಿನ ವ್ಯವಸ್ಥೆ. ಮಗಧಕ್ಕೆ ಹೋಗಿ ಅಲ್ಲಿನ ಜನಬಲ, ಸೇನಾಬಲಗಳನ್ನು ಅಲಿಕಸುಂದರನ ವಿರುದ್ಧ ತಿರುಗಿಸುವುದಂತೂ ಸರಿ. ಆದರೆ ಅವನು ಗೆದ್ದಿರುವ ಪ್ರದೇಶಗಳಲ್ಲೂ ದಂಗೆಯೆಬ್ಬಿಸಿ, ಎರಡೂ ಕಡೆಗಳಿಂದ ಅವನನ್ನು ಹೊಸಗಿ ಹಾಕಬೇಕು.' ಹೀಗೆ ಲೆಕ್ಕವಿಲ್ಲದಷ್ಟು ಯೋಚನೆಗಳು ಚಾಣಕ್ಯನ ಮನಸ್ಸಿನಲ್ಲಿ ಬಂದು ಹೋಗುತ್ತಿದ್ದವು.

ಮಧ್ಯಾಹ್ನದ ಹೊತ್ತಿಗೆ ಶೀಲಭದ್ರನು ಚಂದ್ರಗುಪ್ತನನ್ನು ಕುಟೀರದೊಳಕ್ಕೆ ಕರೆತಂದ. ಅವನು ಹೊರಗೆ ಹೊರಟಾಗ ಇದ್ದ ಸ್ಥಿತಿಯಲ್ಲೇ ಈಗಲೂ ಗುರುಗಳಿದ್ದರು; ಗಾಢಚಿಂತನೆಯಲ್ಲಿ ತಲ್ಲೀನರಾಗಿ ಕುಳಿತಿದ್ದರು. ದೂರದಿಂದಲೇ ನಮಸ್ಕರಿಸಿ ಇವರೂ ಕುಳಿತರು. ಈ ಕಪ್ಪು ಕೊರಡಿನಂಥ ಬ್ರಾಹ್ಮಣ ತನ್ನನ್ನೇಕೆ ಕರೆಯಕಳುಹಿದನೋ ಎಂದು ಚಂದ್ರಗುಪ್ತನಿಗೆ ಚಿಂತೆ ಹತ್ತಿತ್ತು. 'ಒಂದು ವೇಳೆ ರಾಕ್ಷಸನು ನನ್ನನ್ನು ಹಿಡಿಯಲು ಅಥವಾ ನನ್ನ ಸಮಾಚಾರ ತರಲು ಇವನನ್ನು ಕಳುಹಿಸಿರಬಹುದೇ? ಇವನು ಯವನರ ಗುಪ್ತಚರನೇನೂ ಅಲ್ಲವಷ್ಟೆ!' ಹೀಗೆ ಸಂಶಯಗಳು ಸುಳಿಯುತ್ತಿದ್ದಂತೆ ಅವನು ತನ್ನ ಖಡ್ಗದ ಕಡೆಗೊಮ್ಮೆ ನೋಡಿಕೊಂಡ. ನಂತರ ಬೇಕಾದ್ದು ಬರಲಿ ಎಂದುಕೊಂಡು ನಿಶ್ಚಿಂತನಾಗಿ ಕುಳಿತ. ಅದೆಷ್ಟು ಅಪಾರ ಆತ್ಮವಿಶ್ವಾಸ!

ಕ್ಷಣಗಳುರುಳಿದವು. ಆರ್ಯ ಚಾಣಕ್ಯ ಕಣ್ಣು ತೆರೆದ. ಗಂಭೀರ ಸ್ವರದಲ್ಲಿ ಚಂದ್ರಗುಪ್ತನನ್ನು ಸಂಬೋಧಿಸಿದ– "ರಾಜಭಟನೇ! ಇಂದು ಅಲಿಕಸುಂದರನು ಮಗಧ ಗೆಲ್ಲುವ ದುರಾಸೆಯಿಂದ ದಂಡೆತ್ತಿ ಬರುತ್ತಿದ್ದಾನೆ; ನೀನೀಗ ನಿನ್ನ ಜಾಗ ಬಿಟ್ಟು ಬಂದು ಇಲ್ಲಿ ಸುತ್ತಾಡುತ್ತಿರುವೆ. ಕರ್ತವ್ಯದ ಅರಿವು ನಿನಗಿಲ್ಲವೆ? ಮಗಧ ಸೋತಿತೆಂದರೆ ಇಡೀ ಭಾರತ ದಾಸ್ಯಕ್ಕೆ ಒಳಗಾಗುವುದೆಂಬುದನ್ನು ನೀನರಿಯೆಯಾ?"



ಚಂದ್ರಗುಪ್ತನೂ ಅಷ್ಟೇ ಗಂಭೀರತೆಯಿಂದ ಹೇಳಿದ– "ವಿಪ್ರಶ್ರೇಷ್ಠ! ನನ್ನ ಕರ್ತವ್ಯದ ಅರಿವು ನನಗಿದೆ; ಭಾರತದ ಸ್ವಾತಂತ್ರ್ಯ–ಪಾರತಂತ್ರ್ಯಗಳ ಬಗ್ಗೆಯೂ ಚೆನ್ನಾಗಿಯೇ ಆಲೋಚಿಸಿದ್ದೇನೆ."

"ಹಾಗಾದರೆ ಇಲ್ಲಿ ಬಂದದ್ದಾದರೂ ಏಕೆ? ಒಬ್ಬೊಬ್ಬ ಸೈನಿಕನೂ ಹೀಗೇ ಮನಸ್ಸು ಬಂದಹಾಗೆ ಸುತ್ತುತ್ತಿದ್ದರೆ ಮಗಧ ಉಳಿದೀತೇ?"

"ಉಳಿಯದೆ ಮತ್ತೇನು? ಗರ್ವದಿಂದ ಉಬ್ಬಿ ತನ್ನನ್ನು ತಾನೇ ವಿಶ್ವ ವಿಜೇತನೆಂದು ಕರೆದುಕೊಳ್ಳುವ ಅಲಿಕಸುಂದರನ ಮೊದಲ ಹೊಡೆತಕ್ಕೇ ಪಾರಸ ಮತ್ತು ಮಿಶ್ರದೇಶಗಳು ಮಣ್ಣುಗೂಡಿದವೇನೋ ಸರಿ. ಆದರೆ ಮಗಧವೂ ಹಾಗೆಯೇ ಎಂದವನು ಅಂದುಕೊಂಡಿದ್ದರೆ ತಪ್ಪೆಣಿಕೆ ಆದೀತು!"

ಚಂದ್ರಗುಪ್ತನು ಚೆನ್ನಾಗಿ ಆಲೋಚಿಸಿಯೇ ಉತ್ತರಿಸಿದ್ದ. ಈ ಬ್ರಾಹ್ಮಣನೇನಾದರೂ ಯವನರ ಗೂಢಚರನಾಗಿದ್ದರೆ, ಅವನೆದುರಿಗೆ ಮಗಧದ ಗುಟ್ಟು ರಟ್ಟು ಮಾಡುವುದರಿಂದ ಅಲಿಕಸುಂದರನಿಗೆ ಮತ್ತಷ್ಟು ಹುರುಪು ಸಿಕ್ಕುತ್ತದೆಂದೇ ಅವನು ಹಾಗೆ ಹೇಳಿದ್ದ. ರಾಜಾ ಧನಾನಂದನೇನೋ ಚಂದ್ರಗುಪ್ತನನ್ನು ಶೂಲಕ್ಕೇರಿಸುತ್ತಿದ್ದುದು ನಿಶ್ಚಿತ; ಆದರೂ ಅವನು ಮಗಧದ ಮೇಲೆ ಅಲಿಕಸುಂದರನ ಆಕ್ರಮಣವನ್ನು ಸಹಿಸುತ್ತಿರಲಿಲ್ಲ, ಅದೆಂಥ ಉತ್ಕೃಷ್ಟ, ನಿಚ್ಚಳ ದೇಶಭಕ್ತಿ! ವ್ಯಕ್ತಿ ವ್ಯಕ್ತಿಯ ಅಮೂಲ್ಯ ಸಂಪತ್ತೆಂದರೆ ಇಂಥ ದೇಶಪ್ರೇಮವೇ ಸರಿ!

ಮಾತನಾಡುತ್ತ ಆಡುತ್ತಾ ಚಾಣಕ್ಯನು ಚಂದ್ರಗುಪ್ತನನ್ನು ತೀಕ್ಷ್ಣದೃಷ್ಟಿಯಿಂದ ನೋಡತೊಡಗಿದನು. ಅವನ ದೇಶಪ್ರೇಮದ ಆಳವನ್ನು ಅರಿತ ನಂತರ, ಬಳಸು ಮಾತುಗಳನ್ನಾಡುವುದಕ್ಕಿಂತ ತನ್ನ ಮನಸ್ಸಿನಲ್ಲಿರುವುದನ್ನೇ ಅವನೆದುರು ನೇರವಾಗಿ ಹೇಳಿಬಿಡುವುದು ಯೋಗ್ಯವೆನಿಸಿತು.

"ಅಲಿಕಸುಂದರನನ್ನು ಮಗಧಸೇನೆ ಅಲ್ಲಿ ಸರಿಯಾಗಿ ವಿಚಾರಿಸಿಕೊಂಡರೆ ಸಾಲದು. ಮಗಧಕ್ಕೆ ಕಾಲಿಡುವ ಮೊದಲೇ ಅವನನ್ನು ಅಡ್ಡಗಟ್ಟಿ ಬಲವಾದ ಹೊಡೆತಕೊಟ್ಟು, ಭಾರತದಾಚೆಗೆ ನೂಕಬೇಕು. ಅದಕ್ಕೆಂದೇ ನಾನೀಗ ಮಗಧಕ್ಕೆ ಹೊರಟಿದ್ದೇನೆ. ನೀನೂ ನನಗೆ ಸ್ವಲ್ಪ ನೆರವಾಗಬಲ್ಲೆಯಾ?"

ಇದನ್ನು ಕೇಳಿ ಚಂದ್ರಗುಪ್ತನಿಗೂ ಆರ್ಯ ಚಾಣಕ್ಯನಲ್ಲಿ ನಂಬಿಕೆ ಹುಟ್ಟಿತು. ಕಾರಣ, ಭಾರತದಿಂದ ಯವನರನ್ನು ಹೊರಗಟ್ಟಲು ಚಾಣಕ್ಯನಿಗಿದ್ದ ತೀವ್ರ ಉತ್ಸುಕತೆಯ ಶಬ್ದಗಳಿಗಿಂತ ಹೆಚ್ಚಾಗಿ ಆತನ ಸ್ವರದಿಂದಲೇ ಅರಿವಾಗುತ್ತಿತ್ತು. ಚಂದ್ರಗುಪ್ತನು ಆಗ

ತನ್ನ ಪರಿಚಯ ಹೇಳಿ, ಮಹಾರಾಜ ಧನಾನಂದನ ಅನಾಚಾರಗಳೆಲ್ಲವನ್ನೂ ವಿವರವಾಗಿ ತಿಳಿಸಿದ, ತಾನು ಓಡಿಬಂದ ಕಾರಣವನ್ನೂ ಅರುಹಿದ.

ಕೌಟಿಲ್ಯನು ಚಂದ್ರಗುಪ್ತನನ್ನು ಮತ್ತೊಮ್ಮೆ ದಿಟ್ಟಿಸಿ ನೋಡಿ ಯಾವುದೋ ಮಹೋಗ್ರ ನಿರ್ಧಾರ ಕೈಗೊಂಡಂತೆ ತಲೆಯಾಡಿಸಿದ. ಚಂದ್ರಗುಪ್ತನು ಮಗಧ ಸಮ್ರಾಟನಾಗಲು ನಿಜಕ್ಕೂ ಯೋಗ್ಯನೆಂದು ಆ ನಿಷ್ಣಾತ ಪರೀಕ್ಷಕನಿಗೆ ಅರಿವಾಗಿತ್ತು. ಆದರೆ ಸದ್ಯಕ್ಕೆ ಮಗಧ ಸಿಂಹಾಸನಕ್ಕಿಂತಲೂ ಯವನರನ್ನು ಹೊಡೆದಟ್ಟುವುದೇ ಹೆಚ್ಚು ಮಹತ್ವದ ಕಾರ್ಯವಾಗಿತ್ತು. ಆದರೆ ಮಗಧರಾಜನು ಈ ಬಗ್ಗೆ ಎಳ್ಳಷ್ಟೂ ಮನಸ್ಸಿಗೆ ಹಚ್ಚಿಕೊಳ್ಳದಷ್ಟು ವಿಷಯಾಸಕ್ತನಾಗಿರುವನೆಂಬುದನ್ನು ಚಂದ್ರಗುಪ್ತನು ತಿಳಿಸಿದ್ದನು.

"ಆದರೂ ಅವನ ಮಂತ್ರಿ ರಾಕ್ಷಸನಂತೂ ಇದ್ದಾನೆ. ಉಳಿದೆಲ್ಲ ಕೆಲಸಗಳಲ್ಲಿ ಇದೂ ಒಂದೆಂದು ತಿಳಿದು ಇದನ್ನೂ ಮಾಡುತ್ತಾನೆ" ಎಂದನು ಚಾಣಕ್ಯ.

"ಅದು ಸರಿ, ಆರ್ಯ! ಅಮಾತ್ಯ ರಾಕ್ಷಸರೇನೋ ಇದ್ದಾರೆ. ಆದರೆ ನಂದನ ಆಜ್ಞೆಯಿಲ್ಲದೆ ಅವರು ಗೆರೆ ದಾಟುವುದಿಲ್ಲ– ಅಷ್ಟೊಂದು ಸ್ವಾಮಿಭಕ್ತಿಯ ಹುಚ್ಚು ಅವರಿಗೆ. ಇನ್ನೂ ನಂದನಿಂದ ಅನುಮತಿ ಬಂದ ಹಾಗೆಯೇ ಇದೆ!" ಎಂದ ಚಂದ್ರಗುಪ್ತ.

"ಆದರೂ, ಹೋಗುವುದಂತೂ ಹೋಗಲೇಬೇಕು. ರಾಕ್ಷಸನು ನನ್ನ ಸಹಪಾಠಿ; ದೇಶಭಕ್ತನೂ ಹೌದು. ಖಂಡಿತವಾಗಿಯೂ ನನ್ನ ಮಾತಿಗೆ ಬೆಲೆ ಕೊಟ್ಟಾನು." ಇಷ್ಟು ಹೇಳಿ ಚಾಣಕ್ಯನು ಮಗಧಕ್ಕೆ ಹೊರಟುನಿಂತನು. ಅಲ್ಲಿ ಹೋಗಿ ಸಹಾಯ ಪಡೆದು ಕಡೇಪಕ್ಷ ಅಲಿಕಸುಂದರನನ್ನು ಯಮುನೆಯಿಂದಾಚೆಗೆ ಒಂದು ಹೆಜ್ಜೆಯೂ ಇಡದಂತೆ ಮೊದಲು ತಡೆಗಟ್ಟಬೇಕು ಮತ್ತು ಆದಷ್ಟು ಬೇಗ ದೇಶದಿಂದಲೂ ಹೊರಗಟ್ಟಬೇಕೆಂದು ಅವನು ನಿರ್ಧರಿಸಿದ್ದನು. ಚಂದ್ರಗುಪ್ತನು ಅಲ್ಲಿಯೇ ನಿಂತು ಅಲಿಕಸುಂದರನ ದಾರಿಯಲ್ಲಿ ಆದಷ್ಟು ಅಡ್ಡಿ ಆತಂಕಗಳನ್ನೊಡ್ಡಿ, ಅವನ ಮುನ್ನಡೆಯನ್ನು ಕೂಡಲೇ ಕುಂಠಿತಗೊಳಿಸಬೇಕೆಂದೂ ಯೋಜನೆಯಾಯಿತು.



## ೫. ಅಮಾತ್ಯಮಿತ್ರನೆಡೆಗೆ

ಆಶ್ರಮದಿಂದ ಹೊರಟ ಚಾಣಕ್ಯನು ಕುಸುಮಪುರದ ದಾರಿಯಲ್ಲಿ ಹೆಜ್ಜೆ ಹಾಕತೊಡಗಿದನು. ಅವನ ನಡಿಗೆ ಸತತವಾಗಿ ಸಾಗಿತು. ಛಳಿ ಗಾಳಿಗಳನ್ನಾಗಲೀ, ಜಡಿಮಳೆ, ಉರಿಬಿಸಿಲುಗಳನ್ನಾಗಲೀ ಅವನು ಲೆಕ್ಕಿಸಲಿಲ್ಲ. ಎಂದಿಗೆ ಮಗಧವನ್ನು ಮುಟ್ಟಿಯೇನು? ಎಂಬುದೊಂದೇ ಧ್ಯಾನ ಅವನಿಗೆ. ದಾರಿಯಲ್ಲಿ ಒಂದೇ ಒಂದು ಹೆಜ್ಜೆ ನಿಂತರೂ, ಯವನರು ಒಂದು ಹೆಜ್ಜೆ ಮುಂದೆ ಬಂದಂತೆ ಭಾಸವಾಗುತ್ತಿತ್ತು. ದೇಶದೊಳಗೆ ಅತ್ಯಾಚಾರಿ ಪರಕೀಯರು ಕಾಲಿಟ್ಟ ಸುದ್ದಿ ಕೇಳಿದಾಗಿನಿಂದ ಒಂದೊಂದು ಕ್ಷಣವೂ ಒಂದೊಂದು ಯುಗದಂತೆ ಅವನಿಗೆ ಅನಿಸುತ್ತಿತ್ತು. ಅದರ ಅಸಹ್ಯ ಯಾತನೆ ಅವನನ್ನು ನಿರಂತರ ಕಾಡುತ್ತಿತ್ತು. ದಣಿವು ಹಸಿವುಗಳ ಗಮನವೇ ಇಲ್ಲ; ಕಾಲುಗಳು ಒಂದೇ ಸಮನೆ ಭರಭರನೆ ಮುನ್ನಡೆಯುತ್ತಿದ್ದವು. ಮಗಧರಾಜ್ಯದ ಸಚಿವಾಲಯದ ಬಾಗಿಲು ಬಂದಾಗಲೇ ಹೆಜ್ಜೆಗಳು ನಿಂತುದು.

ತಕ್ಷಶಿಲೆಯ ಆ ಬ್ರಾಹ್ಮಣನು ಬಂದ ವಾರ್ತೆ ಅಮಾತ್ಯ ರಾಕ್ಷಸನ ಕಿವಿ ಸೇರಿತು. ಅವನು ಕೂಡಲೇ ಒಳಗೆ ಕರೆಸಿಕೊಂಡ. ಪರಸ್ಪರ ಕಂಡಕೂಡಲೇ ಅವರ ಹಿಂದಿನ ಪ್ರೇಮ ಉಕ್ಕಿಬಂದಿತು. ರಾಕ್ಷಸನು ಧಾವಿಸಿ ಹೋಗಿ ಚಾಣಕ್ಯನನ್ನು ಆಲಂಗಿಸಿದ. ಅವರಿಬ್ಬರ ಅಸೀಮ ಸ್ನೇಹ ವಾತಾವರಣವನ್ನೆಲ್ಲ ತುಂಬಿಸೂಸಿತು. ಆದರೆ ಚಾಣಕ್ಯನು ತನ್ನ ವಿಷಯ ತಿಳಿಸಲು ಚಡಪಡಿಸುತ್ತಿದ್ದನು. ಕೂಡಲೇ ಕೇಳಿದ– "ಅಮಾತ್ಯವರ್ಯ, ದೇಶದ್ದೇನಾದರೂ ಸುದ್ದಿ?"

ರಾಕ್ಷಸನಿಗೆ ಪ್ರಶ್ನೆ ಅರ್ಥವಾಯಿತು. "ಹೌದು, ಅಲಿಕಸುಂದರನು ಭಾರತದೊಳಗೆ ಪ್ರವೇಶಿಸಿದ್ದಾನೆ. ಪರ್ವತಕನಿಂದ ಪರಾಜಿತನಾಗಿದ್ದರೂ, ಪುನಃ ಅವನ ಸಹಾಯದಿಂದಲೇ ಪಂಚನದದ ರಾಜರನ್ನು ಸೋಲಿಸುತ್ತಿದ್ದಾನೆ.'

"ಅವನು ಮಗಧವನ್ನೂ ಬಿಡುವುದಿಲ್ಲ ಅಮಾತ್ಯರೆ!"

"ಅದಕ್ಕೆ ಮಗಧ ಸೈನ್ಯ ಸಿದ್ಧವಾಗಿ ನಿಂತಿದೆ. ಪ್ರಾಣಪಣದಿಂದ ಮಗಧದ ರಕ್ಷಣೆ ಮಾಡುತ್ತೇವೆ."

"ಆದರೆ ಯಾವಾಗ? ಅವನು ಕುಸುಮಪುರಕ್ಕೇ ಬಂದು ಮುತ್ತಿಗೆ ಹಾಕಿದಾಗಲೇ? ಇಂದು ಪಂಚನದದ ಸಣ್ಣಪುಟ್ಟ ರಾಜ್ಯಗಳನ್ನು ರಕ್ಷಿಸುವುದೂ

ಮಗಧದ ರಕ್ಷಣೆಯೇ ಆಗಿದೆ. ಅಲ್ಲದೆ, ದೇಶದಿಂದಾಚೆಗೆ ಯವನರನ್ನಟ್ಟುವ ಮಹತ್ಕಾರ್ಯವನ್ನೂ ಮಗಧವೇ ಮಾಡಬೇಕಾಗಿದೆ.”

“ಇವೆಲ್ಲಕ್ಕೂ ಮಹಾರಾಜರೊಡನೆ ಸಮಾಲೋಚಿಸಬೇಕು, ವಿಷ್ಣುಗುಪ್ತ!”

ಕಡೆಗೆ ಮರುದಿನವೇ ಮಹಾರಾಜರಿಂದ ಸಲಹೆ ಪಡೆಯಬೇಕೆಂದು ತೀರ್ಮಾನವಾಯಿತು. ಆಗ ಚಾಣಕ್ಯನೂ ಜತೆಯಲ್ಲಿ ಬರಲು ಅಮಾತ್ಯನು ಒಪ್ಪಿದ. ಅಂದೇ, ಆ ಕ್ಷಣವೇ ಮಹಾರಾಜರ ಕಡೆ ಹೊರಟುಬಿಡೋಣವೆಂದು ಚಾಣಕ್ಯ ಒತ್ತಾಯಿಸಿದ. ಆದರೆ ನಾಳೆಗೆ ಮೊದಲು ಭೇಟಿ ಸಾಧ್ಯವೇ ಇಲ್ಲವೆಂದುಬಿಟ್ಟ, ರಾಕ್ಷಸ. ಅದನ್ನು ಕೇಳಿ ವಿಷ್ಣುಗುಪ್ತನಿಗೆ ಚಂದ್ರಗುಪ್ತನ ಮಾತು ನೆನಪಾಯಿತು. ಹಣೆಯ ಮೇಲೆ ನಿರಿಗೆಗಳೆದ್ದವು. ಇಷ್ಟೊಂದು ಮಹತ್ವದ ಕಾರ್ಯದ ಸಂಬಂಧವಾಗಿಯೂ ಯಾವ ರಾಜನನ್ನು ಅವನ ಮಹಾಮಂತ್ರಿ ಸಹ ಸಕಾಲದಲ್ಲಿ ನೋಡಲು ಸಾಧ್ಯವಿಲ್ಲವೋ, ಅಂತಹವನು ಭಾರತದ ಈ ವಿಶಾಲ ರಾಜ್ಯದ ಸಿಂಹಾಸನಕ್ಕೆ ತೀರ ಅಯೋಗ್ಯನೆಂದೇ ಚಾಣಕ್ಯನು ಯೋಚಿಸತೊಡಗಿದ.



## ೭. ಕೌಟಿಲ್ಯಶಪಥ

ಇರುಳು ಉರುಳಿತು. ಬೆಳಕು ಹರಿಯುತ್ತಿದ್ದಂತೆಯೇ ಅಮಾತ್ಯ ರಾಕ್ಷಸನೊಡನೆ ಚಾಣಕ್ಯನು ರಾಜಭವನದ ಬಾಗಿಲಲ್ಲಿದ್ದ. ಮಹಾರಾಜ ಧನಾನಂದನಿಗೆ ಸುದ್ದಿ ಹೋಯಿತು. ಬಹಳ ಹೊತ್ತು ಕಾದು ನಿಂತ ನಂತರ ಅನುಮತಿ ಸಿಕ್ಕಿತು. ಇಬ್ಬರೂ ಒಳಗೆ ನಡೆದರು. ಮಹಾರಾಜನಾಗ ತನ್ನ ಪ್ರಮೋದೋದ್ಯಾನದಲ್ಲಿ ತೂಗು ಮಂಚದ ಮೇಲೆ ಉಯ್ಯಾಲೆಯಾಡುತ್ತಿದ್ದ. ನರ್ತಕಿಯರ ಗುಂಪು ಅವನನ್ನು ಸುತ್ತುವರಿದು ನಿಂತಿತ್ತು; ಬಳಿಯಲ್ಲೆ ಮದಿರೆ ತುಂಬಿದ ಪಾತ್ರೆಗಳು! ಮಹಾ ಮಂತ್ರಿಯನ್ನು ಕಾಣುತ್ತಲೇ ರಾಜನೆಂದ– “ಅಮಾತ್ಯ, ನೀನು ಸುಮ್ಮನೆ ನಮಗೆ ತೊಂದರೆ ಕೊಡುತ್ತೀಯೆ. ಕೆಲಸಗಳನ್ನೆಲ್ಲ ನೀನೇ ಏಕೆ ಮಾಡಿ ಮುಗಿಸಬಾರದು? ನಿನಗಿರುವ ಅಂಥ ಮಹಾ ಕಾರ್ಯವಾದರೂ ಏನು? ಹೋಲಿಕೋತ್ಸವದಲ್ಲಿ ಈಗಿನಿಂದಲೇ ಸಿದ್ಧತೆ ಮಾಡಬೇಕೇನು? ಅರೆ! (ಚಾಣಕ್ಯನ ಕಡೆಗೆ ತಿರಸ್ಕಾರಪೂರ್ಣ ದೃಷ್ಟಿಯಿಂದ ನೋಡುತ್ತಾ) ಯಾರೀ ಬ್ರಾಹ್ಮಣ? ಪ್ರತ್ಯಕ್ಷ ಯಮನ ಹಾಗೆ ಕಾಣುತ್ತಿರುವನಲ್ಲಾ!”

ಈ ಅಪಮಾನಕರ ಮಾತುಗಳನ್ನು ಕೇಳಿ ಆರ್ಯ ಚಾಣಕ್ಯನ ಕ್ರೋಧ ಉಕ್ಕಿ ಬಂತು. ಅವನ ಕಣ್ಣಾಲಿಗಳ ಸುತ್ತ ನೆತ್ತರು ಹರಿದುಬಂತು. ಆದರೂ ಅತ್ಯಂತ ಜಾಗರೂಕತೆಯಿಂದ ಅವನು ಶತಪ್ರಯತ್ನ ಮಾಡಿ ತನ್ನ ಕೋಪವನ್ನು ತಡೆದಿಟ್ಟುಕೊಂಡು, ಶಾಂತಭಾವ ತಂದುಕೊಂಡ. ಆಗ ಯವನರನ್ನು ಭಾರತದಿಂದ ಹೊರಗಟ್ಟಲು ಮಗಧದ ಸಹಾಯ ತುರ್ತಾಗಿ ಬೇಕಾಗಿತ್ತು; ಅದಕ್ಕಾಗಿಯೇ ರಾಜಾಜ್ಞೆಯೂ ಅಗತ್ಯವಾಗಿತ್ತು. ಅದೊಂದು ಮಹಾನ್ ರಾಷ್ಟ್ರಕಾರ್ಯ. ಅದರಲ್ಲಿ ಹೀಗೆ ಮಾನಾಪಮಾನಗಳನ್ನು ಕುರಿತು ಚಿಂತಿಸಲಾಗದು. ಚಾಣಕ್ಯ ಇದನ್ನು ಅರಿತಿದ್ದನು. ಅವನ ಸ್ವಾಭಿಮಾನಕ್ಕಂತೂ ಧಕ್ಕೆಯುಂಟಾಗಿತ್ತು. ಆದರೆ, ರಾಷ್ಟ್ರದ ಸ್ವಾಭಿಮಾನದ ಪ್ರಶ್ನೆ ಅದಕ್ಕಿಂತಲೂ ದೊಡ್ಡದಾಗಿತ್ತು.

“ಮಹಾರಾಜ, ಈತ ನನ್ನ ಸಹಪಾಠಿ; ತಕ್ಷಶಿಲೆಯಿಂದ ಬಂದಿದ್ದಾರೆ. ಅಲಿಕಸುಂದರನೀಗ ಪರ್ವತಕನ ನೆರವಿನಿಂದ ಪಂಚನದದ ರಾಜರುಗಳೊಡನೆ ಯುದ್ಧ ಹೂಡಿದ್ದಾನೆ; ಮಗಧಕ್ಕೂ ಬರಲಿದ್ದಾನೆ” ಎಂದು ಅಮಾತ್ಯ ಹೇಳಿದ.

"ಮಗಧ ಸೇನೆಯಂತೂ ತಯಾರಾಗಿದೆ ಅಮಾತ್ಯ! ಹೊಸ ಸೇನೆ ಕೂಡಿಸಲು ಪ್ರಾರಂಭಿಸು. ಆದರೆ, ನಮಗೆ ಕುಸುಮಪುರದಿಂದ ದೂರವಾಗಿ ಪೂರ್ವದಲ್ಲಿ ಕೂಡಲೇ ಒಂದು ಅರಮನೆ ಕಟ್ಟಿಸು. ನಾವು ಅಲ್ಲಿಯೇ ಇರುತ್ತೇವೆ. ಈ ಜಗಳ ಕದನಗಳಿಂದ ದೂರವಿದ್ದುಬಿಡುತ್ತೇನೆ; ಹಾಳು ಯುದ್ಧದ ವಾಸನೆಯೇ ಬೇಡ. ಏನು ನರ್ತಕಿಯರೇ? ಸರಿ ತಾನೇ!"

"ಮಗಧದ ರಕ್ಷಣೆಗೆ ಮೊದಲು ಪಂಚನದವನ್ನೂ ಉಳಿಸುವುದು ಅಗತ್ಯ ಮಹಾರಾಜರೇ!" ಎಂದು ಆರ್ಯ ಚಾಣಕ್ಯನೆಂದ.

"ಪಂಚನದದ ರಾಜ್ಯಗಳ ರಕ್ಷಣೆ ನಮ್ಮ ಸೇನೆಯೇಕೆ ಮಾಡಬೇಕು? ನಮ್ಮ ಸೈನ್ಯವೆಲ್ಲ ಅಲ್ಲಿಗೆ ಹೋಗಿ, ಮಗಧದಲ್ಲಿ ನಾವೊಬ್ಬರೇ ಉಳಿಯಬೇಕೆನ್ನುವೆಯಾ?" ಎಂದ ನಂದ.

"ಪ್ರಭು, ಅಲಿಕಸುಂದರನ ಮುನ್ನಡೆಯು ಭಾರತಕ್ಕೆ ಹೇಗೋ ಹಾಗೇ ಮಗಧಕ್ಕೂ ಅಪಾಯಕರ. ಆದ್ದರಿಂದಲೇ ಅವನನ್ನು ಭಾರದಾಚೆಗೆ ಅಟ್ಟುವುದು ಮಗಧರಾಜ್ಯದ ಕರ್ತವ್ಯ."

"ಹ್ಹ ಹ್ಹ ಹ್ಹಾ! ಈ ಬ್ರಾಹ್ಮಣ ನಮಗೇ ರಾಜನ ಕರ್ತವ್ಯ ಕಲಿಸಲು ಬಂದಿದ್ದಾನೆ. ನರ್ತಕಿಯರೇ! ಈ ಗುರುವರ್ಯನ ಅವತಾರವನ್ನಾದರೂ ಸ್ವಲ್ಪ ನೋಡಿ. ಈ ಕಾಲಭೈರವನ ಅವತಾರಕ್ಕಷ್ಟು ನಮಸ್ಕಾರ ಹಾಕಿ" ಎಂದು ಮಹಾರಾಜನು ವ್ಯಂಗ್ಯ ಹಾಗೂ ತಿರಸ್ಕಾರಪೂರ್ಣವಾಗಿ ನುಡಿದನು.

ಚಾಣಕ್ಯನು ಮತ್ತೊಂದು ಬಾರಿ ತನ್ನ ಕ್ರೋಧವನ್ನು ನುಂಗಿಕೊಂಡನು. ಶಾಂತಸ್ವರದಲ್ಲಿ, 'ಬ್ರಾಹ್ಮಣನಿಗೆ ಅದು ಬಿಟ್ಟು ಬೇರೇನು ಕೆಲಸ? ಈಗಲೂ ಸಹ ನೀವೇನಾದರೂ ಸುಮ್ಮನೆ ಕುಳಿತಿದ್ದರೆ, ಯವನರು ಮಗಧವನ್ನೂ ಮಣ್ಣುಗೂಡಿಸುವ ಕಾಲ ಬಂದೀತು. ಆಗ ಮಗಧ ರಾಜ್ಯಕ್ಕಾಗಲೀ, ಅದರ ರಾಜನಿಗಾಗಲೀ ಯಾರಿಗೂ ಉಳಿಗಾಲವಿರದು" ಎಂದು ಚಾಣಕ್ಯ ಹೇಳಿದ.

ರಾಷ್ಟ್ರಹಿತದಲ್ಲೇ ತನ್ನ ಹಿತವೂ ಅಡಗಿದೆಯೆಂಬ ಸರಳ ಸಂಗತಿಯೂ ನಂದನಿಗೆ ತಿಳಿಯದೆ ಹೋಯಿತು. ಆರ್ಯ ಚಾಣಕ್ಯನ ಮುನ್ನೆಚ್ಚರಿಕೆ ಸಹ ಅವನಿಗೆ ಅರ್ಥವಾಗಲಿಲ್ಲ. "ಬಡ ಹಾರುವ! ನೀನು ನಮಗೆ ಶಾಪ ಹಾಕಿ ಹೆದರಿಸುವೆಯಾ? ನರ್ತಕಿಯರೆ! ಇವನ ಕುತ್ತಿಗೆ ಹಿಡಿದು ಹೊರದಬ್ಬಿರಿ. ಅದೆಷ್ಟು ದಾರ್ಷ್ಟ್ಯ ಅವನಿಗೆ!" ಎಂದು ನುಡಿದ.

ನರ್ತಕಿಯರು ಹೆಜ್ಜೆ ಮುಂದಿಟ್ಟರು. ರಾಜನ ನುಡಿಗಳಿಂದ ಆರ್ಯ ಚಾಣಕ್ಯನ ಆಸೆಯಂತೂ ಭಗ್ನವಾಗಿಹೋಗಿತ್ತು. ಆ ಅಪಮಾನಕರ ಶಬ್ದಗಳು ಅವನ ಅಂತಃಕರಣವನ್ನು ಕೊರೆದು ಛಿದ್ರಗೊಳಿಸಿದ್ದವು. ಅವನ ಸಾತ್ವಿಕ ಕ್ರೋಧ



ಭುಗಿಲೆದ್ದಿತು. ನಿಂತ ಜಾಗದಲ್ಲೆ ಚಟ್ಟನೆ ಅವನು ತನ್ನ ತಲೆಗೂದಲು ಬಿಚ್ಚಿ ಶಪಥ ತೊಟ್ಟ– "ನಂದರಾಜನನ್ನು ಸಿಂಹಾಸನದಿಂದ ಕೆಳಗೆಳೆದು ಹಾಕಿ ರಾಷ್ಟ್ರ ಹಿತೈಷಿಯೂ, ಕರ್ತವ್ಯನಿಷ್ಠನೂ ಆದ ರಾಜನನ್ನು ಗದ್ದುಗೆಗೇರಿಸುವವರೆಗೆ ಜುಟ್ಟು ಕಟ್ಟುವುದಿಲ್ಲ."

ಇದು ಯಾರೋ ಬಡಬ್ರಾಹ್ಮನನೊಬ್ಬನ ಪ್ರಲಾಪವೆಂದುಕೊಂಡು ನಂದ ನಕ್ಕ. ನರ್ತಕಿಯರೂ ಕೇಕೆ ಹಾಕಿ ನಗತೊಡಗಿದರು.

ಅಪಮಾನಿತನಾದ ಚಾಣಕ್ಯ ರಾಜಮಹಲಿನ ಹೊಸಿಲು ದಾಟಿ ಹೊರಟ. ಅಮಾತ್ಯ ರಾಕ್ಷಸನು ಏನೊಂದೂ ತೋಚದೆ ದಿಗ್ಭ್ರಾಂತನಾಗಿ ನಿಂತಿದ್ದ. ಚಾಣಕ್ಯನು ಹೊರಟದ್ದು ಕಂಡು ಅವನೂ ಹೊರಕ್ಕೆ ಹೊರಟ. ಬೀದಿಗಿಳಿದ ನಂತರ ಸಂಕೋಚದಿಂದ ಮುಖ ಮುದುಡಿಕೊಂಡು ತಗ್ಗಿದ ದನಿಯಲ್ಲಿ ಹೇಳಿದ– "ಳೆಯ! ದುರ್ವ್ಯಸನಪೀಡಿತರಿಗೆ ಬುದ್ಧಿ ಸರಿಯಿರುವುದಿಲ್ಲ, ಅವನನ್ನು ಕ್ಷಮಿಸು."

"ಆದರೆ ರಾಜನು ಲಂಪಟನಾದರೆ ದೇಶಕ್ಕೇ ಅನಿಷ್ಟ, ಅಮಾತ್ಯವರ! ನಮಗಾಗಿ ಅಲ್ಲ, ರಾಷ್ಟ್ರಕ್ಕಾಗಿ ನಂದನ ಉಚ್ಚಾಟನೆಯಾಗಬೇಕಾಗಿದೆ. ಅಲಿಕಸುಂದರನು ಒಂದಾದ ಮೇಲೊಂದು ಚಿಕ್ಕಪುಟ್ಟ ರಾಜ್ಯಗಳನ್ನು ಕಬಳಿಸುತ್ತಿರುವುದನ್ನು ಕಾಣೆಯಾ? ಆ ಒಂದೊಂದು ರಾಜ್ಯದ ಮಕ್ಕಳು ಮರಿಗಳೂ ಸ್ವಾತಂತ್ರ್ಯಕ್ಕಾಗಿ ಜೀವದಾಸೆ ತೊರೆದು ಹೋರಾಡುತ್ತಿದ್ದಾರೆ. ಆದರೆ ದುರ್ದೈವದಿಂದ ಅವೆಲ್ಲ ಹೋರಾಟಗಳೂ ಬಿಡಿ ಬಿಡಿಯಾಗಿಯೇ ನಡೆಯುತ್ತಿವೆ. ಅಲ್ಲದೆ, ಸಣ್ಣ ರಾಜ್ಯಗಳ ಸೈನ್ಯವಾದರೂ ಎಷ್ಟಿದ್ದೀತು? ಅಲಿಕಸುಂದರನ ವಿಶಾಲ ಸೇನಾಸಾಗರದಲ್ಲಿ ಅವು ಕಿರಿದೆರೆಗಳಂತೆ ಕರಗಿಹೋಗುತ್ತವೆ. ಹಾಗೆ ನೋಡಿದರೆ, ದೇಶದಲ್ಲಿ ಇಂದು ಯಾವುದಕ್ಕೆ ತಾನೆ ಕೊರತೆ? ಶೌರ್ಯವಿದೆ, ಸಾಹಸವಿದೆ, ಸ್ವಾತಂತ್ರ್ಯದ ಸಂರಕ್ಷಣೆಗಾಗಿ ಸರ್ವಸ್ವವನ್ನೂ ಧಾರೆಯೆರೆಯುವ ತ್ಯಾಗಭಾವನೆಯೂ ಇದೆ. ಆದರೆ ಎಲ್ಲವನ್ನೂ ಒಂದು ಸೂತ್ರದಲ್ಲಿ ಸೇರಿಸುವಂಥ ಒಂದು ಸಾಧನ ಮಾತ್ರ ಕೊರತೆಯಾಗಿದೆ. ಅಂದರೆ ಭಾರತದಲ್ಲಿಂದು ಏಕ ಛತ್ರಾದಿಷ್ಠಿತ ಸಿಂಹಾಸನ ಸ್ಥಾಪಿತವಾಗಬೇಕಾಗಿದೆ. ಅದಾಗದಿದ್ದರೆ ಭಾರತ ಸದಾಕಾಲಕ್ಕೂ ಗ್ರೀಕರ ಗುಲಾಮಿತನದಲ್ಲುಳಿಯಬೇಕಾದೀತು. ಈ ಬಾರಿ ಅಲಿಕಸುಂದರನು ಹಿಂದಿರುಗಿ ಹೋದರೂ ಸಹ, ನಾಳೆ ಇನ್ನೊಬ್ಬ ಆಕ್ರಮಣ ನಡೆಸುತ್ತಾನೆ. ಆದ್ದರಿಂದ ಭಾರತದ ಚಕ್ರವರ್ತಿ ಪದವಿಗೆ ನಂದನು ಯೋಗ್ಯನೇನು? ಹೇಳು ರಾಕ್ಷಸ! ನೀನೇ ಹೇಳು ನೋಡುವಾ;"

ಅಮಾತ್ಯ ರಾಕ್ಷಸ ಮಾತನಾಡಲಿಲ್ಲ. ಪುನಃ ಚಾಣಕ್ಯನೇ ಮಾತು ಮುಂದುವರಿಸಿದ– "ಅಮಾತ್ಯ, ನಿನ್ನ ಹೃದಯದಲ್ಲಿ ದೇಶಭಕ್ತಿಯಿದೆ, ನಾನದನ್ನು ಬಲ್ಲೆ! ನಾವಿಬ್ಬರೂ ಒಟ್ಟಿಗೆ ಓದುತ್ತಿದ್ದಾಗ ನೀನು ಮೂರು ಹೊತ್ತೂ ದೇಶದ ಮಾತೇ ಆಡುತ್ತಿದ್ದೆ. ಇಂದು ದೇಶಕ್ಕೆ ಯವನರ ಆಕ್ರಮಣವೇ ಎಲ್ಲಕ್ಕಿಂತ ಘೋರ

ವಿಪತ್ತಾಗಿದೆ. ಮುಂಬರುವ ಶತಮಾತನಗಳವರೆಗಿನ ದೇಶದ ಹಣೆಯಬರಹ ಈಗ ನಿರ್ಧಾರವಾಗಲಿದೆ. ಈ ಮಗಧರಾಜ್ಯದ ಮಹಾಮಾತ್ಯ ನೀನು. ರಾಜನಾದರೋ ದುರ್ವ್ಯಸನಿ. ಆದರೆ ನಿನಗಂತೂ ಕರ್ತವ್ಯದ ಅರಿವಿದೆ. ನಿನ್ನ ಕೈಯಲ್ಲಿ ಶಕ್ತಿಯೂ ಇದೆ. ನೀನೇ ಸೈನ್ಯದೊಡನೆ ಹೊರಡು; ಶತ್ರುಗಳನ್ನು ಭಾರತದ ಗಡಿಯಾಚೆಗೆ ಬಡಿದಟ್ಟೋಣ."

"ಆದರೆ, ಗೆಳೆಯ. ಅದು ರಾಜದ್ರೋಹ ಆಗದೇನು?" ಎಂದು ಒಣಗಿದ ನಾಲಿಗೆಯಿಂದ ಅಮಾತ್ಯ ಪ್ರಶ್ನಿಸಿದ.

"ರಾಕ್ಷಸ! ರಾಜನಿರುವುದು ರಾಷ್ಟ್ರಕ್ಕಾಗಿಯೇ ಹೊರತು, ರಾಷ್ಟ್ರ ರಾಜನಿಗಾಗಿ ಅಲ್ಲ. ನಾಳೆ ಅಲಿಕಸುಂದರನೇ ರಾಜನಾದರೆ ಅವನ ಭಕ್ತಿಯನ್ನೇ ರಾಜಭಕ್ತಿ ಎಂದೊಪ್ಪುವೆಯ? ರಾಷ್ಟ್ರ ಹಾಗೂ ದೇಶ ಭಕ್ತಿಗೆ ಪೋಷಕವಾಗುವುದೇ ನಿಜವಾದ ರಾಜಭಕ್ತಿ. ಹಾಗಿಲ್ಲವಾದರೆ ಅದು ತೀರ ಪಾಪಕರ, ತ್ಯಾಜ್ಯ!"

"ಆದರೆ ನಾನು ಇಷ್ಟು ದಿನವೂ ರಾಜನ ಅನ್ನ ಉಂಡಿದೇನೆ ಚಾಣಕ್ಯ!"

"ಛೀಃ, ಛೀಃ! ಅರಿಯದ ಮಗುವಿನ ಹಾಗೆ ಮಾತನಾಡುವೆಯಲ್ಲಾ. ನೀನು ಉಂಡಿರುವ ಅನ್ನ ಭಾರತದ ಮಣ್ಣಿನದು. ಇಂದು ಅದರ ಮೇಲೆ ಗಂಡಾಂತರ ಬಂದೆರಗಿದೆ, ಅದರ ಅನ್ನದ ಋಣ ತೀರಿಸೋಣ ಬಾ."

"ಕ್ಷಮಿಸು ಚಾಣಕ್ಯ, ಅಷ್ಟಕ್ಕೆ ನಾನು ಶಕ್ತನಲ್ಲ."

ಆರ್ಯ ಚಾಣಕ್ಯನ ಹಿರಿಯಾಸೆಗಳಿಗೆಲ್ಲ ತಣ್ಣೀರೆರೆಚಿದಂತಾಯಿತು. ಆದರೂ ಅವನ ಸಾಹಸ ಕುಸಿಯಲಿಲ್ಲ. ಅಲ್ಲಿಂದ ಅವನು ಒಂದು ಮಾತಿಲ್ಲದೆ ಹೊರಬಿದ್ದ. ಅಮಾತ್ಯನು ಅವನನ್ನು ತಡೆದು ನಿಲ್ಲಿಸಬೇಕೆಂದುಕೊಂಡ. ಆದರೆ ಅಷ್ಟು ಧೈರ್ಯವಾಗಲಿಲ್ಲ.



## ೭. 'ಜಗಜ್ಜೇತ'ನ ತೇಜೋವಧೆ

ಕಾರ್ಯನಿಷ್ಠನಾದ ಕೌಟಿಲ್ಯನು ಪಂಚನದಕ್ಕೆ ಹೊರಟ. ಅಲ್ಲಿ ಹೋಗಿ ಅಲ್ಲಿನ ಸಣ್ಣ ಪುಟ್ಟ ರಾಜರನ್ನೆಲ್ಲ ಒಗ್ಗೂಡಿಸಬೇಕು; ಅಲಿಕಸುಂದರನನ್ನು ಎಲ್ಲರೂ ಒಂದಾಗಿ ಎದುರಿಸುವಂತೆ ಮಾಡಬೇಕು ಎಂಬುದು ಅವನ ನಿಶ್ಚಯ. ಆದರೆ ಅಲ್ಲಿ ಹೋಗಿ ನೋಡಿದಾಗ ಅವನಿಗೆ ಕೆಲಸ ಮಾಡುವ ಕಷ್ಟವೇ ಉಳಿದಿರಲಿಲ್ಲ. ಚಂದ್ರಗುಪ್ತನು ಮೊದಲೇ ಆ ಕಾರ್ಯವನ್ನು ಮಾಡಿ ಮುಗಿಸಿದ್ದ. ಚಾಣಕ್ಯನು ಮಗಧದ ಕಡೆ ಹೊರಟ ನಂತರ ಚಂದ್ರಗುಪ್ತನು ಪಂಚನದಕ್ಕೆ ಹೋದ. ಅಲ್ಲಿ ಊರೂರು ಸುತ್ತಿ ಅಲ್ಲಿನ ರಾಜರೊಡನೆ, ಅವರ ಸೇನಾಪತಿಗಳು ಹಾಗೂ ಗಣರಾಜ್ಯಗಳ ಪ್ರತಿನಿಧಿಗಳೊಡನೆ ಅವನು ಮಾತುಕತೆಯಾಡಿದ. ಅವರಿಗೆ ನಿಜ ಸ್ಥಿತಿ ತಿಳಿಸಿದ. ಪ್ರತ್ಯಕ್ಷ ರಾಜಾಪರ್ವತಕನನ್ನೇ ಸಂಧಿಸಿ, ಅವನಲ್ಲಿ ಹುದುಗಿದ್ದ ದೇಶ ಪ್ರೇಮವನ್ನು ಎಚ್ಚರಿಸಿದ. "ಮಹಾರಾಜರೇ, ತಮ್ಮಂಥ ಪುತ್ರರಿಗೆ ಜನ್ಮವಿತ್ತು ಭಾರತ ಭೂಮಿ ಧನ್ಯವಾಗಿದೆ. ಜಗತ್ತಿನಲ್ಲೆ ತನಗೆ ಎದುರು ನಿಲ್ಲಬಲ್ಲವರಿಲ್ಲವೆಂದು ದುರಹಂಕಾರದಿಂದ ಮೆರೆಯುತ್ತಿದ್ದ ಅಲಿಕಸುಂದರನ ಕೊಬ್ಬನ್ನು ಅಡಗಿಸಿದವರು ನೀವು. ಆದರೆ, ಪ್ರಭು! ಅವನ ಹಾಲು ಕುಡಿದು ವಿಷಕಾರುವ ಹಾವಿನಂತೆ ತಮ್ಮ ಮನೆಯೊಳಗೆ ನುಗ್ಗಿದ್ದಾನೆ. ಮಗಧವನ್ನು ಗೆದ್ದ ನಂತರ ಅದನ್ನು ನಿಮ್ಮ ವಶಕ್ಕೆ ಕೊಡುವೆನೆಂದು ಭಾವಿಸುವಿರೇನು? ಆ ಧೂರ್ತನು ಏನಾದರೊಂದು ಸಂಚು ಹೂಡಿ ನಿಮ್ಮನ್ನೂ ಮುಗಿಸುವುದು ನಿಶ್ಚಿತ. ಅದೂ ಅಲ್ಲದೆ, ನಿಮ್ಮಿಂದ ಸೋತ ಅವನು ವಿಶ್ವಸಾಮ್ರಾಟನಾಗುವುದು ಮತ್ತು ನೀವು ಅವನ ಕೈಕೆಳಗೆ ಭಾರತದ ಸಾಮ್ರಾಟನಾಗುವುದು ಇದೆಂಥ ಅಪಮಾನ?"

ಈ ವಿಚಾರ ಕೇಳಿ ಪರ್ವತಕನ ಕಣ್ಣು ತೆರೆಯಿತು. ಅವನು ತನ್ನ ಸೈನ್ಯವನ್ನು ನಿಲುಗಡೆಗೆ ತಂದ. ಆ ವೇಳೆಗೆ ಪಂಚನದದ ಸಣ್ಣ ಸಣ್ಣ ಸಂಸ್ಥಾನಗಳೆಲ್ಲವೂ ಒಟ್ಟಾಗಿ ಅಲಿಕಸುಂದರನ ಸೈನ್ಯವನ್ನು ದಿಕ್ಕುಗೆಡಿಸತೊಡಗಿದ್ದವು. ಗುರುವಿನ ಆಣತಿಯಂತೆ ಶೀಲಭದ್ರನೂ ತನ್ನ ಪಾಲಿನ ಕೆಲಸವನ್ನು ಚಾಚೂ ತಪ್ಪದೆ ಮಾಡಿದ್ದ. ಅಲಿಕಸುಂದರನ ಸೈನಿಕರ ಜೀವ ಹಾರತೊಡಗಿತು. ಮಗಧದ ಹೆಸರು ಕೇಳಿದರೆ ಸಾಕು, ಅವರಿಗೆ ಮೈ ನಡುಕ ಹುಟ್ಟುತ್ತಿತ್ತು. ಒಂದು ದಿನ ತಾವಿನ್ನು ಮುಂದೆ

ಹೆಜ್ಜೆಯಿಡಬಾರದೆಂದೂ ಸ್ವದೇಶಕ್ಕೆ ಮರಳಬೇಕೆಂದೂ ನಿಶ್ಚಯಿಸಿದರು. ಅಲಿಕಸುಂದರನು ಎಷ್ಟೋ ಧೈರ್ಯ ಹೇಳಿದ. ತಾನು ಮದ್ಯಪಾನ ನಿಲ್ಲಿಸಿದ, ಮೂರು ದಿನ ಉಪವಾಸ ಕುಳಿತ; ಆದರೆ ಅವನ ಮಾತೊಂದೂ ಸಾಗಲಿಲ್ಲ. ಮುಂದಿನ ಜಯದಾಸೆ ಜಾರಿತು. ಕಡೆಗೆ, ತನ್ನ ನಾಡಿಗೆ ಹಿಂದಿರುಗಿ ಹೋಗಿ, ಕೆಲದಿನಗಳ ನಂತರ ಮರಳಿ ಬಂದು ಭಾರತವನ್ನು ಗೆಲ್ಲಬೇಕೆಂದು ಯೋಚಿಸಿದ.

ಚಂದ್ರಗುಪ್ತನ ಸಾಹಸ ಕಂಡು ಆರ್ಯ ಚಾಣಕ್ಯನಿಗಾದ ಸಂತೋಷ ಅಷ್ಟಿಷ್ಟಲ್ಲ. ಈಗ ಅಲಿಕಸುಂದರನನ್ನು ಜೀವಸಹಿತ ಹಿಂದಿರುಗಲು ಬಿಡಬಾರದೆಂದು ಅವನು ನಿಶ್ಚಯಿಸಿದನು. ಅದಕ್ಕಾಗಿ ಅವರಿಬ್ಬರೂ ಸಿಂಧು ಪ್ರಾಂತ ಹಾಗೂ ಮಕರಾನ ಪ್ರದೇಶಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿನ ಗಣರಾಜ್ಯಗಳನ್ನಂತೂ ಮೊದಲೇ ಅಲಿಕಸುಂದರನ ವಿರುದ್ಧ ಎತ್ತಿಗಟ್ಟಲಾಗಿತ್ತು. ಶತ್ರುವು ಭಾರತದೊಳಕ್ಕೆ ಕಾಲಿರಿಸಿದ ವಾಯವ್ಯದ ದಾರಿ ಈಗ ಮುಚ್ಚಿಹೋಗಿತ್ತು; ಅದೀಗ ಮೃತ್ಯುಮಾರ್ಗವಾಗಿ ಮಾರ್ಪಟ್ಟಿತ್ತು. ಕಾರಣ, ಅಲ್ಲಿ ಸೋತ ಅಶ್ವಕನು ದಂಗೆಯೆದ್ದು ಸ್ವತಂತ್ರನಾಗಿದ್ದ; ಸೇಡು ತೀರಿಸಿಕೊಳ್ಳಲು ಸಮಯ ಕಾದು ಕುಳಿತಿದ್ದ. ಅಲಿಕಸುಂದರನಿಗೆ ಆ ದಾರಿಯಿಂದ ಹಿಂತೆರಳುವ ಧೈರ್ಯವಾಗಲಿಲ್ಲ. ಇತ್ತ ಚಾಣಕ್ಯನು ಸಿಂಧು ದೇಶದ ಜನರನ್ನೂ ಆಕ್ರಮಣಕಾರಿಯ ವಿರುದ್ಧ ರೊಚ್ಚಿಗೆಬ್ಬಿಸಿ, ಸಮುದ್ರ ಮಾರ್ಗವನ್ನು ಮತ್ತಷ್ಟು ಹೆಚ್ಚು ಅಪಾಯಕರಗೊಳಿಸಿದ್ದ.

ಅಲಿಕಸುಂದರನು ತನ್ನ ಸೈನ್ಯವನ್ನು ಎರಡು ಭಾಗವಾಗಿ ವಿಂಗಡಿಸಿದ. ಒಂದು ಭಾಗವು ನಿಯಾರಕಸನ ಅಧೀನದಲ್ಲಿ ಸಮುದ್ರ ಮಾರ್ಗವಾಗಿ ಹಿಂದಿರುಗಬೇಕೆಂದು ಗೊತ್ತಾಯಿತು. ಮತ್ತೊಂದು ಪಡೆಯನ್ನು ಮಕರಾನದ ಮರುಭೂಮಿಯ ಮೂಲಕ ತಾನೇ ತೆಗೆದುಕೊಂಡು ಹೊರಟ. ದಾರಿಯುದ್ದಕ್ಕೂ ಅಲ್ಲಿನ ಮಲ್ಲಿ ಜನರು ಅವನನ್ನು ಹಗಲಿರುಳೂ ಕಾಡಿದರು. ಅವರು ಹೊಡೆದ ಬಾಣವೊಂದು ಅವನ ಎದೆಗೆ ನಾಟಿಕೊಂಡು ದೊಡ್ಡ ಗಾಯವಾಯಿತು. ಪಾರಿಯಾತ್ರ–ಪಾರವರ್ತಿ (ಬಲೂಚಿ) ಜನರೂ ಅವನನ್ನು ನಾನಾ ಸಂಕಟಗಳಿಗೆ ಗುರಿಪಡಿಸಿದರು. ಅವನ ಸಹಸ್ರಾರು ಸೈನಿಕರು ಅನ್ನ ನೀರಿಲ್ಲದೆ ನರಳಿ ಜೀವಬಿಟ್ಟರು. ಅನೇಕರು ಕಾದ ಮರಳಿನಲ್ಲಿ ಬೆಂದುಹೋದರು. ಯುದ್ಧದಲ್ಲಿ ಸತ್ತವರಿಗಂತೂ ಲೆಕ್ಕವಿಲ್ಲ. ಕಡೆಗೊಂದು ದಿನ ಅಲಿಕಸುಂದರನು ಅಳಿದುಳಿದ ಸಂಗಡಿಗರೆದುರಿಗೆ ಬಾಯಿಬಿಟ್ಟ– "ಭಾರತದಲ್ಲಿ ಅಡಿಗಡಿಗೂ ನಾನು ಭಾರತೀಯರ ಕ್ರೋಧ ಮತ್ತು ಹೊಡೆತಕ್ಕೆ ಗುರಿಯಾದೆ. ಅವರು ನನ್ನ ಹೆಗಲು ಗಾಯಗೊಳಿಸಿದರು. ಗಾಂಧಾರದವರು ನನ್ನ ಕಾಲನ್ನು ಮುರಿದರು. ಮಲ್ಲಿ ಜನರೊಡನೆ ಹೋರಾಡುವಾಗ ಒಂದು ಬಾಣದ ಮೊನೆ ನನ್ನ ಎದೆಯನ್ನು ಸೀಳಿತು; ಕತ್ತಿನ ಮೇಲೂ ಒಂದು ಗದೆ ಏಟು



ಬಿತ್ತು. ನಾನು ಭಾರತದ ಮೇಲೆ ಆಕ್ರಮಣ ಮಾಡಿದ್ದು ಜೀವನದಲ್ಲಿ ಎಲ್ಲಕ್ಕಿಂತ ದೊಡ್ಡ ತಪ್ಪಾಯಿತು." ಅವನು ಹೇಗೋ ಜೀವವುಳಿಸಿಕೊಂಡು ಬೇಬಿಲೋನ್ ಸೇರಿದ. ಆ ವೇಳೆಗೆ ಎದೆಯ ವ್ರಣ ತೀವ್ರಗೊಂಡು, ಅದರಿಂದ ತನ್ನ ದೇಶ ಸೇರಿಕೊಳ್ಳುವ ಮೊದಲೇ ಪ್ರಾಣನೀಗಿದ.

ಹೀಗೆ ಚಾಣಕ್ಯ ಮತ್ತು ಚಂದ್ರಗುಪ್ತರು ಒಂದಾಗಿ ಅಲಿಕಸುಂದರನನ್ನು ಭಾರತದಿಂದ ಓಡಿಸಿದ್ದೇ ಅಲ್ಲದೇ, ಅವನ ಸೈನ್ಯವನ್ನೂ ಬಹುಮಟ್ಟಿಗೆ ನಾಶಪಡಿಸಿದರು. ಅವನನ್ನೂ ಸಹ ಇಲ್ಲಿಯೇ ಹೊಡೆದುಹಾಕಲು ಅವರು ಪ್ರಯತ್ನವನ್ನೂ ನಡೆಸಿದರು. ಅವನು ಇಲ್ಲಿ ತಪ್ಪಿಸಿಕೊಂಡರೂ ಬೇಬಿಲೋನ್ ಸೇರುವ ಹೊತ್ತಿಗೆ ಅವನ ಆಯುಷ್ಯ ಮುಗಿಯಿತು. ಆದರೆ ಸಾಯುವ ಮೊದಲು ಅವನು ತನ್ನ ಸೇನಾಧಿಪತಿಯಾಗಿದ್ದ ಸೆಲ್ಯೂಕಸನಿಂದ ಭಾರತ ಗೆಲ್ಲುವ ತನ್ನ ಹೆಬ್ಬಯಕೆಯನ್ನು ಪೂರೈಸಬೇಕೆಂದು ಪ್ರತಿಜ್ಞೆ ಮಾಡಿಸಿಕೊಂಡ.

# ೮. ಸಫಲತೆಗೆ ಕಾರ್ಯತಂತ್ರ

ಸಂಜೆಯ ಸೂರ್ಯ ಪಶ್ಚಿಮಾದ್ರಿಗೆ ಧಾವಿಸುತ್ತಿದ್ದ. ಭಾರತಕ್ಕೆ ಬೆನ್ನು ತಿರುವಿ ಪಡುನಾಡಿಗೆ ಓಡಿಹೋಗುತ್ತಿದ್ದ ಶತ್ರುವಿನ ಬೆನ್ನಮೇಲಿನ ಕೆಂಪು ಹುಣ್ಣಿನಂತಿತ್ತು, ಆ ನೋಟ. ವೈರಿಯ ಪಲಾಯನ ಕಂಡ ದೇಶದ ಆನಂದಗಾನವೋ ಎಂಬಂತೆ ಪಕ್ಷಿ ಸಂಕುಲದ ಕಲರವ ಕೇಳಿಬರುತ್ತಿತ್ತು. ಅನಿರೀಕ್ಷಿತವಾಗಿ ಬಂದೊದಗಿದ ಆಕ್ರಮಣದ ಬಿರುಗಾಳಿಗೆ ಹಿಂದೊಂದು ದಿನ ವಿಪಾಶಾ (ವ್ಯಾಸ) ನದಿಯ ಜಲ ಪ್ರವಾಹ ಕೆರಳಿ ಉಕ್ಕೇರಿ ಬಂದಿತ್ತು. ಇಂದು ಅದು ಸಹ ಶಾಂತವಾಗಿ ಮಧುರ ಸ್ವರದೊಡನೆ ಹರಿದಿತ್ತು. ಇಡೀ ದೇಶದ ಜನತೆಯೂ ಸಂತಸದಿಂದ ಉಸಿರಾಡುತ್ತಿತ್ತು. ಆದರೆ ವಿಪಾಶಾತೀರದಲ್ಲಿ ಕುಳಿತ ಇಬ್ಬರ ಮನಸ್ಸಿಗಿನ್ನೂ ಶಾಂತಿಸಮಾಧಾನಗಳು ಲಭಿಸಿರಲಿಲ್ಲ. ಅವರು ಯಾವುದೋ ಕಠಿಣ ಸಮಸ್ಯೆಯನ್ನು ಬಿಡಿಸುವಲ್ಲಿ ಮಗ್ನರಾಗಿದ್ದರು.

"ಕಡೆಗೂ ಅಲಿಕಸುಂದರನು ತನ್ನ ಪ್ರಾಣವನ್ನೇ ತೆರಬೇಕಾಯಿತು."– ಮೌನ ಮುರಿಯುತ್ತಾ ಚಂದ್ರಗುಪ್ತನೆಂದ.

"ಹೌದು; ಭಾರತವನ್ನು ಆಕ್ರಮಿಸಿದುದಕ್ಕೆ ತಕ್ಕ ಫಲ ಅನುಭವಿಸಿದ ಅವನು. ಆದರೆ ಗಂಡಾಂತರವಿನ್ನೂ ತಪ್ಪಿಲ್ಲ. ಅಂಟುಜಾಡ್ಯ ಬಂದರೆ ರೋಗಿಯಂತೂ ಸಾಯುತ್ತಾನೆ; ಆದರೆ ಜಾಡ್ಯವನ್ನು ಜಗತ್ತಿಗೆ ಬಿಟ್ಟೇ ಸಾಯುತ್ತಾನೆ. ರೋಗದ ವಿಷಕ್ರಿಮಿಗಳು ಗಾಳಿಯಲ್ಲಿ ಹರಡಿ, ಬೇರೆಯವರನ್ನು ಬಲಿತೆಗೆದುಕೊಳ್ಳುತ್ತವೆ. ಈಗ ಸೆಲೆಯುಕನು ಭಾರತವನ್ನು ಗೆಲ್ಲಬಯಸಿದ್ದಾನೆ."

"ಜಗಜ್ಜೇತನಾಗಲು ಹೊರಟ ಅಲಿಕಸುಂದರನ ಆಟವೇ ಇಲ್ಲಿ ಸಾಗಲಿಲ್ಲ ಅಂದಮೇಲೆ ಸೆಲೆಯುಕನು ಭಾರತ ಜಯಿಸುವ ಕನಸು ಹೇಗೆ ಕಂಡಾನು? ಅಲ್ಲದೆ, ಆರ್ಯ! ಅಲಿಕಸುಂದರನ ಸಾಮ್ರಾಜ್ಯಕ್ಕಾಗಿ ಅವನ ಸೇನಾಧಿಕಾರಿಗಳಾದ ಸೆಲೆಯೂಕ್ ಮತ್ತು ಒಟಾಲೇಮಿ ಇವರಿಬ್ಬರಲ್ಲಿ ಕಚ್ಚಾಟ ನಡೆದಿದೆಯೆಂದು ಕೇಳಿದೆ!"

"ಅದೆಲ್ಲ ನಿಜ. ಆದರೆ ಭಾರತದ ಸಾಮರ್ಥ್ಯದಿಂದ ಮಾತ್ರ ಭಾರತಕ್ಕೆ ಹಿತವಾದೀತು. ಅವರಿವರ ದುರ್ಬಲತೆಯ ಆಧಾರದ ಮೇಲೆ ನಾವೆಷ್ಟು ದಿನ



ಬದುಕಬಲ್ಲೆವು? ಭಾರತದಲ್ಲಿ ಸಾಮರ್ಥ್ಯಸಂಪನ್ನ ಸಾಮ್ರಾಜ್ಯ ನಿರ್ಮಿಸುವ ನಿನ್ನ ಧ್ಯೇಯವನ್ನು ಇಷ್ಟು ಬೇಗ ಮರೆತೆಯೇನು?"

"ಇಲ್ಲ, ಮರೆತಿಲ್ಲ. ಆ ಭವ್ಯ ಧ್ಯೇಯವನ್ನು ಮರೆಯಲು ಅದು ಹೇಗೆ ಸಾಧ್ಯ?

ಅಲಿಕಸುಂದರನನ್ನು ಹೊರಗಟ್ಟಿದುದರಿಂದ ಸ್ವಲ್ಪ ಉಸಿರಾಡಲು ಅವಕಾಶ ಸಿಕ್ಕಿತೆಂದು ಸಂತಸಗೊಂಡಿದ್ದೇನೆ, ಅಷ್ಟೆ."

ಆರ್ಯ ಚಾಣಕ್ಯರು ಚಿಂತಿತರಾಗಿ ಹೇಳಿದರು– "ಈಗ ಸಾವಿರದಲ್ಲಿ ಒಂದು ಪಾಲಿನಷ್ಟೂ ಕೆಲಸವಾಗಿಲ್ಲ ಚಂದ್ರಗುಪ್ತ. ನೀನು ಮಗಧ ಸಿಂಹಾಸನ ಏರಿದಾಗಲೇ ಭಾರತದ ಅಜೇಯ ಸಾಮರ್ಥ್ಯದ ಹೊಂಬೆಳಕು ಮೂಡುವಂತಾದೀತು. ಮುಖ್ಯ ಕೆಲಸ ಇನ್ನೂ ಆಗಬೇಕಾಗಿದೆ."

ಚಂದ್ರಗುಪ್ತ ಚಾಣಕ್ಯರಿಬ್ಬರೂ ತಮ್ಮ ಮುಂದಿನ ಕೆಲಸ ಕಾರ್ಯಗಳ ಬಗ್ಗೆ ಚರ್ಚಿಸಿದರು. ವಾಯುವ್ಯ ಗಡಿನಾಡು, ಸಿಂಧು ಮತ್ತು ಈಗಿನ ರಾಜಸ್ಥಾನದ ಸಣ್ಣಪುಟ್ಟ ರಾಜ್ಯಗಳಲ್ಲೆಲ್ಲ ಚಂದ್ರಗುಪ್ತನ ಪ್ರಭಾವ ಚೆನ್ನಾಗಿ ಹರಡಿತ್ತು. ಅಲ್ಲಿನ ದೊರೆಗಳೆಲ್ಲರೂ ಅವನನ್ನೇ ತಮ್ಮ ನಾಯಕನೆಂದು ಭಾವಿಸಿದ್ದರಲ್ಲದೆ, ಅವನ ಮುಂದಾಳುತನದಲ್ಲೆ ಅಲಿಕಸುಂದರನನ್ನು ಭಾರತದಿಂದ ಹೊರಗಟ್ಟಿದ್ದರು. ಆದರೆ ಏಕಛತ್ರಾಧಿಷ್ಠಿತ ಸಾಮ್ರಾಜ್ಯ, ಸ್ಥಾಪಿಸಲು ಪ್ರಬಲ ಅಡ್ಡಿಗಳಾಗಿದ್ದವರೆಂದರೆ ನಂದ ಮತ್ತು ಪರ್ವತಕ. ಭಾರತದಲ್ಲಿ ಆಗಿನ ಎಲ್ಲಕ್ಕಿಂತ ದೊಡ್ಡ ರಾಜ್ಯವೆಂದರೆ ಮಗಧ. ಆದರೆ ಪರ್ವತಕನ ರಾಜ್ಯ ಸಹ ಸಾಮಾನ್ಯವಾದುದೇನಾಗಿರಲಿಲ್ಲ. ಅಲ್ಲದೆ, ಅಲಿಕ ಸುಂದರನ ಸಹಾಯದಿಂದ ಅವನು ಪಂಚನದದ ಕಿರಿರಾಜ್ಯಗಳೇನಕವನ್ನು ಗೆದ್ದು ತನ್ನ ರಾಜ್ಯವನ್ನು ಮತ್ತಷ್ಟು ವಿಸ್ತರಿಸಿಕೊಂಡಿದ್ದ. ರಾಜಾನಂದನಾದರೂ ದುರ್ವ್ಯಸನಿ. ಅವನ ಇಡೀ ಆಯುಷ್ಯದಲ್ಲಿ ಮಹತ್ಸಾಧನೆಗಳನ್ನು ಮಾಡುವ ಕಲ್ಪನೆಯೇ ಸುಳಿದಿರಲಿಲ್ಲ. ಪರ್ವತಕನಿಗಾದರೋ ಮಿತಿಯಿಲ್ಲದಷ್ಟು ಮಹತ್ವಾಕಾಂಕ್ಷೆಗಳು. ಇಡೀ ಭಾರತದ ಚಕ್ರವರ್ತಿಯಾಗುವ ಹೆಬ್ಬಯಕೆ ಅವನಿಗೆ. ಚಂದ್ರಗುಪ್ತ ಮತ್ತು ಚಾಣಕ್ಯರು ಇದನ್ನು ಅರ್ಥಮಾಡಿಕೊಂಡಿದ್ದರು.

"ಪರ್ವತಕನು ಭಾರತದ ಸಾಮ್ರಾಟನಾಗಬೇಕೆಂದಿದ್ದಾನೆ; ನಿನಗೆ ಗೊತ್ತೇ ಚಂದ್ರಗುಪ್ತ?" ಎಂದು ಚಾಣಕ್ಯ ಪ್ರಶ್ನಿಸಿದ.

"ಹೌದು ಆರ್ಯ! ತಿಳಿದಿದೆ. ಆದ್ದರಿಂದಲೇ ಅವನು ಅಲಿಕಸುಂದರನನ್ನು ಸೋಲಿಸಿಯೂ ಅವನ ಸ್ನೇಹಕ್ಕಾಗಿ ಕೈಚಾಚಿದ್ದ. ಆದರೆ ಈಗೇನು ಉಳಿದಿದೆ? ಅಲಿಕಸುಂದರನೇ ಈ ಜಗತ್ತು ಬಿಟ್ಟುಹೋಗಿದ್ದಾನೆ."

"ಅಲಿಕಸುಂದರನಿಲ್ಲದಿದದ್ದರೆ ಏನಾಯಿತು, ಅವನ ಸೇನಾಧಿಪತಿ ಸೆಲೆಯೂಕನಂತೂ ಇದ್ದಾನಲ್ಲ. ಪರ್ವತಕನು ತನ್ನ ದುರಾಶೆಯ ಪೂರ್ತಿಗಾಗಿ ಸೆಲೆಯೂಕನ ಸಹಾಯ ಪಡೆಯಲೂ ಹಿಂದೆ ಮುಂದೆ ನೋಡುವವನಲ್ಲ; ಅಷ್ಟು ಅತಿಯಾಸೆ ಅವನನ್ನು ತೀರ ಕುಡುಡಾಗಿ ಮಾಡಿದೆ. ಪರಕೀಯನನ್ನು ನೆರವಿಗೆ ಕರೆಯುವುದೆಂದರೆ ಬೀದಿಯ ಮಾರಿಯನ್ನು ಮನೆಗೆ ಕರೆದಂತೆ! ಉದ್ಧ ಮನೆಮುರುಕುತನ!"

"ಹಾಗಾದರೆ ಮೊದಲ ಯುದ್ಧ ಪರ್ವತಕನ ಜತೆಗೇ ನಡೆದುಹೋಗಲಿ" ಎಂದು ಆವೇಶದಿಂದ ಚಂದ್ರಗುಪ್ತನೆಂದ.

ಆರ್ಯ ಚಾಣಕ್ಯ ನಸುನಕ್ಕು ಹೇಳಿದ– "ಹಾಗಲ್ಲ; ಪರ್ವತನೊಡನೆ ಈಗಲೇ ಹೋರಾಡುವ ಅಗತ್ಯವಿಲ್ಲ. ನಂದ ಮತ್ತು ಪರ್ವತಕ ನಮ್ಮ ಮಾರ್ಗದಲ್ಲಿ ಎರಡು ಮುಳ್ಳುಗಳಂತಿದ್ದಾರೆ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯುವುದು ಬುದ್ಧಿವಂತರ ಲಕ್ಷಣ. ನಂದನಂತೂ ವಿಲಾಸಿ, ಆಲಸಿ ಮತ್ತು ಹೇಡಿ. ಅವನಲ್ಲಿ ಯಾವುದೇ ಹಿರಿದಾದ ಹಂಬಲವೂ ಇಲ್ಲ. ಆದರೆ ಪರ್ವತಕನಿಗೆ ಅಂಥ ಹೆಬ್ಬಯಕೆ ಉಂಟು. ಅವನು ಮಗಧದ ಮೇಲೆ ಆಕ್ರಮಣ ಮಾಡುವಂತೆ ಪುಸಲಾಯಿಸೋಣ; ಅವನು ಅದಕ್ಕೆ ಮೊದಲೇ ಸಿದ್ಧ. ನಂದನನ್ನು ಅವನು ಸೋಲಿಸಿಯೇ ತೀರುತ್ತಾನೆ. ಆಗ ಅವನ ಆಡಳಿತ ಮಗಧದಲ್ಲಿ ತಳವೂರುವ ಮೊದಲೇ ನೀನು ಮಗಧದ ಆಪದ್ಬಾಂಧವನಂತೆ ಮೇಲೆ ಬಂದು ಪರ್ವತಕನೊಡನೆ ಯುದ್ಧಕ್ಕೆ ಸಿದ್ಧನಾಗಬೇಕು. ಯುದ್ಧದಲ್ಲೋ ಅಥವಾ ಇನ್ನಾವುದಾದರೂ ಒಳಸಂಚಿನಿಂದಲೋ ಪರ್ವತಕನನ್ನು ಮುಗಿಸಬೇಕು. ಮಗಧದ ಜನತೆ ನಿನ್ನನ್ನೇ ತಮ್ಮ ಭಾಗದ ದೇವರೆಂದು ತಿಳಿದು ಪಟ್ಟಕ್ಕೇರಿಸುತ್ತಾರೆ. ಅದಕ್ಕಾಗಿ ನಾನೀಗಲೇ ಹೋಗಿ ನಂದನ ವಿರುದ್ಧ ಜನರನ್ನು ರೊಚ್ಚಿಗೆಬ್ಬಿಸಿ ಸಂಘಟಿಸುತ್ತೇನೆ. ನೀನು ಪರ್ವತಕನನ್ನು ಸಂಧಿಸಿ ಆಕ್ರಮಣದ ಸಿದ್ಧತೆ ನಡೆಸು."

"ಆರ್ಯ! ಪರ್ವತಕನಿಗೆ ಹೀಗೆ ಎರಡು ಬಗೆಯುವುದು ಎಷ್ಟರಮಟ್ಟಿಗೆ ಯೋಗ್ಯ? ನನ್ನ ಜಾಗದಲ್ಲಿ ಅವನೇ ಭಾರತದ ಚಕ್ರವರ್ತಿ ಆಗಲಿ ಬಿಡಿ. ನಮಗೆ ಬೇಕಾಗಿರುವುದು ಏಕಛತ್ರಾಧಿಷ್ಠಿತ ಸಾಮ್ರಾಜ್ಯವಷ್ಟೆ! ಇನ್ನು ಚಕ್ರವರ್ತಿ ಯಾರಾದರೇನಂತೆ?"

"ಅದೇ ತಪ್ಪು, ಚಂದ್ರಗುಪ್ತ. ಇನ್ನೂ ಸ್ವಲ್ಪ ಅನುಭವ ಬೇಕು ನಿನಗೆ. ನೀನು ಚಕ್ರವರ್ತಿಯಾಗಲಿರುವುದು ನಿನಗಾಗಿ ಅಲ್ಲ, ಭಾರತಕ್ಕಾಗಿ. ಚಂದ್ರಗುಪ್ತನು ಸಾಮ್ರಾಟನಾಗುವುದಿಲ್ಲ. ಭಾರತದ ಸಾಮ್ರಾಟನೇ ಚಂದ್ರಗುಪ್ತನಾಗುತ್ತಾನೆ. ಪರ್ವತಕನಂಥ ದುರಾಶಾಗ್ರಸ್ತನು, ಅವನು ಎಷ್ಟೇ ವೀರನಾದರೂ ಸರಿಯೆ, ಸಾಮ್ರಾಟನಾಗಲು ಯೋಗ್ಯನಲ್ಲ. ಭಾರತದ ಸಾಮ್ರಾಟ ಪದಕ್ಕೆ ಸ್ವಾರ್ಥತ್ಯಾಗಿಯಾದ



ಮತ್ತು ಸಂಯಮ, ದೃಢತೆಗಳಿಂದ ಜನಸೇವೆಗೆ ಕಂಕಣತೊಡುವ ವ್ಯಕ್ತಿಯೇ ಬೇಕು. ಈ ಗುಣಗಳನ್ನು ದೇವರು ನಿನಗಿತ್ತಿದ್ದಾನೆ. ನೀನು ಅಜ್ಞಾನದಿಂದ ಅವು ನಿನ್ನವೆಂದೇ ತಿಳಿದುಬಿಟ್ಟಿರುವೆ. ದೇಶಕ್ಕೆ ಸೇರಿದವು ಅವು; ಅದರ ಯೋಗ್ಯ ಉಪಯೋಗ ಪಡೆದುಕೊಳ್ಳುವ ಅಧಿಕಾರ ಸಹ ದೇಶದ್ದೇ. ಸಾಮ್ರಾಟ ಆಗುವುದಕ್ಕೂ, ಬಿಡುವುದಕ್ಕೂ ನೀನಾರು? ಇಂದು ದೇಶಕ್ಕೆ ಅಗತ್ಯಬಿದ್ದರೆ ಸಾಮ್ರಾಟನೂ ಆಗಬೇಕು; ನಾಳೆ ಭಿಕ್ಷುಕನಾಗಬೇಕಾಗಿ ಬಂದರೆ ಅದಕ್ಕೂ ಸಿದ್ಧನಾಗಬೇಕು."

ಹೇಳಹೇಳುತ್ತಾ ಆರ್ಯ ಚಾಣಕ್ಯ ಭಾವಪರವಶನಾದನು. ಚಂದ್ರಗುಪ್ತನು ವಿನೀತನಾಗಿ ತಗ್ಗಿದ ದನಿಯಲ್ಲಿ "ಪೂಜ್ಯರೇ" ಕ್ಷಮಿಸಿ. ದೇಶದೆದುರು ವೈಯಕ್ತಿಕ ಸ್ವಾರ್ಥಕ್ಕೆ ನಾನೇನೂ ಮಹತ್ವ ನೀಡಿಲ್ಲ. ಆದರೆ, ಸರ್ವಾಂಗ ಪರಿಪೂರ್ಣ ದೇಶಭಕ್ತಿಯ ಕಲ್ಪನೆ ಇದುತನಕ ನನಗೆ ಹೊಳೆದಿರಲಿಲ್ಲವೆಂಬುದಂತೂ ನಿಜ. ಇಂದು ನಿಜಕ್ಕೂ ನಾನೊಂದು ಹೊಸ ಪಾಠ ಕಲಿತೆ" ಎಂದನು.

"ಹೌದು; ಈ ಪುಣ್ಯಭೂಮಿ ಭಾರತದ ಸಂರಕ್ಷಣೆಗಾಗಿ ಒಬ್ಬ ಪರ್ವತಕನನ್ನೇ ಏನು, ಇನ್ನೂ ಎಷ್ಟೋ ಪರ್ವತಕರನ್ನು ಬಲಿಕೊಡಬೇಕಾದೀತು. ಒಳ್ಳೆಯದು, ಈಗ ಮೇಲೇಳು. ಮೊದಲು ಬಾಹೀಕಕ್ಕೆ ಹೋಗಿ ಅಲ್ಲಿ ಜನಜಾಗೃತಿ ಮಾಡು, ಭಾರತದ ಆ ಭಾಗ ಇನ್ನೂ ಅಲಿಕಸುಂದರನ ರಾಜ್ಯದಲ್ಲೇ ಉಳಿದಿದೆ. ದಂಗೆಯೇಳಲು ಇದೇ ಸುಸಮಯ. ಅಲ್ಲಿನ ಮತ್ತು ಇತರ ಸಣ್ಣಪುಟ್ಟ ರಾಜ್ಯಗಳ ಸೇನೆಯನ್ನು ಸಂಘಟಿಸಿ, ಪರ್ವತಕನ ಜತೆಗೂಡಿ ನಂದನ ಮೇಲೆ ಆಕ್ರಮಣ ನಡೆಸಲು ತಯಾರಿ ನಡೆಸು."

# ೯. ಸಿಂಹಾಸನದಡಿಯ ಸಿಡಿಮದ್ದು

ಚಂದ್ರಗುಪ್ತನನ್ನು ಬೀಳ್ಕೊಟ್ಟು ಆರ್ಯ ಚಾಣಕ್ಯನು ಮಗಧರ ಕಡೆಗೆ ಹೆಜ್ಜೆ ಹಾಕಿದ. ಕೆಲವು ವರ್ಷಗಳ ಮೊದಲು ಸಹ ಅದೇ ದಾರಿಯಲ್ಲಿ ಅವನು ನಡೆದಿದ್ದ; ಆಗ ಹೋಗಿದ್ದುದು, ಅಲಿಕಸುಂದರನನ್ನು ಭಾರತದಿಂದೋಡಿಸಲು ಮಗಧರಾಜನಿಗೆ ಅವನ ಕರ್ತವ್ಯವನ್ನು ಅರುಹಿ ಅವನಿಂದ ಸಹಾಯ ಪಡೆಯುವ ಸಲುವಾಗಿ! ಇಂದು ಹೊರಟಿದ್ದುದಾದರೊ ಮುಂದೆ ಯಾವೊಬ್ಬ ಅಲಿಕಸುಂದರನೂ ಭಾರತದೆಡೆಗೆ ಮುಖ ಸಹ ತಿರುಗಿಸದಿರುವಂತೆ ಮಗಧದಲ್ಲೊಂದು ಬಲಿಷ್ಠ ಸಾಮ್ರಾಜ್ಯ ಕಟ್ಟಲು ನಂದವಂಶವನ್ನೇ ನಿರ್ಮೂಲಗೊಳಿಸುವುದಕ್ಕಾಗಿ! ಅವನಿಂದು ಯಾಚಕನಾಗಿ ಅಲ್ಲ. ಸಂಹಾರಕನಾಗಿ ಹೊರಟಿದ್ದಾನೆ. ಆದರೆ ಯಾಚನೆ ಹಾಗೂ ಸಂಹಾರ ಇವೆರಡರ ಹಿಂದೆಯೂ ಇದ್ದ ಪ್ರೇರಣೆ ಒಂದೇ– ಸಾತ್ವಿಕ ದೇಶಪ್ರೇಮ; ಉದ್ದೇಶವೂ ಒಂದೇ– ದೇಶರಕ್ಷಣೆ. ರಾತ್ರಿಯ ಗಾಡಾಂಧಕಾರದಲ್ಲಿ ಆ ಕರಾಳ ವ್ಯಕ್ತಿಯನ್ನು ಯಾರೂ ಗುರುತಿಸಲಿಲ್ಲ. ವೇಷ ಬದಲಿಸಿಕೊಂಡು ಕೌಟಿಲ್ಯ ಕುಸುಮಪುರದ ಒಳಹೊಕ್ಕನು. ರಾಜಾ ನಂದನಿಗೆ ಇದೊಂದೂ ತಿಳಿಯದು; ಮದಿರೆಯ ಅಮಲೇರಿ ಅವನು ರಾಜಮಹಲಿನಲ್ಲಿ ಹೊರಳುತ್ತ ಬಿದ್ದಿದ್ದ. ಸರ್ವನಾಶ ಸಮೀಪಿಸುವುದೇ ಹೀಗೆ; ಅದು ಛದ್ಮವೇಶದಿಂದ ಸದ್ದಿಲ್ಲದೆ ಪ್ರವೇಶಿಸುತ್ತದೆ.

ಕುಸುಮಪುರಕ್ಕೆ ಕಾಲಿಟ್ಟುದೇ ತಡ, ರಾಜ್ಯಯಂತ್ರವನ್ನು ಕೊರೆಯುವ ಕೆಲಸ ಶುರುವಾಯಿತು. ಚಾಣಕ್ಯನು ಕ್ಷಣಕ್ಷಣವೂ ನಂದನ ಬುಡವನ್ನು ಪೊಳ್ಳು ಮಾಡತೊಡಗಿದ. ಮೊದಲೇ ನಂದನ ಆಡಳಿತ ಅವನಿಗೆ ಸಹಿಸಲಸಾಧ್ಯವಾಗಿತ್ತು. ಈಗ ಪ್ರತ್ಯಕ್ಷ ಅವನ ರಾಜ್ಯದಲ್ಲೇ ಇದ್ದುಕೊಂಡು ಅವನ ದುರಾಚಾರಗಳನ್ನು ಕಣ್ಣೆದುರಿಗೇ ಕಾಣುತ್ತಿದ್ದುದರಿಂದ ಮತ್ತಷ್ಟು ಹೆಚ್ಚಾಗಿ ಅವನು ರೊಚ್ಚಿಗೆದ್ದನು. ಮನಸ್ಸು ರೊಚ್ಚಿಗೆದ್ದಷ್ಟೂ ಹೆಚ್ಚು ಹೆಚ್ಚು ಭರದಿಂದ ಅವನ ಕಾರ್ಯ ಸಾಗಿತು. ನಂದನ ವಿರುದ್ಧ ಜನರಲ್ಲಿ ಹುದುಗಿದ್ದ ಅಸಂತೋಷವನ್ನು ಚಾಣಕ್ಯನು ಪೂರ್ತಿಯಾಗಿ ತನ್ನ ಅನುಕೂಲಕ್ಕೆ ಬಳಸಿಕೊಂಡನು. ಅಮಾತ್ಯರಾಕ್ಷಸ ಮತ್ತು ಸೇನಾಧಿಕಾರಿಯಾದ ಭಾಗುರಾಯಣರಲ್ಲಿ ಮೊದಲಿನಿಂದ ಮನಸ್ತಾಪ ಇತ್ತು. ಅದನ್ನು ಇನ್ನಷ್ಟು ಹೆಚ್ಚಿಸಿ, ಸೇನಾಧಿಪತಿಯನ್ನು ಚಾಣಕ್ಯನು ತನ್ನ ಕಡೆಗೆ ಎಳೆದುಕೊಂಡನು. ಶಕಟಾರನೆಂಬ



ಸಾಮಂತನ ಆರು ಗಂಡು ಮಕ್ಕಳನ್ನು ನಂದನು ಕೊಂದಿದ್ದನು. ಆದ್ದರಿಂದ ಆ ಸಾಮಂತನೂ ಚಾಣಕ್ಯನ ಕಡೆಗೆ ಬಂದು ಸೇರಿದನು.

ಕುಸುಮಪುರದಲ್ಲಿ ಆಗಬೇಕಾಗಿದ್ದ ಸಿದ್ಧತೆಗಳೆಲ್ಲವೂ ಮುಗಿಯಿತು. ಮಗಧದ ಮೇಲೆ ದಾಳಿ ಹೂಡಲು ಚಂದ್ರಗುಪ್ತನಿಗೆ ಸೂಚನೆ ಕಳುಹಿಸುವ ಬಗ್ಗೆ ಚಾಣಕ್ಯ ಯೋಚಿಸುತ್ತಿದ್ದ. ಅಷ್ಟರಲ್ಲೇ ಚಂದ್ರಗುಪ್ತನ ಕಡೆಯ ದೂತನೊಬ್ಬ ಬಂದು ನಮಸ್ಕರಿಸಿ ನಿಂತ; ಕುಶಲಪ್ರಶ್ನೆಗಳಾದುವು. ಅವನು ಬಂದ ಸಂಗತಿಯೇನೆಂದು ಆರ್ಯ ಚಾಣಕ್ಯನು ವಿಚಾರಿಸಿದ. ಅದಕ್ಕೆ ದೂತನು "ಬಾಹೀಕ ಗಣರಾಜ್ಯ ಈಗ ಸ್ವತಂತ್ರವಾಗಿದೆ. ಮಹಾರಾಜ ಚಂದ್ರಗುಪ್ತನು ಅಲ್ಲಿ ಹೋದ ನಂತರ ಅಲ್ಲಿ ಸ್ವಾತಂತ್ರ್ಯದ ಕಹಳೆ ಮೊಳಗಿಸಿ ಅವರಲ್ಲಿ ನವಚೈತನ್ಯ ಹುಟ್ಟಿಸಿದರು. ಜನರ ಸ್ವಾಭಿಮಾನದ ಕಿಚ್ಚು ಉರಿದೆದ್ದಿತು ಆಗಲೇ ಅಲ್ಲಿದ್ದ ಯುನಾನಿನ ಕ್ಷತ್ರಪನೊಡನೆ ಅವರ ದಾಸ್ಯವೂ ಸುಟ್ಟುರಿದು ಭಸ್ಮವಾಗಿಹೋಯಿತು. ಈಗ ಚಂದ್ರಗುಪ್ತರೇ ಅಲ್ಲಿನ ಅಧಿಪತಿಯಾಗಿದ್ದಾರೆ" ಎಂದು ಬಿನ್ನವಿಸಿದ.

"ಇದಂತೂ ಸರಿ. ಉಳಿದ ರಾಜ್ಯಗಳ ಸುದ್ದಿಯೇನು?"

"ಪೂಜ್ಯರೇ! ಮಹಾರಾಜರು ಕುಲೂತದ ಚಿತ್ರವರ್ಮಾ, ಮಲಯದ ಸಿಂಹನಾದ, ಕಾಶ್ಮೀರದ ಪುಷ್ಕರಾಕ್ಷ ಮತ್ತು ಸಿಂಧು ಪ್ರಾಂತದ ಸಿಂದು ರಾಜನನ್ನೂ, ಇತರ ಸಣ್ಣಪುಟ್ಟ ಗಣರಾಜ್ಯಗಳನ್ನೂ ತಮ್ಮ ಪಕ್ಷಕ್ಕೆ ಒಲಿಸಿಕೊಂಡಿದ್ದಾರೆ. ಚಂದ್ರಗುಪ್ತರಿಂದ ಆಜ್ಞೆ ದೊರೆತರೆ ಸಾಕು. ಮುನ್ನುಗ್ಗಲು ಅವರೆಲ್ಲರೂ ತಂತಮ್ಮ ಸೇನೆಯೊಡನೆ ಸಜ್ಜಾಗಿ ನಿಂತಿದ್ದಾರೆ."

"ಪರ್ವತಕನ ಹತ್ತಿರ ಮಾತುಕತೆಯಾಯಿತೋ ಇಲ್ಲವೋ?"

"ಹೌದು; ಮಗಧರ ಆಕ್ರಮಣಕ್ಕೆ ಅವನೇ ಮುಂದಾಳು. ಭಾರತದ ಭಾವೀ ಸಾಮ್ರಾಟರಾಗುವ ಕನಸು ಕಾಣುತ್ತಾ ಅವರೂ ಸೈನ್ಯ ಸಹಿತ ಮುಂದುವರಿಯುತ್ತಿದ್ದಾರೆ. ನಿಮ್ಮ ಆಣತಿಯೇನು ಮತ್ತು ಆಕ್ರಮಣಕ್ಕೆ ಯಾವುದು ಸುಸಮಯ ಎಂದು ತಿಳಿದುಬರಲು ಚಂದ್ರಗುಪ್ತನು ನನ್ನನ್ನು ಕಳುಹಿದ್ದಾರೆ."

ಚಾಣಕ್ಯ ವಿಚಾರಮಗ್ನನಾದ. ಪ್ರಶಸ್ತದಿನ ಯಾವುದೆಂಬುದೇ ಅವನ ಮುಂದಿದ್ದ ವಿಕಟಸಮಸ್ಯೆ.

ಇದ್ದಕ್ಕಿದ್ದಂತೆ ಹೊರಗೆ ಜಯಘೋಷದ ಧ್ವನಿ ಮೊಳಗಿತು. ಅದರ ಕೋಲಾಹಲದಿಂದ ಚಾಣಕ್ಯನ ಶಾಂತಿ ಭಂಗಗೊಂಡಿತು. ಅದೇನೆಂದು ನೋಡಿಬರಲು ದೂತನನ್ನು ಕಳುಹಿಸಿದ. ಸ್ವಲ್ಪ ಸಮಯದ ನಂತರ ದೂತ ಬಂದು ಹೇಳಿದ– "ಮುಂದಿನ ತಿಂಗಳು ಇದೇ ದಿನದಲ್ಲಿ ರಾಜಕುಮಾರ ಸುಮಾಲ್ಯನ ಯುವ ರಾಜ್ಯಾಭಿಷೇಕವೆಂದು ಸಾರುತ್ತಿದ್ದಾರೆ."

ಒಮ್ಮೆಗೇ ಚಾಣಕ್ಯನ ಕಣ್ಣಿನ ಕಾಂತಿ ಮಿಂಚಿತು. ಅವನ ಮುಖದಲ್ಲಿ ಒಂದು ಕ್ಷಣ ಕ್ರೂರ ಮಂದಹಾಸ ಸುಳಿದು ಮರೆಯಾಯಿತು. ದೃಢಸ್ವರದಿಂದ ಆಜ್ಞೆಯಿತ್ತ– "ದೂತ! ಅಭಿಷೇಕದ ಘೋಷಣೆಯಾಗಿದೆ. ಅಭಿಷೇಕ ನಡೆಯಲೇಬೇಕು! ಹೋಗು; ವಿಜಯಯಾತ್ರೆಗೆ ಆ ದಿನವೇ ಸರಿಯಾದುದೆಂದು ಹೋಗಿ ಹೇಳು. ಕುಸುಮಪುರ ತಲುಪುವವರೆಗೂ ನಮ್ಮ ಸೈನ್ಯದ ಚಲನವಲನಗಳ ಸುಳಿವು ಯಾರಿಗೂ ಹತ್ತದಂತೆ ಎಚ್ಚರವಹಿಸಲು ಚಂದ್ರಗುಪ್ತನಿಗೆ ಹೇಳು."

ಮತ್ತೊಮ್ಮೆ ನಮಸ್ಕರಿಸಿ ದೂತನು ತನ್ನ ದಾರಿ ಹಿಡಿದ. ಚಾಣಕ್ಯನು ಅಭಿಷೇಕದ ಸಿದ್ಧತೆಗೆ ತೊಡಗಿದ.



## ೧೦. ನಾಡಿನ ಉಳಿವಿಗಾಗಿ

ಮಗಧದ ರಾಜಭವನದಲ್ಲಿ ಸಂಭ್ರಮವೇ ಸಂಭ್ರಮ. ನೌಕರ ಚಾಕರರೆಲ್ಲ ಸಡಗರದಿಂದ ಆಚೀಚೆ ಓಡಾಡುತ್ತಿದ್ದಾರೆ. ರಾಜಮಹಿಷಿಗೆ ತುಂಬ ಗಡಿಬಿಡಿ. ರಾಜಮಹಲಿನ ಶೃಂಗಾರವನ್ನೆಲ್ಲ ತಾನೇ ನಿಂತು ಮಾಡಿಸುತ್ತಿದ್ದಾಳೆ. ಬಳ್ಳಿಗಳು, ಹೂವಿನ ಕುಂಡಗಳು ಅವಳು ಹೇಳಿ ಹೇಳಿದ ಜಾಗದಲ್ಲಿ ಹೋಗಿ ಕೂರುತ್ತಿವೆ. ಅವಳ ಬೆರಳ ಸನ್ನೆಗೆ ಸರಿಯಾಗಿ ಚಿತ್ರಪಟಗಳೂ ಮೇಲೆ ಓಡಾಡುತ್ತಿವೆ. ರಾಜ್ಯಾಭಿಷೇಕವಾದ ಕೂಡಲೇ ಯುವರಾಜ ಸುಮಾಲ್ಯನು ಪಟ್ಟಮಹಿಷಿಯ ಬಳಿ. ಆಶೀರ್ವಾದ ಬೇಡಲು ಬರಬೇಕಲ್ಲ; ಅದಕ್ಕಾಗಿ ಚಿತ್ತಾಕರ್ಷಕವಾಗಿ ಕಂಗೊಳಿಸುವ ಪ್ರವೇಶದ್ವಾರ ತಯಾರಾಗುತ್ತಿದೆ. ಅದರ ಸಿದ್ಧತೆಗಾಗಿಯೇ ರಾಣಿಯು ತನ್ನ ಇದ್ದ ಬದ್ಧ ಬುದ್ಧಿಯನ್ನೆಲ್ಲಾ ಖರ್ಚು ಮಾಡುತ್ತಿದ್ದಾಳೆ. ಮಗಧೇಶ್ವರ ನಂದನಿಗೆ ಇಂದು ವಿಶೇಷ ಮದಿರೆ; ರಾಜ್ಯದ ನರ್ತಕಿಯರೆಲ್ಲಾ ಅರಮನೆಯಲ್ಲೆ ತುಂಬಿಕೊಂಡಿದ್ದಾರೆ; ಅವರು ಕೇಳಿಕೇಳಿದ ವೇಷಭೂಷಣಗಳೆಲ್ಲ ಬಂದೊದಗುತ್ತಿವೆ. ತಮ್ಮ ಕಲೆಗಾರಿಕೆ ಪ್ರದರ್ಶಿಸಬೇಕು; ಮಹಾರಾಜ, ರಾಜಕುವರ, ಆಸ್ಥಾನಿಕರೆ ಎಲ್ಲರ ಮೆಚ್ಚುಗೆ ಗಳಿಸಬೇಕು; ಜೀವನದಲ್ಲಿ ಒಮ್ಮೆ ಸಿಗುವ ಅವಕಾಶ ಇದು; ಯಥೇಚ್ಛ ಪುರಸ್ಕಾರ ಪಡೆಯಬೇಕು– ಇದು ಅವರ ಆಸೆ.

ಇಷ್ಟೆಲ್ಲ ಸಂಭ್ರಮದ ಸಿದ್ಧತೆ ರಾಜಭವನಕ್ಕೆ ಮಾತ್ರವಲ್ಲ. ಇಡೀ ಕುಸುಮಪುರಕ್ಕೆ ವ್ಯಾಪಿಸಿತ್ತು. ಜನರ ಕೈಕಾಲುಗಳೇನೋ ತಯಾರಿಯಲ್ಲಿ ತೊಡಗಿದ್ದವು; ಆದರೆ, ಅವರ ಮನಸ್ಸು ಇನ್ನೆಲ್ಲಿಯೋ ಇತ್ತು. ಎದೆಯಲ್ಲಿ ಅನಾಚಾರಗಳ ನೋವು ತುಂಬಿಕೊಂಡು, ಅಂತಃಕರಣದಲ್ಲಿದ್ದ ವಿದ್ರೋಹದ ಬೆಂಕಿಯನ್ನು ಬಿಸಿಯುಸಿರಿನಿಂದ ಭುಗಿಲೆಬ್ಬಿಸುತ್ತ, ಮುಖದ ಮೇಲೆ ಮಾತ್ರ ಹಾಸ್ಯ ಸಂತೋಷಗಳನ್ನು ತೋರ್ಪಡಿಸುತ್ತಿದ್ದರು. ಅವರು ದೀಪಗಳನ್ನು ಬೆಳಗಿಸುತ್ತಿದ್ದುದು ರಾಜ್ಯಾಭಿಷೇಕದ ಆನಂದಕ್ಕಾಗಿ ಅಲ್ಲ; ಅವೆಲ್ಲ ದೀಪಗಳೂ ಒಂದರೊಡನೊಂದು ಕೂಡಿ ಭೀಷಣ ಜ್ವಾಲೆಯಾಗಿ ಹತ್ತುರಿದು ನಂದವಂಶ ಒಂದು ನರಪಿಳ್ಳೆಯೂ ಉಳಿಯದಂತೆ ಅದರಲ್ಲಿ ಸುಟ್ಟು ಬೂದಿಯಾಗಲೆಂದು.

ಇವೆಲ್ಲದರ ನಡುವೆ ಚಾಣಕ್ಯನಿಗೂ ಬಿಡುವಿಲ್ಲದಷ್ಟು ಕೆಲಸ. ಆದರೆ ಅವನ ಸಿದ್ಧತೆಯೆಲ್ಲ ಬೇರೆಯದೇ ಅಭಿಷೇಕಕ್ಕೆ. ಅವನೀಗ ಕರಾಳ ಕ್ರಾಂತಿಯ ಅಗ್ರದೂತ. ತನ್ನ ಹಸ್ತಕರನ್ನು ಎಲ್ಲೆಲ್ಲೂ ನಿಲ್ಲಿಸಿದ್ದಾನೆ. ಸೇನಾಪತಿ ಭಾಗುರಾಯಣನಿಗೂ ಮುನ್ಸೂಚನೆ ನೀಡಿದ್ದಾನೆ. ಸೇನಾಪತಿಯಿಂದ ಆಜ್ಞೆ ಬಂದ ಹೊರತು, ಕದಲುವಂತಿಲ್ಲವೆಂದು ಇಡೀ ಸೈನ್ಯಕ್ಕೆ ಆದೇಶ ಹೋಗಿದೆ. ಯುವರಾಜ ಸುಮಾಲ್ಯನ ಮಲತಾಯಿಯೆ ಅವನ ಭಗದ ಮೃತ್ಯುದೇವತೆಯಾಗಿ ಕಾದು ಕುಳಿತಿದ್ದಾಳೆ. ಅಂತೂ ರಾಷ್ಟ್ರ ಕಾರ್ಯ ಧುರಂಧರ ಕೌಟಿಲ್ಯನ ವ್ಯಾಪಕ ಕೂಟನೀತಿ ಮಗಧ ರಾಜ್ಯವನ್ನು ನಾಲ್ಕೂ ಕಡೆಯಿಂದ ದಿಗ್ಬಂಧನಗೊಳಿಸಿದೆ.

ಪಟ್ಟಮಹಿಷಿ ಹಾಗೂ ರಾಜಕುಮಾರ ಸುಮಾಲ್ಯ ಉತ್ಸುಕತೆಯಿಂದ ರಾಜ್ಯಾಭಿಷೇಕದ ಮುಹೂರ್ತವನ್ನು ಎದುರುನೋಡುತ್ತಿದ್ದರು. ಕೆಲಸದಲ್ಲಿ ನಿರತನಾದವನ ಸಮಯ ಕುದುರೆಯಂತೆ ಓಡುತ್ತದೆ; ಆದರೆ ಇಂದು ಒಂದು ಕ್ಷಣ ಸಹ ಬಿಡುವಿಲ್ಲದಿದ್ದರೂ, ಈ ಇಬ್ಬರ ಸಮಯ ಮಾತ್ರ ತೆವಳಿಕೊಂಡು ನಿಧಾನವಾಗಿ ಸಾಗಿತ್ತು. ರಾಜಪುತ್ರನು ಭಾವಿ ಸುಂದರಸ್ವಪ್ನಗಳ ಉಯ್ಯಾಲೆಯಲ್ಲಿ ತೂಕಡಿಸುತ್ತಿದ್ದ. ಅವನಿಗೆ ತನ್ನ ಮುಂದೆ ಕಾದಿದ್ದ ದುರ್ಗತಿಯ ಅರಿವಿದ್ದಿದ್ದರೆ? ಮನುಷ್ಯನು ಇಂದಿನ ಕ್ಷಣಿಕ ಆನಂದವನ್ನಾದರೂ ನಿಶ್ಚಿಂತೆಯಿಂದ ಅನುಭವಿಸಲಿ ಅಥವಾ ಈಗಿನ ಕ್ಷಣಿಕ ಕಷ್ಟ ಎದುರಿಸಲು ತನ್ನ ಪೂರ್ಣ ಪರಿಶ್ರಮ ಸುರಿಯಲಿ ಎಂದೇ ದೇವರು ಭವಿಷ್ಯವನ್ನು ರಹಸ್ಯವಾಗಿಡುತ್ತಾನೋ. ಹಾಗೂ ಹೀಗೂ ಪಟ್ಟಾಭಿಷೇಕದ ಮುಹೂರ್ತ ಸಮೀಪಿಸಿತು, ರಾಜಮಹಲಿನಿಂದ ಮಹಾರಾಜ, ಯುವರಾಜ, ಅಮಾತ್ಯ ಹಾಗೂ ಸಮಸ್ತ ಸಭಾಸದರ ಉತ್ಸವ ಹೊರಟಿತು. ವಂದಿಮಾಗಧರು ಸ್ತುತಿಪಾಠಗಳನ್ನು ಪೂರ್ಣಕಂಠದಿಂದ ಹೇಳುತ್ತಿದ್ದರು. ಜಯಘೋಷ ದಶ ದಿಕ್ಕುಗಳನ್ನು ಹರಡಿತು.

ಇದಕ್ಕಿದ್ದಂತೆ ಅಮಾತ್ಯ ರಾಕ್ಷಸನಿಗೆ ಮತ್ತೊಂದು ಜಯಘೋಷವೂ ಕೇಳಿಬಂತು. ಏನೋ ಅನಿಷ್ಟದ ಸಂದೇಹದಿಂದ ಅವನ ಕಿವಿಗಳು ನಿಮಿರಿ ನಿಂತವು. ಮಹಾರಾಜ ನಂದನ ಜಯಘೋಷವೇ ಸುದೂರದ ಉತ್ತುಂಗ ಹಿಮಶಿಖರಗಳಿಗೆ ತಾಗಿ ಮರುದನಿಯಾಗಿ ತಿರುಗಿ ಬರುತ್ತಿರಬಹುದೆಂದು ಸೇನಾಧಿಪತಿ ಹೇಳಿದ. ಆದರೆ ನಿಜಕ್ಕೂ ಅದು ವಿಲಾಸಿ ನಂದನ ಹಿಂಸಾಚಾರಗಳಿಂದ ರೊಚ್ಚಿಗೆದ್ದ ಪ್ರಜಾಜನರ ನಿಟ್ಟುಸಿರಿನ ಪ್ರತಿಧ್ವನಿಯಾಗಿತ್ತು; ಅದರ ಮೊರೆತ ಭೀಷಣ ಬಿರುಗಾಳಿಯಂತೆ ಕ್ಷಣಕ್ಷಣಕ್ಕೂ ವರ್ಧಿಸುತ್ತಿತ್ತು. (ಅಮಾತ್ಯನ ಮನಸ್ಸು ಅಶುಭ ನುಡಿಯಿತು. ಅವನ ಮನದಾಳದಲ್ಲಿ ಅರಿಯದ ಅಳುಕು ಬಾಧಿಸುತ್ತಿತ್ತು.) ಸುತ್ತಮುತ್ತಲಿನ ಕೋಲಾಹಲಕ್ಕೆ ಕಿವಿಗೊಡದೆ ಅವನು ಆ ದೂರದ ಜಯಘೋಷವನ್ನೇ ಆಲಿಸುತ್ತಿದ್ದ. ಅಷ್ಟರಲ್ಲೇ



ದೂತನೊಬ್ಬನು ಓಡೋಡಿಬಂದ. ತಲೆಯ ಮೇಲೆ ಕೈಹೊತ್ತು ಅಮಾತ್ಯ ರಾಕ್ಷಸನೆದುರು ಸ್ತಬ್ಧನಾಗಿ ನಿಂತುಬಿಟ್ಟ. ವ್ಯಾಕುಲತೆಯ ಜೊತೆಗೆ ಕ್ರೋಧವೂ ತುಂಬಿ, ಅಮಾತ್ಯನು ಗರ್ಜಿಸಿದ– "ಹೇಳು, ಏನದು? ಇದೇನು ಅಪಶಕುನ? ಹೇಳು, ಬೇಗ ಹೇಳು."

"ಸರ್ವನಾಶವಾಯಿತು ಅಮಾತ್ಯರೆ! ಕುಸುಮಪುರಕ್ಕೆ ಶತ್ರುಗಳು ಮುತ್ತಿಗೆ ಹಾಕಿದ್ದಾರೆ. ಕೂಡಲೇ ಅವರನ್ನು ತಡೆಯದಿದ್ದರೆ, ಅರಮನೆಯ ತನಕ ಬಂದು ಬಿಡುತ್ತಾರೆ!"

ಅಮಾತ್ಯನು ಒಂದು ಕ್ಷಣ ದಿಗ್ಮೂಢನಾದ. ಅವನಿಗೆ ಆ ಮಾತಿನಲ್ಲಿ ನಂಬಿಕೆಯೇ ಆಗಲೊಲ್ಲದು. ಆದರೂ ಕ್ಷಣಮಾತ್ರದಲ್ಲಿ ಅವನು ಚೇತರಿಸಿಕೊಂಡ. ಮೆರವಣಿಗೆಯನ್ನು ತಕ್ಷಣ ನಿಲ್ಲಿಸಲು ಆಜ್ಞೆಯಾಯಿತು. ಮಹಾರಾಜ ನಂದನಿಗೆ ಒಂದೂ ಅರ್ಥವಾಗಲಿಲ್ಲ. ಅಮಾತ್ಯನೇ ಹೋಗಿ ಹೇಳಿದ, "ಅಭಿಷೇಕವನ್ನು ಇನ್ನೆಂದಾದರೂ ಮಾಡೋಣ. ಇಂದು ಯುದ್ಧ ಮಾಡಬೇಕಾಗಿದೆ. ನಗರವನ್ನು ಶತ್ರುಗಳು ಮುತ್ತಿದ್ದಾರೆ."

ಹುಟ್ಟುಹೇಡಿಯಾದ ನಂದನಿಗೆ ಎದೆನಡುಕ ಹುಟ್ಟಿತು. ಆದರೂ ಅವನ ದುರ್ವ್ಯಸನ ಅವನನ್ನು ಬಿಡಲೊಲ್ಲದು. "ಅಮಾತ್ಯ! ಶತ್ರುಗಳಂತೂ ನಮಗೆ ತೊಂದರೆ ಕೊಟ್ಟೇಕೊಡುತ್ತಾರೆ; ಆದರೆ ಈಗ ನೀನು ಸಹ ನಮ್ಮ ಆನಂದ ಕೆಡಿಸುತ್ತಿರುವೆ. ಇದು ಅಭಿಷೇಕದ ದಿನ; ರಾಜ್ಯದ ಮೂಲೆ ಮೂಲೆಗಳಿಂದ ನರ್ತಕಿಯರು ಬಂದಿದ್ದಾರೆ. ಈಗ ನೀನು ಇದ್ದಕ್ಕಿದ್ದ ಹಾಗೆ ಯುದ್ಧಕ್ಕೆ ಹೊರಡಲು ಹೇಳುತ್ತಿರುವೆ. ಹೊರಡು, ನೀನು ಮತ್ತು ಸೇನಾಪತಿ ಸೈನ್ಯದೊಳಗೆ ಹೋಗಿ ಯುದ್ಧ ಮಾಡಿ. ನಿಮ್ಮೆಲ್ಲರಿಗೂ ಸಂಬಳ ಸಾರಿಗೆ ತೆರುವುದು ಅದಕ್ಕಾಗಿಯೇ ತಾನೆ? ನೀನು ನಿನ್ನ ಕೆಲಸ ಮಾಡು; ನನ್ನ ಕೆಲಸಕ್ಕೆ ನನ್ನನ್ನು ಬಿಡು. ಮೆರವಣಿಗೆ ಮುಂದೆ ಹೊರಡಲಿ" ಎಂದು ನಂದನು ಮರು ಆಜ್ಞೆಯಿತ್ತ.

ಅಮಾತ್ಯರಾಕ್ಷಸ ಕ್ರೋಧದಿಂದ ಹಲ್ಲು ಕಡಿಯುತ್ತ ನಿಂತ. ಅವನಿಗೆ ಕಣ್ಣು ಮುಂದೆ ಸರ್ವನಾಶ ನರ್ತಿಸುತ್ತಿತ್ತು. ಅವನು ಸರ್ರನೆ ಕಡಿವಾಣವನ್ನು ಎಳೆದು ಕುದುರೆ ತಿರುಗಿಸಿದ. ಅದೇ ಕ್ಷಣ ಜನರ ಗುಂಪಿನಿಂದ ಥಳಥಳಿಸುವ ಭರ್ಜಿಯೊಂದು ಬರುತ್ತಿತ್ತು. ಮಿಂಚಿನಂತೆ ಒಮ್ಮೆ ಪ್ರಕಾಶ ಬೀರಿ ನೇರವಾಗಿ ಹೋಗಿ ಮಹಾರಾಜ ನಂದನ ಎದೆಗೆ ನಾಟಿಕೊಂಡಿತು. ಆ ಕ್ಷತ್ರಿಯ ಕುಲಕಲಂಕನು ಚೀತ್ಕರಿಸಲು ಬಾಯಿ ಬಿಡುವಷ್ಟರಲ್ಲೇ ಅವನ ಜೀವ ಹಾರಿಹೋಗಿತ್ತು.

ಎಲ್ಲೆಲ್ಲೂ ಗೊಂದಲವೆದ್ದಿತು. ರಾಜನ ಅಂಗರಕ್ಷಕರು ಗಾಬರಿಗೊಂಡರು. ಏನು ಮಾಡುವುದಕ್ಕೂ ಅವರಿಗೆ ತೋಚಲಿಲ್ಲ. ನಂದನ ಹೆಣವನ್ನು ಹೊತ್ತುಕೊಂಡು

ಅರಮನೆಯ ಕಡೆಗೆ ಓಡಿದರು. ಒಮ್ಮಿಂದ ಒಮ್ಮೆಗೆ "ಮಹಾರಾಜ ಚಂದ್ರಗುಪ್ತನಿಗೆ ಜಯವಾಗಲಿ" ಎಂಬ ಘೋಷಣೆಯಿಂದ ದಶದಿಶೆಗಳೂ ಮೊಳಗಿದವು. ಚಂದ್ರಗುಪ್ತನೇ ಈ ಕ್ರಾಂತಿಯ ಮುಖ್ಯಸ್ಥನೆಂದು ರಾಕ್ಷಸನಿಗೆ ಅರಿವಾಯಿತು. ಅಷ್ಟು ಸದ್ದುಗದ್ದಲಗಳ ನಡುವೆಯೂ ಐದು ವರ್ಷಗಳ ಹಿಂದಿನ ದೃಶ್ಯ ಅವನ ಕಣ್ಣಿಗೆ ಕಟ್ಟಿತು. ಕೂಡಲೇ ರಾಕ್ಷಸನು ತನ್ನ ಸೇನಾಪತಿಯನ್ನು ಕರೆದ. ಆದರೆ ಆ ವೇಳೆಗೆ ಅವನು ಅಲ್ಲಿಂದ ಮಾಯವಾಗಿದ್ದ. ಅಶ್ವಾರೋಹಿಯಾಗಿದ್ದ ರಾಕ್ಷಸನು ಸೇನಾನೆಲೆಗೆ ಧಾವಿಸಿದ. ಅಲ್ಲಿ ಯುದ್ಧದ ಪ್ರಾರಂಭಕ್ಕೆ ರಣಭೇರಿ ಬಾರಿಸಲು ಆಜ್ಞೆಯಿತ್ತ. ಆದರೆ ಅವನ ಮಾತು ಯಾರೂ ಕಿವಿಯ ಮೇಲೆ ಹಾಕಿಕೊಳ್ಳಲೇ ಇಲ್ಲ. ಅಮಾತ್ಯನ ಸಿಟ್ಟು, ಆಶ್ಚರ್ಯಗಳಿಗೆ ಪಾರವೇ ಉಳಿಯಲಿಲ್ಲ.

"ಅಮಾತ್ಯ ಶ್ರೇಷ್ಠರೇ! ಸೇನೆಯು ಸೇನಾಧಿಪತಿಯ ಆಜ್ಞೆಯನ್ನು ಮಾತ್ರ ಪಾಲಿಸುತ್ತದೆ."– ಸೈನಿಕನೊಬ್ಬ ನಮ್ರತೆಯಿಂದ ಹೇಳಿದ.

"ಅಕಸ್ಮಾತ್ ಸೇನಾಧಿಪತಿಯಿಲ್ಲದಿದ್ದಲ್ಲಿ, ಉಚ್ಚ ಅಧಿಕಾರಿಗಳ ಆಜ್ಞೆ ಪಾಲಿಸುವುದು ನಿಮ್ಮ ಕರ್ತವ್ಯ" ಎಂದು ಹೇಳಿದಾಗ ಅಮಾತ್ಯನ ಮಾತಿನಲ್ಲಿ ರೋಷದ ಜತೆಗೆ ಯಾಚನೆಯ ಸ್ವರವೂ ಇತ್ತು. ಆದರೆ ಅವನ ತರ್ಕ ಯಾರು ಕೇಳುತ್ತಾರೆ? ಸೈನಿಕರು ನಿಂತ ಜಾಗದಿಂದ ಅಲ್ಲಾಡಲಿಲ್ಲ.

ಸೈನ್ಯದ ನೆರವಿನ ಆಸೆ ಮಣ್ಣುಗೂಡಿತು. ಅಮಾತ್ಯನ ಕಣ್ಣಿಗೆ ಕತ್ತಲು ಕವಿಯಿತು. ಆದರೆ ಎಂತಹ ಭೀಷಣ ಅಂಧಕಾರದಲ್ಲೂ ಕೈಕಟ್ಟಿ ಕೂತವನಲ್ಲ ಅವನು. ಅಲ್ಲಿಂದ ಹೋಗಿ ರಾಜನ ಅಂಗರಕ್ಷಕರು ಮತ್ತು ಖಾಸಗಿ ಸೇನೆಯಿಂದ ಸಿಕ್ಕಿದಷ್ಟು ಸೈನಿಕರನ್ನು ಕೂಡಿಸಿಕೊಂಡ. ಸುಮಾಲ್ಯನ ಸೇನಾಧಿಪತ್ಯದಲ್ಲಿ ಅವನು ಪರ್ವತಕನನ್ನು ವೀರಾವೇಷದಿಂದ ಎದುರಿಸತೊಡಗಿದ. ಆದರೆ, ಅವನ ಹಿಡಿಯಷ್ಟು ಸೈನಿಕರು ಪರ್ವತಕ ಹಾಗೂ ಚಂದ್ರಗುಪ್ತರ ಸೇನಾ ಸಾಗರದೆದುರು ಎಷ್ಟು ಹೊತ್ತು ನಿಂತಾರು? ದಳ್ಳುರಿಯನ್ನು ಆರಿಸಲು ಹೊರಟ ಪತಂಗದಂತೆ ಅವೆರಲ್ಲರ ಕತೆ ಮುಗಿಯಿತು. ಸುಮಾಲ್ಯನ ದೇಹ ತುಂಡುತುಂಡಾಯಿತು.

ಆಸೆಬುರುಕ ಪರ್ವತಕನು ಮಗಧಸಾಮ್ರಾಟನಾಗಲು ಉತ್ಸಾಹದಿಂದ ಬಂದಿದ್ದ. ಆದರೆ, ಚಂದ್ರಗುಪ್ತನ ಹೆಸರಿನಲ್ಲಿ ಜಯಘೋಷ ಕೇಳುತ್ತಲೇ ಅವನು ಆಶ್ಚರ್ಯಚಕಿತನಾದ. ಅವನ ಸಹಕಾರಿಗಳಾಗಿದ್ದ ಸಿಂಧು, ಮಲಯ, ಕಾಶ್ಮೀರ, ಕುಲೂತ, ಬಾಹೀಕ, ಅಶ್ವಕ, ಕ್ಷುದ್ರುಕ, ಮಾಲವ, ಕಂಬೊಜ, ಗಾಂಧಾರ ಇತ್ಯಾದಿ ಸಮಸ್ತ ರಾಜ್ಯಗಳವರೂ ಚಂದ್ರಗುಪ್ತನ ಪಕ್ಷವನ್ನೇ ವಹಿಸಿದ್ದರು. ಅವರೆಲ್ಲರಿಗಿಂತ ಹೆಚ್ಚಾಗಿ ಮಗಧದ ಸೈನ್ಯ ಹಾಗೂ ನಾಗರಿಕರು ಚಂದ್ರಗುಪ್ತನನ್ನೇ ಅತ್ಯುತ್ಸಾಹದಿಂದ ಸ್ವಾಗತಿಸುತ್ತಿದ್ದರು. ಸ್ವರ್ಗದಿಂದ ನೂಕಲ್ಪಟ್ಟ ನಹುಷ ಚಕ್ರವರ್ತಿಯಂತೆ ಪರ್ವತಕನ



ಅವಸ್ಥೆಯಾಯಿತು. ಆಗವನು ತನ್ನನ್ನು ಪುನಃ ಸ್ವರ್ಗ ಸಿಂಹಾಸನದ ಮೇಲೆ ಕೂಡಿಸಬಲ್ಲ ಸಹಾಯಕರನ್ನು ಸ್ಮರಿಸಕೊಳ್ಳತೊಡಗಿದ. ಅವನಿಗೆ ತನ್ನ ಹಿಂದಿನ ಗೆಳೆಯ ಅಲಿಕಸುಂದರನ ನೆನಪಾಯಿತು. ತನ್ನ ಆಸೆಗೆ ಸೋಲಾದುದನ್ನು ಕಂಡು ಕಡೆಗೆ ದೇಶವನ್ನೇ ಒತ್ತೆಯಿಡಲು ಮುಂದಾದ.

ಸ್ವಾರ್ಥಿಯಾದವನು ತನ್ನೊಬ್ಬನ ಸ್ವಾರ್ಥಸಾಧನೆಗಾಗಿ ದೇಶವನ್ನೇ ಮಾರಲು ತಯಾರಾಗುತ್ತಾನೆಂಬುದು ನಿಜ. ಪರ್ವತಕನು ಮಾಡಿದ ಕೆಲಸವೂ ಅದೇ. ಭಾರತದ ಮೇಲೆ ಆಕ್ರಮಣ ಮಾಡಬೇಕೆಂದು ಅವನು ಸೆಲೆಯೂಕನಿಗೆ ಕೂಡಲೇ ಕರೆಯೋಲೆ ಕಳುಹಿಸಿದ. ಆದರೆ ಪರ್ವತಕನಿಗೆ ಎದುರು ಪಕ್ಷದಲ್ಲಿದ್ದವರು ಚಾಣಕ್ಯ, ಚಂದ್ರಗುಪ್ತರು! ಅವನಿಗಿಂತಲೂ ಚಾಣಾಕ್ಷರಾಗಿದ್ದರು. ಅವರನ್ನು ಗೆಲ್ಲುವುದೇನೂ ಸುಲಭವಾಗಿರಲಿಲ್ಲ.

ಪರ್ವತಕನು ಸೆಲೆಯೂಕನ ಬಳಿಕ ದೂತನನ್ನು ಕಳುಹಿದ ಸುದ್ದಿ ಚಾಣಕ್ಯನಿಗೆ ತಿಳಿಯಿತು. ಪರ್ವತಕನು ಸುಮ್ಮನಿದ್ದರೂ ಅವನನ್ನು ತೊಲಗಿಸಲೇಬೇಕಾಗಿತ್ತು. ಈಗಂತೂ ಅವನು ದೇಶದ್ರೋಹಿ ಬೇರೆ ಆಗಿದ್ದ. ಚಾಣಕ್ಯನ ದೃಷ್ಟಿಯಲ್ಲಿ ಇನ್ನು ನಿಧಾನಿಸುವುದೆಂದರೆ ಪಾಪವೆ ಸರಿ. ಪರ್ವತಕನು ವೀರನಾದರೂ ವಿಷಯಾಸಕ್ತನೆಂಬುದನ್ನು ಚಾಣಕ್ಯನು ಕಂಡುಕೊಂಡಿದ್ದ. ಅವನ ದುರ್ಬಲತೆಯೇ ಕಡೆಗವನ ಮೃತ್ಯುವೂ ಆಯಿತು. ಒಂದು ದಿನ ಸುಂದರ ವಿಷಕನ್ಯೆಯೊಬ್ಬಳನ್ನು ಚಾಣಕ್ಯನು ಪರ್ವತಕನ ಬಳಿ ಕಳುಹಿದ. ಮರುದಿನವೇ ಆ ರಾಜನ ಸೇನಾಶಿಬಿರದಿಂದ ಅವನ ಹೆಣದ ಮೆರವಣಿಗೆ ಹೊರಟಿತು. ಎಲ್ಲರೂ ಅಂತಿಮವಾಗಿ ಹೋಗುವ ಆ ಮರಳಿ ಬಾರದ ಲೋಕಕ್ಕೇ ಪರ್ವತಕನೂ ಹೊರಟ ಎಂಬುದು ಜಗತ್ತಿಗೆ ತಿಳಿಯಿತು.

ಇಡೀ ಉತ್ತರ ಭಾರತದ ರಾಜಮಹಾರಾಜರು ಮತ್ತು ಗಣರಾಜ್ಯಗಳ ಅಧಿಕಾರಿಗಳೆಲ್ಲರೂ ಆಗ ಮಗಧದಲ್ಲಿದ್ದರು. ವಿಜೃಂಭಣೆಯಿಂದ ಚಂದ್ರಗುಪ್ತನ ರಾಜ್ಯಾಭಿಷೇಕ ನೆರವೇರಿತು. 'ಮಹಾರಾಜ ಚಂದ್ರಗುಪ್ತನಿಗೆ ಜಯವಾಗಲಿ' ಎಂಬ ಜಯಘೋಷ ದಿಗ್ದಿಗಂತಗಳನ್ನು ತಟ್ಟಿತು. ಆದರೆ ಅದಿನ್ನೂ ಭಾರತದ ಭಾಗ್ಯೋದಯದ ಮುಂಬೆಳಕು ಮಾತ್ರ. ಪಶ್ಚಿಮಕ್ಕೆ ಸರಿಯುತ್ತಿದ್ದ ಕಾರಿರುಳು ಈ ಬಾಲರವಿಯನ್ನು ಕಬಳಿಸಲು ತನ್ನ ವ್ಯರ್ಥ ಪ್ರಯತ್ನಗಳನ್ನು ಇನ್ನೂ ನಡೆಸುತ್ತಲೇ ಇತ್ತು.

## ೧೧. ಸೆಲೆಯೂಕನ ಸರದಿ

ಪರ್ವತಕನ ದೇಶದ್ರೋಹಕ್ಕೆ ತಕ್ಕ ಶಾಸನವೇನೋ ಆಯಿತು. ಆದರೆ ಆ ವೇಳೆಗಾಗಲೇ ಅವನ ಬಾಣ ಕೈ ದಾಟಿ ಹೋಗಿತ್ತು. ಬಿಟ್ಟ ಬಾಣ ತಿರುಗಿ ಬರುವುದುಂಟೆ? ಭಾರತದ ಈ ಕುಪುತ್ರನ ಪತ್ರ ಸೆಲೆಯೂಕನಿಗೆ ಸೇರಿತು. ಅವನಂತೂ ಮೊದಲೇ ಭಾರತದ ವಿಜಯಕ್ಕೆ ಒಂಟಿಗಾಲಿನಲ್ಲಿ ನಿಂತಿದ್ದ. ಭಾರತವನ್ನು ಗೆಲ್ಲದೆ ತನ್ನ ಹೆಸರಿಗಿದ್ದ ನಿಕೇಟರ್ (ವಿಜಯ) ಬಿರುದು ಹೇಳಿಕೊಳ್ಳಲು ಅವನ ಮನಸ್ಸು ಅಳುಕುತ್ತಿತ್ತು. ಅವನ ಈ ಪ್ರಶಸ್ತಿ ಹೇಗೂ ಅದನ್ನು ತನ್ನ ಹೆಸರಿಗೆ ಕೂಡಿಸಿಕೊಳ್ಳುವ ಅವನ ಹಂಬಲ ಕಂಡು ವಿಧಿ ಅಣಕವಾಡುತ್ತಿತ್ತು.

"ಯೂನಾನಿ ಸೇನೆಯ ಪ್ರವೇಶಕ್ಕೆ ಪರ್ವತಕನು ಗಾಂಧಾರದ ಮಾರ್ಗವನ್ನು ಸುರಕ್ಷಿತವಾಗಿ ತೆರೆದಿಟ್ಟಿರುವನು ತಾನೇ?" ಎಂದು ಬಂದ ದೂತನನ್ನು ಸೆಲೆಯೂಕ್ ಕೇಳಿದ. ಅಶ್ವಕರೊಡನೆ ನಡೆದ ಭೀಷಣ ಹೋರಾಟದ ನೆನಪಾಗಿ ಅವನ ಮೈ ಬೆವರತೊಡಗಿತು. ಪುನಃ ಅವರೊಡನೆ ಯುದ್ಧ ಮಾಡುವ ಧೈರ್ಯ ಅವನಿಗಿರಲಿಲ್ಲ.

"ಸುರಕ್ಷಿತಗೊಳಿಸುವ ಪ್ರಶ್ನೆಯೆಲ್ಲಿ ಬಂತು ಪ್ರಭು! ಉತ್ತರ ಭಾರತದ ಸಮಸ್ತ ರಾಜರೂ, ಗಣಾಧಿಪತಿಗಳೂ ಸೇನಾಸಮೇತರಾಗಿ ಮಗಧದ ರಾಜಧಾನಿಯಲ್ಲಿ ಮಲಗಿದ್ದಾರೆ. ಗಡಿನಾಡಿನಿಂದ ಹಿಡಿದು ಮಗಧದವರೆಗಿನ ಭಾರತವಿಡೀ ಅನಾಥವಾಗಿ ಬಿದ್ದಿದೆ. ಮಗಧದಲ್ಲಿ ಚಂದ್ರಗುಪ್ತನೊಡನೆ ಸ್ವಲ್ಪ ಸೆಣೆಸಬೇಕಾಗಬಹುದು ಅಷ್ಟೆ"

"ಚಂದ್ರಗುಪ್ತನ ಜತೆಗೆ?" ಸೆಲೆಯೂಕ್ ಬೆಚ್ಚಿ ಹೇಳಿದ. ಮರುಕ್ಷಣ ನಿಟ್ಟುಸಿರು ಬಿಟ್ಟು, "ಭಯಂಕರ ಮನುಷ್ಯ ಅವನು. ಅವನಿಂದಲೇ ಅಲಿಕ ಸುಂದರ ಚಕ್ರವರ್ತಿಯು ಭಾರತ ಬಿಡಬೇಕಾಯಿತು" ಎಂದ.

ದೂತನು ಸೆಲೆಯೂಕನಿಗೆ ಧೈರ್ಯ ತುಂಬುವ ಸ್ವರದಲ್ಲಿ ಹೇಳಿದ– "ನಂದವಂಶವನ್ನು ನಿರ್ಮೂಲಗೊಳಿಸಿ ಚಂದ್ರಗುಪ್ತನು ಇದೀಗ ತನ್ನ ಸಾಮ್ರಾಜ್ಯದ ಸಸಿ ನೆಡುತ್ತಿದ್ದಾನೆ. ಅದು ಬೇಗ ಬೆಳೆದು ವಿಶಾಲ ವಟವೃಕ್ಷವಾಗಲೆಂದು ಚಾಣಕ್ಯನೂ ಶತಪ್ರಯತ್ನ ಮಾಡುತ್ತಿದ್ದಾನೆ. ಆದರೆ ಸಸಿಯನ್ನು ಕಿತ್ತೆಸೆಯಲು ತಯಾರಾಗಿ



ಮಗಧದಲ್ಲೇ ಅನೇಕರು ನಿಂತಿದ್ದಾರೆ. ಜೊತೆಗೆ ನೀವೂ ಆಕ್ರಮಣ ನಡೆಸಿದ್ದಾದರೆ ಉತ್ತರದ ಛಳಿಗಾಳಿಯೊಡನೆ ಮಂಜಿನ ಮಳೆಯೂ ಬಂದಂತಾಗುತ್ತದೆ."

"ಅಂತಹವರು ಯಾರು– ಚಂದ್ರಗುಪ್ತನನ್ನು ವಿರೋಧಿಸುತ್ತಿರುವವರು?" ಸೆಲೆಯೂಕನು ಉತ್ಸುಕತೆಯಿಂದ ಕೇಳಿದ.

"ನಂದವಂಶದ ಬಗ್ಗೆ ಭಕ್ತಿಯುಳ್ಳವರಿಗೇನೂ ಕಡಿಮೆಯಿಲ್ಲ. ನಂದನ ಮಹಾಮಂತ್ರಿ ರಾಕ್ಷಸನೇ ಇದ್ದಾನೆ. ನಂದಕಾಲಾಂತಕನಾದ ಈ ಚಂದ್ರಗುಪ್ತನೆಂದರೆ ಅವನ ಮೈ ಉರಿದುಹೋಗುತ್ತದೆ."

"ಮಹಾರಾಜ ಪರ್ವತಕನು ಅವನೊಡನೆ ಮಾತುಕತೆಯಾಡಿಲ್ಲವೇ?"

"ಆಡದೆ ಏನು? ಆದರೆ ಮಗಧವನ್ನು ಚಂದ್ರಗುಪ್ತನ ಹಿಡಿತದಿಂದ ಮುಕ್ತಗೊಳಿಸಿದ ನಂತರ, ಪರ್ವತಕನು ಸಿಂಹಾಸನಕ್ಕೆ ಬರುವುದು ರಾಕ್ಷಸನಿಗೆ ಬೇಕಿಲ್ಲ. ನಂದವಂಶದ ಕಡೆಯ ದೊರೆ ಧನಾನಂದನ ಚಿಕ್ಕಪ್ಪನಾದ ಸರ್ವಾರ್ಥ ಸಿದ್ಧಿ ರಾಯನನ್ನು ಅವನು ಗದ್ದುಗೆಗೇರಿಸಬೇಕೆನ್ನುತ್ತಾನೆ."

ಸೆಲೆಯೂಕನು ಮನಸ್ಸಿನಲ್ಲೆ ಹೇಳಿಕೊಂಡ– "ಪರ್ವತಕನು ಮಗಧ ಸಿಂಹಾಸನಕ್ಕೆ ಬರಬೇಕೆಂಬ ಇಚ್ಛೆ ನನಗೆ ತಾನೇ ಎಲ್ಲಿದೆ? ಬರಲು ನಾನೆಲ್ಲಿ ಬಿಡುತ್ತೇನೆ? ಭಾರತದಲ್ಲಿ ಭಾರತೀಯನೊಬ್ಬ ರಾಜನಾಗುವುದಕ್ಕೆ ಬಿಡಲು ಯೂನಾನಿನಲ್ಲಿ ಆಡಳಿತಗಾರರಿಗೇನು ಕೊರತೆಯೇ?" ನಂತರ ದಂತನೊಡನೆ ಗಟ್ಟಿಯಾಗಿ ಕೇಳಿದ– "ಹಾಗಾದರೆ ಅಮಾತ್ಯ ರಾಕ್ಷಸನ ನೆರವು ಸಿಕ್ಕಲಾರದೆ?"

"ಹಾಗೇನಿಲ್ಲ. ಸರ್ವಾರ್ಥಸಿದ್ಧಿಯ ಕೊಲೆಯಾಗಿದೆಯೆಂದು ನನಗೆ ಭಾರತ ಬಿಡುವ ಮೊದಲೇ ತಿಳಿದಿತ್ತು. ಅಲ್ಲದೆ, ತಾವೂ ಸಹ ಪ್ರವರ್ತಕರಾಜರ ಬೆಂಬಲಕ್ಕಿರುವಿರೆಂದು ಗೊತ್ತಾದರೆ ರಾಕ್ಷಸನಿಗೆ ನಾವೇ ಗೆಲ್ಲುವೆವೆಂದು ನಂಬಿಕೆಯಾಗುತ್ತದೆ. ಆಗ ನಮ್ಮ ಪಕ್ಷಕ್ಕೆ ಬರುವುದೇ ತನಗೆ ಕ್ಷೇಮವೆಂದುಕೊಳ್ಳುತ್ತಾನೆ. ನೀವೂ ನಿಮ್ಮ ದೂತನನ್ನು ಕಳುಹಿಸಿಕೊಡಿ."

ಸೆಲೆಯೂಕನು ಆಗಲೆಂದು ತಲೆಯಾಡಿಸಿದ. ಭಾರತವನ್ನು ಆಕ್ರಮಿಸುವ ನಿಶ್ಚಯವನ್ನಂತೂ ಮೊದಲೇ ಮಾಡಿದ್ದ. ಪರ್ವತಕನ ದೂತನನ್ನು ಅವನ ಬಿಡಾರಕ್ಕೆ ಕಳುಹಿಸಿದ ನಂತರ ತನ್ನ ಸೇನಾಧಿಪತಿಗಳನ್ನೂ ಇತರ ಅಧಿಕಾರಿಗಳನ್ನೂ ಕರೆಸಿಕೊಂಡ. ಘಂಟೆಗಟ್ಟಲೆ ಮಂತ್ರಾಲೋಚನೆಯಾಯಿತು. ಅಲಿಕ ಸುಂದರನಿಗಾದ ಗತಿ ಅವರಿಗೆಲ್ಲ ಚೆನ್ನಾಗಿ ಗೊತ್ತಿದ್ದಿತು. ಭಾರತದ ಮೇಲೆ ಪುನಃ ಆಕ್ರಮಣ ನಡೆಸುವ ಸಾಹಸ ಅವರಾರಿಗೂ ಇರಲಿಲ್ಲ.

"ಈ ಬಾರಿಯೂ ಸೋಲಾದರೆ ಭೀಷಣ ಪರಿಣಾಮ ಕಾದಿದೆ. ನಿಕೇಟರ್!" ಅನುಭವಿ ಸೇನಾಧಿಕಾರಿಯೊಬ್ಬ ನುಡಿದ. "ಪರಾಜಯ ಮತ್ತು ನಿಕೇಟರ್– ಇವೆರಡೂ

ಒಟ್ಟಿಗಿರಲಾರವು ಸೇನಾಪತಿ! ನಿಕೇಟರನು ಪರಾಜಯವನ್ನರಿಯ. ಭಾರತ ಇಷ್ಟು ಅಸ್ತವ್ಯಸ್ತವಾಗಿರುವಾಗ, ಮಹಾರಾಜ ಪರ್ವತಕನಂಥ ಸಹಕಾರಿಯೂ ಸಿಕ್ಕಿರುವಾಗ ಸಹ ಭಾರತವನ್ನು ಗೆಲ್ಲಲಾಗದಿದ್ದರೆ, ಇನ್ನೆಂದಿಗೆ ತಾನು ಆದೀತು?"

ಸೆಲೆಯೂಕನು ತನ್ನೆಲ್ಲ ಸಮರಶೂರರಿಗೂ ಉತ್ಸಾಹ ತುಂಬಿದ. ಭಾರತದಲ್ಲಿ ಅದೆಷ್ಟು ಅಪಾರ ಧನರಾಶಿ ದೊರೆಯುವುದೆಂದು ಮನಸೆಳೆವಂತೆ ವರ್ಣಿಸಿದ. ಸೇನಾಪತಿಗಳ ಬಾಯಲ್ಲಿ ನೀರೂರಿತು. ಸರಿ, ಯುದ್ಧದ ಘೋಷಣೆ ಆಗಿಯೇ ಹೋಯಿತು. ಸೇನೆ ಸುಸಜ್ಜಿತವಾಗತೊಡಗಿತು. ಶಿರಸ್ತ್ರಾಣ ಖಡ್ಗ, ಶೂಲಗಳು ಬಿಸಿಲಿಗೆ ಥಳಥಳಿಸಿದವು.

ಸೇನಾನಗರ ಭಾರತದತ್ತ ಹರಿಯಿತು. ರಾಕ್ಷಸನ ಕಡೆಗಂತೂ ಸೆಲೆಯೂಕನ ದೂತನು ಮೊದಲೇ ಹೊರಟಿದ್ದ. ಪರ್ವತಕ ಮತ್ತು ಅಮಾತ್ಯ ರಾಕ್ಷಸರು ಭಾರತದಲ್ಲಿ ತಮ್ಮ ಸ್ವಾಗತಕ್ಕೆ ಕಾದು ನಿಂತಿರುತ್ತಾರೆಂದೇ ಅವರೆಲ್ಲರೂ ಭಾವಿಸಿದ್ದರು. ಆದರೆ ಒಳಗೊಳಗೇ ಅವರನ್ನು ಮೀರಿಸಿದ ಶಕ್ತಿ ಕಾರ್ಯ ನಡೆಸುತ್ತಿತ್ತು.



## ೧೨. ಶ್ರೀಸಾಮಾನ್ಯನ ಮನ

ಸಿಂಧುವಿನ ಪ್ರಶಾಂತ ಜಲಧಾರೆಯಿಂದು ಉಕ್ಕೇರಿ ದಡಗಳನ್ನಪ್ಪಳಿಸುತ್ತದೆ. ಅದರ ಎಡಬದಿಗೆ ಮಗಧದ ಅಗಾಧ ಸೇನೆ ತಳವೂರಿದೆ. ಕುದುರೆಗಳ ಹೇಷಾರವ; ಘೀಳಿಡುವ ಮದಗಜಗಳು; ಮತ್ತೊಮ್ಮೆ ತಪೋವನಗಳ ಶಾಂತಿ ಕದಡಿಹೋಗುತ್ತಿತ್ತು. ಒಂದು ಸೇನಾ ವಿಭಾಗವಂತೂ ಮಗಧದಿಂದ ಎಂಟು ದಿನಗಳ ಮೊದಲೇ ಇಲ್ಲಿಗೆ ಬಂದಿತ್ತು. ಎರಡನೆಯದು ಇಂದೇ ಬಂದಿದೆ. ಬಿಡಾರ ಹೂಡಲು ವ್ಯವಸ್ಥೆಯಾಗುತ್ತಿದೆ.

"ವೈರಿಗಳು ಮತ್ತೆ ಎಂದೆಂದಿಗೂ ತಲೆ ಎತ್ತದಂತೆ ಈ ಬಾರಿ ಅವರ ಹುಟ್ಟಡಗಿಸಬೇಕು" ಎಂದು ಹೇಳುತ್ತಾ ಯೋಧನೊಬ್ಬ ಡೇರೆ ಕಟ್ಟುವ ಬಿದಿರುಗೂಟಕ್ಕೆ ಸುತ್ತಿಗೆಯಿಂದ ಬಲವೆಲ್ಲ ಬಿಟ್ಟು ಹೊಡೆದ.

"ಅಲಿಕಸುಂದರನಿಗೆ ಆ ಗತಿಯಾಯಿತು. ಆದರೂ ಈ ಯವನರು ಭಾರತ ಗೆಲ್ಲುವ ಯೋಚನೆ ಮಾಡುತ್ತಾರಲ್ಲ ಎಷ್ಟು ಕೊಬ್ಬು ನೋಡಣ್ಣ!" ಎಂದೊಬ್ಬ ಕುಡಿಮೀಸೆಯ ಸೈನಿಕ ಡೇರೆಯ ಹಗ್ಗ ಎಳೆದು ಕಟ್ಟುತ್ತಾ ಪಕ್ಕದಲ್ಲಿದ್ದ ಹಿರಿಯನಿಗೆ ಹೇಳಿದ.

"ಇದರಲ್ಲಿ ಶತ್ರುಗಳ ಕೊಬ್ಬೇನಿದೆ. ಸೋಮನಾಥ! ಇದಂತೂ ನಮ್ಮದೇ ದೋಷ. ನಮ್ಮಲ್ಲಿನ ದ್ರೋಹದ ನಡವಳಿಕೆಯೇ ಅವರನ್ನು ಆಕ್ರಮಣಕ್ಕೆ ಹುರಿದುಂಬಿಸುತ್ತದೆ. ಆದರೆ ಈಗಂತೂ ಭಾರತ ಅಲಿಕ ಸುಂದರನ ಕಾಲಕ್ಕಿಂತಲೂ ಹೆಚ್ಚು ಬಲಿಷ್ಠವಾಗಿ ಸಂಘಟಿತವಾಗಿದೆ. ಆಗಲಾದರೋ ಅಲಿಕಸುಂದರನ ಜೊತೆಗೆ ಹೋರಾಡಿದ್ದ. ಆದರೆ ನಾವಿಂದು ಇಡೀ ಭಾರತದ ಸಂರಕ್ಷಣೆಗಾಗಿ ಕಾದಾಡಲು ಬಂದಿದ್ದೇವೆ. ಅಂದಿಗೂ ಇಂದಿಗೂ ಎಷ್ಟೊಂದು ವ್ಯತ್ಯಾಸ!"

"ನೀನೂ ಆಗ ಯವನರೊಡನೆ ಯುದ್ಧ ಮಾಡಿದ್ದೆಯೇನಣ್ಣ?"

"ಅಂಥ ಅದೃಷ್ಟ ನನಗೆಲ್ಲಿ?"– ಅರುಣಾಭನ ದನಿ ಸಣ್ಣಗೆ, ತಣ್ಣಗಿತ್ತು. "ಅಲಿಕಸುಂದರನ ಆಕ್ರಮಣದ ಸುದ್ದಿ ಕೇಳಿ ನನ್ನ ಭುಜ ಸ್ಫುರಿಸುತ್ತಿತ್ತು. ರಕ್ತ ಕಾವೇರಿತ್ತು. ಆದರೆ ನಂದನ ಹೇಡಿತನದಿಂದ ನಮ್ಮ ಖಡ್ಗ ಒರೆಯಿಂದ ಹೊರಬರಲೇ ಇಲ್ಲ. ಬಾಣಗಳೆಲ್ಲ ಬತ್ತಳಿಕೆಯಲ್ಲೇ ಉಳಿದುಹೋದವು. ಅಲ್ಲದೆ, ಆಗ ಮಗಧದ

ಹೊರತು ಬೇರೆ ಜಗತ್ತನ್ನೇ ಕಂಡವರಲ್ಲ ನಾವು. ಅಲ್ಲಿರುವ ಹರಿಶೀಲನನ್ನೇ ಕೇಳು, ಆಗ ಅವನು ಏನು ಉತ್ತರ ಕೊಟ್ಟಿದ್ದ."

"ಹಿಂದಿನ ನೆನಪು ತಂದು ಹಂಗಿಸುತ್ತೀಯೇಕೆ? ಈಗ ನಾನಂತೂ ಇಡೀ ಭಾರತ ನನ್ನದೆಂದು ಹೆಮ್ಮೆ ಪಡುತ್ತೇನೆ. ಒಂದಕ್ಕೆ ಎರಡರಷು ಶತ್ರುಗಳನ್ನು ಕೊಂದು ಹಿಂದಿನ ತಪ್ಪುಗಳ ಋಣ ತೀರಿಸುತ್ತೇನೆ. ಸ್ವತಃ ಅಮಾತ್ಯರಾಕ್ಷಸರೇ ನಂದವಂಶ ಮತ್ತು ಮಗಧ ಬಿಟ್ಟು ಬೇರೇನೂ ಯೋಚಿಸುತ್ತಿರಲಿಲ್ಲವೆಂದಮೇಲೆ ಇನ್ನು ನಮ್ಮ ಮಾತೇನು?"– ಎಂದ ಹರಿಶೀಲ.

ಅರುಣಾಭ ಹೇಳಿದ– "ಈಗಂತೂ ನಾವು ಅಮಾತ್ಯರಾಕ್ಷಸನ ರಾಷ್ಟ್ರೀಯತೆಯನ್ನು ಹೊಗಳಬೇಕಾಗಿದೆ. ಮೊದಲಾದರೆ, ಅವರು ಚಂದ್ರಗುಪ್ತರನ್ನು ವಿರೋಧಿಸುತ್ತಿದ್ದರು. ಆದರೆ ಸೆಲೆಯೂಕನ ದೂತನು ದೇಶದ್ರೋಹದ ಸಂದೇಶ ಹೊತ್ತು ತಂದಾಗ ಈಗಿನ ರಾಷ್ಟ್ರೀಯ ವಿಪತ್ತಿನಲ್ಲಿ ಚಂದ್ರಗುಪ್ತ ಮಹಾರಾಜರಿಗೆ ನೆರವಾಗುವುದೇ ಯೋಗ್ಯವೆಂದು ಅವರಿಗೆ ಅರಿವಾಯಿತು. ಅವರು ಸೆಲೆಯೂಕನ ದೂತನಿಗೆ ಹೇಳಿದ್ದೇನು ಗೊತ್ತೇ? "ದೂತನೇ, ತೊಲಗಾಚೆ; ಪರ್ವತಕನೇ ಭಾರತದ ಕೊಟ್ಟಕೊನೆಯ ದೇಶದ್ರೋಹಿಯಾಗಿದ್ದ; ಅವನೀಗ ದೇಶದ್ರೋಹಿಗಳಿಗೆಲ್ಲ ಯೋಗ್ಯವಾದ ಜಾಗಕ್ಕೇ ತಲುಪಿದ್ದಾನೆ. ಇನ್ನು ಭಾರತದಲ್ಲಿ ದೇಶದ್ರೋಹಿಗಳಿಗಾಗಿ ಹುಡುಕುವುದು ವ್ಯರ್ಥ" ಎಂದು ನಿಮ್ಮೊಡೆಯನಿಗೆ ತಿಳಿಸು" ಎಂದರು.

ರಾಮವೀರ ದನಿಗೂಡಿಸಿದ– "ಭಾರತ ಇಷ್ಟು ಬಲಿಷ್ಠವಾಗಿರುವುದಕ್ಕೆ ಅದೇ ಕಾರಣ." ನಂತರ ಹರಿಶೀಲ ಪ್ರಾರಂಭಿಸಿದ– "ಒಳ್ಳೆಯ ದಿನಗಳಲ್ಲಿ ದೇಶದೊಡನೆ ಒಂದಾಗಿ ನಿಲ್ಲದಿದ್ದರೂ ಕ್ಷಮಿಸಬಹುದು. ಆದರೆ ಆಪತ್ಕಾಲದಲ್ಲಿ ಶತ್ರುವಿನೊಡನೆ ಕೈಜೋಡಿಸುವ ದೇಶದ್ರೋಹಿಯಂತಿರಲಿ, ರಾಷ್ಟ್ರಕ್ಕೆ ನೆರವಾಗದೆ ಸುಮ್ಮನೆ ಕುಳಿತವರನ್ನೂ ಕ್ಷಮಿಸಲಾಗದು. ಆದ್ದರಿಂದಲೇ ಅಮಾತ್ಯರು ಪುನಃ ಅಧಿಕಾರಸೂತ್ರ ವಹಿಸಿಕೊಂಡಿದ್ದಾರೆ. ಸೆಲೆಯೂಕನ ಆಕ್ರಮಣವಂತೂ ನಮಗೆ ಒಂದು ದೈವೀ ವರವೇ ಆಯಿತು. ಅವನು ನಮ್ಮೆಲ್ಲರನ್ನು ಅದೆಷ್ಟು ಹತ್ತಿರ ತಂದ! ಇಂದು ಇಡೀ ಭಾರತ ಒಕ್ಕೊರಲಿನಿಂದ ಗರ್ಜಿಸುತ್ತದೆ. ಒಬ್ಬನ ಅಪ್ಪಣೆಯಂತೆ ಕಾರ್ಯಗೈಯುತ್ತದೆ. ಈ ಏಕತೆಯಲ್ಲಿ ಅದೆಷ್ಟು ಶಕ್ತಿ ಸಾಮರ್ಥ್ಯಗಳಿವೆ ಎಂಬುದು ಸೆಲೆಯೂಕನಿಗೂ ಸದ್ಯದಲ್ಲೇ ಅರಿವಾಗಲಿದೆ." ಈ ಮಾತು ಹೇಳುತ್ತ ಹೇಳುತ್ತ ಹರಿಶೀಲ ಆವೇಶದಿಂದ ಎದ್ದುನಿಂತ. ಅಷ್ಟರಲ್ಲೆ ಅವನು ಮಾತಿನಲ್ಲಿ ವಿವರಿಸಿದ ಸಂಘಟನೆಯ ಶಕ್ತಿಯನ್ನು ತೋರಿಸಲು ನೀಡಿದ ಕರೆಯೋ ಎಂಬಂತೆ ಸಮರಭೇರಿ ಭೋರ್ಗರೆಯಿತು.



## ೧೩. ಸಿಂಧೂ ತೀರದ ಸ್ವಾಗತ

ಸಿಂಧೂ ತೀರದಲ್ಲಿ ಸೈನಿಕರು ಹೆಚ್ಚು ಕಾಲ ಕಾಯುತ್ತ ಕುಳಿತುಕೊಳ್ಳಬೇಕಾಗಿಲ್ಲ. ಎರಡು ದಿನ ಕಳೆಯುವುದರೊಳಗೆ ಗೂಢಚಾರರು ಸುದ್ದಿ ತಂದರು. ಸೆಲೆಯೂಕನು ಮಗಧದ ಆಕ್ರಮಣಕ್ಕೆ ಸಕಲ ಸಿದ್ಧತೆಗಳೊಂದಿಗೆ ಅನತಿದೂರದಲ್ಲೇ ತಂಗಿದ್ದನು. ಅಲಿಕಸುಂದರನು ವಿತಸ್ತಾ ತೀರದಲ್ಲಿ ಪರಾಜಿತನಾಗಿದ್ದ. ಈಗ ಸೆಲೆಯೂಕನನ್ನು ಅದಕ್ಕಿಂತಲೂ ಉತ್ತರದ ಸಿಂಧೂತಟದಲ್ಲಿ ಸೋಲಿಸುವುದೇ ಯೋಗ್ಯವೆಂದು ಚಂದ್ರಗುಪ್ತನು ಯೋಚಿಸಿದ್ದ.

ಮರುದಿನ ಸೆಲೆಯೂಕನು ಸಿಂಧುವಿನ ಎದುರು ಬದಿಯಲ್ಲಿ ಚಂದ್ರಗುಪ್ತನ ಸೇನೆಯನ್ನು ಕಾಣುತ್ತಲೇ ಅವನ ಮನದಾಸೆಗಳೆಲ್ಲ ಮಣ್ಣುಪಾಲಾದವು; ಅವನ ಸುಂದರ ಸ್ವಪ್ನಗನ್ನಡಿ ಸಹಸ್ರ ಹೋಳಾಗಿ ಸಿಡಿದುಬಿತ್ತು. ಪಾಟಲಿ ಪುತ್ರದವರೆಗೂ ಯಾರ ಕಾಟವೂ ಇಲ್ಲದೆ ಹೋಗಿಬಿಡಬಹುದೆಂದುಕೊಂಡಿದ್ದ, ಅವನು. ಆದರೀಗ ತಲೆ ಹಾಕುತ್ತಿದ್ದಂತೆಯೇ ಒನಕೆಯ ಪೆಟ್ಟು! ಭಾರತದೊಳಗೆ ಮೊದಲ ಹೆಜ್ಜೆಗೇ ಕೆನ್ನೆಗೆ ಬಾರಿಸಿದಂತಾಯಿತು ಅವನಿಗೆ. ಆದರೂ ಅವನು ಧೈರ್ಯಗೆಡಲಿಲ್ಲ. ಆ ವೇಳೆಗಾಗಲೇ ಅವನ ಸೈನ್ಯದಲ್ಲಿ ಗುಸುಗುಸು ಪ್ರಾರಂಭವಾಗಿತ್ತು. ತಮ್ಮನ್ನು ಮೋಸಗೊಳಿಸಿ ಕರೆತರಲಾಯಿತೆಂದು ಸೇನಾಧಿಕಾರಿಗಳಿಗನಿಸಿತು. "ಮಗಧದವರೆಗೆ ದಾರಿಯುದ್ದಕ್ಕೂ ಕೊಳ್ಳೆ ಹೊಡೆಯುತ್ತಾ ಹೋಗಬಹುದು ಮತ್ತು ಮಗಧದಲ್ಲಿ ಇನ್ನೂ ಬುಡ ಭದ್ರವಿಲ್ಲದ ಚಂಧ್ರಗುಪ್ತನ ಜತೆಗೆ ಸ್ವಲ್ಪ ಹೊಡೆದಾಟ, ಅಷ್ಟೆ"– ಇದು ಅವರು ಕೇಳಿದ್ದ ಸಂಗತಿ.

ಧೃತಿಗೆಡದೆ ಸೆಲೆಯೂಕ ಹೇಳಿದ– "ನಮಗಿಂದು ತುಂಬ ಸೌಭಾಗ್ಯದ ದಿನ. ಅಲಿಕಸುಂದರ ಪ್ರಭುಗಳು ಭಾರತಕ್ಕೆ ಬಂದಿದ್ದಾಗ ಹಲವಾರು ಯುದ್ಧಗಳನ್ನು ಮಾಡಬೇಕಾಯಿತು. ಒಬ್ಬೊಬ್ಬ ರಾಜನೊಡನೆಯೂ ಗಣಾಧಿಪತಿಯೊಡನೆಯೂ ಅವರು ಸೆಣೆಸಿದರು. ಅಂಗುಲ ಅಂಗುಲ ನೆಲಕ್ಕೂ ರಕ್ತ ಹರಿಸಬೇಕಾಯಿತು. ಆದರೆ ಇಂದು ನಾವು ಮಾಡಬೇಕಾಗಿರುವುದು ಒಂದೇ ಒಂದು ಯುದ್ಧ. ಎದುರಿಗಿರುವ ಅಲ್ಪ ಸೇನೆಯನ್ನು ನಾವು ಭೂಗತಗೊಳಿಸಿದರಾಯಿತು. ಮರುಕ್ಷಣವೇ ಇಡೀ ಭಾರತ ನಮ್ಮ ಕಾಲಡಿಗೆ ಬಂದು ಬೀಳುತ್ತದೆ. ನಂತರ ಯುಗಯುಗಗಳವರೆಗೆ

ಇಲ್ಲಿನ ಅಪಾರ ಧನರಾಶಿಯಿಂದ ನಮ್ಮ ಮನೆ ತುಂಬಿಕೊಳ್ಳೋಣ. ಒಮ್ಮೆಗೇ ಬಲವಾಗಿ ದಾಳಿಯಿಡಬೇಕು, ಅಷ್ಟೆ. ಸಿಂಧುವಿನ ಆಚೆಯ ದಡದಲ್ಲಿ ನಮ್ಮ ಬಲಿ ಪಶು ನಿಂತಿದೆ. ಅಲ್ಲಿ ನೋಡಿ; ಅಲ್ಲಿಗೆ ಹೋಗೋಣ ದೇವಾಧಿದೇವ ಜ್ಯೂಸದ ಪ್ರೀತ್ಯರ್ಥವಾಗಿ ಗೋವಿನ ಬಲಿ ನೀಡೋಣ."

"ಯವನಪತಿಗೆ ಜಯವಾಗಲಿ!", "ನಿಕೇಟರನಿಗೆ ಜಯವಾಗಲಿ!" ಎಂಬ ಘೋಷಣೆಗಳಿಂದ ಪಶ್ಚಿಮಾಂಚಲವೆಲ್ಲ ಮಾರ್ದನಿಸಿತು. ಅದು ಪೂರ್ವತಟ ತಲುಪಿದಾಗ ಅದರ ಜೋರೆಲ್ಲ ಉಡುಗಿಹೋಗಿ ರೋಗಿಯ ದನಿಯಂತಾಗಿತ್ತು. ಪೂರ್ವದಿಂದ ಬಂದ ಮಳೆಗಾಲದ ಮಾರುತಗಳು ಶತ್ರುಘೋಷಗಳನ್ನು ಪಶ್ಚಿಮಕ್ಕೆ, ಇನ್ನೂ ಪಶ್ಚಿಮಕ್ಕೆ ಹೊಡೆದುಕೊಂಡು ಹೋಗುತ್ತಿದ್ದವು. ವೀರರಿಗೆ ಪ್ರಕೃತಿಯೂ ನೆರವಾಗಿ ನಿಲ್ಲುತ್ತದೆ.

ಅಲಿಕಸುಂದರನು ವಿತಸ್ತಾನದಿಯನ್ನು ದಾಟಿದ್ದಂತೆಯೇ ಕಪಟದಿಂದ ಸೆಲೆಯೂಕನೂ ಕತ್ತಲಿನ ಮರೆಯಲ್ಲಿ ಸಿಂಧುವನ್ನು ದಾಟಲು ಪ್ರಯತ್ನಿಸಿದ. ಆದರೆ ಮೊದಲಿನ ಅನುಭವದಿಂದ ಪಾಠ ಕಲಿಯದಿದ್ದವರು ಆಗ ಭಾರತದಲ್ಲಿ ಯಾರೂ ಇರಲಿಲ್ಲ. ಚಂದ್ರಗುಪ್ತನು ಮಹಾ ಪರಾಕ್ರಮಿ ಯೋಧ ಮಾತ್ರವಲ್ಲದೆ, ಕುಶಲ ಸೇನಾಸಂಚಾಲಕನೂ ಆಗಿದ್ದ. ರಣನಿಪುಣನಾಗಿದ್ದ ಅವನು ಯುದ್ಧ ವಿದ್ಯೆಯ ಸರ್ವತಂತ್ರಗಳಲ್ಲೂ ಪಾರಂಗತನಾಗಿದ್ದ. ನದಿಯ ಮೇಲು ಭಾಗಕ್ಕೆ ಒಂದು ಪಡೆಯನ್ನೂ, ಕೆಳಭಾಗಕ್ಕೆ ಮತ್ತೊಂದು ಪಡೆಯನ್ನೂ ಮೊದಲೇ ಕಳುಹಿಸಿದ್ದ. ನದಿಯನ್ನು ದಾಟಿ ಇಬ್ಬದಿಗಳಿಂದಲೂ ಶತ್ರು ಸೈನ್ಯವನ್ನು ಮುತ್ತಲು ಅವನು ತನ್ನವರಿಗೆ ಆಜ್ಞಾಪಿಸಿದ್ದ. ಆರಿಸಿದ ಬಿಲ್ಲುಗಾರರನ್ನು ನದಿಯ ಉತ್ತರದಲ್ಲಿ ಮರಗಿಡಗಳ ಹಿಂದೆ ಅಡಗಿಸಿ ನಿಲ್ಲಿಸಿದ್ದ. ಅಲ್ಲಿ ನದಿಯ ನಡುವೆ ಒಂದು ದೊಡ್ಡ ನಡುಗಡ್ಡೆಯಿತ್ತು. ಅದೇ ಜಾಗದಲ್ಲಿ ಸೆಲೆಯೂಕನು ನದಿ ದಾಟಲು ನಿರ್ಧರಿಸಿದ್ದ.

ಕಣ್ಣಿರಿಯುವ ಕಗ್ಗತ್ತಲು ಕವಿದಿತ್ತು. ಶತ್ರುಸೇನೆಯ ಒಂದು ಭಾಗ ನಿಶ್ಚಿತ ಜಾಗಕ್ಕೆ ನಿಶ್ಶಬ್ದವಾಗಿ ಸಾಗಿತ್ತು. ದಡದಲ್ಲಿ ದೋಣಿಗಳು ಸಿದ್ಧವಾಗಿದ್ದವು; ಒಬ್ಬೊಬ್ಬರಾಗಿ ಕುಳಿತರು. ಹುಟ್ಟುಗೋಲುಗಳ ಶಬ್ದ ರಾತ್ರಿಯ ಶಾಂತಿಗೆ ಭಂಗ ತರುತ್ತಿತ್ತು. ದೋಣಿಗಳು ಒಂದೊಂದಾಗಿ ದ್ವೀಪದ ದಡ ಮುಟ್ಟಿದವು. ಸೈನಿಕರು ಕೆಳಗಿಳಿದರು. ಅವರ ಕಾರ್ಯದ ಮೊದಲ ಘಟ್ಟ ನಿರಾತಂಕವಾಗಿ ಮುಗಿಯಿತು. ತಮ್ಮ ಯಶಸ್ಸಿನಲ್ಲಿ ಅವರಿಗೆ ಪೂರಾ ಭರವಸೆಯುಂಟಾಯಿತು. ಒಬ್ಬನೆಂದ– "ಹಿಂದೂಗಳು ತೀರ ಭೋಳೇ ಜನ. ಎದುರು ಬದರಿಗೆ ಹೊಡೆದಾಡುವುದನ್ನು ಬಿಟ್ಟರೆ ಬೇರೇನೂ ಅರಿಯರು." ನಾವೆಗಳು ದ್ವೀಪದ ಎಡಬದಿಗೆ ಬಂದವು. ಅಂಬಿಗನು ಮೊದಲ ಹುಟ್ಟು ಹಾಕುತ್ತಲೇ, ಸೊಯ್ ಎಂದು ಕತ್ತಲಲ್ಲಿ ಬಂದ ಬಾಣ ಅವನ ಎದೆಯಲ್ಲಿ ಹೊಕ್ಕು ಬೆನ್ನಿನಲ್ಲಿ



ಬಂತು. ನಾವಿಕನು ಚೀರುತ್ತಾ ನೀರಿನಲ್ಲಿ ಬಿದ್ದ. ನಡುನೀರಿನಲ್ಲಿ ಕೂಗೆದ್ದಿತು. ಆ ಕೂಗು ಪೂರ್ವತೀರದಲ್ಲಿದ್ದವರಿಗೆ ಕೇಳಿಸಿದಂತೆಲ್ಲಾ ನೂರಾರು, ಸಾವಿರಾರು, ಬಾಣಗಳು ಬಂದು ಬೀಳತೊಡಗಿದವು. ಏನಾಗುತ್ತಿದೆಯೆಂದು ಗೊತ್ತಾಗುವ ಮೊದಲೇ ಶತ್ರುಸೈನಿಕರು ಸತ್ತು ಕೆಳಗುರುಳತೊಡಗಿದರು. ಯವನ ಸೇನೆಯಲ್ಲಿ ಹಾಹಾಕಾರ ಹರಡಿತು. ಬಾಣಗಳು ಎಲ್ಲಿಂದ ಯಾರಿಂದ ಬರುತ್ತಿವೆಯೆಂಬುದೂ ಅವರಿಗೆ ಗುರುತಾಗಲಿಲ್ಲ. ಒಬ್ಬ ಸೈನಿಕ ಬಿಲ್ಲಿಗೆ ಬಾಣ ಹೂಡಿದ. ಪಕ್ಕದಲ್ಲಿದ್ದವನು ಗಟ್ಟಿಯಾಗಿ "ಅಲ್ಲಿ ಆ ಕಡೆಗೆ ಗುರಿಯಿಡು" ಎಂದ. ಮಾತು ಮುಗಿಯುತ್ತಿದ್ದಂತೆಯೇ ಅವರಿಬ್ಬರು ಸೈನಿಕರೂ ಚೀತ್ಕರಿಸಿ ಕೆಳಗೆ ಬಿದ್ದರು. ಚಂದ್ರಗುಪ್ತನ ಯೋಧರು ಶಬ್ದವೇದಿ ಬಾಣಗಳನ್ನು ಪ್ರಯೋಗಿಸುತ್ತಿದ್ದರು. ಕತ್ತಲಿನಲ್ಲೂ ಬಾಣಗಳನ್ನು ಗುರಿಮುಟ್ಟಿಸುವ ನಿಪುಣತೆ, ಕೈಚಳಕ ಅವರಲ್ಲಿತ್ತು. ಸಿಂಧೂಜಲ ರಕ್ತದಿಂದ ಕೆಂಪಾಗತೊಡಗಿತು.

ಯವನ ಸೇನೆಗೆ ಹಿಂದಿರುಗುವಂತೆ ಆಜ್ಞೆಯಾಯಿತು. ಎದೆಗೆ ಬದಲು ಬಾಣಗಳಿಗೆ ಅವರು ಬೆನ್ನೊಡ್ಡಿದರು. ಇನ್ನೂ ತಮ್ಮ ದಡ ಸೇರಿಕೊಳ್ಳುವಷ್ಟರಲ್ಲೇ ಎದುರಿನಿಂದಲೂ ದಾಳಿ ಶುರುವಾಯಿತು. ಚಂದ್ರಗುಪ್ತನ ಸೇನೆ ನದಿಯನ್ನು ದಾಟಿಹೋಗಿ ಅತ್ತಕಡೆ ನಿಂತಿತ್ತು. ಸೆಲೆಯೂಕನಿಗೆ ಗಾಬರಿಯಾಯಿತು. ಅವನು ತನ್ನ ಉಳಿದ ಸೈನ್ಯವನ್ನೂ ಯುದ್ಧಕ್ಕೆ ಕರೆಸಿಕೊಳ್ಳಲು ದೂತನನ್ನಟ್ಟಿದ. ಆದರೆ ಆ ವೇಳೆಗೆ ಆ ಸೈನ್ಯವೂ ಕೆಳಭಾಗದಿಂದ ನದಿಯನ್ನು ದಾಟಿಬಂದ ಭಾರತೀಯ ಯೋಧಪಡೆಯ ಆಕ್ರಮಣದಿಂದ ಅಸ್ತವ್ಯಸ್ತವಾಗಿತ್ತು. ನಾಲ್ಕು ಕಡೆಗಳಿಂದಲೂ ಯವನಸೇನೆಗೆ ಹೊಡೆತ ಬೀಳತೊಡಗಿತು. ನಿಕೇಟರನ ಸೈನ್ಯ ದಿಕ್ಕಾಪಾಲಾಗಿ ಕಂಗೆಟ್ಟು ಓಡತೊಡಗಿತು.

ಸೂರ್ಯೋದಯವಾದಾಗ ಪೂರ್ವ ಮತ್ತು ಪಶ್ಚಿಮ ತಟಗಳೆರಡೂ ರಕ್ತಮಯವಾಗಿದ್ದವು. ಪಶ್ಚಿಮದಲ್ಲಿ ಯವನರ ರಕ್ತದಿಂದ ಕೆಂಪಾಗಿತ್ತಾದರೆ, ಪೂರ್ವದಲ್ಲಿ ಭಾರತೀಯ ವೀರರ ಪೌರುಷದಿಂದ ಪ್ರಸನ್ನಗೊಂಡ ದಿಗಂತದ ಕೆಂಪುನಗೆ ಹರಡಿತ್ತು.

ಬೆಳಕು ಮೂಡುವುದರೊಳಗಾಗಿ ಅರ್ಧದಷ್ಟು ಶತ್ರುಸೇನೆ ನಷ್ಟ ಹೊಂದಿತ್ತು. ನಂತರ ಇಡೀ ದಿನ ಯುದ್ಧ ಘೋರವಾಗಿ ಮುಂದುವರಿಯಿತು. ಆದರೆ ಯುವ ಸೈನಿಕರ ಆಸೆ ಭರವಸೆಗಳೆಲ್ಲ ಹಾರಿಹೋಗಿದ್ದವು. ಸೆಲೆಯೂಕನ ಕೂಗಿಗೆ ಅವರು ಕಿವಿಗೊಡಲಿಲ್ಲ. ಕಡೆಗವನು ಸಂಧಿಯ ಪ್ರಸ್ತಾಪ ಮಾಡುವುದೇ ತನಗೆ ಹಿತವೆಂದು ಕೊಂಡನು.

ಎರಡು ಕಡೆಯವರೂ ಯುದ್ಧ ನಿಲ್ಲಿಸಿದರು. ಒಪ್ಪಂದದ ಕರಾರುಗಳು ನಿಶ್ಚಯಗೊಳ್ಳತೊಡಗಿದವು. ನಿಜಕ್ಕೂ ಕರಾರಿನ ಪ್ರಶ್ನೆಯೇ ಇರಲಿಲ್ಲ. ಚಂದ್ರಗುಪ್ತನಿಗೆ

ಅಸಂದಿಗ್ಧ ಗೆಲುವು ದೊರಕಿತ್ತು. ಅವನು ಹೇಳಿದುದಕ್ಕೆಲ್ಲಾ ಸೆಲೆಯೂಕನು ಒಪ್ಪಲೇಬೇಕಾಗಿತ್ತು. ಭಾರತವು ಹಿಂದೆಂದೂ ಇಷ್ಟು ಅದ್ಭುತವಾಗಿ ತನ್ನ ಶಕ್ತಿ ಮತ್ತು ಯಶಸ್ಸಿನ ಅರಿವು ಮಾಡಿಕೊಟ್ಟಿರಲಿಲ್ಲ. ಅಲ್ಲದೆ, ಹಿಂದೆ ಪರ್ವತಕನಿಗೆ ಮಾಡಿದ ಹಾಗೆ ಈಗ ಚಂದ್ರಗುಪ್ತನನ್ನು ಸಂಧಿಯ ನೆಪದಲ್ಲಿ ಮೋಸಗೊಳಿಸುವುದು ಅಸಾಧ್ಯವಾಗಿತ್ತು. ಆರ್ಯ ಚಾಣಕ್ಯನೇ ಒಪ್ಪಂದದ ಷರತ್ತುಗಳನ್ನು ನಿಶ್ಚಯಿಸಿದನು. ಅದಕ್ಕನುಸಾರವಾಗಿ, ಭಾರತದ ಮೇಲೆ ಮತ್ತೆಂದೂ ಆಕ್ರಮಣ ಮಾಡುವುದಿಲ್ಲವೆಂದು ಸೆಲೆಯೂಕನು ಮೊಟ್ಟಮೊದಲು ಪ್ರತಿಜ್ಞೆ ಮಾಡಿದನು. ತನ್ನ ರಾಜ್ಯದಲ್ಲಿ ನಾಲ್ಕು ಪ್ರಾಂತ್ಯಗಳನ್ನು ಚಂದ್ರಗುಪ್ತನಿಗೆ ಕೊಟ್ಟನಲ್ಲದೆ, ತನ್ನ ಮಗಳಾದ ಹೆಲೆನಳನ್ನು ಚಂದ್ರಗುಪ್ತನಿಗಿತ್ತು ಮದುವೆ ಮಾಡಿದನು. ಅವನ ರಾಯಭಾರಿಯಾದ ಮೆಗಸ್ಥನು ಬಹುಕಾಲ ಚಂದ್ರಗುಪ್ತನ ಆಸ್ಥಾನದಲ್ಲಿದ್ದನು. ಹೀಗೆ ಚಂದ್ರಗುಪ್ತನ ರಾಜ್ಯ ಮಧ್ಯ ಏಶಿಯಾದವರೆಗೂ ಹರಡಿತು. ಭಾರತವು ಒಗ್ಗೂಡಿ ಶಕ್ತಿ ಗಳಿಸಿ ನಿಂತರೆ ಏನೆಲ್ಲ ಸಾಧಿಸಬಹುದೆಂಬುದನ್ನು ಈ ಯುದ್ಧ ತೋರಿಸಿಕೊಟ್ಟಿತು.

ಇದಾದ ನಂತರ ಚಂದ್ರಗುಪ್ತನು ಭಾರತದಲ್ಲೆ ದಕ್ಷಿಣದಲ್ಲಿ ಅನೇಕ ಸಣ್ಣಪುಟ್ಟ ಕಾಳಗಗಳನ್ನು ನಡೆಸಬೇಕಾಯಿತು. ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮಗಳಲ್ಲಿನ ಇಡೀ ಭಾರತವನ್ನು ಒಂದೇ ಸೂತ್ರದಲ್ಲಿ ಬೆಸೆಯುವುದು ಅವನ ಉದ್ದೇಶವಾಗಿತ್ತು. ಕೇವಲ ಹನ್ನೆರಡು ವರ್ಷದೊಳಗೇ ಅಷ್ಟೆಲ್ಲವನ್ನೂ ಪೂರೈಸಿದ ಮಹತ್ಸಾಧನೆ ಅವನ ಹಿರಿಮೆಗೆ ಸಾಕ್ಷಿಯಾಗಿದೆ.



## ೧೪. ಕನಸು ನನಸಾಯಿತು

ಚಂದ್ರಗುಪ್ತ ಮೌರ್ಯನು, ಅಡಿಗಡಿಗೂ ಯಶಸ್ಸು ಸಾಧಿಸಿದ ಕೆಲವೇ ಇತಿಹಾಸ ನಿರ್ಮಾಪಕರ ಉಜ್ವಲ ಸಾಲಿಗೆ ಸೇರುವ ವ್ಯಕ್ತಿ. ಇದರ ಶ್ರೇಯಸ್ಸು ಅವನ ನಿತಾಂತ ಕಾರ್ಯಮಗ್ನತೆ ಹಾಗೂ ಸತತ ಸಾಧನಾಶೀಲತೆಗೆ ಸಲ್ಲುವಂತೆಯೇ ಯಾವೊಂದು ಸಂದರ್ಭವನ್ನೂ ಕೈಜಾರಿಹೋಗಲು ಬಿಡದಿದ್ದ ಅವನ ವಿಲಕ್ಷಣ ಬುದ್ಧಿಶಕ್ತಿಗೂ ಸಲ್ಲುತ್ತದೆ. ಅವನು ಮೈಯೆಲ್ಲ ಕಣ್ಣಾಗಿ ಬೇಟೆಗಾರನಂತೆ ಸಮಯ ನಿರೀಕ್ಷಣೆ ಮಾಡುತ್ತಿದ್ದನಲ್ಲದೆ, ಅವಕಾಶವೊದಗುತ್ತಲೇ ತನ್ನೆಲ್ಲ ಬುದ್ಧಿಶಕ್ತಿಗಳನ್ನೂ ಸುರಿದು, ಸಕಲ ಸಾಧನಸಾಮಗ್ರಿಗಳನ್ನೂ ಪಣಕ್ಕೆ ಹಚ್ಚಿ ಕಾರ್ಯರಂಗಕ್ಕೆ ಇಳಿಯಲು ಹಿಂದೆ ಮುಂದೆ ನೋಡುತ್ತಿರಲಿಲ್ಲ. ರಾಜತಂತ್ರದ ರಹಸ್ಯ ಪಟ್ಟುಗಳೆಲ್ಲವನ್ನೂ ಅವನು ತನ್ನ ಗುರುವೂ, ಸಹಕಾರಿಯೂ ಆಗಿದ್ದ ಚಾಣಕ್ಯನಿಂದಲೇ ವ್ಯವಹಾರಿಕ ರೂಪದಲ್ಲಿ ಕಲಿತಿದ್ದ.

ಅಸಾಧಾರಣ ವೀರತೆ ಹಾಗೂ ಸಾಹಸ ಅವನಲ್ಲಿತ್ತು. ಸದಾ ಅವನು ಸೇನೆಯ ಮುಂಭಾಗದಲ್ಲೇ ನಿಂತು ಹೋರಾಡುತ್ತಿದ್ದ; ವಿಪತ್ತುಗಳಲ್ಲಿ ಸ್ವತಃ ಮೊದಲು ಮುನ್ನುಗ್ಗಿ, ನಂತರ ಇತರ ಸಂಗಡಿಗರನ್ನು ನೆರವಿಗೆ ಕರೆಯುತ್ತಿದ್ದ. ತನ್ನ ಸಾಹಸ ಪರಾಕ್ರಮಗಳಿಂದಲೇ ಅವನು ಮೊದಲು ಅಲಿಕಸುಂದರನ ವಿರುದ್ಧ ದಂಗೆಯೆಬ್ಬಿಸಿ, ನಂತರ ಸೆಲೆಯೂಕನನ್ನು ಜಯಿಸಿ, ಗಡಿನಾಡು ಪಂಜಾಬು ಮತ್ತು ಪಶ್ಚಿಮ ಭಾರತದ ಎಲ್ಲ ವೀರಜಾತಿಗಳವರ ಆದರ, ಶ್ರದ್ಧೆಗಳಿಗೆ ಪಾತ್ರನಾದ. ಅವನು ಅಲಿಕಸುಂದರನನ್ನು ಒಮ್ಮೆ ಏಕಾಂಗಿಯಾಗಿ ಭೇಟಿ ಮಾಡಿ ಅವನಿಗೆ ಛೀಮಾರಿ ಹಾಕಿ ಬಂದ ಘಟನೆಯೇ ಸಾಕು, ಅವನ ಸ್ವತಂತ್ರ ಹಾಗೂ ನಿರ್ಭೀತ ಪ್ರವೃತ್ತಿಗೆ ನಿದರ್ಶನವಾಗಿದೆ. ಇಷ್ಟೊಂದು ಖಂಡಿತವಾದಿಯೂ, ನಿರ್ಭಯನೂ ಆಗಿದ್ದರೂ ಅವನು ಸದಾಕಾಲವೂ ಜನಾನುರಾಗಿಯಾಗಿಯೇ ಇದ್ದ. ಮಗಧಸಿಂಹಾಸನ ಏರುವುದಕ್ಕೆ ಮೊದಲೇ ಜನತೆಯ ಹೃದಯ ಸಾಮ್ರಾಟನಾಗಿದ್ದುದಕ್ಕೂ ಇದೇ ಕಾರಣ. ಇದೇ ಗುಣದಿಂದಲೇ ಅವನು ಪ್ರಜಾತಂತ್ರೀಯ ಆಡಳಿತದಿಂದಾಗಿ ಅತ್ಯಂತ ಸ್ವತಂತ್ರ ಪ್ರವೃತ್ತಿಯವರಾಗಿದ್ದ ಮಾಲವ, ಕ್ಷುದ್ರಕ ಇತ್ಯಾದಿ ಗಣರಾಜ್ಯಗಳ ಜನಮನದ ಅಧಿಪತಿಯಾಗಲು ಸಾಧ್ಯವಾಯಿತು. ಅವನು ಗಳಿಸಿದ ಜನಪ್ರಿಯತೆ ಹಾಗೂ

ಆಬಾಲವೃದ್ಧರ ಆದರಕ್ಕೆ ಮೂಲಕಾರಣ ಎಂದರೆ ಅವನ ನಿಸ್ವಾರ್ಥ ದೇಶಭಕ್ತಿ. ಒಂದು ವೇಳೆ ಅವನು ತನ್ನೊಬ್ಬನ ಸ್ವಪ್ರತಿಷ್ಠೆಗೋಸ್ಕರ ಇಷ್ಟೆಲ್ಲವನ್ನೂ ಮಾಡುತ್ತಿದ್ದಲ್ಲಿ ಹೀಗೆ ಇಡೀ ದೇಶ ಅವನ ಬೆನ್ನಿಗೆ ಎಂದಿಗೂ ನಿಲ್ಲುತ್ತಿರಲಿಲ್ಲ.

ಸಮ್ರಾಟ ಚಂದ್ರಗುಪ್ತನು ತನ್ನ ಕಾಲದ ಜಗತ್ಪ್ರಸಿದ್ಧ ವಿಜಯಿಯೂ ಆಗಿದ್ದ. ಆದರೆ ತನ್ನ ವಿಜಯದ ಸೊಕ್ಕಿನಿಂದ ಕುರುಡಾಗಿ ಎಂದೂ ಸೋತ ಶತ್ರುವಿನ ಬಗ್ಗೆ ಕ್ರೂರತೆಯಿಂದ ನಡೆದುಕೊಳ್ಳಲಿಲ್ಲ. ಹಿಂದೂ ಸಂಸ್ಕೃತಿಯ ಅಮೂಲ್ಯ ಸಂಪತ್ತಾದ ಸಹಿಷ್ಣುತೆಯನ್ನು ಅವನೆಂದೂ ತೊರೆದವನಲ್ಲ. ಆದರೆ ಸಹಿಷ್ಣುತೆ, ಕನಿಕರ, ಸ್ನೇಹ ಇತ್ಯಾದಿ ದೊಡ್ಡ ದೊಡ್ಡ ಶಬ್ದಗಳ ಮೋಹಜಾಲಕ್ಕೆ ಬೀಳಿಸುವ ಶತ್ರುಗಳ ಬೇಳೆಯನ್ನೂ ಅವನು ಬೇಯಗೊಡಲಿಲ್ಲ. ಗೆಲವು ಗಳಿಸಿದ ನಂತರ ಅವನೆಂದೂ ಅಲಿಕಸುಂದರನಂತೆ ಸೋತ ರಾಜರನ್ನು ಕ್ರೌರ್ಯದಿಂದ ಕೊಲ್ಲಿಸಲಿಲ್ಲ ಅಥವಾ ಪರ್ವತಕನಂತೆ ಸೋತವನ ಕಪಟಕ್ಕೂ ಒಳಗಾಗಲಿಲ್ಲ. ಸೆಲೆಯೂಕನನ್ನು ಅವನು ಸೋಲಿಸಿದ ನಂತರ ಅವನೊಡನೆ ಗೌರವದಿಂದ ಸ್ನೇಹ ಬೆಳೆಸಿದನಾದರೂ ತನ್ನ ದೇಶದ ಹಿತ ಮತ್ತು ಗೌರವಗಳಿಗೆ ಕಲಂಕವನ್ನು ತಂದುಕೊಳ್ಳಲಿಲ್ಲ.

ಅವನು ವಿಜಯಿ ವೀರ ಮಾತ್ರವಲ್ಲದೆ ದಕ್ಷ ಆಡಳಿತಗಾರನೂ ಆಗಿದ್ದ. ಸಾಮ್ರಾಜ್ಯವನ್ನು ಬಲಗೊಳಿಸಿ ಬೇರೂರಲು ಅವನು ಅನೇಕ ಯೋಜನೆಗಳನ್ನು ಕಾರ್ಯಗತಗೊಳಿಸಿದ. ಪ್ರಜಾಜನರ ಹಿತಕ್ಕೆ ಅವನೆಂದೂ ಕೊರತೆ ಮಾಡಲಿಲ್ಲ, ಕಾರ್ಪಣ್ಯ ತೋರಲಿಲ್ಲ. ದೇಶದ ಆರ್ಥಿಕ, ರಾಜತಾಂತ್ರಿಕ, ಸಾಮಾಜಿಕ, ಬೌದ್ಧಿಕ ಇತ್ಯಾದಿ ಸರ್ವಾಂಗೀಣ ಏಳಿಗೆಗಾಗಿ ಅಗತ್ಯವಾದ ಎಲ್ಲ ಕಾರ್ಯಭಾರಗಳನ್ನೂ ಮೌರ್ಯದೊರೆಯು ತಾನೆ ವಹಿಸಿಕೊಂಡಿದ್ದನು. ಇಂದಿನ ಭಾರತದ ಎರಡರಷ್ಟು ವಿಶಾಲವಾಗಿದ್ದ ಅವನ ಸಾಮ್ರಾಜ್ಯದ ಮೂಲೆ ಮೂಲೆಯಲ್ಲೂ ಒಂದು ಜಾಗವೂ ಬಿಡದಂತೆ ಪಾಟಲಿಪುತ್ರದಿಂದ ಹೊರಟ ಆಜ್ಞೆಯು ಸುಸೂತ್ರವಾಗಿ ಪಾಲಿಸಲ್ಪಡುವಷ್ಟು ಅಸಾಮಾನ್ಯ ಆಡಳಿತ ವ್ಯವಸ್ಥೆಯನ್ನು ಅವನು ಏರ್ಪಡಿಸಿದ್ದನು.

ಸಮ್ರಾಟ ಚಂದ್ರಗುಪ್ತ ಸ್ವತಃ ಕಷ್ಟಾಳುವಾಗಿದ್ದ. ಅದೆಷ್ಟು ಅಸೀಮ ದುಡಿಮೆಯಿಂದ ಅವನು ಸಾಮ್ರಾಜ್ಯವನ್ನು ಕಟ್ಟಿದ್ದನೋ, ಅದೇ ರೀತಿಯ ದುಡಿಮೆ, ದಕ್ಷತೆಗಳಿಂದ ಆಡಳಿತದ ಕರ್ತವ್ಯಗಳನ್ನೂ ಅವನು ನಿರ್ವಹಿಸಿದ. ಆಡಳಿತದ ಎಲ್ಲ ಖಾತೆಗಳ ಅನುಭವವೂ ಅವನಿಗಿದ್ದಿತಲ್ಲದೆ, ಆಗಾಗ್ಗೆ ಅವುಗಳ ತನಿಖೆಯನ್ನೂ ಅವನು ನಡೆಸುತ್ತಿದ್ದ. ನ್ಯಾಯಾಲಯದಲ್ಲಿ ಅವನೇ ಹೋಗಿ ಕುಳಿತುಕೊಳ್ಳುತ್ತಿದ್ದ ಮತ್ತು ಜನರೂ ಅನಾಯಾಸವಾಗಿ ಅವನ ಬಳಿಗೆ ಹೋಗಬಹುದಿತ್ತು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖಿಸಲ್ಪಟ್ಟಿರುವ ಆದರ್ಶ ಸಾಮ್ರಾಟನ ವರ್ಣನೆಗೆ ಚಂದ್ರಗುಪ್ತನೇ ಆಧಾರವೆಂಬುದರಲ್ಲಿ ಸಂಶಯವಿಲ್ಲ. 'ಸಾಮ್ರಾಟನು ಅತಿಕುಲೀನ, ದೈವಭಕ್ತ,



ದೂರದರ್ಶಿ, ಧಾರ್ಮಿಕ, ವೀರ, ಉತ್ಸಾಹಿ, ದೃಢನಿಶ್ಚಯಿಯೂ ಸ್ವಾರ್ಥತ್ಯಾಗಿಯೂ ಆಗಿರಬೇಕು. ಕರ್ತವ್ಯಪಾಲನೆಗೆ ಸದಾ ಕಟಿಬದ್ಧನಾಗಿರುವುದೇ ಅವನ ವ್ರತ; ಆಡಳಿತ ಕಾರ್ಯಗಳನ್ನು ಉತ್ತಮವಾಗಿ ನಿರ್ವಹಿಸುವುದೇ ಅವನ ಯಜ್ಞ; ಅವನ ಪುಣ್ಯವೆಂದರೆ ಪ್ರಜೆಗಳೆಲ್ಲರನ್ನೂ ಸಮಾನವಾಗಿ ಕಾಣುವುದು; ಪ್ರಜೆಗಳ ಸುಖದಲ್ಲೆ ಅವನಿಗೂ ಸುಖವಿದೆ, ಪ್ರಜಾಹಿತದಲ್ಲೆ ಅವನ ಹಿತವೂ ಅಡಗಿದೆ; ತನ್ನೊಬ್ಬನ ಒಳಿತಿಗಿಂತ ಪ್ರಜಾಜನರ ಒಳಿತೇ ಅವನಿಗೆ ಹೆಚ್ಚು ಪ್ರಿಯವಾಗಬೇಕು.' ರಾಷ್ಟ್ರದ ಸ್ವಾತಂತ್ರ್ಯ ಹಾಗೂ ಸಾಮರ್ಥ್ಯದ ಕೇಂದ್ರನಾಗಿದ್ದ ಸಮ್ರಾಟ ಚಂದ್ರಗುಪ್ತನು ನಿಜಕ್ಕೂ ಈ ಆದರ್ಶಗಳೆಲ್ಲದರ ಸಾರ್ಥಕ ಅನುಯಾಯಿಯಾಗಿದ್ದ.

ಸಮ್ರಾಟ ಚಂದ್ರಗುಪ್ತನ ವಿಜಯಗಳು, ಅವನ ಸಾಮ್ರಾಜ್ಯನಿರ್ಮಿತಿ, ಅವನ ಸಮರ್ಥ ಆಡಳಿತ ಪದ್ಧತಿ ಮತ್ತು ಪ್ರಜಾಹಿತದ ಕಾರ್ಯಗಳ ದೃಷ್ಟಿಯಿಂದ ನೋಡಿದರೆ, ಕೇವಲ ಭಾರತದಲ್ಲಷ್ಟೇ ಅಲ್ಲ, ಇಡೀ ಜಗತ್ತಿನ ಯಶಸ್ವಿ ವಿಜೇತರ, ರಾಷ್ಟ್ರಶಿಲ್ಪಿಗಳ ಮತ್ತು ಆಡಳಿತ ನಿಪುಣರ ನಡುವೆಯೂ ಆತನಿಗೆ ಉಚ್ಚ ಸ್ಥಾನವಿದ್ದೇ ಇದೆ. ಅದರಿಂದಲೇ ಮುದ್ರಾರಾಕ್ಷಸದಲ್ಲಿ ವಿಷ್ಣುವಿನ ಅವತಾರವೇ ಅವನೆಂದು ಕರೆಯಲಾಗಿದೆ. ಯಾವ ದೃಷ್ಟಿಯಿಂದ ನಾವು ನಮ್ಮ ಇತರೆಲ್ಲ ಮಹಾಪುರುಷರು ಮತ್ತು ರಾಷ್ಟ್ರನಿರ್ಮಾಪಕರನ್ನು ವಿಷ್ಣುವಿನ ಅವತಾರವೆಂದು ಭಾವಿಸುತ್ತೇವೋ, ಆ ದೃಷ್ಟಿಯಿಂದ ನೋಡಿದರೆ, ಮುದ್ರಾರಾಕ್ಷಸದಲ್ಲಿ ಬರುವ ವರ್ಣನೆಯೇನೂ ಅತಿಶಯೋಕ್ತಿಯಾಗಲಾರದು.

# ಉಪಸಂಹಾರ

ಕಣ್ಣಿಗೊಂದು ಭವ್ಯ ಕನಸು ಕಟ್ಟಿಕೊಂಡು, ಹೃದಯದಲ್ಲಿ ಮಹತ್ವಾಕಾಂಕ್ಷೆಯನ್ನರಳಿಸುವ ದೇಶಭಕ್ತಿಯಿಟ್ಟುಕೊಂಡ ಹಿಂದು ಯುವಕರಿಬ್ಬರು ಸಾಧಿಸಿದ ಕಾರ್ಯವನ್ನು ನಾವು ಈ ಪುಟಗಳಲ್ಲಿ ಕಂಡೆವು. ತಮ್ಮ ಮಾತೃಭೂಮಿಯ ಆತ್ಮವನ್ನು ಎಚ್ಚರಿಸಿ, ಹಿಮಾಲಯದಿಂದ ಹಿಡಿದು ಹಿಂದೂ ಸಾಗರದವರೆಗೆ ಸಹಸ್ರಯೋಜನ ಪ್ರಸರಿಸಿದ ಏಕಛತ್ರಾಧಿಷ್ಠಿತ ಸಾಮ್ರಾಜ್ಯವನ್ನು ಸ್ಥಾಪಿಸುವುದೇ ಅವರಿಬ್ಬರ ಜೀವನ ಮಂತ್ರವಾಗಿದ್ದಿತು; ಅದರಲ್ಲೆ ಅವರ ಮನಸ್ಸು ಕರಗಿಹೋಗಿತ್ತು. ಮಾತೃಭೂಮಿಯ ಈ ಸೇವೆಗೆಂದು ಒಬ್ಬನು ತನ್ನ ಬುದ್ಧಿಯನ್ನೆರೆದರೆ, ಮತ್ತೊಬ್ಬನು ತನ್ನ ಭುಜಬಲವನ್ನೆರೆದ. ಬೆಟ್ಟದಂತೆ ಎದ್ದುನಿಂತ ಕಷ್ಟಸಂಕಟಗಳ ಹೊರೆಯನ್ನು ಕಿತ್ತೆಸೆದು ಎಂದೆಂದು ಭಾರತವು ಗೌರವದಿಂದ ತಲೆಯೆತ್ತಿ ಮೆರೆಯಿತೋ, ಅಂದಂದು ರಾಷ್ಟ್ರದ ಪರಿಶುದ್ಧ ಬ್ರಹ್ಮತೇಜ, ಕ್ಷಾತ್ರತೇಜಗಳು ಉದಿಸಿಬಂದವೆ. ಆಗಲೇ ಅದರ ಪ್ರತೀಕವಾಗಿ ವಾಲ್ಮೀಕಿ–ರಾಮಚಂದ್ರ, ವ್ಯಾಸ–ಶ್ರೀಕೃಷ್ಣ, ಯಾಜ್ಞವಲ್ಕ್ಯ–ಜನಕ, ರಾಮದಾಸ–ಶಿವಾಜಿಯಂಥ ಜೋಡಿಮಹಾಪುರುಷರ ಅವತಾರವಾಗಿದೆ. ಚಾಣಕ್ಯ–ಚಂದ್ರಗುಪ್ತರದೂ ಅಂತಹದೇ ಒಂದು ನಂಟು– ಇವರೀರ್ವರ ಹಿರಿಮೆಯನ್ನು ಬೇರೆಬೇರೆಯಾಗಿ ಅಳೆಯಲು ಸಾಧ್ಯವೇ ಇಲ್ಲ.

ನಮ್ಮ ನೋಟವೆಲ್ಲ ಹೊರಮುಖವಾದುದರಿಂದ ವಿದೇಶಿಯರ ಮತ್ತು ವಿಧರ್ಮೀಯರ ಅತ್ಯಾಚಾರಕ್ಕೆ ಬಲಿಯಾಗಿ ಹುತಾತ್ಮರಾದ ದೇಶಭಕ್ತರ ವಿದ್ಯುತ್ ಪ್ರಕಾಶ ಮಾತ್ರ ನಮಗೆ ಕಾಣುತ್ತದೆ. ಆದರೆ ಚಾಣಕ್ಯ–ಚಂದ್ರಗುಪ್ತರಿಬ್ಬರೂ ತಮ್ಮ ಜೀವನದ ಕ್ಷಣಕ್ಷಣವನ್ನೂ ದೇಶಕ್ಕಾಗಿಯೇ ಉರಿಸಿದರೆಂಬುದನ್ನು ಮರೆಯಬಾರದು. ದೇಶಕ್ಕಾಗಿ ಬಾಳುವುದೆಂದರೆ ಏನು ಎಂಬುದನ್ನು ಇವರಿಬ್ಬರ ಪ್ರತಿಯೊಂದು ಕಾರ್ಯ ಹಾಗೂ ಅರ್ಥಶಾಸ್ತ್ರದ ಪ್ರತಿಯೊಂದು ಶಬ್ದವೂ ಸಾರಿ ಹೇಳುತ್ತಿವೆ. ದೇಶಭಕ್ತರ ಸುದೀರ್ಘ ಪರಂಪರೆಯಲ್ಲಿ ದೇಶದ ಬಲಿವೇದಿಯ ಮೇಲೆ ಹುತಾತ್ಮರಾದವರ ಕಣ್ಣು ಕೋರೈಸುವ ಮಿಂಚುಬೆಳಕಿನಲ್ಲಿ ಬೇಗ ನಾಲ್ಕಾರು ಹೆಜ್ಜೆ ಹಾಕಿ, ಪುನಃ ಗಾಢಾಂಧಕಾರದಲ್ಲಿ ಕಣ್ಣಿನ ಸಹಜ ನೋಟವನ್ನೂ ಕಳೆದುಕೊಂಡು ನಿರಾಶರಾಗಿ ಕುಳಿತುಬಿಡುವಂತಾಗುತ್ತದೆ; ಆದರೆ ಈ ನಂದಾದೀಪದ ಪ್ರಶಾಂತ ಬೆಳಕಿನಲ್ಲಿ ಸತತ



ಪರಿಶ್ರಮ ಹಾಗೂ ಸಫಲತೆಯ ಪಾಠ ಕಲಿಯಬಲ್ಲೆವು. ಸ್ವಾಭಾವಿಕವಾಗಿ ನಾವು ನಿರಂತರ ಮುಂದೆ ಮುಂದೆ ಸಾಗಬಲ್ಲೆವು. ಪಾಟಲಿಪುತ್ರ ಹಾಗೂ ತಕ್ಷಶಿಲೆಯ ಅವಶೇಷಗಳು ನಮ್ಮ ಹಿಂದಿನ ದಿವ್ಯ ವೈಭವದ ಸವಿನೆನಪು ನೀಡುವುದರ ಜತೆ ಜತೆಗೇ, ಅದನ್ನು ಗಳಿಸಿಕೊಟ್ಟ ಆ ಮಹಾಜೀವಿಗಳ ಕರ್ಮಯೋಗದ, ಅವಿಚಲ ನಿಷ್ಠೆಯ ಸಂದೇಶವನ್ನೂ ಸಾರಿ ಹೇಳುತ್ತವೆ.

ಚಕ್ರವರ್ತಿ ಚಂದ್ರಗುಪ್ತ ಮತ್ತು ಮಂತ್ರಿ ಚಾಣಕ್ಯರಲ್ಲಿ ನಾವು ದೇಶಭಕ್ತ ಚಂದ್ರಗುಪ್ತ ಹಾಗೂ ದೇಶಭಕ್ತ ಚಾಣಕ್ಯರನ್ನು ಕಂಡುಕೊಳ್ಳುವಾ. ರಾಜತ್ವ ಮತ್ತು ಸಚಿವತ್ವಗಳು ಆ ಪರಿಸ್ಥಿತಿಯು ಅವರಿಗಿತ್ತ ರೂಪ ಅಷ್ಟೆ; ಅವರ ಸಹಜ ಸಾಮಾನ್ಯರೂಪ, ಓರ್ವ ಭಾರತವಾಸಿ, ಆರ್ಯ, ಹಿಂದು ಮಾತ್ರ. ಸಮ್ರಾಟನಾಗಲು, ಮಂತ್ರಿಯಾಗಲು ಅವರಿಬ್ಬರೂ ಹಂಬಲಿಸಲಿಲ್ಲ; ಭಾರತವನ್ನು ದಾಸ್ಯದಿಂದ ಮುಕ್ತಗೊಳಿಸಿ, ಅದು ಸದಾಕಾಲಕ್ಕೂ ಸ್ವತಂತ್ರವಾಗಿ, ಸುರಕ್ಷಿತವಾಗಿ ಬಾಳಲು ತಕ್ಕ ಶಕ್ತಿಸಾಮರ್ಥ್ಯ ತಂದುಕೊಡುವುದೇ ಅವರ ಜೀವಿತೋದ್ದೇಶವಾಗಿತ್ತು. ಅದಕ್ಕಾಗಿಯೇ ಆರ್ಯ ಚಾಣಕ್ಯನು, 'ನತ್ವೇವಾರ್ಯಸ್ಯ ದಾಸ್ಯಭಾವಃ' (ಆರ್ಯನೆಂದಿಗೂ ದಾಸ್ಯವನ್ನೊಲ್ಲನು) ಎಂದು ಘೋಷಿಸಿದನು.

ಇವರಿಬ್ಬರ ಹೃದಯಜ್ಯೋತಿಯಿಂದ ತಮ್ಮೆದೆಯ ಸೊಡರನ್ನೂ ಹಚ್ಚಿಕೊಂಡು, ಭಾರತದ ದುಃಖ ದೈನ್ಯ, ದಾಸ್ಯಗಳನ್ನು ಭಸ್ಮಗೊಳಿಸಿ, ಅದೇ ಬೆಳಕನ್ನು ಬೀರಿಹೋದ ಶ್ರೇಷ್ಠ ರಾಷ್ಟ್ರಶಿಲ್ಪಿಗಳನ್ನೂ, ಅಗಣಿತ ಹಿಂದು ವೀರರನ್ನೂ ನಾವು ದಿನನಿತ್ಯ ಸ್ಮರಿಸುವಾ. ಇಂಥ ಮಹಾಮಹಿಮರಿಗೆ ಜನ್ಮವಿತ್ತ ಶ್ರೇಷ್ಠ ಸಂಸ್ಕೃತಿಯನ್ನು ಶ್ರದ್ಧೆಯಿಂದ ನೆನೆಯುವಾ. ಇಂಥ ಸರ್ವಶ್ರೇಷ್ಠ ಸ್ಫೂರ್ತಿಯಾಗರದ ತವರಾದ ಭಾರತಕ್ಕೆ ಶತಶತ ಪ್ರಣಾಮಗಳನ್ನು ಅರ್ಪಿಸುವಾ.

# ೩. ಭಗವಾನ್ ಶ್ರೀಕೃಷ್ಣ

ಅನು : **ಡಾ. ಪ್ರಧಾನ್ ಗುರುದತ್ತ**

BLANK PAGE

# ಭಗವಾನ್ ಶ್ರೀಕೃಷ್ಣ

ನಮ್ಮ ರಾಷ್ಟ್ರ ಜೀವನದ ಮೇಲೆ ಭಗವಾನ್ ಶ್ರೀಕೃಷ್ಣ ಎಷ್ಟು ವ್ಯಾಪಕವಾದ ಪ್ರಭಾವವನ್ನು ಬೀರಿದ್ದಾನೋ, ಅಷ್ಟು ವ್ಯಾಪಕವಾದ ಪ್ರಭಾವವನ್ನು ಬೇರೆ ಯಾರೂ ಬೀರಿಲ್ಲ– ಭಗವಾನ್ ಶ್ರೀರಾಮನನ್ನು ಹೊರತುಪಡಿಸಿ. ರಾಮ ಮತ್ತು ಕೃಷ್ಣ ಇಬ್ಬರನ್ನೂ ನಾವು ಅವತಾರವೆಂದು ಭಾವಿಸಿ, ಪೂಜಿಸುತ್ತ ಇದ್ದೇವೆ. ನಮ್ಮ ವಿದ್ವಾಂಸರುಗಳು ಅವರ ಇತಿಹಾಸವನ್ನು ಕುರಿತಂತೆ ಅಧ್ಯಯನವನ್ನು ನಡೆಸಿದ್ದಾರೆ, ಕವಿಗಳು ಹಾಡಿಹೊಗಳಿದ್ದಾರೆ ಹಾಗೂ ಭಕ್ತರು 'ನವಧಾ ಭಕ್ತಿ'ಯ ವಿವಿಧ ರೂಪಗಳಲ್ಲಿ ಅವರನ್ನು ಆರಾಧಿಸುತ್ತ ಬಂದಿದ್ದಾರೆ. "ನನಗಿರುವವನು ಗಿರಿಆರ ಗೋಪಾಲನೊಬ್ಬನೇ, ಬೇರಾರೂ ಅಲ್ಲ" ಎಂಬ ಹಾಡಿನಲ್ಲಿ ಮೀರಾ ಲೋಕದ ಸಾಮಾನ್ಯ ನಡೆವಳಿಕೆಯನ್ನು ಮೀರಿ ನಡೆದಿದ್ದರೆ, ಸೂರದಾಸರು

**ನನ್ನನ್ನು ಅಬಲೆ ಎಂದು ತಿಳಿದು ಕೈಬಿಡಿಸಿಕೊಂಡು ಹೋಗುತ್ತಿದ್ದೀಯೆ;**
**ನನ್ನ ಹೃದಯದಿಂದ ತಪ್ಪಿಸಿಕೊಂಡು ಹೋಗು, ಆಗ ಗೊತ್ತಾಗುತ್ತದೆ.**

ಎಂದು ಆರಂಭಿಸಿ, ಅನೇಕ ಉಪಾಲಂಭಗಳನ್ನು ಸಖ್ಯಭಾವದಲ್ಲಿ ಮುಂದಿರಿಸುತ್ತ ತಮ್ಮ ಸಾಮರ್ಥ್ಯ ತಮ್ಮ ಏಕಾಂತ ಶ್ರದ್ಧೆಯನ್ನು ಪರಿಚಯಿಸಿ ಕೊಟ್ಟಿದ್ದಾರೆ.

ಜ್ಞಾನಿಗಳಲ್ಲಿ ಶ್ರೇಷ್ಠರಾದವರೂ, "ಬ್ರಹ್ಮ ಸತ್ಯಂ ಜಗನ್ಮಿಥ್ಯಾ" ಎಂದು ಘೋಷಿಸಿದ ಶ್ರೀ ಶಂಕರಾಚಾರ್ಯರು

**ಪುನರಪಿ ಜನನಂ ಪುನರಪಿ ಮರಣಂ**
**ಪುನರಪಿ ಜನನೀ ಜಠರೇ ಶಯನಂ**
**ಇಹ ಸಂಸಾರೇ ಖಲು ದುಸ್ತರೇ ಕೃಪಯಾಽಪಾರೇ ಪಾಹಿ ಮುರಾರೇ**
**ಭಜ ಗೋವಿಂದಂ ಭಜ ಗೋವಿಂದಂ ಗೋವಿಂದಂ ಭಜ ಮೂಢಮತೇ**

**[ಚರ್ಪಟ್ ಪಂಜಿಸ ಭಕ್ತಿ ಸ್ತೋತ್ರ]**

(ಈ ಅಪಾರವಾಗಿರುವ ದುಸ್ತರವಾಗಿರುವ ಸಂಸಾರ ಸಗರದಲ್ಲಿ ಮತ್ತೆ ಮತ್ತೆ ಹುಟ್ಟಿ ಬರುವುದು, ಮತ್ತೆ ಮತ್ತೆ ಸಾಯುತ್ತ ಇರುವುದು, ಮತ್ತೆ ಮತ್ತೆ ತಾಯಿಯ ಗರ್ಭದಲ್ಲಿ ಮಲಲಗಿರುವುದು ನಡೆಯುತ್ತಲೇ ಬಂದಿದೆ. ಹೇ ಮುರಾರಿ [ಕೃಷ್ಣ] ಇದರಿಂದ ನನ್ನ ಕಾಪಾಡು. ಎಲೈ ಮೂಢ ಬುದ್ಧಿಯ [ಮನುಜನೆ] ಗೋವಿಂದ ನನ್ನು ಭಜಿಸು.)

ಅಸಾರರೂಪವಾಗಿ ಈ ಜಗತ್ತಿನಲಿರುವ ಏಕೈಕ ಸರಭೂತ ತತ್ತ್ವವಾಗಿರುವ ಶ್ರೀಕೃಷ್ಣ ನನ್ನು ಕುರಿತು ಭಜಿಸಬೇಕೆಂದು ಸಲಹೆ ನೀಡಿದ್ದಾರೆ. ಇತ್ತ

**ಸುಖದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।**

**ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಯಸಿ ॥**

[ಶ್ರೀಮದ್ ಭಗವದ್ಗೀತಾ, ೨.೩೮]

(ಸುಖ–ದುಃಖಗಳನ್ನೂ, ಲಾಭನಷ್ಟಗಳನ್ನೂ, ಗೆಲುವು–ಸೋಲುಗಳನ್ನೂ ಒಂದೇ ರೀತಿಯಲ್ಲಿ ಪರಿಭಾವಿಸಿ [ಅಂದರೆ, ಅವುಗಳ ಬಗ್ಗೆ ಚಿಂತಿಸದೆ] ಯದ್ಧದಲ್ಲಿ ನಿನ್ನನ್ನು ತೊಡಗಿಸಿಕೊ. ಇದರಿಂದ ನೀನು ಪಾಪಭಾಜನನೇನೂ ಆಗುವುದಿಲ್ಲ.) ಎಂಬ ಸಂದೇಶವನ್ನು ನೀಡಿ, ಅರ್ಜುನನಿಗೆ ಸಮಾನರಾಗಿದ್ದಂಥ ಅನೇಕ ವೀರರು ಶತ್ರು–ಸೇನೆಯನ್ನು ಧೂಳೀಪಟಮಾಡಿ ತಮ್ಮ ಪರಾಕ್ರಮದಿಂದ ಹಾಗೂ ಹೋಲಿಕೆಗೆ ಎಣೆಯಿಲ್ಲದಿರುವಂಥ ತಮ್ಮ ಕರ್ಮನಿಷ್ಠವಾದ ಬಾಳುವೆಯಿಂದ ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು ಕಟ್ಟಿನಿಲ್ಲಿಸಿದ್ದಾರೆ ಹಾಗೂ ಕೀರ್ತಿ ಭಾಜನರಾಗಿದ್ದಾರೆ. ಜ್ಞಾನ, ಕರ್ಮ ಮತ್ತು ಭಕ್ತಿಯ ಕ್ಷೇತ್ರಗಳಲ್ಲಿ ಮಾತ್ರವಲ್ಲದೆ, ಬಾಳಿನ ಎಲ್ಲ ಕ್ಷೇತ್ರಗಳಲ್ಲಿಯೂ ಶ್ರೀಕೃಷ್ಣನೇ ನಮಗೆ ಆಧಾರಪ್ರಾಯನಾಗಿದ್ದಾನೆ.

ಯಾವ ವ್ಯಕ್ತಿಯೂ ರಾಷ್ಟ್ರ ಜೀವನದಲ್ಲಿ ಸಹಜವಾಗಿಯೇ ಇಂಥ ಕೇಂದ್ರಸ್ಥಾನವನ್ನು ಪಡೆದುಕೊಳ್ಳಲಾರ. ಸ್ವಲ್ಪ ಕಾಲದ ಮಟ್ಟಿಗೆ ನೀವು ರಾಷ್ಟ್ರವನ್ನು ನಿಮ್ಮೊಡನೆ ಕೊಂಡೊಯ್ಯಬಲ್ಲಿರಿ ಅಥವಾ ಯಾವುದಾದರೂ ಒಂದು ಸಮುದಾಯಕ್ಕೆ ಸದಾ ಕಾಲವೂ ಸ್ಫೂರ್ತಿ ಕೇಂದ್ರವಾಗಿರಬಲ್ಲಿರಿ. ಆದೆ ಇಡೀ ರಾಷ್ಟ್ರಕ್ಕೆ ಯಂಗ ಯಂಗಗಳ ಕಾಲವೂ ಅಪಾರ ಸ್ಫೂರ್ತಿಯನ್ನು ನೀಡುವ ಸಾಮರ್ಥ್ಯ ವಿಶಿಷ್ಟ ಗುಣದಿಂದ ಮಾತ್ರವೇ ಲಭಿಸಬಲ್ಲದು ಯಾವುದೇ ರಾಷ್ಟ್ರ ಯಾವನೇ ಒಬ್ಬ ವ್ಯಕ್ತಿಯನ್ನು ಆದರ್ಶವೆಂದು ಒಪ್ಪಿ ಅವನನ್ನು ಪೂಜಿಸಲು, ಆರಾಧಿಸಲು ತೊಡಗುವುದಿಲ್ಲ. ಯಾವ ವ್ಯಕ್ತಿಯಲ್ಲಿ ತನ್ನ ಆತ್ಮದ ಪ್ರತಿಬಿಂಬ ಕಾಣಿಸುತ್ತದೆಯೋ, ಅಂಥವನನ್ನು ಮಾತ್ರವೇ ಪೂಜಿಸಲಾಗುತ್ತದೆ. ಯಾರು ತನ್ನ ಕಲ್ಯಾಣದ ಭಾವನೆಯನ್ನು ಮುಂದಿರಿಸಿಕೊಂಡು ಮುನ್ನಡೆಯುತ್ತಾನೋ, ಅಂಥವನ ಬಗ್ಗೆ ಮಾತ್ರವೇ ಶ್ರದ್ಧೆ ಮತ್ತು ಪ್ರೇಮ ಉಂಟಾಗುತ್ತದೆ. ರಾಷ್ಟ್ರದಲ್ಲಿಯೂ, ಯಾರು ರಾಷ್ಟ್ರಕ್ಕಾಗಿ ತನ್ನ ಬಾಳುವೆಯನ್ನು ಸಮರ್ಪಿಸಿಕೊಂಡು ಬಿಟ್ಟಿರುತ್ತಾನೋ ಅಂಥವನೇ ಗೌರವರ್ಹನಾಗುತ್ತಾನೆ. ಅಂಥ ವ್ಯಕ್ತಿ ರಾಷ್ಟ್ರದ ಆತ್ಮವನ್ನು ಸಾಕ್ಷಾತ್ಕರಿಸಿಕೊಂಡಿದಿದಲ್ಲಿ, ಅವನ ಬಾಳುವೆಯಿಂದ ಹೊರಹೊಮ್ಮುವಂಥ ಸ್ವರಲಹರಿ ಇಡೀ ರಾಷ್ಟ್ರದ ಹೃದಯ ನರ್ತಿಸುವಂತೆ ಮಾಡಿಬಿಡುತ್ತದೆ. ಹೃದಯದ ಮೇಲೆ ಅಧಿಕಾರವನ್ನು ಸ್ಥಾಪಿಸಿಕೊಳ್ಳುವ ಅಂಥ ವ್ಯಕ್ತಿ, ಮನುಷ್ಯನ ಸರ್ವಸ್ವದ ಮೇಲೂ ಅಧಿಕಾರವನ್ನು ಸ್ಥಾಪಿಸಿಕೊಂಡು ಬಿಡುತ್ತಾನೆ. ರಾಷ್ಟ್ರದ ಹೃದಯದ ಮೇಲೆ ಅಧಿಕಾರವನ್ನು ಸ್ಥಾಪಿಸಿಕೊಂಡು ಅದನ್ನು



ತನ್ನದಾಗಿಸಿಕೊಂಡುಬಿಟ್ಟಂಥ ಅವತಾರ ಪುರುಷರಲ್ಲಿ ಭಗವಾನ್ ಶ್ರೀಕೃಷ್ಣ ಅಗ್ರಗಣ್ಯನಾಗಿದ್ದಾನೆ. ಆದ್ದರಿಂದಲೇ, ನಾವು ಯುಗ–ಯುಗಗಳಿಂದ ಆತನನ್ನು ಪೂಜಿಸುತ್ತ ಬಂದಿದ್ದೇವೆ.

ಇಂದೂ ನಾವು ಭಗವಾನ್ ಶ್ರೀಕೃಷ್ಣನನ್ನು ಪುಜಿಸುತ್ತಿದ್ದೇವೆ. ಆತನ ಜನ್ಮದಿನದಂದು ಇಂದೂ ಭರತಖಂಡದಲ್ಲಿ ಎಲ್ಲ ಕಡೆಗಳಲ್ಲಿಯೂ ವ್ರತ ಮತ್ತು ಉಪವಾಸಗಳ ಆಚರಣೆ ನಡೆಯತ್ತ ಇದೆ, ಆನಂದೋತ್ಸವವನ್ನು ಆಚರಿಸಲಾಗುತ್ತಿದೆ. ಇಂದೂ ಆತನ ಗುಣಗಾನ ಮಾಡುವ ವಿಷಯದಲ್ಲಿ ಕವಿಗಳು ಆತ್ಮಸುಖದ ಅನುಭವವನ್ನೇ ಪಡೆದುಕೊಳ್ಳುತ್ತ ಇದ್ದಾರೆ. ತತ್ತ್ವಜ್ಞರೂ ಆತನ ಗುಣಗಾನದ ಮೂಲಕವೇ ತಮ್ಮ ತತ್ತ್ವಗಳನ್ನು ಪ್ರತಿಪಾದಿಸುತ್ತಾರೆ. ಕೃಷ್ಣನ ನಾಮಸ್ಮರಣೆ ಮಾಡುತ್ತ, ಅನೇಕರು ಆತನನ್ನೇ ಕುರಿತ ಕಥನ–ಕೀರ್ತನಗಳಲ್ಲಿ ಮೈಮರೆಯುತ್ತಾರೆ. ಇಷ್ಟಾಗಿಯೂ, ನಮ್ಮನಾಡು ಏಕಾಗಿ ಪತನದ ಹಾದಿಯತ್ತ ಧಾವಿಸುತ್ತಿದೆ? ಇದಕ್ಕೆ ಇರುವ ಕಾರಣ ಒಂದೇ ನಾವು ತತ್ವವನ್ನು ಕೈಬಿಟ್ಟು. ಅದರ ಹೊರ ರೂಪವನ್ನಷ್ಟೇ ಹಿಡಿದುಕೊಂಡು ಬಿಟ್ಟಿದ್ದೇವೆ. ಭಗವಾನ್ ಶ್ರೀಕೃಷ್ಣನ ನಾಮ ಸ್ಮರಣೆ ಮಾಡುತ್ತೇವೆ. ಕೀರ್ತನೆಗಳನ್ನು ಹಾಡುತ್ತೇವೆ, ಆತನ ಸದ್ಗುಣಗಳನ್ನು ಕುರಿತು ವ್ಯಾಖ್ಯಾನ ಮಾಡುತ್ತೇವೆ. ಆದರೆ ಆತನ ಬಾಳಿನ ರಹಸ್ಯವನ್ನು ಅರಿತುಕೊಂಡು, ಅದರಂತೆ ನಡೆಯುವುದಿಲ್ಲ. ಕೇಂದ್ರಸ್ಥಾನದಲ್ಲಿ ಹಿಡಿದುಕೊಂಡಾಗ ಮಾತ್ರವೇ, ಯಾವುದೇ ವಸ್ತುವಿನ ಸಮತೋಲನವನ್ನು ಕಾಯ್ದುಕೊಳ್ಳುವುದು ಸಾಧ್ಯವಾಗುತ್ತದೆ, ಇಲ್ಲವಾದಲ್ಲಿ ಅದು ತಲೆಕೆಳಗಾಗಿ ಬಿಡುತ್ತದೆ. ಅದೇ ರೀತಿ. ಯಾವುದೇ ರಾಷ್ಟ್ರದ ಕೇಂದ್ರದ ಹೊಣೆಗಾರಿಕೆಯನ್ನು ನಿರ್ವಹಿಸಿದಾಗ ಮಾತ್ರವೇ, ರಾಷ್ಟ್ರ ನೆಲೆನಿಲ್ಲುತ್ತದೆ. ಹಾಗಾಗದೆ ಇದ್ದಲ್ಲಿ, ನೆಲೆನಿಲ್ಲಲಾರದು. ಈ ಅವತಾರ ಪುರುಷರೇ ರಾಷ್ಟ್ರದ ಕೇಂದ್ರವಾಗಿರುತ್ತಾರೆ, ಅದರ ಹೃದಯವಾಗಿರುತ್ತಾರೆ ಹಾಗೂ ಅವರ ಬಾಳಿನ ರಹಸ್ಯವೇ ರಾಷ್ಟ್ರದ ಉನ್ನತಿಯ ರಹಸ್ಯವೂ ಆಗಿರುತ್ತದೆ. ಆ ರಹಸ್ಯವನ್ನು ಅರಿಯದೆ ಅಥವಾ ಕೈಬಿಟ್ಟು, ಭಗವಂತನ ಭಜನೆಮಾಡುವ ವ್ಯಕ್ತಿಗಳು ಆತನ ಭಕ್ತರಾಗುವುದಿಲ್ಲ; ಕವಿಯ ಮಾತಿನಲ್ಲೇ ಹೇಳಬೇಕೆಂದರೆ, ಅಂಥವರು ಪಾಪಿಗಳಾಗಿರುತ್ತಾರೆ. ಏಕೆಂದರೆ,

**ಅಪಹಾಯ ನಿಜಂ ಕರ್ಮಂ ಕೃಷ್ಣ ಕೃಷ್ಣೇತಿ ವಾದಿನಃ ।**

**ತೇ ತು ಪಾಪಾ ಹರೇರ್ದೂಷ್ಣಾ ಧರ್ಮಾರ್ಥಂ ಜನ್ಮ ಯದ್ಧರೇಃ ॥**

(ತಮ್ಮ ಕರ್ತವ್ಯಗಳನ್ನು ಕೈಬಿಟ್ಟು, ಕೃಷ್ಣ ಕೃಷ್ಣ ಎಂದು ಜಪಿಸುತ್ತಿರುವಂಥ ಪಾಪಿಗಳು ಹರಿಯ ಮೇಲೆ ದೋಷವನ್ನು ಹೊರಿಸುತ್ತಾರೆ. ಏಕೆಂದರೆ, ಹರಿ ಹುಟ್ಟಿ ಬಂದಿರುವುದೇ ಧರ್ಮಸ್ಥಾಪನೆಗಾಗಿ.)

ನಮ್ಮ ಕರ್ತವ್ಯವದರೂ ಏನು? ಖಂಡಿತವಾಗಿಯೂ ಯಾವುದು ಭಗವಾನ್ ಶ್ರೀಕೃಷ್ಣನ ಕರ್ತವ್ಯವಾಗಿದ್ದಿತೋ, ಅದೇ ನಮ್ಮ ಆದರ್ಶವೂ ಆಗಿರುತ್ತದೆ.

ಭಗವಾನ್ ಕೃಷ್ಣ ಎಲ್ಲ ಗುನಗಳ ಸಮುಚ್ಚಯವೇ ಆಗಿದ್ದ. ಆದರೆ, ತನ್ನ ನಾಡಿನ ಬಗ್ಗೆ ಆತ್ಯಂತಿಕ ಪ್ರೇಮ ಆತನಲ್ಲಿತ್ತು ಹಾಗೂ ಅದಕ್ಕಗಿ ಏನೆಲ್ಲವನ್ನೂ ಮಾಡಲು ಸಿದ್ಧನಾಗಿ ಇದ್ದುದೇ ಆತನ ವಿಶಿಷ್ಟ ಗುಣವಾಗಿತ್ತು. ಇದರ ಸುತ್ತಲೂ ಉಳಿದ ಗುಣಮಾಲಿಕೆಗಳು ಹೆಣೆಯಲ್ಪಟ್ಟಿದ್ದುವು. ಇದರಿಂದಾಗಿಯೇ ಆತ ತನ್ನ ಜೀವನದಲ್ಲಿ ಯಶಸನ್ನುಗಳಿಸಿ, ನಮ್ಮ ಹೃದಯಸಿಂಹಾಸನದಲ್ಲಿ ಶಾಶ್ವತವಾಗಿ ನೆಲೆಗೊಂಡುಬಿಟ್ಟ. ನಾಡಿನ ಕಲ್ಯಾಣದ ಎದುರಿಗೆ ತನ್ನ ವೈಯಕ್ತಿಕ ಹಿತದ ಬಗ್ಗೆ ಆತನೆಂದೂ ಚಿಂತಿಸಲೇ ಇಲ್ಲ. ನಾಡಿಗಾಗಿ ತನ್ನ ಜೀವನವನ್ನು ಸವೆಸುವಂಥ, 'ಗೀತೆ'ಯಲ್ಲಿ ಹೇಳಿರುವಂತೆ ಸ್ಥಿತಪ್ರಜ್ಞನ ವ್ಯಾಖ್ಯೆಯನ್ನು ಈಡೇರಿಸುತ್ತಾನೆ.

**ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ ।**

**ವೀತ ರಾಗ ಭಯ ಕ್ರೋಧಃ ಸ್ಥಿತಧೀರ್ಮುನಿರುಚ್ಯತೇ ॥ ೨.೫೬॥**

(ದುಃಖದ ಸಂದರ್ಭದಲ್ಲಿ ಉದ್ವಿಗ್ನನಾಗದವನೂ, ಸುಖದ ಸಂದರ್ಭದಲ್ಲಿ [ಪ್ರಸನ್ನತೆಯ] ಅಪೇಕ್ಷೆಯಿಂದ ದೂರ ಇರುವವನೂ, ರಾಗ, ಭಯ, ಕ್ರೋಧಗಳಿಂದ ಮುಕ್ತನಾಗಿರುವವನೂ ಆದ ವ್ಯಕ್ತಿಯನ್ನು ಸ್ಥಿತಪ್ರಜ್ಞನಾದ 'ಮುನಿ' ಎಂದು ಕರೆಯಲಾಗುತ್ತದೆ.)

ಭಗವನ್ ಶ್ರೀಕೃಷ್ಣ ಇದೇ ರೀತಿಯಲ್ಲಿ ಸುಖ–ದುಃಖ, ಭಯ–ಕ್ರೋಧ, ರಾಗ–ದ್ವೇಷ, ಮಾನ–ಅಪಮಾನ– ಇವುಗಳೆಲ್ಲವನ್ನೂ ಮೀರಿನಿಂತವನಾಗಿದ್ದ. ರಾಷ್ಟ್ರಪ್ರೇಮದ ಎದುರಿಗೆ ಇವೆಲ್ಲವೂ ಗೌಣವೇ ಆಗಿದ್ದುವು. ರಾಷ್ಟ್ರದ ಹಿತದ ಎದುರಿಗೆ ವೈಯಕ್ತಿಕ ಬಾಳುವೆಯ ಹಿತದ ಬಗ್ಗೆ ಆತನೆಂದೂ ಚಿಂತಿಸಲಿಲ್ಲ, ಅಷ್ಟೇ ಅಲ್ಲ, ಸಮಾಜ ಮತ್ತು ನೀತಿಯ ಪರಿಗಣನೆಗಳು ನಾಡಿನ ಒಳಿತಿಗೆ ಬಾಧಕವಗಿ ಪರಿಣಮಿಸಿದಲ್ಲಿ, ಆತ ಅವುಗಳನ್ನು ಮೆಟ್ಟಿನಿಲ್ಲುತ್ತಿದ್ದ ಇಂಥ ಪರಿಗಣನೆಗಳು ನಿಜವಗಿಯೂ ನಾಡಿನ ಹಿತದೃಷ್ಟಿಯಿಂದಲೇ ರೂಪುಗೊಂಡಿರುತ್ತವೆ. ನಾಡಿನ ಶಕ್ತಿ ಕಲ್ಯಾಣಕಾರಕ ಸ್ವರೂಪವನ್ನು ನೀಡುವ, ಒಂದು ದಿಕ್ಕಿನಲ್ಲಿ ಪ್ರವಹಿಸುವಂತೆ ಮಾಡುವ ದೃಷ್ಟಿಯಿಂದಲೇ, ಈ ಇತಿಮಿತಿಗಳನ್ನು ರೂಪಿಸಲಾಗಿರುತ್ತದೆ. ಆದರೆ ಈ ಇತಿಮಿತಿಗಳು ಅಥವಾ ಪರಿಗಣನೆಗಳು ವಿಷಪೂರ್ಣವಾಗಿರುವ ಉಡುಪಿನಂತೆ ಶರೀರಕ್ಕೆ ಅಪಾಯವನ್ನು ಉಂಟುಮಾಡುವುದಾದಲ್ಲಿ, ಅವುಗಳನ್ನು ಹರಿದು ಕಿತ್ತೊಗೆಯುವುದೇ ಸೂಕ್ತವಾಗುತ್ತದೆ. ನಾವು ಭಗವಾನ್ ಕೃಷ್ಣನ ಬಾಳುವೆಯಲ್ಲಿ ಇದೇ ಸಂಗತಿಯನ್ನು ಕಾಣುತ್ತೇವೆ. ರಾಷ್ಟ್ರಜೀವನದ ಈ ಏಕೈಮೆವ ಧ್ಯೇಯವೇ ಆತನ ಜೀವನದಲ್ಲಿ ಹೇಗೆ ಕಾಣಿಸಿಕೊಳ್ಳುತ್ತದೆ ಎಂಬ ಬಗ್ಗೆ ನಾವು ಕೊಂಚ ಯೋಚಿಸೋಣ.

ಭಗವಾನ್ ಕೃಷ್ಣನ ಲಾಲನೆ–ಪಾಲನೆಗಳೆಲ್ಲ ಗೋಕುಲದಲ್ಲಿ ನಂದನ ಮನೆಯಲ್ಲಿಯೇ ನಡೆದಿದ್ದುವು. ನಂದನ ಬಳಿ ಎಲ್ಲಿ ಸಾಧನ–ಸಂಪತ್ತುಗಳೂ ಇದ್ದುವು. ಅಲ್ಲಿರುವಾಗ ಕೃಷ್ಣನು ನಿತ್ಯವೂ ಹಸುಗಳನ್ನು ಮೇಯಿಸಿಕೊಂಡು ಬರಲು



ಹೋಗಬೇಕಾದ ಅಗತ್ಯವೇನೂ ಇರಲಿಲ್ಲ. 'ಮಹಾಭಾರತ'ದಲ್ಲಿ ಕಾಣ ದೊರೆಯುವ ಸಮಾಜದ ವರ್ಣನೆಯನ್ನು ಗಮನಿಸಿದ್ದೇ ಆದರೆ, ಕೃಷ್ಣನ ಪರಿಸ್ಥಿತಿಯಲ್ಲಿದ್ದ ವ್ಯಕ್ತಿಗಳು ದನಕರುಗಳನ್ನ ಮೇಯಿಸಿಕೊಂಡು ಬರುವಣತೇನೂ ಇರಲಿಲ್ಲ, ಈ ರೀತಿ ನಿರಕ್ಷರರಾಗಿದ್ದಂಥ ಗೊಲ್ಲರ ಮಕ್ಕಳೊಡನೆ ಆಟ–ಪಾಠ–ಊಟ–ಕೂಟ ಮಾಡಿಕೊಂಡಿರ ಬೇಕಾದಂಥ ಪರಿಸ್ಥಿತಿಯೂ ಇರಲಿಲ್ಲ ಆದರೆ, ಬಾಲ್ಯಕಾಲದಿಂದಲೇ ಕೃಷ್ಣ ಅಹಂಭಾವವನ್ನು ತ್ಯಜಿಸಿಬಿಟ್ಟಿದ್ದ; ಗೋಕುಲದ ಸಣ್ಣ–ಪುಟ್ಟ ವ್ಯಕ್ತಿಗಳೊಂದಿಗೂ ಬೆರೆಯುತ್ತಲಿದ್ದ ಹಾಗೂ ಅವರೊಡನೆ ಪ್ರೀತಿಯಿಂದ ಮಾತುಕತೆ ಮಾಡಿಕೊಂಡಿರುತ್ತಿದ್ದ, ಗೋಕುಲದ ಸುತ್ತಮುತ್ತ ಬಹಳ ದೂರದವರೆಗೂ ಗೋವುಗಳನ್ನು ಮೇಯಿಸಿಕೊಂಡು ಬರಲು ಹೋಗುತ್ತಿದ್ದ. ಗೊಲ್ಲರ ಬಾಲಕರು ಆತನೊಡನೆ ಇರುತ್ತಿದ್ದರು. ಈ ಅವಧಿಯಲ್ಲಿಯೇ ಆತನ ಮೇಲೆ ಅನೇಕ ವಿಪತ್ತುಗಳು ಎರಗಿಬಂದುವು. ಗೋಕುಲದ ಸುತ್ತ–ಮುತ್ತ ಕಂಸನ ವೃತ್ತಿಯವರೇ ಆಗಿದ್ದ, ಆಸುರೀ ಪ್ರವೃತ್ತಿಯ ಅನೇಕ ವ್ಯಕ್ತಿಗಳಿದ್ದರು. ಕೃಷ್ಣನು ಆ ಅಸುರರನ್ನೆಲ್ಲ ಕೊನೆಗಾಣಿಸಿ ಆ ಪ್ರದೇಶವನ್ನು [ಭಯ] ಮುಕ್ತವನ್ನಾಗಿಸಿದ. ಅವರ ಹೃದಯದಲ್ಲಿದ್ದ ಆಸುರೀ–ಪ್ರವೃತ್ತಿಯನ್ನು ಇಲ್ಲವಾಗಿಸಿದ, ಅವರ ಮನಸ್ಸಿನಲ್ಲಿ ಧಾರ್ಮಿಕ ಭಾವನೆಯನ್ನು ಮೂಡಿಸಿದ, ತಮ್ಮ ನಾಡಿನ ಬಗ್ಗೆ ಪ್ರೀತಿಯ ಭಾವನೆಯನ್ನು ಬೆಳೆಸಿದ. ಅವರನ್ನು ಕಟ್ಟಿಹಾಕಿದ್ದ ಕ್ಷುದ್ರ ವೈಯಕ್ತಿಕ ಸ್ವಾರ್ಥದ ಭಾವನೆಯನ್ನು ಕೊನೆಗಾಣಿಸಿ, ನಿಸ್ವಾರ್ಥ ಪ್ರೇಮದ ಮುಕ್ತ ಸ್ಥಿಯನ್ನು ಅವರಲ್ಲಿ ಉಂಟುಮಾಡಿದ. ಆತನ ನಿಷ್ಕಪಟ, ಸರಳ ಹಾಗೂ ಪ್ರೀತಿಯುಕ್ತ ನಡೆವಳಿಕೆಯಿಂದಾಗಿಯೇ ಗೋಕುಲದ ಸಮಸ್ತ ನರ–ನಾರಿಯರು ಆತನನ್ನು ಪ್ರೀತಿಯಿಂದ ಕಾಣುತ್ತಿದ್ದರು. ಆತನ ಸೂಚನೆಯ ಮೇರೆಗೆ ತಮ್ಮ ಸರ್ವಸ್ವವನ್ನೂ ಅರ್ಪಿಸಿಬಿಡಲು ಸಿದ್ಧರಾಗಿಬಿಟ್ಟಿದ್ದರು. ಆದ್ದರಿಂದಲೇ, ಯುಗ–ಯುಗಗಳಿಂದಲೂ ನಡೆದುಕೊಂಡು ಬರುತ್ತಿದ್ದ 'ಇಂದ್ರ ಪೂಜೆ'ಯ ಪದ್ಧತಿಯನ್ನು ಕೈಬಿಟ್ಟು 'ಗೋವರ್ಧನ ಪೂಜೆ'ಯನ್ನು ಆರಂಭಿಸಿದರು, ಭಗವಾನ್ ಕೃಷ್ಣ ಹಿಂದಿನ ಪದ್ಧತಿಯನ್ನು ತೊಡೆದು ಹಾಕಿದ, ಹೊಸ ಪದ್ಧತಿಯನ್ನು ಆರಂಭಿಸಿದ. 'ಗೋವರ್ಧನ–ಧಾರಿ'ಯಾದ ಪ್ರಸಂಗ ಆತನ ಸಂಘಟನಾ ಕೌಶಲ್ಯದ ಅಪೂರ್ವ ನಿದರ್ಶನವೇ ಆಗಿದೆ.

ಮಥುರೆಯಿಂದ ಆತನಿಗೆ ಆಹ್ವಾನ ಬಂದಿತು. ಕಂಸನ ವಧೆಯನ್ನು ಕೈಗೊಳ್ಳಲು ತುಂಬ ಅನುಕೂಲಕರವಾದ ಅವಕಾಶ ಒದಗಿಬಂದಿತು. ಯಾವ ನೆಲದ ಒಂದೊಂದು ಕಣವೂ ತನ್ನದೇ ಆಗಿಬಿಟ್ಟಿತ್ತೋ, ಆ ಗೋಕುಲವನ್ನೇ ಬಿಟ್ಟು ಆತ ಹೊರಡಬೇಕಾಗಿ ಬಂದಿತು. ನಂದ, ಯಶೋದೆ, ಗೋಪ–ಗೋಪಿಕೆಯರು, ಗೊಲ್ಲ ಬಾಲಕರು, ಗೋವುಗಳು ಹಾಗೂ ಅವುಗಳ ಕರುಗಳು ದಾರುಣ ದುಃಖಕ್ಕೆ ಇಡಾದರು. ತಮ್ಮ ಆತ್ಮವೇ ತಮ್ಮನ್ನು ಬಿಟ್ಟು ಹೋಗುತ್ತಿರುವಂಥ ಅನುಭವ ಅವರಿಗೆ ಆಗ ತೊಡಗಿತ್ತು. 'ಇಡೀ ಗೋಕುಲವೇ ಕಣ್ಣೀರಿಡತೊಡಗಿತು. ಕೃಷ್ಣನಿಗೂ ಹೃದಯವಿತ್ತು,

ಆತನೇನೂ ಜಡವಸ್ತುವಾಗಿರಲಿಲ್ಲ, ಕಲ್ಲಾಗಿರಲಿಲ್ಲ, ಆದರೆ ಹೃದಯದ ಭಾವನೆಗಳಿಗಿಂತಲೂ ಕರ್ತವ್ಯ ಶ್ರೇಷ್ಠವಾದುದಲ್ಲವೇ' ಗೋಕುಲದ ಕಣ್ಣೀರಿನ ಧಾರೆ ಆತನ ಮಾರ್ಗಕ್ಕೆ ಅಡ್ಡಿಯನ್ನುಂಟು ಮಾಡಲಿಲ್ಲ. ರಾಷ್ಟ್ರೀಯ ಕರ್ತವ್ಯ ನಿರ್ವಹಣೆಗಾಗಿ ಆತ ತನ್ನ ಪ್ರೀತಿಯನ್ನೇ ಬಲಿಗೊಡಬೇಕಾಯಿತು. ಇದು ಪ್ರೇಮಮಯಿಯಾದ ಭಗವಂತನ ಅದ್ಭುತ ಪ್ರೀತಿಯೇ ಆಗಿತ್ತು.

ಕಂಸನನ್ನ ಕೊಲ್ಲುವ ಸಂದರ್ಭದಲ್ಲಿ ಆತ ಯಾವುದೇ ತೊಂದರೆಯನ್ನು ಎದುರಿಸಬೇಕಾಗಿಬರಲಿಲ್ಲ. ಇದಕ್ಕೆ ಕಾರಣವೇನೆಂದರೆ ಇಡೀ ಜನತೆ ಆತನೊಂದಿಗೇ ಇತ್ತು ಮಥುರೆಯಲ್ಲಿ ಕಂಸನ ಆಸ್ಥಾನಕ್ಕೆ ಹೋಗುವ ಮೊದಲು ಜನತೆಯ ಅನೇಕ ಪ್ರತಿನಿಧಿಗಳನ್ನು ಆತ ಭೇಟಿಮಾಡಿದ. ಖಂಡಿತವಗಿಯೂ ಅವರೆಲ್ಲರೂ ಅವನ ಪರವಾಗಿಯೇ ಇದ್ದರು. ತನ್ನ ಪರಾಕ್ರಮದಿಂದ ರಾಜ್ಯವನ್ನು ಸಂಪಾದಿಸಿದರೂ, ಆತ ಸ್ವತಃ ರಾಜನಾಗುಲಿಲ್ಲ ಉಗ್ರಸೇನನನ್ನು ಸಿಂಹಾಸನದ ಮೇಲೆ ಕೂರಿಸಿದ. ಆದರೆ ಜನತೆಯ ಸೇವೆಯಲ್ಲಿ ಆತ ತನ್ನನ್ನು ತೊಡಗಿಸಿಕೊಂಡಿದ್ದ. ಆದರೆ ಆತ ಮಥುರೆಯಲ್ಲಿ ಇರುವುದು ಕಂಸನ ಬಂಧು–ಬಾಂಧವರಿಗೆ, ಇಷ್ಟಮಿತ್ರರಿಗೆ ಹೇಗೆ ತಾನೆ ಪ್ರಿಯವಾಗಬಹುದಿತ್ತು. ಇದರ ಪರಿಣಾಮವಾಗಿ ಜರಾಸಂಧ ಮಥುರೆಯ ಮೇಲೆ ಆಕ್ರಮಣವನ್ನು ಎಸಗಿದ. ಕೃಷ್ಣನ ನೇತೃತ್ವದಲ್ಲಿ ಮಥುರೆಯ ಜನಗಳು ಆ ಆಕ್ರಮಣಕ್ಕೆ ಸರಿಯಾದ ಪ್ರತ್ಯುತ್ತರವನ್ನೇ ನೀಡಿದರು. ಜರಾಸಂಧ ಜೋಲು ಮುಖವನ್ನು ಹಾಕಿಕೊಂಡು ಹಿಂದಿರುಗಿದ. ಆದರೆ, ಅಷ್ಟಕ್ಕೆ ಅವನು ಸುಮ್ಮನಾದನೇ ಅವನು ಮತ್ತೆ ಆಕ್ರಮಣ ಮಾಡಿದ. ಈ ಸರಣಿ ಹದಿನಾರು ವರ್ಷಗಳವರೆಗೆ ಮುಂದುವರಿಯಿತು. ಪ್ರತಿ ವರ್ಷವೂ ಹೀಗೆ ಯದ್ಧ ಮಾಡುತ್ತಲೇ ಇರುವುದು ಮಥುರೆಯ ಪಾಲಿಗೆ ಹಾನಿಕರವಗಿ ಪರಿಣಮಿಸುತ್ತದೆಯೆಂದು ಕೃಷ್ಣ ಆಲೋಚನೆ ಮಾಡಿದ. ಈ ಯುದ್ಧಕ್ಕೆ ಕಾರಣ ಜರಾಸಂಧನಿಗೆ ಮಥುರೆಯ ಬಗ್ಗೆ ಇರುವ ಶತ್ರುತ್ವವಲ್ಲ, ನನ್ನ ಬಗ್ಗೆ ಇರುವ ದ್ವೇಷವೇ ಇದಕ್ಕೆ ಕಾರಣ ಎಂದೂ ಆತ ಯೋಚಿಸಿದ. ಹೀಗಾಗಿ, ಮಥುರೆಯನ್ನೇ ಬಿಟ್ಟು ದೂರ ಹೋಗಬೇಕೆಂದು ಆತ ನಿಶ್ಚಯಿಸಿದ. ಮಥುರೆಯನ್ನು ರಕ್ಷಿಸುವ ಸಲುವಾಗಿಯೇ ಆತ ಮಥುರೆಯನ್ನು ಅಸಹಾಯಕವಾಗಿಯೇ ಬಿಟ್ಟು ಹೊರಟುಬಿಟ್ಟ. ಜರಾಸಂಧ ಭಾರಿ ಆಕ್ರಮಣದ ಸಿದ್ಧತೆಯನ್ನೇ ನಡೆಸಿಕೊಂಡು ಅಲ್ಲಿಗೆ ಬಂದ. ಈ ಬಾರಿ ಕಾಲಯವನನನ್ನು ತನ್ನ ಜೊತೆಯಲ್ಲಿ ಕರೆತಂದಿದ್ದ. ಎರಡೂ ಸೈನ್ಯಗಳೂ ಯದ್ಧಕ್ಕೆ ಸನ್ನದ್ಧವಾಗಿ ನಿಂತಿದ್ದುವು. ಯುದ್ಧದ ಭೇರಿಗಳು ಮೊಳಗಲಿದ್ದುವು. ಕೃಷ್ಣ ರಣರಂಗದಿಂದ ಓಡಿಹೋಗುತ್ತಿರುವಂತೆ ಅನೇಕರಿಗೆ ಅಷ್ಟರಲ್ಲಿಯೇ ಕಂಡಿತು. ಕೃಷ್ಣನಂಥ ವೀರ ಯದ್ಧದಲ್ಲಿ ಬೆನ್ನುತಿರುಗಿಸಿ ಓಡಿಹೋಗುತ್ತಿದ್ದಾನಲ್ಲ ಎಂದು ಜರಾಸಂಧ ಮತ್ತೆಮತ್ತೆ ಕೂಗಿ ಹೇಳಿದ: "ಹೇ ಕೃಷ್ಣ ಹೀಗೆ ಎಲ್ಲಿಗೆ ಓಡಿ ಹೋಗುತ್ತಿದ್ದೀಯೇ? ಇದು ಹೇಡಿತನ। ನಿಜವಾಗಿಯೂ



ರಣರಂಗವನ್ನು ಬಿಟ್ಟುಹೋಗುವುದು ಹೇಡಿತನವೇ ಆಗಿರುತ್ತಿತ್ತು. ಹಾಗೂ ತನ್ನ ಹೆಸರಿಗೆ ಕಳಂಕವನ್ನು ತರುವಂಥ ಕಾರ್ಯವೂ ಆಗಿದ್ದಿತು. ಆದರೆ, ರಾಷ್ಟ್ರದ ಹಿತದೃಷ್ಟಿಯಿಂದ ಹಾಗೆ ಮಾಡುವುದು ಅಗತ್ಯವಾಗಿತ್ತು, ಜೊತೆಗೆ ಯಾವ ಕಾರ್ಯವನ್ನು "ಅನಾರ್ಯಜುಷ್ಟಮಸ್ವರ್ಗ್ಯಮಕೀರ್ತಿಕರಮ್" ['ಗೀತಾ' ೨.೨](ಅನಾರ್ಯರು ಮಾಡುವಂಥದೊ, ಸ್ವರ್ಗವನ್ನು ತಂದು ಕೊಡುವಂಥದಲ್ಲವೆಂದೂ, ಅಪಕೀರ್ತಿಯನ್ನುಂಟು ಮಾಡುವಂಥದೂ) ಎಂದು ಭಾವಿಸಲಾಗಿತ್ತೋ

**ಕ್ಲೈಬ್ಯಂ ಮಾಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ।**
**ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ॥** ['ಗೀತಾ' ೨.೨]

(ಹೇ ಅರ್ಜುನ। ಹೇಡಿತನವನ್ನು ಆಶ್ರಯಿಸದಿರು. ಇದು ನಿನಗೆ ಶೋಭೆ ತರುವಂತದಲ್ಲ. ಹೃದಯದ ಈ ಕಕ್ಷುದ್ರ ದೌರ್ಬಲ್ಯವನು ಬಿಟ್ಟು [ಯುದ್ಧಕ್ಕಾಗಿ] ಎದ್ದುನಿಲ್ಲು.)

ಎಂಬುದಾಗಿಯೂ ಅರ್ಜುನನನ್ನು ತರಾಟೆಗೆ ತೆಗೆದುಕೊಂಡಿದ್ದ ಹಾಗೂ ಗೀತೆಯ ಅರಿವನ್ನು ನೀಡಿ, ಯುದ್ಧ ಪ್ರವೃತ್ತನಾಗುವಂತೆ ಮಾಡಿದ್ದ ಭಗವಾನ್ ಕೃಷ್ಣನೇ ಸ್ವತಃ ಕ್ಷತ್ರಿಯನಾಗಿದ್ದೂ, ರಣರಂಗದಿಂದ ಓಡಿಹೋಗಿದ್ದಾದರೂ ಏಕೆ? ಯದ್ಧವನ್ನು ಕೈಗೊಳ್ಳುವುದು ಹಾಗೂ ಯುದ್ಧಕ್ಷೇತ್ರದಿಂದ ಓಡಿ ಹೋಗುವುದು ಈ ಎರಡೂ ಪ್ರಕ್ರಿಯೆಗಳ ಹಿಂದೆ ರಾಷ್ಟ್ರದ ಒಳಿತನ ಭಾವನೆಯೇ ಅಡಗಿರುತ್ತಿತ್ತು. ಕೃಷ್ಣನ ಮೇಲಿನ ದ್ವೇಷದಿಂದಾಗಿ ಜರಸಂಧ ಯುದ್ಧವನ್ನು ಕೈಗೊಳ್ಳುತ್ತಿದ್ದ. ಆದ್ದರಿಂದಲೇ, ಯುದ್ಧಕ್ಷೇತ್ರದಿಂದ ಓಡಿಹೋಗುವ ಮೂಲಕ ಕೃಷ್ಣ ಮಥುರೆಯನ್ನು ರಕ್ಷಿಸಿದ. ಕುರುಕ್ಷೇತ್ರದ ಯುದ್ಧ ಪಾಂಡವರ ಬಗೆಗಿನ ದುರ್ಯೋಧನನ ದ್ವೇಷದ ನೀತಿಯಿಂದಾಗಿ ನಡೆಯದೆ, ಅವನ ಅಧಾರ್ಮಿಕ ಮಹತ್ವಾಕಾಂಕ್ಷೆಯ ಪರಿಣಾಮವೇ ಆಗಿತ್ತು. ಹೀಗಾಗಿ, ಅಲ್ಲಿ ದೃಢವಾಗಿ ನಿಂತು ಯುದ್ಧ ಮಾಡುವುದು ಅಗತ್ಯವಾಗಿತ್ತು. ಇಲ್ಲಿ ರಣರಂಗಣವನ್ನೇ ಬಿಟ್ಟು ಓಡಿಹೋದುದರಿಂದ ಕೃಷ್ಣನಿಗೆ 'ರಣಹೇಡಿ' ಎಂಬ ಬಿರುದೇ ಬಂದಿತು. ಇಂದಿಗೂ ಅನೇಕ ರಣಹೇಡಿಗಳು ಇದ್ದಾರೆ. ಈ ಹೆಸರು ಅವರಿಗೆ ಅನ್ವರ್ಥವೇ ಆಗಿರುತ್ತದೆಂದರೆ ಇಂಥ ಕ್ರಮದ ಹಿಂದೆ ಅವರ ಹೃದಯದಲ್ಲಿ ರಾಷ್ಟ್ರಪ್ರೇಮದ ಭಾವನೆ ಇರದೆ, ಹೇಡಿತನ ಅಥವಾ ದೌರ್ಬಲ್ಯದಿಂದಾಗಿ ಹಾಗೆ ಮಾಡಿರುವ ಭಾವನೆ ಇರುತ್ತದೆ.

ಮಥುರೆಯನ್ನು ಬಿಟ್ಟು ಬಂದ ಮೇಲೆ ವಾಸುದೇವ ಕೃಷ್ಣನು ದ್ವಾರಕೆಯನ್ನು ನೆಲೆಗೊಳಿಸಿದ ಹಾಗೂ ಅಲ್ಲಿಯೇ ಇರುವ ಆಲೋಚನೆಮಾಡಿದ. ಆದರೆ, ಅಲ್ಲಿ ಶಾಂತವಗಿ ಕುಳಿತಿರುವುದು ಆತನಿಗೆಲ್ಲಿ ಸಾಧ್ಯವಿತ್ತು? ತನ್ನ ನಾಡಿನಲ್ಲಿ ಅಧರ್ಮವನ್ನು ಕೊನೆಗೊಳಿಸುವ ಹಾಗೂ ಧರ್ಮವನ್ನು ನೆಲೆಗೊಳಿಸುವ ಕಾರ್ಯ ಇನ್ನೂ ಆತನೆದುರು

ಉಳಿದೇ ಇತ್ತು. ಸ್ವಾರ್ಥ ಹಾಗೂ ಕಾಮವಾಸನೆಗಳಿಂದ ಕೂಡಿದ್ದ ಹಾಗೂ ಭಿನ್ನ–ಭಿನ್ನವಾಗಿದ್ದ ನಾಡನ್ನು ಒಂದು ಸೂತ್ರದಲ್ಲಿ ಹೆಣೆದು, ದೈವೀ ಸಂಪತ್ತಿನಿಂದ ಅದು ತುಂಬಿಕೊಂಡಿರುವಂತೆ ಮಾಡುವ ಏಕೈಕ ಆಕಾಂಕ್ಷೆ ಆತನ ಮುಂದೆ ಇತ್ತು ಭಾರತದಲ್ಲಿ ಒಂದು ಚತುಸ್ಸಾಗರಪರ್ಯಂತವಗಿರುವಂಥ ಸಾಮ್ರಾಜ್ಯವನ್ನು ಸ್ಥಾಪಿಸುವ ಅಗತ್ಯವಿತ್ತು. ಆ ಕಾಲದಲ್ಲಿ ಹಸ್ತಿನಾಪುರದಲ್ಲಿ ಕೌರವರು, ಪಾಂಡವರು, ಮಗದ್ಧದಲ್ಲಿ ಜರಾಸಂಧ, ಪ್ರಾಗ್ಜ್ಯೋತಿಷಪುರದಲ್ಲಿ ನರಕಾಸುರ – ಇವರುಗಳದ್ದೇ ಮುಖ್ಯ ರಾಜವಂಶಗಲಾಗಿದ್ದುವು. ಇವರಲ್ಲಿ ಯಾರು ಬೇಕಾದರೂ ಸಮ್ರಾಟರಾಗ ಬಹುದಾಗಿತ್ತು. ಇದಕ್ಕಾಗಿ ಪ್ರತಿಯೊಬ್ಬರೂ ಪ್ರಯತ್ನಶೀಲರಾಗಿಯೇ ಇದ್ದರು. ಇವರಲ್ಲಿ ಪಾಂಡವರು ಮಾತ್ರವೇ ಭಾರತದಲ್ಲಿ ಧರ್ಮಸಾಮ್ರಾಜ್ಯ ಸ್ಥಾಪನೆಗೆ ಯೋಗ್ಯರಾಗಿದ್ದಾರೆಂದು ಕೃಷ್ಣ ಭಾವಿಸಿದ ಮತ್ತು ತನ್ನ ಸಂಪೂರ್ಣ ಶಕ್ತಿಯನ್ನು ಇದಕ್ಕಾಗಿಯೇ ವಿನಿಯೋಗಿಸಿದ. ಒಮ್ಮೆ ರಾಷ್ಟ್ರದ ಧ್ಯೇಯವನ್ನು ನಿರ್ಧರಿಸಿಕೊಂಡ ಮೇಲೆ, ಆಧ್ಯೇಯ ಸಾಧನೆಗಾಗಿಯೇ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದು ಅಗತ್ಯವಾಗುತ್ತದೆ. ಆ ಬಳಿಕ ಹೆಜ್ಜೆ ಹೆಜ್ಜೆಗೂ ನೀತಿ–ಅನೀತಿ, ಅತ್ಯ–ಅಸತ್ಯ ಎಂದು ಯೋಚಿಸುತ್ತ ಕುಳಿತುಕೊಳ್ಳುವುದೂ ಅಗತ್ಯವಾಗುವುದಿಲ್ಲ. ಧ್ಯೇಯ ಸಾಧನೆಗೆ ಯವುದು ನೆರವಾಗುತ್ತದೆಯೋ ಅದೇ ‘ನೀತಿ’ ಯಾಗುತ್ತದೆ. ಯಾವುದು ಧ್ಯೇಯದ ಸತ್ಯಸ್ಥಾಪನೆಯಲ್ಲಿ ಕೊನೆಗೊಳ್ಳಬಹುದೋ ಅದೇ ‘ಸತ್ಯ’ವೆನ್ನಿಸಿ ಕೊಳ್ಳತ್ತದೆ. ಧರ್ಮದ ಬಗ್ಗೆಯೇ ಚಿಂತಿಸುತ್ತಿದ್ದ ಭಗವಾನ್ ಕೃಷ್ಣನ ಬಾಳುವೆಯಲ್ಲಿ ಈ ಸಿದ್ಧಾಂತ ಸ್ಪಷ್ಟವಾಗಿ ಎದ್ದು ಕಾಣುತ್ತದೆ.

ರಾಜ್ಯಭ್ರಷ್ಟರಾಗಿ ಪಾಂಡವರು ಕಾಡುಮೇಡುಗಳಲ್ಲೆಲ್ಲ ಅಲೆದಾಡುತ್ತಿದ್ದರು. ಆಗ ಭಗವಾನ್ ಕೃಷ್ಣನೇ ಅವರಿಗೆ ಬೆಂಗಾವಲಾಗಿ ಇದ್ದ. ಆತನ ಪ್ರಯತ್ನಗಳ ಫಲವಗಿಯೇ ಏಳು ಅಕ್ಷೋಹಿಣಿ ಸೈನ್ಯವನ್ನು ಒಂದುಗೂಡಿಸುವುದು ಪಾಂಡವರಿಗೆ ಸಾಧ್ಯವಾಯಿತು. ಹೇಗೆ ಆತ ಜನರನ್ನು ಪಾಂಡವರ ಪಕ್ಷದತ್ತ ಸೆಳೆದ ಎಂಬುದನ್ನು ಒಂದು ಉದಾಹರಣೆಯಿಂದ ಸ್ಪಷ್ಟ ಪಡಿಸಬಹುದು. ಸ್ವತಃ ತನ್ನ ಅಣ್ಣ ಬಲರಾಮ ಪಾಂಡವರನ್ನು ವಿರೋಧಿಸಬಹುದೆಂಬ ಭಯ ಅತನಿಗಿತ್ತು ಏಕೆಂದರೆ, ದುರ್ಯೋಧನ ಅವನ ಶಿಷ್ಯನೇ ಆಗಿದ್ದ. ಹೀಗಾಗಿ ಪಾಂಡವರ ಬಗ್ಗೆ ಅವನ ಹೃದಯದಲ್ಲಿ ಕೋಮಲ ಭಾವನೆಯನ್ನು ಮೂಡಿಸುವ ಸಲುವಾಗಿ ಆತ ಒಂದು ತಂತ್ರವನ್ನೇ ಹೂಡಿದ; ತನ್ನ ಸೋದರಿ ಸುಭದ್ರಾಳನ್ನು ಅರ್ಜುನನಿಗೆ ಕೊಟ್ಟು ಮದುವೆ ಮಾಡಬೇಕೆಂದು ತೀರ್ಮಾನಿಸಿಕೊಂಡ. ಹಾಗೆ ನೋಡಿದರೆ, ಬಲರಾಮ ಇದಕ್ಕೆ ಒಪ್ಪಿಗೆ ನೀಡುತ್ತಿರಲಿಲ್ಲ. ಆದರೆ, ಕೃಷ್ಣನ ಯೋಜನೆಗೆ ಅನುಗುಣವಾಗಿ, ಅರ್ಜುನ ಸುಭದ್ರೆಯನ್ನು ಅಪಹರಿಸಿಕೊಂಡು ಹೋದ. ಇಂಥ ವಿಷಮ ಸ್ಥಿತಿಗೆ ಸಿಲುಕಿಸಿ, ಬಲರಾಮ ಒಪ್ಪುವಂತೆ ಮಾಡಿದ. ತನ್ನ ಸೋದರಿಯನ್ನು ಹಾರಿಸಿಕೊಂಡು



ಹೋಗಲು ನೆರವಾದಂಥ ವ್ಯಕ್ತಿಯನ್ನು ಯಾರು ತಾನೆ ನಿಂದಿಸದೆ ಇರುತ್ತಾರೆ? ಭಗವಾನ್ ಕೃಷ್ಣ ಈ ಕಾರ್ಯವನ್ನು ಮಾಡಿಬಿಟ್ಟ. ಆದರೆ, ಯಾರೊಬ್ಬರೂ ಆತನ ಬಗ್ಗೆ ದೂಷಿಸಲಿಲ್ಲ. ಏಕೆಂದರೆ, ಆ ಕಾರ್ಯದ ಹಿಂದೆ ಇದ್ದ ಉದ್ದೇಶ ಮಹತ್ತರವದುದಾಗಿತ್ತು. ಮಧ್ಯದಲಿಯೇ ಪಾಂಡವರನ್ನು ವಿರೋಧಿಸಿ, ದುರ್ಯೋಧನನಿಗೆ ಬೆಂಗಾವಲಾಗಿ ನಿಲ್ಲದಿರಲೆಂದು ಯುದ್ಧದ ಸಮಯದಲ್ಲಿಯೂ ಯಾವುದೋ ನೆಪದಲ್ಲಿ ಬಲರಾಮನನ್ನು ತೀರ್ಥಯಾತ್ರೆಗೆ ಕಳಿಸಿಬಿಟ್ಟ.

ಯುದ್ಧದಲ್ಲಿ ನೆರವಾಗಬೇಕೆಂಬ ಬೇಡಿಕೆಯೊಂದಿಗೆ ದುರ್ಯೋಧನ ಮತ್ತು ಅರ್ಜುನರಿಬ್ಬರೂ ಆತನ ಬಳಿಗೆ ಬಂದರು. ಕೃಷ್ಣ ಅರ್ಜುನನಿಗೆ ನೆರವಾಗ ಬಯಸಿದ್ದ. ಆದ್ದರಿಂದ ದುರ್ಯೋಧನ ಬಂದಾಗ ಕಣ್ಣು ಮುಚ್ಚಿಕೊಂಡು ಮಲಗಿದ್ದ. ಅರ್ಜುನ ಬಂದೊಡನೆಯೆ ಕಣ್ದೆರೆದು, ಆತ ಯಾವ ಉದ್ದೇಶದಿಂದ ಬಂದಿದ್ದಾನೆ ಎಂಬುದನ್ನು ಕೇಳಿಕೊಂಡ. ಈ ನೀತಿಯ ಬಗ್ಗೆ ಹೇಳುವುದದರೂ ಏನೂ? ತತ್ತ್ವದ ಪಟ್ಟಿಯನ್ನು ಆಧಾರವಾಗಿಟ್ಟುಕೊಂಡು ವಾದಿಸುವವರು, ಇದು ಮೋಸ ಎಂದು ಹೇಳಬಹುದು. ಆದರೆ, ಜಗತ್ತು ಇದಕ್ಕೆ ವಿರುದ್ಧವಗಿ ವಾದಿಸುತ್ತ, ಇದನ್ನು ‘ಧರ್ಮ’ ಎಂದೇ ಹೇಳುತ್ತ ಬಂದಿದೆ. ನೆರವಿನ ಶರತ್ತುಗಳಿಗನುಗುಣವಾಗಿ ಸ್ವತಃ ತಾನು ಪಾಂಡವರ ಪಕ್ಷದಲ್ಲಿ ಉಳಿದು ಕೊಂಡ ಹಾಗೂ ತನ್ನ ಇಡೀ ಸೈನ್ಯವನ್ನು ದುಯೋಧನನಿಗೆ ಒಪ್ಪಿಸಿಬಿಟ್ಟ. ಈ ಸೈನ್ಯ ಕೌರವರ ಪಕ್ಷದಲ್ಲಿ ಇದ್ದುಕೊಂಡು ಏನು ಕಾರ್ಯಮಾಡಿತು ಎಂಬುದು ಗೊತ್ತೇ ಇದೆ.

ಭಗವಾನ್ ಕೃಷ್ಣ ಯಾವುದನ್ನು ಧರ್ಮವೆಂದು ಪರಿಗಣಿಸಿದ್ದ ಎಂಬುದು ಯುದ್ಧದ ಸಂದರ್ಭದಲ್ಲಿ ಇನ್ನಷ್ಟು ಸ್ಪಷ್ಟವಾಗುತ್ತದೆ. ಯುದ್ಧದಲ್ಲಿ ತಾನು ಶಸ್ತ್ರವನ್ನು ಬಳಸುವುದಿಲ್ಲವೆಂದು ಕೃಷ್ಣ ಪ್ರತಿಜ್ಞೆ ಮಾಡಿದ್ದ. ಆದರೆ, ಅಗತ್ಯ ಬಿದ್ದಾಗ, ಭೀಷ್ಮರಿಗೆ ವಿರುದ್ಧವಾಗಿ ಶಸ್ತ್ರವನ್ನೆತ್ತಿನಿಂತದ್ದೂ ಉಂಟು. ಪ್ರತಿಜ್ಞೆಗೆ ಭಂಗವನ್ನು ತರುವುದು ಮಹಾ ಪಾಪವೆಂದು ಹೇಳಲಾಗುತ್ತದೆ. ಆದರೆ ಕೃಷ್ಣನನ್ನು ಯಾರೂ ಪಾಪಿ ಎಂದು ಕರೆಯುವುದಿಲ್ಲ. ಆತ ರಾಷ್ಟ್ರೋದ್ಧಾರದ ಮಹಾ ಪ್ರತಿಜ್ಞೆಯನ್ನು ಕೈಗೊಂಡಿದ್ದ ಹಾಗೂ ಅದನ್ನು ಈಡೇರಿಸಲು ಕೈಗೊಂಡ ಪ್ರತಿಯೊಂದು ಕಾರ್ಯವೂ ಧರ್ಮವೇ ಆಗಿತ್ತು. ಮಹಾವ್ರತದ ದೀಕ್ಷೆಯನ್ನು ಕೈಗೊಂಡಿರುವಂಥ ವ್ಯಕ್ತಿ ಉಳಿದ ವ್ರತಗಳಿಂದ ಮುಕ್ತನಾಗಿಬಿಡುತ್ತಾನೆ.

ಕೌರವರ ಪಕ್ಷದಲ್ಲಿದ್ದ ಎಲ್ಲ ಅತಿರಥ ಮಹಾರಥರ ವಧೆಯ ಕಥೆಗಳು ಎಲ್ಲರಿಗೂ ಪರಿಚಿತವಾಗಿಯೇ ಇವೆ. ಶಿಖಂಡಿಯನ್ನು ಎದುರಿಗೆ ಇಟ್ಟುಕೊಂಡು ಭಿಷ್ಮರನ್ನು ವಧಿಸಲಾಯಿತು. ಅದೂ ಅವರು ಬಾಣಪ್ರಯೋಗ ಮಾಡುವುದನ್ನು ನಿಲ್ಲಿಸಿಬಿಟ್ಟಿದ್ದಾಗ. ದ್ರೋಣಾಚಾರ್ಯರ ವಧೆ ಆದದ್ದು ಆನೆಯನ್ನು ಕೊಂದು, “ಅಶ್ವತ್ಥಾಮಾ ಹತಃ” ಎಂಬ ಸುಳ್ಳು ಸುದ್ದಿಯನ್ನು ಹಬ್ಬಿಸಿ, ಸತ್ಯವಾದಿ ಆಗಿದ್ದ

ಧರ್ಮರಾಜ ಯುಧಿಷ್ಠಿರನ ಮೂಲಕ "ಅಶ್ವತ್ಥಾಮಾ ಹತೋ ನರೋ ವಾ ಕುಂಜರೋವಾ" ಎಂದು ಹೇಳಿಸಿ [ಕೊನೆಯ ಶಬ್ಧಗಳು ಅವರಿಗೆ ಕೇಳಿಸದಂತೆ ಶಂಖ ಧ್ವನಿಯನ್ನು ಮೊಳಗಿಸಿ], ಪುತ್ರಶೋಕದಿಂದ ಅವರು ಶಸ್ತ್ರತ್ಯಾಗ ಮಾಡಿದ್ದಾಗ. ಜಯದ್ರಥನ್ನು ಕೊಂದದ್ದು ಮಾಯೆಯ ಮೂಕ ಸಂಜೆಗತ್ತಲನ್ನು ಉಂಟುಮಾಡಿ ಅವನನ್ನು ಹೊರಗೆಳೆಯುವ ಮೂಲಕ – ಚಿತೆಗೆ ಹಾರಿ ಪ್ರಾಣರ್ಪಣೆಮಾಡಲು ಸಿದ್ಧನಾಗಿದ್ದ ಅರ್ಜುನನಿಂದ ಅವನ ಶ್ರೀರಚ್ಛೇಧನಮಾಡಿಸುವುದರ ಮೂಲಕ ಕರ್ಣನ ರಥದ ಚಕ್ರ ನೆಲದಲ್ಲಿ ಹೂತುಕೊಂಡಿದ್ದಾಗ, ಅವನನ್ನು ವಧಿಸಲಾಯಿತು. ಗದಾಯುದ್ಧದ ನಿಯಮಗಳನ್ನು ಉಲ್ಲಂಘಿಸಿ ತೊಡೆಯ ಮೇಲೆ ಪ್ರಹಾರ ಮಾಡಿ ದೂರ್ಯೋಧನನನ್ನು ವಧಿಸಲಾಯಿತು. ಮೇಲುನೋಟಕ್ಕೆ ಇದೆಲ್ಲವೂ ಅನ್ಯಾಯವೆಂದ, ಅಧರ್ಮವೆಂದೂ ತೋರುತ್ತದೆ. ಆದರೆ, ಹಾಗೇನೂ ಅಲ್ಲ; ಅದು ಪೂರ್ಣ ಧರ್ಮ, ಪೂರ್ಣ ನ್ಯಾಯ, ಈ ಬಗೆಯ ಕಾರ್ಯಚರಣೆಯ ಮೂಲಕವೆ ಆ ಧರ್ಮರಾಜ್ಯವನ್ನು ಸ್ಥಾಪಿಸಲಯಿತು. ಇಂತಹ ಧರ್ಮರಾಜ್ಯದ ಸ್ಥಾಪನೆಯಾಗಬೇಕು ಎಂದು ಮಹಾ ಋಷಿ ಮುನಿಗಳೆಲ್ಲ ಹಂಬಲಿಸುತ್ತಿದ್ದರು. ಮಹರ್ಷಿ ವ್ಯಾಸರು ಯಾವುದಕ್ಕಗಿ ಕಂಬನಿ ಸುರುಸುತ್ತಿದ್ದರೋ ಹಾಗೂ

**ಊರ್ಧ್ವಬಾಹುರ್ವಿರೌಮ್ಯೇವ ನ ಚ ಕಶ್ಚಿಚ್ಛೃಣೋತಿ ಮೇ।**
**ಧರ್ಮಾದರ್ಥಶ್ಚ ಕಾಮಶ್ಚ ಸಧರ್ಮಃ ಕಿಂ ನ ಸೇವ್ಯತೇ॥**

(ನಾನು ಕೈ ಎತ್ತಿ ದೊಡ್ಡ ದನಿಯಲ್ಲಿ ಹೇಳುತ್ತಿದ್ದೇನೆ ಆದರೆ. ಯಾರೂ ನನ್ನ ಮಾತುಗಳನ್ನು ಕೇಳುತ್ತಿಲ್ಲ. 'ಧರ್ಮ'ದಿಂದಲೇ 'ಅರ್ಥ' ಮತ್ತು 'ಕಾಮ'ಗಳೆಲ್ಲ ಸಿದ್ಧಿಸುತ್ತವೇ. ಅಂಥ ಧರ್ಮವನ್ನೇಕೆ ಪಾಲಿಸುತ್ತಿಲ್ಲ ?)

ಎಂಬುದಾಗಿ ಉದ್ಘೋಶಿಸುತ್ತಿದ್ದರೋ ಆ ಧರ್ಮರಾಜ್ಯವನ್ನೇ ಕೃಷ್ಣನು ತನ್ನ ನೀತಿಯ ಮೂಲಕ ಸ್ಥಾಪನೆ ಮಾಡಿದ. ಹಿಗಿರುವಾಗ ನಾವು ಆತನನ್ನು ಅಧರ್ಮಿಯೆಂದು ಹೇಗೆ ಹೇಳಲಾದಿತು? ಆಸತ್ಯವಾದಿಯೆಂದು ಹೇಗೆ ಹೇಳಲಾದಿತು? ಆತನ ಸತ್ಯನಿಷ್ಠೆಗೊಂದು ಜ್ವಲಂತ ಸಾಕ್ಷಿ ಎಂದರೆ ಆತನ ಸತ್ಯವಾಕ್ಕಿನ ಉಚ್ಚಾರಣೆ ಮಾತ್ರದಿಂದಲೇ ಉತ್ತರೆಯ ಗರ್ಭದಲ್ಲಿ ಮೃತನಾಗಿದ್ದ ಪರೀಕ್ಷಿತ ಜೀವಂತನಾಗಿಬಿಟ್ಟ. ಯಾರ ಒಂದೇ ಒಂದು ಹೇಳಿಕೆಯೂ ಇದುವರೆಗೂ ನಿಜವಾಗಿ ಪರಿಣಮಿಸಿಲ್ಲವೋ ಅಂಥ ಇಂದಿನ 'ಸತ್ಯವಾದಿ'ಗಳೊಂದಿಗೆ ಸ್ವಲ್ಪ ಹೋಲಿಸಿನೋಡಿ ಹಾಗೂ ವಾಸ್ತವಿಕ ಸತ್ಯ ಏನೆಂಬುದರ ಬಗ್ಗೆ ಆ ಬಳಿಕ ತೀರ್ಮಾನಕ್ಕೂ ಬನ್ನಿ.

ಏಕಪತ್ನೀವ್ರತ ಭಾರತೀಯರ ಬಾಳ್ವೆಯ ಆದರ್ಶವೇ ಆಗಿದ್ದರೂ, ಭಗವಾನ್ ಕೃಷ್ಣ ಹದಿನಾರು ಸಾವಿರ ರಾಣಿಯರನ್ನು ಮದುವೆಯಾಗಿದ್ದ ಎಂದು ಹೇಳಲಾಗಿದೆಯಲ್ಲವೇ? ಯೋಗೀಶ್ವರ ಕೃಷ್ಣ ಹೀಗೆಕೆ ಮಾಡಿದ? ಆತ ವಿಲಾಸ ಜೀವಿಯಗಿದ್ದಾನೆ? ಇಲ್ಲ; ಈ ರಾಜಕುಮಾರಿಯರೆಲ್ಲ ನರಕಾಸುರನ ಸೆರೆಮನೆಯಲ್ಲಿ



ಬಂದಿನಿಯರಾಗಿದ್ದರು. ಅಲ್ಲಿಂದ ಭಗವಾನ್ ಕೃಷ್ಣ ಅವರನ್ನು ಮುಕ್ತರನ್ನಾಗಿಸುವ ಹಾಗೂ ಸಮಾಜವನ್ನು ವ್ಯಭಿಚಾರ ಮತ್ತು ದುರ್ವ್ಯವಸ್ಥೆಗಳಿಂದ ರಕ್ಷಿಸುವ ಸಲುವಾಗಿ ಸ್ವತಃ ಆತನೇ ಅವರ ಪ್ರಾಣಿಗ್ರಹಣ ಮಾಡಿದ್ದ. ಸಮಾಜಕ್ಕಾಗಿಯೇ ಆತನು ಇದೆಲ್ಲವನ್ನು ಮಾಡಿದ್ದ ಎಲ್ಲಿಯವರೆಗೆ ಆತ ಇಂಥ ಕ್ರಮವನ್ನು ಕೈಗೊಂಡನೆಂದರೆ ಯಾದವರಲ್ಲಿ ಮದ್ಯಪಾನದ ಪ್ರವೃತ್ತಿ ಅತಿಯಾಗಿ ಪರಿಣಮಿಸಿ ಅವರು ಸಮಾಜಕ್ಕೆ ಕಂಟಕಪ್ರಾಯರಾಗಿ ಬಿಟ್ಟಾಗ, ಅವರು ಪರಸ್ಪರ ಹೊಡೆದಾಡಿಕೊಂಡು ಇಲ್ಲವಾಗುವಂತೆ ಮಾಡಿಬಿಟ್ಟ. ರಾಷ್ಟ್ರದ ಹಿತದೃಷ್ಟಿಯಿಂದಲೇ ತನ್ನ ಕಣ್ಣೆದುರಿಗೆ ತನ್ನ ವಂಶನಾಶವಾಗುವುದನ್ನು ನೋಡಿದ.

ಇದು ಭಗವಾನ್ ಕೃಷ್ಣನ ವ್ಯಕ್ತಿತ್ವದ ರಹಸ್ಯ. ನಾವು ಆತನ ಬಾಳ್ವೆಯ ಈ ಸೂತ್ರವನ್ನು ಹಿಡಿದು ಹೊರಟರೆ, ಆತನ ಜೀವನದ ಹಾಗೂ ಆತನಂಥವರೇ ಆದ ಇತರ ಅವತಾರ ಪುರುಷರ ಜೀವನದ ಅನೇಕ ಕಗ್ಗಂಟುಗಳನ್ನು ಸುಲಭವಾಗಿ ಬಗೆಹರಿಸಬಹುದಾಗಿದೆ. ರಾಷ್ಟ್ರದ ಹಿತದ ಎದುರಿನಲ್ಲಿ ತನ್ನ ವ್ಯಕ್ತಿತ್ವದ ಬಗ್ಗೆ ಯಾರೂ ಕಿಚ್ಚಿತ್ತು ಚಿಂತೆಮಾಡಲಿಲ್ಲವೋ ಅ ವಿಭೂತಿಪುರುಷನ ವ್ಯಕ್ತಿತ್ವದ ಮುದ್ರೆ ರಾಷ್ಟ್ರದ ಮೇಲೆ ಅದೆಷ್ಟು ಆಳವಾಗಿ ಬಿದ್ದಿದೆ ಎಂದರೆ ಅದನ್ನು ಎಷ್ಟೇ ಪ್ರಯತ್ನಪಟ್ಟರೂ ಅಳಿಸಲಾಗಿಲ್ಲ. ವಿಧಿಯ ಈ ವಿಧಾನ ಅದೆಷ್ಟು ವಿಚಿತ್ರವಾಗಿದೆ? ಇಂದು ನಾವು ಅವತಾರ ಪುರುಷರ ಸಿದ್ದಿಯನ್ನು ಮಾತ್ರವೇ ಕಣ್ಣಿಟ್ಟು ನೋಡುತ್ತೇವೆ, ಅವರ ಸಾದನೆಯ ಸ್ವರೂಪವನ್ನು ಒರೆಹಚ್ಚಿ ನೋಡುವ ಪ್ರಯತ್ನ ಮಾಡುವುದಿಲ್ಲ. ಸಿದ್ಧಿಯನ್ನು ಪೂಜಿಸುವ ಕಾಯಕದಲ್ಲಿ ಸಫಲತೆಯ ರಹಸ್ಯ ಅಡಗಿಲ್ಲ, ಸಾಧನೆಯ ಆಚರಣೆಯೇ ಸಫಲತೆಯ ರಾಜಮಾರ್ಗವಾಗಿರುತ್ತದೆ. ತನ್ನ ಯುಗದ ಸಾಧನೆಗೆ ಇಡೀ ರಾಷ್ಟ್ರದ ಸಹಕಾರವನ್ನು ಪಡೆದುಕೊಳ್ಳುವ ಸಲುವಾಗಿಯೇ ಆತ ಹೀಗೆಂದು ಹೇಳಿದ್ದ:

**ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು।**
**ಮಾವೇವೈಷ್ಯಸಿ ಸತ್ಯಂ ತೇ ಪ್ರತಿಜ್ಞಾನೇ ಪ್ರಿಯೋऽಸಿ ಮೇ॥**

[ಗೀತಾ ೧೮. ೬೫]

**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ।**
**ಆಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ॥**

[ಗೀತಾ ೧೮. ೬೬]

(ನನ್ನ ಬಗ್ಗೆಯೇ ಮನನ ಮಾಡುವ ನನ್ನ ಭಕ್ತನೇ, ನನಗಾಗಿ ಯಜ್ಞಮಾಡುವಂಥವನಾಗು, ನನಗೆ ನಮಸ್ಕರಿಸು. [ಈ ರೀತಿಯಲ್ಲಿ ನಡೆದುಕೊಂಡರೆ] ನೀನು ನನ್ನನ್ನೇ ಪಡೆದುಕೊಳ್ಳುತ್ತಿಯೆ, ನೀನು ನನಗೆ ಪ್ರೀಯನಾಗಿರುವಂಥವನು. ಎಂಬುದಾಗಿ ನಾನೂ ಸತ್ಯವಾಗಿಯೂ ಪ್ರತಿಜ್ಞೆಮಾಡಿ ಹೇಳುತ್ತೇನೆ.)

(ಎಲ್ಲ ಧರ್ಮಗಳನ್ನೂ ಬಿಟ್ಟು ನನ್ನ ಶರಣನ್ನು ಪಡೆದುಕೊಳ್ಳುವಂಥವನಾಗು.

ನಾನು ನಿನ್ನನ್ನು ಎಲ್ಲ ಪಾಪಗಳಿಂದಲೂ ಮುಕ್ತನನ್ನಾಗಿಸುತ್ತೇನೆ. ನೀನೇನೂ ಶೋಕಿಸ ಬೇಡ]

ಕೃಷ್ಣನಿಗೆ ಶರಣಾಗು ಎಂಬುದರ ಅರ್ಥ ರಾಷ್ಟ್ರಕ್ಕೆ ಶರಣಾಗು ಎಂಬುದೇ. ಕೃಷ್ಣನಿಗಾಗಿ ಕಾರ್ಯ ನಿರ್ವಹಿಸುವುದು ಎಂದರೆ ರಾಷ್ಟ್ರಕ್ಕಾಗಿ ಕಾರ್ಯನಿರ್ವಹಿಸುವುದು ಎಂದೇ ಅರ್ಥ. ಏಕೆಂದರೆ, ಆ ಸಮಯಲ್ಲಿ ಕೃಷ್ಣನೇ ರಾಷ್ಟ್ರದ ಆಸೆ–ಆಕಾಂಕ್ಷೆಗಳ ಪ್ರತೀಕವಾಗಿದ್ದ; ರಾಷ್ಟ್ರದ ಪ್ರಯತ್ನಗಳ ಪ್ರತಿನಿಧಿಯಾಗಿದ್ದ. ಆತನು ಹೇಳಿದ ನೀತಿಯನ್ನು ಪಾಲಿಸುವುದೇ ಧರ್ಮವಾಗಿತ್ತು. ಆದ್ದರಿಂದಲೆ ಆತ ಹಿಗೆಂದು ಹೇಳಿದ;

**ಸ್ವಲ್ಪಮಪ್ಯಸ್ಯಧರ್ಮಸ್ಯ ತ್ರಾಯತೇ ಮಹತೋ ಭಯಾತ್।**

[ಗೀತಾ, ೨.೪೦]

(ಯೋಗರೂಪವಾದ ಈ ರಾಷ್ಟ್ರಧರ್ಮವನ್ನು ಸ್ವಲ್ಪಮಟ್ಟಿಗೆ ಅನುಷ್ಠಾನ ಮಾಡಿದರೂ ಅದು ಜಗತ್ತಿಗೆ ಮಹತ್ತರವಾದ ಭಯದಿಂದ ರಕ್ಷಣೆಯನ್ನು ನೀಡುತ್ತದೆ.)

ನಾವಿಂದು ಈ ಧರ್ಮದ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕು ನಮ್ಮ ರಾಷ್ಟ್ರದ ಪ್ರತಿನಿದಿಯಾರೆಂಬುದನ್ನು ಕಂಡುಕೊಳ್ಳಬೇಕು. ರಾಷ್ಟ್ರದ ಆತ್ಮವನ್ನೇ ಸಾಕ್ಷತ್ಕರಿಸಿಕೊಂಡಿರುವಂಥ ಮಹಾಪುರುಷರ ಪಾದಗಳಲ್ಲಿ ಸರ್ವಸ್ವವನ್ನೂ ಅರ್ಪಿಸಬೇಕು ಹಾಗೂ ಆತನ ಇಂಗಿತಕ್ಕನುಗುಣವಗಿ ರಾಷ್ಟ್ರದ ಕಾರ್ಯಗಳಿಗೆ ನಮ್ಮ ಸಂಪೂರ್ಣ ಶಕ್ತಿಯನ್ನು ವಿನಿಯೋಗಿಸುವುದೇ ಧರ್ಮಪಾಲನೆಯಾಗಿರುತ್ತದೆ; ಇದೇ ಕೃಷ್ಣನ ನಿಜವಾದ ಆರಾಧನೆಯು ಹಾಗಿರುತ್ತದೆ.*

---

* ಪಂ. ದೀನ್‌ದಯಾಳ್ ಉಪಾಧ್ಯಾಯರು ೧೯೪೭ರಲ್ಲಿ ಈ ಲೇಖನವನ್ನು ಸಿದ್ಧಪಡಿಸಿದ್ದರು ಹಾಗೂ ಇದು 'ರಾಷ್ಟ್ರಧರ್ಮ' ಮಾಸಪತ್ರಿಕೆಯ ಎರಡನೆಯ ಅಂಕದಲ್ಲಿ, ಭಾದ್ರಪದ ಪೂರ್ಣಿಮೆ, ಸಂವತ್ ೨೦೦೪ರಲ್ಲಿ ಪ್ರಕಟವಾಗಿತ್ತು.

# ೪. ಸ್ವಾತಂತ್ರ್ಯದ ಸಾಧನೆ ಮತ್ತು ಸಿದ್ಧಿ

ಅನು : **ಡಾ. ಪ್ರಧಾನ್ ಗುರುದತ್ತ**

**BLANK PAGE**



# ಸ್ವಾತಂತ್ರ್ಯದ ಸಾಧನೆ ಮತ್ತು ಸಿದ್ಧಿ

ಸ್ವರಾಜ್ಯ ಎಂಬುದು ಜೀವಂತ ರಾಷ್ಟ್ರದ ಸಾಮಾನ್ಯ ಲಕ್ಷಣ. ಸ್ವರಾಜ್ಯ ಇಲ್ಲದೇ ಹೋದಲ್ಲಿ ರಾಷ್ಟ್ರ ತನ್ನ ಹಿತವನ್ನಾಗಲೀ, ತನ್ನದೇ ಆದ ಅಭಿವ್ಯಕ್ತಿಯನ್ನಾಗಲೀ ಕಾಯ್ದುಕೊಳ್ಳಲಾರದು. ಹೀಗಾಗಿ, ಪ್ರತಿಯೊಂದು ಪ್ರಾಣಿಗೂ ಉಸಿರಾಡುವುದು ಸಹಜ ಕ್ರಿಯೆಯಾಗಿರುವಂತಯೇ, ರಾಷ್ಟ್ರದಲ್ಲಿ ಸ್ವರಾಜ್ಯದ ಬಯಕೆಯೂ ಅದರ ಬಾಳಿನ ಅನಿವಾರ್ಯ ಅಗತ್ಯವೇ ಆಗಿರುತ್ತದೆ. ಈ ಹಸಿವೆ ಇಲ್ಲದೆ ಇದ್ದಲ್ಲಿ, ಯಾವುದೇ ಮಾನವ–ಸಮುದಾಯವೂ ರಾಷ್ಟ್ರವೆಂಬ ಹೆಸರನ್ನು ಪಡೆದುಕೊಳ್ಳಲಾರದು ಹೀಗಾಗಿ, ಪ್ರತಿಯೊಂದು ರಾಷ್ಟ್ರದ ಇತಿಹಾಸದಲ್ಲಿಯೂ ಸ್ವರಾಜ್ಯವನ್ನು ಪಡೆದುಕೊಳ್ಳುವ ಅದನ್ನು ಕಾಪಾಡಿಕೊಳ್ಳುವ ಮತ್ತು ಉಳಿಸಿ–ಬೆಳೆಸಿಕೊಂಡು ಬರುವ ಪ್ರಯತ್ನಗಳ ಪಾಲು ಬಹು ದೊಡ್ಡದೇ ಆಗಿರುತ್ತದೆ ಎಂಬುದರಲ್ಲಿ ಆಶ್ಚರ್ಯವೇನೂ ಇಲ್ಲ.

## ಸ್ವರಾಜ್ಯ ಒಂದು ಸಾಧನ

ಆದರೆ, ಪ್ರಾಣ ಸ್ಪಂದಿಸುತ್ತಿರುವುದು ಮಾತ್ರವೇ ಹೇಗೆ ಜೀವನ ಎನ್ನಿಸಿಕೊಳ್ಳುವುದಿಲ್ಲವೋ ಹಾಗೆಯೇ ಸ್ವರಾಜ್ಯ ಮಾತ್ರವೇ ರಾಷ್ಟ್ರದ ಪೂರ್ಣ ಸ್ವರೂಪವಾಗಿರುವುದಿಲ್ಲ. ಜೀವವನ್ನು ಪಡೆದುಕೊಳ್ಳುವುದರಿಂದ ಹಿಡಿದು ಪ್ರತಿಯೊಂದು ಪ್ರಾಣಿಯೂ ವಿಕಾಸದ ಏಣಿಯಲ್ಲಿ ಮೇಲೇರುತ್ತ ಹೋದಂತೆ, ಆಹಾರ, ನಿದ್ರೆ, ಭಯ ಮತ್ತು ಮೈಥುನಗಳಂಥ ನೈಸರ್ಗಿಕ ಕ್ರಿಯೆಗಳತ್ತಣಿಂದ ಮುಂದೆ ಸಾಗಿ ಅದರ ಬಾಳುವೆ ನಿಶ್ಚಿತ ಧ್ಯೇಯ ಕೇಂದ್ರಿತ ಕ್ರಿಯಾಕಲಾಪಗಳ ಸಾಧನವಾಗಿ ಬಿಡುತ್ತದೆ. ಆಗ ಧ್ಯೇಯವೇ ಬಾಳುವೆ ಎಂಬ ಮಾತು ಚರಿತಾರ್ಥವಾಗ ತೊಡಗುತ್ತದೆ. ಇದೇ ರೀತಿ ರಾಷ್ಟ್ರಗಳ ಬಾಳುವೆಯಲ್ಲಿಯೂ ಸ್ವರಾಜ್ಯ ಒಂದು ಸಾಧನವಾಗಿರುತ್ತದೆ. ಸ್ವರಾಜ್ಯ ಎಂಬುದು ಸಮಾಜವು ಯಾವುದೇ ಅಡ್ಡಿ ಆತಂಕಗಳಿಲ್ಲದೆ, ತನ್ನ ವಿವೇಚನೆಗೆ ಅನುಗುಣವಾಗಿ ನಿಶ್ಚಿತ ಧ್ಯೇಯದತ್ತ ಮುಂದುವರಿಯಲು ಸಾಧ್ಯವಾಗುವಂಥ ಸಾಮ್ರಾಜ್ಯದ ಒಂದು ಸ್ಥಿತಿಯಾಗಿರುತ್ತದೆ.

## ರಾಜಕೀಯ ಅಧಿಕಾರದ ಇತಿಮಿತಿಗಳು

೧೫ ಆಗಸ್ಟ್ ೧೯೪೭ ರಂದು ಬ್ರಿಟಿಷರು ಭಾರತವನ್ನು ಬಿಟ್ಟುಹೋದ ಬಳಿಕ ನಮಗೆ ರಾಜಕೀಯ ಸ್ವಾತಂತ್ರ್ಯ ಲಭಿಸಿತು. ರಾಷ್ಟ್ರ ಜೀವನದ ಅಭಿವ್ಯಕ್ತಿಯನ್ನು

ಹಾಗೂ ನಮ್ಮ ಪುರುಷಾರ್ಥವನ್ನು ಪ್ರಕಟಗೊಳಿಸುವ ಅವಕಾಶ ನಮಗೆ ದೊರೆಯಿತು. ಆದರೆ ಈ ಅವಕಾಶವೂ ಪೂರ್ಣವಾಗಿರಲಿಲ್ಲ ಮತ್ತು ಸ್ಪಷ್ಟವಾಗಿರಲಿಲ್ಲ. ನಮ್ಮ ರಾಜಕೀಯ ಅಧಿಕಾರ ಸಾಕಷ್ಟು ಅಂಶಗಳಲ್ಲಿ ಸೀಮಿತವಾಗಿತ್ತು. ದೇಶೀಯ ರಾಜ್ಯಗಳ ವಿಲೀನಕರಣದಿಂದ ಹಾಗೂ ಗೋವಾ, ಪಾಂಡಿಚೆರಿ ಮೊದಲಾದುವನ್ನು ಮುಕ್ತಗೊಳಿಸಿದ್ದರಿಂದ ನಾವು ಆ ಕೊರತೆಯನ್ನು ಕೆಲವು ಅಂಶಗಳಲ್ಲಿ ತುಂಬಿಕೊಂಡೆವು. ಆದರೆ, ಪಾಕೀಸ್ತಾನ ಅಸ್ತಿತ್ವಕ್ಕೆ ಬಂದುದರಿಂದ ಭಾರತದ ರಾಜಕೀಯ ಸ್ವಾತಂತ್ರ್ಯ ಇನ್ನೂ ಅಪೂರ್ಣವಾಗಿಯೇ ಉಳಿದಿದೆ.

**ಗುಲಾಮತನದ ಅವಶೇಷ**

ಪಾಕೀಸ್ತಾನವನ್ನು ಪ್ರತ್ಯೇಕವಾದ ಸ್ವತಂತ್ರ ರಾಜ್ಯವೆಂದು ಪರಿಗಣಿಸುವುದು ಸತ್ಯವಾಗಲಾರದು, ಹಾಗೆ ಪರಿಗಣಿಸುವುದು ಭಾರತದ ರಾಷ್ಟ್ರೀಯ ಅಸ್ಮಿತೆಯನ್ನು ಇಲ್ಲವಾಗಿಸಿ, ಇಲ್ಲಿ ಪರಕೀಯ ರಾಜ್ಯವನ್ನು ಹಾಗೂ ನಿಷ್ಠೆಗಳನ್ನು ಪ್ರತಿಷ್ಠಾಪಿಸಬಯಸುವಂಥ ಆ ಮನೋವೃತ್ತಿ ಹಾಗೂ ಪರಂಪರೆಯನ್ನು ಪ್ರತಿನಿಧಿಸುತ್ತದೆ. ಪಾಕೀಸ್ತಾನದಲ್ಲಿ ಇರುವಂಥವರು ಭಾರತೀಯ ರಾಷ್ಟ್ರದ ಅಂಗವೇ ಆಗಿದ್ದರೂ, ಅವರ ಗುರುತ್ವಾಕರ್ಷಣದ ಕೇಂದ್ರ ಭಾರತದ ಭೂಮಿ. ಜನತೆ, ಇತಿಹಾಸ, ಸಂಸ್ಕೃತಿ ಮತ್ತು ನಾಗರಿಕತೆಗಳಲ್ಲಿ ಉಳಿದಿಲ್ಲ. ಹೀಗಾಗಿ, ಪಾಕೀಸ್ತಾನವು ಭಾರತದ ಗುಲಾಮತನದ ಅವಶೇಷ ಮಾತ್ರವಾಗಿದೆ. ಅಲ್ಲಿರುವ ನಮ್ಮ ಬಂಧು–ಬಾಂಧವರನ್ನು ಆ ದಾಸ್ಯದಿಂದ ಮುಕ್ತವಾಗಿಸದ ಹೊರತು, ನಮ್ಮ ರಾಜಕೀಯ ಸ್ವಾತಂತ್ರ್ಯ ಅರೆಬರೆಯಾಗಿಯೇ ಇರುತ್ತದೆ. ಶರೀರವನ್ನು ವ್ಯಾಪಿಸಿಕೊಂಡಿರುವ ವಿಷದಂತೆ, ಅದು ಸದಾ ನಮ್ಮನ್ನು ಕಾಡುತ್ತಲೇ ಇರುತ್ತದೆ.

ಸ್ವರಾಜ್ಯ ಸ್ಥಾಪನೆಯ ಬಳಿಕವೂ ಸ್ವರಾಜ್ಯದ ವಿಷಯವನ್ನೇಕೆ ಎತ್ತಬೇಕು? ಈ ಪ್ರಶ್ನೆ ಸಹಜವಾದುದೇ. ಮನಸ್ಸಿಗೆ ತೋಚಿದಂತೆ ಈ ಪ್ರಶ್ನೆಗೆ ಉತ್ತರವನ್ನು ಕೊಡಲಾಗುವುದಿಲ್ಲ. ಭಾರತ ಇದುವರೆಗೂ ಇದಕ್ಕೆ ಸರಿಯಾದ ಉತ್ತರವನ್ನು ಕೊಡಲಾರದೆ ಹೋಗಿದೆ. ಹೀಗಾಗಿ, ಅದು ಏನನ್ನೋ ಕಳೆದುಕೊಂಡಿರುವಂಥ ಭಾವನೆಗೆ ಒಳಗಾಗಿದೆ. ವಿದೇಶೀಯರ ಆಕ್ರಮಣದ ಸಂದರ್ಭದಲ್ಲಿ ನಮ್ಮ ಚೇತನ ಒಮ್ಮೆಗೇ ಎಚ್ಚರಗೊಳ್ಳವಂತಾಗುತ್ತಿರುವುದಕ್ಕೆ ಇದೇ ಸಂಗತಿ ಕಾರಣವಾಗಿದೆ. ಆದರೆ, ಉಳಿದ ಸಮಯದಲ್ಲಿ ನಾವು ನಮ್ಮ ಶಕ್ತಿಗಳನ್ನು ರಚನಾತ್ಮಕ ರೂಪದಲ್ಲಿ ಒಂದುಗೂಡಿಸಿ ಕ್ರಿಯಾಶೀಲರಾಗಲು ಸಾಧ್ಯವಾಗುತ್ತಿಲ್ಲ.

**ರಾಷ್ಟ್ರದ ಸ್ವಭಾವ : 'ಚಿತಿ'**

ಇದಕ್ಕೆ ಉತ್ತರವನ್ನು ಕೊಡವುದಕ್ಕೆ ಮೊದಲು, ನಾವು ಒಂದು ತಥ್ಯವನ್ನು ಚೆನ್ನಾಗಿ ಮನಸ್ಸಿಗೆ ತಂದುಕೊಳ್ಳಬೇಕು. ಯಾವುದೇ ರಾಷ್ಟ್ರವೂ ಮಾನವರ ಸಮುದಾಯ



ಮಾತ್ರವಾಗಿರುವುದಿಲ್ಲ; ಬದಲಿಗೆ ಅದೊಂದು ಜೀವಮಾನದ ಘಟಕವೇ ಆಗಿರುತ್ತದೆ ಎಂಬುದೇ ಆ ತಥ್ಯ. ಈ ಘಟಕ ತನ್ನದೇ ಆದ ಸ್ವಭಾವವನ್ನು ಹೊಂದಿರುತ್ತದೆ; ಆ ಸ್ವಭಾವ ಕೇವಲ ಐತಿಹಾಸಿಕ ಕ್ರಿಯೆಗಳ ಅಥವಾ ಸಾಮಾಜಿಕ ಸಂಸ್ಕಾರಗಳ ಮತ್ತು ವಾತಾವರಣದ ಪರಿಣಾಮವಾಗಿರದೆ, ಅದರ ಮೂಲದಲ್ಲೇ ಐಕ್ಯವಾಗಿಬಿಟ್ಟಿರುತ್ತದೆ. ಶಾಸ್ತ್ರ ಇದನ್ನು 'ಚಿತ್ ಶಕ್ತಿ' ಎಂದು ಹೆಸರಿಸಿದೆ. ಈ 'ಚಿತ್ ಶಕ್ತಿ'ಯೇ ರಾಷ್ಟ್ರದ ವಿಕಾಸದ ಮಾರ್ಗವನ್ನು ನಿರ್ಧರಿಸುತ್ತದೆ. ಈ ಮಾರ್ಗದಲ್ಲಿಯೇ ಮುನ್ನಡೆದು, ರಾಷ್ಟ್ರ ತನ್ನ ಜೀವನೋದ್ದೇಶವನ್ನು ಸಾಧಿಸಿಕೊಳ್ಳುತ್ತ, ಮಾನವರ ಏಕತೆಯ ಅನುಭೂತಿಗೆ ಹಾಗೂ ಅದರ ಪ್ರಗತಿಗೆ ತನ್ನ ಕಾಣಿಕೆಯನ್ನು ಸಲ್ಲಿಸಬಹುದು. ಯೋಗಿ ಅರವಿಂದರು ಇದೇ ತಥ್ಯವನ್ನು ಈ ಮಾತುಗಳಲ್ಲಿ ವ್ಯಕ್ತಪಡಿಸಿದ್ದಾರೆ:

> "Each nation is a shakti or power of the evolving spirit
> in humanity and lives by the principles which it embodies."

(ಪ್ರತಿಯೊಂದು ರಾಷ್ಟ್ರವೂ ವಿಕಾಸೋನ್ಮುಖವಾಗಿರುವ ಮಾನವನ ಆತ್ಮದ ಶಕ್ತಿಯ ರೂಪದಲ್ಲಿನ ಅಭಿವ್ಯಕ್ತಿಯಾಗಿರುತ್ತದೆ; ಹಾಗೂ ಅದು ಸಿದ್ಧಾಂತಗಳ ಆಧಾರದ ಮೇಲೆಯೇ ಬದುಕಿರುತ್ತದೆ; ಅದು ಆ ಸಿದ್ಧಾಂತಗಳ ಮೂರ್ತರೂಪವೇ ಆಗಿರುತ್ತದೆ.)

**ಭಾರತದ ಆತ್ಮ :**

ಭಾರತಕ್ಕೂ ತನ್ನದೇ ಆದ ಒಂದು ಸ್ವಭಾವ ಇದೆ. ಅದಕ್ಕೂ ಒಂದು ಆತ್ಮ ಎಂಬುದಿದೆ ಅದನ್ನು ಸಾಕ್ಷಾತ್ಕರಿಸಿಕೊಳ್ಳುವ ಪ್ರಯತ್ನವೇ ನಮ್ಮ ಗುರಿಯಾಗಿರಬೇಕು. ಇದರ ಮೂಲಕವೇ ನಾವು ನಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದಾಗಿರುತ್ತದೆ. ಇದರ ಮೂಲಕವೇ ನಮ್ಮ ನಾಡಿನ ಸಮೃದ್ಧಿಯನ್ನು ಹಾಗೂ ಜನತೆಯ ಸುಖ ಮತ್ತು ಹಿತಗಳನ್ನು ಸಾಧಿಸಿಕೊಳ್ಳಬಹುದು; ಮಾನವನ ಪ್ರಗತಿಗೆ ನಮ್ಮದೇ ಆದ ಒಂದಿಷ್ಟು ಕಾಣಿಕೆಯನ್ನು ಕೊಡಲು ಸಾಧ್ಯವಾಗುತ್ತದೆ. ಈ ಧ್ಯೇಯದ ನೆರವಿನಿಂದಲೇ ನಾವು ನಾಡಿನ ಜನರಲ್ಲಿ ಪ್ರಬಲ ಪುರುಷಾರ್ಥ, ತ್ಯಾಗ ಮತ್ತು ತಪಸ್ಯೆಗಳ ಭಾವವನ್ನು ಮೂಡಿಸಬಹುದಾಗಿರುತ್ತದೆ. ಈ ಭಾವನೆ ಮೂಡಿದರೆ ಮಾತ್ರವೇ ಅವರಿಗೆ ಕರ್ತವ್ಯದ ಬಗ್ಗೆ ಪ್ರೇರಣೆ ಲಭಿಸುತ್ತದೆ. ಆ ಕರ್ತವ್ಯದ ಆರಾಧನೆಯಲ್ಲಿ ಆರ್ಥಿಕ ಜೀವನದ ವಿಕಾಸವೂ ಆಗುತ್ತದೆ. ಅದರಿಂದಲೇ ಅವರ ಆತ್ಮಕ್ಕೂ ಸುಖ ಲಭಿಸುತ್ತದೆ.

**ಭಾರತೀಯತೆ ಎಂಬುದು ಎಲ್ಲಿದೆ?**

ಆಂಗ್ಲರು ಹೊರಟು ಹೋದ ಬಳಿಕ ಗಾಂಧೀಜೀ ಹೆಚ್ಚು ದಿನ ಬದುಕಿರಲಿಲ್ಲ. ರಾಜ್ಯಾಡಳಿತ ಯಾರ ಕೈಗೆ ಬಂದಿತೋ ಅವರು ಭಾರತದ ಭಾಷೆ ಮತ್ತು

ಭಾವನೆಗಳನ್ನು ಅರ್ಥಮಾಡಿಕೊಳ್ಳಲಾರದೆ ಹೋದರು; ಅಂತೆಯೇ, ಸಮಾಜ ಮುಂದೆ, ಅದಕ್ಕೆ ತನ್ನದೇ ಎಂಬಂತೆ ತೋರುವ ಕನಸನ್ನು ಇರಿಸಲಾರದೆ ಹೋದರು. ಆಂಗ್ಲರ ವಿರುದ್ಧ ಹೋರಾಡುತ್ತಿದ್ದ ಕಾಲದಲ್ಲಿ ನಾವು ಅದೆಷ್ಟೇ ಸ್ವದೇಶೀ ಪರವಾದ ಘೋಷಣೆಗಳನ್ನು ಹಾಕಿರಲಿ, ಅವರು ಇಲ್ಲಿಂದ ತೆರಳಿದ ಬಳಿಕ ನಾವು ನಮ್ಮ ಇಡೀ ಜೀವನವನ್ನು ಹಾಗೂ ನಮ್ಮ ಸಮಸ್ಯೆಗಳನ್ನು ಆಂಗ್ಲರ ಕನ್ನಡಕಗಳಿಂದಲೇ ನೋಡುತ್ತ ಬಂದೆವು. ಇದರ ಪರಿಣಾಮವಾಗಿ ನಮ್ಮ ರಾಜನೀತಿ, ಹಣಕಾಸು ನೀತಿ, ಸಾಮಾಜಿಕ ವ್ಯವಸ್ಥೆ, ಸಾಹಿತ್ಯ ಮತ್ತು ಸಂಸ್ಕೃತಿ – ಇವೆಲ್ಲವುಗಳ ಮೇಲೆ ಆಂಗ್ಲೀಯತೆಯ ಗಾಢವಾದ ಮುದ್ರೆ ಬಿದ್ದಿದೆ. ಅದರಲ್ಲಿ ಎಲ್ಲಿಯಾದರೂ ಭಾರತೀಯತೆ ಎಂಬುದು ಕಾಣಿಸಿಕೊಂಡಿದ್ದೇ ಆದರೆ ಅದು ಮೇಲಿನ ಪದರದಲ್ಲಿ ಮಾತ್ರವೇ. ನಮ್ಮ ಮೌಲಿಕ ಧೋರಣೆಗಳೆಲ್ಲ ವಿದೇಶೀಯವಾಗಿಯೇ ಬಿಟ್ಟಿವೆ.

ನಮ್ಮ ಸಂವಿಧಾನ ಮುಖ್ಯವಾಗಿ ೧೯೩೫ರ ಇಂಡಿಯಾ ಆಕ್ಟ್‌ನ ಸ್ವಲ್ಪ ಮಟ್ಟಿನ ಅಲಂಕೃತ ರೂಪವೇ ಆಗಿದೆ. ಮೂಲಭೂತ ಹಕ್ಕುಗಳ ಹಾಗೂ ಇದೇ ಬಗೆಯ ಇತರ ವಿಷಯಗಳಿಗೆ ಸಂಬಂಧಿಸಿದಂತೆ ನಾವು ಏನೇನನ್ನು ಸೇರಿಸಿದ್ದೇವೆಯೋ ಅದೆಲ್ಲ ಹೊರಗಿನ ಸಂವಿಧಾನಗಳಿಂದ ಎರವಲು ಪಡೆದಿರುವಂಥ ವಿಚಾರಗಳೇ ಆಗಿವೆ; ಹಾಗೂ ಅದರ ಮೇಲೆ ಯೂರೋಪಿನ ಮತ್ತು ಇಂಗ್ಲೆಂಡಿನ ತತ್ವಶಾಸ್ತ್ರಗಳ ಮುದ್ರೆ ಬಿದ್ದಿದೆ.

**ಪ್ರಜಾತಂತ್ರ ಮತ್ತು ಸಮಾಜವಾದ**

ವಿವಿಧ ರಾಜಕೀಯ ಪಕ್ಷಗಳು–ಅವು ಸಮಾಜವಾದೀ ಪಕ್ಷಗಳಾಗಿರಲಿ ಅಥವಾ ಸಮಾಜವಾದೇತರ ಪಕ್ಷಗಳಾಗಿರಲಿ–ಯೂರೋಪಿನ ರಾಜಕೀಯ ವಿಚಾರಧಾರೆಗಳಿಂದಲೇ ಪ್ರಭಾವಿತವಾಗಿವೆ ಹಾಗೂ ಅವು ಭಾರತವನ್ನು ಒಂದಲ್ಲ ಒಂದು ದೇಶದ ಅನುಕೃತಿಯಾಗಿಸಬಯಸುತ್ತವೆ. ಪಂಡಿತ್ ಜವಾಹರಲಾಲ್ ನೆಹರೂ ಅವರ 'ಸಮಾಜವಾದ' ಬ್ರಿಟನ್ನಿನ 'ಲೇಬರ್ ಪಾರ್ಟಿ'ಯ ಸಮಾಜವಾದಕ್ಕಿಂತ ಭಿನ್ನವೇನೂ ಆಗಿರಲಿಲ್ಲ. ಅವರು ಪ್ರಜಾತಂತ್ರ ಮತ್ತು ಸಮಾಜವಾದಗಳನ್ನು ಒಂದುಗೂಡಿಸಬಯಸುತ್ತಿದ್ದರು. ಇದರಿಂದ ಒಂದು ಕಡೆ ಪ್ರಜಾತಂತ್ರದ ಸಮರ್ಥಕರ ಮನಸ್ಸಿನಲ್ಲಿ ಸಂದೇಹಗಳು ಮೂಡಿದರೆ, ಇನ್ನೊಂದು ಕಡೆ ಸಮಾಜವಾದವನ್ನು ಪುರಸ್ಕರಿಸುತ್ತಿದ್ದಂಥ ವ್ಯಕ್ತಿಗಳಿಗೆ ಸಂತೋಷವೂ ಉಂಟಾಗಲಿಲ್ಲ.

ಪ್ರಜಾತಂತ್ರ ಮತ್ತು ಸಮಾಜವಾದ – ಇವು ಯೂರೋಪಿನ ಎರಡು ಬೇರೆ ಬೇರೆ ಕ್ರಾಂತಿಗಳ ಕೊಡುಗೆಗಳೇ ಆಗಿವೆ. ಕಾಲಾನುಕ್ರಮದ ದೃಷ್ಟಿಯಿಂದ ಸಮಾಜವಾದ ಹೊಸತು. ಅದು ಪ್ರಜಾತಂತ್ರನಿಷ್ಠ ಯೂರೋಪಿನಲ್ಲಿ, ವಿಭಿನ್ನ ಕಾರಣಗಳಿಂದ – ಇವುಗಳಲ್ಲಿ ಔದ್ಯೋಗೀಕರಣವೂ ಒಂದು ಮುಖ್ಯವಾದ ಕಾರಣ – ಉಂಟಾದ



ಸಮಸ್ಯೆಗಳ ಕಾರಣಗಳನ್ನು ಮತ್ತು ಪರಿಹಾರಗಳನ್ನು ಕಂಡುಕೊಳ್ಳಲು ಅದು (ಅಂದರೆ ಸಮಾಜವಾದ) ಪ್ರಯತ್ನಿಸಿತು. ಆದರೆ ಈ ಪ್ರಯತ್ನದಲ್ಲಿ ಪ್ರಜಾತಾಂತ್ರಿಕ ಮೌಲ್ಯಗಳನ್ನು ಬಲಿಗೊಡಬೇಕಾಗಿ ಬಂತು. ಪ್ರಜಾತಂತ್ರದ ವಿಷಯದಲ್ಲಿ ವಿಶೇಷ ಶ್ರದ್ಧೆ ಇಲ್ಲದಿದ್ದಂಥ ವ್ಯಕ್ತಿಗಳು ಇದರ ಬಗ್ಗೆ ಚಿಂತೆ ಮಾಡಲಿಲ್ಲ. ಆದರೆ, ಉಳಿದ ವ್ಯಕ್ತಿಗಳು ಸಮಾಜವಾದ ವಿಷಯದಲ್ಲಿ ಶಂಕಾಕುಲರಾದರು. ಅವರುಗಳಲ್ಲಿ ಕೆಲವರು ಸಮಾಜವಾದವನ್ನು ತ್ಯಾಜ್ಯವೆಂದು ಪರಿಗಣಿಸಿ, ಅದನ್ನು ಬಿಟ್ಟುಬಿಟ್ಟರು. ಕೆಲವರು ಪ್ರಜಾತಂತ್ರ ಮತ್ತು ಸಮಾಜವಾದಗಳ ಸಮನ್ವಯವನ್ನು ಸಾಧಿಸಲು ಪ್ರಯತ್ನಿಸಿದರು. ಆದರೆ, ಇದುವರೆಗೂ ಆ ಸಮನ್ವಯವನ್ನು ಸಾಧಿಸಲು ಸಾಧ್ಯವಾಗಿಲ್ಲ. ಇದು ಎಂದೂ ಸಾಧ್ಯವಾಗುವುದಿಲ್ಲವೆಂದು ಕೆಲವು ಚಿಂತಕರು ಭಾವಿಸಿದ್ದಾರೆ.

**ಪ್ರಜಾತಂತ್ರಾತ್ಮಕ ಸಮಾಜವಾದ**

ಭಾರತ ಪಂಡಿತ್ ಜವಾಹರಲಾಲ್ ನೆಹರೂ ಅವರ ಆಡಳಿತಾವಧಿಯಲ್ಲಿ ಪ್ರಜಾತಂತ್ರಾತ್ಮಕ ಸಮಾಜವಾದದ (Democratic Socialism) ಘೋಷಣೆಯನ್ನು ಹಾಕತೊಡಗಿತು. ಇದರಲ್ಲಿ ನಮಗೆ ಯಶಸ್ಸು ದೊರೆಯಲಿಲ್ಲ. ಏಕೆಂದರೆ ಮೂಲತಃ ವಿದೇಶೀಯವೂ, ಅಪೂರ್ಣವೂ ಆಗಿರುವ ವಿಚಾರಧಾರೆಯ ಸ್ವರೂಪವನ್ನೇ ಆಧಾರವಾಗಿಸಿಕೊಂಡು ನಾವು ಪ್ರಜಾತಂತ್ರ ಮತ್ತು ಸಮಾಜವಾದದ ಸಿದ್ಧಾಂತಗಳ ಬಗ್ಗೆ ವಿವೇಚಿಸುವ ಪ್ರಯತ್ನ ಮಾಡುತ್ತುಲಿದ್ದೇವೆ. ಗಂಭೀರವಾಗಿ ಚಿಂತನೆ ಮಾಡಿದ್ದೇ ಆದರೆ ಈ ಎರಡೂ ವಿಚಾರಧಾರೆಗಳು ಬಾಳಿನ ಒಂದೊಂದು ಮುಖ ಹಾಗೂ ಅದಕ್ಕೆ ಸಂಬಂಧಿಸಿದ ಸತ್ಯಗಳಿಗೆ ಅಭಿವ್ಯಕ್ತಿಯನ್ನು ನೀಡುತ್ತವೆ. ಅವುಗಳ ಸಮನ್ವಯವೇನೋ ಸಾಧ್ಯವಾಗುತ್ತದೆ. ಆದರೆ, ಆ ಸಮನ್ವಯ ಸಾಧಿತವಾಗುವುದು ನಮ್ಮ ದೃಷ್ಟಿಕೋನ ಸಂಶ್ಲೇಷಣಾತ್ಮಕವಾಗಿ ಪರಿಣಮಿಸಿದಾಗ ಮಾತ್ರವೇ. ಪಾಶ್ಚಾತ್ಯ ಪ್ರಪಂಚದಲ್ಲಿ ವಿಕಾಸಗೊಂಡಿರುವ ಪ್ರಜಾತಂತ್ರಾತ್ಮಕ ಸಂಸ್ಥೆಗಳ ಹಾಗೂ ಪರಂಪರೆಗಳ ಹಾಗೂ ಕಾರ್ಲ್‌ಮಾರ್ಕ್ಸ್ ಅವರ ಪರಿಕಲ್ಪನೆಯ ಮತ್ತು ಲೆನಿನ್, ಸ್ಟಾಲಿನ್ ಮುಂತಾದ ಮಹಾವ್ಯಕ್ತಿಗಳಿಂದ ರಷ್ಯಾದಲ್ಲಿ ಜಾರಿಗೆ ತರಲಾದ ಸಮಾಜವಾದದ ಸಿದ್ಧ ಚೌಕಟ್ಟಿಗೆ ಇಡೀ ಜೀವನವನ್ನು ಕಟ್ಟಿಹಾಕುವುದು ಉಚಿತವೆಂದು ತೋರುವುದಿಲ್ಲ. ಭಾರತದಲ್ಲಿನ ಜೀವನ ವಿಧಾನ ಈ ಎರಡು ಕಲ್ಪನೆಗಳಿಗಿಂತ ಭಿನ್ನವಾಗಿದೆ. ಆದ್ದರಿಂದ ಈ ಪ್ರಯತ್ನದಲ್ಲಿ ನಾವು ನಡೆಸುವ ಹಗ್ಗಜಗ್ಗಾಟದಿಂದ ಹಾನಿಯೇ ಆಗುತ್ತದೆ.

ಪಾಶ್ಚಾತ್ಯ ರಾಜಕೀಯ ದರ್ಶನವನ್ನು ಭಾರತದ ಮೇಲೆ ತಂದು ಹೊರಿಸುವುದಕ್ಕೆ ಬದಲಾಗಿ, ನಮ್ಮದೇ ಆದ ರಾಜಕೀಯ ದರ್ಶನವನ್ನು ನಾವು ವಿಕಾಸಗೊಳಿಸಿಕೊಳ್ಳಬೇಕು. ಹೀಗೆ ಮಾಡುವಲ್ಲಿ ನಾವು ಪಾಶ್ಚಾತ್ಯ ಚಿಂತನೆಯ ಪ್ರಯೋಜನವನ್ನು ಪಡೆದುಕೊಳ್ಳಬಹುದು. ಆದರೆ, ನಾವು ಅದರಿಂದ

ಅಭಿಭೂತರಾಗಿ ಬಿಡಬಾರದು ಹಾಗೂ ಅದನ್ನೇ ಶಾಶ್ವತ ಸತ್ಯವೆಂದು ನಂಬಿ ನಡೆಯಬಾರದು.

**ಸ್ವಾತಂತ್ರ್ಯೋತ್ತರ ಭಾರತೀಯ ಚಿಂತನೆ**

ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ಭಾರತೀಯ ರಾಜಕೀಯದರ್ಶನದ ಬಗ್ಗೆ ಚಿಂತನೆ ಏನೇನೂ ನಡೆದೇ ಇಲ್ಲ ಎಂದು ಹೇಳುವುದು ಸತ್ಯವಾಗಲಾರದು. ಆದರೆ, ಇನ್ನೂ ಅದನ್ನೆಲ್ಲ ಸಂಕಲಿಸುವ ಪ್ರಯತ್ನ ಆಗಬೇಕಾಗಿದೆ. ಗಾಂಧೀಜೀಯ ಪರಂಪರೆಯನ್ನು ಮುಂದಕ್ಕೆ ಕೊಂಡೊಯ್ಯುತ್ತ ಹಾಗೂ ಭಾರತೀಯ ದೃಷ್ಟಿಕೋನಕ್ಕೆ ಅನುಗುಣವಾಗಿ ಚಿಂತನೆ ಮಾಡುತ್ತ, ಸರ್ವೋದಯ ಪಂಥದ ವಿವಿಧ ನೇತಾರರು ಮಹತ್ವಪೂರ್ಣ ಕಲ್ಪನೆಗಳನ್ನು ಮುಂದಿರಿಸಿದ್ದಾರೆ. ಆದರೆ, ಆಚಾರ್ಯ ವಿನೋಬಾ ಭಾವೆಯವರು ಗಾಮದಾನ ಕಾರ್ಯಕ್ರಮಕ್ಕೆ ನೀಡಿದ ವಿಶೇಷ ಮಹತ್ವದಿಂದಾಗಿ, ಅವರ ಚಿಂತನೆಯ ಕ್ಷೇತ್ರದ ಕೊಡುಗೆ ಹಿಂದೆ ಬಿದ್ದಿದೆ. ಜಯಪ್ರಕಾಶ ನಾರಾಯಣ ಅವರು ಸಿಕ್ಕಿಕೊಂಡಿರುವ ಸಂದಿಗ್ಧಗಳಿಂದಾಗಿ, ಅವರ ಚಿಂತನೆಯ ಕಾರ್ಯಕ್ರಮ ನಿಂತೇ ಹೋಗಿದೆ. ರಾಮರಾಜ್ಯ ಪರಿಷತ್ತಿನ ಸಂಸ್ಥಾಪಕರಾದ ಸ್ವಾಮಿ ಕರಪಾತ್ರಿ ಅವರೂ 'ರಾಮರಾಜ್ಯ ಮತ್ತು ಮಾರ್ಕ್ಸ್‌ವಾದ' ಎಂಬ ಗ್ರಂಥವನ್ನು ರಚಿಸಿ, ಪಾಶ್ಚಾತ್ಯ ರಾಜಕೀಯ ದರ್ಶನಗಳ ಮೀಮಾಂಸೆಯನ್ನು ಮುಂದಿರಿಸಿರುವುದಲ್ಲದೆ, ತಮ್ಮ ಚಿಂತನೆಯನ್ನೂ ಮುಂದಿರಿಸಿದ್ದಾರೆ. ಆದರೆ, ಅವರದು ಮೂಲತಃ 'ಸನಾತನ' ದೃಷ್ಟಿಕೋನವಾಗಿರುವುದರಿಂದ, ಸುಧಾರಣಾವಾದಿ ಆಕಾಂಕ್ಷೆಗಳನ್ನು ಮತ್ತು ಅಗತ್ಯಗಳನ್ನು ಅವರು ಪೂರೈಸಲಾರದೆ ಹೋಗಿದ್ದಾರೆ. ರಾಷ್ಟ್ರೀಯ ಸ್ವಯಂ–ಸೇವಕ ಸಂಘದ ಸರ್ ಸಂಘ ಚಾಲಕರಾಗಿರುವ ಮಾ.ಸ. ಗೋಳವಳಕರ ಅವರು ಆಗಿಂದಾಗ್ಗೆ ಭಾರತೀಯ ಜನಸಂಘವೂ 'ಏಕಾತ್ಮ ಮಾನವತಾವಾದ'ದ ಆಧಾರದ ಮೇಲೆ ಆ ದಿಕ್ಕಿನಲ್ಲಿ ಒಂದಿಷ್ಟು ಪ್ರಯತ್ನ ನಡೆಸಿದೆ. ಹಿಂದೂ ಸಭೆ 'ಹಿಂದೂ ಸಮಾಜವಾದ'ದ ಹೆಸರಿನಲ್ಲಿ ಸಮಾಜವಾದದ ಬಗ್ಗೆ ಸ್ವಲ್ಪ ಮಟ್ಟಿಗೆ ಭಿನ್ನವಾದ ವ್ಯಾಖ್ಯೆಯನ್ನೇ ಮುಂದಿರಿಸುವ ಪ್ರಯತ್ನಮಾಡಿದೆ. ಆದರೆ ಅದಿನ್ನೂ ವಿವರಣಾತ್ಮಕ ರೂಪದಲ್ಲಿ ನಮ್ಮ ಮುಂದೆ ಬಂದಿಲ್ಲ. ಸಮಾಜವಾದದ ಬಗ್ಗೆ ಡಾ. ಸಂಪೂರ್ಣನಂದರು ವ್ಯಕ್ತಪಡಿಸಿರುವ ವಿಚಾರಗಳಲ್ಲಿ ಭಾರತೀಯ ಜೀವನ ದರ್ಶನದ ಒಳ್ಳೆಯ ವಿವೇಚನೆ ಕಾಣದೊರೆಯುತ್ತದೆ. ಚಿಂತನೆಯನ್ನು ಈ ದಿಕ್ಕಿನಲ್ಲಿ ಮುಂದಕ್ಕೆ ಕೊಂಡೊಯ್ಯುವುದು ಅಗತ್ಯವಾಗಿದೆ.

**ರಾಜನೀತಿ ಮತ್ತು ಸಂಸ್ಕೃತಿ**

ಭಾರತೀಯ ಸಂಸ್ಕೃತಿ ಮತ್ತು ಜೀವನ ದರ್ಶನಗಳಿಂದ ದೂರ ಸರಿದು ಭಾರತೀಯ ರಾಜನೀತಿಯ ಬಗ್ಗೆ ಚಿಂತಿಸಲು ಸಾಧ್ಯವಾಗುವುದಿಲ್ಲ. ಭಾರತೀಯ



ಸಂಸ್ಕೃತಿ ಏಕಾತ್ಮವಾದಿ ಸ್ವರೂಪದ್ದಾಗಿದೆ. ಸೃಷ್ಟಿಯ ವಿವಿಧ ಸ್ವರೂಪಗಳ ಹಾಗೂ ಜೀವನದ ವಿವಿಧ ಅಂಗಗಳ ಕಾಣ್ಕೆಯಲ್ಲಿ ವ್ಯತ್ಯಾಸಗಳು ಇರುವುದನ್ನು ಒಪ್ಪಿಕೊಂಡಿರೂ, ಅವುಗಳ ನಡುವಣ ಭಿನ್ನತೆಯಲ್ಲಿಯೂ ಏಕತೆಯನ್ನು ಅರಸುವುದರ ಮೂಲಕ ಅವುಗಳಲ್ಲಿ ಅದು ಸಮನ್ವಯವನ್ನು ಸ್ಥಾಪಿಸುತ್ತದೆ.

**ವರ್ಗ–ಸಂಘರ್ಷ**

ಸಮಾಜವಾದ ಮತ್ತು ಪ್ರಜಾತಂತ್ರ – ಇವೆರಡೂ ವರ್ಗ–ಸಂಘರ್ಷದಿಂದಲೇ ಮೂಡಿಬಂದಿವೆ. ಸಂಘರ್ಷವನ್ನು ಕೊನೆಗಾಣಿಸಿ ಏಕತೆಯನ್ನು ಸ್ಥಾಪಿಸುವುದೇ ಇವುಗಳ ಧ್ಯೇಯವಾಗಿದ್ದರೂ, ಆ ಧ್ಯೇಯದ ಸಾಧನೆಗೆ ಅವುಗಳು ಅನುಸರಿಸಿರುವ ಮಾರ್ಗದಿಂದಾಗಿ, ವರ್ಗಗಳು ಕೊನೆಗಾಣುವುದಕ್ಕೆ ಬದಲಾಗಿ, ಅವುಗಳು ರೂಪಾಂತರಗೊಂಡಿವೆ, ಅಷ್ಟೇ; ಆ ಸಂಘರ್ಷ ಮತ್ತಷ್ಟು ಭಯಂಕರವಾಗಿ ಪರಿಣಮಿಸಿದೆ. ಪ್ರಜಾತಂತ್ರವು ರಾಜ ಮತ್ತು ಪ್ರಜೆಗಳ ನಡುವಣ ಸಂಘರ್ಷವನ್ನು ಸ್ಥಾಯಿಯಾದುದೆಂದು ಭಾವಿಸಿ, ರಾಜನನ್ನು ಇಲ್ಲವಾಗಿಸಿತು. ಆದರೆ ಪ್ರಜೆಗಳ ವಿವಿಧ ಗುಂಪುಗಳ ನಡುವೆ ಕಾಣಿಸಿಕೊಂಡಿರುವ ಸಂಘರ್ಷ ಪ್ರಜಾತಂತ್ರದ ಸ್ಥಾಯೀ ಸಿದ್ಧಾಂತವೇ ಆಗಿ ಬಿಟ್ಟಿದೆ. ಸಮಾಜವಾದವಾದರೋ ಉಳ್ಳವರು ಮತ್ತು ಉಳ್ಳದಿರುವವರ ನಡುವಣ ಸಂಘರ್ಷವನ್ನೇ ತನ್ನ ಆಧಾರವಾಗಿಸಿಕೊಂಡುಬಿಟ್ಟಿದೆ. ವರ್ಗಗಳು ಬದಲಾದುವಾದರೂ, ಸಂಘರ್ಷ ಕೊನೆಗಾಣಲೇ ಇಲ್ಲ. ಪಾಶ್ಚಾತ್ಯ ಪ್ರಪಂಚದ ಎಲ್ಲ ವಿಚಾರಧಾರೆಗಳ ಮೂಲದಲ್ಲಿ ಡಾರ್ವಿನ್ನನ ಜೀವನ ಸಂಘರ್ಷದ ಸಿದ್ಧಾಂತ ಬೀಡುಬಿಟ್ಟಿರುವುದೇ ಇದಕ್ಕೆ ಕಾರಣವಾಗಿದೆ.

**ಸಮನ್ವಯ ಮತ್ತು ಸಹಕಾರ**

ಸೃಷ್ಟಿ ನಿಂತಿರುವುದು ಸಮನ್ವಯ ಮತ್ತು ಸಹಕಾರದ ಆಧಾರದ ಮೇಲೆಯೇ ಹೊರತು ಸಂಘರ್ಷ ಆಧಾರದ ಮೇಲಲ್ಲ. ಪುರುಷ ಮತ್ತು ಪ್ರಕೃತಿಯ ಪರಸ್ಪರ ಅನ್ಯೋನ್ಯತೆಯಿಂದ ಸೃಷ್ಟಿ ಮೂಡುತ್ತದೆ ಹಾಗೂ ಮುಂದುವರಿಯತ್ತದೆಯೇ ಹೊರತು ಸಂಘರ್ಷದಿಂದಲ್ಲ. ಹೀಗಾಗಿ ವರ್ಗ ವಿರೋಧ ಮತ್ತು ವರ್ಗ ಸಂಘರ್ಷಗಳಿಗೆ ಬದಲಾಗಿ, ಪರಸ್ಪರ ಅವಲಂಬನೆ, ಪೂರಕತೆ ಮತ್ತು ಅನುಕೂಲತೆ ಹಾಗೂ ಸಹಕಾರಗಳ ಆಧಾರದ ಮೇಲೆಯೇ ಎಲ್ಲ ಕ್ರಿಯಾಕಲಾಪಗಳ ಬಗ್ಗೆ ವಿವೇಚನೆ ನಡೆಯಬೇಕು ಹಾಗೂ ಅವುಗಳ ಭಾವಾತ್ಮಕ ದಿಕ್ಕು ದೆಸೆಗಳನ್ನು ನಿರ್ಧರಿಸಬೇಕು.

**ವ್ಯಕ್ತಿ ಮತ್ತು ಸಮಾಜ**

ವ್ಯಕ್ತಿ ಮತ್ತು ಸಮಾಜ – ಇವುಗಳ ನಡುವೆಯೂ ಯಾವುದೇ ಸಂಘರ್ಷಕ್ಕೆ ಎಡೆಯಿಲ್ಲ. ಹಾಗೇನಾದರೂ ಇದ್ದರೆ, ಅದು ವಿಕೃತಿಯ ಲಕ್ಷಣವಾಗಿರುತ್ತದೆ. ಸಮಷ್ಟಿಯ

ಹಿತಕ್ಕಾಗಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿಯನ್ನುಂಟುಮಾಡುವ ಅಗತ್ಯವೇನೂ ಇಲ್ಲ. ವಾಸ್ತವವಾಗಿ, ಸ್ವೈರ ಆಚರಣೆಯಲ್ಲಿ ವ್ಯಕ್ತಿಯ ವಿಕಾಸ ಅಡಗಿರುವುದಿಲ್ಲ, ವಿನಾಶ ಅಡಗಿರುತ್ತದೆ. ಸಮಷ್ಟಿಯೊಂದಿಗೆ ಏಕಾತ್ಮಕತೆಯನ್ನು ಸಾಧಿಸುವುದೇ ವ್ಯಕ್ತಿಯ ಪೂರ್ಣ ವಿಕಾಸದ ಸ್ಥಿತಿಯಾಗಿರುತ್ತದೆ. ವ್ಯಕ್ತಿಯೇ ಸಮಷ್ಟಿಯ ಪೂರ್ಣತೆಗೆ ಮಾಧ್ಯಮವೂ, ಮಾನದಂಡವೂ ಆಗಿರುತ್ತಾನೆ. ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಮಾಜದ ಹಿತ ಪರಸ್ಪರ ವಿರೋಧಿ ತತ್ವಗಳಲ್ಲ.

**ಪ್ರಜಾತಂತ್ರ**

ಪ್ರಜಾತಂತ್ರ ಎಂಬುದು ಪ್ರಜೆಗಳ ಬಗೆಗಿನ ಕರ್ತವ್ಯ ನಿರ್ವಹಣೆಯ ಒಂದು ಸಾಧನ ಮಾತ್ರವಾಗಿದೆ. ಸಾಧನದ ಪ್ರಭಾವ ಮತ್ತು ಸಾಮರ್ಥ್ಯಗಳು ಪ್ರಜೆಗಳ ಬಾಳುವೆಯಲ್ಲಿ ಕಾಣಬರುವ ನಾಡಿನ ಬಗೆಗಿನ ತಾದಾತ್ಮ, ತಮ್ಮ ಹೊಣೆಗಾರಿಕೆಯ ಬಗೆಗಿನ ಅರಿವು ಮತ್ತು ಶಿಸ್ತನ್ನು ಅವಲಂಬಿಸಿಕೊಂಡಿರುತ್ತವೆ. ನಾಗರಿಕರಲ್ಲಿ ಈ ಸಂಸ್ಕಾರಗಳು ಇಲ್ಲದೆ ಹೋದಲ್ಲಿ, ಪ್ರಜಾತಂತ್ರ ಎಂಬುದು ವ್ಯಕ್ತಿ, ವರ್ಗ ಮತ್ತು ಪಕ್ಷಗಳಲ್ಲಿ ಅಡಗಿರುವ ಸ್ವಾರ್ಥಗಳ ರಕ್ಷಣೆಯ ಮತ್ತು ಸಂವರ್ಧನೆಯ ಸಾಧನವಾಗಿ ಪರಿಣಮಿಸಿ, ವಿಕೃತವಾಗಿ ಬಿಡುತ್ತದೆ.

**ಮೂಲಭೂತ ಅಧಿಕಾರಗಳು ಶಾಶ್ವತವಾಗಿ ಇರುವಂಥವಲ್ಲ**

ಆಸ್ತಿಪಾಸ್ತಿಗೆ ಸಂಬಂಧಿಸಿದ ಅಥವಾ ಇತರ ಮೂಲಭೂತ ಅಧಿಕಾರಗಳು (Fundamental Rights) ಶಾಶ್ವತವಾಗಿ ಇರುವಂಥವಲ್ಲ. ಅವೆಲ್ಲವೂ ಸಮಾಜದ ಹಿತಕ್ಕೆ ಸಾಪೇಕ್ಷವಾಗಿ ಇರುವಂಥವು. ವಾಸ್ತವವಾಗಿ, ಇವುಗಳ ಮೂಲಕ ವ್ಯಕ್ತಿ ತನ್ನ ಸಾಮಾಜಿಕ ಕರ್ತವ್ಯಗಳನ್ನು ನಿರ್ವಹಿಸುವಂತಾಗಲಿ ಎಂಬ ದೃಷ್ಟಿಯಿಂದ ಈ ಅಧಿಕಾರಗಳನ್ನು ಅವನಿಗೆ ನೀಡಲಾಗಿರುತ್ತದೆ. ಸಮಾಜವನ್ನು ರಕ್ಷಿಸಲಿ ಎಂಬ ದೃಷ್ಟಿಯಿಂದ ಸೈನಿಕನಿಗೆ ಆಯುಧವನ್ನು ಕೊಡಲಾಗಿರುತ್ತದೆ. ಅವನು ತನ್ನ ಕರ್ತವ್ಯವನ್ನು ಪಾಲಿಸದೆ ಇದ್ದರೆ, ಅವನಿಗೆ ಶಸ್ತ್ರಧಾರಿಯಾಗಿರುವ ಅಧಿಕಾರವೂ ಇರುವುದಿಲ್ಲ. ಕಳ್ಳರು ಮತ್ತು ದರೋಡೆಕಾರರಿಗೆ ಆಯುಧಗಳನ್ನಿರಿಸಿಕೊಳ್ಳಲು ಅವಕಾಶ ನೀಡಲಾಗುವುದಿಲ್ಲ. ಇದೇ ರೀತಿ 'ವಿಶ್ವಸ್ಥ'ನಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸುವಂತಾಗಲಿ ಎಂಬ ದೃಷ್ಟಿಯಿಂದಲೇ ವ್ಯಕ್ತಿಗೆ ಆಸ್ತಿಪಾಸ್ತಿಯನ್ನಿರಿಸಿಕೊಳ್ಳುವ ಅಧಿಕಾರ ದೊರೆತಿದೆ. ಈ ಕಾರ್ಯಕ್ಕಾಗಿ ಆಗಿಂದಾಗ್ಗೆ ಈ ಅಧಿಕಾರಗಳ ವ್ಯಾಖ್ಯೆಯಲ್ಲಿ ಮತ್ತು ಇತಿಮಿತಿಗಳ ವಿಷಯದಲ್ಲಿ ಬದಲಾವಣೆ ಅಗತ್ಯವಾಗುತ್ತದೆ. ಆಸ್ತಿ-ಪಾಸ್ತಿಗಳ ಬಗೆಗಿನ ಯಾವ ಅಧಿಕಾರವೂ ಸಮಾಜ ನಿರಪೇಕ್ಷವಾದುದಲ್ಲ.



**ಪ್ರಜಾತಂತ್ರ ಮತ್ತು ಸಮಾಜವಾದಗಳ ನಡುವೆ ಸಮನ್ವಯ ಸಾಧ್ಯತೆ**

ಭಾರತೀಯ ಸಂಸ್ಕೃತಿಯ ಏಕಾತ್ಮವಾದಿ, ಸಮನ್ವಯ ಪ್ರಧಾನ ಹಾಗೂ ಕರ್ತವ್ಯ ಮೂಲ ದೃಷ್ಟಿಕೋನದಿಂದ ಚಿಂತನೆ ಮಾಡಿದ್ದೇ ಆದರೆ, ಪ್ರಜಾತಂತ್ರ ಮತ್ತು ಸಮಾಜವಾದಗಳು ಪರಸ್ಪರ ವಿರೋಧಿಯಾಗಿರದೆ, ಸಮನ್ವಿತವಾಗಿರಬಲ್ಲವು. ಆದರೆ, ಈ ಸಮಾಜವಾದ ರಾಜ್ಯಾಧಿಷ್ಠಿತವಾಗಿ ಅಥವಾ ಶಾಸನಕೇಂದ್ರಿತವಾಗಿರುವುದಿಲ್ಲ. ರಾಜ್ಯವನ್ನು ಸಮಾಜದ ಏಕೈಕ ಪ್ರಾತಿನಿಧಿಕ ಸಂಸ್ಥೆ ಎಂದು ಭಾವಿಸುವುದು ತಪ್ಪಾಗುತ್ತದೆ. ಆದ್ದರಿಂದಲೇ, ರಾಜ್ಯವನ್ನು ಕೊನೆಗೊಳಿಸುವ ಭರವಸೆಯನ್ನು ನೀಡಿಯೂ, ಸಾಮ್ಯವಾದವು ರಾಜ್ಯವನ್ನು ಸರ್ವಗ್ರಾಸಿಯನ್ನಾಗಿಸಿಬಿಟ್ಟಿತು.

ಸಮಾಜ ತನ್ನ ಹಿತಕ್ಕಾಗಿಯೇ ಕುಟುಂಬದಿಂದ ಹಿಡಿದು ರಾಜ್ಯದವರೆಗೆ, ವಿವಾಹದಿಂದ ಹಿಡಿದು ಸಂನ್ಯಾಸದವರೆಗೆ ಅನೇಕ ಸಂಸ್ಥೆಗಳನ್ನು ರೂಪಿಸಿದೆ. ವ್ಯಕ್ತಿ ಸಮಾಜದ ಪ್ರತಿನಿಧಿಯಾಗಿರುತ್ತಾನೆ, ವ್ಯಕ್ತಿ ಸಮಾಜಕ್ಕೆ ನಿಷ್ಠನಾಗಿರದಿದ್ದರೆ, ಸಂಸ್ಥಾ ರೂಪವಾದ ಬದಲಾವಣೆಗಳಿಂದ ಮಾತ್ರವೇ ಏನೂ ಸಾಧಿತವಾಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸಮಾಜವಾದ ಉದ್ದೇಶದಿಂದ ದೂರವಾಗಿ ರಾಜ್ಯ ಹೆಚ್ಚು ಹೆಚ್ಚಾಗಿ ಬಾಳಿನ ಒಡೆಯನೂ, ನಿಯಂತ್ರಕನೂ ಆಗುತ್ತ ಬಂದರೆ, ರಾಜ್ಯದ ಕಾರ್ಯಕರ್ತರ ಭ್ರಷ್ಟಾಚಾರದ ಮೂಲಕ ಸಮಾಜದ ಹಿತ ಹೆಚ್ಚು ಹೆಚ್ಚಾಗಿ ಲೋಪಗೊಳ್ಳುತ್ತ ಹೋಗುತ್ತದೆ ಹಾಗೂ ಬಂಡವಾಳಶಾಹಿ ವ್ಯವಸ್ಥೆಯ ಯಾವ ಲೋಪದೋಷಗಳನ್ನು ದೂರವಾಗಿಸುವ ಸಲುವಾಗಿ, ಈ ಸಂಸ್ಥಾರೂಪದ ಬದಲಾವಣೆಗಳನ್ನು ಮಾಡಲಾಗುತ್ತದೆಯೋ ಅವುಗಳು ಇನ್ನಷ್ಟು ಹೆಚ್ಚಾಗುತ್ತ ಹೋಗುತ್ತವೆ.

**ಚಿತ್‌ಶಕ್ತಿ ಮತ್ತು ಅದರ ವಿರಾಟ್ ಸ್ವರೂಪ**

ಹೀಗಾಗಿ, ಪ್ರಜಾತಂತ್ರ ಮತ್ತು ಸಮಾಜವಾದ–ಇವರೆಡರ ಯಶಸ್ಸು ಸರ್ಕಾರೇತರ ಸಂಸ್ಥೆಗಳ ಹಾಗೂ ರಾಜಕೀಯಕ್ಕೆ ಹೊರತಾದ ಸಂಫಟನೆಗಳ ಆಂದೋಳನಗಳನ್ನು ಹಾಗೂ ಶಿಕ್ಷಣವನ್ನು ಅವಲಂಬಿಸಿರುತ್ತದೆ. ಜನತೆಯ ಸಂಸ್ಕಾರಕ್ಕೆ ರಾಷ್ಟ್ರ–ಜೀವನದಲ್ಲಿ ಅತ್ಯಂತ ಹೆಚ್ಚಿನ ಮಹತ್ವ ಇರುತ್ತದೆ. ದಯಾನಂದರು ಗಾಂಧೀಜಿ ಮತ್ತು ಹೆಡಗೇವಾರ್–ಇವರುಗಳು ಜನರಲ್ಲಿ ಯಾವ ಬಗೆಯುಲ್ಲಿ ಪ್ರೇರಣೆಯನ್ನುಂಟುಮಾಡಿದರೋ ಅದರತ್ತ ನಾಡಿನ ಗಮನ ಹರಿದಿದ್ದೇ ಆದರೆ, ಸಮಾಜದ ಧಾರಣಾ–ಶಕ್ತಿ ಪ್ರಬಲವಾಗುತ್ತದೆ. ಇದರಿಂದಲೇ ರಾಷ್ಟ್ರದ ಚಿತ್–ಶಕ್ತಿ ಜಾಗೃತಗೊಳ್ಳುತ್ತದೆ ಹಾಗೂ ಅದರ ವಿರಾಟ್–ಸ್ವರೂಪವೂ ಬೆಳಕಿಗೆ ಬರುತ್ತದೆ. ಚಿತ್–ಶಕ್ತಿ ಮತ್ತು ಅದರ ವಿರಾಟ್ ಸ್ವರೂಪದ ನಡುವೆ ಇರುವ ಸಂಬಂದ ಆತ್ಮ ಮತ್ತು ಪ್ರಾಣಗಳ ನಡುವಣ ಸಂಬಂಧದಂತೆಯೇ ಇರುತ್ತದೆ. ಚಿತ್–ಶಕ್ತಿಯ ವಿಭಿನ್ನ

ಸಂಸ್ಥೆ ಅಥವಾ ಶಾಖೆಗಳೇ ಶರೀರದ ಇಂದ್ರಿಯಗಳು. ಇಂದ್ರಿಯಗಳು ಪ್ರಾಣದಿಂದಲೇ ಜಾಗೃತವೂ, ಸಮರ್ಥವೂ ಆಗಿರುತ್ತವೆ, ಆತ್ಮವೇ ಇಲ್ಲದಿದ್ದಲ್ಲಿ, ಪ್ರಾಣ ಕಾರ್ಯಶೀಲವಾಗುವಂತೆ ಮಾಡಲಾಗುವುದಿಲ್ಲ.

**ಇಂದಿನ ಸಂವಿಧಾನದ ಅಡಿಯಲ್ಲಿ**

ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಅವಸರದಲ್ಲಿ ಕೆಲಸ ಮಾಡಲಾಗುವುದಿಲ್ಲ. ನಾವು ನಮ್ಮ ಇಂದಿನ ಸಂವಿಧಾನ ಮತ್ತು ಅದರ ತತ್ವಗಳ ಅಡಿಯಲ್ಲಿಯೇ ಕೆಲಸ ಮಾಡಬೇಕಾಗುತ್ತದೆ. ಸಮಾಜದ ಹಿತಕ್ಕೆ ಅದರಿಂದ ಅಡ್ಡಿಯುಂಟಾಗತೊಡಗಿದಾಗಲೆಲ್ಲ, ಅದಕ್ಕೆ ತಿದ್ದುಪಡಿಗಳನ್ನು ತರುವುದು ಅಗತ್ಯವಾಗುತ್ತದೆ. ಕಳೆದ ಹದಿನೈದು ವರ್ಷಗಳ ಅವಧಿಯಲ್ಲಿ, ಅನೇಕ ತಿದ್ದುಪಡಿಗಳನ್ನು ಮಾಡಲಾಗಿದೆ. ಸಂವಿಧಾನದ ಅಡಚಣೆಯಿಂದಾಗಿಯೇ ನಮ್ಮ ಯಾವುದೇ ಸುಧಾರಣಾವಾದಿ ಅಥವಾ ಕ್ರಾಂತಿಕಾರಿ ಕಾರ್ಯಕ್ರಮ ನಿಂತಿಲ್ಲ. ಆದರೆ, ಸಮಾಜದಲ್ಲಿ ಸಮುಚಿತವಾದ ಶಿಕ್ಷಣ ಹಾಗೂ ಆಡಳಿತದಲ್ಲಿ ಕರ್ತವ್ಯ ನಿಷ್ಠೆ ಇಲ್ಲದೆ ಇರುವುದರಿಂದ ನಮ್ಮ ಬಹುತೇಕ ಕಾರ್ಯಕ್ರಮಗಳು ಮೇಲುಮೇಲಿನ ಬದಲಾವಣೆಗಳು ಮಾತ್ರವಾಗಿ ಉಳಿದುಕೊಂಡುಬಿಟ್ಟಿದೆ. ಹೀಗಾಗಿ ಸಾಂಸ್ಥಿಕ ಪರಿವರ್ತನೆಗೆ ಬದಲಾಗಿ ಮಾನಸಿಕ ಪರಿವರ್ತನೆಯ ವಿಚಾರಕ್ಕೆ ಹೆಚ್ಚಿನ ಒತ್ತುಕೊಡಬೇಕಾಗುತ್ತದೆ.

**ಆರ್ಥಿಕ ವಿಕಾಸ**

ಆರ್ಥಿಕ ವಿಕಾಸಕ್ಕೂ ನಮ್ಮ ಇಂದಿನ ಸಂವಿಧಾನ ಯಾವುದೇ ಅಡ್ಡಿಯನ್ನುಂಟು ಮಾಡಿಲ್ಲ. ಏನಾದರೂ ಅಡ್ಡಿಯುಂಟಾಗಿದ್ದರೆ ಅದು ನಾವು ದೇಶದ ಎಲ್ಲ ಸಾಧನಗಳನ್ನೂ ಸಂಪೂರ್ಣವಾಗಿ ಒಂದುಗೂಡಿಸಿ ಕೆಲಸ ಮಾಡದೇ ಇರುವುದೇ ಆಗಿದೆ. ಈ ಸಾಧನಗಳಲ್ಲಿ ಸರ್ಕಾರಿ ಮತ್ತು ಸರ್ಕಾರೇತರ ಕ್ಷೇತ್ರಗಳೆರಡೂ ಸೇರಿಕೊಂಡಿವೆ. ಇಲ್ಲಿಯ ವರೆಗೆ, ನಮ್ಮಲ್ಲಿ ವಿಭಿನ್ನ ಕ್ಷೇತ್ರಗಳಲ್ಲಿ ಶೀತಲ ಯುದ್ಧ ನಡೆಯುತ್ತ ಬಂದಿದೆ. ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳು ಪರಸ್ಪರ ಪೂರಕವಾಗಿ ಕೆಲಸಮಾಡಬಹುದಾಗಿದೆ. ಆದರೆ, ಅವು ಪರಸ್ಪರ ಪ್ರತಿಸ್ಪರ್ಧಿಗಳೆಂಬ ಭಾವನೆಯಿಂದ ಕೆಲಸಮಾಡುತ್ತಿವೆ. ಈ ನೀತಿಯ ಪರಿಣಾಮ ಏನಾಗಿದೆ ಎಂದರೆ ಎಲ್ಲ ಕ್ಷೇತ್ರಗಳಲ್ಲೂ ಸಾಹಸದ ಕೊರತೆ ಎದ್ದುಕಾಣುತ್ತಿದೆ ಹಾಗೂ ಅವು ಹೆಚ್ಚು ಹೆಚ್ಚಾಗಿ ರಾಜ್ಯ ಮುಖಾಪೇಕ್ಷಿ ಅಥವಾ ರಾಜ್ಯಾವಲಂಬಿಗಳಾಗುತ್ತಿವೆ. ಇಡೀ ಭಾರತದ ಪುರುಷಾರ್ಥ ಮತ್ತು ಪರಾಕ್ರಮಗಳಿಗೆ ಸರಿಯಾಗಿ ಹೊರಹೊಮ್ಮುವ ಅವಕಾಶ ದೊರೆತಿದ್ದೇ ಆದರೆ, ನಾವು ಪಶ್ಚಿಮದ ಬಂಡವಾಳವಾದಿ ಹಾಗೂ ರಷ್ಯಾದ ಸಮಾಜವಾದಿ ವ್ಯವಸ್ಥೆಗಳು ತೆಗೆದುಕೊಂಡಿಂದಕ್ಕಿಂತಲೂ ಕಡಿಮೆ ಅವಧಿಯಲ್ಲಿ ನಮ್ಮ ಪ್ರಗತಿಯನ್ನು



ಸಾಧಿಸಿ ತೋರಿಸಬಲ್ಲೆವು ಎಂದು ನಾನು ದೃಢವಾಗಿ ನಂಬಿದ್ದೇನೆ. ಇದಕ್ಕೆ ಕಾರಣವೇನೆಂದರೆ ನಾವು ಆ ಎರಡರ ಅನುಭವಗಳಿಂದಲೂ ಲಾಭವನ್ನು ಪಡೆದುಕೊಳ್ಳಬಹುದಾಗಿದೆ.

ಬಂಡವಾಳವಾದಿ ರಾಷ್ಟ್ರಗಳು ಪ್ರಗತಿಯನ್ನು ಸಾಧಿಸುವುದಕ್ಕೆ ಸ್ವಲ್ಪ ಹೆಚ್ಚು ಸಮಯವನ್ನು ತೆಗೆದುಕೊಂಡಿದ್ದರೆ, ಅದಕ್ಕೆ ಬಂಡವಾಳವಾದಿ ವ್ಯವಸ್ಥೆ ಕಾರಣವಾಗಿರದೆ ವೈಜ್ಞಾನಿಕ ಅವಿಷ್ಕಾರಗಳಿಗೆ ಮತ್ತು ಔದ್ಯೋಗಿಕ ವಿಕಾಸಕ್ಕೆ ಬೇಕಾಗಿದ್ದ ಸಮಯವೂ ಆ ಕಾಲದಲ್ಲಿ ಸೇರಿಕೊಂಡುಬಿಟ್ಟಿರುವುದೂ ಕಾರಣವಾಗಿದೆ. ರಷ್ಯಾ ತನ್ನ ಔದ್ಯೋಗಿಕ ವಿಕಾಸವನ್ನು ಆರಂಭಿಸಿದಾಗ, ಅದಕ್ಕೆ ಸಹಜವಾಗಿಯೇ ಬಂಡವಾಳವಾದಿ ರಾಷ್ಟ್ರಗಳಿಂದ ಈ ಅರಿವು ಲಭಿಸಿಬಿಟ್ಟಿತು. ನಾವು ಇಂದೂ ಹಿಂದಿನ ಮಾನವ–ಜ್ಞಾನದ ಲಾಭವನ್ನು ಪಡೆದುಕೊಂಡು ಮುಂದಿನ ಭವಿಷ್ಯದ ಬಗ್ಗೆ ಚಿಂತನೆ ಮಾಡಬಹುದಾಗಿದೆ. ಹೀಗಾಗಿ, ಒಂದುಗೂಡಿ ಕೆಲಸಮಾಡಿದ್ದೇ ಆದರೆ, ನಾವು ತೌಲನಿಕವಾಗಿ ಇನ್ನೂ ಕಡಿಮೆ ಅವಧಿಯಲ್ಲಿ ನಮ್ಮ ಹಣಕಾಸಿನ ನೀತಿಯನ್ನು ಚೈತನ್ಯಪೂರ್ಣವಾಗಿಸಬಹುದು ಹಾಗೂ ನಮ್ಮ ನಾಡನ್ನು ಸಮೃದ್ಧವಾಗಿಸಬಹುದು.

**ಪ್ರೇಯಸ್ಸು ಮತ್ತು ಶ್ರೇಯಸ್ಸು**

ವ್ಯಕ್ತಿಯ ಮತ್ತು ವರ್ಗದ ಸ್ವಾರ್ಥಗಳನ್ನು ಎಚ್ಚರಗೊಳಿಸುವುದರ ಮೂಲಕ ಅಥವಾ ವ್ಯಕ್ತಿಯ ಮತ್ತು ವರ್ಗದ ಬಾಳಿನ ಯಾವುದಾದರೂ ಒಂದು ಹಸಿವೆಯನ್ನು ತಣಿಸುವ ಹೆಸರಿನಲ್ಲಿಯೂ ಸಾಕಷ್ಟು ಕೆಲಸವನ್ನು ಆಗುಮಾಡಿಸಬಹುದು. ಬಂಡವಾಳವಾದ ಮತ್ತು ಸಮಾಜವಾದ ಇದನ್ನೇ ಮಾಡುತ್ತವೆ. ಆದರೆ, ಇದರಿಂದ ಪ್ರೇಯಸ್ಸು ಸಾಧಿತವಾಗಬಹುದೇ ಹೊರತು ಶ್ರೇಯಸ್ಸಲ್ಲ. ಪ್ರೇಯಸ್ಸು ಮತ್ತು ಶ್ರೇಯಸ್ಸುಗಳೆರಡನ್ನೂ ಸಾಧಿಸಬೇಕಾದರೆ ರಾಷ್ಟ್ರ ಆದರ್ಶವಾದಿಯಾಗಬೇಕಾಗುತ್ತದೆ. ಚಿತ್–ಶಕ್ತಿಯಿಂದ ಆದರ್ಶವನ್ನು ನಿಶ್ಚಯವಾಗಿಯೂ ಸಾಧಿಸಬಹುದು. ಇದೇ ಆಧಾರದ ಮೇಲೆ ವಿರಾಟ್ ಕಲ್ಪನೆಯೂ ಎಚ್ಚರಗೊಂಡಲ್ಲಿ ರಾಜಕೀಯ ಸ್ವಾತಂತ್ರ್ಯದ ಮತ್ತು ಆರ್ಥಿಕ ಸಮೃದ್ಧಿಯ ಮಾರ್ಗಗಳು ಪ್ರಶಸ್ತವಾಗುತ್ತವೆ.

**ನಮ್ಮ ನಿಯತಿ**

ಇದರಿಂದಲೇ ವಿವೇಕ ಮತ್ತು ಸಾಮರ್ಥ್ಯ ಹುಟ್ಟಿಕೊಳ್ಳುತ್ತವೆ. ಇವುಗಳಿಂದ ನಾವು ಹಳೆಯ ಆಚರಣೆಗಳನ್ನು ಬದಲಾಯಿಸಿಕೊಂಡು, ವಿದೇಶಗಳ ಪ್ರಭಾವದಿಂದ ನಮ್ಮನ್ನು ಮುಕ್ತರಾಗಿಸಿಕೊಂಡು ಹೊಸದಾದ ಸ್ವಸ್ಥ ಹಾಗೂ ಚೈತನ್ಯಪೂರ್ಣ ಸಂಸ್ಥೆಗಳನ್ನೂ ಹುಟ್ಟುಹಾಕಬಹುದು. ಹಾಗಾದಾಗ ನಮ್ಮ ರಾಷ್ಟ್ರ ವಿಶ್ವಕ್ಕೆ ಹೊರೆಯಾಗದೆ, ಪರಾವಲಂಬಿ ಹಾಗೂ ಪರಮುಖಾಪೇಕ್ಷಿಯಾಗದೆ, ಹೊಸ

ವಿಶ್ವದ ರಚನೆಗೆ ತನ್ನ ಕೊಡುಗೆಯನ್ನು ನೀಡಬಹುದು. ಇದೇ ನಮ್ಮ ನಿಯತಿಯಾಗಿರುತ್ತದೆ. ಇದೇ ಸ್ವಾತಂತ್ರ್ಯ ಸಾಧನೆಯೂ, ಸಿದ್ಧಿಯೂ ಆಗಬೇಕಾಗುತ್ತದೆ.*

* * * *

* ೧೯೫೩ರಲ್ಲಿ ಈ ಭಾಷಣ ಮಾಡಲಾಗಿತ್ತು.

# ಭಾಗ ೨

# ಪಂಡಿತ್ ದೀನ್ ದಯಾಳ್ ಉಪಾಧ್ಯಾಯ

ಡಾ. ಮಹೇಶಚಂದ್ರ ಶರ್ಮಾ

ಅನು : ಡಾ. ಪ್ರಧಾನ್ ಗುರುದತ್ತ
ಡಾ. ಜಿ. ಶಾಂತಕುಮಾರಿ
ಡಾ. ಸುಮಾರಾವ್

## ಅಧ್ಯಾಯ ೧

# ಕಷ್ಟಮಯ ಬಾಲ್ಯ ಹಾಗೂ ಮೇಧಾವಿ ವಿದ್ಯಾರ್ಥಿ ಜೀವನ

ದೀನ್ ದಯಾಳ್ ಉಪಾಧ್ಯಾಯರ ಬಾಲ್ಯ ಉತ್ತರಭಾರತದ ಒಂದು ಸಾಮಾನ್ಯ ಕೆಳ ಮಧ್ಯಮ ವರ್ಗದ ಸನಾತನ ಹಿಂದೂ ವಾತಾವರಣದಲ್ಲಿ ಕಳೆಯಿತು. ಬ್ರಜಭೂಮಿಯ ಮಥುರಾ ಜಿಲ್ಲೆಯ ನಗಲಾ ಚಂದ್ರಭಾನ್ ಗ್ರಾಮದಲ್ಲಿ ದೀನದಯಾಳ ಉಪಾಧ್ಯಾಯರ ಮುತ್ತಾತನವರಾದ ಪ್ರಸಿದ್ಧ ಜ್ಯೋತಿಷ್ಯರಾದ ಪಂಡಿತ ಹರೀರಾಮ ಉಪಾಧ್ಯಾಯರು ವಾಸವಾಗಿದ್ದರು. ಶ್ರೀ ಝುಂಡೂರಾಮರು ಅವರ ತಮ್ಮನವರಾಗಿದ್ದರು. ಪಂಡಿತ ಹರೀರಾಮ ಉಪಾಧ್ಯಾಯರಿಗೆ ಮೂವರು ಪುತ್ರರಿದ್ದರು – ಭೂದೇವ, ರಾಮಪ್ರಸಾದ ಹಾಗೂ ರಾಮಪ್ಯಾರೇ. ಝುಂಡೂರಾಮರಿಗೂ ಶಂಕರ್‌ಲಾಲ್ ಹಾಗೂ ಬಂಶೀಲಾಲ್ ಎಂಬ ಈರ್ವರು ಗಂಡು ಮಕ್ಕಳಿದ್ದರು.

ಶ್ರೀ ರಾಮಪ್ರಸಾದರ ಮಗನೇ ಶ್ರೀ ಭಗವತಿ ಪ್ರಸಾದ್. ಶ್ರೀ ಭಗವತೀ ಪ್ರಸಾದರ ವಿವಾಹ ಶ್ರೀಮತಿ ರಾಮಪ್ಯಾರೀಯರವರೊಡನೆ ನಡೆಯಿತು. ಅವರು ಓರ್ವ ಧರ್ಮಪರಾಯಣ ಮಹಿಳೆಯಾಗಿದ್ದರು. ಆಶ್ವಯಜ ಕೃಷ್ಣ ತ್ರಯೋದಶಿ ಸಂವತ್ಸರ ೧೯೭೩, ದಿನಾಂಕ ೨೫ ಸೆಪ್ಟೆಂಬರ್, ೧೯೧೬ ರಂದು ಭಗವತೀ ಪ್ರಸಾದರ ಮನೆಯಲ್ಲಿ ಒಂದು ಗಂಡು ಮಗು ಜನಿಸಿತು. ಬಾಲಕನ ಪೂರ್ಣ ಹೆಸರು ದೀನ್ ದಯಾಳ್ ಮನೆಯಲ್ಲಿ ಕರೆಯುವ ಸಲುವಾಗಿ 'ದೀನಾ' ಎಂಬ ಹೆಸರನ್ನು ಇಡಲಾಯಿತು. ಎರಡು ವರ್ಷದ ಅನಂತರ ಶ್ರೀಮತಿ ರಾಮಪ್ಯಾರೀರವರ ಮಡಿಲಿನಲ್ಲಿ ಮತ್ತೋರ್ವ ಮಗು ಆಡತೊಡಗಿತು, ಆ ಮಗುವಿಗೆ ಶಿವದಯಾಳ್ ಎಂದೂ ಹಾಗೂ ಮನೆಯಲ್ಲಿ ಕರೆಯಲು 'ಶಿಬೂ' ಎಂದೂ ಹೆಸರನ್ನು ಇಡಲಾಯಿತು.

**ಅವಿಭಕ್ತ ಕುಟುಂಬದ ಪರಂಪರೆ :**

ಪಂಡಿತ ಹರೀರಾಮರ ಕುಟುಂಬ ಪರಂಪರೆ ಇಲ್ಲಿಯ ತನಕ ಯಾವುದೇ ಅಡ್ಡಿಯಿಲ್ಲದೇ ನಡೆದು ಬಂದಿತ್ತು. ಹೀಗಾಗಿ ಅವರ ಕುಟುಂಬ ಬಹಳ ದೊಡ್ಡದಾಗಿತ್ತು. ಸಹಜವೆಂಬಂತೆ ಮಹಿಳೆಯರಲ್ಲಿ ಕಲಹ ಕಂಡುಬರುತ್ತಿತ್ತು. ಆಗ ದೀನ್ ದಯಾಳರು ಕೇವಲ ಎರಡೂವರೆ ವರ್ಷದವರಾಗಿದ್ದರು. ಅವರ ತಂದೆ ಭಗವತೀ ಪ್ರಸಾದರು ಆಗ ಜಲೇಸರ್‌ನಲ್ಲಿ ಸಹಾಯಕ ಸ್ಟೇಶನ್ ಮಾಸ್ಟರ್ ಆಗಿದ್ದರು. ಅವರು ಗೃಹಕಲಹವನ್ನು ಶಾಂತಗೊಳಿಸಲು ತಮ್ಮ ಚಿಕ್ಕಮ್ಮ ಹಾಗೂ ಮಲತಾಯಿಯನ್ನು

ತಮ್ಮ ಬಳಿ ಜಲೇಸರ್‌ಗೆ ಕರೆಯಿಸಿಕೊಂಡರು ಹಾಗೂ ದೀನಾ, ಶಿಬೂ ಹಾಗೂ ರಾಮಪ್ಯಾರೀಯನ್ನು ರಾಜಸ್ಥಾನದಲ್ಲಿ ಧನಕಿಯಾ ಎಂಬ ಗ್ರಾಮಕ್ಕೆ ಕಳುಹಿಸಿದರು, ಅಲ್ಲಿ ರಾಮಪ್ಯಾರೀಯರ ತಂದೆ ಚುನ್ನೀಲಾಲ್ ಶುಕ್ಲರು ಸ್ಟೇಶನ್ ಮಾಸ್ಟರ್ ಆಗಿದ್ದರು. ಚುನ್ನೀಲಾಲ್‌ರ ಹಳ್ಳಿ ಹಾಗೂ ರಾಮಪ್ಯಾರಿರವರ ತವರೂರು ಹಾಗೂ ದೀನ್‌ದಯಾಳರ ಅಜ್ಜನ ಊರು ಫತ್ತೇಪುರ ಸಿಕ್ರಿಯ ಬಳಿ ಆಗ್ರಾ ಜಿಲ್ಲೆಯ ಗುಡ್ ಕೀ ಮಂಢಈ ಎಂಬ ಹಳ್ಳಿಯಾಗಿದ್ದಿತು.

ಎರಡೂವರೆ ವರುಷದ ವಯಸ್ಸಿನಲ್ಲಿ ತಂದೆಯ ಮನೆಯನ್ನು ಅಗಲಿದ ಮೇಲೆ ದೀನ್ ದಯಾಳರು ಪುನಃ ಅಲ್ಲಿ ಇರಲು ಎಂದಿಗೂ ಹೋಗಲಾಗಲಿಲ್ಲ. ಅವರ ಲಾಲನೆ– ಪೋಷಣೆ ಹಾಗೂ ಬೆಳವಣಿಗೆ ಒಂದು ರೀತಿ ಅಸಹಜ ಸ್ಥಿತಿಯಲ್ಲಿ ನಡೆಯಿತು. ಅದು ವ್ಯಕ್ತಿಯ ವ್ಯಕ್ತಿತ್ವನ್ನು ಕುಂದಿಸುವಂತಹ ಸ್ಥಿತಿಯಾಗಿತ್ತು, ಆದರೆ ದೀನ್ ದಯಾಳರು ಅದೇ ವಾತಾವರಣದಿಂದ ಪ್ರೇರಣೆ ಪಡೆದು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ನಿಜಕ್ಕೂ ಅವರ ಜೀವನದ ಮೇಲೆ ಬಾಲ್ಯಕಾಲದ ಸಂಪೂರ್ಣ ಸಂಸ್ಕಾರ ಉಂಟಾಗಿದ್ದಿತು.

## ಮೃತ್ಯು ದರ್ಶನ

ಮೃತ್ಯುವಿನ ದರ್ಶನವು ಜೀವಂತ ಜನರಲ್ಲಿ ವೈರಾಗ್ಯವನ್ನು ಹುಟ್ಟಿಸುತ್ತದೆ. ದೀನ್ ದಯಾಳ್ ಉಪಾಧ್ಯಾಯರಿಗೆ ಬಾಲ್ಯದಿಂದಲೇ ಪ್ರಿಯಜನರ ಮೃತ್ಯುವಿನ ಕಟು ಅನುಭವ ಉಂಟಾಯಿತು. ಎರಡೂವರೆ ವರುಷದ ವಯಸ್ಸಿನಲ್ಲಿಯೇ ತಮ್ಮ ತಾತನ ಮನೆಗೆ ಬಂದ ಕೆಲವೇ ದಿನಗಳಲ್ಲಿ ಅವರ ತಂದೆ ಭಗವತೀ ಪ್ರಸಾದರ ಮೃತ್ಯುವಿನ ಸಮಾಚಾರ ಬಂದಿತು. ದೀನ್ ದಯಾಳ್‌ರು ಪಿತೃಹೀನರಾದರು ಹಾಗೂ ರಾಮಪ್ಯಾರೀ ವಿಧವೆಯಾದರು. ಬಾಲ್ಯದಲ್ಲಿಯೇ ದೀನ್ ದಯಾಳ್‌ರ ಕಣ್ಣುಗಳು ತನ್ನ ವಿಧವೆಯಾದ ತಾಯಿಯ ಮಡಿಲನ್ನು ಹಾಗೂ ಆಕೆಯ ಕಣ್ಣೀರನ್ನು ಹಾಗೂ ಅಳಿಯನಿಲ್ಲದ ತಾತನ ಅಸಹಾಯಕತೆಯನ್ನು ಹಾಗೂ ಬೇಸರ ಮುಖವನ್ನು ನೋಡಿತು. ಇದರಿಂದಾಗಿ ನಿಜಕ್ಕೂ ಅವರ ಎಳೆಯ ಮನಸ್ಸು ಏನೋ ತಿಳಿಯದ ಸಂವೇದನೆಯನ್ನು ಅನುಭವಿಸಿರಬೇಕು. ತಂದೆಯಿಲ್ಲದ ಬಾಲಕ ದೀನ್ ದಯಾಳ್, ತಾಯಿಯ ಮಡಿಲಲ್ಲಿ ತಮ್ಮ ಬಾಲ್ಯ ಕಳೆದರು. ಆದರೆ ವಿಧವೆಯಾಗಿ, ಶೋಕಪೂರಿತಳೂ ಹಾಗೂ ಚಿಂತೆಯಲ್ಲಿ ಮುಳುಗಿದವಳೂ ಆಗಿದ್ದ ರಾಮಪ್ಯಾರೀ ನೋವಿನಿಂದ ಹಾಗೂ ಸರಿಯಾದ ಪೋಷಣೆಯಿಲ್ಲದೇ ಕ್ಷಯರೋಗಕ್ಕೆ ತುತ್ತಾದಳು. ಆ ದಿನಗಳಲ್ಲಿ ಕ್ಷಯರೋಗ ಮೃತ್ಯುವಿನ ರೂಪವಾಗಿತ್ತು. ದೀನ್‌ದಯಾಳರಿಗೆ ಏಳು ವರ್ಷ, ಶಿವದಯಾಳರಿಗೆ ಐದು ವರ್ಷಗಳಾಗಿದ್ದಾಗಲೇ ಆ ಇಬ್ಬರು ಮಕ್ಕಳನ್ನು ತಾತನ ಮಡಿಲಿಗೆ ಹಾಕಿ ರಾಮಪ್ಯಾರೀ ಆ ರಾಮನ ಪಾದ ಸೇರಿದಳು. ದೀನದಯಾಳರು



ತಂದೆ ಹಾಗೂ ತಾಯಿಯ ವಾತ್ಸಲ್ಯಕ್ಕೆ ದೂರವಾದರು. ಈ ಬಾಲಕನಿಗೆ ಮೃತ್ಯುವಿನ ಸರ್ವಾಂಗ ದರ್ಶನ ಮಾಡಿಸಬೇಕೆಂದು ವಿಧಿಯು ನಿರ್ಣಯಿಸಿದಂತಿತ್ತು. ತಾಯಿಯನ್ನು ಕಳೆದುಕೊಂಡು ಇನ್ನು ಎರಡು ವರ್ಷಗಳಾಗಿತ್ತು. ಅಷ್ಟರಲ್ಲಿಯೇ ವೃದ್ಧ ಹಾಗೂ ಬಹಳ ಸ್ನೇಹಶೀಲ ಪಾಲಕರಾಗಿದ್ದ ಹಾಗೂ ತಮ್ಮ ಮಗಳ ಅಮಾನತ್ತನ್ನು ಸಾಕುತ್ತಿದ್ದ ತಾತ ಚುನ್ನೀಲಾಲರು ಸಹ ಸ್ವರ್ಗವಾಸಿಗಳಾದರು. ಅದು ೧೯೨೬ ರ ಸೆಪ್ಟೆಂಬರ್ ತಿಂಗಳಾಗಿತ್ತು. ದೀನದಯಾಳರಿಗೆ ಆಗ ಹತ್ತು ವರ್ಷ ವಯಸ್ಸು ಆಗಿತ್ತು. ತಂದೆ–ತಾಯಿ ಹಾಗೂ ತಾತನ ವಾತ್ಸಲ್ಯದಿಂದ ವಂಚಿತರಾಗಿ ಆತ ತಮ್ಮ ಮಾವನವರ ಆಶ್ರಯದಲ್ಲಿದ್ದರು. ಅವರ ಅತ್ತೆ ಬಹಳ ಉದಾರಿಯೂ, ವಾತ್ಸಲ್ಯಪೂರ್ಣೆಯೂ, ಮಾತೃಸ್ವರೂಪಿಯೂ ಆಗಿದ್ದರು. ದೀನ್ ದಯಾಳರು ಬಹಳ ಗಂಭೀರವಾಗಿರುತ್ತಿದ್ದರು. ಹತ್ತು ವರ್ಷದ ದೀನ್ ದಯಾಳರು ತಮ್ಮ ತಮ್ಮನನ್ನು ಕುರಿತು ಚಿಂತಿಸುತ್ತಿದ್ದರು ಹಾಗೂ ಅವನನ್ನು ಪ್ರೀತಿಯಿಂದ ಕಾಣುತ್ತಿದ್ದರು.

ದೀನ್ ದಯಾಳರು ತಮ್ಮ ಏಳನೇ ತರಗತಿಯ ಶಿಕ್ಷಣವನ್ನು ರಾಜಸ್ಥಾನದ ಕೋಟಾ ನಗರದಲ್ಲಿ ಪಡೆಯುತ್ತಿದ್ದರು. ಅದು ೧೯೩೧ನೇ ಇಸ್ವಿಯಾಗಿತ್ತು. ಅವರ ಅತ್ತೆಯ ನಿಧನದಿಂದಾಗಿ ಅವರು ಕೋಟಾದಿಂದ ರಾಜಗಢಕ್ಕೆ (ಅಲವರ್ ಜಿಲ್ಲೆ) ಬರಬೇಕಾಯಿತು. ತಮ್ಮ ಪಾಲಕ (ಪೋಷಕ)ರ ಮೃತ್ಯುವನ್ನು ಕಣ್ಣಾರೆ ಕಂಡ ದೀನದಯಾಳರಿಗೆ ಆಗ ಹದಿನೈದು ವರ್ಷ ವಯಸ್ಸಾಗಿತ್ತು.

ಇಷ್ಟು ಚಿಕ್ಕ ವಯಸ್ಸಿನಲ್ಲಿ ದೀನದಯಾಳರು ತನ್ನ ತಮ್ಮನಾದ ಶಿವದಯಾಳನ ಪಾಲಕರೂ ಆಗಿದ್ದರು. ವಿಧಿಯ ಹೊಡೆತಗಳು ಅವರ ಪರಸ್ಪರ ಸ್ನೇಹವನ್ನು ಮತ್ತಷ್ಟು ಸಂವೇದನಶೀಲವೂ ಹಾಗೂ ಸ್ನಿಗ್ಧವೂ ಆಗಿಸಿತ್ತು. ಇಲ್ಲಿಯ ತನಕ ದೀನ್ ದಯಾಳರು ತಮ್ಮ ಪಾಲಕರ ಮೃತ್ಯುವಿನ ದುಃಖವನ್ನು ಅನುಭವಿಸಿದ್ದರು. ಮೃತ್ಯುವು ತನ್ನ ಸರ್ವಾಂಗ ದರ್ಶನ ಮಾಡಿಸಬೇಕೆಂದು ನಿರ್ಣಯಸಿದ್ದಂತಿತ್ತು. ಒಂಬತ್ತನೆಯ ತರಗತಿಯಲ್ಲಿ ಓದುತ್ತಿದ್ದಾಗ ದೀನದಯಾಳರು ಹದಿನೆಂಟು ವಯಸ್ಸಿನವರಾಗಿದ್ದರು. ಆಗ ಅವರ ತಮ್ಮ ಶಿವದಯಾಳ ರೋಗಗ್ರಸ್ಥನಾದನು. ಅವನಿಗೆ 'ಅಮ್ಮ' (ಮೈಲಿ ಬೇನೆ) ಉಂಟಾಯಿತು. ದೀನ್ ದಯಾಳರು ತಮ್ಮ ತಮ್ಮನನ್ನು ಉಳಿಸಲು ಬಹಳ ಪ್ರಯತ್ನಪಟ್ಟರು. ಎಲ್ಲ ರೀತಿಯಲ್ಲೂ ಆರೈಕೆ ಮಾಡಿದರು. ಆದರೆ ೧೯೩೪ರ ನವೆಂಬರ್ ೧೮ ರಂದು ಶಿವದಯಾಳ್ ತನ್ನ ಅಣ್ಣನಾದ ದೀನ್ ದಯಾಳನನ್ನು ಒಬ್ಬಂಟಿಗನನ್ನಾಗಿಸಿ ಈ ಪ್ರಪಂಚವನ್ನು ತೊರೆದನು.

ಈಗಲೂ ದೀನ್ ದಯಾಳರ ಮೇಲೆ ಮುಪ್ಪಿನಿಂದ ಸುಕ್ಕಾದ ಒಂದು ಕೈ ವಾತ್ಸಲ್ಯದ ಆಶೀರ್ವಾದವನ್ನು ನೀಡುತ್ತಲೇ ಇತ್ತು. ದೀನ್ ದಯಾಳರ ಅಜ್ಜಿ ಅವರನ್ನು ಬಹಳ ಪ್ರೀತಿಸುತ್ತಿದ್ದಳು. ತಮ್ಮ ಓದು ಹಾಗೂ ಅನ್ಯ ಕೌಟುಂಬಿಕ ಸಮಸ್ಯೆಗಳಿಂದಾಗಿ ಅವರು ತಮ್ಮ ಅಜ್ಜಿಯ ಬಳಿ ಬಹುಕಾಲ ಇರಲಾಗಲಿಲ್ಲ,

ಆದರೂ ಅಜ್ಜಿಯ ವಾತ್ಸಲ್ಯ ಅನನ್ಯ ಸ್ವರೂಪದ್ದೇ ಆಗಿತ್ತು. ಅದು ೧೯೩೫ನೇ ಇಸವಿ. ದೀನದಯಾಳರು ಹತ್ತನೆಯ ತರಗತಿಯಲ್ಲಿ ಉತ್ತೀರ್ಣರಾಗಿದ್ದರು. ಆಗ ಅವರಿಗೆ ಹತ್ತೊಂಬತ್ತು ವರ್ಷ ವಯಸ್ಸಾಗಿತ್ತು. ಅದೇ ವರ್ಷ ಚಳಿಗಾಲದಲ್ಲಿ ಅವರ ಅಜ್ಜಿ ಅನಾರೋಗ್ಯಕ್ಕೆ ಈಡಾದರು ಹಾಗೂ ಈ ಪ್ರಪಂಚವನ್ನು ತೊರೆದರು.

ತಂದೆ, ತಾಯಿ, ಅಜ್ಜ, ಅತ್ತೆ, ಸಹೋದರ ಇವರ ಸಾವು ಹಾಗೂ ಈಗ ಅಜ್ಜಿಯ ಸಾವು ದೀನ್ ದಯಾಳರನ್ನು ಅನುಭವಸಿದ್ಧರನ್ನಾಗಿಸಿತು. ಸಾವಿನ ಹೊಡೆತದಿಂದ ಅವರ ಚೈತನ್ಯ ಕುಂದಲಿಲ್ಲವಾದರೂ, ಯುವಕ ದೀನ್ ದಯಾಳ್ ಓರ್ವ ಖಿನ್ನ ತೇಜಸ್ವಿ ಯುವಕನಾಗತೊಡಗಿದ್ದ. ದೀನ್ ದಯಾಳರ ಮಾವನಿಗೆ ಮಗಳೊಬ್ಬಳು ಇದ್ದಳು. ಸಹೋದರ–ಸಹೋದರಿಯರ ಪ್ರೀತಿಯ ಸಂಬಂಧದ ಎಲ್ಲ ಮಾರ್ದವತೆ ಇವರಿಬ್ಬರ ನಡುವೆ ಚೆನ್ನಾಗಿ ಬೆಳೆದುನಿಂತಿತ್ತು.

ದೀನ್ ದಯಾಳರು ಈಗ ಯುವಕರಾಗಿದ್ದರು. ಅವರು ಆಗ್ರಾದಲ್ಲಿ ಇಂಗ್ಲಿಷ್ ಎಂ.ಎ. ಓದುತ್ತಿದ್ದರು. ತಂಗಿ ರಾಮಾದೇವಿ ಆರೋಗ್ಯ ಬಹಳ ಹದಗೆಟ್ಟಿತ್ತು. ದೀನ್ ದಯಾಳರು ತಮ್ಮ ಓದನ್ನು ಬಿಟ್ಟು ರಾಮಾದೇವಿಯ ಸೇವೆ ಹಾಗೂ ಉಪಚಾರಕ್ಕಾಗಿ ಅಗತ್ಯವಾಗಿದ್ದ ಸೌಕರ್ಯಗಳನ್ನು ಒಗ್ಗೂಡಿಸಿದರು. ಆದರೆ ತಮ್ಮ ತಂಗಿಯ ಸಾವನ್ನು ಸಹ ದೀನದಯಾಳರು ನೋಡಬೇಕೆಂಬುದು ವಿಧಿಯ ಇಚ್ಛೆಯಾಗಿದ್ದಿತು. ಅವಳನ್ನು ಕಾಪಾಡಲು ಎಷ್ಟು ಪ್ರಯತ್ನಿಸಿದರೂ ರಾಮಾದೇವಿಯ ಪ್ರಾಣ–ಪಕ್ಷಿ ಹಾರಿಹೋಯಿತು. ಇದು ೧೯೪೦ರಂದು ನಡೆಯಿತು. ದೀನ್ ದಯಾಳರಿಗೆ ಆಗ ಇಪ್ಪತ್ತನಾಲ್ಕು ವರುಷ ವಯಸ್ಸಾಗಿತ್ತು. ಸಾವು ಅವರ ಶೈಶವ, ಕಿಶೋರತ್ವ, ಬಾಲ್ಯ ಹಾಗೂ ಯೌವನಾವಸ್ಥೆಯ ಮನಸ್ಸಿನ ಮೇಲೆ ನಿರಂತರವಾಗಿ ಆಘಾತವನ್ನುಂಟುಮಾಡಿತ್ತು. ಸದಾ ಕಾಲ ಪ್ರಶಂಸಿಲ್ಪಟ್ಟ ಅವರ ಈ ವೈರಾಗ್ಯಪೂರ್ಣ ಜೀವನದಲ್ಲಿ ವಿಧಿಯ ಕ್ರೂರಲೀಲೆಯ ಕೈವಾಡ ಎಷ್ಟರಮಟ್ಟಿಗಿತ್ತೋ ಯಾರಿಗೆ ಗೊತ್ತು?

**ಅಕ್ಷರಶಃ ಅನಿಕೇತನ**

ದೀನ್ ದಯಾಳರು ಅಕ್ಷರಶಃ ಅನಿಕೇತನರಾಗಿದ್ದರು. ಶೈಶವದ ಎರಡೂವರೆ ವರ್ಷಗಳನ್ನು ಅವರು ತಮ್ಮ ತಂದೆಯ ಮನೆಯಲ್ಲಿ ಕಳೆದರು, ಆನಂತರ ಅವರ ಅಲೆಮಾರಿ ಜೀವನ ಆರಂಭವಾಯಿತು. ಅವರು ಎಂದಿಗೂ ತಮ್ಮ ಮನೆಗೆ ಹಿಂದಿರುಗಲಾಗಲಿಲ್ಲ. ಕೌಟುಂಬಿಕ ಕಾರಣಗಳಿಂದ ಅವರು ತಮ್ಮ ತಾತನವರಾದ ಚುನ್ನೀಲಾಲರೊಡನೆ ಇರಲು ಧನಿಕಿಯಾಗೆ ತೆರಳಬೇಕಾಯಿತು. ಚುನ್ನೀಲಾಲರು ತಮ್ಮ ಇಬ್ಬರು ಪುತ್ರರಾದ ನತ್ಥೀಲಾಲ ಹಾಗೂ ಹರಿನಾರಾಯಣರ ಸಾವಿನಿಂದ ಹಾಗೂ ಅನಂತರದಲ್ಲಿ ಅಳಿಯ ಭಗವತೀ ಪ್ರಸಾದ್‌ರ (ದೀನ್ ದಯಾಳರ ತಂದೆ) ಸಾವಿನಿಂದ ಬಹಳ ಕುಸಿದುಹೋಗಿದ್ದರು. ಅವರು ತಮ್ಮ ಕೆಲಸವನ್ನು ಬಿಟ್ಟರು ಹಾಗೂ ತಮ್ಮ ಮನೆ ಗುಡ್ ಕೀ ಮಂಢಈಗೆ ಬಂದರು. ದೀನ್ ದಯಾಳರು ಸಹ ಧನಕಿಯಾ ಗ್ರಾಮದಿಂದ ಗುಡ್ ಕೀ ಮಂಢಈಗೆ ಬಂದರು. ದೀನ್ ದಯಾಳರು ಒಂಬತ್ತು ವರುಷ ವಯಸ್ಸಿನವರಾಗಿದ್ದರೂ ಅವರ ಓದು ಬರಹಕ್ಕೆ ಯಾವುದೇ, ವ್ಯವಸ್ಥೆಯಾಗಿರಲಿಲ್ಲ. ಈಗ ಅವರು ಗಂಗಾಪುರದಲ್ಲಿ ಸಹಾಯಕ ಸ್ಟೇಶನ್ ಮಾಸ್ಟರ್‌ರಾಗಿದ್ದ ತಮ್ಮ ಮಾವನವರಾದ ರಾಧಾರಮಣರ ಬಳಿಗೆ ಬಂದರು. ಅಲ್ಲಿ ಅವರು ನಾಲ್ಕು ವರುಷಗಳ ತನಕ ಇದ್ದರು. ಗಂಗಾಪುರದಲ್ಲಿ ಮುಂದಿನ ಓದಿಗೆ ಅವಕಾಶ ಇರಲಿಲ್ಲ. ಆದುದರಿಂದ ೧೯೨೯ರ ಜೂನ್ ೧೨ರಂದು ಕೋಟಾದ ಒಂದು ಶಾಲೆಗೆ ಸೇರಿಕೊಂಡರು. ಅವರು ಅಲ್ಲಿ 'ಸೆಲ್ಫ್ ಸಪೋರ್ಟಿಂಗ್ ಹೌಸ್'ನಲ್ಲಿ ಇರುತ್ತಿದ್ದರು. ಮೂರು ವರುಷ ಅಲ್ಲಿಯೇ ಇದ್ದರು. ಆನಂತರ ಅವರು ಅಲವರ ಜಿಲ್ಲೆಯ ರಾಜಗಢಕ್ಕೆ ತೆರಳಬೇಕಾಯಿತು. ಅವರ ಮಾವ ರಾಧಾರಮಣರ ಚಿಕ್ಕಪ್ಪನ ಮಗ ನಾರಾಯಣ ಶುಕ್ಲರು ಇಲ್ಲಿ ಸ್ಟೇಶನ್ ಮಾಸ್ಟರ್‌ರಾಗಿದ್ದರು. ದೀನ್ ದಯಾಳರು ಇಲ್ಲಿ ಎರಡು ವರುಷಗಳ ಕಾಲ ಇದ್ದರು. ೧೯೩೪ ರಲ್ಲಿ ನಾರಾಯಣ ಶುಕ್ಲರಿಗೆ ಸೀಕರಕ್ಕೆ ವರ್ಗ ಆಯಿತು. ಒಂದು ವರ್ಷ ಸೀಕರದಲ್ಲಿದ್ದು ಹತ್ತನೆಯ ತರಗತಿಯಲ್ಲಿ ಉತ್ತೀರ್ಣರಾದರು. ಅಲ್ಲಿಂದ ಉಚ್ಚ ಶಿಕ್ಷಣಕ್ಕಾಗಿ ಪಿಲಾನಿಗೆ ತೆರಳಿದರು ಹಾಗೂ ಎರಡು ವರ್ಷಗಳ ಇಂಟರ್ ಮೀಡಿಯಟ್ ಶಿಕ್ಷಣವನ್ನು ೧೯೩೭ರಲ್ಲಿ ಮುಗಿಸಿದರು. ಇದೇ ವರ್ಷ ಬಿ.ಎ. ಶಿಕ್ಷಣಕ್ಕಾಗಿ ಆಗ್ರಾಗೆ ತೆರಳಿದರು. ಇಲ್ಲಿ ರಾಜಮಂಡಿಯಲ್ಲಿ ಒಂದು ಬಾಡಿಗೆ ಮನೆಯಲ್ಲಿದ್ದರು. ಎರಡು ವರುಷಗಳ ಕಾಲ ಇಲ್ಲಿ ಇದ್ದು ೧೯೪೧ರಲ್ಲಿ ತಮ್ಮ ೨೫ನೆಯ ವಯಸ್ಸಿನಲ್ಲಿ ಬಿ.ಟಿ. ಮಾಡಲು ಪ್ರಯಾಗಕ್ಕೆ ಹೊರಟರು. ಇದರಿಂದಾಗಿ ಸಾರ್ವಜನಿಕರ ಜೀವನಕ್ಕೆ ಇವರ ಪ್ರವೇಶವುಂಟಾಯಿತು. ಹೀಗೆ ಅವರು ಓರ್ವ ಅಖಂಡ ಪ್ರವಾಸಿಗಳಾಗಿ ಬಿಟ್ಟರು.

೨೫ನೆಯ ವಯಸ್ಸಿನವರೆಗೂ ದೀನ್ ದಯಾಳ್ ಉಪಾಧ್ಯಾಯರು ರಾಜಸ್ಥಾನ ಹಾಗೂ ಉತ್ತರ ಪ್ರದೇಶದಲ್ಲಿ ಕಡಿಮೆಯೆಂದರೂ ಹನ್ನೊಂದು ಸ್ಥಳಗಳಲ್ಲಿ ಸ್ವಲ್ಪ ಸಮಯದವರೆಗೆ ಇದ್ದರು. ತಮ್ಮ ಮನೆ, ಅನುಕೂಲ ಹಾಗೂ ವಾಸಸ್ಥಳ ಇವುಗಳ ಬಗ್ಗೆ ಜನರಿಗೆ ಮೋಹ ಉಂಟಾಗಬಹುದಾಗಿದೆ. ದೀನ್‌ದಯಾಳರ ಬಾಲ್ಯ ಹೇಗೆ ಕಳೆಯಿತೆಂದರೆ ಇಂತಹ ಯಾವುದೇ ಮೋಹಜಾಲದಲ್ಲಿ ಸಿಲುಕುವ ಸಂಭವ ಇರಲಿಲ್ಲ. ಸಾರ್ವಜನಿಕ ಜೀವನದಲ್ಲಿ ಪಾದಾರ್ಪಣೆ ಮಾಡಿದ ಅನಂತರ, ಜೀವನ ಪರ್ಯಂತ ಮನೆಯಿಲ್ಲದೆ ಓರ್ವ ಪ್ರವಾಸಿಯಾಗಿ ಉಳಿದಿದ್ದರಲ್ಲಿ ಅವರ ಜೀವನದ ಆರಂಭ ಕಾಲದ ಈ ಅನಿಕೇತನ ಸ್ವರೂಪದ ಜೀವನ ನಿಜಕ್ಕೂ ಅವರ ಮನೋಭೂಮಿಕೆಯನ್ನು ರೂಪಿಸಲು ನೆರವಾಗಿರಬಹುದು. ಹೊಸ–ಹೊಸ ಸ್ಥಳ,

ಹೊಸ-ಹೊಸ ಅಪರಿಚಿತರನ್ನು ಭೇಟಿ ಮಾಡುವುದು, ಅವರಲ್ಲಿ ಕೌಟುಂಬಿಕ ಭಾವನೆಯನ್ನು ಉಂಟುಮಾಡುವುದು, ಬಹುಶಃ ಅವರು ತಮ್ಮ ಬಾಲ್ಯದ ಈ ಅನಿಕೇತನ ಅವಸ್ಥೆಯಲ್ಲಿ ಕಲಿತದ್ದಿರಬಹುದು.

## ಮೇಧಾವಿ ವಿದ್ಯಾರ್ಥಿಜೀವನ

ಪರಿಸ್ಥಿತಿಗಳಿಂದಾಗಿ ಒಂಬತ್ತನೇ ವಯಸ್ಸಿನವರೆಗೂ ಅವರ ವಿದ್ಯಾಭ್ಯಾಸಕ್ಕಾಗಿ ಯಾವುದೇ ವ್ಯವಸ್ಥೆ ಮಾಡಲಾಗಲಿಲ್ಲ. ೧೯೨೫ರಲ್ಲಿ ಗಂಗಾಪುರದಲ್ಲಿ ತಮ್ಮ ಮಾವನವರಾದ ರಾಧಾರಮಣರ ಮನೆಗೆ ಬಂದ ಅನಂತರ ಅವರ ವಿದ್ಯಾಭ್ಯಾಸ ಆರಂಭವಾಯಿತು. ಮನೆಯಲ್ಲಿ ಶಾಲೆಗೆ ಹೋಗುವವರು ಯಾರೂ ಇರಲಿಲ್ಲ. ಓದು-ಬರಹದ ವಾತಾವರಣವಿರಲಿಲ್ಲ. ಕೌಟುಂಬಿಕ ಆಪತ್ತುಗಳಿಂದಾಗಿ ಮನೆಯ ಸ್ಥಿತಿ ಬಹಳ ಕಷ್ಟ- ಸಂಕಟಗಳಿಗೆ ಹಾಗೂ ಒತ್ತಡಕ್ಕೆ ಒಳಗಾಗಿತ್ತು. ದೀನದಯಾಳರು ಎರಡನೆಯ ತರಗತಿಯಲ್ಲಿದ್ದರು. ಆಗ ಅವರ ಮಾವನವರಾದ ರಾಧಾರಮಣರ ಆರೋಗ್ಯ ಸ್ಥಿತಿ ಹದಗೆಟ್ಟಿತ್ತು. ದೀನದಯಾಳರು ಮಾವನವರ ಸೇವೆ, ಶುಶ್ರೂಷೆಗಾಗಿ ಅವರೊಡನೆ ಆಗ್ರಾಕ್ಕೆ ಬಂದರು. ಪರೀಕ್ಷೆಗೆ ಕೆಲವೇ ದಿನಗಳು ಇರುವಾಗ ಅವರು ಪುನಃ ಗಂಗಾಪುರಕ್ಕೆ ಬಂದರು. ದೀನದಯಾಳರು ಪರೀಕ್ಷೆಗೆ ಹಾಜರಾದರು ಹಾಗೂ ತರಗತಿಯಲ್ಲಿ ಪ್ರಥಮ ಸ್ಥಾನ ಪಡೆದರು. ಮಾವನವರ ಸೇವೆ ಮಾಡುತ್ತಲೇ ಅವರು ಮೂರು ಹಾಗೂ ನಾಲ್ಕನೆಯ ತರಗತಿಯ ಪರೀಕ್ಷೆಗಳಲ್ಲಿ ಉತ್ತೀರ್ಣರಾದರು. ಈ ಸಮಯದಲ್ಲಿಯೇ ಅವರೊಬ್ಬ ಮೇಧಾವಿ ವಿದ್ಯಾರ್ಥಿಯೆಂಬುದರ ಅರಿವು ಕುಟುಂಬ ಹಾಗೂ ಶಾಲೆಯ ಜನರಿಗೆ ಉಂಟಾಯಿತು.

೫ ರಿಂದ ೭ ರವರೆಗಿನ ವಿದ್ಯಾಭ್ಯಾಸವನ್ನು ಕೋಟಾದಲ್ಲಿ ಮುಗಿಸಿ ಅವರು ಎಂಟನೆಯ ತರಗತಿಗಾಗಿ ರಾಜಗಢಕ್ಕೆ ಬಂದರು. ಅಂಕಗಣಿತದಲ್ಲಿನ ಅವರ ಅದ್ಭುತ ಸಾಮರ್ಥ್ಯದ ಪರಿಚಯ ಇಲ್ಲಿ ಉಂಟಾಯಿತು. ಅವರು ಒಂಬತ್ತನೆಯ ತರಗತಿಯಲ್ಲಿ ಓದುತ್ತಿದ್ದಾಗ ಹತ್ತನೆಯ ತರಗತಿಯ ವಿದ್ಯಾರ್ಥಿಗಳು ಅವರಿಂದ ಗಣಿತವನ್ನು ಕಲಿಯುತ್ತಿದ್ದರು ಎಂದು ಹೇಳಲಾಗುತ್ತದೆ. ಮುಂದಿನ ವರ್ಷವೇ ಅವರ ಮಾವನವರ ಸ್ಥಳ ಬದಲಾವಣೆಯಿಂದಾಗಿ ಸೀಕರಕ್ಕೆ ಹೋಗಬೇಕಾಯಿತು. ಅವರು ತಮ್ಮ ಹತ್ತನೆಯ ತರಗತಿಯ ಪರೀಕ್ಷೆಯನ್ನು ಸೀಕರದ ಕಲ್ಯಾಣ ಹೈಸ್ಕೂಲಿನಲ್ಲಿ ಬರೆದರು. ಅವರು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು ಅದಲ್ಲದೇ ಸಮಸ್ತ ಬೋರ್ಡ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನಗಳಿಸಿದ್ದರು. ಇದಕ್ಕಾಗಿ ಅಂದಿನ ಸೀಕರದ ಮಹಾರಾಜರಾದ ಕಲ್ಯಾಣ ಸಿಂಹರು ಅವರಿಗೆ ಒಂದು ಚಿನ್ನದ ಪದಕವನ್ನು ನೀಡಿದರು; ಅಲ್ಲದೆ ತಿಂಗಳಿಗೆ ೧೦ ರೂ.ಗಳಂತೆ ವಿದ್ಯಾರ್ಥಿವೇತನ ಹಾಗೂ ಪುಸ್ತಕ ಮುಂತಾದವುಗಳ ಸಲುವಾಗಿ ೨೫೦ ರೂ.ಗಳನ್ನು ಪಾರಿತೋಷಕವನ್ನಾಗಿ ನೀಡಿದರು.



ಆ ದಿನಗಳಲ್ಲಿ ಪಿಲಾನಿ ಉನ್ನತ ಶಿಕ್ಷಣದ ಕೇಂದ್ರವಾಗಿತ್ತು. ದೀನ್ ದಯಾಳರು ಇಂಟರ್‌ಮೀಡಿಯೇಟ್‌ನ ಶಿಕ್ಷಣವನ್ನು ಪೂರ್ಣಗೊಳಿಸುವ ಸಲುವಾಗಿ ೧೯೩೫ರಲ್ಲಿ ಪಿಲಾನಿಗೆ ತೆರಳಿದರು. ೧೯೩೭ರಲ್ಲಿ ಇಂಟರ್‌ಮೀಡಿಯೇಟ್ ಬೋರ್ಡ್‌ನ ಪರೀಕ್ಷೆಯಲ್ಲಿ ಕುಳಿತರು ಹಾಗೂ ಇಡೀ ಬೋರ್ಡ್‌ನಲ್ಲಿ ಸರ್ವಪ್ರಥಮ ಸ್ಥಾನ ಪಡೆದದ್ದಲ್ಲದೆ ಎಲ್ಲ ವಿಷಯಗಳಲ್ಲಿ ವಿಶೇಷ ಯೋಗ್ಯತೆಯನ್ನು ಪ್ರದರ್ಶಿಸಿ ಹೆಚ್ಚಿನ ಅಂಕಗಳನ್ನು ಪಡೆದರು. ಇಂತಹ ಉತ್ತಮ ಅಂಕಗಳನ್ನು ಪಡೆದು ಉತ್ತೀಣರಾದ ಬಿರ್ಲಾ ಕಾಲೇಜಿನ ಏಕೈಕ ವಿದ್ಯಾರ್ಥಿ ಇವರಾಗಿದ್ದರು. ಸೀಕರದ ಮಹಾರಾಜರ ಹಾಗೆಯೇ ಘನಶ್ಯಾಮದಾಸ್ ಬಿಡಲಾರವರು ಸಹ ಒಂದು ಚಿನ್ನದ ಪದಕ, ಮಾಹೆಯಾನ ೧೦ ರೂಪಾಯಿಯ ವಿದ್ಯಾರ್ಥಿವೇತನ ಹಾಗೂ ಪುಸ್ತಕಗಳು ಮುಂತಾದ ಖರ್ಚಿನ ಸಲುವಾಗಿ ೨೫೦ ರೂಪಾಯಿಗಳನ್ನು ಅವರಿಗೆ ನೀಡಿದರು.

೧೯೩೯ನೇ ಇಸ್ವಿಯಲ್ಲಿ ಕಾನಪುರದ ಸನಾತನ ಧರ್ಮ ಕಾಲೇಜಿನಿಂದ ಬಿ.ಎ. ಪರೀಕ್ಷೆಯಲ್ಲಿ ಪ್ರಥಮ ಶೇಣಿಯಲ್ಲಿ ಉತ್ತೀರ್ಣರಾದರು. ಆಂಗ್ಲ ಸಾಹಿತ್ಯದಲ್ಲಿ ಎಂ.ಎ. ಪದವಿ ಪಡೆಯುವ ಸಲುವಾಗಿ ಆಗ್ರಾದ ಸೆಂಟ್ ಜಾನ್ಸ್ ಕಾಲೇಜಿನಲ್ಲಿ ಪ್ರವೇಶ ಪಡೆದರು. ಪ್ರಥಮ ವರ್ಷದ ಎಂ.ಎ. ಪರೀಕ್ಷೆಯಲ್ಲಿ ಅವರು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ತಂಗಿಯು ಅಸ್ವಸ್ಥಳಾಗಿದ್ದ ಕಾರಣದಿಂದಾಗಿ ಅವರಿಗೆ ಎಂ.ಎ. ಉತ್ತರಾರ್ಧದ ಪರೀಕ್ಷೆ ಬರೆಯಲಾಗಲಿಲ್ಲ. ಮಾವನವರ ಆಗ್ರಹದಿಂದ ಅವರು ಆಡಳಿತ ಪರೀಕ್ಷೆಗೆ ಕುಳಿತರು, ಉತ್ತೀರ್ಣರಾದರು. ಸಂದರ್ಶನದಲ್ಲಿಯೂ ಆಯ್ಕೆಯಾದರು, ಆದರೆ ಅವರಿಗೆ ಆಡಳಿತಾತ್ಮಕ ಹುದ್ದೆಯಲ್ಲಿ ಯಾವುದೇ ಆಸಕ್ತಿಯಿರಲಿಲ್ಲ. ಹೀಗಾಗಿ ಬಿ.ಟಿ. ಮಾಡಲು ಪ್ರಯಾಗಕ್ಕೆ ತೆರಳಿದರು.

ಅವರ ಈ ಅಧ್ಯಯನದ ತೇಜಸ್ಸು ಸಾರ್ವಜನಿಕ ಜನಜೀವನದಲ್ಲಿ ಕಾಲಿಟ್ಟ ಅನಂತರ ಮತ್ತಷ್ಟು ಪ್ರಖರಗೊಂಡಿತು. ಅವರಲ್ಲಿಯ ಸಾಮಾಜಿಕ ಹಾಗೂ ದಾರ್ಶನಿಕ ಸಾಹಿತ್ಯದ ವಿಶೇಷ ಸೃಜನಶೀಲ ಸಾಮರ್ಥ್ಯದ ಬೀಜ, ಅವರ ವಿದ್ಯಾರ್ಥಿ ಕಾಲದಲ್ಲಿಯೇ ಕಾಣಿಸಿಕೊಳ್ಳುತ್ತದೆ.

## ಸಾಹಸಿ, ಸೇವಾವ್ರತಿ ಹಾಗೂ ಪ್ರಾಮಾಣಿಕ

ದೀನ್ ದಯಾಳರು ಕೇವಲ ಏಳು - ಎಂಟು ವರ್ಷದವರಾಗಿದ್ದರು. ಆಗ ಅವರ ಮನೆಯ ಮೇಲೆ ದರೋಡೆಕೋರರು ಆಕ್ರಮಣ ಮಾಡಿದರು. ಒಬ್ಬ ದರೋಡೆಕೋರನು ಅವರ ಅತ್ತೆಯನ್ನು ತಳ್ಳಿ, ದೀನ್ ದಯಾಳರನ್ನು ಕೆಳಗೆ ಬೀಳಿಸಿ ಅವರ ಎದೆಯ ಮೇಲೆ ಕಾಲಿಟ್ಟು ಮನೆಯಲ್ಲಿನ ಆಭೂಷಣಗಳನ್ನು ಕೇಳಿದನು. ದೀನದಯಾಳರು ಆ ದರೋಡೆಕೋರನ ಕಾಲಿನಡಿಯಿಂದಲೇ ಹೀಗೆ ಹೇಳಿದರು: "ದರೋಡೆಕೋರರು ಸಾಹುಕಾರರ ಹಣವನ್ನು ಲೂಟಿ ಮಾಡಿ

ಬಡವರನ್ನು ರಕ್ಷಿಸುತ್ತಾರೆ ಎಂದು ನಾನು ಸಹ ಕೇಳಿದ್ದೆನು. ಆದರೆ ನೀನು ನನ್ನಂತಹ ಬಡವನನ್ನು ಸಹ ಹೊಡೆಯುತ್ತಿರುವೆ". ದರೋಡೆಕೋರರ ಸರದಾರನ ಮೇಲೆ ಏನೂ ಅರಿಯದ ಬಾಲಕನ ನಿರ್ಭೀಕತೆ ಪ್ರಭಾವ ಬೀರಿತು. ಅವನು ತನ್ನ ದಳದೊಂದಿಗೆ ಅಲ್ಲಿಂದ ಹೊರಟುಹೋದನು.

ದೀನ್ ದಯಾಳರು ಹುಟ್ಟಿ ಬೆಳೆದ ವಾತಾವರಣ ಹೇಗಿತ್ತೆಂದರೆ ಅವರು ವಿದ್ರೋಹಿ ಅಥವಾ ಸಂಯಮಿ ಹಾಗೂ ಸೇವಾ ಮನೋಭಾವಿಯಾಗಬೇಕಾಗಿತ್ತು. ದೀನ್ ದಯಾಳರ ಮೇಲೆ ಮನೋವಿಜ್ಞಾನದ ಎರಡನೆಯ ನಿಯಮ ಪ್ರಭಾವ ಬೀರಿತು. ೧೯೨೭ರಲ್ಲಿ ದೀನ್ ದಯಾಳರು ಕೇವಲ ಹನ್ನೊಂದು ವಯಸ್ಸಿನವರಾಗಿದ್ದಾಗ, ಅವರ ಸೋದರ ಮಾವನವರಾದ ರಾಧಾರಮಣರು ಹಾಸಿಗೆ ಹಿಡಿದರು. ಅವರ ಆರೈಕೆಗೆ ಯಾರೂ ಇರಲಿಲ್ಲ. ಅವರ ಮಾವನವರು ಆಗ್ರಾಕ್ಕೆ ಹಿಂದಿರುಗಬೇಕಾಗಿತ್ತು. ದೀನ್ ದಯಾಳರು ಅವರೊಡನೆ ಆಗ್ರಾಕ್ಕೆ ಹೋಗಿ, ಸೇವಾ–ಸುಶ್ರೂಷೆಯ ಜವಾಬ್ದಾರಿಯನ್ನು ಸ್ವತಃ ವಹಿಸಿಕೊಂಡರು. ತಾಯಿ–ತಂದೆ, ಅಜ್ಜ–ಅಜ್ಜಿ, ಇವರಾರೂ ಇಲ್ಲದಿದ್ದರೂ ತಮ್ಮ ಮಾವನವರ ಕುಟುಂಬದಲ್ಲಿ ಅವರು ಗೌರವಯುತ ಸ್ಥಾನವನ್ನು ಪಡೆಯುವುದರಲ್ಲಿ ಯಶಸ್ವಿಯಾದರು. ಇದರ ಹಿಂದೆ ಇದ್ದುದು ಅವರ ಸೇವಾ ಭಾವನೆಯ ಹಾಗೂ ವಿನಮ್ರತೆಯ ಮಹತ್ವಪೂರ್ಣ ಕೊಡುಗೆ. ರಾಜಗಢದಲ್ಲಿ ಮಾವನವರಾದ ನಾರಾಯಣ ಶುಕ್ಲರೊಡನೆ ಇರಬೇಕಾದಾಗ, ಅವರ ನಾಲ್ವರು ಮಕ್ಕಳ ವಿಷಯದಲ್ಲಿ ದೀನ್ ದಯಾಳರು ಸೋದರ ಸಹಜವಾದ ಸ್ನೇಹ ಹಾಗೂ ಸೇವಾಭಾವವನ್ನು ತೋರಿದರು. ಅವರು ಪಿಲಾನಿಯಲ್ಲಿ ಓದುತ್ತಿರುವಾಗ ಅವರ ಮಾವ ರಾಧಾರಮಣರ ಪುತ್ರ ಪ್ರಭುದಯಾಳ ಶುಕ್ಲ ಹಾಗೂ ಅವರ ಸೋದರಮಾವ ಬಾಬುಲಾಲರ ಪುತ್ರ ಕಾಮೇಶ್ವರನಾಥ ಹಾಗೂ ರಾಮೇಶ್ವರನಾಥರನ್ನು ಪಿಲಾನಿಯಲ್ಲಿ ತಮ್ಮೊಡನೆ ಇರಿಸಿಕೊಂಡು ಓದಿಸಿದರು ಹಾಗೂ ಅವರಿಗೆ ಅಲ್ಲಿ ಎಲ್ಲ ರೀತಿಯ ವ್ಯವಸ್ಥೆಯನ್ನೂ ಮಾಡಿಕೊಟ್ಟರು.

ತಮ್ಮ ತಮ್ಮನಾದ ಶಿವದಯಾಳರನ್ನು ಬಹುಕಾಲ ನೋಡಿಕೊಳ್ಳುವ ಅವಕಾಶ ಅವರಿಗೆ ಸಿಗಲಿಲ್ಲವಾದರೂ, ತಮ್ಮ ಸಹೋದರನ ಬಗೆಗಿನ ಸೇವೆ ಮತ್ತು ಸ್ನೇಹದ ಜವಾಬ್ದಾರಿ ಅವರಿಗೆ ಸದಾ ನೆನಪಿರುತ್ತಿತ್ತು. ಅವನು ಖಾಯಿಲೆ ಬಿದ್ದಾಗ ದೀನ್ ದಯಾಳರು ದಣಿವರಿಯದೆ ಸೇವೆ ಮಾಡಿದರು. ಇದೇ ರೀತಿ ೧೯೪೦ ರಲ್ಲಿ ತಮ್ಮ ಸೋದರ ಮಾವನ ಮಗಳಾದ ರಾಮಾದೇವಿ ಖಾಯಿಲೆ ಬಿದ್ದಾಗಲೂ, ಅವಳ ಸೇವೆ ಮಾಡುವ ಸಲುವಾಗಿ ತಮ್ಮ ಎಂ.ಎ. ಓದುವುದನ್ನು ಬಿಟ್ಟಿದ್ದಲ್ಲದೇ, ಇನ್ನು ಆರೈಕೆಯಿಂದ ಯಾವುದೇ ಪ್ರಯೋಜನವಿಲ್ಲವೆಂದು ಡಾಕ್ಟರರು ಹಾಗೂ ವೈದ್ಯರು ಹೇಳಿದರೂ, ಸ್ವತಃ ಅಧ್ಯಯನ ಮಾಡಿ ಅವಳಿಗೆ ನಿಸರ್ಗೋಪಚಾರ ನೀಡಿದರು; ಆದರೆ ಅವಳನ್ನೂ ಉಳಿಸಿಕೊಳ್ಳಲಾಗಲಿಲ್ಲ.



ರಾಜಗಢ ಹಾಗೂ ಸೀಕರದಲ್ಲಿ ಅವರ ಅಧ್ಯಯನ ಸಾಮರ್ಥ್ಯದ ಕೀರ್ತಿ ಎಲ್ಲಡೆ ಹರಡಿತ್ತು. ಆದರೆ ಇದರಿಂದಾಗಿ ಅವರು ಅಹಂಕಾರಿಯಾಗಲಿಲ್ಲ. ಓದಿನಲ್ಲಿ ಹಿಂದೆ ಬಿದ್ದಿದಂಥ ವಿದ್ಯಾರ್ಥಿಗಳ ಬಗ್ಗೆ ಮನಸ್ಸಿನಲ್ಲಿ ಸಹಾನುಭೂತಿ ಮೂಡಿತು. ಪಿಲಾನಿಯಲ್ಲಿ ದುರ್ಬಲ ವಿದ್ಯಾರ್ಥಿಗಳನ್ನು ಓದಿಸುವ ಸಲುವಾಗಿ ಅವರು 'ಜೀರೋ ಅಸೋಸಿಯೇಶನ್' ಅನ್ನು ಸ್ಥಾಪಿಸಿದರು. ಅದರಲ್ಲಿ ದುರ್ಬಲ ವಿದ್ಯಾರ್ಥಿಗಳಿಗೆ ಬೋಧಿಸುವ ವ್ಯವಸ್ಥೆ ಮಾಡಲಾಗಿತ್ತು. ದೀನ್ ದಯಾಳರು ಯಾವುದೇ ಕುಚೇಷ್ಟೆ ಮಾಡುವಂತಹ ಅಥವಾ ಅವುಗಳನ್ನು ಸಹಿಸುವಂತಹ ಸ್ಥಿತಿಯಲ್ಲಿರಲಿಲ್ಲ. ಆದರೂ ಬಾಲ್ಯದ ಸಹಜ ಚಾಂಚಲ್ಯ ಅವರಲ್ಲಿ ಇದ್ದೇ ಇದ್ದಿತು. ಆದರೆ ಒಮ್ಮೆ ಯಾರಾದರೂ ಅವರನ್ನು ತಡೆದಲ್ಲಿ ಅವರು ಪುನಃ ಅಂತಹ ಯಾವುದೇ ಘಟನೆ ಮರುಕಳಿಸಿದಂತೆ ನೋಡಿಕೊಳ್ಳುತ್ತಿದ್ದರು. ಅವರ ಸೋದರಮಾವನ ಮಗ ಹಾಗೂ ಅತ್ತೆ ಇಂದಿಗೂ ಅವರ ಈ ಸ್ವಭಾವವನ್ನು ನೆನಪಿಸಿಕೊಳ್ಳುತ್ತಾರೆ. ಆದುದರಿಂದ ಯಾವ ಪರಿಸ್ಥಿತಿಯಿತ್ತೋ, ಅದರಲ್ಲಿ ಅವರ ಚಂಚಲತೆಯು ಉಪದ್ರವಕಾರಿಯಾಗುವ ಯಾವುದೇ ಸಂಭವ ಇರಲಿಲ್ಲ.

ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ದೀನ್ ದಯಾಳ್ ಉಪಾಧ್ಯಾಯರು ತಾತ ದೇಶಮುಖರವರೊಡನೆ ಇರುತ್ತಿದ್ದರು. ಅವರ ಸ್ವಭಾವ ಸಹಜ ಪ್ರಾಮಾಣಿಕತೆಯನ್ನು ವ್ಯಕ್ತಪಡಿಸುವಂತಹ ಘಟನೆಯನ್ನು ಅವರ ತಾತನವರು ಹೀಗೆ ಹೇಳುತ್ತಾರೆ:

"ಒಂದು ದಿನ ಬೆಳಗ್ಗೆ ಎದ್ದು ನಾವಿಬ್ಬರೂ ತರಕಾರಿ ಕೊಳ್ಳಲು ಮಾರ್ಕೆಟ್‌ಗೆ ಹೋದೆವು. ಎರಡು ಕಾಸಿಗೆ ತರಕಾರಿ ಕೊಂಡೆವು. ಹಿಂದಿರುಗಿ ಮನೆ ತಲುಪುವಾಗ ದೀನ್ ದಯಾಳರು ಒಮ್ಮೆಲೇ ನಿಂತುಬಿಟ್ಟರು, ಅವರು "ತಾತ ತುಂಬಾ ಏರುಪೇರಾಗಿದೆ" ಎಂದರು. ಏನೆಂದು ನಾನು ಕೇಳಿದಾಗ ಅವರು ಹೀಗೆಂದರು, "ನನ್ನ ಜೇಬಿನಲ್ಲಿ ನಾಲ್ಕು ಕಾಸು ಇತ್ತು. ಅದರಲ್ಲಿ ಒಂದು ಕಾಸು ನಕಲಿಯಾಗಿತ್ತು. ಅದೇ ಕಾಸನ್ನು ನಾನು ಆ ತರಕಾರಿ ಮಾರುವವಳಿಗೆ ಕೊಟ್ಟುಬಿಟ್ಟಿದ್ದೇನೆ. ನನ್ನ ಜೇಬಿನಲ್ಲಿರುವ ಉಳಿದೆರಡು ನಾಣ್ಯಗಳು ಚೆನ್ನಾಗಿವೆ. ಅವಳು ಏನೆಂದುಕೊಳ್ಳುತ್ತಿದ್ದಾಳೋ? ಈಗಲೇ ಅವಳಿಗೆ ಸರಿಯಾದ ನಾಣ್ಯ ಕೊಟ್ಟು ಬರೋಣ, ನಡೆಯಿರಿ".

ಅವರ ಮುಖದ ಮೇಲೆ ಅಪರಾಧವೆಸಗಿದಂಥ ಭಾವ ಮೂಡಿಬಂದಿತ್ತು. ನಾವು ಮರಳಿ ತರಕಾರಿ ಮಾರುವವರ ಬಳಿಗೆ ಹೋದೆವು. ಅವಳಿಗೆ ನಿಜವನ್ನು ಹೇಳಿದಾಗ ಅವಳು ಹೀಗೆ ಹೇಳಿದಳು, "ನಿನ್ನ ಆ ನಕಲಿ ಕಾಸನ್ನು ಯಾರು ಹುಡುಕುತ್ತಾರೆ? ಇರಲಿ ಬಿಡು, ನೀ ಹೋಗು." ಆದರೆ ದೀನ್ ದಯಾಳರು ಒಪ್ಪಲಿಲ್ಲ. ಅವರು ಆ ಮುದುಕಿಯ ನಾಣ್ಯಗಳ ರಾಶಿಯಲ್ಲಿ ತಮ್ಮ ನುಣುಪಾದ ಕಪ್ಪನೆಯ ಹಾಗೂ ಸವೆದ ನಾಣ್ಯವನ್ನು ಹುಡುಕಿ ತೆಗೆದರು. ಅದಕ್ಕೆ ಬದಲಾಗಿ

ತಮ್ಮ ಜೇಬಿನಲ್ಲಿದ್ದ ಮತ್ತೊಂದು ನಾಣ್ಯವನ್ನು ಆ ಮುದುಕಿಗೆ ನೀಡಿದರು. ಇಷ್ಟಾದ ಮೇಲೆ ಅವರ ಮುಖದಲ್ಲಿ ಸಂತೋಷದ ಭಾವನೆ ಮೂಡಿತು. ಮುದುಕಿಯ ಕಣ್ಣು ತುಂಬಿ ಬಂತು. ಅವಳು, ಮಗು! ನೀನು ಎಷ್ಟು ಒಳ್ಳೆಯವನು? ದೇವರು ನಿನಗೆ ಒಳ್ಳೆಯದು ಮಾಡಲಿ". ಎಂದು ಹೇಳತೊಡಗಿದಳು.

**ವಿದ್ಯಾರ್ಥಿ ಜೀವನ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದೊಡನೆ ಸಂಪರ್ಕ**

ದೀನ್ ದಯಾಳ್ ಉಪಾಧ್ಯಾಯರು ೧೯೩೭ರಲಿ ಬಿ.ಎ. ಓದುವ ಸಲುವಾಗಿ ಕಾನಪುರಕ್ಕೆ ತೆರಳಿದಾಗ, ಅವರ ಸಹಪಾಠಿಗಳಾದ ಬಾಲಾಜೀ ಮಹಾಶಬ್ದೇರವರ ಮೂಲಕ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಪರ್ಕಕ್ಕೆ ಬಂದರು. ಕಾನಪುರದಲ್ಲಿ ಸಂಘದ ಸಂಸ್ಥಾಪಕರಾಗಿದ್ದ ಡಾ॥ ಹೆಡ್ಗೇವಾರ್‌ರ ಅವರ ಪರಿಚಯವಾಯಿತು. ಶ್ರೀ ಬಾಬಾ ಸಾಹೇಬ್ ಆಪ್ಟೆ ಹಾಗೂ ದಾದಾರಾವ್ ಪರಮಾರ್ಥರು ಇವರ ವಿದ್ಯಾರ್ಥಿನಿಲಯದಲ್ಲಿಯೇ ಇರುತ್ತಿದ್ದರು. ದೀನ್ ದಯಾಳರು ಅವರನ್ನು ತಮ್ಮ ಶಾಖೆಗೆ ಆಮಂತ್ರಿಸಿ 'ಬೌದ್ಧಿಕ ಶಿಕ್ಷಣ'ವನ್ನು ಏರ್ಪಡಿಸಿದರು. ಕಾನ್‌ಪುರದಲ್ಲಿ ಸುಂದರಸಿಂಹ ಭಂಡಾರಿ ಅವರೂ ಅವರ ಸಹಪಾಠಿಗಳಾಗಿದ್ದರು. ಕಾನ್‌ಪುರದ ಈ ವಿದ್ಯಾರ್ಥಿ ಜೀವನದಿಂದಲೇ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರ ಸಾರ್ವಜನಿಕ ಜೀವನ ಆರಂಭಗೊಂಡಿತು.

೧೯೩೭ರ ಅನಂತರ ೧೯೪೧ರವರೆಗೂ ಅವರು ವಿದ್ಯಾರ್ಥಿಯಾಗಿದ್ದರು. ೧೯೪೧ರಲ್ಲಿ ಪ್ರಯಾಗದಿಂದ ಬಿ.ಟಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆದರೆ ಅವರು ನೌಕರಿ ಮಾಡಲಿಲ್ಲ, ಗೃಹಸ್ಥರಾಗಲಿಲ್ಲ. ಕಾನ್‌ಪುರ ಹಾಗೂ ಪ್ರಯಾಗದ ಅಧ್ಯಯನದ ಸಮಯದಲ್ಲಿ ಅವರು ನಾಗಪುರದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಆಯೋಜಿಸಲ್ಪಟ್ಟಿದ್ದ ೪೦ ದಿನಗಳ ಸಂಘ ಶಿಕ್ಷಣ ವರ್ಗದಲ್ಲಿ (ತರಬೇತಿ) ಮೊದಲನೆಯ ವರ್ಷ (ಅಂದರೆ ೧೯೩೯ರಲ್ಲಿ) ಹಾಗೂ ಎರಡನೆಯ ವರ್ಷ (೧೯೪೨ರಲ್ಲಿ) ತರಬೇತಿಯನ್ನು ಪಡೆದುಕೊಂಡರು.

ಸಂಘದ ದೈಹಿಕ ವ್ಯಾಯಾಮದ ಕಾರ್ಯಕ್ರಮಗಳನ್ನು ಸರಿಯಾದ ರೀತಿಯಲ್ಲಿ ಮಾಡಲು ದೀನ್ ದಯಾಳ್ ಉಪಾಧ್ಯಾಯರಿಗೆ ಸಾಧ್ಯವಾಗುತ್ತಿರಲಿಲ್ಲ. ಆದರೆ ಬೌದ್ಧಿಕ ಪರೀಕ್ಷೆಯಲ್ಲಿ ಅವರು ಮೊದಲಿಗರಾಗುತ್ತಿದ್ದರು. ಈ ಕುರಿತು ಶ್ರೀ ಬಾಬಾ ಸಾಹೆಬ ಆಪ್ಟೆ ಹೀಗೆ ಬರೆಯುತ್ತಾರೆ: "ಪಂಡಿತ ದೀನ್ ದಯಾಳ್ ಉಪಾಧ್ಯಾಯರು ಉತ್ತರ ಪತ್ರಿಕೆಯಲ್ಲಿ ಬಹಳಷ್ಟು ಅಂಶಗಳನ್ನು ಪದ್ಯಬದ್ಧವಾಗಿ ಬರೆದಿದ್ದರು, ಆದರೆ ಅದು ಕೇವಲ ಪ್ರಾಸವಾಗಿರಲಿಲ್ಲ ಅಥವಾ ಕೇವಲ ಕಾಲ್ಪನಿಕ ವಿಚಾರವಾಗಿರಲಿಲ್ಲ. ಗದ್ಯಕ್ಕೆ ಬದಲಾಗಿ ಪದ್ಯದ ಮಾಧ್ಯಮವನ್ನು ಅಳವಡಿಸಿ ಹೇಳಲಾಗಿತ್ತು. ಅವರ ವಿವೇಚನೆ ಬಹಳ ತೂಕದ ಸಂತುಲಿತ ಶಬ್ದಗಳಲ್ಲಿರುತ್ತಿತ್ತು. ಹಾಗೂ ತರ್ಕಬದ್ಧವಾಗಿರುತ್ತಿತ್ತು. ಅವರ ಪ್ರಭಾವಕ್ಕೊಳಗಾಗದೆ ಇರಲು ನನ್ನಿಂದ ಆಗಲಿಲ್ಲ."



ತಮ್ಮ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಲು ಹಾಗೂ ಸಂಘದ ಎರಡನೆಯ ವರ್ಷದ ತರಬೇತಿ ಪಡೆದ ಅನಂತರ, ಪಂಡಿತ ದೀನ್ ದಯಾಳ್ ಉಪಾಧ್ಯಾಯರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಆಜೀವನ ಪ್ರಚಾರಕರಾದರು. ಸಂಘದ ಮಾಧ್ಯಮದಿಂದಲೇ ಅವರು ರಾಜನೀತಿಗೆ ಬಂದರು, ಭಾರತೀಯ ಜನಸಂಘದ ಕಾರ್ಯದರ್ಶಿಯಾದರು, ಅಧ್ಯಕ್ಷರಾದರು ಹಾಗೂ ಒಂದು ಸಂಪೂರ್ಣ ರಾಜನೈತಿಕ ವಿಚಾರಧಾರೆಯ ಪ್ರವರ್ತಕರಾದರು.

## ಅಧ್ಯಾಯ ೨

# ರಾಷ್ಟ್ರೀಯ ಸ್ವಯಂಸೇವಕ ಸಂಘದೊಡನೆ ಸಂಬಂಧ

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಮಹತ್ವಪೂರ್ಣ ಅವಧಿಯಲ್ಲಿ ದೀನ್ ದಯಾಳ್ ಉಪಾಧ್ಯಾಯರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಪರ್ಕಕ್ಕೆ ಬಂದರು. ೧೯೩೭ರ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತು. ಮುಸ್ಲಿಂ ಲೀಗ್ ಹಾಗೂ ಕಾಂಗ್ರೆಸ್ಸಿನ ನಡುವೆ ಆಗಿದ್ದ ಒಪ್ಪಂದ ಮುರಿಯಿತು. ಮುಸ್ಲಿಂ ಲೀಗ್‌ನ ನಾಯಕ ಖಾಲಿಕ್ ಅಜುಮಾ ಅವರು ಕೋಪಗೊಂಡು ಹೇಳಿದರು. "ನಾವು ಜೊತೆಗೂಡಿ ರಾಜ್ಯವನ್ನಾಳಲು ಸಾಧ್ಯವಾಗದೆ ಇದ್ದರೆ, ನಾವು ಸಹಬಾಳ್ವೆ ಮಾಡಲೂ ಆಗುವುದಿಲ್ಲ". ದ್ವಿ–ರಾಷ್ಟ್ರವಾದ ಘೋಷಣೆ ತೀವ್ರಗೊಂಡಿತು. ಧರ್ಮದ ಆಧಾರದ ಮೇಲೆ ಮಾಡಲಾದ ಮತ್ತೊಂದು ರಾಷ್ಟ್ರೀಯತೆಯ ಘೋಷಣೆ ಮುಸಲ್ಮಾನರನ್ನು ಆಕ್ರಮಣಕಾರರನ್ನಾಗಿಸಿತು ಹಾಗೂ ೧೯೪೦ರಲ್ಲಿ ಲಾಹೋರ್ ಅಧಿವೇಶನದಲ್ಲಿ ಪಾಕಿಸ್ತಾನ ನಿರ್ಮಾಣದ ಪ್ರಸ್ತಾಪವನ್ನು ಮುಸ್ಲಿಂ ಲೀಗ್ ಮುಂದೊಡ್ಡಿತು. ಈ ಆಕ್ರಾಮಕ ಪ್ರತ್ಯೇಕತಾವಾದ ಭಾರತದ ಪ್ರತಿಯೊಬ್ಬ ರಾಷ್ಟ್ರವಾದಿಯ ಮನಸ್ಸನ್ನು ಘಾಸಿಗೊಳಿಸಿತು. ಸ್ವಾತಂತ್ರ್ಯ ಚಳುವಳಿಯ ಈ ಪ್ರತ್ಯೇಕತಾವಾದಿ ನಿಲುವಿನಿಂದ ದೀನ್ ದಯಾಳರ ಯುವ ಮನವೂ ಸಹ ನೊಂದಿತು. ಭಾರತದಲ್ಲಿ ದ್ವಿ–ರಾಷ್ಟ್ರವಾದವನ್ನು ಆಧರಿಸಿ ಯಾರು ಹಿಂಸಾಚಾರಿಗಳಾಗಿದ್ದರೋ, ಅವರಿಗೆ ರಾಷ್ಟ್ರೀಯ ಏಕಾತ್ಮಕತೆಯ ಉತ್ತರ ನೀಡಬೇಕಾಗಿತ್ತು. ಸಾಮ್ರಾಜ್ಯವಾದಿ ಆಂಗ್ಲರು ಈ ದ್ವಿ–ರಾಷ್ಟ್ರವಾದೀ ಕೋಮು ಮನೋಭಾವವನ್ನು ಬೆಂಬಲಿಸುವವರಾಗಿದ್ದರು. ದೀನ್ ದಯಾಳ್ ಉಪಾಧ್ಯಾಯರು ಈ ಕೋಮುವಾದವನ್ನು ಆಧರಿಸಿದ ಪ್ರತ್ಯೇಕವಾದ ಹಾಗೂ ದ್ವಿ–ರಾಷ್ಟ್ರವಾದವನ್ನು ತೀವ್ರವಾಗಿ ಪ್ರತಿಭಟಿಸಲು ಇಚ್ಛಿಸಿದರು. ಈ ಸಮಯದಲ್ಲಿ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಪರ್ಕಕ್ಕೆ ಬಂದರು. ಸಂಘದ ಚಟುವಟಿಕೆಗಳು ಅವರ ಮನಸ್ಸಿಗೆ ಹಿಡಿಸಿದವು. ಕಾನ್‌ಪುರದಲ್ಲಿ ಸಹಪಾಠಿಯಾಗಿದ್ದ ಬಾಲಾಜೀ ಮಹಾಶಬ್ದೇ ಅವರು ದೀನ್ ದಯಾಳರನ್ನು ಸಂಘದ ಸಂಪರ್ಕಕ್ಕೆ ಕರೆತಂದರು. ಅಲ್ಲಿ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕರಾದ ಡಾ. ಕೇಶವರಾವ್ ಬಲಿರಾಮ ಹೆಡ್ಗೇವಾರ್ ಅವರನ್ನು ಭೇಟಿಯಾದರು. ಶ್ರೀ ಬಾಬಾ ಸಾಹೇಬ್ ಆಪ್ಟೆ ಹಾಗೂ ದಾದಾರಾವ್ ಪರಮಾರ್ಥ



ಅವರು ಇವರಿದ್ದ ವಿದ್ಯಾರ್ಥಿನಿಲಯದಲ್ಲಿಯೇ ಇರುತ್ತಿದ್ದರು. ಸ್ವಾತಂತ್ರ್ಯವೀರ ವಿನಾಯಕ ದಾಮೋದರ ಸಾವರ್‌ಕರ್ ಕಾನ್‌ಪುರಕ್ಕೆ ಬಂದಾಗ, ದೀನ್ ದಯಾಳ್ ಉಪಾಧ್ಯಾಯರು ಅವರನ್ನು ಸಂಘದ ಶಾಖೆಗೆ ಆಮಂತ್ರಿಸಿ 'ಬೌದ್ಧಿಕ ಶಿಕ್ಷಣ' ಏರ್ಪಡಿಸಿದರು. ಕಾನ್‌ಪುರದಲ್ಲಿಯೇ ಶ್ರೀ ಸುಂದರಸಿಂಹ ಭಂಡಾರಿ ಅವರೂ ಅವರೊಟ್ಟಿಗೆ ಓದುತ್ತಿದ್ದರು.

ರಾಷ್ಟ್ರೀಯ ಸ್ವಯಂಸೇವಕ ಸಂಘವು ಶಿಸ್ತಿನಿಂದ ಕೂಡಿದ ಯುವಕರ ಕ್ರಮಬದ್ಧ ಸಂಘಟನೆಯಾಗಿತ್ತು. ಅಲ್ಲಿ ತರಬೇತಿಯಿಲ್ಲದೇ ಯಾರೇ ಆಗಲಿ ಕಾರ್ಯಕರ್ತನಾಗಲು ಸಾಧ್ಯವಾಗುತ್ತಿರಲಿಲ್ಲ. ಈ ತರಬೇತಿ ಮೂರು ವರ್ಷಗಳದ್ದಾಗಿರುತ್ತಿತ್ತು. ಆ ದಿನಗಳಲ್ಲಿ ಬೇಸಿಗೆ ಬಿಡುವಿನ ಅವಧಿಯಲ್ಲಿ ನಲವತ್ತು ದಿವಸಗಳ ಕಾಲ ಈ ತರಬೇತಿ ಶಿಬಿರ ನಾಗಪುರದಲ್ಲಿ ನಡೆಯುತ್ತಿತ್ತು. ಅದನ್ನು 'ಸಂಘದ ತರಬೇತಿಯ ಶಿಕ್ಷಣ' ಎನ್ನಲಾಗುತ್ತಿತ್ತು. ದೀನ್ ದಯಾಳ್ ಉಪಾಧ್ಯಾಯರು ೧೯೩೯ರಲ್ಲಿ ಪ್ರಥಮ ವರ್ಷದ ಹಾಗೂ ೧೯೪೨ರಲ್ಲಿ ದ್ವಿತೀಯ ವರ್ಷದ ತರಬೇತಿಯನ್ನು ಪಡೆದಉರ. ಆಂಗ್ಲರನ್ನು ಗುಂಡು ಹೊಡೆದು ಸಾಯಿಸುವುದು ಮಾತ್ರ ದೇಶಭಕ್ತಿ ಅಲ್ಲ; ಸ್ವಾತಂತ್ರ್ಯ ಎಂಬುದು ಯಾವುದೇ ಘೋಷಣೆಯ ವಿಷಯವಾಗಿರದೆ, ಸಂಘಟಿತವಾದ ಸಂಸ್ಕಾರವನ್ನುಳ್ಳ ಸಮಾಜವೇ ನಿಜವಾದ ಸ್ವಾತಂತ್ರ್ಯಕ್ಕೆ ಅಧಿಕಾರಿಯಾಗಿರುತ್ತದೆ ಎಂಬುದರ ಅರಿವು ಆ ತರಬೇತಿ ಶಿಬಿರಗಳಿಂದ ಉಂಟಾಯಿತು.

ತಮ್ಮ ಓದು ಬರಹವನ್ನು ಪೂರ್ಣಗೊಳಿಸಿ ಹಾಗೂ ಸಂಘದ ದ್ವಿತಿಯ ವರುಷದ ತರಬೇತಿಯನ್ನು ಪಡೆದ ಅನಂತರ, ದೀನ್ ದಯಾಳ್ ಉಪಾಧ್ಯಾಯರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾದರು. ತಮ್ಮ ಬದುಕಿನುದ್ದಕ್ಕೂ ಅವರು ಸಂಘದ ಪ್ರಚಾರಕರಾಗಿಯೇ ಇದ್ದರು. ೧೯೪೨ ರಿಂದ ೧೯೫೧ ರವರೆಗೆ ಅವರು ಉತ್ತರ ಪ್ರದೇಶದ ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ಅಜೀವ ಪ್ರಚಾರಕರ ಹೊಣೆಗಾರಿಕೆಯನ್ನು ನಿರ್ವಹಿಸಿದರು.

ದೀನ್ ದಯಾಳ್ ಉಪಾಧ್ಯಾಯರ ಈ ನಿರ್ಣಯದಿಂದ ಅವರ ಆತ್ಮೀಯರು ಬಹಳ ಬೇಸರಗೊಂಡರು. ಆಡಳಿತದ ಪರೀಕ್ಷೆಯಲ್ಲಿ ಉತ್ತೀರ್ಣರಾದರೂ ಅವರು ಆಡಳಿತಗಾರರಾಗಿ ಕೆಲಸ ಮಾಡುವುದಕ್ಕೆ ಒಪ್ಪಲಿಲ್ಲ ಎಂಬುದು ಅವರ ಮಾವನವರ ಕೋಪಕ್ಕೆ ಕಾರಣವಾಗಿತ್ತು. ಅಧ್ಯಾಪನ ಕ್ಷೇತ್ರದಲ್ಲಿ ಆಸಕ್ತಿಯಿದ್ದ ಕಾರಣ ಅವರು ಕಾನ್‌ಪುರದಿಂದ ಬಿ.ಟಿ. ಮಾಡಿದ್ದರು. ಆಡಳಿತಗಾರರಾಗಲಿಲ್ಲವಾದರೂ, ದೀನ್ ದಯಾಳರು ಅಧ್ಯಾಪಕ ವೃತ್ತಿಯನ್ನು ಸ್ವೀಕರಿಸಬೇಕು ಎಂಬುದು ಅವರ ಆತ್ಮೀಯರ ಅಪೇಕ್ಷೆಯಾಗಿತ್ತು. ಆದರೆ ದೀನ್ ದಯಾಳರು ಎಂದು ಮನೆ–ಮಠವನ್ನು ತೊರೆದು ಸನ್ಯಾಸಿಯಂತೆ ಸಂಘದ ಆಜೀವ ಪ್ರಚಾರಕರಾದರೋ ಅಂದು ಅವರಿಗೆ ಬಹಳ

ದುಃಖವುಂಟಾಯಿತು. ಉತ್ತರ ಪ್ರದೇಶದ ಲಖೀಂಪುರ ಜಿಲ್ಲೆಯ ಜಿಲ್ಲಾ ಪ್ರಚಾರಕರಾಗಿ ಅವರನ್ನು ನೇಮಿಸಲಾಯಿತು. ಬಿ.ಟಿ.ಯನ್ನು ಪೂರೈಸಿ ದೀನ್ ದಯಾಳರು ತಮ್ಮ ಮಾವನವರ ಮನೆಗೆ ಹೋಗಲಿಲ್ಲ. ೧೯೪೦ರಲ್ಲಿ ಮುಸ್ಲಿಂ ಲೀಗ್ ಪಾಕಿಸ್ತಾನ ನಿರ್ಮಾಣದ ಪ್ರಸ್ತಾವವನ್ನು ಸ್ವೀಕರಿಸಿದ ಬಳಿಕ, ಕೋಮುವಾದಿ ಪ್ರತ್ಯೇಕತಾವಾದದ, ಉನ್ಮಾದ ಹಾಗೂ ಹಿಂಸಾಚಾರ ಹೆಚ್ಚಿತು. ಈ ಬೆಳವಣಿಗೆಯ ಬಗ್ಗೆ ಪ್ರತಿಭಟನೆಯನ್ನು ದೀನ್ ದಯಾಳರ ಮನಸ್ಸು ಬಯಸುತ್ತಿತ್ತು. ಅವರ ಸೋದರ ಮಾವನ ಮಗ ಶ್ರೀ ಬನವಾರಿ ಲಾಲರು ಮನೆಗೆ ಹಿಂದಿರುಗುವಂತೆ ಹೇಳಿ ಪತ್ರ ಬರೆದರು ಹಾಗೂ ಅವರ ಮಾವನವರು ಖಾಯಿಲೆ ಬಿದ್ದಿರುವ ಸಂಗತಿಯನ್ನು ಅದರಲ್ಲಿ ತಿಳಿಸಿದರು. ಆಗ ಅವರು ತಮ್ಮ ಮಾವನವರಿಗೆ ಹೀಗೆಂದು ಬರೆದರು:

"ಮೊನ್ನೆ ನಿಮ್ಮ ಪತ್ರ ದೊರೆಯಿತು. ಅಂದಿನಿಂದಲೇ ನನ್ನ ಆಲೋಚನೆಯಲ್ಲಿ ಭಾವನೆಗಳ ಹಾಗೂ ಕರ್ತವ್ಯಗಳ ನಡುವೆ ದ್ವಂದ್ವ ಯುದ್ಧ ನಡೆಯುತ್ತಿದೆ. ಒಂದೆಡೆ ಭಾವನೆಗಳು ಹಾಗೂ ಮೋಹ ಸೆಳೆಯುತ್ತಿದೆಯಾದರೆ, ಮತ್ತೊಂದೆಡೆ ಹಿರಿಯರ ಆತ್ಮಗಳು ಕರೆನೀಡುತ್ತಿವೆ."

"ನಾನು ಒಂದು ಜಿಲ್ಲೆಯಲ್ಲಿ ಕಾರ್ಯವೆಸಗಬೇಕಾಗಿದೆ. ಹೀಗೆ ಮಾಡುವ ಮೂಲಕ ಮಲಗಿರುವ ಹಿಂದೂ ಸಮಾಜವನ್ನು ಎಚ್ಚರಿಸುವಂಥ ಕಾರ್ಯಕರ್ತರ ಕೊರತೆಯನ್ನು ನಿವಾರಿಸಬೇಕಾಗಿದೆ. ಇಡೀ ಜಿಲ್ಲೆಯಲ್ಲಿ ಕೆಲಸ ಮಾಡುವುದರಿಂದಾಗಿ ಒಂದೇ ಸ್ಥಳದಲ್ಲಿ ಮೂರು–ನಾಲ್ಕು ದಿವಸಗಳಿಗಿಂತ ಹೆಚ್ಚಾಗಿ ಇರಲು ಸಾಧ್ಯವಾಗುವುದಿಲ್ಲ. ಸಮಾಜದ ಹಾಗೂ ದೇಶದ ಕೆಲಸಗಳು ಸಂಘದ ಸ್ವಯಂ ಸೇವಕರ ಪಾಲಿಗೆ ಮೊದಲನೆಯ ಆದ್ಯತೆಯ ಕೆಲಸಗಳಾಗಿರುತ್ತವೆ ಆನಂತರ ತಮ್ಮ ವೈಯಕ್ತಿಕ ಕಾರ್ಯಗಳು. ಆದುದರಿಂದ ಸಮಾಜ ಕಾರ್ಯಕ್ಕಾಗಿ ನನಗೆ ದೊರೆತಿರುವ ಆದೇಶವನ್ನು ನಾನು ಪರಿಶೀಲಿಸಬೇಕಾಗಿದೆ."

ತಮ್ಮ ಈ ಪತ್ರದಲ್ಲಿ ಸಂಘವನ್ನು ಕುರಿತು ಹೀಗೆ ಬರೆಯುತ್ತಾರೆ: "ಸಂಘವನ್ನು ಕುರಿತು ಹೆಚ್ಚು ಮಾಹಿತಿ ನಿಮಗೆ ತಿಳಿಯದ ಕಾರಣ ನೀವು ಹೆದರಿದ್ದೀರಿ. ಇದಕ್ಕೂ ಕಾಂಗ್ರೆಸ್ ಪಕ್ಷಕ್ಕೂ ಯಾವುದೇ ಸಂಬಂಧವಿಲ್ಲ. ಅದು ಇಂದಿನ ಯಾವುದೇ ರಾಜಕಾರಣದಲ್ಲಿ ಭಾಗವಹಿಸುವುದಿಲ್ಲ. ಸತ್ಯಾಗ್ರಹದಲ್ಲಿಯೂ ಪಾಲ್ಗೊಳ್ಳುವುದಿಲ್ಲ. ಸೆರೆಮನೆಗೆ ಹೋಗುವುದರಲ್ಲಿಯೂ ಅದಕ್ಕೆ ನಂಬಿಕೆಯಿಲ್ಲ, ಅದು ಅಹಿಂಸಾವಾದಿಯೂ ಅಲ್ಲ, ಹಿಂಸಾವಾದಿಯೂ ಅಲ್ಲ. ಅದರ ಏಕೈಕ ಕಾರ್ಯವೆಂದರೆ ಹಿಂದೂಗಳ ಸಂಘಟನೆ."

ಸಮಾಜವನ್ನು ಕುರಿತಾದ ತಮ್ಮ ಅಂದಿನ ದೃಷ್ಟಿಕೋನವನ್ನು ಸಹ ಅವರು ಈ ಪತ್ರದಲ್ಲಿ ಸ್ಪಷ್ಟಪಡಿಸುತ್ತಾರೆ: "ಹಿಂದುಸ್ತಾನದಲ್ಲಿಯೇ ತಾವು ನಮ್ಮ ಮಹಾ–ಮಹಾ ವ್ಯಕ್ತಿಗಳನ್ನು ತೆಗೆದುಕೊಳ್ಳಿ. ಇದು ಅವರ ನಿಜವಾದ ಏಳಿಗೆಯೇ? ಮುಸಲ್ಮಾನ



ಗೂಂಡಾಗಳು ಸಮಾಜದ ಈ ಮಹಾ–ಮಹಾ ವ್ಯಕ್ತಿಗಳ ಗೌರವವನ್ನು ಒಂದೇ ಕ್ಷಣದಲ್ಲಿ ಮಣ್ಣುಪಾಲು ಮಾಡುತ್ತಾರೆ ಏಕೆಂದರೆ ಆ ವ್ಯಕ್ತಿಗಳು ಸ್ವಯಂ ಎಷ್ಟೇ ಉನ್ನತ ಮಟ್ಟದವರಾಗಿದ್ದರೂ, ಅವರು ಯಾವ ಸಮಾಜದ ಅಂಗವಾಗಿದ್ದಾರೆಯೋ ಅದು ದುರ್ಬಲವಾಗಿದೆ, ಅಧೋಗತಿಗಿಳಿದಿದೆ, ಶಕ್ತಿಹೀನವಾಗಿದೆ ಹಾಗೂ ಸ್ವಾರ್ಥದಿಂದ ಕೂಡಿದೆ. ......ಸಂದರ್ಭವೊದಗಿದಾಗ ನಿಮಗೆ ಸಮಾಜದ ಸಹಕಾರ ದೊರೆಯುತ್ತದೆ ಎಂಬ ಭರವಸೆ ಇದೆಯೇ? ಇಲ್ಲ. ಏಕೆಂದರೆ ನಮ್ಮ ಸಮಾಜ ಸಂಘಟಿತವಾಗಿಲ್ಲ, ದುರ್ಬಲವಾಗಿದೆ. ಹೀಗಾಗಿ ನಮ್ಮ ಆರತಿಯ ಹೆಸರಿನಲ್ಲಿ ಹಾಗೂ ವಾದ್ಯಗಳ ಹೆಸರಿನಲ್ಲಿ ಹೊಡೆದಾಟಗಳು ಉಂಟಾಗುತ್ತದೆ. ಇದರಿಂದಾಗಿಯೇ ನಮ್ಮ ತಾಯಂದಿರನ್ನು, ಸಹೋದರಿಯನ್ನು ಮುಸಲ್ಮಾನರು ಹಾರಿಸಿಕೊಂಡು ಹೋಗುತ್ತಾರೆ. ಆಂಗ್ಲ ಸಿಪಾಯಿಗಳು ನಿಸ್ಸಂಕೋಚವಾಗಿ ಹಾಡು ಹಗಲೇ ಅವರ ಮೇಲೆ ಅತ್ಯಾಚಾರವೆಸಗುತ್ತಾರೆ ಹಾಗೂ ತಮ್ಮ ಮರ್ಯಾದೆಯನ್ನು ಕುರಿತು ಸಾರಿ ಹೇಳುವ, ಸಮಾಜದಲ್ಲಿ ತಮ್ಮ ಉನ್ನತ ಸ್ಥಾನಮಾನದ ಬಗ್ಗೆ ಬೀಗುವವರು, ಆ ಹೊತ್ತಿನಲ್ಲಿ ಕೇವಲ ಕಣ್ಣು ಬಾಯಿ ಬಿಟ್ಟು ನೋಡುತ್ತಲಿರುತ್ತಾರೆ. ನಾವು ಅದಕ್ಕೆ ಪ್ರತೀಕಾರವನ್ನು ಎಸಗುವುದಿಲ್ಲ. ಹೆಚ್ಚೆಂದರೆ ಪತ್ರಿಕೆಗಳಲ್ಲಿ ಬಿಸಿ–ಬಿಸಿ ಸುದ್ದಿ ನೀಡುತ್ತೇವೆ ಅಥವಾ ಮಹಾತ್ಮರು 'ಹರಿಜನ'ದಲ್ಲಿ ಒಂದು ಲೇಖನವನ್ನು ಬರೆಯುತ್ತಾರೆ. ಹೀಗೇಕೆ? ಹಿಂದೂಗಳಲ್ಲಿ ಇಂತಹ ದುಷ್ಟರನ್ನು ಎದುರಿಸುವಂತಹ ಬಲಿಷ್ಠ ಜನರ ಸಂಖ್ಯೆ ಕಡಿಮೆಯಾಗಿದೆಯೆ?

"ಸಂಘಟನೆಯ ಕೊರತೆಯೇ ನಮ್ಮ ವಿನಾಶಕ್ಕೆ ಕಾರಣವಾಗಿ, ಉಳಿದ ಕೆಡುಕುಗಳು– ಅನಕ್ಷರತೆ ಮುಂತಾದವು– ಕೇವಲ ಭ್ರಷ್ಟಾವಸ್ಥೆಯ ಲಕ್ಷಣಗಳಾಗಿವೆ. ಇನ್ನು ವೈಯಕ್ತಿಕ ಕೀರ್ತಿ ಹಾಗೂ ಯಶಸ್ಸಿನ ವಿಷಯಕ್ಕೆ ಬಂದರೆ ನಿಮಗೆಲ್ಲ ಗೊತ್ತಿರುವ ಸಂಗತಿಯೆಂದರೆ ಗುಲಾಮಗಿರಿಗೆ ಕೀರ್ತಿ ಹಾಗೂ ಯಶಸ್ಸು ಎಲ್ಲಿಯಾದರೂ ದೊರೆಯುವುದುಂಟೆ?"

ಯುವಕರಾಗಿದ್ದಾಗಲೇ ಇತಿಹಾಸದ ಯಾವ ಸ್ರೋತದಿಂದ ತಮ್ಮ ಕಾರ್ಯಕ್ಕೆ ಪ್ರೇರಣೆ ದೊರೆಯಿತೋ ಅದನ್ನು ಕುರಿತು ಸಹ ಅವರು ಈ ಪತ್ರದಲ್ಲಿ ಬರೆಯುತ್ತಾರೆ:

"ಯಾವ ಸಮಾಜ ಹಾಗೂ ಧರ್ಮದ ರಕ್ಷಣೆಗಾಗಿ ರಾಮನು ವನವಾಸವನ್ನು ಸಹಿಸಿದನೋ, ಕೃಷ್ಣನು ಅನೇಕಾನೇಕ ಕಷ್ಟಗಳನ್ನು ಎದುರಿಸಿದನೋ, ರಾಣಾಪ್ರತಾಪ್ ಕಾಡುಮೇಡುಗಳಲ್ಲಿ ಅಲೆದಾಡಿದನೋ, ಶಿವಾಜಿ ತನ್ನ ಸರ್ವಸ್ವವನ್ನು ಅರ್ಪಿಸಿದನೋ, ಗುರು ಗೋವಿಂದರ ಚಿಕ್ಕ–ಚಿಕ್ಕ ಮಕ್ಕಳನ್ನು ಜೀವಂತವಾಗಿ ಕೋಟೆಯ ಗೋಡೆಗಳಲ್ಲಿ ಹೂತು ಹಾಕಲಾಯಿತೋ ಆ ಸಮಾಜಕ್ಕಾಗಿ ಹಾಗೂ ಧರ್ಮಕ್ಕಾಗಿ ನಾವು ನಮ್ಮ ಜೀವನದ ಆಕಾಂಕ್ಷೆಗಳನ್ನು ಸುಳ್ಳು ಆಕಾಂಕ್ಷೆಗಳನ್ನು ತೊರೆಯಲು ಆಗುವುದಿಲ್ಲವೇ?"

ಅವರು ತಮ್ಮ ಸಹೋದರನಿಗೆ ಬರೆದ ಮತ್ತೊಂದು ಪತ್ರ ಬಹಳ

ಭಾವನಾತ್ಮಕವಾಗಿದೆ. ಅದರಲ್ಲಿ ಸಂಘದ ಕಾರ್ಯಗಳ ಬಗೆಗಿನ ಅವರ ಒಲವು, ತ್ಯಾಗ ಮಾಡಬೇಕೆಂಬ ಮಹತ್ತರ ಪ್ರೇರಣೆ ಹಾಗೂ ಕೌಟುಂಬಿಕ ಮೋಹಗಳನ್ನು ಕುರಿತ ಮನಸ್ಸಿನ ತೊಳಲಾಟ ಕಂಡುಬರುತ್ತದೆ. ಅದರಲ್ಲಿ ಅವರು ಯಾವುದೇ ಸಾಮಾಜಿಕ ಹಾಗೂ ರಾಜಕೀಯ ವಿಷಯಗಳನ್ನು ಪ್ರಸ್ತಾಪ ಮಾಡಿಲ್ಲ.

೧೯೪೨ ರಿಂದ ೧೯೪೫ರವರೆಗೆ ಅವರು ಲಖೀಂಪುರದಲ್ಲಿಯೇ ಪ್ರಚಾರಕರಾಗಿದ್ದರು. ಮೊದಲಿಗೆ ಅವರು ಜಿಲ್ಲೆ ಹಾಗೂ ಅನಂತರ ವಿಭಾಗದ ಕಾರ್ಯಗಳನ್ನು ನೋಡಿಕೊಂಡರು. ಅವರ ಕಾರ್ಯಸಿದ್ಧತೆ, ಸಂಸ್ಕಾರ-ಶಕ್ತಿ ಹಾಗೂ ಬೌದ್ಧಿಕ ತೀಕ್ಷ್ಣತೆಯನ್ನು ನೋಡಿ ೧೯೪೫ರಲ್ಲಿಯೇ ಅವರನ್ನು ಸಮಸ್ತ ಉತ್ತರ ಪ್ರದೇಶದ ಸಹ ಪ್ರಾಂತಪ್ರಚಾರಕರನ್ನಾಗಿ ನೇಮಿಸಲಾಯಿತು. ಅಂದು ಶ್ರೀ ಭಾವೂರಾವ್ ದೇವರಸರು ಉತ್ತರ ಪ್ರದೇಶದ ಪ್ರಾಂತೀಯ ಪ್ರಚಾರಕರಾಗಿದ್ದರು. ದೀನದಯಾಳರ ಸಂಘಟನಾತ್ಮಕ ಪ್ರತಿಭೆ ಹಾಗೂ ಸಂಘದ ಕಾರ್ಯ-ಕಲಾಪಗಳಿಗೆ ಅವರು ನೀಡಿದ ಕೊಡುಗೆಯನ್ನು ಕುರಿತು ಭಾವೂರಾವ್ ಹೀಗೆ ಬರೆಯುತ್ತಾರೆ:

"ಸಂಘದ ಆರಂಭದ ದಿನಗಳಲ್ಲಿ, ಸಂಘದ ಚಟುವಟಿಕೆಗಳು ಕಂಟಕಮಯವಾಗಿದ್ದಂತಹ ಸಂದರ್ಭದಲ್ಲಿ ನೀನು (ಶ್ರೀ ಉಪಾಧ್ಯಾಯರು) ಕಾರ್ಯಕೈಗೊಳ್ಳಲು ಮುಂದಾದೆ. ಅಂದು ಸಂಘದ ಕಾರ್ಯಗಳ ಬಗೆಗಿನ ಅರಿವು ಉತ್ತರ ಪ್ರದೇಶದಲ್ಲಿ ಯಾರಿಗೂ ಇರಲಿಲ್ಲ. ನೀನು ಸ್ವಯಂಸೇವಕನಾಗಿ ಈ ಕಾರ್ಯಭಾರವನ್ನು ನಿನ್ನ ಹೆಗಲ ಮೇಲೆ ಹೊತ್ತುಕೊಂಡೆ. ಉತ್ತರ ಪ್ರದೇಶದಲ್ಲಿ ಸಂಘದ ಕಾರ್ಯಗಳ ಅಡಿಪಾಯದಲ್ಲಿ ನೀನಿರುವೆ. ಇಂದಿನ ಈ ಸಂಘದ ಸ್ವರೂಪ ನಿನ್ನ ಪರಿಶ್ರಮದ, ನಿನ್ನ ಕರ್ತವ್ಯದ ಪರಿಣಾಮವೇ ಆಗಿದೆ. ಅನೇಕ ಕಾರ್ಯಕರ್ತರುಗಳು ನಿನ್ನ ಜೀವನದಿಂದ ಪ್ರೇರಣೆಪಡೆದಿದ್ದಾರೆ. ನೀನು ಬದುಕಿರುವಾಗಲೇ ಈ ಮಾರ್ಗವನ್ನು ಅನುಸರಿಸಲು ಪ್ರತಿಯೊಬ್ಬರನ್ನು ಪ್ರೋತ್ಸಾಹಿಸುತ್ತಿರುವೆ... ಹೇ ಆದರ್ಶ ಸ್ವಯಂಸೇವಕನೇ! ಸಂಘದ ಸಂಸ್ಥಾಪಕರಿಂದ ಆದರ್ಶ ಸ್ವಯಂಸೇವಕನ ಗುಣಗಳ ಬಗೆಗಿನ ಭಾಷಣಗಳನ್ನು ಕೇಳಿದ್ದೆ. ನೀನು ಅದಕ್ಕೆ ಸಾಕ್ಷತ್ ಉದಾಹರಣೆಯಾಗಿರುವೆ. ನೀನು ತೀಕ್ಷ್ಣ ಬುದ್ಧಿಯ, ಅಸಾಮಾನ್ಯ ಕರ್ತವ್ಯದ, ನಿರಹಂಕಾರದ, ನಮ್ರತೆಯ ಮಾದರಿಯಾದೆ".

ರಾಷ್ಟ್ರೀಯ ಸ್ವಯಂಸೇವಕ ಸಂಘ, ಆ ಆರಂಭದ ದಿನಗಳಲ್ಲಿ ಉತ್ತರ ಪ್ರದೇಶದ ವಿಶ್ವವಿದ್ಯಾಲಯದ ಕೇಂದ್ರಗಳಲ್ಲಿ ಹೆಚ್ಚಾಗಿ ಚಿಗುರೊಡೆಯಿತು. ದೀನ್ ದಯಾಳ್ ಉಪಾಧ್ಯಾಯರೇ ಬಹುಮಟ್ಟಿಗೆ ಇದಕ್ಕೆ ಕಾರಣರಾಗಿದ್ದರು. ಮಹಾತ್ಮಾಗಾಂಧೀಜೀ ಅವರ ಹತ್ಯೆಯ ಆನಂತರ ಸಂಘದ ಚಟುವಟಿಕೆಗಳ ಮೇಲೆ ತಡೆಯೊಡ್ಡಿದಾಗ, ದೀನ್ ದಯಾಳ್ ಉಪಾಧ್ಯಾಯರು ಪ್ರಚಾರ ಹಾಗೂ ಸತ್ಯಾಗ್ರಹ ಸಂಚಾಲನೆಯ ಸೂತ್ರಧಾರಿಗಳಾದರು. 'ಪಾಂಚಜನ್ಯ' ಪತ್ರಿಕೆಯನ್ನು



ಸರ್ಕಾರವು ತಡೆಹಿಡಿಯಿತು. ದೀನ್ ದಯಾಳರು ತೆರೆಮರೆಯಾಗಿದ್ದೇ 'ಹಿಮಾಲಯ' ಪತ್ರಿಕೆಯನ್ನು ಹೊರತಂದರು. ಇದೇ ಸಮಯದಲ್ಲಿ ಸ್ವಯಂಸೇವಕ ಸಂಘದ ಸಂವಿಧಾನವನ್ನು ರಚಿಸಲಾಯಿತು. ದೀನ್ ದಯಾಳ್ ಉಪಾಧ್ಯಾಯರು ಇದರಲ್ಲಿ ಮಹತ್ವದ ಪಾತ್ರವಹಿಸಿದ್ದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ಕಾರ್ಯಕರ್ತರನ್ನು ರೂಪಿಸಿದ ಮಹತ್ವಪೂರ್ಣ ಸಾಧನವೆಂದರೆ 'ಸಂಘ ಶಿಕ್ಷಣ ವರ್ಗ'. ಈ ತರಗತಿಗಳಲ್ಲಿ ದೀನ್ ದಯಾಳರು ಸ್ವಯಂಸೇವಕರ ವೈಚಾರಿಕ ಶಿಕ್ಷಣಕ್ಕಾಗಿ ದೇಶದ್ಯಾಂತ ಪ್ರವಾಸವನ್ನು ಹಮ್ಮಿಕೊಳ್ಳುತ್ತಿದ್ದರು. ಭಾರತೀಯ ಜನಸಂಘವನ್ನು ಪ್ರವೇಶಿಸಿದ ಆನಂತರವೂ ಅವರ ಈ ಕ್ರಮ ಜಾರಿಯಲ್ಲಿತ್ತು. ಉತ್ತರ ಪ್ರದೇಶದಲ್ಲಿ ಈ ತರಗತಿಗಳ ಪರಂಪರೆಯನ್ನು ಆರಂಭಿಸುವುದರಲ್ಲಿ ಭಾವೂರಾವ್ ದೇವರಸ್, ದೀನ್ ದಯಾಳ್ ಉಪಾಧ್ಯಾಯ ಹಾಗೂ ನಾನಾಜೀ ದೇಶಮುಖ್ ಮುಂತಾದವರು ಮಹತ್ವಪೂರ್ಣ ಪಾತ್ರವಹಿಸಿದ್ದರು. ದೀನ್ ದಯಾಳ್ ಉಪಾಧ್ಯಾಯರು ತಮ್ಮ ವೈಯಕ್ತಿಕ ಸ್ವಭಾವದಿಂದ, ಸರಳ ಹಾಗೂ ಸ್ನೇಹಮಯ ನಡೆವಳಿಕೆಯಿಂದ ಸಂಘದ ಸ್ವಯಂಸೇವಕರಲ್ಲಿ ತುಂಬ ಜನಪ್ರಿಯರಾಗಿದ್ದರು. ಮೌನಸಾಧನೆ ಹಾಗೂ ಖ್ಯಾತಿಯಿಂದ ದೂರವಿರುವ ಸ್ವಭಾವ ದೀನ್ ದಯಾಳ್ ಉಪಾಧ್ಯಾಯರು ತಮ್ಮ ಕಾರ್ಯ-ಕಲಾಪಗಳೊಡನೆ ಸಂಘದ ವಿಚಾರ ಧಾರೆಯ ಪ್ರಚಾರಕ್ಕಾಗಿ ಹಾಗೂ ಜನರಲ್ಲಿ ಅರಿವನ್ನುಂಟುಮಾಡುವುದಕ್ಕಾಗಿ ವಾರಪತ್ರಿಕೆ ಹಾಗೂ ಮಾಸ ಪತ್ರಿಕೆಗಳನ್ನು ಹೊರಡಿಸಲಾರಂಭಿಸಿದರು. ಸಾಮಾನ್ಯವಾಗಿ ಸಂಘಕ್ಕೆ ಯುವಕರೇ ಹೆಚ್ಚಾಗಿ ಬರುತ್ತಿದ್ದರು. ಅವರು ಲಲಿತ ಸಾಹಿತ್ಯದ ಮಾಧ್ಯಮ ಮೂಲಕ ಸಂಘದ ವಿಚಾರ ಧಾರೆಯ ಬಗ್ಗೆ ಅರಿವನ್ನುಂಟುಮಾಡಲು ಇದೇ ಅವಧಿಯಲ್ಲಿಐತಿಹಾಸಿಕ ಪಾತ್ರಗಳಿಂದ ಕೂಡಿದ 'ಸಮ್ರಾಟ್ ಚಂದ್ರಗುಪ್ತ' ಹಾಗೂ 'ಜಗದ್ಗುರು ಶ್ರೀ ಶಂಕರಾಚಾರ್ಯ' ಎಂಬ ಎರಡು ಮಹತ್ವಪೂರ್ಣ ಕೃತಿಗಳನ್ನು ರಚಿಸಿದರು.

## ಅಧ್ಯಾಯ ೩

# ಲೇಖಕ ಹಾಗೂ ಪತ್ರಕರ್ತ

ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿಚಾರಗಳು ರಾಷ್ಟ್ರೀಯತೆಯ ಹಾಗೂ ರಾಷ್ಟ್ರೀಯ ಸ್ವಾತಂತ್ರ್ಯದ ಸಂದರ್ಭದಲ್ಲಿ ಪ್ರಚಲಿತವಾಗಿದ್ದ ಧೋರಣೆಗಳಿಗಿಂತ ಭಿನ್ನವಾಗಿದ್ದುವು. ಸಂಘಕ್ಕೆ ಬರುವ ಕಿಶೋರ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿತ್ತು. ಏಪ್ರಿಲ್ ೧೯೪೬ರ ಸಂಗತಿ: ಒಂದು ಪ್ರಾಂತೀಯ ಸಭೆಯಲ್ಲಿ ಪ್ರಾಂತ ಪ್ರಚಾರಕರಾದ ಭಾವೂರಾವ್‌ರವರು "ನಮ್ಮ ವಿಚಾರಗಳು ಬಾಲ-ಸುಲಭ ಭಾಷೆಯಲ್ಲಿ ಇಲ್ಲ; ವಾಸ್ತವವಾಗಿ ಮಕ್ಕಳ ಸಾಹಿತ್ಯ ಬಹಳ ಆವಶ್ಯಕ ಎಂಬ ಕಳಕಳಿಯನ್ನು ವ್ಯಕ್ತಪಡಿಸಿದರು. ದೀನ್ ದಯಾಳರು ಸುಮ್ಮನೆ ಈ ಮಾತು ಕೇಳಿಸಿಕೊಂಡರು. ಇಡೀ ರಾತ್ರಿ ಅವರು ಬರೆಯುತ್ತಲೇ ಇದ್ದರು. ಬೆಳಗ್ಗೆ ಹಸ್ತಪ್ರತಿಯನ್ನು ಭಾವೂರಾವ್‌ರಿಗೆ ಒಪ್ಪಿಸುತ್ತಾ ಹೀಗೆಂದರು; "ನೋಡಿ, ಈ ಪುಸ್ತಕ ಬಾಲ ಸ್ವಯಂಸೇವಕರಿಗೆ ಹೇಗೆ ಇರುತ್ತದೆ?" ರಾತ್ರಿಯಿಡೀ ಕುಳಿತು ದೀನದಯಾಳರು ಮಕ್ಕಳಿಗಾಗಿ ಒಂದು ಕಾದಂಬರಿ ಬರೆದಿರುವುದನ್ನು ಕಂಡು ಎಲ್ಲರೂ ಆಶ್ಚರ್ಯಚಕಿತರಾದರು. ಅವರ ಈ ಮೊದಲ ಪುಸ್ತಕ 'ಸಮ್ರಾಟ್ ಚಂದ್ರಗುಪ್ತ' ಎಂಬ ಹೆಸರಿನಲ್ಲಿ ಪ್ರಕಟಗೊಂಡಿತು.

ಸ್ವಾತಂತ್ರ್ಯ ಪಡೆಯುವ ಸಲುವಾಗಿ ಆ ಸಂದರ್ಭದಲ್ಲಿ ಮಾಡಲಾದ ಪ್ರಯತ್ನಗಳಿಗೆ ಸಂಘದ ಒಪ್ಪಿಗೆಯಿರಲಿಲ್ಲ. ಅವರು ಅದರಲ್ಲಿ ನೀತಿಪರತೆಯ ಹಾಗೂ ವೀರತ್ವದ ಕೊರತೆಯನ್ನು ಕಾಣುತ್ತಿದ್ದರು. 'ಸಮ್ರಾಟ್ ಚಂದ್ರಗುಪ್ತ' ಕಾದಂಬರಿಯಲ್ಲಿ ಐತಿಹಾಸಿಕ ಪಾತ್ರಗಳಾದ ಚಂದ್ರಗುಪ್ತ ಹಾಗೂ ಚಾಣಕ್ಯರ ಮೂಲಕ ದೀನ್ ದಯಾಳ್ ಉಪಾಧ್ಯಾಯರು ಪರಾಕ್ರಮ ಹಾಗೂ ರಣನೀತಿಯ ಕೌಶಲಗಳಿಂದ ಕೂಡಿದ ಸ್ವಾತಂತ್ರ್ಯ ಪ್ರಯತ್ನಗಳೆಡೆ ಕಿಶೋರ ಹೃದಯಗಳನ್ನು ಪ್ರವೃತ್ತರನ್ನಾಗಿಸುವ ಪ್ರಯತ್ನಮಾಡಿದರು. ಈ ದಿಕ್ಕಿನಲ್ಲಿ ಅವರು ತಮ್ಮ ಪ್ರಯತ್ನದಲ್ಲಿ ಸಫಲರಾದರು ಎನ್ನಬಹುದಾಗಿದೆ. ತಮ್ಮ ಮನಸ್ಸಿನಲ್ಲಿದ್ದ ವಿಚಾರಗಳನ್ನು ಅವರು ಈ ಪುಸ್ತಕದಲ್ಲಿ ಬಹಳ ಸುಂದರವಾಗಿ ಪ್ರತಿಪಾದನೆ ಮಾಡಿದ್ದಾರೆ. ಕಥಾಪ್ರವಾಹ ಎಷ್ಟು ಪ್ರಖರಗೊಂಡಿದೆಯೆಂದರೆ ಒಮ್ಮೆ ಪುಸ್ತಕ ಓದಲು ಆರಂಭ ಮಾಡಿದರೆ, ಅದನ್ನು ಸಂಪೂರ್ಣವಾಗಿ ಓದಿ ಮುಗಿಸುವ ಒಲವು ಮೂಡುತ್ತದೆ. ವೈಚಾರಿಕ ಹಾಗೂ ದಾರ್ಶನಿಕ ಸಂಗತಿಗಳಿಂದ ಪುಸ್ತಕವನ್ನು ಹೊರೆಯನ್ನಾಗಿಸಿಲ್ಲ. ಭಾವಗಳ ಪ್ರಖರತೆ, ಭಾಷೆಯ ಲಾಲಿತ್ಯ ಹಾಗೂ ಕಥಾ ಪ್ರವಾಹ ಈ ಕೃತಿಯ



ವೈಶಿಷ್ಟ್ಯಗಳಾಗಿವೆ.

'ಮನೋಗತ'ದಲ್ಲಿ ದೀನ್ ದಯಾಳ್ ಉಪಾಧ್ಯಾಯರು ಹೀಗೆ ಬರೆಯುತ್ತಾರೆ: "ಯಾರಿಗಾಗಿ ಈ ಪುಸ್ತಕವನ್ನು ಬರೆಯಲಾಗಿದೆಯೋ ಅವರನ್ನು ಎಲ್ಲ ರೀತಿಯ ಐತಿಹಾಸಿಕ ತಥ್ಯಗಳ ಕಾಡಿನಲ್ಲಿ ಕರೆದೊಯ್ಯುವ ಅಗತ್ಯವಿಲ್ಲ. ಯುರೋಪಿಯನ್ ವಿದ್ವಾಂಸರು ಪ್ರಯತ್ನಪೂರ್ವಕವಾಗಿ ಹಾಗೂ ಅವರನ್ನು ಕಣ್ಣುಮುಚ್ಚಿ ಅನುಸರಿಸುವ ಭಾರತೀಯ ವಿದ್ವಾಂಸರು ಅರಿವಿಲ್ಲದೇ ಅವರಲ್ಲಿ ಹರಡಿರುವ ಕತ್ತಲನ್ನು ದೂರಗೊಳಿಸುವಂತಹ ಐತಿಹಾಸಿಕ ಸಂಶೋಧನೆಯ ಬೆಳಕಿನಲ್ಲಿ ಕಂಡ ನೈಜ ಘಟನೆಗಳು ಇವಾಗಿವೆ."

'ಸಮ್ರಾಟ್ ಚಂದ್ರಗುಪ್ತ' ವಿಶಿಷ್ಟ ವಿಚಾರಗಳಿಂದ ಪರಿಪೂರಿತವಾಗಿರುವ ಕಿಶೋರೋಪಯೋಗಿ ಐತಿಹಾಸಿಕ ಕಾದಂಬರಿ ಶೈಲಿಯಲ್ಲಿ ರಚಿಸಲಾದ ಉತ್ಕೃಷ್ಟ ಸಾಹಿತ್ಯಕ ಕೃತಿಯಾಗಿದೆ. ದೀನ್ ದಯಾಳ್ ಉಪಾಧ್ಯಾಯರು ಈ ಕೃತಿಯನ್ನು ಒಮ್ಮೆಗೇ ಬರೆದಿದ್ದಾರೆ ಎಂದರೆ ಅದು ಅವರ ವಿಶಿಷ್ಟ ಸಾಹಿತ್ಯಕ ಹಾಗೂ ಬೌದ್ಧಿಕ ಸಾಮರ್ಥ್ಯವನ್ನೇ ನಮಗೆ ಪರಿಚಯಿಸಿಕೊಡುತ್ತದೆ. ಸಂದರ್ಭ ಗ್ರಂಥಗಳ ಸಹಾಯವಿಲ್ಲದೇ ಇಂತಹ ಕೃತಿಯ ರಚನೆ ಅವರ ಅಧ್ಯಯನಶೀಲತೆಯ ಮೇಲೆ ಬೆಳಕು ಚೆಲ್ಲುತ್ತದೆ ಹಾಗೂ ಸ್ಮರಣಶಕ್ತಿಯ ವೈಶಿಷ್ಟ್ಯವನ್ನು ವ್ಯಕ್ತಗೊಳಿಸುತ್ತದೆ.

ಮಕ್ಕಳ ಕಾದಂಬರಿಯಾದ 'ಸಮ್ರಾಟ್ ಚಂದ್ರಗುಪ್ತ' ತನ್ನ ಗುರಿಯನ್ನು ತಲುಪುವುದರಲ್ಲಿ ಯಶಸ್ವಿಯಾಗಿತ್ತು. ಇದರಿಂದ ತರುಣರಿಗಾಗಿಯೇ ಇಂತಹುದೇ ಇನ್ನೊಂದು ಪುಸ್ತಕವನ್ನು ಬರೆಯಬೇಕೆಂಬ ಬೇಡಿಕೆಯೂ ಮೂಡಿಬಂದಿತು. ಈ ಬೇಡಿಕೆಯನ್ನು ಪೂರೈಸುವ ಸಲುವಾಗಿ ದೀನದಯಾಳರು 'ಜಗದ್ಗುರು ಶಂಕರಾಚಾರ್ಯ' ಎಂಬ ಎರಡನೆಯ ಕಾದಂಬರಿಯನ್ನು ಬರೆದರು.

ದೀನ್ ದಯಾಳ್ ಉಪಾಧ್ಯಾಯರ ಈ ಎರಡನೆಯ ಕಾದಂಬರಿಯಲ್ಲಿ ಪಾತ್ರಗಳು ಹಾಗೂ ಘಟನೆಗಳು ಹಳೆಯವಾದರೂ ಭಾವ, ವಿಚಾರ ಹಾಗೂ ಸನ್ನಿವೇಶ ಹೊಸದಾಗಿವೆ. ದೀನ್ ದಯಾಳರು ತಮ್ಮ ಶಾಖೆಯ ಯಾವ ಪದ್ಧತಿಯ ಮೇರೆಗೆ ಸಂಘದ ಕಾರ್ಯವನ್ನು ಮಾಡುತ್ತಿದ್ದರೋ, ಅದಕ್ಕಾಗಿ ಕಾಲವನ್ನು ಮೀಸಲಿಡುವಂತೆ ತರುಣರಿಗೆ ಪ್ರೇರಣೆಯನ್ನು ನೀಡುವುದು, ಅವರಲ್ಲಿ ದೇಶದ ಸಾಂಸ್ಕೃತಿಕ ಗೌರವದ ಬಗ್ಗೆ ಹೆಮ್ಮೆಯನ್ನು ಮೂಡಿಸುವುದು ಹಾಗೂ ಅದಕ್ಕಾಗಿ ತಮ್ಮ ಜೀವನವನ್ನು ಅರ್ಪಿಸುವ ಆಕಾಂಕ್ಷೆಯನ್ನು ಮೂಡಿಸುವುದು ಈ ಕೃತಿಯ ಉದ್ದೇಶವಾಗಿದೆ.

ಅಂದಿನ ಸಮಾಜದಲ್ಲಿ ಬೇರುಬಿಟ್ಟಿದ್ದ ವೈಯಕ್ತಿಕ ಧನಾರ್ಜನೆಯ ಪ್ರವೃತ್ತಿ ಹಾಗೂ ಸಾಮಾಜಿಕ-ಆರ್ಥಿಕ ಕಲ್ಯಾಣದ ವಿಷಯದಲ್ಲಿನ ನಿರ್ಲಕ್ಷ್ಯ ದೀನ್ ದಯಾಳ್ ಉಪಾಧ್ಯಾಯರನ್ನು ಕಾಡುತ್ತಿತ್ತು. ಧರ್ಮವಿರೋಧಿ ವಾಮಪಂಥಿಗಳು ಈ ಸಾಮಾಜಿಕ ದೌರ್ಬಲ್ಯದ ಲಾಭ ಪಡೆದು ಯುವಕರನ್ನು ವಿದ್ರೋಹಿಗಳನ್ನಾಗಿಸುತ್ತಿದ್ದಾರೆ ಎಂಬುದನ್ನು

ಅವರು ಕಂಡಿದ್ದರು. ಹೀಗಾಗಿ ಸಮಾಜದ ಆರ್ಥಿಕ ಕಲ್ಯಾಣದ ಬಗೆಗಿನ ಉಪೇಕ್ಷೆ ಹಾಗೂ ವೈಯಕ್ತಿಕ ಧನಾರ್ಜನೆಯ ಭಾವನೆ– ಇವುಗಳನ್ನು ಸಾಮಾಜಿಕ ವಿಡಂಬನೆ ಎಂಬುದಾಗಿ ಅವರು ತಿಳಿಯಹೇಳಿದರು. ಶಂಕರಾಚಾರ್ಯರು ಓರ್ವ ಬಡವನ ಆರ್ಥಿಕ ದುಃಸ್ಥಿತಿಯನ್ನು ಕಂಡು, ಅವನ ನೆರೆಯ ಸಾಹುಕಾರನ ಬಳಿಗೆ ಭಿಕ್ಷೆಗಾಗಿ ಹೋದಾಗ, .......ಆ ಸಾಹುಕಾರ ಭಿಕ್ಷೆ ನೀಡಲು ತಯಾರಾಗಿ ನಿಂತನು. ಶಂಕರಾಚಾರ್ಯರು ಭಿಕ್ಷೆ ಸ್ವೀಕರಿಸಲು ಕೈಯೊಡ್ಡುವುದಕ್ಕೆ ಬದಲಾಗಿ ಕೈಯನ್ನು ಹಿಂದೆಗೆದುಕೊಂಡರು ಹಾಗೂ ಮುಗುಳ್ನಗೆ ಬೀರುತ್ತ, ಹಾಸ್ಯ ಮಾಡುತ್ತ ಸುಮಧುರ ಶಬ್ದಗಳಲ್ಲಿ ಹೀಗೆಂದರು: "ಯಾರು ತನ್ನ ಸಮಾಜದ ಜನರನ್ನು ತನ್ನವರೆಂದು ಭಾವಿಸಲಾರನೋ, ಯಾರ ಹೃದಯದಲ್ಲಿ ತನ್ನ ಜನರ ಬಗ್ಗೆ ಪ್ರೀತಿಯಿಲ್ಲವೋ, ಅಕ್ಕರೆಯಿಲ್ಲವೋ ಅವರು ನೀಡಿದ ಅನ್ನ ತಿಂದಲ್ಲಿ ಧರ್ಮದ ಬಗ್ಗೆ ಒಲವು ಮೂಡುವುದೇ? ನಿಮ್ಮ ನೆರೆಹೊರೆಯಲ್ಲಿ ಇಷ್ಟೊಂದು ನಿರ್ಗತಿಕ ಕುಟುಂಬದವರಿರುವಾಗ ನೀವು ಸ್ವಂತ ಸುಖ ಹಾಗೂ ವೈಭವದಿಂದ ಮೆರೆಯುತ್ತಿದ್ದು, ನಿಮ್ಮನ್ನು ಸಮಾಜ–ಸೇವಕನೆಂದು ಹೇಳಿಕೊಳ್ಳುವುದು, ಧರ್ಮವನ್ನು ಮೆರೆಸುತ್ತೇನೆಂದು ಹೇಳುವುದು ಎಂತಹ ವಿಡಂಬನೆ?"

ಈ ಕಾದಂಬರಿಯಲ್ಲಿ ಬಣ್ಣಿಸಲಾಗಿರುವ ಐತಿಹಾಸಿಕ ಸನ್ನಿವೇಶದ ಆ ಸಮಯದಲ್ಲಿ ಬೌದ್ಧ ಧರ್ಮದ ಪ್ರಚಾರ–ಪ್ರಸಾರಗಳಿಗೆ ಪ್ರತಿಕ್ರಿಯೆಯಾಗಿ ವೈದಿಕರು ಅತ್ಯಧಿಕ ಕರ್ಮಕಾಂಡಗಳಲ್ಲಿ ನಂಬಿಕೆಯನ್ನುಳ್ಳವರೂ, ಶಾಸ್ತ್ರನಿಷ್ಠರೂ ಆಗಿ ಹೋಗಿದ್ದರು. ಈ ಕರ್ಮಕಾಂಡಗಳ ಬಗ್ಗೆ ತೋರುವ ಅತಿಯಾದ ವಿಶ್ವಾಸ ಹಾಗೂ ಶಾಸ್ತ್ರನಿಷ್ಠೆಯನ್ನು ಶಂಕರಾಚಾರ್ಯರು ವಿರೋಧಿಸಿದರು. ವೈದಿಕ ಧರ್ಮದ ಪ್ರಕಾರ ಮೊದಲು ಬಹ್ಮಚರ್ಯೆ, ಆನಂತರ ಗೃಹಸ್ಥಾಶ್ರಮ, ಅದಾದನಂತರ ವಾನಪ್ರಸ್ಥಾಶ್ರಮ ಹಾಗೂ ಕೊನೆಗೆ ಸಂನ್ಯಾಸಾಶ್ರಮ –ಅಂದರೆ ಲೋಕತ್ಯಾಗದ –ವ್ಯವಸ್ಥೆಯಿದೆ; ಆದರೆ ಶಂಕರಾಚಾರ್ಯರು ಈ ಆಶ್ರಮ ವ್ಯವಸ್ಥೆಯನ್ನು ಅನುಸರಿಸದೇ, ಬೌದ್ಧಧರ್ಮಿಗಳ ಹಾಗೆಯೇ ಯುವಾವಸ್ಥೆಯಲ್ಲಿಯೇ ಸಂನ್ಯಾಸವನ್ನು ಸ್ವೀಕರಿಸಿದರು. ಶಂಕರಾಚಾರ್ಯರು ಸಂನ್ಯಾಸವನ್ನು ಸ್ವೀಕರಿಸುವ ಸಲುವಾಗಿ ತಮ್ಮ ತಾಯಿ ಆರ್ಯಾಂಬಾರೊಡನೆ ನಡೆಸುವ ಸಂಭಾಷಣೆಯನ್ನು, ಶಂಕರಾಚಾರ್ಯರು ದೇಶಪರ್ಯಟನೆ ಮಾಡಿದ ಬಗೆಯನ್ನು ದೀನದಯಾಳರು ಸಂಘದ ಕಾರ್ಯಕರ್ತನು ಸಂಘದ ಕಾರ್ಯ ಕೈಗೊಳ್ಳುವ ಸಲುವಾಗಿ ದೇಶಾಟನೆ ಮಾಡುವ ರೀತಿಯಲ್ಲೇ ವರ್ಣಿಸಿದ್ದಾರೆ. ಮೊಸಳೆ ಕಾಲನ್ನು ಹಿಡಿದುಕೊಳ್ಳುವುದು ಹಾಗೂ ತಾಯಿ ಸಂನ್ಯಾಸಿಯಾಗಲು ಅನುಮತಿಯನ್ನು ನೀಡುವುದು ಈ ಎಲ್ಲ ದೃಶ್ಯಗಳನ್ನೂ, ಸ್ವಯಂಸೇವಕನೊಬ್ಬ ಪ್ರಚಾರಕನಾಗಲು ತಮ್ಮ ಮನೆಯವರನ್ನು ಒಲೈಸುವ ಬಗೆಯಲ್ಲಿಯೇ ವರ್ಣಿಸಲಾಗಿದೆ.

"ಆ ವೇಳೆ ಹಿಂದುಗಳು ಸಂನ್ಯಾಸವನ್ನು ಸ್ವೀಕರಿಸಿ ದೇಶದ ಕಾರ್ಯವನ್ನು ನಿರ್ವಹಿಸುವ ಹಳೆಯ ಆದರ್ಶವನ್ನು ಮರೆತಿದ್ದರು ಮಾತ್ರವಲ್ಲ; ಅದನ್ನು ಕೆಟ್ಟದ್ದು



ಎಂದೂ ಭಾವಿಸುತ್ತಿದ್ದರು." ಏಕೆಂದರೆ ಬೌದ್ಧರು ತಮ್ಮ ಧರ್ಮದಲ್ಲಿ ಸಂನ್ಯಾಸಕ್ಕೆ ಪ್ರಮುಖ ಸ್ಥಾನವನ್ನು ನೀಡಿದ್ದರು. ಆದುದರಿಂದ ಸಾಮಾನ್ಯವಾಗಿ ರೂಢಿಯಲ್ಲಿದ್ದ ಸಂನ್ಯಾಸಧರ್ಮವನ್ನು ಶಂಕರನು ಸ್ವೀಕರಿಸುವುದು ಅವರಿಗೆ (ಆರ್ಯಾಂಬಾ) ಇಷ್ಟವಿರಲಿಲ್ಲ.

ಸಂನ್ಯಾಸ ಎಂದರೆ ವೈರಾಗ್ಯವೆಂಬ ಅರ್ಥವಲ್ಲ, ಸಂಸಾರವನ್ನು ತ್ಯಜಿಸುವುದಲ್ಲ; ಬದಲಿಗೆ ಅದು ದೇಶಸೇವೆಯ ಸಾಮಾಜಿಕ ಕಾರ್ಯವಾಗಿದೆ. ಹಿಂದೂ ಶಾಸ್ತ್ರಗಳಲ್ಲಿ ಈ ವ್ಯವಸ್ಥೆ ಇತ್ತೋ ಅಥವಾ ಇಲ್ಲವೋ, ಆದರೆ ಸಂಘದಲ್ಲಿ ಪ್ರಚಾರಕನು ಗೃಹತ್ಯಾಗ ಮಾಡಿ ಸಾಮಾಜಿಕ ಕಾರ್ಯಕರ್ತನಾಗುತ್ತಾನೆ. ಶಂಕರಾಚಾರ್ಯರು ವೈದಿಕ ಧರ್ಮದ ಇಂತಹ ಪ್ರಥಮ ಸಂನ್ಯಾಸಿಗಳಾಗಿದ್ದರು. ಅವರು ಹೀಗೆ ಹೇಳಿದ್ದಾರೆ: "ನಾವು ನಿಯಮಗಳ ಗುಲಾಮರಲ್ಲ, ಒಡೆಯರು...... ಇಲ್ಲಪ್ಪ, ನಾನು ಕಾಡಿಗೆ ಹೋಗುವುದಿಲ್ಲ. ಸಂನ್ಯಾಸವೆಂದರೆ ಸಂಸಾರವನ್ನು ಬಿಟ್ಟು ಕಾಡಿನಲ್ಲಿ ತಪಸ್ಸು ಮಾಡುವುದೆಂದಲ್ಲ. ನಾನು ಕರ್ಮಸಂನ್ಯಾಸವನ್ನು ಸ್ವೀಕರಿಸಿದ್ದೇನೆ. ಅದರರ್ಥ ಕರ್ಮವನ್ನು ತ್ಯಜಿಸುವುದಲ್ಲ, ಕರ್ಮವನ್ನು ಆಚರಿಸುವುದಾಗಿದೆ. ಸತ್ಯವನ್ನಾಧರಿಸಿದ ಹಾಗೂ ಮನುಷ್ಯನನ್ನು ಕರ್ಮಫಲಬಂಧನಗಳಲ್ಲಿ ಬಂಧಿಸದೆ ಇರುವಂತಹ, ದೇಶಕ್ಕೆ– ಧರ್ಮಕ್ಕೆ ಸಂಬಂಧಿಸಿದ ಕರ್ಮವನ್ನು ಕೈಗೊಳ್ಳುವುದಾಗಿದೆ."

"........ವರ್ಣಾಶ್ರಮ ವ್ಯವಸ್ಥೆ ಸಮಾಜದ ಕಲ್ಯಾಣಕ್ಕಾಗಿ ಸಮಾಜವೇ ನಿರ್ಮಿಸಿದ ವ್ಯವಸ್ಥೆಯಾಗಿದೆ. ನಾವು ರೂಪಿಸಿದ ನಿಯಮಗಳಿಗೆ ನಾವು ಒಡೆಯರೇ ಹೊರತು ಗುಲಾಮರಲ್ಲ".

ಇದಲ್ಲದೆ ಈ ಸಂದರ್ಭದಲ್ಲಿ ಈ ವಾಕ್ಯವನ್ನು ಉಲ್ಲೇಖಿಸಲಾಗಿದೆ:

"........ವ್ಯವಸ್ಥೆ ಹಾಗೂ ನಿಯಮ 'ಸಾಧ್ಯ'ವಲ್ಲ, 'ಸಾಧನ'ಗಳು. 'ಸಾಧ್ಯ'ವನ್ನು ಗಳಿಸುವ ತನಕ ಮಾತ್ರ 'ಸಾಧನ' ಸಹಕಾರಿಯಾಗಿರುತ್ತದೆ. ಕೇವಲ ಹಣೆ ಚಚ್ಚಿಕೊಂಡರೆ ಅದರಿಂದ ಏನು ಲಾಭ?"

ಮೇಲೆ ನೀಡಿದ ಉದಾಹರಣೆಯ ಅಂತಿಮ ಪಂಕ್ತಿಗಳಲ್ಲಿ ಗೋಳ್‌ವಳ್‌ಕರರು ಆತ್ಮೋದ್ಧಾರಕ್ಕಾಗಿ, ಆಧ್ಯಾತ್ಮಿಕ ಸಾಧನೆಗಾಗಿ ಹಿಮಾಲಯಕ್ಕೆ ತೆರಳಬಯಸಿದಾಗ ಡಾ. ಹೆಡ್ಗೇವಾರ್ ಅವರು ಶ್ರೀಗೋಳವಳ್‌ಕರ್‌ರಿಗೆ ಹೇಳಿದಂಥ ಮಾತುಗಳೇ ಧ್ವನಿಸುತ್ತವೆ. ಆಗ ಡಾ. ಹೆಡ್ಗೇವಾರ್‌ರು ಅವರಿಗೆ ಹೀಗೆಂದು ಹೇಳಿದ್ದರು: ತನ್ನ ಆತ್ಮದ ಮುಕ್ತಿಗಾಗಿ ಸಮಾಜವನ್ನು ತೊರೆದು ಸಾಧನೆಯನ್ನು ಕೈಗೊಳ್ಳುವುದು, ತನ್ನ ಕೋಟಿ–ಕೋಟಿ ಸಾಮಾಜಿಕ ಬಂಧುಗಳ ಮುಕ್ತಿಯ ಬಗ್ಗೆ ಆಲೋಚನೆ ಮಾಡದೆ ಕೈಗೊಳ್ಳಲಾದ ವೈಯುಕ್ತಿಕ ಸ್ವಾರ್ಥದ ಕಾರ್ಯವಾಗುವುದಿಲ್ಲವೇ? ಈ ಮಾತುಕತೆಯ ಪರಿಣಾಮವಾಗಿ ಗೋಳ್‌ವಳ್‌ಕರರು ಹಿಮಾಲಯಕ್ಕೆ ತೆರಳುವ ಆಲೋಚನೆಯನ್ನು ಕೈಬಿಟ್ಟರು.

ಸಾಮಾಜಿಕ ಕಾರ್ಯಕರ್ತನ ಹಾಗೂ ಸಾಮಾಜಿಕ ಪರಿಸ್ಥಿತಿಯ ಚಿತ್ರಣವನ್ನು ದೀನ್ ದಯಾಳ್ ಉಪಾಧ್ಯಾಯರು ಬಹಳ ಕೌಶಲದಿಂದ ಮಾಡಿದ್ದಾರೆ. ಅಂತೆಯೇ ಈ ಪುಸ್ತಕ ಬಹುಶ್ರುತತ್ವವನ್ನು ಹಾಗೂ ವಿಶೇಷ ಅಧ್ಯಯನವನ್ನು ನಮಗೆ

ಪರಿಚಯಿಸಿಕೊಡುತ್ತದೆ. ಇದರಲ್ಲಿ ಭಾರತೀಯ ವೈದಿಕ ಪರಂಪರೆಯ ದರ್ಶನದ ಹಾಗೂ ಉಪನಿಷತ್ ಪರಂಪರೆಯ ಇತಿಹಾಸದ ವಿಸ್ತಾರವಾದ ಹಾಗೂ ಸುರುಚಿಪೂರ್ಣವಾದ ವರ್ಣನೆಯಿದೆ. ಸಮಾಜದ ಸ್ಥಿತಿಗತಿಯನ್ನು ಮಾಯೆ ಎಂದು ಉಪೇಕ್ಷಿಸುವವರಿಗೆ ಹಾಗೂ ಆಧ್ಯಾತ್ಮದ ಮಾತುಗಳನ್ನಾಡುವವರಿಗೆ ದೀನ್ ದಯಾಳ್ ಉಪಾಧ್ಯಾಯರು ದಾರ್ಶನಿಕ ನೆಲೆಯಲ್ಲಿ ಸವಾಲು ಒಡ್ಡುತ್ತಾರೆ:

"ಆರ್ತನ ಧ್ವನಿಯಲ್ಲಿ ಯಾರಿಗೆ ಭಗವಂತನ ಧ್ವನಿ ಕೇಳುವುದಿಲ್ಲವೋ ಅವನ ಕಿವಿಗಳು ಭಗವಂತನ ಶಾಂತ ಸ್ವರವನ್ನೂ ಕೇಳಲಾರವು. ದುರ್ಬಲರ ಹಾಗೂ ದುಃಖಿತರ ಆತ್ಮವನ್ನು ಯಾವನು ಗುರುತಿಸಲಾರನೋ ಅವನು ಸರ್ವಾತ್ಮನ ದರ್ಶನವನ್ನು ಹೇಗೆ ತಾನೆ ಮಾಡಬಲ್ಲ ?"

ಸಂಘದ ಕಾರ್ಯಪದ್ಧತಿಯಲ್ಲಿ ಕಾರ್ಯಕರ್ತರನ್ನು ರೂಪಿಸುವ ಪ್ರತಿಕ್ರಿಯೆಗೆ ಬಹಳ ಮಹತ್ವ ನೀಡಲಾಗುತ್ತದೆ. ಶಾಖೆಯ ಪದ್ಧತಿಯನ್ನು ವ್ಯಕ್ತಿ ನಿರ್ಮಾಣದ ಕಾರ್ಯ ಪದ್ಧತಿ ಎನ್ನಲಾಗುತ್ತದೆ. ಹೀಗಾಗಿ, ಆಶ್ರಮದಲ್ಲಿ ನೀಡಲಾದ ಶಂಕರಾಚಾರ್ಯರ ಶಿಕ್ಷಣದ ಬಗ್ಗೆ ದೀನ್ ದಯಾಳರು ಹೀಗೆ ಬರೆಯುತ್ತಾರೆ: "ಅವರು ಶಂಕರನನ್ನು ಅರೆಬರೆ ಅರಿವಿನೊಂದಿಗೆ ಅಲ್ಲಿಂದ ಕಳುಹಿಸಲು ಇಚ್ಛಿಸಿರಲಿಲ್ಲ. ಏಕೆಂದರೆ ಓರ್ವ ಒಳ್ಳೆಯ ಕಾರ್ಯಕರ್ತನು ಸಮಾಜವನ್ನು ಅವನತಿಯ ಪಾತಾಳದಿಂದ ಮೇಲಕ್ಕೆತ್ತಿ ಹಿಮಾದ್ರಿಯ ಉತ್ತುಂಗ ಶಿಖರಕ್ಕೇರಿಸಬಹುದಾದರೆ ಅದೇ ಓರ್ವ ಅಯೋಗ್ಯ ಕಾರ್ಯಕರ್ತ ಸಮಾಜದ ಹಾದಿಗೆ ಅಡ್ಡಿಯನ್ನುಂಟುಮಾಡುತ್ತಾನೆ ಅಥವಾ ಒಂದಿಲ್ಲ ಒಂದು ದಿನ ತನ್ನ ವೈಯಕ್ತಿಕ ಸ್ವಾರ್ಥ, ಕೀರ್ತಿ ಹಾಗೂ ಯಶಸ್ಸಿಗಾಗಿ ಧರ್ಮಕ್ಕೆ ಹಾನಿಯನ್ನುಂಟುಮಾಡಸಲು ಸಜ್ಜಾಗುತ್ತಾನೆ ಎಂಬುದು ಅವರಿಗೆ ತಿಳಿದಿದೆ. ಅಹಂಕಾರವು ಪ್ರತಿಯೊಬ್ಬ ವ್ಯಕ್ತಿಯನ್ನು ಆಳವಾದ ಕೂಪದಲ್ಲಿ ಕೆಡವಿಬಿಡುತ್ತದೆ; ಆದರೆ ಸಮಾಜದಲ್ಲಿ ಕಾರ್ಯಕರ್ತರ ಅಹಂಕಾರ ಅವನೊಟ್ಟಿಗೆ ಸಂಪೂರ್ಣ ಸಮಾಜವನ್ನು ವ್ಯಾಪಿಸಿಕೊಂಡು ಸುತ್ತಮುತ್ತಣ ವಾತಾವರಣವನ್ನೇ ವಿಷಮಯವನ್ನಾಗಿಸುತ್ತದೆ. ಶಂಕರ ಅಹಂಕಾರ ಮುಂತಾದ ದುರ್ಗುಣಗಳಿಂದ ತುಂಬ ದೂರದಲ್ಲಿದ್ದಾನೆಂಬುದನ್ನು ಎಲ್ಲರೂ ತಿಳಿದಿದ್ದರೂ, ಇನ್ನೂ ನಾಲ್ಕು ವರುಷಗಳ ಕಾಲ ಅವನನ್ನು ತಮ್ಮ ಬಳಿಯೇ ಇರಿಸಿಕೊಂಡರು, ಸ್ವತಃ ತಾವೇ ಅವನಿಗೆ ಶಿಕ್ಷಣ ನೀಡಿದರು ಹಾಗೂ ಅವನ ದೋಷಗಳನ್ನು ಒಂದೊಂದಾಗಿ ಆರಿಸಿ ತೆಗೆದುಎಸೆದರು".

ಈ ಗ್ರಂಥ ಬರುವ ಕಾಲಕ್ಕೆ ಸಂಘದ ರಾಜಕೀಯ ಅಥವಾ ಸಾಂಸ್ಕೃತಿಕ ಹಿನ್ನೆಲೆಯ ಬಗ್ಗೆ ಸಾಕಷ್ಟು ವಿವಾದ ಇದ್ದಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಜೀವನದಲ್ಲಿ ಸಾಂಸ್ಕೃತಿಕ ಪಕ್ಷ ಪ್ರಬಲವಾಗಿದೆ ಎಂಬ ವಿಚಾರಕ್ಕೆ ದೀನ್ ದಯಾಳ್ ಉಪಾಧ್ಯಾಯರು ಒತ್ತು ನೀಡಿದರು. ಸ್ವತಃ ಅವರ ಮಾತುಗಳಲ್ಲಿಯೇ ಹೇಳಬೇಕೆಂದರೆ ಸಾಂಸ್ಕೃತಿಕ ಏಕತೆ ಉಂಟಾಯಿತು ಎಂದರೆ, ಆ ಬಳಿಕ ರಾಜಕೀಯ ಏಕತೆಗಾಗಿ



ಪ್ರಯತ್ನಿಸುವ ವೀರರು ಜನ್ಮ ತಾಳುತ್ತಾರೆ. ಸಾಂಸ್ಕೃತಿಕ ಏಕತೆ ಸಾಧ್ಯವಾಗದೆ ಇದ್ದಲ್ಲಿ, ವೈಚಾರಿಕ ಏಕಛತ್ರ ಸಾಮ್ರಾಜ್ಯದಲ್ಲಿ, ರಾಜಕೀಯ ಏಕತೆ ಸ್ಥಾಯಿಯಾಗಿ ಇರಲಾರದು. ರಾಜಕೀಯ ಏಕತೆಗೆ ಮೂಲ ಆಧಾರವಾಗಿ ಸಾಂಸ್ಕೃತಿಕ ಏಕತೆ ಇರಬೇಕಾಗುತ್ತದೆ. ಸಾಂಸ್ಕೃತಿಕ ಏಕತೆ ಸಾಧ್ಯವಾದಲ್ಲಿ ರಾಜಕೀಯ ಏಕತೆಗಾಗಿ ಶ್ರಮಿಸುವಂಥ ವೀರರು ಜನ್ಮತಾಳಬಹುದು. ಸಾಂಸ್ಕೃತಿಕ ಏಕತೆ ಇದ್ದಲ್ಲಿ, ರಾಜಕೀಯ ಮತಭೇದಗಳು ಸಹ ರಾಷ್ಟ್ರದ ಕತ್ತು ಹಿಸುಕಲಾರವು; ಅದರ ಶರೀರವನ್ನು ಬಡಕಲಾಗಿಸಿದರೂ, ಅದರ ಆತ್ಮವನ್ನು ನಷ್ಟಗೊಳಿಸಲಾರವು".

ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಪದ್ಧತಿಯಲ್ಲಿ 'ಏಕಚಾಲಕಾನುವರ್ತಿತ್ವ'ದ ಧೋರಣೆಯಿತ್ತು. ಅದಕ್ಕನುಗುಣವಾಗಿ ಸ್ವಯಂಸೇವಕರಲ್ಲಿ ನೇತೃತ್ವದ ಬಗ್ಗೆ ಶ್ರದ್ಧೆಯನ್ನು ಮೂಡಿಸಲಾಗುತ್ತದೆ. ಪ್ರಾಚೀನ ಆಖ್ಯಾನವೊಂದರ ಪ್ರಕಾರ ಶಂಕರಾಚಾರ್ಯರ ಶಿಷ್ಯ ಸಮುದಾಯದಲ್ಲಿ ಪದ್ಮನಾಭನೆಂಬ ಓರ್ವ ಶಿಷ್ಯನಿದ್ದನು. ಆ ಹೆಸರು ಹೇಗೆ ಬಂದಿತೆಂದರೆ ಒಮ್ಮೆ ಆಚಾರ್ಯರು ಗಂಗಾನದಿಯ ಒಂದು ದಡದಿಂದ ಅವನನ್ನು ಕೂಗಿ ಕರೆದಾಗ ಪದ್ಮಪಾದನು ಬರಿಗಾಲಿನಲ್ಲಿಯೇ ಗಂಗೆಯ ಮೇಲೆ ಓಡುತ್ತಾ ಬಂದನಂತೆ. ಅವನು ಗಂಗೆಯ ಮೇಲೆ ಎಲ್ಲಿ – ಎಲ್ಲಿ ಹೆಜ್ಜೆಯಿಟ್ಟಿದ್ದನೋ ಅಲ್ಲಿ – ಅಲ್ಲಿ ಕಮಲದ ಹೂ ಹುಟ್ಟಿಬಂತು ಹಾಗೂ ಅವನು ಆಚಾರ್ಯರ ಬಳಿ ಬಂದನು. ಈ ಆಖ್ಯಾನವನ್ನು ದೀನ್ ದಯಾಳರು ಹೀಗೆ ವರ್ಣಿಸುತ್ತಾರೆ:

"ಅಗಾಧ ಜಲರಾಶಿಯಲ್ಲಿ ಹೆಜ್ಜೆ–ಹೆಜ್ಜೆಗೂ ಅವನಿಗೆ ಪ್ರಸ್ಫುಟಿಸಿದ ಪದ್ಮ ಪುಷ್ಪಗಳು ದೊರೆಯತೊಡಗಿದವು, ಅವುಗಳ ಮೇಲೆ ಹೆಜ್ಜೆ ಇಡುತ್ತಾ ಅವರ ಸಂತೋಷವಾಗಿ ಬಂದುಬಿಟ್ಟನು. ಆದುದರಿಂದಲೇ ಅವನಿಗೆ ಪದ್ಮಪಾದನೆಂಬ ಹೆಸರನ್ನು ಇಡಲಾಯಿತು. ತಮ್ಮ ಧ್ಯೇಯ ಹಾಗೂ ನಾಯಕನಲ್ಲಿ ಶ್ರದ್ಧೆಯಿಟ್ಟು, ನಾಯಕನ ಆದೇಶ ದೊರೆತೊಡನೆಯೆ ಯಾವುದೇ ಹಿಂಜರಿಕೆಯಿಲ್ಲದೇ ಮುನ್ನುಗ್ಗುವವನನ್ನು ಯಾವುದೇ ರೀತಿಯ ತೊಂದರೆಯೂ ತಡೆಯಲಾರದು. ಶ್ರದ್ಧೆಯಿಂದ ಮುನ್ನಡೆಯುವವರನ್ನು ಯಾರು ತಾನೆ ಮುಳುಗಿಸಬಲ್ಲರು? ಅವರಿಗೆ ತಮ್ಮ ಮಾರ್ಗದಲ್ಲಿ ಯಾವುದೇ ಮುಳ್ಳುಗಳು ಎದುರಾಗುವುದಿಲ್ಲ. ಮಾರ್ಗದಲ್ಲಿನ ಶೂಲಗಳೂ ಅವರಿಗೆ ಸುಮನಗಳಾಗಿಬಿಡುತ್ತಾರೆ. ಎಳ್ಳಷ್ಟು ವಿಪತ್ತನ್ನೂ ದೊಡ್ಡ ಪರ್ವತವನ್ನಾಗಿಸುವ, ಶ್ರದ್ಧೆಯಿಲ್ಲದ ಹಾಗೂ ಶಂಕಿಸುವ ಮನೋಭಾವದ ವ್ಯಕ್ತಿಗಳ ಮಾರ್ಗದಲ್ಲಿ ಸದಾ ದಾಟಲಾಗದ ಪರ್ವತ ಹಾಗೂ ಮೇರೆಯಿಲ್ಲದ ಸಾಗರಗಳೇ ಇರುತ್ತವೆ. ಏಕೆಂದರೆ ಅವರ ದೃಷ್ಟಿ ತಮ್ಮ ಕಾಲಿನೆಡೆಯೇ ಇರುತ್ತದೆ.

ಶಂಕರಾಚಾರ್ಯರಿಂದ ಬೌದ್ಧಧರ್ಮದ ಉಚ್ಚಾಟನೆ ಹಾಗೂ ವೈದಿಕ ಧರ್ಮದ ಪ್ರಚಾರದ ಅಭಿಯಾನವನ್ನು ದೀನ್ ದಯಾಳರು ಬಹಳ ಪ್ರಖರವಾಗಿ ಹಾಗೂ ಪ್ರಭಾವಶಾಲಿಯಾಗಿ ವರ್ಣಿಸಿದ್ದಾರೆ. ಓದುಗರ ಮನಸ್ಸಿನಲ್ಲಿ ಒಂದು ವಿಶಿಷ್ಟ ವಾತಾವರಣವನ್ನು ಮೂಡಿಸುವಂತಹ ಸಾಹಿತ್ಯಕ ಶೈಲಿಯಲ್ಲಿ ಅವರು ಅದನ್ನು ಬಣ್ಣಿಸಿದ್ದಾರೆ. ಶಬ್ದ ಪ್ರಯೋಗ

ಅಥವಾ ಮಾತಿನ ಬಳಕೆ ತುಂಬ ಅಲಂಕಾರಪೂರ್ಣವಾಗಿದೆ. ಸಮನ್ವಯತೆ ಮೊಳಗಿನೊಂದಿಗೆ ಸಂಪೂರ್ಣ ಗಗನಮಂಡಲವನ್ನೇ ವ್ಯಾಪಿಸಿ ಸರಳತೆ ಹಾಗೂ ಶಾಂತಿಯ ಘೋಷಣೆ ಮಾಡಿದಂತೆ ತೋರುತ್ತಿತ್ತು. ನೇರವಾಗಿ ಸ್ಪಷ್ಟವಾದ ನುಡಿಗಳು ಕೇಳಿಬರುತ್ತಿರುವಂತೆ ತೋರುತ್ತಿತ್ತು. ಮೇಳ–ಮಿಲನಗಳು ಮನಸ್ತಾಪಗಳನ್ನೆಲ್ಲ ತೊಡೆದುಹಾಕಿ ಮೋದವನ್ನುಂಟುಮಾಡತೊಡಗಿದ್ದವು. ಶೂರತ್ವದ ಭಾವನೆ ನೆತ್ತಿಗೇರಿತ್ತು; ವೀರತ್ವ ಮುನ್ನುಗ್ಗಿ ಮಾತನಾಡಲಾರಂಭಿಸಿತ್ತು. ದಯೆ ಮನಸ್ಸು ದಾನ ಮಾಡಲಾರಂಭಿಸಿತು. ಅಭೇದ ಹಾಗೂ ಅದ್ವೈತಗಳು ಆನಂದಾತಿರೇಕದಿಂದ ಉದ್ವಿಗ್ನವಾಗತೊಡಗಿದ್ದವು.

ವೈದಿಕ ಮತಗಳ ಭಿನ್ನಾಭಿಪ್ರಾಯ ಭೇದಗಳು ಶಂಕರಾಚಾರ್ಯರ ಕಾಲದಲ್ಲಿ ಇದ್ದಂತೆಯೇ ದೀನ್ ದಯಾಳರ ಕಾಲದಲ್ಲಿಯೂ ವಿಭಿನ್ನ ಹಿಂದೂ ಸಂಪ್ರದಾಯಗಳ ನಡುವಣ ಉಳಿದುಕೊಂಡಿದ್ದವು. ತಾವು ಬಯಸಿದ ಹಿಂದುಗಳ ಏಕತೆಯ ಬಗ್ಗೆ ಅವರು ಶಂಕರಾಚಾರ್ಯರ ಮುಖಾಂತರ ಹೀಗೆ ಹೇಳಿಸುತ್ತಾರೆ: "ಎಲ್ಲ ದೇವೀ–ದೇವತೆಗಳು ಒಂದೇ ಪರಬ್ರಹ್ಮನ ಭಿನ್ನ–ಭಿನ್ನ ಸ್ವರೂಪಗಳು... ರಾಮೇಶ್ವರದಲ್ಲಿ ಶಿವನ ಪ್ರತಿಷ್ಠಾಪನೆ ಹಾಗೂ ಪೂಜೆಯ ಅನಂತರದಲ್ಲಿ, ಸಮುದ್ರೋತ್ತರಣ ಮಾಡಿದ ಹಾಗೂ ಲಂಕೆಯ ಮೇಲೆ ವಿಜಯ ಸಾಧಿಸಿದ ರಾಮನನ್ನು ಪೂಜಿಸುವುದಿಲ್ಲವೆ? ರಾಮನ ಧ್ಯಾನ ಮಾಡುತ್ತಲೇ, ಹಾಲಾಹಲ(ವಿಷ) ಪಾನಮಾಡುವ ಶಿವನನ್ನೂ ಧ್ಯಾನಮಾಡುವಾಗ ಇವರ ನಡುವೆ ವಿರೋಧ ಎಂಥದ್ದು? ಸತಿಯ ಶವವನ್ನು ಹೆಗಲಮೇಲೆ ಹೊತ್ತು ಭಾರತಭ್ರಮಣ ಮಾಡುವ ಶಿವ ಹಾಗೂ ಮತ್ತೊಂದು ಜನ್ಮದಲ್ಲಿಯೂ ಶಿವನನ್ನು ವರಿಸಬೇಕೆಂಬ ಇಚ್ಛೆಯಿಂದ ಘೋರ ತಪಸ್ಸನ್ನು ಮಾಡುವ ಗಿರಿಜೆ ಇವರ ನಡುವೆ ಅಂತರ ಎಲ್ಲಿಯದು? ಇವರೆಲ್ಲಾ ಒಂದೇ. ಯಾರು ವೈಷ್ಣವನೋ ಅವನೇ ಶೈವನೂ ಆಗಿರುತ್ತಾನೆ ಹಾಗೆ ಅವನೇ ಶಾಕ್ತನಾಗಿಯೂ ಇರುತ್ತಾನೆ".

ಕರ್ಮಕಾಂಡಗಳ ಪ್ರಖರ ಸಮರ್ಥಕರೂ, ಕುಮಾರಿಲ ಭಟ್ಟರ ಶಿಷ್ಯರೂ ಆದ ಮಂಡನಮಿಶ್ರರೊಡನೆ ಶಂಕರಾಚಾರ್ಯರು ನಡೆಸಿದ ಶಾಸ್ತ್ರಾರ್ಥ ಒಂದು ಐತಿಹಾಸಿಕ ಘಟನೆಯೇ ಆಯಿತು. ದೀನ್ ದಯಾಳ್ ಉಪಾಧ್ಯಾಯರು ಆ ಶಾಸ್ತ್ರಾರ್ಥವನ್ನು ಬಹಳ ಸೌಮ್ಯವೂ, ಸಮನ್ವಯಕಾರಿಯೂ ಆದ ಸಂವಾದವನ್ನಾಗಿ ಬದಲಾಯಿಸಿದ್ದಾರೆ. ಶ್ರಾದ್ಧಕರ್ಮ ಮಾಡುತ್ತಿದ್ದ ಮಂಡನಮಿಶ್ರರ ಬಳಿ ಶಂಕರಾಚಾರ್ಯರು ಬಂದಾಗ, ಮಿಶ್ರರು ಆವೇಶದಿಂದ ಹೀಗೆಂದರು; "ವೈದಿಕ ಧರ್ಮದ ಮಾತುಗಳನ್ನೇನೋ ಚೆನ್ನಾಗಿ ಆಡುತ್ತೀರಿ. ಆದರೆ ನಿನ್ನ ನಡೆ–ನುಡಿಗಳೆಲ್ಲ ಬೌದ್ಧರ ಹಾಗೆಯೇ ಇದೆ. ವೈದಿಕ ಧರ್ಮದಲ್ಲಿ ಸಂನ್ಯಾಸವೆಲ್ಲಿದೆ? ಅದರಲ್ಲೂ ಶ್ರಾದ್ಧಕರ್ಮದಲ್ಲಿ ಸನ್ಯಾಸಿಗಳ ಉಪಸ್ಥಿತಿ ಘೋರವಾದ ವೇದವಿರೋಧಿ ಕೃತ್ಯವಾಗಿದೆ". ದೀನ್ ದಯಾಳರು ಚಿತ್ರಿಸಿರುವ ಶಂಕರಾಚಾರ್ಯರು ಈ ಕರ್ಮಕಾಂಡದ ಹಾಗೂ ಶಾಸ್ತ್ರೀಯತೆಯ ವಿವಾದದಲ್ಲಿ ಸಿಲುಕದೆ ಹೀಗೆ ಹೇಳುತ್ತಾರೆ: "ಮಾನ್ಯ ಮಿಶ್ರರೆ, ಇಂದಿನ ದೇಶದ ಸ್ಥಿತಿ ನಿಮಗೆ ತಿಳಿದ ಸಂಗತಿಯೇ ಆಗಿದೆ.



ಭಟ್ಟಪಾದಾಚಾರ್ಯ ಕುಮಾರಿಲರು ತಮ್ಮ ಜೀವನ ಸರ್ವಸ್ವವನ್ನೂ ಈ ಧರ್ಮದ ಸೇವೆಗಾಗಿಯೇ ಮುಡುಪಾಗಿಟ್ಟರು. ತಮ್ಮ ಬಾಳಿನ ಪ್ರತಿಯೊಂದು ಕ್ಷಣವನ್ನೂ ವೈದಿಕಧರ್ಮದ ಪುನಃಸ್ಥಾಪನೆ ಹಾಗೂ ವೇದವಿರುದ್ಧವಾಗಿದ್ದ ಧರ್ಮಗಳ ಖಂಡನೆಯಲ್ಲಿಯೇ ಕಳೆದರು. ಅದರಲ್ಲಿ ಅವರು ಯಶಸ್ವಿಯೂ ಆದರು. ಆದರೆ ಇಂದಿಗೂ ಬೌದ್ಧ ಧರ್ಮ ವಾಯವ್ಯ ಪ್ರಾಂತಗಳಲ್ಲಿ ಅಸ್ತಿತ್ವದಲ್ಲಿದೆ ಹಾಗೂ ಈ ರಾಷ್ಟ್ರದ ವಿಪತ್ತಿಗೆ ಕಾರಣವಾಗಿದೆ. ಬನ್ನಿ ನಾವಿಬ್ಬರೂ ಸೇರಿ ಈ ರಾಷ್ಟ್ರ ವಿರೋಧಿಗಳನ್ನು ಇಲ್ಲವಾಗಿಸೋಣ, ಇಡೀ ಭರತಖಂಡದಲ್ಲಿ ಹಿಂದೂ ಧರ್ಮದ ಪ್ರಚಾರ ಮಾಡೋಣ ಹಾಗೂ ಭಟ್ಟಪಾದರು ಅರ್ಧಾಂತಿಕವಾಗಿಸಿರುವ ಕಾರ್ಯವನ್ನು ಪೂರ್ಣವಾಗಿಸೋಣ."

ಹಾಗೆ ನೋಡಿದರೆ ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ಮಹಿಳೆಯರಿಗೆ ಪ್ರವೇಶವಿಲ್ಲ; ವೈದಿಕ ಮತಗಳಲ್ಲಿ ಮಹಿಳೆಯರಿಗೆ ಸಂನ್ಯಾಸ ನೀಡುವ ಪದ್ಧತಿಯೂ ಇಲ್ಲ. ಆದರೆ ಐತಿಹಾಸಿಕ ತಥ್ಯಗಳ ಆಧಾರದ ಮೇಲೆ ದೀನ್ ದಯಾಳ್ ಉಪಾಧ್ಯಾಯರು ಮಂಡನಮಿಶ್ರರ ಪತ್ನಿಯ ಮೂಲಕ ಮಹಿಳೆಯರ ಅಧಿಕಾರಗಳ ಬಗೆಗಿನ ಭಾರತೀಯರ ತರ್ಕವನ್ನು ಮುಂದೊಡ್ಡುತ್ತಾರೆ: 'ಸ್ತ್ರೀ ಆದರೆ ಏನಂತೆ ಆಚಾರ್ಯರೆ? ಸ್ತ್ರೀಯರಿಗೆ ತಮ್ಮದೇ ಆದ ಚಿಂತನೆಗಳು ಇರುವುದು ಅಲ್ಲವೇ? ಅವಳ ಮನಸ್ಸಿನಲ್ಲಿ ಅನುಮಾನದ – ಅನಿಷ್ಟಗಳ ಬಿರುಗಾಳಿ ಏಳುವುದಿಲ್ಲವೇ? ಅವಳಿಗೂ ಬುದ್ಧಿಯಿದೆ, ಹೃದಯವಿದೆ ಹಾಗೂ ಅವಳು ರಾಷ್ಟ್ರದ ಒಂದು ಅಂಗವೇ ಆಗಿದ್ದಾಳೆ. ರಾಷ್ಟ್ರದ ಬಗ್ಗೆ ಅವಳಿಗೂ ಜವಾಬ್ದಾರಿಯಿದೆ ಹಾಗೂ ಆ ಹೊಣೆಗಾರಿಕೆಯನ್ನು ನಿಭಾಯಿಸುವ ಹಕ್ಕು ಅವಳಿಗೂ ಇದೆ.....ಹಾಗೂ ಆಚಾರ್ಯರೆ, ಸ್ತ್ರೀಯರೊಡನೆ ಶಾಸ್ತ್ರಾರ್ಥಗಳು ನಡೆದೇ ಇಲ್ಲವೇನು? ಗಾರ್ಗಿ ಗಂಡಸೆ? ಹಾಗೂ ಆಕೆ ನಡೆಸಿದ ಶಾಸ್ತ್ರಾರ್ಥ ಪ್ರಸಿದ್ಧವಾಗಿಯೇ ಇದೆಯಲ್ಲವೇ? ಸುಲಭಾ ಕೂಡಾ ಗಂಡಸಾಗಿರಲಿಲ್ಲ. ಜನಕ ಹಾಗೂ ಯಾಜ್ಞವಲ್ಕ್ಯ ಸಹ ಯಾವುದೇ ಸಾಧಾರಣ ವ್ಯಕ್ತಿಗಳಾಗಿರಲಿಲ್ಲ; ಅತ್ಯಂತ ಪ್ರಸಿದ್ಧರಾದ ಮಹಾ ವ್ಯಕ್ತಿಗಳೇ ಆಗಿದ್ದರು. ಈ ಮಹಾ ವ್ಯಕ್ತಿಗಳೆಲ್ಲಾ ಸ್ತ್ರೀಯರೊಡನೆ ಶಾಸ್ತ್ರಾರ್ಥ ಮಾಡಬಹುದಾದರೆ, ತಾವು ನನ್ನೊಡನೆ ಏಕೆ ಶಾಸ್ತ್ರಾರ್ಥ ಮಾಡಲಾಗದು?" ಎಂದು ಅಕೆ ಪ್ರಶ್ನಿಸುತ್ತಾಳೆ. ಅಂದಿನ ವೈದಿಕ ಸಮಾಜ ತನ್ನ ಕರ್ಮಕಾಂಡದ ಪ್ರಾಬಲ್ಯದಿಂದಾಗಿ ನಲುಗಿಹೋಗುವ ಬೌದ್ಧರ ಪ್ರಚಾರ ಪದ್ಧತಿ ಹಾಗೂ ತರ್ಕಶಕ್ತಿಯು ಅದನ್ನು ಬಹಳಷ್ಟು ಘಾಸಿಗೊಳಿಸಿತು. ಶಂಕರಾಚಾರ್ಯರು ಒಂದು ರೀತಿಯಲ್ಲಿ ಬೌದ್ಧರ ತರ್ಕವಿಧಾನದಿಂದಲೇ ವೈದಿಕ ಧರ್ಮದ ಪುನಃಸ್ಥಾಪನೆ ಮಾಡಿದರು. ಹಾಗೂ ಬೌದ್ಧರನ್ನೇ ಉಚ್ಚಾಟನೆ ಮಾಡಿದರು. ಆದುದರಿಂದಲೇ ಶಂಕರಾಚಾರ್ಯರ ಮೇಲೆ ಪ್ರಚ್ಛನ್ನ ಬೌದ್ಧರಾಗಿದ್ದರೆಂಬ ಆಕ್ಷೇಪವೂ ಇದೆ.

ಬೌದ್ಧರನ್ನು ಪರಾಜಯಗೊಳಿಸಲು ಶಂಕರಾಚಾರ್ಯರು ಯಾವ ಕಾರ್ಯ ವಿಧಾನಗಳನ್ನು ಹಾಗೂ ತರ್ಕಗಳನ್ನು ಬಳಸಿದ್ದರೋ, ಅವು ಸಂಘದ ಕಾರ್ಯವಿಧಾನ

ಮತ್ತು ಚಿಂತನೆಗಳನ್ನು ಹೋಲುತ್ತವೆ. ಅವುಗಳ ನ್ಯಾಯ ಸಮ್ಮತತೆಯನ್ನು ಸಿದ್ಧಪಡಿಸುವ ಸಲುವಾಗಿ ಕುಮಾರಿಲಭಟ್ಟರ ಹೇಳಿಕೆಯೊಂದರ ಬಗ್ಗೆ ಟೀಕಿಸುತ್ತಾ ಶಂಕರಾಚಾರ್ಯರು ಹೀಗೆ ಹೇಳುತ್ತಾರೆ, "......ಧ್ಯೇಯದ ಒಳಿತು ಕೆಡುಕುಗಳ ಆಧಾರದ ಮೇಲೆ ಸಾಧನಗಳ ಒಳಿತು ಕೆಡುಕುಗಳೂ ನಿರ್ಣೀತವಾಗುತ್ತದೆ. ಸಾಧನಗಳಿಗೆ ಯಾವುದೇ ಸ್ವತಂತ್ರವಾದ ಅಸ್ತಿತ್ವವಿರುವುದಿಲ್ಲ".

ಬೌದ್ಧರ ತರ್ಕವಾದವು ನಮ್ಮನ್ನೇ ಕಿಂಚಿತ್ ಕರ್ತವ್ಯ ವಿಮೂಢರನ್ನಾಗಿಸುತ್ತದೆ ಎಂದು ದೀನ್ ದಯಾಳ್ ಉಪಾಧ್ಯಾಯರು ಹೇಳುತ್ತಾರೆ: "ಕರ್ಮಣ್ಯತೆಯ ಸಸಿ ಮರುಭೂಮಿಯಲ್ಲಲ್ಲ, ಭಾವನೆಗಳ ನಂದನವನದಲ್ಲಿ, ತಪ್ಪಲಿನಲ್ಲಿ ನಳನಳಿಸುತ್ತದೆ. ಶಬ್ದಗಳ ಜಾಲವಾದರೋ ವ್ಯವಹಾರದ ವಿಷಯದಲ್ಲಿ ನಮ್ಮನ್ನು ಕಿಂಕರ್ತವ್ಯ ವಿಮೂಢರನ್ನಾಗಿಸುತ್ತದೆ."

ಬೌದ್ಧ ಭಿಕ್ಷುಗಳೊಡನೆ ನಡೆಸುವ ಸಂಭಾಷಣೆಯಲ್ಲಿ ಶಂಕರಾಚಾರ್ಯರು ಕಟು ಸತ್ಯವನ್ನು ಸಹ ಯಾವ ರೀತಿ ಬಹಳ ಮೃದುವಾಗಿ, ಶಾಲೀನತೆಯೊಂದಿಗೆ ಹಾಗೂ ದೃಢವಾಗಿ ಹೇಳುತ್ತಾರೆಯೋ, ಬಹುಶಃ ಅದೇ ದೃಢತೆಯನ್ನು ಅಂದಿನ ಕಾಂಗ್ರೆಸ್ಸಿನ ನೇತಾರರು ಮುಸಲ್ಮಾನರ ವಿಷಯದಲ್ಲಿ ತೋರಬೇಕೆಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಾಗೂ ದೀನ್ ದಯಾಳ್ ಉಪಾಧ್ಯಾಯರ ಅಭಿಪ್ರಾಯವಾಗಿತ್ತು. ಮುಸಲ್ಮಾನರ ಪ್ರತ್ಯೇಕ ಅನನ್ಯತೆಯನ್ನು ಒಪ್ಪಿ, ಅವರನ್ನು ತೃಪ್ತಿಪಡಿಸುವ ಪ್ರವೃತ್ತಿಯನ್ನು ದೀನ್ ದಯಾಳ್ ಉಪಾಧ್ಯಾಯರು ಟೀಕಿಸುತ್ತಿದ್ದರು. ಅವರ ಚಿಂತನೆಯ ಈ ಮುಖ ಶಂಕರಾಚಾರ್ಯರ ಈ ಮಾತನ್ನು ನೆನಪಿಗೆ ತರುತ್ತದೆ:

"ಭಗವಾನ್ ಬುದ್ಧರು ನನ್ನ ಪೂರ್ವಜರೇ ಆಗಿದ್ದರು.... ನನ್ನ ಹಾಗೂ ಭಗವಾನ್ ಬುದ್ಧರ ನಡುವೆ ಯಾವುದೇ ವಿರೋಧವಿಲ್ಲ; ಅವರ ನೈತಿಕ ಆದೇಶಗಳ ಬಗ್ಗೆಯೂ ವಿರೋಧವಿಲ್ಲ. ಆದರೆ ಸ್ವಲ್ಪ ಯೋಚಿಸಿ ನೋಡಿ ಭಿಕ್ಷು ಶ್ರೇಷ್ಠರೇ! ಇಂದು ನಾವು ಅವರ ಆದರ್ಶಗಳನ್ನು ಪರಿಪಾಲಿಸುತ್ತಿದ್ದೇವೆಯೇ? ಅವರ ಆತ್ಮದ ಕರೆಯನ್ನು ನಾವು ಕೇಳಿಸಿಕೊಳ್ಳುತ್ತಿದ್ದೇವೆಯೇ? ........ ನಾವು ನಮ್ಮ ಕಣ್ಣುಗಳಿಂದಲೇ ಶಕ ಹಾಗೂ ಹೂಣರ ಅತ್ಯಾಚಾರಗಳನ್ನು ನೋಡುತ್ತಿಲ್ಲವೇ?"

"ಶಕ ಹಾಗೂ ಹೂಣರು ಬೌದ್ಧಧರ್ಮದ ದೀಕ್ಷೆಯನ್ನು ಪಡೆದುಕೊಂಡಿದ್ದಕ್ಕೆ ಕಾರಣ ಬೌದ್ಧಧರ್ಮ ಅವರಿಗೆ ಪ್ರಿಯವಾಗಿತ್ತು ಎಂದಲ್ಲ ಅಥವಾ ಅವರು ಭಗವಾನ್ ಬುದ್ಧರನ್ನು ಪ್ರೀತಿಸುತ್ತಿದ್ದರು ಎಂದಲ್ಲ...ಅವರು ಬೌದ್ಧ ಧರ್ಮವನ್ನು ತಮ್ಮ ರಾಜಕೀಯದ ಕಪಿಮುಷ್ಠಿಯಲ್ಲಿ ಸಿಲುಕಿಸಿಕೊಂಡಿದ್ದರು. ಅವರು ಬೌದ್ಧಧರ್ಮವನ್ನು ಸ್ವೀಕರಿಸಿದ್ದರಿಂದ ಅವರು ನಮ್ಮವರಾಗಿಬಿಟ್ಟರು ಎಂದು ಭಾವಿಸಿದ್ದೀರಿ......... ಕನಿಷ್ಕನು ಬೌದ್ಧಧರ್ಮಕ್ಕೆ ಪುನಃ ಸಂಸ್ಕಾರವನ್ನು ಮಾಡಿದ ಹಾಗೂ ಅದರೊಟ್ಟಿಗೆ ಭಾರತದ ಸ್ವಾತಂತ್ರ್ಯದ ಕತ್ತು ಹಿಸುಕುವ ಕೆಲಸವನ್ನೂ ಮಾಡುತ್ತಲಿದ್ದ. ನೀವು ಒಂದು ಮುಖದತ್ತ ಗಮನಹರಿಸಿದರೆ ಮತ್ತೊಂದು ಮುಖದ ಕಡೆ ಗಮನ ಕೊಡುವುದಂತೂ ದೂರದ ಸಂಗತಿ; ಅದಕ್ಕೆ ಬದಲಾಗಿ, ಅವನಿಗೆ ಸಹಾಯವನ್ನೇ ಮಾಡಿದಿರಿ..... ರಾಜನಿಗೆ ಯಾವುದೇ ಧರ್ಮವಿರುವುದಿಲ್ಲ, ಭಿಕ್ಷುಗಳೇ".



ಬೌದ್ಧರ ಈ ಅಂತರಾಷ್ಟ್ರೀಯತೆಯನ್ನು ಹಾಗೂ ಪ್ರತ್ಯೇಕ ಅಸ್ತಿತ್ವವನ್ನು ಅಲ್ಲಗಳೆಯುತ್ತಾ ಶಂಕರಾಚಾರ್ಯರು ಹೀಗೆ ಹೇಳುತ್ತಾರೆ: "ತಾವು ಈ ಪುಣ್ಯಭೂಮಿಯಾದ ಹಿಂದುಸ್ತಾನದ ನಿವಾಸಿಗಳಾದ ಆರ್ಯರ ಸಂತಾನವಾಗಿದ್ದೀರಿ; ಪ್ರಾಚೀನ ಪರಂಪರೆಯನ್ನು ಒಪ್ಪುವವರಾಗಿದ್ದೀರಿ; ರಾಮ–ಕೃಷ್ಣರ ಸಂತಾನವಾಗಿದ್ದೀರಿ. ಹೀಗಾಗಿ ನೀವು ಹಿಂದುಗಳಾಗಿದ್ದೀರಿ, ಭಗವಾನ್ ಬುದ್ಧರ ಆತ್ಮವನ್ನು ಸಾಕ್ಷಾತ್ಕಾರಗೊಳಿಸಿಕೊಂಡಿದ್ದೀರಿ; ಆದುದರಿಂದ ಬೌದ್ಧರಾಗಿರುವಿರಿ. ವಿಷ್ಣುವಿನ ಅವತಾರವಾಗಿರುವ ಭಗವಾನ್ ಬುದ್ಧರ ಪೂಜಾರಿಗಳಾದ ಕಾರಣ ನೀವು ವೈಷ್ಣವರಾಗಿದ್ದೀರಿ; ಈ ರಾಷ್ಟ್ರದ ಶಿವನ ಆರಾಧನೆ ನಿಮ್ಮನ್ನು ಶೈವರನ್ನಾಗಿಸುತ್ತದೆ."

ಈ ಕಾದಂಬರಿಯಲ್ಲಿ ವರ್ತಮಾನ ಪರಿಪ್ರೇಕ್ಷ್ಯ ಹಾಗೂ ಐತಿಹಾಸಿಕ ವಾತಾವರಣದ ಒಂದು ಸುಂದರ ಸಾಮಂಜಸ್ಯವನ್ನು ದೀನ್ ದಯಾಳ್ ಉಪಾಧ್ಯಾಯರು ಪ್ರಸ್ತುತಪಡಿಸಿದ್ದಾರೆ; ಹಾಗೆಯೇ ಅವರ ಸಾಹಿತ್ಯಕ ಪ್ರತಿಭೆಯ ಇಣುಕು ನೋಟವೂ ಇದರಲ್ಲಿ ಕಾಣುತ್ತದೆ. ಅಲ್ಲಲ್ಲಿ ಸುಂದರ ಹಾಗೂ ಸುಕೋಮಲ ದೃಶ್ಯಗಳನ್ನು ಸೃಷ್ಟಿಸುತ್ತಾರೆ, ಶಬ್ದ ಸಂಯೋಜನೆಯ ಹಾಗೂ ವಾಕ್ಯದ ಕಾಂತಿ ಹೊಳೆಯುತ್ತಿರುವಂತೆ ಕಂಡುಬರುತ್ತದೆ. "ತಕ್ಷಶಿಲೆಯಿಂದ ಆಚಾರ್ಯ ಶಂಕರರು ಕಾಶ್ಮೀರದೆಡೆಗೆ ಹೊರಟರು. ಮಹರ್ಷಿ ಕಶ್ಯಪರ ಭೂಮಿಯಿಂದ ಕಾಶ್ಮೀರದ ಅಂಗಳದಲ್ಲಿ ಕೇವಲ ಕುಸುಮ(ಕೇಸರ)ದ ಪಾತಿಗಳು ಮಾತ್ರವಲ್ಲದೇ ಕಾವ್ಯ ಹಾಗೂ ಕಲೆಗಳೂ ಕ್ರೀಡೆಯಾಡುತ್ತಿದ್ದುವು."

ಇದೇ ರೀತಿ ಈ ಕೆಳಗಿನ ಸಾಲುಗಳಲ್ಲಿ ಪ್ರಕೃತಿಯ ಸಜೀವ ಹಾಗೂ ಸುಂದರ ವರ್ಣನೆ ಅವರ ಉಚ್ಚ ಸ್ವರೂಪದ ಸಾಹಿತ್ಯಕ ಪ್ರತಿಭೆಯನ್ನು ತೋರುತ್ತದೆ:

"ಆಚಾರ್ಯ ಶಂಕರರು ಶಾರದೆಯ ಧ್ಯಾನ ಮಾಡುತ್ತಾ ಮಂದಿರದ ಕಡೆ ಹೆಜ್ಜೆ ಹಾಕುತ್ತ ನಡೆದಿದ್ದರು. ಪ್ರಕೃತಿ–ನಟಿ ಅಲಂಕಾರ–ಶೃಂಗಾರಗಳೊಡನೆ ಅವರನ್ನು ತನ್ನತ್ತ ಸೆಳೆಯಲು ಇಚ್ಛಿಸಿದಳು; ಅರಳಿದ ಹೂವುಗಳು ನಕ್ಕು ನಲಿದು ಅವರನ್ನು ಸ್ವಾಗತಿಸಿದವು ಹಾಗೂ ಅವರೊಡನೆ ಮಾತನಾಡಬಯಸಿದವು. ಮೊಗ್ಗುಗಳು ಬಿರಿದು ಕಿವಿಯಲ್ಲಿ ಮೆಲ್ಲಗೆ ತಮ್ಮ ಪ್ರೇಮ–ಪ್ರೀತಿ ತುಂಬಿದ ರಾಗವನ್ನು ಕೇಳಿಸಿದವು ಹಾಗೂ ಕರಸ್ಪರ್ಶದ ಆಸೆಯನ್ನು ವ್ಯಕ್ತಪಡಿಸಿದವು; ಸರೋವರದಲ್ಲಿ ತಮ್ಮ ಸ್ವರೂಪವನ್ನು ನೋಡಿಕೊಳ್ಳುವ ನೆಪದಲ್ಲಿ ಅಪ್ಸರೆಯರು ಧರೆಗಿಳಿದರು, ಗಂಧರ್ವರು ಪಕ್ಷಿಗಳ ದನಿಯಲ್ಲಿ ಹಾಡತೊಡಗಿದರು. ಆದರೆ ಯಾವುದೂ ಆಚಾರ್ಯ ಶಂಕರರನ್ನು ತಡೆಯಲಾರದೇ ಹೋಯಿತು.

"ಸೂರ್ಯೋದಯದ ಬಾಲಾರುಣನ ಸ್ಪರ್ಶಕಿರಣಗಳು ಹಿಮಾಚ್ಛಾದಿತ ಶಿಖರಗಳ ಮೇಲೆ ಬಿದ್ದಾಗ ಕೇಸರದ ಪಾತಿಗಳ ಕಾಂತಿ ಹಾಗೂ ಆಚಾರ್ಯ ಶಂಕರರ ದೃಢ

ನಿಶ್ಚಯದ ತೇಜಸ್ಸು ಒಮ್ಮೆಗೇ ಹಿಮಾಲಯದ ಶಿಖರದ ಮೇಲೆ ಹೊಳೆಯತೊಡಗಿದವು. ಉಷೆಯು ತೆರಳುವ ಮುನ್ನ ತನ್ನ ಕೈಯಿಂದ ಭಾರತದ ಹಣೆಯ ಮೇಲೆ ಕೇಸರದ ತಿಲಕವನ್ನು ಇಟ್ಟು ಹೊರಡುತ್ತಿದ್ದಳು. ಆಚಾರ್ಯ ಶಂಕರರು ಮುಂದೆ ಸಾಗುತ್ತಿದ್ದಂತೆಲ್ಲಾ ಭಾರತೀಯ ಆತ್ಮದ ಆಧ್ಯಾತ್ಮಿಕ, ಆಧಿದೈವಿಕ ಹಾಗೂ ಆಧಿಭೌತಿಕ ಸ್ವರೂಪಗಳು ಸಂಪೂರ್ಣವಾಗಿ ಕಣ್ಣಿಗೆ ಕಟ್ಟುವಂತೆ ನಾಟ್ಯವಾಡತೊಡಗಿದವು."

ಕೇವಲ ನಿರಪೇಕ್ಷ ಭಾವದ ಸಾಹಿತ್ಯ ಸೃಷ್ಟಿಯಾಗಲೀ, ಇತಿಹಾಸ ರಚನೆಯಾಗಲಿ ಈ ಕಾದಂಬರಿಯನ್ನು ಬರೆಯುವುದಕ್ಕೆ ಕಾರಣವಾಗಿರಲಿಲ್ಲ. ದೀನ್ ದಯಾಳ್ ಉಪಾಧ್ಯಾಯರು ತಮ್ಮ ಸಾಮಾಜಿಕ, ರಾಷ್ಟ್ರೀಯ ಹಾಗೂ ರಾಜಕೀಯ–ಸಾಂಸ್ಕೃತಿಕ ವಿಚಾರಗಳ ಮಾಧ್ಯಮವಾಗಿ ಈ ಕಾದಂಬರಿಯ ರಚನಾ ವಿಧಾನವನ್ನು ಬಳಸ ಬಯಸಿದ್ದರು. ಹಾಗೂ ಅದನ್ನು ಅವರು ಪರಿಣಾಮಕಾರಿಯಾಗಿ ಬಳಸಿಕೊಂಡರು.

'ಸಮ್ರಾಟ್ ಚಂದ್ರಗುಪ್ತ' ಹಾಗೂ 'ಜಗದ್ಗುರು ಶ್ರೀ ಶಂಕರಾಚಾರ್ಯ' ಕಾದಂಬರಿಗಳನ್ನು ಕ್ರಮಶಃ ೧೯೪೬ ಹಾಗೂ ೧೯೪೭ ರಲ್ಲಿ ರಚಿಸಲಾಯಿತು. ದೀನ್ ದಯಾಳ್ ಉಪಾಧ್ಯಾಯರ ಸಮಗ್ರ ಸಾಹಿತ್ಯದಲ್ಲಿ ಈ ಎರಡು ಮಾತ್ರವೇ ಸಾಹಿತ್ಯ ಕೃತಿಗಳಾಗಿವೆ. ಅವುಗಳ ಸಾಹಿತ್ಯಕ ರೂಪ ಈ ಎರಡು ಕೃತಿಗಳಲ್ಲಿ ಎಷ್ಟು ಪ್ರಭಾವಶಾಲಿಯಾಗಿದೆಯೆಂದರೆ ದೀನ್ ದಯಾಳ್ ಉಪಾಧ್ಯಾಯರು ತಮ್ಮ ಮುಂದಿನ ಜೀವನದಲ್ಲಿ ಸಾಹಿತ್ಯ ಕ್ಷೇತ್ರವನ್ನು ಆರಿಸಿಕೊಂಡಿದ್ದ ಪಕ್ಷದಲ್ಲಿ, ಬಹುಶ: ಭಾರತದ ಮಹಾನ್ ಸಾಹಿತಿಗಳಲ್ಲಿ ಒಬ್ಬರಾಗಿ ಪರಿಗಣಿತರಾಗುತ್ತಿದ್ದರು. ಆದರೆ ೧೯೪೭ರ ಆನಂತರ ಅವರು ಯಾವುದೇ ಇತರ ಸಾಹಿತ್ಯಕ ಕೃತಿಗಳನ್ನು ರಚಿಸಲಿಲ್ಲ. ಇದಾದ ಅನಂತರದ ಅವರ ಬರೆವಣಿಗೆ ವಿಚಾರಪ್ರಧಾನವಾಗಿದ್ದು, ಅದು ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ದಾರ್ಶನಿಕ ರೂಪದಲ್ಲಿ ಪ್ರಕಟಗೊಂಡಿತು. ಪ್ರಬಂಧಗಳು ಹಾಗೂ ಭಾಷಣಗಳು ಪುಸ್ತಕಗಳು ಸಾಮಾನ್ಯವಾಗಿ ಇಂಥ ವಿಷಯಗಳನ್ನು ಒಳಗೊಂಡ ಸಂಕಲನಗಳೇ ಆಗಿವೆ. ಮೊದಲ ಈ ಎರಡು ಕೃತಿಗಳಲ್ಲಿರುವಂತೆ ಈ ಸಾಹಿತ್ಯದಲ್ಲಿ ಆ ಲಾಲಿತ್ಯ ಹಾಗೂ ಭಾವನಾತ್ಮಕತೆ ಕಂಡುಬರುವುದಿಲ್ಲ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಿದ್ದಾಗಲೇ ಅವರು ಅನೇಕ ದಿನಪತ್ರಿಕೆಗಳನ್ನು ಮತ್ತು ನಿಯತಕಾಲಿಕಗಳನ್ನು ಪ್ರಕಟಿಸಿದರು. ದೀನ್ ದಯಾಳ್ ಉಪಾಧ್ಯಾಯರ ಪ್ರಯತ್ನ ಹಾಗೂ ಸ್ಫೂರ್ತಿಗಳಿಂದಲೇ ೧೯೪೫ರಲ್ಲಿ ಮಾಸ ಪತ್ರಿಕೆಯಾದ 'ರಾಷ್ಟ್ರಧರ್ಮ' ಹಾಗೂ ವಾರಪತ್ರಿಕೆಯಾದ 'ಪಾಂಚಜನ್ಯ'ಗಳ ಪ್ರಕಟಣೆ ಆರಂಭಗೊಂಡಿತು. ಆನಂತರ 'ಸ್ವದೇಶ' ಎಂಬ ದಿನಪತ್ರಿಕೆಯನ್ನು ನಡೆಸಿಕೊಂಡು ಬಂದರು. ಈ ಪತ್ರಿಕೆಗಳಲ್ಲಿ ದೀನ್ ದಯಾಳ್ ಉಪಾಧ್ಯಾಯರು ನೇರವಾಗಿ ಎಂದೂ ಸಂಪಾದಕರಾಗಿ ಕಾರ್ಯ ನಿರ್ವಹಿಸಲಿಲ್ಲ ಆದರೆ ವಾಸ್ತವವಾಗಿ ಸಂಚಾಲಕರೂ, ಸಂಪಾದಕರು ಹಾಗೂ ಅಗತ್ಯಬಿದ್ದಲ್ಲಿ ಅದರ 'ಕಂಪೋಜಿಟರ್', 'ಮಶೀನ್‌ಮ್ಯಾನ್–



ಇದೆಲ್ಲ ದೀನ್ ದಯಾಳ್ ಉಪಾಧ್ಯಾಯರೇ ಆಗಿದ್ದರು.

ಈ ರೀತಿ ಸಂಪಾದಕೀಯ ನೀತಿಯ ಹಾಗೂ ವಿಷಯ ವಸ್ತುಸ್ಥಿತಿಯಾಗಿತ್ತು. ಇಷ್ಟೇ ಅಲ್ಲದೆ, ಅವರು ಖುದ್ದಾಗಿ ಈ ಪತ್ರಿಕೆಗಳಲ್ಲಿ ಬರೆದು ತಮ್ಮ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜನೈತಿಕ ವಿಚಾರಗಳನ್ನು ತಿಳಿಸಿಕೊಡುತ್ತಿದ್ದರು. ಅವರ ಆ ಕಾಲದ ಚಿಂತನೆಯನ್ನು ತಿಳಿಯಲು ಇರುವ ಪ್ರಾಥಮಿಕ ಆಕರಗಳೆಂದರೆ 'ಪಾಂಚಜನ್ಯ' ಹಾಗೂ 'ರಾಷ್ಟ್ರಧರ್ಮ'ದ ಪತ್ರಿಕೆಗಳೇ.

ದೀನ್ ದಯಾಳರ ಐತಿಹಾಸಿಕ ದೃಷ್ಟಿ, ಅವರ ಸಾಂಸ್ಕೃತಿಕ ವಿವೇಚನೆ ಹಾಗೂ ರಾಜಕೀಯ ದೃಷ್ಟಿಕೋನ ಇವೆಲ್ಲ ಈ ಸಾಹಿತ್ಯದಲ್ಲಿ ಸಾಂಗೋಪಾಂಗವಾಗಿ ಕಾಣದೊರೆಯುತ್ತವೆ. ಇದೇ ಸಮಯದಲ್ಲಿ ದೀನ್ ದಯಾಳರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂಲಕ ರಾಷ್ಟ್ರವಾದವನ್ನು ಕುರಿತು ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದರು. ಆದರೆ ಕುಟಿಲ ಸಾಮ್ರಾಜ್ಯವಾದಿಗಳಾದ ಆಂಗ್ಲರು ಬೇರೊಂದು ಯೋಜನೆಯನ್ನೇ ಹಮ್ಮಿಕೊಳ್ಳುತ್ತಿದ್ದರು. ಅವರು ಸ್ವಾತಂತ್ರ್ಯ ಚಳವಳಿಯನ್ನು ಅಧಿಕಾರ ಲೋಲುಪತೆಯ ಅಭಿಯಾನವನ್ನಾಗಿ ಬದಲಾಯಿಸಿದರು. ಆಂಗ್ಲರು ಭಾರತವನ್ನು ಬಿಟ್ಟು ಹೊರಡುವುದಕ್ಕೆ ಮುಂಚೆ, ಧರ್ಮವನ್ನು ಆಧರಿಸಿ ದ್ವಿರಾಷ್ಟ್ರವಾದದ ಸಿದ್ಧಾಂತದ ಮೇಲೆ ಭಾರತ ವಿಭಜನೆಯ ಶರತ್ತನ್ನು ಮುಂದಿಟ್ಟರು. ಭಾರತದ ನೇತೃತ್ವ ಅದನ್ನು ವಿರೋಧಿಸಲಿಲ್ಲ ಹಾಗೂ ಭಾರತದ ವಿಭಜನೆ ಮಾಡಿಯೇ ಇಲ್ಲಿಂದ ಹೊರಟುಹೋದರು. ಭಾರತದ ವಿಭಜನೆಯ ಸಂದರ್ಭದಲ್ಲಿ ಭಯಾನಕ ರಕ್ತಪಾತವುಂಟಾಯಿತು. ದೇಶವನ್ನು, ಒಂದು ರಾಷ್ಟ್ರವೆಂದು ತಿಳಿಯುವವರು ಹಾಗೂ ಭಾರತದಲ್ಲಿ ದ್ವಿ–ರಾಷ್ಟ್ರವಾದದ ಸಮರ್ಥಕರು ಇವರ ನಡುವೆ ಭಾರತ ಹಂಚಿಹೋಯಿತು. ಈ ಹಿಂಸಾಚಾರವೇ... ಮಹಾತ್ಮಾ ಗಾಂಧಿಯವರನ್ನು ನುಂಗಿ ನೀರು ಕುಡಿಯಿತು; ಅವರನ್ನು ನಿಂದನೀಯ ರೀತಿಯಲ್ಲಿ ಹತ್ಯೆ ಮಾಡಲಾಯಿತು.

ಭಾರತದ ವಿಭಜನೆಯು ದೀನ್ ದಯಾಳರನ್ನು ಬಹಳ ಘಾಸಿಗೊಳಿಸಿತು. ಅವರು ಬಹಳ ಪ್ರಖರವಾಗಿ ತಮ್ಮ ವಾದವನ್ನು ಮುಂದುವರಿಸಿದರು. ದೀನ್ ದಯಾಳ್ ಉಪಾಧ್ಯಾಯರ ಪ್ರಕಾರ, "ಅಖಂಡ ಭಾರತ, ದೇಶದ ಭೌಗೋಳಿಕ ಏಕತೆಯ ಪ್ರತೀಕವಾಗಿರುವುದಲ್ಲದೆ, ಜೀವನದ ಬಗೆಗಿನ ಭಾರತೀಯ ದೃಷ್ಟಿಕೋನದ ಪ್ರತೀಕವಾಗಿಯೂ ಇದೆ. ಇದು ವಿವಿಧತೆಯಲ್ಲಿ ಅಡಗಿರುವ ಏಕತೆಯನ್ನು ತೋರಿಸಿಕೊಡುತ್ತದೆ. ಹೀಗಾಗಿ ಅಖಂಡ ಭಾರತವೆಂದರೆ ಅದು ನಮ್ಮ ಪಾಲಿಗೆ ಯಾವುದೇ ರಾಜನೈತಿಕ ಘೋಷಣೆಯಲ್ಲ..... ಅದು ನಮ್ಮ ಸಂಪೂರ್ಣ ಜೀವನದರ್ಶನದ ಮೂಲಾಧಾರವೇ ಆಗಿದೆ."

ಅಖಂಡ ಭಾರತದ ಪರಿಕಲ್ಪನೆಗೆ ಸಂಬಂಧಿಸಿದ ಐತಿಹಾಸಿಕ, ಭೌಗೋಳಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯ ವಿಶ್ಲೇಷಣೆಯ ಬಗ್ಗೆ ಉಪಾಧ್ಯಾಯರು 'ಅಖಂಡ ಭಾರತ ಏಕೆ?' ಎಂಬ ಪುಸ್ತಕವನ್ನು ಬರೆದರು. ಅದರಲ್ಲಿ ಪ್ರಾಚೀನ ಭಾರತೀಯ ಸಾಹಿತ್ಯದ ಸಂದರ್ಭದಲ್ಲಿ ಅವರು ಭಾರತದಲ್ಲಿ ಯುಗಯುಗಗಳಿಂದ ನಡೆದು ಬಂದಿರುವ

ಸಾಂಸ್ಕೃತಿಕ ಹಾಗೂ ರಾಜನೈತಿಕ ಪರಂಪರೆಯನ್ನು ಉಲ್ಲೇಖಿಸಿದ್ದಾರೆ. ಭೌಗೋಳಿಕವಾಗಿ ಭಾರತವನ್ನು ಒಂದು ರಾಷ್ಟ್ರವನ್ನಾಗಿ ರೂಪಿಸುವುದಕ್ಕೆ ಆ ಪರಂಪರೆಯೇ ಕಾರಣವಾಗಿತ್ತು. ಈ ಪುಸ್ತಕದ ಸಾಮಗ್ರಿ ತಥ್ಯಾನ್ವೇಷದ ಸ್ವರೂಪದ್ದಾಗಿದ್ದರೂ, ಭಾಷೆ ಬಹಳ ಭಾವನಾತ್ಮಕವೇ ಆಗಿದೆ. "........ದೆಹಲಿಯಲ್ಲಿ ನಮ್ಮ ನಾಯಕರು ಹಣೆಯ ಮೇಲೆ ಕುಂಕುಮ ತಿಲಕವನ್ನು ಇರಿಸಿಕೊಳ್ಳುತ್ತಿದ್ದರೆ, ಅದೇ ಪಂಜಾಬಿನಲ್ಲಿ ಮಾತೆಯರು ಹಾಗೂ ಅಕ್ಕ–ತಂಗಿಯರ ಬೈತಲೆಯ ಕುಂಕುಮ ಅಳಿಸಿಹೋಗುತ್ತಿತ್ತು. 'ವಂದೇ ಮಾತರಂ' ಎಂದು ಜಯಘೋಷ ಮಾಡಿ, ಆ ತಾಯಿಯ ಆಶೀರ್ವಾದ ಮಾಡಬೇಕಾಗಿದ್ದ ಆ ಕೈಗಳನ್ನೇ ಕತ್ತರಿಸಿಹಾಕಿದ್ದೆವು. ...... ದೆಹಲಿಯ ಕೆಂಪುಕೋಟೆ ಮೇಲೆ ತ್ರಿವರ್ಣದ ನಮ್ಮ ಧ್ವಜವನ್ನು ಹಾರಿಸಿ ಸ್ವಾತಂತ್ರ್ಯದ ಘೋಷಣೆಯನ್ನು ಮಾಡಲಾಯಿತು; ಆದರೆ ರಾವಿಯ ಯಾವ ದಡದಲ್ಲಿ ನಿಂತು ಸ್ವಾತಂತ್ರ್ಯದ ಪ್ರತಿಜ್ಞೆಯನ್ನು ಘೋಷಿಸಲಾಗಿತ್ತೋ, ಅದನ್ನು ನಮ್ಮಿಂದ ಕಸಿದುಕೊಳ್ಳಲಾಗಿತ್ತು."

ಭಾರತ ವಿಭಜನೆಗೆ ಮುಸ್ಲಿಮರ ಪ್ರತ್ಯೇಕತಾ ನೀತಿ, ಆಂಗ್ಲರ 'ಒಡೆದು ಆಳುವ ನೀತಿ', ರಾಷ್ಟ್ರೀಯತೆಯ ಬಗೆಗಿನ ಕಾಂಗ್ರೆಸ್ಸಿನ ವಿಕೃತ ಧೋರಣೆ ಹಾಗೂ ತೃಪ್ತಿ ಪಡಿಸುವ ನೀತಿಗಳು ಕಾರಣವಾಗಿದೆ ಎಂದು ಉಪಾಧ್ಯಾಯರು ತಮ್ಮ ಈ ಪುಸ್ತಕದಲ್ಲಿ ಹೇಳಿದ್ದಾರೆ. ಸರ್ ಸೈಯದ್ ಅಹಮದ್‌ರು ೨೦ ಡಿಸೆಂಬರ್ ೧೮೮೭ರಂದು ಮಾಡಿದ ಆ ಭಾಷಣದಲ್ಲಿ ಮುಸಲ್ಮಾನರು ಕಾಂಗ್ರೆಸ್‌ನಿಂದ ಹಾಗೂ ಹಿಂದೂಗಳಿಂದ ಪ್ರತ್ಯೇಕವಾಗಿ ನಿಲ್ಲಬೇಕೆಂದು ಸಲಹೆ ಮಾಡಿದ್ದರು. ಅದನ್ನು ಉಪಾಧ್ಯಾಯರು ಸವಿಸ್ತಾರವಾಗಿ ವರ್ಣಿಸಿದ್ದಾರೆ. ಈ ಭಾಷಣ ಮುಸ್ಲಿಮರ ಪ್ರತೇಕತಾವಾದದ ಪ್ರಥಮ ಪ್ರಕಟಣೆಯಾಗಿತ್ತು. ಇದೇ ಮುಂದೆ ಅಲೀಗಡ್ ಮುಸ್ಲಿಂ ಯೂನಿವರ್ಸಿಟಿಯ, ಮುಸ್ಲಿಂ ಲೀಗ್‌ನ ಹಾಗೂ ಅಂಶತಃ ಪಾಕಿಸ್ತಾನದ ಬೇಡಿಕೆಯ ರೂಪದಲ್ಲಿ ಬೆಳೆದುನಿಂತಿತು.

ಕಾಂಗ್ರೆಸ್ಸಿನ ಹಿಂದೂ–ಮುಸ್ಲಿಂ ನೀತಿಯನ್ನು ಹಾಗೂ ಮಿಶ್ರ ಸಂಸ್ಕೃತಿಯ ಸಿದ್ಧಾಂತವನ್ನು ಪರೋಕ್ಷರೂಪದ ದ್ವಿ–ರಾಷ್ಟ್ರೀಯತಾವಾದವೆಂದು ಹೇಳುತ್ತಾ ಬಂದು, ಮುಸ್ಲಿಮರ ಪ್ರತ್ಯೇಕ ಸಂಸ್ಕೃತಿಯ ಹಾಗೂ ಈ ಸಂಸ್ಕೃತಿಯನ್ನು ಪೋಷಿಸುವ ವಿಚಾರ ಮುಂದೆ 'ಸಂತುಷ್ಟೀಕರಣ'ಕ್ಕೆ ಜನ್ಮ ನೀಡಿತು ಹಾಗೂ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ವಿಕೃತಗೊಳಿಸಿತು. ಉಪಾಧ್ಯಾಯರು ಹೇಳಿದ್ದಾರೆ. "ಖಿಲಾಫತ್ ಆಂದೋಳನವನ್ನು ರಾಷ್ಟ್ರೀಯ ಆಂದೋಳನವೆಂದು ಪರಿಗಣಿಸುವುದರ ಮೂಲಕ ನಾವು ನಮ್ಮ ರಾಷ್ಟ್ರೀಯತೆಯನ್ನು ಕಳಂಕಿತಗೊಳಿಸಿದ್ದಲ್ಲದೆ, ತಾವು ರಾಷ್ಟ್ರೀಯರೆನ್ನಿಸಿಕೊಳ್ಳಲು ಇಸ್ಲಾಂನ ಹೆಸರಿನಲ್ಲಿ ಪ್ರಚಲಿತವಾಗಿರುವ ಭಾರತದ ಹೊರಗಿನ ಪ್ರವೃತ್ತಿಗಳನ್ನು ಬಿಡಬೇಕಾದ ಅಗತ್ಯವಿಲ್ಲ ಎಂಬ ಭಾವನೆಯನ್ನು ಮುಸಲ್ಮಾನರ ಮನಸ್ಸಿನಲ್ಲಿ ಮೂಡಿಸಿತು. ಅಷ್ಟೇ ಅಲ್ಲ, ಆ ಪ್ರವೃತ್ತಿಗಳಿಗಾಗಿ ಒತ್ತಾಯಪಡಿಸಿದಲ್ಲಿ ಅದೇ ಭಾರತದ ರಾಷ್ಟ್ರೀಯತೆಯ ಅಂಗವಾಗಬಹುದು ಎಂಬ ಧೋರಣೆಯನ್ನು ಬಿತ್ತಿತು. ಇದರ ಪರಿಣಾಮವಾಗಿ ೧೯೨೩ರಲ್ಲಿ ಕಾಕಿನಾಡದ ಕಾಂಗ್ರೆಸ್ಸಿನ ಅಧ್ಯಕ್ಷ ಮೌಲಾನಾ ಮೊಹಮದ್ ಅಲಿ 'ವಂದೇ ಮಾತರಂ'ನ್ನು ವಿರೋಧಿಸಿದರು."



ಕಾಂಗ್ರೆಸ್‌ನ ಈ ಪ್ರವೃತ್ತಿಯು ಸಾಮಾನ್ಯ ಮುಸ್ಲಿಂ ಸಮುದಾಯ ಪ್ರತ್ಯೇಕತಾವಾದ ಮುಸ್ಲಿಮರ ನಾಯಕತ್ವದ ಬೆನ್ನಿಗೆ ನಿಲ್ಲುವಂತೆ ಮಾಡಿತು. ೧೯೩೬–೩೭ರ ಚುನಾವಣೆಗಳಲ್ಲಿ ಮುಸ್ಲಿಂ ಲೀಗ್ ಹೆಚ್ಚು ಯಶಸ್ವಿಯಾಗಿರಲಿಲ್ಲವಾದರೂ, ಕಾಂಗ್ರೆಸ್ ಸರ್ಕಾರ ಮುಸ್ಲಿಂ ಸಂತುಷ್ಟೀಕರಣ ನೀತಿಯ ಲಾಭ ಪಡೆದು ಮುಸಲ್ಮಾನರು ತಮ್ಮ ಸಂಘಟನೆಯನ್ನು ಚೆನ್ನಾಗಿ ಬಲಪಡಿಸಿಕೊಂಡರು. ಜಿನ್ನಾರವರು ಕಾಂಗ್ರೆಸ್‌ನೊಡನೆ ಒಪ್ಪಂದ ಮಾಡಿಕೊಳ್ಳುವ ಸಲುವಾಗಿ ಮೊದಲು ೧೪ ಸೂತ್ರ, ಆನಂತರ ೨೧ ಸೂತ್ರಗಳ ಕಾರ್ಯಕ್ರಮವನ್ನು ಮುಂದೊಡ್ಡಿದರು; ಆದರೆ ಒಪ್ಪಂದವಾಗಲಿಲ್ಲ. ಏಕೆಂದರೆ, ಒಪ್ಪಂದ ಏರ್ಪಡುವುದು ಅವರಿಗೆ ಬೇಕಿರಲಿಲಲ್ಲ. ಕಾಂಗ್ರೆಸ್ ಮಂತ್ರಿಮಂಡಲಗಳು ರಾಜೀನಾಮೆ ನೀಡಿದಾಗ, ಮುಸ್ಲಿಮ್‌ಲೀಗ್ ಅದನ್ನು 'ಮುಕ್ತಿ –ದಿನ'ವನ್ನಾಗಿ ಆಚರಿಸಿತು. ಹಾಗೂ ಲಾಹೌರ್‌ನಲ್ಲಿ ೧೯೪೦ರಲ್ಲಿ 'ಪಾಕಿಸ್ತಾನ'ದ ಸ್ಥಾಪನೆಯೇ ತನ್ನ ಧ್ಯೇಯವೆಂದು ಘೋಷಿಸಿತು."

ವಿಭಜನೆಯ ವಿಚಾರವನ್ನು ಒಪ್ಪದೆ ಇದ್ದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆಯುತ್ತಿರಲಿಲ್ಲ. ಹಾಗೂ ಇಲ್ಲಿ ಭಯಂಕರ ಸಾವು ನೋವುಗಳುಂಟಾಗುತ್ತಿದ್ದವು ಎಂಬುದನ್ನು ದೀನ್ ದಯಾಳ್ ಉಪಾಧ್ಯಾಯರು ಒಪ್ಪುತ್ತಿರಲಿಲ್ಲ. ಅವರ ಪ್ರಕಾರ "ಕಾಂಗ್ರೆಸ್ ನಾಯಕರು ದೃಢವಾಗಿ ಉಳಿದಿದ್ದಲ್ಲಿ ಹಾಗೂ ಭಾರತದ ಜನರಲ್ಲಿ ಜಾಗೃತಿಯನ್ನು ಮೂಡಿಸಲು ಸಹಕರಿಸಿದ್ದಲ್ಲಿ ಆಂಗ್ಲರು ಅಖಂಡ ಭಾರತವನ್ನು ತೊರೆದು ಹೋಗುತ್ತಿದ್ದರು." ರಕ್ತಪಾತದ ಬಗ್ಗೆ ಅವರ ಅಭಿಪ್ರಾಯ ಹೀಗಿತ್ತು: "ಭಾರತದ ವಿಭಜನೆಗೆ ಮುನ್ನ ಹಾಗೂ ಅನಂತರದ ನರಮೇಧದಲ್ಲಿ ಎಷ್ಟು ಬಲಿಗಳಾದುವೋ ಅಷ್ಟು ಬಲಿಗಳು ಹಿಂದಿನ ಎರಡು ಮಹಾಯುದ್ಧಗಳಲ್ಲಿಯೂ ಆಗಿರಲಿಲ್ಲ; ಜೊತೆಗೆ ಲೂಟಿ, ಅಪಹರಣ ಹಾಗೂ ಹತ್ಯಾಕಾಂಡಗಳಲ್ಲಿ ಕಂಡುಬಂದಂತಹ ಮಾನವನ ಜಘನ್ಯ ಪಾಶವಿಕತೆ ಯಾವುದೇ ಯುದ್ಧದಲ್ಲಿ ಎಲ್ಲಿಯೂ ಕಂಡುಬಂದಿರಲಿಲ್ಲ."

ವಿಭಜನೆಯಿಂದ ನಮ್ಮ ಯಾವುದೇ ಸಮಸ್ಯೆಗೆ ಪರಿಹಾರ ದೊರೆಯಲಿಲ್ಲ. ಅಷ್ಟೇ ಅಲ್ಲ, ಸಮಸ್ಯೆಗಳು ಮತ್ತಷ್ಟು ಜಟಿಲಗೊಂಡವು. ಭಾರತದ ಅಂತರಾಷ್ಟ್ರೀಯ ಶಕ್ತಿಯನ್ನು ನ್ಯೂನಗೊಳಿಸುವಲ್ಲಿ ಪಾಕಿಸ್ತಾನದೊಡನೆ ಇರುವ ನಮ್ಮ ಜಗಳ ಬಹು ದೊಡ್ಡ ಪಾತ್ರವಹಿಸುತ್ತಿದೆ. ಹಿಂದೂ–ಮುಸ್ಲಿಂರ ಸಮಸ್ಯೆ ಹಾಗೆಯೇ ಉಳಿದಿದೆ. ಭಾರತದ ರಾಜಕೀಯ ಪಕ್ಷಗಳು ಅದೇ ಮಿಶ್ರ–ಸಂಸ್ಕೃತಿಯನ್ನು ಹಾಗೂ ರಾಷ್ಟ್ರೀಯತೆಯ ಅವಧಾರಣೆಯನ್ನು ಈಗಲೂ ತಮ್ಮ ಆಧಾರವನ್ನಾಗಿಸಿಕೊಂಡಿವೆ. ಇದರ ಪರಿಣಾಮವಾಗಿ ಮುಸ್ಲಿಂರ ಪ್ರತ್ಯೇಕತಾವಾದವು ಸ್ವತಂತ್ರ ಭಾರತದಲ್ಲಿ ಬಲಗೊಳ್ಳುತ್ತಿದೆ ಹಾಗೂ ಅವರ ಈ ಧೋರಣೆ ಪಾಕಿಸ್ತಾನಕ್ಕೆ ತಾರ್ಕಿಕ ಆಧಾರವನ್ನು ನೀಡುತ್ತಲಿದೆ. ತಮ್ಮ ಪುಸ್ತಕದ ಕೊನೆಯಲ್ಲಿ ಉಪಾಧ್ಯಾಯರು ಹೀಗೆ ಹೇಳುತ್ತಾರೆ: "ವಾಸ್ತವವಾಗಿ ಭಾರತವನ್ನು ಅಖಂಡವನ್ನಾಗಿರಿಸಲು ಇರುವ ಮಾರ್ಗ ಯುದ್ಧವಲ್ಲ. ಯುದ್ಧದಿಂದ ಭೌಗೋಳಿಕ

ಏಕತೆ ಉಂಟಾಗುತ್ತದೆಯೇ ಹೊರತು ರಾಷ್ಟ್ರೀಯ ಏಕತೆ ಉಂಟಾಗುವುದಿಲ್ಲ. ಅಖಂಡತೆ ಕೇವಲ ಭೌಗೋಳಿಕವಲ್ಲದೆ, ರಾಷ್ಟ್ರೀಯ ಆದರ್ಶವೂ ಆಗಿದೆ." ದೇಶದ ವಿಭಜನೆ ಆದುದು ಎರಡು ರಾಷ್ಟ್ರಗಳ ಸಿದ್ಧಾಂತದಿಂದಾಗಿ ಹಾಗೂ ಅದರೊಡನೆ ಒಪ್ಪಂದ ಮಾಡಿಕೊಳ್ಳುವ ಪ್ರವೃತ್ತಿಯಿಂದಾಗಿ. ಒಂದು ರಾಷ್ಟ್ರದ ಸಿದ್ಧಾಂತದ ಬಗ್ಗೆ ಮನ-ವಚನ ಹಾಗೂ ಕರ್ಮಗಳ ಮೂಲಕವಾಗಿ ಬದ್ಧರಾಗಿ ನಿಂತಾಗ ಮಾತ್ರವೇ ಅಖಂಡ ಭಾರತ ರೂಪುಗೊಳ್ಳಲು ಸಾಧ್ಯವಾಗುತ್ತದೆ. ರಾಷ್ಟ್ರೀಯತೆಯ ವಿಚಾರದಲ್ಲಿ ಒಪ್ಪಂದ ಮಾಡಿಕೊಳ್ಳುವ ವೃತ್ತಿಯನ್ನು ತ್ಯಜಿಸಿದಲ್ಲಿ, ರಾಷ್ಟ್ರೀಯತೆಯ ದೃಷ್ಟಿಯಿಂದ ಇಂದು ಹಿಂದುಳಿದಿರುವ ಮುಸಲ್ಮಾನರು ಸಹ ಸಹಕಾರವನ್ನು ನೀಡುವವರಾಗುತ್ತಾರೆ. ಇಂದಿನ ಪರಿಸ್ಥಿತಿಯಲ್ಲಿ ಯಾವುದು ಅಸಂಭವವೆನಿಸುತ್ತದೆಯೋ ಅದು ಕಾಲಾಂತರದಲ್ಲಿ ಸಂಭವವಾಗುತ್ತದೆ; ಆದರೆ ಇದಕ್ಕೆ ಆದರ್ಶಗಳು ನಮ್ಮ ಕಣ್ಣು ಮುಂದೆ ಜೀವಂತವಾಗಿ ಇರಬೇಕಾದ್ದು ಅತ್ಯಗತ್ಯವಾಗುತ್ತದೆ.

ರಾಷ್ಟ್ರೀಯತೆಯೊಡನೆ ರಾಜಿ ಮಾಡಿಕೊಳ್ಳಲು ಸಿದ್ಧವಾಗಿರದ ತಮ್ಮ ಮನೋಧರ್ಮವನ್ನು ತಮ್ಮ ಮತ್ತೊಂದು ಲೇಖನದಲ್ಲಿ ಅವರು ಹೀಗೆ ವ್ಯಕ್ತಪಡಿಸಿದ್ದಾರೆ: "ನಾವು ಏಕತೆಯನ್ನು ಬಯಸಿದ್ದಲ್ಲಿ, ಭಾರತೀಯ ರಾಷ್ಟ್ರೀಯತೆಯನ್ನು- ಅಂದರೆ ಹಿಂದೂ ಸಂಸ್ಕೃತಿಯನ್ನು- ನಾವು ಕಂಡುಕೊಳ್ಳಬೇಕಾಗಿದೆ. ಅದನ್ನು ಮಾನದಂಡವೆಂದು ಭಾವಿಸಿ ಮುನ್ನಡೆಯಬೇಕಾಗಿದೆ. ಭಾಗೀರಥಿಯ ಈ ಪುಣ್ಯಧಾರೆಯಲ್ಲಿ ಎಲ್ಲ ಪ್ರವಾಹಗಳೂ ಸಂಗಮಗೊಳ್ಳಲು ಅವಕಾಶ ಮಾಡಿಕೊಡಿ. ಯಮುನೆಯೂ ಸೇರಿಕೊಳ್ಳಲಿದ್ದಾಳೆ ಹಾಗೂ ತನ್ನೆಲ್ಲ ಕಾಳಿಮೆಯನ್ನು ತೊರೆದು ಗಂಗೆಯ ಧವಳಧಾರೆಯಲ್ಲಿ ಒಂದಾಗಿ ಸೇರಿಹೋಗುತ್ತಾಳೆ".

'ಅಖಂಡ ಭಾರತ ಏಕೆ?' ಎಂಬ ಅವರ ಈ ಪುಸ್ತಕವನ್ನು, ಆ ಸಂಕ್ರಮಣ ಕಾಲದಲ್ಲಿಯೇ ಬರೆಯಲಾಗಿತ್ತು. ಅದು ಅವರು ಸಂಘದ ಕಾರ್ಯದ ಸಲುವಾಗಿ ನೇರವಾಗಿ ರಾಜಕೀಯ ಕ್ಷೇತ್ರದಲ್ಲಿ ಪ್ರಯಾಣ ಮಾಡುತ್ತಿದ್ದ ಕಾಲವಾಗಿತ್ತು. ಅವರ ಲೇಖನ ಕಾರ್ಯ ಸತತವಾಗಿ ಮುಂದುವರಿಯುತಲಿತ್ತು. ಪ್ರಸಂಗಾನುಗುಣವಾಗಿ ಮುಂದಿನ ಅಧ್ಯಯನಗಳಲ್ಲಿ ಅವುಗಳ ವರ್ಣನೆ ಮಾಡಲಾಗುತ್ತದೆ.



## ಅಧ್ಯಾಯ ೪

# ರಾಜಕೀಯದಲ್ಲಿ ಸಂಸ್ಕೃತಿಯ ರಾಯಭಾರಿ

ಆಂಗ್ಲರು ಬಿಟ್ಟು ಹೋದ ಅನಂತರ, ಭಾರತದ ರಾಜಕೀಯ ಜನತಂತ್ರದ ಅಗತ್ಯಕ್ಕೆ ಅನುಗುಣವಾಗಿ ರೂಪುಗೊಳ್ಳತೊಡಗಿತು. ಸ್ವಾತಂತ್ರ್ಯದ ಅನಂತರ ಜನರು ತಮ್ಮ-ತಮ್ಮ ಆಲೋಚನೆಗಳಿಗೆ ಅನುಗುಣವಾಗಿ ಬೇರೆ ಬೇರೆ ಪಕ್ಷಗಳನ್ನು ರಚಿಸಿಕೊಳ್ಳಬೇಕು; ಕಾಂಗ್ರೆಸ್ ಸ್ವಾತಂತ್ರ್ಯದ ಆಂದೋಳನಕ್ಕಾಗಿ ರೂಪುಗೊಂಡಂತಹ ವೇದಿಕೆಯಾಗಿದ್ದು. ಈಗ ಕಾಂಗ್ರೆಸ್ ರಾಜಕೀಯ ಪಕ್ಷವಾಗಿ ಕಾರ್ಯ ನಿರ್ವಹಿಸುವುದಕ್ಕೆ ಬದಲಾಗಿ ವಿಸರ್ಜಿತವಾಗಬೇಕು ಎಂಬುದು ಮಹಾತ್ಮ ಗಾಂಧೀಜಿಯವರ ಅಭಿಪ್ರಾಯವಾಗಿತ್ತು. ಆದರೆ ಇದು ಸಾಧ್ಯವಾಗಲಿಲ್ಲ ಇದರ ಪರಿಣಾಮವಾಗಿ ಸಮಾಜವಾದಿ ಜನರು ಕಾಂಗ್ರೆಸ್‌ನಿಂದ ಬೇರ್ಪಟ್ಟಿತು. ಸರ್ದಾರ್ ಪಟೇಲ್ ಹಾಗೂ ರಾಜರ್ಷಿ ಪುರುಷೋತ್ತಮ ದಾಸ ಟಂಡನ್‌ರಂತಹವರು ರಾಷ್ಟ್ರೀಯ ಸ್ವಯಂಸೇವಕ ಸಂಘ, ಕಾಂಗ್ರೆಸ್‌ನೊಡನೆ ಸೇರಿ ಕಾರ್ಯನಿರ್ವಹಿಸಬೇಕೆಂದು ಬಯಸಿದರು. ಪಟೇಲರು ಇದಕ್ಕಾಗಿಯೇ ಸಂಘದ ಅಂದಿನ ಸರಸಂಘ ಸಂಚಾಲಕರಾಗಿದ್ದ ಶ್ರೀ ಮಾಧವರಾವ್ ಸದಾಶಿವರಾವ್ ಗೋಳ್‌ವಳ್‌ಕರರಿಗೆ ಪತ್ರ ಬರೆದಿದ್ದರು. ೧೯೫೦ ರಲ್ಲಿ ಪುರುಷೋತ್ತಮದಾಸ್ ಟಂಡನ್ ಅವರು ಕಾಂಗ್ರೆಸ್‌ನ ಅಧ್ಯಕ್ಷರಾಗಿ ಆಯ್ಕೆಯಾದರು. ಅದೇ ಸಮಯದಲ್ಲಿ ಕಾಂಗ್ರೆಸ್ ಕಾರ್ಯಕಾರಿಣಿ ಸಂಘದ ಸ್ವಯಂಸೇವಕರನ್ನು, ಕಾಂಗ್ರೆಸ್ ಪಕ್ಷಕ್ಕೆ ಸೇರಿಸಿಕೊಳ್ಳಬೇಕೆಂಬ ಪ್ರಸ್ತಾಪವನ್ನು ಅಂಗೀಕರಿಸಿತ್ತು. ಇದರಿಂದಾಗಿ ಕಾಂಗ್ರೆಸ್ ಪಕ್ಷದಲ್ಲಿ ಆಂತರಿಕ ವಿವಾದ ಹೆಚ್ಚಿತು. ಹೀಗಾಗಿ ಸ್ಪಷ್ಟೀಕರಣದ ನೆಪದಲ್ಲಿ ಈ ಪ್ರಸ್ತಾಪವನ್ನು ಕೈಬಿಡಲಾಯಿತು. ಕೊನೆಗೆ ಪುರುಷೊತ್ತಮ್‌ದಾಸ್ ಟಂಡನ್‌ರು ಅಧ್ಯಕ್ಷ ಪದವಿಗೆ ರಾಜೀನಾಮೆ ನೀಡಬೇಕಾಯಿತು. ಇದೇ ವರ್ಷ ಸರ್ದಾರ್ ಪಟೇಲರು ನಿಧನರಾದರು. ಪ್ರಜಾತಂತ್ರವನ್ನು ಅಂಗೀಕರಿಸಿದ್ದ ಭಾರತದಲ್ಲಿ ಸಂಘದ ಸ್ವಯಂಸೇವಕರು ರಾಜಕೀಯ ಪಾತ್ರವಹಿಸಬೇಕೆಂದು ಇಚ್ಛಿಸಿದರು. ಕಾಂಗ್ರೆಸ್‌ನ ಬಾಗಿಲುಗಳು ಅವರಿಗೆ ಮುಚ್ಚಿದವು. ಆದುದರಿಂದ ಭಾರತೀಯ ಜನಸಂಘದ ಸ್ಥಾಪನೆ ಆಯಿತು. ಈ ಸಂದರ್ಭದಲ್ಲಿ ದೀನ್ ದಯಾಳ್ ಉಪಾಧ್ಯಾಯರು 'ಆರ್ಗನೈಜರ್'ದಲ್ಲಿ ಹೀಗೆಂದು ಬರೆದಿದ್ದರು: "ಶ್ರೀ ಟಂಡನ್‌ರವರು ನಿಶ್ಚಯವಾಗಿಯೂ ಕಾಂಗ್ರೆಸ್ ಪಕ್ಷದಲ್ಲಿದ್ದ ಕಟ್ಟಕಡೆಯ ವಿಚಾರಶೀಲ ವ್ಯಕ್ತಿಯಾಗಿದ್ದರು.

ಅವರು ಪಕ್ಷದಲ್ಲಿ 'ಭಾರತೀಯ' ತತ್ವವನ್ನು ಪ್ರತಿನಿಧಿಸುತ್ತಿದ್ದರು. ಪಂ. ನೆಹರೂ ಅವರ ಎದುರಿನಲ್ಲಿ ಕಾಂತಿಹೀನರಾಗಿ ಪರಿಣಮಿಸಿ ಆನಂತರ, ಅದೇ ಕಾರಣದಿಂದಾಗಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಪದವಿಯನ್ನು ಬಿಡಬೇಕಾಗಿ ಬಂದಿತು. ವೈಚಾರಿಕವಾಗಿ ಕಾಂಗ್ರೆಸ್ ಪಕ್ಷ ರಾಷ್ಟ್ರವಾದೀ ಭಾರತೀಯ ಭಾವನೆಗಳಿಂದ ದೂರ ಸರಿಯುತ್ತಾ ಹೋಯಿತು. ಶ್ರೀ ಟಂಡನ್ ಕಾಂಗ್ರೆಸ್‌ಪಕ್ಷದ ಅಧ್ಯಕ್ಷರಾಗಿ ಇದ್ದಲ್ಲಿ ಹಾಗೂ ಕಾಂಗ್ರೆಸ್ ಅವರ ಆಲೋಚನೆಗಳನ್ನು ಸ್ವೀಕರಿಸಿದ್ದ ಪಕ್ಷದಲ್ಲಿ ಬಹುಶಃ ಜನಸಂಘವನ್ನು ಸ್ಥಾಪಿಸುವ ಅಗತ್ಯವಿರುತ್ತಿರಲಿಲ್ಲ."

ವಿಚಾರಧಾರೆಗೆ ಅನುಗುಣವಾಗಿ ಬೇರೆ –ಬೇರೆ ಪಕ್ಷಗಳನ್ನು ರಚಿಸಬೇಕೆಂದು ಮಹಾತ್ಮ ಗಾಂಧೀಜಿಯವರು ಹೇಳಿದ್ದುದು ಸರಿಯಾಗಿಯೇ ಇತ್ತು. ವಿಚಾರಧಾರೆಯ ಭೇದದಿಂದಾಗಿಯೇ ಸಮಾಜವಾದಿಗಳು ಕಾಂಗ್ರೆಸ್ ಪಕ್ಷವನ್ನು ತೊರೆದಿದ್ದರು. ಡಾ॥ ಶ್ಯಾಮಾಪ್ರಸಾದ್ ಮುಖರ್ಜಿರವರು ಸ್ವತಂತ್ರ ಭಾರತದ ಮಂತ್ರಿಮಂಡಲದಲ್ಲಿ ಭಾರತದ ಪ್ರಥಮ ಉದ್ಯೋಗಮಂತ್ರಿಗಳಾಗಿದ್ದರು. ೧೯೫೦ರಲ್ಲಿ ನೆಹರೂ–ಲಿಯಾಕತ್ ಒಪ್ಪಂದವಾಯಿತು. ಮುಖರ್ಜಿರವರು ಈ ಒಪ್ಪಂದಕ್ಕೆ ವಿರುದ್ಧವಾಗಿದ್ದರು. ಅವರು ಕಾಂಗ್ರೆಸ್ ಸರ್ಕಾರಕ್ಕೆ ರಾಜೀನಾಮೆ ನೀಡಿಬಿಟ್ಟರು. ೨೧ ಅಕ್ಟೋಬರ್ ೧೯೫೧ರಲ್ಲಿ ಡಾ॥ ಮುಖರ್ಜಿ ಅವರ ಅಧ್ಯಕ್ಷತೆಯಲ್ಲಿ 'ಭಾರತೀಯ ಜನಸಂಘ'ದ ಸ್ಥಾಪನೆಯಾಯಿತು. ಇದಕ್ಕೆ ಮೊದಲು ಡಾ॥ ಮುಖರ್ಜಿ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರ್‌ಸಂಘದ ಸಂಚಾಲಕರಾದ ಶ್ರೀ. ಮಾ. ಸ. ಗೋಳ್‌ವಳ್ಕರ್ ಅವರನ್ನು ಭೇಟಿ ಮಾಡಿದರು. ರಾಷ್ಟ್ರೀಯತೆಯ ಅವಧಾರಣೆಯ ವಿಷಯದಲ್ಲಿ ಇಬ್ಬರೂ ಏಕಾಭಿಪ್ರಾಯವನ್ನು ಹೊಂದಿದ್ದರು. ಶ್ರೀ ಗೋಳ್‌ವಳ್ಕರ್ ಅವರು ತಮ್ಮ ಒಂದು ಲೇಖನದಲ್ಲಿ ಹೀಗೆ ಬರೆದಿದ್ದಾರೆ : "..........ಈ ರೀತಿ ಎಲ್ಲರ ಅಭಿಪ್ರಾಯ ಒಂದೇ ಆದಾಗ, ನಾನು ನಿಸ್ವಾರ್ಥಿಗಳೂ ಹಾಗೂ ದೃಢ ನಿಶ್ಚಯವನ್ನುಳ್ಳವರೂ ಆಗಿದ್ದ ನಿಷ್ಠಾವಂತ ಹಾಗೂ ಅನುಭವಿ ಕಾರ್ಯಕರ್ತರನ್ನು ಆಯ್ಕೆ ಮಾಡಿದೆ. ಅವರು ಹೊಸ ಪಕ್ಷದ ಸ್ಥಾಪನೆಯ ಭಾರವನ್ನು ತಮ್ಮ ಹೆಗಲಮೇಲೆ ಹೊರುವ ಸಾಮರ್ಥ್ಯವನ್ನು ಹೊಂದಿರುವಂತಹರಾಗಿದ್ದರು. ...........ಈ ರೀತಿ ಡಾ. ಮುಖರ್ಜಿ ಅವರು ಭಾರತೀಯ ಜನಸಂಘದ ಸ್ಥಾಪನೆಯ ರೂಪದಲ್ಲಿ ತಮ್ಮ ಆಕಾಂಕ್ಷೆಯನ್ನು ಈಡೇರಿಸಿಕೊಂಡರು".

ಅವರು ಹೀಗೆಂದೂ ಬರೆದಿದ್ದಾರೆ: "ನಾವಿಬ್ಬರೂ (ಡಾ.ಮುಖರ್ಜಿ ಹಾಗೂ ಗೋಳ್‌ವಳ್ಕರ್) ನಮ್ಮ–ನಮ್ಮ ಸಂಘಟನೆ ಮತ್ತು ಕಾರ್ಯ ಕ್ಷೇತ್ರದ ದೃಷ್ಟಿಯಿಂದ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳದೆ ಮಹತ್ತ್ವ ಪೂರ್ಣವಾದ ಹೆಜ್ಜೆಯನ್ನು ಇಡುತ್ತಿರಲಿಲ್ಲ. ಹೀಗೆ ಮಾಡುವಾಗ ಒಬ್ಬರು ಇನ್ನೊಬ್ಬರ ಕಾರ್ಯದಲ್ಲಿ ಕೈಹಾಕದಂತೆ ಅಥವಾ ಎರಡೂ ಸಂಘಟನೆಗಳು ಪರಸ್ಪರ ಸಂಬಂಧದ ವಿಷಯದಲ್ಲಿ ತಪ್ಪು



ಕಲ್ಪನೆ ಉಂಟಾಗದಂತೆ ಹಾಗೂ ಒಂದು ಸಂಸ್ಥೆ ಇನ್ನೊಂದರ ಮೇಲೆ ಅಧಿಕಾರ ಚಲಾಯಿಸುವಂಥ ಪ್ರಯತ್ನ ಮಾಡದಂತೆ ನಡೆದುಕೊಳ್ಳಬೇಕೆಂಬ ವಿಚಾರದತ್ತ ಗಮನ ಹರಿಸುತ್ತಿದ್ದೆವು."

ಹೊಸ ಪಕ್ಷದ ನಿರ್ವಹಣೆಗಾಗಿ ಗೋಳ್‌ವಳ್ಕರ್ ಅವರು ಮುಖರ್ಜಿ ಅವರಿಗೆ ಒದಗಿಸಿಕೊಟ್ಟ ನಿಸ್ವಾರ್ಥಿ ಹಾಗೂ ದೃಢ ನಿಶ್ಚಯದ ಸಹೋದ್ಯೋಗಿಗಳಲ್ಲಿ ಪಂ॥ ದೀನ್ ದಯಾಳ್ ಉಪಾಧ್ಯಾಯರೇ ಎಲ್ಲರಿಗಿಂತಲೂ ಮಹತ್ವದ ವ್ಯಕ್ತಿಯಾಗಿದ್ದರು. ಭಾರತೀಯ ಜನಸಂಘದ ಮೊದಲನೆಯ ಅಧಿವೇಶನ ೧೯೫೨ರ ಡಿಸೆಂಬರ್ ೨೯, ೩೦ ಮತ್ತು ೩೧ ರಂದು ಕಾನ್ಪುರದಲ್ಲಿ ನಡೆಯಿತು. ದೀನ್ ದಯಾಳ್ ಉಪಾಧ್ಯಾಯರನ್ನು ಈ ಹೊಸ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು. ಇಲ್ಲಿಂದಲೇ ದೀನ್ ದಯಾಳ್ ಉಪಾಧ್ಯಾಯರ ರಾಜಕೀಯ ಯಾತ್ರೆ ಪ್ರಾರಂಭವಾಯಿತು. ಮೊದಲನೆಯ ಅಧಿವೇಶನದಲ್ಲಿಯೇ ಅವರು ತಮ್ಮ ವೈಚಾರಿಕ ಸಾಮರ್ಥ್ಯವನ್ನು ತೋರಿಸಿಕೊಟ್ಟರು. ಈ ಅಧಿವೇಶನದಲ್ಲಿ ಒಟ್ಟು ೧೫ ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು. ಇವುಗಳಲ್ಲಿ ಏಳು ಗೊತ್ತುವಳಿಗಳನ್ನು ದೀನ್ ದಯಾಳ್ ಉಪಾಧ್ಯಾಯ ಅವರೇ ಏಕಾಂಗಿಯಾಗಿ ಸಿದ್ಧಪಡಿಸಿದ್ದರು.

ಹೊಸದಾಗಿ ಆಯ್ಕೆಯಾಗಿದ್ದ ಪ್ರಧಾನ ಕಾರ್ಯದರ್ಶಿ ದೀನ್ ದಯಾಳ್ ಉಪಾಧ್ಯಾಯರ ಪರಿಚಯ ಮೊದಲೇ ಆಗಿರಲಿಲ್ಲ. ಆದರೆ ಕಾನ್‌ಪುರದ ಅಧಿವೇಶನದಲ್ಲಿ ಅವರು ಉಪಾಧ್ಯಾಯರ ಕಾರ್ಯದಕ್ಷತೆ, ಸಂಘಟನಾ ಕೌಶಲ ಹಾಗೂ ವೈಚಾರಿಕ ಚಾತುರ್ಯವನ್ನು ಗಮನಿಸಿದ್ದರು. ಈ ಅನುಭವದ ಆಧಾರದ ಮೇಲೆಯೇ ಅವರು ಈ ಸುಪ್ರಸಿದ್ಧ ಹೇಳಿಕೆಯನ್ನು ನೀಡಿದ್ದರು: "ನನಗೇನಾದರೂ ಇಬ್ಬರು ದೀನದಯಾಳ ಸಿಗುವುದಾದರೆ, ನಾನು ಭಾರತದ ರಾಜಕೀಯ ನಕ್ಷೆಯನ್ನೇ ಬದಲಾಯಿಸಿ ಬಿಡುತ್ತೇನೆ".

ದೀನ್ ದಯಾಳ್ ಉಪಾಧ್ಯಾಯರಿಗೆ ತಮ್ಮದೇ ಆದ ವೈಯಕ್ತಿಕ ಜೀವನವಿರಲಿಲ್ಲ. ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದಂಥ ಅಜೀವ ಪ್ರಚಾರಕರಾಗಿದ್ದರು. ಸಂಘದ ಸ್ವಯಂಸೇವಕರಾಗಿ ಅವರು ಭಾರತೀಯ ಜನಸಂಘವನ್ನೇ ತಮ್ಮ ಜೀವನದ ಧ್ಯೇಯಕಾರ್ಯವನ್ನಾಗಿ ಸ್ವೀಕರಿಸಿದ್ದರು. ಆದುದರಿಂದ ಅವರಿಗೆ ಸಂಘಕ್ಕೆ ಹೊರತಾದ ಯಾವುದೇ ಬೇರೆ ಸಾರ್ವಜನಿಕ ಹಾಗೂ ವೈಯಕ್ತಿಕ ಜೀವನವಿರಲಿಲ್ಲ. ಅವರು ಹದಿನೇಳು ವರ್ಷಗಳವರೆಗೆ ಜನಸಂಘದ ಪ್ರಧಾನ ಕಾರ್ಯದರ್ಶಿಗಳಾಗಿ ಅದರ ಸಂಘಟನಕಾರರಾಗಿ ಹಾಗೂ ಚಿಂತಕರಾಗಿ ಇದ್ದರು.

ಅಧಿಕಾರ ಪ್ರಾಪ್ತಿ ಎಂಬುದು ರಾಜಕೀಯ ಪಕ್ಷದ ಮಹತ್ವಾಕಾಂಕ್ಷೆಯಾಗಿರುತ್ತದೆ. ಇದು ಅದರ ಹೊಣೆಗಾರಿಕೆಯೂ ಆಗಿರುತ್ತದೆ. ಅಧಿಕಾರ ಸ್ಪರ್ಧೆಗಾಗಿ

ರಾಜಕೀಯಕ್ಕಿಳಿಯುವುದು ಅಥವಾ ತಮ್ಮ ಸಿದ್ಧಾಂತಗಳು ಆದರ್ಶಗಳಿಗೆ ಅನುಗುಣವಾಗಿ ಅಧಿಕಾರ ಸ್ಥಾನಕ್ಕೆ ಹಾಗೂ ಸಮಾಜಕ್ಕೆ ನೇತೃತ್ವವನ್ನು ನೀಡುವ ಸಲುವಾಗಿ ರಾಜಕೀಯವನ್ನು ಪ್ರವೇಶಿಸುವುದು, ಈ ಎರಡೂ ನೆಲೆಗಳಲ್ಲಿ ಮೂಲಭೂತವಾದ ವ್ಯತ್ಯಾಸವಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ದೀನದಯಾಳರು ಹೀಗೆಂದು ಹೇಳಿದ್ದಾರೆ: "ಭಾರತೀಯ ಜನಸಂಘ ಭಿನ್ನವಾದ ಒಂದು ಬಗೆಯ ಪಕ್ಷವಾಗಿದೆ. ಇದು ಹೇಗಾದರೂ ಅಧಿಕಾರಕ್ಕೆ ಬರಬೇಕು ಎಂದು ಲಾಲಸೆಪಡುವ ಜನರ ಗುಂಪು ಅಲ್ಲ..... ಜನಸಂಘ ಎಂಬುದು ಒಂದು ಪಕ್ಷವಲ್ಲ ಒಂದು ಆಂದೋಳನವೇ ಆಗಿದೆ. ಇದು ರಾಷ್ಟ್ರೀಯ ಅಭಿಲಾಷೆಯ ಸ್ವಯಂ ಸ್ಫೂರ್ತಿಯ ನಿರ್ಝರಿಣಿಯೂ ಆಗಿದೆ. ಇದು ರಾಷ್ಟ್ರದ ನಿಶ್ಚಿತ ಲಕ್ಷ್ಯವನ್ನು ಆಗ್ರಹಪೂರ್ವಕವಾಗಿ ಸಾಧಿಸುವ ಆಕಾಂಕ್ಷೆಯೇ ಆಗಿದೆ."

ಆದುದರಿಂದಲೇ ಅಧಿಕಾರಕ್ಕಾಗಿ ಹಾತೊರೆಯುವಂಥ ಯಾವೊಬ್ಬ ವ್ಯಕ್ತಿಯೂ ಜನಸಂಘದ ನೇತೃತ್ವ ವಹಿಸಿಕೊಳ್ಳಲು ಅರ್ಹನಾಗಿರಲಿಲ್ಲ. ಡಾ. ಮುಖರ್ಜಿರವರು ನಿಧನರಾದ ಬಳಿಕ ಜನಸಂಘದ ಅಧ್ಯಕ್ಷ ಪದವಿಗೆ ಅನೇಕ ಹೆಸರುಗಳು ಬರತೊಡಗಿದಾಗ, ದೀನ್ ದಯಾಳ್ ಉಪಾಧ್ಯಾಯರು ಹೀಗೆಂದರು: "ನಮ್ಮ ಮುಂದಿರುವ ಆದರ್ಶವಾದ ಹಾಗೂ ಅದರಿಂದ ಮೂಡಿಬಂದಿರುವ ನಮ್ಮ ಸತತ ಶ್ರದ್ಧೆಯ ಆಂತರಿಕ ಶಕ್ತಿಯನ್ನು ಅರಿಯುವಲ್ಲಿ ಬಹಳಷ್ಟು ಜನ ಅಸಮರ್ಥರಾಗಿದ್ದಾರೆ. ಆದುದರಿಂದಲೇ ನಮ್ಮ ಸಂಸ್ಥೆಯ ಅಧ್ಯಕ್ಷರ ಸ್ಥಾನದ ಭವಿಷ್ಯದ ಬಗ್ಗೆ ಮನಸ್ಸಿಗೆ ಬಂದ ಊಹಾಪೋಹಗಳನ್ನು ಮಾಡಲಾಗುತ್ತಿದೆ. ಗಾಳಿಯಲ್ಲಿ ಹಲವಾರು ಹೆಸರುಗಳು ಹಾರಿ ಬರುತ್ತಿವೆ. ಅದರಲ್ಲಿ ಬಹಳಷ್ಟು ಜನ ಜನಸಂಘದ ಸದಸ್ಯರೂ ಆಗಿಲ್ಲ.... ನಾವು ನಮ್ಮ ನಾಯಕನಿಗೆ ಪ್ರಪಂಚವಿಡೀ ಹುಡುಕಾಡುತ್ತೇವೆ. ಹಾಗೂ ಎಲ್ಲಿ ಯಾರು ಕಣ್ಣಿಗೆ ಬಿದ್ದರೆ ಅವರ ಕೊರಳಿಗೆ ಜಯಮಾಲೆ ಹಾಕುತ್ತೇವೆ ಎಂದು ಯಾರೂ ತಿಳಿಯಬಾರದು. ನಮ್ಮ ನಾಯಕ ಯಾವುದೇ ವ್ಯಕ್ತಿ ವಿಶೇಷವಾಗಿರದೇ ಸಂಘಟನೆಯ ಅಭಿನ್ನ ಅಂಗವಾಗಿರುತ್ತಾನೆ. ನಾಯಕರದೇ ಆದ ಒಂದು ಜಾತಿಯಿರುತ್ತದೆ ಎಂದು ನಾವು ಭಾವಿಸಿಲ್ಲ, ಆದುದರಿಂದಲೇ, ಹಿಂದೂ ಮಹಾಸಭೆಯ ಬಳಿ ನಾಯಕರು ಇದ್ದಾರೆ ಹಾಗೂ ಜನಸಂಘದ ಬಳಿ ಸಬಲ ಸಂಘಟನೆಯಿದೆ; ಆದುದರಿಂದ ಇವೆರಡೂ ಒಂದಾಗಬೇಕು ಎಂದು ಹೇಳುವವರ ಮಾತನ್ನು ನಾವು ಒಪ್ಪುವುದಿಲ್ಲ".

ವರ್ಷವಿಡೀ ಹಿಂದೂ–ಮಹಾಸಭೆ, ರಾಮರಾಜ್ಯ – ಪರಿಷದ್ ಹಾಗೂ ಜನಸಂಘದ ವತಿಯಿಂದ ಸುಳಿದು ಮರೆಯಾಗುವಂಥ ಸುದ್ದಿಗಳು ಹೊರಬರತೊಡಗಿದ್ದವು: ಆದರೆ ಈ ಸುದ್ದಿಗಳು ನಿಜವಾಗಲಿಲ್ಲ. ಮಹಾಸಭೆ ಹಾಗೂ ಪರಿಷತ್ತುಗಳಿಗೆ ಸಂಘದ ಶಕ್ತಿಯನ್ನು ಬಳಸಿಕೊಳ್ಳಬೇಕೆಂಬ ಆಸೆ



ಅತಿಯಾಗಿಯೇ ಇದ್ದಿತು. ಆದರೆ ಜನಸಂಘದ ನಿಷ್ಠಾವಂತ ನವಯುವಕರ ನೇತೃತ್ವದ ಹಾಗೂ ಗೋಳ್‌ವಳ್ಕರ್ ಅವರ ಬಗ್ಗೆ ಇರಿಸಿಕೊಂಡಿದ್ದಂತಹ ಗೌರವದ ಭಾವನೆಯಿಂದಾಗಿ ಅವರಿಗೆ ಭಯವಾಗುತ್ತಿತ್ತು. ಅವರು ಸ್ವತಃ ಮಹತ್ವಾಕಾಂಕ್ಷಿಗಳಾಗಿದ್ದರು. ಹೀಗಾಗಿ ಸಮರ್ಪಣೆಗೆ ಸಿದ್ಧರಾಗಿರಲಿಲ್ಲ. ಮಹಾಸಭೆಯ ನಾಯಕರಾದ ವೀರ ಸಾವರ್‌ಕರ್ ಹಾಗೂ ಪರಿಷತ್ತಿನ ನಾಯಕರಾದ ಸ್ವಾಮಿ ಕರಪಾತ್ರಿಗಳು ಸ್ವತಃ ತಮ್ಮನ್ನೇ ಅತಿ ಶ್ರೇಷ್ಠರೆಂದು ಭಾವಿಸುತ್ತಿದ್ದರು. ಹಾಗಾಗಿ ಈ ಹೊಂದಾಣಿಕೆ ಸಾಧ್ಯವಾಗಿರಲಿಲ್ಲ. ದೀನ್ ದಯಾಳ್ ಉಪಾಧ್ಯಾಯರು ರಾಜಕೀಯ ಅನುಭವದ ದೃಷ್ಟಿಯಿಂದ ಹಾಗೂ ವಯಸ್ಸಿನಲ್ಲಿ ಬಹಳ ಚಿಕ್ಕವರಾಗಿದ್ದರು, ಆದರೆ ಆತ್ಮವಿಶ್ವಾಸಿಗಳಾಗಿದ್ದರು ಹಾಗೂ ತಮ್ಮ ಸಂಘಟನೆಯ ಧ್ಯೇಯಾದರ್ಶಗಳು ಅವರಿಗೆ ಬಹಳ ಸ್ಪಷ್ಟವಾಗಿ ತಿಳಿದಿದ್ದವು. ಅವರು ಸರಳವಾಗಿ ಕಾಣುತ್ತಿದ್ದರು, ಆದರೆ ಹಾಗಿರಲಿಲ್ಲ.

ಈ ಸಂದರ್ಭದಲ್ಲಿ ಅಂದಿನ ಭಾರತದ ಕೇಂದ್ರ ಸರ್ಕಾರದ ರಕ್ಷಣಾಮಂತ್ರಿಗಳಾಗಿದ್ದ ಶ್ರೀ ಯಶವಂತರಾವ್ ಚೌಹಾಣ್ ಅವರು ನೀಡಿದ ಈ ಹೇಳಿಕೆ ಉದ್ಧರಣಯೋಗ್ಯವಾಗಿದೆ: "ಅವರು ಬಹಳ ಸರಳ ಮುಗ್ಧ ವ್ಯಕ್ತಿ ಎಂದು ಜನರು ಹೇಳುತ್ತಾರೆ. ಆದರೆ ನಾನು ಹಾಗೆಂದು ಭಾವಿಸುವುದಿಲ್ಲ. ಸರಳ ಮುಗ್ಧ ವ್ಯಕ್ತಿಯನ್ನು ಯಾರು ಬೇಕಾದರೂ ಮೋಸ ಮಾಡಬಹುದು ಆದರೆ ಅವರನ್ನು ಮೋಸಪಡಿಸುವುದು ಸಾಧ್ಯವಿರಲಿಲ್ಲ. ಅವರನ್ನು ಮಾತುಗಳಲ್ಲಿ ಸಿಲುಕಿಸಲು ಸಾಧ್ಯವಾಗುತ್ತಿರಲಿಲ್ಲ. ಅವರು ಖಂಡಿತವಾಗಿಯೂ ಒಬ್ಬ ನೇರ ನಡೆನುಡಿಯ ಸರಳ ವ್ಯಕ್ತಿಯಾಗಿದ್ದರೂ ತಾವು ಹೇಳ ಬಯಸುತ್ತಿದ್ದುದನ್ನು ಅವರು ವಿನಯದಿಂದ, ಆದರೆ ಸ್ಪಷ್ಟವಾದ ಹಾಗೂ ನೇರವಾದ ಮಾತುಗಳಲ್ಲಿ ಹೇಳಿಬಿಡುತ್ತಿದ್ದರು."

ಸಿದ್ಧಾಂತ ಹಾಗೂ ವಿಚಾರಗಳ ವಿಷಯದಲ್ಲಿ ಗೋಳ್‌ವಳ್ಕರರು ಮುಖರ್ಜಿರವರೊಡನೆ ಯಾವ ರೀತಿಯಲ್ಲಿ ಸ್ಪಷ್ಟವಾಗಿ ಹಾಗೂ ಒತ್ತಾಯ ಪೂರ್ವಕವಾಗಿ ಚರ್ಚಿಸಿದ್ದರೋ ಅದೇ ರೀತಿ ದೀನ್ ದಯಾಳ್ ಉಪಾಧ್ಯಾಯರು ಕಾನಪುರದ ಪ್ರಥಮ ಅಧಿವೇಶನದಿಂದಲೇ ಜನಸಂಘದ ಯಾಜಮಾನ್ಯದ ಹೊಣೆಯನ್ನು ಹೊತ್ತರು ಹಾಗೂ ವೈಚಾರಿಕ ದೃಷ್ಟಿಯಿಂದ ಜನಸಂಘದ ವ್ಯವಹರಣೆಯನ್ನು ಸ್ಪಷ್ಟಪಡಿಸುವ 'ಸಾಂಸ್ಕೃತಿಕ ಪುನರುತ್ಥಾನ'ದ ಪ್ರಸ್ತಾಪವನ್ನು ಮುಂದಿಟ್ಟರು. ಭೌಗೋಳಿಕ ಅಥವಾ ಪ್ರಾದೇಶಿಕ ರಾಷ್ಟ್ರವಾದದ ಕಲ್ಪನೆಯನ್ನು ಅಲ್ಲಗಳೆಯುತ್ತಾ, ಅವರು ಹೀಗೆಂದು ಹೇಳಿದರು; "ಜನಸಂಘದ ಅಭಿಪ್ರಾಯವೇನೆಂದರೆ ಭಾರತದ ಹಾಗೂ ಅನ್ಯ ದೇಶಗಳ ಇತಿಹಾಸವನ್ನು ಕುರಿತು ವಿಚಾರಮಾಡಿದಲ್ಲಿ, ಕೇವಲ ರಾಷ್ಟ್ರೀಯತೆಗೆ ಭೌಗೋಳಿಕ ಏಕತೆಯೊಂದೇ ಸಾಲದು ಎಂಬುದು ಸ್ಪಷ್ಟವಾಗುತ್ತದೆ. ಒಂದು ದೇಶದಲ್ಲಿ ವಾಸಿಸುವ ಜನರನ್ನು ಒಂದು ಸಂಸ್ಕೃತಿಯ ಮೂಲಕ್ಕೆ, ಒಂದು ರೂಪಕ್ಕೆ ತಂದಲ್ಲಿ ಮಾತ್ರ ಅವರು ಒಂದು

ರಾಷ್ಟ್ರದವರಾಗುತ್ತಾರೆ. ಎಲ್ಲಿಯವರೆಗೂ ಭಾರತೀಯ ಸಮಾಜ ಒಂದು ಸಂಸ್ಕೃತಿಯನ್ನು ಅನುಸರಿಸುತ್ತಿತ್ತೋ ಅಲ್ಲಿಯ ತನಕ ಅನೇಕ ರಾಜ್ಯಗಳಾಗಿ ವಿಭಕ್ತವಾಗಿದ್ದರೂ ಇಲ್ಲಿಯ ಜನರಲ್ಲಿ ಮೂಲಭೂತ ರಾಷ್ಟ್ರೀಯತೆ ಉಳಿದಿತ್ತು; ಆದರೆ ಎಂದು ವಿದೇಶಿ ಶಾಸಕರು ತಮ್ಮ ಜನರಿಗಾಗಿ ಇಲ್ಲಿಯ ಏಕತ್ವಕ್ಕೆ ಭಂಗವನ್ನುಂಟುಮಾಡಿ ವಿದೇಶಪರವಾದ ಸಂಸ್ಕೃತಿಗಳನ್ನು ಈ ದೇಶದಲ್ಲಿ ಬಿತ್ತಿದರೋ ಅಂದಿನಿಂದ ಭಾರತದ ರಾಷ್ಟ್ರೀಯತೆ ಸಂಕಟಕ್ಕೀಡಾಯಿತು. ಅನೇಕ ಶತಮಾನಗಳವರೆಗೂ ಒಂದು ರಾಷ್ಟ್ರವೆಂದು ಘೋಷಿಸುತ್ತಿದ್ದರೂ, ಭಾರತದಲ್ಲಿ ಮುಸ್ಲಿಂ ಕೋಮುವಾದಿಗಳ ದ್ವಿ–ರಾಷ್ಟ್ರವಾದಕ್ಕೆ ವಿಜಯ ಲಭಿಸಿತು; ದೇಶ ವಿಭಕ್ತವಾಯಿತು ಹಾಗೂ ಪಾಕಿಸ್ತಾನದಲ್ಲಿ ಮುಸ್ಲಿಂರನ್ನು ಹೊರತುಪಡಿಸಿ ಬೇರೆಯವರು ಇರುವುದು ಅಸಾಧ್ಯವಾಗಿ ಪರಿಣಮಿಸಿತು. ಮತ್ತೊಂದೆಡೆ, ಭಾರತದಲ್ಲಿ ಮುಸ್ಲಿಂ ಸಂಸ್ಕೃತಿಯನ್ನು ಬೇರೆಯದೇ ಎಂದು ಒಪ್ಪಿ ಅದರ ರಕ್ಷಣೆ ಹಾಗೂ ಸಂವರ್ಧನೆಯ ಹೆಸರಿನಲ್ಲಿ ಅದೇ ದ್ವಿ–ರಾಷ್ಟ್ರ ಪ್ರವೃತ್ತಿಯನ್ನು ಪೋಷಿಸಲಾಗುತ್ತಿದೆ ಹಾಗೂ ಇದು ರಾಷ್ಟ್ರ ನಿರ್ಮಾಣ ಮಾರ್ಗಕ್ಕೆ ತಡೆಯನ್ನುಂಟುಮಾಡತೊಡಗಿದೆ. ಆದುದರಿಂದ ಭಾರತದಲ್ಲಿ ಏಕ–ರಾಷ್ಟ್ರೀಯತೆಯ ಭಾವನೆಯ ವಿಕಾಸಕ್ಕಾಗಿ ಹಾಗೂ ಅಂಥ ದೃಷ್ಟಿಕೋನದ ಸಲುವಾಗಿ, ಇಲ್ಲಿ ಏಕ–ಸಂಸ್ಕೃತಿಯ ಪೋಷಣೆಯಾಗುವುದು ಅತ್ಯಂತ ಅಗತ್ಯವಾಗಿದೆ."

ಈ ಪ್ರಸ್ತಾವದಲ್ಲಿ ಯಾವುದೇ ಧರ್ಮದ ಹೆಸರನ್ನು ಉಲ್ಲೇಖಿಸದೇ ಅವುಗಳ ಭಾರತೀಯಕರಣಕ್ಕಾಗಿ ಆವಾಹನೆ ಮಾಡಲಾಗಿದೆ. "ಭಾರತೀಯ ಜನಜೀವನದ ಹಾಗೂ ವಿದೇಶಿಯರ ಮೂಲಕ ಸ್ವದೇಶವಿಮುಖವೂ, ಪ್ರೇರಣೆಗಾಗಿ ವಿದೇಶಾಭಿಮುಖವೂ ಆಗಿಸಿ ಬಿಡಲಾಗಿರುವಂಥ ಆ ನಮ್ಮ ಅಂಗಗಳನ್ನು ಭಾರತೀಯಕರಣಗೊಳಗಿಸುವ ಮಹಾನ್‌ಕಾರ್ಯವನ್ನು ಕೈಗೆತ್ತಿಕೊಳ್ಳುವುದು ಹಿಂದೂ ಸಮಾಜ ರಾಷ್ಟ್ರದ ವಿಷಯದಲ್ಲಿ ಎಸಬೇಕಾಗಿರುವ ಕರ್ತವ್ಯವಾಗಿದೆ. ಹಿಂದೂ ಸಮಾಜವು ಅವರನ್ನು ಪ್ರೀತಿಯಿಂದ ತಮ್ಮೊಡನೆ ಒಂದಾಗಿಸಿಕೊಳ್ಳಬೇಕಾಗಿದೆ. ಕೇವಲ ಈ ರೀತಿ ಮಾಡುವುದರಿಂದ ಮಾತ್ರವೇ ಕೋಮುವಾದ ಕೊನೆಗೊಳ್ಳುತ್ತದೆ. ಹಾಗೂ ರಾಷ್ಟ್ರದ ಏಕೀಕರಣ ಹಾಗೂ ದೃಢತೆ ಸಾಧ್ಯವಾಗಬಹುದಾಗಿದೆ."

ಭಾರತೀಯ ಜನಸಂಘವನ್ನು ಭಾರತದಲ್ಲಿನ ಇತರ ರಾಜಕೀಯ ಪಕ್ಷಗಳಿಂದ ಬೇರ್ಪಡಿಸುವಂತಹ ಮಹತ್ವಪೂರ್ಣ ಪ್ರಸ್ತಾವ ಇದಾಗಿದೆ. ಕಾಂಗ್ರೆಸ್, ಸಮಾಜವಾದಿ ಹಾಗೂ ಸಾಮ್ಯವಾದಿ ಪಕ್ಷಗಳು ಹಿಂದೂ–ಮುಸಲ್ಮಾನರ ಮಿಶ್ರ ಸಂಸ್ಕೃತಿ ಹಾಗೂ ಪಾಶ್ಚಾತ್ಯ ಚಿಂತಕರು ಪ್ರಸ್ತುತಪಡಿಸಿರುವ 'ಪ್ರಾದೇಶಿಕ ರಾಷ್ಟ್ರವಾದ' ಹಾಗೂ 'ರಾಷ್ಟ್ರೀಯ ರಾಜ್ಯ'ದ ಕಲ್ಪನೆಯನ್ನು ಒಪ್ಪುತ್ತಾ ಭೌಗೋಳಿಕ ಆಧಾರದ ಹಾಗೂ ರಾಜಕೀಯ ಆಧಾರದ 'ಭಾರತೀಯ ರಾಷ್ಟ್ರೀಯತೆ'ಯಲ್ಲಿ ನಂಬಿಕೆಯನ್ನು ಇರಿಸಿಕೊಂಡಿವೆ. ಮುಸಲ್ಮಾನರ ಪ್ರತ್ಯೇಕ ಸಂಸ್ಕೃತಿ ಹಾಗೂ ಧಾರ್ಮಿಕ ಅಲ್ಪಸಂಖ್ಯಾತವಾದದ ಆಧಾರದ



ಮೇಲೆ ಅನೇಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಶೇಷಾಧಿಕಾರಗಳ ಸಂರಕ್ಷಣೆಯ ವಿಷಯದಲ್ಲಿ ಪಕ್ಷಪಾತಿಗಳಾಗಿವೆ. ಮತ್ತೊಂದೆಡೆ, ಹಿಂದೂ ಮಹಾಸಭೆ ಮುಸಲ್ಮಾನರ ಭಾರತೀಯ ಅಸ್ತಿತ್ವವನ್ನೇ ಒಪ್ಪುವುದಿಲ್ಲ. ಡಾ. ಶ್ಯಾಮಾಪ್ರಸಾದ್ ಮುಖರ್ಜಿರವರು ಈ ಕಾರಣಕ್ಕಾಗಿಯೇ ಹಿಂದೂ ಮಹಾಸಭೆಗೆ ರಾಜೀನಾಮೆ ನೀಡಿದರು ಹಾಗೂ ಎಲ್ಲ ಧರ್ಮದವರಿಗೂ ಜನಸಂಘದ ಬಾಗಿಲನ್ನು ತೆರೆದರು. ಉಪಾಧ್ಯಾಯರು ಮುಸ್ಲಿಂ ಹಾಗೂ ಕ್ರೈಸ್ತರನ್ನು ಕುರಿತಂತೆ 'ಹಿಂದೂ ಸಮಾಜ'ಕ್ಕೆ ಸೇರಿದ 'ನಮ್ಮ ಆ ಅಂಗಗಳು' ಎಂಬ ಶಬ್ದವನ್ನು ಬಳಸಿದ್ದಾರೆ. ಹಾಗೂ ಅವರನ್ನು 'ಭಾರತೀಯ ಜನಜೀವನ'ದ ಅಂಗವೆಂದೇ ಸ್ವೀಕರಿದ್ದಾರೆ. ಮುಸ್ಲಿಂ ಸಮಾಜವನ್ನು ಬೇರ್ಪಡಿಸುವುದರಲ್ಲಿ ಹಿಂದೂ ಸಮಾಜದ ತಪ್ಪುಗಳು ಇದೆ ಹಾಗೂ ಇಂದು ಅವುಗಳನ್ನು ಸರಿಪಡಿಸಬೇಕಾಗಿದೆ ಎಂದು ಪರೋಕ್ಷವಾಗಿ ಸ್ವೀಕರಿಸಿದ್ದಾರೆ. ಅಂದರೆ ಅವರ ವಿಷಯದಲ್ಲಿ 'ಸ್ನೇಹ' ಹಾಗೂ 'ಆತ್ಮೀಯತೆ'ಯನ್ನು ತೋರಬೇಕಾಗಿದೆ. ಆಗ ಮಾತ್ರವೇ ಮುಸಲ್ಮಾನರ ಕೋಮುವಾದದ ಸಮಸ್ಯೆ ಬಗೆಹರಿಯುತ್ತದೆ. ಮುಸಲ್ಮಾನರು ಹಾಗೂ ಕ್ರೈಸ್ತರು ಬೇರೆ ಸಂಸ್ಕೃತಿಯವರು ಹಾಗೂ ಅವರ ಸಂಸ್ಕೃತಿಯನ್ನೇ ಸಂರಕ್ಷಿಸುವ ವಿಚಾರ ಹಾಗೂ ಅಲ್ಪಸಂಖ್ಯಾತ – ಬಹುಸಂಖ್ಯಾತರ ವಿಚಾರ ಇವು ರಾಷ್ಟ್ರಕ್ಕೆ ವಿಭೇದಕಾರಿಯಾದ ಹಾಗೂ ಕೋಮುವಾದ ಸಮರ್ಥನೆಯ ವಿಚಾರಗಳೆಂದು ಅವರು ಭಾವಿಸಿದ್ದರು. ಎಲ್ಲ ಪಕ್ಷಗಳ ಪ್ರಣಾಳಿಕೆಗಳಲ್ಲಿ ವ್ಯಕ್ತಪಡಿಸಲಾದ ವಿಚಾರಗಳನ್ನು ಕುರಿತು ಟೀಕೆ ಮಾಡುತ್ತಾ ದೀನ್ ದಯಾಳರು ತಮ್ಮ ಅಭಿಪ್ರಾಯವನ್ನು ಹೀಗೆ ಸೂಚಿಸಿದ್ದಾರೆ: "........ ಕಾಂಗ್ರೆಸ್, ಪ್ರಸೋಪಾ, (ಪ್ರಜಾ–ಸೋಷಿಯಲಿಸ್ಟ್ ಪಾರ್ಟಿ), ಸ್ವತಂತ್ರ ಪಾರ್ಟಿ ಹಾಗೂ ಕಮ್ಯೂನಿಸ್ಟ್ ಪಕ್ಷಗಳ ವಿಶ್ಲೇಷಣೆ ಸ್ಪಷ್ಟಪಡಿಸುವುದೇನೆಂದರೆ ಈ ದೇಶದಲ್ಲಿ 'ಅಲ್ಪಸಂಖ್ಯಾತ'ರ ವಿಷಯದಲ್ಲಿ ನ್ಯಾಯಸಮ್ಮತವಾಗಿ ನಡೆದುಕೊಳ್ಳಲಾಗಲಿಲ್ಲ. ......... 'ಭಾರತೀಯ ಜನಸಂಘ' ಈ ರೀತಿಯ 'ಬಹುಸಂಖ್ಯಾತ'ರು ಹಾಗೂ 'ಅಲ್ಪ ಸಂಖ್ಯಾತರು' ಎಂಬ ಶೀರ್ಷಿಕೆಗಳನ್ನು ಸರಿ ಎಂದು ಭಾವಿಸುವುದಿಲ್ಲ; ಈ ರೀತಿಯ ವಿಭಜನೆಯನ್ನು ಒಪ್ಪವುದೂ ಇಲ್ಲ. ಅದು ಭಾರತವನ್ನು ಒಂದು ಅಖಂಡವೂ, ಅವಿಭಾಜ್ಯವೂ ಆದ ರಾಷ್ಟ್ರವೆಂದು ಭಾವಿಸುತ್ತದೆ. ಸಂಪೂರ್ಣ ರಾಷ್ಟ್ರದ ಸಂಸ್ಕೃತಿ ಒಂದೇ ಆಗಿದೆ ಎಂದು ದೃಢವಾಗಿ ನಂಬುತ್ತದೆ. ಜನಸಂಘವು ಧರ್ಮಗಳನ್ನು ಆಧಾರವಾಗಿಸಿ ಕೊಂಡಿರುವ ಭಿನ್ನ ಸಂಸ್ಕೃತಿಗಳ ಕಲ್ಪನೆಯನ್ನು ಒಪ್ಪುವುದಿಲ್ಲ. ಅದು ಒಂದು ರಾಷ್ಟ್ರ, ಒಂದು ಸಂಸ್ಕೃತಿ ಹಾಗೂ ಒಂದು ದೇಶದ ಸಿದ್ಧಾಂತಗಳನ್ನು ಒಪ್ಪುತ್ತದೆ. ಈ ಸಂಗತಿಯನ್ನು ತಿಳಿದೂ ಐತಿಹಾಸಿಕವಾದ ಹಾಗೂ ಇತರ ಹಲವಾರು ಕಾರಣಗಳಿಂದಾಗಿ ಈ ದೇಶದ ಜನಸಮಾಜದ ಒಂದು ಭಾಗವು ರಾಷ್ಟ್ರ ಜೀವನದ ಪವಿತ್ರ ಮೂಲಧಾರೆಯಿಂದ ಬೇರೆಯಾಯಿತು ಹಾಗೂ ಕೆಲವು ಅಂಶಗಳಲ್ಲಿ

ರಾಷ್ಟ್ರವಿರೋಧಿಯೂ ಆಗಿ ಪರಿಣಮಿಸಿತು. ಜನಸಂಘವು ಈ ಬೇನೆಯನ್ನು ಗುಣಪಡಿಸಬಯಸುತ್ತದೆ. ಅವರ ಪ್ರತ್ಯೇಕತಾವಾದಿ ಮನೋವೃತ್ತಿಯನ್ನು ಸಮರ್ಥಿಸಲು ಅದು ಎಂದಿಗೂ ಸಿದ್ಧವಾಗಿಲ್ಲ....... ನಮ್ಮ ದೃಷ್ಟಿಯಲ್ಲಿ ಇಡೀ ರಾಷ್ಟ್ರ ಒಂದು ಜೀವಂತ ಘಟಕವಾಗಿದೆ.” ರಾಷ್ಟ್ರೀಯತೆಯ ಈ ಸಂಸ್ಕೃತಿನಿಷ್ಠ ಅವಧಾರಣೆಯಲ್ಲಿ ಜನಸಂಘದ ಮಾಲಿಕತೆ ಅಡಗಿದೆ. ಹೀಗಾಗಿ, ಕೇವಲ ‘ಜನ’ ಕಲ್ಯಾಣಕಾರಿ ರಾಜ್ಯದ ಬಗೆಗಿನ ಅವಧಾರಣೆ ಹಾಗೂ ‘ಜಾತ್ಯತೀತ ವಾದ’ದ ಭೌತಿಕವಾದಿ ರಾಜನೀತಿಯು ಜನಸಂಘದ ಪ್ರೇರಣೆಯಾಗಲಿಲ್ಲ. ಇದು ಸಾಮಾನ್ಯವಾಗಿ ಎಲ್ಲ ಪಾಶ್ಚಾತ್ಯ ದೇಶಗಳ ಪ್ರಜಾಪ್ರಭುತ್ವವಾದೀ ರಾಜಕೀಯ ಪಕ್ಷಗಳ ಮುಲಾಧಾರವಾಗಿದೆ. ಆದುದರಿಂದ ದೀನ್ ದಯಾಳ್ ಉಪಾಧ್ಯಾರು ಹೀಗೆಂದು ಹೇಳುತ್ತಾರೆ, “ಜನಸಂಘವು ಮೂಲತಃ ಸಂಸ್ಕೃತಿನಿಷ್ಠ ಪಕ್ಷವಾಗಿದೆ. ನಮ್ಮ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಚಿಂತನೆ ಸಂಸ್ಕೃತಿಯ ಆಧಾರಶಿಲೆಯ ಮೇಲೆ ನಿಂತಿದೆ.”

ಭಾರತೀಯ ಜನಸಂಘದ ಇತಿಹಾಸವನ್ನು ಬರೆದಿರುವ ವಿಖ್ಯಾತ ಲೇಖಕ ಕ್ರ್ಯಾಗ್ ಬ್ಯಾಕ್ಸ್ಟರ್ ಅವರು ಸರಿಯಾಗಿಯೇ ಬರೆದಿದ್ದಾರೆ: “೧೯೫೨ ರಿಂದ ೧೯೬೭ ರವರೆಗೆ ಪ್ರತಿ ಚುನಾವಣೆಯಲ್ಲಿಯೂ ತಮ್ಮ ಜನಪ್ರಿಯತೆಯ ಪ್ರಮಾಣವನ್ನು, ಸಂಸತ್ತಿನಲ್ಲಿನ ಹಾಗೂ ವಿಧಾನಸಭೆಯಲ್ಲಿನ ತಮ್ಮ ಭಾಗದಾರಿಕೆಯ ಶೇಕಡವಾರು ಪ್ರಮಾಣವನ್ನು ಹೆಚ್ಚಿಸಿಕೊಂಡು ಬಂದಿರುವ ಏಕೈಕ ಪಕ್ಷ ಭಾರತೀಯ ಜನಸಂಘವೇ ಆಗಿತ್ತು.”

ದೀನ್ ದಯಾಳರು ಭಾರತೀಯ ಜನಸಂಘಕ್ಕೆ ಒಂದು ರೂಪವನ್ನು ನೀಡಿದರು. ವ್ಯಾಪಕತೆಯನ್ನು ನೀಡಿದರು, ಒಂದು ವಿಶಿಷ್ಟವಾದ ವ್ಯವಹಾರ ಸಂಹಿತೆಯನ್ನು ನೀಡಿದರು; ಆದರೆ ಪರಂಪರಾಗತ ಅರ್ಥದಲ್ಲಿ ಅವರು ರಾಜಕೀಯ ನೇತಾರರಾಗಿರಲಿಲ್ಲ. ಇಲ್ಲಿ ಒಂದು ಮಹತ್ವಪೂರ್ಣ ಘಟನೆಯನ್ನು ಉಲ್ಲೇಖಿಸುವುದು ಅಗತ್ಯವಾಗುತ್ತದೆ. ೧೯೬೪ರಲ್ಲಿ ರಾಜಸ್ಥಾನದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಗ್ರೀಷ್ಮಕಾಲೀನ ಸಂಘ ಶಿಕ್ಷಣದ ತರಬೇತಿಯು ಉದಯಪುರದಲ್ಲಿ ನಡೆಯುತ್ತಿತ್ತು. ತಮ್ಮ ಬೌದ್ಧಿಕ ‘ವರ್ಗ’ದಲ್ಲಿ ಅವರು ಹೀಗೆ ಹೇಳಿದರು: “ಸ್ವಯಂ ಸೇವಕನು ನನ್ನ ಹಾಗೆಯೇ ರಾಜನೀತಿಯ ಬಗ್ಗೆ ನಿರ್ಲಿಪ್ತನಾಗಿರಬೇಕು.” ಈ ವಾಕ್ಯವು ಒಗಟಿನಂತೆ ಕಂಡುಬಂದಿತು. ಆದುದರಿಂದ ರಾತ್ರಿ ನಡೆದ ಪ್ರಶ್ನೋತ್ತರಗಳ ಅಧಿವೇಶನದಲ್ಲಿ ಅವರನ್ನು ಹೀಗೆ ಪ್ರಶ್ನಿಸಲಾಯಿತು: “ತಾವು ರಾಜಕೀಯ ಪಕ್ಷವೊಂದರ ಅಖಿಲ ಭಾರತೀಯ ಪ್ರಧಾನ ಕಾರ್ಯದರ್ಶಿಗಳಾಗಿದ್ದೀರಿ, ಹಾಗಿದ್ದಲ್ಲಿ ತಾವು ರಾಜಕೀಯದಲ್ಲಿ ಹೇಗೆ ನಿರ್ಲಿಪ್ತರಾಗಿರುತ್ತೀರಿ?” ದೀನ್ ದಯಾಳರು ಹೀಗೆ ಉತ್ತರ ನೀಡಿದರು: “ನಾನು ರಾಜಕೀಯಕ್ಕಾಗಿ ರಾಜಕೀಯದಲ್ಲಿ ಇಲ್ಲ. ಅದಕ್ಕೆ ಹೊರತಾಗಿ, ನಾನು ರಾಜಕೀಯದಲ್ಲಿ ಸಂಸ್ಕೃತಿಯ ರಾಯಭಾರಿಯಾಗಿದ್ದೇನೆ. ರಾಜಕೀಯದಲ್ಲಿ ಸಂಸ್ಕೃತಿ



ಇಲ್ಲವಾಗಿ ಬಿಡುವುದು ಒಳಿತಲ್ಲ.” ಆದುದರಿಂದಲೇ ಭಾರತೀಯ ಜನಸಂಘವನ್ನು ಒಂದು ಸಂಸ್ಕೃತಿವಾದಿ ಪಕ್ಷವನ್ನಾಗಿ ಬೆಳೆಸಬೇಕು ಎಂದು ಅವರು ಒತ್ತಾಯಪಡಿಸುತ್ತಿದ್ದರು.

ಅವರ ಜೀವನದ ಪ್ರತಿಯೊಂದು ಸಣ್ಣ ಪುಟ್ಟ ಘಟನೆಗಳಲ್ಲಿಯೂ ಈ ಸಂಸ್ಕೃತಿಯ ರಾಯಭಾರತ್ವ ತುಂಬಿ ತುಳುಕುತ್ತಿತ್ತು. ಅವರು ಚುನಾವಣೆಗಳಲ್ಲಿ ಹೋರಾಡುವ ಸಲುವಾಗಿ ರಾಜಕೀಯಕ್ಕಿಳಿದಿರಲಿಲ್ಲ. ಆದರೆ ಅವರು ಚುನಾವಣೆಯಲ್ಲಿ ಸೆಣಸಬೇಕಾಗಿ ಬಂತು. ಈ ಚುನಾವಣಾ ಅಭಿಯಾನದ ಸಮಯದಲ್ಲಿನ ದೀನ್ ದಯಾಳರ ನಡೆನುಡಿ ಅವರ ಸಾಂಸ್ಕೃತಿಕ ರಾಯಭಾರತ್ವವನ್ನು ರೇಖಾಂಕಿತಗೊಳಿಸುತ್ತದೆ.

೧೯೬೨ರಲ್ಲಿ ಚೀನಾದ ಆಕ್ರಮಣದ ಅನಂತರ, ೧೯೬೩ರ ಮೇ ತಿಂಗಳಿನಲ್ಲಿ ಮೂರು ಮಹತ್ವಪೂರ್ಣ ಉಪಚುನಾವಣೆಗಳು ಉತ್ತರ ಪ್ರದೇಶದಲ್ಲಿ ನಡೆದವು; ಹಾಗೂ ಒಂದು ಚುನಾವಣೆ ಗುಜರಾತಿನಲ್ಲಿಯೂ ನಡೆಯಿತು. ಅಮರೋಹಾದಿಂದ ಆಚಾರ್ಯ ಕೃಪಲಾನಿ, ಫರೂಖಾಬಾದ್‌ನಿಂದ ಡಾ. ರಾಮ್‌ಮನೋಹರ್ ಲೋಹಿಯಾ ಹಾಗೂ ಜೌನ್‌ಪುರದಿಂದ ಪಂ. ದೀನ್ ದಯಾಳ್ ಉಪಾಧ್ಯಾಯರು ಸಂಯುಕ್ತ ವಿರೋಧಿ ಪಕ್ಷದ ಉಮೇದುದಾರರಾಗಿದ್ದರು. ಗುಜರಾತ್‌ನ ರಾಜಕೋಟ್ ಸೀಟ್‌ನಿಂದ ಸ್ವತಂತ್ರ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಮೀನೂ ಮಸಾನಿರವರು ಸಂಯುಕ್ತ ವಿರೋಧ ಪಕ್ಷದ ಉಮೇದುವಾರರಾಗಿದ್ದರು. ಚೀನಾವನ್ನು ಕುರಿತಾದ ಕಾಂಗ್ರೆಸ್ಸ್‌ನ ನೀತಿ, ನೆಹರೂರವರ ನೇತೃತ್ವ, ಸ್ವರ್ಣ ನಿಯಂತ್ರಣ, ಅನಿವಾರ್ಯ ಉಳಿತಾಯ ಯೋಜನೆ ಹಾಗೂ ತುರ್ತು ಪರಿಸ್ಥಿತಿಯಲ್ಲಿ ಹೇರಲಾಗಿದ್ದ ಹೆಚ್ಚು ತೆರಿಗೆ ಮುಂತಾದವುಗಳ ಬಗ್ಗೆ ಜನರ ಅಭಿಪ್ರಾಯ ತಿಳಿದುಕೊಳ್ಳುವ ರೂಪದಲ್ಲಿ ಈ ಚುನಾವಣೆಗಳನ್ನು ನೋಡಲಾಗುತ್ತಿತ್ತು. ಮಹಾರಥಿಗಳಾದ ಈ ನಾಲ್ವರು ಉಮೇದುವಾರರುಗಳಿಂದ ಈ ಚುನಾವಣೆ ಅದ್ವಿತೀಯ ಮಹತ್ವವನ್ನು ಪಡೆದುಕೊಂಡಿತ್ತು. ಆಚಾರ್ಯ ಕೃಪಲಾನಿ, ಡಾ.ಲೋಹಿಯಾ ಹಾಗೂ ಮೀನೂ ಮಸಾನಿ ವಿಜಯ ಸಾಧಿಸಿದರು; ದೀನ್ ದಯಾಳರು ಚುನಾವಣೆಯಲ್ಲಿ ಸೋತುಹೋದರು.

ಜನಸಂಘದ ಪರಾಜಯಕ್ಕೆ ಹಲವಾರು ಕಾರಣಗಳಿದ್ದವು. ಆದರೆ ಈ ಚುನಾವಣೆಗಳಿಂದ ಯಾವ ರೀತಿಯಾದ ವಾತಾವರಣವುಂಟಾಗಿತ್ತೆಂದರೆ, ತಮ್ಮ ಪ್ರಧಾನ ಕಾರ್ಯದರ್ಶಿ ಸೋತುಹೋದರೂ, ಈ ಉಪಚುನಾವಣೆಗಳಿಂದ ಜನಸಂಘಕ್ಕೆ ಅತಿ ಹೆಚ್ಚು ಲಾಭವುಂಟಾಯಿತು. ಇತರ ರಾಜಕೀಯ ಕಾರಣಗಳೊಂದಿಗೆ ಉಪಾಧ್ಯಾಯರ ಸೋಲಿಗೆ ಬಹು ದೊಡ್ಡ ಕಾರಣವೆಂದರೆ ಸ್ವತಃ ಉಮೇದುವಾರರು ಗೆಲ್ಲುವ ಸಲುವಾಗಿ ಚುನಾವಣೆಯಲ್ಲಿ ಹೋರಾಡುತ್ತಿರಲಿಲ್ಲ. ಉಪಾಧ್ಯಾಯರು

ಸ್ವತಃ ಚುನಾವಣೆಗಾಗಿ ಹೋರಾಡುವ ಪರವಾಗಿರಲಿಲ್ಲ ಹಾಗೂ ಅವರ ಮಾರ್ಗದರ್ಶಕರಾಗಿದ್ದ ಗೋಳ್‌ವಳ್ಕರ್ ಅವರು ಚುನಾವಣೆಯಲ್ಲಿ ಹೋರಾಡುವುದನ್ನು ಬಯಸುತ್ತಿರಲಿಲ್ಲ. ಗೋಳ್‌ವಳ್‌ಕರ್‌ರು ಈ ಸಂದರ್ಭದಲ್ಲಿ ಹೀಗೆಂದು ಹೇಳಿದರು; "ಗೆಲುವಾಗಲಿ ಅಥವಾ ಸೋಲಾಗಲಿ, ಏನೇ ಆಗಲಿ ಹಾನಿಯುಂಟಾಗುತ್ತದೆ. ಸೋತರೆ ಆಗುವ ಹಾನಿ ಕಡಮೆಯಾಗಿರುತ್ತದೆ; ಗೆದ್ದರೆ ಆಗುವ ಹಾನಿ ಹೆಚ್ಚಿನದಾಗಿರುತ್ತದೆ." ಜನಸಂಘದ ಕಾರ್ಯಕರ್ತರುಗಳು ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಂದಿನ ಪ್ರಾಂತ ಪ್ರಚಾರಕರಾಗಿದ್ದ ಭಾವೂರಾವ್ ದೇವರಸರ ಯೋಜನೆಯ ಮೇರೆಗೆ ದೀನ್ ದಯಾಳ್ ಉಪಾಧ್ಯಾಯರು ಉಮೇದುವಾರರಾಗಿದ್ದರು.

'ನಾಯಕತ್ವ'ದ ಕಳೆ ಹೇಗೆ ಓರ್ವ ಜನಪ್ರಿಯ ಸಾರ್ವಜನಿಕ ನಾಯಕನದ್ದಾಗಿರಬೇಕೋ ಹಾಗೆ ಆ ಬಗೆಯ ಕಳೆಯು ಉಪಾಧ್ಯಾಯರಲ್ಲಿ ಕೇವಲ ಇರಲಿಲ್ಲ ಮಾತ್ರವಲ್ಲದೆ, ಹೀಗೆ ನಾಯಕ-ಪೂಜೆಯ ಯಾವುದೇ ಆಚರಣೆಯನ್ನೂ ಅವರು ಒತ್ತಾಯವಾಗಿ ಮಾಡಬಯಸುತ್ತಿರಲಿಲ್ಲ. ಉಪಾಧ್ಯಾಯರು ಚುನಾವಣೆಯಲ್ಲಿ ಸೋತು ಹೋಗಿದ್ದರೂ, ಜೌನ್‌ಪುರದ ಚುನಾವಣಾ ಕ್ಷೇತ್ರದ ಜನರು ಇಂದಿಗೂ ಅವರನ್ನು ಹಾಗೂ ಆ ಚುನಾವಣೆಯನ್ನು ನೆನಪಿಸಿಕೊಳ್ಳುತ್ತಾರೆ. ಉಪಾಧ್ಯಾಯರು ಈ ಚುನಾವಣೆಯನ್ನು ತಮ್ಮ ಸೈದ್ಧಾಂತಿಕ ವ್ಯವಹಾರದ ಪ್ರಯೋಗ ಶಾಲೆಯನ್ನಾಗಿ ಬದಲಾಯಿಸಿಬಿಟ್ಟಿದ್ದರು. ಪಾರಂಪರಿಕವಾಗಿ ಜೌನ್‌ಪುರ ಚುನಾವಣಾ ಕ್ಷೇತ್ರ, ರಾಜಪೂತರ ಹಾಗೂ ಬ್ರಾಹ್ಮಣರ ಜಾತಿವಾದವನ್ನಾಧರಿಸಿ ಹೋರಾಡುವ ಚುನಾವಣೆಗಳ ರಂಗಭೂಮಿಯಾಗಿದ್ದಿತು. ಕಾಂಗ್ರೆಸ್ ರಾಜಪೂತರ ಸಂಪೂರ್ಣ ಬೆಂಬಲವನ್ನು ಪಡೆದುಕೊಂಡಿತು. ರಾಜಪೂತವಾದಕ್ಕೆ ವಿರುದ್ಧವಾಗಿ ಅಲ್ಲಿ ಬ್ರಾಹ್ಮಣವಾದದಿಂದ ಹೋರಾಟಮಾಡಬಹುದಾಗಿದ್ದಿತು. ಸ್ಥಳೀಯರು ಹೀಗೆ ಮಾಡಲು ಪ್ರಯತ್ನಿಸಿದಾಗ, ದೀನ್ ದಯಾಳರು ತಮ್ಮ ಸಮರ್ಥಕರನ್ನು ತಡೆದರು ಹಾಗೂ ಹೀಗೆಂದು ಹೇಳಿದರು; "ಈ ರೀತಿ ಚುನಾವಣೆಯನ್ನು ಗೆಲ್ಲಲು ಪ್ರಯತ್ನಿಸಿದಲ್ಲಿ, ನಾನು ಚುನಾವಣೆಯ ಕಣದಿಂದಲೇ ಹಿಂದೆ ಸರಿದುಬಿಡುತ್ತೇನೆ." ದೀನ್ ದಯಾಳರು ತಮ್ಮ ಭಾಷಣಗಳಲ್ಲಿ ರಾಜಕೀಯ ಹಾಗೂ ಆರ್ಥಿಕ ವಿಷಯಗಳ ಬಗ್ಗೆ ಮಾತನಾಡುತ್ತಿದ್ದರು. ಅವರು ಜನಸಂಘದ ಸಿದ್ಧಾಂತಗಳು ಹಾಗೂ ನೀತಿಗಳಿಗಾಗಿ ಮತವನ್ನು ಕೇಳುತ್ತಿದ್ದರು ಹಾಗೂ ಚುನಾವಣೆಗಳನ್ನು ತಮ್ಮ ಚಿಂತನೆಗಳ ಪ್ರಚಾರಕ್ಕಾಗಿ ಬಳಸಿಕೊಳ್ಳಬೇಕೆಂದು ತಮ್ಮ ಕಾರ್ಯಕರ್ತರನ್ನು ಒತ್ತಾಯಪಡಿಸುತ್ತಿದ್ದರು. ಚುನಾವಣೆಯ ಪ್ರಚಾರ ಮಾಡುವ ಸಂದರ್ಭದಲ್ಲಿ ಅವರ ಜೊತೆ ಇದ್ದ ಕಾರ್ಯಕರ್ತರೊಬ್ಬರು ಹೀಗೆ ಬರೆದಿದ್ದಾರೆ:

"ಜೌನ್‌ಪುರದ ಉಪಚುನಾವಣೆಯಲ್ಲಿ ನಾನು ಸತತವಾಗಿ ಅವರ



ಜೊತೆಯಲ್ಲಿಯೇ ಇದ್ದೆ................ ಚುನಾವಣಾ ಪ್ರವಾಸದ ಮಧ್ಯೆ ಅವರು ಒಮ್ಮೆಯೂ ಸೋಲು-ಗೆಲುವನ್ನು ಕುರಿತು ಚರ್ಚಿಸಲಿಲ್ಲ. ಅವರು ಪೂರ್ವ ನಿರ್ಧಾರಿತ ಯೋಜನೆಗಳಿಗನುಗುಣವಾಗಿ ಪ್ರವಾಸ ಮಾಡುತ್ತಿದ್ದರು. ಅವರು ಹೀಗೆಂದಿದ್ದರು; "ವಿಜಯಶಾಲಿಗೆ ಮೊಟ್ಟಮೊದಲು ನನ್ನಿಂದ ಅಭಿನಂದನೆ ಸಲ್ಲಿಸಬೇಕಾಗಿದೆ. ನಾನು ಅದನ್ನು ಬರೆದಿಡುತ್ತೇನೆ; ಯಾರ ಮೂಲಕವಾದರೂ ಅದನ್ನು ಕಳುಹಿಸಿಕೊಡು." ............... ನಾನು ಆಶ್ಚರ್ಯವನ್ನು ವ್ಯಕ್ತಪಡಿಸಿದಾಗ, ನನ್ನನ್ನು ಕುರಿತು ಅವರು ಹೀಗೆಂದರು; "ವಿಜಯಶಾಲಿಯಾದ ಉಮೇದುವಾರನಿಗೆ ಅವನ ಪ್ರತಿದ್ವಂದಿಯೇ ಮೊದಲ ಅಭಿನಂದನೆಯನ್ನು ಸಲ್ಲಿಸಬೇಕೆಂಬುದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಆರೋಗ್ಯಪೂರ್ಣ ಪರಂಪರೆಯನ್ನು ನಿರ್ಮಿಸಲು ಸಾಧ್ಯವಾಗದ ಪಕ್ಷದಲ್ಲಿ ನಾವು ರಾಜನೀತಿಗೆ ಇಳಿದುದರಿಂದ ಆದ ಪ್ರಯೋಜನವಾದರೂ ಏನು?" ಮತದಾರರಿಗೆ ವಂದನೆಗಳನ್ನು ಅರ್ಪಿಸುವ ಸಲುವಾಗಿ ಹಾಗೂ ವಿಜಯಶಾಲಿ ಉಮೇದುವಾರರಿಗೆ ಜನಪರ ಕಾರ್ಯಗಳಲ್ಲಿ ಸಹಕಾರ ನೀಡುವಂತೆ ಘೋಷಣೆ ಮಾಡುವ ಸಲುವಾಗಿ ಸೋತ ಉಮೇದುವಾರ ಜನಸಾಮಾನ್ಯರ ಸಭೆಯನ್ನು ಏರ್ಪಡಿಸುತ್ತಿದ್ದುದ್ದನ್ನು ಆ ರಾತ್ರಿ ಅಲ್ಲಿಯ ಜನರು ಆಶ್ಚರ್ಯದಿಂದ ನೋಡಿದ್ದರು.

ಅವರು ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಪಂ. ಜವಾಹರ್‌ಲಾಲ್ ನೆಹರೂರವರ ಕಾಂಗ್ರೆಸ್ ಅನ್ನು ವಿರೋಧಿಸಿ ಅವರ ಪಕ್ಷ ಚುನಾವಣೆಗೆ ನಿಂತಿತ್ತು. ಅವರು ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧಪಕ್ಷದ ಸ್ತಂಭವನ್ನು ನಿಲ್ಲಿಸುವ ಪ್ರಯತ್ನದಲ್ಲಿದ್ದರು. ಜನಸಂಘದ ಹಾಗೂ ಅವರ ಸಂಘಟನೆಯ ಬಗ್ಗೆ ನೆಹರೂ ಅವರ ವರ್ತನೆ ಬಹಳ ಕಟುವಾಗಿದ್ದಿತು. ಆದರೆ ದೀನ್ ದಯಾಳರು ಅನೇಕ ಸಂದರ್ಭಗಳಲ್ಲಿ ಅವರೊಡನೆ ನಡೆದುಕೊಂಡ ರೀತಿಯಲ್ಲೂ ಅವರ ಸಾಂಸ್ಕೃತಿಕ ರಾಯಭಾರತ್ವ ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು.

ಇತ್ತ ನೆಹರೂರವರ ವ್ಯಕ್ತಿತ್ವದಿಂದಾಗಿ ರಾಷ್ಟ್ರದ ಹಿರಿಮೆ ಹೆಚ್ಚುತ್ತಿದ್ದರೆ, ಇತ್ತ ಅವರ ಪರಮ ರಕ್ಷಕರಾಗಿ ಕಾರ್ಯನಿರ್ವಹಿಸುವಂತೆ ಉಪಾಧ್ಯಾಯರು ದೇಶಕ್ಕೆ ಹಾಗೂ ಪಕ್ಷಕ್ಕೆ ಕರೆ ನೀಡುತ್ತಿದ್ದರು. ೧೯೬೨ರ ಚೀಣೀ ಆಕ್ರಮಣದ ಸಮಯದಲ್ಲಿ ಪೀಕಿಂಗ್ ರೇಡಿಯೋ ಹಾಗೂ ಸಾಮ್ರಾಜ್ಯವಾದಿಗಳು ನೆಹರೂರವರನ್ನು ಅಪಮಾನಪಡಿಸಿಸುತ್ತಿದ್ದರೆ, ತಮ್ಮ ಪಕ್ಷದ ರಾಷ್ಟ್ರೀಯ ಅಧಿವೇಶನದಲ್ಲಿ ಮಾತನಾಡುತ್ತ ಉಪಾಧ್ಯಾಯರು ಎಲ್ಲರ ಭಾವನೆಗಳನ್ನು ಕಲಕಿಬಿಡುವಂತಹ ಭಾವಪೂರ್ಣ ಹೇಳಿಕೆಯನ್ನು ನೀಡಿದರು: "ನಾವು ಮುಂದೆ ಸಾಗುತ್ತಾ ಹಳ್ಳಿ-ಹಳ್ಳಿಗಳಲ್ಲಿ ಹರಡಿಕೊಂಡು ಸಮಾಜದಲ್ಲಿ ಆಸೆಯನ್ನೂ, ನಂಬಿಕೆಯನ್ನು ಮೂಡಿಸಬೇಕಾಗಿದೆ ಹಾಗೂ ಪಂಡಿತ್ ನೆಹರೂರವರನ್ನು ಚ್ಯಾಂಗ್ ಕೈ ಶೇಕ್‌ರನ್ನಾಗಿಸುವ ರಾಷ್ಟ್ರದ್ರೋಹಿಗಳ ಸಂಚನ್ನು ಬಯಲಿಗೆಳೆಯಬೇಕು ಹಾಗೂ ಭಾರತ ಭೂಮಿಯಲ್ಲಿ

ಚೀನಾದ ಆ ದುರ್ಭಾಗ್ಯಪೂರ್ಣ ಪರಿಚ್ಛೇದ ಮರುಕಳಿಸದಂತೆ ಸ್ಪಷ್ಟವಾಗಿ ಘೋಷಣೆ ಮಾಡಬೇಕು. ತನ್ನ ಹೃದಯವನ್ನು ಕಲ್ಲಾಗಿಸಿಕೊಂಡು ಉದಯಸಿಂಹನ ರಕ್ಷಣೆಗಾಗಿ ತನ್ನ ಪುತ್ರನನ್ನು ಬಲಿಕೊಟ್ಟ ಪನ್ನಾಳಂತಹ ಮಹಾನ್ ದಾಸಿಯ ಆದರ್ಶ ನಮ್ಮ ಮುಂದಿದೆ. ಉಳಿದಿರುವ ರೂಪದಲ್ಲಿ ದೊರೆತಿರುವ ರಾಷ್ಟ್ರದ ಸ್ವಂತಿಕೆ, ಅಖಂಡತೆ ಹಾಗೂ ವಿಶ್ವದಲ್ಲಿಯೇ ಸರ್ವಶ್ರೇಷ್ಠವೆಂದಾಗಿರುವ ಭಾರತೀಯ ಸಂಸ್ಕೃತಿ ಹಾಗೂ ಜೀವನದರ್ಶನದ ರಕ್ಷಣೆಯ ಸಲುವಾಗಿ ಅತಿದೊಡ್ಡ ಬಲಿದಾನಕ್ಕೂ ನಾವು ಸಿದ್ಧರಾಗಿದ್ದೇವೆ."

ಇದೇ ರೀತಿ ಜವಾಹರಲಾಲ್ ನೆಹರೂರವರು ಸಾಮ್ಯವಾದಿಯ ಕಬ್ಬಿಣದ ಕವಚದ ಆವರಣದಿಂದ ಆಬದ್ಧವಾಗಿರುವ ಪೂರ್ವ ಯೂರೋಪಿನ ದೇಶಗಳ ಪ್ರವಾಸವನ್ನು ಕೈಗೊಂಡಾಗ, ದೀನದಯಾಳ ಉಪಾಧ್ಯಾಯರು ಅವರನ್ನು ಗೌರವಪೂರ್ವಕವಾಗಿ ಅಭಿನಂದಿಸಿದರು: "................ ಅವರು (ನೆಹರೂಜಿ) ಭಾರತದ ಸಂದೇಶವನ್ನು ರಷ್ಯಾ ಹಾಗೂ ಪೂರ್ವ ಯೂರೋಪಿನ ಆ ಕ್ಷೇತ್ರಗಳವರೆಗೂ ತಲುಪಿಸಿದ್ದಾರೆ. ಅಲ್ಲಿ ಕಳೆದ ಮೂವತ್ತೈದು ವರ್ಷಗಳಲ್ಲಿ ಬೇರೆ ದೇಶದ ಮನುಷ್ಯನಿರಲಿ, ಒಂದು ಹಕ್ಕಿಯೂ ತನ್ನ ರೆಕ್ಕೆಯನ್ನು ಬಡಿಯುವುದು ಸಾಧ್ಯವಿರಲಿಲ್ಲ. ತಮ್ಮ ಕೀರ್ತಿಧ್ವಜವನ್ನು ಅವರು ದಿಗ್ದಿಂತದಲ್ಲಿ ಹಾರಿಸಿದ್ದಾರೆ. ಇದೆಲ್ಲಾ ನಮಗೆ ಗೌರವದ ಸಂಗತಿಯಾಗಿದೆ."

೧೯೫೬ ರಲ್ಲಿ 'ರಾಜ್ಯಗಳ ಪುನರ್-ವಿಂಗಡಣೆಯ' ಬಗ್ಗೆ ದೇಶದೆಲ್ಲೆಡೆ ಅಶಾಂತಿ ಮೂಡಿತ್ತು. ನೆಹರೂರವರು ವಿದೇಶ ಪ್ರವಾಸ ಮಾಡಬೇಕಾಗಿತ್ತು. ತಮ್ಮ ವಿದೇಶ ಪ್ರವಾಸವನ್ನು ಸ್ಥಗಿತಗೊಳಿಸಿದಲ್ಲಿ, ವಿಶ್ವದಲ್ಲೆಡೆ ಭಾರತದ ಆಂತರಿಕ ಅಸ್ಥಿರತೆಯ ಬಗ್ಗೆ ಭ್ರಾಂತಿ ಮೂಡುವ ಸಾಧ್ಯತೆ ಇದ್ದಿತು. ಆಗ ಉಪಾಧ್ಯಾಯರು ನೆಹರೂರವರಿಗೆ ತಮ್ಮ ಪಕ್ಷದ ಸಂಪೂರ್ಣ ಸಮರ್ಥನೆಯನ್ನು ನೀಡುವ ಬಗ್ಗೆ ಹೀಗೆಂದು ಘೋಷಣೆ ಮಾಡಿದರು:

"ಪಂ. ನೆಹರೂರೊಡನೆ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಹಾಗೂ ಅವರ ನೀತಿಗಳನ್ನು ವಿರೋಧಿಸಿ ಎಷ್ಟೇ ಆಂದೋಳನಗಳನ್ನು ನಡೆಸುತ್ತ ಬಂದಿದ್ದರೂ ವಿದೇಶ ಪ್ರವಾಸಕ್ಕೆ ಹೊರಟಿರುವಾಗ ನಮ್ಮ ಪ್ರಧಾನಮಂತ್ರಿಗಳಿಗೆ ಭಾರತೀಯ ಜನಸಂಘದ ಸದ್ಭಾವನೆಗಳು ಹಾಗೂ ಪೂರ್ಣ ಸಮರ್ಥನೆ ಅವರೊಟ್ಟಿಗೆ ಇರುತ್ತದೆ ಎಂಬ ಭರವಸೆಯನ್ನು ನಾನು ನೀಡಬಯಸುತ್ತೇನೆ."

ರಾಜಕೀಯದಲ್ಲಿ ಸಂಸ್ಕೃತಿಯ ರಾಯಭಾರತ್ವದ ಅವರ ಈ ವರ್ತನೆ ಹಲವರಿಗೆ ವಿಚಿತ್ರವಾಗಿ ಕಾಣುತ್ತಿತ್ತು. ಅಧಿಕಾರ ಪ್ರಾಪ್ತಿಯ ಮಹತ್ವಾಕಾಂಕ್ಷೆ ಇಲ್ಲದ ಅವರ ರಾಜಕೀಯವನ್ನು ಜನರು ಅನೇಕ ಬಾರಿ ಅರ್ಥಮಾಡಿಕೊಳ್ಳಲಾಗಲಿಲ್ಲ. ದೀನ್ ದಯಾಳರ ನೇತೃತ್ವದಿಂದಲೇ ಭಾರತೀಯ ಜನಸಂಘದಲ್ಲಿ ಆಡಳಿತ ನಡೆಸಬೇಕೆಂಬ



ಇಚ್ಛಾಶಕ್ತಿಯ ಕೊರತೆಯುಂಟಾಗಿದೆ ಎಂದು ಅವರಿಗೆ ಅನಿಸುತ್ತಿತ್ತು. ದೀನ್ ದಯಾಳರ ಪ್ರಶಂಸಕರೊಬ್ಬರಾದ ಪತ್ರಕಾರರೂ, 'ಮಹಾರಾಷ್ಟ್ರ ಟೈಮ್ಸ್', ಅಂದಿನ ಸಹಾಯಕ ಸಂಪಾದಕರೂ ಆಗಿದ್ದ ಶ್ರೀ ಡಿ.ವಿ. ಗೋಖಲೆರವರು ಈ ಸಂದರ್ಭದ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ: "ರಾಜನೀತಿಜ್ಞರ ವಿಶೇಷತೆಯೆಂದರೆ ಆ ಘಳಿಗೆ ತಮ್ಮ ಮುಂದಿರುವ ವಿಷಯಗಳಿಗೆ, ಅದೇ ವೇಳೆ ವ್ಯಾವಹಾರಿಕ ಪರಿಷ್ಕಾರವನ್ನು ಪ್ರಸ್ತುತಪಡಿಸಿ ಎಷ್ಟು ಸಾಧ್ಯವೋ, ಅಷ್ಟು ಒಳ್ಳೆಯ ಫಲವನ್ನು ಪಡೆಯುವುದು. ದೀನ್ ದಯಾಳರು ಈ ರೀತಿಯ ರಾಜನೀತಿಜ್ಞರಾಗಿರಲಿಲ್ಲ. ಆದುದರಿಂದ ರಾಜನೈತಿಕ ಘಟನಾಚಕ್ರದಲ್ಲಿ ತಮ್ಮನ್ನು ಅಂದಿನ ನಿರ್ಣಾಯಕರನ್ನಾಗಿಸಿಕೊಳ್ಳುವ ಮಹತ್ವಾಕಾಂಕ್ಷೆ ಅವರಲ್ಲಿ ಇರಲಿಲ್ಲ. ಇದರಿಂದಾಗಿ ಅವರು ಅಂದಿನ ಘಟನಾಚಕ್ರದಲ್ಲಿ ಹೆಚ್ಚು ಪ್ರಭಾವಶಾಲಿ ವ್ಯಕ್ತಿಗಳಾಗಲಿಲ್ಲ. ಸಂಘಟನೆಯ ಶಕ್ತಿ ಹಾಗೂ ವೈಚಾರಿಕ ಚಿಂತನೆಗೆ ಅವರು ಹೆಚ್ಚು ಮಹತ್ವ ನೀಡುತ್ತಿದ್ದರು; ರಾಜಕೀಯ ನೇತೃತ್ವದ ಪ್ರಖರತೆಗಲ್ಲ.

ಇದೇ ರೀತಿ ಮಹಾರಾಷ್ಟ್ರ ಜನಸಂಘದ ಹಿಂದಿನ ಕಾರ್ಯಕರ್ತರಾಗಿದ್ದ ಹಾಗೂ ಮಾಜಿ ಎಮ್.ಎಲ್.ಸಿ. ಶ್ರೀ ಜಿ.ಬಿ. ಕನಿತ್‌ಕರರು ದೀನ್ ದಯಾಳರ ಈ ಪ್ರವೃತ್ತಿಯ ಬಗ್ಗೆ ಹೀಗೆಂದು ಹೇಳಿದ್ದಾರೆ; "ದೀನ್ ದಯಾಳರು ರಾಜಕೀಯ ನೇತಾರರಾಗಿದ್ದುದಕ್ಕಿಂತ ಹೆಚ್ಚಾಗಿ ಶೈಕ್ಷಣಿಕ, ಸಾಂಸ್ಕೃತಿಕ ಕಾರ್ಯಕರ್ತರಾಗಿದ್ದರು. ಅವರ ನೇತೃತ್ವದಲ್ಲಿ ಜನಸಾಮ್ಯಾನರಿಗೆ ತಲುಪುವಂತಹ ಜನ-ಆಂದೋಳನಗಳು ಹಾಗೂ ರಾಜಕೀಯ ಸಮಸ್ಯೆಗಳನ್ನು ಆಧಾರವಾಗಿರಿಸಿಕೊಂಡಿರುವಂಥ ಜನ-ಸಮರ್ಥನೆಯ [mobilization] ಕಾರ್ಯಚಟುವಟಿಕೆಗಳು ಜನಸಂಘದಲ್ಲಿ ಕಡಿಮೆಯಾಗಿಯೇ ಇದ್ದವು. ರಾಷ್ಟ್ರೀಯ ಸಂಸ್ಕೃತಿಯನ್ನಾಧರಿಸಿದ ರಾಜ್ಯನೀತಿಯ ವಿವೇಚನೆ ಜನಸಂಘದ ಕಾರ್ಯಕರ್ತರಿಗೆ ಬಹಳ ಪ್ರಿಯವಾಗಿದ್ದಿತು. ದೈನಂದಿನ ಜೀವನ ಹಾಗೂ ಜನರ ಸಮಸ್ಯೆಗಳ ಬಗೆಗಿನ ವ್ಯಾವಹಾರಿಕ ರಾಜಕೀಯದಿಂದ ನಾವು ನಮ್ಮನ್ನು ಭಾವನಾತ್ಮಕವಾಗಿ ಹಾಗೂ ಸೈದ್ಧಾಂತಿಕ ಆಧಾರವನ್ನು ದೃಢಪಡಿಸುತ್ತ ಹಾಗೂ ಜನಚೈತನ್ಯವನ್ನು ಕ್ರಮವಾಗಿ ಎಚ್ಚರಗೊಳಿಸುತ್ತ, ನಮ್ಮ ದಳದ ವಿಕಾಸವನ್ನು ಸಾಧಿಸಬೇಕು ಎಂಬುದು ದೀನ್ ದಯಾಳರ ನಿಲುವಾಗಿತ್ತು. ಸಂಸ್ಕೃತಿಯ ರಾಯಭಾರಿ ಎಂಬ ಪರಿಕಲ್ಪನೆ ಅವರನ್ನು 'ಅಜಾತಶತ್ರು'ವನ್ನಾಗಿಸಿಬಿಟ್ಟಿತ್ತು. ಅವರು ಪ್ರಜಾಪ್ರಭುತ್ವದ ಸಂಸದೀಯ ವ್ಯವಸ್ಥೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು, ಆದರೂ ಅವರು 'ವಿರೋಧವಾದಿ'ಗಳಾಗಿರಲಿಲ್ಲ. ಅವರ ಸೌಮ್ಯ ರಾಜಕೀಯ ನೇತೃತ್ವದ ವಿಷಯವನ್ನು ಕುರಿತು ಮಾ.ಸ. ಗೋಳ್‌ವಳ್‌ಕರರು ಹೀಗೆ ಹೇಳಿದ್ದಾರೆ.

"ಪಂ. ದೀನ್ ದಯಾಳ್ ಅವರು ವಿರೋಧ ಪಕ್ಷವೊಂದರ ಪ್ರಮುಖ ವ್ಯಕ್ತಿಗಳಾಗಿದ್ದರು. ಯಾವುದೇ ಅನಿಷ್ಟವನ್ನು ಕಂಡಲ್ಲಿ, ಯಾವುದೇ

ದೋಷಮಯತೆಯನ್ನು ಕಂಡಲ್ಲಿ, ಅವನ್ನು ಕುರಿತಾದ ತಮ್ಮ ಅಭಿಪ್ರಾಯವನ್ನು ಅಸಂದಿಗ್ಧ ಶಬ್ದಗಳಲ್ಲಿ ವ್ಯಕ್ತಪಡಿಸುವುದು ಅವರ ಕರ್ತವ್ಯವಾಗಿತ್ತು. ಅವರು ಹೀಗೆಯೇ ಮಾಡಿದರು. ಆದರೆ ಅವರ ಎಲ್ಲ ಲೇಖನಗಳನ್ನು ನೋಡಿದಾಗ ಅವರ ಹೃದಯದಲ್ಲಿ ಯಾವುದೇ ಕಟುತ್ವವಿರಲಿಲ್ಲವೆಂಬುದು ಕಂಡುಬರುತ್ತದೆ. ಶಬ್ದಗಳಲ್ಲಿಯೂ ಕಟುತ್ವವಿರುತ್ತಿರಲಿಲ್ಲ; ಬಹಳ ಪ್ರೀತಿಯಿಂದ ಮಾತನಾಡುತ್ತಿದ್ದರು. ನನ್ನೊಡನೆ ಅವರಿಗೆ ನಿಕಟ ಸಂಬಂಧವಿತ್ತು. ಎಂದಿಗೂ ಯಾರ ಮೇಲೆಯೂ ಅವರು ಮುನಿಸಿಕೊಳ್ಳುತ್ತಿರಲಿಲ್ಲ. ಯಾವುದೇ ಕೆಲಸ ತುಂಬ ಹಾಳಾಗಿಹೋದರೂ ಹಾಳು ಮಾಡಿದವರ ಬಗ್ಗೆ ಅಪಶಬ್ದಗಳನ್ನು ಬಳಸುತ್ತಿರಲಿಲ್ಲ. ಅವರು ಯುಧಿಷ್ಠಿರರ ಹಾಗೆಯೇ ಇದ್ದರು. ದುರ್ಯೋಧನನಲ್ಲಿ ದುರಾಕ್ಷರನಿದ್ದ. ಅದುದರಿಂದಲೇ ಅವರು 'ದುರ್ಯೋಧನ' ಎಂದು ಹೇಳದೆ 'ಸುಯೋಧನ' ಎಂದು ಹೇಳುತ್ತಿದ್ದರು. ದೀನ್ ದಯಾಳರು ಇದೇ ಪರಂಪರೆಗೆ ಸೇರಿದ ವ್ಯಕ್ತಿಗಳಾಗಿದ್ದರು ಆದುದರಿಂದ ಅವರಲ್ಲಿ ಕಟುತ್ವ ಕಂಡುಬರುತ್ತಿರಲಿಲ್ಲ. ಕಟುತ್ವ ಎಂಬುದು ಅವರ ಮಾತುಗಳಲ್ಲಿರಲಿಲ್ಲ, ಹೃದಯದೊಳಗೆ ಇರಲಿಲ್ಲ, ವಾಣಿಯಲ್ಲಿಯೂ ಇರಲಿಲ್ಲ."

ದೀನ್ ದಯಾಳ್ ಉಪಾಧ್ಯಾಯರು ಅಧಿಕಾರಕ್ಕಾಗಿ ಹಾತೊರೆಯುವ ರಾಜಕೀಯದ ಸಮರ್ಥಕರಾಗಿರಲಿಲ್ಲ. ಭಾರತದ ಪ್ರಜಾಪ್ರಭುತ್ವವನ್ನು ಸಂಸ್ಕೃತಿಯಿಂದ ಆಪ್ಲಾವನಗೊಳಿಸುವ ಮಹತ್ವಾಕಾಂಕ್ಷೆಯನ್ನು ಇರಿಸಿಕೊಂಡಿದ್ದರು. ಅವರು ಬಾಳಿನ ಈ ವ್ರತ ಅವರ ಇಡೀ ರಾಜಕೀಯ ವರ್ತನೆಯಲ್ಲಿ ಎದ್ದು ಕಾಣುತ್ತದೆ.



## ಅಧ್ಯಾಯ ೫

# ರಾಷ್ಟ್ರೀಯ ಅಖಂಡತೆಯ ರಾಜನೀತಿ

ಅಖಂಡ ಭಾರತದ ಯಾವ ಸೈದ್ಧಾಂತಿಕ ಹಿನ್ನಲೆಯಲ್ಲಿ ಜನಸಂಘ ಜನ್ಮತಾಳಿತೋ ಆ ಕಾರಣದಿಂದಲೇ ಜನಸಂಘವು ಮೊದಲನೆಯ ದಿನದಿಂದಲೇ ರಾಷ್ಟ್ರೀಯ ಅಖಂಡತೆ ಹಾಗೂ ಪಾಕಿಸ್ತಾನ–ವಿರೋಧದ ವಿಷಯಗಳನ್ನು ತಲೆಯೆತ್ತುವಂತೆ ಮೊರೆಯಿಡಲು ಸಜ್ಜಾಯಿತು. ಆಂತರಿಕ ವಿಷಯಗಳಲ್ಲಿಯೂ ಸಹ ಎಷ್ಟು ಭಾವನಾತ್ಮಕತೆಯೊಂದಿಗೆ ಜನಸಂಘವು ಪ್ರಾಂತೀಯ, ಜಾತೀಯ ಹಾಗೂ ಭಾಷಿಕ ಪ್ರತ್ಯೇಕವಾದಗಳನ್ನು ವಿರೋಧಿಸಿತೋ ಅಷ್ಟು ವಿರೋಧವನ್ನು ಬೇರೆ ಯಾವುದೇ ದಳವೂ ಮಾಡಿರಲಿಲ್ಲ. ಜನಸಂಘದ ಈ ರಾಷ್ಟ್ರವಾದಿ ಆಗ್ರಹದ ಮುಖಂಡರು ದೀನ್ ದಯಾಳ್ ಉಪಾಧ್ಯಾಯರಾಗಿದ್ದರು. ಅವರೇ ಸಾಮುದಾಯಿಕ ಹಾಗೂ ಭೌತಿಕ ಸ್ವಾರ್ಥಗಳನ್ನು ಆಧಾರವನ್ನಾಗಿಸಿಕೊಂಡು ಸಂಘಟಿತವಾದ ಇತರ ರಾಜನೈತಿಕ ಪಕ್ಷಗಳಿಗೆ ಹೋಲಿಸಿದಾಗ, ರಾಷ್ಟ್ರೀಯ ಐಕ್ಯ ಹಾಗೂ ಅಖಂಡತೆಯ ವಿಷಯಗಳನ್ನು ತಮ್ಮ ಆಂದೋಳನದ ಅಂಶವನ್ನಾಗಿಸುವುದು ಮಾತ್ರವಲ್ಲದೆ, ಜನರನ್ನು ಇಂತಹ ವಿಷಯಕ್ಕಾಗಿ ಸಂಘಟಿತರನ್ನಾಗಿಸಿ ಆತ್ಮಸಮರ್ಪಣೆಗೆ ಸಜ್ಜುಗೊಳಿಸುವಂತಹ ರಾಜನೈತಿಕ ದಳವೊಂದನ್ನು ರೂಪಿಸಿ ಬೆಳಸಿದರು.

### ಕಾಶ್ಮೀರ ಆಂದೋಳನ

ಭಾರತೀಯ ಜನಸಂಘ ನಡೆಸಿದ ಕಾಶ್ಮೀರ ಆಂದೋಳನದ ಮೂರು ಪ್ರಮುಖ ಘೋಷಣೆಗಳು ಹೀಗಿದ್ದವು :

ಒಂದೇ ನಾಡಿನಲ್ಲಿ ಎರಡು ವಿಧಾನ(ಕಾರ್ಯಾಂಗ)ಗಳು ಇರುವಂತಿಲ್ಲ.

ಒಂದೇ ನಾಡಿನಲ್ಲಿ ಇಬ್ಬರು ಪ್ರಧಾನ ಮಂತ್ರಿಗಳು ಇರುವಂತಿಲ್ಲ.

ಒಂದೇ ನಾಡಿನಲ್ಲಿ ಎರಡು ಸಂಕೇತ ಚಿಹ್ನೆಗಳು ಇರುವಂತಿಲ್ಲ.

ಇದರ ಸಂಚಾಲನೆಯ ಜವಾಬ್ದಾರಿಯನ್ನು ಮುಖ್ಯವಾಗಿ ಜಮ್ಮುವಿನ ಪ್ರಜಾ–ಪರಿಷತ್ತು ವಹಿಸಿತು. ಡಾ. ಮುಖರ್ಜಿರವರು ಅನುಮತಿ ಪತ್ರವನ್ನು ಪಡೆಯದೇ ಕಾಶ್ಮೀರವನ್ನು ಪ್ರವೇಶಿಸಿ, ಕಾಶ್ಮೀರವನ್ನು ಸಂಪೂರ್ಣವಾಗಿ ಭಾರತದಲ್ಲಿ ಸೇರಿಸಿಕೊಳ್ಳುವ ಸಲುವಾಗಿ ಸತ್ಯಾಗ್ರಹವನ್ನು ಹೂಡಿದರು ಹಾಗೂ ಅದಕ್ಕಾಗಿ

ತಮ್ಮ ಪ್ರಾಣವನ್ನೇ ಅರ್ಪಿಸಿದರು. ಕಾಶ್ಮೀರ ಆಂದೋಳನದ ಸಲುವಾಗಿ ದೇಶಾದ್ಯಂತ ಸತ್ಯಾಗ್ರಹಿಗಳನ್ನು ಒಂದು ಗೂಡಿಸುವಲ್ಲಿ ಹಾಗೂ ಈ ಉದ್ದೇಶಕ್ಕಾಗಿ ಸಂಘಟನೆಯನ್ನು ಸಕ್ರಿಯಗೊಳಿಸುವುದರಲ್ಲಿ ಉಪಾಧ್ಯಾಯರು ಪ್ರಮುಖ ಪಾತ್ರವಹಿಸಿದರು. ಕಾಶ್ಮೀರ ಪ್ರಸಂಗವನ್ನು ಕುರಿತು ತಮ್ಮ ವಿಚಾರಗಳನ್ನು ವ್ಯಕ್ತಪಡಿಸುವುದರ ಸಲುವಾಗಿ ಅವರು 'ಪಾಂಚಜನ್ಯ'ದ 'ಕಾಶ್ಮೀರ ಅಂಕ'ದಲ್ಲಿ ಒಂದು ಸುದೀರ್ಘ ಲೇಖನವನ್ನೇ ಬರೆದರು. ದೀನ್ ದಯಾಳ್ ಉಪಾಧ್ಯಾಯರು ಸ್ವಾತಂತ್ರ್ಯ ಪ್ರಾಪ್ತಿಯ ಹಾಗೂ ದೇಶ ವಿಭಜನೆಯ ತತ್‌ಕ್ಷಣವೇ ಕಾಶ್ಮೀರದ ಮೇಲೆ ಪಾಕೀಸ್ತಾನ ನಡೆಸಿದ ಆಕ್ರಮಣದ ಬಗ್ಗೆ ಭಾರತ ಸರ್ಕಾರ ತೋರಿದ ಸಡಿಲತೆ, ಕಾಶ್ಮೀರದ ವಿಷಯದಲ್ಲಿ ವಿಶ್ವಸಂಸ್ಥೆಯನ್ನು ನ್ಯಾಯನೀಡಿಕೆಯ ಮುಖ್ಯಸ್ಥನನ್ನಾಗಿಸಿದ್ದು, ಕಾಶ್ಮೀರದ ಭವಿಷ್ಯವನ್ನು ನಿರ್ಧರಿಸುವುದಕ್ಕಾಗಿ ಜನಾಭಿಪ್ರಾಯವನ್ನು ಸಂಗ್ರಹಿಸುವ ಬಗ್ಗೆ ವಿಚಾರ ಮಾಡಿದ್ದು ಹಾಗೂ ಸಂವಿಧಾನದ ೩೭೦ನೆಯ ಅನುಚ್ಛೇದದ ಮೇರೆಗೆ ಅದಕ್ಕೆ ವಿಶಿಷ್ಟ ಸ್ಥಾನಮಾನ ನೀಡಿದ್ದು– ಇವೇ ಮೊದಲಾದ ವಿಷಯಗಳಲ್ಲಿ ಮಾಡಿದ ವ್ಯಾವಹಾರಿಕ ಹಾಗೂ ಸೈದ್ಧಾಂತಿಕ ತಪ್ಪುಗಳ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡುತ್ತ ಅವರು ಹೀಗೆಂದು ಬರೆದರು:

"ಕಾಶ್ಮೀರದ ಮೇಲೆ ಭಾರತಕ್ಕೆ ಇರುವ ಸ್ವಾಭಾವಿಕ ಪ್ರಭುತ್ವದ ಜೊತೆಗೆ, ಅಲ್ಲಿಯ ಮಹಾರಾಜ ಹರಿಸಿಂಹರು ವಿಲೀನಪತ್ರಕ್ಕೆ ಸಹಿ ಮಾಡಿದ್ದರು. ಎಲ್ಲ ದೃಷ್ಟಿಗಳಿಂದಲೂ ಅದು ಭಾರತದ ಅಭಿನ್ನ ಅಂಗವಾಗಿ ಬಿಟ್ಟಿತು. ಹೀಗಾಗಿ ಕಾಶ್ಮೀರದ ಮೇಲೆ ನಡೆಸಿದ ಆಕ್ರಮಣ ಭಾರತದ ಮೇಲೆ ನಡೆಸಿದ ಆಕ್ರಮಣವೇ ಆಗಿತ್ತು............. ನಮ್ಮಿಂದಾದ ತಪ್ಪು ಎಂದರೆ ಪಾಕೀಸ್ತಾನದ ಈ ಆಕ್ರಮಣವನ್ನು ನಾವು ಕಾಶ್ಮೀರದ ಆಕ್ರಮಣವೆಂದು ಭಾವಿಸಿದೆವೇ ಹೊರತು ಭಾರತ ಮೇಲೆ ನಡೆಸಿದ ಆಕ್ರಮಣವೆಂದು ಭಾವಿಸಲಿಲ್ಲ." ಕಾಶ್ಮೀರದ ಮೇಲಿನ ಭಾರತದ ಸ್ವಾಭಾವಿಕ ಪ್ರಭುತ್ವವನ್ನು ಸಾಬೀತುಪಡಿಸುವ ಸಲುವಾಗಿ ಕಾಶ್ಮೀರದ ಸಾಂಸ್ಕೃತಿಕ ಇತಿಹಾಸವನ್ನು ಹಾಗೂ ಭಾರತೀಯ ಸಂಸ್ಕೃತಿಯೊಡನೆ ಅದಕ್ಕಿರುವ ಐತಿಹಾಸಿಕ ಸಂಬಂಧವನ್ನು ಅವರು ಬಹಳ ಮನೋಹರ ರೀತಿಯಲ್ಲಿ ವರ್ಣಿಸಿದ್ದಾರೆ. ಇಂದು ಪಾಕೀಸ್ತಾನ ಕಾಶ್ಮೀರದ ಮೇಲೆ ಏಕೆ ಹಕ್ಕನ್ನು ಚಲಾಯಿಸಲು ಯತ್ನಿಸುತ್ತಿದೆ ಹಾಗೂ ಭಾರತವು ಈ ಹಕ್ಕನ್ನೇಕೆ ಒಪ್ಪಿಕೊಳ್ಳಬಾರದು? ಈ ಕುರಿತು ವರ್ಣನೆ ಮಾಡುತ್ತಾ ಉಪಾಧ್ಯಾಯರು ಈ ವಾದವನ್ನು ಮುಂದರಿಸುತ್ತಾರೆ:

"ಪಾಕೀಸ್ತಾನದ ನಿರ್ಮಾಪಕರು ಇಸ್ಲಾಮನ್ನು ರಾಷ್ಟ್ರೀಯತೆಯ ಆಧಾರವೆಂದು ಭಾವಿಸಿ ಮುನ್ನಡೆಯುತ್ತಾರೆ. ಈ ಆಧಾರದ ಮೇರೆಗೆ, ಆ ಮುಸಲ್ಮಾನರು ಹೆಚ್ಚಾಗಿ ಇರುವ ಕಾಶ್ಮೀರದ ಮೇಲೆ ತಮಗೆ ಸಹಜವಾದ ಅಧಿಕಾರವಿದೆಯೆಂದು ಭಾವಿಸುತ್ತಾರೆ. ಎಂದು ಅವರು ತಮ್ಮ ಈ ಹಕ್ಕನ್ನು ಬಿಟ್ಟುಕೊಡುತ್ತಾರೆಯೋ, ಅಂದು ಅವರ



ತಳಹದಿಯೇ ಕುಸಿದು ಹೋಗುತ್ತದೆ............. ಆದರೆ ಭಾರತದ ವಿಭಜನೆಗೆ ದ್ವಿ–ರಾಷ್ಟ್ರವಾದವನ್ನು ಆಧಾರವನ್ನಾಗಿರಿಸಿದ್ದಲ್ಲಿ ಇಲ್ಲಿ ಓರ್ವ ಮುಸಲ್ಮಾನನಿಗೂ ಇರಲು ಸಾಧ್ಯವಾಗುತ್ತಿರಲಿಲ್ಲ......... ಮುಸಲ್ಮಾನರ ಬಹುಮತವಿದೆಯೆಂಬ ಒಂದು ಕಾರಣಕ್ಕಾಗಿಯೇ ಇಂದು ಕಾಶ್ಮೀರದ ಮೇಲೆ ಪಾಕಿಸ್ತಾನದ ಹಕ್ಕನ್ನು ಸ್ವೀಕರಿಸಿದ್ದಲ್ಲಿ, ನಾವು ನಮ್ಮ ರಾಷ್ಟ್ರೀಯತೆಯ ತಳಹದಿಯ ಮೇಲೆ ಕೊಡಲಿಯಿಂದ ಪ್ರಹಾರ ಮಾಡಿದಂತಾಗುತ್ತದೆ.......... ಜನರ ಅಭಿಪ್ರಾಯವನ್ನು ತಿಳಿಯುವ ಘೋಷಣೆ ಸೈದ್ಧಾಂತಿಕವಾಗಿ ನಮ್ಮಿಂದ ಆದ ತಪ್ಪಾಗಿದ್ದಿತು. ಪಾಕೀಸ್ತಾನವು ಇಂದು ಅದನ್ನೇ ಹಿಡಿದುಕೊಂಡಿರುವುದು ದೌರ್ಭಾಗ್ಯದ ಸಂಗತಿಯೇ ಸರಿ."

ಭಾರತವು ಒಂದು ಕೇಂದ್ರೀಯ ಸಂವಿಧಾನವನ್ನು ಸ್ವೀಕರಿಸಿದೆ. ಹೀಗಾಗಿ ರಾಜ್ಯಗಳಿಗೆ ಸ್ವಲ್ಪ ಮಟ್ಟಿಗೆ 'ಸ್ವಾಯತ್ತ ಅಧಿಕಾರ' ಇರುತ್ತದೆ. ಆದರೆ ಕಾಶ್ಮೀರಕ್ಕೆ ಪ್ರತ್ಯೇಕ ಸಂವಿಧಾನದ ಸೌಲಭ್ಯವನ್ನು ಕಲ್ಪಿಸಿರುವುದಕ್ಕೆ 'ಪ್ರಾಂತೀಯ ಸ್ವಾಯತ್ತತೆ' ಕಾರಣವಾಗಿಲ್ಲದೆ ಪ್ರತ್ಯೇಕತಾವಾದ ಕಾರಣವಾಗಿದೆ. ಕಾಶ್ಮೀರಕ್ಕಾಗಿ ಪ್ರಸ್ತಾವಿಸಲಾಗಿರುವ ಸಂವಿಧಾನ ಹೇಗೆ ಭಾರತದ ಸಂವೈಧಾನಿಕ ಪ್ರಭುತ್ವಕ್ಕೆ ವಿರುದ್ಧವಾಗಿದೆ ಎಂಬುದರ ಬಗ್ಗೆ ಸಾಕಷ್ಟು ವಿಸ್ತಾರವಾಗಿ ಚರ್ಚಿಸಿದ್ದಾರೆ. ಉಪಾಧ್ಯಾಯರು ತಮ್ಮ ಈ ಲೇಖನದಲ್ಲಿ ಒಂದೊಂದು ಅನುಚ್ಛೇದದ ಬಗ್ಗೆಯೂ ವಿಶ್ಲೇಷಣೆ ಮಾಡುತ್ತ, ತಮ್ಮ ಲೇಖನದ ಕೊನೆಯಲ್ಲಿ ಹೀಗೆಂದು ಹೇಳಿದ್ದಾರೆ: "ಇಂದು ಕಾಶ್ಮೀರವು ಭಾರತದ ಪಕ್ಷಾತೀತವಾದ ರಾಷ್ಟ್ರೀಯತೆಯನ್ನು, ನ್ಯಾಶನಲ್ ಕಾಂಗ್ರೆಸ್‌ನ ನಾಯಕನ ರಾಷ್ಟ್ರ–ನಿಷ್ಠೆಯನ್ನು ಹಾಗೂ ವಿಶ್ವ ಸಂಸ್ಥೆಯ ನ್ಯಾಯಪ್ರಿಯತೆಯನ್ನು ಪರೀಕ್ಷಿಸುವ ಒರೆಗಲ್ಲಾಗಿದೆ."

ವಿಶ್ವಸಂಸ್ಥೆಯಿಂದ ಭಾರತಕ್ಕೆ ಇಲ್ಲಿಯ ತನಕ ನ್ಯಾಯ ದೊರೆತಿಲ್ಲ. ಜವಾಹರ್‌ಲಾಲ್ ನೆಹರೂರವರೂ ತಮ್ಮ ಯುದ್ಧ–ವಿರೋಧಿ ಅಂತಾರಾಷ್ಟ್ರೀಯ ದೃಷ್ಟಿಕೋನದಿಂದಾಗಿ, ಪಾಕೀಸ್ತಾನವು ಕಾಶ್ಮೀರದ ಯಾವ ಭಾಗವನ್ನು ೧೯೪೭ರಲ್ಲಿ ಆಕ್ರಮಿಸಿಕೊಂಡಿತ್ತೋ, ಯಾವ ಭಾಗವನ್ನು 'ಸ್ವತಂತ್ರ ಕಾಶ್ಮೀರ' ಎಂಬ ಹೆಸರಿನಿಂದ ಕರೆಯಲಾಗುತ್ತಿದೆಯೋ, ಅದನ್ನು ಪುನಃ ಪಡೆದುಕೊಳ್ಳುವ ಯಾವುದೇ ಪ್ರಯತ್ನವನ್ನು ಮಾಡಲಿಲ್ಲ. ಬದಲಾಗಿ, ಅವರು ಜಗಳವನ್ನು ಕೊನೆಗೊಳಿಸುವ ಸಲುವಾಗಿ ಯುದ್ಧ ವಿರಾಮ ರೇಖೆಯಾಗಿ ಕಾಶ್ಮೀರದ ವಿಭಜನೆಯನ್ನು ಸ್ವೀಕರಿಸುವುದರ ಮುಖಾಂತರ ಪಾಕೀಸ್ತಾನದೊಂದಿಗೆ ಒಪ್ಪಂದವನ್ನು ಏರ್ಪಡಿಸಿಕೊಳ್ಳಬಯಸಿದರು, ಅದರಲ್ಲಿ ಅವರು ಯಶಸ್ವಿಯಾಗಿರಲಿಲ್ಲ. ನೆಹರೂ ಅವರು ಈ ವಿಷಯವನ್ನು ದೇಶಕ್ಕೆ ತಿಳಿಸಿದಾಗ ಉಪಾಧ್ಯಾಯರು ಜನಸಂಘದ ಪ್ರಧಾನ ಕಾರ್ಯದರ್ಶಿಗಳಾಗಿ ಪತ್ರಕರ್ತರ ಸಮ್ಮೇಳನವನ್ನು ಕರೆದು ಪ್ರಬಲವಾದ ಪ್ರತಿಕ್ರಿಯೆಯನ್ನು ತೋರಿಸಿದರು :

"ಪ್ರಧಾನ ಮಂತ್ರಿಗಳಿಂದ ಮಾಡಲ್ಪಟ್ಟ ಈ ರಹಸ್ಯೋದ್ಘಾಟನೆಯ ಕಾರಣದಿಂದ ನಮಗೆ ತಿಳಿದು ಬಂದುದೇನೆಂದರೆ ಅವರು ಒಂದು ಬಾರಿ ಯುದ್ಧ ವಿರಾಮ

ರೇಖೆಯ ಮೇಲೆ ಜಮ್ಮು-ಕಾಶ್ಮೀರ ರಾಜ್ಯದ ವಿಭಜನೆಯನ್ನು ಸ್ವೀಕರಿಸುವ ಪ್ರಸ್ತಾಪವನ್ನು ಪಾಕೀಸ್ತಾನದ ಮುಂದಿಟ್ಟಿದ್ದರು ಎಂಬುದನ್ನು ತಿಳಿದು ತೀವ್ರ ವೇದನೆಯುಂಟಾಯಿತು. ಮೇಲೆ ತಿಳಿಸಿದ ಪ್ರಸ್ತಾಪ ದೇಶಭಕ್ತಿ ವಿರುದ್ಧವಾಗಿದ್ದುದು ಮಾತ್ರವಲ್ಲದೆ, ಕೂಟನೀತಿಗೆ ವಿರುದ್ಧವಾಗಿದೆ."

ಇದೇ ಸಂದರ್ಭದಲ್ಲಿ ಇಲ್ಲಿ ಮತ್ತೊಂದು ಘಟನೆಯನ್ನು ಉಲ್ಲೇಖಿಸಿಬೇಕಾಗಿದೆ. ಭಾರತೀಯ ಜನಸಂಘ ವಾಮಪಂಥಕ್ಕೆ ಸೇರಿದ ಪಕ್ಷ ಎಂಬ ಮಾತು ಕೇಳಿಬರುತ್ತಿತ್ತು, ಆದ್ದರಿಂದ ಜನಸಂಘ ಸ್ವತಂತ್ರ ಪಕ್ಷದೊಡನೆ ವಿಲೀನವಾಗಿಬಿಡಲಿ ಎಂಬುದು ತಮ್ಮನ್ನು ತಾವು ಬಲ ಪಂಥೀಯರೆಂದು ಭಾವಿಸುತ್ತಿದ್ದ ಸ್ವತಂತ್ರ ಪಕ್ಷದ ಆಸೆಯಾಗಿತ್ತು. ಜನಸಂಘದ ಕೆಲವು ಮಂದಿಯೂ ಇದನ್ನು ಸಮರ್ಥಿಸುತ್ತಿದ್ದರು. ಹೀಗಾಗಿ ಸೇರ್ಪಡೆಯ ಮಾತುಗಳು ಮೂಡಿಬಂದುವು. ಚುನಾವಣೆಯ ಒಪ್ಪಂದ ಸಹ ಏರ್ಪಟ್ಟಿತು. ಅದೇ ವೇಳೆ ಸ್ವತಂತ್ರ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಮೀನೂ ಮಸಾನಿರವರು ಜನಸಂಘದ ಕಾಶ್ಮೀರ ನೀತಿಯನ್ನು ತಾವು ಒಪ್ಪುವುದಿಲ್ಲವೆಂಬ ಹೇಳಿಕೆಯನ್ನು ನೀಡಿದರು. ಅವರ ಅಭಿಪ್ರಾಯದಲ್ಲಿ ಪಾಕೀಸ್ತಾನದೊಡನೆ ಈ ಸಂದರ್ಭದಲ್ಲಿ ಮಾತುಕತೆ ನಡೆಸುವುದು ಅಗತ್ಯವಾಗಿತ್ತು ಹಾಗೂ ಅವರು ವಿಶ್ವಸಂಸ್ಥೆಯ ಮಧ್ಯಸ್ಥಿಕೆಯ ಪರವಾಗಿಯೂ ಇದ್ದರು. ದೀನ್ ದಯಾಳ್ ಉಪಾಧ್ಯಾಯರು ಇದನ್ನು ಒಪ್ಪುತ್ತಿರಲಿಲ್ಲ. ಅವರು ಜನಸಂಘ ಹಾಗೂ ಸ್ವತಂತ್ರ ಪಕ್ಷಗಳ ಒಪ್ಪಂದವನ್ನು ಮುರಿದು ಹೀಗೆ ಹೇಳಿದರು:

"ತಮ್ಮ ಅಭಿಪ್ರಾಯವನ್ನು ಇಷ್ಟೊಂದು ಸ್ಪಷ್ಟವಾಗಿ ತಿಳಿಯಪಡಿಸಿರುವುದಕ್ಕಾಗಿ ಮಸಾನಿರವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅವರ ಈ ಘೋಷಣೆ ನಮ್ಮನ್ನು ಚುನಾವಣೆಯ ಒಪ್ಪಂದದ ಬಂಧನದಿಂದ ಮುಕ್ತಗೊಳಿಸಿದೆ. ಏಕೆಂದರೆ ಅದು ಸ್ವತಂತ್ರ ಪಕ್ಷದ ನಾಯಕರ ಪಾಕ್ ಪರವಾದ ಹಾಗೂ ಕಾಶ್ಮೀರದ ಬಗೆಗಿನ ನೀತಿಯಿಂದಾಗಿ ನಮ್ಮ ವ್ಯಾಕುಲತೆಗೆ ಕಾರಣವಾಗಿ ಬಿಟ್ಟಿತ್ತು ................ ದೇಶದ ಯಾವುದೇ ಭೂ-ಭಾಗವನ್ನು ಆಕ್ರಮಣಕಾರಿಗಳ ಕೈಗೆ ಒಪ್ಪಿಸುವ ಆಲೋಚನೆಯನ್ನು ಇರಿಸಿಕೊಂಡಿರುವಂತಹ ಯಾವುದೇ ಪಕ್ಷದೊಡನೆ ಜನಸಂಘ ಒಪ್ಪಂದಕ್ಕೆ ಬರದಿರುವುದು ಸಹಜವೇ ಆಗಿದೆ................ ಒಳಿತು-ಕೆಡುಕುಗಳ ಬಗ್ಗೆ ನಮಗೆ ಶ್ರೀ ಮಸಾನಿರವರ ಉಪದೇಶಗಳ ಅಗತ್ಯವಿಲ್ಲ. ದೇಶದ ಐಕ್ಯ ಹಾಗೂ ಅಖಂಡತೆಯ ಪ್ರಶ್ನೆ ನಮ್ಮ ಧ್ಯೇಯದ ಸಂಗತಿಯೇ ಆಗಿದೆ. ಅದನ್ನು ಸಾಧಿಸಿಕೊಳ್ಳಲು ನಾವು ಯಾವುದೇ ಕ್ರಮವನ್ನು ಕೈಗೊಳ್ಳದೆ ಇರುವುದಿಲ್ಲ."

**ಗೋವಾ-ಮುಕ್ತಿ ಆಂದೋಳನ**

ಇಡೀ ಪ್ರಪಂಚದಲ್ಲಿನ ವಸಾಹತುವಾದವನ್ನು ವಿರೋಧಿಸುವ ಭಾರತ ಸರ್ಕಾರದ ಮೇಲೆ, ಸ್ವಯಂ ಭಾರತದ ಭೂಮಿಯ ಮೇಲೆ ಸ್ಥಾಪಿತವಾಗಿರುವ



ಪಾಂಡಿಚೆರಿ ಹಾಗೂ ಗೋವಾ-ದಮಣ್-ದೀವ್‌ಗಳ ಮೇಲೆ ಫ್ರಾನ್ಸ್ ಹಾಗೂ ಪೋರ್ಚುಗೀಸ್ ದೇಶಗಳು ಸ್ಥಾಪಿಸಿಕೊಂಡಿರುವ ವಸಾಹತುಗಳ ವಿರುದ್ಧ ಕಾರ್ಯಚರಣೆಯನ್ನು ಕೈಗೊಳ್ಳುವ ಬಗ್ಗೆ ಒತ್ತಾಯ ಹೇರಬೇಕಾಗಿ ಬಂದಿರುವುದು ನಿಜಕ್ಕೂ ಆಶ್ಚರ್ಯದ ಸಂಗತಿ. ೧೯೫೨ರಲ್ಲಿ ನಡೆದ ಪ್ರಥಮ ಕಾನ್‌ಪುರದ ಅಧಿವೇಶನದಲ್ಲಿಯೇ ದೀನ್ ದಯಾಳ್ ಉಪಾಧ್ಯಾಯರು ಈ ವಸಾಹತುಗಳನ್ನು ಸ್ವತಂತ್ರವನ್ನಾಗಿಸುವ ಪ್ರಸ್ತಾಪವನ್ನಿಟ್ಟಿದ್ದರು. ಆ ಸಂದರ್ಭದಲ್ಲಿ ೨ಮೇ, ೧೯೫೪ ರಂದು ಭಾರತೀಯ ಜನಸಂಘವು ಇಡೀ ದೇಶದಲ್ಲಿ ಈ ವಸಾಹತುವಾದದ ವಿರುದ್ಧ ಜನಜಾಗೃತಿಯುಂಟು ಮಾಡಲು ಹಾಗೂ ನೆಹರೂರವರ ಮೇಲೆ ಒತ್ತಡ ಹಾಕುವ ಸಲುವಾಗಿ 'ವಿಲೀನ ದಿವಸ'ವನ್ನು ಆಯೋಜಿಸಲಾಯಿತು. ಇದೇ ಸಂದರ್ಭದಲ್ಲಿ ಇಂದೌರ್‌ನಲ್ಲಿ ಭಾಷಣ ಮಾಡುತ್ತಾ ಉಪಾಧ್ಯಾಯರು ಹೀಗೆಂದರು:

"ಭಾರತದಲ್ಲಿನ ಫ್ರಾನ್ಸ್ ವಸಾಹತುಗಳ ನಿವಾಸಿಗಳು ಸಾಮ್ರಾಜ್ಯವಾದಿ ಹಿಡಿತದಿಂದ ಮುಕ್ತರಾಗಲು ಒಂದು ಶಾಂತಿಯುತ ಸಂಘರ್ಷವನ್ನು ಆರಂಭಿಸಿದ್ದಾರೆ........ಭಾರತ ಸರ್ಕಾರ 'ನಿಲ್ಲು ಹಾಗೂ ನೋಡು' ನೀತಿಯನ್ನು ಬಿಟ್ಟು, ಭಾರತದ ವಿರುದ್ಧ ನಡೆಯುತ್ತಿರುವ ಈ ಬರ್ಬರತೆಯನ್ನು ಕೊನೆಗೊಳಿಸಲು ಒಂದು ಶಕ್ತಿಶಾಲಿ ಹೆಜ್ಜೆಯಿಡಬೇಕಾಗಿದೆ. ಶೀಘ್ರಾತಿಶೀಘ್ರವಾಗಿ ಪೊಲೀಸ್ ಕಾರ್ಯಾಚರಣೆ ನಡೆಸುವುದು ಅಗತ್ಯವಾಗಿದೆ".

೧೯೫೪, ಡಿಸೆಂಬರ್ ೯ ರಿಂದ ೧೬ರವರೆಗೆ ಭಾರತೀಯ ಜನ ಸಂಘವು 'ಗೋವಾ-ಮುಕ್ತಿ ಸಪ್ತಾಹವನ್ನು ಆಯೋಜಿಸಿತು ಹಾಗೂ ೧೯೫೫, ಏಪ್ರಿಲ್ ೧೪ರಂದು ಕೇಂದ್ರಕಾರ್ಯಕಾರಿಣಿ ಸಮಿತಿ ಭಾರತ ಸರ್ಕಾರದ ಕಡೆಯಿಂದ ಗೋವಾ-ಮುಕ್ತಿಗಾಗಿ ಪೋಲಿಸ್ ಕಾರ್ಯಚರಣೆಯ ಬೇಡಿಕೆಯನ್ನು ಮುಂದೊಡ್ಡುತ್ತ 'ಗೋವಾ ಮುಕ್ತಿ ಸಮಿತಿ'ಯನ್ನು ನಿರ್ಮಿಸಿತು. ಗೋವಾವನ್ನು ಪೋರ್ಚುಗೀಸರ ಶಾಸನದಿಂದ ಮುಕ್ತಗೊಳಿಸುವ ಸಲುವಾಗಿ ಜನಸಂಘವು ದೇಶದೆಲ್ಲೆಡೆ ಜನ ಜಾಗರಣ ಅಭಿಯಾನವನ್ನು ಆರಂಭಿಸಿತು. ೧೯೫೫ರ, ಜೂನ್ ೨೧ರಂದು ಬಲಿದಾನ-ದಿನಾಚರಣೆಯ ಹಿನ್ನೆಲೆಯಲ್ಲಿ ಡಾ. ಶ್ಯಾಮಾಪ್ರಸಾದ್ ಮುಖರ್ಜಿಯವರು ಗೋವಾದಲ್ಲಿ ಸತ್ಯಾಗ್ರಹ ಕೈಗೊಳ್ಳುವ ನಿಶ್ಚಯಮಾಡಿದರು. ಅದಕ್ಕನುಗುಣವಾಗಿ ಭಾರತೀಯ ಜನಸಂಘದ ಸಚಿವರಾದ ಜಗನ್ನಾಥರಾವ್ ಜೋಶಿಯವರ ನೇತೃತ್ವದಲ್ಲಿ ನೂರು ಸತ್ಯಾಗ್ರಹಿಗಳು ಗೋವಾಗೆ ಬಂದರು. ಅನ್ಯ ಪಕ್ಷಗಳು, ವಿಶೇಷವಾಗಿ ಸಮಾಜವಾದಿ ಪಕ್ಷ, ಸಹ ಇದ್ದಿತು. ಉಪಾಧ್ಯಾಯರು ತಮ್ಮ 'ಪಾಂಚಜನ್ಯ'ದ ಪ್ರಸಿದ್ಧ 'ವಿಚಾರ ವೀಥೀ' ಸ್ತಂಭದಲ್ಲಿ 'ಗೋವಾ ಸತ್ಯಾಗ್ರಹ ಹಾಗೂ ಕಾಂಗ್ರೆಸ್ ಎಂಬ ಶೀರ್ಷಿಕೆಯೊಂದಿಗೆ ಒಂದು ಪ್ರಬಂಧವನ್ನು ಬರೆದರು:

"ಗೋವಾ - ಮುಕ್ತಿ' ಆಂದೋಲನವು ತೀವ್ರವಾಗಿ ಮುಂದುವರಿಯುತ್ತಿದೆ.

ಭಾರತದ ಎಲ್ಲ ಪಕ್ಷಗಳು ಸತ್ಯಾಗ್ರಹಿಗಳ ಹಿಂಡನ್ನು ಕಳುಹಿಸುತ್ತಿದ್ದಾರೆ. ...ಕಾಂಗ್ರೆಸ್ ತಾನು ಈ ಆಂದೋಲನದ ಅಂಗವಾಗುವುದಿಲ್ಲವೆಂದೂ ನಿಶ್ಚಯಿಸಿದೆ. ವ್ಯಕ್ತಿಗತವಾಗಿಯೂ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವುದಕ್ಕೆ ಕಾಂಗ್ರೆಸ್ ಅಡ್ಡಿಯುಂಟು ಮಾಡುತ್ತಿದೆ. ತಮ್ಮ ಈ ನೀತಿಯ ಸಮರ್ಥನೆಗೆ ಯಾವ ತರ್ಕಗಳನ್ನು ನೀಡಲಾಗಿದೆಯೋ ಅದಕ್ಕೆಲ್ಲಾ ಆಧಾರವೆಂದರೆ ಗೋವಾದವರನ್ನು (ಗೋವಾದಲ್ಲಿ ವಾಸಿಸುವವರನ್ನು) ಭಾರತೀಯರಲ್ಲ ಎಂದು ತಿಳಿದಿರುವುದಾಗಿದೆ. ........ಈ ಆಂದೋಲನ ಭಾರತದ್ದಾಗಿದೆ. ಆಲ್‌ಜೀರಿಯಾ ಹಾಗೂ ಟ್ಯೂನಿಶಿಯಾದ ಮುಕ್ತಿ ಆಂದೋಲನಗಳಿಗೆ ಕೇವಲ ನೈತಿಕ ಸಮರ್ಥನೆ/ಬೆಂಬಲ ನೀಡಿ ಕಾಂಗ್ರೆಸ್ ಸುಮ್ಮನಾಗಿ ಬಿಡುತ್ತಿತ್ತು. ಗೋವಾ ಮುಕ್ತಿಯ ಆಂದೋಳನವಾಗಿದೆ. ವಾಸ್ತವವಾಗಿ ಭಾರತದ ಪರಿಪೂರ್ಣ ಸ್ವಾತಂತ್ರ್ಯಕ್ಕೆ ಗೋವಾ ಮುಕ್ತಿ ಆವಶ್ಯಕವಾಗಿದೆ".

ಇದೇ ವೇಳೆ, ಬಾಂಡುಂಗ್‌ನಲ್ಲಿ ಏಷ್ಯಾ ದೇಶಗಳ ಸಮ್ಮೇಳನ ನಡೆಯಿತು. ಕಾಂಗ್ರೆಸ್ ಗೋವಾದಲ್ಲಿ ನಡೆಯುತ್ತಿರುವ ಮುಕ್ತಿ ಆಂದೋಲನವನ್ನು ಸಮರ್ಥಿಸುವಂತೆ ಬಾಂಡುಂಗ್ ರಾಷ್ಟ್ರಗಳನ್ನು ಕೋರಿತು. ಆದರೆ ಬಾಂಡುಂಗ್ ಸಮ್ಮೇಳನಕ್ಕೆ ಹೊರಡುವ ಮುನ್ನ, ದೀನ್ ದಯಾಳ್ ಉಪಾಧ್ಯಾಯರು ಬಾಂಡುಂಗ್‌ದಲ್ಲಿ ಗೋವಾ ಪ್ರಶ್ನೆಯನ್ನು ಮುಂದಿಡಬೇಕೆಂಬ ಬೇಡಿಕೆಯನ್ನು ಪಂ. ನೆಹರೂ ಅವರ ಮುಂದಿಟ್ಟರು. ಅದನ್ನು ಪಂ. ನೆಹರೂರವರು ನಿರಾಕರಿಸಿದರು. ಭಾರತದ ಪ್ರತಿನಿಧಿಗಳಾಗಿ ಜವಹರಲಾಲ್ ನೆಹರೂ ಅವರು ಅಲ್ಲಿ ಈ ಪ್ರಶ್ನೆಯನ್ನು ಮುಂದೊಡ್ಡಬಯಸಲಿಲ್ಲ ಎಂಬುದು ವಿಚಿತ್ರ ಸನ್ನಿವೇಶವೇ ಆಗಿತ್ತು. ಆದರೆ ಪಕ್ಷದ ಮಟ್ಟದಲ್ಲಿ ಪ್ರಸ್ತಾಪವನ್ನು ಅಂಗೀಕರಿಸಿ, ಬಾಂಡುಂಗ್ ಸಮ್ಮೇಳನದಲ್ಲಿ ಪಾಲ್ಗೊಂಡ ರಾಷ್ಟ್ರಗಳ ಸಮರ್ಥನೆಯನ್ನು ಕಾಂಗ್ರೆಸ್ ಪಕ್ಷ ಕೋರಿತು. ಇದರ ಬಗ್ಗೆ ದೀನ್ ದಯಾಳರು ಹೀಗೆ ಬರೆದಿದ್ದಾರೆ: "ಪ್ರಧಾನಮಂತ್ರಿಗಳ ಈ ಅವಹೇಳನೆಗಾಗಿ, ಅವರನ್ನು ಖಂಡಿಸುವಂಥ ದಿಟ್ಟತನ ಅ.ಭಾ.ಕಾಂಗ್ರೆಸ್ ಕಮಿಟಿಯಲ್ಲಿ ಇರಬೇಕಾಗಿತ್ತು."

ಗೋವಾದಲ್ಲಿ ನಡೆಯುತ್ತಿದ್ದ ಮುಕ್ತಿ ಆಂದೋಲನಗಳ ವಿಷಯದಲ್ಲಿ ಭಾರತಕ್ಕೆ ವಿರುದ್ಧವಾಗಿ ಅಮೆರಿಕಾ ಹಾಗೂ ಬ್ರಿಟನ್ ದೇಶಗಳು ಪೋರ್ಚುಗೀಸರನ್ನು ಸಮರ್ಥಿಸಿದವು; ಆದರೆ ಭಾರತದಲ್ಲಿ ಆರಂಭವಾದ ಸತ್ಯಾಗ್ರಹಗಳಿಂದಾಗಿ ಸ್ಥಿತಿ ಬದಲಾಯಿತು. ಈ ಪ್ರಸಂಗದಲ್ಲಿ ಒಡೆಮೂಡಿದ ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ಉಪಾಧ್ಯಾಯರು ಹೀಗೆ ವಿಶ್ಲೇಷಿಸಿದ್ದಾರೆ:

"........ವಿದೇಶಗಳಿಂದ ಗೋವಾದ ಸತ್ಯಾಗ್ರಹದ ಬಗ್ಗೆ ಪ್ರತಿಕ್ರಿಯೆ ಬಂದಿತ್ತು. ಗೋವಾದತ್ತ ವಿಶ್ವದ ದೃಷ್ಟಿ ಹರಿಯಿತು. ಅಮೆರಿಕಾ ಹಾಗೂ ಬ್ರಿಟನ್‌ನ ಪತ್ರಿಕೆಗಳು ಪೋರ್ಚುಗೀಸರ ಬರ್ಬರತೆ ಹಾಗೂ ಹಿಂಸೆಯನ್ನು ಮರೆಮಾಚಿ, ಭಾರತದ ಮೇಲೆ ದೋಷಾರೋಪಣೆ ಮಾಡಲು ಪ್ರಯತ್ನಿಸಿದುವು".



"........ ಕೆಲವು ಜನರ ಪ್ರಕಾರ ಬ್ರಿಟಿಷ್ ಮಂತ್ರಿಮಂಡಲ ಗೋವಾ ಪ್ರಶ್ನೆಯನ್ನು ಇನ್ನಷ್ಟು ವಿಳಂಬಗೊಳಿಸಲು ಬಯಸುತ್ತಿರಲಿಲ್ಲ. ಪೂರ್ಣ ಭಾವನೆ ಬಲಗೊಳ್ಳುತ್ತಲಿದೆ. ರಷ್ಯಾವನ್ನು ಬಿಟ್ಟು ಮತ್ತಾರಿಗೂ ಇದರಿಂದ ಲಾಭ ಆಗುವುದಿಲ್ಲ ಎಂಬುದಾಗಿ ಅದರ ಕೆಲವು ಸದಸ್ಯರು ಈ ಸಂಗತಿಯಿಂದ ಭಯಭೀತರಾಗಿದ್ದರು. ಜೊತೆಗೆ ಗೋವಾದಲ್ಲಿ ಆಂದೋಲನ ಪ್ರಬಲವಾದಲ್ಲಿ ಸೈಪ್ರಸ್, ಮಾಲ್ಟಾ ಹಾಗೂ ಜಿಬ್ರಾಲ್ಟರ್‌ನಲ್ಲಿಯೂ ಪ್ರತಿಕ್ರಿಯೆ ಉಂಟಾಗುತ್ತದೆ. ಅಲ್ಲಿಂದ ಬ್ರಿಟನ್ ಓಡಿ ಹೋಗಬೇಕಾಗಬಹುದು".

ಈ ರೀತಿ ಗೋವಾದಲ್ಲಿ ಪೊಲೀಸ್ ಕಾರ್ಯಾಚರಣೆಗಾಗಿ ಸರ್ಕಾರವನ್ನು ಒತ್ತಾಯಪಡಿಸುವ ಸಲುವಾಗಿ ಹಾಗೂ ಭಾರತದ ಸ್ವಾತಂತ್ರ್ಯವನ್ನು ಪೂರ್ಣಗೊಳಿಸುವುದಕ್ಕಾಗಿ ಭಾರತೀಯ ಜನಸಂಘ ಹಾಗೂ ದೀನ್ ದಯಾಳ್ ಉಪಾಧ್ಯಾಯರು ಸತ್ಯಾಗ್ರಹ ನಡೆಸುವ ಮೂಲಕ ಸಕ್ರಿಯರಾಗಿದ್ದರು ಹಾಗೂ ಭಾರತ ಭೂಮಿಯಿಂದ ಈ ವಸಾಹತುವಾದದ ಚಿಹ್ನೆಗಳು ಕೊನೆಗೊಳ್ಳುವುದಕ್ಕೆ ಸಾಧ್ಯವಾಯಿತು.

## ಬೇರೂಬಾಡಿ ಹಸ್ತಾಂತರಣದ ವಿರುದ್ಧ ಜನಾಂದೋಳನ

ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ತ್ರಿಪುರಾಕ್ಕೆ ಸೇರಿದಂತೆ ಇರುವ ಭಾರತದ ಗಡಿಯನ್ನು ಗುರುತಿಸುವ ವಿಷಯಕ್ಕೆ ಸಂಬಂಧಿಸಿದಂತೆ ಭಾರತದ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರೂ ಹಾಗೂ ಪಾಕೀಸ್ತಾನದ ಪ್ರಧಾನ ಮಂತ್ರಿ ಸರ್ ಫಿರೋಜ್‌ಖಾನ್ ನೂನ್‌ರ ನಡುವೆ ಒಂದು ಒಪ್ಪಂದವಾಯಿತು. ಅದರ ಪ್ರಕಾರ ಜಲಪಾಈಗುಡಿ ಜಿಲ್ಲೆಯ ಬೇರೂಬಾಡಿಯ ಕೇಂದ್ರಾಡಳಿತ ಪ್ರದೇಶವನ್ನು ಪಾಕೀಸ್ತಾನಕ್ಕೆ ಒಪ್ಪಿಸಲು ಭಾರತವು ಒಪ್ಪಿಗೆ ನೀಡಿತು. ಈ ಪ್ರಶ್ನೆಯ ಹಿನ್ನೆಲೆಯಲ್ಲಿ ಜನಸಂಘದ ಈ ವಾಖ್ಯಾನ ಉಲ್ಲೇಖನೀಯವಾಗಿದೆ:

"೧೯೫೮ರಲ್ಲಿ ಪಾಕೀಸ್ತಾನವು ಹಲವಾರು ತಿಂಗಳುಗಳವರೆಗೆ ಅಸ್ಸಾಂನ ಕೂಚ್‌ಬಿಹಾರ ಜಿಲ್ಲೆಯಲ್ಲಿ ಹಾಗೂ ತ್ರಿಪುರಾದ ಗಡಿಪ್ರದೇಶದಲ್ಲಿ ನಿರಂತರವಾಗಿ ಗುಂಡಿನ ಸುರಿಮಳೆ ಮಾಡುತ್ತಲೇ ಇದ್ದಿತು ಹಾಗೂ ಅದು ಅಸ್ಸಾಂನ ತುಕೇರ ಗ್ರಾಮ ಹಾಗೂ ತ್ರಿಪುರಾದ ಲಖೀಮ್‌ಪುರ ಗ್ರಾಮಗಳನ್ನು ವಶಪಡಿಸಿಕೊಂಡುಬಿಟ್ಟಿತು..... ಈ ಕುರಿತು ಕರಾಚಿಯಲ್ಲಿ ಸಚಿವರ ಮಟ್ಟದಲ್ಲಿ ಸಮ್ಮೇಳನ ಒಂದನ್ನು ಆಯೋಜಿಸಲಾಯಿತು. ಆದರೆ ಅದು ಯಶಸ್ವಿಯಾಗಲಿಲ್ಲ. ಆನಂತರ ಭಾರತ ಹಾಗೂ ಪಾಕೀಸ್ತಾನದಲ್ಲಿ ಪ್ರಧಾನ ಮಂತ್ರಿಗಳ ನಡುವೆ ಚರ್ಚೆ ನಡೆಯಿತು. ಅದರ ಪರಿಣಾಮವಾಗಿ ೧೦, ಸೆಪ್ಟಂಬರ್ ೧೯೫೮ರಂದು ನೆಹರೂ–ನೂನ್ ಒಪ್ಪಂದ ಜನ್ಮತಾಳಿತು. .......... (ಒಪ್ಪಂದದಲ್ಲಿ) ತುಕೇರಾ ಗ್ರಾಮ ಹಾಗೂ

ಲಖೀಂಪುರಗಳನ್ನು ಎಲ್ಲಿಯೂ ಉಲ್ಲೇಖಿಸಲಾಗಲಿಲ್ಲ. ಅವುಗಳನ್ನು ಅಕ್ರಮವಾಗಿ ಪಾಕೀಸ್ತಾನದ ವಶದಲ್ಲಿಯೇ ಇರಲು ಬಿಡಲಾಯಿತು. ಇದು ತುಂಬಾ ತಪ್ಪು ಸಂಗತಿಯಾಗಿದ್ದಿತು; ಆದರೆ ಪ್ರಧಾನ ಮಂತ್ರಿಗಳು ಇದಕ್ಕಿಂತಲೂ ಭಾರಿ ತಪ್ಪಿನ ಕೆಲಸವೊಂದನ್ನು ಮಾಡಿದರು. ಯಾವ ವಿಷಯವನ್ನು ಕುರಿತು ವಿಭಜನೆಯ ಅನಂತರ ಇಲ್ಲಿಯ ತನಕ ಯಾವುದೇ ವಿವಾದವುಂಟಾಗಿರಲಿಲ್ಲವೋ ಅಂತಹ ಪ್ರಶ್ನೆಯನ್ನು ಹೊಸದಾಗಿ ತಲೆಯೆತ್ತಲು ಅವರು ಪಾಕೀಸ್ತಾನಕ್ಕೆ ಅನುಮತಿಯನ್ನು ನೀಡಿದರು. ಅದಕ್ಕನುಗುಣವಾಗಿ ಪಶ್ಚಿಮ ಬಂಗಾಳದ ಇಪ್ಪತ್ತನಾಲ್ಕು ಪರಗಣ ಜಿಲ್ಲೆಯ ಇಚ್ಛಾಮತಿ ನದಿಯ ದಡದಲ್ಲಿರುವ ಜಲಪಾಯಿ ಈಗುಡಿ ಕ್ಷೇತ್ರದ ಬೇರೂಬಾಡಿ ಕೇಂದ್ರಾಡಳಿತ ಪ್ರದೇಶ ಹಾಗೂ ಕೂಚ್‌ಬಿಹಾರ್‌ನ ದ್ವೀಪಗಳನ್ನು ವಿನಿಮಯ ಮಾಡಿಕೊಳ್ಳುವ ಬಗ್ಗೆ ನಿಶ್ಚಯಿಸಲಾಯಿತು. ಇದರ ಪರಿಣಾಮವಾಗಿ ಭಾರತದ ವಿಸ್ತೀರ್ಣ ಕಡಿಮೆಯಾಯಿತು. .......ನೆಹರೂ –ನೂನ್ ಒಪ್ಪಂದದ ಈ ಎಲ್ಲ ವಿವರಗಳನ್ನು ಸರ್ಕಾರವು ಭಾರತೀಯ ಜನತೆಗೆ ತಿಳಿಯದಂತೆ ಮುಚ್ಚಿಟ್ಟಿತು ಹಾಗೂ ಪಾಕೀಸ್ತಾನದ ರಾಷ್ಟ್ರೀಯ ಸಭೆಯಲ್ಲಿ ಇದನ್ನು ಘೋಷಿಸಿದಾಗ ಮಾತ್ರವೇ ಇದರ ಅರಿವುಂಟಾಯಿತು". ಪ.ಬಂಗಾಳದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆಯೇ ಈ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಜನಾಭಿಪ್ರಾಯದ ಒತ್ತಡದಿಂದಾಗಿ ರಾಷ್ಟ್ರಪತಿಗಳು ಬೇರೂಬಾಡಿಯ ಹಸ್ತಾಂತರಣ ಪ್ರಶ್ನೆಯನ್ನು ಸರ್ವೋಚ್ಚ ನ್ಯಾಯಾಲಯದ ಒಪ್ಪಿಗೆ ತಿಳಿಯಲು ಅದರ ಮುಂದೆ ಇರಿಸಿದರು. ಇಡೀ ವಿಷಯದ ಬಗ್ಗೆ ವಿಚಾರ ಮಾಡಿ ಸರ್ವೋಚ್ಚ ನ್ಯಾಯಾಲಯವು ಸರ್ವಸಮ್ಮತ ನಿರ್ಣಯವನ್ನು ನೀಡಿತು: "ಇಂದಿನ ಸ್ಥಿತಿಯಲ್ಲಿ ಭಾರತದ ಯಾವುದೇ ಭೂ–ಭಾಗವನ್ನು ಪರದೇಶಗಳಿಗೆ ಒಪ್ಪಿಸುವುದು ಸಂವಿಧಾನಾತ್ಮಕವಾದುದಲ್ಲ." ಆಗ ಸರ್ಕಾರ ಸಂವಿಧಾನದ ಒಂಬತ್ತನೆಯ ತಿದ್ದುಪಡಿ ವಿಧೇಯಕವನ್ನು ಮಂಡಿಸಿತು. ಲೋಕಸಭೆಯ ಮುಂದೆ ದೀನ್ ದಯಾಳ್ ಉಪಾಧ್ಯಾಯರ ನೇತೃತ್ವದಲ್ಲಿ ಬೃಹತ್ ಪ್ರದರ್ಶನವನ್ನು ಏರ್ಪಡಿಸುವುದಾಗಿ ಜನಸಂಘ ಘೋಷಿಸಿತು. ಆದರೆ ಸರ್ಕಾರವು ತನ್ನ ಬಹುಮತದ ಆಧಾರದ ಮೇಲೆ ಈ ವಿಧೇಯಕವನ್ನು ಅಂಗೀಕರಿಸಿಬಿಟ್ಟಿತು. ಸ್ವಲ್ಪ ಕಾಲದ ಅನಂತರ, "ಚೀಣಾ ದೇಶ ಆಕ್ರಮಣ ಮಾಡಿತು ಹಾಗೂ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಯಿತು. ಭಾರತಕ್ಕೆ ಅಪಮಾನ ಮಾಡುವ ಉದ್ದೇಶದಿಂದಲೇ ಪಾಕೀಸ್ತಾನ ಚೀಣಾದೊಂದಿಗೆ ಒಪ್ಪಂದವನ್ನು ಏರ್ಪಡಿಸಿಕೊಂಡಿತು. ಈ ಹೊಸ ಪರಿಸ್ಥಿತಿಯಲ್ಲಿ ಬೇರೊಬಾಡಿಯನ್ನು ಕೊಡುವ ಪ್ರಸ್ತಾಪವನ್ನು ಕೊನೆಗೊಳಿಸಲಾಗುವುದು ಎಂದು ಎಲ್ಲಾ ಜನರು ಭಾವಿಸಿದರು. ಆದರೆ ಆಶ್ಚರ್ಯದ ಸಂಗತಿಯೆಂದರೆ ಹಸ್ತಾಂತರಣದ ಕಾರ್ಯಾಚರಣೆಯನ್ನು ಪುನಃ ಪ್ರಾರಂಭಿಸಲಾಯಿತು ಹಾಗೂ ಲಾಠಿ ಚಾರ್ಜ್ ಮಾಡುವುದರ ಮೂಲಕ ಹಾಗೂ



ದೊಡ್ಡ ಪ್ರಮಾಣದಲ್ಲಿ ಪ್ರತಿಭಟನಾಕಾರರನ್ನು ಬಂಧಿಸುವುದರ ಮೂಲಕ ಅಲ್ಲಿಯ ಜನವಿರೋಧವನ್ನು ನಿಗ್ರಹಿಸಲಾಗುತ್ತಿದೆ."

ಸರ್ಕಾರದ ಈ ವರ್ತನೆಯಿಂದ ದೀನ್ ದಯಾಳ್ ಉಪಾಧ್ಯಾಯರು ಬಹಳ ಕ್ಷುಬ್ಧರಾದರು ಹಾಗೂ ಅವರು ನೆಹರೂ ಅವರ ಬಗ್ಗೆ ಟೀಕೆ ಮಾಡುತ್ತಾ ಹೀಗೆಂದು ಹೇಳಿದರು; "ಪಂ. ನೆಹರೂ ಅವರು ಎಷ್ಟೇ ದಬ್ಬಾಳಿಕೆಯ ಆಡಳಿತಗಾರರಾಗಿರಬಹುದಾದರೂ, ನಿರಂಕುಶ ಪ್ರಭುಗಳಾಗುವಷ್ಟರ ಮಟ್ಟಿಗೆ ನಿರ್ದಯಿಗಳೂ ಹಾಗೂ ಕ್ರೂರರೂ ಆಗಬಲ್ಲರೆಂದು ಭಾವಿಸಲಾರೆವು. ಇದಕ್ಕೆ ವಿರುದ್ಧವಾಗಿ ಅವರಲ್ಲಿ ಅನೇಕ ಗುಣಗಳಿವೆ. ಈ ಗುಣಗಳೇ ಅವರನ್ನು ಅತ್ಯಾಚಾರಿಯಾಗದಂತೆ ತಡೆದಿವೆ. ....ಇಂದು ಪರಿಸ್ಥಿತಿ ಹೇಗೆ ಆಗಿಹೋಗಿದೆಯೆಂದರೆ ಪಂ. ನೆಹರೂ ಅವರನ್ನು ಭಾರತದ ಭಾಗ್ಯ ನಿರ್ಮಾತರೆಂದು ಜನರು ಭಾವಿಸತೊಡಗಿದ್ದಾರೆ. ಈ ಸ್ಥಿತಿ ಪ್ರಜಾಪ್ರಭುತ್ವ ಪ್ರೇಮಿಗಳಿಗೆ, ಅಷ್ಟೇ ಅಲ್ಲ, ಪಂ. ನೆಹರೂರವರಿಗೂ ಅಹಿತಕರವಾಗಿದೆ."

ನೆಹರೂರವರನ್ನು ಕುರಿತಾದ ಉಪಾಧ್ಯಾಯರ ಟೀಕೆಯಲ್ಲಿ ಒಂದೆಡೆ ಕ್ಷೋಭೆಯಿರುವಂತೆಯೇ ಮತ್ತೊಂದೆಡೆ ಸೌಮ್ಯತೆಯೂ ಇದೆ. ಬೇರೂಬಾಡಿ ಕೇಂದ್ರಾಡಳಿತ ಪ್ರದೇಶವನ್ನು ಕಾಪಾಡಲಾಗಲಿಲ್ಲ. ಆದರೆ ದೀನ್ ದಯಾಳ್ ಉಪಾಧ್ಯಾಯರು ಹಾಗೂ ಭಾರತೀಯ ಜನಸಂಘ ರಾಷ್ಟ್ರೀಯ ಅಖಂಡತೆಯನ್ನು ಕಾಯ್ದುಕೊಳ್ಳುವ ತಮ್ಮ ಕರ್ತವ್ಯಕ್ಕೆ ಅನುಗುಣವಾಗಿ ವರ್ತಿಸುತ್ತಾ ಅದನ್ನು ರಾಷ್ಟ್ರೀಯ ಚರ್ಚೆಯ ವಿಷಯವನ್ನಾಗಿಸಿತು. ಇದರ ಪರಿಣಾಮವಾಗಿ ಸಂವಿಧಾನಕ್ಕೆ ತಿದ್ದುಪಡಿ ಮಾಡಬೇಕಾದಂಥ ಪರಿಸ್ಥಿತಿ ಎದುರಾಯಿತು ಹಾಗೂ ಭರತಭೂಮಿಯ ಈ ಹಸ್ತಾಂತರಣದ ವಿರುದ್ಧವಾಗಿ ಇಡೀ ದೇಶದಲ್ಲಿ ಜನಾಭಿಪ್ರಾಯವನ್ನು ಸಂಘಟಿತಗೊಳಿಸಲು ಸಾಧ್ಯವಾಯಿತು.

**ಕಚ್ಛ್– ಒಪ್ಪಂದ ವಿರೋಧಿ ಬೃಹತ್ ಪ್ರದರ್ಶನ**

ಕಚ್ಛ್ ಒಪ್ಪಂದದಿಂದ ಹಿಡಿದು ತಾಶಕಂದ್ ಘೋಷಣೆಯ (೧೯೬೫–೬೬) ವರೆಗಿನ ಘಟನೆಗಳು ಜವಾಹರಲಾಲ್ ನೆಹರೂ ಹಾಗೂ ಲಾಲ್‌ಬಹದೂರ್ ಶಾಸ್ತ್ರೀ ಅವರು ನಾಡಿನ ರಕ್ಷಣೆಯ ಬಗ್ಗೆ ಅನುಸರಿಸಿದ ನೀತಿಗಳಲ್ಲಿನ ವ್ಯತ್ಯಾಸವನ್ನು ಎತ್ತಿ ತೋರಿಸುತ್ತದೆ. ಪಾಕೀಸ್ತಾನ ನಡೆಸಿದ ಸೈನಿಕ ಆಕ್ರಮಣಕ್ಕೆ ಭಾರತ ಸೈನಿಕ ಪ್ರತ್ಯಾಕ್ರಮಣದ ಮೂಲಕ ಮೊಟ್ಟ ಮೊದಲ ಬಾರಿಗೆ ಪಾಕೀಸ್ತಾನಕ್ಕೆ ಜವಾಬು ನೀಡಲಾಯಿತು. ಉಪಾಧ್ಯಾಯರು ಇದರ ವಿಸ್ತೃತ ವಿವರಣೆ ನೀಡುತ್ತ ತಮ್ಮ ವರದಿಯಲ್ಲಿ ಹೀಗೆ ಹೇಳಿದ್ದಾರೆ:

"ಫೆಬ್ರವರಿ (೧೯೬೫) ರಲ್ಲಿ ಪಾಕೀಸ್ತಾನದ ಗಡಿ ಪೋಲಿಸರು ಕಚ್ಛ್‌ನ

ರಣ್ ಪ್ರದೇಶದಲ್ಲಿ ಒಳನುಸುಳಲು ಪ್ರಾರಂಭಿಸಿದರು. ೧೭ ಮಾರ್ಚ್‌ರಂದು ಪಾಕಿಸ್ತಾನದ ರೇಂಜರ್ಸ್ ಭಾರತೀಯ ಗಡಿಯಲ್ಲಿ ಸುಮಾರು ೧೩೦೦ ಗಜ ಒಳಹೊಕ್ಕು ಕಂಜರ್‌ಕೋಟ್‌ನ ಮೇಲೆ ಆಕ್ರಮಣ ಮಾಡಿ ಅದನ್ನು ವಶಪಡಿಸಿಕೊಂಡರು. ಈ ಕಾರ್ಯಾಚರಣೆ ಹೀಗೆಯೇ ಸಾಗುತ್ತಾ ಹೋಯಿತು. ದಿನಾಂಕ ೨೫ ಮಾರ್ಚ್‌ರಂದು ಅವರು ಡಿಂಗ್‌ಅನ್ನು ವಶಪಡಿಸಿಕೊಂಡರು, ಅಲ್ಲಿದ್ದ ಭಾರತೀಯ ಗಡಿ ಪೊಲೀಸ್‌ನ ಕೆಲವೇ ಕೆಲವು ಮಂದಿ ಸೈನಿಕರು ಆರು ಮೈಲಿ ಹಿಂದಿದ್ದ ವಿಂಗೋಕೋಟ್‌ನವರೆಗೂ ಹಿಂದೆ ಸರಿಯಾಗಬೇಕಾಗಿ ಬಂದಿತು..... ಕಚ್ಛ್‌ನಲ್ಲಿ ಮತ್ತಷ್ಟು ಮುನ್ನುಗ್ಗಿ ಹಾಗೂ ದಿನಾಂಕ ೯, ಏಪ್ರಿಲ್‌ರಂದು ದೊಡ್ಡ ಸೈನ್ಯ ಹಾಗೂ ತೋಪುಗಳೊಡನೆ ಪಾಕಿಸ್ತಾನ ಸರದಾನ್ ಠಾಣ್ಯದ ಮೇಲೆ ಹಾಗೂ ವಿಂಗೋಕೋಟ್ ಮೇಲೆ ದಾಳಿ ಮಾಡಿತು. ಅಲ್ಲಿಯ ತನಕ ಭಾರತ ಸರ್ಕಾರವು ಗಡಿ ರಕ್ಷಣೆಯ ಜವಾಬ್ದಾರಿಯನ್ನು ಗಡಿ ಪೊಲೀಸರ ಮೇಲೆಯೇ ಹೊರಿಸಿತ್ತು. ಇತ್ತ ದೇಶದ ಜನಾಭಿಪ್ರಾಯ ಮತ್ತಷ್ಟು ಕ್ಷುಬ್ಧವಾಗತೊಡಗಿತ್ತು. ಪರಿಣಾಮವಾಗಿ ಕಚ್ಛ್‌ನ ರಕ್ಷಣೆಯ ಜವಾಬ್ದಾರಿಯನ್ನು ಸೈನ್ಯಕ್ಕೆ ವಹಿಸಲಾಯಿತು. ಸೈನ್ಯ ಅಲ್ಲಿಗೆ ಹೋಗಿ, ಅಲ್ಲಿ ಆಕ್ರಮಿಸಿದ್ದ ಪಾಕಿಸ್ತಾನಿ ಸೈನಿಕರನ್ನು ಹಿಂದಕ್ಕೆ ಅಟ್ಟಲು ಪ್ರಾರಂಭಿಸಿತು. ಇದರ ಪರಿಣಾಮವಾಗಿ ದಿನಾಂಕ ೧೪ ಏಪ್ರಿಲ್, ೧೯೬೫ರಂದು ಪಾಕಿಸ್ತಾನ ಯುದ್ಧವಿರಾಮ ಮಾತುಕತೆಗಳ ಮೂಲಕ ವಿವಾದಗಳ ಬಗೆಹರಿಸಿಕೊಳ್ಳುವ ಪ್ರಸ್ತಾಪವನ್ನು ಮುಂದಿಟ್ಟಿತು. ಕಚ್ಛ್ ರಣ್ ಪ್ರದೇಶದ ಬಗ್ಗೆ ಯಾವುದೇ ವಿವಾದವೂ ಇಲ್ಲವೆಂದೂ, ಎಲ್ಲಿಯ ತನಕ ಪಾಕಿಸ್ತಾನ ತಾನು ಆಕ್ರಮಿಸಿಕೊಂಡಿರುವ ಕಂಜರ್‌ಕೋಟ್ ಹಾಗೂ ಭಾರತದ ಇಡೀ ಪ್ರದೇಶವನ್ನು ತೆರವುಗೊಳಿಸಿ ಹಿಂದೆ ಸರಿಯುವುದಿಲ್ಲವೋ ಅಲ್ಲಿಯತನಕ ಯುದ್ಧವಿರಾಮ ಸಾಧ್ಯವಾಗುವುದಿಲ್ಲವೆಂದೂ ಹೇಳಿ, ಭಾರತವೂ ಆ ಪ್ರಸ್ತಾಪವನ್ನು ನಿರಾಕರಿಸಿತು.

"ಏಪ್ರಿಲ್ ೨೪ರಂದು ಭಾರತದ ಗಡಿಯಲ್ಲಿದ್ದ ಪಾಯಿಂಟ್ ೮೪ರ ಠಾಣ್ಯದ ಮೇಲೆ ಪಾಕಿಸ್ತಾನ ಆಕ್ರಮಣ ನಡೆಸಿತು. ಈ ಆಕ್ರಮಣದಲ್ಲಿ ಅದು ಅಮೆರಿಕಾದ ಟ್ಯಾಂಕ್‌ಗಳನ್ನು ಸಹ ಬಳಸಿತು. ಇದು ಅಮೆರಿಕಾದೊಡನೆ ಏರ್ಪಡಿಸಿಕೊಂಡಿದ್ದ ಸೈನ್ಯ ಒಪ್ಪಂದದ ವಿರುದ್ಧವಾಗಿತ್ತು. ಭಾರತ ಈ ಸಂಗತಿಯನ್ನು ಅಮೆರಿಕಾದ ಗಮನಕ್ಕೆ ತಂದಿತಾದರೂ, ಅಮೆರಿಕಾ ಈ ಕಡೆ ಯಾವುದೇ ಗಮನ ಕೊಡಲಿಲ್ಲ. ಇದರಿಂದ ಪಾಕಿಸ್ತಾನದ ಧೈರ್ಯ ಹೆಚ್ಚಿತು ಹಾಗೂ ಅದು ಮುಂದೆ ಯುದ್ಧದಲ್ಲಿ ಅಮೆರಿಕಾದ ಶಸ್ತ್ರಾಸ್ತ್ರಗಳನ್ನು ಮುಕ್ತ ರೀತಿಯಲ್ಲಿ ಬಳಸಿತು.

"ಭಾರತೀಯ ಸೈನ್ಯ ಯಾವಾಗ ಶತ್ರುಗಳನ್ನು ಎದುರಿಸಲು ಹಾಗೂ ಪ್ರತ್ಯಾಕ್ರಮಣಕ್ಕಾಗಿ ಸಿದ್ಧತೆ ನಡೆಸಲಾರಂಭಿಸಿತೋ, ಆಗ ಬ್ರಿಟನ್‌ನ ಪ್ರಧಾನ ಮಂತ್ರಿ ಶ್ರೀ ವಿಲ್ಸನ್ ಅವರ ಮನವಿಯ ಮೇರೆಗೆ ಮೊದಲ ಹಂತವಾಗಿ ಕಾರ್ಯಚರಣೆಯ



ಯುದ್ಧವಿರಾಮವನ್ನು ಸ್ವೀಕರಿಸಲಾಯಿತು ಹಾಗೂ ಅದಾದ ಆನಂತರ ವಿಶ್ವಸಂಸ್ಥೆಯು ಏರ್ಪಡಿಸಿದ್ದ ಪ್ರಧಾನ ಮಂತ್ರಿಗಳ ಸಮ್ಮೇಳನದಲ್ಲಿ ಪಾಕಿಸ್ತಾನದೊಡನೆ ನಡೆಸಿದ ಅನೌಪಚಾರಿಕ ಮಾತುಕತೆಗಳ ಪರಿಣಾಮವಾಗಿ ಕಚ್ಛ್‌ನ ರಣ್‌ಪ್ರದೇಶದ ವಿವಾದವನ್ನು ನ್ಯಾಯಾಧಿಕರಣದ ತೀರ್ಮಾನಕ್ಕೆ ಒಪ್ಪಿಸುವ ಬಗ್ಗೆ ತೀರ್ಮಾನವನ್ನು ಕೈಗೊಳ್ಳಲಾಯಿತು". ಇದೇ ಭಾರತ ಹಾಗೂ ಪಾಕಿಸ್ತಾನದ ನಡುವೆ ಆದ ಕಚ್ಛ್ ಒಪ್ಪಂದ. ಪಾಕಿಸ್ತಾನ ಆಕ್ರಮಿಸಿಕೊಂಡಿದ್ದ ಭೂಮಿಯನ್ನು ತೆರವುಗೊಳಿಸುವುದಕ್ಕೆ ಮುನ್ನ ಯುದ್ಧ ವಿರಾಮಕ್ಕೆ ಒಪ್ಪಿಗೆ ನೀಡದಿದ್ದ ಶಾಸ್ತ್ರಿಗಳ ನಿಲುವು ಸ್ವತಂತ್ರ ಭಾರತದ ರಕ್ಷಣೆಯ ಇತಿಹಾಸದಲ್ಲಿನ ಪ್ರಥಮ ಅಭಿನಂದನೀಯ ಘಟನೆಯೆಂದು ಉಪಾಧ್ಯಾಯರು ಭಾವಿಸಿದ್ದರಾದರೂ, 'ಕಚ್ಛ್– ಒಪ್ಪಂದ'ದ ಈ ಕೆಳಕಂಡ ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುತ್ತ, ಅದನ್ನು ವಿರೋಧಿಸಿದ್ದಾರೆ:

೧. ಪಾಕಿಸ್ತಾನಕ್ಕೆ ಭಾರತದ ಪ್ರದೇಶದಲ್ಲಿ ಗಸ್ತು ಹಾಕುವ ಅಧಿಕಾರವನ್ನು ನೀಡಿ ಹಾಗೂ ಕಚ್ಛ್‌ನಲ್ಲಿ ತನ್ನ ಸೈನ್ಯವನ್ನು ಇರಿಸುವ ಅಧಿಕಾರವನ್ನು ತ್ಯಜಿಸಿ ಭಾರತದ ಪರಮ ಪ್ರಭುತ್ವವನ್ನು ಉಲ್ಲಂಘಿಸಲಾಗಿದೆ.

೨. ಈ ಒಪ್ಪಂದ ಕಚ್ಛ್‌ನ ರಣ್‌ಪ್ರದೇಶ ಒಂದು 'ವಿವಾದಾತ್ಮಕ ಪ್ರದೇಶ' ಎಂಬ ಪಾಕಿಸ್ತಾನದ ವಾದವನ್ನು ಒಪ್ಪುತ್ತದೆ. ಭಾರತ ಸರ್ಕಾರ ಇಲ್ಲಿಯವರೆಗೂ ಈ ಹೇಳಿಕೆಯನ್ನು ನಿರಾಕರಿಸುತ್ತ ಬಂದಿದೆ.

೩. ಕಚ್ಛ್‌ನ ಪ್ರಶ್ನೆಯನ್ನು ಒಂದು ಅಂತರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಒಪ್ಪಿಸುವ ವಿಚಾರಕ್ಕೆ ಒಪ್ಪಿಗೆಯನ್ನು ನೀಡುವ ಮೂಲಕ ಶಾಸ್ತ್ರಿಗಳ ಸರ್ಕಾರ ಆತ್ಮಹತ್ಯೆಯ ಪರಂಪರೆಗೆ ನಾಂದಿಯನ್ನು ಹಾಡಿದೆ. ಇದು ಭಾರತದ ಆಂತರಿಕ ವಿಷಯಗಳಲ್ಲಿ ಕೀಟಲೆ ಮಾಡಲು ವಿದೇಶೀಯರಿಗೆ ಒಂದು ಅಪಾಯಕಾರಿ ಅವಕಾಶವನ್ನು ಒದಗಿಸುತ್ತದೆ. ಇದು ಈ ಒಪ್ಪಂದದ ಅತ್ಯಂತ ಕೆಟ್ಟ ಅಂಶವಾಗಿದೆ.

ಈ ಒಪ್ಪಂದದ ವಿರುದ್ಧವಾಗಿ ಹಾಗೂ ಕಚ್ಛ್‌ನ ರಣ್‌ನಲ್ಲಿ ಸೈನಿಕ ವಿಜಯದ ಪರವಾಗಿ ಭಾರತೀಯ ಜನಸಂಘ ಅಭೂತಪೂರ್ವ ಜನಜಾಗೃತಿಯನ್ನು ಮೂಡಿಸಿತು. ೧೬, ಆಗಸ್ಟ್, ೧೯೬೫ರಂದು ಬಚ್ಛ್‌ರಾಜ್ ವ್ಯಾಸ್ ಹಾಗೂ ದೀನ್ ದಯಾಳರ ನೇತೃತ್ವದಲ್ಲಿ ಇತಿಹಾಸದಲ್ಲಿಯೇ ಅತ್ಯಂತ ಬೃಹತ್ತಾದ ರಾಷ್ಟ್ರೀಯ ಪ್ರದರ್ಶನವನ್ನು ನಡೆಸಲಾಯಿತು. ಭಾರತದ ಪತ್ರಿಕೆಗಳು ಮಾತ್ರವಲ್ಲದೇ, ಇಡೀ ವಿಶ್ವದ ಪತ್ರಿಕಾ ವರ್ಗವೇ ಈ ಪ್ರದರ್ಶನ ಬೀರಿದ ಪ್ರಭಾವದ ಬಗ್ಗೆ, ತೋರಿದ ಶಿಸ್ತು, ಮೆರೆದ ಹೃದಯ ವೈಶಾಲ್ಯ ಹಾಗೂ ರಾಷ್ಟ್ರವಾದೀ ಉತ್ಸಾಹದ ಬಗ್ಗೆ ಮಾನ್ಯತೆ ನೀಡಿತ್ತು. ಪ್ರದರ್ಶನಕಾರರ ಒಟ್ಟು ಸಂಖ್ಯೆಯನ್ನು ಸುಮಾರು ಐದು ಲಕ್ಷದಷ್ಟಿತ್ತು ಎಂದು ಬಿ.ಬಿ.ಸಿ. ಹೇಳಿತು. ಭಾರತದಲ್ಲಿ ವಿರೋಧ ಪಕ್ಷದ ಅನೇಕ ನಾಯಕರು ಈ ವಿಶಾಲ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು. ಈ ಪ್ರದರ್ಶನದ

ಪರಿಣಾಮವೆಂದರೆ ಪ್ರಧಾನ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಗಳು ಭಾರತ–ಪಾಕ್ ವಿದೇಶಾಂಗ ಸಚಿವರುಗಳ ೨೦ ಆಗಸ್ಟ್, ೧೯೬೫ರ ಪೂರ್ವನಿಶ್ಚಿತ ಸಭೆಯನ್ನು ರದ್ದುಗೊಳಿಸಿದರು. ಜನಸಂಘವು ತನ್ನ ಪ್ರಸ್ತಾವನೆಯಲ್ಲಿ ಹೀಗೆಂದು ಹೇಳಿತು. "ಜನರು ಇದೇ ರೀತಿ ಕ್ರಿಯಾಶೀಲರಾದಲ್ಲಿ ಹಾಗೂ ಜಾಗರೂಕವಾಗಿದ್ದಲ್ಲಿ, ಕಚ್ಛ್ ಒಪ್ಪಂದ ಖಾಲಿ ಕಾಗದ ಮಾತ್ರವೇ ಆಗಿ ಉಳಿದುಹೋಗುತ್ತದೆ."

**ಭಾರತ–ಪಾಕ್‌ಯುದ್ಧ ೧೯೬೫ ಹಾಗೂ ತಾಶ್‌ಕಂದ್ ಘೋಷಣೆ**

ಪಾಕೀಸ್ತಾನಕ್ಕೆ ಇದೊಂದು ಹೊಸ ಅನುಭವವಾಗಿದ್ದಿತು. ಇಲ್ಲಿಯ ತನಕ ಅದು ಒಪ್ಪಂದಗಳು ಹಾಗೂ ಅಂತರಾಷ್ಟ್ರೀಯ ಒತ್ತಡಗಳ ಸಹಾಯದಿಂದ ಸದಾ ಲಾಭ ಪಡೆಯುತ್ತಿತ್ತು. ಆಗಸ್ಟ್ ೨೦ರ ಸಭೆ ರದ್ದಾದುದರಿಂದ, ಕಚ್ಛ್ ಒಪ್ಪಂದ ವ್ಯಾವಹಾರಿಕ ಅರ್ಥದಲ್ಲಿ ವ್ಯರ್ಥವೇ ಆಗಿ ಪರಿಣಮಿಸಿತ್ತು. ಪಾಕೀಸ್ತಾನ ಕಾಶ್ಮೀರಕ್ಕೆ ಅತಿ ದೊಡ್ಡ ಪ್ರಮಾಣದಲ್ಲಿ ಆಕ್ರಮಣಕಾರಿಗಳನ್ನು ಒಳನುಗ್ಗಿಸಿ, ಆಂತರಿಕ ಕ್ಷೋಭೆಯನ್ನುಂಟುಮಾಡಲು ಪ್ರಯತ್ನಿಸಿತು. ಆದರೆ ಭಾರತೀಯ ಸೈನ್ಯವು ಅದನ್ನು ವಿಫಲಗೊಳಿಸಿ ಆಕ್ರಮಣಕಾರರು ಭಾರತದ ಪ್ರದೇಶಕ್ಕೆ ಒಳನುಸುಳುತ್ತಿದ್ದ ಪಾಕೀಸ್ತಾನದ ಅಧೀನದಲ್ಲಿದ್ದ, ಕಾಶ್ಮೀರದ ಆ ಭಾಗಗಳನ್ನು ವಶಪಡಿಸಿಕೊಂಡಿತು. ೨೫ ಅಗಸ್ಟ್‌ರಂದು ಭಾರತೀಯ ಸೈನ್ಯ, ಆಕ್ರಮಣಕಾರರು ಒಳನುಸುಳುತ್ತಿದ್ದ ಎಲ್ಲ ಮಾರ್ಗಗಳನ್ನು ಮುಚ್ಚಿಬಿಟ್ಟರು. ಅದು ಯುದ್ಧ ವಿರಾಮದ ರೇಖೆಯನ್ನು ದಾಟಿ ಕಾರ್ಗಿಲ್ ಶಿಖರವನ್ನು ಹಾಗೂ ಹಾಜೀಪೀರ್ ಕಣಿವೆಯನ್ನು ತನ್ನ ವಶಕ್ಕೆ ತೆಗೆದುಕೊಂಡಿತು.

ಸೆಪ್ಟೆಂಬರ್ ೧, ೧೯೬೫ ರಂದು ಟ್ಯಾಂಕ್, ತೋಪುಗಳು ಹಾಗೂ ಅತಿ ದೊಡ್ಡ ಸೈನ್ಯದೊಡನೆ ಪಾಕೀಸ್ತಾನವು ಛಂಬ್ ಗಡಿಯ ಮೇಲೆ ಆಕ್ರಮಣ ಮಾಡಿತು. ಪಾಕಿಸ್ತಾನವು ಅತಿ ದೊಡ್ಡ ಕದನಕ್ಕೆ ಸಜ್ಜಾಗುತ್ತಿತ್ತು ಎಂಬುದು ಇದರಿಂದ ಸ್ಪಷ್ಟವಾಯಿತು. ಸೆಪ್ಟಬರ್ ೬ ರಂದು ಭಾರತೀಯ ಸೈನ್ಯ ಲಾಹೌರ್ ಹಾಗೂ ಸ್ಯಾಲ್‌ಕೋಟ್‌ನ ಕಡೆ ಮುನ್ನುಗ್ಗಿತು. ಈ ಎಲ್ಲಾ ಘಟನೆಗಳ 'ಪ್ರತ್ಯಕ್ಷದರ್ಶಿ' ಸದೃಶವಾದ ವರ್ಣನೆ ಮಾಡುತ್ತ ಉಪಾಧ್ಯಾಯರು, ತಮ್ಮ ವರದಿಯಲ್ಲಿ ಹೀಗೆ ಹೇಳಿದ್ದಾರೆ: "ಜನಸಂಘ ಯಾವ ರಣನೀತಿಯ ಬಗ್ಗೆ ಬೇಡಿಕೆಯನ್ನು ಸಲ್ಲಿಸುತ್ತಿತ್ತೋ, ಅದು ಆ ದಿನ ಆರಂಭಗೊಂಡಿತು."

ಸೆಪ್ಟೆಂಬರ್ ೬ ರಂದು ಲಾಲ್‌ಬಹಾದ್ದೂರ್ ಶಾಸ್ತ್ರಿಅವರು ಸರ್ವಪಕ್ಷಗಳ ಸಭೆಯೊಂದನ್ನು ಕರೆದರು ಅದಕ್ಕೆ ದೀನ್ ದಯಾಳ್ ಉಪಾಧ್ಯಾಯರನ್ನೂ ಸರಸಂಘ ಸಂಚಾಲಕರಾಗಿದ್ದ ಮಾ.ಸ. ಗೋಳ್‌ವಳ್ಕರ್ ಅವರನ್ನೂ ಆಹ್ವಾನಿಸಲಾಗಿತ್ತು. ಜನಸಂಘ ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಯುದ್ಧ ಪ್ರಯತ್ನಗಳೊಡನೆ ತಮ್ಮನ್ನು ತಾವು ಒಂದಾಗಿಸಿಕೊಂಡುಬಿಟ್ಟಿದ್ದುವು. ಅವರು ಸರ್ಕಾರಕ್ಕೆ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ದೀನ್ ದಯಾಳ್ ಉಪಾಧ್ಯಾಯರು



ಯುದ್ಧದ ಆ ದಿನಗಳನ್ನು ಹೀಗೆ ವರ್ಣಿಸಿದ್ದಾರೆ:

"೨೨ ದಿನಗಳವರೆಗೆ ಪಾಕೀಸ್ತಾನದೊಡನೆ ನಡೆದ ಆ ಯುದ್ಧ ಸ್ವಾತಂತ್ರ್ಯೋತ್ತರ ಭಾರತ ಇತಿಹಾಸದಲ್ಲಿನ ಒಂದು ಗೌರವಪೂರ್ಣ ಅಧ್ಯಾಯವಾಗಿದೆ. ಭಾರತೀಯರ ಆತ್ಮಗೌರವ ಒಂದು ಸಾಹಸಪೂರ್ಣ ಹೆಜ್ಜೆಯಿಡುವ ನಿರ್ಣಯ ತೆಗೆದುಕೊಂಡಿತು. ಸೈನ್ಯ ಹಾಗೂ ಜನತೆ, ಎಲ್ಲರೂ ಅತ್ಯಂತ ಉತ್ಸಾಹ, ಶ್ರದ್ಧೆ, ಧೈರ್ಯ, ಕೌಶಲ್ಯ ಹಾಗೂ ವೀರತೆಯಿಂದ ಕೂಡಿದ ಆ ನಿರ್ಣಯವನ್ನು ಕಾರ್ಯರೂಪಕ್ಕೆ ತಂದರು. ಈ ಸಂದರ್ಭದಲ್ಲಿ ದೇಶಕ್ಕೆ ತನ್ನ ಶಕ್ತಿ ಹಾಗೂ ಕುಂದುಕೊರತೆಗಳ ಅರಿವುಂಟಾಯಿತು. ಶತ್ರು ಹಾಗೂ ಮಿತ್ರರು ಯಾರೆಂದು ತಿಳಿಯಿತು. ಸ್ವಾಭಿಮಾನ ಹಾಗೂ ಸ್ವಾವಲಂಬನೆ ಎಚ್ಚರಗೊಂಡಿತು. ಸ್ವಪ್ನಲೋಕದಿಂದ ಇಳಿದು ಗಟ್ಟಿಯಾದ ನೆಲದ ಮೇಲೆ ನಡೆಯುವ ಹಾಗೂ ದೂರದಲ್ಲಿರುವ ನೆಲೆಯವರೆಗೆ ಸಾಗುವ ಗುರಿಯ ಮಹತ್ವಾಕಾಂಕ್ಷೆ ಮೂಡಿತು. ಭಾರತೀಯ ಜನಸಂಘದ ವಿಚಾರಧಾರೆ ದೇಶದ ವಿಚಾರಧಾರೆಯಾಗಿ ಬಿಟ್ಟಿತು."

ವಿಶ್ವಸಂಸ್ಥೆ ಶಾಂತಿಯ ಹೆಸರಿನಲ್ಲಿ ಯುದ್ಧವನ್ನು ನಿಲ್ಲಿಸುವ ಬೇಡಿಕೆ ಮುಂದೊಡ್ಡಿತು. ಆದರೆ ಭಾರತವು ತನ್ನ ಭೂಮಿಯ ಮೇಲೆ ಪಾಕೀಸ್ತಾನದ ಆಕ್ರಮಣವಿರುವವರೆಗೂ ಯುದ್ಧ ವಿರಾಮಕ್ಕೆ ಒಪ್ಪಿಕೊಳ್ಳಲಿಲ್ಲ. ೧೯೪೯ರಲ್ಲಿಯೂ ವಿಶ್ವಸಂಸ್ಥೆಯ ಒತ್ತಾಯದಿಂದಲೇ ಭಾರತವು ಯುದ್ಧ ವಿರಾಮವನ್ನು ಘೋಷಿಸಿತು. ಆದರೆ ೧೬ ವರ್ಷಗಳ ತನಕ ಭಾರತ ಭೂಮಿಯನ್ನು ಪಾಕೀಸ್ತಾನವು ಬಲವಂತವಾಗಿ ಆಕ್ರಮಿಸಿಕೊಂಡಿತ್ತು. ವಿಶ್ವಸಂಸ್ಥೆ ಏನೂ ಮಾಡಲಿಲ್ಲ. 'ಗುಲಾಮ ಕಾಶ್ಮೀರ'ವನ್ನು ಸಂಪೂರ್ಣವಾಗಿ ಸ್ವತಂತ್ರಗೊಳಿಸುವ ತನಕ ಯುದ್ಧ ವಿರಾಮವನ್ನು ಸ್ವೀಕರಿಸಬಾರದು ಎಂಬ ಕಾರಣಕ್ಕಾಗಿ ಭಾರತೀಯ ಜನಸಂಘ ಜನತೆಯ ಒತ್ತಡವನ್ನು ಉಳಿಸಿಕೊಂಡೇ ಬಂದಿತು. ದೇಶದಲ್ಲಿ ಯುದ್ಧದ ಉತ್ಸಾಹ ಎಲ್ಲೆಡೆ ಹರಡಿಕೊಂಡುಬಿಟ್ಟಿತ್ತು.

೧೭ ಸೆಪ್ಟೆಂಬರ್, ೧೯೬೫ರಂದು ರಷ್ಯಾದ ಪ್ರಧಾನ ಮಂತ್ರಿಗಳ ಒತ್ತಾಯದ ಮೇರೆಗೆ ಯುದ್ಧ ವಿರಾಮವನ್ನು ಘೋಷಿಸಬೇಕೆಂಬ ಹಾಗೂ ತಾಶ್‌ಕಂದ್‌ದಲ್ಲಿ ಸೋವಿಯತ್ ಒಕ್ಕೂಟದ ಮಧ್ಯಸ್ಥಿಕೆಯಲ್ಲಿ ಭಾರತದ ಪ್ರಧಾನ ಮಂತ್ರಿ ಹಾಗೂ ಪಾಕೀಸ್ತಾನದ ರಾಷ್ಟ್ರಪತಿಗಳ ಶೃಂಗಸಭೆ ನಡೆಯಬೇಕೆಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ದೀನ್ ದಯಾಳ್ ಉಪಾಧ್ಯಾಯರು ಈ ಘೋಷಣೆಯನ್ನು ವಿರೋಧಿಸಿದರು. ಮಾ.ಸ. ಗೋಳ್‌ವಳ್ಕರ ಅವರು 'ಶ್ರೀ ಶಾಸ್ತ್ರಿಗಳು ತಾಶ್‌ಕಂದ್‌ಗೆ ತೆರಳಬಾರದು' ಎಂದು ದೇಶದ ಸಭೆಗಳಲ್ಲಿ ಹೇಳುತ್ತ, ಮತ್ತೆ ಮತ್ತೆ ಒತ್ತಾಯಪಡಿಸಿದರು. ಆದರೆ ಆಗಬೇಕಾಗಿದ್ದುದನ್ನು ಯಾರೂ ತಡೆಯಲಾಗುವುದಿಲ್ಲ. ೧೦ ಜನವರಿ, ೧೯೬೬ ರಂದು ತಾಶ್‌ಕಂದ್ ಘೋಷಣೆಗೆ ಭಾರತದ ಪ್ರಧಾನ ಮಂತ್ರಿ ಲಾಲ್‌ಬಹಾದ್ದೂರ್ ಶಾಸ್ತ್ರೀ ಹಾಗೂ ಪಾಕಿಸ್ತಾನ ರಾಷ್ಟ್ರಪತಿಗಳಾದ ಮುಹಮ್ಮದ್

ಅಯೂಬ್ ಖಾನ್ ಅವರು ಸಹಿ ಹಾಕಿದರು. ಅದೇ ರಾತ್ರಿ ರಹಸ್ಯಪೂರ್ಣ ರೀತಿಯಲ್ಲಿ ಪ್ರಧಾನ ಮಂತ್ರಿ ಶಾಸ್ತ್ರಿಗಳ ಹೃದಯದ ಬಡಿತ ನಿಂತು ಹೋಗಿ ಅವರು ತೀರಿಕೊಂಡರು. ಘೋಷಣೆಯಲ್ಲಿ ಹೀಗೆ ಹೇಳಲಾಗಿತ್ತು.

"ಎರಡು ದೇಶಗಳ ಎಲ್ಲ ಸಶಸ್ತ್ರ ಪಡೆಗಳು ೫ ಆಗಸ್ಟ್, ೧೯೬೫ರ ಪೂರ್ವ ಸ್ಥಿತಿಗೆ ಮರಳಬೇಕು ಹಾಗೂ ಹೀಗೆ ವಾಪಸ್ಸಾಗುವ ಕಾರ್ಯ ೨೫ ಫೆಬ್ರವರಿ, ೧೯೬೬ ರ ಅನಂತರ ಆಗಕೂಡದು (ಅಂದರೆ ಇದಕ್ಕೆ ಮೊದಲೇ ಆಗಿ ಹೋಗಿರಬೇಕು) ಎಂಬ ವಿಚಾರದ ಬಗ್ಗೆ ಭಾರತದ ಪ್ರಧಾನ ಮಂತ್ರಿ ಹಾಗೂ ಪಾಕಿಸ್ತಾನದ ರಾಷ್ಟ್ರಪತಿಗಳು ಒಪ್ಪಿಗೆ ನೀಡಿದ್ದಾರೆ. ಎರಡೂ ಪಕ್ಷಗಳು ಯುದ್ಧ ವಿರಾಮ ರೇಖೆಯನ್ನು ಗೌರವಿಸಿ ಯುದ್ಧ ವಿರಾಮದ ಶರತ್ತುಗಳನ್ನು ಪರಿಪಾಲಿಸತಕ್ಕದ್ದು."

ಅಂದರೆ ಕಾಶ್ಮೀರದ ಯಾವ ಭಾರತೀಯ ಭೂ–ಭಾಗವನ್ನು ಈ ಯದ್ಧದ ವೇಳೆ ಸ್ವತಂತ್ರಗೊಳಿಸಲಾಗಿತ್ತೋ, ಅದನ್ನು ಭಾರತ ಪುನಃ ಪಾಕೀಸ್ತಾನಕ್ಕೆ ಒಪ್ಪಿಸಿ ಬಿಡತಕ್ಕದ್ದು. ಶಾಸ್ತ್ರಿಗಳು ಜೀವಂತವಾಗಿ ಭಾರತಕ್ಕೆ ಹಿಂದಿರುಗಿದ್ದಲ್ಲಿ ಭಾರತೀಯ ಜನಸಂಘವು ಅವರನ್ನು ಬಹುಶಃ ಕಪ್ಪು ಬಾವುಟಗಳಿಂದ ಸ್ವಾಗತಿಸುತ್ತಿತ್ತು. ಆದರೆ ಅವರ ಬಲಿದಾನದಿಂದ ಸ್ಥಿತಿ ಬದಲಾಗಿ ಬಿಟ್ಟಿತು. ಉಪಾಧ್ಯಾಯರು ತಾಶ್‌ಕಂದ ಘೋಷಣೆಗೆ ವಿರುದ್ಧವಾಗಿ 'ವಿಶ್ವಾಸಘಾತ' ವೆಂಬ ಪುಸ್ತಕವನ್ನು ಬರೆದರು. ತಾಶಕಂದ್–ಘೋಷಣೆಯನ್ನು ತಿರಸ್ಕರಿಸಬೇಕೆಂಬ ಬೇಡಿಕೆಯನ್ನಿಟ್ಟರು. ಇಷ್ಟು ಬಲಿದಾನ ಹಾಗೂ ರಾಷ್ಟ್ರೀಯ ಉತ್ಸಾಹವಿದ್ದರೂ, ಭಾರತ ಭೂಮಿಯ ಮೇಲಿನ ಪಾಕೀಸ್ತಾನದ ಆಕ್ರಮಣಗಳನ್ನು ಕೊನೆಗೊಳಿಸಲಾಗಲಿಲ್ಲ ಎಂಬ ದುಃಖ ಉಪಾಧ್ಯಾಯರನ್ನು ಕಾಡುತ್ತಿತ್ತು. ಯುದ್ಧಕಾಲದಲ್ಲಿ ಯಾವ ಲಾಲ್‌ಬಹದ್ದೂರ್ ಶಾಸ್ತ್ರಿಗಳಿಗೆ 'ರಾಷ್ಟ್ರನಾಯಕ'ನೆಂಬ ಗೌರವಪೂರ್ಣ ಸ್ಥಾನ ನೀಡಿದ್ದರೋ, ತಾಶ್‌ಕಂದ್ ಘೋಷಣೆಯ ಅನಂತರ ಅದೇ ಶಾಸ್ತ್ರಿಗಳಿಗೆ ಪ್ರಿಯವಾದ 'ಜಯ್ ಜವಾನ್ – ಜಯ್ ಕಿಸಾನ್' ಘೋಷಣೆಗೆ ಸಂಬಂಧಿಸಿದಂತೆ ದೀನ್ ದಯಾಳ್ ಉಪಾಧ್ಯಾಯರು ಹೀಗೆ ಹೇಳಿದ್ದಾರೆ:

" 'ಜಯ್ ಜವಾನ್'ನ ಘೋಷಣೆಯನ್ನು ನಾವು ತಾಶ್‌ಕಂದ್‌ದಲ್ಲಿ ಮರೆತುಬಿಟ್ಟವು, ಅಮೆರಿಕಾದ ಗೋಧಿ ದೊರೆತೊಡನೆಯೇ 'ಜಯ್ ಕಿಸಾನ್' ಘೋಷಣೆಯನ್ನು ಸಹ ಮರೆತುಬಿಟ್ಟಿರುವೆವು. ಈ ಪ್ರವೃತ್ತಿ ಒಳ್ಳೆಯದಲ್ಲ. ಯಾವುದೇ ವಿದೇಶಿ ಸಹಾಯವು ಯಾವುದೇ ಶರತ್ತಿಲ್ಲದೆ ದೊರೆಯುವುದಿಲ್ಲ."

**ರಾಷ್ಟ್ರವಾದೀ ವಿದೇಶಾಂಗ ನೀತಿ**

ದೀನ್ ದಯಾಳ್ ಉಪಾಧ್ಯಾಯರು ಸ್ವಭಾವತ: ಸೈದ್ಧಾಂತಿಕ ವ್ಯಕ್ತಿಗಳಾಗಿದ್ದರು; ಆದರೆ ವಿದೇಶಾಂಗ ನೀತಿಯ ಕ್ಷೇತ್ರದಲ್ಲಿ ಅವರು ಹೆಚ್ಚಾಗಿ ಸಿದ್ಧಾಂತ ಶಾಸ್ತ್ರದಲ್ಲಿ



ನಂಬಿಕೆ ಇಟ್ಟಿರಲಿಲ್ಲ. ಅಲ್ಲಿ 'ವಿಶುದ್ಧ ವ್ಯಾವಹಾರಿಕತೆಯೇ ಅವರ ಸಿದ್ಧಾಂತವಾಗಿದ್ದಿತು. ಅವರ ದೃಷ್ಟಿಯಿಂದ ವಿದೇಶಾಂಗ ನೀತಿಗೆ ಆಧಾರವಾಗಿದ್ದ ಒಂದೇ ಒಂದು ಸಂಗತಿಯೆಂದರೆ 'ರಾಷ್ಟ್ರೀಯ ಹಿತ'. ಸ್ವತಃ ಅವರ ಮಾತುಗಳಲ್ಲಿಯೇ ಹೇಳಬೇಕೆಂದರೆ, ಯಾವುದೇ ದೇಶದ ವಿದೇಶಾಂಗ ನೀತಿಯು, ರಾಷ್ಟ್ರದ ಸ್ಪಷ್ಟ ಸ್ವಾರ್ಥಸಿದ್ಧಿಯ ಏಕೈಕ ಉದ್ದೇಶದಿಂದಲೇ ಸಿದ್ಧಪಡಿಸಲಾಗಿರಬೇಕು ಎಂಬುದು ಭಾರತೀಯ ಜನಸಂಘದ ನಂಬುಗೆ. ಅದು ವಾಸ್ತವವಾದುದೂ ಆಗಿರಬೇಕು ಹಾಗೂ ಅದು ವಿಶ್ವದ ಪಾರ್ಥಿವ ಪ್ರಕೃತಿಯನ್ನು ಗಮನದಲ್ಲಿಟ್ಟುಕೊಂಡಿರಬೇಕು."

ಆದುದರಿಂದಲೇ ಉಪಾಧ್ಯಾಯರು ಯಾವುದೇ ರೀತಿಯ ಕಾಲ್ಪನಿಕ ಸಿದ್ಧಾಂತವಾದವನ್ನು ಯಾವುದೇ ದೇಶದ ಶತ್ರುತ್ವ–ಮಿತ್ರತ್ವದೊಂದಿಗೆ ಜೋಡಿಸುವುದಿಲ್ಲ ಹಾಗೂ ಯಾವುದೇ ದೇಶವನ್ನು ಶಾಶ್ವತ ಶತ್ರು ಅಥವಾ ಮಿತ್ರರೆಂದು ಭಾವಿಸುವುದಿಲ್ಲ. ಅಂತರರಾಷ್ಟ್ರೀಯ ರಾಜನೀತಿಯಲ್ಲಿ ಪ್ರಚಲಿತ ಶಬ್ದಗಳು 'ಜನತಂತ್ರವಾದ ಅಥವಾ ಸ್ವತಂತ್ರ ವಿಶ್ವ', 'ಸಾಮಾಜಿಕ ನ್ಯಾಯದ ಪ್ರಸ್ಥಾಪನೆ ಹಾಗೂ ಕ್ರಾಂತಿವಾದಿ ವಿಶ್ವದೃಷ್ಟಿ' ಹಾಗೂ 'ಅಲಿಪ್ತತೆ ಹಾಗೂ ತೃತೀಯ ವಿಶ್ವದ ಏಕತೆ' ಇದೆಲ್ಲವನ್ನೂ ಅವರು ನಿರರ್ಥಕ ಘೋಷಣೆಗಳೆಂದೂ, ಅತಿ ದೊಡ್ಡ ರಾಷ್ಟ್ರಗಳ ರಾಷ್ಟ್ರೀಯ ಸ್ವಾರ್ಥಪರತೆಯ ಮುಖವಾಡ ಮಾತ್ರವೆಂದೂ ಅವರು ಭಾವಿಸುತ್ತಾರೆ. ಇವುಗಳಲ್ಲಿ ಯಾವುದೇ 'ಶಬ್ದ ಮಂತ್ರ'ಕ್ಕೆ ಬದ್ಧರಾಗಿ ವಿದೇಶಾಂಗ ನೀತಿಯನ್ನು ರೂಪಿಸಲಾಗುವುದಿಲ್ಲ.

ಮೇಲೆ ತಿಳಿಸಿದ ಸಿದ್ಧಾಂತಗಳ ಘೋಷಣೆಯಿಂದಲೇ ಯಾವುದೇ ದೇಶ ನಮ್ಮ ಮೈತ್ರಿಯನ್ನು ಪಡೆಯಲು ಹಕ್ಕುದಾರನಾಗುವುದಿಲ್ಲ. ನಮ್ಮ ರಾಷ್ಟ್ರೀಯ ಹಿತಗಳೊಡನೆ ಸಹಕರಿಸಿದಾಗ ಮಾತ್ರ ಅದು ಸಾಧ್ಯವಾಗುತ್ತದೆ. ದೀನ್ ದಯಾಳ್ ಉಪಾಧ್ಯಾಯರ ಅಭಿಪ್ರಾಯವೇನೆಂದರೆ ಪಾಕೀಸ್ತಾನಕ್ಕೆ ವಿರುದ್ಧವಾಗಿ ಎಲ್ಲ ದೇಶಗಳೂ ಭಾರತಕ್ಕೆ ಸಹಾಯ ನೀಡದಿದ್ದಲ್ಲಿ ಅವರು ಇಸ್ರೇಲ್‌ಗೆ ವಿರುದ್ಧವಾಗಿ ಭಾರತದ ಮೈತ್ರಿಯನ್ನು ಪಡೆಯಲು ಹಕ್ಕುದಾರರಾಗುವುದಿಲ್ಲ. ಪಶ್ಚಿಮ ಏಷ್ಯಾದ ಮೇಲೆ ಹೇಳಿದ ನ್ಯಾಯ ಅಥವಾ ಅನ್ಯಾಯಸಂಗತ ಸ್ಥಿತಿ ಇಸ್ರೇಲ್‌ನೊಡನೆ ನಮ್ಮ ಮೈತ್ರಿಯ ನಿರ್ಣಯವನ್ನು ಮಾಡಲಾರದು ಅಲ್ಲದೇ ಇಸ್ರೇಲ್ ಅಂತರಾಷ್ಟ್ರೀಯ ಜಗತ್ತಿನಲ್ಲಿ ನಮ್ಮ ಹಿತೈಷಿಯಾಗಿದ್ದಲ್ಲಿ, ಅದು ನಮ್ಮ ಮೈತ್ರಿಗೆ ಹಕ್ಕುದಾರನಾಗಿ ಪರಿಣಮಿಸುತ್ತದೆ.

**ಹೊಸ ಶಕ್ತಿಕೂಟದ ಅಗತ್ಯ**

ಸಾಮಾನ್ಯವಾಗಿ ದೀನ್ ದಯಾಳ್ ಉಪಾಧ್ಯಾಯರು ಭಾರತದ ಅಲಿಪ್ತ ನೀತಿಯ ಸಮರ್ಥಕರಾಗಿದ್ದರು. ಆದರೆ ಅವರು ಅದನ್ನು ಪರಿವರ್ತಿಸಲಾಗದಂತಹ ಸಿದ್ಧಾಂತ ಎಂದು ಒಪ್ಪುವುದಿಲ್ಲ; ವಿಶ್ವ ರಾಜಕೀಯ ಎರಡು ಕೂಟಗಳಲ್ಲಿ ವಿಭಜಿತವಾಗಿರುವುದನ್ನು ಶಾಶ್ವತವಾದದು ಎಂದೂ ಅವರು ಭಾವಿಸುವುದಿಲ್ಲ.

ಚೀಣಾದ ಆಕ್ರಮಣದ ಅನಂತರ ವಿದೇಶಾಂಗ ನೀತಿಯ ಸಂದರ್ಭದಲ್ಲಿ ಅವರು ತಮ್ಮ ಅಭಿಪ್ರಾಯವನ್ನು ಈ ರೀತಿ ಮುಂದಿಟ್ಟಿದ್ದರು : "ಎಲ್ಲಿಯ ತನಕ ಎರಡು ಜಾಗತಿಕ ಒಕ್ಕೂಟಗಳಿಂದ ಬೇರೆಯಾಗಿ ಉಳಿಯುವ ಪ್ರಶ್ನೆಯನ್ನು ತೆಗೆದುಕೊಂಡಿದ್ದೇ ಆದಲ್ಲಿ, ಸ್ಥಿತಿ ಬಹಳಷ್ಟು ಬದಲಾಗಿದೆ ಎಂದು ನಾವು ಭಾವಿಸಿಕೊಳ್ಳಬೇಕು ಹಾಗೂ ವಿಶ್ವವು ಇಂದು ಎರಡು ಒಕ್ಕೂಟಗಳಲ್ಲಿ ಮಾತ್ರವೇ ವಿಭಕ್ತವಾಗಿಲ್ಲ. ಈಗ ಹಲವಾರು ಹೊಸ ಒಕ್ಕೂಟಗಳು, ಕೇಂದ್ರಗಳು ಹುಟ್ಟಿಕೊಂಡಿವೆ. ದೆಹಲಿ ಹಾಗೂ ಪೀಕಿಂಗ್ ಇಂತಹ ಎರಡು ಸಜೀವ ಕೇಂದ್ರಗಳಾಗಿವೆ. ಪೀಕಿಂಗ್ ಈಗ ವಿಸ್ತಾರವಾದದ ಸ್ವತಂತ್ರ ನೀತಿಯ ಮೇಲೆ ಸಾಗುತ್ತಿದೆ. ಕಮ್ಯುನಿಸ್ಟ್ ಚೀಣಾದ ಸಂಕಷ್ಟವನ್ನು ತಡೆಗಟ್ಟಲು ಹಾಗೂ ಅದನ್ನು ಹಿಂದೂಡಲು ರಾಷ್ಟ್ರಗಳ ಹೊಸ ಒಕ್ಕೂಟವೊಂದರ ಅಗತ್ಯವಿದೆ; ನಮ್ಮ ರಕ್ಷಣೆಗಾಗಿ ನಾವು ಮಿತ್ರರನ್ನು ಒಗ್ಗೂಡಿಸಿಕೊಳ್ಳಬೇಕಾಗಿದೆ".

ಈ ಹೊಸ ಒಕ್ಕೂಟಗಳ ಸ್ವರೂಪವನ್ನು ಸ್ಪಷ್ಟಗೊಳಿಸಲು ಪ್ರಯತ್ನಿಸುತ್ತಾ ಅವರು ಹೀಗೆ ಹೇಳಿದ್ದಾರೆ: ".....ಈ ಹೊಸ ಒಕ್ಕೂಟದಲ್ಲಿ ನಾವು ನಿಶ್ಚಯವಾಗಿ ಪಾಶ್ಚಾತ್ಯ ಪ್ರಪಂಚದೊಡನೆ ಇರಬಹುದಾಗಿದೆ. ಏಕೆಂದರೆ ಈ ದೇಶಗಳು ನಮಗೆ ಸಹಾಯ ಮಾಡುವ ಇಚ್ಛೆಯನ್ನು ಪ್ರಕಟಿಸಿವೆ. ಇದಲ್ಲದೆ ಚೀಣಾದ ವಿಸ್ತಾರವಾದದ ಅಪಾಯದ ಅರಿವನ್ನುಂಟುಮಾಡಿಕೊಡಬಹುದಾಗಿರುವಂಥ ಏಷ್ಯಾದ ಕೆಲವು ಅಲಿಪ್ತ ದೇಶಗಳನ್ನು ಹಾಗೂ ಚೀಣಾದ ಆಕ್ರಮಣವನ್ನು ನಿಂದಿಸಿದಲ್ಲಿ ಕೆಲವು ಸಾಮ್ಯಾವಾದಿ ದೇಶಗಳನ್ನು ಕೂಡ ಈ ಹೊಸ ಒಕ್ಕೂಟಕ್ಕೆ ಸೇರಿಸಿಕೊಳ್ಳಬಹುದಾಗಿದೆ. ನಾಜಿ ಜರ್ಮನಿಯನ್ನು ಪರಾಜಯಗೊಳಿಸುವ ಸಲುವಾಗಿ ಪ್ರಜಾಪ್ರಭುತ್ವವಾದಿ ಪಶ್ಚಿಮದ ರಾಷ್ಟ್ರಗಳು ಹಾಗೂ ಸಾಮ್ಯವಾದಿ ರಷ್ಯಾ ಒಂದಾಗಬಹುದಾದರೆ, ನಾವು ಮೇಲೆ ತಿಳಿಸಿದ ಒಕ್ಕೂಟದ ಕಲ್ಪನೆಯನ್ನು ಕೇವಲ ಒಂದು 'ಹೊನ್ನಿನ ಕನಸು' ಎಂದು ತಳ್ಳಿಹಾಕಲಾಗುವುದಿಲ್ಲ. ಈ ರೀತಿ ಹೊಸ ಮಿತ್ರ ದೇಶಗಳು ಹಾಗೂ ಹೊಸ ತಟಸ್ಥ ದೇಶಗಳು ಕಂಡುಬರತೊಡಗಿವೆ." ಅವರು ರಷ್ಯಾದೆಡೆಗೆ ಭಾರತ ಸರಿಯುವುದಕ್ಕೆ ಅಮೇರಿಕಾವೇ ಕಾರಣ ಎಂದು ಭಾವಿಸುತ್ತಿದ್ದರು. ಅಮೇರಿಕಾದ ದುರ್ವ್ಯವಹಾರ ಹಾಗೂ ಭಾರತದ ವಿಶ್ವಶಾಂತಿ ನೀತಿಯ ವಿಷಯದಲ್ಲಿ ಅವರು ಈ ರೀತಿ ಹೇಳಿದ್ದಾರೆ: "......ಭಾರತವು ಯಾವುದೇ ಒಕ್ಕೂಟದೊಡನೆ ಸೇರಿದಲ್ಲಿ ಈ ವಿಶ್ವವನ್ನು ಯುದ್ಧದ ಜ್ವಾಲೆಗಳಿಂದ ದೂರವಿಡುವುದು ಅಸಂಭವವಾಗಿ ಪರಿಣಮಿಸುತ್ತದೆ. ಆದರೆ, ಭಾರತಕ್ಕೆ ತನ್ನ ತಟಸ್ಥತೆಯನ್ನು ಉಳಿಸಿಕೊಳ್ಳುವುದು ಅಸಾಧ್ಯವಾಗಿ ಪರಿಣಮಿಸುತ್ತದೆ. ಆಂಗ್ಲ–ಅಮೇರಿಕನ್ ಒಕ್ಕೂಟ ನಮ್ಮನ್ನು ನಿರಂತರವಾಗಿ ರಷ್ಯಾ ಒಕ್ಕೂಟದತ್ತ ತಳ್ಳುತ್ತಲಿದೆ. ಆದರೆ ನಾವು ಅತ್ತ ಹೋಗಬಯಸುತ್ತಿಲ್ಲ.......... ಓರ್ವ ಗುಲಾಮನ (ಪಾಕೀಸ್ತಾನದ) ಬೆನ್ನು ತಟ್ಟುವುದರಲ್ಲಿ ನಿರತವಾಗಿರುವ ಅಮೇರಿಕಾ ತನ್ನ ಅತ್ಯಂತ ನಿಕಟ ಮಿತ್ರನಿಂದ ದೂರವಾಗುತ್ತಲಿದೆ".



**ಮೂಲಭೂತ ರಕ್ಷಣಾನೀತಿ**

ದೀನ್ ದಯಾಳ್ ಉಪಾಧ್ಯಾಯರು ರಕ್ಷಣಾನೀತಿಯನ್ನು ಪರರಾಷ್ಟ್ರ ಹಾಗೂ ಸ್ವರಾಷ್ಟ್ರನೀತಿಗಳಿಗೆ ಪೂರಕವೆಂದೇ ಭಾವಿಸಿದ್ದಾರೆ ಹಾಗೂ ಅದನ್ನು ದೇಶದ ಮೂಲಭೂತ ನೀತಿಯೆಂದು ಒಪ್ಪುತ್ತಾರೆ. ಈ ನೀತಿಗಾಗಿ ಎಲ್ಲವನ್ನೂ ಬಲಿದಾನ ಮಾಡಬಹುದಾಗಿದೆ. ಜನಸಂಘವೇ ರಕ್ಷಣೆಯ ವಿಷಯದಲ್ಲಿ ತುಂಬಾ ಕಾಳಜಿ ತೋರುತ್ತಿರುವ ಏಕೈಕ ಪಕ್ಷವಾಗಿದೆ. ಸಂಘದ ೧೯೫೭ರ ಘೋಷಣಾಪತ್ರದಲ್ಲಿ ಹೀಗೆ ಬರೆಯಲಾಗಿತ್ತು: "ಭಾರತದ ಉತ್ತರ ಗಡಿಪ್ರದೇಶವು ಸುರಕ್ಷಿತವಾಗಿಲ್ಲ. ಭಾರತದ ಶಾಂತಿಯುತ ದೃಷ್ಟಿಕೋನವನ್ನು ಉಪೇಕ್ಷಿಸಿ, ಚೀಣಾ ಟಿಬೆಟ್‌ನ ಸ್ವಾತಂತ್ರ್ಯವನ್ನು ಕಸಿದುಕೊಂಡು, ಅದನ್ನು ತನ್ನ ಗುಲಾಮನನ್ನಾಗಿಸಿಕೊಂಡಿದೆ. ಇದು ಸಹ–ಅಸ್ತಿತ್ವದ ನೀತಿಗೆ ವಿರುದ್ಧವೇ ಆಗಿದೆ. ನೇಪಾಳದೊಡನೆ ಒಪ್ಪಂದ ಮಾಡಿಕೊಳ್ಳುವಾಗ ಚೀಣಾವು ಭಾರತದ ವಿಶೇಷ ಸ್ಥಿತಿಯನ್ನು ಗಮನಿಸಿಲ್ಲ. ಇದೇ ರೀತಿ ಚೀಣಾದ ನಕ್ಷೆಗಳಲ್ಲಿ ಭಾರತೀಯ ಕ್ಷೇತ್ರವನ್ನು ತೋರಿಸಿರುವುದು,.......ಬರ್ಮಾದಲ್ಲಿ ಚೀಣೀ ಸೈನಗಳ ಪ್ರವೇಶ ಹಾಗೂ ಆಗ್ನೇಯ ಏಷ್ಯಾದ ಚಿಕ್ಕ ಚಿಕ್ಕ ದೇಶಗಳಲ್ಲಿ ಚೀಣಾದ ಚಟುವಟಿಕೆಗಳು ಇವುಗಳ ವಿಷಯದಲ್ಲಿ ಭಾರತ ಬಹಳ ಎಚ್ಚರದಿಂದ ಇರಬೇಕಾಗಿದೆ". ದುಃಖವನ್ನು ವ್ಯಕ್ತಪಡಿಸುತ್ತಾ ಅವರು ಹೀಗೆ ಹೇಳುತ್ತಾರೆ: "ನಮ್ಮ ಗಡಿಪ್ರದೇಶಗಳು ಅರಕ್ಷಿತವಾಗಿರುವ ಇಂದಿನ ಸಂದರ್ಭದಲ್ಲಿ ಹಾಗೂ ನಿರಂತರ ಆಕ್ರಮಣಗಳಿಂದಾಗಿ, ರಾಷ್ಟ್ರದ ರಕ್ಷಣೆಯ ಪ್ರಶ್ನೆ ಎದುರಾಗಿರುವಾಗ ಯಾರೇ ಆಗಲಿ ಮೌನವಾಗಿ ಇರಲಾಗುವುದಿಲ್ಲ. ಆದರೆ ವಿವಿಧ ರಾಜಕೀಯ ಪಕ್ಷಗಳು ಈ ಪ್ರಶ್ನೆಗಳಿಗೆ ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ಹೆಚ್ಚು ಮಹತ್ವ ನೀಡದಿರುವುದು ಬಹಳ ದುಃಖದ ಸಂಗತಿಯಾಗಿದೆ."

೧೯೬೨ ಹಾಗೂ ೧೯೬೭ರ ಮಹಾಚುನಾವಣೆಯಲ್ಲಿ ಜನಸಂಘಕ್ಕೆ ದೊರೆತ ಯಶಸ್ಸು, ಜವಾಹರಲಾಲ್ ನೆಹರೂ ಅವರನ್ನು ಹಾಗೂ ಭಾರತದ ಇತರ ಪಕ್ಷಗಳನ್ನು ಕಟಕಟೆಯ ಹಿಂದೆ ನಿಲ್ಲುವಂತೆ ಮಾಡಿತು. ಇದರ ಅತಿ ದೊಡ್ಡ ಶ್ರೇಯಸ್ಸು ರಕ್ಷಣಾ ನೀತಿಗೆ ಸಲ್ಲುತ್ತದೆ. ಪಾಕೀಸ್ತಾನ ಹಾಗೂ ಚೀಣಾದೊಡನೆ ವ್ಯವಹರಿಸುವಾಗ ಭಾರತದ ಸುಮಾರು ಎಲ್ಲ ರಾಜಕೀಯ ಪಕ್ಷಗಳು ದೇಶದ ರಕ್ಷಣೆಯ ವಿಚಾರವನ್ನು ಉಪೇಕ್ಷಿಸಿದ್ದವು. ೧೯೬೨ರ ಹಾಗೂ ೧೯೬೫ರ ಯುದ್ಧಗಳಲ್ಲಿ ದೇಶವು ಅದಕ್ಕೆ ಬೆಲೆ ತೆರಬೇಕಾಯಿತು. ದೀನ್ ದಯಾಳರು ಕೊಟ್ಟಿದ್ದ ಎಚ್ಚರಿಕೆಗಳು ನಿಜವಾದವು.

**ಸೈನಿಕೀಕರಣ ಹಾಗೂ ಅಣುಬಾಂಬ್**

'ಪ್ರಹಾರಾತ್ಮಕ ಸಿದ್ಧತೆಯೇ ಶ್ರೇಷ್ಠ ರಕ್ಷಣಾ ವ್ಯವಸ್ಥೆಯಾಗಿರುತ್ತದೆ' ಎಂಬ ನೀತಿಯನ್ನು ರಕ್ಷಣೆಯ ದೃಷ್ಟಿಯಿಂದ ಉಪಾಧ್ಯಾಯರು ಸಮರ್ಥಿಸುತ್ತಾರೆ.

ಆದುದರಿಂದ ಅವರ ಅಭಿಪ್ರಾಯ ಇದು: ರಾಷ್ಟ್ರದ ಸೈನಿಕೀಕರಣವನ್ನು ಹಾಗೂ ಸೈನ್ಯದ ಆಧುನೀಕರಣವನ್ನು ಕೈಗೊಳ್ಳಿ. 'ಸೈನ್ಯದ ಆಧುನಿಕೀಕರಣ'ದ ವಿಷಯದಲ್ಲಿ ಪಾಶ್ಚಾತ್ಯ ಆಧುನಿಕ ತಂತ್ರಜ್ಞಾನವನ್ನು ತಮ್ಮದಾಗಿಸಿಕೊಳ್ಳುವ ಬಗ್ಗೆ ಅವರಿಗೆ ಯಾವುದೇ ಹಿಂಜರಿಕೆ ಇರಲಿಲ್ಲ. ಇದನ್ನು ಬಿಟ್ಟರೆ ಅರ್ಥನೀತಿ, ಸಮಾಜನೀತಿ, ಶಿಕ್ಷಣನೀತಿ ಹಾಗೂ ರಾಜಕೀಯ ವ್ಯವಸ್ಥೆ ಈ ಎಲ್ಲ ವಿಷಯಗಳಲ್ಲಿ ಅವರು ಪಾಶ್ಚಾತ್ಯ ಆಧುನಿಕತೆಯನ್ನು ಸ್ವೀಕರಿಸುವುದಿಲ್ಲ ಅಥವಾ ಅದಕ್ಕೆ ಅನೇಕ ಶರತ್ತುಗಳನ್ನು ವಿಧಿಸುತ್ತಾರೆ. ಆದರೆ, ರಕ್ಷಣೆಯ ವಿಷಯದಲ್ಲಿ ಸೈನ್ಯಕ್ಕೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಹಾಗೂ ತಂತ್ರಜ್ಞಾನವನ್ನು ಒದಗಿಸಿರುವುದನ್ನು ಅವರು ಪ್ರಬಲವಾಗಿ ಸಮರ್ಥಿಸುತ್ತಾರೆ. ಅಗತ್ಯ ಬಿದ್ದಾಗ ದೇಶದ ಪ್ರತಿಯೊಬ್ಬ ಯುವಕನೂ ಸೈನಿಕನಾಗುವುದು ಸಾಧ್ಯವಾಗುವಂತೆ ಆವರಿಗೆ ಕಡ್ಡಾಯ ತರಬೇತಿ ನೀಡಬೇಕು ಹಾಗೂ ಅವರು ಸೇನೆಗೆ ಸೇರಿಸಿಕೊಳ್ಳಬೇಕು ಎಂಬ ವಿಚಾರದ ಪರವಾಗಿಯೇ ಇದ್ದರು. ಕೇವಲ ಯುದ್ಧಕಾಲದಲ್ಲಿ 'ಹೋಮ್‌ಗಾರ್ಡ್ಸ್' ಮುಂತಾದವರಿಗೆ ತರಬೇತಿ ನೀಡುವುದಕ್ಕೆ ಬದಲಾಗಿ, ನಿರಂತರವಾಗಿ ಸೈನಿಕ ತರಬೇತಿಯನ್ನು ಕೊಡುತ್ತಿರಬೇಕೆಂಬ ಆಲೋಚನೆ ಅವರದಾಗಿತ್ತು.

ಅಣುಬಾಂಬ್ ತಯಾರಿಸುವ ವಿಷಯದಲ್ಲಿಯೂ ದೀನ್ ದಯಾಳ್ ಉಪಾಧ್ಯಾಯರು ವ್ಯಾವಹಾರಿಕವಾಗಿ ಯೋಚಿಸಬಯಸುತ್ತಿದ್ದರು. ಅವರು ಇದನ್ನು ಸೈದ್ಧಾಂತಿಕ ಹಾಗೂ ದಾರ್ಶನಿಕ ತೂಗುಯ್ಯಾಲೆಯಲ್ಲಿ ಸಿಲುಕಿಸಲು ಇಷ್ಟಪಡಲಿಲ್ಲ. ಇಂದು ವಿಶ್ವ–ಶಕ್ತಿಗಳು ಎಂದು ಯಾವ ರಾಷ್ಟ್ರಗಳನ್ನು ಗುರುತಿಸುತ್ತೇವೆಯೋ ಅವು ಜಾಗತಿಕ ನಾಯಕತ್ವವನ್ನು ಪಡೆದಿರುವುದಕ್ಕೆ ಕಾರಣ ಅಣು–ಶಕ್ತಿಯೇ ಹೊರತು ಅವುಗಳ ತತ್ವಜ್ಞಾನವಲ್ಲ ಎಂದು ಅವರು ಭಾವಿಸಿದ್ದಾರೆ. ಚೀಣಾದ ಅಣುಬಾಂಬ್ ವಿಶ್ವದ ರಾಜಕೀಯದಲ್ಲಿ ಅದರ ಮಹತ್ವವನ್ನು ಹೆಚ್ಚಿಸಿದೆ. ಇದರ ಬಗ್ಗೆ ಅವರು ಹೀಗೆ ಹೇಳಿದ್ದಾರೆ: "ನಮ್ಮ ವಿದೇಶಾಂಗ ನೀತಿಯಿಂದಾಗಿಯೇ ನಮ್ಮ ಎಲ್ಲ ನೆರೆಹೊರೆಯ ಹಾಗೂ ಹಿತಚಿಂತಕ ದೇಶಗಳು ನಮ್ಮಿಂದ ದೂರಸರಿಯುತ್ತಿವೆ. ಬ್ರಿಟನ್ನಿನಲ್ಲಿ, ಕಾರ್ಮಿಕ ಪಕ್ಷ ಅಧಿಕಾರಕ್ಕೆ ಬಂದಿತು; ಅಧಿಕಾರಕ್ಕೆ ಬಂದೊಡನೆಯೇ ಅದು ಚೀಣಾದೊಡನೆ ವ್ಯಾಪಾರವನ್ನು ಹೆಚ್ಚಿಸುವ ತೀರ್ಮಾನವನ್ನು ತೆಗೆದುಕೊಂಡಿತು". ಉಪಾಧ್ಯಾಯರು ಇದು ಕೇವಲ ಆರ್ಥಿಕ ನೀತಿಯ ಆಧಾರದ ಮೇಲೆ ಉಂಟಾದ ಬೆಳವಣಿಗೆ ಎಂದು ಭಾವಿಸುವುದಿಲ್ಲ. ಇದು ರಾಜಕೀಯ ಹಾಗೂ ಸೈನಿಕ ಸಾಮರ್ಥ್ಯದ ಪರೋಕ್ಷ ಪರಿಣಾಮವೇ ಆಗಿದೆ.

ನಮ್ಮ ಅಣುಬಾಂಬಿನಿಂದ ವಿಶ್ವಶಾಂತಿಗೆ ಯಾವುದೇ ಅಪಾಯವಿಲ್ಲ ಹಾಗೂ ನಾವು ವಿಶ್ವಶಾಂತಿಯ ಗುತ್ತಿಗೆದಾರರೂ ಅಲ್ಲ ಎಂಬುದು ಅವರ ಅಭಿಪ್ರಾಯವಾಗಿತ್ತು, "ವಿಶ್ವವನ್ನು ನಾಶಮಾಡಲು ಎಷ್ಟು ಪರಮಾಣು ಬಾಂಬುಗಳ ಅಗತ್ಯವಾಗುತ್ತವೆಯೋ, ಅದಕ್ಕಿಂತಲೂ ಹೆಚ್ಚು ಸಂಖ್ಯೆಯ ಬಾಂಬ್‌ಗಳು ಅಮೆರಿಕಾ ಹಾಗೂ ರಷ್ಯಾದ ಬಳಿ ಇವೆ; ಆದರೆ ಇಲ್ಲಿಯ ತನಕ ಯುದ್ಧವಾಗಿಲ್ಲ. ಆದುದರಿಂದ ಕಾಂಗ್ರೆಸ್ ಸರ್ಕಾರ ವಿಶ್ವಶಾಂತಿಯ ಹೊಣೆಯನ್ನು ಭಗವಂತನ ಮೇಲೆ ಬಿಟ್ಟು, ಪರಮಾಣು ಬಾಂಬುಗಳ ನಿರ್ಮಾಣ ಕಾರ್ಯವನ್ನು ಪ್ರಾರಂಭಮಾಡಲಿ".



'ಯುದ್ಧ ವಿರಾಮ'ಗಳ ಹಾಗೂ ಒಪ್ಪಂದಗಳ ಬಗೆಗಿನ ನಮ್ಮ ನೀತಿಗಳು ದೇಶದ ರಕ್ಷಣೆಯನ್ನು ಅನಿಶ್ಚಿತಗೊಳಿಸಿವೆ ಹಾಗೂ ಶತ್ರುಗಳಿಗೆ ಉತ್ತೇಜಕವಾಗಿ ಪರಿಣಮಿಸಿವೆ. ಆದುದರಿಂದ, ಅಂತಿಮ ವಿಜಯವನ್ನು ಸಾಧಿಸುವವರೆಗೂ ಯುದ್ಧವನ್ನು ನಡೆಸುತ್ತೇವೆ' ಎಂಬ ಆಲೋಚನೆ ಪ್ರತಿಯೊಬ್ಬ ಭಾರತೀಯನ ಮನಸ್ಸಿನಲ್ಲೂ ಇರಬೇಕು ಹಾಗೂ ಈ ದೃಷ್ಟಿಯಿಂದಲೇ ದೇಶದ ಎಲ್ಲ ನೀತಿಗಳೂ ರೂಪುಗೊಳ್ಳಲಿ ಎಂಬುದು ಉಪಾಧ್ಯಾಯರ ಅಭಿಪ್ರಾಯವಾಗಿತ್ತು. ಸಂಕ್ಷೇಪದಲ್ಲಿ ಇದೇ ಯುದ್ಧ ಪ್ರಯತ್ನಗಳ ಯಶಸ್ಸಿನ ಬೀಗದ ಕೈ ಆಗಿದೆ.

ರಾಷ್ಟ್ರೀಯ ಅಖಂಡತೆಯ ರಾಜನೀತಿಯೇ ದೇಶದ ಗೃಹ ಮತ್ತು ವಿದೇಶಾಂಗ ನೀತಿಯ ಒರೆಗಲ್ಲು ಎಂಬುದು ಅವರ ಅನಿಸಿಕೆಯಾಗಿತ್ತು. ನಾವು ಯುದ್ಧ ಲೋಲುಪರಾಗಬೇಕಾಗಿಲ್ಲ; ಆದರೆ ಯುದ್ಧಕ್ಕೆ ಸಿದ್ಧರಾಗಿರಬೇಕಾಗಿದೆ. ನಮ್ಮ ಆಂತರಿಕ ನೀತಿಯೂ ರಾಷ್ಟ್ರೀಯ ಅಖಂಡತೆಯನ್ನು ಸಮರ್ಥಿಸುವಂಥದೂ, ರೂಪಿಸುವಂಥದೂ ಆಗಿರಬೇಕು. ಈ ಸಂದರ್ಭದಲ್ಲಿ ರಾಜ್ಯಗಳ ಪುನರ್ವಿಂಗಡಣೆಗೆ ಹಾಗೂ ಭಾಷೆಗಳಿಗೆ ಸಂಬಂಧಿಸಿದ ಅವರ ನೀತಿಯ ಬಗ್ಗೆ ಇಲ್ಲಿ ವಿವೇಚನೆ ಮಾಡುವುದು ಅಗತ್ಯವಾಗುತ್ತದೆ.

**ರಾಜ್ಯಗಳ ಪುನರ್ವಿಂಗಡಣೆ**

ಪ. ದೀನದಯಾಳ ಉಪಾಧ್ಯಾಯರು ಮೂಲತಃ ಸಂಯುಕ್ತ(ಒಕ್ಕೂಟ) ವ್ಯವಸ್ಥೆಗೆ ವಿರುದ್ಧವಾಗಿದ್ದರು; ಭಾರತದಲ್ಲಿ ವಿಕೇಂದ್ರಿಕೃತ ಏಕೀಕೃತ ಸ್ವರೂಪದ ಆಡಳಿತ ವ್ಯವಸ್ಥೆಯಿರಬೇಕು ಎಂದು ಅವರು ಬಯಸುತ್ತಿದ್ದರು. ಒಕ್ಕೂಟದ ರಚನೆಯನ್ನು ಸ್ವೀಕರಿಸಿರುವ ಕಾರಣದಿಂದಾಗಿ, ನಾವು ಒಕ್ಕೂಟದ ಸದಸ್ಯರಾಜ್ಯಗಳನ್ನು ನಿರ್ಮಿಸುವಂತಹ ದಾಯಿತ್ವವನ್ನು ನಾವು ವಹಿಸಬೇಕಾಯಿತು. ಭಾಷಾವಾರು ರಾಜ್ಯರಚನೆಯ ಸಿದ್ಧಾಂತವನ್ನು ಸ್ವೀಕರಿಸಲಾಯಿತು; ಈ ಕಾರಣದಿಂದ ಅನೇಕ ಸಂಕಟಗಳೆದುರಾದವು. ಸಂಯುಕ್ತ ವ್ಯವಸ್ಥೆಯನ್ನು ಹಾಗೂ ರಾಜ್ಯ ರಚನೆಯ ಆಧಾರವನ್ನಾಗಿ ಭಾಷೆಯನ್ನು ತೆಗೆದುಕೊಂಡುದನ್ನು ಟೀಕಿಸುತ್ತಾ ಉಪಾಧ್ಯಾಯರು ಹೀಗೆ ಬರೆದಿದ್ದಾರೆ: "ಒಂದು ಆಡಳಿತ ಘಟಕವನ್ನು ನಿರ್ಮಿಸುವುದರಲ್ಲಿ ಯಾವ–ಯಾವ ತತ್ತ್ವಗಳ ಮಹತ್ವಪೂರ್ಣ ಪಾತ್ರವಿರುತ್ತದೆಯೋ ಅವುಗಳಲ್ಲಿ 'ಭಾಷೆ'ಯೂ ಸಹ ಒಂದು; ಆದರೆ ಅದನ್ನು ಏಕೈಕ ಒರೆಗಲ್ಲು ಎಂದು ಒಪ್ಪಲಾಗುವುದಿಲ್ಲ. ಆಡಳಿತದಲ್ಲಿ ಭಾಷೆಗೂ ಮಹತ್ವಮಹತ್ವಪೂರ್ಣ ಸ್ಥಾನವಿದೆ. ಆದುದರಿಂದ ಭಾಷೆಯ

ಗಡಿಗಳೇ ಸಾಮಾನ್ಯವಾಗಿ ಪ್ರದೇಶಗಳ ಗಡಿಗಳಾಗಿಬಿಟ್ಟಿವೆ. ಆದರೆ ಕೆಲವರು ಭಾಷೆಯನ್ನು ಕುರಿತು ಎಷ್ಟು ಅತಿರೇಕದ ಹಾಗೂ ಏಕೀಕೃತ ಸ್ವರೂಪದ ಆಲೋಚನೆಗಳನ್ನು ಹೊಂದಿರುತ್ತಾರೆಂದರೆ ಅದರಿಂದ 'ಉಪರಾಷ್ಟ್ರವಾದ'ದ ದುರ್ಗಂಧ ಬರತೊಡಗುತ್ತದೆ; ಜನಸಂಘ ಅದನ್ನು ಸರಿ ಎಂದು ಭಾವಿಸುವುದಿಲ್ಲ". ಆದುದರಿಂದ ಅವರಿಟ್ಟ ಬೇಡಿಕೆಯೆಂದರೆ, "ಪ್ರಾಂತಗಳ ಪುನರ್‌ರಚನೆಗಾಗಿ ಒಂದು ಆಯೋಗವನ್ನು ರಚಿಸಬೇಕು. ಪ್ರಾಂತಗಳ ಭಾಷೆಗಳು ಬೇರೆಬೇರೆಯಾಗಿವೆ ಹಾಗೂ ಸಂಸ್ಕೃತಿ ಭಿನ್ನಭಿನ್ನವಾಗಿವೆ ಎಂದು ಹೇಳುವುದು ಒಂದು ಸೈದ್ಧಾಂತಿಕ ತಪ್ಪು". ಜೊತೆಗೆ ಪ್ರಾದೇಶಿಕ ಘಟಕಗಳನ್ನು 'ರಾಜ್ಯ'ವೆಂದು ಕರೆಯುವುದೂ ಉಪಾಧ್ಯಾಯರಿಗೆ ಒಪ್ಪಿಗೆಯಿಲ್ಲ. ಅವರ ಅಭಿಪ್ರಾಯದಲ್ಲಿ ಭಾರತ ಒಂದು 'ರಾಜ್ಯ'ವಾಗಿದೆ. ಅನೇಕ ರಾಜ್ಯಗಳ ಸಂಯುಕ್ತ ರಚನೆಯಲ್ಲ. ಆದುದರಿಂದಲೇ ಅವರು ನೀಡುವ ಸಲಹೆ ಏನೆಂದರೆ 'ಒಕ್ಕೂಟ ರಾಜ್ಯ' ಹಾಗೂ 'ರಾಜ್ಯ'ದ ಬದಲಿಗೆ ಕ್ರಮವಾಗಿ 'ಕೇಂದ್ರೀಯ ಆಡಳಿತ' ಹಾಗೂ 'ಪ್ರದೇಶ' ಶಬ್ದಗಳನ್ನು ಬಳಸಬೇಕಾಗಿದೆ. ಇದು ಏಕಿಕೃತ ರೂಪದ ಆಡಳಿತ ವ್ಯವಸ್ಥೆಯತ್ತ ಇಟ್ಟ ಒಂದು ಹೆಜ್ಜೆಯಾಗುತ್ತದೆ. ಭಾರತೀಯ ಜನಸಂಘದ ಪ್ರಥಮ ಅಧಿವೇಶನವಾದ ಕಾನ್‌ಪುರ ಅಧಿವೇಶನದಲ್ಲಿಯೇ ಪ್ರಾದೇಶಿಕ ಘಟಕಗಳ 'ಪುನರ್‌ರಚನೆ'ಗಾಗಿ 'ಆಯೋಗ'ವನ್ನು ರಚಿಸುವ ಬೇಡಿಕೆಯನ್ನು ಮುಂದಿಟ್ಟು ಪ್ರಸ್ತಾಪವೊಂದನ್ನು ಅಂಗೀಕರಿಸಲಾಯಿತು.

೧೯೫೪ರಲ್ಲಿ 'ರಾಜ್ಯ ಪುನರ್ವಿಂಗಡಣೆ ಆಯೋಗದ'ದ ಸ್ಥಾಪನೆಯಾಯಿತು. ದೀನ್ ದಯಾಳ್ ಉಪಾಧ್ಯಾಯರು ಆಯೋಗಕ್ಕೆ ಒಂದು ವಿಸ್ತೃತ ಜ್ಞಾಪನ ಪತ್ರವನ್ನು ಸಲ್ಲಿಸಿದರು. ಅದರಲ್ಲಿ ಭಾಷೆಯನ್ನು ಒಂದು ವಿಸ್ತೃತ ಆಧಾರವೆಂದು ಪರಿಗಣಿಸುವುದನ್ನು ಕೈಬಿಟ್ಟು, ಇತರ ವ್ಯಾವಹಾರಿಕ ಆಧಾರಗಳ ಬಗ್ಗೆ ವ್ಯಾಖ್ಯೆ ನೀಡುವಂತೆ ಆಯೋಗವನ್ನುಒತ್ತಾಯಪಡಿಸಲಾಯಿತು. ಪ್ರಾಂತೀಯತೆ ಹಾಗೂ ಭಾಷಾವಾದದಿಂದ ಮುಕ್ತವಾಗಿರುವ ಭಾರತೀಯ ಜನಸಂಘದ ಪುನರ್ವಿಂಗಡಣೆ ನೀತಿಯ ವಿಷಯದ ಬಗ್ಗೆ ಹೇಳಿಕೆ ನೀಡುತ್ತಾ ಹೀಗೆಂದರು:

"..........ಮುಂಬಯಿಯಲ್ಲಿ ಓರ್ವ ಮಹಾರಾಷ್ಟ್ರೀಯನು ಇಲ್ಲದಿದ್ದರೂ ಮುಂಬಯಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕಾಗುತ್ತದೆ. ಹಾಗೆಯೇ ಕಲ್ಕತ್ತಾದಲ್ಲಿ ಓರ್ವ ಬಂಗಾಳಿ ಇಲ್ಲದಿದ್ದರೂ ಅದು ಬಂಗಾಳದ ಅಂಗವಾಗುತ್ತದೆ. ನಾವು ಭೌಗೋಳಿಕ ದೃಷ್ಟಿಯಿಂದ ಪುನರ್ವಿಂಗಡಣೆಯ ಬಗ್ಗೆ ಆಲೋಚಿಸಬೇಕಾಗುತ್ತದೆ. ಅಲ್ಲಿನ ಜನರೇನು ಹೇಳುತ್ತಾರೆ? ಎಂಬುದನ್ನು ಒಪ್ಪಲು ನಾನು ತಯಾರಾಗಿಲ್ಲ. ನಾವು ಪ್ರತಿಸಲ ಇಂತಹ ಚಿಕ್ಕ–ಚಿಕ್ಕ ಜನರ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇವೆಯೆ?... ದೇಶದಲ್ಲಿ ಒಂದೇ ಆಡಳಿತ ಇರುತ್ತದೆ; ಅದು ಇಂದಲ್ಲದಿದ್ದರೂ ನಾಳೆಯಾದರೂ ರೂಪತಳೆಯುತ್ತದೆ.



ದೇಶಾದ್ಯಂತ ವಿಭಿನ್ನ ಸಮುದಾಯಗಳು ಹಾಗೂ ಪಕ್ಷಗಳು ಆಯೋಗಕ್ಕೆ ಬಹಳಷ್ಟು ಮನವಿಗಳನ್ನು ಸಲ್ಲಿಸಿದೆ. ತಮ್ಮ–ತಮ್ಮ ಲೆಕ್ಕಾಚಾರದ ಪ್ರಕಾರ, ರಾಜ್ಯಗಳ ಗಡಿನಿರ್ಧಾರಣೆಯ ಬಗ್ಗೆ ತಮ್ಮ ವಾದವನ್ನು ಪ್ರಸ್ತುತಪಡಿಸಿದವು. ಆಯೋಗ ಸರ್ಕಾರಕ್ಕೆ ತನ್ನ ಮನವಿಯನ್ನು ಪ್ರಸ್ತುತ ಪಡಿಸಿದಾಗ ಜನಸಂಘವು ಆ ಮನವಿಯನ್ನು ಸ್ವಾಗತಿಸಿತು. ಉಪಾಧ್ಯಾಯರು ಹೀಗೆಂದಿದ್ದರು: "ನಾವು ಒಟ್ಟಾರೆಯಾಗಿ ಈ ಮನವಿಯನ್ನು ಸ್ವಾಗತಿಸಿದ್ದೇವೆ. ಈ ಮನವಿಯನ್ನು ಬಹಳಮಟ್ಟಿಗೆ ಜನಸಂಘದ ಶಿಫಾರಸ್ಸಿಗನುಗುಣವಾಗಿ ಸಿದ್ಧಪಡಿಸಲಾಗಿದೆ ಎಂದು ಸಹ ಹಲವಾರು ಮಹಾನುಭಾವರು ಹೇಳಿದ್ದಾರೆ."

ಏಕಾತ್ಮಕ ಹಾಗೂ ಸಂಯುಕ್ತ ಸ್ವರೂಪದ ಆಡಳಿತ ವ್ಯವಸ್ಥೆಯ ಪ್ರಶ್ನೆಯಂತೂ ಆಯೋಗದ ವಿಚಾರಾಧೀನ ವಿಷಯಗಳಲ್ಲಿ ಸೇರಿರಲಿಲ್ಲ; ಆದರೂ ಏಕಾತ್ಮಕ ಆಡಳಿತದ ಪರವಾಗಿ ಸಮಾಜದ ಪ್ರಬಲ ಭಾವನೆಗಳನ್ನು ಗೌರವಿಸಿ ರಾಷ್ಟ್ರಕ್ಕೆ ಮಹಾನ್ ಸೇವೆಯನ್ನು ಸಲ್ಲಿಸಲಾಗಿದೆ ಎಂಬ ಮಾತುಗಳೊಂದಿಗೆ ಜನಸಂಘ ಆಯೋಗದ ಮನವಿಯನ್ನು ಅನುಮೋದಿಸುತ್ತಾ ಹೀಗೆಂದು ಹೇಳಿತ್ತು, "ಭಾಷೆಯ ಆಧಾರದ ಮೇಲೆ ಮಾತ್ರವೇ ರಾಜ್ಯಗಳ ಪುನರ್–ರಚನೆಯ ಬೇಡಿಕೆಯನ್ನು ಆಯೋಗವು ಸ್ವೀಕರಿಸಲಿಲ್ಲ. ಅದಕ್ಕೆ ಬದಲಾಗಿ –

೧. ಆಡಳಿತದ ಸೌಕರ್ಯ

೨. ಆರ್ಥಿಕ ಸಾಮರ್ಥ್ಯ

೩. ರಾಷ್ಟ್ರೀಯ ಅಭಿವೃದ್ಧಿ ಯೋಜನೆಯ ಅಗತ್ಯ

೪. ಭೌಗೋಳಿಕ ಸಂಬದ್ಧತೆ, ಹಾಗೂ ಎಲ್ಲದಕ್ಕಿಂತ ಹೆಚ್ಚಾಗಿ

೫. ರಾಷ್ಟ್ರೀಯ ಏಕತೆ ಹಾಗೂ ಸಂರಕ್ಷಣೆ

ಎಂಬ ತರ್ಕಪೂರ್ಣ ಆಧಾರಗಳನ್ನು ಸ್ವೀಕರಿಸಿದೆ ಎಂಬ ಕಾರಣಕ್ಕಾಗಿ ಕಾರ್ಯಕಾರಿ ಸಮಿತಿಗೆ ಸಂತೋಷವಾಗಿದೆ.

ಆಯೋಗದ ಪ್ರಸ್ತಾಪಗಳ ವಿಷಯದಲ್ಲಿ ಆದಷ್ಟು ಬೇಗ ತೀರ್ಮಾನವನ್ನು ತೆಗೆದುಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರಬೇಕು ಎಂಬುದು ದೀನ್ ದಯಾಳರ ಅಭಿಪ್ರಾಯವಾಗಿತ್ತು. ಆದರೆ ವರದಿಯ ಬಗ್ಗೆ ಸರ್ಕಾರದ ಹಾಗೂ ವಿಧಾನ ಮಂಡಲಗಳ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗುವುದು ಹಾಗೂ ಅಂತಿಮ ತೀರ್ಮಾನಕ್ಕಾಗಿ ಅದನ್ನು ಸಂಸತ್ತಿನ ಮುಂದೆ ಮಂಡಿಸಲಾಗುವುದು ಎಂದು ಸರ್ಕಾರವು ಘೋಷಿಸಿತು. ರಾಜ್ಯ ಸರ್ಕಾರ ಹಾಗೂ ವಿಧಾನ ಮಂಡಲಗಳ ಅಭಿಪ್ರಾಯವನ್ನು ತಿಳಿಯುವ ಅಗತ್ಯವಿಲ್ಲವೆಂದು ಉಪಾಧ್ಯಾಯರು ಭಾವಿಸಿದ್ದರು. ಹಾಗೂ 'ಸಂಸತ್ತು ಸರ್ವಾಧಿಕಾರಯುಕ್ತ ಸಂಸ್ಥೆ', ಹೀಗಾಗಿ ಅದೇ ತೀರ್ಮಾನವನ್ನು ಕೈಗೊಳ್ಳಬೇಕೆಂಬುದು ಅದರ ಅಪೇಕ್ಷೆಯಾಗಿತ್ತು.

ಆಯೋಗದ ಮನವಿಯ ಅನಂತರ ಸರ್ಕಾರವು ಯಾವ ಪುನರ್‌ರಚನೆಯ ಮಸೂದೆಯನ್ನು ಮಂಡಿಸಿತೋ ಅದಕ್ಕೆ ಸಂಬಂಧಿಸಿದಂತೆ ಅವರು ಈ ಸಲಹೆ ನೀಡಿದರು; "ಪುನರ್‌ರಚನೆ ಮಸೂದೆ ನೀಡಿರುವ ಈ ಸದವಕಾಶವನ್ನು ನಾವು ಇತರ ಸದನಗಳ (ವಿಧಾನ ಪರಿಷತ್ತುಗಳು) ದುಬಾರಿ ಸಾಧನಗಳನ್ನು ಗೌರವಪೂರ್ಣ ರೀತಿಯಲ್ಲಿ ಕೊನೆಗೊಳಿಸುವ ಸಲುವಾಗಿ ಉಪಯೋಗಿಸಿಕೊಳ್ಳಬೇಕು." ಈ ಸಂದರ್ಭದಲ್ಲಿ ಭಿನ್ನ–ಭಿನ್ನ ಪ್ರದೇಶಗಳಿಗೆ ಸಂಬಂಧಿಸಿದಂತೆ ವಿಭಿನ್ನ ನೀತಿಗಳನ್ನು ಅನುಸರಿಸುವ ಬಗ್ಗೆ ಅವರು ಟೀಕೆ ಮಾಡಿದರು ಹಾಗೂ ಈ ವಿಷಯದ ಬಗ್ಗೆ ವಿಷಾದವನ್ನು ಹೀಗೆಂದು ವ್ಯಕ್ತಪಡಿಸಿದ್ದಾರೆ: "ಅಖಿಲ ಭಾರತೀಯ ಸೇವೆಗಳು, ದಕ್ಷಿಣದಲ್ಲಿ ಹಿಂದೀ ವಿಶ್ವವಿದ್ಯಾನಿಲಯಗಳು ಹಾಗೂ ಉಸ್ಮಾನಿಯಾ ವಿಶ್ವವಿದ್ಯಾಲಯ –ಇವುಗಳ ವಿಚಾರವನ್ನು ಕೇಂದ್ರಕ್ಕೆ ಕಳಿಸಿಕೊಡುವುದು ಇವೇ ಮುಂತಾದ ವಿಷಯಗಳ ಬಗ್ಗೆ ರಾಜ್ಯ ಪುನರ್‌ರಚನೆ ಆಯೋಗ ಯಾವ ಸಲಹೆಗಳನ್ನೂ ನೀಡಿತ್ತೋ, ಅವುಗಳನ್ನು ಕುರಿತು ಮಸೂದೆಯಲ್ಲಿ ಯಾವುದೇ ಉಲ್ಲೇಖವನ್ನು ಮಾಡಲಾಗಿಲ್ಲ".

ಸರ್ಕಾರದ ಈ ಮಸೂದೆಯ ಬಗ್ಗೆ ಅನೇಕ ಪ್ರದೇಶಗಳಲ್ಲಿ ವ್ಯಾಪಕ ಪ್ರತಿಕ್ರಿಯೆಯುಂಟಾಯಿತು. ದ್ವಿ–ಭಾಷಿಕ ಕ್ಷೇತ್ರಗಳಲ್ಲಿ ಭಾಷೆಗಳ ಆಧಾರದ ಮೇಲೆ, (ವಿಶೇಷವಾಗಿ ಸಾಮ್ಯವಾದಿಗಳು) ಅನೇಕ ಆಂದೋಲನಗಳನ್ನು ಹಮ್ಮಿಕೊಳ್ಳಲಾಯಿತು. ಕಾಂಗ್ರೆಸ್‌ನ ಪ್ರಾಂತೀಯ ನಾಯಕರಿಗೂ ಸಹ ಭಾಷಿಕ ಭಾವನೆಗಳಿಂದ ಹೊರಬರಲಾಗಲಿಲ್ಲ. ಮಹಾರಾಷ್ಟ್ರ, ಪಂಜಾಬ್, ಬಿಹಾರ ಹಾಗೂ ಬಂಗಾಳ–ಎಲ್ಲ ಸ್ಥಳಗಳಲ್ಲಿಯೂ ಆಂದೋಲನಗಳಾದವು. ಮುಂಬಯಿಯಲ್ಲಿ ಹಾಗೂ ಪಂಜಾಬಿನಲ್ಲಿ ಹಿಂಸಾತ್ಮಕ ಘಟನೆಗಳಾದವು. ಕೊನೆಗೆ, ಸಾಮಾನ್ಯವಾಗಿ ಭಾಷಿಕ ಆಧಾರದ ಮೇರೆಗೆ ರಾಜ್ಯಗಳ ರಚನೆಯಾಯಿತು. ಈ ತೀರ್ಮಾನವಾದ ಮೇಲೆ, ಈ ತೀರ್ಮಾನವನ್ನು ಅಪವಾದವನ್ನಾಗಿಸದೇ, ಇಡೀ ದೇಶದಲ್ಲಿ ಸಮಾನ ರೀತಿಯಲ್ಲಿ ಜಾರಿಗೊಳಿಸಬೇಕು ಎಂಬುದು ಅದರ ನೀತಿಯಾಗಿತ್ತು. ಈ ಸಂದರ್ಭದಲ್ಲಿ ಮುಂಬಯಿ ಹಾಗೂ ಪಂಜಾಬ್ ರಾಜ್ಯಗಳಲ್ಲಿ ನಡೆದ ಘಟನೆಗಳನ್ನು ಉಲ್ಲೇಖಿಸಬಹುದಾಗಿದೆ.

**(ಕ) ಮುಂಬಯಿ ರಾಜ್ಯ :** ಹಿಂದಿನ ಮುಂಬಯಿ ರಾಜ್ಯ ದ್ವಿ–ಭಾಷಿಕವಾಗಿತ್ತು. ಗುಜರಾತ್ ಹಾಗೂ ಮಹಾರಾಷ್ಟ್ರ ಮುಂಬಯಿ ಪ್ರಾಂತ್ಯದೊಳಗೆ ಬರುತ್ತಿದ್ದುವು. ಭಾಷೆಯ ಆಧಾರದ ಮೇಲೆ ನಡೆದ ಆಂದೋಲನದಿಂದಾಗಿ ಆಂಧ್ರ ಪ್ರದೇಶದ ರಚನೆಯಾಗಿ ಹೋಗಿತ್ತು. ಭಾಷೆಯನ್ನು ಆಧಾರವಾಗಿರಿಸಿಕೊಂಡೇ ಗುಜರಾತ್ ಹಾಗೂ ಮಹಾರಾಷ್ಟ್ರಗಳಿಗಾಗಿ ಆಂದೋಲನವುಂಟಾಯಿತು. ಮುಂಬಯಿ ನಗರ ವಿವಾದಕ್ಕೆ ಸಿಲುಕಿತು. 'ಸಂಯುಕ್ತ ಮಹಾರಾಷ್ಟ್ರ ಸಮಿತಿ'ಯು ಭಾಷೆಯ ಆಧಾರದ ಮೇಲೆ ಮುಂಬಯಿಯನ್ನು ಮಹಾರಾಷ್ಟ್ರದಲ್ಲಿ ಸೇರಿಸುವಂತೆ ಒತ್ತಾಯಪಡಿಸುತ್ತಿತ್ತು.



'ಮಹಾ ಗುಜರಾತ್ ಸಮಿತಿ' ಗುಜರಾತಿಗಳ ಆರ್ಥಿಕ ಕೊಡುಗೆಯ ತರ್ಕದ ಮೇರೆಗೆ ಅದನ್ನು ಗುಜರಾತ್ ರಾಜ್ಯದ ಭಾಗವನ್ನಾಗಿಸಬಯಸುತಿತ್ತು. ತನ್ನ ಸರ್ಕಾರ ಸಾಮಾನ್ಯವಾಗಿ ದ್ವಿ–ಭಾಷಾ ರಾಜ್ಯಗಳ ರಚನೆಯ ನೀತಿಯನ್ನು ಹಳೆಯ ಭಾಷಾವಾರು ರಾಜ್ಯರಚನೆಯ ನೀತಿ ಹಾಗೂ ಆಂದೋಲನಗಳ ಒತ್ತಡದಿಂದಾಗಿ ತ್ಯಜಿಸಿಬಿಟ್ಟಿತು. ಹೀಗಾಗಿ, ಗುಜರಾತ್ ಹಾಗೂ ಮಹಾರಾಷ್ಟ್ರಗಳ ರಚನೆಯಾಯಿತು. ಆದರೆ ಮುಂಬಯಿಯನ್ನು ಕೇಂದ್ರಾಡಳಿತ ಪ್ರದೇಶವೆಂದು ಘೋಷಿಸಲಾಯಿತು. ಗುಜರಾತಿಗಳಿಗೆ ಮುಂಬಯಿ ದೊರೆಯದಿದ್ದರೆ, ಮರಾಠಿಗಳಿಗೂ ಅದು ದೊರೆಯದಿರಲಿ ಎಂಬ ರಣನೀತಿಯಿಂದಾಗಿ ಅವರು ಮುಂಬಯಿಯನ್ನು ಕೇಂದ್ರಾಡಳಿತಕ್ಕೆ ಒಪ್ಪಿಸುವ ವ್ಯವಸ್ಥೆ ಮಾಡಿಬಿಟ್ಟರು. ಇದರ ಪರಿಣಾಮವಾಗಿ ಮುಂಬಯಿಯಲ್ಲಿ ಹಿಂಸಾತ್ಮಕ ದಂಗೆಗಳಾದವು. ಗುಜರಾತಿಗಳಿಗೆ ಪ್ರಾಣಹಾನಿ ಮತ್ತು ಆಸ್ತಿಪಾಸ್ತಿ ನಷ್ಟವುಂಟಾಯಿತು. ಪರಸ್ಪರ ರಕ್ತಪಾತವಾಯಿತು. ಕಾಂಗ್ರೆಸ್‌ನ ಆಂತರಿಕ ರಾಜನೀತಿಯಿಂದಾಗಿ ಇದೆಲ್ಲಾ ಆಗಿತ್ತು. ಮುಂಬಯಿಯನ್ನು ಕೇಂದ್ರಾಡಳಿತ ಪ್ರದೇಶವಾಗಿಸುವುದಕ್ಕೆ ಯಾವುದೇ ತರ್ಕದ ಆಧಾರ ಇರಲಿಲ್ಲ. ಉಪಾಧ್ಯಾಯರು ಇದನ್ನು ನಿಂದಿಸಿದರು. ಹಿಂಸಾತ್ಮಕ ದಂಗೆಗಳ ವಿಷಯದಲ್ಲಿ ತಮ್ಮ ಕಾರ್ಯಕರ್ತರಿಗೆ ಹೀಗೆಂದು ನಿರ್ದೇಶಿಸಿದರು: "ಶಾಂತಿ ಹಾಗೂ ವ್ಯವಸ್ಥೆಯ ಸ್ಥಾಪನೆಯ ವಿಷಯದಲ್ಲಿ ನಿಮ್ಮ ಸಂಪೂರ್ಣಶಕ್ತಿ ಹಾಗೂ ಪ್ರಭಾವವನ್ನು ಬಳಸಿರಿ".

ಇಲ್ಲಿ ಮತ್ತೊಮ್ಮೆ ಉಪಾಧ್ಯಾಯರ ವ್ಯಕ್ತಿತ್ವದ ವೈಶಿಷ್ಟ್ಯದ ಪರಿಚಯವಾಗುತ್ತದೆ. ಹಿಂಸೆಯನ್ನು ಹುರಿದುಂಬಿಸಿ ಹಾಗೂ ಕಾನೂನು ಸುವ್ಯವಸ್ಥೆಯ ಸಮಸ್ಯೆಗಳು ಎದುರಾದಾಗ ಸ್ವತಃ ಏನನ್ನೂ ಮಾಡದೇ ಸರ್ಕಾರವನ್ನು ನಿಂದಿಸುವುದಕ್ಕಾಗಿ ಹಾಗೂ ಸರ್ಕಾರವನ್ನು ನಿಂದಿಸುವ ಅವಕಾಶಕ್ಕಾಗಿ ಎದುರು ನೋಡುವ ಸಲುವಾಗಿ ಸುವ್ಯವಸ್ಥೆಯ ಸಮಸ್ಯೆಗಳನ್ನು ತಾವಾಗಿಯೇ ಹುಟ್ಟು ಹಾಕುವುದರಲ್ಲಿಯೇ ತಮ್ಮ ಹಿತಸಾಧನೆ ಅಡಗಿದೆ ಎಂದು ತಿಳಿಯುವಂತಹ ವಿರೋಧಿ ನಾಯಕರು ಅವರಾಗಿರಲಿಲ್ಲ. ಉಪಾಧ್ಯಾಯರು ಹೀಗೆ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು:

"ಬೊಂಬಾಯಿಯಲ್ಲಿ ನಡೆದ ಘಟನೆಗಳು ಭಾರತೀಯತೆಯ ಹೆಸರಿಗೇ ಕಳಂಕಪ್ರಾಯವಾಗಿವೆ. ಅದಕ್ಕೆ ಪ್ರಾಯಶ್ಚಿತ್ತ ಸಾಧ್ಯವೇ ಇಲ್ಲ. ಕೇಂದ್ರ ಸರ್ಕಾರದ ನೀತಿ ಹಾಗೂ ನಿರ್ಣಯ ಅಸಂತೋಷಜನಕವಾಗಿರಬಹುದು; ಆದರೆ ಅದಕ್ಕೆ ತೋರಿದ ಪ್ರತಿಕ್ರಿಯೆ ನಾಚಿಕೆಗೇಡಿನದಾಗಿದೆ. ಭಾರತದ ಪ್ರತಿಯೊಂದು ರಾಷ್ಟ್ರೀಯ ಪಕ್ಷವೂ, ಇದಕ್ಕಾಗಿ ಆತ್ಮನಿರೀಕ್ಷಣೆ ಮಾಡಿಕೊಳ್ಳುವುದು ಅಗತ್ಯವಾಗಿದೆ."

ಕೊನೆಗೆ ಬೊಂಬಾಯಿ ರಾಜ್ಯದ ಪುನರ್‌ವಿಂಗಡಣೆಯಾಯಿತು. ಮುಂಬಯಿಯನ್ನು ಮಹಾರಾಷ್ಟ್ರದಲ್ಲಿ ಸೇರಿಸಿ ಮಹಾರಾಷ್ಟ್ರವನ್ನು ಹಾಗೂ ಮುಂಬಯಿಯನ್ನು ಹೊರತುಪಡಿಸಿ, ಗುಜರಾತ್ ರಾಜ್ಯವನ್ನು ನಿರ್ಮಾಣ

ಮಾಡಲಾಯಿತು. ಇಲ್ಲಿ ಉಲ್ಲೇಖಿಸಬಹುದಾದ ಸಂಗತಿಯೆಂದರೆ 'ಸಂಯುಕ್ತ ಮಹಾರಾಷ್ಟ್ರ ಸಮಿತಿ ಮಹಾರಾಷ್ಟ್ರ ರಾಜ್ಯದ ನಿರ್ಮಾಣಕ್ಕಾಗಿ ಆಂದೋಲನ ನಡೆಸುತ್ತಿತ್ತು; ಆ ಆಂದೋಲನವನ್ನು ಸಾಮ್ಯವಾದಿಗಳು ನಡೆಸುತ್ತ ಬಂದಿದ್ದರು. ಸಮಾಜವಾದಿಗಳೂ ಅದರಲ್ಲಿ ಸೇರಿಕೊಂಡಿದ್ದರು. ಆಂದೋಲನ ತುಂಬ ಜನಪ್ರಿಯವೂ ಆಗಿ ಪರಿಣಮಿಸಿತ್ತು. ಆಂದೋಳನದಲ್ಲಿ ಭಾಗವಹಿಸಬೇಕೇ ಅಥವಾ ಇಲ್ಲವೇ ಎಂಬುದು ಆಗ ಜನಸಂಘದ ಮುಂದೆ ಇದ್ದ ಸಮಸ್ಯೆಯಾಗಿತ್ತು. ಏಕೆಂದರೆ ಜನಸಂಘ ಭಾಷಾವಾರು ರಾಜ್ಯರಚನೆಯನ್ನು ಸೈದ್ಧಾಂತಿಕವಾಗಿ ವಿರೋಧಿಸುತ್ತಿತ್ತು. ಆಂದೋಳನದಲ್ಲಿ ಭಾಗವಹಿಸದೇ ಇದ್ದ ಪಕ್ಷದಲ್ಲಿ, ಅದು ಜನರಿಂದ ಬೇರೆಯಾಗಿ ಇದ್ದು ಬಿಡುತ್ತಿದ್ದಿತು ಹಾಗೂ ಜನರ ಭಾವನೆಗಳ ಆಧಾರದ ಮೇಲೆ ಪ್ರತ್ಯೇಕತಾವಾದಿಗಳು ಹಾಗೂ ವಿದೇಶದ ಬಗ್ಗೆ ನಿಷ್ಠೆಯನ್ನುಳ್ಳ ಸಾಮ್ಯವಾದಿಗಳು ರಾಜ್ಯದಲ್ಲಿ ಅಧಿಕಾರವನ್ನು ಗಳಿಸಿಕೊಳ್ಳುತ್ತಿದ್ದರು. ಜನಸಂಘದಲ್ಲಿ ಒಂದು ಆಂತರಿಕ ಚರ್ಚೆ ನಡೆಯಿತು. ಇದಕ್ಕಾಗಿ ದೀನದಯಾಳ ಉಪಾಧ್ಯಾಯರು ಬೊಂಬಾಯಿಗೆ ಹೋಗಬೇಕಾಯಿತು.

ಈ ಸಂದರ್ಭದಲ್ಲಿ 'ಸಂಯುಕ್ತ ಮಹಾರಾಷ್ಟ್ರ ಸಮಿತಿ'ಯಲ್ಲಿ ಜನಸಂಘದ ಪ್ರತಿನಿಧಿಗಳಾಗಿದ್ದ ಪ್ರಭಾಕರಪಂತ್ ಪಟವರ್ಧನ್ ಅವರು ಹೀಗೆಂದು ಹೇಳಿದರು: "ರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಜನಸಂಘವು ಘೋಷಿಸಿದ ನೀತಿ ಎಂದರೆ ಸಾಮ್ಯವಾದಿಗಳೊಡನೆ ಸೇರಿ ಕೆಲಸ ಮಾಡುವುದಿಲ್ಲ ಎಂಬುದು. ಸಂಯುಕ್ತ ಮಹಾರಾಷ್ಟ್ರ ಸಮಿತಿಯಲ್ಲಿ ಸಾಮ್ಯವಾದಿಗಳೇ ಮಹತ್ವಪೂರ್ಣ ಪಾತ್ರ ವಹಿಸುತ್ತಿದ್ದರು. ... ಆ ದಿನಗಳಲ್ಲಿ ಸಾಮ್ಯವಾದಿಗಳ ನೇತೃತ್ವದಲ್ಲಿ ಸೇರಿಕೊಂಡು ಸಮಿತಿಯಲ್ಲಿ ಕೆಲಸ ಮಾಡುವುದಕ್ಕೆ ಭಾರತೀಯ ಜನಸಂಘದ ಬಹಳಷ್ಟು ಕಾರ್ಯಕರ್ತರು ವಿರುದ್ಧವಾಗಿದ್ದರು. ಆಗ ದೀನ್ ದಯಾಳರಿಗೆ ಆಮಂತ್ರಣವನ್ನು ನೀಡಲಾಯಿತು. ಅವರು ಎಲ್ಲರಿಗೂ ತಿಳಿಯಹೇಳಿದರು. ಹಾಗೂ 'ಸಂಯುಕ್ತ ಮಹಾರಾಷ್ಟ್ರ ಸಮಿತಿ'ಯಲ್ಲಿ ಸಹಭಾಗಿಗಳಾಗುವುದರ ಪರವಾಗಿ ತಮ್ಮ ಅಭಿಪ್ರಾಯ ನೀಡಿದರು". ಉಪಾಧ್ಯಾಯರು ಮುಖ್ಯವಾಗಿ ನಾಲ್ಕು ತರ್ಕಗಳನ್ನು ಮುಂದಿರಿಸಿದ್ದರು:

೧. ನಾವು ಭಾಷೆಯನ್ನು ರಾಜ್ಯರಚನೆಯ ಏಕೈಕ ಆಧಾರವೆಂದು ಒಪ್ಪುವುದಿಲ್ಲ. ಆದರೆ ಗುಜರಾತ್–ಮಹಾರಾಷ್ಟ್ರಗಳನ್ನು ಸೇರಿಸಿ, ದ್ವಿ–ಭಾಷೀಯ ರಾಜ್ಯವನ್ನಾಗಿ ಮಾಡುವುದು ತರ್ಕಹೀನವಾಗಿದೆ.

೨. ಭಾಷಾವಾರು ರಾಜ್ಯರಚನೆ ಹಾಗೂ ಕೇಂದ್ರೀಕೃತ ವ್ಯವಸ್ಥೆಗೆ ಬದಲಾಗಿ ಆಡಳಿತಾತ್ಮಕವಾದ ಪ್ರಾದೇಶಿಕ ಘಟಕವಾಗಿ ಹಾಗೂ ಏಕಾತ್ಮಕ ರಾಜ್ಯವನ್ನು ರಚಿಸಿದ್ದಲ್ಲಿ, ಅದು ನಮ್ಮ ನೀತಿಗೆ ಅನುಗುಣವಾಗಿರುತ್ತಿತ್ತು. ಆದರೆ ಭಾಷೆಯ ಆಧಾರದ ಮೇರೆಗೆ ಇತರ ಪ್ರಾಂತಗಳ ರಚನೆ ಆಗುತ್ತಿರುವಾಗ ಮಹಾರಾಷ್ಟ್ರದ ರಚನೆಯಾಗದಿರುವುದು ತರ್ಕಸಂಗತವಾಗುವುದಿಲ್ಲ.

೩. ನಮ್ಮ ಏಕಾತ್ಮಕ ಆಡಳಿತ ವ್ಯವಸ್ಥೆಯ ಕಲ್ಪನೆ ಕೇಂದ್ರಿಕರಣವಾದಿಯಾದುದಲ್ಲ; ಬದಲಾಗಿ ಜನಪದೀಯ ವಿಕೇಂದ್ರೀಕರಣದ ಪರವಾಗಿತ್ತು.

೪. ಸಾಮ್ಯವಾದಿಗಳ ಜೊತೆ ಸೇರಿಕೊಂಡು ಕೆಲಸ ಮಾಡದಿರುವುದು ಹಾಗೂ ಜನರಭಾವನೆಗಳನ್ನು ಒಳಗೊಂಡಿರುವಂಥ ಆಂದೋಲನಗಳು ಸಾಮ್ಯವಾದಿಗಳ ಅಂತರಾಷ್ಟ್ರೀಯ ಪ್ರವೃತ್ತಿಗಳಿಗೆ ಬಲಿಯಾಗದಂತೆ ನೋಡಿಕೊಳ್ಳುವುದು– ಇವೆರಡೂ ನಮ್ಮ ನೀತಿಯ ಅಂಗಗಳಾಗಿವೆ. ಆದುದರಿಂದ ನಾವು ಸ್ವತಃ ಪ್ರತ್ಯೇಕವಾಗಿ ಉಳಿಯದೆ, ಜನರ ಭಾವನೆಗಳೊಂದಿಗೆ ಒಂದಾಗಬೇಕಾಗಿದೆ. ಹಾಗೆ ಮಾಡಿದಲ್ಲಿ ಈ ಆಂದೋಲನವನ್ನು ಅವರು ತಮ್ಮ 'ಬಹುರಾಷ್ಟ್ರವಾದ'ದ ವಿಚಾರ ವೇದಿಕೆಯನ್ನಾಗಿ ಮಾಡಿಕೊಳ್ಳಲಾಗುವುದಿಲ್ಲ. ಇದಕ್ಕಾಗಿ ನಾವು 'ಸಂಯುಕ್ತ ಮಹಾರಾಷ್ಟ್ರ ಸಮತಿ'ಯೊಂದಿಗೆ ಸೇರಿಕೊಳ್ಳಬೇಕಾಗುತ್ತದೆ.

ಪಟವರ್ಧನ್ ಹೀಗೆನ್ನುತ್ತಾರೆ: "ನಾವು ಸಾಮ್ಯವಾದಿಗಳನ್ನು ನಿಯಂತ್ರಿಸಿದ್ದೇವೆ, ಏಕರಾಷ್ಟ್ರವಾದದ ಘೋಷಣೆ ಮಾಡಿದ್ದೇವೆ, ಬಹುರಾಷ್ಟ್ರವಾದವನ್ನು ವಿರೋಧಿಸಿದ್ದೇವೆ. ನಾವು ಸಮಿತಿಗೆ ಸೇರದೆ ಹೋಗಿದ್ದಲ್ಲಿ ಇದು ಸಾಧ್ಯವಾಗುತ್ತಿರಲಿಲ್ಲ". ೧೯೫೭ರ ಚುನಾವಣೆಗಳ ಅನಂತರ ಸಾಮ್ಯವಾದಿಗಳು 'ಸಂಯುಕ್ತ ಮಹಾರಾಷ್ಟ್ರ ಸಮಿತಿ'ಯನ್ನು ಒಂದು ಪಕ್ಷವನ್ನಾಗಿ ಬದಲಾಯಿಸುವ ಯೋಜನೆ ಮಾಡಿದಾಗ, ಪುನಃ ದೀನ್ ದಯಾಳರು ಮುಂಬಯಿಗೆ ಬಂದರು. ಆಗ ಅವರು ಹೀಗೆಂದರು: "ನಮ್ಮ ಕೆಲಸ ಪೂರ್ತಿಯಾಯಿತು, ಈಗ ನಾವು ಸಮಿತಿಯಿಂದ ಬೇರೆ ಆಗಬೇಕಾಗಿದೆ."

**(ಖ) ಪಂಜಾಬ್ ರಾಜ್ಯ**

ಪಂಜಾಬ್ ರಾಜ್ಯದ ಪುನರ್‌ರಚನೆಯ ಸಮಸ್ಯೆ ಬಹಳ ಕಾಲದವರೆಗೂ ಕಾಡುತ್ತಿತ್ತು. ೧೯೫೩–೫೪ರಲ್ಲಿ 'ಪಂಜಾಬ್ ಪ್ರಾಂತ್ಯ'ದ ಬೇಡಿಕೆಯೊಂದಿಗೆ ಯಾವ ಆಂದೋಳನ ಆರಂಭಗೊಂಡಿತೋ ಅದರ ಪ್ರತಿಕ್ರಿಯೆಯಾಗಿ 'ಮಹಾ–ಪಂಜಾಬ್'ನ ಆಂದೋಳನ ನಡೆಯಿತು. ಸ್ಥಿತಿಗಳು ಬಹಳ ಒತ್ತಡದಿಂದ ಕೂಡಿದ್ದವು. ಕೊನೆಗೆ ೯ ಮಾರ್ಚ್, ೧೯೬೬ ರಂದು, ಭಾಷೆಯ ಆಧಾರದ ಮೇಲೆ 'ಪಂಜಾಬ್ ಪ್ರಾಂತ್ಯ'ದ ನಿರ್ಮಾಣವಾಯಿತು.

ಈ ಸಮಸ್ಯೆ ಬಹುಕಾಲದವರೆಗೂ ಉಳಿದುಕೊಂಡು ಬರಲು ಕಾರಣ 'ಭಾಷೆ' ಅಲ್ಲ; ಅದಕ್ಕೆ ಬದಲಾಗಿ, ಕೋಮುವಾದ ಅದಕ್ಕೆ ಆಧಾರವಾಗಿತ್ತು. ಸಿಖ್ಖರು, ಅಕಾಲಿಗಳ ನೇತೃತ್ವದಲ್ಲಿ ಪಂಜಾಬಿ ಭಾಷೆಯ ಆಧಾರದ ಮೇಲೆ 'ಪಂಜಾಬಿ ಪ್ರಾಂತ್ಯ'ದ ಬೇಡಿಕೆ ಮುಂದೊಡ್ಡಿದ್ದರು; ಆದರೆ ಸಾಮಾನ್ಯವಾಗಿ ಆರ್ಯ ಸಮಾಜದ ತತ್ವಗಳ ಆಧಾರದ ಮೇಲೆ ರಾಜನೈತಿಕವಾಗಿ ಮುಂದೆ ಸಾಗುತ್ತಿದ್ದುದನ್ನು ಹಿಂದೂಗಳು

ಕೋಮುವಾದದ ಪ್ರತ್ಯೇಕವಾದೀ ಬೇಡಿಕೆಯೆಂದು ಭಾವಿಸಿದರು ಹಾಗೂ ಅವರು 'ಹಿಂದೀ-ಪಂಜಾಬೀ' ದ್ವಿ-ಭಾಷಾ ಆಧಾರದ ಮೇಲೆ 'ಬೃಹತ್ ಪಂಜಾಬ್'ನ ರಚನೆಯ ಬೇಡಿಕೆ ಮುಂದಿಟ್ಟರು.

'ಮಹಾ-ಪಂಜಾಬ್ ಸಮಿತಿ'ಯಲ್ಲಿ ಇದ್ದ ರಾಷ್ಟ್ರೀಯ ಸ್ವಯಂ-ಸೇವಕ ಸಂಘದ ಹಾಗೂ ಜನಸಂಘದ ಎಲ್ಲ ಪ್ರತಿನಿಧಿಗಳೂ ಪಂಜಾಬನ್ನು ವಿಭಜಿಸುವುದರ ವಿರುದ್ಧ ಆಂದೋಳನ ಮಾಡಿದರು, ಆದರೆ ಅವರು ಸಿಕ್ಖ್ ಸಮಾಜವನ್ನು ತಮ್ಮೊಡನೆ ಕೊಂಡೊಯ್ಯಲಾರದೆ ಹೋದರು. ಆದುದರಿಂದ ರಾಷ್ಟ್ರವಾದದ ಭಾಷಣಗಳನ್ನು ಮಾಡಿದ ಮೇಲೂ, ಅದು ಸಿಕ್ಖ್‌ರನ್ನು ಹೊರತುಪಡಿಸಿದ ಹಿಂದೂಗಳ ಆಂದೋಲನವಾಗಿ ಉಳಿದುಬಿಟ್ಟಿತು. ಪಂಜಾಬಿನ ಹಿಂದೂಗಳು ತಮ್ಮ ದೈನಂದಿನ ವ್ಯವಹಾರಕ್ಕೆ ಪಂಜಾಬೀ ಭಾಷೆಯನ್ನು ಬಳಸುತ್ತಿದ್ದರು. ಆದರೆ ಅವರು ತಮ್ಮ ಭಾಷೆಯನ್ನು ಪಂಜಾಬೀ ಎಂದು ಬರೆಸದೇ ಹಿಂದೀ ಎಂದು ಬರೆಸಿದ್ದರು. ಪರಿಣಾಮವಾಗಿ ಹಿಂದೂಗಳ ಬಗ್ಗೆ ಪಂಜಾಬಿನ ವಿಷಯದಲ್ಲಿ 'ದ್ರೋಹ'ವನ್ನೆಸಗುತ್ತಿದ್ದಾರೆಂಬ ಭಾವನೆ ಸಿಕ್ಖರ ಮನಸ್ಸಿನಲ್ಲಿ ಮೂಡಿಬಂದಿತು. ಇದೇ ರೀತಿ ಅಕಾಲಿ ನೇತೃತ್ವ ಪಂಜಾಬಿ ಭಾಷೆಯ ಹೆಸರಿನಲ್ಲಿ 'ಪಂಜಾಬ್ ಪ್ರಾಂತ್ಯ'ದ ಬೇಡಿಕೆಯನ್ನು ಮುಂದೊಡ್ಡಿತು; ಆದರೆ 'ಹಿಂದೂ-ಸಿಕ್ಖ್'ರ ಏಕತೆಯ ಆಧಾರದ ಮೇಲೆ ಪಂಜಾಬಿ ಭಾಷೆಗಾಗಿ ಸಂಯುಕ್ತ ಆಂದೋಲನವನ್ನು ನಡೆಸುವುದರಲ್ಲಿ ಅವರು ಯಶಸ್ವಿಯಾಗಲಿಲ್ಲ; ಅವರ ಮಾತುಗಳಲ್ಲಿ 'ಪಂಜಾಬ್‌ವಾದ' ಕಡಿಮೆಯಾಗಿ ಹಾಗೂ 'ಸಿಕ್ಖ್‌ವಾದ' ಹೆಚ್ಚಾಗಿಯೇ ಇದ್ದುದು ಕಂಡುಬರುತ್ತಿತ್ತು. ಮುಸ್ಲಿಮರ ಧರ್ಮದ ಆಧಾರದ ಮೇಲೆ ಈಚೆಗಷ್ಟೇ ಪಂಜಾಬ್ ಪ್ರದೇಶದ ವಿಭಜನೆ ಮಾಡಿ, ಅದರ ಒಂದು ಭಾಗವನ್ನು ಪಾಕೀಸ್ತಾನಕ್ಕೆ ಸೇರಿಸಿಬಿಡಲಾಗಿತ್ತು. "ಬಿಸಿಹಾಲಿನಿಂದ ಬಾಯಿಸುಟ್ಟ ಮೇಲೆ ಮಜ್ಜಿಗೆಯನ್ನು ಆರಿಸಿಕೊಂಡು ಕುಡಿಯುತ್ತಾರೆ" ಎಂಬ ನಾಣ್ಣುಡಿಯಂತೆ 'ಹಿಂದೂ ಸಮಾಜದ ಜನರು ಪಂಜಾಬಿನ ಮತ್ತೊಂದು ವಿಭಜನೆ ರಾಷ್ಟ್ರದ ಮತ್ತೊಂದು ವಿಭಜನೆಯತ್ತ ಇಟ್ಟ ಹೆಜ್ಜೆಯೆಂದು ಭಾವಿಸತೊಡಗಿದರು. ಹೀಗಾಗಿಯೇ ಈ ಸಮಸ್ಯೆ ದಿನೇದಿನೇ ವಿಕೃತರೂಪವನ್ನು ಪಡೆದುಕೊಳ್ಳತೊಡಗಿತು ಹಾಗೂ ಮತ್ತಷ್ಟು ಜಟಿಲವಾಗತೊಡಗಿತು. 'ಮಹಾ-ಪಂಜಾಬ್' ಘೋಷಣೆಗೆ ರಾಷ್ಟ್ರವಾದವೇ ಆಧಾರವಾಗಿತ್ತು; ಆದರೆ ಸಿಕ್ಖರು ಇದನ್ನು ಸಿಖ್ ಪಂಥದ ವಿರುದ್ಧ ಹಿಂದೂ ವರ್ಚಸ್ವ ನಡೆಸಿದ ಒಳಸಂಚು ಎಂದು ಭಾವಿಸುತ್ತಿದ್ದರು. 'ಪಂಜಾಬಿ ಪ್ರಾಂತ'ದ ಘೋಷಣೆಗೆ ಆಧಾರವಾಗಿದ್ದುದು ಭಾಷಾವಾರು ರಾಜ್ಯ ರಚನೆಯ ತತ್ವ; ಆದರೆ ಹಿಂದೂ ನೇತೃತ್ವ ಅದನ್ನು ಪ್ರತ್ಯೇಕತಾವಾದಿ ಹಾಗೂ ರಾಷ್ಟ್ರವಿಭಾಜಕ ತತ್ವವೆಂದು ಭಾವಿಸುತ್ತಿತ್ತು. 'ಹಿಂದಿ-ಪಂಜಾಬೀ' ದ್ವಿ-ಭಾಷಾ ಅಥವಾ 'ಒಂದೇ ಪಂಜಾಬಿ' ಭಾಷೆಯ ಘೋಷಣೆಗಳು ಕೇವಲ



ಆವರಣಗಳಾಗಿದ್ದವು. ಈ ರಾಜನೈತಿಕ ಒತ್ತಡವಿದ್ದರೂ, ಪಂಜಾಬಿನಲ್ಲಿ ಹಿಂದೂ ಸಿಕ್ಖ್ ಕೋಮು-ವೈಮನಸ್ಯಗಳು ದಂಗೆಗಳ ರೂಪದಲ್ಲಿ ಭುಗಿಲೇಳಲಿಲ್ಲ. ಏಕೆಂದರೆ ಹಿಂದೂ-ಸಿಕ್ಖ್‌ರ ಸಾಂಸ್ಕೃತಿಕ ಏಕತೆ ಬಹಳ ಆಳವಾಗಿ ಬೇರೂರಿತ್ತು. ಆದರೆ ಈ ರಾಜಕೀಯ ಜಗಳ ಏಕತೆಗೆ ಆಘಾತವನ್ನುಂಟುಮಾಡಿತು. 'ಪಂಜಾಬೀ' ಪರವಾದ ಜಗಳ ಗುರದ್ವಾರಗಳಿಂದಲೂ, 'ಹಿಂದಿ' ಪರವಾದ ಜಗಳ ಆರ್ಯ ಸಮಾಜದ ಮಂದಿರಗಳಿಂದಲೂ ನಡೆಯುತ್ತಿತ್ತು.

ಈ 'ಆಘಾತ'ವೆ ದೀನದಯಾಳ ಉಪಾಧ್ಯಾಯರ ನೋವಿಗೆ ಕಾರಣವಾಗಿತ್ತು. 'ಮಹಾ-ಪಂಜಾಬ್ ಸಮಿತಿ'ಯ ನೇತೃತ್ವವನ್ನು ಆರ್ಯ ಸಮಾಜದವರೇ ಮುಖ್ಯವಾಗಿ ವಹಿಸಿಕೊಂಡಿದ್ದಂತೆ, ದೀನದಯಾಳ ಉಪಾಧ್ಯಾಯರು ಈ ಆಂದೋಲನದೊಡನೆ ನೇರವಾಗಿ ಸೇರಿಕೊಂಡಿರಲಿಲ್ಲ. ಹಿಂದಿ-ಪಂಜಾಬೀ ಆಂದೋಳನದ ವೈಮನಸ್ಸು ಎಷ್ಟು ಹೆಚ್ಚಾಗಿತ್ತೆಂದರೆ ಹಿಂದೂಗಳು ತಮ್ಮನ್ನು ಒಂದು ರೀತಿಯಲ್ಲಿ ಪಂಜಾಬೀ ವಿರೋಧಿಗಳೆಂದೂ, ಸಿಕ್ಖ್‌ರು ತಮ್ಮನ್ನು ಹಿಂದೀ ವಿರೋಧಿಗಳೆಂದೂ ಹೇಳಿಕೊಳ್ಳತೊಡಗಿದ್ದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವರಿಷ್ಠ ಸರಸಂಘ ಸಂಚಾಲಕರಾಗಿದ್ದ ಮಾ.ಸ. ಗೋಳ್‌ವಳ್‌ಕರರು ಆಗ ಪಂಜಾಬಿನೆಲ್ಲೆಡೆ ಸಂಚರಿಸಿದರು. ಪಂಜಾಬಿನ ಭಾಷೆ 'ಪಂಜಾಬೀ' ಎಂದೂ ಹಾಗೂ ಹಿಂದೂ-ಸಿಕ್ಖ್ ಎರಡು ಭಿನ್ನ ಸಮುದಾಯಗಳಲ್ಲದೆ, ಒಂದೇ ಸಮಾಜದ ವಿಭಿನ್ನ ಅಂಗಗಳು ಎಂದೂ ಘೋಷಿಸಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕಲಾಪಗಳು ಸಿಕ್ಖೇತರ ಹಿಂದೂಗಳಲ್ಲಿಯೇ ಹೆಚ್ಚಾಗಿ ನಡೆಯುತ್ತಿದ್ದುವು. ಆದುದರಿಂದ ಗೋಳ್‌ವಳ್‌ಕರರ ಹೇಳಿಕೆ ದ್ವೇಷದ ತೀವ್ರ ಭಾವನೆಗಳನ್ನು ಶಮನಗೊಳಿಸಿತು. 'ಮಹಾ-ಪಂಜಾಬ್ ಸಮಿತಿ'ಯ ಜನರು ಗೋಳ್‌ವಳ್‌ಕರರ ಬಗ್ಗೆ ಕೋಪಗೊಂಡಿದ್ದು ಉಂಟು. ಆದರೆ ಅಕಾಲೀ ನಾಯಕ ಮಾಸ್ಟರ್ ತಾರಾಸಿಂಹರು ಗೋಳ್‌ವಳ್‌ಕರರಿಗೆ ವಂದನೆಗಳನ್ನು ಸಲ್ಲಿಸಿದರು. ಅನಂತರ ಮಾಸ್ಟರ್ ತಾರಾಸಿಂಹರು ಗೋಳ್‌ವಳ್‌ಕರರ ಆಮಂತ್ರಣವನ್ನು ಸ್ವೀಕರಿಸಿ, 'ವಿಶ್ವ ಹಿಂದೂ ಪರಿಷತ್'ನ ಸ್ಥಾಪನೆಯಲ್ಲಿ ಸಹಭಾಗಿಗಳಾದರು. ಉಪಾಧ್ಯಾಯರು ಈ ಸಂದರ್ಭದಲ್ಲಿ ಕಾಂಗ್ರೆಸ್‌ನ ವಿಭೇದಕಾರಿ ನೀತಿಯನ್ನು ಕಟುವಾಗಿ ಟೀಕಿಸಿದರು: "ವಾಸ್ತವವೇನೆಂದರೆ ಪಂಜಾಬ್‌ನ ಕಾಂಗ್ರೆಸ್ ಆಡಳಿತ ಪಂಜಾಬಿ ಹಾಗೂ ಮಹಾ ಪಂಜಾಬಿನ ಬೇಡಿಕೆಯ ಹೆಸರಿನಲ್ಲಿ ವಿಭಿನ್ನ ವರ್ಗಗಳನ್ನು ಪರಸ್ಪರ ಹೊಡೆದಾಡಿಸಿ, ತಾನೇ ಪಂಚನಾಗಿದ್ದುಕೊಂಡು ತನ್ನ ಸ್ವಾರ್ಥವನ್ನು ಈಡೇರಿಸಿಕೊಳ್ಳಬಯಸಿತ್ತು."

ಕಾಂಗ್ರೆಸ್-ಅಕಾಲಿ ಒಕ್ಕೂಟ ಒಂದು ವಿಚಿತ್ರ ಸಮೀಕರಣವೇ ಆಗಿತ್ತು. ಒಂದು ಕಡೆ ಕಾಂಗ್ರೆಸ್, ಅಕಾಲಿಗಳನ್ನು ಕೋಮುವಾದಿಗಳು ಎನ್ನುತ್ತಿತ್ತು; ಮತ್ತೊಂದೆಡೆ ಅವರೊಡನೆ ಸೇರಿಕೊಂಡು ಚುನಾವಣಾ ಒಕ್ಕೂಟವನ್ನು ಏರ್ಪಡಿಸಿಕೊಳ್ಳುತ್ತಿತ್ತು.

ಪಂಜಾಬಿನ ಪುನರ್–ರಚನೆಯ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಮಹಾ–ಪಂಜಾಬ್ ಸಮಿತಿಯನ್ನು ಉಪೇಕ್ಷಿಸಿ, ಕೇವಲ ಅಕಾಲಿಗಳೊಡನೆ ಚರ್ಚಿಸುತ್ತಿತ್ತು. ಉಪಾಧ್ಯಾಯರು ಇದರಲ್ಲಿ ಕಾಂಗ್ರೆಸ್‌ನ ಚುನಾವಣಾ ರಣತಂತ್ರವನ್ನು ಕಾಣುತ್ತಿದ್ದರು. ಹೀಗಾಗಿ, ಅವರು ಮಹಾ–ಪಂಜಾಬ್ ಸಮಿತಿಯನ್ನು ಹೀಗೆಂದು ಎಚ್ಚರಿಸಿದರು: ಆಂದೋಲನ ಹಾಗೂ ಸತ್ಯಾಗ್ರಹಗಳಲ್ಲಿ ತನ್ನ ಶಕ್ತಿಯನ್ನು ಬಳಸಿಕೊಳ್ಳುವುದರ ಬದಲಾಗಿ, ಅಕಾಲಿ–ಕಾಂಗ್ರೆಸ್‌ನ ಒಕ್ಕೂಟದ ಕೋಮುವಾದ ಹಾಗೂ ಅವಕಾಶವಾದದ ನೀತಿಯನ್ನು ಪರಾಜಯಗೊಳಿಸುವ ಸಲುವಾಗಿ, ಸಾಮಾನ್ಯ ಜನ ಸಮುದಾಯದೊಡನೆ ಮೇಳೈಸಿಕೊಂಡು, ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಪ್ರಜಾತಂತ್ರದ ಪ್ರಕ್ರಿಯೆಯ ಮೂಲಕ ರಣನೀತಿಯನ್ನು ರೂಪಿಸಬೇಕಾಗಿದೆ. "ಪಂಜಾಬಿನ ರಾಷ್ಟ್ರವಾದಿ ಶಕ್ತಿಗಳು ತಮ್ಮ ಬಲವನ್ನು ಚುನಾವಣೆಗಳಲ್ಲಿ ತೊಡಗಿಸುವುದರ ಬದಲಾಗಿ ಬೇರೆಲ್ಲಾದರೂ ಹಾಳುಮಾಡಿಕೊಂಡು ಬಿಡಲಿ ಎಂಬುದು ಕಾಂಗ್ರೆಸ್ ಪಕ್ಷದ ಆಡಳಿತ ನೀತಿಯೇ ಆಗಿತ್ತು. ಕಾಂಗ್ರೆಸ್ ಆಡಳಿತದ ಕೃಪೆಯಿಂದ ಬಾಳಿ ಬದುಕುತ್ತಿರುವ ಅನೇಕ ವ್ಯಕ್ತಿಗಳು ಪರೋಕ್ಷವಾಗಿ ಪಂಜಾಬಿನ ಜನರ ಗಮನವನ್ನು ನಿಜವಾದ ಸಮಸ್ಯೆಗತ್ತಣಿಂದ ದೂರ ಸೆಳೆಯಲು ಪ್ರಯತ್ನಿಸುತ್ತಾರೆ. ಮಹಾಪಂಜಾಬ್ ಸಮಿತಿಯು ಈ ಬಲೆಯಲ್ಲಿ ಸಿಲುಕಿಕೊಳ್ಳುವುದೆ? ಸತ್ಯಾಗ್ರಹ ಅಥವಾ ಇತರ ಯಾವುದೇ ತತ್ಸಮಾನವಾದ ಆಂದೋಲನ ಇದೇ ಬಲೆಯಾಗಿ ಪರಿಣಮಿಸುತ್ತದೆ...... ಸ್ವತಃ ಮಹಾ–ಪಂಜಾಬ್ ಸಮಿತಿಯೇ ಇದರ ಬಗ್ಗೆ ನಿರ್ಣಯಿಸಬೇಕಾಗಿದೆ.

ಅಕಾಲಿ–ಕಾಗ್ರೆಸ್‌ನ ಒಕ್ಕೂಟದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಪ್ರಸ್ತುತ ಪಡಿಸುತ್ತ, ಅವರು ಕಾಂಗ್ರೆಸ್‌ನ ನಡವಳಿಕೆಯನ್ನೇ ಸಂಪೂರ್ಣವಾಗಿ ವಿಶ್ಲೇಷಿಸಿದ್ದಾರೆ: "......... ಅದು [ಕಾಂಗ್ರೆಸ್ ಪಕ್ಷ] ಸದಾ ಹೇಳುವುದೊಂದು, ಮಾಡುವುದೊಂದು. ರಾಷ್ಟ್ರೀಯತೆಯ ಘೋಷಣೆ ಮಾಡಿಯೂ, ಅದು ಕೋಮುವಾದೀ ತತ್ವಗಳನ್ನು ಸದಾ ಅಪ್ಪಿಕೊಂಡಿದೆ. ಕಾಂಗ್ರೆಸ್, ಕೋಮುವಾದದ ಕಟ್ಟಕಡೆಯ ಆಶ್ರಯಸ್ಥಳವೆಂದು ಹೇಳಿದರೆ ಅದೇನೂ ಅನುಚಿತವಾಗಲಾರದು. ಮತಾಂಧ ಮುಸ್ಲಿಂ–ಲೀಗ್ ಇಂದು ಕಾಂಗ್ರೆಸ್‌ನಲ್ಲಿದೆ. ಜಸ್ಟಿಸ್ ಪಾರ್ಟಿಯ ದಿಗ್ಗಜ ನಾಯಕರು ಕಾಂಗ್ರೆಸ್ ಮಂತ್ರಿಗಳಾಗಿದ್ದಾರೆ. ಕೇರಳದಲ್ಲಿ ಕಾಂಗ್ರೆಸ್ ಅನ್ನು ಕ್ಯಾಥೋಲಿಕ್ ಕಾಂಗ್ರೆಸ್ ಎಂದೇ ಕರೆಯಲಾಗುತ್ತಿದೆ. ಹೀಗಿರುವಾಗ ಪಂಜಾಬಿನಲ್ಲಿ ಅದು ಬಿಳಿ ಟೋಪಿಯನ್ನು ತೆಗೆದು ನೀಲಿಪೇಟಾ ಧರಿಸಿದರೆ ಅದನ್ನು ಕಂಡು ನಾವು ಆಶ್ಚರ್ಯಪಡಬೇಕಾಗಿಲ್ಲ. ಚುನಾವಣೆಗಾಗಿಯೇ ಕಾಂಗ್ರೆಸ್ ಪಕ್ಷ ಏನು ಮಾಡಲೂ ಸಿದ್ಧವಾಗಿರುತ್ತದೆ."

ಪಂಜಾಬಿನ ಭವಿಷ್ಯವನ್ನು ಕುರಿತ ಚರ್ಚೆಗೆ ಕಾಂಗ್ರೆಸ್ ಸರ್ಕಾರ ಕೇವಲ ಅಕಾಲಿಗಳನ್ನು ಆಹ್ವಾನಿಸಿದುದಕ್ಕೆ ವಿರುದ್ಧವಾಗಿ ಉಪಾಧ್ಯಾಯರು ತಮ್ಮ ಅಸಮಾಧಾನವನ್ನು ವ್ಯಕ್ತ ಪಡಿಸಿದರು; ಹಾಗೂ ಇದನ್ನು ಪಂಜಾಬಿನ ಸಾಮಾಜಿಕ



ಸೌಹಾರ್ದದ ವಿರುದ್ಧ 'ಒಡೆದು ರಾಜ್ಯವಾಳುವ' ಹಾಗೂ 'ಸಂತುಷ್ಟೀಕರಣ'ದ ನೀತಿ ಎಂದು ಹೇಳಿ, ಅವರು ಪಂಜಾಬಿನ ಭವಿಷ್ಯಕ್ಕಾಗಿ ದುಂಡುಮೇಜಿನ ಸಮ್ಮೇಳನವನ್ನು ಕರೆಯಬೇಕೆಂಬ ಬೇಡಿಕೆಯನ್ನಿಟ್ಟರು:

"ಪಂಜಾಬಿನ ಭಾವಿ ನಕ್ಷೆಯನ್ನು ಕುರಿತಂತೆ ಮಾತನಾಡುವ ಸಲುವಾಗಿ ಸರ್ಕಾರ ಅಕಾಲಿ ಶಿಷ್ಟಮಂಡಲವನ್ನು ಆಮಂತ್ರಿಸಿರುವ ಸಮಾಚಾರವು ಅತ್ಯಂತ ಅಚ್ಚರಿಯನ್ನುವುಂಟುಮಾಡುವಂಥದ್ದಾಗಿದೆ..... ಸರ್ಕಾರವು ತಪ್ಪಾಗಿ ಅಕಾಲಿಗಳನ್ನು ಸಂತುಷ್ಟಗೊಳಿಸಬಯಸುತ್ತಿದೆ....... ನಿಮ್ಮ ಅವಹೇಳನೆ ಮಾಡಿ ಯಾವುದೇ ನಿರ್ಣಯವನ್ನು ಕೈಗೊಳ್ಳುವುದಿಲ್ಲ ಎಂಬ ಭರವಸೆಯನ್ನು ಜನತೆಗೆ ನೀಡುವ ಅಗತ್ಯವಿದೆ. ಸರಿಯಾದ ನಿರ್ಣಯ ಕೈಗೊಳ್ಳಲು ಹಾಗೂ ಅದರ ಅನಂತರವೂ ವಿಭಿನ್ನ ಧರ್ಮಗಳ ಜನರ ನಡುವೆ ಯಾವುದೇ ರೀತಿಯಾದ ದುರ್ಭಾವನೆ ಉಳಿಯದ ಹಾಗೆ ಮಾಡಲು ಒಂದು ಧಾಮಿಕ ಪಕ್ಷದ ಎದುರಿಗೆ ಸಕಾರ ಸ್ವತಃ ಒಂದು ಪಕ್ಷವಾಗಿ ನಿಲ್ಲುವ ಬದಲು, ಎಲ್ಲಾ ದೃಷ್ಟಿಕೋನಗಳನ್ನು ಪ್ರತಿನಿಧಿಸುವ ಜನರನ್ನು ದುಂಡುಮೇಜಿನ ಸಮ್ಮೇಳನಕ್ಕೆ ಕರೆಯುವ ಅಗತ್ಯವಿದೆ. ಆ ಪ್ರದೇಶದಲ್ಲಿ ಶಾಂತಿ ಮೂಡಿಸುವ ದೃಷ್ಟಿಯಿಂದ ಅತ್ಯಧಿಕ ಸಹಮತ ಏರ್ಪಡಿಸುವಂತಹ ನಿರ್ಣಯವನ್ನು ಕೈಗೊಳ್ಳುವ ಅಗತ್ಯವಿದೆ.

ದುರ್ಭಾಗ್ಯದಿಂದ ಪಂಜಾಬಿನಲ್ಲಿ ಹೀಗೆ ಆಗಲಿಲ್ಲ. ಪರಿಣಾಮವಾಗಿ ಪಂಜಾಬ್ ಪ್ರಾಂತ್ಯದ ನಿರ್ಮಾಣದ ಅನಂತರವೂ ಪಂಜಾಬಿನ ಸಮಸ್ಯೆಯ ಪರಿಹಾರವಾಗಲಿಲ್ಲ. ಚಂಢೀಗಢ್‌ದ ಸಮಸ್ಯೆ ಮತ್ತು ಪಂಜಾಬ್–ಹರಿಯಾಣಾದ ಗಡಿ ಸಮಸ್ಯೆ ಈಗಲೂ ಹಾಗೆಯೇ ಇದೆ. ಭಾಷಾವಾರು ಪ್ರಾಂತ ರಚನೆಯ ವಿಚಾರ ಕ್ರಮವಾಗಿ ಉಪರಾಷ್ಟ್ರೀಯತೆಯಂತಹ ಭಾವವನ್ನು ಪಡೆದುಕೊಳ್ಳುತ್ತಲಿದೆ. ಉಪಾಧ್ಯಾಯರು ಕೊನೆಯವರೆಗೂ 'ಏಕಾತ್ಮ ಆಡಳಿತ'ದ ವಕ್ತಾರರಾಗಿದ್ದರು. ಭಾರತದ ರಾಜನೀತಿಯಲ್ಲಿ 'ಏಕಾತ್ಮ ಆಡಳಿತ'ಕ್ಕಾಗಿ ಪ್ರತಿಬದ್ಧರಾದ ವಕ್ತಾರರು ಅವರೊಬ್ಬರೇ ಎಂದು ತೋರುತ್ತದೆ. ಕಲ್ಲೀಕೋಟೆಯ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಹ ಅವರು ಏಕಾತ್ಮ ಆಡಳಿತದ ಅಗತ್ಯವನ್ನು ಪ್ರತಿಪಾದಿಸಿದರು.

ಆಗಸ್ಟ್, ೧೯೫೬ರಲ್ಲಿ ರಾಜ್ಯಗಳ ಪುನರ್‌ರಚನೆಯ ವಿಧೇಯಕವನ್ನು ಕುರಿತು ಭಾರತೀಯ ಸಂಸತ್ತು ವಿಚಾರಮಾಡುತ್ತಿತ್ತು. ಆ ಹೊತ್ತಿಗಾಗಲೇ 'ಪಾಂಚಜನ್ಯ'ವು ೧೯೪೭ರ ಅಂಕವನ್ನು ಪ್ರಕಟಿಸಿತ್ತು. ದೀನ್ ದಯಾಳ್ ಉಪಾಧ್ಯಾಯರು 'ಆಗಸ್ಟ್, ೧೯೪೭ ಅಲಿಯಾಸ್ ಆಗಸ್ಟ್ ೧೯೫೬' ಎಂಬ ಶೀರ್ಷಿಕೆಯಲ್ಲಿ ವಿಸ್ತೃತ ಲೇಖನವೊಂದನ್ನು ಬರೆದರು. ಕೋಮುಗಳನ್ನು ಆಧಾರವಾಗಿಸಿಕೊಂಡು ೧೯೪೭ರ ಭಾರತ ವಿಭಜನೆ ಹಾಗೂ ಆಗಸ್ಟ್, ೧೯೫೬ರಲ್ಲಿ ಮಾಡಿದ ಭಾಷಾವಾರು ರಾಜ್ಯಗಳ ಪುನರ್‌ರಚನೆ– ಈ ಎರಡರಲ್ಲಿಯೂ ದೀನ್ ದಯಾಳರಿಗೆ ಒಂದೇ ಪ್ರವೃತ್ತಿ

ಕಾಣಿಸುತ್ತದೆ. ಅವರು ಹೀಗೆ ಬರೆದಿದ್ದಾರೆ:

"ಇಂದು ಯಾವ ಶಾಸನ ರೂಪಿತವಾಗುತ್ತಿದೆಯೋ ಅದರಲ್ಲಿನ ಅವಕಾಶಗಳು ಹಾಗೂ ಪ್ರಕರಣಗಳಿಗಿಂತ ಮನೆಮಾಡಿಕೊಳ್ಳುತ್ತಿರುವ ಪ್ರವೃತ್ತಿಚಿಂತೆಯ ಸಂಗತಿಯಾಗಿದೆ. ಏಕಾತ್ಮಕ ಹಾಗೂ ಕೇಂದ್ರೀಯ ಸಂವಿಧಾನಗಳು ಸೈದ್ಧಾಂತಿಕ ಚರ್ಚೆಯ ವಿಷಯಗಳಾಗಬಹುದಾಗಿವೆ................. ಇಂದು ವಿಷದ ಬೀಜಗಳನ್ನು ಬಿತ್ತಲಾಗುತ್ತಿದೆ. ದುಃಖದ ಸಂಗತಿಯೆಂದರೆ ದೂರ ಪ್ರಪಂಚದ ಕವಡೆಯ ಕಿಮ್ಮತ್ತನ್ನೂ ಗ್ರಹಿಸಬಲ್ಲಂತಹ ನೆಹರೂರವರು, ತಮ್ಮ ಕಣ್ಣ ಕೆಳಗಿನ ದೊಡ್ಡ ಗೋಲಿಯನ್ನು ನೋಡಲಾರದೇ ಹೋದರು. ಇದು ಆಗಸ್ಟ್ ತಿಂಗಳ ಪ್ರಭಾವವಲ್ಲವೇನು? ಆಗಸ್ಟ್, ೧೯೪೭ ಹಾಗೂ ಆಗಸ್ಟ್ ೧೯೫೬ ರ ಹೋರಾಟದಲ್ಲಿ ಯಾರು ವಿಜಯಿಗಳಾಗುತ್ತಾರೆ ಎಂಬುದನ್ನು ಭವಿಷ್ಯವೇ ತಿಳಿಸುತ್ತದೆ."

**ಭಾಷಾ–ನೀತಿ**

ಭಾರತದಂತಹ ಬಹುಮುಖೀ ಸಮಾಜ ಹಾಗೂ ವಿಶಾಲ ಭೂಪ್ರದೇಶದ ಭಾಷಾ–ನೀತಿಯ ನಿರ್ಧಾರಣೆ ಒಂದು ವಿಕಟ ಸಮಸ್ಯೆಯಾಗಿಬಿಟ್ಟಿದೆ. ಸಂಪೂರ್ಣ ಭಾರತದಲ್ಲಿ ಯಾವುದೇ ಒಂದು ಭಾಷೆ ಇರುವಂಥ ನಿದರ್ಶನ ಭಾರತದ ಇತಿಹಾಸದಲ್ಲಿ ಎಲ್ಲಿಯಾದರೂ ಕಂಡುಬಂದಿದೆಯೇ? ಇದಕ್ಕೆ ಉತ್ತರಿಸುವುದು ಅಷ್ಟು ಸುಲಭವಲ್ಲ. ಭಾಷಾ ವಿಜ್ಞಾನದ ಆಧಾರದ ಮೇರೆಗೆ ಆರ್ಯ ಭಾಷೆ ಹಾಗೂ ದ್ರಾವಿಡ ಭಾಷೆಗಳ ಬಗ್ಗೆ ಚರ್ಚೆ ಮಾಡುವ ಜನರು ದಕ್ಷಿಣದ ಭಾಷೆಗಳನ್ನು ಸಂಸ್ಕೃತೇತರ ಭಾಷೆಗಳು ಎಂದು ಭಾವಿಸುತ್ತಾರೆ; ಆದರೆ ಈ ಸಂದರ್ಭದಲ್ಲಿ ಸಂಸ್ಕೃತವು ಸಂಪೂರ್ಣ ಭಾರತದ ವಿದ್ವಾಂಸರ ವ್ಯಾವಹಾರಿಕ ಭಾಷೆಯಾಗಿತ್ತು ಹಾಗೂ ದಕ್ಷಿಣದ ಭಾಷೆಗಳು ಸಂಸ್ಕೃತೇತರ ಭಾಷೆಗಳಲ್ಲ ಎಂಬುದಾಗಿ ದೀನ್ ದಯಾಳರು ಖಚಿತವಾಗಿ ನಂಬುತ್ತಾರೆ.

ಮುಸ್ಲಿಂ ಆಕ್ರಮಣಗಳ ಸಂಪರ್ಕದಿಂದ ಜನ್ಮತಾಳಿದ ಉರ್ದೂ ಹಾಗೂ ಆಂಗ್ಲರಿಂದ ಸಂಪರ್ಕಭಾಷೆಯಾಗಿ ಹೊರಿಸಲಾಗಿರುವ ಇಂಗ್ಲಿಷ್(ಆಂಗ್ಲ)– ಈ ಎರಡೂ ರಾಷ್ಟ್ರೀಯ ಸ್ವಾಭಿಮಾನಕ್ಕೆ ಧಕ್ಕೆಯನ್ನುಂಟುಮಾಡುವ ಭಾಷೆಗಳಾಗಿವೆ ಎಂದು ಅವರು ಭಾವಿಸುತ್ತಾರೆ. ಸಂಸ್ಕೃತನಿಷ್ಠ ಹಿಂದಿಯನ್ನು ಭಾರತದ ಅಸಂದಿಗ್ಧ ರಾಷ್ಟ್ರಭಾಷೆಯನ್ನಾಗಿ ಮಾಡಲು ಅವರು ಬಯಸುತ್ತಿದ್ದರು. ಆದರೆ ಪ್ರಾದೇಶಿಕ ಭಾಷೆಗಳ ವಾಸ್ತವಿಕ ಸ್ಥಿತಿ ಹಾಗೂ ಆಂಗ್ಲ ಭಾಷೆಯ ವರ್ಚಸ್ಸಿನಿಂದ ಇದು ಅಷ್ಟು ಸುಲಭವಾಗಲಿಲ್ಲ. ಉಪಾಧ್ಯಾಯರು ತಮ್ಮ ಜೀವಮಾನದ ಅವಧಿಯಲ್ಲಿ ನಡೆಯುತ್ತಿದ್ದಂಥ ಭಾಷಾವಿವಾದದಲ್ಲಿ ಸಕ್ರಿಯವಾಗಿ ಭಾಗವಹಿಸಿ ಪ್ರಖರವಾಗಿ ಹಾಗೂ ತರ್ಕಸಂಗತವಾಗಿ ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತಿದ್ದರು. ಹಲವಾರು



ವಿಷಯಗಳ ಬಗ್ಗೆ ವ್ಯಾವಹಾರಿಕ ಒಪ್ಪಂದಗಳನ್ನು ಅವರು ಮಾಡಿಕೊಂಡಿದ್ದರು. ಭಾಷೆಯನ್ನು ರಾಜನೀತಿಯ ಪ್ರಕರಣವನ್ನಾಗಿಸಿದ್ದರಿಂದ ಭಾಷೆಯ ವಿಚಾರದಲ್ಲಿ ರಾಷ್ಟ್ರೀಯ ಸ್ವಾಭಿಮಾನಕ್ಕೆ ಧಕ್ಕೆಯುಂಟಾಯಿತು. ಹಾಗೂ ಹಿಂದಿಯ ವಿಕಾಸಕ್ಕೆ ಅಡ್ಡಿಯುಂಟಾಯಿತು. ಉಪಾಧ್ಯಾಯರು ಹೀಗೆನ್ನುತ್ತಾರೆ; "ರಾಜಕಾರಣಿಗಳು ಭಾಷೆಯ ಹೆಸರಿನಲ್ಲಿ ಹೋರಾಡಬಹುದೇ ಹೊರತು, ಭಾಷೆಯನ್ನು ಸೃಷ್ಟಿಸಲಾರರು."

ಹಿಂದಿಯ ಅಸಮರ್ಥತೆ ಹಾಗೂ ಇಂಗ್ಲಿಷ್‌ನ ವ್ಯಾವಹಾರಿಕ ಸಾರ್ವದೇಶಿಕತೆಗೆ ಸಂಬಂಧಿಸಿದಂತೆ ದೀನದಯಾಳರು ತಮ್ಮ ಸ್ವರಾಜ್ಯವಾದೀ ಭಾವನೆಗಳನ್ನು ಪ್ರಸ್ತುತಪಡಿಸುತ್ತಾ ಹೀಗೆ ಹೇಳುತ್ತಾರೆ; "ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಆರಂಭದ ದಿನಗಳಲ್ಲಿ ಬ್ರಿಟಿಷ್ ಸಮರ್ಥಕ ತತ್ವಗಳಿಗೆ ನಾವು ಸಾಮಾನ್ಯವಾಗಿ ನೀಡುತ್ತಿದ್ದ ಉತ್ತರವೆಂದರೆ 'ಸ್ವರಾಜ್ಯ'ದ ತೃಷೆಯನ್ನು 'ಸುರಾಜ್ಯ' (Good Rule)ದಿಂದ ತಣಿಸಲಾಗುವುದಿಲ್ಲ. ಇಂದಿಗೂ 'ಸ್ವಭಾಷೆ'ಯ ಅಗತ್ಯವನ್ನು 'ಸುಭಾಷೆ' ಪೂರೈಸಲಾರದು."

ಅವರು ಸಂಪರ್ಕ ಭಾಷೆ ಅಥವಾ ರಾಷ್ಟ್ರಭಾಷೆಯ ವಿಷಯವನ್ನು ರಾಷ್ಟ್ರೀಯ ಅಖಂಡತೆಯೊಂದಿಗೆ ಸೇರಿಸುತ್ತಿದ್ದರು. ಹೀಗಾಗಿ ಭಾರತದ ಅತಿ ಪ್ರಾಚೀನ ಭಾಷೆಯಾದ ಸಂಸ್ಕೃತಕ್ಕೆ ಸಂವೈಧಾನಿಕವಾಗಿ ರಾಷ್ಟ್ರಭಾಷೆಯ ಸ್ಥಾನವನ್ನು ಕೊಡಬೇಕು ಹಾಗೂ ರಾಷ್ಟ್ರದ ಸಂಪರ್ಕ ಭಾಷೆಯ ರೂಪದಲ್ಲಿ ಹಿಂದಿಯನ್ನು ವಿಕಸನಗೊಳಿಸಬೇಕು ಎಂಬುದು ಅವರ ಅಭಿಪ್ರಾಯವಾಗಿತ್ತು. ಅವರು ಹಿಂದೀ ಪರವಾದ ಪ್ರಬಲ ವಕ್ತಾರರಾಗಿದ್ದರು. ಆದರೆ ೧೯೫೭ರಲ್ಲಿ ಬೆಂಗಳೂರಿನಲ್ಲಿ ಹಾಗೂ ಒಂದು ದಶಕದ ಅನಂತರ ೧೯೬೭ರಲ್ಲಿ ಕಲ್ಲಿಕೋಟೆಯಲ್ಲಿ ನಡೆದ ಅಧಿವೇಶನಗಳು ಅವರಿಗೆ ಸೀಮಿತಗಳ ಅರಿವನ್ನುಂಟುಮಾಡಿದವು. ಭಾಷೆಯ ಬಗೆಗಿನ ಒತ್ತಾಯ ಭಾರತವನ್ನು ಉತ್ತರ ಹಾಗೂ ದಕ್ಷಿಣವೆಂದು ವಿಭಕ್ತಗೊಳಿಸುವುದಾದರೆ, ದೀನ್ ದಯಾಳರ ರಾಷ್ಟ್ರೀಯ ಅಖಂಡತೆಯ ರಾಜನೀತಿಯ ನೆಲೆಯಲ್ಲಿ ಅದು ಅವರ ಒತ್ತಾಯವಾಗುತ್ತಿರಲಿಲ್ಲ. ಇಂಗ್ಲಿಷ್ ಬದಲಾಗಿ ಭಾರತೀಯ ಭಾಷೆಯೊಂದನ್ನು ಪರ್ಯಾಯವಾಗಿ ಹುಡುಕಿಕೊಳ್ಳುವ ಅವರ ಆಕಾಂಕ್ಷೆ ಹೆಚ್ಚಾಗಿತ್ತು. ಭಾಷಾ ನೀತಿಯನ್ನು ಅವರು ಸಾಂಗೋಪಾಂಗವಾಗಿ ಪರೀಕ್ಷಿಸಿ ನೋಡುವ ಮೊದಲೇ ವಿಧಿಯು ಅವರನ್ನು ನಮ್ಮಿಂದ ಕಸಿದುಕೊಂಡುಬಿಟ್ಟಿತು.

## ಅಧ್ಯಾಯ ೬

# ಪ್ರಜಾತಂತ್ರದ ಮುನ್ನಡೆ

ದೀನ್ ದಯಾಳ್ ಉಪಾಧ್ಯಾಯರು ಭಾರತೀಯ ಸಂಸ್ಕೃತಿಯ ತಳಹದಿಯ ಮೇಲೆಯೇ ರಾಷ್ಟ್ರೀಯ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ನೆಲೆಗೊಳಿಸಬಯಸಿದರು. ಆದುದರಿಂದ ಅವರು ಸಾಮಾನ್ಯವಾಗಿ ಸರ್ವಸಮ್ಮತವೆಂದು ಭಾವಿಸಲಾಗುವ ಪಾಶ್ಚಾತ್ಯರ ಪ್ರಜಾತಂತ್ರ ಹಾಗೂ ಪಾಶ್ಚಾತ್ಯರ ವಿಭಿನ್ನ ವಾದಗಳು – ಈ ಎಲ್ಲ ವಿಷಯಗಳನ್ನು ಕುರಿತು ದೀನ್ ದಯಾಳರು ತಮ್ಮ ಭಾರತೀಯವಾದೀ ಟೀಕೆ–ಟಿಪ್ಪಣಿ ಮಾಡುತ್ತಿದ್ದರು ಹಾಗೂ ಅವರು ಈ ಎಲ್ಲ ಪರಿಕಲ್ಪನೆಗಳಲ್ಲಿಯೂ ಭಾರತೀಯಕರಣದ ಪಕ್ಷಪಾತಿಗಳಾಗಿದ್ದರು.

ದೀನ್ ದಯಾಳ್ ಉಪಾಧ್ಯಾಯರು ಪ್ರಜಾತಂತ್ರದ ಅವಧಾರಣೆಯನ್ನು ಬಹಳ ಉತ್ಸಾಹದಿಂದ ಸ್ವೀಕರಿಸಿದರು. ಸ್ವಾತಂತ್ರ್ಯ ದೊರೆತ ತಕ್ಷಣವೇ ಪ್ರಜಾತಂತ್ರದ ಸ್ಥಾಪನೆ ಹಾಗೂ ವಯಸ್ಕರ ಮತಾಧಿಕಾರದ ಸಂವೈಧಾನಿಕ ವ್ಯವಸ್ಥೆ ಏರ್ಪಟ್ಟಿತಾದರೂ, ಭಾರತೀಯರ ದೀರ್ಘಕಾಲದ ದಾಸ್ಯ, ಅವಿದ್ಯೆ ಹಾಗೂ ಬಡತನದಿಂದಾಗಿ ಒಮ್ಮೆಲೇ ನೀಡಲ್ಪಟ್ಟ ವಯಸ್ಕ ಮತಾಧಿಕಾರದ ಬಗ್ಗೆ ಸ್ವಲ್ಪ ಮಟ್ಟಿಗೆ ಸಂದೇಹಗ್ರಸ್ತರಾಗಿದ್ದರು; ಆದರೆ ಸಹಭಾಗಿಗಳಾಗುವ ಅವಕಾಶವನ್ನು ನೀಡುವಲ್ಲಿ ಶಿಕ್ಷಣವೇ ಅತಿ ದೊಡ್ಡ ಪಾತ್ರ ವಹಿಸುತ್ತದೆ ಅಥವಾ ಮಾಧ್ಯಮವಾಗುತ್ತದೆ ಎಂಬ ನಿರ್ಣಯಕ್ಕೆ ಅತಿ ಶೀಘ್ರವಾಗಿ ಬಂದು ತಲುಪಿದರು. ಹೀಗಾಗಿ ಅವರು ಪ್ರಬಲವಾಗಿ ವಯಸ್ಕ ಮತಾಧಿಕಾರದ ಪರವಾಗಿ ನಿಂತರು. ಪ್ರಜಾತಂತ್ರವು ಭಾರತಕ್ಕೆ ಪಾಶ್ಚಾತ್ಯ ಕೊಡುಗೆಯಲ್ಲ ಎಂಬುದು ಉಪಾಧ್ಯಾಯರ ಅಭಿಪ್ರಾಯವಾಗಿತ್ತು. ಭಾರತ ರಾಜ್ಯಾಡಳಿತ ಮೂಲತಃ ಪ್ರಜಾತಂತ್ರವಾದಿಯಾಗಿದೆ. ಈ ಕುರಿತು ಅವರು ಹೀಗೆ ಬರೆದಿದ್ದಾರೆ:

“ವೈದಿಕ–ಸಭೆ ಹಾಗೂ ‘ಸಮಿತಿ’ಯ ರಚನೆಗೆ ಪ್ರಜಾತಂತ್ರವೇ ಆಧಾರವಾಗಿತ್ತು. ಮಧ್ಯಕಾಲದ ಅನೇಕ ಗಣರಾಜ್ಯಗಳು ಸಂಪೂರ್ಣವಾಗಿ ಪ್ರಜಾತಂತ್ರಾಧಾರಿತವಾಗಿದ್ದವು. ರಾಜತಂತ್ರದ ವ್ಯವಸ್ಥೆಯಲ್ಲಿಯೂ ನಾವು ರಾಜನನ್ನು ಶಿಷ್ಟಾಚಾರದ ಮಿತಿಗಳಲ್ಲಿ ಬಂಧಿಸಿದ್ದು, ಆತನು ಪ್ರಜಾನುರಾಗಿ ಮಾತ್ರವಲ್ಲದೆ ಪ್ರಜಾನುಗಾಮಿಯೂ ಆಗಿರುತ್ತಿದ್ದ ಎಂದೂ ತಿಳಿದುಬರುತ್ತದೆ. ಶಿಷ್ಟಾಚಾರದ ಈ ಮಿತಿಗಳನ್ನು ಉಲ್ಲಂಘಿಸಿರುವಂಥ ಅನೇಕ ರಾಜರ ಉದಾಹರಣೆಗಳು



ಖಂಡಿತವಾಗಿಯೂ ನಮಗೆ ಸಿಗಬಹುದು. ಆದರೆ ಅವರ ವಿರುದ್ಧ ಜನರು ನಡೆಸಿದ ಕ್ರಾಂತಿ ಹಾಗೂ ಅಂಥವರನ್ನು ಆದರ್ಶ ಶಾಸಕರನ್ನಾಗಿಸದೆ ಹೀನತೆಯ ಶ್ರೇಣಿಯಲ್ಲಿಡುವ ಪ್ರಯತ್ನಗಳಿಂದ ನಮ್ಮ ಪ್ರಜಾತಂತ್ರದ ಭಾವನೆಗೆ ಪುಷ್ಟಿ ದೊರೆಯುತ್ತದೆ”. ದೀನದಯಾಳರು ಹೀಗೆಂದಿದ್ದಾರೆ: “ವಾದ–ವಿವಾದಗಳಿಂದಲೇ ನಡೆಯುವ ರಾಜ್ಯವೇ ಪ್ರಜಾತಂತ್ರ” ಎಂದು ಕೂಡ ವ್ಯಾಖ್ಯಾನ ಮಾಡಲಾಗಿದೆ. “ವಾದೇ ವಾದೇ ಜಾಯತೇ – ತತ್ವಬೋಧ:” ಇದು ನಮ್ಮಲ್ಲಿರುವ ಪ್ರಾಚೀನ ಉಕ್ತಿ. ಆದರೆ ......... ಅದರ ಮತ್ತೊಂದು ದೃಷ್ಟಿಕೋನವನ್ನು ತಿಳಿಯಲು ಪ್ರಯತ್ನಿಸದೆ’ ತಮ್ಮ ದೃಷ್ಟಿಕೋನವನ್ನೇ ಒತ್ತಾಯಿಸುತ್ತ ಹೋದಲ್ಲಿ “ವಾದೇ ವಾದೇ ಜಾಯತೇ ಕಂಠಶೋಷಃ” ಎಂಬ ಉಕ್ತಿ ಚರಿತಾರ್ಥವಾಗುತ್ತದೆ. “ನಾನು ನಿನ್ನ ಮಾತನ್ನು ಸತ್ಯ ಎಂದು ಒಪ್ಪುವುದಿಲ್ಲ; ಆದರೆ ನಿನ್ನ ಅಭಿಪ್ರಾಯವನ್ನು ತಿಳಿಸುವ ನಿನ್ನ ಹಕ್ಕಿಗಾಗಿ ನಾನು ನನ್ನ ಸಂಪೂರ್ಣ ಶಕ್ತಿಯೊಂದಿಗೆ ಹೋರಾಡುತ್ತೇನೆ” ಎಂದು ವಾಲ್ಟೇರ್ ಹೇಳಿದ್ದಾನೆ, ಅಂದರೆ ಅವನು ಮನುಷ್ಯನ ‘ಕಂಠಶೋಷಣೆ’ಯ ಹಕ್ಕನ್ನು ಒಪ್ಪಿದ್ದನು. ಭಾರತೀಯ ಸಂಸ್ಕೃತಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ‘ವಾದ–ವಿವಾದ’ವನ್ನು ತತ್ವಬೋಧ’ದ ಸಾಧನೆಯ ರೂಪದಲ್ಲಿ ಕಾಣುತ್ತದೆ. ಪಶ್ಚಿಮದಲ್ಲಿ ಪ್ರಜಾತಂತ್ರದ ಉದಯದ ಪ್ರಕ್ರಿಯೆ ಪಶ್ಚಿಮದ ಬಂಡವಾಳವಾದದ ರೂಪದಲ್ಲಿ ವಿಕೃತಗೊಂಡುಬಿಟ್ಟಿರುವುದನ್ನು ಹಾಗೂ ಕಾರ್ಲ್‌ಮಾರ್ಕ್ಸ್‌ನ ಸರ್ವಾಧಿಕಾರತ್ವ ಅಥವಾ ಪರಮಪ್ರಭುತ್ವ ಪರವಾದ ಪ್ರತಿಕ್ರಿಯೆ ಮುಂತಾದವುಗಳನ್ನು ಕುರಿತ ವಿವೇಚನೆ ಮಾಡುತ್ತ, ಉಪಾಧ್ಯಾಯರು ಹೀಗೆ ಹೇಳಿದ್ದಾರೆ:

“ರಾಷ್ಟ್ರವಾದದ ಆನಂತರದ ..................ಮತ್ತೊಂದು ಕ್ರಾಂತಿಕಾರಿ ಕಲ್ಪನೆ ಎಂದರೆ ಅದು ಪ್ರಜಾತಂತ್ರದ್ದೇ ಆಗಿದೆ. ಅದು ಯೂರೋಪಿನ ರಾಜನೀತಿಯ ಮೇಲೆ ಮಹತ್ವಪೂರ್ಣ ಪ್ರಭಾವವನ್ನು ಬೀರಿದೆ. ಮೊದಲಿಗೆ ಎಷ್ಟು ರಾಷ್ಟ್ರಗಳಾದವೋ, ಅವುಗಳಲ್ಲಿ ರಾಜನೇ ಶಾಸನಕರ್ತನೂ ಆಗಿದ್ದನು; ಆದರೆ ರಾಜನ ನಿರಂಕುಶತೆಗೆ ವಿರುದ್ಧವಾಗಿ ಜನರಲ್ಲಿ ಕ್ರಮೇಣ ಜಾಗೃತಿ ಮೂಡಿತು. ಔದ್ಯೋಗಿಕ ಕ್ರಾಂತಿಯಿಂದಾಗಿ ಹಾಗೂ ಅಂತರಾಷ್ಟ್ರೀಯ ವ್ಯಾಪಾರದ ಪರಿಣಾಮಸ್ವರೂಪವಾಗಿ ಎಲ್ಲ ದೇಶಗಳಲ್ಲಿಯೂ ಒಂದು ವೈಶ್ಯವರ್ಗ ಉದಯಿಸಿತು. ಸ್ವಭಾವತಃ ಹಳೆಯ ಸಾಮಂತರು ಹಾಗೂ ರಾಜರೊಡನೆ ಇವರಿಗೆ ಸಂಘರ್ಷವುಂಟಾಯಿತು. ಈ ಸಂಘರ್ಷವೇ ‘ಪ್ರಜಾತಂತ್ರ’ದ ತಾತ್ವಿಕ ಸ್ವರೂಪವನ್ನು ಪಡೆದುಕೊಂಡಿತು. ಈ ವಿಚಾರಧಾರೆಯ ಮೂಲವನ್ನು ಗ್ರೀಸ್‌ನ ನಗರ ರಾಜ್ಯಗಳಲ್ಲಿ ಹುಡುಕಲಾಯಿತು. ಪ್ರತಿಯೊಬ್ಬ ನಾಗರಿಕನ ಸಮಾನತೆ, ಬಂಧುತ್ವ ಹಾಗೂ ಸ್ವಾತಂತ್ರ್ಯದ ಆದರ್ಶಗಳನ್ನು ಆಧಾರವಾಗಿರಿಸಿಕೊಂಡು ಜನಸಾಮಾನ್ಯರನ್ನು ಈ ತತ್ವದೆಡೆಗೆ ಆಕರ್ಷಿಸಲಾಯಿತು. ಫ್ರಾನ್ಸ್‌ನಲ್ಲಿ ಅತಿ ದೊಡ್ಡ ರಾಜ್ಯಕ್ರಾಂತಿಯುಂಟಾಯಿತು. ಇಂಗ್ಲೆಂಡ್‌ನಲ್ಲಿಯೂ ಆಗಿಂದಾಗ್ಗೆ

ಅಂದೋಳನಗಳಾದುವು. ಪ್ರಜಾತಂತ್ರ ಜನ–ಮನವನ್ನು ಸೆಳೆಯಿತು. ರಾಜವಂಶಗಳನ್ನು ಕೊನೆಗೊಳಿಸಲಾಯಿತು ಇಲ್ಲವೇ ಅವರ ಅಧಿಕಾರವನ್ನು ಸೀಮಿತಗೊಳಿಸಿ ವೈಧಾನಿಕ ರಾಜ್ಯ ಪದ್ಧತಿಗೆ ತಳಹದಿಯನ್ನು ಹಾಕಲಾಯಿತು. ಇಂದು ಪ್ರಜಾತಂತ್ರ ಯೂರೋಪಿನಲ್ಲಿ ಮಾನ್ಯತೆ ಪಡೆದ ಪದ್ಧತಿಯಾಗಿದೆ. ಪ್ರಜಾತಂತ್ರದ ಅವಹೇಳನೆ ಮಾಡಿದವರೂ ಪ್ರಜಾತಂತ್ರದ ಬಗ್ಗೆ ನಿಷ್ಠೆಯನ್ನು ವ್ಯಕ್ತಪಡಿಸಲು ಹಿಂಜರಿಯುತ್ತಿರಲಿಲ್ಲ. ಹಿಟ್ಲರ್, ಮುಸೋಲಿನಿ ಹಾಗೂ ಸ್ಟ್ಯಾಲಿನ್‌ನಂತಹ ಸರ್ವಾಧಿಕಾರಿಗಳೂ ಪ್ರಜಾತಂತ್ರವನ್ನು ಅಲ್ಲಗಳೆಯಲಿಲ್ಲ". ಪಶ್ಚಿಮದಲ್ಲಿ ಒಂದು ಜನಪ್ರಿಯ, ಆದರ್ಶವಾದಿ ಅವಧಾರಣೆಯ ರೂಪದಲ್ಲಿ ಪ್ರಜಾತಂತ್ರದ ವಿಕಾಸವುಂಟಾಯಿತು. ಆದರೆ ನವೋದಿತ ವೈಶ್ಯವರ್ಗ ಹಾಗೂ ಹೊಸ ಹೊಸ ಸಂಶೋಧನೆಗಳಿಂದ ಉಂಟಾದ ಔದ್ಯೋಗಿಕ ಕ್ರಾಂತಿ ಅದನ್ನು ಬಂಡವಾಳಶಾಹಿ ಶೋಷಣೆಯ ಶಸ್ತ್ರವನ್ನಾಗಿಸಿಬಿಟ್ಟಿತು. ಹೀಗಾಗಿ, ಉಪಾಧ್ಯಾಯರು ಮುಂದೆ ಹೀಗೆ ವಿವೇಚನೆ ಮಾಡಿದ್ದಾರೆ;

"ಪ್ರಜಾತಂತ್ರವು ಪ್ರತಿಯೊಬ್ಬ ನಾಗರಿಕನಿಗೂ ಮತದಾನದ ಹಕ್ಕನ್ನು ನೀಡಿದೆ; ಆದರೆ ಯಾರು ಪ್ರಜಾತಂತ್ರದ ನೇತೃತ್ವ ವಹಿಸಿದರೋ, ಅವರ ಕೈಯಲ್ಲಿಯೇ ಅಧಿಕಾರ–ಶಕ್ತಿ ಇದ್ದಿತು. ಔದ್ಯೋಗಿಕ ಕ್ರಾಂತಿಯ ಪರಿಣಾಮ ಸ್ವರೂಪವಾಗಿ ಉತ್ಪಾದನೆಯ ಹೊಸ ಪದ್ಧತಿ ವಿಕಾಸಗೊಂಡಿತ್ತು. ಸ್ವತಂತ್ರವಾಗಿದ್ದು ಮನೆಯಲ್ಲಿದ್ದುಕೊಂಡು ದುಡಿದು ಜೀವನ ಸಾಗಿಸುತ್ತಿದ್ದ ಶ್ರಮಿಕನು ಈಗ ಕಾರ್ಖಾನೆಗಳ ಒಡೆಯರ ನೌಕರನಾಗಿ ದುಡಿಯತೊಡಗಿದ್ದನು. ತಮ್ಮ ಹಳ್ಳಿಗಳನ್ನು ತೊರೆದು ನಗರಗಳಿಗೆ ಬಂದು ವಾಸಮಾಡುತ್ತಿದ್ದರು. ಅಲ್ಲಿ ಅವರು ವಾಸಿಸುವ ಸ್ಥಳಗಳ ವ್ಯವಸ್ಥೆ ತುಂಬ ಅಪೂರ್ಣವಾಗಿದ್ದಿತು. ಕಾರ್ಖಾನೆಗಳಲ್ಲಿನ ಕೆಲಸಗಳು ನಡೆಯುತ್ತಿದ್ದ ರೀತಿಯನ್ನು ನೋಡಿದರೆ, ಮಾಡುವ ಕೆಲಸಗಳಲ್ಲಿ ಯಾವುದೇ ನಿಯಮಗಳಿರಲಿಲ್ಲ. ಕಾರ್ಮಿಕರು ಸಂಘಟಿತರಾಗಿರಲಿಲ್ಲ ಹಾಗೂ ಬಹಳ ದುರ್ಬಲರಾಗಿದ್ದರು. ಅವರು ಶೋಷಣೆ, ಅನ್ಯಾಯ ಹಾಗೂ ಹಿಂಸೆಗೆ ಬಲಿಪಶುಗಳಾಗಿ ಬಿಟ್ಟಿದ್ದರು. ರಾಜ್ಯದ ಆಡಳಿತದ ಶಕ್ತಿ ಯಾರ ಕೈಯಲ್ಲಿತ್ತೋ ಅವರೂ ಅವರನ್ನು ಶೋಷಿಸುತ್ತಿದ್ದ ಅದೇ ವರ್ಗಕ್ಕೆ ಸೇರಿದವರಾಗಿದ್ದರು. ಹೀಗಾಗಿ, ಆಡಳಿತ ವ್ಯವಸ್ಥೆಯಿಂದಲೂ ಯಾವುದೇ ಭರವಸೆ ಇರಲಿಲ್ಲ.

"ಅನ್ಯಾಯದಿಂದ ಕೂಡಿದ ಈ ವ್ಯವಸ್ಥೆಯ ವಿರುದ್ಧವಾಗಿ ಕ್ರಾಂತಿಯನ್ನು ಎಸೆಗುವ ಹಾಗೂ ಪರಿಸ್ಥಿತಿಯನ್ನು ಸುಧಾರಿಸುವ ಭಾವನೆಹೊತ್ತ ಅನೇಕ ಮಹಾಪುರುಷರು ಮುಂದೆ ಬಂದರು. ಅವರು ತಮ್ಮನ್ನು ತಾವು ಸಮಾಜವಾದಿಗಳೆಂದು ಹೇಳಿಕೊಂಡರು. ಕಾರ್ಲ್‌ಮಾರ್ಕ್ಸ್ ಸಹ ಈ ಸಮಾಜವಾದಿಗಳಲ್ಲೊಬ್ಬರಾಗಿದ್ದರು. ಅವರು ಪ್ರಚಲಿತ ಅನ್ಯಾಯವನ್ನು ವಿರೋಧಿಸುವ ಪ್ರಯತ್ನದಲ್ಲಿ ಅರ್ಥವ್ಯವಸ್ಥೆಯ ಹಾಗೂ ಇತಿಹಾಸದ ಒಂದು ವಿಶ್ಲೇಷಣೆಯನ್ನು ಪ್ರಸ್ತುತಪಡಿಸಿದರು. ಕಾರ್ಲಮಾರ್ಕ್ಸ್‌ರ



ವಿವೇಚನೆಯ ಅನಂತರ ಸಮಾಜವಾದ ಒಂದು ವೈಜ್ಞಾನಿಕ ಆಧಾರದ ಮೇಲೆ ನೆಲೆನಿಂತಿತು. ಅನಂತರದ ಸಮಾಜವಾದಿಗಳು ಮಾರ್ಕ್ಸ್ ಅವರನ್ನು ಒಪ್ಪಿದರೋ ಬಿಟ್ಟರೋ, ಆದರೆ ಅವರ ಚಿಂತನೆಯ ಮೇಲೆ ಅವರು ಪ್ರಭಾವ ಬೀರಿದ್ದಾರೆ"

ದೀನ್ ದಯಾಳ್ ಉಪಾಧ್ಯಾಯರು ಪ್ರಜಾತಂತ್ರದ ತಾತ್ತ್ವಿಕ ಅವಧಾರಣೆಯನ್ನು ಒಪ್ಪಿದರೂ, ಪಾಶ್ಚಾತ್ಯರ ನಿರಂಕುಶ ರಾಜಶಾಹಿ ಪ್ರತಿಕ್ರಿಯೆಯಿಂದ ಮೂಡಿಬಂದ ಬಂಡವಾಳಶಾಹಿ ಹಾಗೂ ಇದರ ಪ್ರತಿಕ್ರಿಯೆಯಿಂದ ಪೋಷಿತವಾದ ಹಾಗೂ ಸರ್ವಾಧಿಕಾರವಾದಿ ರಾಜ್ಯವಾದದ ಪ್ರತಿಕ್ರಿಯೆಯನ್ನು ಉಂಟುಮಾಡುವ ಪ್ರಜಾತಂತ್ರವನ್ನು ಭಾರತೀಯವಾಗಿಸಬಯಸುತ್ತಾರೆ. ಪ್ರಜಾತಂತ್ರದ ಭಾರತೀಯಕರಣಕ್ಕೆ ಅವರು ಕರೆ ನೀಡಿದರು.

**(ಕ) ಪ್ರಜಾತಂತ್ರದ ಭಾರತೀಯಕರಣ**

ಪಶ್ಚಿಮವು ಪ್ರಜಾತಂತ್ರಕ್ಕೆ ಚುನಾವಣೆಯ ಒಂದು ಮಹತ್ವಪೂರ್ಣ ಪ್ರಕ್ರಿಯೆಯನ್ನು ನೀಡಿದೆ. ಸಂವಿಧಾನ ಕಾರ್ಯಾಂಗ, ಆಡಳಿತಾಂಗ ಹಾಗೂ ನ್ಯಾಯಾಂಗಗಳನ್ನು ನಿರ್ಮಿಸಿದೆ; ಆದರೆ ಇದು ಕೇವಲ ಪ್ರಜಾತಂತ್ರದ ಔಪಚಾರಿಕ ಸ್ವರೂಪ ಮಾತ್ರವಾಗಿದೆ. ಪ್ರಜಾತಂತ್ರದ ನಿಜವಾದ ಆತ್ಮ ಅದರ ಸ್ವರೂಪದಲ್ಲಿ ಇರದೆ ಜನರ ಆಕಾಂಕ್ಷೆಯನ್ನು ಸರಿಯಾಗಿ ಪ್ರತಿಬಿಂಬಿಸುವ ಭಾವನೆಯಲ್ಲಿದೆ. "ಪ್ರಜಾತಂತ್ರವು ಯಾವುದೇ ಹೊರಗಿನ ಚೌಕಟ್ಟನ್ನು ಆಶ್ರಯಿಸಿರುವುದಿಲ್ಲ. ವಯಸ್ಕರ ಮತದಾನದ ಹಕ್ಕು ಹಾಗೂ ಚುನಾವಣಾ ಪದ್ಧತಿ ಪ್ರಜಾತಂತ್ರದ ಬಹುದೊಡ್ಡ ಅಂಗಗಳಾಗಿವೆ; ಆದರೆ ಕೇವಲ ಇವುಗಳಿಂದಲೇ ಪ್ರಜಾತಂತ್ರದ ಸ್ಥಾಪನೆಯಾಗುವುದಿಲ್ಲ. ರಷ್ಯಾದಲ್ಲಿ ಎರಡೂ ವ್ಯವಸ್ಥೆಗಳು ಅಸ್ತಿತ್ವದಲ್ಲಿವೆ; ಆದರೆ ರಾಜನೀತಿಯ ಪಂಡಿತರು ಅದನ್ನು ಪ್ರಜಾತಂತ್ರವೆಂದು ಒಪ್ಪಿಕೊಳ್ಳಲು ತಯಾರಾಗಿಲ್ಲ. ಮತದಾನದ ಹಕ್ಕು ಹಾಗೂ ಚುನಾವಣೆಯ ಜೊತೆಗೆ ಒಂದು ಭಾವನೆಯು ಸಹ ಪ್ರಜಾತಂತ್ರಕ್ಕೆ ಅಗತ್ಯವಾಗಿದೆ.................... ಕೇವಲ ಬಹುಮತದ ಆಡಳಿತವು ಪ್ರಜಾತಂತ್ರವಾಗಲಾರದು ...................... ಇಂತಹ ತಂತ್ರದಲ್ಲಿ ಜನತೆಯ ಒಂದು ವರ್ಗ ಸಹ ಹೇಗಿರುತ್ತದೆಂದರೆ ಅದರ ಧ್ವನಿ ಎಷ್ಟೇ ಸರಿಯಾಗಿದ್ದರೂ ಅದನ್ನು ಹೊಸಕಿ ಹಾಕಲಾಗುವುದು. ಜನತಂತ್ರದ ಈ ಸ್ವರೂಪ 'ಸರ್ವಜನ ಸುಖಾಯ', 'ಸರ್ವಜನಹಿತಾಯ' ಆಗಲಾರದು............. ಹೀಗಾಗಿ ಭಾರತೀಯ ಜನತಾಂತ್ರಿಕ ಕಲ್ಪನೆಯಲ್ಲಿ ಚುನಾವಣೆ, ಬಹುಮತ, ಅಲ್ಪಮತ ಮುಂತಾದ ಬಾಹ್ಯವ್ಯವಸ್ಥೆಗಳ ಬದಲಿಗೆ ಎಲ್ಲ 'ಮತ'ಗಳ ಸಾಮಂಜಸ್ಯ ಹಾಗೂ ಸಮನ್ವಯಕ್ಕೆ ಹೆಚ್ಚಿನ ಒತ್ತುನೀಡಲಾಗುತ್ತದೆ. ವಿರುದ್ಧ ಅಭಿಪ್ರಾಯ ಹೊಂದಿದ ಓರ್ವ ವ್ಯಕ್ತಿಯಿದ್ದರೂ ನಾವೂ ಅವನ ಅಭಿಪ್ರಾಯವನ್ನು ಗೌರವಿಸುವುದಲ್ಲದೆ, ಅದಕ್ಕೆ ಅನುಗುಣವಾಗಿ ನಮ್ಮ ಕಾರ್ಯಪದ್ಧತಿಯಲ್ಲಿ ಅದನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಇಂಗ್ಲೆಂಡಿನಲ್ಲಿ

ಇಂದಿನ ಪ್ರಜಾತಂತ್ರ ಪದ್ಧತಿಯು ಉಳಿದೆಲ್ಲವುಗಳಿಗಿಂತಲೂ ಹೆಚ್ಚಿನ ಯಶಸ್ಸನ್ನು ಗಳಿಸಿದೆ. ವಿರೋಧ ಪಕ್ಷದ ನಾಯಕನಿಗೆ ಸರ್ಕಾರದ ಖಜಾನೆಯಿಂದ ವೇತನ ನೀಡಲಾಗುತ್ತದೆ. ಆಟವಾಡಲು ಎರಡು ತಂಡಗಳು ಹೇಗೆ ಅಗತ್ಯವೋ ಹಾಗೆಯೇ ಸಂಸತ್ತಿನಲ್ಲಿ ಎರಡು ಪಕ್ಷಗಳು ಇರುವುದು ಅಗತ್ಯವೆಂದು ಭಾವಿಸಲಾಗಿದೆ. ಆಡಳಿತದ ನೀತಿಗಳ ಮೇಲೆ ವಿರೋಧ ಪಕ್ಷ ಸತತವಾಗಿ ಬೆಳಕು ಚೆಲ್ಲುತ್ತ ಇರುತ್ತದೆ.

**(ಖ) ಜನಾಭಿಪ್ರಾಯ ಪರಿಷ್ಕಾರ ಹಾಗೂ ಸಾಮಾನ್ಯ ಇಚ್ಛೆ**

ಜನಾಭಿಪ್ರಾಯದ ತಾತ್ಕಾಲಿಕ ನಿರ್ಣಯವು, ಬಹುಮತದೊಂದಿಗೆ ಇದ್ದರೂ ಕೇವಲ ಬಹುಮತದ ಆಡಳಿತ ಹಾಗೂ ಅಲ್ಪಮತಗಳ ವೈಚಾರಿಕ ಸ್ವಾತಂತ್ರ್ಯಗಳಿಂದ ಜನಾಭಿಪ್ರಾಯ ತನ್ನನ್ನು ಸರಿಯಾಗಿ ವ್ಯಕ್ತಪಡಿಸಲಾರದು ಎಂಬುದು ಉಪಾಧ್ಯಾಯರ ಅಭಿಪ್ರಾಯವಾಗಿತ್ತು. ಇದರಿಂದ ಪಕ್ಷಗಳ ನಡುವೆ ಕಟುತ್ವ ಹಾಗೂ ಸಮಾಜದಲ್ಲಿ ಕಲಹ ಉಂಟಾಗುತ್ತದೆ, ಹೀಗಾಗಿ ಪ್ರಜಾತಂತ್ರ ಬಹುಮತದ ಆಡಳಿತವೂ ಅಲ್ಲ, ಅಲ್ಪಮತದ ಆಡಳಿತವೂ ಅಲ್ಲ; ಅದು ಜನತೆಯ 'ಸಾಮಾನ್ಯ ಇಚ್ಛೆ'ಯ ಆಡಳಿತವಾಗಿರುತ್ತದೆ. ಜನತೆ ತನ್ನ ಸಾಮಾನ್ಯ ಇಚ್ಛೆಯನ್ನು ಔಪಚಾರಿಕವಾಗಿ ವ್ಯಕ್ತಪಡಿಸಲಾರದು. ಸಾಮಾನ್ಯ ಇಚ್ಛೆಯ ವಿಷಯದಲ್ಲಿ ಸಾಮಾಜಿಕ ಸಂಭ್ರಮವಿದ್ದಲ್ಲಿ, ಆಗ 'ಪ್ರಜಾತಂತ್ರ' ಸಂದಣಿತಂತ್ರವಾಗಿ ಬದಲಾಗುತ್ತದೆ. ವಾಚಾಳಿಗಳು ಅದನ್ನು ದುರುಪಯೋಗಪಡಿಸಿಕೊಳ್ಳಬಹುದಾಗಿದೆ. ಉಪಾಧ್ಯಾಯರು ಶೇಕ್ಸ್‌ಪಿಯರ್ ನಾಟಕ 'ಜೂಲಿಯಸ್ ಸೀಜರ್' ನಾಟಕದ ಉದಾಹರಣೆಗಳನ್ನು ನೀಡುತ್ತಾ ಹೇಳುತ್ತಾರೆ: "ಬ್ರೂಟಸ್‌ನ ಜೊತೆಗಿದ್ದು ಜೂಲಿಯಸ್ ಸೀಜರ್ ವಧೆಯಾದಾಗ ಹರ್ಷವನ್ನಾಚರಿಸಿದ ಜನತೆಯೇ ಸ್ವಲ್ಪ ಸಮಯದ ಅನಂತರ ಅಂಟೋನಿಯೋನ ಭಾಷಣವನ್ನು ಕೇಳಿ ಬ್ರೂಟಸ್‌ನ ವಧೆಗೆ ಸಜ್ಜಾಗುತ್ತದೆ. ಮೊಬೊಕ್ರಸಿ ಹಗೂ ಅಟೋಕ್ರಸಿಗಳ ಅಡಕತ್ತರಿಯ ನಡುವೆ ಡೆಮಾಕ್ರಸಿಯನ್ನು ಜೀವಂತವಾಗಿ ಉಳಿಸಿಕೊಂಡಿರುವುದು ಒಂದು ಕಠಿಣ ಸಮಸ್ಯೆಯಾಗಿದೆ".

ಆದುದರಿಂದ ಜನಚೇತನದ ಸಂತುಲಿತ ವಿಕಾಸ ಅಗತ್ಯವಾಗುತ್ತದೆ. ಇದನ್ನೇ ಉಪಾಧ್ಯಾಯರು ಪ್ರಾಚೀನ ಭಾರತದ "ಜನಾಭಿಪ್ರಾಯ-ಪರಿಷ್ಕರಣ'ದ ಪದ್ಧತಿ ಎಂದು ಹೆಸರಿಸಿದ್ದಾರೆ. ಜನಾಭಿಪ್ರಾಯ-ಪರಿಷ್ಕರಣ ಒಂದು ಸಾಂಸ್ಕೃತಿಕ ಪ್ರಕ್ರಿಯೆಯಾಗಿದೆ. ಸಾಮ್ಯವಾದಿ ಸರ್ವಾಧಿಕಾರಿ ದೇಶಗಳಲ್ಲಿ ಅಧಿಕಾರದಿಂದ 'ಬ್ರೇನ್‌ವಾಶಿಂಗ್' ಮಾಡುವ ಅಥವಾ 'ಅಸಮ್ಮತಿ' ಸೂಚಿಸಿದವರನ್ನು ನಾಗರಿಕ ಅಧಿಕಾರಗಳಿಂದ ವಂಚಿಸುವ ಪ್ರಕ್ರಿಯೆ ಅಮಾನವೀಯವಾಗಿದೆ; ಅದೇ ಮೇಲೆ ಹೇಳಲಾದ ಪ್ರಜಾತಂತ್ರದಲ್ಲಿ ಈ ವಿಷಯದಲ್ಲಿ ಅರಾಜಕತೆಯಾದರೂ ಇರುತ್ತದೆ ಅಥವಾ ಸರ್ಕಾರಿ ಪ್ರಜಾತಂತ್ರವನ್ನು ಇದಕ್ಕೆ ಮಾಧ್ಯಮವನ್ನಾಗಿಸಲಾಗಿರುತ್ತದೆ. ದೀನ್ ದಯಾಳರ ಪ್ರಕಾರ : "ರಾಜ್ಯದ ಕೈಯಿಂದ ಪ್ರಜಾತಂತ್ರ ನಿರ್ಮಾಣದ ಸಾಧನವನ್ನು



ಕಸಿದುಕೊಂಡು ಭಾರತವು ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಂಡಿದೆ. 'ಜನಾಭಿಪ್ರಾಯ-ಪರಿಷ್ಕರಣ'ದ ಕಾರ್ಯವು ವೀತರಾಗರೂ, ದ್ವಂದ್ವಾತೀತರೂ ಆದ ಸನ್ಯಾಸಿಗಳದ್ದಾಗಿದೆ. ರಾಜ್ಯದ ಕಾರ್ಯ ಜನಾಭಿಪ್ರಾಯಕ್ಕೆ ಅನುಗುಣವಾಗಿ ನಡೆಯುವುದೇ ಆಗಿದೆ. ಸನ್ಯಾಸಿಗಳು ಸದಾ ಧರ್ಮದ ತತ್ವಗಳಿಗನುಗುಣವಾಗಿ ಜನತೆಯ ಐಹಿಕ ಹಾಗೂ ಆಧ್ಯಾತ್ಮಿಕ ಉತ್ಕರ್ಷದ ಕಾಮನೆಯ ದೃಷ್ಟಿಯಿಂದ ತಮ್ಮ ಮಾತು ಹಾಗೂ ಸರಳ ಆಚರಣೆಗಳಿಂದ ಜನಜೀವನಕ್ಕೆ ಸಂಸ್ಕಾರವನ್ನುಂಟುಮಾಡುತ್ತಾರೆ. ಅವರಿಗೆ ಧರ್ಮದ ಇತಿ-ಮಿತಿಗಳ ಅರಿವನ್ನು ಉಂಟುಮಾಡುತ್ತಾರೆ. ಅವರಲ್ಲಿ ಯಾವುದೇ ಲೋಭ ಹಾಗೂ ಮೋಹ ಇಲ್ಲದಿರುವುದರಿಂದ ಸತ್ಯವನ್ನು ಸಹಜವಾಗಿಯೇ ಉಚ್ಚರಿಸುತ್ತಾರೆ. ಈ ಮೂಲ್ಯಗಳನ್ನು ಕೂಡಿಸಿಟ್ಟ ಅನಂತರ, ಜನಾಭಿಪ್ರಾಯದ ನದಿ ಎಂದಿಗೂ ತನ್ನ ದಡವನ್ನು ಮೀರಿ ಸಂಕಟಕ್ಕೆ ಕಾರಣವಾಗುವುದಿಲ್ಲ".

ಪ್ರಜಾತಂತ್ರಾತ್ಮಕ ಜನಚೇತನದ ನಿರ್ಮಾಣಕ್ಕಾಗಿ ಪಶ್ಚಿಮದಲ್ಲಿ ಕೆಲವರು 'ವಿ ಎಜುಕೇಟ್ ಅವರ್ ಮಾಸ್ಟರ್ಸ್' ಎಂಬ ಆಂದೋಳನವನ್ನು ನಡೆಸಿದ್ದಂತೆ, ಉಪಾಧ್ಯಾಯರೂ 'ಜನಾಭಿಪ್ರಾಯ ಪರಿಷ್ಕರಣ'ದ ವಿಚಾರವನ್ನು ಮಂಡಿಸಿದ್ದರು. ಸಾಫಲ್ಯಕ್ಕಾಗಿ ಯಾವ ಮನೋಭಾವಗಳ ಬಗ್ಗೆ ಉಪಾಧ್ಯಾಯರು ತಮ್ಮ ಚಿಂತನೆಯನ್ನು ಮಂಡಿಸಿದ್ದರೋ, ಅವುಗಳಲ್ಲಿ ಮುಖ್ಯವಾದವು ಹೀಗಿವೆ:

೧. ಸಹಿಷ್ಣುತೆ ಹಾಗೂ ಸಂಯಮ
೨. ಅನಾಸಕ್ತ ಭಾವ ಹಾಗೂ
೩. ಕಾನೂನಿನ ಬಗ್ಗೆ ಗೌರವದ ಭಾವನೆ

**೧. ಸಹಿಷ್ಣುತೆ ಹಾಗೂ ಸಂಯಮ :** "ಜನತಂತ್ರದ ಭಾಗೀರಥಿಯ ಆದ್ಯ ಸ್ರೋತ ಸಹಿಷ್ಣುತೆಯಾಗಿದೆ. ಇದು ಇಲ್ಲದೆ ಇದ್ದಲ್ಲಿ ಚುನಾವಣೆ ಹಾಗೂ ಸಂಸತ್ತು ಮುಂತಾದ ಪ್ರಜಾತಂತ್ರ ವ್ಯವಸ್ಥೆಗಳು ಪ್ರಾಣಹೀನ ಶರೀರದಂತಾಗಿ ಬಿಡುತ್ತವೆ.............. ಭಾರತೀಯ ಸಂಸ್ಕೃತಿಯ ಆಧಾರವೇ ಸಹಿಷ್ಣುತೆಯಾಗಿದೆ. ಇದರಿಂದಲೇ ಜನತಾ ಜನಾರ್ದನನ ಆತ್ಮದ ನೆಲೆಯನ್ನು ಗುರುತಿಸುವ ಶಕ್ತಿ ದೊರೆಯುತ್ತದೆ". ಜೀವನದಲ್ಲಿ ಸಹಿಷ್ಣುತೆಯನ್ನು ಸಿದ್ಧಿಸಿಕೊಳ್ಳಲು ಸಂಯಮ ಅಗತ್ಯವಾಗುತ್ತದೆ. ಉಪಾಧ್ಯಾಯರು ಹೀಗೆನ್ನುತ್ತಾರೆ; "ಇತಿಮಿತಿಗಳ ಚೌಕಟ್ಟಿನಲ್ಲಿ ಮಾಡಿದ ಕ್ರಿಯೆಯನ್ನೇ ಸಂಯಮ ಎನ್ನಲಾಗಿದೆ. ಹಸಿವಿನಿಂದ ಸಾಯುವುದು ಸಂಯಮವಲ್ಲ; ಶರೀರದ ಆವಶ್ಯಕತೆಗೆ ಅನುಗುಣವಾಗಿ ಗುಣ ಹಾಗೂ ಪ್ರಮಾಣದಲ್ಲಿ ಊಟಮಾಡುವುದು ಸಂಯಮವೆನ್ನಿಸಿಕೊಳ್ಳುತ್ತದೆ. ಮಾತನಾಡದೇ ಇರುವುದು, ಅತ್ಯಾಚಾರಗಳ ವಿರುದ್ಧ ಧ್ವನಿ ಎತ್ತದಿರುವುದು ಅಥವಾ ಯಾರಿಗೂ ಒಳ್ಳೆಯ ಸಲಹೆ ನೀಡದಿರುವುದು ಸಂಯಮವಲ್ಲ. ಸಂಯಮ ಪುರುಷ ವಾಚಾಳಿಯ ಹಾಗೂ ಮೂಗನ ನಡುವೆ

ಬರುತ್ತಾನೆ, ಅವನು ಅಗತ್ಯಬಿದ್ದಾಗ ಮಾತನಾಡುತ್ತಾನೆ ಹಾಗೂ ಖಂಡಿತವಾಗಿಯೂ ಮಾತನಾಡುತ್ತಾನೆ".

"ಅಸಂಯಮ ಹಾಗೂ ಬೇಜವಾಬ್ದಾರಿ ಜೊತೆ ಜೊತೆಯಾಗಿ ಸಾಗುತ್ತವೆ. ನಾಗರಿಕನು ತನ್ನ ಜವಾಬ್ದಾರಿಯನ್ನು ಅರಿತು ಅದರ ನಿರ್ವಹಣೆಗಾಗಿ ಕ್ರಿಯಾಶೀಲನಾಗುವುದರಲ್ಲಿಯೇ ಪ್ರಜಾರಾಜ್ಯದ ಸಾಫಲ್ಯವಡಗಿದೆ. ರಾಜ್ಯ ನಿರ್ವಹಣೆಯ ಜವಬ್ದಾರಿ ಸಮಾಜದ ಮೇಲೆ ಇದೆ ಎಂದು ಅದು ಎಷ್ಟು ಚೆನ್ನಾಗಿ ಅರ್ಥಮಾಡಿಕೊಂಡಿರುತ್ತದೆಯೋ, ಅಷ್ಟರಮಟ್ಟಿಗೆ ಅದು ಸಂಯಮಶೀಲವಾಗುತ್ತ ಹೋಗುತ್ತದೆ. ಇಂದಿಲ್ಲದಿದ್ದರೆ ನಾಳೆಯಾದರೂ ಸರಿ, ರಾಜ್ಯಸಿಂಹಾಸನದ ಭಾರ ನನ್ನ ಹೆಗಲಮೇಲೆ ಬೀಳಬಹುದು ಎಂದು ಯಾವ ಪಕ್ಷಕ್ಕೆ ಅನ್ನಿಸುವುದೋ ಅದು ಎಂದಿಗೂ ಭರವಸೆ ಹಾಗೂ ವ್ಯವಹಾರಗಳ ವಿಷಯದಲ್ಲಿ ಬೇಜವಾಬ್ದಾರಿಯಿಂದ ನಡೆದುಕೊಳ್ಳುವುದಿಲ್ಲ ಹಾಗೂ ಅಸಂಯಮಿಯಾಗುವುದಿಲ್ಲ. ಅಷ್ಟೇ ಅಲ್ಲ, ರಾಜ್ಯ ನಿರ್ವಹಣೆಯ ಜವಾಬ್ದಾರಿ ಸದಾ ಜನತೆಯ ಮೇಲೆಯೇ ಇರುತ್ತದೆ". ಹೀಗಾಗಿ, ಜನತೆಯನ್ನು ಜವಾಬ್ದಾರನ್ನಾಗಿಸುವುದು ಹಾಗೂ ಸಂಯಮಶೀಲರನ್ನಾಗಿಸುವುದು ಪ್ರಜಾತಂತ್ರದ ಸಾಫಲ್ಯಕ್ಕೆ ಅದರ ಔಪಚಾರಿಕ ವ್ಯವಸ್ಥೆಗಳಿಗಿಂತಲೂ ಹೆಚ್ಚು ಅಗತ್ಯವಿರುತ್ತದೆ.

(೨) **ಅನಾಸಕ್ತ ಭಾವ :** ಅಧಿಕಾರಲೋಲುಪತೆ 'ಜನತೆಯ ಸಾಮಾನ್ಯ ಇಚ್ಛೆ'ಯ ಅವಹೇಳನೆಗೆ ಜನರನ್ನು ಹಾಗೂ ಜನನಾಯಕರನ್ನು ಪ್ರೇರೇಪಿಸುತ್ತದೆ. ಹೀಗಾಗಿ, ಸಮಾಜದ ವಾತಾವರಣ ಹಾಗೂ ಶಿಕ್ಷಣ ಯಾವ ರೀತಿ ಇರಬೇಕೆಂದರೆ, ಅದು ವ್ಯಕ್ತಿ 'ಲೋಲುಪಭಾವ'ಕ್ಕೆ ಎಡೆಗೊಡದೆ ಅನಾಸಕ್ತ ಭಾವದಿಂದ 'ಪ್ರಜಾರಾಜ್ಯ'ದ ನಿರ್ವಹಣೆಯಲ್ಲಿ ಸಹಭಾಗಿಯಾಗುವಂತೆ ಮಾಡಬೇಕು. ಚುನಾವಣಾ ಪ್ರಕ್ರಿಯೆಯನ್ನು ಆಟಗಾರನ ಕ್ರೀಡಾ ಭಾವನೆಯೊಂದಿಗೆ ಸಂಯೋಜನೆಗೊಳಿಸುವುದರಿಂದ ಸಮಾಜದಲ್ಲಿ ಅನಾಸಕ್ತ ಭಾವದ ಆನಂದ ವಿಸ್ತರಿಸಿಕೊಳ್ಳುವಂತೆಯೇ ಪರಸ್ಪರ ವೈಮನಸ್ಯ ಹಾಗೂ ಕಟುತ್ವಕ್ಕೆ ಲೋಲುಪತೆ ಕಾರಣವಾಗುತ್ತದೆ. ರಾಮನ ಉದಾಹರಣೆ ನೀಡುತ್ತ, ಉಪಾಧ್ಯಾಯರು ಹೀಗೆ ಪ್ರತಿಪಾದನೆ ಮಾಡುತ್ತಾರೆ:

"ಜನತಂತ್ರದಲ್ಲಿ ಅಧಿಕಾರದ ಬಗ್ಗೆ ಉನ್ನತಮಟ್ಟದ ನಿರಾಸಕ್ತಿಯ ಅವಶ್ಯಕತೆಯಿದೆ. ಭಗವಾನ್ ರಾಮನ ಹಾಗೆಯೇ ಜನತಂತ್ರದಲ್ಲಿ ರಾಜನೀತಿಜ್ಞನು ಆಹ್ವಾನ ದೊರೆತೊಡನೆಯೇ ಅಧಿಕಾರವನ್ನು ಸ್ವೀಕರಿಸಲು ಹಾಗೂ ನಷ್ಟದ ಚಿಂತೆಗೀಡಾಗದೆ ಅದನ್ನು ತ್ಯಾಗ ಮಾಡಲು ಸದಾ ಸಿದ್ಧನಾಗಿರಬೇಕು. ಓರ್ವ ಆಟಗಾರನ ಹಾಗೆ ಅವನು ವಿಜಯವನ್ನು ಸಾಧಿಸುವ ಸಲುವಾಗಿ ಸಂಘರ್ಷ ಮಾಡಬೇಕು. ಅವನು ಪರಾಜಯವನ್ನು ಗೌರವದೊಂದಿಗೆ ಸ್ವೀಕರಿಸದಿದ್ದಲ್ಲಿ ಹಾಗೂ ತನ್ನ ಪ್ರತಿಸ್ಪರ್ಧಿಗೆ ಅವನ ವಿಜಯದ ಸಲುವಾಗಿ ಶುಭಾಶಯ ನೀಡಲಾಗದಿದ್ದಲ್ಲಿ



ಅವನು ಜನತಂತ್ರವಾದಿಯಲ್ಲ. ಈ ಭಾವನೆಯಿಂದಾಗಿಯೇ ಚರ್ಚಿಲ್ ಅಟ್ಲಿಗೆ ಹಾಗೂ ಅಟ್ಲಿಯು ಏಡೆನ್‌ಗೆ ಅಧಿಕಾರವನ್ನು ಒಪ್ಪಿಸಿದರು".

ವ್ಯಕ್ತಿಯಲ್ಲಿ ಉತ್ತಮ ಸಂಸ್ಕಾರಗಳಿಂದಲೇ ಈ ಅನಾಸಕ್ತ ಭಾವ ಸಹ ಬರುತ್ತದೆ. ಪ್ರಜಾತಂತ್ರದ ಔಪಚಾರಿಕ ವ್ಯವಸ್ಥೆಯಿಂದ ಮಾತ್ರವೇ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ಲೋಕೇಚ್ಛೆಯೊಂದಿಗೆ ಸಮರಸ ಮಾಡಿಕೊಳ್ಳುವುದಿಲ್ಲ. ಲೋಲುಪತೆಯನ್ನು ಗೆಲ್ಲುವ ಸಲುವಾಗಿ ವ್ಯಕ್ತಿಗೆ ಸತ್ಸಂಗ, ಸ್ವಾಧ್ಯಾಯ ಹಾಗೂ ಸಂಯಮ ಅಗತ್ಯವಾಗುತ್ತವೆ.

(೩) **ಕಾನೂನಿನ ಬಗ್ಗೆ ಗೌರವದ ಭಾವನೆ :** 'ಕಾನೂನಿನ ರಾಜ್ಯ' ಒಂದು ರಾಜನೈತಿಕ ವ್ಯವಸ್ಥೆಯಾಗಿದೆ, ಆದರೆ ಕಾನೂನಿನ ಬಗ್ಗೆ ಆದರದ ಭಾವನೆ ನೈತಿಕ ಸಮಾಜದ ಗುರುತಾಗಿರುತ್ತದೆ. ಕಾನೂನನ್ನು ಆದರಿಸುವ ಸಮಾಜವೇ 'ಕಾನೂನಿನ ರಾಜ್ಯ'ವನ್ನು ಸರಿಯಾಗಿ ನಿಭಾಯಿಸಬಲ್ಲದು. ಎಲ್ಲಿ ಸಾಮಾಜಿಕವಾಗಿ ಜನರಲ್ಲಿ ಕಾನೂನಿನ ಬಗ್ಗೆ ಗೌರವ ಭಾವವಿರುವುದಿಲ್ಲವೋ, ಅಲ್ಲಿಯ 'ಕಾನೂನು' ವ್ಯಕ್ತಿಗಳ ಬಗ್ಗೆ ಅವಿಶ್ವಾಸಿಯಾಗಿಬಿಡುತ್ತದೆ ಹಾಗೂ ವ್ಯಕ್ತಿಗಳು ಕಾನೂನಿನ ಅವಹೇಳನೆ ಮಾಡುವವರಾಗಿಬಿಡುತ್ತಾರೆ. ಇದರ ಸ್ವಾಭಾವಿಕ ಪರಿಣಾಮವೆಂದರೆ ಸಮಾಜದಲ್ಲಿ 'ಅನೈತಿಕತೆ'ಯು ಪ್ರಸಾರವಾಗುತ್ತದೆ. ನಮ್ಮ ದೇಶದಲ್ಲಿ ರಾಜದಂಡದ ಸಹಾಯವಿಲ್ಲದೆಯೇ ಜನರಲ್ಲಿ ಧರ್ಮಭಾವದ ಬಲದ ಮೇಲೆ ನೈತಿಕ ನಿಯಮಗಳ ಪಾಲನೆ ಮಾಡಿಸಬಹುದಾಗಿದೆ. ಇದು ಭಾರತೀಯ ಅನುಭವವಾಗಿದೆ. ಸ್ವಸ್ಥ ಪ್ರಜಾತಂತ್ರದಲ್ಲಿ ಜನರು ರಾಜದಂಡದ ಭಯದಿಂದಲೇ ತಮ್ಮ ಸಾಮಾಜಿಕ ವಿವೇಕದಿಂದ ಕಾನೂನಿನ ಪರಿಪಾಲನೆ ಮಾಡುತ್ತಾರೆ. ಈ ರೀತಿ, ಸಮಾಜದಲ್ಲಿ ರಾಜಕೀಯ ಪಕ್ಷಗಳು 'ಜನಾಭಿಪ್ರಾಯ ಪರಿಷ್ಕರಣ'ದ ಕಾರ್ಯವನ್ನು ನೆರವೇರಿಸಲಿ ಹಾಗೂ ಸ್ವತಃ ತಮ್ಮ ಆಚರಣೆಯನ್ನು ಮಾದರಿಯನ್ನಾಗಿ ಪ್ರಸ್ತುತಪಡಿಸಲಿ ಎಂದು ಉಪಾಧ್ಯಾಯರು ಒತ್ತಾಯಿಸುತ್ತಾರೆ.

"ಜನತೆಯಲ್ಲಿ ಕಾನೂನಿನ ಬಗ್ಗೆ ಗೌರವ ಭಾವನೆಯನ್ನು ಹುಟ್ಟಿಸುವುದಕ್ಕೆ ಅಗತ್ಯವಾಗಿರುವುದೇನೆಂದರೆ ಕಾನೂನನ್ನು ಸಂರಕ್ಷಿಸುವ ಆಕಾಂಕ್ಷೆಯುಳ್ಳ ಪಕ್ಷಗಳು ಈ ದಿಕ್ಕಿನಲ್ಲಿ ಸ್ವತಃ ಮಾದರಿಯನ್ನು ಮುಂದಿರಿಸಲಿ. ಸ್ವಯಮಾಡಳಿತದ ಭಾವನೆ ಹಾಗೂ ಸಾಮರ್ಥ್ಯ ಜನತಂತ್ರದ ಸಾರವಾಗಿದೆ. ಪಕ್ಷಗಳು ಸ್ವತಃ ತಮ್ಮನ್ನು ತಾವು ಅನುಶಾಸನಕ್ಕೆ ಒಳಪಡಿಸಲಾರದೆ ಹೋದರೆ ಅವು ಸಮಾಜದಲ್ಲಿ ಸ್ವಯಮಾಡಳಿತ ಇಚ್ಛೆಯನ್ನು ಮೂಡಿಸುವ ಆಸೆಯನ್ನು ಹೇಗೆ ತಾನೆ ಹೊಂದಿರಬಲ್ಲವು?"

ಸಮಾಜದಲ್ಲಿ ಕಾನೂನಿನ ಬಗ್ಗೆ ಆದರ ಮೂಡಿಸುವ ಸಲುವಾಗಿ ಒಂದು ಕಡೆ ಪ್ರಜಾತಾಂತ್ರಿಕ ಮಾನಸಿಕ ಸ್ಥಿತಿಯು ಅಗತ್ಯವಿದ್ದರೆ, ಇನ್ನೊಂದು ಕಡೆ ಕಾನೂನುಗಳನ್ನು ನಿರ್ಮಿಸುವ ಜನ ಪ್ರತಿನಿಧಿಗಳು, ಪಂಡಿತರು ಹಾಗೂ ಪತ್ರಕಾರರ ಜಗತ್ತು ಸಮಾಜಕ್ಕೆ ಕಾನೂನಿನ ತರ್ಕಸಂಗತತೆಯ ಬಗ್ಗೆ ತಿಳಿವಳಿಕೆಯನ್ನು ನೀಡಬೇಕು.

ಕಾನೂನಿನ ಬಗ್ಗೆ ತನ್ನ ಅಸಮ್ಮತಿಯನ್ನು ಪ್ರಕಟಗೊಳಿಸಲು ಸಹ 'ಕಾನೂನು ಸಮ್ಮತ' ಪ್ರಕ್ರಿಯೆಯನ್ನೇ ಜನರು ಸ್ವೀಕರಿಸಬೇಕು. ಸಮಾಜದಲ್ಲಿ ಇಂತಹ ವಾತಾವರಣ ಅಗತ್ಯವಾಗಿ ಉಂಟಾಗಬೇಕು. ಉಪಾಧ್ಯಾಯರು ಕೇವಲ ಅಕಾಡೆಮಿಕ್ ವಿದ್ವಾಂಸರು ಅಥವಾ ದಾರ್ಶನಿಕರು ಮಾತ್ರವಾಗಿಲ್ಲದೆ, ರಾಜನೈತಿಕ ಕ್ಷೇತ್ರದ ನೇರ ಕಾರ್ಯಕರ್ತರೂ ಆಗಿದ್ದರು. ಚುನಾವಣಾ ಪ್ರಕ್ರಿಯೆ ಅಧಿಕಾರವನ್ನು ಪಡೆದುಕೊಳ್ಳುವ ಸ್ಪರ್ಧೆಯ ಅಸ್ತ್ರವಾಗಿರದೆ ಸಾಮಾಜಿಕ ಸಹಭಾಗಿತ್ವದ ಮಾಧ್ಯಮವಾಗಿರುತ್ತದೆ. ಅದನ್ನು ಈ ಮಾಧ್ಯಮಕ್ಕಾಗಿ ಬಳಸಿಕೊಳ್ಳುವ ಸಲುವಾಗಿ ಅವರು ಒಳ್ಳೆಯ ಉಮೇದುವಾರನಾಗಿ, ಒಳ್ಳೆಯ ಪಕ್ಷವಾಗಿ ಹಾಗೂ ಒಳ್ಳೆಯ ಮತದಾರನಾಗಿ ಹೇಗೆ ಇರಬೇಕು ಎಂಬುದನ್ನು ಕುರಿತು ಸಹ ಚುನಾವಣೆಯ ಸಮಯದಲ್ಲಿ ತಮ್ಮ ಆಲೋಚನೆಗಳನ್ನು ಪ್ರಕಟಪಡಿಸಿದ್ದಾರೆ. ಇವು ಅವರ ರಾಜಕೀಯದ ನಾಯಕನ ಛವಿಯನ್ನಲ್ಲ ರಾಜನೀತಿಜ್ಞರ ಛವಿಯನ್ನು ಮುಂದಿರಿಸುತ್ತದೆ.

**ಒಳ್ಳೆಯ ಉಮೇದುವಾರ :** ಉಪಾಧ್ಯಾಯರ ಅಭಿಪ್ರಾಯದಲ್ಲಿ "ವಿಧಾನಮಂಡಲಗಳಲ್ಲಿ ತನ್ನ ಪಕ್ಷದ ದೃಷ್ಟಿಕೋನವನ್ನು ಪ್ರತಿನಿಧಿಸುವುದರ ಜೊತೆಗೆ, ತನ್ನ ಕ್ಷೇತ್ರದ ಮತದಾರರ ನಾಡಿಯನ್ನು ಗುರುತಿಸುವಂಥವನೇ ಒಬ್ಬ ಯೋಗ್ಯ ಉಮೇದುವಾರನಾಗಿರುತ್ತಾನೆ. ಒಬ್ಬ ವ್ಯಕ್ತಿಯಾಗಿ ಅವನು ತನ್ನ ಮತದಾರರ ಬಗ್ಗೆ ನಿಷ್ಠನಾಗಿರಬೇಕು ಹಾಗೂ ಒಂದು ಪಕ್ಷದ ಸದಸ್ಯನಾಗಿರುವುದರಿಂದ, ಯಾವ ದೃಷ್ಟಿಕೋನವನ್ನು ಅವನು ಪ್ರತಿನಿಧಿಸುತ್ತಾನೆಯೋ ಆ ಪಕ್ಷದ ಶಿಸ್ತನ್ನು ಪರಿಪಾಲಿಸುವುದರ ಜೊತೆಗೆ ಅದರ ಉದ್ದೇಶಗಳನ್ನು ಪೂರ್ಣಗೊಳಿಸುವುದಕ್ಕಾಗಿ ಮನಸ್ಸಿನಲ್ಲಿ ಸಮರ್ಪಣ ಭಾವವನ್ನು ಹೊಂದಿರಬೇಕು".

ಪಕ್ಷ ಹಾಗೂ ಜನರ ಬಗ್ಗೆ ಸಮನ್ವಿತ ನಿಷ್ಠೆ ಒಳ್ಳೆಯ ಉಮೇದುವಾರನ ಒರೆಗಲ್ಲಾಗಿರುತ್ತದೆ; ಆದರೆ ಇಂದಿನ ಭಾರತೀಯ ಪಕ್ಷಗಳು ಉಮೇದುವಾರನನ್ನು ಆಯುವ ಮಾನದಂಡದ ಬಗ್ಗೆ ತಮ್ಮ ಅಸಂತೋಷ ವ್ಯಕ್ತಪಡಿಸುತ್ತ ಅವರು ಹೀಗೆ ಹೇಳುತ್ತಾರೆ; "ಅವರಿಗೆ ಒಳ್ಳೆಯ ಉಮೇದುವಾರನಿಗೆ ಬದಲಾಗಿ ಗೆಲ್ಲುವ ಕುದುರೆಯ ಚಿಂತೆ ಕಾಡುತ್ತಿರುತ್ತದೆ."

"ದೌರ್ಭಾಗ್ಯದಿಂದ ಭಾರತದಲ್ಲಿ ಯಾವುದೇ ಒಂದು ರಾಜನೈತಿಕ ಪಕ್ಷ ಈ ವಿಚಾರದ ಬಗ್ಗೆ ಚಿಂತಿಸುತ್ತಿಲ್ಲ; ಹೀಗಾಗಿ ಸದಾ ಹೇಗಾದರೂ ತಮ್ಮ ಅಭ್ಯರ್ಥಿ ಗೆಲ್ಲಲಿ ಎಂಬ ಒಂದೇ ವಿಷಯ ಅವರ ತಲೆಯಲ್ಲಿ ತುಂಬಿರುತ್ತದೆ. ............. ಗೆಲುವಿನ ಲಕ್ಷಣಗಳು ಹೆಚ್ಚಾಗಿ ಗೋಚರವಾಗುವಂತಿರುವ ಉಮೇದುವಾರನಿಗೇ ಪಕ್ಷ ತನ್ನ ಟಿಕೆಟ್ ಕೊಡುತ್ತದೆ". ಆದುದರಿಂದಲೇ ದೀನ್ ದಯಾಳರು ಮತದಾರರನ್ನು ಎಚ್ಚರಿಸುತ್ತಾರೆ. ಒಂದು ಪಕ್ಷದಲ್ಲಿರುವನೆಂಬ ಒಂದೇ ಒಂದು ಕಾರಣಕ್ಕಾಗಿ ಆಯೋಗ್ಯ ಉಮೇದುವಾರನಿಗೆ ತಮ್ಮ ಮತ ನೀಡಬಾರದೆಂಬುದನ್ನು ನಾವು



ನೆನಪಿನಲ್ಲಿಟ್ಟುಕೊಳ್ಳಬೇಕು. ಇಂತಹ ಅಯೋಗ್ಯ ವ್ಯಕ್ತಿಗೆ ಟಿಕೆಟ್ ನೀಡುವಾಗ, ಆ ಪಕ್ಷ ಸಂಸ್ಥೆಯ ಲಾಭದ ದೃಷ್ಟಿಯಿಂದ ಇಂತಹ ನಿರ್ಣಯವನ್ನು ಕೈಗೊಂಡಿರಬಹುದು ಅಥವಾ ಇಂತಹ ಉದ್ದೇಶವಿರದಿದ್ದರೂ ಅದರಿಂದ ತಪ್ಪು ನಿರ್ಣಯವಾಗಿರುವ ಸಾಧ್ಯತೆ ಇರುತ್ತದೆ. ಆದುದರಿಂದ ಜವಾಬ್ದಾರನಾದ ಮತದಾರನ ಕೆಲಸವೇನೆಂದರೆ ತನ್ನ ಜಾಗರೂಕತೆಯ ಅರಿವನ್ನುಂಟುಮಾಡುತ್ತ, ಮೇಲೆ ತಿಳಿಸಲಾದ ತಪ್ಪನ್ನು ತಿದ್ದಿಕೊಳ್ಳಲಿ".

**ಒಳ್ಳೆಯ ಪಕ್ಷ :** ಪ್ರಜಾತಂತ್ರದ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳು ಬಹು ನಿರ್ಣಾಯಕ ಪಾತ್ರ ವಹಿಸುತ್ತವೆ. ಯಾವುದೇ ಸಮಾಜ ಎಷ್ಟು ಪ್ರಜಾತಂತ್ರಕ್ಕೆ ನಿಷ್ಠವಾಗಿದೆ ಎಂಬುದನ್ನು ಅದರ ಪಕ್ಷಗಳ ಸ್ವಭಾವವನ್ನು ನೋಡಿ ತಿಳಿದುಕೊಳ್ಳಬಹುದಾಗಿದೆ. ಉಪಾಧ್ಯಾಯರ ಪ್ರಕಾರ ಶ್ರೇಷ್ಠ ಪಕ್ಷದ ಲಕ್ಷಣಗಳೆಂದರೆ: "........... ಅಧಿಕಾರವನ್ನು ಪಡೆದುಕೊಳ್ಳುವ ಆಸೆಯನ್ನಿರಿಸಿಕೊಂಡಿರುವ ಗುಂಪಾಗಿರದೆ ಒಂದು ಜೀವಂತ ಸಂಘಟನೆಯಾಗಿರಬೇಕು. ಅದಕ್ಕೆ ಅಧಿಕಾರವನ್ನು ಪಡೆದುಕೊಳ್ಳುವ ಜೊತೆಗೆ, ತನ್ನದೇ ಆದ ವೈಶಿಷ್ಟ್ಯವೂ ಇರಬೇಕು. ಇಂತಹ ಪಕ್ಷದ ದೃಷ್ಟಿ ಕೇವಲ ಆಡಳಿತಾತ್ಮಕ ಅಧಿಕಾರವನ್ನು ಪಡೆದುಕೊಳ್ಳುವ ಉದ್ದೇಶವಾಗಿರದೆ, ಅದು ತನ್ನ ಸಿದ್ಧಾಂತಗಳನ್ನು ಹಾಗೂ ಕಾರ್ಯಕ್ರಮಗಳನ್ನು ಕ್ರಿಯಾನ್ವಯಗೊಳಿಸುವ ಒಂದು ಸಾಧನವಾಗಿರುತ್ತದೆ. ಆದ್ದರಿಂದ ಆ ದಳದ ಸರ್ವೋಚ್ಚ ಪದಾಧಿಕಾರಿಗಳಿಂದ ಹಿಡಿದು ತೀರ ಸಾಮಾನ್ಯ ಸದಸ್ಯನಲ್ಲಿಯೂ ತನ್ನ ಈ ಆದರ್ಶವಾದದ ಬಗ್ಗೆ ನಿಷ್ಠೆ ಇರುತ್ತದೆ. ಈ ನಿಷ್ಠೆಯೇ ಶಿಸ್ತು ಹಾಗೂ ಆತ್ಮಸಮರ್ಪಣೆಯ ಭಾವನೆಯನ್ನು ಮೂಡಿಸುತ್ತದೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು .................... ಶಿಸ್ತನ್ನು ಮೇಲಿನಿಂದ ಹೇರಿದ್ದೇ ಆದರೆ, ಅದು ಯಾವುದೇ ಪಕ್ಷದ ಆಂತರಿಕ ಶಕ್ತಿಹೀನತೆಯನ್ನೇ ಪ್ರಕಟಗೊಳಿಸುತ್ತದೆ".

ದೀನ್ ದಯಾಳ್ ಉಪಾಧ್ಯಾಯರು ಬಹಳ ದುಃಖದಿಂದ ಹೀಗೆ ಪ್ರತಿಪಾದನೆ ಮಾಡುತ್ತಾರೆ: "ಭಾರತದ ರಾಜಕೀಯ ಪಕ್ಷಗಳು ಹೆಸರಿಗೆ ಮಾತ್ರವೇ ಪಕ್ಷಗಳಾಗಿವೆ. ಪಕ್ಷಗಳ ಆಂತರಿಕ ಶಕ್ತಿಹೀನತೆ ಅವು ಸಮಾಜದ ಸಲ್ಲದ ಶಕ್ತಿಗಳನ್ನು ಆಶ್ರಯಿಸುವಂತೆ ಮಾಡುತ್ತದೆ." ಉಪಾಧ್ಯಾಯರು ಮುಖ್ಯವಾಗಿ ಪಕ್ಷಗಳ ಅಸಹಾಯಕತೆಗಳನ್ನು ಉಲ್ಲೇಖಿಸುತ್ತಾರೆ. ೧. ರಾಜ–ಮಹಾರಾಜರು, ೨. ಜಾತಿವಾದ, ಹಾಗೂ ೩. ಉದ್ಯೋಗಪತಿಗಳು.

**ರಾಜ–ಮಹಾರಾಜರು :** "ಭಾರತದ ರಾಜಕೀಯ ಪಕ್ಷಗಳು ಜನತೆಯಲ್ಲಿ ಇಂದಿಗೂ ಆಳವಾಗಿ ತಮ್ಮ ಬೇರನ್ನು ಊರಿಸಲಾಗಿಲ್ಲ ................. ರಾಜಕೀಯ ಪಕ್ಷಗಳು ತಮ್ಮ ವಿಭಿನ್ನ ರಾಜಕೀಯ ಕಾರ್ಯಕ್ರಮಗಳನ್ನು ಪಕ್ಕಕ್ಕೆ ಇರಿಸಿ, ಚುನಾವಣೆಗೆ ಸಿದ್ಧವಾಗಬೇಕಾಗುತ್ತದೆ. ಈ ಕಾರಣದಿಂದಲೇ ಇಂದಿಗೂ ಸಹ ಹಳೆಯ ರಾಜ–

ಮಹಾರಾಜರನ್ನು, ನವಾಬರನ್ನು ಹಾಗೂ ಜಾಗೀರುದಾರರನ್ನು ತಮ್ಮ-ತಮ್ಮ ಪಕ್ಷಕ್ಕೆ ಎಳೆದುತರುವ ಪ್ರಯತ್ನ ಮಾಡುತ್ತವೆ .............. ಈ ಹಳೆಯ ವರ್ಗವನ್ನು ದೇಶದ ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯವಾಗಿಸಬೇಕು ಎಂಬ ಸಂಗತಿಯನ್ನು ನಾವು ಒಪ್ಪುತ್ತೇವೆ, ಆದರೆ ಅವರಿಗೆ ಟಿಕೆಟ್ ನಿಡುವುದಕ್ಕೆ ಅವರು ರಾಜವಂಶದಲ್ಲಿ ಜನ್ಮ ತಾಳಿದ್ದಾರೆ ಎಂಬುದು ಆಧಾರವಾಗಿರದೆ, ಅವರ ಯೋಗ್ಯತೆ ಆಧಾರವಾಗಿರಬೇಕು".

**ಜಾತಿವಾದ :** "ಜಾತಿ ಹಾಗೂ ಧರ್ಮದ ವಿಚಾರವೂ ಉಮೇದುವಾರರ ಆಯ್ಕೆಯ ಮೇಲೆ ಕೆಟ್ಟ ರೀತಿಯಲ್ಲಿ ಪ್ರಭಾವ ಬೀರುತ್ತದೆ. ಭಾರತದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ಜಾತಿಯ ಅಂಗವಾಗಿರುತ್ತಾನೆ. ಹೀಗಾಗಿ, ಇತರ ವ್ಯಕ್ತಿಗಳ ಮೇಲೆ ಜಾತೀಯತೆ ಹಾಗೂ ಸಂಕುಚಿತತೆಯ ಆರೋಪ ಹೊರಿಸುವುದರಿಂದ, ಗೊತ್ತಿಲ್ಲದಂತೆಯೇ ಈ ದೇಶದಲ್ಲಿ ಈ ಭಾವನೆಗೆ ಪರೋಕ್ಷ ರೀತಿಯಲ್ಲಿ ಮತ್ತಷ್ಟು ಹೆಚ್ಚು ಪ್ರೇರಣೆ ದೊರೆಯುತ್ತದೆ............. ಪರಿಸ್ಥಿತಿ ಎಷ್ಟರಮಟ್ಟಿಗೆ ಹದಗೆಡುತ್ತದೆಂದರೆ, ಡಾ. ರಾಮ್‌ಮನೋಹರ್ ಲೋಹಿಯಾರಂತಹ ವ್ಯಕ್ತಿ ಆ ಚುನಾವಣಾ ಕ್ಷೇತ್ರದಲ್ಲಿ ವಾಸಿಸುವ ಬಹುಸಂಖ್ಯೆಯ ಮತದಾರರ ಜಾತಿಯವರಾಗಿಲ್ಲದೆ ಇದ್ದರೆ, ಚುನಾವಣೆಯ ಕಣ ತೊರೆಯಲು ಇದು ಒಂದು ಗಂಭೀರ ವಿಷಯವಾಗುತ್ತದೆ; ಆದರೆ, ಇದನ್ನು ನಿರಾಕರಣೆ ಮಾಡುವ ಉಪಾಯವೆಂದರೆ ಜಾತಿಯ ಆಧಾರದ ಮೇಲೆ ಮತದಾರರಿಗೆ ಅಪೀಲು ಮಾಡುವುದಕ್ಕೆ ಬದಲಾಗಿ ಪಕ್ಷದ ಸಂಘಟನೆಯನ್ನು ಬಲಪಡಿಸಬೇಕು.

**ಉದ್ಯೋಗಪತಿ :** ಉಮೇದುವಾರರನ್ನು ಆಯ್ಕೆ ಮಾಡುವಲ್ಲಿ ಉಮೇದುವಾರನ ಆರ್ಥಿಕಸ್ಥಿತಿ ಹಾಗೂ ಚುನಾವಣೆಯಲ್ಲಿ ಹಣವನ್ನು ಖರ್ಚು ಮಾಡುವ ಸಾಮರ್ಥ್ಯ – ಇವು ಪ್ರಭಾವ ಬೀರುವ ಮತ್ತೊಂದು ಪ್ರಮುಖ ಆಧಾರವಾಗಿರುತ್ತವೆ. ಹಣವನ್ನು ಖರ್ಚು ಮಾಡುವ ಸಾಮರ್ಥ್ಯವೇ ಬಹಳಷ್ಟು ವ್ಯಕ್ತಿಗಳಿಗೆ ಟಿಕೆಟ್ ನೀಡಲು ಕಾರಣವಾಗಿರುತ್ತದೆ................ವಾಸ್ತವವಾಗಿ ಅವರು ಜನತೆ ಹಾಗೂ ರಾಜನೈತಿಕ ಪಕ್ಷಗಳಿಂದ ಅವರ ಮತವನ್ನು ಹಾಗೂ ಟಿಕೆಟ್‌ಗಳನ್ನು ಪಡೆದುಕೊಳ್ಳಲು ಬರದೆ, ಅವುಗಳನ್ನು ಕೊಳ್ಳಲು ಬರುತ್ತಾರೆ. ಸಂಸತ್ತಿನ ಸದಸ್ಯತ್ವ ಅವರಿಗೆ ತಮ್ಮ ಕೊಬ್ಬನ್ನು ಹೆಚ್ಚಿಸಿಕೊಳ್ಳುವ ಹಾಗೂ ಮತ್ತಷ್ಟು ದಪ್ಪಗಾಗುವ ಸಾಧನವಾಗಿರುವುದರಿಂದ ಅದು ವ್ಯಾಪಾರವೇ ಆಗಿದೆ. ಕಾಂಗ್ರೆಸ್ ಸೇರಿದಂತೆ ಎಲ್ಲ ರಾಜಕೀಯ ಪಕ್ಷಗಳು ಹಣದ ಕೊರತೆಯಿಂದ ಎಷ್ಟು ತೊಂದರೆಗೀಡಾಗಿದೆಯೆಂದರೆ ಅವರು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ, ಇವರ ಸಹಾಯವನ್ನು ಪಡೆದುಕೊಳ್ಳಲು ಆತುರ ತೋರುತ್ತಾರೆ.

**ಒಳ್ಳೆಯ ಮತದಾರ:** ಮತದಾರರ ಬುದ್ಧಿವಂತಿಕೆಯೇ ಇದಕ್ಕೆ ಸರಿಯಾದ



ಚಿಕಿತ್ಸೆ ಎಂಬುದು ಉಪಾಧ್ಯಾಯರ ದೃಢವಾದ ನಂಬಿಕೆ: "ಇವು ದೇಶದ ರಾಜಕೀಯವನ್ನು ತಪ್ಪು ದಿಕ್ಕಿಗೆ ಕೊಂಡೊಯ್ಯುತ್ತಿರುವಂಥ ತಥ್ಯಗಳು"............ ದೇಶದ ರಾಜಕೀಯದಲ್ಲಿ ಪ್ರಮುಖ ಪಕ್ಷಗಳಾಗಿ ರೂಪುಗೊಳ್ಳಬೇಕೆಂದಿರುವ ರಾಜಕೀಯ ಪಕ್ಷಗಳು ಈ ಅಪಾಯಗಳ ಬಗ್ಗೆ ಎಚ್ಚರವಹಿಸಿ ತಮ್ಮ ಸಿದ್ಧಾಂತಗಳನ್ನು ಹತ್ಯೆಗೀಡುಮಾಡಬಾರದು. ಇದೇ ರೀತಿ ಹಂಸ ಪಕ್ಷಿಯಂತೆ ಹಾಲಿನಿಂದ-ನೀರನ್ನು ಬೇರ್ಪಡಿಸುವಂಥ ವಿವೇಚನಾಶಕ್ತಿಯ ಪರಿಚಯ ನೀಡುವುದು ಜನತೆಯ ಕರ್ತವ್ಯವಾಗಿದೆ. ಹೀಗೆ ಮಾಡಿದಲ್ಲಿ ದೇಶದ ರಾಜಕೀಯ ಪಕ್ಷಗಳು ತಪ್ಪು ದೃಷ್ಟಿಕೋನವನ್ನು ತಿದ್ದಲು ನೆರವಾಗುತ್ತದೆ. ಇದಕ್ಕಾಗಿ ಉಪಾಧ್ಯಾಯರು ಮತದಾರರಿಗೆ ಈ ಕೆಳಕಂಡ ವಿಷಯಗಳನ್ನು ನೆನಪಿನಲ್ಲಿಟ್ಟುಕೊಂಡಿರಬೇಕೆಂದು ಒತ್ತಾಯಿಸುತ್ತಾರೆ:

೧. "..........ಪಕ್ಷಕ್ಕಾಗಿ ಚಲಾಯಿಸದೆ ಸಿದ್ಧಾಂತಕ್ಕಾಗಿ, ವ್ಯಕ್ತಿಗಾಗಿ ಚಲಾಯಿಸದೆ ಪಕ್ಷಕ್ಕಾಗಿ ಹಾಗೂ ಹಣಕ್ಕಾಗಿ ಚಲಾಯಿಸದೆ ವ್ಯಕ್ತಿಗಾಗಿ ಜನರು ತಮ್ಮ ಮತಾಧಿಕಾರವನ್ನು ಚಲಾಯಿಸಬೇಕಾಗಿದೆ."

೨. "...........ಪ್ರಚಾರಕ್ಕೆ ಬಲಿಪಶುವಾಗಿ ಯಾವುದೇ ವ್ಯಕ್ತಿಗೆ ಕೇವಲ ಅವನು ಗೆಲ್ಲುತ್ತಾನೆ ಎಂಬ ಕಾರಣಕ್ಕಾಗಿಯೇ ಮತ ನೀಡಿದಲ್ಲಿ ಚುನಾವಣೆಯ ಪರಿಣಾಮ ಏನೇ ಆಗಲಿ, ಅದನ್ನು ನಿಮ್ಮ ಸೋಲು ಎಂದೇ ಕರೆಯಬೇಕಾಗುತ್ತದೆ."

೩. "ಮತದಾನದ ಹಕ್ಕು ನಿಮ್ಮ ಸದ್‌ವಿಚಾರದ ಹಾಗೂ ನಿಮ್ಮ ಸದ್‌ವಿವೇಕದ ಒರೆಗಲ್ಲಾಗಿರುತ್ತದೆ. ಹೀಗಾಗಿ ಅದರ ವಿಷಯದಲ್ಲಿ ಉದಾಸೀನರಾಗಬಾರದು, ಅದನ್ನು ಮಾರಿಕೊಳ್ಳಬಾರದು ಹಾಗೂ ಅದನ್ನು ನಷ್ಟಗೊಳಿಸಬಾರದು."

೪. "ಮತದಾನದ ಹಕ್ಕು ಪ್ರತಿಯೊಬ್ಬ ನಾಗರಿಕನ ಸ್ವಾತಂತ್ರ್ಯದ ಪ್ರತೀಕವಾಗಿದೆ. ಹೀಗಾಗಿ, ನೀವು ಪ್ರಜಾತಂತ್ರವಾದಿಗಳಾಗಿರುವುದರಿಂದ, ಯಾರದೋ ನಿರ್ದೇಶನದಂತಲ್ಲದೆ ಸ್ವತಃ ನಿಮ್ಮ ಸದ್‌ವಿವೇಕ ಹಾಗೂ ಆತ್ಮದ ಕರೆಯ ಮೇರೆಗೆ ಇದನ್ನು ಬಳಸಬೇಕಾಗಿದೆ."

೫. "..........ತಾವೇ ರಾಜಕೀಯ ಪಕ್ಷಗಳ ನಿರ್ಮಾತೃಗಳು ಎಂಬುದನ್ನು ಜನತೆ ಮತ್ತೆ ಮತ್ತೆ ನೆನಪಿನಲ್ಲಿಟ್ಟುಕೊಳ್ಳಬೇಕು."

ದೀನ್ ದಯಾಳ್ ಉಪಾಧ್ಯಾಯರು ರಾಜಕೀಯ ಪಕ್ಷವೊಂದರ ಪ್ರಧಾನಕಾರ್ಯದರ್ಶಿಗಳಾಗಿದ್ದರು. ಆದರೆ ಮೇಲೆ ತಿಳಿಸಿದ ಅವರ ಚಿಂತನೆಗಳು ಪಕ್ಷವೊಂದರ ಪರವಾದ ಚಿಂತನೆಗಳನ್ನು ಮೀರಿದ, ಪ್ರಜಾತಂತ್ರವಾದಿಯಾದ ವ್ಯಕ್ತಿಯೊಬ್ಬರು ವ್ಯಕ್ತಪಡಿಸಿದ ಚಿಂತನೆಗಳಾಗಿವೆ. ದೇಶದಲ್ಲಿ ಪ್ರಜಾತಂತ್ರ ಇದ್ದರೆ ಮಾತ್ರವೇ ಭಾರತ ವೈವಿದ್ಯಯರು ಸ್ವರೂಪದ ತನ್ನ ರಾಷ್ಟ್ರೀಯ ಏಕತೆಯನ್ನು ಉಳಿಸಿಕೊಂಡರಿಬಹುದಾಗಿದೆ. ಅವರ ರಾಷ್ಟ್ರವಾದವೇ ಅವರನ್ನು ಪ್ರಬಲ ಪ್ರಜಾತಂತ್ರವಾದಿಯನ್ನಾಗಿಸಿತು.

### (ಗ) ರಾಷ್ಟ್ರೀಯ ಏಕತೆಗಾಗಿ ಪ್ರಜಾತಂತ್ರ ಅಗತ್ಯ

"ಭಾರತದ ಪರಿಸ್ಥಿತಿಯಲ್ಲಿ ಪ್ರಜಾತಂತ್ರಕ್ಕೂ ರಾಷ್ಟ್ರೀಯ ಏಕತೆಗೂ ಗಾಢವಾದ ಸಂಬಂಧವಿದೆ. ಇಲ್ಲಿ ಪ್ರಜಾತಂತ್ರವೇನಾದರೂ ಕೊನೆಗೊಂಡಲ್ಲಿ ಏಕತೆ ನಷ್ಟವಾಗಲು ಹೆಚ್ಚು ಸಮಯವೇನೂ ಆಗಾರದು........... (ವಿಘ್ನಕಾರಿ ತತ್ವಗಳಿಂದಲೂ) ........... ಪ್ರಜಾತಂತ್ರದ ಪದ್ಧತಿಯನ್ನು ಅನುಸರಿಸುವವರು ಕ್ರಮೇಣ ರಾಷ್ಟ್ರವಾದತ್ತ ಮುಂದೆ ಸಾಗುತ್ತಾರೆ. ಚುನಾವಣೆಗಳಲ್ಲಿ ಜಾತಿವಾದ ಹಾಗೂ ಪ್ರಾಂತೀಯವಾದದ ಆಶ್ರಯ ಪಡೆಯುವವರೂ ಗೆದ್ದು ಬಂದಾಗ, ಎಲ್ಲರೊಡನೆ ಒಂದಾಗದೇ ಒಬ್ಬಂಟಿಯಾಗಿ ಕುಳಿತಿರಲು ಸಾಧ್ಯವಿಲ್ಲ. ಈ ಕಾರಣದಿಂದಲೇ ದ್ರಾವಿಡ ಮುನ್ನೇತ್ರ ಕಳಗಮ್‌ನ ಸ್ವರೂಪ ನಿಧಾನವಾಗಿ ಬದಲಾಗುತ್ತಿದೆ. ಪ್ರಜಾತಂತ್ರವಿರುವಾಗ ಯಾವುದಾದರೂ ವಿಶೇಷ ಪ್ರಾಂತ್ಯದಲ್ಲಿ ಯಾವುದೇ ವಿಶೇಷ ಪಕ್ಷದ ಆಡಳಿತ ಅಸ್ತಿತ್ವಕ್ಕೆ ಬಂದಾಗಲೂ ಅದು ಬೇರೆಯಾಗಿ ನಿಲ್ಲಬಾರದು;

ಆದರೆ ಪ್ರಜಾತಂತ್ರವೇನಾದರೂ ಕೊನೆಗೊಂಡಲ್ಲಿ ಏಕತೆಯೂ ಕೊನೆಗೊಳ್ಳುತ್ತದೆ............. ಭಾರತದ ಏಕತೆಗೆ ಪ್ರಜಾತಂತ್ರ ಅಗತ್ಯ ಎಂಬುದು ಉಪಾಧ್ಯಾಯರ ಅಭಿಪ್ರಾಯವಾಗಿತ್ತು.

### (ಘ) ಅವಕಾಶವಾದೀ ರಾಜಕೀಯ

ಅಧಿಕಾರ ಪ್ರಾಪ್ತಿಗಾಗಿ ಲೋಕತಂತ್ರದ ಅವಕಾಶವಾದೀ ಬಳಕೆ ನಮ್ಮ ಪ್ರಜಾತಂತ್ರಕ್ಕೆ ಒಡ್ಡಲಾದ ಅತಿದೊಡ್ಡ ಸವಾಲಾಗಿದೆ. ಇದರ ಬಗ್ಗೆ ಎಚ್ಚರಿಕೆ ನೀಡುತ್ತ, ಉಪಾಧ್ಯಾಯರು ಹೀಗೆ ಹೇಳುತ್ತಾರೆ : "ಪಕ್ಷಗಳ ಒಕ್ಕೂಟಗಳು ನಮ್ಮ ದೇಶದಲ್ಲಿ ಮೂಡಿಬರುತ್ತಿವೆ. ವಿವಿಧ ಪಕ್ಷಗಳು ಬೇರೆ ಬೇರೆಯಾಗಿ ಹೋರಾಡಿ ಅಧಿಕಾರದಲ್ಲಿರುವ ಪಕ್ಷವನ್ನು ಪರಾಜಯಗೊಳಿಸಲಾಗವುದಿಲ್ಲವಾದುದರಿಂದ ಎಲ್ಲ ಪಕ್ಷಗಳು ಸೇರಿ ಕಾಂಗ್ರೆಸ್ಸ್‌ನ ವಿರುದ್ಧವಾಗಿ ಒಬ್ಬ ಉಮೇದುವಾರನನ್ನು ನಿಲ್ಲಿಸಬೇಕು ಎಂಬುದು ಪಕ್ಷಗಳ ನಡುವಣ ಒಪ್ಪಂದಗಳ ಹಾಗೂ ಸಂಯುಕ್ತ ಒಕ್ಕೂಟದ ಆಧಾರವಾಗಿರುತ್ತದೆ................. ಈ ಒಪ್ಪಂದಗಳನ್ನು ಮಾಡಿಕೊಳ್ಳುವ ಪಕ್ಷಗಳು ಒಕ್ಕೂಟವನ್ನು ಮಾಡುವಾಗ ಸಿದ್ಧಾಂತಗಳ ವಿಷಯದಲ್ಲಿಯೂ ಚೌಕಾಸಿ ಮಾಡುತ್ತವೆ; ಇದರಿಂದಾಗಿ ದೇಶದಲ್ಲಿ ಅವಕಾಶವಾದೀ ತತ್ವಗಳಿಗೆ ಆಶ್ರಯ ದೊರೆತಂತಾಗುತ್ತದೆ.

ಪ್ರಜಾತಂತ್ರವನ್ನು ಕುರಿತಾದ ದೀನ್ ದಯಾಳರ ಚಿಂತನೆ ಪ್ರಜಾತಂತ್ರದ ಪಾಶ್ಚಾತ್ಯ ಹಾಗೂ ಭಾರತೀಯ ಅವಧಾರಣೆಗಳಿಂದ ಪ್ರಾರಂಭವಾಗಿ ಅದರ ಭಾರತೀಯಕರಣದ ಬಗ್ಗೆ ಅರ್ಥಾತ್ ಜನಾಭಿಪ್ರಾಯ ಪರಿಷ್ಕರಣದ ಬಗ್ಗೆ ವಿವೇಚಿಸುತ್ತ, ಭಾರತೀಯ ಪ್ರಜಾತಂತ್ರದ ವಿಶ್ಲೇಷಣೆಯೊಡನೆ ಪೂರ್ಣಗೊಳ್ಳುತ್ತದೆ. ಉಪಾಧ್ಯಾಯರ ಚಿಂತನೆ ಆದರ್ಶವಾದಿಯಾಗಿದೆ. ಅವರು ತಮ್ಮ ವಿಚಾರಗಳಲ್ಲಿ ಸಮಾಜಶಾಸ್ತ್ರೀಯ



ಹಾಗೂ ಮನೋವೈಜ್ಞಾನಿಕ ತತ್ವಗಳಿಗಿಂತ ಹೆಚ್ಚಾಗಿ ನೀತಿಶಾಸ್ತ್ರದಿಂದ ಪ್ರಭಾವಿತರಾಗಿದ್ದಾರೆ. ಯಾವುದೇ ಪಕ್ಷಕ್ಕೆ ನೀತಿಶಾಸ್ತ್ರ ಸಂಪನ್ನರಾದ ನಾಯಕರು ದೊರೆಯುವುದು ಬಹಳ ಅದೃಷ್ಟದ ಸಂಗತಿಯಾಗಿರುತ್ತದೆ. ಪ್ರತಿಕೂಲ ಪರಿಸ್ಥಿತಿಗಳಲ್ಲಿಯೂ ಯಾರು ಆದರ್ಶವನ್ನು ಆಚರಣೆಗೆ ತರಬಲ್ಲರೊ ಅವರೇ 'ನೀತಿಶಾಸ್ತ್ರ'ದ ಮಹತ್ವವನ್ನು ಸಾಧಿಸಿ ತೋರಿಸಬಲ್ಲವರಾಗಿರುತ್ತಾರೆ. ಒಪ್ಪಂದದ ಮನೋಭಾವದ ಜನರು ತಾತ್ಕಾಲಿಕ ಪರಿಣಾಮಗಳ ಭಯದಿಂದ ತ್ಯಜಿಸಿಬಿಡುತ್ತಾರೆ. ಅವರ ವ್ಯವಹಾರ ನೀತಿಯ ಹೆಸರಿನಲ್ಲಿ ಅವಕಾಶವಾದ ತಲೆಯೆತ್ತುತ್ತದೆ. ಯಾವ 'ಅವಕಾಶವಾದ'ದ ಬಗ್ಗೆ ದೀನ್ ದಯಾಳ್ ಉಪಾಧ್ಯಾಯರು ನಮ್ಮನ್ನು ಎಚ್ಚರಿಸಿದ್ದರೋ ಅದರ ಭಯಂಕರ ಸ್ವರೂಪ ಭಾರತದಲ್ಲಿ ಮೊದಲಿಡತೊಡಗಿದಾಗ, ಅದೇ ಅಲೆಯಲ್ಲಿ ಅವರ ಹತ್ಯೆಯಾಯಿತು, ಭಾರತೀಯ ಪ್ರಜಾತಂತ್ರಕ್ಕೆ ಇದು ತುಂಬಲಾಗದ ನಷ್ಟವಾಗಿತ್ತು.

ದೀನ್ ದಯಾಳ್ ಉಪಾಧ್ಯಾಯರ ಮಾರ್ಗದರ್ಶಕ ಶ್ರೀ ಗುರೂಜಿರವರು (ಮಾ.ಸ. ಗೋಳ್‌ವಳ್ಕರ) ಪ್ರಜಾತಂತ್ರವನ್ನು ಮಾನವ ಕಂಡುಕೊಂಡ ಆಡಳಿತ ವ್ಯವಸ್ಥೆಯಲ್ಲಿ ಅತ್ಯಂತ ಕಡಿಮೆ ದೋಷಯುಕ್ತ ಆಡಳಿತ ವ್ಯವಸ್ಥೆ ಎಂದು ಭಾವಿಸಿದ್ದರು ಎಂಬುದು ಇಲ್ಲಿ ಉಲ್ಲೇಖನೀಯವಾದ ಸಂಗತಿಯಾಗಿದೆ. ಸರ್ವಶ್ರೇಷ್ಠ ವ್ಯವಸ್ಥೆಯನ್ನು ಕಂಡುಕೊಳ್ಳುವ ಕಾರ್ಯ ಇನ್ನೂ ಆಗಬೇಕಾಗಿದೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಅವರು ಈ ಪ್ರಜಾತಂತ್ರದ ಭಾರತೀಯಕರಣವನ್ನು ಬಯಸುತ್ತಿದ್ದರು. ಪಾಶ್ಚಾತ್ಯ ಪ್ರಜಾತಂತ್ರ 'ಆತ್ಮ ಪ್ರಶಂಸೆ ಹಾಗೂ ಪರ–ನಿಂದೆ'ಯ ಮನೋಜ್ಞಾನವನ್ನು ಆಧರಿಸಿದೆ, ಆದರೆ ಭಾರತೀಯ ಸಂಸ್ಕಾರಗಳು ನಮಗೆ ಈ ಪಾಠವನ್ನು ಕಲಿಸುತ್ತವೆ: "ನಿಮ್ಮ ದೋಷಗಳನ್ನು ನೋಡಿಕೊಳ್ಳಿ ಪರರ ಗುಣಗಳನ್ನು ನೋಡಿ". ಕಳೆದ ಐವತ್ತು ವರುಷಗಳಲ್ಲಿ ನಮ್ಮ ಸಾಮಾಜಿಕ ಹಾಗೂ ರಾಜಕೀಯ ಜೀವನದ ಮೇಲೂ ಪಾಶ್ಚಾತ್ಯ ಪ್ರಜಾತಂತ್ರದ 'ಆತ್ಮ ಪ್ರಶಂಸೆ ಹಾಗೂ ಪರನಿಂದನೆ'ಯ ಕುಸಂಸ್ಕಾರ ಪ್ರಭಾವ ಬೀರಿದೆ. ಇದು ರಾಜಕೀಯ ಕಾರ್ಯಕರ್ತರ ಮುಂದಿರುವ ಒಂದು ಸವಾಲು ಎಂದು ದೀನ್ ದಯಾಳರು ಭಾವಿಸಿದ್ದರು.

# ಅಧ್ಯಾಯ ೭

# ಆರ್ಥಿಕ ಚಿಂತನೆ

ವಿದ್ಯಾರ್ಥಿ ಜೀವನದಲ್ಲೇ ಗಣಿತದ ಸಂದರ್ಭದಲ್ಲಿ ಅವರ ಪ್ರತಿಭೆ ಬೆಳಕಿಗೆ ಬಂದ ವಿಚಾರವನ್ನು ನಾವು ತಿಳಿದಿರುತ್ತೇವೆ. ಆದರೆ ಉಚ್ಚ ಶಿಕ್ಷಣದಲ್ಲಿ ಅವರು ಸಾಹಿತ್ಯದ ವಿದ್ಯಾರ್ಥಿಯಾಗಿದ್ದು ಒಂದು ರಾಜಕೀಯ ಪಕ್ಷದ ಕಾರ್ಯಕರ್ತರಾದಾಗ ಅವರಿಗೆ, ಸ್ವತಂತ್ರ ಆರ್ಥಿಕ ನೀತಿ ಇಲ್ಲದೆ ಯಾವುದೇ ಸ್ವತಂತ್ರ ಸಮಾಜಕ್ಕೆ ತನ್ನ ಸಮುಚಿತ ವಿಕಾಸವನ್ನು ಸಾಧಿಸಲಾಗುವುದಿಲ್ಲ ಎಂಬ ಅನುಭವ ಆಗತೊಡಗಿತು. ಯಾವುದೇ ಒಂದು ಸಿದ್ಧಪಡಿಸಿದ ಆರ್ಥಿಕ–ರಾಜಕೀಯ ಚೌಕಟ್ಟನ್ನು ಸ್ವೀಕರಿಸಲು ಅವರು ಸಿದ್ಧರಾಗಿರಲಿಲ್ಲ. ದೀನ್ ದಯಾಳ್ ಉಪಾಧ್ಯಾಯರು ಮೂಲತಃ ಸಂಸ್ಕೃತಿವಾದಿಯಾಗಿದ್ದ ಮತ್ತು ಭೌತಿಕ ಜೀವನದ ಬಗೆಗಿನ ಸಿದ್ಧಪಡಿಸಿದ್ದ ಪಾಶ್ಚಾತ್ಯ ಮಾರ್ಗದಲ್ಲಿ ನಡೆಯಲು ಇಷ್ಟವಿಲ್ಲದ ಪಕ್ಷದ ನಾಯಕರಾಗಿದ್ದರು. ಆಧುನಿಕ ಲೋಕ ಕಲ್ಯಾಣಕಾರಿಯಾದಂತಹ ರಾಜ್ಯ ಕಲ್ಪನೆಯ ಜೊತೆಗೆ, ತನ್ನದೇ ಆದ ಆರ್ಥಿಕ ನೀತಿಯಲ್ಲದೆ ಯಾವುದೇ ರಾಜಕೀಯ ಪಕ್ಷ ನಡೆಯಲು ಸಾಧ್ಯವಿಲ್ಲ. ಸಾಮಾಜಿಕ –ಆರ್ಥಿಕ ಜೀವನದ ಜೊತೆಗೆ ನಿಕಟ ಸಂಬಂಧವನ್ನು ಸ್ಥಾಪಿಸಿಕೊಳ್ಳದೆ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಶಾಸ್ತ್ರೀಯ ಒತ್ತುಗಳು ಇಲ್ಲದೆ ಯಾವುದೇ ಪಕ್ಷದ ನೇತೃತ್ವವನ್ನು ಕೈಯಲ್ಲಿ ತೆಗೆದುಕೊಂಡಾಗ ಅವರು ತಮ್ಮ ಪಕ್ಷದ ಸಾಂಸ್ಕೃತಿಕ ಒತ್ತುಗಳಿಗೆ ಅನುಗುಣವಾಗಿ ಅರ್ಥನೀತಿಯನ್ನು ವಿಕಸಿತಗೊಳಿಸುವ ಪ್ರಯತ್ನಮಾಡಿದರು. ಜನಸಂಘಕ್ಕೆ ತನ್ನದೇ ಆದ ಆರ್ಥಿಕ ನೀತಿ ಇಲ್ಲ ಎಂಬ ಆಕ್ಷೇಪ ಇತ್ತು; ಆದರೆ ಉಪಾಧ್ಯಾಯರ ಸಾಹಿತ್ಯದ ಅಧ್ಯಯನ ಮಾಡಿದರೆ ತಮ್ಮವರ ಪಕ್ಷಕ್ಕೆ ಹಾಗೂ ಅದರ ಕಾರ್ಯಕರ್ತರಿಗೆ ಸಮಾಜಕ್ಕೆ ಪಕ್ಷದ ಆರ್ಥಿಕ ನೀತಿಯನ್ನು ತಲುಪಿಸಲು ಸಾಧ್ಯವಾಗಲಿಲ್ಲವೆಂದು ಅನಿಸುತ್ತದೆ. ಪ್ರಬುದ್ಧ ಲೇಖನಗಳ ಜೊತೆಯಲ್ಲೇ ಈ ವಿಷಯವನ್ನು ಕುರಿತು ದೀನ್ ದಯಾಳ್ ಉಪಾಧ್ಯಾಯರು ಕ್ರಮಬದ್ಧವಾಗಿ ರಚಿಸಿದ ಮೂರು ಪುಸ್ತಕಗಳು ನಮಗೆ ಅಧ್ಯಯನದ ಸಲುವಾಗಿ ದೊರೆಯುತ್ತದೆ.

೧) The Two Plans : Promises, Performances, Prospects (ಎರಡು ಯೋಜನೆಗಳು: ಭರವಸೆಗಳು, ಕಾರ್ಯನಿರ್ವಹಣೆ, ಭವಿಷ್ಯ)

೨) ಭಾರತೀಯ ಅರ್ಥನೀತಿ : ವಿಕಾಸದ ಒಂದು ದಿಕ್ಕು



೩) Devaluation - A Great Fall (ಅಪಮೌಲ್ಯಗೊಳಿಸುವಿಕೆ– ಒಂದು ದೊಡ್ಡ ಪತನ)

**ಸಮತಾವಾದೀ ಆರ್ಥಿಕ ದೃಷ್ಟಿ**

ದೀನ್ ದಯಾಳ್ ಉಪಾಧ್ಯಾಯರು 'ಭಾರತೀಯ ಜನಸಂಘದ ಅರ್ಥನೀತಿ'ಯೆಂಬ ಶೀರ್ಷಿಕೆಯನ್ನುಳ್ಳ ತಮ್ಮ ಆರ್ಥಿಕ ಪ್ರಲೇಖನವನ್ನು ಉತ್ತರ ಪ್ರದೇಶದ ಪ್ರಾದೇಶಿಕ ಸಮ್ಮೇಳನದ ಕಾರ್ಯಕರ್ತರ ಶಿಬಿರಕ್ಕಾಗಿ ಬರೆದರು; ಆದರೆ ಅದಕ್ಕೂ ಮುಂಚೆಯೂ ಇಂತಹ ಕೆಲವು ಘಟನೆಗಳು ನಡೆದವು ಮತ್ತು ಅವುಗಳಿಂದ ಅವರ ಮೂಲಭೂತ ಆರ್ಥಿಕ ದೃಷ್ಟಿಯ ಪರಿಚಯ ನಮಗೆ ದೊರೆಯುತ್ತದೆ. ತಮ್ಮ ದಾರ್ಶನಿಕ ಚಿಂತನೆ ಮತ್ತು ಅದರ ವಿಕಾಸದ ಪರಿಣಾಮವಾಗಿ, ಮುಂದೆ ಅವರು 'ಸಮಾಜವಾದವನ್ನು' ತಂತ್ರಜ್ಞಾನದ ಅರ್ಥದಲ್ಲಿ ಸ್ವೀಕರಿಸಲಿಲ್ಲ. ಆದರೆ ಅವರು ಯಾವಾಗ ಇನ್ನೂ ಜನಸಂಘಕ್ಕೆ ಬರದೆ, ಉತ್ತರ ಪ್ರದೇಶದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಚಾರಕರಾಗಿದ್ದಾಗಲೇ, ಜನಸಂಘ ಬಂಡವಾಳಶಾಹಿಯ ಪರವಾಗಿದೆ ಎಂಬ ಆಕ್ಷೇಪಕ್ಕೆ ಉತ್ತರವಾಗಿ ಈ ಮಾತನ್ನು ಹೇಳಿದ್ದರು: "ಸಂಘವು ಬಂಡವಾಳವಾದಿಗಳನ್ನು ಮತ್ತು ಜಮೀನುದಾರರನ್ನು ಉಳಿಸಿಕೊಳ್ಳಬೇಕೆಂದು ಆಶಿಸುತ್ತದೆ ಎಂದು ಯೋಚಿಸುವುದು ಶುದ್ಧಾಂಗವಾಗಿ ಮೂರ್ಖತನವೇ ಆಗುತ್ತದೆ. ಕೇವಲ ಒಂದು ಹಿಡಿಯಷ್ಟು ಪ್ರಮಾಣದ ಜಮೀನುದಾರರನ್ನು ಉಳಿಸಿಕೊಳ್ಳುವ ಸಲುವಾಗಿ ದೇಶದ ಲಕ್ಷಾಂತರ ಸುಶಿಕ್ಷಿತ ಯುವಕರು ಹಗಲು–ರಾತ್ರಿ ತಮ್ಮ ಸರ್ವಸ್ವವನ್ನೂ ತ್ಯಜಿಸಿ ಕೆಲಸ ಮಾಡುತ್ತಾರೆಯೇ?" ಎಂದು ಕೇಳಿದ್ದರು.

ಜನಸಂಘದ ಸ್ಥಾಪನೆಯ ಅನಂತರ ರಾಮರಾಜ್ಯ ಪರಿಷತ್ತನ್ನು ಮತ್ತು ಜನಸಂಘವನ್ನು ಇಲ್ಲವಾಗಿಸಲು ಅನೇಕ ಪ್ರಯತ್ನಗಳು ನಡೆದವು. ಆದರೆ ಅವು ವಿಫಲಗೊಂಡವು. ಆ ಸಮಯದಲ್ಲಿ ದೀನ್ ದಯಾಳ್ ಉಪಾಧ್ಯಾಯರು ರಾಮರಾಜ್ಯ ಪರಿಷತ್ತಿನ ಬಗ್ಗೆ ಮಾಡಿದ್ದ ಟೀಕೆ ಈ ನಿಟ್ಟಿನಲ್ಲಿ ಉಲ್ಲೇಖನೀಯವಾಗಿದೆ. ಆ ಟೀಕೆ ಹೀಗಿತ್ತು; "ತನ್ನನ್ನು ಸಂಯುಕ್ತ ರಂಗದಿಂದ ಬೇರೆಯಾಗಿಸಿಕೊಂಡು ತಾನು ಪ್ರತಿಕ್ರಿಯಾವಾದಿ ಹಾಗೂ ಬಂಡವಾಳಶಾಹೀ ತತ್ವಗಳ ಪ್ರತಿನಿಧಿ ಮಾತ್ರವಾಗಿದ್ದೇನೆ ಮತ್ತು ಅದರ ಸೂತ್ರಗಳು ಕರಪಾತ್ರಿಯವರ ಗುಡಿಸಲಿನಿಂದ ಹೊರಹೊಮ್ಮದೆ, ಜಮೀನುದಾರರು ಮತ್ತು ಮಾರವಾಡಿಗಳ ಮಹಲುಗಳಿಂದ ಹೊರಹೊಮ್ಮುತ್ತವೆ ಎಂಬುದನ್ನು ಸಿದ್ಧಪಡಿಸಿಬಿಟ್ಟಿದೆ."

ಜನಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಜನಸಂಘದ ಆರ್ಥಿಕ ಕಾರ್ಯಕ್ರಮಗಳ ದೃಷ್ಟಿಯಿಂದ ೨೫ ಜುಲೈ, ೧೯೫೩ರಂದು ಅವರು ಸಾರ್ವಜನಿಕ ಭಾಷಣವನ್ನು ಕೊಟ್ಟಿದ್ದು ಈ ಪ್ರಕಾರವಾಗಿತ್ತು:

".........ನಮ್ಮ ಆರ್ಥಿಕ ಕಾರ್ಯಕ್ರಮ ಸಂಪೂರ್ಣವಾಗಿ ಸಮಾಜವಾದಿಯಾಗಿದೆ.

ಇಂದಿನ ಆರ್ಥಿಕ ಚೌಕಟ್ಟಿನಲ್ಲಿ ಎದ್ದುಕಾಣುವಂತಹ, ಆಯ–ವ್ಯಯಕ್ಕೆ ಸಂಬಂಧಪಟ್ಟಿರುವಂತಹ ವಿಷಮತೆಯನ್ನು ತೊಡೆದುಹಾಕಲು ನಾವು ಬದ್ಧರಾಗಿದ್ದೇವೆ. ಆದ್ದರಿಂದ ಹೊಸದಾದ ಮತ್ತು ಅಧಿಕ ಆದಾಯದ ನಡುವೆ ಒಂದು ಮತ್ತು ಇಪ್ಪತ್ತರ ಅನುಪಾತವನ್ನು ಸ್ಥಿರಗೊಳಿಸಲು ನಾವು ಪ್ರಯತ್ನಿಸುತ್ತೇವೆ. ಕೇವಲ ಆಧಾರಪ್ರಾಯವಾಗಿರುವಂತಹ ಉದ್ಯೋಗಗಳನ್ನು ರಾಷ್ಟ್ರೀಕರಿಸುವುದು ಮಾತ್ರವಲ್ಲ, ಕೆಲವೇ ಕೆಲವು ವ್ಯಕ್ತಿಗಳ ಏಕಸ್ವಾಮ್ಯ ಇರುವಂಥ ಉದ್ಯೋಗಗಳಿಗೂ ಈ ಸಿದ್ಧಾಂತವನ್ನು ಅನ್ವಯಿಸುವುದು ಉಚಿತವೆಂದು ನಾವು ಭಾವಿಸುತ್ತೇವೆ. ಆರ್ಥಿಕ ಹಾಗೂ ರಾಜಕೀಯ ಪ್ರಭುತ್ವದ ವಿಕೇಂದ್ರಿಕರಣವೇ ನಮ್ಮ ಮುಖ್ಯ ಸಿದ್ಧಾಂತವಾಗಿದೆ."

"ಹಿಂದಿನ ಜಮೀನುದಾರರು ಹಾಗೂ ಜಹಗೀರುದಾರರಿಗೆ ಪರಿಹಾರ ನೀಡಬಾರದು ಎಂಬುದು ನಮ್ಮ ಒತ್ತಾಯವಾಗಿದೆ; ಅದಕ್ಕೆ ಬದಲಾಗಿ ಅವರನ್ನು ಪುನಃಸ್ಥಾಪಿಸುವ ಸಲುವಾಗಿ ಆವಶ್ಯಕವಾಗಿರುವಂಥ ವ್ಯವಸ್ಥೆ ಮಾಡಬೇಕಾಗಿದೆ.

ಇದೇ ವರ್ಷದ ಕೊನೆಯಲ್ಲಿ ಅವರು ಉತ್ತರ ಪ್ರದೇಶದ ಪ್ರಾದೇಶಿಕ ಸಮ್ಮೇಳನದಲ್ಲಿ ಯಾವ ವಿಶಾಲ ಆರ್ಥಿಕ ನೀತಿಯ ಪ್ರಲೇಖನವನ್ನು ಮಂಡಿಸಿದರೋ ಅದು ಮೇಲ್ಕಂಡ ಹೇಳಿಕೆಯ ಸೈದ್ಧಾಂತಿಕ ವಿಶ್ಲೇಷಣೆಯೇ ಆಗಿದೆ. ಅವರ ಚಿಂತನೆಯನ್ನು ಸ್ಪಷ್ಟಪಡಿಸುವಂಥ ಮೂರು ಘಟನೆಗಳನ್ನು ಮತ್ತು ಆ ಘಟನೆಗಳ ಬಗ್ಗೆ ದೀನ್ ದಯಾಳರ ಪ್ರತಿಕ್ರಿಯೆಗಳನ್ನು ತಿಳಿದುಕೊಳ್ಳುವುದು ಇಲ್ಲಿ ಉಪಯುಕ್ತ ಎನಿಸುತ್ತದೆ.

೧) ನಿರುದ್ಯೋಗವನ್ನು ಹೆಚ್ಚಿಸುವಂಥ ಯಂತ್ರಗಳ ನವೀಕರಣದ ವಿರುದ್ಧ ಕಾನ್‌ಪುರದ ಹತ್ತಿ ಗಿರಣಿಯ ಕಾರ್ಮಿಕರು ಬೆಂಬಲವನ್ನು ವ್ಯಕ್ತಪಡಿಸುತ್ತಾ ಉಪಾಧ್ಯಾಯರು ಬಂಡವಾಳವಾದ ಮತ್ತು ಯಂತ್ರಗಳ ಅಭಿನವೀಕರಣ –ಇವುಗಳ ನಡುವಣ ಸಂಬಂಧದ ಬಗ್ಗೆ ವ್ಯಾಖ್ಯಾನ ಮಾಡುತ್ತ ಹೇಳಿದರು:

"ಯಂತ್ರಗಳ ಅಭಿನವೀಕರಣದ ಪ್ರಶ್ನೆ ಜಟಿಲವಾಗಿದೆ ಮತ್ತು ಅದು ಕೇವಲ ಕಾರ್ಮಿಕರಿಗೇ ಸೀಮಿತವಾಗಿಲ್ಲ; ಇದು ಅಖಿಲ ಭಾರತದ ಸಮಸ್ಯೆಯಾಗಿದೆ....... ವಾಸ್ತವವಾಗಿ ಅಭಿನವೀಕರಣವೇ ಬೃಹತ್ ಉದ್ಯಮಗಳ ಸ್ಥಾಪನೆ ಮತ್ತು ಬಂಡವಾಳವಾದಿ ಆರ್ಥಿಕ ವ್ಯವಸ್ಥೆಯ ಆಧಾರವಾಗಿದೆ. ಇವತ್ತಿನ ವಿಜ್ಞಾನ, ಕನಿಷ್ಠ ಪ್ರಮಾಣದ ಮನುಷ್ಯರನ್ನು ಬಳಸಲು ಸಾಧ್ಯವಾಗುವಂಥ ಯಂತ್ರಗಳನ್ನು ನಿರ್ಮಿಸುವ ಪ್ರಯತ್ನ ಮಾಡುತ್ತಿದೆ. ಎಲ್ಲಿ ಜನಸಂಖ್ಯೆ ಕಮ್ಮಿ ಇರುತ್ತದೆಯೋ ಅಲ್ಲಿ ಈ ಹೊಸ ಯಂತ್ರಗಳು ವರವಾಗಿ ಪರಿಣಮಿಸುತ್ತವೆ. ನಮ್ಮಲ್ಲಿ ಪ್ರತಿಯೊಂದು ಯಂತ್ರವೂ ನಿರುದ್ಯೋಗವನ್ನೇ ಹೊತ್ತು ತರುತ್ತದೆ."

೨) ದೆಹಲಿಯಲ್ಲಿ ಅಂಗಡಿಯೇ ಇಲ್ಲದ ಮಾರಾಟಗಾರರ ಸಮಸ್ಯೆಗಳನ್ನು ಕುರಿತು ದೀನ್ ದಯಾಳ್ ಉಪಾಧ್ಯಾಯರು ಒಂದು ಸರ್ವೇಕ್ಷಣಾತ್ಮಕ ಪ್ರಬಂಧವನ್ನು



ಬರೆದಿದ್ದಾರೆ. ಅದರಲ್ಲಿ ಅವರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ:

"..........ಬಹುಶಃ ಎಷ್ಟು ಮಂದಿ ಮಾರಾಟಗಾರರು ಇದ್ದಾರೋ ಅವರೆಲ್ಲರ ಸಂಖ್ಯೆಗಿಂತ, ಅಂಗಡಿಯಿಲ್ಲದೆ ಸಮಾನುಗಳನ್ನು ಮಾರಾಟ ಮಾಡುತ್ತ, ತಳ್ಳುವ ಗಾಡಿಗಳ ನೆರವಿನಿಂದ ಮಾರಾಟ ಮಾಡುತ್ತ ಹೊಟ್ಟೆ ಹೊರೆಯುವಂಥವರ ಸಂಖ್ಯೆಯೇ ಹೆಚ್ಚಾಗಿವೆ. ದೆಹಲಿಯ ನಗರ ಪಾಲಿಕೆಯ ಉಪನಿಯಮಗಳ ಪ್ರಕಾರ, ಈ ಜನರಿಗೆ ಕಲ್ಲುಚಪ್ಪಡಿಗಳ ಮೇಲೆ ಕೂತು ಸಾಮಾನುಗಳನ್ನು ಮಾರಾಟ ಮಾಡಲು ಅನುಮತಿ ಕೊಡಲಾಗುವುದಿಲ್ಲ. ದೆಹಲಿಯ ಆಡಳಿತ ವರ್ಗದವರಿಗೆ ವಾಹನಗಳ ಸಂಚಾರದ ದಟ್ಟಣೆಯದೇ ದೊಡ್ಡ ಸಮಸ್ಯೆ ಆಗಿದೆ; ಏಕೆಂದರೆ ಇಂತಹ ಮಾರಾಟಗಾರರಿಂದ ರಸ್ತೆಯ ಮೇಲೆ ಜನ ಜಂಗುಳಿ ಹೆಚ್ಚಾಗುವುದರಿಂದ ಮೋಟಾರು ವಾಹನಗಳಿಂದ ಸಂಚಾರ ಬಹಳ ಕಷ್ಟಕರವಾಗುತ್ತದೆ. ಮತ್ತೆ ಅಂಗಡಿಯ ಮಾಲೀಕರೂ ಇವರ ಬಗ್ಗೆ ದೂರುತ್ತ ಇರುತ್ತಾರೆ. ಅವರ ಅಂಗಡಿಯ ಮುಂದೆ ಕೂತು ವ್ಯಾಪಾರ ಮಾಡುವುದರಿಂದ, ಅವರ ವ್ಯಾಪಾರಕ್ಕೆ ತೊಂದರೆ ಉಂಟಾಗುತ್ತದೆ ಮತ್ತೆ ನಗರದ ಸೌಂದರ್ಯವನ್ನು ಕುರಿತು ಪ್ರಶ್ನೆಯೂ ಇದೆ. ಹರುಕು–ಮುರುಕು ತಳ್ಳುಗಾಡಿಗಳು ಮತ್ತು ಚಿಂದಿ ಟೆಂಟುಗಳಿಂದ ರಾಜಧಾನಿಯ ರಸ್ತೆಗಳ ಸೌಂದರ್ಯವು ನಶಿಸಿಹೋಗುತ್ತದೆ. ಇದರ ಪರಿಣಾಮವಾಗಿ ದೆಹಲಿ ಸರ್ಕಾರವು ಬೀದಿ ವ್ಯಾಪಾರಿಗಳ ವಿರುದ್ಧ ದೊಡ್ಡ ಹೋರಾಟವನ್ನೇ ನಡೆಸುತ್ತಾ ಇದ್ದಾರೆ".

ಉಪಾಧ್ಯಾಯರು ಈ ಬಡ ಬೀದಿ ವ್ಯಾಪಾರಿಗಳ ಹಾಗೂ ಪೋಲೀಸರ ವರ್ತನೆ, ಅವರೊಡನೆ ನಡೆಯುವ ಹೀನ ವರ್ತನೆ ಹಾಗೂ ಕೆಳಮಟ್ಟದ ಮನೋವಿಜ್ಞಾನದ ಜೀವಂತ ವರ್ಣನೆಯನ್ನೇ ಅವರು ತಮ್ಮ ಪ್ರಬಂಧದಲ್ಲಿ ಮಂಡಿಸುತ್ತ, ಕೊನೆಯದಾಗಿ, ಈ ಮಾತನ್ನು ಹೇಳಿದ್ದಾರೆ, 'ಇಂದು ದೇಶದಲ್ಲಿ ಭೂಮಿಹೀನ ರೈತರಿಗೆ ಯಾವ ತರಹದ ಸಮಸ್ಯೆಯಿದೆಯೋ, ಅಂಗಡಿಯಿಲ್ಲದ ವ್ಯಾಪಾರಿಗಳ ಸಮಸ್ಯೆಗಳೂ ಅಂಥವೇ ಆಗಿವೆ. ನಾವು ಈ ಸಮಸ್ಯೆಗೆ ಒಂದು ಪರಿಹಾರ ಹುಡುಕಲೇ ಬೇಕಾಗಿದೆ".

೩) ವಿಂಧ್ಯ ಪ್ರದೇಶದಲ್ಲಿ ವಜ್ರದ ಗಣಿಗಳ ಸ್ವತಂತ್ರ ನಿಗಮವನ್ನು ರಚಿಸಿ ಗಣಿಗಳ ಮಾಲೀಕರಿಂದ ಗಣಿಗಳನ್ನು ಕಸಿದುಕೊಳ್ಳಬೇಕು ಮತ್ತು ಯಾವುದೇ ತರಹದ ಪರಿಹಾರ ಕೊಡಬೇಕಾಗಿಲ್ಲ ಎಂಬ ಒಂದು ಪ್ರಸ್ತಾವನೆಯನ್ನು ಜನಸಂಘ ಕಾರ್ಯಸಮಿತಿ ಅಂಗೀಕರಿಸಿತು:

"ಕಾರ್ಯಸಮಿತಿ ಮುತ್ತು–ರತ್ನಗಳ ತನಿಖಾ ಸಮಿತಿಯ ವರದಿಯ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿತು. ಈ ಸಮಿತಿ ನೀಡಿರುವ ಸಲಹೆಯ ಮೇರೆಗೆ, ಜನಸಂಘವು ಸರ್ಕಾರ ಮತ್ತು ಜನತೆ– ಈ ಇಬ್ಬರ ಸಹಕಾರದೊಂದಿಗೆ ಒಂದು ಸ್ವತಂತ್ರ ನಿಗಮವನ್ನು ಸ್ಥಾಪಿಸಬೇಕು ಎಂಬ ಸಲಹೆಯ ಪರವಾಗಿದೆ ಎಂದು

ಸಮಿತಿಗೆ ಹೇಳಿದೆ. ವಜ್ರದ ಗಣಿಯ ಗುತ್ತಿಗೆದಾರರಿಗೆ ಪರಿಹಾರ ನೀಡುವುದಕ್ಕೆ ಕಾರ್ಯಸಮಿತಿ ತೀವ್ರ ವಿರೋಧವನ್ನೇ ವ್ಯಕ್ತಪಡಿಸಿತು. ಮತ್ತು ಗುತ್ತಿಗೆದಾರರು 'ಮಿನರಲ್ ಕನ್‌ಸೆಷನ್ ರೂಲ್'ನ ೪೮ಮತ್ತು ೫೧ನೆಯ ಕಲಮನ್ನು ಉಲ್ಲಂಘಿಸಿದ್ದಾರೆ– ಎಂದೂ ಆ ಕಾರ್ಯಸಮಿತಿ ಹೇಳಿತು. ಆದ್ದರಿಂದ ೫೩ನೆಯ ಕಲಮಿನ ಪ್ರಕಾರ ಅವರ ಗುತ್ತಿಗೆಯನ್ನು ಜಪ್ತು ಮಾಡಬೇಕಾಗಿದೆ".

ಮೇಲ್ಕಂಡ ವಿವರಣೆಯ ತಾತ್ಪರ್ಯ ಇಷ್ಟು:

ಭಾರತೀಯ ಜನಸಂಘ ಮತ್ತು ಅದರ ಅರ್ಥನೀತಿ ನಿಯಾಮಕರಾದ ದೀನ್ ದಯಾಳ್ ಉಪಾಧ್ಯಾಯರ ಬಗ್ಗೆ ಸಾಮಾನ್ಯವಾಗಿ ಇರುವ ಅಭಿಪ್ರಾಯವೇನೆಂದರೆ ಇವರು ಬಲಪಂಥೀಯ ಬಂಡವಾಳಶಾಹಿ ವಿಚಾರಧಾರೆಯ ಸಮರ್ಥಕರು. ಉಪಾಧ್ಯಾಯರ ಸಾಹಿತ್ಯದಿಂದ ಈ ಧಾರಣೆಗೆ ಪುಷ್ಟಿ ದೊರೆಯುವುದಿಲ್ಲ. ಅವರ ಚಿಂತನೆಯ ಮೂಲ ಪ್ರವೃತ್ತಿ ಆರ್ಥಿಕ ಸಮಾನತೆಯನ್ನು ಮತ್ತು ಸಮಷ್ಟಿವಾದವನ್ನು ಪೋಷಣೆಮಾಡುವಂತಹುದು.

**ಆರ್ಥಿಕ ನೀತಿಯ ಸಮೀಕ್ಷೆ: ಆರ್ಥಿಕ ನೀತಿಯ ಭಾರತೀಯಕರಣ**

ಆರ್ಥಿಕ ನೀತಿಗೆ ಸಂಬಂಧಿಸಿದ ತಮ್ಮ ಭಾಷಣಗಳು ಹಾಗೂ ಲೇಖನಗಳಲ್ಲಿ, ಆಗಾಗ ಸರ್ಕಾರ ತೆಗೆದುಕೊಂಡಂತಹ ನಿರ್ಣಯಗಳನ್ನು ಕುರಿತು ಅವರು ತಮ್ಮ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುತ್ತಿದ್ದರು. ಸಾಮಾನ್ಯವಾಗಿ ಆರ್ಥಿಕ ನೀತಿಯ ಕ್ಷೇತ್ರದಲ್ಲಿ ಪಾಶ್ಚಾತ್ಯರನ್ನು ಅನುಕರಣೆ ಮಾಡುವುದು ಕೆಟ್ಟದ್ದು ಎಂದು ಪರಿಗಣಿಸಲಾಗುತ್ತಿತ್ತು. ನಮ್ಮ ಮತ್ತು ಪಾಶ್ಚಾತ್ಯ ಪರಿಸ್ಥಿತಿಗಳಲ್ಲಿ ಬಹಳ ವ್ಯತ್ಯಾಸವಿದೆ. ಆದ್ದರಿಂದ ನಾವು ನಮ್ಮ 'ಆರ್ಥಿಕ ನೀತಿಯ ಭಾರತೀಯಕರಣ' ಮಾಡಬೇಕಾಗುತ್ತದೆ. ತಮ್ಮ ಈ ಅಭಿಪ್ರಾಯದ ಬಗ್ಗೆ ವಿವೇಚನೆ ಮಾಡುತ್ತಾ ದೀನ್ ದಯಾಳ್ ಉಪಾಧ್ಯಾಯರು ಹೀಗೆಂದು ಬರೆದಿದ್ದಾರೆ:

"ದೇಶದ ದಾರಿದ್ರ್ಯವನ್ನು ದೂರವಾಗಿಸಬೇಕಾಗಿದೆ ಎಂಬುದರಲ್ಲಿ ಎರಡು ಅಭಿಪ್ರಾಯಗಳಿರುವುದು ಸಾಧ್ಯವಿಲ್ಲ; ಆದರೆ ಈ ಬಡತನವನ್ನು ದೂರ ಮಾಡುವುದು ಹೇಗೆ ಎಂಬುದೇ ನಮ್ಮ ಮುಂದಿರುವ ಪ್ರಶ್ನೆ? ನಾವು ಅಮೆರಿಕದ ಮಾರ್ಗದಲ್ಲಿ ನಡೆಯಬೇಕೋ ಅಥವಾ ರಷ್ಯಾದ ಮಾರ್ಗವನ್ನು ಅಳವಡಿಸಿಕೊಳ್ಳಬೇಕೋ ಅಥವಾ ಯುರೋಪಿನ ದೇಶಗಳನ್ನು ಅನುಕರಣೆ ಮಾಡಬೇಕೋ? ಆದರೆ ಒಂದು ಮಾತನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಅದು ಏನೆಂದರೆ ಈ ದೇಶಗಳ ಆರ್ಥಿಕ ವ್ಯವಸ್ಥೆಗಳಲ್ಲಿ ಇತರ ಯಾವುದೇ ಭೇದಗಳಿದ್ದರೂ, ಅವುಗಳಲ್ಲಿ ಒಂದು ಮೂಲಭೂತವಾದ ಸಾಮ್ಯವಿರುತ್ತದೆ. ಎಲ್ಲರೂ ಯಂತ್ರಗಳನ್ನು ಆರ್ಥಿಕ ವಿಕಾಸಕ್ಕೆ ಒಂದು ಮಾಧ್ಯಮವೆಂದು ಭಾವಿಸಿದ್ದಾರೆ. ಅತಿ ಕಮ್ಮಿ ಜನರಿಂದಾದ ಅಧಿಕ



ಉತ್ಪಾದನೆಯನ್ನು ಮಾರಾಟ ಮಾಡಲಿಕ್ಕೆ ವಿದೇಶಗಳ ಮಾರುಕಟ್ಟೆಯನ್ನು ಹುಡುಕಬೇಕಾಯಿತು. ಸಾಮ್ರಾಜ್ಯವಾದೀ ವಸಾಹತುಶಾಹಿ ವ್ಯವಸ್ಥೆ ಎಂಬುದು ಇದರದ್ದೇ ಸಹಜವಾದ ಪರಿಣಾಮವೇ ಆಯಿತು. ಈ ರಾಜ್ಯದ ವಿಸ್ತಾರದ ಸ್ವರೂಪ ಬೇರೆ ಬೇರೆಯಾಗಿದೆಯಾದರೂ ರಷ್ಯಾ, ಅಮೆರಿಕ ಮತ್ತು ಇಂಗ್ಲೆಂಡ್ – ಈ ಎಲ್ಲ ದೇಶಗಳೂ ಇದೇ ಮಾರ್ಗವನ್ನೇ ಅವಲಂಬಿಸಬೇಕಾಯಿತೇನು? .........ಭಾರತದ ಆರ್ಥಿಕ ಪ್ರಗತಿಯ ಹಾದಿ ಯಂತ್ರಗಳ ಹಾದಿ ಅಲ್ಲವೆಂಬುದನ್ನು ನಾವು ಒಪ್ಪಬೇಕು. ಗೃಹ ಕೈಗಾರಿಕೆಗಳನ್ನೇ ಭಾರತೀಯ ಆರ್ಥಿಕ ನೀತಿಯ ಆಧಾರವನ್ನಾಗಿಸಿಕೊಂಡು, ವಿಕೇಂದ್ರೀಕರಿಸಿದ ಆರ್ಥಿಕ ವ್ಯವಸ್ಥೆಯನ್ನು ವಿಕಾಸಗೊಳಿಸಿದರೇನೇ ಈ ದೇಶದಲ್ಲಿ ಆರ್ಥಿಕ ಪ್ರಗತಿ ಉಂಟಾಗುವ ಸಾಧ್ಯತೆ ಇದೆ".

ಉಪಾಧ್ಯಾಯರು ಬೃಹತ್ ಉದ್ಯಮಗಳ ಆಧಾರದ ಮೇಲೆ ರಚಿಸಲಾಗುವ ಅರ್ಥವ್ಯವಸ್ಥೆ ಭಾರತೀಯ ಪರಿಸ್ಥಿತಿಗೆ ಸರಿಹೊಂದುವುದಿಲ್ಲವೆಂದು ಭಾವಿಸಿದ್ದರು. ಕೃಷಿ ಕ್ಷೇತ್ರದಲ್ಲಿ ಚಿಕ್ಕ ಹಿಡುವಳಿಗಳನ್ನು ಮತ್ತು ಅಂಥ ಹಿಡುವಳಿಗಳ ಒಡೆತನವನ್ನು ಬೆಂಬಲಿಸುವವರಾಗಿದ್ದರು. ೧೯೫೯ರಲ್ಲಿ ಕಾಂಗ್ರೆಸ್ ಅಧಿವೇಶನದಲ್ಲಿ ಸಾಮ್ಯವಾದೀ ರಾಷ್ಟ್ರವಾದ ಚೀಣಾದ ಕೃಷಿಯೋಜನೆಯಂತೆ 'ಸಹಕಾರಿ ಕೃಷಿ'ಯ ಪ್ರಸ್ತಾವವನ್ನು ಅಂಗೀಕರಿಸಲಾಯಿತು. ಅದನ್ನು ಅವ್ಯಾವಹಾರಿಕ ಮತ್ತು ಅವಾಂಛನೀಯವೆಂದು ಪರಿಗಣಿಸಿ, ಉಪಾಧ್ಯಾಯರು ಅದನ್ನು ವಿರೋಧಿಸಿದರು.

ಅವರು ದೇಶದಲ್ಲಿ ನಡೆಯುವ ಎಲ್ಲ ಆರ್ಥಿಕ ವಿದ್ಯಮಾನಗಳ ಬಗ್ಗೆ ತಮ್ಮ ಟೀಕೆಗಳನ್ನು ಮುಂದುವರಿಸುತ್ತಿದ್ದರು. ಆದ್ದರಿಂದ ಈ ರೂಪದಲ್ಲಿ ಲಭ್ಯವಾಗಿರುವ ಬಿಡಿ ಟೀಕೆ ಟಿಪ್ಪಣಿಗಳ ಸಾಹಿತ್ಯ ಈ ವಿಷಯವಾಗಿ ಅಧ್ಯಯನ ಮಾಡುವವರಿಗೆ ಉಪಲಬ್ಧವಾಗಿದೆ. ಸರ್ಕಾರವು ಆಹಾರಧಾನ್ಯಗಳ ಕೃಷಿಯ ರಾಷ್ಟ್ರೀಕರಣದ ಪ್ರಸ್ತಾಪವನ್ನು ಮುಂದಿಟ್ಟಾಗ, ದೀನ್ ದಯಾಳರು ಗಂಭೀರ ಅರ್ಥಶಾಸ್ತ್ರೀಯ ತರ್ಕಗಳ ಆಧಾರದ ಮೇಲೆ ಅದನ್ನು ವಿರೋಧಿಸಿದರು. ೧೯೬೦ರಲ್ಲಿ ಪಿ.ಎಲ್. ೪೮೦, ೧೯೬೩ರ ಸ್ವರ್ಣನಿಯಂತ್ರಣ ಕಾನೂನು ಮತ್ತು ೧೯೬೬ರಲ್ಲಿ ಭಾರತೀಯ ರೂಪಾಯಿಯ ಅಪಮೌಲ್ಯೀಕರಣ– ಇಂತಹ ಘಟನೆಗಳು ನಡೆದು; ಇದರಿಂದ ದೀನ್ ದಯಾಳರು ಬೌದ್ಧಿಕವಾಗಿ ಆಂದೋಲನವನ್ನು ನಡೆಸಬೇಕಾಯಿತು. ರಾಷ್ಟ್ರೀಯ ಮತ್ತು ಮಾನವೀಯ ಸಂವೇದನೆಯ ತಮ್ಮ ದೃಷ್ಟಿಕೋನವನ್ನು ಅವರು ತಮ್ಮ ಸಾಂಗೋಪಾಂಗವಾದಂತಹ ತರ್ಕಗಳಿಂದ ಪ್ರಸ್ತುತಪಡಿಸಿದರು.

ದೀನ್ ದಯಾಳ್ ಉಪಾಧ್ಯಾಯರು ನಮ್ಮ ಪಂಚವಾರ್ಷಿಕ ಯೋಜನೆಗಳನ್ನು ಕುರಿತು 'ಎರಡು ಯೋಜನೆಗಳು: ಭರವಸೆ, ಕಾರ್ಯಾನುಷ್ಠಾನ, ಪರಿಣಾಮಗಳು' ಎಂಬ ಹೆಸರಿನಲ್ಲಿ ಒಂದು ಸಂಶೋಧನಾತ್ಮಕ ಗ್ರಂಥವನ್ನು ಆಂಗ್ಲಭಾಷೆಯಲ್ಲಿ

ರಚಿಸಿದರು. ಖಂಡಿತವಾಗಿಯೂ ಇದು ಅರ್ಥಶಾಸ್ತ್ರಜ್ಞನಾದ ರಾಜಕೀಯ ನೇತಾರನೊಬ್ಬ ತರ್ಕಸಂಗತವಾಗಿ ಮಾಡಿದ ವಿವೇಚನೆಯೇ ಆಗಿತ್ತು. ಆದ್ದರಿಂದಲೇ ವಿವೇಚನೆ ಮತ್ತು ವ್ಯಾಖ್ಯಾನಗಳಲ್ಲಿ ಆಡಳಿತ ಪಕ್ಷದ ವಿರುದ್ಧವಾಗಿ ರಾಜನೈತಿಕ ಪ್ರಹಾರದ ಭಾಷೆಯನ್ನೇ ಬಳಸಲಾಗಿದೆ. ಈ ಪುಸ್ತಕ ಕೇವಲ ಎರಡು ಯೋಜನೆಗಳನ್ನು ಕುರಿತದ್ದು ಮಾತ್ರವಲ್ಲ; ಆರ್ಥಿಕ ಯೋಜನೆಯ ಒತ್ತುಗಳು, ಇತಿಹಾಸ ಮತ್ತು ತಾರ್ಕಿಕ ನಿಷ್ಪತ್ತಿಯ ಸರ್ವಾಂಗೀಣ ಚಿಂತನೆಯನ್ನು ಮುಂದಿರಿಸುತ್ತದೆ. ತಥ್ಯಾತ್ಮಕ, ತುಲನಾತ್ಮಕ ಮತ್ತು ವ್ಯಾಖ್ಯಾನಾತ್ಮಕ ಅಂಶಗಳು ಮತ್ತು ಕೋಷ್ಟಕ ಈ ಪುಸ್ತಕದಲ್ಲಿ ಎಷ್ಟರ ಮಟ್ಟಿಗೆ ತುಂಬಿಕೊಂಡಿವೆಯೆಂದರೆ ಅರ್ಥಶಾಸ್ತ್ರದ ಶಾಸ್ತ್ರೀಯ ಹಿನ್ನೆಲೆ ಇಲ್ಲದಿದ್ದಲ್ಲಿ ಅವನ್ನು ಅರ್ಥಮಾಡಿಕೊಳ್ಳುವುದು ಮತ್ತು ಆಸಕ್ತಿಯಿಂದ ಓದುವುದು ಬಹಳ ಕಷ್ಟಕರವೇ ಆಗುತ್ತದೆ.

ಉಪಾಧ್ಯಾಯರು ಬರೆದಿರುವ ಈ ಪುಸ್ತಕವನ್ನು ಕುರಿತು ಯಜ್ಞದತ್ತ ಶರ್ಮಾ ಅವರು ಹೀಗೆನ್ನುತ್ತಾರೆ:

"ಈ ಕಾರ್ಯ ಎಷ್ಟರ ಮಟ್ಟಿಗೆ ಒಳಹೊಕ್ಕು ನೋಡುವಂಥದಾಗಿತ್ತು ಎಂದರೆ ಆಗ ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದ ಶ್ರೀ ಶ್ರೀಮನ್ನಾರಾಯಣ ಅಗ್ರವಾಲ್ ಅವರು ಸಂಬಂಧಪಟ್ಟ ಎಲ್ಲ ಅಧಿಕಾರಿಗಳಿಗೆ ಒಂದು ಸುತ್ತೋಲೆಯನ್ನು ಹೊರಡಿಸಿದರು ಮತ್ತು ಪಂಡಿತ್ ದೀನ್ ದಯಾಳರ ಪುಸ್ತಕದಲ್ಲಿರುವಷ್ಟು ಗಂಭೀರವಾದ ಮತ್ತು ತಥ್ಯಗಳ ಮೇಲೆ ಬೆಳಕು ಚೆಲ್ಲುವಂಥ ಯೋಜನಾ–ವಿಮರ್ಶೆಯನ್ನು ನಾನು ಬೇರೆ ಎಲ್ಲಿಯೂ ನೋಡಿಲ್ಲವೆಂದು ಹೇಳಿದರು. ಈ ಪುಸ್ತಕವೇ ಅಲ್ಲದೆ ಅವರು ನಾಲ್ಕನೆಯ ಪಂಚವಾರ್ಷಿಕ ಯೋಜನೆಯವರೆಗೂ ನಿರಂತರವಾಗಿ ತಮ್ಮ ಲೇಖನಗಳ ಮೂಲಕ ಆ ಎಲ್ಲ ಯೋಜನೆಗಳ ಬಗ್ಗೆ ಸೂಕ್ತ ಟೀಕೆ– ಟಿಪ್ಪಣಿ ಮಾಡುತ್ತಲೇ ಇದ್ದರು. ಅವರ ವಿವೇಚನೆಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕಾದರೆ ಸಮಗ್ರ ಸಾಮಗ್ರಿಯ ಅಧ್ಯಯನ ಆವಶ್ಯಕವಾಗುತ್ತದೆ.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ನಿರ್ಮಾಣದ ಕಾಲದಲ್ಲೇ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರೂ ಅವರು ತೀರಿಕೊಂಡರು. ಭಾರತದ ಪಂಚವಾರ್ಷಿಕ ಯೋಜನೆಗಳ ಮೇಲೆ ಓರ್ವ ವ್ಯಕ್ತಿಯ ಸಹಜ ಪ್ರಭಾವವೇನಾದರೂ ಇದೆಯೆಂದರೆ ಅದು ನೆಹರೂರವರದ್ದಾಗಿದೆ. ಅವರು ಈ ಯೋಜನಾಕ್ರಮದ ಸೃಷ್ಟಿಕರ್ತರಾಗಿದ್ದರು. ಆರ್ಥಿಕ ವಿಕಾಸದ ಅವರ ಮಹತ್ವಾಕಾಂಕ್ಷೀ ಚೇತನದ ಪ್ರಭಾವ ಈ ಯೋಜನೆಗಳಲ್ಲಿ ಸಾಕಷ್ಟು ದೊರೆಯುತ್ತದೆ. ತೀವ್ರಗತಿಯಿಲ್ಲದ ಭಾರತದ ಆರ್ಥಿಕ ವಿಕಾಸವನ್ನು ಸಾಧಿಸಿ, ಪ್ರಪಂಚದ ಪ್ರಗತಿಯ ಸ್ಪರ್ಧೆಯಲ್ಲಿ ನಮ್ಮ ದೇಶವನ್ನು ಸೇರಿಸುವ ಆಕಾಂಕ್ಷೆಯನ್ನು ಜವಾಹರಲಾಲ್ ನೆಹರೂ ಅವರು ಹೊಂದಿದ್ದರು. ವಿಶ್ವದ ವಿಕಾಸದ ವೇಗದ ಪೈಪೋಟಿಯಲ್ಲಿ ನಮ್ಮ ದೇಶ ಮಂದಗತಿಯಿಂದ ಸಾಗುತ್ತಿದ್ದುದು ಅವರಿಗೆ



ಬಹಳ ವೇದನೆಯನ್ನೇ ಉಂಟುಮಾಡುತ್ತಿತ್ತು. ಆದ್ದರಿಂದ ಅವರು ಕೃಷಿ ಮತ್ತು ಉದ್ಯಮದ ಅತ್ಯಾಧುನಿಕವಾದ ಮತ್ತು ಬೃಹತ್ತರವಾದ ಸಾಧನಗಳನ್ನು ಒಳಗೊಂಡಿರುವಂಥ ಯೋಜನೆಗಳನ್ನು ಜಾರಿಗೆ ತಂದರು. ದೀನ್ ದಯಾಳ್ ಉಪಾಧ್ಯಾಯರು ಸಹಜ ವೇಗದ ಪಕ್ಷಪಾತಿಗಳಾಗಿದ್ದರು. ಕ್ರಮೇಣ ವಿಕಾಸ ಸಾಧಿತವಾಗುವ ಪ್ರಕ್ರಿಯೆ ಹೆಚ್ಚು ಬಾಳಿಕೆ ಬರುವಂಥದು ಹಾಗೂ ಕಡಿಮೆ ಪ್ರಮಾಣದ ಸಮಸ್ಯೆಗಳನ್ನು ಉಂಟುಮಾಡಬಹುದಾದದ್ದು ಎಂದು ಅವರು ನಂಬಿದ್ದವರು. ವಿಶ್ವದ ಪ್ರಗತಿಯ ಸ್ಪರ್ಧೆಯಲ್ಲಿ ನಮ್ಮ ರಾಷ್ಟ್ರೀಯ ವ್ಯಕ್ತಿತ್ವ ಎದ್ದು ಕಾಣಬೇಕಾಗಿರುವಂತೆಯೇ ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಯೂ ಅದರಲ್ಲಿ ಸಹಭಾಗಿಯಾಗಬೇಕು ಎಂಬುದರ ಬಗ್ಗೆಯೂ ನಾವು ಚಿಂತಿಸಬೇಕಾಗಿದೆ. ಆದ್ದರಿಂದ ಅವರು ಎಲ್ಲರಿಗೂ ಉದ್ಯೋಗ ಎಂಬುದು ಪಂಚವಾರ್ಷಿಕ ಯೋಜನೆಗಳ ಪ್ರಥಮ ಆದ್ಯತೆಯಾಗಿರಬೇಕೆಂದು ಬಯಸಿದ್ದರು. ನಮ್ಮ ಶಕ್ತಿಯನ್ನು ಮೀರಿ ಅತಿ ವೇಗದಿಂದ ಓಡಿದರೆ, ನಮ್ಮ ಆರೋಗ್ಯದ ಮೇಲೆ ಏನು ಪರಿಣಾಮ ಬೀರುತ್ತದೆಯೋ ಅದಂತೂ ಆಯಿತು; ಆದರೆ ಮಹತ್ವಾಕಾಂಕ್ಷಿ ಪೂರಕವಾದ ಸಾಹಸಪೂರ್ಣ ಯೋಜನೆಯ ಯಾವ ಸುಖಕರ ಪರಿಣಾಮಗಳು ಆಗಬೇಕಿತ್ತೋ, ಅದು ಆಗಲಿಲ್ಲ. ನೆಹರೂ ಹಾಗೂ ಉಪಾಧ್ಯಾಯರ ನಡುವಣ ಈ ಭಿನ್ನಾಭಿಪ್ರಾಯ ಕೊನೆಯ ತನಕ ಉಳಿದಿತ್ತು. ನಾಲ್ಕನೆಯ ಯೋಜನೆಯೂ ಎಂದಿನಂತೆ ಭಾರವಾದುದೇ ಆಗಿತ್ತು. ದೀನ್ ದಯಾಳ್ ಉಪಾಧ್ಯಾಯರು ಹೀಗೆಂದು ಹೇಳಿದರು: "ಬಂಗಾರದ ಮೊಟ್ಟೆ ಕೊಡುವಂತಹ ಕೋಳಿಯೇ ಸಾಯುವ ಸಂಭವವಿದೆ". ಅವರಿಗೆ ಅನಿಸಿದ್ದೇನೆಂದರೆ ಯೋಜನಾ ಆಯೋಗ ಏನು ಟಿಪ್ಪಣಿಯನ್ನು ತಯಾರಿಸಿತ್ತೋ ಅದರಲ್ಲಿ ಹೊಸ ಪ್ರಧಾನ ಮಂತ್ರಿ ಲಾಲ್‌ಬಹಾದುರ್ ಶಾಸ್ತ್ರಿಯವರ ಚಿಂತನೆಗಳನ್ನು ಉಪೇಕ್ಷಿಸಲಾಗಿದೆ. ಆದ್ದರಿಂದಲೇ ಅವರು ಹೀಗೆಂದು ಹೇಳಿದ್ದರು: "ಆಯೋಗ ತನ್ನ ಹಿಂದಿನ ಚಿಂತನೆಗಳಿಂದಲೇ ಯಾವ ರೀತಿಯಾಗಿ ಪ್ರಭಾವಿತವಾಗಿದೆ ಎಂದರೆ ಅದು ಏನೂ ಹೊಸದಾಗಿ ಯೋಚನೆ ಮಾಡಲಾರದಂತಾಗಿಬಿಟ್ಟಿದೆ. ಆಯೋಗದ ಚೌಕಟ್ಟು ಬದಲಾಗಬೇಕು ಎಂಬುದು ಅಪೇಕ್ಷಣೀಯವಾದ ಸಂಗತಿಯೇ ಆಗಿದೆ. ಯಾರು ತಮ್ಮ ಅನುಭವಗಳನ್ನು ಆಧರಿಸಿ ಒಂದು ನಿರ್ಣಯ ತೆಗೆದುಕೊಳ್ಳಬಲ್ಲರೋ ಮತ್ತು ಪ್ರಧಾನ ಮಂತ್ರಿಗಳ ಭಾವನೆಗಳಿಗೆ ಅನುಗುಣವಾಗಿ ಯೋಜನೆಯನ್ನು ಸಿದ್ಧಪಡಿಸಬಲ್ಲರೋ ಅವರಿಗೆ ಈ ಕಾರ್ಯವನ್ನೇ ಒಪ್ಪಿಸಬೇಕು.

ಲಾಲ್‌ಬಹಾದುರ್ ಶಾಸ್ತ್ರಿಯವರು ಮಹಾ ಓಜೋಪೂರ್ಣರಾಗಿದ್ದ ತಮ್ಮ ಹಿಂದಿನ ಪ್ರಧಾನ ಮಂತ್ರಿಗಳು ರೂಪಿಸಿದ್ದ ಯೋಜನಾ ಆಯೋಗವನ್ನು ಮತ್ತು ಯೋಜನೆ–ಪ್ರಾರೂಪಗಳನ್ನು ಒತ್ತಾಯಪೂರ್ವಕವಾಗಿ ಬದಲಾಯಿಸಬಲ್ಲಂತಹ ಕ್ರಾಂತಿಕಾರಿ ನಾಯಕರೂ ಆಗಿರಲಿಲ್ಲ. ಹಿಂದಿನ ಮೂರು ಯೋಜನೆಗಳ ಟೀಕೆ

ಟಿಪ್ಪಣಿ ಮತ್ತು ವಿಮರ್ಶೆಗಳು ಮತ್ತಷ್ಟು ವ್ಯಾಪಕವೂ ಕ್ರಮಬದ್ಧವೂ ಆಗಿವೆ. ಅವರು ಈ ಸಂದರ್ಭದಲ್ಲಿ ಧಾರವಾಹಿಯಾಗಿ 'ಪಾಂಚಜನ್ಯ'ದಲ್ಲಿ 'ಯೋಜನೆಯನ್ನೇ ಬದಲಾಯಿಸಿ' ಎಂಬ ಶೀರ್ಷಿಕೆಯಲ್ಲಿ ಐದು ಲೇಖನಗಳನ್ನು ಬರೆದರು. ಅವುಗಳ ಆಧಾರದ ಮೇಲೆಯೇ, ನಾವು ಇಲ್ಲಿ ಅವರ ವಿಚಾರಗಳನ್ನು ಅಧ್ಯಯನ ಮಾಡಲಿದ್ದೇವೆ.

**ಯೋಜನೆಗಳ ಸಾಧನೆಗಳು ಹಾಗೂ ಕುಂದುಕೊರತೆಗಳು**

ಮೂರು ಯೋಜನೆಗಳ ಸಾಧನೆಗಳನ್ನು ಒಪ್ಪಿಕೊಳ್ಳುತ್ತಾ ಉಪಾಧ್ಯಾಯರು ಹೀಗೆನ್ನುತ್ತಾರೆ:

"ಇಂದು ನಾವು ದೇಶದಲ್ಲಿ ಅನೇಕ ವಸ್ತುಗಳನ್ನು ತಯಾರಿಸುತ್ತಿದ್ದೇವೆ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ೧೫ ವರ್ಷಗಳ ಹಿಂದೆ ವಸ್ತುಗಳನ್ನು ಹೊರಗಿನಿಂದ ತರಿಸಬೇಕಾಗುತ್ತಿತ್ತು. ಸಾಕಷ್ಟು ಹೊಸ ಕಾರ್ಖಾನೆಗಳನ್ನು ತೆರೆಯಲಾಗಿವೆ. ಹೊಸ-ಹೊಸ ನಗರಗಳು ನೆಲೆಗೊಂಡಿವೆ. ಅಣೆಕಟ್ಟು ಮತ್ತು ಕಾಲುವೆಗಳು ನಿರ್ಮಾಣಗೊಂಡಿವೆ. ವಿದ್ಯುತ್‌ಶಕ್ತಿಯು ವ್ಯಾಪಕವಾಗಿ ಬಳಕೆಯಾಗುತ್ತಿದೆ. ಮತ್ತು ಶಾಲೆಗಳ ಹಾಗೂ ಆಸ್ಪತ್ರೆಗಳ ಸಂಖ್ಯೆ ಹೆಚ್ಚಿದೆ. ಇದೇ ರೀತಿಯಾಗಿ ಇನ್ನೂ ಅನೇಕ ಸಾಧನೆಗಳನ್ನು ಗುರುತಿಸಬಹುದಾಗಿದೆ. ಆದರೆ ಚಿಂತಿಸಬೇಕಾದ ವಿಷಯವೇನೆಂದರೆ ಇದೆಲ್ಲವೂ ನಮಗೆ ಸಿಗಬೇಕಾದರೆ ಎಂತಹ ಬೆಲೆ ತೆರಬೇಕಾಯಿತು? ........ಈ ಪ್ರಯತ್ನದಲ್ಲಿ ನಾವು ಹೊಸ ಸಮಸ್ಯೆಗಳನ್ನು ಸೃಷ್ಟಿಸಿಲ್ಲವಷ್ಟೆ?"

ಈ ಯೋಜನೆಗಳ ಅನಂತರವೂ ನಾವು ಹಲವು ಸಮಸ್ಯೆಗಳಿಗೆ ಕಾರಣವೇನೆಂಬುದನ್ನು ಹುಡುಕಲಾಗಲಿಲ್ಲ ಮತ್ತು ಕೆಲವು ಹೊಸ ಗಂಭೀರ ಸಮಸ್ಯೆಗಳು ಹುಟ್ಟಿಕೊಂಡವು, ಅವು ಎಲ್ಲರ ಚಿಂತೆಗೆ ಕಾರಣವಾದುವು: "ಆಹಾರಧಾನ್ಯಗಳ ಅಭಾವ, ನಿರುದ್ಯೋಗ, ಬೆಲೆ ಏರಿಕೆ, ಹಣದುಬ್ಬರ, ತೆರಿಗೆಯ ಹೊರೆ, ಹಣಸಂದಾಯದ ಅಸಮತೋಲನದ ಹೆಚ್ಚಳ, ವಿದೇಶಿಸಾಲ, ಪರಾವಲಂಬನೆ, ಆರ್ಥಿಕ ಅಸಮಾನತೆಯ ಹೆಚ್ಚಳ, ಅಗತ್ಯವಸ್ತುಗಳ ಕೊರತೆಯಾಗುವುದು ಮತ್ತು ಬಂಡವಾಳದ ಸೃಷ್ಟಿ ಕಡಿಮೆಯಾಗುವುದು - ಇವೇ ಮುಂತಾದ ಇಷ್ಟೊಂದು ಗಂಭೀರ ಸಮಸ್ಯೆಗಳು ಹುಟ್ಟಿಕೊಂಡಿವೆಯೆಂದರೆ ಭವಿಷ್ಯವನ್ನು ಕುರಿತು ಪ್ರತಿಯೊಬ್ಬರ ಮನಸ್ಸಿನಲ್ಲೂ ಚಿಂತೆ ಹುಟ್ಟುತ್ತದೆ."

**ಯೋಜಕರ ಜವಾಬ್ದಾರಿ**

ಯೋಜಕರು- ಅಂದರೆ ಯೋಜನೆ ಸಿದ್ಧಪಡಿಸುವವರು- ಈ ಗಂಭೀರ ಸಮಸ್ಯೆಗಳಿಗೆ ಜವಾಬ್ದಾರರೆಂದು ಉಪಾಧ್ಯಾಯರು ಭಾವಿಸುತ್ತಾರೆ ಮತ್ತು ಯೋಜನಾ



ಆಯೋಗದಿಂದ ಇದನ್ನು ಕಾರ್ಯಗತ ಮಾಡುವುದರಲ್ಲಿ ಕಂಡುಬರುವ ಕುಂದುಕೊರತೆಗಳಿಗೆ ಯೋಜನಾ ಆಯೋಗವನ್ನೇ ದೂಷಿಸುವುದಲ್ಲದೇ ಅದನ್ನು ಈ ಕಾರಣಕ್ಕಾಗಿ ತರಾಟೆಗೆ ತೆಗೆದುಕೊಳ್ಳುತ್ತಾರೆ.

"................ಯೋಜನಾ ಆಯೋಗವು ಅನೇಕ ವೇಳೆ ಅನೇಕ ಸಮಸ್ಯೆಗಳಿಗೆ ಅನುಷ್ಠಾನದ ಕೊರತೆಗೆ ಕಾರಣ ಹೇಳುತ್ತದೆ; ಆದರೆ ಯೋಜನೆಯನ್ನು ಸಿದ್ಧಪಡಿಸುವಾಗ, ಕೆಲಸ ಮಾಡುವವರ ಕೌಶಲ್ಯ ಮತು ಪ್ರೇರಣೆಯನ್ನು ಗಮನದಲ್ಲಿಟ್ಟುಕೊಂಡು ಯೋಜಕರು ಯೋಜನೆಯನ್ನು ಸಿದ್ಧಪಡಿಸಬೇಕು. ಯಾವುದನ್ನು ಅನುಷ್ಠಾನ ಮಾಡಲಾಗುವುದಿಲ್ಲ, ಎಷ್ಟೇ ಮನೋಹರವಾಗಿದ್ದರೂ ಅದು ನಿರುಪಯೋಗಿಯೇ ಆಗುತ್ತದೆ, ಅನುಷ್ಠಾನದಲ್ಲಿನ ಕೊರತೆಯ ಜೊತೆಗೆ ಯೋಜನೆಯ ವ್ಯೂಹ ರಚನೆಯಲ್ಲಿಯೂ ಕೊರತೆ ಇರುತ್ತದೆ". ಯೋಜಕರು ಸಮಾಜವಾದದ ಬಗೆಗಿನ ತಮ್ಮ ಮನೋಧರ್ಮಕ್ಕನುಗುಣವಾಗಿಯೇ ಸಾರ್ವಜನಿಕ ಕ್ಷೇತ್ರವನ್ನು ವಿಸ್ತರಿಸುತ್ತಾ ಹೋದರು. ಉಪಾಧ್ಯಾಯರ ಪ್ರಕಾರ, ಇದೇ ವ್ಯೂಹ ರಚನೆಯ ಭಾರಿ ದೋಷವಾಗಿದ್ದಿತು: "ಎರಡನೆಯದು ಮತ್ತು ಮೂರನೆಯದು- ಎರಡೂ ಯೋಜನೆಗಳಲ್ಲಿ ಸರ್ಕಾರೇತರ ಕ್ಷೇತ್ರಗಳಲ್ಲಿ ಮತ್ತು ಸಣ್ಣ ಉದ್ಯಮಗಳ ಕ್ಷೇತ್ರದಲ್ಲಿ ಯೋಜನೆ ಇರಿಸಿಕೊಂಡಿದ್ದ ಗುರಿಗಳನ್ನು ಮೀರಿಯೂ ಹೆಚ್ಚಿನ ಕೆಲಸಗಳಾಗಿವೆ. ಅಕಸ್ಮಾತ್ ಇದು ಆಗದೇ ಇದ್ದಿದ್ದರೆ, ಇಂದು ಎಲ್ಲೆಡೆ ಕಂಡುಬರುತ್ತಿರುವಂತಹ ಕೊರತೆ ಮತ್ತಷ್ಟು ಹೆಚ್ಚಾಗುತ್ತಿತ್ತು. ಆಯೋಗ ಸೂಚಿಸಿದ ಸಹಕಾರಿ ಕೃಷಿ ಕ್ಷೇತ್ರದ ಉತ್ಪಾದನೆ ಮತ್ತಷ್ಟು ಕಡಿಮೆಯಾಗುತ್ತಿತ್ತು. ಗ್ರಾಮೀಣ ಕ್ಷೇತ್ರದಲ್ಲಿನ ನಿರುದ್ಯೋಗ ಮತ್ತು ಭೂಮಿಹೀನ ರೈತರ ಸಂಖ್ಯೆ ಮತ್ತಷ್ಟು ಹೆಚ್ಚುತ್ತಿತ್ತು. ಹಾಗೂ ಕೃಷಿ ಕ್ಷೇತ್ರದಲ್ಲಿ ಹೂಡಬೇಕಾಗಿದ್ದ ಬಂಡವಾಳವನ್ನು ಸರ್ಕಾರ ಹೊಂದಿಸಲಾಗುತ್ತಿರಲಿಲ್ಲ ಅಥವಾ ಅದಕ್ಕಾಗಿ ಮತ್ತಷ್ಟು ಹೆಚ್ಚು ತೆರಿಗೆಯನ್ನು ತೆಗೆದುಕೊಳ್ಳುತ್ತಿತ್ತು. ಇದರ ಪರಿಣಾಮವಾಗಿ ಬೆಲೆ ಏರಿಕೆ ಮತ್ತಷ್ಟು ಹೆಚ್ಚುತ್ತಿತ್ತು. ಆದ್ದರಿಂದ ಅನುಷ್ಠಾನದ ಮೇಲೆ ಮಾತ್ರವೇ ಆರೋಪ ಹೊರಿಸಿ, ನೀತಿಗೆ ಸಂಬಂಧಪಟ್ಟಂತಹ ಮೂಲಭೂತ ದೋಷಗಳನ್ನು ಮುಚ್ಚಿಹಾಕುವುದರಿಂದ ಏನನ್ನೂ ಸಾಧಿಸಿದಂತಾಗುವುದಿಲ್ಲ."

ನಾಲ್ಕನೆಯ ಯೋಜನೆಯ ಬಗೆಗಿನ ಮೇಲ್ಕಂಡ ಪೂರ್ವಪೀಠಿಕೆಯ ಅನಂತರ, ಉಪಾಧ್ಯಾಯರು ಯೋಜನೆಯ ಬಗೆಗಿನ ತಮ್ಮ ಚಿರಪರಿಚಿತ ತರ್ಕಗಳ ಆಧಾರದ ಮೇಲೆ, ಅದರ ಬಗ್ಗೆ ವಿಮರ್ಶೆಯನ್ನು ಕೈಗೊಳ್ಳುತ್ತಾರೆ. ನಾನಿಲ್ಲಿ ಆ ವಿಮರ್ಶೆಯ ಸಂಕ್ಷಿಪ್ತ ಅವಲೋಕನವನ್ನು ಮುಂದಿರಿಸಲು ಬಯಸುತ್ತೇನೆ:

**(ಕ) ಅವ್ಯಾವಹಾರಿಕ ಸಮಯದ ಮಿತಿ ಮತ್ತು ಬಂಡವಾಳದ ಪ್ರಾಧಾನ್ಯ**

ಹಿಂದಿನ ಮೂರು ಯೋಜನೆಗಳನ್ನು ಉಪಾಧ್ಯಾಯರು ಅತ್ಯಂತ ಭಾರಿಯಾದ

ಹಾಗೂ ಅಸಹನೀಯವಾದಂತಹ ಭಾರ ಎಂದು ಬಣ್ಣಿಸಿದ್ದರು. ೨೨,೫೦೦ಕೋಟಿ ರೂ.ಗಳ ಅಂದಾಜು ವೆಚ್ಚದ ಈ ಯೋಜನೆಯ ಪರಿಣಾಮ ನಿಜವಾಗಿಯೂ ಜನತೆಯ ಸೊಂಟವನ್ನು ಮುರಿಯುವಂಥದೇ ಆಗಿರುತ್ತದೆ. ಆದ್ದರಿಂದ ಇಂತಹ ದೊಡ್ಡ ಯೋಜನೆಯನ್ನು ಕೇವಲ ಐದೇ ವರ್ಷಗಳಲ್ಲಿ ಕಾರ್ಯರೂಪಕ್ಕೆ ತರುತ್ತೇವೆ ಎನ್ನುವುದು ಇದು ಹಠ ಮಾತ್ರವಷ್ಟೇ ಆಗುತ್ತದೆ. 'ಹೀಗಾದಲ್ಲಿ, ಹೀಗಾದರೆ' – ಎಂಬ ಯಾವ ಮಾತುಗಳೊಂದಿಗೆ ಯೋಜನಾ ಆಯೋಗ ಹಣ ಸಂಗ್ರಹಿಸುವ ಮಾತನ್ನು ಆಡಿದೆಯೋ, ಆ ಶರತ್ತುಗಳು ಪೂರ್ಣಗೊಳ್ಳುವ ಸಾಧ್ಯತೆಯೇ ಇಲ್ಲ ಎಂದೆನಿಸುತ್ತದೆ. 'ಹಾವೂ ಸಾಯಬಾರದು, ದೊಣ್ಣೆಯೂ ಮುರಿಯಬಾರದು' ಎಂಬಂತಾಗುತ್ತದೆ. ರಕ್ಷಣೆಯ ಮತ್ತು ಪುನರ್‌ವಸತಿಯ ವೆಚ್ಚ ನಮ್ಮ ಕೈಯಲ್ಲಿಲ್ಲ. ಪಾಕೀಸ್ತಾನ ಮತ್ತು ಚೀಣಾಗಳ ಪ್ರಚಲಿತ ಧೋರಣೆಗಳನ್ನು ಗಮನಿಸಿ, ನಾವು ಈ ಬಾಬುಗಳ ಬಗ್ಗೆ ಹೆಚ್ಚು ಖರ್ಚು ಮಾಡಬೇಕಾದ ಅಗತ್ಯವಿಲ್ಲ ಎಂದು ಭಾವಿಸುವುದು, ವಸ್ತುಸ್ಥಿತಿಗೆ ಕಣ್ಣು ಮುಚ್ಚಿಕೊಂಡ ಹಾಗೆ ಆಗುತ್ತದೆ. ಈ ಬಗೆಯ ಅವಾಸ್ತವಿಕ ಊಹೆಗಳ ಪರಿಣಾಮ ಏನಾಗುತ್ತದೆಯೆಂದರೆ, ಗುರಿಗಳು ಹಾಗೂ ಸಾಧನೆಗಳ ನಡುವೆ ಸಾಕಷ್ಟು ಕಂದರ ಉಂಟಾಗಿಬಿಡುತ್ತದೆ. ಮತ್ತು ಜನತೆಯ ಮೇಲಿನ ಹೊರೆ ಹೆಚ್ಚಾಗುತ್ತದೆ. ಯೋಜನೆ ಇಷ್ಟು ಬೃಹತ್ತಾಗಿ ಆಗಲಿಕ್ಕೆ ಕಾರಣ ಅದರ ಬಂಡವಾಳಶಾಹಿ ಸ್ವರೂಪ. ನಮ್ಮ ದೇಶದ ವಿಕಾಸಕ್ಕೆ ನಾವು ಮಾನವ ಶಕ್ತಿಯನ್ನು ಪೂರ್ಣವಾಗಿ ಉಪಯೋಗಿಸುತ್ತಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಯೋಜನೆಗಳು ಶ್ರಮಪ್ರಧಾನವಾಗಿಲ್ಲವಿರುವುದೇ ಅವುಗಳ ಮುಖ್ಯ ಕೊರತೆಯಾಗಿಬಿಟ್ಟಿದೆ.

### (ಖ) ರಾಷ್ಟ್ರೀಯ ಕ್ಷೇತ್ರದ ಕಲ್ಪನೆ

ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರಗಳ ವಿವಾದವನ್ನು 'ರಾಷ್ಟ್ರೀಯ ಕ್ಷೇತ್ರ'ಗಳ ಕಲ್ಪನೆಯ ಮೂಲಕ ಬಗೆಹರಿಸುವಂತೆ ಉಪಾಧ್ಯಾಯರು ಆಗ್ರಹಪಡಿಸಿದರು. ಖಾಸಗಿ ಉದ್ಯಮಗಳು ತೊಡಗದಂತೆ ನಿಷೇಧವನ್ನು ಹೇರುವ ಸಾರ್ವಜನಿಕ ಕ್ಷೇತ್ರದ ಬಗೆಗಿನ ಮೋಹವನ್ನು ತ್ಯಜಿಸಬೇಕೆಂದು ಉಪಾಧ್ಯಾಯರು ಹೇಳುತ್ತಾರೆ. ಉದ್ಯಮಿಗಳನ್ನು ಉಪಯೋಗಿಸಿಕೊಂಡು ಉತ್ಪಾದನೆಯನ್ನು ಹೆಚ್ಚಿಸಿದರೆ, ಸಾರ್ವಜನಿಕ ಹಿತಕ್ಕೆ ಅನುಕೂಲವಾಗಿ ಅದರ ವಿತರಣೆಯನ್ನು ನಿಯೋಜಿಸಬಹುದು ಆದರೆ, "ಪುರುಷಾರ್ಥದ ಮೇಲೆ –ಅಂದರೆ ವೈಯಕ್ತಿಕ ಸಾಧನೆಯ ಮೇಲೆ ನಿರ್ಬಂಧವನ್ನು ಹೇರುವುದು ಸಮಂಜಸವಾದದ್ದಲ್ಲ" ಎಂದು ಅವರು ಹೇಳಿದ್ದಾರೆ. ಸರ್ಕಾರಿ ಕ್ಷೇತ್ರದ ವಿಸ್ತಾರದ ಜೊತೆಜೊತೆಗೆ ಖಾಸಗಿ ಕ್ಷೇತ್ರದ ಪ್ರಗತಿಯ ದಿಕ್ಕು ಮತ್ತು ದೆಸೆಯ ಮೇಲೆ ಪ್ರಭಾವದ ಬಗೆಗಿನ ಕಾಂಗ್ರೆಸ್ಸಿನ ತಪ್ಪು ತಿಳಿವಳಿಕೆಯ ಬಗ್ಗೆ



ಅವರು ತಮ್ಮ ಅಸಮಧಾನವನ್ನು ವ್ಯಕ್ತಪಡಿಸಿದರು. ಪೂರ್ಣ ನಿಯಂತ್ರಣವನ್ನು ಜಾರಿಗೆ ತರುವವರೆಗೂ ಸಾಮಾಜಿಕ ನ್ಯಾಯದ ಉದ್ದೇಶ ಪೂರ್ಣವಾಗುವುದಿಲ್ಲ ಎಂದು ಹೇಳಿದರು. ನಾಲ್ಕನೆಯ ಯೋಜನೆ ಇಂತಹ ಒಂದು ತಪ್ಪು ತಿಳಿವಳಿಕೆಯ ಫಲ ಎಂದು ಉಪಾಧ್ಯಾಯರು ಹೇಳಿದ್ದಾರೆ: ಏನೆಂದರೆ ಖಾಸಗಿ ಮತ್ತು ಸರ್ಕಾರಿ ಕ್ಷೇತ್ರಗಳ ಬಗೆಗಿನ ಪ್ರಸಕ್ತ ಲಭ್ಯ ಭೇದಗಳನ್ನು ಕೊನೆಗಾಣಿಸಿ ಒಂದು ರಾಷ್ಟ್ರೀಯ ಕ್ಷೇತ್ರದ ಪರಿಕಲ್ಪನೆಯನ್ನು ಮೂಡಿಸಿಕೊಳ್ಳಬೇಕು ಹಾಗೂ ಪ್ರತಿಯೊಬ್ಬ ವ್ಯಕ್ತಿಗೆ ಅಥವಾ ಪ್ರತಿಯೊಂದು ಸಂಸ್ಥೆಗೆ ಅವರವರ ಯೋಗ್ಯತೆ ಮತ್ತು ಸಾಮರ್ಥ್ಯದ ಮೇರೆಗೆ ದೇಶದ ವಿಕಾಸಕ್ಕೆ ನೆರವಾಗುವಂಥ ಅವಕಾಶವನ್ನು ಒದಗಿಸಿಕೊಡಬೇಕು ಎಂಬುದು ಜನಸಂಘದ ಅಭಿಮತವೇ ಆಗಿದೆ.

### (ಗ) ಸಣ್ಣ ಯೋಜನೆಯಲ್ಲಿ, ಚಿಕ್ಕಪುಟ್ಟ ಘಟಕಗಳನ್ನೊಳಗೊಂಡ ಬೃಹತ್ ಯೋಜನೆ

ವ್ಯರ್ಥ ವೆಚ್ಚ ಬಂಡವಾಳ ಪ್ರಧಾನ ದೃಷ್ಟಿಕೋನ, ತೆರಿಗೆಯ ಹೆಚ್ಚಿನ ಹೊರೆಯನ್ನು ಹಾಗೂ ನಿರುದ್ಯೋಗವನ್ನು ಹೆಚ್ಚಿಸುವ ಯೋಜನೆಗಳು– ಇವು ಉಪಾಧ್ಯಾಯರ ಟೀಕೆಯ ವಸ್ತುಗಳಾಗಿರುತ್ತಿದ್ದವು. ಆದರೆ ಅವರು ದೊಡ್ಡ ಯೋಜನೆಗಳನ್ನು ನಿಷೇಧಿಸುತ್ತಿದ್ದರೂ ಚಿಕ್ಕ–ಪುಟ್ಟ ಯೋಜನೆಗಳ ಪರವಾಗಿಯೇನೂ ಇರಲಿಲ್ಲ. ದೇಶದ ವೈಶಾಲ್ಯ ಮತ್ತು ಬೃಹತ್ ಜನಸಂಖ್ಯೆಗೆ ಅನುಗುಣವಾಗಿ ಯೋಜನೆಯು ಚಿಕ್ಕದಾಗಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಉಪಾಧ್ಯಾಯರು ಚಿಕ್ಕ–ಪುಟ್ಟ ಘಟಕಗಳನ್ನೊಳಗೊಂಡಿರುವಂಥ ಬೃಹತ್ ಯೋಜನೆಯನ್ನು ಸಮರ್ಥಿಸುತ್ತ ತಮ್ಮ 'ವಿಕೇಂದ್ರೀಕರಣ'ದ ದೃಷ್ಟಿಕೋನವನ್ನು ಮತ್ತೊಮ್ಮೆ ಇಲ್ಲಿ ಪ್ರತಿಪಾದಿಸುತ್ತಾರೆ. ಯಾವ ಚಿಕ್ಕಪುಟ್ಟ ಘಟಕಗಳು, ಚಿಕ್ಕಪುಟ್ಟ ಯಂತ್ರಗಳು ಮತ್ತು ಅಲ್ಪ ಬಂಡವಾಳವನ್ನು ಆಧಾರವಾಗಿರಿಸಿಕೊಂಡು ಮಾನವ ಶ್ರಮದ ಬಲದ ಮೇಲೆ ಇಂಥ ಬೃಹತ್ ಯೋಜನೆಯನ್ನು ನಿಯೋಜಿಸಬಹುದಾಗಿದೆ. ಇದು ನಮ್ಮನ್ನು ವಿದೇಶೀ ಬಂಡವಾಳದ ಪರಾವಲಂಬನೆಯಿಂದ ಮುಕ್ತಗೊಳಿಸುತ್ತದೆ ಹಾಗೂ ಸ್ವದೇಶಿ ಮಾನವೀಯ ಶ್ರಮದ ಪ್ರತಿಷ್ಠಾಪನೆಗೆ ಕಾರಣವಾಗುತ್ತದೆ. ಕೆಲವು ಬಂಡವಾಳವಾದಿಗಳಿಂದ ಹಾಗೂ ಸರ್ಕಾರದ ಸೇರಿಕೆಯಿಂದ ನಡೆಯುವ ಇಂಥ ಯೋಜನೆಗಳು ದೇಶದ ಶ್ರೀಸಾಮಾನ್ಯನನ್ನು ಕೇವಲ ಕಾರ್ಮಿಕನನ್ನಾಗಿ ಅಥವಾ ನಿರುದ್ಯೋಗದ ಬಲಿಪಶುವನ್ನಾಗಿ ಮಾಡಿಬಿಟ್ಟಿದೆ.

### (ಘ) ವಿದೇಶೀ ಬಂಡವಾಳವಾದಿಗಳಿಗೆ ಕೊಡಲಾಗಿರುವ ಅನಪೇಕ್ಷಿತ ಸೌಲಭ್ಯಗಳು

ಈ ಯೋಜನೆಯ ಅಡಿಯಲ್ಲಿ, "..........ವಿದೇಶಿ ಬಂಡವಾಳವಾದಿಗಳು ಭಾರತದಲ್ಲಿ ತಮ್ಮ ಉದ್ಯಮಗಳನ್ನು ತೆರೆಯಲು ಮುಂದಾಗುವುದಕ್ಕೆ ಹಾಗೂ

ತಮ್ಮ ಇಚ್ಛಾನುಸಾರ ಭಾರತೀಯ ಬಂಡವಾಳವಾದಿಗಳಲ್ಲಿ ತಮಗೆ ಬೇಕಾದವರನ್ನೇ ತಮ್ಮ ಜೊತೆಗಾರರನ್ನಾಗಿ ಆರಿಸಿಕೊಳ್ಳುವ ಸೌಲಭ್ಯವನ್ನು ನೀಡಲಾಗಿದೆ. ನಿಯಂತ್ರಣ ಹಾಗೂ ಬಂಡವಾಳದ ಹೆಚ್ಚು ಭಾಗ ಸ್ವದೇಶಿಯವಾಗಿ ಇರಬೇಕೆಂಬ ಶರತ್ತನ್ನೂ ತೆಗೆದುಹಾಕಿಬಿಡಲಾಗಿದೆ. ಈ ರಿಯಾಯಿತಿಯ ಪರಿಣಾಮವಾಗಿ, ವಿದೇಶದ ದೊಡ್ಡ ದೊಡ್ಡ ಕೇಂದ್ರೀಕೃತ ಬೃಹತ್ ಉದ್ಯಮಗಳು ಭಾರತದಲ್ಲಿ ತಮ್ಮ ಕಾರ್ಖಾನೆಗಳನ್ನು ತೆರೆದು, ದೇಶೀಯ ಉದ್ಯಮಗಳನ್ನು ಇಲ್ಲವಾಗಿಸಿಬಿಡುತ್ತವೆ".

"............ಅನೇಕ ವಸ್ತುಗಳನ್ನು ಉತ್ಪಾದನೆ ಮಾಡದಂತೆ ನಮ್ಮ ಉದ್ಯಮಗಳ ಮೇಲೆ ನಿರ್ಬಂಧಗಳನ್ನೇ ಹೇರಲಾಗಿದೆ. ವಿದೇಶೀ ಬಂಡವಾಳದ ನೆರವಿನಿಂದ ನಿರ್ಮಾಣಗೊಂಡಿರುವ ಬಹುಪಾಲು ಕಾರ್ಖಾನೆಗಳಲ್ಲಿ ಉತ್ಪಾದನ ಕಾರ್ಯಕ್ರಮದ ಹೆಚ್ಚು ಭಾಗ ವಿದೇಶೀ ಮಾಲೀಕರ ಕೈಯಲ್ಲಿರುತ್ತದೆ. ಅವರು ನಮಗೆ ತಂತ್ರಜ್ಞಾನವನ್ನು ತಿಳಿಸಿಕೊಡಲು ಸಿದ್ಧರಾಗಿರುವುದಿಲ್ಲ. ಆದರೆ, ಅವರು ಸಂಚಾಲಕ ಮಂಡಳಿಯಲ್ಲಿ ಅವರ ಜೊತೆ ದನಿಗೂಡಿಸುವ ಸಲುವಾಗಿ ಕೆಲವು ಭಾರತೀಯರನ್ನು ಇಟ್ಟುಕೊಂಡಿದ್ದಾರೆ ಮತ್ತು ಉತ್ಪಾದನೆಗಳ ಮಾರಾಟಕ್ಕಾಗಿಯೇ ಹೆಚ್ಚು ವೇತನ ನೀಡಿ ಭಾರತೀಯರನ್ನು ಏಜೆಂಟ್‌ರನ್ನಾಗಿ ನೇಮಿಸಿಕೊಂಡಿದ್ದಾರೆ."

ವಿದೇಶಿ ಸಾಲ ಎಷ್ಟು ಹೆಚ್ಚಾಗಿದೆಯೆಂದರೆ ಆ ಸಾಲದ ಮೇಲಿನ ಬಡ್ಡಿಯನ್ನು ತೀರಿಸಲಿಕ್ಕಾಗಿಯೇ ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಪ್ರತಿವರ್ಷವೂ ಸುಮಾರು ೨೪೫ ಕೋಟಿ ರೂ.ಗಳು ಬೇಕಾಗುತ್ತದೆ. "ಸ್ವಾವಲಂಬಿಗಳಾಗುವುದಕ್ಕೆ ಬದಲಾಗಿ ನಾವು ಹೆಚ್ಚು ಹೆಚ್ಚು ಪರಾವಲಂಬಿಗಳಾಗುತ್ತಾ ಇದ್ದೇವೆ."

ವಿದೇಶೀ ಬಂಡವಾಳದ ಹಾಗೂ ಯಂತ್ರಗಳ ಅಪಾಯದ ವ್ಯಾಪಕ ಹಾನಿಗಳನ್ನು ಲೆಕ್ಕ ಹಾಕುತ್ತಾ ಉಪಾಧ್ಯಾಯರು ಹೀಗೆಂದು ಹೇಳುತ್ತಾರೆ: "ವಿದೇಶದಿಂದ ಯಂತ್ರಗಳನ್ನು ತಂದು ಸ್ಥಾಪಿಸುವಷ್ಟರಿಂದಲೇ ಕೆಲಸ ನಡೆಯುವುದಿಲ್ಲ, ಅವುಗಳನ್ನು ಕಾರ್ಯಶೀಲವಾಗಿ ಇರಿಸುವ ಸಲುವಾಗಿ ಅಲ್ಲಿಂದ ವಿವಿಧ ಬಗೆಯ ಕಚ್ಚಾ ಪದಾರ್ಥಗಳನ್ನು ಹಾಗೂ ಅವುಗಳನ್ನು ರಿಪೇರಿ ಮಾಡಲು ಯಂತ್ರದ ಬಿಡಿ ಭಾಗಗಳನ್ನು ಉತ್ಪಾದಿಸಲು ಮೂರನೇ ಯೋಜನೆಯಲ್ಲಿ ೩೮೦೦ ಕೋಟಿ ರೂ.ಗಳು ಬೇಕಾಗುತ್ತವೆ. ಎರಡನೆಯ ಯೋಜನೆಯ ಕಾಲಾವಧಿಯಲ್ಲಿ ಮಾಡಿಕೊಳ್ಳಲಾದ ಒಟ್ಟಾರೆ ಆಮದಿಗಿಂತ ಇದು ಹೆಚ್ಚಾಗಿದೆ. ಇದೇ ಆಧಾರದ ಮೇಲೆ ನಾಲ್ಕನೆಯ ಯೋಜನೆಯನ್ನೂ ರೂಪಿಸಲಾಗಿದೆ. ವಿದೇಶೀ ವಿನಿಮಯದ ತೊಂದರೆ ನಮ್ಮ ಅರ್ಥವ್ಯವಸ್ಥೆಯ ಒಂದು ದೊಡ್ಡ ಹುಣ್ಣು ಆಗಿ ಬಿಟ್ಟಿದೆ".

### (ಜ) ಮೂಲ್ಯ ವೃದ್ಧಿ ಮತ್ತು ಲಾಭಕೋರತನ

"ಸಾಮಾನ್ಯವಾಗಿ ಬೆಲೆ ಏರುವಿಕೆಗೆ ವ್ಯಾಪಾರಿಗಳೇ ಜವಾಬ್ದಾರರು ಎಂಬ



ಧೋರಣೆಯಿದೆ. ಆದರೆ ಸರ್ಕಾರ ವ್ಯಾಪಾರವನ್ನು ತನ್ನ ಕೈಗೆ ತೆಗೆದುಕೊಂಡ ಪಕ್ಷದಲ್ಲಿ, ಪದಾರ್ಥಗಳ ಬೆಲೆ ಕಮ್ಮಿ ಆಗಬಹುದಾಗಿದೆ............ಆದರೆ ವ್ಯಾಪಾರಿಯೇ ಬೆಲೆ ಏರಿಸುವುದಾದರೆ ಅವನು ಎಂತಹ ವ್ಯಾಪಾರಿ? ಅವನನ್ನು ಸರ್ಕಾರ ಯಾಕೆ ನಿಯಂತ್ರಿಸುವುದಿಲ್ಲ? ಅದರ ಜೊತೆಗೆ ಸರ್ಕಾರ ಮಾರಾಟ ಮಾಡುತ್ತಾ ಇರುವ ವಸ್ತುಗಳ ಬೆಲೆಗಳನ್ನೂ ಏಕೆ ಹೆಚ್ಚಿಸಲಾಗುತ್ತಿದೆ? ಪೋಸ್ಟ್‌ಕಾರ್ಡ್, ಲಕೋಟೆಯ ಬೆಲೆ, ತಂತಿ ದರ, ರೈಲಿನ ಪ್ರಯಾಣ ದರ, ವಿದ್ಯುತ್ ಮತ್ತು ಖಾದ್ಯವಸ್ತು, ಉಕ್ಕು ಮತ್ತು ಪೆನ್ಸಿಲಿನ್ ಮುಂತಾದವುಗಳ ಬೆಲೆಗಳು ಏಕೆ ಏರಿದವು? ಹೊರಗಿನಿಂದ ಬರುವ ಗೋಧಿಯ ಬೆಲೆಯನ್ನು ಸರ್ಕಾರ ಏಕೆ ಏರಿಸಿತು?...............ಸರ್ಕಾರದ ನೀತಿಗಳು ಹಾಗೂ ಯೋಜನೆಯನ್ನು ರೂಪಿಸುವವರೆ ಇಲ್ಲಿ ಅಪರಾಧಿಗಳು".

"ನಾಲ್ಕನೆಯ ಯೋಜನೆಯಲ್ಲಿ ಸರ್ಕಾರದ ಕಾರ್ಖಾನೆಗಳಲ್ಲಿ ಬೆಲೆ ನಿಗದಿಪಡಿಸುವ ನೀತಿಯಲ್ಲಿ ಕನಿಷ್ಠಪಕ್ಷ ೧೨% ಲಾಭ ಬರುವಂತೆ ಬೆಲೆಯನ್ನೇ ಗೊತ್ತುಪಡಿಸಬೇಕು ಎಂಬ ಪ್ರಸ್ತಾಪವನ್ನು ಮುಂದಿಡಲಾಗಿತ್ತು. ವೆಚ್ಚದಲ್ಲಿ ಮಿತವ್ಯಯ ಅಥವಾ ವ್ಯವಸ್ಥೆಯ ಕೌಶಲ್ಯ ಮತ್ತು ವೈಜ್ಞಾನಿಕತೆಯಿಂದ ಈ ಲಾಭವನ್ನೇ ಗಳಿಸುವುದಾದರೇ ಶ್ಲಾಘನೀಯ; ಆದರೆ ಬೆಲೆಗಳನ್ನು ಹೆಚ್ಚಿಸಿ ಲಾಭಗಳಿಸುವುದನ್ನು ಖಂಡಿತ ಲಾಭಕೋರತನವೆಂದೇ ಕರೆಯಬೇಕಾಗುತ್ತದೆ.

### (ಚ) ಪ್ರಾಥಮಿಕೆಗಳು ಹಾಗೂ ರಷ್ಯಾದ ಅನುಕರಣೆ

ಉತ್ಪಾದನೆಯ ಪ್ರಾಥಮಿಕೆಗಳು ಬದಲಾಗಬೇಕೆಂದು ಉಪಾಧ್ಯಾಯರು ಮತ್ತೆ ಒತ್ತಾಯಿಸುತ್ತಾರೆ. ವಿಲಾಸದ ವಸ್ತುಗಳನ್ನು ಉತ್ಪಾದಿಸದೆ, ಊಟ, ಬಟ್ಟೆ ಮತ್ತು ಮನೆಯಂತಹ ಮೂಲಭೂತ ಅಗತ್ಯಗಳನ್ನು ಪೂರೈಸುವುದೇ ಯೋಜನೆಯ ಪರಮ ಲಕ್ಷ್ಯವೆಂದು ಘೋಷಿಸಿ, ಅದರ ಅನುಕೂಲಕ್ಕೆ ತಕ್ಕಂತೆ ಯೋಜನೆಯನ್ನು ರೂಪಿಸಬೇಕಾಗಿದೆ. ಆಯೋಗದ ಈ ಮಾತು– "ಜೀವನೋಪಯೋಗಿ ವಸ್ತುಗಳ ಬೆಲೆಗಳನ್ನು ಗೊತ್ತುಪಡಿಸುವ ಸಲುವಾಗಿ ನೇರ ನಿಯಂತ್ರಣವನ್ನು ಬಳಸುವುದಕ್ಕೆ ದೇಶವು ಸಿದ್ಧವಾಗಿರಬೇಕು"– 'ಮಂತ್ರದಂಡ' ವೆಂದು ಭಾವಿಸುವಂತಹ ಪ್ರವೃತ್ತಿಯ ಪ್ರತೀಕವೆಂದು ಹೇಳಿದ್ದಾರೆ. ಉಪಾಧ್ಯಾಯರು ಹೇಳುತ್ತಾರೆ: "ಇದರಿಂದ ವಸ್ತುಗಳ ಬೆಲೆ ಕಮ್ಮಿ ಆಗಲಾರದು; ರೈತರು ಹಾಗೂ ವ್ಯಾಪಾರಿಗಳು ಇಬ್ಬರೂ ಹಾಳಾಗಿ ಹೋಗುತ್ತಾರೆ. ಜೀವನೋಪಯೋಗಿ ವಸ್ತುಗಳು ಮಾರುಕಟ್ಟೆಯಿಂದ ಮಾಯವಾಗಿ ಬಿಡುತ್ತವೆ."

"ಖಾದ್ಯವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಲು ಸೂರತ್‌ಗಢದ ಕೃಷಿಕ್ಷೇತ್ರದ ಮಾದರಿಯಂತೆ ಭಾರತದ ಪ್ರತಿಯೊಂದು ಸರ್ಕಾರದ ಫಾರ್ಮ್ ಪ್ರಾಂತ್ಯದಲ್ಲಿಯೂ ಸರ್ಕಾರಿ ಕೃಷಿ ಕ್ಷೇತ್ರವನ್ನು ತೆರೆಯಲು ನೆರವು ನೀಡಬೇಕೆಂದು ರಷ್ಯಾ ಹೇಳುತ್ತಿದೆ.

ರಷ್ಯಾದಲ್ಲಿ ಸರ್ಕಾರಿ ಕೃಷಿಕ್ಷೇತ್ರದ ಪ್ರಯೋಗ ಸಫಲವಾಗಿಲ್ಲ, ಅದು ಅಮೇರಿಕಾದಿಂದ ಗೋಧಿಯನ್ನು ತರಿಸಿಕೊಳ್ಳುತ್ತಿದೆ, ಮತ್ತು ತನ್ನ ನಾಡಿನಲ್ಲಿನ ಸರ್ಕಾರೀ ಕೃಷಿಕ್ಷೇತ್ರಗಳನ್ನು ಮುಚ್ಚುತ್ತಿದೆ, ಆದರೆ ಇಂಥ ಕೃಷಿಕ್ಷೇತ್ರಗಳನ್ನು ರಚಿಸಬೇಕೆಂದು ನಮಗೆ ಸಲಹೆ ಕೊಡಲಾಗುತ್ತಿದೆ. ಪುಸ್ತಕ– ಸಿದ್ಧಾಂತಗಳ ಸುಳಿಯಲ್ಲಿ ಸಿಕ್ಕಕೊಂಡು ಯೋಜನಾ ಆಯೋಗವೂ ಇದೇ ನಿಟ್ಟಿನಲ್ಲಿ ಯೋಚಿಸುತ್ತಿದೆ.

**(ಛ) ರೈತರು ಮತ್ತು ಮಧ್ಯಮ ವರ್ಗದವರು ಸಂತ್ರಸ್ತರಾಗಿದ್ದಾರೆ**

ಬೃಹತ್ ಉದ್ಯಮಗಳಿಗೆ ನೀಡಿರುವ ಪ್ರಾಥಮಿಕತೆ ಹಾಗೂ ನೀರಾವರಿ ಮತ್ತು ಖಾದ್ಯ ವಸ್ತುಗಳ ಉತ್ಪಾದನೆಯ ಬೃಹತ್ ಯೋಜನೆ ರೈತನಿಗೆ ಯಾವುದೇ ತರಹದ ಅನುಕೂಲವನ್ನು ಮಾಡಿಕೊಟ್ಟಿಲ್ಲ. ಜೊತೆಗೆ "ಬೆಲೆಗಳ ಮಾತು ಬಂದಾಗ ಸಾಧಾರಣವಾಗಿ ನಗರದಲ್ಲಿ ವಾಸಿಸುವ ಜನಗಳನ್ನು ಕುರಿತೇ ವಿಚಾರ ಮಾಡಲಾಗುತ್ತದೆ, ರೈತರನ್ನು ಅವರು ಮರೆತೇಬಿಡುತ್ತಾರೆ. ಕೆಲವರಂತೂ ಬೆಳೆಗಳು ಸಿದ್ಧವಾಗಿದೆ ಎಂದರೆ ಆಹಾರ ಧಾನ್ಯಗಳ ಬೆಲೆಗಳು ಕೆಳಮಟ್ಟದಲ್ಲಿರುವುದು ಎಂದೇ ಅರ್ಥಮಾಡಿಕೊಳ್ಳುತ್ತಾರೆ. ..........ರೈತನಿಗೆ ಎಲ್ಲಿಯವರೆಗೆ ಬೆಳೆಗೆ ಒಳ್ಳೆಯ ಬೆಲೆ ಸಿಗುವುದಿಲ್ಲವೋ ಅಲ್ಲಿಯವರೆಗೂ ದೇಶದ ಉತ್ಪಾದನೆ ಹೆಚ್ಚುವುದು ಸಾಧ್ಯವಿಲ್ಲ ಮತ್ತೆ ಬೆಲೆಗಳೂ ಸ್ಥಿರವಾಗಿರುವುದಿಲ್ಲ..........ಅನ್ನಪೂರ್ಣೆ (ಭಾರತದ ಕೃಷಿ) ಯಾಕೆ ಭಿಕ್ಷುಕಿಯಾದಳು? ನಮ್ಮ ರಾಷ್ಟ್ರೀಯ ಆದಾಯದ ಸುಮಾರು ಅರ್ಧಭಾಗ ಕೃಷಿಯಿಂದಲೇ ಬರುತ್ತಿದೆಯಾದರೂ ನಾವು ಅದನ್ನು ಉಪೇಕ್ಷಿಸಿದ್ದೇವೆ. ಹಳ್ಳಿಗಳತ್ತ ಹೋಗಬೇಕಾಗಿರುವ ಬಂಡವಾಳ ನಗರಗಳತ್ತ ಹೋಗುತ್ತಿದೆ".

"ಭೇದಭಾವವನ್ನು ಕಮ್ಮಿ ಮಾಡುವ ವಿಚಾರ ಘೋಷಣೆಗಳಿಂದ ಮುಂದೆ ಸಾಗುವುದಿಲ್ಲ. 'ಸಮಾಜವಾದ'ದ ಮಧ್ಯಮವರ್ಗದ ವೃತ್ತಿಗಳ ಮೇಲೆ ಕತ್ತಿ ತೂಗಾಡುತ್ತಿದೆ. ಆಡಳಿತದಲ್ಲಿ ವ್ಯಾಪಕವಾಗಿ ಆವರಿಸಿಕೊಂಡಿರುವ ಭ್ರಷ್ಟಾಚಾರ ಮತ್ತು ಇತರ ದೊಡ್ಡ ದೊಡ್ಡ ವ್ಯಕ್ತಿಗಳಿಂದ ನಡೆಯುತ್ತಿರುವ ಕಾಳಸಂತೆ ಹಾಗೂ ತೆರಿಗೆ ಕಳ್ಳತನದ ಕಪ್ಪುಹಣ ನಮ್ಮಲ್ಲಿನ ಹೂಡಿಕೆಗಳಿಗೂ ಸುರಂಗಹಾಕಿ ಧ್ವಂಸ ಮಾಡುತ್ತಿವೆ. ಸರ್ಕಾರ ನಡೆಸುತ್ತಿರುವ ದಾಳಿಗಳು ಕೂಡ ಪ್ರಭಾವ ಬೀರಿಲ್ಲ ಹಾಗೂ ಹಣಕಾಸು ಮಂತ್ರಿಗಳು ಕಲ್ಪಿಸಿಕೊಟ್ಟಿರುವ ವಿನಾಯಿತಿ ಸೌಲಭ್ಯಗಳೂ ಆಕರ್ಷಕವಾಗಿ ಪರಿಣಮಿಸುತ್ತಿಲ್ಲ. ನಿಯಂತ್ರಣದ ಹೆಸರಿನಲ್ಲಿ ಮಾಡಲಾಗಿರುವ ಕಾನೂನುಗಳು ಮಧ್ಯಮ ವರ್ಗದ ವ್ಯಾಪಾರಿಗಳಿಗೆ ಮಾತ್ರವೇ ತೊಂದರೆಯನ್ನು ಉಂಟುಮಾಡುತ್ತವೆ." ಉಪಾಧ್ಯಾಯರು ಕೊನೆಯಲ್ಲಿ ಹೀಗೆನ್ನುತ್ತಾರೆ:

"ನಾವು ಹೂಡಿಕೆಗೆ ವಿರುದ್ಧವಾಗಿಲ್ಲ; ಆದರೆ ನಮ್ಮ ಯೋಜನೆಗಳು ವಾಸ್ತವತೆಯನ್ನು ಆಧರಿಸಿಲ್ಲ ಮತ್ತು ಸಮಾಜದಲ್ಲಿ ದುಡಿಯುವ ಪ್ರೇರಣೆ ಕೂಡ



ಮೂಡಿಸುವುದಿಲ್ಲ". "ಒಂದು ಸ್ವತಂತ್ರ ಆಯೋಗವನ್ನು ನೇಮಿಸಬೇಕು. ಅದು ಹಿಂದಿನ ಹದಿನೈದು ವರ್ಷಗಳಲ್ಲಿನ ಆರ್ಥಿಕ ಸ್ಥಿತಿಗತಿಗಳನ್ನು ಮತ್ತು ಅನುಸರಿಸಿಕೊಂಡು ಬಂದಿರುವ ನೀತಿಗಳನ್ನು ಪರಿಶೀಲಿಸಬೇಕು ಮತ್ತು ಮೂಲಭೂತವಾದ ತಪ್ಪುಗಳನ್ನು ತೋರಿಸಿಕೊಡಬೇಕು" ಎಂದು ಒತ್ತಾಯಿಸುತ್ತಾರೆ.

ಆರ್ಥಿಕ ಕ್ಷೇತ್ರದಲ್ಲಿ ತಮ್ಮ ಪಕ್ಷಕ್ಕೆ ರಾಷ್ಟ್ರೀಯ ದೃಷ್ಟಿಯನ್ನು ತಂದುಕೊಡುವ ಸಲುವಾಗಿ ಅವರು ಬಹು ಶ್ರಮಪಟ್ಟು ಅದರ ಅಧ್ಯಯನವನ್ನೂ ಕೈಗೊಂಡರು. ಉಪಾಧ್ಯಾಯರ ಟಿಪ್ಪಣಿಗಳನ್ನೂ ಹಾಗೂ ಬೇರೆ ಬೇರೆ ಸಂದರ್ಭಗಳಲ್ಲಿ ಅವರು ಮಾಡಿರುವ ಸಮೀಕ್ಷೆಗಳನ್ನೂ ನೋಡಿದರೆ ಜನಸಂಘದಲ್ಲಿ ಆರ್ಥಿಕ ಚಿಂತನೆಗಳೇ ಇಲ್ಲವೆಂಬುದಾಗಿ ಜನಸಂಘದ ಬಗ್ಗೆ ಪ್ರಚಲಿತವಾಗಿರುವ ಧೋರಣೆಯ ಬಗ್ಗೆ ಆಶ್ಚರ್ಯವೇ ಉಂಟಾಗುತ್ತದೆ. ಸಾರ್ವದೇಶಿಕ ನೆಲೆಯಲ್ಲಿ ರಾಷ್ಟ್ರೀಯ ಏಕಾತ್ಮಕತೆ, ಅಖಂಡತೆ ಹಾಗೂ ಸಂಸ್ಕೃತಿವಾದಗಳ ಬಗ್ಗೆ ಯಾವ ರೀತಿ ಆಂದೋಳನಗಳ ಮೂಲಕ ಜನಸಂಘ ತನ್ನ ನಿಲುವನ್ನು ಮೊಳಗಿಸಿತೋ ಅಷ್ಟೇ ಭಾವನಾತ್ಮಕವಾಗಿ ಹಾಗೂ ಜೋರು ದನಿಯಲ್ಲಿ ಅದು ಆರ್ಥಿಕ ಆಯಾಮಗಳನ್ನು ಮೊಳಗಿಸಲಿಲ್ಲ. ಕಾಶ್ಮೀರ, ಗೋವಾ, ಬೇರೂಬಾಡಿಯ ಘಟನೆಗಳು ಮತ್ತು ಪಾಕ್–ಚೀಣಾ ಆಕ್ರಮಣಗಳ ವಿರುದ್ಧ ಭಾವನಾತ್ಮಕ ರೂಪದಲ್ಲಿ ಬೆಸೆದುಕೊಂಡಿದ್ದಂತೆ ಜನಸಂಘದ ಕಾರ್ಯಕರ್ತರು ಆರ್ಥಿಕ ಅನ್ಯಾಯಕ್ಕೆ ವಿರುದ್ಧವಾಗಿ ತಮ್ಮನ್ನು ಅಷ್ಟು ಭಾವನಾತ್ಮಕ ರೂಪದಲ್ಲಿ ಬೆಸೆದುಕೊಳ್ಳಲಾಗಲಿಲ್ಲ. ಜನಸಂಘದ ನೇತೃತ್ವ ಮಂಡಳಿಯಲ್ಲಿ ಉಪಾಧ್ಯಾಯರು ಮಾತ್ರವೇ ಆರ್ಥಿಕ ವಿಷಯಗಳ ಬಗ್ಗೆ ಅಧಿಕಾರ ಪೂರ್ವಕವಾಗಿ ಮಾತನಾಡುತ್ತಿದ್ದರು. ಜನಸಂಘಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿನ್ನೆಲೆಯನ್ನುಳ್ಳ ಕಾರ್ಯಕರ್ತರು ದೊರಕುತ್ತಿದ್ದರು. ಸಾಮಾನ್ಯವಾಗಿ ಆರ್ಥಿಕ ವಿಷಯಗಳಲ್ಲಿ ಅವರಿಗೂ ಹೆಚ್ಚು ಆಸಕ್ತಿ ಇರುತ್ತಿರಲಿಲ್ಲ. ಜನಸಂಘ ಇಂತಹ ಒಂದು ವಾತಾವರಣದಲ್ಲಿಯೇ ಇದ್ದರೂ, ದೀನ್ ದಯಾಳ್ ಉಪಾಧ್ಯಾಯರು ಇಂತಹ ವಿಷಯಗಳ ಬಗ್ಗೆ ತಮ್ಮನ್ನು ತಾವು ನೇರವಾಗಿ ತೊಡಗಿಸಿಕೊಂಡರು. ರಾಜಕೀಯ ಪಕ್ಷದ ನಾಯಕತ್ವಕ್ಕೆ ಇದು ಅಗತ್ಯವಾಗಿತ್ತು. ಇದರಿಂದಲೂ ಅವರ ವ್ಯಕ್ತಿತ್ವದ ಹೊಣೆಗಾರಿಕೆಯ ಹಾಗೂ ಅಧ್ಯವಸಾಯದ ಮುಖ ಎದ್ದು ಕಾಣುತ್ತದೆ. ದೀನ್ ದಯಾಳರು ಕೇವಲ ಆರ್ಥಿಕ ಸಮೀಕ್ಷಕರು ಮಾತ್ರವೇ ಅಲ್ಲ, ಅವರು ಆರ್ಥಿಕ ಚಿಂತಕರೂ ಆಗಿದ್ದರು. ವಾಸ್ತವವಾಗಿ ಅವರು ಓರ್ವ ಕ್ರಿಯಾಶೀಲ ದಾರ್ಶನಿಕರಾಗಿದ್ದರು.

**ಆರ್ಥಿಕ ಚಿಂತನೆ: ಭಾರತೀಯ ಸಂಸ್ಕೃತಿಯಲ್ಲಿ ಅರ್ಥ**

ಸಮಗ್ರತಾವಾದಿ ದಾರ್ಶನಿಕರಾಗಿದ್ದುದರಿಂದ, ಪಂಡಿತ್ ದೀನ್ ದಯಾಳ್

ಉಪಾಧ್ಯಾಯರು ಜೀವನದ ಯಾವುದೇ ಒಂದು ವಿಶಿಷ್ಟ ಆಯಾಮವೇ ಜೀವನದ ಸಮಗ್ರತೆಯನ್ನು ನಿರ್ಧರಿಸುತ್ತದೆಂದು ಭಾವಿಸಿಕೊಂಡಿರುವಂಥ ಅಥವಾ ಜೀವನದ ಇತರ ಅನೇಕ ಮುಖಗಳನ್ನು ಉಪೇಕ್ಷಿಸುವಂಥ ವಿಶಿಷ್ಟ ವ್ಯವಸ್ಥೆಯ ಒಂದೇ ಮುಖವನ್ನು ಮುಂದಿರಿಸುವಂಥ ಪ್ರತಿಯೊಂದು ವಿಷಯದ ಬಗ್ಗೆಯೂ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಈ ವಿಷಯದ ಬಗ್ಗೆ ಉಪಾಧ್ಯಾಯರು ಹೀಗೆ ಬರೆಯುತ್ತಾರೆ:

"ಭಾರತೀಯ ಜನಸಂಘ ಸ್ಪಷ್ಟ ಆರ್ಥಿಕ ಕಾರ್ಯಕ್ರಮಗಳನ್ನು ಇರಿಸಿಕೊಂಡಿದೆ; ಆದರೆ ನಮ್ಮ ಸಂಪೂರ್ಣ ಕಾರ್ಯಕ್ರಮದಲ್ಲಿ ಅದಕ್ಕೆ ಇರುವ ಸ್ಥಾನ ನಾಲ್ಕು ಪುರುಷಾರ್ಥಗಳಲ್ಲಿ ಒಂದಾದ ಅರ್ಥಕ್ಕೆ ಭಾರತೀಯ ಸಂಸ್ಕೃತಿಯಲ್ಲಿ ಇರುವಷ್ಟು ಮಾತ್ರವೇ. ಪಾಶ್ಚಾತ್ಯ ಸಂಸ್ಕೃತಿ ಭೌತವಾದಿಯಾಗಿರುವುದರಿಂದ ಅದರಲ್ಲಿ ಅರ್ಥವೇ ಪ್ರಧಾನವಾಗಿ ಬಿಟ್ಟಿದೆ. ನಾವು ಭೌತವಾದ ಮತ್ತು ಅಧ್ಯಾತ್ಮವಾದದ ಸಮನ್ವಯವನ್ನು ಸಾಧಿಸಬಯಸುತ್ತೇವೆ. ಆದ್ದರಿಂದ ಹಣದ ಮುಂದೆ ಜೀವನದ ಪ್ರತಿಯೊಂದು ಮೌಲ್ಯವನ್ನೂ ಉಪೇಕ್ಷಿಸುತ್ತ ಹೋಗುವ ಅರ್ಥಶಾಸ್ತ್ರಜ್ಞರು ಹಾಗೂ ಪಕ್ಷಗಳಿಗಿಂತ ಜನಸಂಘವು ಯಾವಾಗಲೂ ಈ ವಿಷಯದಲ್ಲಿ ಹಿಂದೆಯೇ ಉಳಿದುಬಿಡುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಜನಸಂಘವು ಹೃದಯ, ಬುದ್ಧಿ ಹಾಗೂ ಶರೀರ– ಈ ಮೂರನ್ನೂ ದೃಷ್ಟಿಯಲ್ಲಿರಿಸಿಕೊಂಡು ಯೋಚನೆ ಮಾಡುತ್ತದೆ. ಆದ್ದರಿಂದ ಕೆಲವರು ಅದು ಆಧ್ಯಾತ್ಮಿಕತೆಯನ್ನೇ ಉಪೇಕ್ಷೆ ಮಾಡುತ್ತದೆ; ಮಹರ್ಷಿ ಅರವಿಂದರು ಮುಂತಾದ ಮಹಾಪುರುಷರ ಭಾಷೆಯಲ್ಲಿ ಮಾತನಾಡುವುದಿಲ್ಲವೆಂದು ಜನಸಂಘದ ಬಗ್ಗೆ ಆರೋಪ ಮಾಡುತ್ತಾರೆ. ನಾವು ಎರಡೂ ತರಹದ ಆರೋಪಗಳನ್ನು ಸ್ವಾಗತಿಸುತ್ತೇವೆ ಮತ್ತು ಇಷ್ಟು ಮಾತ್ರ ಹೇಳಲಿಚ್ಛಿಸುತ್ತೇವೆ: ಸಮಾಜದ ಉಳಿವಿಗಾಗಿ ಹಣ ಅಗತ್ಯವಾಗುತ್ತದೆ. ವ್ಯಕ್ತಿಯ ಪಾಲನೆ–ಪೋಷಣೆಗೆ ಎಷ್ಟು ಮಾತ್ರ ಅಗತ್ಯವೋ ಅಷ್ಟನ್ನೇ ಗಳಿಸಿ, ಇತರ ಶ್ರೇಷ್ಠ ಮೌಲ್ಯಗಳ ಸಾಧನೆಗಾಗಿ ಪ್ರಯತ್ನಿಸಬೇಕೋ ಅಷ್ಟಕ್ಕೆ ಮಾತ್ರವೇ ನಾವು ನಮ್ಮ ಕಾರ್ಯಕ್ರಮದಲ್ಲಿ ಸ್ಥಾನವನ್ನು ಕೊಟ್ಟಿದ್ದೇವೆ."

ತಮ್ಮ ಆರ್ಥಿಕ ಚಿಂತನೆಯನ್ನು ವ್ಯಾಖ್ಯಾನಿಸಲಿಕ್ಕಾಗಿ ದೀನ್‌ದಯಾಳ್ ಉಪಾಧ್ಯಾಯರು 'ಭಾರತೀಯ ಅರ್ಥನೀತಿ: ವಿಕಾಸ್ ಕೀ ಏಕ್ ದಿಶಾ' ಎಂಬ ಪುಸ್ತಕವನ್ನು ಬರೆದರು. ಪುಸ್ತಕದಲ್ಲಿ ಆರ್ಥಿಕ ನೀತಿಯ ವಿವೇಚನೆ ಮಾಡುತ್ತಾ, ಅವರು ತಮ್ಮ 'ಏಕಾತ್ಮಮಾನವವಾದ'ದಲ್ಲಿ ಅರ್ಥದ ಆಯಾಮಗಳ ಬಗ್ಗೆ ವ್ಯಾಖ್ಯಾನ ಮಾಡುವ ಪ್ರಯತ್ನ ಮಾಡಿದ್ದಾರೆ. "ಸಮಾಜದಲ್ಲಿ 'ಅರ್ಥ'ದ ಪ್ರಭಾವ ಹಾಗೂ ಅಭಾವ ಎರಡನ್ನೂ ಅಳಿಸಿ ಹಾಕಿ ಅದಕ್ಕೆ ಸೂಕ್ತ ವ್ಯವಸ್ಥೆ ಮಾಡುವುದನ್ನೇ 'ಅರ್ಥಾಯಾಮ' ಎನ್ನಲಾಗಿದೆ.

ಭಾರತೀಯ ಸಂಸ್ಕೃತಿಯಲ್ಲಿ ಧರ್ಮವನ್ನು ಆಧಾರಪ್ರಾಯವಾದ



ಪುರುಷಾರ್ಥವೆಂದು ಭಾವಿಸಲಾಗಿದೆ. 'ಸುಖಸ್ಯ ಮೂಲಮ್ ಧರ್ಮಃ। ಧರ್ಮಸ್ಯ ಮೂಲಮರ್ಥಃ।" – ಚಾಣಕ್ಯನ ಈ ಹೇಳಿಕೆಯ ಪ್ರಕಾರ "ಅರ್ಥ ಇಲ್ಲದಿದ್ದರೆ ಧರ್ಮ ನಿಲ್ಲುವುದಿಲ್ಲ." ೧೯೫೩ರಲ್ಲಿ ಅರ್ಥನೀತಿಯನ್ನು ಕುರಿತು ಬರೆದಿರುವ ತಮ್ಮ ಮೊದಲ ಪ್ರಬಂಧದಲ್ಲಿ, ಉಪಾಧ್ಯಾಯರು ಹೀಗೆಂದು ಬರೆದಿದ್ದಾರೆ:

"...........ಭಾರತೀಯ ರೀತಿ ಸದಾ ಧರ್ಮದ ರೀತಿಯಾಗಿದೆ ಎಂಬುದು ನಮಗೆ ಗೊತ್ತಿದೆ ಹಾಗೂ ಧರ್ಮದ ಈ ರೀತಿಯ ಮೇಲೆಯೇ ಆರ್ಥಿಕ ನವ–ನಿರ್ಮಾಣದ ನಕ್ಷೆಯನ್ನು ತಯಾರಿಸುವ ಅಗತ್ಯವಿದೆ. .......... ವೇದಗಳಲ್ಲಿ ಧರ್ಮದ ಬಗೆಗಿನ ........ ವ್ಯಾಖ್ಯಾನವನ್ನು ಹೇಳಲಾಗಿದೆ. ಅವುಗಳಲ್ಲಿ ಧರ್ಮದ ಆದ್ಯ ಲಕ್ಷಣಗಳನ್ನು ಹೇಳಲಾಗಿದೆ. ಅವುಗಳಲ್ಲಿ ಧರ್ಮದ ಆದ್ಯ ಲಕ್ಷಣವು ಎಲ್ಲಕ್ಕಿಂತ ಮಹತ್ವಪೂರ್ಣವಾದದ್ದು ('ಶ್ರಮೇಣ ತಪಸಾ ಸೃಷ್ಟಾ.........') ಅದೇ 'ಶ್ರಮ'............... 'ಶ್ರಮ'ವನ್ನು ಧರ್ಮದ ಮೊದಲನೇ ಲಕ್ಷಣವೆಂದು ತಿಳಿಸಲಾಗಿದೆ. ಮಾರ್ಕ್ಸ್ ಮತ್ತು ಎಂಗಲ್ಸ್ ಅವರು ಹುಟ್ಟಿ ಬರುವವರೆಗೂ ಶ್ರಮದ ಮಹತ್ವದ ಬಗೆಗಿನ ಅರಿವು ನಿಂತೇನೂ ಇರಲಿಲ್ಲ. ಅತಿ ಪುರಾತನ ಕಾಲದಲ್ಲಿ ಸಹಜ ಅನುಭೂತಿಯಿಂದ ಆ ಅರಿವನ್ನು ಮಾನವತೆಗೆ ಮಾಡಿಕೊಡಲಾಗಿತ್ತು............ಶ್ರಮ ಮಾಡುವುದು ಮನುಷ್ಯನ ಮೂಲಭೂತ ಕರ್ತವ್ಯವಾಗಿದೆ. ಇದೇ ರೀತಿ ಮನುಷ್ಯನಿಗೆ ಶ್ರಮದ ಹಕ್ಕನ್ನು ನೀಡುವುದು ರಾಜ್ಯದ ಮೂಲಭೂತ ಕರ್ತವ್ಯವಾಗಿದೆ............ಆದ್ದರಿಂದ ಶ್ರಮದ ಹಕ್ಕು (Right to work) ಮನುಷ್ಯನ ಸಂವೈಧಾನಿಕ ಅಧಿಕಾರವೇ ಆಗಿದೆ. ರಾಜ್ಯದ ಪ್ರಪ್ರಥಮ ಕರ್ತವ್ಯವೆನೆಂದರೆ ಅದು ಪ್ರತಿಯೊಬ್ಬ ನಾಗರಿಕನಿಗೂ ಅವನ ಯೋಗ್ಯತೆಗೆ ಅನುಗುಣವಾಗಿ ಕೆಲಸ ಮಾಡುವ ಅವಕಾಶವನ್ನು ಕಲ್ಪಿಸಿಕೊಡಬೇಕು. ಈ ಅವಕಾಶ ನೀಡಿಕೆಯಲ್ಲಿ ಜಾತೀಯತೆಯ, ವರ್ಣದ ಮತ್ತು ಲಿಂಗದ ಆಧಾರದ ಮೇಲೆ ಯಾವುದೇ ತರಹದ ಭೇದಭಾವ ಆಗಕೂಡದು. ರಾಷ್ಟ್ರದ ಪುನರ್‌ನಿರ್ಮಾಣದ ಯಾವುದೇ ಯೋಜನೆಯನ್ನು ಹಮ್ಮಿಕೊಂಡರೂ ಅದರ ಉದ್ದೇಶ ಎಲ್ಲ ವ್ಯಕ್ತಿಗಳಿಗೆ ಕೆಲಸ ಕೊಡಿಸುವುದೇ ಆಗಿರಬೇಕು. (Full Employment). ಇದರ ಆಧಾರದ ಮೇಲೆಯೇ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುವ ಸಂದರ್ಭದಲ್ಲಿ 'ಎಲ್ಲರಿಗೂ ಕೆಲಸ' ಎಂಬುದೇ ನಮ್ಮ ಆ ಯೋಜನೆಯ ಗುರಿ ಎಂಬುದಾಗಿ ಘೋಷಿಸಬೇಕೆಂದು ದೀನ್ ದಯಾಳ್ ಉಪಾಧ್ಯಾಯರು ಸದಾ ಒತ್ತಾಯಿಸುತ್ತಿದ್ದರು.

**ಹಣದ ಮನೋವಿಜ್ಞಾನ**

ಹಣದ ಕೊರತೆಯೇ ಮನುಷ್ಯನನ್ನು ಕಳ್ಳನನ್ನಾಗಿಸುತ್ತದೆ. ಕೊರತೆಯ ಸಮಯದಲ್ಲಿ ಮಾಡಿದಂತಹ ಕಳ್ಳತನಕ್ಕೆ ಭಾರತೀಯ ಶಾಸ್ತ್ರಕಾರರು 'ಅಪರಾಧ'ವಲ್ಲ 'ಆಪದ್ಧರ್ಮ' ಎಂಬ ಸಂಜ್ಞೆ ಕೊಟ್ಟಿದ್ದಾರೆ:

"ಅವರು (ವಿಶ್ವಾಮಿತ್ರರು) ಧರ್ಮದ ಅನೇಕ ಸೀಮಿತಗಳನ್ನು

ಭಂಗಗೊಳಿಸಿದರು. 'ಆಪದ್ಧರ್ಮ'ದ ಹೆಸರನ್ನು ಕೊಟ್ಟು ಶಾಸ್ತ್ರಕಾರರು ಅವರ ಈ ವರ್ತನೆಯನ್ನು ಸೂಕ್ತವಾದುದೆಂದು ಪರಿಗಣಿಸಿದ್ದಾರೆ. ಹಣದ ಕೊರತೆಯ ಕಷ್ಟಗಳು ನಿರಂತರವಾಗಿ ಇದ್ದರೆ 'ಆಪದ್ಧರ್ಮ'ವೇ– ಅಂದರೆ ಕಳ್ಳತನವೇ – ಧರ್ಮವಾಗಿಬಿಡುತ್ತದೆ. ಆದರೆ ಈ ತೊಡಕುಗಳು ಸಮಷ್ಟಿಯಾಗಿಬಿಟ್ಟರೆ ಅಥವಾ ಸಮಷ್ಟಿಯ ಬಹುಭಾಗವನ್ನು ಇದು ವ್ಯಾಪಿಸಿಕೊಂಡುಬಿಟ್ಟರೆ, ಆಗ ಒಬ್ಬರು ಇನ್ನೊಬ್ಬರ ಆಸ್ತಿಯನ್ನು ಕಳ್ಳತನ ಮಾಡಿ ತಮ್ಮ ಆಪದ್ಧರ್ಮದ ನಿರ್ವಹಣೆ ಮಾಡುತ್ತಾರೆ".

ಅಂದರೆ ಸಮಾಜದಲ್ಲಿ ಹಣದ ಕೊರತೆ ಅಥವಾ ಕೊರತೆ ರೂಪದ ನಿಯೋಜನೆ ಸಮಾಜದಲ್ಲಿ ಅಧರ್ಮವನ್ನು ಧರ್ಮವಾಗಿಸಿಬಿಡುತ್ತದೆ. ಅಂತೆಯೇ 'ಅರ್ಥ'ದ ಪ್ರಭಾವವೂ ಧರ್ಮವನ್ನು ನಾಶಮಾಡಿಬಿಡುತ್ತದೆ. ........ 'ಅರ್ಥ' ಯಾವಾಗ ತನ್ನಲ್ಲೇ ಅಥವಾ ಅದರಿಂದ ದೊರಕಿದ ಪದಾರ್ಥಗಳಲ್ಲಿ ಮತ್ತು ಅದರಿಂದ ಒದಗಿದ ಭೋಗ–ವಿಲಾಸದಲ್ಲಿ ಆಸಕ್ತಿಯನ್ನು ಹುಟ್ಟಿಸುತ್ತದೆಯೋ, ಅವಾಗ ಹಣ ತನ್ನ ಪ್ರಭಾವ ಬೀರಿದೆ ಎಂದು ಹೇಳಲಾಗುತ್ತದೆ.

"ಸರ್ವೇ ಗುಣಾಃ ಕಾಂಚನಮಾಶ್ರಯಂತಿ" ........... ಸಮಾಜದಲ್ಲಿ ಎಲ್ಲರೂ 'ಧನ ಪರಾಯಣ'ರಾಗಿಬಿಟ್ಟಾಗ ಪ್ರತಿಯೊಂದು ಕಾರ್ಯಕ್ಕೆ ಹೆಚ್ಚು ಹೆಚ್ಚು ಹಣದ ಅಗತ್ಯ ಉಂಟಾಗುತ್ತದೆ. ಹಣದ ಈ ಪ್ರಭಾವ ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿಯೂ ಹಣದ ಕೊರತೆಯನ್ನು ಉಂಟುಮಾಡಿಬಿಡುತ್ತದೆ.

ಆದ್ದರಿಂದ ಅವರು ಏನು ಪ್ರತಿಪಾದಿಸುತ್ತಾರೆಂದರೆ, "ಪ್ರತಿಯೊಂದು ವಸ್ತುವನ್ನು ಹಣದಿಂದಲೇ ಖರೀದಿಸಲಾಗದಂಥ ಸಾಮಾಜಿಕ ಮಾನದಂಡಗಳನ್ನೇ ತಯಾರುಮಾಡಬೇಕು. ........ಹಣದಿಂದಲೇ ಮೌಲ್ಯ ಅಳಿಯುವುದರ ಪರಿಣಾಮವಾಗಿ ದುರ್ಬಲರಿಗೆ ರಕ್ಷಣೆಯೇ ದೊರೆಯದಂತಾಗುತ್ತದೆ. ಶಾರೀರಿಕವಾಗಿ ದುರ್ಬಲವಾಗಿರುವ ವ್ಯಕ್ತಿ, ತನ್ನ ಬುದ್ಧಿಶಕ್ತಿಯನ್ನು ಉಪಯೋಗಿಸಿ ಧೂರ್ತತನದಿಂದ ಹಣ ಸಂಪಾದಿಸಿ ತನ್ನನ್ನೇ ರಕ್ಷಿಸಿಕೊಳ್ಳಲು ಮೌಲ್ಯ ತೆರುತ್ತಾನೆ/ ಲಂಚ ನೀಡುತ್ತಾನೆ. ಹಣಕಾಸಿನ ದೃಷ್ಟಿಯಲ್ಲಿ ಶ್ರಮಕ್ಕೆ ಮೌಲ್ಯವನ್ನು ನಿರ್ಧರಿಸುವುದು ಸಾಧ್ಯವಿಲ್ಲ. ಶ್ರಮ ಮತ್ತು ಪರಿಶ್ರಮ ಇವೆರಡಕ್ಕೂ ಅರ್ಥಶಾಸ್ತ್ರದ ಕ್ಷೇತ್ರದಲ್ಲಿ ಘನಿಷ್ಠ ಸಂಬಂಧವಿದ್ದರೂ, ವ್ಯಾವಹಾರಿಕ ಪ್ರಪಂಚಕ್ಕೆ ಸರ್ವಮಾನ್ಯವಾದ ಹಾಗೂ ಎಲ್ಲಕ್ಕೂ ಅನ್ವಯಿಸುವಂಥ ಮೌಲ್ಯ ಸಿದ್ಧಾಂತವನ್ನೇ ಗೊತ್ತುಪಡಿಸುವುದು ಸುಲಭವೂ ಅಲ್ಲ ಮತ್ತು ಉಪಾದೇಯವೂ ಅಲ್ಲ. ವಾಸ್ತವವಾಗಿ, ಎರಡರ ಮೌಲ್ಯಮಾಪನವೂ ಬೇರೆಬೇರೆ ಮಾನದಂಡಗಳಿಂದಲೇ ಆಗುತ್ತದೆ. ಶ್ರಮಕ್ಕೆ ಪ್ರತಿಷ್ಠೆ ಲಭಿಸುವುದು ಅದರಿಂದ ದೊರೆಯುವ ಹಣದ ಆಧಾರದ ಮೇಲೆ, ಅದರ ಧರ್ಮತ್ವದಿಂದ ಇದೇ ರೀತಿ, ಯಾವುದೇ ವ್ಯಕ್ತಿಗೆ ಕೊಟ್ಟಂತಹ ಸಂಭಾವನೆ ಅವನು ಮಾಡಿರುವಂತಹ ಶ್ರಮಕ್ಕೆ ಪ್ರತಿಯಾಗಿ ಕೊಡುವಂಥ ಮೌಲ್ಯವಲ್ಲ. ಅದು ಅವನ 'ಯೋಗಕ್ಷೇಮ'ಕ್ಕಾಗಿ ನೆರವಾಗುವ



ಒಂದು ವ್ಯವಸ್ಥೆ ಅಷ್ಟೆ."

ಉಪಾಧ್ಯಾಯರು ಈ ಬಗೆಯ ಸಮಾಜಶಾಸ್ತ್ರ ಮತ್ತು ಮನೋವಿಜ್ಞಾನದ ಅನುಸರಣೆ ಮಾಡುವಂಥವರು ಇದರಲ್ಲಿ ಕಾರ್ಯದ ಪ್ರೇರಣೆಗೆ 'ಲೋಭವೃತ್ತಿ' ಆಧಾರವಾಗಿಲ್ಲದೆ 'ಕರ್ತವ್ಯಸುಖ' ಆಧಾರವಾಗಿರುತ್ತದೆ. ಮಾನವ ಜೀವನದ ಸಾಮಾಜಿಕ ಹಾಗೂ ಮನೋವೈಜ್ಞಾನಿಕ ಮುಖಗಳನ್ನು ಉಪೇಕ್ಷೆ ಮಾಡುವಂಥ ಅರ್ಥಶಾಸ್ತ್ರವನ್ನು ಅವರು ವಿರೋಧಿಸುತ್ತಾರೆ.

"........ವ್ಯಕ್ತಿಗಳ ಅಬಾಧಿತ ಹಾಗೂ ಅಸೀಮಿತ ಪ್ರತಿಸ್ಪರ್ಧೆಯನ್ನು ನಾವು ಸಾಮಾಜಿಕ ಜೀವನದ ನಿಯಾಮಕವೆಂದಾಗಲಿ ಸುರಕ್ಷಾಪೂರ್ಣವಾದುದೆಂದಾಗಲಿ ಒಪ್ಪಿಕೊಳ್ಳಲಾಗುವುದಿಲ್ಲ. ಈ ನಿಲುವು 'ಮಾತ್ಸ್ಯನ್ಯಾಯ'ವನ್ನು ಪ್ರತಿಪಾದಿಸುವಂಥದು. ನಾವು ಎಂದೂ ಈ ನ್ಯಾಯವನ್ನು ಧರ್ಮಸಂಗತವಾದುದೆಂದು ಒಪ್ಪಿಲ್ಲ. ....ಸಮಾಜದಲ್ಲಿ ಮಾನವನ ಕೆಲವು ಸ್ವಾತಂತ್ರ್ಯಗಳ ಮೇಲೆ ಖಂಡಿತವಾಗಿಯೂ ಕೆಲವೊಂದು ಸೀಮಿತಗಳಿರುತ್ತವೆ. ಅನಿಯಂತ್ರಿತ ಸ್ವಾತಂತ್ರ್ಯ ಕೇವಲ ಕಲ್ಪನೆಯ ಒಂದು ವಸ್ತು. ಅಂತೆಯೇ, ಈ ನಿಯಂತ್ರಣ ಎಷ್ಟರ ಮಟ್ಟಿಗೆ ಹೊರಗಿನದಾಗಿ ಇರುತ್ತದೆಯೋ ಅಲ್ಲಿಯವರೆಗೆ ಅದು ಮಾನವನಿಗೆ ತೊಂದರೆಯನ್ನುಂಟು ಮಾಡುವಂಥದಾಗಿರುತ್ತದೆ. ಶಿಕ್ಷಣ ಮತ್ತು ಸಂಸ್ಕಾರ, ದರ್ಶನ ಮತ್ತು ಆದರ್ಶವಾದ – ಇವು ವಾಸ್ತವವಾಗಿ ಮನುಷ್ಯನಿಗೆ ಆತ್ಮನಿಯಂತ್ರಣವನ್ನೇ ಕಲಿಸಿಕೊಡುತ್ತವೆ". ತನ್ನದೇ ಆದ ರೀತಿಯಲ್ಲಿ ನಡೆಯುತ್ತಿರುವ ಅರ್ಥಶಾಸ್ತ್ರದ ಕೈಗೆ ಸಮಾಜವನ್ನು ಒಪ್ಪಿಸಲಾಗುವುದಿಲ್ಲ. ಸಮಾಜಶಾಸ್ತ್ರ ಹಾಗೂ ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ಅರ್ಥಚಕ್ರವನ್ನು ನಿಯೋಜಿಸುವುದು ಅಗತ್ಯವಾಗುತ್ತದೆ. ಆದ್ದರಿಂದ ಅವರೆನ್ನುತ್ತಾರೆ: "ನಮ್ಮದೇ ಆದ ರೀತಿಗೆ ಅನುಗುಣವಾಗಿ ನಡೆಯುವಂಥ ಅರ್ಥವ್ಯವಸ್ಥೆ ಇರುವುದು ಅಸಾಧ್ಯ. ಅದಕ್ಕೆ ಚಾಲನೆಯನ್ನು ನೀಡಲು ಹಾಗೂ ಕನಿಷ್ಠತೆಯ ಅಡೆತಡೆಗಳೊಂದಿಗೆ ಅದು ಸುಗಮವಾಗಿ ನಡೆದುಕೊಂಡು ಹೋಗುವಂತೆ ಮಾಡಲು ಅಗತ್ಯವಾಗಿರುವಂಥ ಪ್ರೇರಣೆಯ ಸ್ರೋತವನ್ನು ಹಣಕ್ಕೆ ಬದಲಾಗಿ ಮತ್ತೆಲ್ಲಾದರೂ ಅರಸಬೇಕಾಗುತ್ತದೆ. ರಾಷ್ಟ್ರದ ರಾಜನೈತಿಕ ಮಹಾತ್ವಾಕಾಂಕ್ಷೆಗಳು, ವ್ಯಕ್ತಿಯಲ್ಲಿರುವ ಸಾಮಾಜಿಕ ಪ್ರತಿಷ್ಠೆಯ ಅಭಿಲಾಷೆ, ಕುಟುಂಬದ ಪ್ರೇಮ– ಇವೇ ಮೊದಲಾದ ಅನೇಕ ಪ್ರೇರಣೆಗಳು ನಾವು ಬಯಸುವ ಅರ್ಥರಚನೆಯನ್ನು ಕಲ್ಪಿಸಲು ಹಾಗೂ ಉಳಿದುಬರುವಂತೆ ಮಾಡಲು ಸಹಾಯಕವಾಗುತ್ತವೆ."

ಉಪಭೋಗವಾದ, ಸ್ಪರ್ಧಾವಾದ ಮತ್ತು ವರ್ಗ ಸಂಘರ್ಷ – ಇವೆಲ್ಲದರ ಆಧಾರವಾಗಿರುವುದು ಅನಿಯಂತ್ರಿತ ಉಪಭೋಗ ಎಂಬುದು ಉಪಾಧ್ಯಾಯರ ನಿಲುವು. "ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹೆಚ್ಚು ಹೆಚ್ಚು ಉಪಭೋಗದ ತಮ್ಮ ಹಳೆಯ ಸಿದ್ಧಾಂತವನ್ನೇ ಆಚರಣೆಗೆ ತಂದರು. ಮತ್ತು ಅದಕ್ಕೆ ತಿದ್ದುಪಡಿ ಮಾಡಬೇಕಾದ

ಅಗತ್ಯವೇನೂ ಇಲ್ಲವೆಂದು ಭಾವಿಸಿಕೊಂಡರು. ವಾಸ್ತವಿಕತೆಯೇನೆಂದರೆ ಹೆಚ್ಚು ಹೆಚ್ಚು ಉಪಭೋಗದ ಸಿದ್ಧಾಂತವೇ ಮನುಷ್ಯನ ಅನೇಕ ದುಃಖಗಳಿಗೆ ಕಾರಣವಾಗಿದೆ. ಉಪಭೋಗದ ಆಸೆಯನ್ನು ಪೂರೈಸಿದರೆ, ಅದು ಹೆಚ್ಚುತ್ತಾ ಹೋಗುತ್ತದೆ. ಇಡೀ ಸಾಮ್ಯವಾದಕ್ಕೆ ಆಧಾರವಾಗಿರುವ ವರ್ಗಸಂಘರ್ಷ ಉಂಟಾಗುವುದು ಇಂತಹ ಉಪಭೋಗಕ್ಕೆ ಕಾರಣವಾಗಿದೆ. ಭಾರತೀಯ ನಿಲುವು ವರ್ಗಸಂಘರ್ಷವನ್ನು ಖಂಡಿಸಿದರೆ, ಅದು ಉಪಭೋಗವನ್ನು ನಿಯಂತ್ರಿಸಿಕೊಂಡಿದೆ ಮತ್ತು ಹೆಚ್ಚು ಹೆಚ್ಚು ಉಪಭೋಗಕ್ಕೆ ಬದಲಾಗಿ ಅತ್ಯಂತ ಕಡಿಮೆ ಉಪಭೋಗವನ್ನು ಆದರ್ಶವಾಗಿಟ್ಟುಕೊಂಡಿದೆ ಎಂಬುದೇ ಅದರ ತಾತ್ಪರ್ಯವಾಗಿರುತ್ತದೆ. ಮನುಷ್ಯನ ಸ್ವಾಭಾವಿಕ ಭಾವನೆಗಳನ್ನು ಸಂಸ್ಕರಿಸಿ ಅವನ ಹೆಚ್ಚು ಹೆಚ್ಚು ಉತ್ಪಾದನೆಯ, ಸಮಾನ ವಿತರಣೆಯ ಮತ್ತು ಸಂಯಮಿತ ಉಪಭೋಗದ ಪ್ರವೃತ್ತಿಯನ್ನು ಹುಟ್ಟಿಸುವುದೇ ಆರ್ಥಿಕ ಕ್ಷೇತ್ರದಲ್ಲಿ ಆಗಬೇಕಾದ ಸಾಂಸ್ಕೃತಿಕ ಕಾರ್ಯವಾಗಿರುತ್ತದೆ. ಇದರಲ್ಲೇ ಮೂರರ ಸಮತೋಲನ ಇರುತ್ತದೆ”. ಸಮಾಜಶಾಸ್ತ್ರ, ಮಾನವಶಾಸ್ತ್ರ, ವಿಧಿಶಾಸ್ತ್ರ – ಇವೆಲ್ಲವನ್ನೂ, ಸಾಮ್ಯವಾದೀ ಮತ್ತು ಬಂಡವಾಳಶಾಹೀ ವಿಚಾರಧಾರೆಗಳು ಅರ್ಥಶಾಸ್ತ್ರದ ವಶಕ್ಕೆ ಒಪ್ಪಿಸಿಬಿಡುತ್ತವೆ. ಅರ್ಥಶಾಸ್ತ್ರದ ಉದ್ಯೋಗೀಕರಣ ಪ್ರವೃತ್ತಿಯೇ ಹಣದ ಪ್ರಭುತ್ವದ ಕೇಂದ್ರೀಕರಣಕ್ಕೆ ಘೋಷಣೆಯನ್ನು ನೀಡಿದೆ. ಇದರಿಂದ ಮಾನವ ಜೀವನದ ಯಾಂತ್ರೀಕರಣ ಆಗಿಬಿಟ್ಟಿದೆ. ಉಪಾಧ್ಯಾಯರು ಧರ್ಮಶಾಸ್ತ್ರ, ಅರ್ಥಶಾಸ್ತ್ರ ಹಾಗೂ ಸಮಾಜಶಾಸ್ತ್ರ ಇವುಗಳ ನಡುವೆ ಪರಸ್ಪರ ಸಮತೋಲನ ಇರಬೇಕೆಂದು ವಾದಿಸುತ್ತಾರೆ. ಈ ಸಮತೋಲನದ ಕಾರ್ಯವನ್ನು ಅವರು ‘ಸಾಂಸ್ಕೃತಿಕ’ ಕಾರ್ಯವೆಂದೇ ಭಾವಿಸುತ್ತಾರೆ ಮತ್ತು ಈ ಆಲೋಚನೆಗೆ ಅನುಗುಣವಾಗಿರುವಂಥ ‘ಅರ್ಥಾಯಾಮ’ದ ಸ್ಥಾಪನೆಯ ವಿಚಾರವನ್ನೇ ಬೆಂಬಲಿಸುತ್ತಾರೆ.

### ಸ್ವಾಮಿತ್ವದ ಪ್ರಶ್ನೆ

‘ಆಸ್ತಿ ಯಾರದು?’ ಇದು ಸಭ್ಯ ಸಮಾಜ ಆದಿಕಾಲದಿಂದಲೂ ಕೇಳುತ್ತಾ ಬಂದಿರುವ ಪ್ರಶ್ನೆಯೇ ಆಗಿದೆ. ಆಸ್ತಿಯನ್ನು ಇಡೀ ಸಮಾಜ– ಚಕ್ರದ ನಿಯಾಮಕ ಶಕ್ತಿ ಎಂದು ಒಪ್ಪಿಕೊಂಡಿದ್ದರಿಂದ, ಈ ಪ್ರಶ್ನೆಯ ಮಹತ್ವ ಮತ್ತಷ್ಟು ಹೆಚ್ಚಿದೆ. ವ್ಯಕ್ತಿವಾದ ಮತ್ತು ಸಮಾಜವಾದಗಳ ವಿಚಾರಧಾರಾತ್ಮಕ ಸಂಘರ್ಷ ಇದಕ್ಕೆ ಹೊಸ ಆಯಾಮವನ್ನೇ ನೀಡಿತು: ಆಸ್ತಿಯ ಮೇಲೆ ವ್ಯಕ್ತಿಗೆ ಹಕ್ಕು ಇರಬೇಕೋ ಅಥವಾ ಆಸ್ತಿಯ ಮೇಲೆ ಸಮಾಜಕ್ಕೆ ಹಕ್ಕು ಇರಬೇಕೋ ಎಂಬುದೇ ಆ ವಿಚಾರಧಾರೆಯ ಹೊಸ ಆಯಾಮವಾಗಿದೆ. ಉಪಾಧ್ಯಾಯರು ‘ಆಸ್ತಿಯ ಮೇಲಿನ ಹಕ್ಕಿಗಾಗಿ ಉದ್ಭವಿಸುವ ವ್ಯಕ್ತಿ ಮತ್ತು ಸಮಾಜಗಳ ನಡುವಣ ದ್ವಂದ್ವವೇ ತಪ್ಪು ಎಂದು



ಭಾವಿಸುತ್ತಾರೆ, ಆದ್ದರಿಂದ ಈ ಪ್ರಶ್ನೆಗೆ ನೇರವಾಗಿ ಅವರು ಉತ್ತರವನ್ನೇನೂ ಕೊಡುವುದಿಲ್ಲ.

ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದ ಪ್ರತಿನಿಧಿಯಾಗಿರುತ್ತಾನೆ. ಆದ್ದರಿಂದ ಅವನು ಸಮಾಜದ ಸಂಪತ್ತಿನ ಒಂದು ಭಾಗದ ‘ನ್ಯಾಸೀ’ ಅಥವಾ ಸಂರಕ್ಷಕನಾಗಿರುತ್ತಾನೆ. ವ್ಯಕ್ತಿಯನ್ನು ಶ್ರೀವಿಹೀನನ್ನಾಗಿ ಮಾಡುವುದಕ್ಕೆ ಉಪಾಧ್ಯಾಯರು ವಿರುದ್ಧವಾಗಿದ್ದಾರೆ. ವ್ಯಕ್ತಿ ಸ್ವತಃ ‘ಸಮಾಜ ಪುರುಷ’ನ ಅಂಗವಾಗಿರುತ್ತಾನೆ. ಆದ್ದರಿಂದ ಅವನೂ ಸಮಾಜದ ಒಂದು ಸಂಪತ್ತೇ ಆಗಿರುತ್ತಾನೆ. ಆದ್ದರಿಂದ ಸಂಪತ್ತಿನ ಅಮೋಘ ಅಧಿಕಾರವಂತೂ ಸಮಾಜದ್ದೇ ಆಗಿರುತ್ತದೆ. ಆದರೆ ಅವರು ಸಮಾಜದ ಏಕೈಕ ಪ್ರತಿನಿಧಿ ಸಂಸ್ಥೆಯಾಗಿ ‘ರಾಜ್ಯ’ವನ್ನು ಒಪ್ಪಲಿಕ್ಕೆ ಸಿದ್ಧರಾಗಿಲ್ಲ. ಇದೇ ಕಾರಣದಿಂದಾಗಿ, ಸ್ವಂತ ಸಂಪತ್ತಿನ ಕೇಂದ್ರೀಕರಣ ಅಥವಾ ಸಾಮಾಜಿಕ ಅಧಿಕಾರದ ಹೆಸರಿನಲ್ಲಿ ರಾಜ್ಯದಲ್ಲಿ ಸಂಪತ್ತಿನ ಕೇಂದ್ರೀಕರಣವನ್ನು ಅವರು ಸಮಾನ ರೂಪದಲ್ಲಿ ತಪ್ಪು ಎಂದು ಪರಿಗಣಿಸುತ್ತಾರೆ. ಜನ ಸಾಮಾನ್ಯನನ್ನು ಬಂಡವಾಳಶಾಹಿಗಳ ಅಥವಾ ರಾಜ್ಯ ಸಂಸ್ಥೆಯ ಕಾರ್ಮಿಕನನ್ನಾಗಿ ಅಥವಾ ಗುಲಾಮನನ್ನಾಗಿ ಮಾಡಿಬಿಡುವುದು ಮಾನವೀಯತೆಗೇ ಅವಮಾನವೆಂದು ಭಾವಿಸುತ್ತಾರೆ. ಸಂಪತ್ತಿನ ಮೇಲೆ ವ್ಯಕ್ತಿಗೆ ಅಸೀಮಿತ ಒಡೆತನ ಇರುವುದನ್ನು ಒಪ್ಪುವುದಿಲ್ಲ ಮತ್ತು ಅಸೀಮಿತ ರಾಜ್ಯಾಧಿಕಾರವನ್ನು ಸಹ ಅವರು ಒಪ್ಪುವುದಿಲ್ಲ. ಅವರು ಒಡೆತನದ ಕೇಂದ್ರೀಕರಣಕ್ಕೆ ವಿರುದ್ಧವಾಗಿ ಮಾತನಾಡುತ್ತಾರೆ. ಆದ್ದರಿಂದ ಅವರು ವಿಕೇಂದ್ರೀಕೃತ ಅರ್ಥವ್ಯವಸ್ಥೆಯನ್ನೇ ಸಮರ್ಥಿಸುತ್ತಾರೆ. ಉಪಾಧ್ಯಾಯರು ಹೇಳುತ್ತಾರೆ; “...........ಸಮಾಜವಾದದ ಸಮರ್ಥಕರು ಖಾಸಗಿ ಸಂಪತ್ತನ್ನೇ ಇಲ್ಲವಾಗಿಸಿಬಿಡುವ ಮಾತು ಹೇಳುತ್ತಾರೆ. ಸಿದ್ಧಾಂತ ಹಾಗೂ ವ್ಯವಹಾರ – ಈ ಎರಡೂ ದೃಷ್ಟಿಯಿಂದ ಅವರನ್ನು ಸಮರ್ಥಿಸುವುದು ಕಷ್ಟವಾಗುತ್ತದೆ. ಸೃಷ್ಟಿಯ ಆರಂಭದಿಂದಲೇ ‘ಅಪರಿಗ್ರಹ’ದ ಮಾತು ನಿನ್ನದೇ ಎಂಬುದಕ್ಕೆ ಇರುವ ಇನ್ನೊಂದು ಹೆಸರಾಗಿದೆ. ಯಾವ ಖಾಸಗಿ ಸಂಪತ್ತಿನ ಭಾವನೆಯನ್ನು ಬುಡಸಮೇತ ಕಿತ್ತೊಗೆಯಬೇಕೆಂದು ಸಾಮ್ಯವಾದಿಗಳು ಅಂದುಕೊಂಡಿದ್ದರೋ, ಅವರೇ ಮೊದಲು ವೈಯಕ್ತಿಕ ಸಂಪತ್ತಿನ ವಿಚಾರವನ್ನು, ಅನಂತರದಲ್ಲಿ ಸ್ವಲ್ಪ ಸ್ವಲ್ಪವಾಗಿ ಖಾಸಗಿ ಸಂಪತ್ತಿನ ವಿಚಾರವನ್ನು ಒಪ್ಪತೊಡಗಿದರು. ಖಾಸಗೀ ಸಂಪತ್ತಿನಿಂದಾಗಿ ಕೆಡುಕುಗಳು ಉಂಟಾಗುತ್ತವಾದರೂ, ಅದನ್ನು ಬಹಿಷ್ಕರಿಸಲು ನಮಗೆ ಸಾಧ್ಯವಾಗುವುದಿಲ್ಲ. ಹೌದು, ನಾವು ಖಾಸಗೀ ಸಂಪತ್ತಿನ ಇತಿಮಿತಿಗಳನ್ನು ಖಂಡಿತವಾಗಿಯೂ ಗೊತ್ತುಪಡಿಸಬೇಕಾಗಿದೆ.”

ವೈಯಕ್ತಿಕ ಸಂಪತ್ತನ್ನು ಸೀಮಿತಗೊಳಿಸುವ ಸಲುವಾಗಿ ಹಾಗೂ ಅರ್ಥೋತ್ಪಾದನೆಯ ವಿಚಾರವನ್ನು ಯೋಜಿಸುವ ಸಲುವಾಗಿ ರಾಜ್ಯಕ್ಕೆ ಇರಬೇಕಾದ ಅಧಿಕಾರದ ವಿಚಾರವನ್ನು ಒಪ್ಪುತ್ತಾರೆ. ಕೆಲವೇ ಕೈಗಳಲ್ಲಿ ಬಂಡವಾಳ

ಕೇಂದ್ರೀಕೃತವಾಗುವ ಅಪಾಯ ಇರುವಲ್ಲಿ ರಾಷ್ಟ್ರೀಕರಣವೇ ಅಪೇಕ್ಷಣೀಯವಾದದು ಎಂದು ಅವರು ಭಾವಿಸುತ್ತಾರೆ:

"............ಗುಡಿ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಈ ಅಪಾಯ ತುಂಬಾ ಕಡಿಮೆಯಾಗಿದೆ; ಆದರೆ ಬೃಹತ್ ಉದ್ಯಮಗಳ ಕ್ಷೇತ್ರದಲ್ಲಿ ಈ ಅಪಾಯ ಶುರುವಾಗುತ್ತದೆ. ರಕ್ಷಣಾ ಕ್ಷೇತ್ರದ ಉದ್ಯೋಗಗಳ ರಾಷ್ಟ್ರೀಕರಣವಂತೂ ಅನಿವಾರ್ಯವಾಗಿದೆ. ಈಗ ಪ್ರಶ್ನೆ ಉಳಿಯುವುದು ಬಂಡವಾಳ ಹೂಡಿಕೆಯ ಕ್ಷೇತ್ರದ ಉದ್ಯೋಗಗಳದ್ದು. ಅವುಗಳನ್ನು ಅಂತಿಮವಾಗಿ ರಾಷ್ಟ್ರೀಕರಣ ಮಾಡಿ ಬಿಡುವುದು ನಮ್ಮ ಉದ್ದೇಶವಾಗಿರಬೇಕಾಗಿದೆ. ಇಂದು ಬಂಡವಾಳ ಹೂಡಿಕೆ ವ್ಯಕ್ತಿಗತ–ಉದ್ಯೋಗ ಕ್ಷೇತ್ರಕ್ಕೆ ಬರುತ್ತದೆ. ಅದರಿಂದ ವ್ಯಕ್ತಿಗತ ಕ್ಷೇತ್ರವನ್ನು ಕ್ರಮೇಣ ತೊಡೆದುಹಾಕಬೇಕಾಗಿದೆ. ಎಲ್ಲಿಯವರೆಗೆ ಅಂತಿಮವಾಗಿ ಈ ರಾಷ್ಟ್ರೀಕರಣ ಸಾಧ್ಯವಾಗುವುದಿಲ್ಲವೋ, ಅಲ್ಲಿಯವರೆಗೆ ದೊಡ್ಡ ಉದ್ಯೋಗಗಳು ಗುಂಪುಗೂಡುವ ಪ್ರವೃತ್ತಿಗೆ ತಡೆ ಹಾಕಬೇಕು. ಯಾವ ಉದ್ಯೋಗಗಳಲ್ಲಿ ಇಂತಹ ಗುಂಪುಗಳು ಆಗಿಬಿಟ್ಟಿವೆಯೋ, ಅವುಗಳನ್ನು ರಾಷ್ಟ್ರೀಕರಣ ಮಾಡುವುದು ಉತ್ತಮ. ಗುಡಿಕೈಗಾರಿಕೆಗಳು ವಿಕಾಸಗೊಳ್ಳುವಂತೆ ಮಾಡುವಾಗಲೂ, ಬಂಡವಾಳಶಾಹಿಗಳು ಗುಂಪುಗೂಡಿಕೊಂಡು ಇವುಗಳ ಮೇಲೆ ನಿಯಂತ್ರಣವನ್ನು ಸ್ಥಾಪಿಸಿಕೊಳ್ಳದಂತೆ ನೋಡಿಕೊಳ್ಳಬೇಕು. ಜಪಾನಿನಲ್ಲಿ ವಿತರಣೆ ಮತ್ತು ಸಂಪತ್ತಿನ ಅಸಮಾನತೆಗೆ ಕಾರಣ ಅಲ್ಲಿನ ಗುಡಿ ಕೈಗಾರಿಕೆ ಉದ್ಯೋಗಗಳ ಮೇಲೆ ಬಂಡವಾಳಶಾಹಿಗಳು ನಿಯಂತ್ರಣವನ್ನು ಸ್ಥಾಪಿಸಿಕೊಂಡಿರುವುದು".

ಒಡೆತನದ ಪ್ರಶ್ನೆಯನ್ನು ಬಂಡವಾಳಶಾಹಿಗಳು ಹಾಗೂ ಸಮಾಜವಾದಿಗಳು ಪ್ರಸ್ತುತಪಡಿಸುವ ರೀತಿ ಅವರ ವಿಭಾಜಕ ದೃಷ್ಟಿಯನ್ನೇ ಪರಿಚಯಿಸಿಕೊಡುತ್ತದೆ ಎಂದು ಅವರು ಭಾವಿಸಿದ್ದಾರೆ. ಉಪಾಧ್ಯಾಯರ ದೃಷ್ಟಿಯಲ್ಲಿ ಸಂಪತ್ತಿನ 'ಒಡೆತನ'ಕ್ಕೆ ಬದಲಾಗಿ ಕೇಂದ್ರೀಕರಣದ ಪ್ರಶ್ನೆ ಹೆಚ್ಚು ಮುಖ್ಯವಾಗಿದೆ; ಜೊತೆಗೆ 'ಗಿರಾಕಿ–ಹಿತರಕ್ಷಣೆ'ಯ ಬಗೆಗಿನ ಒತ್ತು ಕೂಡ ಮಹತ್ವಪೂರ್ಣವಾದ ಪ್ರಶ್ನೆಯೇ ಆಗಿದೆ. ಆದ್ದರಿಂದಲೇ ಅವರು ಬರೆದಿದ್ದಾರೆ:

"ಒಡೆತನದ ಜೊತೆಗೆ ಅನಿರ್ಬಂಧಿತ ನಿಯಂತ್ರಣ ಮತ್ತು ಮನಸೋ ಇಚ್ಛೆ ಬಳಕೆಯ ಧೋರಣೆಗಳು ಈ ವಿಷಯವನ್ನು ತಪ್ಪು ಹಿನ್ನೆಲೆಯಲ್ಲಿ ಮುಂದಿರಿಸುತ್ತವೆ. ವಸ್ತುವಿನ ಮೇಲಿನ ಒಡೆತನ ಮತ್ತು ಬಳಕೆಯ ವಿಚಾರಗಳನ್ನು ಎಲ್ಲಿಯವರೆಗೆ ನಾವು ಪ್ರತ್ಯೇಕಿಸುವುದಿಲ್ಲವೋ ಅಲ್ಲಿಯವರೆಗೆ ಅವುಗಳಿಂದಾಗುವ ಕೆಡುಕುಗಳನ್ನು ನಿವಾರಿಸಲಾಗುವುದಿಲ್ಲ. ಯಾವ ವಸ್ತುವಿನ ಒಡೆತನ ನನಗೆ ಸೇರಿದೆಯೋ ಅದನ್ನು ಸಮಾಜದ ಹಿತಕ್ಕಾಗಿಯೇ ಬಳಕೆ ಮಾಡುವ ಅಧಿಕಾರ ನನಗಿರುತ್ತದೆ ಎಂಬ ವಿಚಾರವನ್ನು ಪ್ರತಿಯೊಬ್ಬ ವ್ಯಕ್ತಿಯ ಮುಂದೆಯೂ ಇಡಬೇಕು. ............ರಾಜ್ಯ



ಒಡೆತನವನ್ನು ವಹಿಸಿಕೊಂಡಾಗಲೂ ವ್ಯಕ್ತಿಗಳ ಮೂಲಕವೇ ಅದು ವ್ಯವಸ್ಥೆ ಮಾಡುತ್ತದೆ. ...........ಯಾವ ವ್ಯಕ್ತಿ ಇಂದು ತನ್ನ ವಸ್ತುವನ್ನು ಮನಸೋ ಇಚ್ಛೆ ಉಪಯೋಗಿಸುವುದಕ್ಕೆ ಹೆದರುವುದಿಲ್ಲವೋ, ಅವನು ಸಮಾಜಕ್ಕೆ ಸೇರಿದ ವಸ್ತುವನ್ನು ಹಾಗೆಯೇ ಉಪಯೋಗ ಮಾಡುವುದಿಲ್ಲವೆಂಬುದಾಗಿ ಖಾತರಿ ಕೊಡಲಾಗುವುದಿಲ್ಲ. ಒಂದು ವೇಳೆ ಅದರ ದುರುಪಯೋಗವನ್ನು ತಡೆಗಟ್ಟುವ ಸಲುವಾಗಿ ದಂಡನೀತಿ ಆವಶ್ಯಕವೆಂದುಕೊಂಡರೆ, ಆಗ ವ್ಯಕ್ತಿಯ ಬಳಿ ಒಡೆತನದ ಅಧಿಕಾರವಿದ್ದರೂ, ಅದನ್ನು ದಂಡನೀತಿಯನ್ನು ಬಳಸಬಹುದಾಗಿದೆ".

ದೀನ್ ದಯಾಳ್ ಉಪಾಧ್ಯಾಯರು ವ್ಯಕ್ತಿಯ ಖಾಸಗಿತನವನ್ನು ತುಳಿದುಹಾಕುವಂತಹ ವೈಯಕ್ತಿಕ ಅಧಿಕಾರವನ್ನು ವಿರೋಧಿಸುತ್ತಾರೆ. ಇದು ಮಾನವನ ಅಸ್ವಸ್ಥ ಸ್ಥಿತಿಯನ್ನು ಪರಿಚಯಿಸುತ್ತದೆಂದು ಅವರು ಭಾವಿಸುತ್ತಾರೆ. ಸಂಪತ್ತಿನ ಮೇಲೆ ವ್ಯಕ್ತಿಯ ಅಥವಾ ರಾಜ್ಯದ ಅನಿರ್ಬಂಧಿತ ನಿಯಂತ್ರಣದ ಅಧಿಕಾರದ ಪ್ರಶ್ನೆಯೂ ಈ ಅಸ್ವಸ್ಥ ಸ್ಥಿತಿಯ ಫಲವೇ. "ಗಂಭೀರವಾಗಿ ಪರಿಶೀಲಿಸಿದ್ದೇ ಆದರೆ ಒಡೆತನದ ಹಕ್ಕು ವಾಸ್ತವವಾಗಿ ಗೊತ್ತುಪಡಿಸಲಾಗಿರುವ ಇತಿ–ಮಿತಿಗಳಲ್ಲಿ ಮತ್ತು ನಿಶ್ಚಿತ ಉದ್ದೇಶಗಳಿಗಾಗಿ ಯಾವುದೇ ವಸ್ತುವಿನ ಬಳಕೆಯ ಹಕ್ಕು ಮಾತ್ರವಾಗಿರುತ್ತದೆ. ಕಾಲ ಬದಲಾಗುತ್ತ ಬಂದಂತೆ ಈ ಹಕ್ಕುಗಳು ಬದಲಾಗುತ್ತ ಹೋಗುತ್ತಿರುತ್ತವೆ. ಆದ್ದರಿಂದ ಸೈದ್ಧಾಂತಿಕ ದೃಷ್ಟಿಯಿಂದ ವ್ಯಕ್ತಿ ಮತ್ತು ಸಮಾಜದ ಬಗೆಗಿನ ಜಗಳದಲ್ಲಿ ನಾವು ಸಿಕ್ಕಿಕೊಳ್ಳಬಯಸುವುದಿಲ್ಲ. ..............ಸಂಪತ್ತಿನ ಬಳಕೆ ಕುಟುಂಬದ(ಸಮಾಜದ) ಹಿತಕ್ಕಾಗಿ ಆಗುತ್ತದೆ, ಮನಸೋ ಇಚ್ಛೆಯಾಗಿ ಅಲ್ಲ. ಗಾಂಧೀ ಹಾಗೂ ಗುರೂಜಿ ಮೊದಲಾದ ಚಿಂತಕರು ಧರ್ಮದರ್ಶಿತ್ವದ ('ಟ್ರಸ್ಟೀಶಿಪ್'ನ) ಈ ಭಾರತೀಯ ಸಿದ್ಧಾಂತವನ್ನೇ ಸಮಾಜದ ಮುಂದೆ ಇಟ್ಟಿದ್ದಾರೆ" ಎಂಬುದು ಉಪಾಧ್ಯಾಯರ ಅಭಿಪ್ರಾಯವಾಗಿತ್ತು.

'ಧರ್ಮದರ್ಶಿತ್ವ'ದ (ಟ್ರಸ್ಟೀಶಿಪ್‌ನ) ಸಿದ್ಧಾಂತ ಪ್ರತಿಯೊಬ್ಬ ವ್ಯಕ್ತಿಯನ್ನೂ ಸಮಾಜದ ಜವಾಬ್ದಾರಿಯುತ ಘಟಕವೆಂದು ಭಾವಿಸುತ್ತದೆ. ಸಮಾಜದಲ್ಲಿ ಜವಾಬುದಾರಿಕೆ (ಹೊಣೆಗಾರಿಕೆಯ) ಅರಿವಿಗೆ ಶಿಥಿಲತ್ವ ಬರಬಾರದೆಂದು ಮತ್ತು ಹೊಣೆಗಾರಿಕೆಯ ಸಂಸ್ಕಾರ ಸಾಮಾಜಿಕ ಪರಿಸರದಲ್ಲಿನ ಸಹಜ ಪರಿಣಾಮವಾಗಿರುವಂತಹ ಸಮಾಜ ರಚನೆಯೇ 'ಮಾನವೀಯ' ಸಮಾಜ ರಚನೆಯಾಗಿರುತ್ತದೆ. ವ್ಯಕ್ತಿಯ ಪಿಶಾಚತ್ವದ ಮೇಲೆ ರಾಜ್ಯದ 'ಅಂಕುಶ' ಇರುವುದು ಮತ್ತು ರಾಜ್ಯದ ಪಿಶಾಚತ್ವದ ವಿರುದ್ಧ ವ್ಯಕ್ತಿಗಳು ಸಿಡಿದೇಳುವಿಕೆ ಸಂಸ್ಕಾರಹೀನ ಸಮಷ್ಟಿಯ ಪ್ರತೀಕಗಳು. 'ಅಂಕುಶ' ಮತ್ತು 'ಸಿಡಿದೇಳುವಿಕೆ'ಗಳು ಅಸಹಾಯಕತೆಯ ಅಸ್ತ್ರಗಳು. ಇದನ್ನು ಆಗೊಮ್ಮೆ – ಈಗೊಮ್ಮೆ ಉಪಯೋಗಿಸಿಕೊಳ್ಳುವುದನ್ನು ವ್ಯಾವಹಾರಿಕ ಎನ್ನಬಹುದು; ಆದರೆ 'ಅಖಂಡ ಅಂಕುಶ' ಮತ್ತು 'ಅಖಂಡ

ಪ್ರತಿಭಟನೆ'ಯ ವ್ಯವಸ್ಥೆಗಳ ಬಳಕೆಯನ್ನೇ ವಿವೇಕ ಸಮ್ಮತವೆಂದು ಒಪ್ಪಿಕೊಳ್ಳಲಾಗುವುದಿಲ್ಲ. ವ್ಯಷ್ಟಿ ಮತ್ತು ಸಮಷ್ಟಿಯ ಪಾಲುಗಾರಿಕೆಯಲ್ಲಿಯೇ ಮಾನವೀಯತೆಯ ಸುಖ ಅಡಗಿರುತ್ತದೆ. ಆದ್ದರಿಂದ ಸಂಪತ್ತಿನ ಅಥವಾ ಆಸ್ತಿಯ ಮೇಲಿನ ಸಂಯುಕ್ತ ಅಧಿಕಾರವೇ ಏಕಾತ್ಮ ಮಾನವವಾದಕ್ಕೆ ಅಭಿಪ್ರೇರಣೆಯನ್ನು ನೀಡಿರುತ್ತದೆ.

**ಬಂಡವಾಳ ಶಾಹಿಯ ನಿಷೇಧ**

ದೀನ್ ದಯಾಳ್ ಉಪಾಧ್ಯಾಯರು ಪಶ್ಚಿಮದ ವಿಚಾರ ಸರಣಿಯಿಂದ ಮೂಡಿಬಂದಿರುವ ವ್ಯಕ್ತಿವಾದದ ಜನತಂತ್ರಾತ್ಮಕ ಪಕ್ಷದ ಸಮರ್ಥಕರಾಗಿದ್ದರು; ಆದರೆ ಬಂಡವಾಳವನ್ನು 'ವ್ಯಕ್ತಿವಾದ'ದ ವಿಕೃತಿ ಎಂದು ಅವರು ಭಾವಿಸಿದ್ದಾರೆ. ಉನ್ಮುಕ್ತ ಆರ್ಥಿಕ ಸ್ಪರ್ಧೆ ಬಂಡವಾಳಶಾಹಿಗೆ ಆಧಾರವಾಗಿದೆ. ಸ್ಪರ್ಧೆಯ ಸ್ವಾತಂತ್ರ್ಯವನ್ನು ಬಂಡವಾಳಶಾಹಿಯ ಸಮರ್ಥಕರು 'ವ್ಯಕ್ತಿ–ಸ್ವಾತಂತ್ರ್ಯ'ವೆಂದು ಹೇಳುತ್ತಾರೆ; ಆದರೆ ಉಪಾಧ್ಯಾಯರು ಇದನ್ನು ಪೂರ್ಣವಾಗಿ ಒಪ್ಪುವುದೇ ಇಲ್ಲ. ಅವರು ಹೇಳುವ ಪ್ರಕಾರ:

"ಸ್ವಾತಂತ್ರ್ಯ ಮತ್ತು ಪ್ರತಿಸ್ಪರ್ಧಿತನ, ವ್ಯಕ್ತಿಗೆ ಉಪಭೋಗದ ಅಥವಾ ಬಳಕೆಯ ಸ್ವಾತಂತ್ರ್ಯವನ್ನು ನೀಡುತ್ತದೆ ಎಂದು ಹೇಳಲಾಗಿದೆ. (ಇದು ಸರಿಯಲ್ಲ)............. ವಿರೋಧಿಸುವವರು (ಸ್ಪರ್ಧಿಗಳು) ಇಲ್ಲವಾದ ಮೇಲೆ ಒಬ್ಬನೇ ಒಬ್ಬ ಅಥವಾ ಕೆಲವು ಉತ್ಪಾದಕರು ಈ ಕ್ಷೇತ್ರದಲ್ಲಿ ಸ್ವಾಮ್ಯ ಅಥವಾ ಏಕಾಧಿಪತ್ಯವನ್ನು ಸ್ಥಾಪಿಸಿಕೊಂಡುಬಿಡುತ್ತಾರೆ. ಆಗ ಅವರು ಗ್ರಾಹಕನ ಪ್ರಜಾತಾಂತ್ರಿಕ ಅಧಿಕಾರಗಳನ್ನು ಕಸಿದುಕೊಳ್ಳುತ್ತಾರೆ. ಆ ಬಳಿಕ ಬೇಡಿಕೆ ಮತ್ತು ಪೂರೈಕೆಯ ನಿಯಮಗಳ ಆಧಾರದ ಮೇಲೆ ಬೆಲೆಗಳು ಉತ್ಪಾದಕರ ವೈಯಕ್ತಿಕ ಇಚ್ಛೆ ಮತ್ತು ಯೋಜನೆಗಳಿಗೆ ಅನುಗುಣವಾಗಿ ನಿರ್ಧಾರಿತವಾಗುತ್ತವೆ. ಆರ್ಥಿಕ ಕ್ಷೇತ್ರದಲ್ಲಿ ಇದು ಒಂದು ತರಹದ ನಿರಂಕುಶ ಪ್ರಭುತ್ವ ಆಗುತ್ತದೆ. ಲಭ್ಯವಿರುವ ಶಕ್ತಿ ಮತ್ತು ಪ್ರಚಾರ ತಂತ್ರದ ಆಧಾರದ ಮೇಲೆ ಉತ್ಪಾದನೆಗಳ ಒಡೆಯರು, ಸಾಮಾನ್ಯ ಜನರನ್ನು ಅವರ ಹಕ್ಕುಗಳಿಂದ ವಂಚಿಸುತ್ತಾರೆ. ಆದ್ದರಿಂದ ಉತ್ಪಾದನೆಯ ಸಾಮರ್ಥ್ಯದ ಮಿತಿಯನ್ನೇ ಗೊತ್ತುಪಡಿಸುವುದು ಅಗತ್ಯವಾಗುತ್ತದೆ. ಇದು ವಿಕೇಂದ್ರೀಕರಣದಿಂದ ಮಾತ್ರವೇ ಸಾಧ್ಯವಾಗುತ್ತದೆ.

ಉಪಾಧ್ಯಾಯರು ಕೆಲವು ವ್ಯಕ್ತಿಗಳ ಕೈಯಲ್ಲಿ ಮಿತಿ ಇಲ್ಲದ ಉತ್ಪಾದನೆಯ ಸಾಮರ್ಥ್ಯ ಕೇಂದ್ರೀಕೃತವಾಗುವುದನ್ನು ಪ್ರಬಲವಾಗಿ ವಿರೋಧಿಸುತ್ತಿದ್ದರು : "....... ಓರ್ವ ವ್ಯಕ್ತಿಯ ಉತ್ಪಾದನೆಯ ಸ್ವಾತಂತ್ರ್ಯ ಮತ್ತೊಬ್ಬರ ಮಾರ್ಗಕ್ಕೆ ತೊಡಕನ್ನು ಉಂಟುಮಾಡಿದ್ದೇ ಆದರೆ, ಆಗ ಆ ವ್ಯಕ್ತಿಗೆ ಆ ಸ್ವಾತಂತ್ರ್ಯವನ್ನು ಕೊಡಲಾಗುವುದಿಲ್ಲ.



ಒಬ್ಬ ವ್ಯಕ್ತಿ, ಒಂದು ದೊಡ್ಡ ಕಾರ್ಖಾನೆಯ ಮಾಲೀಕ ಸ್ವತಃ ಉತ್ಪಾದನೆಯ ಸ್ವಾತಂತ್ರ್ಯವನ್ನು ಬಳಸಿಕೊಂಡಿದ್ದೇ ಆದರೆ, ಅವನೇ ಸಣ್ಣ–ಸಣ್ಣ ಉದ್ಯಮಗಳನ್ನು ಮುಗಿಸಿ ಅವರ ಸ್ವಾತಂತ್ರ್ಯವನ್ನು ಅಪಹರಿಸಿಬಿಡುತ್ತಾರೆ. ಅಷ್ಟೇ ಅಲ್ಲ, ಎಷ್ಟೋ ಬಾರಿ ಅವನ ಕಾರ್ಖಾನೆಯಲ್ಲಿ ಕಾರ್ಮಿಕರ ಸ್ವಾತಂತ್ರ್ಯವೂ ಬಹಳ ಸೀಮಿತವಾಗಿಬಿಟ್ಟಿರುತ್ತದೆ. ಆದ್ದರಿಂದ ನಿಯಂತ್ರಣ ಅಗತ್ಯವಾಗುತ್ತದೆ."

ಬಂಡವಾಳಶಾಹಿ ಪ್ರವೃತ್ತಿ ಹಣಕಾಸಿನ ಅಧಿಕಾರವನ್ನು ಕೆಲವರ ಕೈಯಲ್ಲಿ ಕೇಂದ್ರೀಕರಿಸುವುದೇ ಆಗಿರುತ್ತದೆ. ತಮ್ಮ ಸಮಾಜದ ನಿರಪೇಕ್ಷ ಮಾನಸಿಕತೆಯ ಕಾರಣದಿಂದಾಗಿ, ಅದು ಮನುಷ್ಯರ ಹಿತಕ್ಕೆ ಬದಲಾಗಿ ತಮ್ಮ ಒಡೆತನದ ಕೇಂದ್ರಿಕರಣಕ್ಕೆ ಹೆಚ್ಚು ಒತ್ತುಕೊಡುತ್ತದೆ. ಈ ಕೇಂದ್ರೀಕರಣದ ಪ್ರವೃತ್ತಿಯೇ ಪಶ್ಚಿಮದ ಔದ್ಯೋಗೀಕರಣದಲ್ಲಿ ಸಹಕಾರಿಯಾಗಿಲ್ಲದೆ ಪ್ರತಿಸ್ಪರ್ಧಿಯಾಗಿ ಪರಿಣಮಿಸುವುದು. ನಿತ್ಯವೂ ಹೊಸ ಹೊಸ ಯಾಂತ್ರಿಕ ಅಭಿನವೀಕರಣ ನಡೆಯುತ್ತಿದ್ದುದು ಬಂಡವಾಶಾಹಿಗೆ ಬೆಂಬಲವನ್ನು ನೀಡಿತು. ಉಪಾಧ್ಯಾಯರು ಯಾಂತ್ರೀಕರಣ ಹಾಗೂ ಉದ್ಯೋಗೀಕರಣವನ್ನು ಬಲವಾಗಿ ವಿರೋಧಿಸುತ್ತಾರೆ. ಅವರು ಹೀಗೆಂದು ಹೇಳುತ್ತಾರೆ : "............. 'ಉತ್ಪಾದನೆ'ಗೆ ಹೆಚ್ಚು ಒತ್ತು ನೀಡಿದ್ದರಿಂದ ಅಮೆರಿಕಾ ಮುಂತಾದ ದೇಶಗಳಲ್ಲಿ ಬಂಡವಾಳಶಾಹಿ ಬೆಳೆದುಬಂದಿತು. ಹೊಸದಾಗಿ ಆವಿಷ್ಕಾರಗೊಂಡ ಯಂತ್ರಗಳು ಈ ವೃದ್ಧಿಗತ ಉತ್ಪಾದನೆಗೆ ಕಾರಣವಾಗಿ ಪರಿಣಮಿಸಿದ್ದು, ಮತ್ತೆ ಈ ಯಂತ್ರಗಳ ಒಡೆಯರು ಉತ್ಪಾದನೆಯ ಒಡೆಯರೇ ಆಗಿ ಪರಿಣಮಿಸಿದರು. ಲಾಭದಲ್ಲಿ ಕಾರ್ಮಿಕರಿಗೆ ಪಾಲುಸಿಗದೇ ಇದ್ದಾಗ ಅವರಲ್ಲಿ ಪ್ರತಿಕ್ರಿಯೆ ಉಂಟಾಯಿತು ಮತ್ತು ಅವರು ಒಂದು ಹೊಸ ರೀತಿಯ ಸಮಾಜವಾದ ಅಥವಾ ಸಾಮ್ಯವಾದವನ್ನು ವಿಕಾಸಗೊಳಿಸಿದರು ಅದರಲ್ಲಿ ಪುನಃ 'ವಿತರಣೆ'ಗೆ ಹೆಚ್ಚು ಒತ್ತು ಕೊಡಲಾಯಿತು."

ವ್ಯವಸ್ಥೆ ಸಮಾಜದಲ್ಲಿ ಪ್ರತಿಕ್ರಿಯೆಯನ್ನು ಹುಟ್ಟಿಸುತ್ತದೆ; ಸಮ್ಯಕ್ ಜೀವನವನ್ನು ರೂಪಿಸುವುದಿಲ್ಲ. ಸಮಾಜದ ಸಾಂಸ್ಕೃತಿಕ ಮೌಲ್ಯಗಳನ್ನು ನಾಶಪಡಿಸಿ, ಅದು ಸಮಾಜವನ್ನು 'ಬಳಕೆದಾರಿಕೆ'ಯ ದುಷ್ಟ ಚಕ್ರದಲ್ಲಿ ಸಿಕ್ಕಿಸಿ, ಜನರನ್ನು 'ಲೋಲುಪ'ರನ್ನಾಗಿಸುತ್ತದೆ. ಬಂಡವಾಳಶಾಹಿ ಪ್ರಸ್ತುತಪಡಿಸಿರುವ 'ಆರ್ಥಿಕ ಮಾನವ'ನ ಕಲ್ಪನೆಯೂ ಭ್ರಮಾಪೂರ್ಣವಾಗಿದೆ. ಬಳಕೆದಾರಿಕೆ ಹಾಗೂ 'ಆರ್ಥಿಕ ಮಾನವ'ನ ಕಲ್ಪನೆಗಳು ಆರ್ಥಿಕ ಜೀವನ ಮತ್ತು ಮಾನವನನ್ನು ಬೇರೆ ಬೇರೆಯಾಗಿಸಿಬಿಟ್ಟಿವೆ; ಶ್ರಮ ಮತ್ತು ಆನಂದದ ನಡುವೆ ಒಂದು ಆಳವಾದ ಕಂದಕವನ್ನು ಸೃಷ್ಟಿಸಿಬಿಟ್ಟಿದೆ. ಯಂತ್ರವನ್ನು ಮನುಷ್ಯನ ಸಹಯೋಗಿಯನ್ನಾಗಿ ಮಾಡುವುದಕ್ಕೆ ಬದಲಾಗಿ ಮನುಷ್ಯನನ್ನು ಯಂತ್ರದ ಒಂದು ಭಾಗವನ್ನಾಗಿ ಮಾಡಿಬಿಟ್ಟಿದೆ. ಉತ್ಪಾದನೆಯ ಕಾರ್ಯದಲ್ಲಿನ ಶಿಲ್ಪ ಮತ್ತು ಸೃಷ್ಟಿಯ ಸುಖವನ್ನು ಅಪಹರಿಸಲಾಗಿದೆ. ದೀನ್

ದಯಾಳರು ಮುಂದುವರಿದು ಹೇಳುತ್ತಾರೆ:

"...............ಒಬ್ಬ ಸ್ವತಂತ್ರ ನೇಕಾರನನ್ನು ಮುಗಿಸಿ, ಅವನನ್ನೇ ವಿಶಾಲವಾದ ಕಾರ್ಖಾನೆಯ ಕಾರ್ಮಿಕನನ್ನಾಗಿ ಮಾಡಲಾಯಿತು. ಬಜಾಜ್‌ಗೆ ಬದಲಾಗಿ ಒಂದು ವಿಭಾಗೀಯ ಅಂಗಡಿಯನ್ನು ತೆರೆಯಲಾಯಿತು. ದರ್ಜಿಯ ಬದಲಾಗಿ ಸಿದ್ಧಉಡುಪುಗಳನ್ನು ತಂದಿರಿಸಲಾಯಿತು. ಮನುಷ್ಯ ಎಂದರೆ ಅವನೊಬ್ಬ ಪ್ರಾಣಿ; ಎಂಟು ಘಂಟೆ ಯಂತ್ರದಂತೆ ಕೂಲಿಗಾಗಿ ದುಡಿಯುವುದು ಮತ್ತು ಹದಿನಾರು ಘಂಟೆ ತಿನ್ನುವುದು. ಕಾರ್ಯ ಮತ್ತು ಜೀವನ ಇವುಗಳ ನಡುವೆ ಒಂಡು ಗೋಡೆಯೇ ಎದ್ದು ನಿಂತುಕೊಂಡುಬಿಟ್ಟಿದೆ. ಪಶ್ಚಿಮದ ಅನೇಕ ದೇಶದಲ್ಲಿ, ಐದು ದಿನ ಕೆಲಸದ ಮತ್ತು ಎರಡು ದಿನ ರಜೆಯ ವ್ಯವಸ್ಥೆ ಇದೆ ಎಂದು ಹೇಳಲಾಗಿದೆ. ಆ ಎರಡು ದಿನಗಳಲ್ಲಿ ಬರೀ ಮೋಜು ಮಾಡುವುದು, ತಿನ್ನುವುದು, ಕುಡಿಯುವುದು; ಕೆಲಸದ ಮಾತೇ ಇಲ್ಲ. ಅಂದರೆ ಐದು ದಿನ ಹಣ ಸಂಪಾದನೆಗಾಗಿ ದುಡಿಯುತ್ತಾರೆ ಮತ್ತು ಎರಡು ದಿನ ಬದುಕಿರುತ್ತಾರೆ. ಆದ್ದರಿಂದ ಕೆಲಸ ಮತ್ತು ವಾಸ್ತವಿಕ ಜೀವನದ ನಡುವೆ ಯಾವುದೇ ತರಹದ ಕಂದಕ ಇರದ ರೀತಿಯಲ್ಲಿ ನಾವು ಮನುಷ್ಯನ ಗಳಿಕೆಯ ಸಾಧನಗಳನ್ನು ನಿರ್ಧರಿಸಬೇಕಾಗಿದೆ. ರಕ್ತ– ಮಾಂಸವಿರುವ ಮನುಷ್ಯನಿಗೆ ಹೃದಯ, ಬುದ್ಧಿ ಮತ್ತು ಶರೀರ – ಈ ಮೂರರ ಹಸಿವು ಇರುತ್ತದೆ. ಈ ಮೂರು ಅಂಶಗಳ ಬಗ್ಗೆ ವಿಚಾರ ಮಾಡಬೇಕಾಗಿದೆ. ಇಲ್ಲದಿದ್ದರೆ ಕಾರ್ಯದ ಎಂಟು ಘಂಟೆಗಳ ಅಮಾನವೀಯ ಪ್ರಭಾವವನ್ನು ಕೊನೆಗಾಣಿಸುವುದಕ್ಕೆ ಉಳಿದ ಹದಿನಾರು ಘಂಟೆ ಕಳೆದುಹೋಗುತ್ತದೆ. ಅದು ಮುಗಿಯುತ್ತಲೇ, ಅವನು ಪುನಃ ಎಂಟು ಘಂಟೆಗಳ ದುಡಿಮೆಯ ಚಕ್ರದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ."

**ಸಮಾಜವಾದದ ನಿಷೇಧ**

ವ್ಯಕ್ತಿವಾದಕ್ಕೆ ಸಮಾನಾಂತರವಾಗಿಯೇ ಪಶ್ಚಿಮದಲ್ಲಿ ಸಮಾಜವಾದದ ವಿಚಾರಗಳೂ ಹುಟ್ಟಿಕೊಂಡವು. ಅಂತತೋಗತ್ವಾ ಎಲ್ಲವನ್ನೂ ಕಬಳಿಸುವ ತಾನಾಶಾಹಿಯ ಸಾಮ್ಯವಾದವೇ ಸಮಾಜವಾದದ ಪ್ರತಿನಿಧಿಯಾಗಿಬಿಟ್ಟಿತು. ಅದು ಜನತಂತ್ರಾತ್ಮಕವಲ್ಲದ ರಾಜ್ಯವಾದ ಮತ್ತು ವರ್ಗವಾದಗಳ ಜೊತೆಗೆ, ಬಂಡವಾಳಶಾಹಿಯಂತೆಯೇ ಔದ್ಯೋಗೀಕರಣ ಮತ್ತು ಕೇಂದ್ರೀಕರಣವನ್ನು ಸಮರ್ಥಿಸುತ್ತದೆ. ಉಪಾಧ್ಯಾಯರು ಸಮಾಜವಾದೀ ಪ್ರವೃತ್ತಿಯ ಪ್ರಶಂಸಕರಾಗಿದ್ದರು; ಆದರೆ ಅದರ ರಾಜ್ಯವಾದದ ಮತ್ತು ಕೇಂದ್ರೀಕರಣದ ವ್ಯಾವಹಾರಿಕ ವಿಧಾನಗಳಿಗೆ ಸರ್ವಥಾ ವಿರುದ್ಧವಾಗಿದ್ದರು.

ಸಮಾಜವಾದವು ವ್ಯಕ್ತಿವಾದದ ಅತಿರೇಕವನ್ನು ನಿಷೇಧಿಸುತ್ತದೆ. ಅದು ವ್ಯಕ್ತಿಯನ್ನು ಬಿಟ್ಟು ವ್ಯವಸ್ಥೆಯಲ್ಲಿ ಪರಿವರ್ತನೆ ಆಗಬೇಕೆಂದು ಬಯಸುತ್ತದೆ.



ವ್ಯಕ್ತಿವಾದವನ್ನು ಅವ್ಯವಸ್ಥೆಯ ಫಲವೆನ್ನುತ್ತಾರೆ. ಅದರ ಈ ವ್ಯವಸ್ಥಾವಾದವೂ ಅಂತಿಮವಾಗಿ 'ರಾಜ್ಯವಾದಿ'ಯನ್ನಾಗಿಸಿಬಿಡುತ್ತದೆ. ಉಪಾಧ್ಯಾಯರು ವ್ಯಕ್ತಿ ಮತ್ತು ವ್ಯವಸ್ಥೆಗಳ ನಡುವೆ ವಿವಾದಕ್ಕೆ ಎಡೆಮಾಡಿಕೊಡುವುದನ್ನು ತಪ್ಪು ಎಂದು ಭಾವಿಸುತ್ತಾರೆ. ಯಾವುದೇ ವ್ಯವಸ್ಥೆ ವ್ಯಕ್ತಿಯಿಂದ ಹೊರತಾಗಿ ಇರುವುದಿಲ್ಲ ಮತ್ತು ಯಾವೊಬ್ಬ ವ್ಯಕ್ತಿಯೂ ವ್ಯವಸ್ಥೆಯಿಂದ ಹೊರತಾಗಿರಲು ಸಾಧ್ಯವಿಲ್ಲ. ಹೀಗೆ ವ್ಯಕ್ತಿ ಮತ್ತು ವ್ಯವಸ್ಥೆ ಒಟ್ಟಾರೆ ಸಾಮಾಜಿಕ ವ್ಯವಸ್ಥೆಗೆ ಪೋಷಕರಾಗಿರುತ್ತಾರೆ. ಈ ಸಾಮಾಜಿಕ ವ್ಯವಸ್ಥೆ 'ಮನುಷ್ಯ'ನ ಬಗ್ಗೆ ಚಿಂತನೆ ಮಾಡುತ್ತದೆ.

"...........ಕೆಡುಕಿಗೆ ವಾಸ್ತವವಾಗಿ ಕಾರಣವಾಗುವುದು ಮನುಷ್ಯನೇ ಹೊರತು ವ್ಯವಸ್ಥೆಯಲ್ಲ. ಈ ಕೆಡುಕಿನ ವಿಚಾರದಲ್ಲಿ ಮನುಷ್ಯನೇ ಮೊದಲು ಬರುತ್ತಾನೆ. ಕೆಟ್ಟ ವ್ಯಕ್ತಿ ಒಳ್ಳೆಯ ವ್ಯವಸ್ಥೆಯಲ್ಲಿಯೂ ಒಳಗೆ ನುಗ್ಗಿ ಕೆಡುಕುಗಳನ್ನು ಹರಡುತ್ತಾನೆ. ಸಮಾಜದ ಪ್ರತಿಯೊಂದು ಪರಂಪರೆ ಮತ್ತು ವ್ಯವಸ್ಥೆ ಯಾರೋ ಒಬ್ಬ ಒಳ್ಳೆಯ ವ್ಯಕ್ತಿಯ ಮೂಲಕವೇ ಆರಂಭಗೊಂಡಿರುತ್ತದೆ; ಆದರೆ ಆ ಒಳ್ಳೆಯ ಪರಂಪರೆಯಲ್ಲಿ ಯಾವಾಗ ಕೆಟ್ಟ ವ್ಯಕ್ತಿ ಬಂದು ಕುಳಿತುಕೊಳ್ಳುತ್ತಾನೋ ಆಗ ಅಲ್ಲಿ ಕೆಡುಕುಗಳು ಬಂದು ಸೇರಿಕೊಂಡು ಬಿಡುತ್ತವೆ. .........ಇತರ ಯಾವನೇ ವ್ಯಕ್ತಿ ತನ್ನ ಸ್ವಂತ ಕ್ಷೇತ್ರದಲ್ಲಿ ಇದ್ದುಕೊಂಡು ಕೆಟ್ಟ ಕೆಲಸ ಮಾಡುತ್ತಾನೆ ಎಂದಿಟ್ಟುಕೊಳ್ಳೋಣ. ಅವನ ಸ್ಥಾನದಲ್ಲಿ ರಾಜ್ಯದ ವ್ಯಕ್ತಿಯನ್ನು ತಂದು ಕೂಡಿಸಿದರೆ ಅವನು ಕೆಟ್ಟ ಕೆಲಸ ಮಾಡುವುದಿಲ್ಲ ಎಂಬ ಭರವಸೆ ಏನಾದರೂ ಇದೆಯೇ? ಆದ್ದರಿಂದ ವ್ಯಕ್ತಿಯ ಕರ್ತವ್ಯ ಪ್ರಜ್ಞೆಯನ್ನು ಜಾಗೃತಗೊಳಿಸುವ ಬಗ್ಗೆ ನಮ್ಮ ಗಮನವನ್ನು ಕೇಂದ್ರೀಕರಿಸಬೇಕಾಗುತ್ತದೆ."

ಕೇಂದ್ರೀಕರಣದ ಪ್ರವೃತ್ತಿ ಮನುಷ್ಯನ ಕರ್ತವ್ಯ ಭಾವನೆಯನ್ನು ಇಲ್ಲವಾಗಿಸಿ ಬಿಡುತ್ತದೆ. ಕೂಲಿಯ ಭಾವನೆ 'ವಿವಶತೆಯ' ಭಾವನೆಯೇ ಆಗಿರುತ್ತದೆ. ಇದರಲ್ಲಿ ಕೆಲಸ ಮಾಡುವವನ ಬಗೆಗಿನ ಗೌರವವಾಗಲೀ, ಕರ್ತವ್ಯ ನಿರ್ವಹಣೆಯ ಸಂತೋಷವಾಗಲೀ ಇರುವುದಿಲ್ಲ. ಸಮಾಜವಾದದಲ್ಲಿ ಕೇಂದ್ರೀಕರಣವಾದೀ ಬಂಡವಾಳಶಾಹಿಯ ಎಲ್ಲ ದೋಷಗಳೂ ಇರುತ್ತವೆ ಎಂದು ಉಪಾಧ್ಯಾಯರು ಭಾವಿಸುತ್ತಾರೆ. ಇದರಲ್ಲಿ ರಾಜ್ಯವಾದಿ ನೌಕರಶಾಹಿಯಲ್ಲದೆ, ಬೇರೊಂದು ದೋಷವೂ ಸೇರಿಕೊಳ್ಳುತ್ತದೆ. ಆದ್ದರಿಂದ ಅವರು ಬಂಡವಾಳಶಾಹಿ ಮತ್ತು ಸಮಾಜವಾದ ಇವೆರಡರ ಒಕ್ಕೂಟದ ಬಗ್ಗೆ ಚಿಂತನೆ ಮಾಡುತ್ತಾರೆ:

"ಪ್ರಚಲಿತ ಸಾಮ್ಯವಾದ ಮತ್ತು ಬಂಡವಾಳಶಾಹಿ ವ್ಯವಸ್ಥೆ– ಈ ಎರಡರಲ್ಲೂ ಒಡೆತನದ ಸ್ವರೂಪದ ವ್ಯತ್ಯಾಸ ಬಿಟ್ಟು ಮತ್ತಿನ್ನೇನೂ ವ್ಯತ್ಯಾಸವಿರುವುದಿಲ್ಲ. ಆದ್ದರಿಂದ ಎರಡರಲ್ಲೂ ವ್ಯಕ್ತಿಯ ವಿಕಾಸಕ್ಕೆ ಯಾವುದೇ ತರಹದ ಸೌಲಭ್ಯಗಳು ಇಲ್ಲ". ಈ ಎರಡು ತಮ್ಮ ಕೇಂದ್ರೀಯ ಅಧಿಕಾರದ ರಕ್ಷಣೆಗಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ರಾಜ್ಯದ ಮೇಲೆ ತಮ್ಮ ಅಧಿಕಾರವನ್ನು ಚಲಾಯಿಸುತ್ತವೆ. ಉಪಾಧ್ಯಾಯರು ಇದರ

ಬಗ್ಗೆ ಹೀಗೆ ತಮ್ಮ ವಿವೇಚನೆಯನ್ನು ಮುಂದಿರಿಸುತ್ತಾರೆ:

"................ಬಂಡವಾಳಶಾಹಿಯ ಅರ್ಥವ್ಯವಸ್ಥೆ ಮೊದಲು ಆರ್ಥಿಕ ಕ್ಷೇತ್ರದ ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸಿ, ಅನಂತರ ಪರೋಕ್ಷ ರೂಪದಲ್ಲಿ ರಾಜ್ಯದ ಮೇಲೆ ತನ್ನ ಅಧಿಕಾರವನ್ನು ಚಲಾಯಿಸುತ್ತದೆ; ಸಮಾಜವಾದ ರಾಜ್ಯವನ್ನು ಸಂಪೂರ್ಣ ಉತ್ಪಾದನೆಗಳ ಮಾಲೀಕನನ್ನಾಗಿಸಿಬಿಡುತ್ತದೆ. ಎರಡೂ ವ್ಯವಸ್ಥೆಗಳು ವ್ಯಕ್ತಿಯ ಪ್ರಜಾತಾಂತ್ರಿಕ ಅಧಿಕಾರ ಮತ್ತು ಅದರ ಆರೋಗ್ಯಕರ ವಿಕಾಸಕ್ಕೆ ಪ್ರತಿಕೂಲವಾಗಿರುತ್ತವೆ".

ಉಪಾಧ್ಯಾಯರು ಕೇಂದ್ರೀಕರಣದ ಪ್ರವೃತ್ತಿಯೇ ಅಮಾನವೀಯವಾದುದು ಎಂದು ಭಾವಿಸುತ್ತಾರೆ. ಮನುಷ್ಯನ ಸಾಂಸ್ಕೃತಿಕ ಚೇತನ ವ್ಯಕ್ತಿ–ವ್ಯಕ್ತಿಯ, ವ್ಯಕ್ತಿ ಮತ್ತು ಸಮಾಜದ, ಪ್ರಕೃತಿ ಮತ್ತು ವ್ಯಕ್ತಿಯ ಹಾಗೂ ಕರ್ತೃ ಮತ್ತು ಕೃತಿಯ ನಡುವೆ ಪರಸ್ಪರ 'ಆತ್ಮೀಯತೆಯ' ಸಂಬಂಧವನ್ನು ಕೊನೆಗಾಣಿಸಿ, ಸಂಬಂಧಗಳ ನಡುವೆ ಯಾಂತ್ರಿಕತೆಯನ್ನು ಹುಟ್ಟಿಸಿಬಿಡುತ್ತದೆ. "ಕೇಂದ್ರೀಯ ವ್ಯವಸ್ಥೆಗಳು ಮಾನವನನ್ನು ಮಾನವ ಎಂದು ಪರಿಭಾವಿಸದೆ, ಮಾನವತೆಯ ಒಂದು 'ಸ್ವರೂಪ'ದ ಜೊತೆಗೆ ವ್ಯವಹರಿಸುತ್ತವೆ. ಇದರಲ್ಲಿ ಮಾನವನ ವಿವಿಧತೆಗಳಿಗೆ ಮತ್ತು ವೈಶಿಷ್ಟ್ಯಗಳಿಗೆ ಯಾವುದೇ ಸ್ಥಾನ ಇರುವುದಿಲ್ಲ. ಇದರ ಪರಿಣಾಮವಾಗಿ ಅವು ಅವನನ್ನು ಎತ್ತರಕ್ಕೆ ಬೆಳೆಸುವುದಕ್ಕೆ ಬದಲಾಗಿ ಒಂದು ಯಂತ್ರದ ಭಾಗವೆಂಬಂತೆ ಮಾತ್ರವೇ ಮಾಡಿಬಿಡುತ್ತವೆ. ತನ್ನದೇ ಆದ ಅವನ ವ್ಯಕ್ತಿತ್ವ ಸತ್ತು ಹೋಗುತ್ತದೆ. ಆದ್ದರಿಂದ ವಿಕೇಂದ್ರೀಕರಣವೇ ನಮ್ಮ ಸಂಸ್ಕೃತಿಗೆ ಹೊಂದುವಂಥದಾಗಿದೆ". ಹೀಗಾಗಿ, ಕೇಂದ್ರೀಕೃತ ಔದ್ಯೋಗೀಕರಣದ ವಿಷಯದಲ್ಲಿ ಶ್ರದ್ಧೆಯನ್ನು ಇರಿಸಿಕೊಂಡಿರುವ ಬಂಡವಾಳಶಾಹಿ ಮತ್ತು ಸಮಾಜವಾದಿ ವ್ಯವಸ್ಥೆಗಳನ್ನು ಉಪಾಧ್ಯಾಯರು ಮಾನವ ವಿರೋಧಿ ಎಂದು ಪರಿಗಣಿಸುತ್ತಾರೆ. ಆದ್ದರಿಂದ ಅವರು 'ಸಮಗ್ರ ಮಾನವವಾದ'ದ ಆಧಾರದ ಮೇಲೆ ಆರ್ಥಿಕ ಪ್ರಜಾಸತ್ತೆಯ ಮತ್ತು ವಿಕೇಂದ್ರಿತ ಅರ್ಥನೀತಿಯ ನಿರೂಪಣೆ ಮಾಡುತ್ತಾರೆ. ಅವರ ಅಭಿಪ್ರಾಯದಲ್ಲಿ ಬಂಡವಾಳಶಾಹಿ ಮತ್ತು ಸಮಾಜವಾದ, ಈ ಎರಡೂ 'ಪ್ರಜಾತಂತ್ರ'ವನ್ನು ಮತ್ತು 'ಸಂಸ್ಕೃತಿ'ಯನ್ನು ವ್ಯಾವಹಾರಿಕವಾಗಿ ನಿಷೇಧಿಸುತ್ತಾರೆ.

**ಆರ್ಥಿಕ ಪ್ರಜಾತಂತ್ರ**

ದೀನ್‌ದಯಾಳ್ ಉಪಾಧ್ಯಾಯರು ಪ್ರಜಾತಂತ್ರವನ್ನು ರಾಜಕೀಯ ಜೀವನದ ಒಂದು ಆಯಾಮ ಮಾತ್ರವೆಂದು ಭಾವಿಸಿರಲಿಲ್ಲ. ಪ್ರತಿಯೊಬ್ಬನಿಗೂ 'ಮತದಾನ'ದ ಹಕ್ಕು ಎಂಬುದು ರಾಜಕೀಯ ಪ್ರಜಾತಂತ್ರದ ಆಧಾರಸ್ತಂಭವಾಗಿರುವಂತೆಯೇ, 'ಪ್ರತಿಯೊಬ್ಬನಿಗೂ ಕೆಲಸದ ಹಕ್ಕು' ಎಂಬ ತತ್ವದ ಬಗ್ಗೆ ವ್ಯಾಖ್ಯಾನ ಮಾಡುತ್ತ



ಅವರು ಹೀಗೆಂದು ಹೇಳುತ್ತಾರೆ: "ಕೆಲಸ ಎಂಬುದರ ಮೊದಲಿಗೆ ಜೀವಿಕೋಪಾರ್ಜನೆಯ ಸಂಗತಿಯಾಗಿರಬೇಕು; ಆ ಬಳಿಕ ವ್ಯಕ್ತಿಗೆ ಅದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿರಬೇಕು. ಕೆಲಸಕ್ಕೆ ಪ್ರತಿಯಾಗಿ ರಾಷ್ಟ್ರೀಯ ಆದಾಯದ ನ್ಯಾಯಸಮ್ಮತ ಭಾಗ ಅವನಿಗೆ ಸಿಗದಿದ್ದ ಪಕ್ಷದಲ್ಲಿ, ಅವನನ್ನು 'ನಿರುದ್ಯೋಗಿ' ಎಂದೇ ಪರಿಗಣಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಕನಿಷ್ಠ ವೇತನ, ನ್ಯಾಯೋಚಿತ ವಿತರಣೆ ಮತ್ತು ಒಂದಲ್ಲ ಒಂದು ಬಗೆಯ ಸಾಮಾಜಿಕ ಸುರಕ್ಷೆಯ ವ್ಯವಸ್ಥೆ ಅಗತ್ಯವಾಗಿಬಿಡುತ್ತದೆ".

ಉಪಾಧ್ಯಾಯರು ಮುಂದೆ ಹೇಳುತ್ತಾರೆ: "ನಮ್ಮ ದೃಷ್ಟಿಯಲ್ಲಿ ನಿರುದ್ಯೋಗಿ ಹೇಗೆ ಕೆಲಸಕ್ಕೆ ಬಾರದವನಾಗಿರುತ್ತಾನೆಯೋ ಹಾಗೆಯೇ ವ್ಯಕ್ತಿ ಕೆಲಸದಲ್ಲಿ ತೊಡಗಿದ್ದರೂ ತನ್ನ ಶಕ್ತಿಗೆ ಅನುಗುಣವಾಗಿ ಉತ್ಪಾದನೆ ಮಾಡಲಾಗದಿದ್ದಲ್ಲಿ ಅದೂ ಕೆಲಸ ಎನ್ನಿಸಿಕೊಳ್ಳುವುದಿಲ್ಲ. 'ಅಂಡರ್ ಎಮ್‌ಪ್ಲಾಯ್‌ಮೆಂಟ್' (ಅಲ್ಪೋದ್ಯೋಗ) ಕೂಡ ಒಂದು ರೀತಿಯಲ್ಲಿ ನಿರುದ್ಯೋಗವೇ".

ವ್ಯಕ್ತಿಯ ಉತ್ಪಾದನ– ಸ್ವಾತಂತ್ರ್ಯ ಅಥವಾ ಅವನ ಸೃಜನಶೀಲತೆಗೆ ಆಘಾತವನ್ನುಂಟುಮಾಡುವಂಥ ಅರ್ಥವ್ಯವಸ್ಥೆಯನ್ನು ಉಪಾಧ್ಯಾಯರು ಪ್ರಜಾತಾಂತ್ರಿಕವಲ್ಲದ್ದು ಎನ್ನುತ್ತಾರೆ. ತನ್ನ ಉತ್ಪಾದನೆಗೆ ತಾನೇ ಒಡೆಯನಾಗಿಲ್ಲದಿರುವಂಥ ಕಾರ್ಮಿಕ ಅಥವಾ ಉದ್ಯೋಗಿ ತನ್ನ ಸ್ವಾತಂತ್ರ್ಯವನ್ನೇ ಮಾರಿಕೊಳ್ಳುತ್ತಾನೆ. ಆರ್ಥಿಕ ಸ್ವಾತಂತ್ರ್ಯ ಮತ್ತು ರಾಜನೈತಿಕ ಸ್ವಾತಂತ್ರ್ಯ ಪರಸ್ಪರ ಅನ್ಯೋನ್ಯಾಶ್ರಿತವಾಗಿವೆ. ಆರ್ಥಿಕ ಪ್ರಜಾತಂತ್ರವಿಲ್ಲದೆ ರಾಜಕೀಯ ಪ್ರಜಾತಂತ್ರ ಕಾರ್ಯಶೀಲವಾಗಲಾರದು. ಅವನು ಹಣದ ದೃಷ್ಟಿಯಿಂದ ಸ್ವತಂತ್ರನಾಗಿರುವಂಥವನೇ ರಾಜಕೀಯ ದೃಷ್ಟಿಯಿಂದ ಸ್ವತಂತ್ರವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು. 'ಅರ್ಥಸ್ಯ ಪುರುಷೋದಾಸಃ' (ವ್ಯಕ್ತಿ ಹಣಕ್ಕೆ ದಾಸನಾಗಿರುತ್ತಾನೆ)".

ಮನುಷ್ಯನ ಉತ್ಪಾದನ–ಸ್ವಾತಂತ್ರದ ಮೇಲೆ ಎಲ್ಲಕ್ಕಿಂತ ದೊಡ್ಡ ಹಲ್ಲೆ ನಡೆದಿರುವುದು ಬಂಡವಾಳಶಾಹಿ ಔದ್ಯೋಗೀಕರಣದಿಂದ. ಹೀಗಾಗಿ, ಔದ್ಯೋಗೀಕರಣ ಸ್ವತಂತ್ರ, ಸಣ್ಣ ಹಾಗೂ ಕುಟೀರ ಉದ್ಯೋಗ(ಗುಡಿ ಕೈಗಾರಿಕೆ)ಗಳನ್ನು ಇಲ್ಲವಾಗಿಸದಂಥ ರೀತಿಯಲ್ಲಿ ಔದ್ಯೋಗಿಕರಣವನ್ನು ನಿಯಂತ್ರಿಸಬೇಕೆಂಬುದು ಉಪಾಧ್ಯಾಯರ ಇಚ್ಛೆಯಾಗಿದೆ. "ನಾವಿಂದು ಸರ್ವಾಂಗೀಣ ವಿಕಾಸದ ಬಗ್ಗೆ ಚರ್ಚಿಸುವಾಗ ಸಂರಕ್ಷಣೆಯ ಅಗತ್ಯದ ವಿಚಾರವನ್ನು ಒಪ್ಪಿಯೇ ಮುಂದೆ ನಡೆಯುತ್ತೇವೆ. ವಿದೇಶಿ ಉದ್ಯೋಗಗಳ ಪ್ರತಿ ಸ್ಪರ್ಧೆಯಿಂದ ದೇಶದ ಉದ್ಯೋಗಗಳಿಗೂ, ಬೃಹತ್ ಉದ್ಯಮಗಳಿಂದ ಸಣ್ಣ ಉದ್ಯಮಗಳಿಗೂ ಈ ಸಂರಕ್ಷಣೆ ದೊರೆಯಬೇಕಾಗಿದೆ.

ಪಾಶ್ಚಾತ್ಯ ಪ್ರಪಂಚದ ಔದ್ಯೋಗೀಕರಣದ ಅನುಕರಣೆ ಮಾಡಿದುದರಿಂದ

ಅದು ಭಾರತದ ಪಾರಂಪರಿಕ ಉತ್ಪಾದನೆಯನ್ನು ಹಿಂದೆ ತಳ್ಳಿಬಿಟ್ಟಿದೆ ಹಾಗೂ ದಳ್ಳಾಳಿಗಳನ್ನೇ ಮುಂದೆ ತಂದಿದೆ.

............ನಾವು ಪಶ್ಚಿಮದ ತಂತ್ರಜ್ಞಾನದ ಪ್ರಕ್ರಿಯೆಗಳನ್ನು ಕಣ್ಣು ಮುಚ್ಚಿ ಅನುಕರಣೆ ಮಾಡಿದ್ದೇವೆ. ನಮ್ಮ ಉದ್ಯೋಗ ಸಹಜವಾದ ರೀತಿಯಲ್ಲಿ ವಿಕಾಸಗೊಂಡಿಲ್ಲ. ಅವು ನಮ್ಮ ಆರ್ಥಿಕ ವ್ಯವಸ್ಥೆಯ ಅಭಿನ್ನವಾದ ಮತ್ತು ಅನ್ಯೋನ್ಯಾಶ್ರಿತವಾದ ಅಂಗವಾಗಿ ಪರಿಣಮಿಸಿಲ್ಲ; ಅವನ್ನು ನಮ್ಮ ಮೇಲೆ ಹೊರಿಸಲಾಗಿದೆ. ............ (ಇವುಗಳ ವಿಕಾಸ) ವಿದೇಶಿಯರನ್ನು ಅನುಕರಿಸಿ ಅವರೊಂದಿಗೆ ಕೈಜೋಡಿಸಿರುವಂಥ ಕೆಲವು ಮಂದಿ ದೇಶೀ ವ್ಯಾಪಾರಿಗಳಿಂದ ಆಗಿದೆ. ಭಾರತದ ಉದ್ಯಮಿಗಳಲ್ಲಿ ಎಲ್ಲರೂ ವ್ಯಾಪಾರಿಗಳ ಕುಟುಂಬದಿಂದ ಮತ್ತು ಮಧ್ಯವರ್ತಿ ವರ್ಗಗಳಿಂದ ಬಂದಿರುವುದಕ್ಕೆ ಇದು ಕಾರಣ. ಉದ್ಯೋಗಗಳಲ್ಲಿ ಮತ್ತು ಅನುವಂಶಿಕ ಕಾರ್ಯಗಳಲ್ಲಿ ತೊಡಗಿರುವಂಥ ಕರಕುಶಲ ಕೆಲಸಗಾರರ ವಿಕಾಸವೇ ಆಗಿರುವುದಿಲ್ಲ".

ದೇಶದ ಸಾಮಾನ್ಯ ಗುಡಿಗಾರರು ಮತ್ತು ಕೆಲಸಗಾರರನ್ನು ಉಪೇಕ್ಷೆ ಮಾಡುವಂಥ ಔದ್ಯೋಗೀಕರಣ ಅಪ್ರಜಾತಾಂತ್ರಿಕವಾಗಿರುತ್ತದೆ. ಬಂಡವಾಳಶಾಹಿ ಮತ್ತು ಸಮಾಜವಾದ ಕ್ಷೇತ್ರಗಳಲ್ಲಿನ ಖಾಸಗಿ ಹಾಗೂ ಸಾರ್ವಜನಿಕ ವಲಯಗಳ ನಡುವಣ ವಿವಾದವನ್ನು ಉಪಾಧ್ಯಾಯರು ತಪ್ಪು ಎಂದೇ ಭಾವಿಸುತ್ತಾರೆ. ಇವೆರಡೂ ಸೇರಿ ಸ್ವಯಂಸೇವೀ ಕ್ಷೇತ್ರದ ಕತ್ತು ಹಿಸುಕಿಬಿಟ್ಟವೆ. ಆರ್ಥಿಕ ಪ್ರಜಾತಂತ್ರಕ್ಕೆ ಸ್ವಯಂ ಸೇವಾಕ್ಷೇತ್ರದ ವಿಕಾಸ ಅತ್ಯಾವಶ್ಯಕವಾಗುತ್ತದೆ:

"................ರಾಜಕೀಯ ಶಕ್ತಿಯನ್ನು ಪ್ರಜೆಗಳ ನಡುವೆ ವಿಕೇಂದ್ರೀಕರಣ ಮಾಡಿ, ಯಾವ ರೀತಿ ಆಡಳಿತ ವ್ಯವಸ್ಥೆಯನ್ನು ರೂಪಿಸಲಾಗುತ್ತದೆಯೋ, ಅದೇ ರೀತಿ ಆರ್ಥಿಕ ಶಕ್ತಿಯನ್ನು ಪ್ರಜೆಗಳ ನಡುವೆ ವಿಕೇಂದ್ರೀಕರಣ ಮಾಡಿ, ಅರ್ಥವ್ಯವಸ್ಥೆಯನ್ನು ರೂಪಿಸುವ ಮತ್ತು ಕಾರ್ಯಶೀಲವಾಗಿರುವ ಕೆಲಸ ಆಗಬೇಕಾಗಿದೆ. ರಾಜಕೀಯ ಪ್ರಜಾತಂತ್ರದಲ್ಲಿ ವ್ಯಕ್ತಿಗೆ ತನ್ನ ರಚನಾತ್ಮಕ ಸಾಮರ್ಥ್ಯವನ್ನು ವ್ಯಕ್ತಪಡಿಸಲು ಪೂರ್ಣ ಅವಕಾಶ ದೊರೆಯುತ್ತದೆ. ಅದೇ ತರಹ ಆರ್ಥಿಕ ಪ್ರಜಾತಂತ್ರದಲ್ಲೂ ವ್ಯಕ್ತಿಯ ಯೋಗ್ಯತೆಯನ್ನು ತುಳಿದಿಟ್ಟುಬಿಡುವುದಲ್ಲ, ಅದು ವ್ಯಕ್ತವಾಗಲು ಸಂಪೂರ್ಣ ಅವಕಾಶ ಪ್ರತಿಯೊಂದು ಹಂತದಲ್ಲೂ ದೊರೆಯುವಂತಾಗಬೇಕು.

...............ರಾಜಕೀಯದಲ್ಲಿ ವ್ಯಕ್ತಿಯ ರಚನಾತ್ಮಕ ಸಾಮರ್ಥ್ಯವನ್ನು ಯಾವ ರೀತಿಯಲ್ಲಿ ಅಧಿಕಾರಶಾಹಿ ಹಾಳುಮಾಡಿಬಿಡುತ್ತದೋ, ಅದೇ ರೀತಿ ಅರ್ಥನೀತಿಯಲ್ಲಿ ವ್ಯಕ್ತಿಯ ರಚನಾತ್ಮಕ ಸಾಮರ್ಥ್ಯವನ್ನು ಬೃಹತ್ ಪ್ರಮಾಣದಲ್ಲಿ ಮಾಡಲಾದ ಔದ್ಯೋಗೀಕರಣ ಹಾಳುಮಾಡಿಬಿಡುತ್ತದೆ. ............ಆದ್ದರಿಂದ



ಅಧಿಕಾರಶಾಹಿಯಂತೆಯೇ ಇಂತಹ ಔದ್ಯೋಗೀಕರಣವೂ ತ್ಯಾಜ್ಯವಾದುದು".

ಯಂತ್ರಚಾಲಿತ ಔದ್ಯೋಗೀಕರಣದ ಇತಿಮಿತಿಗಳನ್ನು ಸ್ಪಷ್ಟಪಡಿಸುತ್ತ ಉಪಾಧ್ಯಾಯರು ಒಂದು ಸಮೀಕರಣವನ್ನು ಮುಂದಿರಿಸುತ್ತಾರೆ: "ಪ್ರತಿಯೊಬ್ಬನಿಗೂ ಕೆಲಸವನ್ನು ಒದಗಿಸಬೇಕೆಂಬ ಸಿದ್ಧಾಂತವನ್ನು ಒಪ್ಪಿಕೊಂಡುಬಿಟ್ಟರೆ, ಆಗ ಸಮಾನ ವಿತರಣೆಯ ದಿಕ್ಕು ಸುನಿಶ್ಚಿತವಾಗಿಬಿಡುತ್ತದೆ. ಮತ್ತು ನಾವು ವಿಕೇಂದ್ರಿಕರಣದ ಕಡೆ ಮುನ್ನಡೆಯುತ್ತೇವೆ. ಔದ್ಯೋಗೀಕರಣವನ್ನೇ ಗುರಿಯಾಗಿಸಿಕೊಂಡು ಮುನ್ನಡೆಯುವುದು ತಪ್ಪು. ಈ ಸಿದ್ಧಾಂತವನ್ನು ಗಣಿತದ ಸೂತ್ರದ ರೂಪದಲ್ಲಿ ರೀತಿ ತೋರಿಸಬಹುದು:

'ಜ x ಕ x ಯ = ಇ'.

ಇಲ್ಲಿ 'ಜ' ಎಂಬುದು ಜನತೆಯ ಪ್ರತೀಕ; 'ಕ' ಎಂಬುದು ಕರ್ಮದ ಸ್ಥಿತಿಯ ಅಥವಾ ವ್ಯವಸ್ಥೆಯ ಪ್ರತೀಕ; 'ಯ' ಎಂಬುದು ಯಂತ್ರದ ಹಾಗೂ 'ಇ' ಎಂಬುದು ಸಮಾಜದ ಪ್ರಭಾವಶೀಲ ಇಚ್ಛೆಯ ಅಥವಾ ಇಚ್ಛಿತ ಸಂಕಲ್ಪದ ಪ್ರತೀಕ. 'ಇ' ಮತ್ತು 'ಜ' ಸುನಿಶ್ಚಿತವಾಗಿರುತ್ತವೆ. 'ಇ' ಮತ್ತು 'ಜ'ಗಳ ಅನುಪಾತದಲ್ಲಿ 'ಕ' ಮತ್ತು 'ಯ'ಗಳನ್ನು ನಿರ್ಧರಿಸಬೇಕಾಗಿದೆ. ಆದರೆ 'ಯ' ಔದ್ಯೋಗೀಕರಣದ ಗುರಿಯಾಗಿಬಿಟ್ಟಾಗ ಎಲ್ಲವನ್ನೂ ನಿಯಂತ್ರಿಸಿಬಿಡುತ್ತದೆ. 'ಯ'ದ ಅನುಪಾತಕ್ಕನುಗುಣವಾಗಿ ಜನರನ್ನು ಕೆಲಸದಿಂದ ತೆಗೆದುಹಾಕಲಾಗುತ್ತದೆ. 'ಯ'ದ ಅನುಪಾತದ ಮೇರೆಗೆ 'ಇ' ಕೂಡ ಯಂತ್ರದ ಅತಿ ಉತ್ಪಾದನೆಯನ್ನು ಅನುಸರಿಸಬೇಕಾಗುತ್ತದೆ. ಇದು ಸರ್ವಥಾ ಅವಾಂಛನೀಯವಾದುದು. ಜನರನ್ನು ತೆಗೆದುಹಾಕುವ ಅರ್ಥವ್ಯವಸ್ಥೆ ಅಪ್ರಜಾತಾಂತ್ರಿಕವಾದುದು. 'ಇ'ಚ್ಛೆಯನ್ನು ನಿಯಂತ್ರಿಸುವ ಅರ್ಥವ್ಯವಸ್ಥೆ ಪರಮಾಧಿಕಾರದ್ದು. ಹೀಗಾಗಿ, 'ಜ' ಮತ್ತು 'ಇ'ಯ ನಿಯಂತ್ರಣದಲ್ಲಿ 'ಕ' ಮತ್ತು 'ಯ'ದ ನಿಯೋಜನೆಯಾಗಬೇಕು. ಅದನ್ನೇ ಪ್ರಜಾತಂತ್ರದ ಹಾಗೂ ಮಾನವೀಯ ಅರ್ಥವ್ಯವಸ್ಥೆ ಎಂದು ಹೇಳಬಹುದಾಗಿರುತ್ತದೆ.

## ಬೃಹತ್ ಔದ್ಯಮೀಕರಣದ ಮೇಲಿನ ನಿಷೇಧ

ಬೃಹತ್ ಉದ್ಯಮಗಳ ಉತ್ಪಾದನೆಯ ಕೇಂದ್ರೀಕರಣದಿಂದಾಗಿ ಮತ್ತು ಬೇಡಿಕೆ ಹಾಗೂ ಪೂರೈಕೆ ಯಂತ್ರವಾದಕ್ಕೆ ಬಲಿಯಾಗಿಬಿಡುವುದರಿಂದ ದೊಡ್ಡ ಉದ್ಯೋಗಗಳು ಅಧಿಕಾರಶಾಹಿ ಸ್ವಭಾವದವವೂ, ಅಮಾನವೀಯವೂ ಆಗಿಬಿಡುತ್ತವೆ. ಉಪಾಧ್ಯಾಯರು ತಮ್ಮ ಬರೆವಣಿಗೆಯಲ್ಲಿ ಈ ವಿಷಯವಾಗಿ ತುಂಬ ವಿಸ್ತಾರವಾಗಿ ವಿವೇಚನೆ ಮಾಡಿದ್ದಾರೆ. ಅದನ್ನು ನಾವು ಹಲವು ಅಂಶಗಳಲ್ಲಿ ಈ ಪ್ರಕಾರವಾಗಿ ಮುಂದಿರಿಸಬಹುದು:

1) ಭಾರತೀಯ ಪರಂಪರೆಯ ಅರ್ಥವ್ಯವಸ್ಥೆಗೆ ಅಸಂಬಂಧವಾಗಿರುವುದರಿಂದಾಗಿ,

ಇವುಗಳನ್ನು ನಿವಾರಿಸಬೇಕು. ಇದರಿಂದ ಸಮಾಜದ ಸಮರಸತೆಗೆ ಭಂಗ ಉಂಟಾಗುತ್ತದೆ.

2) ಸ್ವತಂತ್ರ ಉತ್ಪಾದನೆ ಕಾರ್ಯಕ್ಕೆ ಇದು ಪೂರಕವಾಗಿರದೆ, ಅದಕ್ಕೆ ವಿರುದ್ಧವೇ ಆಗಿದೆ. ಆದ್ದರಿಂದ ಇದು ಅವಾಂಛನೀಯವಾದುದು.

3) 'ಪ್ರತಿಯೊಬ್ಬರಿಗೂ ಕೆಲಸ' ಎಂಬ ನಮ್ಮ ಗುರಿಗೆ ವಿರುದ್ಧವಾಗಿವೆ. ಬೃಹತ್ ಉದ್ಯಮಗಳು ನಿರುದ್ಯೋಗವನ್ನು ಹೆಚ್ಚಿಸುತ್ತವೆ.

4) ಇವು ಬಂಡವಾಳ ಪ್ರಧಾನವಾದವು. ಆದ್ದರಿಂದ ಇವು ಭಾರತದ ಸಾಮಾನ್ಯ ಉದ್ಯೋಗದ ಉತ್ಪಾದಕರ ಸಾಮರ್ಥ್ಯಕ್ಕೆ ಮೀರಿದುವಾಗಿವೆ.

5) ಇವುಗಳು ಹೆಚ್ಚಿನ ಪ್ರಮಾಣದಲ್ಲಿ ಆಮದನ್ನು ಅವಲಂಬಿಸಿಕೊಂಡಿರುತ್ತವೆ. ಇದರ ಪರಿಣಾಮವಾಗಿ ಇವು ನಮ್ಮ ಪಾವತಿ–ಸಮತೋಲನದ ಮೇಲೆ ಹೆಚ್ಚಿನ ಹೊರೆಯನ್ನು ಹಾಕುತ್ತವೆ.

6) ಇವು ದೇಶದಲ್ಲಿ ಲಭ್ಯವಿರುವ ವ್ಯವಸ್ಥೆಗೆ ಹಾಗೂ ಕಾರ್ಮಿಕರ ತರಬೇತಿಗೆ ಹೊಂದಿಕೊಂಡಿರುವಂಥವಲ್ಲ.

7) ಇವು ಕಾರ್ಮಿಕನನ್ನು ಕುಟುಂಬ, ಕುಲ, ಜಾತಿ ಮತ್ತು ಗ್ರಾಮ ಸಮಾಜದಿಂದ ಹೊರತಾದ ಒಂದು ಹೊಸದಾದ ಕೃತ್ರಿಮವಾದ ಹೊರೆಯಂತಿರುವ ಮಾನವ–ಮೌಲ್ಯ–ವಿರಹಿತವಾದ ವಾತಾವರಣದಲ್ಲಿ ನಿಲ್ಲಿಸಿಬಿಡುತ್ತವೆ. ಈ ವಾತಾವರಣದಲ್ಲಿ ಮಾನವ ಕಾರ್ಮಿಕನಾಗಿ ಮಾತ್ರ ಉಳಿದುಬಿಡುತ್ತಾನೆ. ಅವನ ಉಳಿದ ಎಲ್ಲಾ ಮೌಲ್ಯಗಳು ನಶಿಸಿಹೋಗುತ್ತವೆ. ಅವನು ತನ್ನ ವ್ಯಕ್ತಿತ್ವವನ್ನು ವಿಕಾಸಗೊಳಿಸಿಕೊಳ್ಳುವುದಕ್ಕೆ ಬದಲಾಗಿ ವಿಕೃತಿಗಳಿಗೆ ಬಲಿಯಾಗಿಬಿಡುತ್ತಾನೆ. ಭಾರತದ ಸಂಸ್ಕೃತಿಗೂ ಇದಕ್ಕೂ ಹೊಂದಾಣಿಕೆ ಆಗುವುದಿಲ್ಲ.

8) ಇದರಿಂದಾಗಿ ಬಹಳಷ್ಟು ಸಾಮಾಜಿಕ ಮೌಲ್ಯವನ್ನು ತೆರಬೇಕಾಗುತ್ತದೆ. ನಗರೀಕರಣದ ಪರಿಣಾಮವಾಗಿ ಆರೋಗ್ಯ, ವಸತಿ ಮುಂತಾದ ಭಾರಿ ಸಮಸ್ಯೆ ಉತ್ಪನ್ನಗೊಳ್ಳುತ್ತವೆ.

9) ಇವುಗಳ ಉತ್ಪಾದನೆಯ ಹಾಗೂ ವ್ಯವಸ್ಥೆಯ ಪ್ರಕ್ರಿಯೆ ತುಂಬ ಜಟಿಲವಾದುದು. ಅದು ಕೂಡಲೇ ಫಲ ನೀಡುವಂಥದೂ ಅಲ್ಲ. ಹೂಡಿರುವ ಬಂಡವಾಳದ ಗುಣಾತ್ಮಕ ಪ್ರಭಾವವೂ ಕಡಿಮೆಯಾಗಿರುತ್ತದೆ.

10) ಕೃಷಿಗೆ ಹತ್ತಿರ ಸಂಬಂಧ ಇಲ್ಲದೆ ಇರುವುದರಿಂದ, ಕೃಷಿ ಮತ್ತು ಉದ್ಯೋಗ – ಇವುಗಳ ಮಧ್ಯೆ ಶೋಷಕರಾಗಿ ಪರಿಣಮಿಸುವ ಹಾಗೂ ಜಟಿಲ ದಲ್ಲಾಳಿಗಳ ಗುಂಪುಗಳು ಹುಟ್ಟಿಕೊಳ್ಳುತ್ತವೆ.

11) ಉದ್ಯಮಗಳಲ್ಲಿನ ಕಾರ್ಮಿಕರ ಸಂಘಟನೆ ಮತ್ತು ನಿಯಮಗಳ ಇಂದಿನ



ಪರಿಸ್ಥಿತಿಯು ಭಾರತದಲ್ಲಿ ದುಡಿಮೆಯನ್ನು ಅತಿ ದುಬಾರಿಯಾಗಿಸಿದೆ ಮತ್ತು ಹೊಣೆಗಾರಿಕೆ ಇಲ್ಲದಂತೆ ಮಾಡಿಬಿಟ್ಟಿವೆ. ...................ನಿಧಾನವಾಗಿ ಸ್ಥಿತಿ ಹೀಗಾಗುತ್ತಿದೆ ಎಂದರೆ ಔದ್ಯೋಗಿಕ ಬಂಡವಾಳ ಮತ್ತು ಕಾರ್ಮಿಕ ಸಂಘಟನೆಗಳು ಒಟ್ಟಾಗಿ ಸೇರಿಕೊಂಡು ಬಳಕೆದಾರನ ಶೋಷಣೆ ಮಾಡಬಹುದಾಗಿದೆ.

12) ದುಡಿಮೆ ಪ್ರಧಾನವಾಗಿರುವ ನಮ್ಮ ಕೃಷಿ ಕ್ಷೇತ್ರದಿಂದ ಕೆಲಸಗಾರರನ್ನು ಹೊರಗೆಳೆದು ನಗರಗಳಿಗೆ ಕರೆದು ತಂದಿದ್ದರಿಂದ ಕೃಷಿಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತಿದೆ. ಸಂಖ್ಯೆ ಮತ್ತು ಗುಣಮಟ್ಟ ಎರಡರಿಂದಲೂ ಗ್ರಾಮಗಳು ಹಿಂದುಳಿಯುತ್ತವೆ.

13) ಯಾವ ಪರಿಸ್ಥಿತಿಯಲ್ಲಿ ಪಶ್ಚಿಮ ದೇಶಗಳು ಬೃಹತ್ ಉದ್ಯಮಗಳನ್ನು ಸ್ಥಾಪಿಸಿದ್ದರೋ ಆ ಪರಿಸ್ಥಿತಿಗಳು ಇಂದು ಕಾಣದೊರೆಯುವುದಿಲ್ಲ. ಅವರಿಗೆ ವಸಾಹತುಗಳ ವಿಸ್ತೃತ ಪೇಟೆಗಳಿದ್ದವು. ಅಲ್ಲಿ ಅವರು ತಮ್ಮ ವಸ್ತುಗಳನ್ನು ಯಾವುದೇ ಪ್ರತಿಸ್ಪರ್ಧಿಯಿಲ್ಲದೆ ಮಾರಬಹುದಾಗಿತ್ತು ಮತ್ತು ಕಚ್ಚಾಮಾಲನ್ನು ಮತ್ತು ಆಹಾರ ಪದಾರ್ಥಗಳನ್ನು ಕಮ್ಮಿ ದರದಲ್ಲಿ ಕೊಳ್ಳಬಹುದಾಗಿತ್ತು. ಕೆಲಸಗಾರರನ್ನೇ ಕಡಿಮೆ ವೇತನದ ಮೇಲೆ ನೇಮಿಸಿಕೊಂಡು ಭಾರಿ ಪ್ರಮಾಣದಲ್ಲಿ ಬಂಡವಾಳವನ್ನು ಕೂಡಿಸಿಕೊಳ್ಳಬಹುದಾಗಿತ್ತು. ಇಷ್ಟಾಗಿಯೂ, ಈ ಬೆಳವಣಿಗೆಯನ್ನು ಸಾಧಿಸಲು ಅವರಿಗೆ ನೂರೈವತ್ತು ವರ್ಷಗಳೇ ಬೇಕಾದವು.

14) ಒಂದೇ ಸ್ಥಾನದಲ್ಲಿ ಕೇಂದ್ರೀಕೃತವಾಗುವ ಅಥವಾ ಸ್ಥಾನೀಕರಣಗೊಳ್ಳುವ ಪ್ರವೃತ್ತಿಯಿಂದಾಗಿ, ಸಾರ್ವದೇಶಿಕವಾದ ಮತ್ತು ವ್ಯಾಪಕವಾದ ವಿಕಾಸದ ಮಾರ್ಗದಲ್ಲಿ ಇದರಿಂದ ತೊಂದರೆಗಳು ಉಂಟಾಗುತ್ತವೆ. ಭಾರತದಲ್ಲಿ ಸಂಘಟಿತ ಉದ್ಯೋಗಗಳಲ್ಲಿ ಕೆಲಸ ಮಾಡುವಂಥ ಕಾರ್ಮಿಕರಲ್ಲಿ ಶೇ. 66 ರಷ್ಟು ಮಂದಿ ಬಂಗಾಳ, ಬೊಂಬಾಯಿ ಮತ್ತು ಮದ್ರಾಸಿನಲ್ಲಿ ಇದ್ದಾರೆ. ದೇಶದ ಕೆಲವು ಭಾಗಗಳಲ್ಲಿನ ವಿಕಾಸ ಉಳಿದ ಶೇ. 34 ರಷ್ಟು ಮಂದಿಯಲ್ಲಿ ಅಸಂತೋಷವನ್ನು ಉಂಟುಮಾಡಿ ನಾಡಿನ ಏಕತೆಗೆ ಹಾಗೂ ರಾಷ್ಟ್ರೀಯತೆಗೆ ಅಪಾಯವನ್ನುಂಟುಮಾಡಬಹುದು.

15) ಬೃಹತ್ ಉದ್ಯಮಗಳ ಸ್ಥಾಪನೆಯಿಂದಾಗಿ ದೇಶದ ರಾಜಕೀಯ ಕ್ಷೇತ್ರದ ಮೇಲೆಯೂ ಅಧಿಕಾರವನ್ನು ಸ್ಥಾಪಿಸಿಕೊಳ್ಳುವಂಥ ಪ್ರಭಾವಶಾಲೀ ಆರ್ಥಿಕ ವಲಯವೇ ಸಿದ್ಧವಾಗಿಬಿಡುತ್ತದೆ.

16) ಬೃಹತ್ ಉದ್ಯಮಗಳ ಸ್ಥಾಪನೆಯ ಪರಿಣಾಮವಾಗಿ ಭಯಂಕರವಾದ ವೈಷಮ್ಯ ಉಂಟಾಗಿ ಸಮಾಜದಲ್ಲಿ 'ವರ್ಗಸಂಘರ್ಷ'ದ ಸ್ಥಿತಿ ಏರ್ಪಡುತ್ತದೆ.

ಇವುಗಳೇ ಅಲ್ಲದೆ, ಬೃಹತ್ ಉದ್ಯಮಗಳ ಮತ್ತೊಂದು ಭಯಾನಕ ಮುಖವೂ ಇದೆ. ವಿದೇಶೀ ಬಂಡವಾಳ ಹೂಡಿಕೆಗಾರರೊಂದಿಗೆ ಸಹಜವಾಗಿಯೇ ಗೆಳೆತನ ಉಂಟಾಗುತ್ತದೆ. ರಾಷ್ಟ್ರೀಯ ಔದ್ಯಮಿಕ ಕ್ಷೇತ್ರದಲ್ಲಿ ವಿದೇಶೀ ಬಂಡವಾಳ ಹೂಡಿಕೆಯನ್ನು ಉಪಾಧ್ಯಾಯರು ಅತ್ಯಂತ ಅಮಂಗಳಕಾರಿಯೆಂದು ಭಾವಿಸುತ್ತಾರೆ. ಅವರ ಅಭಿಪ್ರಾಯ ಹೀಗಿದೆ:

"............ವಿದೇಶೀ ಬಂಡವಾಳದ ಆಧಾರದ ಮೇಲೆ ನಮ್ಮ ದೇಶವನ್ನು ಔದ್ಯಮೀಕರಿಸಬಾರದು. ವಿದೇಶೀ ಬಂಡವಾಳದ ರಾಜಕೀಯ ಪ್ರಭಾವದ ಜೊತೆಗೆ ಆರ್ಥಿಕ ಪ್ರಭಾವವೂ ಅಶುಭಕರವಾಗಿರುತ್ತದೆ. ವಿದೇಶೀ ಬಂಡವಾಳ ಹೂಡಿಕೆ ನಮ್ಮಲ್ಲಿ ಪಾಶ್ಚಾತ್ಯ ರೀತಿಯ ಶೋಷಣವಾದೀ ಬಂಡವಾಳಶಾಹಿಯನ್ನು ಸೃಷ್ಟಿಬಿಡುತ್ತದೆ........ ಬಂಡವಾಳಶಾಹಿಯ ಎಲ್ಲ ಬಗೆಯ ದೋಷಗಳು ನಮ್ಮ ಸಮಾಜವನ್ನು ಪ್ರವೇಶಿಸುತ್ತವೆ; ನಮ್ಮ ಸಾಮಾಜಿಕ ಸಂಸ್ಕೃತಿಯನ್ನು ತುಂಬ ವಿಷಮಯವಾಗಿಸುತ್ತವೆ.

ದೋಷಪೂರ್ಣ ತಳಪಾಯದ ಮೇಲೆ ನಿಂತಿರುವ ಬಂಡವಾಳವಾದ ಹಾಗೂ ಸಮಾಜವಾದಗಳನ್ನು ಸಿದ್ಧಾಂತವಾದದ ಹೆಸರಿನಲ್ಲಿ ನವ-ಸ್ವತಂತ್ರ ವಿಕಾಸೋನ್ಮುಖ ದೇಶಗಳಲ್ಲಿ ಅಳವಡಿಸಿಕೊಳ್ಳುವ ವಿಷಯದಲ್ಲಿ ಪೈಪೋಟಿಯೇ ಏರ್ಪಟ್ಟಂತಿರುವುದು ಭಾರಿ ತಪ್ಪು ಎಂದು ಉಪಾಧ್ಯಾಯರು ಭಾವಿಸುತ್ತಿದ್ದರು. ಅವರ ಅಭಿಪ್ರಾಯದಲ್ಲಿ ಪುಸ್ತಕೀಯ ಸಿದ್ಧಾಂತಗಳಿಗೆ ಬದಲಾಗಿ ಸಾಮಾಜಿಕ ವ್ಯಾವಹಾರಿಕತೆಯನ್ನು ಈ ಸಂದರ್ಭದಲ್ಲಿ ನಮ್ಮ ನೀತಿಗೆ ಆಧಾರವಾಗಿಸಿಕೊಳ್ಳಬೇಕು. ಆರ್ಥಿಕ ಹಾಗೂ ಉತ್ಪಾದಕ ವ್ಯವಸ್ಥೆಯ ಕೇಂದ್ರೀಕರಣ ಸಾಮಾಜಿಕ ಹಾಗೂ ವೈಯುಕ್ತಿಕ ಸ್ವಾತಂತ್ರಕ್ಕೆ ಶತ್ರುವಾಗಿದೆ. ಪಶ್ಚಿಮದ ಕುತ್ತಿಗೆ ಕಡಿಯುವ ಅನುಭವದಿಂದ ನಾವು ಸ್ವಲ್ಪವಾದರೂ ಪಾಠ ಕಲಿತು ಮುಂದೆ ಹೆಜ್ಜೆ ಇಡಬೇಕಾಗಿದೆ.

**ಅಪರ-ಮಾತ್ರಿಕ ಉದ್ಯೋಗ ನೀತಿ**

ಭಾರೀ ಮತ್ತು ಆರೋಪಿತ ಔದ್ಯಮೀಕರಣಕ್ಕೆ ವಿರುದ್ಧವಾಗಿದ್ದರೂ, ಉಪಾಧ್ಯಾಯರು ಆರೋಗ್ಯಪೂರ್ಣ ಔದ್ಯಮೀಕರಣದ ವಿಕಾಸವನ್ನು ಸಮರ್ಥಿಸುತ್ತಿದ್ದರು:

"ವಾಣಿಜ್ಯ, ಶಿಲ್ಪ ಮತ್ತು ಉದ್ಯೋಗಗಳು ಸ್ವಯಂಪೂರ್ಣತೆಗೆ ನೆರವಾಗುವಂತಿರಬೇಕು ಎಂದು ಪ್ರಾಚೀನ ಶಾಸ್ತ್ರಕಾರರು ಹೇಳಿದ್ದಾರೆ. ಯಾವುದೇ ಆವಶ್ಯಕ ವಸ್ತುಗಳಿಗೆ ಅವರು ಬೇರೊಬ್ಬರನ್ನು ಆಶ್ರಯಿಸಬೇಕಾಗಬಾರದು. ಹೌದು, ದೇಶದ 'ಉತ್ಪಾದಿಸಿದ' ವಸ್ತುಗಳನ್ನು ಆಚೆ ತೆಗೆಯುವುದಕ್ಕೆ ಅಂತರರಾಷ್ಟ್ರೀಯ ವ್ಯಾಪಾರದ ಉಪಯೋಗವನ್ನು ಪಡೆಯಬೇಕು."



'ಅಪರ-ಮಾತ್ರಿಕ' ವ್ಯವಸ್ಥೆಯಿಂದ-ಅಂದರೆ ಸ್ವಾವಲಂಬನೆಯಿಂದ- ಸ್ವಲ್ಪ ಹೆಚ್ಚು ಉತ್ಪಾದನೆ ಮಾಡಲು ಸಾಧ್ಯವಾಗುವಂತಹ ಔದ್ಯಮಿಕ ನೀತಿಯನ್ನು ನಾವು ಅಳವಡಿಸಿಕೊಳ್ಳಬೇಕು. ಔದ್ಯಮಿಕ ನೀತಿಯು ಅಪೇಕ್ಷಣೀಯತೆಗೆ ಒರೆಗಲ್ಲಾಗಿರಬೇಕು:

1) ಅದು ಎಲ್ಲರಿಗೂ ಕೆಲಸ ಕೊಡಲು ನೆರವಾಗುವಂತಿರಬೇಕು.
2) ಉತ್ಪಾದನೆಯ ಕೇಂದ್ರೀಕರಣಕ್ಕೆ ಬದಲಾಗಿ ವಿಕೇಂದ್ರೀಕರಣಕ್ಕೆ ನೆರವಾಗಬೇಕು.
3) ಪರಂಪರಾಗತವಾಗಿ ಉತ್ಪಾದಿಸಿಕೊಂಡು ಬರುತ್ತಿರುವ ಕುಶಲ ಕರ್ಮಿಗಳ ಮತ್ತು ಶಿಲ್ಪಿಗಳ ಸಲಕರಣೆಗಳ ಆಧಾರದ ಮೇಲೆಯೇ ಅದು ವಿಕಾಸಗೊಳ್ಳುವಂತಿರಬೇಕು.
4) ಅದು ಭಾರತದ ಕೃಷಿ ಮತ್ತು ಗ್ರಾಮವ್ಯವಸ್ಥೆಗಳಿಗೆ ಪೂರಕವಾಗಿರಬೇಕು.
5) ಅದು ಗ್ರಾಮಗಳಿಂದ ಪ್ರತಿಭಾ ಪಲಾಯನವಾಗದಂತೆ ನೋಡಿಕೊಳ್ಳಬೇಕು. ಗ್ರಾಮಗಳಲ್ಲಿನ ಉದ್ಯೋಗಗಳು ಸ್ವಾವಲಂಬಿ ಸ್ವರೂಪದವಾಗಿರಬೇಕು.
6) ಅದರ ಸ್ವರೂಪ ಮಾನವೀಯ ಮೌಲ್ಯಗಳ ಮೇಲೆ ಘಾತಕ ಪ್ರಭಾವ ಬೀರದಂತಿರಬೇಕು.
7) ಉದ್ಯೋಗ ನೀತಿ ಜನ-ಶ್ರಮ-ಪ್ರಧಾನವಾಗಿರಬೇಕು, ಯಂತ್ರ ಪ್ರಧಾನವಾಗಿರಬಾರದು. ಜನರಿಗೆ, ಶ್ರಮಕ್ಕೆ ಸಹಾಯಕವಾಗುವ ರೂಪದಲ್ಲಿ ಯಂತ್ರಗಳನ್ನು ಯಥಾಯೋಗ್ಯ ರೀತಿಯಲ್ಲಿ ವಿಕಾಸಗೊಳಿಸಬೇಕು.

ಲಾಭಕೋರತನದ ಮೇಲೆ ಮತ್ತು ಏಕಸ್ವಾಮ್ಯದ ಪ್ರವೃತ್ತಿಯ ಮೇಲೆ ನಿಯಂತ್ರಣವನ್ನು ಹೇರುವುದಕ್ಕಾಗಿ ಉಪಾಧ್ಯಾಯರು ಈ ಕೆಳಗಿನ ಕ್ರಮಗಳನ್ನು ಸೂಚಿಸುತ್ತಾರೆ:

1) ನಿಗಮ ವ್ಯವಸ್ಥೆ.
2) ಸಂಸದೀಯ ನಿಯಂತ್ರಣ.
3) ವ್ಯವಸ್ಥೆಯಲ್ಲಿ ಕಾರ್ಮಿಕರ ಸಹಭಾಗಿತ್ವ, ಮತ್ತು
4) ವಿಕೇಂದ್ರೀಕರಣದ ಆರ್ಥಿಕ ಆಯೋಜನೆ.

ಅಪೇಕ್ಷಿತ ಉದ್ಯೋಗನೀತಿಯ ವಿಕಾಸದ ಸವಾಲನ್ನು ಎದುರಿಸುವ ವಿಷಯದಲ್ಲಿ ಉಪಾಧ್ಯಾಯರು ಎಮ್. ಎಸ್. ಠಕ್ಕರ್ ಅವರನ್ನು ಉದ್ಧರಿಸುತ್ತಾರೆ. ಠಕ್ಕರ್‌ರು ಮದ್ರಾಸಿನಲ್ಲಿ ಭಾರತೀಯ ವಿಜ್ಞಾನ ಕಾಂಗ್ರೆಸ್ಸಿನ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಹೀಗೆಂದು ಹೇಳಿದ್ದರು:

"ಇಲ್ಲಿಯವರೆಗೂ ನಾವು ಹೊರಗಿನ ದೇಶಗಳಿಂದ ಸ್ಫೂರ್ತಿಯನ್ನು ಪಡೆದುಕೊಂಡಿದ್ದೇವೆ. ನಾವು ಯಂತ್ರಗಳು, ಕಾರ್ಖಾನೆಗಳು, ತಜ್ಞರು ಮತ್ತು ಕಾರ್ಮಿಕರನ್ನು ಆಮದು ಮಾಡಿಕೊಂಡಿದ್ದೇವೆ. ಬಹುಶಃ ಇದು ಆ ಪರಿಸ್ಥಿತಿಯಲ್ಲಿ ಅಂದು ಅಗತ್ಯವಾಗಿದ್ದಿರಬಹುದು. ಇದರ ಪರಿಣಾಮ ಏನಾಯಿತೆಂದರೆ ಭಾರತದಲ್ಲಿ

ಯಾವ ಬೃಹತ್ ಯಾಂತ್ರಿಕ ಉದ್ಯಮಗಳು ಸ್ಥಾಪಿವಾದವೋ ಅವು ಬೇರೆ ದೇಶಗಳ ಅನುಕರಣ ಮಾತ್ರವೇ ಆಗಿವೆ. ದೇಶೀ ಆವಿಷ್ಕಾರಗಳನ್ನು ಆಧರಿಸಿ ವಿಕಾಸಗೊಂಡಿರುವಂಥ ಉದ್ಯಮಗಳು ಎಲ್ಲಿಯೂ ಕಾಣದೊರೆಯುವುದೇ ಇಲ್ಲ. ನಮಗೆ ಪಾಶ್ಚಾತ್ಯರಿಂದ ಬಹಳ ಉದಾರವಾಗಿ ಸಹಾಯ ಸಿಗುತ್ತದೆ. ಜ್ಞಾನ, ವಿಜ್ಞಾನ ಮತ್ತು ಸೌಹಾರ್ದ ಎಲ್ಲಿಂದರಾದರೂ ಸಿಗಲಿ, ಖಂಡಿತ ತೆಗೆದುಕೊಳ್ಳೋಣ; ಆದರೆ ಪ್ರತಿಯೊಂದು ಪುಷ್ಪದಿಂದಲೂ ಮಧುವನ್ನು ತೆಗೆದುಕೊಂಡರೂ, ಅದನ್ನು ಜೇನುತುಪ್ಪವಾಗಿ ಪರಿವರ್ತಿಸಿ ಬಿಡುವ ಜೇನುಹುಳುವಿನಂತೆ ನಮಗೆ ದೊರೆತ ಸಂಪೂರ್ಣ ಸಹಾಯವನ್ನು ನಮ್ಮ ಅಗತ್ಯತೆ ಮತ್ತು ಗುರಿಗಳಿಗೆ ಅನುಗುಣವಾಗಿ ರೂಪಿಸಿಕೊಂಡು, ನಮ್ಮದೆಂದು ಹೇಳಿಕೊಳ್ಳಬಹುದಾಗಿರುವಂಥ ದೇಶದಲ್ಲಿ ಔದ್ಯಮಿಕರಣದ ರೂಪುರೇಖೆಯನ್ನು ವಿಕಾಸಗೊಳಿಸಿಕೊಳ್ಳಬೇಕಾಗಿದೆ. ಇದು ಭಾರತದ ವಿಜ್ಞಾನಿಗಳ ಮತ್ತು ಯೋಜಕರ ಜವಾಬ್ದಾರಿಯಾಗಿರುತ್ತದೆ".

**ಮನುಷ್ಯ ಮತ್ತು ಯಂತ್ರ**

ಮನುಷ್ಯ – ತತ್ವಗಳ ಮೇಲೆ ಯಂತ್ರ ಸವಾರಿ ಮಾಡುವುದನ್ನು ಉಪಾಧ್ಯಾಯರು ವಿರೋಧಿಸುತ್ತಾರೆ. ಉತ್ಪಾದನೆಯ ಕೇಂದ್ರೀಕರಣದ ಪ್ರವೃತ್ತಿಯನ್ನುಳ್ಳವರು ಯಾಂತ್ರೀಕರಣಕ್ಕೆ ವಿರುದ್ಧವಾಗಿರುತ್ತಾರೆ; ಆದರೆ ಮಾನವನ ಶ್ರಮವನ್ನು ಸುಗಮಗೊಳಿಸುವಂಥ ಮತ್ತು 'ಸ್ವಾವಲಂಬನೆಯ' ಉತ್ಪಾದನೆಗೆ ನೆರವಾಗುವಂಥ ಸಹಕಾರ ಸ್ವರೂಪದ ಯಂತ್ರಗಳ ಸಮರ್ಥಕರು ಅವರು. ಅವರ ಅಭಿಪ್ರಾಯ ಹೀಗಿದೆ:

"...............ಒಂದು ಕಡೆ ಯಂತ್ರದ ಬಗ್ಗೆ ಶ್ರದ್ಧೆಯನ್ನುಳ್ಳ ಭಕ್ತರಿದ್ದರೆ, ಮತ್ತೊಂದು ಕಡೆ ಶತ್ರುಗಳು ಕೂಡ ಇದ್ದಾರೆ. ಒಂದೆಡೆ ಯಂತ್ರಗಳ ಅಭಿನವೀಕರಣದ ಕೊರತೆಯೇ ಭಾರತದ ಬಡತನಕ್ಕೆ ಕಾರಣವೆಂದು ಭಾವಿಸುವಂಥ ಜನರು ಇದ್ದಾರೆ. ಅಭಿನವೀಕರಣ ಮತ್ತು ಯಾಂತ್ರೀಕರಣಗಳೇ ದೇಶದ ವಿನಾಶಕ್ಕೆ ಕಾರಣ ಎಂದು ಭಾವಿಸುವವರು ಇನ್ನೊಂದು ಕಡೆ ಇದ್ದಾರೆ. ವಾಸ್ತವವಾಗಿ ಯಂತ್ರ ಮನುಷ್ಯನ ಶತ್ರುವೂ ಅಲ್ಲ, ಮಿತ್ರನೂ ಅಲ್ಲ. ಅದು ಒಂದು ಸಾಧನ ಮಾತ್ರ. ಅದರ ಉಪಾದೇಯತೆ ಸಮಾಜದ ಅನೇಕ ಶಕ್ತಿಗಳ ಕ್ರಿಯೆ–ಪ್ರತಿಕ್ರಿಯೆಗಳನ್ನು ಅವಲಂಬಿಸಿರುತ್ತದೆ". ಯಾಂತ್ರೀಕರಣದ ಸಂದರ್ಭದಲ್ಲಿ ಪಾಶ್ಚಾತ್ಯ ಪ್ರಪಂಚವನ್ನು ಅನುಕರಿಸಬಾರದು. ಇದಕ್ಕೆ ಸಂಬಂಧಿಸಿದಂತೆ ಉಪಾಧ್ಯಾಯರು ಈ ತರ್ಕವನ್ನು ಮುಂದಿರಿಸುತ್ತಾರೆ:

"ಪಾಶ್ಚಾತ್ಯ ಪ್ರಪಂಚದಿಂದ ಯಾವ ಯಂತ್ರಗಳು ನಮಗೆ ಸಿಗುತ್ತವೆಯೋ, ಅವುಗಳನ್ನು ಆ ದೇಶಗಳ ಮೂಲಕ ಎಷ್ಟು ಶತಮಾನಗಳ ಹಿಂದೆ ವಿಕಸಿತ ಮಾಡಲಾಗಿದೆ. ಅವುಗಳ ಮಾನಕೀಕರಣವನ್ನು ಮಾಡಿ, ಅವನ್ನೇ ಇಂದು ಬಜಾರಿನಲ್ಲಿ ಮಾರುತ್ತಿದ್ದಾರೆ. ನಾವು ಅದನ್ನು ಕೊಂಡುಕೊಳ್ಳುತ್ತೇವೆ. ಆದರೆ ಅವು ಸುದೀರ್ಘ



ಕಾಲದ ಆರ್ಥಿಕ ವಿಕಾಸಕ್ಕೆ ಕಾರಣವಲ್ಲ, ಅದರ ಪರಿಣಾಮ ಸ್ವರೂಪವಾಗಿರುವಂಥವು ಎಂಬುದನ್ನು ನಾವು ಮರೆಯುತ್ತೇವೆ". ಯಂತ್ರಗಳನ್ನು ತಂದು ಇಲ್ಲಿ ಹೂಡಿಕೊಳ್ಳುವುದಕ್ಕೆ ಬದಲಾಗಿ ಸ್ವದೇಶಕ್ಕೆ ಅನುಕೂಲಕರವಾದ ರೀತಿಯಲ್ಲಿ ಯಂತ್ರಗಳನ್ನು ವಿಕಾಸಗೊಳಿಸಿಕೊಳ್ಳಬೇಕು ಎಂಬ ವಿಚಾರವನ್ನು ಉಪಾಧ್ಯಾಯರು ಒಪ್ಪುತ್ತಾರೆ. ಸಣ್ಣ ಮತ್ತು ಕುಟೀರ ಉದ್ಯಮಗಳ ಸಂಚಾಲನೆಗಾಗಿ ಮತ್ತು ನಮ್ಮ ಶಿಲ್ಪಿಗಳಿಗೆ ಹಾಗೂ ಕಾರ್ಮಿಕರಿಗೆ ನೆರವಾಗುವಂಥ ಅತ್ಯಾಧುನಿಕವಾದಂಥ, ಸುಲಭವಾಗಿ ಬಳಸಬಹುದಾದಂಥ ಯಂತ್ರಗಳು ಬೇಕು. ಬಂಡವಾಳಶಾಹಿಗಳನ್ನು ಸೃಷ್ಟಿ ಮಾಡುವಂಥ ಯಂತ್ರಗಳು ನಮ್ಮ ಅರ್ಥವ್ಯವಸ್ಥೆಯ ಶತ್ರುಗಳು. ದೀನದಯಾಳರು ಹೇಳುತ್ತಾರೆ: "ನಮ್ಮ ಯಂತ್ರ ನಮ್ಮ ಆರ್ಥಿಕ ಅಗತ್ಯಗಳಿಗೆ ಅನುಕೂಲಕರವಾಗಿಲ್ಲ; ಆದರೆ ನಮ್ಮ ಸಾಂಸ್ಕೃತಿಕ ಮತ್ತು ರಾಜಕೀಯ ಜೀವನ–ಮೌಲ್ಯಗಳಿಗೆ ಪೋಷಕವಾಗಿಲ್ಲದಿದ್ದರೂ, ಕನಿಷ್ಠಪಕ್ಷ ಅವಿರೋಧಿಯಾಗಿಯಂತೂ ಇರಬೇಕು".

ಈ ರೀತಿ ಉಪಾಧ್ಯಾಯರು ಯಂತ್ರಗಳ ಭಕ್ತರೂ ಅಲ್ಲ, ಅವುಗಳನ್ನು ವಿರೋಧಿಸುವಂಥವರೂ ಅಲ್ಲ. ಯಂತ್ರಗಳು ಸಮಾಜದ ಮೇಲೆ ಮತ್ತು ಅರ್ಥವ್ಯವಸ್ಥೆಯ ಮೇಲೆ ಸವಾರಿ ಮಾಡುವಂತಾಗಬಾರದೆಂದು ಅವರು ಬಯಸುತ್ತಾರೆ. ಸಮಾಜದ ಮೇಲೆ ಮತ್ತು ಅರ್ಥವ್ಯವಸ್ಥೆಯ ಮೇಲೆ ಯಂತ್ರಗಳು ಸವಾರಿ ಮಾಡುವಂತಾಗಿಬಿಟ್ಟಾಗ, ಅದರಲ್ಲಿ 'ಕೇಂದ್ರೀಕರಣ'ದ ದೋಷಕ್ಕೆ ಎಡೆ ದೊರೆಯುತ್ತದೆ. 'ಕೇಂದ್ರೀಕರಣ'ದಿಂದ ಬಂಡವಾಳವಾದ ಮತ್ತು ಸಮಾಜವಾದಗಳ ದೋಷಪೂರ್ಣ ಕ್ರಿಯೆ–ಪ್ರತಿಕ್ರಿಯೆಗಳು ಉಂಟಾಗುತ್ತವೆ. ಆದ್ದರಿಂದ ವಿವೇಚನಪೂರ್ವಕವಾಗಿ, ಬಿಗುವಿನ ಅಸಹಜ ಪ್ರಕ್ರಿಯೆಯಿಂದ ತಪ್ಪಿಸಿಕೊಳ್ಳಬೇಕೆಂಬುದಾಗಿ ಅವರು ವಿಶೇಷವಾಗಿ ಒತ್ತಾಯಿಸುತ್ತಾರೆ. ನಾವು ವಿಕೇಂದ್ರಿತ ಅರ್ಥವ್ಯವಸ್ಥೆಯ ಕುಟೀರೋದ್ಯಮಗಳ ಮತ್ತು ನಾವೇ ರೂಪುಗೊಳಿಸಿದಂಥ ಲಘು ಯಂತ್ರಗಳ ಸಂಯೋಜನೆಯ ದಿಕ್ಕಿನಲ್ಲಿ ಮುನ್ನಡೆಯಬೇಕಾಗುತ್ತದೆ.

**ವಿಕೇದ್ರೀಕೃತ ಅರ್ಥವ್ಯವಸ್ಥೆ**

ವಿಕೇಂದ್ರೀಕೃತ ಅರ್ಥವ್ಯವಸ್ಥೆಗೆ ವಿಕೇಂದ್ರೀಕೃತ ರಾಜಕೀಯ ವ್ಯವಸ್ಥೆಯೂ ಅಗತ್ಯ. ಇದಕ್ಕೆ ಸ್ವಾವಲಂಬೀ ಸಮರ್ಥ ಗ್ರಾಮ ಪಂಚಾಯಿತಿ ವ್ಯವಸ್ಥೆ ಹಾಗೂ ಜನಪದ ವ್ಯವಸ್ಥೆ ಬೇಕೆಂಬ ನಿಲುವನ್ನೇ ಉಪಾಧ್ಯಾಯರು ತಳೆದಿದ್ದಾರೆ. ನಮ್ಮ ಅರ್ಥವ್ಯವಸ್ಥೆಗೆ ನಮ್ಮ ಗ್ರಾಮ ಮತ್ತು ಜನಪದ ಆಧಾರವಾಗಿರಬೇಕು. ಗ್ರಾಮಗಳನ್ನು ಹಾಳುಮಾಡುವಂಥ ಆರ್ಥಿಕ ನಿಯೋಜನೆ ಅಂತಿಮವಾಗಿ ಭಾರತವನ್ನು ಹಾಳು ಮಾಡುವಂಥದೇ ಆಗುತ್ತದೆ. ನಗರ ಮತ್ತು ಗ್ರಾಮಗಳ ವೈಷಮ್ಯಪೂರ್ಣ ವಿಕಾಸ ನಮ್ಮ ರಾಷ್ಟ್ರೀಯ ಅಖಂಡತೆಗೂ ಘಾತಕವಾಗಿ ಪರಿಣಮಿಸುತ್ತದೆ. ಸಂಪನ್ಮೂಲಗಳ

ಹಾಗೂ ಅಧಿಕಾರದ ಕೇಂದ್ರೀಕರಣದಿಂದಾಗಿಯೇ ನಾವು ಬಂಡವಾಳವಾದ ಮತ್ತು ಅದರ ಪ್ರತಿಕ್ರಿಯಾತ್ಮಕ ದುಷ್ಚಕ್ರದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಆರ್ಥಿಕ ಪ್ರಜಾತಂತ್ರದ ಸ್ಥಾಪನೆಗಾಗಿ ವಿಕೇಂದ್ರೀಕೃತ ಅರ್ಥವ್ಯವಸ್ಥೆಯೇ ಭಾರತದಲ್ಲಿನ ಪರಿಸ್ಥಿತಿಯಲ್ಲಿ ನಮಗೆ ಉಪಾದೇಯವಾಗುತ್ತದೆ. ಆದ್ದರಿಂದ ಉಪಾಧ್ಯಾಯರು ಹೀಗೆಂದು ಹೇಳುತ್ತಾರೆ:

"............. ವಿಕೇಂದ್ರೀಕೃತ ಅರ್ಥವ್ಯವಸ್ಥೆ ಬೇಕಾಗಿದೆ. ಸ್ವಯಂಸೇವೀ ಕ್ಷೇತ್ರವನ್ನು ಸ್ಥಾಪಿಸಬೇಕು. ಈ ಕ್ಷೇತ್ರವು ಎಷ್ಟು ದೊಡ್ಡದಾಗಿರುತ್ತದೋ ಮನುಷ್ಯನೂ ಅಷ್ಟೇ ಮುಂದುವರಿಯಬಹುದು; ಮಾನವೀಯತೆಯ ವಿಕಾಸವಾಗಬಹುದು; ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನ ಬಗ್ಗೆ ವಿಚಾರಮಾಡಬಹುದು. ಪ್ರತಿಯೊಬ್ಬ ಮನುಷ್ಯನ ವೈಯುಕ್ತಿಕ ಅಗತ್ಯಗಳ ಮತ್ತು ವಿಶೇಷತೆಗಳ ಬಗ್ಗೆ ಆಲೋಚನೆ ಮಾಡಿ, ಅವನಿಗೆ ಕೆಲಸ ನೀಡುವುದಾದರೆ, ಅವನ ಗುಣಗಳು ವಿಕಾಸಗೊಳ್ಳಬಹುದು. ಇಂತಹ ಭಾರತವೇ ವಿಕೇಂದ್ರಿತ ಅರ್ಥವ್ಯವಸ್ಥೆಯನ್ನು ವಿಶ್ವಕ್ಕೆ ಕೊಡಬಹುದು." ವ್ಯವಸ್ಥೆಗಳು ಬೃಹತ್ ಉದ್ಯಮಗಳ ಮತ್ತು ಕೇಂದ್ರೀಕರಣದ ದುಷ್ಚಕ್ರದಲ್ಲಿ ಒಂದು ಬಾರಿ ಸಿಕ್ಕಿ ಹಾಕಿಕೊಂಡರೆ, ಅವನ್ನು ಮತ್ತೆ ಬದಲಾಯಿಸಿ ಹಳೆಯ ವ್ಯವಸ್ಥೆಗೆ ತರುವುದು ಕಷ್ಟವಾಗುತ್ತದೆ. ಆದ್ದರಿಂದ ತೃತೀಯ ವಿಶ್ವದ ದೇಶಗಳು ಗ್ರಾಮೋನ್ಮುಖಿಯಾದ ಸಣ್ಣ ಕೈಗಾರಿಕೆಗಳು ವಿಕೇಂದ್ರೀಕೃತ ಅರ್ಥವ್ಯವಸ್ಥೆಯನ್ನು ಅಂಗೀಕರಿಸಿಕೊಳ್ಳಬೇಕು.

"ಅಂತಹ ಸಮಸ್ಯೆಗಳು ಮಾತ್ರವೇ ವಿಕೇಂದ್ರೀಕರಣದಿಂದ ಬಗೆಹರಿಯಬಹುದು. ದೊಡ್ಡ ಪ್ರಮಾಣದಲ್ಲಿ ಉತ್ಪಾದನೆಯ ಅವಕಾಶ ಜನರಿಗೆ ಸಿಗದಿದ್ದರೆ ಆಗ ಬಂಡವಾಳವನ್ನು ಕೂಡಿಸುವುದಾದರೂ ಹೇಗೆ ಸಾಧ್ಯ? ಇದರಲ್ಲಿ ಗ್ರಾಮಗಳು ಹೆಚ್ಚು ಹೆಚ್ಚು ಸ್ವಾವಲಂಬಿಗಳಾಗಿಯೇ ಇರುತ್ತವೆ; ವ್ಯಕ್ತಿಗೆ ಪ್ರೇರಣೆ ಸಿಗುವುದರಿಂದ ವಸ್ತುವಿನ ಗುಣಮಟ್ಟ ಮತ್ತು ಉತ್ಪಾದನೆ, ಎರಡೂ ಹೆಚ್ಚುತ್ತವೆ. ಹಿಂದಿನ ಕಾಲದಲ್ಲಿ ಗುಡಿ ಕೈಗಾರಿಕೆಗಳು ಎಷ್ಟು ಉತ್ತಮ ಗುಣಮಟ್ಟದ ವಸ್ತುಗಳನ್ನು ತಯಾರಿಸುತ್ತಿದ್ದುವೋ ಆ ಗುಣಮಟ್ಟದ ವಸ್ತುಗಳನ್ನು ಇಂದು ಯಂತ್ರಗಳು ತಯಾರಿಸಲಾರವು. ಕುಟೀರೋದ್ಯಮಗಳಲ್ಲಿ ಹಸ್ತ ಕೌಶಲ್ಯಕ್ಕೆ ಮತ್ತು ಶಿಲ್ಪಕ್ಕೆ ಸಿಗುವಂಥ ಬಹು ದೊಡ್ಡ ಕ್ಷೇತ್ರ ಆಧುನಿಕ ಯಂತ್ರ –ಉದ್ಯಮಗಳಲ್ಲಿ ಖಂಡಿತ ಸಿಗುವುದಿಲ್ಲ. ಯಾವ ರೀತಿಯಲ್ಲಿ ರಾಜಕೀಯ ಪ್ರಜಾತಂತ್ರದಲ್ಲಿ ಗ್ರಾಮ ಪಂಚಾಯಿತಿ ಮುಂತಾದ ಘಟಕಗಳಿಂದ ಪ್ರಜಾತಂತ್ರ ಮೇಲ್ಮುಖವಾಗಿ ಮುಂದೆ ನಡೆಯುತ್ತದೆಯೋ ಅದೇ ರೀತಿಯಲ್ಲಿ ಆರ್ಥಿಕ ಪ್ರಜಾತಂತ್ರದಲ್ಲಿ ಗ್ರಾಮ ಮತ್ತು ಕುಟೀರೋದ್ಯಮಗಳಿಂದಾಗಿ ಮತ್ತು ಇದೇ ರೀತಿ ವಿಕೇಂದ್ರೀಕರಣಕ್ಕೆ ಅನುಗುಣವಾಗಿ ಮಾಡಲಾಗುವಂತಹ ಕೃಷಿ ಉತ್ಪಾದನೆ ಕೇಂದ್ರಗಳಿಂದ ಮೇಲೆದ್ದು, ಪ್ರಜಾತಂತ್ರ ಎತ್ತರಕ್ಕೆ ಹೋಗಬೇಕಾಗಿದೆ. ಸಾಮ್ಯವಾದ ಕೇಂದ್ರಿತ ಅರ್ಥನಿಯಮದ್ದೇ ಒಂದು ಅಂಗ ಇದೆ. ಆದ್ದರಿಂದ



ಅದರ ಬೇರುಗಳು ಆಕಾಶದಲ್ಲಿ ಇವೆ; ಆದರೆ ಈ ಅರ್ಥವ್ಯವಸ್ಥೆಯ ಬೇರು ಭೂಮಿಯ ಒಳಗೆ ಆಳವಾಗಿ ಹೊಕ್ಕಿಬಿಟ್ಟಿದೆ."

ಉಪಾಧ್ಯಾಯರ ದೃಷ್ಟಿಯಲ್ಲಿ ಬೃಹತ್ ಉದ್ಯಮಗಳನ್ನು ನಿಷೇಧಿಸುವುದು ಸರ್ವಥಾ ವಿಕೇಂದ್ರೀಕರಣದ ಗುರಿ ಅಲ್ಲವೇ ಅಲ್ಲ. ಬೃಹತ್ ಉದ್ಯಮಗಳು ಸಣ್ಣ ಉದ್ಯಮಗಳನ್ನು ಅವಲಂಬಿಸಿಕೊಂಡಿರಬೇಕು. ಉತ್ಪಾದಕ ವಸ್ತುಗಳನ್ನು ಬೃಹತ್ ಉದ್ಯಮಗಳು ಸಿದ್ಧಪಡಿಸಲಿ, ಬಳಕೆಯ ವಸ್ತುಗಳನ್ನು ಸಣ್ಣ ಉದ್ಯಮಗಳು ತಯಾರಿಸಲಿ............. ಎರಡನೆಯದಾಗಿ, ಬಳಕೆಯ ವಸ್ತುಗಳ ಉತ್ಪಾದನೆಯ ಕೆಲಸದಲ್ಲಿ ಉಪಯೋಗಕ್ಕೆ ಬರುವಂತಹ ವಸ್ತುಗಳನ್ನು ಬೇರೆ–ಬೇರೆಯಾಗಿ ಸಣ್ಣ ಪ್ರಮಾಣದಲ್ಲಿ ತಯಾರಿಸಬೇಕು; ಮತ್ತು ಅವುಗಳನ್ನೂ ಏಕತ್ರೀಕರಿಸುವ ಕೆಲಸವನ್ನು ದೊಡ್ಡ ಕಾರ್ಖಾನೆಯಲ್ಲಿ ಮಾಡಬೇಕು.

ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಗಡಿಯಾರಗಳ ಭಾಗಗಳನ್ನು ಸಣ್ಣ ಸಣ್ಣ ಶಿಲ್ಪಿಗಳು ತಯಾರಿಸಿಕೊಡುತ್ತಾರೆ. ಅವನ್ನು ಒಂದುಗೂಡಿಸಿ ದೊಡ್ಡ ಕಾರ್ಖಾನೆಗಳಲ್ಲಿ ಗಡಿಯಾರದ ಆಕಾರದಲ್ಲಿ ತಯಾರಿಸಲಾಗುತ್ತದೆ. ಮೋಟರ್ ಮುಂತಾದ ದೊಡ್ಡ–ದೊಡ್ಡ ವಸ್ತುಗಳ ಸುಮಾರು ಸಣ್ಣ–ಸಣ್ಣ ಭಾಗಗಳನ್ನು ಇದೇ ರೀತಿಯಲ್ಲಿ ತಯಾರಿಸಬಹುದಾಗಿದೆ. ಈ ದೃಷ್ಟಿಯಲ್ಲಿ ಜಪಾನಿನಲ್ಲಿ ಬಹಳಷ್ಟು ಕೆಲಸಗಳಾಗಿವೆ. ಅಲ್ಲಿ ರೈಲುಗಾಡಿಗಳನ್ನು ತಯಾರಿಸುವುದಕ್ಕೆ ಬೇಕಾಗುವ ಶೇ. 77ರಷ್ಟು, ಹಡಗು ತಯಾರಿಸಲಿಕ್ಕೆ ಬೇಕಾಗುವ ಶೇ. 70 ರಷ್ಟು ಮತ್ತು ಮೋಟರ್ ನಿರ್ಮಾಣಕ್ಕೆ ಬೇಕಾಗುವ ಶೇ. 62ರಷ್ಟು ಭಾಗಗಳನ್ನು ಈ ಸಣ್ಣ ಉದ್ಯಮಗಳಿಂದಲೇ ತಯಾರಿಸಿಕೊಳ್ಳಲಾಗುತ್ತದೆ. ............ಮೇಲ್ಕಂಡ ಎರಡು ವರ್ಗಗಳಿಗೆ ಸೇರಿದ ಉದ್ಯಮಗಳನ್ನು ಅತ್ಯುತ್ತಮವಾಗಿ ಸ್ಥಾಪಿಸಿದ್ದೇ ಆದರೆ, ಪ್ರತಿಸ್ಪರ್ಧಿ ಉದ್ಯಮದ ಕ್ಷೇತ್ರ ಅತ್ಯಂತ ಸೀಮಿತವಾಗಿ ಬಿಡುತ್ತದೆ".

ಸಣ್ಣ ಉದ್ಯಮಗಳು, ಆರ್ಥಿಕ ದೃಷ್ಟಿಯಿಂದ ಉಳಿತಾಯವಾಗುವುದಿಲ್ಲವೆಂಬ ಅಭಿಪ್ರಾಯವನ್ನು ದೀನ್ ದಯಾಳ್ ಉಪಾಧ್ಯಾಯರು ಒಪ್ಪುವುದಿಲ್ಲ. ಅವರ ಅಭಿಪ್ರಾಯವೇನೆಂದರೆ ಬೃಹತ್ ಉದ್ಯಮಗಳು ಉಳಿತಾಯಕರವಾಗಿರುತ್ತವೆ ಎಂಬುದು ಒಂದು ಭ್ರಮೆ; ವಾಸ್ತವವಾಗಿ ಉಳಿತಾಯ ಆಗುವುದು ಸಣ್ಣ ಉದ್ಯಮಗಳಲ್ಲೇ ಎಂಬುದು ಅವರ ಅಭಿಪ್ರಾಯ.

"....................ಸತ್ಯವೇನೆಂದರೆ ದೊಡ್ಡ ಪ್ರಮಾಣದಲ್ಲಿನ ಉತ್ಪಾದನೆಯಿಂದ ಉಳಿತಾಯವಾಗುವುದಿಲ್ಲ, ಹೆಚ್ಚಿನ ಉತ್ಪಾದನೆಯಿಂದ ಆಗುತ್ತದೆ. ನಾವು ಇತಿಹಾಸವನ್ನು ನೋಡಿದ್ದೇ ಆದರೆ, ಬ್ರಿಟನ್ನಿನಲ್ಲಿ ದೊಡ್ಡ ಪ್ರಮಾಣದಲ್ಲಿಯೇ ಬಟ್ಟೆ ತಯಾರಿಸಿದರೂ, ಭಾರತದ ಬಟ್ಟೆಯ ಬೆಲೆ ಅಲ್ಲಿ ಕಮ್ಮಿಯಾಗಿಯೇ ಇರುತ್ತಿತ್ತು. ಜಪಾನಿನಲ್ಲಿ ಯಾವ ವಸ್ತುಗಳು ಕಮ್ಮಿ ಬೆಲೆಯಿಂದಾಗಿ ಅಗ್ಗದ ಬಜಾರಿಗೆ ಬಂದು,

ಉಳಿದ ಎಲ್ಲ ವಸ್ತುವನ್ನೂ ಹೊರಹಾಕಿಬಿಡುತ್ತವೆಯೋ, ಅದೆಲ್ಲ ಸಿದ್ಧವಾಗುವುದು ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಅಲ್ಲ, ಮನೆಗಳಲ್ಲಿ. ಅವುಗಳು (ಸಣ್ಣ ಉದ್ಯಮಗಳು) ಎದುರಿಸುತ್ತಿರುವ ತೊಂದರೆಗಳನ್ನು ದೂರಮಾಡಿದ್ದೇ ಆದರೆ ಮತ್ತು ಬೃಹತ್ ಉದ್ಯಮಗಳಿಗೆ ಬೇರೆ ಬೇರೆ ಕಾರಣಗಳಿಂದಾಗಿ ಸಿಕ್ಕಿರುವಂಥ ಸೌಲಭ್ಯಗಳು ಸಿಗದಿದ್ದ ಪಕ್ಷದಲ್ಲಿ ಆಗ ಖಂಡಿತವಾಗಿಯೂ ಅವುಗಳೇ (ಸಣ್ಣ ಉದ್ಯಮಗಳೇ) ಸ್ಪರ್ಧೆಯಲ್ಲಿ ಮುಂದೆ ಆಗಿಬಿಡುತ್ತದೆ. ನಮಗೆ ಗೊತ್ತಿರುವ ಹಾಗೆ 1930–37ರ ಅವಧಿಯಲ್ಲಿ ಸಣ್ಣ ಸಣ್ಣ ಮೋಟಾರುಗಳನ್ನು ನಡೆಸುತ್ತಿದ್ದವರು ಸ್ಪರ್ಧೆಯಲ್ಲಿ ರೈಲುಗಳನ್ನು ಸೋಲಿಸಿಬಿಟ್ಟಿದ್ದರು. ಆಡಳಿತ ವ್ಯವಸ್ಥೆ ಮತ್ತು ಯುದ್ಧ ರೈಲಿನ ಸಹಾಯಕ್ಕೆ ಬರದಿದ್ದರೆ, ಅವರು ಜೀವಿಸುವುದೇ ಕಷ್ಟಕರವಾಗುತ್ತಿತ್ತು. ದೊಡ್ಡ ಉದ್ಯೋಗಗಳಿಂದ ಉಳಿತಾಯ ಆಗುತ್ತದೆ ಎನ್ನುವುದು ಭ್ರಮೆಯೇ ಆಗಿದೆ. ಇದನ್ನು ನಿರೂಪಿಸುತ್ತಾ ಉಪಾಧ್ಯಾಯರು ಹೀಗೆಂದು ಹೇಳುತ್ತಾರೆ:

"ಬ್ಯಾಂಕುಗಳು, ರೈಲುಗಳು, ಮುಂತಾದ ಎಲ್ಲ ಸೌಲಭ್ಯಗಳೂ ಈ ಬೃಹತ್ ಉದ್ಯಮಗಳಿಗೆ ಸಹಜವಾಗಿಯೇ ಸಿಗುತ್ತವೆ ಎಂದು ನಾವು ತಿಳಿದಿದ್ದೇವೆ. ಆದರೆ ಸಣ್ಣ ಉದ್ಯಮಗಳು ಅಸಂಘಟಿತವಾಗಿರುವುದರಿಂದ ಇಂದಿನ ಮಾರುಕಟ್ಟೆ ಅರ್ಥ ವ್ಯವಸ್ಥೆಯಲ್ಲಿ ಕಚ್ಚಾಮಾಲನ್ನು ಪಡೆದುಕೊಳ್ಳುವುದರಿಂದ ಹಿಡಿದು ಸಿದ್ಧವಸ್ತುಗಳನ್ನು ಮಾರುವವರೆಗೂ ಆ ಸರಪಳಿಯ ಏರ್ಪಾಟು ಮಾಡಿಕೊಳ್ಳಲಾರರು. ಒಮ್ಮೆ ಈ ಸರಪಳಿ ಸಿದ್ಧವಾಗಿಬಿಟ್ಟರೆ, ಅವುಗಳನ್ನು (ಸಣ್ಣ–ಉದ್ಯಮಗಳನ್ನು) ಎದುರಿಸುವುದು ಬೃಹತ್ ಉದ್ಯಮಗಳಿಗೆ ಕಷ್ಟಕರವಾಗಬಹುದು. ಈ ಸಂಘಟನೆ ತನ್ನ ಕಾಲಿನ ಮೇಲೆ ನಿಲ್ಲುವಂತಾಗಲು ನೆರವಾಗುವುದು ಆಡಳಿತ ವ್ಯವಸ್ಥೆಯ ಕರ್ತವ್ಯವೇ ಆಗಿದೆ."

ಇಂತಹ ಸಣ್ಣ ಉದ್ಯಮಗಳಲ್ಲಿ ಅಡಗಿರುವ ಅನಂತ ಸಾಧ್ಯತೆಗಳ ವಿಷಯದಲ್ಲೂ ಉಪಾಧ್ಯಾಯರು ಬಹಳ ಆಶಾವಾದಿಯಾಗಿದ್ದಾರೆ. ಅವರು ಹೇಳುತ್ತಾರೆ: "ಒಮ್ಮೆ ಸಂಕುಚಿತವಾಗಿಬಿಟ್ಟಿದಂಥ ಸಣ್ಣ ಉದ್ಯಮಗಳ ಕ್ಷೇತ್ರ ಇಂದು ಮತ್ತಷ್ಟು ವಿಸ್ತಾರವಾಗುತ್ತಿದೆ. ಯಾವ ವಸ್ತುಗಳನ್ನು ಸಣ್ಣ ಪ್ರಮಾಣದಲ್ಲಿ ಉತ್ಪಾದನೆ ಮಾಡಲು ಸಾಧ್ಯವಾಗುವುದಿಲ್ಲವೆಂದು ನಾವು ಭಾವಿಸಿದ್ದೆವೋ, ಅವುಗಳನ್ನು ಇಂದು ಒಳ್ಳೆಯ ಮತ್ತು ಆರ್ಥಿಕವಾಗಿ ದೃಢವಾದ ನೆಲೆಯಲ್ಲಿ ಉತ್ಪಾದನೆ ಮಾಡಲಾಗುತ್ತಿದೆ. ಇತ್ತೀಚೆಗೆ ಉಕ್ಕನ್ನೂ ಸಣ್ಣ ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತದೆಯೆಂಬ ಸುದ್ದಿ ಚೀನಾದಿಂದ ಬಂದಿರುವುದು ಔದ್ಯಮಿಕ ಕ್ಷೇತ್ರಗಳಲ್ಲಿ ಸಣ್ಣ ಉದ್ಯಮಗಳ ವಿಕಾಸದ ಸಾಧ್ಯತೆಗಳನ್ನು ಸಾಕಷ್ಟು ಹೆಚ್ಚಿಸಿದೆ".

ವಿಕೇಂದ್ರೀಕೃತ ಅರ್ಥವ್ಯವಸ್ಥೆಯಲ್ಲಿ ಸಣ್ಣ ಮತ್ತು ಕುಟೀರೋದ್ಯಮಗಳ ಅರ್ಥವ್ಯವಸ್ಥೆಗೆ ಮಾನದಂಡಗಳು ಇವೆಯಾದರೂ ಆಧುನಿಕ ಉತ್ಪಾದನ ವ್ಯವಸ್ಥೆ



ಮತ್ತು ಮಾನವೀಯ ಅಗತ್ಯ ಹೇಗಿವೆ ಎಂದರೆ ಬೃಹತ್ ಉದ್ಯಮದ ಅನಿವಾರ್ಯತೆಯನ್ನು ಸಂಪೂರ್ಣವಾಗಿ ನಿರಾಕರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅವು ಬೃಹತ್ ಉದ್ಯಮಗಳ ಅನಿವಾರ್ಯತೆಯನ್ನು ಒಪ್ಪಿಕೊಳ್ಳುತ್ತವೆ; ಆದರೆ ಇವರಿಂದ ಆರ್ಥಿಕ ವ್ಯವಸ್ಥೆಯ ಕೇಂದ್ರೀಕರಣ ಆಗಬಾರದು. ಅದಕ್ಕೆ ಮುಖ್ಯವಾಗಿ ಅವರು ಎರಡು ಸಲಹೆಯನ್ನು ಮುಂದಿರಿಸುತ್ತಾರೆ:

1) ಆಡಳಿತ ವ್ಯವಸ್ಥೆಯ ಮೂಲಕ ಅವನ್ನು ನಿಯಂತ್ರಿಸುವುದು; ಮತ್ತು

2) ಒಡತನದಲ್ಲಿ ಕಾರ್ಮಿಕರ ಪಾಲುದಾರಿಕೆ ಇರುವುದು.

ಈ ವಿಷಯದಲ್ಲಿ ಅವರು ಖಾಸಗಿ ಮತ್ತು ಸಾರ್ವಜನಿಕ ಉದ್ಯಮಗಳ ಸಂಪ್ರದಾಯಬದ್ಧ ವ್ಯಾಖ್ಯಾನಗಳ ವಿಷಯದಲ್ಲಿ ಕಟ್ಟುನಿಟ್ಟಾದ ವರ್ತನೆ ಅವ್ಯಾವಹಾರಿಕವಾದುದು ಎನ್ನುತ್ತಾರೆ. ಈ ವಿಷಯದಲ್ಲಿ ಅವರ ಅಭಿಪ್ರಾಯ ಹೀಗಿದೆ:

"ಯಾವುದೋ ಒಂದು ಭಾರಿ ಸಂಪ್ರದಾಯ ಮತ್ತು ಸೈದ್ಧಾಂತಿಕ ದೃಷ್ಟಿಕೋನವನ್ನು ನಮ್ಮದಾಗಿಸಿಕೊಳ್ಳುವುದು ಸರಿಯಾಗುವುದಿಲ್ಲ. ವಿಶ್ವಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಬ್ಲಾಕ್ ಅವರು ಅಕ್ಟೋಬರ್, 1957ರಲ್ಲಿ ವಿಶ್ವದ ಪ್ರಮುಖ ಉದ್ಯಮಪತಿಗಳ ಸಮ್ಮೇಳನದಲ್ಲಿ ಹೀಗೆಂದು ಹೇಳಿದ್ದರು: "ಬಂಡವಾಳಶಾಹಿಯ ಪ್ರಚಾರ ಮಾಡುತ್ತಿರುವ ಪೂಜಾರಿಗಳ ವಿಷಯದಲ್ಲಿ ಖಾಸಗಿ ಬಂಡವಾಳವೇ ವಿಶ್ವದ ಎಲ್ಲ ವಿಕಾಸದ ಅಗತ್ಯಗಳನ್ನು ಪೂರೈಸುತ್ತೆಂಬ ಹೇಳಿಕೆಯಿಂದ ನಾನು ಎಷ್ಟು ಚಿಂತಿತನಾಗಿದ್ದೇನೆಯೋ, ಸಾರ್ವಜನಿಕ ಉದ್ಯಮವೇ ಸಂಪೂರ್ಣ ಬೇಡಿಕೆಯುನ್ನು ಸಂತುಷ್ಟಗೊಳಿಸುತ್ತದೆ ಎಂದು ಹೇಳಿಕೊಳ್ಳುವ ಆ ಸಮಾಜವಾದಿಗಳಿಂದಲೂ ಅಷ್ಟೇ ಚಿಂತಿತನಾಗಿದ್ದೇನೆ". ಅಭಿವೃದ್ಧಿಗೊಂಡಿಲ್ಲದ ದೇಶಗಳಲ್ಲಿ, ವ್ಯಾವಹಾರಿಕ ದೃಷ್ಟಿಯಿಂದ ಖಾಸಗಿ ಉದ್ಯಮ ಮತ್ತು ಆಡಳಿತ ವ್ಯವಸ್ಥೆ, ಇವೆರಡಕ್ಕೂ ತಮ್ಮದೇ ಆದ ಸೀಮಿತಿಗಳು ಇರುತ್ತವೆ. ಸ್ವಲ್ಪ ಮಟ್ಟಿಗೆ ಅಭಿವೃದ್ಧಿಗೊಂಡಿರುವ ದೇಶಗಳಲ್ಲಿ ಎಲ್ಲಕ್ಕಿಂತಲೂ ದುರ್ಲಭವಾಗಿರುವ ವಸ್ತು ಏನಾದರೂ ಇದ್ದರೆ ಅದು ಅಪಾಯವನ್ನು ಹೊತ್ತುಕೊಳ್ಳುವ ಉದ್ಯಮವೆಂದು ಹೇಳಲಾಗಿದೆ. ಇಂತಹ ಸ್ಥಿತಿಯಲ್ಲಿ ಸಹಜವಾಗಿಯೇ ರಾಜ್ಯವು ಮುಂದೆ ಬರಬೇಕಾಗುತ್ತದೆ. ಸಮಾಜವಾದದಿಂದ ಮೈಲುಗಟ್ಟಲೇ ದೂರ ಓಡುವ ಅನೇಕ ದೇಶೀ ರಾಜ್ಯಗಳು ಇವೇ ಕಾರಣಕ್ಕಾಗಿ ತಮ್ಮ ಕಡೆಯಿಂದ ಉದ್ಯೋಗ–ವೃತ್ತಿಗಳನ್ನು ಸ್ಥಾಪಿಸಿದ್ದಾರೆ. ಆದ್ದರಿಂದ ಎಲ್ಲಿ ಖಾಸಗಿ ಕ್ಷೇತ್ರ ಬರಲಾಗುವುದಿಲ್ಲವೋ, ಅಲ್ಲಿ ಆಡಳಿತ ವ್ಯವಸ್ಥೆ ಪ್ರವೇಶಿಸಬೇಕು ಎಂಬ ನಿಯಮವನ್ನು ಜಾರಿಗೆ ಕೊಡಬಹುದಾಗಿದೆ. ಇಷ್ಟಾಗಿಯೂ ಸಾಮಾನ್ಯವಾಗಿ ಅರ್ಥೋತ್ಪಾದನೆ ಆಡಳಿತ ವ್ಯವಸ್ಥೆಯ ಕಾರ್ಯವಲ್ಲ."

ಎಲ್ಲಿ ಇಂತಹ ಉದ್ಯಮಿಗಳು ಸಿಕ್ಕುತ್ತಾರೆಯೋ ಅಲ್ಲಿ ಆಡಳಿತವ್ಯವಸ್ಥೆ ಅವರಿಗೆ

ಕಟ್ಟುಪಾಡುಗಳನ್ನು ವಿಧಿಸಲಿ; ಅವರ ಮೇಲೆ ಸಂಸದೀಯ ನಿಯಂತ್ರಣವೂ ಇರಲಿ ಎಂಬುದು ಉಪಾಧ್ಯಾಯರ ಅಭಿಪ್ರಾಯವಾಗಿದೆ.

ಬೃಹತ್ ಉದ್ಯಮಗಳ ಬಹುದೊಡ್ಡ ದೋಷವೆಂದರೆ 'ಹಣ'ವನ್ನು ಮಾಲೀಕನೆಂದು ಮತ್ತು 'ಶ್ರಮ'ವನ್ನು ಕೂಲಿಗಾರನೆಂದು ಭಾವಿಸಿರುವುದು! ಬೃಹತ್ ಉದ್ಯಮ ಒಡತನವನ್ನು ಕಾರ್ಮಿಕರ, ವ್ಯವಸ್ಥಾಪಕರ ಮತ್ತು ಪಾಲುದಾರರ ನಡುವೆ ವಿಕೇಂದ್ರಿಕರಣಗೊಳಿಸಬೇಕು ಎಂಬುದು ಉಪಾಧ್ಯಾಯರ ಆಶಯವೇ ಆಗಿದೆ.

ಸ್ಥಿರ ಆಸ್ತಿಯ ಉತ್ಪಾದನೆಗೆ ಸಂಬಂಧಪಟ್ಟಂತೆ, ಹೇಗೆ ಜಮೀನಿನಲ್ಲಿ ದುಡಿಯುವ ರೈತನನ್ನೇ ಉತ್ಪಾದನೆಯ ಒಡೆಯನೆಂದು ಭಾವಿಸಲಾಗಿರುವುದೋ (ಉಳುವವನದೇ ಭೂಮಿ) ಹಾಗೆಯೇ ಉದ್ಯಮಗಳಲ್ಲಿ ಕಾರ್ಮಿಕರ ಒಡೆತನವನ್ನೇಕೆ ಅಂಗೀಕರಿಸಬಾರದು? ಕಂಪೆನಿಗಳಲ್ಲಿನ ಶೇರುದಾರರು ಬಹುಮಟ್ಟಿಗೆ ಉದ್ಯಮದಿಂದ ದೊರೆಯದ ಲಾಭಾಂಶವನ್ನು ಬಿಟ್ಟರೆ ಬೇರಾವ ಸಂಬಂಧವನ್ನೂ ಇಟ್ಟುಕೊಂಡಿರದೆ ಒಡೆತನದ ಅಧಿಕಾರವನ್ನು ಅನುಭವಿಸಬಹುದಾದರೆ, ಆ ಕಾರ್ಖಾನೆಯಲ್ಲಿ ಸತತವಾಗಿ ಕೆಲಸ ಮಾಡುತ್ತಿರುವಂಥ, ವಾಸ್ತವವಾಗಿ ಯಂತ್ರಗಳನ್ನು ಸಕ್ರಿಯವಾಗಿರಿಸುವಂಥ ತನ್ನ ಇಡೀ ಬಾಳುವೆಯೇ ಉದ್ಯಮದ ಏರಿಳಿತಗಳಲ್ಲಿ ಸಿಲುಕಿರುವಂಥ ಕಾರ್ಮಿಕನನ್ನು ಯಾವಾಗಲೂ ಹೊರಗಿನವನೆಂಬ ಭಾವನೆಯನ್ನೇ ಅನುಭವಿಸುತ್ತಿರುವಂತೆ ಮಾಡಿಕೊಂಡಿರುವುದು ಆಶ್ಚರ್ಯದ ವಿಷಯವೇ ಆಗಿದೆ. ಕಾರ್ಮಿಕನನ್ನ ಹೀಗೆ ಬೇರೆಯಾಗಿಸಿರುವ ರೀತಿ ಸರಿಯಾದುದಲ್ಲ. ಆದ್ದರಿಂದ ಶೇರುದಾರರ ಜೊತೆಗೆ ಕಾರ್ಮಿಕರಿಗೂ ಒಡೆತನದ ಅಧಿಕಾರ ದೊರೆಯಬೇಕಾದುದು ಅಗತ್ಯ. ಅವನನ್ನು ಲಾಭದ ಮತ್ತು ಆಡಳಿತ ವ್ಯವಸ್ಥೆಯ ಭಾಗಸ್ಥನನ್ನಾಗಿ ಮಾಡಬೇಕು. ಈ ರೀತಿ ಮಾಡಿದರೆ, ಕಾರ್ಮಿಕರ ಪ್ರತಿನಿಧಿಗಳು ಆಡಳಿತ ಮಂಡಳಿಯಲ್ಲಿ ಇರುತ್ತಾರೆ."

'ವಿಕೇಂದ್ರೀಕರಣ'ವನ್ನು ದೀನ್ ದಯಾಳ್ ಉಪಾಧ್ಯಾಯರು ಅರ್ಥವ್ಯವಸ್ಥೆಯ ಮುಖ್ಯ ವಿಷಯವೆಂದು ಭಾವಿಸುತ್ತಾರೆ. ವಿಕೇಂದ್ರೀಕರಣದಿಂದಲೇ ನಾವು ಸಾಮಾಜಿಕ ನ್ಯಾಯವನ್ನು, ಸ್ವದೇಶೀಯತೆಯನ್ನು ಮತ್ತು ಸ್ವಾವಲಂಬನೆಯನ್ನು ಪಡೆದುಕೊಳ್ಳಬಹುದು, "ಇಂದಿನ ಪರಿಸ್ಥಿತಿಯಲ್ಲಿ ಈ ಎರಡು ಶಬ್ದಗಳ ಬಳಕೆಯಿಂದ ನಮ್ಮ ಅರ್ಥವ್ಯವಸ್ಥೆಯ ದಿಕ್ಕನ್ನು ಬದಲಾಯಿಸಬೇಕಾದರೆ, 'ವಿಕೇಂದ್ರೀಕರಣ' ಮತ್ತು 'ಸ್ವದೇಶೀ' ಎಂಬುದೇ ಆ ಎರಡು ಶಬ್ದಗಳಾಗಿವೆ ಎಂಬುದು ಉಪಾಧ್ಯಾಯರ ಅನಿಸಿಕೆ.

ಅರ್ಥವ್ಯವಸ್ಥೆಯನ್ನು ಜಾರಿಗೆ ತರುವುದಕ್ಕೆ ಇರುವ ಮುಖ್ಯವಾದ ಅಡ್ಡಿ ಎಂದರೆ ರಾಜಕೀಯ ಇಚ್ಛಾಶಕ್ತಿಯ ಕೊರತೆ ಮತ್ತು ಆರ್ಥಿಕ ವಿಚಾರಗಳ ಬಗೆಗಿನ ಸಮಾಜವಾದ ಮತ್ತು ಬಂಡವಾಳವಾದಗಳಿಗೆ ಸಂಬಂಧಿಸಿದ ಪಾಶ್ಚಾತ್ಯ ಅವಧಾರಣೆಗಳ ಬಗೆಗಿನ ಭ್ರಮೆ ಹುಟ್ಟಿಸುವಂತಹ ವಿಚಾರಧಾರೆಯೇ ಆಗಿದೆ. ಆದರೆ ಸ್ವದೇಶೀ



ವಿಚಾರಧಾರೆಯಲ್ಲಿ ನಿಹಿತವಾಗಿರುವ ಸ್ವಾರ್ಥವೂ ಇದರಲ್ಲಿ ಇನ್ನೊಂದು ದೊಡ್ಡ ಅಡ್ಡಿಯಾಗಿದೆ ಎಂದು ಉಪಾಧ್ಯಾಯರು ಭಾವಿಸಿದ್ದರು.

"...................ಭಾರತದಲ್ಲಿ ಇಂತಹ ಜನರು ಬಹುಸಂಖ್ಯಾತರಾಗಿದ್ದಾರೆ. ಅವರ ಹಿತಾಸಕ್ತಿಗಳು ಪಾಶ್ಚಾತ್ಯ ಅರ್ಥವ್ಯವಸ್ಥೆ ಹಾಗೂ ಉತ್ಪಾದನೆ ಪ್ರಕ್ರಿಯೆಯೊಂದಿಗೆ ಸೇರಿಕೊಂಡಿವೆ. ಕಳೆದ ನೂರು ವರ್ಷಗಳಲ್ಲಿ ಭಾರತದಲ್ಲಿ ಯಾವ ಅರ್ಥವ್ಯವಸ್ಥೆ ವಿಕಾಸಗೊಂಡಿತ್ತೋ ಅದು ಭಾರತದ ಮತ್ತು ಪಾಶ್ಚಾತ್ಯ ಪ್ರಪಂಚದ ಔದ್ಯಮಿಕ ರಾಷ್ಟ್ರಗಳ ವ್ಯವಸ್ಥೆಗಳನ್ನು ಪರಸ್ಪರ ಪೂರಕವಾಗಿರುವಂತೆ ಬಿಟ್ಟಿದೆ. ಇದರಲ್ಲಿ ಭಾರತದ ಹಿತಾಸಕ್ತಿಯನ್ನು ರಕ್ಷಿಸಿಕೊಂಡು ಬರಲಾಗಲಿಲ್ಲ. ಅದಕ್ಕೆ ಬದಲಾಗಿ ಶೋಷಣೆಯೇ ಆಗುತ್ತಾ ಬಂದಿದೆ. ಈ ಶೋಷಣೆಯ ಪ್ರಕ್ರಿಯೆಯಲ್ಲಿ ಪಾಶ್ಚಾತ್ಯರ ಆರ್ಥಿಕ ಹಿತಾಸಕ್ತಿಗಳು ಭಾರತದ ಕೆಲವು ವರ್ಗಗಳನ್ನು ತಮ್ಮ ಏಜಂಟರುಗಳ ರೂಪದಲ್ಲಿ ಜೊತೆಗಾರರನ್ನಾಗಿ ಮಾಡಿಕೊಂಡಿವೆ. ಮೊದಲಿಗೆ ವ್ಯಾಪಾರಿಯ ಮತ್ತು ಕಮೀಷನ್ ಏಜಂಟರ ರೂಪದಲ್ಲಿಯೋ, ಅನಂತರದಲ್ಲಿ ಕೆಲವು ಅಂಶಗಳಲ್ಲಿ ಉದ್ಯೋಗಪತಿಯ ಸ್ವತಂತ್ರ ಅಥವಾ ಭಾಗೀದಾರ ರೂಪದಲ್ಲಿಯೇ ಇವರ ಹಿತಾಸಕ್ತಿಗಳು ವಿದೇಶೀ ಆರ್ಥಿಕ ಹಿತಾಸಕ್ತಿಗಳ ಜೊತೆಗೆ ಗಂಟುಹಾಕಿಕೊಂಡವು. ಈ ವರ್ಗ ದೇಶದ ಆರ್ಥಿಕ ಜೀವನದ ಮೇಲೆ ಅಧಿಕಾರವನ್ನು ಸ್ಥಾಪಿಸಿಕೊಂಡಿವೆ. ಇಂದೂ, ಸಂಖ್ಯೆಯ ದೃಷ್ಟಿಯಿಂದ ಮತ್ತು ದೇಶದ ರಾಷ್ಟ್ರೀಯ ಆದಾಯದ ದೃಷ್ಟಿಯಿಂದ, ಅವರ ಕೊಡುಗೆ ಕಮ್ಮಿಯಾಗಿದ್ದರೂ, ಅವರು ಸಮಾಜದ ಮೇಲೆ ಮತ್ತು ದೇಶದ ಜೀವನದ ಮೇಲೆ ಭಾರೀ ಪ್ರಭಾವ ಬೀರುತ್ತ ಇದ್ದಾರೆ. ಈ ವರ್ಗದ ಆಕಾಂಕ್ಷೆಗಳು ಸುನಿಶ್ಚಿತವಾಗಿವೆ. ಅವು ಬಹುಮಟ್ಟಿಗೆ ತಮ್ಮ ವಿದೇಶೀ ಪ್ರತಿದ್ವಂದ್ವಿಗಳ ಸ್ಥಾನವನ್ನು ಪಡೆದುಕೊಳ್ಳಬಯಸುತ್ತಾರೆ."

"ಪಾಶ್ಚಾತ್ಯ ಅರ್ಥಶಾಸ್ತ್ರದ ಭಾರತೀಯ ವಿದ್ವಾಂಸರೊಂದಿಗೆ ಸಹಜವಾಗಿಯೇ ಅವರ ಚಿಂತನೆಯ ಸಾಮರಸ್ಯ ಏರ್ಪಡುತ್ತದೆ. ಭಾರತದ ಎಲ್ಲ ವಾರ್ತಾಪತ್ರಿಕೆಗಳು, ಅದರಲ್ಲಿಯೂ ಇಂಗ್ಲಿಷ್ ಪತ್ರಿಕೆಗಳು, ಅವರ ಪ್ರಭಾವವಲಯದಲ್ಲಿಯೇ ಇವೆ. ಇವೆಲ್ಲರೂ ಒಂದುಗೂಡಿ ತಿಳಿದೋ ತಿಳಿಯದೆಯೋ ಅವರು ಎಂಥ ಮಾಯಾಜಾಲವನ್ನು ರಚಿಸಿಬಿಡುತ್ತಾರೆ ಎಂದರೆ ಜನಸಾಮಾನ್ಯರು ಅದರಿಂದ ಹೊರಬರಲು ಸಾಧ್ಯವೇ ಆಗುವುದಿಲ್ಲ. ಶೀಘ್ರವಾದ ಪವಾಡ ಸದೃಶವಾದ ಪರಿಣಾಮ ಆಗಬೇಕೆಂದು ಬಯಸುವ ರಾಜಕೀಯ ನೇತಾರರೂ ಈ ಮಾಯಾಜಾಲದೊಂದಿಗೆ ಒಂದಾಗಿಬಿಡುತ್ತಾರೆ.

"....ವಿದೇಶಗಳ ನೆರವು, ವಿದೇಶೀ ತಜ್ಞರ ಅಭಿಪ್ರಾಯಗಳು ಹಾಗೂ ವಿದೇಶೀ ಜೀವನದ ಚಿತ್ತಾಕರ್ಷಕ ಬಾಹ್ಯಸ್ವರೂಪ ಮತ್ತು ಕಡಿಮೆ ಅವಧಿಯಲ್ಲಿ ಏನಾದರೂ ಮಾಡಿ ತೋರಿಸುವ ರಾಜಕೀಯ ಆವಶ್ಯಕತೆಗಳು ಅವರನ್ನು (ರಾಜಕಾರಣಿಗಳನ್ನು)

ಜನಜೀವನದಿಂದ ದೂರಸರಿಸಿ, ಅವರ ಸಮಸ್ಯೆಗಳ ಯಥಾರ್ಥ ಪರಿಶೀಲನೆ ಮಾಡುವುದರಲ್ಲಿ ಅಸಮರ್ಥರನ್ನಾಗಿ ಮಾಡಿಬಿಟ್ಟಿವೆ. ಉಪಾಧ್ಯಾಯರು ಒತ್ತಾಯ ಪೂರ್ವಕವಾಗಿ ಹೀಗೆ ಪ್ರತಿಪಾದಿಸುತ್ತಾರ:. "ಭಾರತದ 'ಸ್ವ'ವನ್ನು ಸಾಕ್ಷಾತ್ಕಾರ ಮಾಡಿಕೊಳ್ಳದೇ ಇದ್ದಲ್ಲಿ ನಾವು ನಮ್ಮ ಸಮಸ್ಯಗಳನ್ನು ಪರಿಹರಿಸಿಕೊಳ್ಳಲಾರೆವು."

ದೀನ್ ದಯಾಳ್ ಉಪಾಧ್ಯಾಯರ ಆರ್ಥಿಕ ಚಿಂತನೆ ಸಮಗ್ರತಾವಾದಿ ಯಾದದ್ದು. ಆರ್ಥಿಕ ದೃಷ್ಟಿಯಿಂದಲೇ ಸಂಪೂರ್ಣ ಮಾನವ ಜೀವನವನ್ನು ನೋಡುವುದನ್ನು ಅವರು ವಿರೋಧಿಸುತ್ತಾರೆ. ಮಾನವೀಯ ಸಾಂಸ್ಕೃತಿಕ ಮೌಲ್ಯಗಳ ದೃಷ್ಟಿಯಿಂದಾಗಿ ಅವರ ಆರ್ಥಿಕ ಚಿಂತನೆ ಆದರ್ಶವಾದಿಯಾದದ್ದು, ಆದರೆ ಆ ಚಿಂತನೆ ಅವ್ಯಾವಹಾರಿಕವಾಗಬಾರದು ಎಂಬ ಕಾರಣಕ್ಕಾಗಿ ಅದರ ಜೊತೆಗೆ ವ್ಯವಹಾರ ವ್ಯವಸ್ಥೆಗಳ ಬಗ್ಗೆ ವಿವೇಚಿಸಲೂ ಪ್ರಯತ್ನ ನಡೆಸಿದ್ದಾರೆ. ಅವರು ಯಾವುದೇ ವಾದವಿಶೇಷಕ್ಕೆ ಕಟ್ಟುನಿಟ್ಟಾಗಿ ಬಂಧಿತರಾಗುವುದಕ್ಕೆ ಬದಲಾಗಿ ಶಾಶ್ವತ ಜೀವನ ಮೌಲ್ಯಗಳ ಬೆಳಕಿನಲ್ಲಿ ಸಮಯಾನುಗುಣವಾಗಿ ಅಗತ್ಯವಾಗುವ ಬದಲಾವಣೆಯ ಬಗ್ಗೆ ಮತ್ತು ಮಾನವೀಯ ವಿವೇಕದ ಬಗ್ಗೆ ವಿಶ್ವಾಸ ವ್ಯಕ್ತ ಪಡಿಸುತ್ತಾರೆ. ತಮ್ಮ 'ಭಾರತೀಯ ಅರ್ಥನೀತಿ: ವಿಕಾಸ ಕೀ ಏಕ್ ದಿಶಾ' ಎಂಬ ಪುಸ್ತಕದ ಬಗ್ಗೆ ಅವರು ಹೀಗೆ ಬರೆದಿದ್ದಾರೆ:

"ಪುಸ್ತಕದ ಹೆಸರೇ ತೋರಿಸಿಕೊಡುವಂತೆ, ಇಲ್ಲಿ ಒಂದು ದಿಕ್ಕಿನೆಡೆಗೆ ಸಂಕೇತವನ್ನಷ್ಟೇ ಮಾಡಲಾಗಿದೆ; ವಿಕಾಸೋನ್ಮುಖ ಭಾರತದ ಸ್ಥೂಲ ರೇಖೆಗಳನ್ನು ಎಳೆಯಲಾಗಿದೆ. ಅನೇಕ ಸಣ್ಣ – ಸಣ್ಣ ರೇಖೆಗಳನ್ನು ಎಣಿಸುವ ಕೆಲಸ ಮತ್ತು ಚಿತ್ರಕ್ಕೆ ಬಣ್ಣ ತುಂಬುವ ಕೆಲಸ ಪ್ರಕೃತಿಯ ಮತ್ತು ಪುರುಷನ ಮೂಲಕವೇ ಪೂರ್ಣವಾಗುತ್ತದೆ. ಇದು ಹೇಗೆ ಹೇಗೆ ಆಗುತ್ತಾ ಬರುತ್ತದೆಯೋ ಹಾಗೆ ಹಾಗೆ ಚಿತ್ರ ಪೂರ್ಣವಾಗುತ್ತ ಹೋಗುತ್ತದೆ. ನಮ್ಮ ಕರ್ತವ್ಯವೇನೆಂದರೆ ನೋಡುಗನ ಉತ್ಸಾಹವನ್ನು ಬದಿಗಿಟ್ಟು ನಿರ್ಮಾಪಕನ ಶ್ರದ್ಧೆ ಮತ್ತು ಪುರುಷಾರ್ಥ ಬಲದ ಮೇಲೆ ಅದರಲ್ಲಿ ತೊಡಗಬೇಕು".

ಇಂದು ಮೂರನೇ ವಿಶ್ವದ ಪ್ರತಿಯೊಂದು ದೇಶವೂ ಪಾಶ್ಯಾತ್ಯ ಅರ್ಥಶಾಸ್ತ್ರದೊಡನೆ ಸಾಗುತ್ತಲಿದೆ. ರಾಜಕೀಯ ಸಾಮ್ರಾಜ್ಯವಾದವೂ ಈಗ ಪ್ರಚ್ಛನ್ನ ಆರ್ಥಿಕ ಸಾಮ್ರಾಜ್ಯವಾದದ ಅಧಿಷ್ಠಾನವನ್ನು ಸ್ವೀಕರಿಸುತ್ತದೆ. ಆಧುನಿಕ ಪಾಶ್ಚಾತ್ಯ ತಂತ್ರಜ್ಞಾನದ ಜೊತೆಗೆ ದಲಿತ ಸಮಾಜದ ಪ್ರತಿಭೆಯನ್ನು ಜೊತೆಜೊತೆಯಾಗಿ ಕೊಂಡೊಯ್ಯುವುದು ಕಷ್ಟಕರವಾದ ಕೆಲಸ. ಇಂದು ಬೇಡವೆಂದರೂ ಮೂರನೇ ವಿಶ್ವದ ದೇಶಗಳು ಸಾಮ್ರಾಜ್ಯವಾದೀ ಅರ್ಥಶಾಸ್ತ್ರದಿಂದ ತಮ್ಮನ್ನು ಮುಕ್ತಗೊಳಿಸಿಲಿಕ್ಕೆ ಆಗುತ್ತಲೇ ಇಲ್ಲ. ತಮ್ಮ ಜನರನ್ನು ಉಪವಾಸದಿಂದ ಸಾಯಿಸಿ ಸಾಮ್ರಾಜ್ಯವಾದಿಗಳಿಗೆ ಮಾರುಕಟ್ಟೆಯನ್ನು ಒದಗಿಸಲು ಅವು ಬದ್ಧವಾಗಿವೆ. ಪಾಶ್ಚಾತ್ಯ ತಂತ್ರಜ್ಞರು ಮತ್ತು



ತಜ್ಞರು ಸ್ವದೇಶೀ ಅರ್ಥವ್ಯವಸ್ಥೆಯ ಮೇಲೆಯೇ ನಿಯಂತ್ರಣವನ್ನು ಸ್ಥಾಪಿಸಿಕೊಳ್ಳುತ್ತಾರೆ. ಕೆಲವು ಸಮೃದ್ಧಿಯ ಕೆಲವು ನೆಲೆಗಳನ್ನು ಉದಾಹರಣೆಯಾಗಿ ನಿಲ್ಲಿಸಿಕೊಳ್ಳುತ್ತಾರೆ. ಸಾಮಾನ್ಯ ಮನುಷ್ಯ ವಿಷಮತೆಗಳಿಗೆ ಒಳಗಾಗಿ ಉಪೇಕ್ಷಿತನಾಗುತ್ತಾನೆ. ನೇತಾರರ ಹಾಗೂ ಮಧ್ಯಮ ವರ್ಗದ ಪ್ರತಿಭೆಯನ್ನುಳ್ಳವರ ಅಲ್ಪಶಿಕ್ಷಿತ ವರ್ಗಕ್ಕೆ ಸೇರಿದವರಲ್ಲಿ ನಿರಂತರವಾಗಿರುವ ಸ್ವಾರ್ಥಗಳನ್ನು ಸಾಮ್ರಾಜ್ಯವಾದಿ ಪಾಶ್ಚಾತ್ಯ ಅರ್ಥಶಾಸ್ತ್ರ ಒಂದು ಹಂತದವರೆಗೆ ಮಾತ್ರವೇ ಪೂರ್ಣಗೊಳಿಸುತ್ತ ಬಂದಿದೆ. ಇದರ ಪರಿಣಾಮವಾಗಿ ಒಂದು ಸಾಂಸ್ಕೃತಿಕ ಅರಾಜಕತೆ, ರಾಜಕೀಯ ಅಸ್ಥಿರತೆ ಮತ್ತು ಆರ್ಥಿಕ ಗುಲಾಮಗಿರಿ ಸೃಷ್ಟಿಯಾಗುತ್ತಲಿವೆ.

ಉಪಾಧ್ಯಾಯರ ಆರ್ಥಿಕ ಚಿಂತನೆ ಮಾನವ–ಪ್ರಧಾನವಾದುದು ಮತ್ತು ಸಮಾಜದ ಪರವಾಗಿ ಇರುವಂಥದು. ಅವರ ಸಾಂಸ್ಕೃತಿಕ ಅರ್ಥಶಾಸ್ತ್ರ ಮನೋರಂಜಕವಾಗಿಯೂ ತೋರುತ್ತದೆ, ಬುದ್ಧಿಗಮ್ಯವೂ ಆಗಿದೆ; ಆದರೆ ಅವರು ಎಣಿಸಿರುವ ನಿಹಿತ ಸ್ವಾರ್ಥಗಳನ್ನು ಸಂಸ್ಕಾರಗಳ ಆಧಾರದ ಮೇಲೆ ನಿಯಂತ್ರಣಗೊಳಿಸಬಹುದೆ? ಪ್ರಜಾತಾಂತ್ರಿಕವಾಗಿ ಮಾನವಾಧಿಕಾರಗಳನ್ನೇ ದುರುಪಯೋಗಪಡಿಸಿಕೊಂಡಿದ್ದರಿಂದಲೇ ಬಂಡವಾಳವಾದ ಹುಟ್ಟುಕೊಂಡಿತು. ಸರ್ಕಾರದ ಮೂಲಕ ಅದಕ್ಕೆ ಕಟ್ಟುಪಾಡುಗಳನ್ನು ವಿಧಿಸಬೇಕೆಂಬ ವಿಚಾರ ಉಪಾಧ್ಯಾಯರಿಗೆ ಒಪ್ಪಿಗೆಯಾಗುತ್ತದೆ. ಆದರೆ, ಮೇಲಿನ ನಿಯಂತ್ರಣವನ್ನು ಅದರ ಸರ್ಕಾರದ ಮತ್ತು ಸಂಸದೀಯ ವ್ಯವಸ್ಥೆಯ ಕಟ್ಟುಪಾಡುಗಳು ಮತ್ತು ಆರ್ಥಿಕವಾದ ನಿಹಿತ ಸ್ವಾರ್ಥಗಳ ನಡುವೆ ಉಂಟಾಗುವಂಥ ಸಂಘರ್ಷದ ಸ್ಥಿತಿಯನ್ನು ಉಪಾಧ್ಯಾಯರು ತಮ್ಮ ಚಿಂತನೆಯಲ್ಲಿ ವರ್ಣಿಸುವುದಿಲ್ಲ. ಅವರ ವಿವೇಚನೆ ಬಹುಮಟ್ಟಿಗೆ ವಿಧಾಯಕ ಸ್ವರೂಪದ್ದಾಗಿದೆ ಮತ್ತು ಸೃಜನಾತ್ಮಕವಾದುದಾಗಿದೆ; ಸಂಘರ್ಷವನ್ನು ಯಾವುದೇ ಚಿಂತನೆಯ ಆಧಾರವನ್ನಾಗಿಸಿಕೊಳ್ಳಲಾಗುವುದಿಲ್ಲ ಎಂಬುದೂ ನಿಜ; ಆದರೆ ಇದರಿಂದ ತಪ್ಪಿಸಿಕೊಳ್ಳುವುದು ವ್ಯಾವಹಾರಿಕವಾಗಿ ಕಷ್ಟಕರವಾಗುತ್ತದೆ. ಇದಕ್ಕೆ ದೀನ್ ದಯಾಳ್ ಉಪಾಧ್ಯಾಯರು ಕೊಡುವ ಉತ್ತರ ಹೀಗಿದೆ: "ಸಂಸ್ಕಾರ, ಶಿಕ್ಷಣ, ಜನಾಭಿಪ್ರಾಯದ ಪರಿಷ್ಕರಣೆ ಮತ್ತು ನಿಯಮ– ಇದೇ ಆ ಲಕ್ಷ್ಮಣ ರೇಖೆ. ಇದೇ ಮಿತಿಯಲ್ಲಿ ನಾವು ಪ್ರಯೋಗ ಮಾಡಿನೋಡಬೇಕು." ಮಾನವನ ಶ್ರೇಷ್ಠತೆಯ ಬಗ್ಗೆ ಅವರಿಗೆ ಅಗಾಧ ವಿಶ್ವಾಸವಿದೆ.

## ಅಧ್ಯಾಯ ೮

# ಏಕಾತ್ಮ ಮಾನವದರ್ಶನದ ದ್ರಷ್ಟಾರರು

ದೀನ್ ದಯಾಳ್ ಉಪಾಧ್ಯಾಯರು ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಮಹಾಪುರುಷರು. ಆ ಸಮಯದಲ್ಲಿ ಅನೇಕ ವಿಚಾರ ಪರಂಪರೆಗಳು ಅತ್ಯಂತ ಪ್ರಖರ ರೀತಿಯಲ್ಲಿ ಪ್ರಚಲಿತವಾಗಿದ್ದುವು. ಹದಿನಾರನೆ ಶತಮಾನದ ಐರೋಪ್ಯ ಪುನರುಜ್ಜೀವನದ ಅನಂತರದ ನಾಲ್ಕು ಶತಮಾನಗಳಲ್ಲಿ ವಿಚಾರಧಾರೆಗಳು ಒಂದು ವೈಶ್ವಿಕ ಆಯಾಮವನ್ನು ಪಡೆದುಕೊಂಡಿದ್ದವು. ಈಗ ನಾವು ಕಾಣುತ್ತಿರುವಂತಹ ವಿಶ್ವ ಯಾವುದೋ ಬಿಡಿಸಲಾರದಂತಹ ಒಗಟಾಗಿ ಉಳಿದಿರಲಿಲ್ಲ. ಸಾಹಸಿಗಳಾದ ವಿಶ್ವಯಾತ್ರಿಗಳು ಭೂ–ಮಂಡಲದ ಪ್ರದಕ್ಷಿಣೆ ಮಾಡಿಬಿಟಿದ್ದರು. ವಿಜ್ಞಾನವಾದ, ಭೌತಿಕವಾದ ಮತ್ತು ಮಾನವವಾದಗಳು ದೇವರ ರಹಸ್ಯಮಯ ಅಸ್ತಿತ್ವಕ್ಕೆ ಸವಾಲು ಹಾಕಿಬಿಟ್ಟಿದ್ದುವು. ರಹಸ್ಯಾತ್ಮಕತೆಗೆ ವಿಜ್ಞಾನ ಪೆಟ್ಟು ನೀಡಿತ್ತು. ಶ್ರದ್ಧೆಯೇ ಮೂಲವಾಗಿದ್ದ ನಂಬಿಕೆಗಳನ್ನು ತರ್ಕವು ಅಲ್ಲಾಡಿಸಿಬಿಟ್ಟಿತ್ತು ಮತ್ತು ಭಗವತ್‌ಕೃಪೆಗೆ ಬದಲಾಗಿ ವಿವೇಕದ ಮೇಲೆ ಹೆಚ್ಚಿನ ಭರವಸೆ ಮೂಡಿಬಿಟ್ಟಿತ್ತು. 'ಥಿಯೋಕ್ರೆಸಿ' ಗೆ ಸವಾಲು ಹಾಕುತ್ತಾ 'ಸೆಕ್ಯುಲರಿಸಮ್', 'ಪ್ರಜಾತಂತ್ರಾತ್ಮಕ ವ್ಯಕ್ತಿವಾದ' ಮತ್ತು 'ಸಮಾಜವಾದ'ದ ಧೋರಣೆಗಳು ಪ್ರಬಲವಾಗಿ ಪರಿಣಮಿಸಿದವು. ಯುರೋಪಿನ ಸ್ವರೂಪವೇ ಬದಲಾಗಿಬಿಟ್ಟಿತ್ತು.

ಭಗವತ್‌ಕೃಪೆ ಮತ್ತು ಭಗವದ್ಭಯದ ಭಾವನೆಗಳಿಂದ ಮುಕ್ತನಾದ ಮಾನವನು, ಪ್ರಾಕೃತ ಮಾನವನು, ಪ್ರಕೃತಿ–ವಿಜಯದ ಮತ್ತು 'ವಿಶ್ವವಿಜಯ'ದ ಅಭಿಯಾನವನ್ನು ಸಂಯೋಜಿಸಿದನು. ಸಾಹಸಪೂರ್ವಕ ಹುಡುಕಾಟದಿಂದ ಕಂಡುಕೊಳ್ಳಲಾದ ಹೊಸಹೊಸ ಭೂ–ಪ್ರದೇಶಗಳ ಮೇಲೆ ಐರೋಪ್ಯ ಸಾವ್ರಾಜ್ಯಗಳು ನಿರ್ಮಾಣಗೊಂಡವು. ಇಪ್ಪತ್ತನೆಯ ಶತಮಾನ ಈ ಸಾಮ್ರಾಜ್ಯಗಳಿಗೆ ಸವಾಲಿನ ಶತಮಾನವೇ ಆಗಿತ್ತು. ರಾಷ್ಟ್ರವಾದ ಸಾಮ್ರಾಜ್ಯವಾದದ ಮೇಲೆ ಪ್ರಹಾರ ಮಾಡುವಂತಹದ್ದಾಗಿದ್ದಿತು.

ಪಶ್ಚಿಮದ ಜ್ಞಾನ–ವಿಜ್ಞಾನ ಪಶ್ಚಿಮದ ಸಾಮ್ರಾಜ್ಯವಾದದ ಮೂಲಕವೇ ಏಷ್ಯಾ ಮತ್ತು ಆಫ್ರಿಕಾದ ಮಹಾದ್ವೀಪಗಳಿಗೆ ತಲುಪಿತು. ಪಶ್ಚಿಮದ ಸಂಪರ್ಕದಿಂದ ಈ ಸಮಾಜಗಳ ಚಿಂತನಧಾರೆ ನಿರ್ಣಾಯಕ ರೂಪದಲ್ಲಿ ಪ್ರಭಾವಿತವಾಗಿತ್ತು; ಆದರೆ



ಏಷ್ಯಾದ ರಾಷ್ಟ್ರವಾದಿ ಮನಸ್ಸು ಪಶ್ಚಿಮದ ಸಾಮ್ರಾಜ್ಯವಾದದ ಜೊತೆ–ಜೊತೆಗೆ ಪಶ್ಚಿಮದ ಜ್ಞಾನದ ಪ್ರಭುತ್ವವನ್ನು ಸ್ವೀಕರಿಸುವುದು ತನ್ನ ಸ್ವಾಭಿಮಾನಕ್ಕೆ ನೀಡಲಾದ ಪೆಟ್ಟು ಎಂದು ಭಾವಿಸಿತ್ತು. ಆದ್ದರಿಂದ ಅದು ಪಶ್ಚಿಮದ ಜ್ಞಾನವನ್ನು ನಿರಾಕರಿಸಿತು. ದೀನ್ ದಯಾಳ್ ಉಪಾಧ್ಯಾಯರು ಭಾರತೀಯ ರಾಷ್ಟ್ರವಾದದ ಈ ಧಾರೆಯ ಒಂದು ಕುಡಿಯೇ ಆಗಿದ್ದರು.

ದೀನ್ ದಯಾಳ್ ಉಪಾಧ್ಯಾಯರದು ಋಷಿ ಸದೃಶ ವ್ಯಕ್ತಿತ್ವವೇ ಆಗಿತ್ತು. ಅವರನ್ನು ಕುರಿತು ಹೇಳಿರುವ ಪೆನ್ಸಿಲ್‌ವೇನಿಯಾ ವಿಶ್ವವಿದ್ಯಾಲಯದ ನಾರ್ಮನ್ ಡಿ. ಪಾಮರ್‌ರವರ ಈ ಸುದೀರ್ಘ ಹೇಳಿಕೆಯನ್ನು ಇಲ್ಲಿ ಉದ್ಧರಿಸುವುದು ಉಚಿತವೆಂದೆನಿಸುತ್ತದೆ:

"ನಾನು ಅವರ ವೈವಿಧ್ಯಪೂರ್ಣ ಬೌದ್ಧಿಕ ಅಭಿರುಚಿಗಳ ತರಹವೇ ಅವರ ಸೌಮ್ಯತೆ ಮತ್ತು ಗಾಂಭೀರ್ಯ, ಅವರ ಶಾಲೀನತೆ, ಅವರ ವಿನಯ, ಅವರ ಪ್ರಖರವಾದ ಆತ್ಮವಿಶ್ವಾಸ ಮತ್ತು ಸಾಮರ್ಥ್ಯ ಮತ್ತು ಅವರ ಭಾವ–ಪ್ರವಣ ಮಾನವೀಯ ಗುಣವತ್ತತೆಗಳಿಂದ ಪ್ರಭಾವಿತನಾಗಿದ್ದೆ.

"ಅವರ ಜೊತೆಗೆ ನಡೆದುಬಂದಂತಹ ನನ್ನ ಅತ್ಯಲ್ಪ ಸಂಪರ್ಕದಲ್ಲೇ ಅವರ ಅನೇಕ ವಿಶೇಷತೆಗಳು ನನ್ನ ಅರಿವಿಗೆ ಬಂದವು. ಅವರ ಗೆಳೆಯರು ಮಾತುಕತೆಗಳ ಸಂದರ್ಭದಲ್ಲಿ ಅವರ ಆ ವಿಶೇಷತೆಗಳನ್ನು ಎತ್ತಿ ಹೇಳುತ್ತಿದ್ದರು. ಅವರ ಸ್ವಭಾವದ ಆ ಲಕ್ಷಣಗಳು ಅವರ ಸಾಮಾನ್ಯ ಸಂಪರ್ಕದಿಂದಲೇ ಗಮನಕ್ಕೆ ಬರುತ್ತಿದ್ದವು. ಅವರು ಅತ್ಯಂತ ದಯಾರ್ದ್ರ ಹೃದಯಿಗಳು ಸೌಮ್ಯ ಸ್ವಭಾವದವರು; ಸರಳತೆಯ ಪ್ರತಿಮೂರ್ತಿಯೇ ಆಗಿದ್ದರು. ಅವರು ಅದ್ಭುತ ನಿರಹಂಕಾರದ ಮತ್ತು ನಿಸ್ವಾರ್ಥತೆಯ ಗುಣಗಳ ಒಡೆಯರಾಗಿದ್ದರು. ಅನುಕರಣೀಯವಾದ ಬಾಳ್ವೆಯನ್ನು ನಡೆಸಿದರು. ಅವರು ಓರ್ವ ಜಿಜ್ಞಾಸು ಓದುಗರೂ, ನಿತ್ಯ ವಿದ್ಯಾರ್ಥಿಯೂ ಆಗಿದ್ದರು. ಅವರು ಸಮರ್ಥ ಸಂಘಟಕರಾಗಿದ್ದರು. ಆದರೆ ಅವರಿಗೆ ರಾಜಕಾರಣಿಯಾಗುವ ಆಸಕ್ತಿ ಇರಲಿಲ್ಲ. ಅವರು ನಿಜವಾದ ಜನತಂತ್ರವಾದಿ ಮತ್ತು ಮೌಲಿಕ ಚಿಂತಕರಾಗಿದ್ದರು. ಅವರು ಆಧುನಿಕ ದೃಷ್ಟಿಯನ್ನುಳ್ಳವರಾಗಿದ್ದರು; ಅವರ ದೃಷ್ಟಿ ಸಮಗ್ರತಾವಾದಿಯಾಗಿತ್ತು. ಒಟ್ಟಿನಲ್ಲಿ ಅವರು ವಿವಿಧ ಆಯಾಮದ ವ್ಯಕ್ತಿತ್ವವುಳ್ಳವರಾಗಿದ್ದರು."

ವಿಶ್ವದ ಮಹಾನ್ ರಾಜಕೀಯ ಚಿಂತಕರಲ್ಲಿ ಒಬ್ಬರೆಂದು ಅವರನ್ನು ಪರಿಗಣಿಸುವ ಪಾಮರ್ ಅವರು ಹೀಗೆಂದು ಹೇಳುತ್ತಾರೆ:

"ದೀನ್ ದಯಾಳ್ ಉಪಾಧ್ಯಾಯರು ಯಾವ ವರ್ಗಕ್ಕೆ ಸೇರಿದ ಚಿಂತಕರಾಗಿದ್ದರೋ ಆ ವರ್ಗದಲ್ಲಿ ವಾಸ್ತವವಾಗಿ ಇಂದಿನ ವಿಶ್ವದಲ್ಲಿಯೇ ಅವರಂಥ ಅತ್ಯಂತ ಶ್ರೇಷ್ಠ ರಾಜಕಾರಣಿಗಳು ಬಹಳ ವಿರಳವಾಗಿದ್ದರು. ಮೌಲಿಕ ರಾಜಕೀಯ ಚಿಂತಕರಾಗಿ ಅವರನ್ನು ಗುರುತಿಸುವುದು ಕ್ರಮೇಣ ಹೆಚ್ಚುತ್ತಾ ಹೋಗಿತ್ತು. ಭಾರತದ

ಒಂದು ದೊಡ್ಡ ರಾಜಕೀಯ ಪಕ್ಷದಲ್ಲಿನ ಅವರ ಸಕ್ರಿಯ ಪಾತ್ರದಲ್ಲಿ ಈ ವೈಶಿಷ್ಟ್ಯ ಅಡಕಗೊಂಡಿತ್ತು. ಇದೇ ನನ್ನನ್ನು ಮೊದಲಿಗೆ ಅವರತ್ತ ಸೆಳೆಯಿತು."

ಆಧುನಿಕ ಮಹಾಪುರುಷರಲ್ಲಿ ವಿವೇಕಾನಂದರು, ತಿಲಕ್ ಮತ್ತು ಅರವಿಂದರು ದೀನ್ ದಯಾಳರ ವಿಚಾರಧಾರೆಗೆ ಹೊಂದುವಂಥವರಾಗಿ ಕಾಣುತ್ತಾರೆ. ಹೆಚ್ಚಾಗಿ ಅಲ್ಲದಿದ್ದರೂ ಗಾಂಧೀ ಮತ್ತು ವಿನೋಬಾ ಅವರ ಮಾತುಗಳನ್ನು ಸ್ವಲ್ಪ ಮಟ್ಟಿಗೆ ಉದ್ಧರಿಸುತ್ತಾರೆ. ಯಾವ ಪುಸ್ತಕದಿಂದ ಅವರು ವಿಶೇಷವಾಗಿ ಉದ್ಧರಿಸುತ್ತಿದ್ದರೋ ಅದು ಬಾಲಗಂಗಾಧರ ತಿಲಕ್ ಸ್ಮಾರಕದ ವತಿಯಿಂದ ಪ್ರಕಟಗೊಂಡಿರುವ 'ದೈಶಿಕ ಶಾಸ್ತ್ರ' ಎಂಬ ಪುಸ್ತಕವೇ ಆಗಿತ್ತು. ಅದು ವೈದಿಕ ಸಾಹಿತ್ಯದವರೆಗಿನ ಸಾಮಾಜಿಕ ವಿಚಾರಧಾರೆಯನ್ನು ಸಂಕಲಿತರೂಪದಲ್ಲಿ ವ್ಯಾಖ್ಯಾನಿಸುತ್ತದೆ. ಈ ಪುಸ್ತಕವನ್ನು ಕುರಿತು ಉಪಾಧ್ಯಾಯರು ಹೀಗೆಂದು ಬರೆದಿದ್ದಾರೆ:

"ಭೌತಿಕ ಕ್ಷೇತ್ರಕ್ಕೂ ಭಾರತದ ಪ್ರಾಚೀನ ಚಿಂತನೆ ಬಹಳಷ್ಟು ಕಾಣಿಕೆಯನ್ನು ಕೊಡಬಲ್ಲದು ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡುವುದು ಬಹಳ ಅಗತ್ಯವಾಗಿದೆ. ಇಂದಿಗೆ ನಲವತ್ತು ವರ್ಷಗಳ ಹಿಂದೆ, ಒಬ್ಬ ತಪಃಪೂತ ತತ್ತ್ವದರ್ಶಿ ಮಹಾತ್ಮಾರಾದ ಶ್ರೀ ೧೦೮ ಸೋಮ್ವಾರೀ ಬಾಬಾಜೀ ಮಹಾರಾಜರಿಂದ ಈ ಸಿದ್ಧಾಂತಗಳ ಅರಿವನ್ನು ಪಡೆದುಕೊಂಡು, ದಿವಂಗತ ಶ್ರಿ ಬದ್ರೀಶಾಹ್ ಟುಲ್‌ಧಾರಿಯಾರವರು 'ದೈಶಿಕ ಶಾಸ್ತ್ರ' ಎಂಬ ಹೆಸರಿನಲ್ಲಿ ಒಂದು ಪುಸ್ತಕವನ್ನು ಪ್ರಕಟಿಸಿದರು. ಲೋಕಮಾನ್ಯ ತಿಲಕ್‌ರ 'ಕರ್ಮಯೋಗ ಶಾಸ್ತ್ರ' ದಿಂದ ಆ ಪುಸ್ತಕಕ್ಕೆ ಪ್ರೇರಣೆ ದೊರಕಿತ್ತು. 'ಗೀತೆ'ಯ ಆಧಾರದ ಮೇಲೆ ಕರ್ಮಯೋಗದ ಪ್ರತಿಪಾದನೆ ಮಾಡಿ, ಲೋಕಮಾನ್ಯರು ಭಾರತದ ಆಧ್ಯಾತ್ಮಿಕತೆಯನ್ನು ನಿವೃತ್ತಿಯಿಂದ ಪ್ರವೃತ್ತಿಯ ಕ್ಷೇತ್ರಕ್ಕೆ ಎಳೆದುಕೊಂಡುಬಂದರು. ಭಾರತೀಯ ಸಂಸ್ಕೃತಿಯ ಸತ್ಯಪೂರ್ಣ ತತ್ವಗಳನ್ನು ಹಿಮಾಲಯದ ಕಂದರಗಳಿಂದ ತೆಗೆದು ಜೀವನದ ನಾಲ್ಕು ರಸ್ತೆಗಳ ವೃತ್ತದ ಮಧ್ಯೆ ತಂದು ನಿಲ್ಲಿಸಿದರು."

"ದೈಶಿಕ ಶಾಸ್ತ್ರದಲ್ಲಿ ......ರಾಷ್ಟ್ರದ ವ್ಯವಹಾರ ಸಂಹಿತೆಯ ಮೌಲಿಕ ಸಿದ್ಧಾಂತಗಳನ್ನು ಕುರಿತಂತೆ ವಿವೇಚನೆ ಮಾಡಲಾಗಿದೆ. ಲೋಕಮಾನ್ಯರು ಸ್ವತಃ ಆ ಪುಸ್ತಕದ ಹಸ್ತಪ್ರತಿಯ ಬಗ್ಗೆ ಮತ್ತು ವಿಷಯದ ವಿವೇಚನೆಯ ಬಗ್ಗೆ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದರು. 'ಕರ್ಮಯೋಗ ಶಾಸ್ತ್ರ' ಮತ್ತು 'ದೈಶಿಕ ಶಾಸ್ತ್ರ'–ಇವು ಎರಡೂ ಒಂದಕ್ಕೊಂದು ಪೂರಕವಾಗಿರುವ ಗ್ರಂಥಗಳೆಂದು ಹೇಳಬಹುದಾಗಿದೆ. ರಾಷ್ಟ್ರದ ನಿರ್ಮಾಣದಲ್ಲಿ ತೊಡಗಿರುವಂತಹ ಪ್ರತಿಯೊಬ್ಬ ವ್ಯಕ್ತಿಯೂ ಈ ಎರಡೂ ಗ್ರಂಥಗಳನ್ನು ಅಧ್ಯಯನ ಮಾಡುವುದು ಅಗತ್ಯ".

ಉಪಾಧ್ಯಾಯರು ಸುಮಾರು ಎರಡು ದಶಕಗಳ ಅಧ್ಯಯನ ಮತ್ತು ಅನುಭವದ ಅನಂತರ ತಮ್ಮ ವಿಚಾರಧಾರೆಯನ್ನು 'ಏಕಾತ್ಮಮಾನವವಾದ' ಅಥವಾ ಏಕಾತ್ಮಮಾನವದರ್ಶನದ ಹೆಸರಿನಲ್ಲಿ, 'ಭಾರತೀಯ ಜನಸಂಘದ ಸಿದ್ಧಾಂತಗಳು



ಮತ್ತು ನೀತಿ' ಎಂಬ ಪ್ರಲೇಖನದಲ್ಲಿ ಉದ್ಘೋಷಿಸಿದರು. ಅದರ ಪ್ರಸ್ತಾವನೆಯಲ್ಲಿ ಶಂಕರಾಚಾರ್ಯರ ಮತ್ತು ಚಾಣಕ್ಯರನ್ನು ಸ್ಮರಿಸುತ್ತಾ ಅವರು ಹೀಗೆಂದು ಹೇಳಿದ್ದಾರೆ:

"ಭಾರತದ ಇತಿಹಾಸದಲ್ಲಿ ಕ್ರಾಂತಿಯನ್ನು ತಂದಿರುವಂತಹ ಇಬ್ಬರು ಪುರುಷರ ಹೆಸರು ಇಂದು ನೆನಪಿಗೆ ಬರುತ್ತಿದೆ. ಒಬ್ಬರು, ಜಗದ್ಗುರು ಶಂಕರಾಚಾರ್ಯರು; ಸನಾತನ ಬೌದ್ಧಿಕ ಧರ್ಮದ ಸಂದೇಶವನ್ನು ಹೊತ್ತು ದೇಶದಲ್ಲಿ ಆವರಿಸಿಕೊಂಡಿದ್ದ ಅನಾಚಾರವನ್ನು ಕೊನೆಗಾಣಿಸಲು ಅವರು ಹೊರಟಿದ್ದರು. ಮತ್ತೊಬ್ಬರು ಅರ್ಥಶಾಸ್ತ್ರದ ಸಿದ್ಧಾಂತಗಳ ಉತ್ತರದಾಯಿತ್ವವನ್ನು ಹೊತ್ತು ಗಣರಾಜ್ಯಗಳಲ್ಲಿ (Republics) ಹರಡಿದ್ದಂತಹ ರಾಷ್ಟ್ರೀಯ ಶಕ್ತಿಯನ್ನು ಒಟ್ಟುಗೂಡಿಸಿ ಸಾಮ್ರಾಜ್ಯ ಸ್ಥಾಪನೆ ಮಾಡಲು ಹೊರಟಿದ್ದ ಚಾಣಕ್ಯರು. ಈ ಪ್ರಾರೂಪವನ್ನು ಪ್ರಸ್ತುತಪಡಿಸುವಾಗ, ಅದೇ ತರಹದ ಮೂರನೇ ಮಹತ್ವಪೂರ್ಣ ಪ್ರಸಂಗ ಇಂದು ಬಂದಿದೆ. ವಿದೇಶೀ ಧೋರಣೆಗಳ ಪ್ರತಿಬಿಂಬವನ್ನು ಆಧರಿಸಿರುವಂಥ ಮಾನವ ಸಂಬಂಧಿ ಅಪೂರ್ಣ ಮತ್ತು ಅಪುಷ್ಟ ಚಿಂತನೆಗಳಿಗೆ ಪ್ರತಿಯಾಗಿ ವಿಶುದ್ಧ ಭಾರತೀಯ ಚಿಂತನೆಗಳನ್ನೇ ಆಧರಿಸಿದ ಮಾನವ ಕಲ್ಯಾಣದ ಸಂಪೂರ್ಣ ಚಿಂತನೆಯನ್ನು ಒಳಗೊಂಡಿದ್ದು 'ಏಕಾತ್ಮ ಮಾನವವಾದ'ದ ರೂಪದಲ್ಲಿ ಸುಪುಷ್ಟ ಭಾರತೀಯ ದೃಷ್ಟಿಕೋನವನ್ನು ಹೊಸ ರೂಪದಲ್ಲಿ ಸೂತ್ರಬದ್ಧಗೊಳಿಸುವ ಕೆಲಸವನ್ನು ನಾವು ಪ್ರಾರಂಭಿಸುತ್ತಿದ್ದೇವೆ."

ದೀನ್ ದಯಾಳ್ ಉಪಾಧ್ಯಾಯರು ಭಾರತೀಯ ಚಿಂತನೆ ಪರಂಪರೆಯಲ್ಲಿ ಶಂಕರರ ವೇದಾಂತ, ಕೌಟಿಲ್ಯನ 'ಅರ್ಥಶಾಸ್ತ್ರ' ಮತ್ತು ತಾವೇ ನಿರೂಪಿಸಿದ 'ಏಕಾತ್ಮಮಾನವದರ್ಶನ'ದ ಒಂದು ಹೊಸ 'ಪ್ರಸ್ಥಾನತ್ರಯಿ'ಯನ್ನು ಸ್ಥಾಪಿಸಿದರು.

ಪ್ರಾಚೀನ 'ಪ್ರಸ್ಥಾನತ್ರಯಿ'ಯ ಅಡಿಯಲ್ಲಿ ಹನ್ನೊಂದು ಉಪನಿಷತ್‌ಗಳು, ಶ್ರೀಮದ್ಭಗವದ್ಗೀತೆ ಮತ್ತು ವ್ಯಾಸಕೃತ 'ಬ್ರಹ್ಮಸೂತ್ರ' ಇವುಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಪಕ್ಷನಿಷ್ಠವಾದ ಮತ್ತು ತಾತ್ಕಾಲಿಕತೆಯ ಮಿತಿಗಳಿಂದ ಮುಕ್ತವಾಗಿರುವಂಥ ಚಿಂತನೆಯನ್ನು ಪ್ರಸ್ತುತಪಡಿಸುವ ಅವಕಾಶ ದೀನ್‌ದಯಾಳ್ ಉಪಾಧ್ಯಾಯರಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ವಾರ್ಷಿಕ ಸಂಘ–ಶಿಕ್ಷಾ ತರಗತಿಗಳಲ್ಲಿ ದೊರೆಯುತ್ತಿತ್ತು. ಈ ತರಗತಿಗಳಿಗೆ ಬೋಧಿಸುವ ಸಂದರ್ಭದಲ್ಲಿ ಅವರ ದಾರ್ಶನಿಕ ಧೋರಣೆಗಳು ಕ್ರಮೇಣ ಪರಿಪಕ್ವಗೊಳ್ಳುತ್ತ ಬಂದವು. ಭಾರತೀಯ ಜನಸಂಘದ ಕಾರ್ಯಕರ್ತರ ಬೋಧನೆಯ ತರಗತಿಗಳನ್ನೂ ಅವರು ಈ ದೃಷ್ಟಿಯಿಂದ ಉಪಯೋಗಿಸಿಕೊಳ್ಳುತ್ತಿದ್ದರು. ಈ ಬೋಧನ ತರಗತಿಗಳ ಮೂಲಕ ಪರಿಪಕ್ವವಾದ ಅವರ ವಿಚಾರ ದರ್ಶನ ಸ್ವಲ್ಪ ಮಟ್ಟಿನ ಕ್ರಮಬದ್ಧತೆಯೊಂದಿಗೆ ಎರಡು ಸಂದರ್ಭಗಳಲ್ಲಿ ಪ್ರಕಟಗೊಂಡಿತು. ಮೊದಲನೆಯದಾಗಿ ಆಗಸ್ಟ್ ೧೧ ರಿಂದ ಆಗಸ್ಟ್ ೧೫, ೧೯೬೪ ರವರೆಗೆ ನಡೆದ ಭಾರತೀಯ ಜನಸಂಘದ ತರಬೇತಿ ಶಿಬಿರ. ಇದು ಗ್ವಾಲಿಯರ್‌ನಲ್ಲಿ

ನಡೆಯಿತು. ಅದರಲ್ಲಿ ಉಪಾಧ್ಯಾಯರು ಭಾರತೀಯ ಜನಸಂಘದ 'ಸಿದ್ಧಾಂತ ಮತ್ತು ನೀತಿ' ಎಂಬ ಪುಸ್ತಕದ ಪ್ರಾರೂಪವನ್ನು ಪ್ರಸ್ತುತಪಡಿಸಿದರು. ಎರಡನೆಯದಾಗಿ, ೨೨ ರಿಂದ ೨೫ ಏಪ್ರಿಲ್, ೧೯೬೫ರವರೆಗೆ ಮುಂಬಯಿಯಲ್ಲಿ ದೀನ್‌ದಯಾಳ್ ಉಪಾಧ್ಯಾಯರು ತಮ್ಮ 'ಏಕಾತ್ಮ ಮಾನವವಾದ' ಚಿಂತನೆಯ ಬಗ್ಗೆ ಸತತವಾಗಿ ನಾಲ್ಕು ಭಾಷಣವನ್ನು ಮಾಡಿದರು. ಆದರೆ, ಅವರ ಈ ದರ್ಶನದ ಬಹಳಷ್ಟು ಭಾಗ ಸಂಘದ ಬೋಧನ ತರಗತಿಗಳ ಬೌದ್ಧಿಕ ಚಿಂತನೆಗಳಲ್ಲಿ ಸೇರಿಹೋಗಿದ್ದು, ಅದು ಸುಮಾರು ೨೦ ವರ್ಷಗಳ ಕಾಲ ಅವರು ಮಾಡಿದ ಭಾಷಣಗಳಲ್ಲಿ ಚದುರಿಹೋಗಿದೆ, ಇದರ ಬಹುತೇಕ ಭಾಗ ದೊರಕಿಯೇ ಇಲ್ಲ.

ಭಾರತೀಯ ಸ್ವಾತಂತ್ರ್ಯದ ಬಳಿಕ ದೇಶದಲ್ಲಿ ಆವರಿಸಿಕೊಂಡಿದ್ದ ವೈಚಾರಿಕ ಪರಾವಲಂಬನೆಯ ನೋವು ಅವರ ಮಟ್ಟಿಗೆ ಅಸಹನೀಯವಾಗಿ ಪರಿಣಮಿಸಿತ್ತು. ಇದೇ ನೋವಿನಲ್ಲಿ ಅವರ ಚಿಂತನೆ ಅರಳಿತ್ತು. ಈ ಸಂದರ್ಭದಲ್ಲಿ ತಮ್ಮ ತೀವ್ರ ಅನುಭೂತಿಗಳನ್ನು ವ್ಯಕ್ತಪಡಿಸುತ್ತ ಅವರು ತಮ್ಮ 'ಸಿದ್ಧಾಂತ ಮತ್ತು ನೀತಿ' ಎಂಬ ಲೇಖನದಲ್ಲಿ ಹೀಗೆಂದು ದಾಖಲಿಸಿದ್ದಾರೆ: "ರಾಷ್ಟ್ರ ಸುನಿಶ್ಚಿತವಾದ ಮತ್ತು ಸುನಿಯೋಜಿತವಾದ ದಿಕ್ಕಿನಲ್ಲಿ ಮುಂದುವರಿಯುವ ಬದಲು, ಆಳುವವರು ಮತ್ತು ಆಳ್ವಿಕೆಗೆ ಒಳಗಾದವರು ಎಂಬ ವಿಭ್ರಮ ಮತ್ತು ವಿರಕ್ತಿಗಳ ಬಲಿಪಶುವಾಗಿ, ಕಿಂಕರ್ತವ್ಯ ವಿಮೂಢನಾಗಿ, ಪ್ರವಾಹದಲ್ಲಿ ಸಿಲುಕಿಕೊಂಡು ಕೊಚ್ಚಿಹೋಗುತ್ತಿರುವಂತೆ ಕಾಣುತ್ತಿದೆ. ಆಸ್ಥೆ ಮತ್ತು ಆತ್ಮವಿಶ್ವಾಸಗಳ ಕೊರತೆಯ ಈ ಸ್ಥಿತಿ ರಾಷ್ಟ್ರದ ಅಸ್ತಿತ್ವಕ್ಕೆ ಮತ್ತು ಅಸ್ಮಿತೆಗೆ ಸಂಕಟಕರವಾದುದೂ ಅಶೋಭನೀಯವಾದುದೂ ಆಗಿದೆ. ಇದನ್ನು ಬದಲಾಯಿಸಿ, ದೇಶದ ಪುರುಷಾರ್ಥವನ್ನು ಎಚ್ಚರಗೊಳಿಸಬೇಕಾಗಿದೆ.

"ಇಂದಿನ ಪರಿಸ್ಥಿತಿಗೆ ಎಲ್ಲಕ್ಕಿಂತಲೂ ಮುಖ್ಯವಾದ ಕಾರಣವೆಂದರೆ ರಾಷ್ಟ್ರ ಜೀವನದ ಹಿರಿಮೆಯನ್ನು ಕಂಡುಕೊಳ್ಳದೆ, ಅದರ ಮೇಲೆ ವಿದೇಶಿಯವಾದ ಮತ್ತು ವಿಜಾತೀಯವಾದ ವಿಚಾರಧಾರೆಗಳನ್ನು ಮತ್ತು ಜೀವನ ಮೌಲ್ಯಗಳನ್ನು ಬಲವಂತವಾಗಿ ಹೇರುವ ಪ್ರಯತ್ನ ನಡೆಯುತ್ತಿದೆ; ಶೀಘ್ರವಾಗಿ ಉನ್ನತಿಯನ್ನು ಸಾಧಿಸಬೇಕೆಂಬ ಕಾತುರತೆಯಲ್ಲಿ ಕಣ್ಣು ಮುಚ್ಚಿ ಬೇರೆ ದೇಶಗಳನ್ನು ಅನುಕರಿಸುತ್ತಿದೆ; ಮತ್ತು 'ಸ್ವಂತಿಕೆ'ಯನ್ನು ತಿರಸ್ಕರಿಸುವ ಪ್ರವೃತ್ತಿ ಹುಟ್ಟಿಕೊಂಡಿದೆ. ಇದರಿಂದಾಗಿ ರಾಷ್ಟ್ರ ಮಾನಸದಲ್ಲಿ ಒಂದು ಬಗೆಯ ನೈರಾಶ್ಯಭಾವ ಮನೆ ಮಾಡಿಕೊಂಡು ಬಿಟ್ಟಿದೆ."

ಈ ನೈರಾಶ್ಯಭಾವವೇ ಒಂದು ಸವಾಲಾಗಿ ಪರಿಣಮಿಸಿತು. ಅದು ದೀನ್ ದಯಾಳ್‌ರಲ್ಲಿ ಅಡಗಿದ್ದ ದಾರ್ಶನಿಕನನ್ನು ಬಡಿದೆಬ್ಬಿಸಿತು. ಮಾನವೀಯ ಜೀವನದ ಯಾವ ಸವಾಲುಗಳನ್ನು ದೀನ್ ದಯಾಳ್ ಉಪಾಧ್ಯಾಯರು ತಮ್ಮ ದರ್ಶನದ ಹಿನ್ನೆಲೆಯಲ್ಲಿ ಅನುಭವಿಸಿದರೋ ಅವುಗಳ ಬಗ್ಗೆ ಉಲ್ಲೇಖ ಮಾಡುತ್ತ, ಅವರು



ತಮ್ಮ ಆಲೋಚನಾತ್ಮಕ ಸಹಚರಣರಾದ ದತ್ತೋಪಂತ್ ಠೇಂಗಡೀ ಹೀಗೆಂದು ಬರೆದಿದ್ದಾರೆ:

"ಇಂದು ಮಾನವನ ಮುಂದೆ ಅನೇಕ ಮೂಲಭೂತ ಮತ್ತು ವಿಸ್ಮಯಕಾರಿ ಸಮಸ್ಯೆಗಳು ಕಾಣಿಸಿಕೊಂಡಿವೆ. ಉದಾಹರಣೆಗೆ :

* ವೈಯುಕ್ತಿಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ಶಿಸ್ತು;
* ವೈಯಕ್ತಿಕ ವಿಕಾಸದ ಪ್ರೇರಣೆ ಮತ್ತು ಸಾಮಾಜಿಕ ಸಮಾನತೆಯ ಆಗ್ರಹ;
* ಆರ್ಥಿಕ ವಿಕಾಸ ಮತ್ತು ಸಾಮಾಜಿಕ ನ್ಯಾಯ;
* ಮೂಲಭೂತ ಜೈವಿಕ ಏಕತೆ ಮತ್ತು ಎದ್ದು ಕಾಣುವ ವಿಭಿನ್ನತೆ;
* ರಾಜ್ಯಾಧಿಕಾರ ಮತ್ತು ಔದ್ಯೋಗಿಕ ಮತ್ತು ನಾಗರಿಕ ಸ್ವಯಮಾಡಳಿತ;
* ಔಪಚಾರಿಕ ವ್ಯವಸ್ಥೆ ಮತ್ತು ಅನೌಪಚಾರಿಕ ಸಹಜತೆ;
* ಸಾಮಾಜಿಕ ವ್ಯವಸ್ಥೆ ಮತ್ತು ಆಡಳಿತ ವಿಹೀನತೆ;
* ಆತ್ಮಸಂಯಮ ಮತ್ತು ಆತ್ಮ ಪ್ರಕಾಶನ;
* ವಿವೇಕೀಕರಣ ಮತ್ತು ಬುದ್ಧಿ–ಮರ್ಯಾದೆ ಮತ್ತು ಚೈತನ್ಯ;
* ಭೌತಿಕ ಅಗ್ರತೆ ಮತ್ತು ಆಧ್ಯಾತ್ಮಿಕ ಉತ್ತೋಲನ;
* ವಿಶೇಷಜ್ಞ ಮತ್ತು ಸಮಗ್ರ ದೃಷ್ಟಿ;
* ರಾಷ್ಟ್ರೀಯ ಸ್ವಾವಲಂಬನೆ ಮತ್ತು ಅಂತರರಾಷ್ಟ್ರೀಯ ಸಹಕಾರ;
* ಸ್ವೇಚ್ಛಾಚಾರ ಮುಕ್ತ ಸ್ವಾತಂತ್ರ್ಯ.
* ಇವುಗಳ ನಡುವೆ ಸಾಮಂಜಸ್ಯವನ್ನು ಸ್ಥಾಪಿಸುವುದು ಹೇಗೆ?

**ಪುನಃ ಹೇಗೆ ಸುನಿಶ್ಚಿತ ಮಾಡುವುದು:**

* ಸೈನಿಕೀಕರಣವಿಲ್ಲದ ಶಿಸ್ತು.
* ವಿಶೇಷಾಧಿಕಾರವಿಲ್ಲದ ಪ್ರತಿಷ್ಠೆ.
* ಏಕರೂಪತೆ ಇಲ್ಲದ ಏಕತೆ.
* ಮುಂದೆ ಸಾಗುವಿಕೆಗೆ ಅಡ್ಡಿಯಾಗದಂಥ ಏಕತೆ.
* ಅಪಾಯ ದೂರವಾದ ಮುನ್ನಡೆ.
* ಸತ್ತಾಮುಕ್ತ ರಾಜ್ಯಾಧಿಕಾರ.
* ಮಾನವೀಯತೆಗೆ ಕ್ಷತಿಯನ್ನುಂಟುಮಾಡದಿರವಂಥ ಔದ್ಯೋಗಿಕ ಪ್ರಗತಿ.
* ಸುಪ್ರತಿಷ್ಠಿತವಾಗಿಲ್ಲದಿರುವಂಥ, ಭೌತಿಕತಾವಾದದಿಂದ ದೂರವಾಗಿರುವಂಥ ಅನುಲಂಬನೆಯ ಸಮಾಜ ವ್ಯವಸ್ಥೆ.
* ಅತಿ ಕೇಂದ್ರಿತವಾಗಿಲ್ಲದಿರುವಂಥ ಮಾನವವಾದ.
* ಇವನ್ನು ಸುನಿಶ್ಚಿತಗೊಳಿಸುವುದಾದರೂ ಹೇಗೆ?

ರಾಷ್ಟ್ರೀಯ ನೆಲೆಗಳಲ್ಲಿಯೂ ಭಯಂಕರವಾಗಿರುವ ಮತ್ತು ಸವಾಲು ಎಂಬಂತಿರುವ ಅನೇಕ ಸಮಸ್ಯೆಗಳು ಇವೆ. ಉದಾಹರಣೆಗೆ :

**ಇವುಗಳ ನಡುವೆ ಸಾಮಂಜ್ಯವನ್ನು ಸ್ಥಾಪಿಸಿಕೊಳ್ಳುವುದಾದರೂ ಹೇಗೆ?**

* ಇಂದಿನ ಆಧುನಿಕ ತಂತ್ರಜ್ಞಾನ ಮತ್ತು ಉದ್ಯೋಗ ಅವಕಾಶಗಳ ವೃದ್ಧಿ
* ವಿಕೇಂದ್ರೀಕೃತ ಉತ್ಪಾದನೆಯ ಪ್ರಕ್ರಿಯೆ ಮತ್ತು ಉತ್ಪಾದನ ಸಾಮರ್ಥ್ಯದ ಅಭಿವೃದ್ಧಿ
* ರಾಷ್ಟ್ರೀಕರಣದ ಪ್ರಗತಿ ಮತ್ತು ಸಾಂಸ್ಕೃತಿಕ ಹಿನ್ನೆಲೆ;
* ಸ್ಥಳೀಯ ನೆಲೆಯಲ್ಲಿ ಕಿರು (Micro) ಅಭಿಯೋಜನೆಗಳು ಮತ್ತು ರಾಷ್ಟ್ರೀಯ ನೆಲೆಯಲ್ಲಿ ಬೃಹದ್ (Macro) ಯೋಜನೆಗಳು.
* ತನ್ನದೇ ಆದ ಒಂದು ಪ್ರತ್ಯೇಕ ಅನನ್ಯತೆಯನ್ನು ಕಾಪಾಡಿಕೊಂಡು ಬರುವಿಕೆ ಮತ್ತು ನಮ್ಮ ನೈಸರ್ಗಿಕ ಜನಸಮುದಾಯಗಳ ಏಕಾತ್ಮಕತೆ
* ಭಾರತೀಯ ಜೀವನ–ಮೌಲ್ಯಗಳು ಮತ್ತು ಆಧುನಿಕ ವೈಜ್ಞಾನಿಕ ಮತ್ತು ತಾಂತ್ರಿಕ ಶ್ರೇಷ್ಠತೆ
* ಯುಗಧರ್ಮ ಮತ್ತು ಸನಾತನ ಧರ್ಮ
* **ಇವುಗಳನ್ನು ಸಾಧಿಸುವುದಾದರೂ ಹೇಗೆ?**
* ವಿಭಿನ್ನ ರಾಷ್ಟ್ರೀಯ ಸಂಸ್ಕೃತಿಗಳ ಉನ್ನಯನ ಮತ್ತು ಸಹಯೋಗದ ಆಧಾರದ ಮೇಲೆ ಸಮೃದ್ಧವಾಗುವುದು ಹಾಗೂ ವಿಕಸಿತವಾಗುವುದು.
* ವಿಶ್ವರಾಜ್ಯ ಭೌತಿಕವಾದವೂ ಸೇರಿದಂತೆ, ಎಲ್ಲ ಪಂಥಗಳು ಪೂರ್ಣವಾಗಿ ಸಮೃದ್ಧಗೊಳ್ಳುವಂಥ ಮತ್ತು ವಿಕಾಸಗೊಳ್ಳಲು ಸಾಧ್ಯವಾಗುವಂಥ ಮಾನವಧರ್ಮ.

'ಭಾರತೀಯತ್ವ' ದ ಆಧಾರವಿಲ್ಲದೆ ಈ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವುದು ಸಾಧ್ಯವಿಲ್ಲ ಎಂಬುದು ಪಂಡಿತ್ ದೀನ್ ದಯಾಳರ ದೃಢವಾದ ವಿಶ್ವಾಸವಾಗಿತ್ತು.

ಈ ಪ್ರಶ್ನೆ ದೀನ್ ದಯಾಳ್ ಉಪಾಧ್ಯಾಯರ ಕಾಲದಲ್ಲಿ ಎಷ್ಟು ಜ್ವಲಂತವಾಗಿ ಇದ್ದಿತೋ ಇಂದೂ ಅಷ್ಟೇ ಜ್ವಲಂತವಾಗಿ ಇದೆ. ಸಂಕ್ಷೇಪವಾಗಿ ನಾವು ಈ ಪ್ರಶ್ನೆಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದಾಗಿದೆ. ಮೊದಲನೆಯದಾಗಿ, ಪ್ರಕೃತಿಜನ್ಯ ವಿರೋಧಭಾಸಗಳಲ್ಲಿ ಸಾಮಂಜಸ್ಯವನ್ನು ಸ್ಥಾಪಿಸುವ ಸಮಸ್ಯೆ; ಎರಡನೆಯದಾಗಿ, ಸಮಾಜಶಾಸ್ತ್ರದ ವಿಕೃತಿಗಳಿಂದ ಮುಕ್ತವಾಗಿರುವಂಥ ಮಾನವೀಯ ವ್ಯವಸ್ಥೆಯನ್ನು ಸುನಿಶ್ಚಿತ ರೂಪದಲ್ಲಿ ನೆಲೆಗೊಳಿಸುವ ಸಮಸ್ಯೆ; ಮೂರನೆಯದು, ಭಾರತೀಯ ಸನ್ನಿವೇಶದಲ್ಲಿ ಅಂತರ್ನಿಹಿತವಾಗಿರುವಂಥ ವಿರೋಧಾಭಾಸಗಳ ಸಮಸ್ಯೆ, ಮತ್ತು ನಾಲ್ಕನೆಯದಾಗಿ, 'ವಿಶ್ವರಾಜ್ಯ'ದ ಮತ್ತು 'ಮಾನವಧರ್ಮ'ದ ಸ್ಥಾಪನೆಯ ಸಮಸ್ಯೆಗಳು.



ಈ ಪ್ರಶ್ನೆಗಳು ಇಂದು ಸವಾಲುಗಳಾಗಿ ಮಾನವನ ಎದುರಿಗೆ ನಿಂತಿವೆ. ಈ ಸವಾಲೇ ದೀನ್ ದಯಾಳ್ ಉಪಾಧ್ಯಾಯರ ವೈಚಾರಿಕ ಅವಧಾರಣೆಗೆ ಹಿನ್ನೆಲೆಯಾಗಿ ಪರಿಣಮಿಸಿತು. ಈ ಸಮಸ್ಯೆಗಳ ಪರಿಹಾರಕ್ಕಾಗಿಯೇ ಉಪಾಧ್ಯಾಯರು ಚಿಂತನೆಯನ್ನು ಪ್ರಾರಂಭ ಮಾಡಿದರು. ಈ ಸವಾಲುಗಳು ಒಂದು ರೀತಿಯಲ್ಲಿ ಆ ರೋಗದ ಲಕ್ಷಣಗಳೇ ಆಗಿದೆ. ಪರಿಹಾರಕ್ಕಾಗಿ ದೀನ್ ದಯಾಳ್ ಉಪಾಧ್ಯಾಯರು 'ಏಕಾತ್ಮ ಮಾನವವಾದ'ದ ದಾರ್ಶನಿಕ ವಿಚಾರಧಾರೆಯನ್ನು ಮುಂದಿರಿಸಿದರು.

ಭಾರತೀಯ ದರ್ಶನದ ಆಧಾರದ ಮೇಲೆ ಈ ಸವಾಲುಗಳನ್ನು ಎದುರಿಸಬಹುದಾಗಿದೆ. ಉಪಾಧ್ಯಾಯರ ಈ ನಂಬಿಕೆಯ ಕಾರಣವನ್ನು ಸ್ಪಷ್ಟಪಡಿಸುತ್ತಾ ಡಾ. ಮುರುಳಿ ಮನೋಹರ ಜೋಷಿ ತಮ್ಮ ಒಂದು ಪ್ರಲೇಖನದಲ್ಲಿ ಹೀಗೆಂದು ಹೇಳಿದ್ದಾರೆ:

"ಭಾರತೀಯ ಸಂಸ್ಕೃತಿಯ ಸಾರ ಬ್ರಹ್ಮಾಂಡದಲ್ಲಿ ಬೀಡುಬಿಟ್ಟಿರುವ ವಿವಿಧತೆಯಲ್ಲಿ ಮೂಲಭೂತ ಏಕತೆಯನ್ನು ಅಂಗೀಕರಿಸುತ್ತದೆ. ಅತಿ ಪ್ರಾಚೀನ ಕಾಲದಲ್ಲಿ ಭಾರತೀಯ ಋಷಿ–ಮುನಿಗಳು 'ಯತ್ ಪಿಂಡೇ ತತ್ ಬ್ರಹ್ಮಾಂಡೇ' ಸಿದ್ಧಾಂತವನ್ನು ಪ್ರತಿಪಾದಿಸಿದ್ದರು. ಯಾವುದು 'ಸಂಪೂರ್ಣ'ದಲ್ಲಿ ಇದೆಯೋ, ಅದೇ ಅದರ 'ಅಂಶ'ದಲ್ಲಿಯೂ ಇದೆ. ಅಂದರೆ, 'ಅಂಶ' ಮತ್ತು 'ಪೂರ್ಣ' ಒಂದೇ ಪದಾರ್ಥದ ಪ್ರತೀಕಗಳು.........ಭಾರತೀಯ ದರ್ಶನವನ್ನು ಆಧರಿಸಿರುವ ಸಮಾಜ ರಚನೆ..........ಆಧುನಿಕ ದ್ವಂದ್ವಗಳನ್ನು ಪರಿಹರಿಸುವಲ್ಲಿ ಸಮರ್ಥವಾಗಿದೆ."

**ವೈಚಾರಿಕ ಹಿನ್ನೆಲೆ**

'ಏಕಾತ್ಮ ಮಾನವವಾದ'ದ ಹಿನ್ನೆಲೆಗೆ ಎರಡು ಆಯಾಮಗಳಿವೆ: ಮೊದಲನೆಯದು, ಪಾಶ್ಚಾತ್ಯ ಜೀವನ ದರ್ಶನ; ಮತ್ತು ಎರಡನೆಯದು, ಭಾರತೀಯ ಸಂಸ್ಕೃತಿ. 'ಮಾನವವಾದ' ಮುಖ್ಯವಾಗಿ ಪಾಶ್ಚಾತ್ಯ ಅವಧಾರಣೆಯೇ ಆಗಿದೆ. ಹಾಗೂ 'ಏಕಾತ್ಮಕತೆ' ಭಾರತೀಯವಾದುದಾಗಿದೆ. ಪಾಶ್ಚಾತ್ಯ ಪದ ಪ್ರಯೋಗಗಳಲ್ಲಿ ಲೌಕಿಕ ಜೀವನದ ವೈಶಿಷ್ಟ್ಯ ಇದೆ. ಆದ್ದರಿಂದ ಪಾಶ್ಚಾತ್ಯ 'ಮಾನವವಾದ'ದ ಭಾರತೀಯಕರಣದ ಪ್ರಕ್ರಿಯೆಯ ಫಲಶ್ರುತಿಯೇ 'ಏಕಾತ್ಮ ಮಾನವವಾದ' ಎಂದು ಹೇಳಬಹುದಾಗಿದೆ.

**(ಕ) ಪಾಶ್ಚಾತ್ಯಾ ಜೀವನ ದರ್ಶನ:** ಪಾಶ್ಚಾತ್ಯ ಪ್ರಪಂಚ ಯಾವ ತರಹದ ಸರ್ವಾಧಿಕಾರದ ಕ್ರೌರ್ಯವನ್ನು ಮತ್ತು ಅಮಾನವೀಯ ಧಾರ್ಮಿಕ ಪ್ರಭುತ್ವದ ಜೀವನವನ್ನು ಅನುಭವಿಸಿತ್ತೋ ಅದಕ್ಕೆ ತೀವ್ರವಾದ ಪ್ರತಿಕ್ರಿಯೆ ಉಂಟಾಗುವುದು ಅಗತ್ಯವೇ ಆಗಿತ್ತು. ಆದ್ದರಿಂದ ಯೂರೋಪಿನ ಪುನರ್– ಜಾಗರಣೆ ತನ್ನ ಪೂರ್ವವರ್ತೀ ಜೀವನದ ಉಗ್ರತಾಪೂರ್ವಕ ನಿಷೇಧದ ಸ್ವರೂಪವೇ ಆಗಿದೆ.

ದೇವರ ಪ್ರಭುತ್ವಕ್ಕೆ ವಿರುದ್ಧವಾಗಿ 'ಮಾನವ'ನ ಸ್ಥಾಪನೆ, ನಿರಂಕುಶ ಸಾಮಾಜಿಕ ವ್ಯವಸ್ಥೆಗೆ ವಿರುದ್ಧವಾಗಿ 'ವ್ಯಕ್ತಿವಾದದ ಸ್ಥಾಪನೆ ಪಾಂಥಿಕ ವಿಶ್ವವಾದಕ್ಕೆ (Religious Universalism) ವಿರುದ್ಧವಾಗಿ ಲೌಕಿಕ ಪ್ರಭುತ್ವದ (Secular State) ಸ್ಥಾಪನೆ, ದೇವರ ದಯೆಗೆ ವಿರುದ್ಧವಾಗಿ ಮಾನವೀಯ ಸಾಹಸದ ಸ್ಥಾಪನೆ ರಹಸ್ಯಾತ್ಮಕ ಸತ್ಯಕ್ಕೆ ವಿರುದ್ಧವಾಗಿ ವಿವೇಕದ ಸ್ಥಾಪನೆ ಮತ್ತು ಸ್ಥಾಪಿತ ಮಾನ್ಯತೆಗಳಿಗೆ ವಿರುದ್ಧವಾಗಿ ಸಂಶೋಧಕ ಪ್ರವೃತ್ತಿಯ ಸ್ಥಾಪನೆ–ಇವುಗಳ ಕಥೆಯೇ ಐರೋಪ್ಯ ಪುನರ್‌ಜಾಗರಣೆಯ ಮತ್ತು 'ಮಾನವವಾದ'ದ ಉದ್ಭವದ ಕಥೆಯಾಗಿದೆ.

ಪಾಶ್ಚಾತ್ಯ ಜೀವನದ ಧಾರ್ಮಿಕ ಅಂಧವಿಶ್ವಾಸವು ಅಧ್ಯಾತ್ಮ ತತ್ವವನ್ನು ಅದೆಷ್ಟು ರಹಸ್ಯವಾದಿಯಾಗಿ, ಪರಮಾತ್ಮವಾದಿಯಾಗಿ ಮತ್ತು ಬೂಟಾಟಿಕೆಯದಾಗಿ ಮಾಡಿಬಿಟ್ಟಿದ್ದಿತು ಎಂದರೆ ಪ್ರತಿಕ್ರಿಯೆಯ ರೂಪದಲ್ಲಿ ಪಾಶ್ಚಾತ್ಯ ಚಿಂತನೆ ಜಡವಾದಿಯೋ ಅಥವಾ ಭೌತಿಕವಾದಿಯೋ ಆಗಿಬಿಟ್ಟಿತು. ಈ ಭೌತಿಕವಾದವು ಅದನ್ನು ಅಸಂವೇದನೆಶೀಲ ಯಾಂತ್ರಿಕತೆಯ ಕಡೆಗೆ ದಬ್ಬಿಬಿಟ್ಟಿತು ಮತ್ತು ಸ್ವಭಾವವತಃ ಅದನ್ನು ಪ್ರತಿಕ್ರಿಯವಾದಿಯನ್ನಾಗಿಸಿಬಿಟ್ಟಿತು. ಆದ್ದರಿಂದ 'ಮಾನವವಾದ' ಐರೋಪ್ಯ ಪುನರ್ ಜಾಗರಣದ ಸಂಸ್ಕೃತಿಯಾಗಿದ್ದರೆ, 'ಜಡವಾದ' ಅದರ ವಿಕೃತಿಯಾಗಿಬಿಟ್ಟಿದೆ. ವ್ಯಕ್ತಿವಾದದ ಮಾನವೀಯ ಸಾಹಸದ ವಿಕೃತಿಯೇ ಸಾಮ್ರಾಜ್ಯವಾದವಾಗಿದೆ. ರಾಷ್ಟ್ರವಾದದ ವಿಕೃತಿಯೇ ಫ್ಯಾಸಿಜ಼ಮ್ ಮತ್ತು ನಾಜೀವಾದವಾಗಿದೆ. ಲೌಕಿಕತೆಯ ವಿಕೃತಿಯೇ ಅಸಂವೇದನೀಯ ಯಂತ್ರವಾದವಾಗಿದೆ ಮತ್ತು ಅದರ ವಿವೇಕ ಮತ್ತು ಸಂಶೋಧನ ಪ್ರವೃತ್ತಿಯ ವಿಕೃತಿಯೇ ಅಸಂಯಮಿತ ಭೋಗವಾದವಾಗಿದೆ.

ದೀನ್ ದಯಾಳರು ಪಾಶ್ಚಾತ್ಯ ಜೀವನದ ಶ್ರೇಷ್ಠತೆಯನ್ನು ಒಪ್ಪುತ್ತಾರೆ; ಆದರೆ ಅದರ ವಿಕೃತಿಯ ವಿಷಯದಲ್ಲಿ ಅವರು ಹೆಚ್ಚು ಎಚ್ಚರದಿಂದ ಇರುತ್ತಾರೆ. ಏಕೆಂದರೆ ಪಾಶ್ಚಾತ್ಯ ಸಂಸ್ಕೃತಿಯ ಬಗೆಗಿನ ಮೋಹದಿಂದಾಗಿ ಜನರು ಅದರ ವಿಕೃತಿಯುನ್ನು ಕಡೆಗಣಿಸುತ್ತಿದ್ದಾರೆ. ಭಾರತವನ್ನು ಪಶ್ಚಿಮುದ ಅನುಕೃತಿಯನ್ನಾಗಿಸುತ್ತಿದ್ದಾರೆ; ಸಮಾಜದಲ್ಲಿ ಒಂದು ಬಗೆಯ ಭ್ರಮೆ ಮಾಡುತ್ತಿದೆ ಎಂದು ಅವರಿಗೆ ಅನಿಸುತ್ತದೆ. ಈ ವಿಷಯದಲ್ಲಿ ಅವರು ಹೀಗೆಂದು ಬರೆಯುತ್ತಾರೆ:

"ಗಾಂಧೀಜೀ ಅವರು ಹೋದ ಮೇಲೆ, ರಾಜ್ಯದ ಪ್ರಭುತ್ವ ಯಾರ ಕೈಗೆ ಬಂದಿತೋ, ಅವರು ಭಾರತದ ಭಾಷೆ ಮತ್ತು ಭಾವನೆಯನ್ನು ಅರಿತುಕೊಳ್ಳಲಾರದೆ ಹೋದರು. ಮತ್ತು ತಮ್ಮದೆಂದು ತೋರುವಂಥ ಅದರ ಕನಸನ್ನು ಕೂಡ ಕಾಣಲಿಲ್ಲ.........ನಾವು ನಮ್ಮ ಸಂಪೂರ್ಣ ಜೀವನವನ್ನು ಮತ್ತು ಸಮಸ್ಯೆಗಳನ್ನು ಬ್ರಿಟಿಷರ ಕನ್ನಡಕದ ಮೂಲಕವೇ ನೋಡಿದೆವು. ಇದರ ಫಲವಾಗಿ ನಮ್ಮ ರಾಜನೀತಿ, ಅರ್ಥನೀತಿ, ಸಮಾಜವ್ಯವಸ್ಥೆ, ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲೆ ಆಂಗ್ಲತ್ವದ ಆಳವಾದ ಗುರುತು ಬಿದ್ದಿದೆ. ಭಾರತೀಯತೆ ಎಂಬುದು ಕೇವಲ ಮೇಲ್‌ಮೇಲೆ



ಮಾತ್ರವೇ ಕಾಣುತ್ತದೆ..... ವಿಭಿನ್ನ ರಾಜಕೀಯ ಪಕ್ಷಗಳು– ಅವು ಸಮಾಜವಾದಿ ಪಕ್ಷವಾಗಿರಲಿ ಅಥವಾ ಸಮಾಜವಾದೀತರ ಪಕ್ಷವಾಗಿರಲಿ– ಯೂರೋಪಿನ ರಾಜಕೀಯ ವಿಚಾರಧಾರೆಗಳಿಂದ ಪ್ರಭಾವಿತವಾಗಿವೆ. ಅವರು ಭಾರತವನ್ನು ಯಾವುದಾದರೊಂದರ ಅನುಕೃತಿ ಮಾಡಲು ಬಯಸುತ್ತಾರೆ.

ಉಪಾಧ್ಯಾಯರ ಅಭಿಪ್ರಾಯವೇನೆಂದರೆ ಪಶ್ಚಿಮದ ಒಳ್ಳೆ ವಿಚಾರಗಳಲ್ಲೂ ಒಂದು ಪಾರಸ್ಪರಿಕ ಸಮತೋಲನದ ಕೊರತೆ ಇದೆ. "ರಾಷ್ಟ್ರವಾದ, ಪ್ರಜಾತಂತ್ರ, ಸಮಾಜವಾದ ಅಥವಾ ಸಮತಾಸಮಾಜವಾದ– ಈ ಎಲ್ಲದರ ಮೂಲದಲ್ಲಿಯೂ ಸಮಾನತೆಯ ಭಾವವೇ ಇದೆ. ಸಮತೆ ಸಮಾನತೆಗಿಂತ ಬೇರೆಯಾದುದು; ಇದನ್ನು 'Equitolelity' ಯ ಪರ್ಯಾಯವೆಂದು ಭಾವಿಸಬಹುದಾಗಿದೆ. ಈ ಮೂರು ಪ್ರವೃತ್ತಿಗಳು ಐರೋಪ್ಯ ರಾಜನೀತಿಯ ಮೇಲೆ ಪ್ರಭಾವ ಬೀರಿವೆ. ಆದರೆ ಯಾವುದೇ ವಿಚಾರವು ತನ್ನಿಂದ ತಾನೇ ಪರಿಪೂರ್ಣವಾಗಿಲ್ಲ. ಅಷ್ಟೇ ಅಲ್ಲ. ಅವುಗಳಲ್ಲಿ ಒಂದೊಂದರ ಆದರ್ಶ ಹಾಗೂ ವ್ಯವಹಾರಗಳು ಪರಸ್ಪರ ಘಾತಕವಾಗಿಯೇ ಪರಿಣಮಿಸುತ್ತದೆ. ರಾಷ್ಟ್ರವಾದ, ವಿಶ್ವಶಾಂತಿಗೆ ಅಪಾಯವನ್ನುಂಟುಮಾಡುತ್ತದೆ. ಪ್ರಜಾತಂತ್ರದೊಂದಿಗೆ ಬಂಡವಾಳವಾದ ಜೊತೆಗೂಡಿದ್ದರಿಂದ, ಶೋಷಣೆಗೆ ಕಾರಣವಾಗಿ ಪರಿಣಮಿಸಿ ಬಂಡವಾಳವಾದವನ್ನು ಕೊನೆಗಾಣಿಸಿ ಸಮಾಜವಾದ ಮೂಡಿಬಂದಿತು. ಅದು ಪ್ರಜಾತಂತ್ರವನ್ನು ಮತ್ತು ಅದರ ಜೊತೆಗೇ ವ್ಯಕ್ತಿಯ ಸ್ವಾತಂತ್ರ್ಯವನ್ನು ಬಲಿತೆಗೆದುಕೊಂಡಿತು. ಆದ್ದರಿಂದ ಇಂದು ಪಾಶ್ಚಾತ್ಯ ಜಗತ್ತಿನ ಎದುರಿಗೆ ಈ ಎಲ್ಲ ಒಳ್ಳೆಯ ಮಾತುಗಳನ್ನು ಹೇಗೆ ಸರಿ ಹೊಂದಿಸಬಹುದೆಂಬ ದೊಡ್ಡ ಸವಾಲು ಎದ್ದುನಿಂತಿದೆ".

ಆದ್ದರಿಂದ ದೀನ್ ದಯಾಳ್ ಉಪಾಧ್ಯಾಯರು ಪಾಶ್ಚಾತ್ಯಲೋಕದ ಅಂಧಾನುಕರಣೆಯನ್ನು ವಿರೋಧಿಸುತ್ತಾರೆ. ಆದರೆ ಎಲ್ಲ ಮಾನವೀಯ ಪ್ರಯತ್ನಗಳಿಗೂ ಅವರು ಮರ್ಯಾದೆ ಕೊಡಬಯಸುತ್ತಾರೆ. ಹೊಸ ಪ್ರಯೋಗಗಳಲ್ಲಿ ಅವುಗಳ ಉಪಯೋಗವನ್ನು ಮಾಡಿಕೊಳ್ಳಬಯಸುತ್ತಾರೆ. ಆದ್ದರಿಂದ ಎಲ್ಲ ತಿದ್ದುಪಡಿಮಾಡಿದ ಒಳ್ಳೆ ಮಾತುಗಳನ್ನು ಅವರು ಪಾಶ್ಚಾತ್ಯ ಅವಧಾರಣೆಯ ಆಧಾರದ ಮೇಲೆ ಅಲ್ಲದೆ, ಮಾನವೀಯ ಪ್ರಯೋಗಗಳ ಸಂಕಲ್ಪನೆಯ ಆಧಾರದ ಮೇಲೆ ಸ್ವೀಕರಿಸುವುದು ಒಳಿತು ಎಂದು ನಂಬುತ್ತಾರೆ:

"ವಿಶ್ವದ ಜ್ಞಾನ ಆರ್ಜಿತ ಸಂಪತ್ತೇ ಆಗಿರುತ್ತದೆ. ಮಾನವ ಸಮುದಾಯದ ಅನುಭವ ನಮ್ಮ ಸಂಪತ್ತು ಆಗಿದೆ. ವಿಜ್ಞಾನ ಯಾವುದೇ ದೇಶದ ಅಥವಾ ವಿಶ್ವದ ಯಾವುದೇ ದಿಕ್ಕಿನ ಪಿತ್ರಾರ್ಜಿತ ಸಂಪತ್ತಾಗಿಲ್ಲ. ಅದು ನಮ್ಮ ಅಭ್ಯುದಯದ ಒಂದು ಸಾಧನವೂ ಆಗಬಹುದು". ಅವರು ಪಶ್ಚಿಮದ ಪ್ರಗತಿಬದ್ಧ 'ಪರಿಣಾಮ'ಗಳನ್ನೇ ನಕಲಿ ಮಾಡಲು ಇಚ್ಛಿಸುವುದಿಲ್ಲ. ಪಶ್ಚಿಮದ ವಿಚಾರಗಳು ಅವರಿಗೆ ಏಕೆ

ಗ್ರಾಹ್ಯವಾಗುವುದಿಲ್ಲ? ಅದಕ್ಕೆ ಕಾರಣವಾಗಿರುವ ಅಂಶಗಳನ್ನು ಈ ರೀತಿ ಗುರುತಿಸಬಹುದು:

೧) ಪಾಶ್ಚಾತ್ಯ ಚಿಂತನೆ ಕೇವಲ ಜ್ಞಾನೇಂದ್ರಿಯಗಳನ್ನು ಆಧರಿಸಿದೆ. ಕೇವಲ ಜ್ಞಾನೇಂದ್ರಿಯಗಳಿಂದ ಪೂರ್ಣ ಜ್ಞಾನ ದೊರೆಯುವುದಿಲ್ಲ. ಪೂರ್ಣ ಜ್ಞಾನ 'ಪ್ರಜ್ಞೆ'ಯಿಂದಲೇ ಲಭಿಸುತ್ತದೆ. ನಮ್ಮ ಋಷಿ–ಮುನಿಗಳು ಒಳಹೊಕ್ಕು ನೋಡಿ 'ಸಮಗ್ರತೆಯ ದರ್ಶನ' ಮಾಡಿದರು. 'ಪೂರ್ಣತೆ'ಯೇ ನಮ್ಮ ದರ್ಶನದ ಕೇಂದ್ರವಾಗಿದೆ. ಮಿಕ್ಕವು ಏಕಾಂಗಿಯಾಗಿವೆ.

೨) ಪಾಶ್ಚಾತ್ಯ ಲೋಕ ನಮ್ಮ ಮುಂದೆ ಇರಿಸಿರುವ ಪ್ರಶ್ನೆ ಇದು; 'ವ್ಯಕ್ತಿ' ದೊಡ್ಡವನೋ ಅಥವಾ 'ಸಮಾಜ'ವೋ? ಈ ಪ್ರಶ್ನೆಯೇ ತಪ್ಪು. ವ್ಯಕ್ತಿ ಮತ್ತು ಸಮಾಜದ ಅಭಿನ್ನವಾದುವು.

೩) 'ಪ್ರಕೃತಿಯ ಮೇಲೆ ವಿಜಯ' ವನ್ನು ಸಾಧಿಸುವ ಅವಧಾರಣೆ ಅಹಂವಾದಿಯಾಗಿದೆ. ಪ್ರಕೃತಿ ಮಾತೃಸದೃಶವಾಗಿ ಪೂಜ್ಯವಾಗಿದೆ. ಅದನ್ನು ಉಚ್ಛೃಂಖಲವಾಗಿ ಹಿಂಡಿಬಿಡಬಾರದು. ಬಂಡವಾಳವಾದದ ಶೋಷಣೆ ಮತ್ತು ಸಮಾಜವಾದದ ಏಕಾಧಿಪತ್ಯ–ಇದೇ ಅಹಂಕಾರದ ಪರಿಣಾಮಗಳಾಗಿವೆ.

೪) ಸಮರ್ಥನೇ ಜೀವಿಸಿರುತ್ತಾನೆ(Survival of the fittest) ಎಂಬ ಜೀವಶಾಸ್ತ್ರೀಯ ಅವಧಾರಣೆಯನ್ನು ಒಳಗೊಂಡಿರುವ ಸಮಾಜಶಾಸ್ತ್ರೀಯ ಧೋರಣೆಯು ಸಮಾಜದಲ್ಲಿ 'ಕಾಡಿನ ಕಾನೂನಿ'ನ ವ್ಯವಸ್ಥೆಯನ್ನು ಆಚರಣೆಗೆ ತಂದಿದೆ. 'ಸ್ಪರ್ಧೆ' ಮತ್ತು 'ಸಂಘರ್ಷ' ಇವುಗಳಿಂದ ವಿಕಾಸ ಸಾಧ್ಯವಾಗುತ್ತದೆ ಎಂಬ ಈ ತಪ್ಪು ಅವಧಾರಣೆಗೆ ಇದೇ ಆಧಾರವಾಗಿದೆ. ಇದು ಅನಾಗರಿಕತೆ. ನಿಃಶಕ್ತರೂ ಕೂಡ ಜೀವಿಸಿರಬೇಕು ಎಂಬುದು ನಾಗರಿಕತೆಯ ವಿಕಾಸದ ಆಶಯ. ಮಾತ್ಸ್ಯನ್ಯಾಯ ಇರಬಾರದು ಎಂಬ ದೃಷ್ಟಿಯಿಂದಲೇ ರಾಜ್ಯದ ಸ್ಥಾಪನೆ ಆಯಿತು. ಸಮರ್ಥನಾಗಿರುವವನು ದುರ್ಬಲರನ್ನು ಮುಗಿಸಿಬಿಡಬಾರದು, ಆದ್ದರಿಂದಲೇ ನಾವು ಸಮಾಜ ವ್ಯವಸ್ಥೆಯನ್ನು ಮತ್ತು ಕಾನೂನಿನ ಶಾಸ್ತ್ರದ ವ್ಯವಸ್ಥೆಯನ್ನು ಸ್ಥಾಪಿಸುತ್ತೇವೆ.

೫) 'ದೇವರು' ಮತ್ತು 'ಸೈತಾನ'ನ ಕಲ್ಪನೆ ಪಾಶ್ಚಾತ್ಯಲೋಕಕ್ಕೆ 'ಬೈಬಲ್' ನೀಡಿರುವ ಕೊಡುಗೆಯಾಗಿದೆ. ಇದೇ ದ್ವೈತವಾದೀ ಭಾವನೆ ಡಾರ್ವಿನ್ ಮತ್ತು ಮಾರ್ಕ್ಸ್ ಅವರಿಗೆ ನಿರ್ದೇಶಕ ಸೂತ್ರವಾಗಿತ್ತು. ಪಕ್ಷ ನಿಷ್ಠೆ ಸಂಘರ್ಷವಾದೀ ಜನತಂತ್ರ ಹಾಗೂ ವರ್ಗನಿಷ್ಠ ಸಂಘರ್ಷವಾದೀ ಜನತಂತ್ರ ಇದೇ ಮನೋಭಾವನೆಯ ಫಲವಾಗಿದೆ.

೬) ಮನುಷ್ಯನ ದೈವೀ ಸಂಪತ್ತನ್ನು– ಅಂದರೆ ಗುಣಗಳನ್ನು– ಉಪೇಕ್ಷೆ ಮಾಡಿ, ಅವರು ಮಾನವನನ್ನು 'ಸ್ವಾರ್ಥಿ ವ್ಯಕ್ತಿ' ಎಂದು ಭಾವಿಸಿದ್ದರು. ಅವರ



ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಎಲ್ಲವೂ 'self interest' ಅನ್ನು ಆಧರಿಸಿವೆ. ಇದು ಎಲ್ಲಿಯವರೆಗೆ ಹೋಗುತ್ತದೆ ಎಂದರೆ ಪಾರಮಾರ್ಥಿಕ ಭಾವನೆಗಳನ್ನು ಇದೇ ದೃಷ್ಟಿಯಿಂದ ಸ್ವೀಕರಿಸಲಾಗುತ್ತದೆ. 'ಸತ್ಯದ ಪ್ರಾಮಾಣಿಕತೆಯೇ ಸರ್ವೋತ್ತಮ ನೀತಿ' ಎಂಬ ಅವಧಾರಣೆಗೆ ಇದೇ ಆಧಾರ.

೭) ಪಾಶ್ಚಾತ್ಯಲೋಕವು, ಹೊಸ ಪ್ರಪಂಚದಲ್ಲಿ ಸಾಮ್ರಾಜ್ಯವಾದೀ ಉತ್ಪೀಡನೆಗೆ ಎಡೆಮಾಡಿಕೊಟ್ಟ ಅಪರಾಧಿಯಾಗಿದೆ. ಸಾಮ್ರಾಜ್ಯವಾದೀ ಹಿಂಸೆ ಮತ್ತು ಶೋಷಣೆಯ ಆಧಾರದ ಮೇಲೆಯೇ ಯೂರೋಪಿನ ಔದ್ಯೋಗಿಕ ಕ್ರಾಂತಿ ಸಫಲವಾಯಿತು. ಪಾಶ್ಚಾತ್ಯ ಸಿದ್ಧಾಂತವನ್ನು ಅನುಕರಿಸುವವರು ಶೋಷಣವಾದೀ ಉದ್ಯೋಗವಾದವನ್ನು ಒಪ್ಪಿಕೊಳ್ಳಬೇಕಾಗುತ್ತದೆ.

೮) 'ರಾಷ್ಟ್ರೀಯ ರಾಜ್ಯ', ಸಂವೈಧಾನಿಕ 'ರಾಜ್ಯ', ಸಮಾಜವಾದ ಇವೆಲ್ಲ 'ರಾಜ್ಯವಾದ' ಗಳೇ ಹೌದು. ಈ ಕಲ್ಪನೆಗಳು ಸಮಾಜದ ಅನೌಪಚಾರಿಕ ಸಾಂಸ್ಕೃತಿಕ ವ್ಯವಸ್ಥೆಗಳನ್ನು ಗಾಯಗೊಳಿಸಿದವು, ಇವುಗಳ ರಾಜನೀತಿ ಎಲ್ಲವನ್ನೂ ನುಂಗಿ ನೀರು ಕುಡಿಯುವಂಥದ್ದೇ ಆಗಿದೆ.

೯) ಪಾಶ್ಚಾತ್ಯ ಚಿಂತನೆ ಪ್ರತಿಕ್ರಿಯಾತ್ಮಕವಾದದ್ದು, ಚರ್ಚ್ ರಾಜ್ಯದ ಪ್ರತಿಕ್ರಿಯೆಯಾಗಿ, ಲೌಕಿಕ ರಾಜ್ಯ ದೈವವಾದದ ಪ್ರತಿಕ್ರಿಯೆಯಾಗಿ, ಮಾನವವಾದ ನಿರಂಕುಶ ಸಮಾಜ ವ್ಯವಸ್ಥೆಯ ಪ್ರತಿಕ್ರಿಯೆಯಾಗಿ, ವ್ಯಕ್ತಿವಾದದ ಮತ್ತು ಶೋಷಣೆಯ ಪ್ರತಿಕ್ರಿಯೆಯಾಗಿ ಸಮಾಜವಾದದ ಉಗಮವಾಯಿತು. ಆದ್ದರಿಂದ ಇದು ಮಾನವನ ವಿಧಾಯಕ ವಿವೇಕವನ್ನು ಪ್ರತಿನಿಧಿಸುವುದಿಲ್ಲ. ಪ್ರತಿಕ್ರಿಯೆಯ ರೂಪದಲ್ಲಿ ಸಮಾಜದ ಹಿಂದಿನ ಸ್ಥಿತಿಗತಿಗಳಲ್ಲಿ ಉಂಟಾದ ಮಾನವೀಯ ಸಕಾರಾತ್ಮಕತೆಯನ್ನು ಇದು ನಿಷೇಧಿಸುತ್ತದೆ. ಉದಾಹರಣೆಗೆ ಮಾನವನನ್ನು ಸಂವೇದನಶೀಲನನ್ನಾಗಿ ಮಾಡುವುದರಲ್ಲಿ, 'ಧರ್ಮ' ನಿರ್ಣಾಯಕ ಪಾತ್ರ ವಹಿಸಿದೆ. ಆಧ್ಯಾತ್ಮವಾದದ ನಿಷೇಧವೂ ಮೂಢನಂಬಿಕೆಯ ಬಗೆಗಿನ ಅಥವಾ ದೈವೀ ರಹಸ್ಯವಾದದ ಬಗೆಗಿನ ಅತಿರೇಕದ ಪ್ರತಿಕ್ರಿಯೆಯೇ ಆಗಿದೆ. ಆದ್ದರಿಂದಲೇ ಅದು ಜಡವಾದಿಯಾಗಿಬಿಟ್ಟಿತು.

೧೦) ಭೌತಿಕವಾದದಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಪ್ರೇರಣೆ ಸಿಗುವುದಿಲ್ಲ, ಆದ್ದರಿಂದಲೇ ಮೆಜಿನಿ ಕಲ್ಪಿಸಿಕೊಂಡಿದ್ದ 'ಮಾನವತಾವಾದೀ ಐರೋಪ್ಯ ರಾಷ್ಟ್ರವಾದ'ಕ್ಕೆ ಇಲ್ಲಿಯವರೆಗೂ ವ್ಯಾವಹಾರಿಕ ರೂಪವನ್ನು ಪಡೆಯಲು ಸಾಧ್ಯ ಆಗಲಿಲ್ಲ. ಮತ್ತು ಅದು ಸ್ವತಃ ಯೂರೋಪಿನ, ಅಮೆರಿಕದ ಮತ್ತು ರಷ್ಯಾದ ಸಾಮ್ರಾಜ್ಯವಾದದ ರೂಪವನ್ನು ಪಡೆದುಕೊಂಡು ವಿಭಕ್ತವಾಗಿಬಿಟ್ಟಿತು.

ದೀನ್ ದಯಾಳ್ ಉಪಾಧ್ಯಾಯರು ಮುಂದಿರಿಸಿದ ಪಾಶ್ಚಾತ್ಯ ಚಿಂತನೆಯ ಮೇಲ್ಕಂಡ ವಿಶ್ಲೇಷಣೆ, ಆಧುನಿಕ ಗಾಂಧೀವಾದೀ ವಿಚಾರದೃಷ್ಟಿಗೆ ಹೊಂದುವಂಥದ್ದೇ ಆಗಿದೆ. ಪಾಶ್ಚಾತ್ಯ ಜಗತ್ತಿನ ಪ್ರಸಿದ್ಧ ಗಾಂಧೀವಾದೀ ವಿಲ್‌ಫ್ರೆಡ್ ವೆಲಾಕ್ ಅವರು

ಗಾಂಧೀಜಿಯ ವಿಷಯದಲ್ಲಿ ಹೀಗೆ ಬರೆದಿದ್ದಾರೆ: "ಗಾಂಧೀಜಿ ಪಾಶ್ಚಾತ್ಯ ನಾಗರಿಕತೆಯನ್ನು ನಿಂದಿಸುವುದಕ್ಕೆ ಮುಖ್ಯ ಕಾರಣವೆಂದರೆ ಅದು ವ್ಯಕ್ತಿಗತ ಸಂಪತ್ತು ಮತ್ತು ಶಕ್ತಿಗಳಿಗಾಗಿ ಮನುಷ್ಯನನ್ನು ಯಂತ್ರಕ್ಕೆ ಸದೃಶನನ್ನಾಗಿ ಮಾಡಿ, ಮಾನವೀಯ ಶ್ರಮವನ್ನು ಶೋಷಿಸುತ್ತದೆ. ಇದರ ಪರಿಣಾಮವಾಗಿ, ಎಂತಹ ಒಂದು ಸಮಾಜ ಉತ್ಪನ್ನವಾಗುತ್ತದೆ ಎಂದರೆ, ಅದರಲ್ಲಿ ಪರಸ್ಪರ ವಿರೋಧೀ ವರ್ಗಗಳು ತಮ್ಮ ವಿರೋಧಿ ಆದರ್ಶಗಳ ಮೂಲಕ ಹಿಂಸಾತ್ಮಕ ಕ್ರಾಂತಿ ಮತ್ತು ಪ್ರತಿ–ಕ್ರಾಂತಿಗಳಲ್ಲಿ ತೊಡಗಿರುತ್ತವೆ. ಈ ಭೌತವಾದದಲ್ಲಿ ವಸ್ತುಗಳು ಮತ್ತು ಸೇವೆಗಳ ನಿರಂತರ ಪೂರೈಕೆಯ ವಿಷಯದಲ್ಲಿ ಒಂದು ಭಯಂಕರವಾದ ಸ್ಪರ್ಧೆ, ಅಂತರರಾಷ್ಟ್ರೀಯ ಬಿಗುವು ಮತ್ತು ಕೊನೆಯದಾಗಿ ವಿಶ್ವಯುದ್ಧ ಮತ್ತು ವಿಶ್ವಕ್ರಾಂತಿ ಜನ್ಮ ತಾಳುತ್ತವೆ."

ಒಂದು ವಿಶಿಷ್ಟ ಸನ್ನಿವೇಶವನ್ನು ದೃಷ್ಟಿಯಲ್ಲಿರಿಸಿಕೊಂಡು ಚಿಂತನೆ ಮಾಡಿರುವ ಕಾರಣ ಉಪಾಧ್ಯಾಯರು ಪಶ್ಚಿಮದ ಇಂತಹ 'ಕೃಷ್ಣ ಪಕ್ಷೀಯ' ವಿವೇಚನೆ ಮಾಡಿದರು. ಆದರೆ ಅವರು ಅದರ ಶುಕ್ಲಪಕ್ಷವನ್ನು ತಿಳಿದಿರಲಿಲ್ಲ. ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವದ ಆದರ್ಶ, ವಿವೇಚನೆ ಮತ್ತು ಸಂಶೋಧನೆಯ ಆಧಾರ ಮತ್ತು ಸಾಹಸ ಪೂರ್ಣ ಪ್ರಯೋಗವಾದ ಪಾಶ್ಚಾತ್ಯಲೋಕ ಆರ್ಜಿಸಿದ ಶ್ರೇಷ್ಠ ಗುಣಗಳಿಗೆ ಕಾರಣೀಭೂತವಾಗಿದೆ. ಇಂತಹ ಘೋಷಿತ ಶ್ರೇಷ್ಠತೆಯ ಗುಣಗಳನ್ನು ಪೂರ್ಣವಾಗಿ ಪಡೆದುಕೊಳ್ಳದೆ ಇರುವುದಕ್ಕೆ ಅನೇಕ ಕಾರಣಗಳಿವೆ. ದೊಡ್ಡ ಕಾರಣವೆಂದರೆ ಮಾನವನ ವಿಕಾರಮೂಲ ಪ್ರವೃತ್ತಿಯನ್ನು ಅವರು ಈ ಒಳ್ಳೆಯ ಗುರಿಗಳನ್ನು ಸಾಧಿಸುವ ಪ್ರಕ್ರಿಯೆಯ ರೀತಿಯೆಂಬುದಾಗಿ ಒಪ್ಪಿಕೊಂಡಿದ್ದರು. ಇದರ ಪರಿಣಾಮವಾಗಿ ಈ ಪ್ರವೃತ್ತಿಯು ಪಾಶ್ಚಾತ್ಯರ ಎಲ್ಲ ಒಳ್ಳೆ ಆದರ್ಶಗಳನ್ನು ಪರಸ್ಪರ ಜಗಳವಾಡಿಸುವಂತೆ ಮಾಡಿಬಿಟ್ಟಿತು. ಹೀಗಾಗಿ ಪಾಶ್ಚಾತ್ಯ ಪ್ರಪಂಚದೊಡನೆ ಎಲ್ಲ ವ್ಯವಹಾರವೂ ಸಮಾನತೆಯ ನೆಲೆಯಲ್ಲಿಯೇ ನಡೆಯಬೇಕು. ನಮ್ಮ 'ಸ್ವಂತಿಕೆ ಮತ್ತು ಸಾಂಸ್ಕೃತಿಕ ಮೌಲ್ಯಗಳ ಅಧಿಷ್ಠಾನದ ಆಧಾರದ ಮೇಲೆ ವಿಭಿನ್ನ ಪ್ರಯೋಗಗಳನ್ನು ಮಾಡಿ ಮಾನವೀಯ ವಿಕಾಸದ ಪ್ರಕ್ರಿಯೆಯಲ್ಲಿ ನಾವು ಸಹಭಾಗಿಯಾಗಬೇಕು; ಯಾರನ್ನೋ ಅವಲಂಬಿಸಿರಬಾರದು ಎಂದು ಭಾವಿಸಿದ್ದರು. ಆದ್ದರಿಂದಲೇ ಅವರು ಹೀಗೆಂದು ಹೇಳುತ್ತಾರೆ:

"ನಿಸ್ಸಂದೇಹವಾಗಿ ಇಂದು ವಿಶ್ವದಿಂದ ನಾವು ಏನಾದರೂ ತೆಗೆದುಕೊಳ್ಳಬಹುದು. ಆದರೆ ವಿಶ್ವವು ನಮಗೆ ಏನಾದರೂ ಮಾರ್ಗದರ್ಶನ ಮಾಡುವ ಸ್ಥಿತಿಯಲ್ಲಿದೆ ಎಂಬಂಥ ನೆಲೆಯಲ್ಲಿ ಇಲ್ಲ. ಅದು ಸ್ವಃತ ನಾಲ್ಕು ದಾರಿಗಳು ಕೂಡುವ ಎಡೆಯಲ್ಲಿ ಇದೆ. ಇಂತಹ ಸ್ಥಿತಿಯಲ್ಲಿ ನಾವು ಅದರಿಂದ ಯಾವುದೇ ಬಗೆಯ ಮಾರ್ಗದರ್ಶನ ಪಡೆಯಲಿಕ್ಕೆ ಆಗುವುದೇ ಇಲ್ಲ. ಇಂದಿನವರೆಗೆ ಆಗಿರುವ ವಿಶ್ವದ ಪ್ರಗತಿಯನ್ನು ದೃಷ್ಟಿಯಲ್ಲಿ ಇರಿಸಿಕೊಂಡು, ಅದರ ಪ್ರಗತಿಗೆ



ನಮ್ಮದೇ ಆದ ಕೊಡುಗೆಯನ್ನು ನೀಡಬಹುದಾದ ಸಾಧ್ಯತೆ ಇದೆಯೇ ಎಂದು ನಾವು ಯೋಚನೆ ಮಾಡಬೇಕಾಗಿದೆ. ವಿಶ್ವದ ಪ್ರಗತಿಯ ಅಧ್ಯಯನ ಮಾಡಿದ ಅನಂತರವೇ ನಾವು ಅದಕ್ಕೆ ಏನನ್ನಾದರೂ ಕೊಡಬಹುದು ಎಂಬ ಆಲೋಚನೆಯೇ ನಮ್ಮನ್ನು ವಿಶ್ವದ ಅಂಗವಾಗಿಸಬೇಕು. ನಾವು ಕೇವಲ ಸ್ವಾರ್ಥಿಗಳಾಗದೆ, ವಿಶ್ವದ ಪ್ರಗತಿಗೆ ಸಹಕಾರಿಗಳಾಗಬೇಕು. ನಮ್ಮ ಬಳಿ ಯಾವುದಾದರೂ ವಸ್ತುವಿದ್ದರೆ, ವಿಶ್ವಕ್ಕೆ ಅದರಿಂದ ಲಾಭವಾಗುವುದಾದರೆ, ಅದನ್ನು ನೀಡುವುದಕ್ಕೆ ಆಕ್ಷೇಪವೇನೂ ಇರಕೂಡದು. ಕಲಬೆರಕೆಯ ಯುಗಕ್ಕೆ ಅನುರೂಪವಾಗಿ, ವಿಶುದ್ಧ ವಿಚಾರಗಳನ್ನು ವಿಕೃತಗೊಳಿಸಿ, ಅವುಗಳ ಮಿಶ್ರಿತ ರೂಪ ತೆಗೆದುಕೊಳ್ಳದೆ, ತಿದ್ದಿ ಮತ್ತು ಮಂಥನ ಮಾಡಿ ಅನಂತರ ಅದನ್ನು ಗ್ರಹಿಸಬೇಕು. ನಮ್ಮ ಪರಂಪರೆ ಮತ್ತು ಸಂಸ್ಕೃತಿ ವಿಶ್ವಕ್ಕಾಗಿ ಏನು ಕೊಡಬಲ್ಲದು? ಇದರ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ."

**(ಖ) ಭಾರತೀಯ ಸಂಸ್ಕೃತಿ** : ಭಾರತೀಯ ಸಂಸ್ಕೃತಿಯಲ್ಲಿ ಒಂದು ದೀರ್ಘಕಾಲಿಕ ನಿರಂತರತೆ ಇದೆ. ಏಷ್ಯಾ ಮತ್ತು ಯೂರೋಪ್‌ನ ಖಂಡಗಳನ್ನು ಹೋಲಿಸಿ ನೋಡುತ್ತಾ, ಶ್ರೀ ಅರವಿಂದರು ಹೀಗೆಂದು ಬರೆದಿದ್ದಾರೆ:

"ಯೂರೋಪ್ ಶತಮಾನಗಳಲ್ಲಿ ಉಸಿರಾಡುತ್ತಿರುತ್ತದೆಯಾದರೆ ಏಷ್ಯಾ ಯುಗಗಳಲ್ಲಿ ಉಸಿರಾಡುತ್ತಿರುತ್ತದೆ. ಯೂರೋಪ್ ಹಲವು ರಾಷ್ಟ್ರಗಳಲ್ಲಿ ಹಂಚಿ ಹೋಗಿದೆಯಾದರೆ ಏಷ್ಯಾ ನಾಗರಿಕತೆ ಮತ್ತು ಸಂಸ್ಕೃತಿಗಳಲ್ಲಿ ಹಂಚಿಹೋಗಿದೆ. ಸಂಪೂರ್ಣ ಯೂರೋಪಿನ ನಾಗರಿಕತೆ ಒಂದೇ ಬಗೆಯದಾಗಿದೆ. ಅದರ ಸ್ರೋತ ಒಂದೇ, ಅದು ಹಳೆಯದು ಮತ್ತು ಎಲ್ಲಿಂದಲೋ ತೆಗೆದುಕೊಂಡಿರುವಂಥದು. ಏಷ್ಯಾದಲ್ಲಿ ಮೂರು ಬಗೆಯ ನಾಗರಿಕತೆಗಳಿವೆ. ಅದರಲ್ಲಿ ಪ್ರತಿಯೊಂದೂ ಮೌಲಿಕವಾದುದು ಮತ್ತು ಸ್ಥಳೀಯವಾದುದು. ಯೂರೋಪಿನ ಪ್ರತಿಯೊಂದು ವಸ್ತುವೂ ಚಿಕ್ಕದು ಮತ್ತು ಅಲ್ಪ ಜೀವಿಯಾದುದು. ಅದಕ್ಕೆ ಅಮರತೆಯ ರಹಸ್ಯವು ಸಿಕ್ಕಿಲ್ಲ........ ಇಂದು ಯೂರೋಪ್ ವಿಜ್ಞಾನ, ತತ್ವಶಾಸ್ತ್ರ, ನಾಗರಿಕತೆ ಮುಂತಾದವುಗಳ ಯಾವ ಶಿಖರಗಳ ಮೇಲೆ ಏದುಸಿರು ಬಿಡುತ್ತ ಹತ್ತುತ್ತಿದೆಯೋ ಆ ಎತ್ತರಕ್ಕೆ ಏಷ್ಯಾ ಬಹಳ ಹಿಂದೆಯೇ ಏರಿ ಬಿಟ್ಟಿದೆ. ಆದರೆ ಅದರ ಬಳಿಕ ಸ್ವಲ್ಪ ಮಟ್ಟಿನ ಹಿನ್ನಡೆ ಉಂಟಾಗಿದ್ದರೂ, ಅದರಿಂದಾಗಿ ಹ್ರಾಸವಾಗಲೀ ಅಧೋಗತಿಯಾಗಲೀ ಉಂಟಾಗಲಿಲ್ಲ".

ಮುಂದುವರಿದು ಭಾರತದ ಬಗ್ಗೆ ಶ್ರೀ ಅರವಿಂದರು ಹೀಗೆಂದು ಬರೆದಿದ್ದಾರೆ:

" ಜಗತ್ತಿನ ಇತಿಹಾಸದಲ್ಲಿ ಯಾವುದೇ ದೇಶ ಇಷ್ಟೊಂದು ಕಾಲ ವಿದೇಶೀ ಆಳ್ವಿಕೆಯ ಅಡಿಯಲ್ಲಿ ತುಳಿತಕ್ಕೆ ಒಳಗಾಗಿದ್ದರೂ ಭಾರತದಂತೆ ತನ್ನ ಅದಮ್ಯ ಶಕ್ತಿಯನ್ನು ತೋರಿಸಿರುವ ನಿದರ್ಶನ ಇಲ್ಲವೇ ಇಲ್ಲ. ಈ ನೈತಿಕ ಶಕ್ತಿ, ಬೇರಿನವರೆಗೂ ಹೋಗಬಲ್ಲ ಸಾಮರ್ಥ್ಯ ತನ್ನ 'ಸ್ವ'ದ ಬಗೆಗಿನ ಸಂಪೂರ್ಣ ಆಧಿಕಾರ – ಇವು

ಏಷ್ಯಾದ ಶಕ್ತಿಯ ರಹಸ್ಯಗಳು. ಶಾಸ್ತ್ರಗಳು ಹೇಳುತ್ತವೆ, ಯಾವನ್ನು ತನ್ನನ್ನು ತಾನು ಆಳಿಕೊಳ್ಳಬಲ್ಲನೋ ಅವನೇ ಜಗತ್ತಿನ ಒಡೆಯನಾಗಬಲ್ಲ. 'ಸ್ವರಾಟ'ನೇ 'ಸಮ್ರಾಟ್'ನಾಗಬಲ್ಲ."

ತುಲನಾತ್ಮಕವಾಗಿ ನೋಡಿದರೆ ಭಾರತೀಯ ಜೀವನದಲ್ಲಿ ಸಕಾರಾತ್ಮಕತೆ ಹೆಚ್ಚಾಗಿದೆ, ಏಕೆಂದರೆ ಇಲ್ಲಿಯ ಬಾಳ್ವೆ ಸತತವಾಗಿ ಪ್ರವಾಹಶೀಲವಾಗಿದೆ. ಇಲ್ಲಿನ 'ಪ್ರತಿಕ್ರಿಯೆಗಳು' ಈ ಧಾರೆಗೆ ತಿರುವನ್ನುಂಟುಮಾಡುವಂಥದಾಗಲೀ, ಅದಕ್ಕೆ ಅಡ್ಡಿಯನ್ನುಂಟುಮಾಡುವಂಥವಾಗಲೀ ಅಗಿಲ್ಲ. ಸಮುದ್ರದಲ್ಲಿ ಏಳುವಂತಹ ಅಲೆಗಳ ರೀತಿಯಲ್ಲಿದೆ. ಭಾರತದ ಬಾಳ್ವೆ ಸಂಸ್ಕೃತಿಯ ಬಾಳ್ವೆಯಾಗಿತ್ತು, ಕೇಂದ್ರೀಕೃತ ಆಡಳಿತಗಳು ಭಾರತದ ಜನಪದ ಸಂಸ್ಕೃತಿಗೆ ಬಹಳಷ್ಟು ನಷ್ಟವನ್ನುಂಟುಮಾಡಿವೆ. ಈ ಸಂದರ್ಭಕ್ಕೆ ಸಂಬಂಧಿಸಿದಂತೆ ಶ್ರೀ ಅರವಿಂದರು ಹೀಗೆ ವಿವೇಚನೆ ಮಾಡಿದ್ದಾರೆ:

"ಭಾರತದಲ್ಲಿ ದೊಡ್ಡ ದೊಡ್ಡ ರಾಜ್ಯಗಳ ಸ್ಥಾಪನೆಯಾದುದು ಪ್ರಜಾತಂತ್ರಾತ್ಮಕ ವ್ಯವಸ್ಥೆಗೆ ಪೆಟ್ಟುನೀಡಿತು. ಇಲ್ಲಿಯವರೆಗೂ ತಮ್ಮ ಪ್ರತಿನಿಧಿಗಳನ್ನು ಆರಿಸುವ ಕಲ್ಪನೆ ಬಂದಿರಲಿಲ್ಲ ಮತ್ತು ಚುನಾಯಿತ ಪ್ರತಿನಿಧಿಗಳು ಇಲ್ಲದೆ ಇದ್ದಲ್ಲಿ ರಾಜ್ಯಗಳಲ್ಲಿ ಪ್ರಜಾತಂತ್ರ ಅಸ್ತಿತ್ವದಲ್ಲಿರುವುದು ಸಾಧ್ಯವೇ ಇಲ್ಲ. ಗ್ರೀಕರು ತಮಗೆ ಪ್ರಿಯವಾಗಿದ್ದ 'ಹೆಲೆನಿಕ್' ಜಗತ್ತಿನಲ್ಲಿ ಪ್ರವೇಶ ಮಾಡುತ್ತಲೇ ಹಿಂದಿನ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕಾಯಿತು. ರೋಮ್ ಸಾಮ್ರಾಜ್ಯವಾಗಿ ಪರಿಣಮಿಸಿದೊಡನೆಯೇ ತನ್ನ ಹಳೆಯ ಪದ್ಧತಿಯನ್ನು ಕೈಬಿಟ್ಟು ಸರ್ವಸಮರ್ಥ ರಾಜರುಗಳ ಆಳ್ವಿಕೆಯನ್ನು ಒಪ್ಪಿಕೊಳ್ಳಬೇಕಾಯಿತು. ಪ್ರಜಾತಂತ್ರ ಇಡೀ ಪ್ರಪಂಚದಿಂದಲೇ ಕಣ್ಮರೆಯಾಯಿತು. ಕೊನೆಗೆ, ಚುನಾವಣಾ ವ್ಯವಸ್ಥೆ ವಿಕಾಸಗೊಂಡ ಬಳಿಕ ಅದು ಒಂದು ಹೊಸ ರೂಪದಲ್ಲಿ ಜನ್ಮ ತಳೆಯಿತು. ಚಂದ್ರಗುಪ್ತ ಮತ್ತು ಅಶೋಕರ ಸಾಮ್ರಾಜ್ಯ ಹೊಸ ಬಗೆಯದಾಗಿದ್ದಿತು. ಇವರ ಮೇಲೆ ಬಹುಶಃ ಹೆಲೆನಿಕ್ ಸಾಮ್ರಾಜ್ಯಗಳ ಪ್ರಭಾವವಿತ್ತು. ಇಲ್ಲಿ ಸಾಮಂತರಿಗಾಗಲೀ ಪ್ರಜೆಗಳಿಗಾಗಲೀ ಸ್ಥಾನವಿರಲಿಲ್ಲ. ಒಬ್ಬ ವ್ಯಕ್ತಿ ತನ್ನ ಅಧಿಕಾರಿಗಳ ನೆರವಿನಿಂದ ಏಕಛತ್ರ ರಾಜ್ಯವನ್ನು ಆಳುತ್ತಿದ್ದ. ಆದರೂ ಹಿಂದೂ ರಾಜನು ಸೀಜ಼ರನ ಹಾಗೆ ಸಂಪೂರ್ಣವಾಗಿ ನಿರಂಕುಶನಾಗಲಿಲ್ಲ. ಅವನು ಯಾವಾಗಲೂ ತನ್ನ ಕೈವಾಡವೇನೂ ಇರದಿರುವಂಥ ವಿಧಿ-ವಿಧಾನಗಳ ಪಾಲನೆ ಮಾಡುತ್ತಾ ಇದ್ದ. ಅದನ್ನು ಮಾಡುವುದರಲ್ಲಿ ಅವನು ಜನಾಭಿಪ್ರಾಯವನ್ನು ಹೆಚ್ಚಾಗಿ ಅವಹೇಳನೆ ಮಾಡುತ್ತಿರಲಿಲ್ಲ. ರಾಜರುಗಳು ಬಹಳ ತಟಸ್ಥರಾಗಿಬಿಟ್ಟಾಗ ಸಮಾಜದಲ್ಲಿನ ಸುವ್ಯವಸ್ಥೆ ಮತ್ತು ಕಲ್ಯಾಣಕ್ಕಾಗಿ ಕೆಲಸ ಮಾಡುವುದು ಅವರ ಕರ್ತವ್ಯವೇ ಆಗಿರುತ್ತಿತ್ತು. ಪ್ರಜೆಯ ಅವಹೇಳನೆ ಮಾಡುವ ಅಧಿಕಾರ ಅವರಿಗೆ ಎಂದೂ ಸಿಕ್ಕಿರಲಿಲ್ಲ. ಮುಸಲ್ಮಾನರ ಆಗಮನದ ಜೊತೆಗೆ ಭಾರತದಲ್ಲಿ ನಿರಂಕುಶ ನಿರ್ದ್ವಂದ್ವ ರಾಜರುಗಳ ಪ್ರವೇಶ ಆಯಿತು. ಮುಸಲ್ಮಾನರು ಈ ಗುಣವನ್ನು



ಯೂರೋಪ್ ಮತ್ತು ಇರಾನ್‌ನಿಂದ ಹೊತ್ತು ತಂದರು, ಆದರೆ ಭಾರತೀಯ ಸ್ವಭಾವ ಇದನ್ನು ಎಂದಿಗೂ ಪೂರ್ತಿಯಾಗಿ ಸ್ವೀಕರಿಸಲಿಲ್ಲ."

ದೀನ್ ದಯಾಳ್ ಉಪಾಧ್ಯಾಯರ ಭಾರತೀಯ ಜೀವನದ ಬಗೆಗಿನ ದೃಷ್ಟಿಕೋನ ತತ್ತ್ವತಃ ಶ್ರೀ ಅರವಿಂದರ ಚಿಂತನಧಾರೆಗೆ ಹೊಂದುವಂತಿದೆ. ಆದರೆ ತಥ್ಯತಃ ಮೌರ್ಯ ಮತ್ತು ಗುಪ್ತ ಸಾಮ್ರಾಜ್ಯಗಳ ಬಗ್ಗೆ ಅವರ ಅಭಿಪ್ರಾಯ ಶ್ರೀ ಅರವಿಂದರ ಅಭಿಪ್ರಾಯಕ್ಕಿಂತ ಭಿನ್ನವಾಗಿತ್ತು. ಗುಪ್ತಕಾಲವನ್ನು ಭಾರತದ 'ಸ್ವರ್ಣಯುಗ'ವೆಂದು ನಂಬುವ ಜನರಲ್ಲಿ ಉಪಾಧ್ಯಾಯರೂ ಒಬ್ಬರಾಗಿದ್ದರು. ಆದರೆ ಇದಕ್ಕೆ ಕಾರಣವಾಗಿದ್ದುದು ರಕ್ಷಣಾತ್ಮಕ ಚಿಂತನೆಯೇ ಹೊರತು, ಆಡಳಿತಾತ್ಮಕ ಚಿಂತನೆ ಅಲ್ಲ. ಏಕೆಂದರೆ ವಿದೇಶಿ ಶಕ್ತಿಗಳು ಭಾರತದ ರಾಜನೀತಿ-ನಿರಪೇಕ್ಷ ಸಾಂಸ್ಕೃತಿಕ ಜೀವನದಲ್ಲಿ ಹಸ್ತಕ್ಷೇಪ ಮಾಡಲು ಆರಂಭಿಸಿದ್ದವು. ಈ ವಿದೇಶಿ ಶಕ್ತಿಗಳಿಗೆ ಮುಖ ಮುರಿಯುವಂಥ ಉತ್ತರ ದೊರೆತದ್ದು ಮೌರ್ಯ ಸಾಮ್ರಾಜ್ಯದಿಂದ ಮತ್ತು ಕೌಟಿಲ್ಯ ಚಾಣಕ್ಯನಿಂದ. ಆದ್ದರಿಂದ ಇಂದಿನ ಸನ್ನಿವೇಶದಲ್ಲಿ ಉಪಾಧ್ಯಾಯರು ಅಖಿಲ ಭಾರತೀಯ ದೃಷ್ಟಿಯಿಂದ ಸಾಂಸ್ಕೃತಿಕ ಏಕತೆಗೋಸ್ಕರ ಪ್ರಯತ್ನಶೀಲರಾಗಿದ್ದ ಶಂಕರಾಚಾರ್ಯರ ಮತ್ತು ರಾಜಕೀಯ ಏಕತೆಗಾಗಿ ಪ್ರಯತ್ನಶೀಲನಾಗಿದ್ದ ಚಾಣಕ್ಯನ ಬಗ್ಗೆ ಹೆಚ್ಚಿನ ಅನುಕರಣಶೀಲವಾದ ಭಾವನೆಯನ್ನು ತೋರುತ್ತಾರೆ. ಜೊತೆಗೆ ವೈವಿಧ್ಯಮೂಲವಾದ ಭಾರತೀಯತೆಯ ಜನಪದೀಯ ಸಾಂಸ್ಕೃತಿಕ ಮತ್ತು ರಾಜಕೀಯ ವಿಕಾಸದತ್ತ ಅವರಿಗೂ ಒಲವಿತ್ತು. ಆದ್ದರಿಂದ ಅವರು ಕೇಂದ್ರದಲ್ಲಿ 'ಏಕಾತ್ಮಕ ಆಡಳಿತ' ಮತ್ತು ಕೆಳಗಿನ ಹಂತಗಳಲ್ಲಿ 'ಜನಪದೀಯ ಮತ್ತು ಪಂಚಾಯತಿ ಸ್ವರೂಪದ ಸ್ವಯಮಾಡಳಿತ'ದ ಪರವಾಗಿಯೇ ತಮ್ಮ ಚಿಂತನೆಗಳನ್ನು ಮುಂದಿರಿಸಿದರು.

ದೀನ್ ದಯಾಳ್ ಉಪಾಧ್ಯಾಯರು ಭಾರತೀಯ ಸಂಸ್ಕೃತಿಯ ಬಗ್ಗೆ ಒಬ್ಬ ರಾಷ್ಟ್ರವಾದಿಯಾಗಿ ಸ್ವಾಭಿಮಾನದ ಭಾವನೆ ಇಟ್ಟುಕೊಂಡಿದ್ದಾರೆ. ತಾತ್ವಿಕ ದೃಷ್ಟಿಯಿಂದ ಅದರ ತರ್ಕಸಂಗತ ನಿರಂತರತೆಯನ್ನು ಒಪ್ಪುತ್ತಾರೆ. ಹೀಗಾಗಿ, ಅವರು ಭಾರತೀಯ ಸಂಸ್ಕೃತಿಯ ಶುಕ್ಲಪಕ್ಷದ ಬಗ್ಗೆಯೇ ಹೆಚ್ಚಿನ ಒಲುಮೆ ತೋರಿದ್ದಾರೆ. ಅವರ ಈ ಭಾರತೀಯ ದೃಷ್ಟಿಯನ್ನು ನಾವು ಈ ಕೆಳಕಂಡಂತೆ ನಿರೂಪಿಸುವ ಪ್ರಯತ್ನ ಮಾಡಬಹುದು:

೧) ಭಾರತೀಯ ಸಂಸ್ಕೃತಿಯ ಪ್ರಥಮ ವಿಶೇಷತೆಯೇನೆಂದರೆ ಅದು ಸಂಪೂರ್ಣ ಜೀವನದ ಬಗ್ಗೆ, ಸಂಪೂರ್ಣ ಸೃಷ್ಟಿಯ ಬಗ್ಗೆ ಸಂಕಲಿತ ರೂಪದಲ್ಲಿ ಚಿಂತನೆ ಮಾಡುತ್ತದೆ. ಅದರ ದೃಷ್ಟಿಕೋನ ಏಕಾತ್ಮವಾದಿ ಸ್ವರೂಪದ್ದು(Integrated). ಭಾಗ-ಭಾಗಗಳಾಗಿ ಅದರ ಬಗ್ಗೆ ಚಿಂತನೆ ಮಾಡುವುದು ತಜ್ಞರ ದೃಷ್ಟಿಯಿಂದ ಸರಿಯಾಗಬಹುದು. ಆದರೆ ವ್ಯಾವಹಾರಿಕ ದೃಷ್ಟಿಯಲ್ಲಿ ಅದು ಉಪಯುಕ್ತವಾದುದಲ್ಲ.

೨) ಭಾರತೀಯ ಜೀವನ ಆಧ್ಯಾತ್ಮ ಪ್ರಧಾನವಾದದ್ದು. ಆದರೆ ಭೌತಿಕ ಉತ್ಕರ್ಷದ ವಿಚಾರವನ್ನು ಅದು ಉಪೇಕ್ಷಿಸುವುದಿಲ್ಲ. ನಮ್ಮ ದೃಷ್ಟಿಕೇಂದ್ರ ಪೂರ್ಣತೆಯೇ ಹೊರತು ಒಂಟಿತನವಲ್ಲ.

೩) ಭಾರತೀಯ ಸಂಸ್ಕೃತಿ ವ್ಯಷ್ಟಿ, ಸಮಷ್ಟಿ, ಸೃಷ್ಟಿ ಮತ್ತು ಪರಮೇಷ್ಟಿಯನ್ನು ಸ್ವತಂತ್ರ ಅಸ್ತಿತ್ವವುಳ್ಳವೆಂದು ಭಾವಿಸಿದ್ದರೂ, ಅವನ್ನು ಅವಿಭಕ್ತವೆಂದು ಭಾವಿಸುತ್ತದೆ.

೪) 'ಧರ್ಮ' ಎಂಬುದು ಭಾರತೀಯ ಸಂಸ್ಕೃತಿಯ ಮಹತ್ವಪೂರ್ಣ ವಿಶೇಷತೆಯೇ ಆಗಿದೆ. 'ಧರ್ಮ' ದಿಂದಾಗಿಯೇ ಭಾರತದಲ್ಲಿ ರಾಜ, ಪ್ರಜೆ, ಸಮಾಜ ವ್ಯಕ್ತಿ ಎಲ್ಲರೂ ಸಂಯಮಪೂರ್ಣರಾಗಿದ್ದಾರೆ. ಯಾರೂ ಸ್ವೇಚ್ಛಾಚಾರಿಗಳಾಗಿಲ್ಲ. ಶಾಶ್ವತವೂ, ಅನ್ವೇಷಣೆಯ ಮೂಲಕ ಕಂಡುಕೊಂಡುದೂ ಆದ 'ಪ್ರಕೃತಿ'ಯ ನಿಯಮವೇ ಧರ್ಮ.

೫) ಭಾರತೀಯ ಸಂಸ್ಕೃತಿ ಕೋಮುವಾದಿಯಾದುದಲ್ಲ. ಅದು ಯಾವುದೋ ಪುಸ್ತಕ ಅಥವಾ ವ್ಯಕ್ತಿಯನ್ನು ಅಂತಿಮ ಪ್ರಮಾಣವೆಂದು ಒಪ್ಪುವುದಿಲ್ಲ. "ವಾದೇ ವಾದೇ ಜಾಯತೇ ತತ್ವ ಬೋಧಃ" (ವಿಚಾರ–ವಿಮರ್ಶೆಯ ಮೂಲಕ ತತ್ವದ ಅರಿವು ಉಂಟಾಗುತ್ತದೆ.) ಎಂಬುದೇ ಇದರ ವೈಶಿಷ್ಟ್ಯ. ಹೀಗಾಗಿ, ಭಾರತೀಯ ಪರಂಪರೆ ಉಪನಿಷತುಗಳ ಮತ್ತು ತತ್ವಶಾಸ್ತ್ರದ ಪರಂಪರೆಯೇ ಆಗಿದೆ.

೬) ಭಾರತೀಯ ಸಂಸ್ಕೃತಿ 'ಪರ–ಮತ–ಸತ್ಕಾರವಾದಿಯಾದುದು– ಅಂದರೆ ಇನ್ನೊಬ್ಬರ ಮತದ ಬಗ್ಗೆ ಅಸಹಿಷ್ಣುತೆನ್ನು ತೋರುವುದು ಅಭಾರತೀಯತೆ ಎನ್ನಿಸಿಕೊಳ್ಳುತ್ತದೆ. "ಏಕಂ ಹಿ ಸತ್ ವಿಪ್ರಾಃ ಬಹುಧಾ ವದಂತಿ" (ಒಂದೇ ಸತ್ಯವನ್ನು ವಿದ್ವಾಂಸರು ಅನೇಕ ರೀತಿಗಳಲ್ಲಿ ವರ್ಣಿಸುತ್ತಾರೆ) ಎಂಬುದೇ ಭಾರತದ ಚಿಂತನೆಯಾಗಿದೆ. ಆದ್ದರಿಂದಲೇ, ಭಾರತದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ಸಂಪ್ರದಾಯಗಳು ಕಾಣದೊರೆಯುತ್ತವೆ.

೭) ಭಾರತದ ಸಮಾಜ–ದರ್ಶನ 'ವಿರಾಟ್ ಪುರುಷವಾದಿ'ಯಾದುದು. ಸಂಸ್ಕೃತಿ ಅವಧಾರಣೆ 'ಚಿತಿ' ಮೂಲವಾದುದು, ರಾಷ್ಟ್ರ 'ಸಂಸ್ಕೃತಿವಾದಿ'ಯಾಗಿದ್ದರೆ ವ್ಯಕ್ತಿ 'ಆತ್ಮವಾದಿ'ಯಾಗಿರುತ್ತಾನೆ.

೮) ಭಾರತೀಯ ಸಂಸ್ಕೃತಿ ಮಾನವನ "ಚತುರ್ಪುರುಷಾರ್ಥಿ" ಅವಶ್ಯಕತೆಗಳನ್ನು ಪ್ರತಿಪಾದಿಸುತ್ತದೆ, ಅದು ಶಾಶ್ವತವೂ, ಪರಿಸ್ಥಿತಿ–ನಿರಪೇಕ್ಷವೂ, ಮನುಷ್ಯನ ಸಕಾರಾತ್ಮಕ ಅವಶ್ಯಕತೆಯೂ ಆಗಿದೆ.

೯) ಭಾರತೀಯ ಸಂಸ್ಕೃತಿ ರಾಜ್ಯವನ್ನು ಜೀವನದ ಕೇಂದ್ರವೆಂಬುದಾಗಿ ಭಾವಿಸದೆ, ಧರ್ಮ, ಮತ್ತು ಸಂಸ್ಕೃತಿಗಳನ್ನು ಜೀವನದ ಕೇಂದ್ರವೆಂದು ಭಾವಿಸುತ್ತದೆ.



೧೦) "ಯತ್ ಪಿಂಡೇ ತತ್ ಬ್ರಹ್ಮಾಂಡೇ" ಹಾಗೂ "ಆತ್ಮವತ್ ಸರ್ವಭೂತೇಷು" (ಯಾವುದು ಪಿಂಡದಲ್ಲಿದೆಯೋ, ಅದೇ ಬ್ರಹ್ಮಾಂಡದಲ್ಲಿದೆ ಮತ್ತು ಜಗತ್ತಿನಲ್ಲಿ ಸಂಪೂರ್ಣವಾಗಿ ಒಂದೇ ಆತ್ಮ ವ್ಯಾಪಿಸಿಕೊಂಡಿರುತ್ತದೆ) ಎಂಬುದೇ ಭಾರತದ ಚಿಂತನೆಯಾಗಿದೆ ಆದ್ದರಿಂದ ಭಾರತೀಯ ಸಂಸ್ಕೃತಿ, ಸಂಘರ್ಷವಾದಿಯಲ್ಲ ಮತ್ತು ಸ್ಪರ್ಧಾವಾದಿಯಲ್ಲ. ಆದರೆ 'ಪೂರಕ'ವಾದುದೂ, 'ಸಮನ್ವಯವಾದಿ' ಯಾದುದೂ ಆಗಿದೆ.

೧೧) ಭಾರತೀಯ ಸಂಸ್ಕೃತಿಯ ಈಶ್ವರವಾದ, ಒಂದು ಕೋಮಿನ ಚಿಂತನೆಯಲ್ಲ, ಗೀತೆಯಲ್ಲಿ ಪರಮಾತ್ಮ ಶ್ರೀ ಕೃಷ್ಣ ಹೀಗೆಂದು ಹೇಳಿದ್ದಾನೆ: 'ಯೇ ಯಥಾ ಮಾಂ ಪ್ರಪದ್ಯಂತೇ ತಾಂ ತಸ್ಥೈವ ಭಜಾಮ್ಯಹಮ್' (ಗೀತಾ : ೪/೧೧) (ಯಾರು ನನ್ನನ್ನು ಯಾವ ರೂಪದಲ್ಲಿ ಭಜಿಸುತ್ತಾರೋ, ನಾನು ಅವನಿಗೆ ಅದೇ ರೂಪದಲ್ಲಿ ಲಭ್ಯವಾಗುತ್ತೇನೆ.) ಅಂದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕಲ್ಪನೆಗೆ ಅನುಸಾರವಾಗಿ ಈಶ್ವರನನ್ನು ಆರಾಧಿಸಲು ಸ್ವತಂತ್ರನಾಗಿರುತ್ತಾನೆ. ಆದ್ದರಿಂದ, ಭಾರತದಲ್ಲಿ ಈಶ್ವರವಾದೀ, ಅನೀಶ್ವರವಾದೀ, ಏಕೇಶ್ವರವಾದೀ, ಬಹುದೇವವಾದೀ, ಸಗುಣಭಕ್ತ, ನಿರ್ಗುಣ ಭಕ್ತ, ಆತ್ಮವಾದೀ, ನಿಯತಿವಾದೀ ಮತ್ತು ಬ್ರಹ್ಮವಾದೀ ಮುಂತಾದ ಎಲ್ಲ ಬಗೆಯ ಸಂಪ್ರದಾಯಗಳಿಗೆ ಸೇರಿದ ಜನಗಳೂ ಸೇರಿರುತ್ತಾರೆ. ನಾಸ್ತಿಕ ಜನರು ಅಥವಾ ಲೋಕಾಯತವಾದಿಗಳು ಕೂಡ ಭಾರತೀಯ ಪರಂಪರೆಗೆ ಹೊರಗಿನವರೇನೂ ಆಗುವುದಿಲ್ಲ.

೧೨) ಭಾರತೀಯ ಸಂಸ್ಕೃತಿ 'ಯಜ್ಞಮಯಿ'ಯಾದುದು. 'ಇದಮ್ ನ ಮಮ' (ಇದು ನನ್ನದಲ್ಲ) ಎಂಬುದೇ ಯಜ್ಞದ ಆಶಯ. ಸಂಪತ್ತಿನ ವಿಷಯದಲ್ಲಿ 'ನ್ಯಾಸೀ' ಭಾವವನ್ನು ಯಜ್ಞಭಾವವೆಂದು ಹೇಳಲಾಗುತ್ತದೆ. ಸಂಪತ್ತಿನ ವಿಷಯದಲ್ಲಿ ವ್ಯಕ್ತಿವಾದ ಅಥವಾ ರಾಜ್ಯವಾದಕ್ಕೆ ಬದಲಾಗಿ 'ನ್ಯಾಸ' ಸಿದ್ಧಾಂತವನ್ನು ಒಪ್ಪಿಕೊಂಡಿರುವುದು ಭಾರತದ ವೈಶಿಷ್ಟ್ಯ.

೧೩) ಭಾರತೀಯ ಸಂಸ್ಕೃತಿ 'ವಿಶ್ವವಾದಿ'ಯಾದುದು 'ಅಂತಾರಾಷ್ಟ್ರೀಯವಾದ' ಕ್ಕಿಂತ 'ವಿಶ್ವವಾದ' ಭಿನ್ನವಾದುದು.

೧೪) ಭಾರತೀಯ ಸಂಸ್ಕೃತಿ 'ಸಂಸ್ಕಾರವಾದಿ'ಯಾದುದು. ಸಂಸ್ಕಾರಗೊಂಡ ಸಮಾಜ ಸ್ವಾಯತ್ತ ಸಮಾಜವಾಗಿರುತ್ತದೆ. ಔಪಚಾರಿಕ ವ್ಯವಸ್ಥೆಗಳ ಬಂಧನ ವ್ಯಕ್ತಿಯನ್ನು ಕುಂಠಿತಗೊಳಿಸುವಂತಹುದು. ಯೂರೋಪಿನ

ಪ್ರತಿಕ್ರಿಯೆಗಳ ಮೂಲ ಕಾರಣ ಮಾನವನ ಮೇಲೆ ಹೊರಿಸಲಾಗಿರುವ 'ವ್ಯವಸ್ಥಾವಾದ'ವೇ ಆಗಿದೆ. ಸಂಸ್ಕಾರಗಳ ನಿಯಂತ್ರಣ ಸ್ವಯಂ ಸ್ವೀಕೃತವಾಗುತ್ತದೆ; ಆದರೆ 'ಕಾನೂನು' ಆರೋಪಿತವಾಗುವಂಥದ್ದು. ಭಾರತದ 'ರಾಜ್ಯ–ವಿಹೀನತೆ'ಗೆ ಆಧಾರವಾಗಿರುವುದು ಅದರ 'ಸಂಸ್ಕಾರ–ದೃಷ್ಟಿ'

೧೫) ಭಾರತೀಯ ಸಂಸ್ಕೃತಿ 'ಸಮನ್ವಯವಾದಿ'ಯಾದುದು. ವ್ಯಕ್ತಿ ಮತ್ತು ಸಮಾಜದ ನಡುವೆ ಸಮನ್ವಯ, ಭೌತಿಕತೆ ಮತ್ತು ಆಧ್ಯಾತ್ಮಿಕತೆಯ ನಡುವೆ ಸಮನ್ವಯ, ರಾಷ್ಟ್ರ ಮತ್ತು ವಿಶ್ವದ ನಡುವೆ ಸಮನ್ವಯ, ವಿಭಿನ್ನ ವಿಚಾರಗಳು ಮತ್ತು ಪಂಗಡಗಳ ನಡುವೆ ಸಮನ್ವಯ; ಎಲ್ಲ ಪ್ರಕಾರದ ಸಮನ್ವಯ ಕ್ಷಮತೆ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯಪೂರ್ಣ ಲಕ್ಷಣವಾಗಿದೆ.

ಸಾಮಾನ್ಯವಾಗಿ ತಮ್ಮ ವಿಭಿನ್ನ ಲೇಖನಗಳು ಮತ್ತು ಭಾಷಣಗಳಲ್ಲಿ ದೀನ್ ದಯಾಳ್ ಉಪಾಧ್ಯಾಯರು ಭಾರತೀಯ ಸಂಸ್ಕೃತಿಯನ್ನು ಮೇಲ್ಕಂಡ ರೀತಿಯಲ್ಲಿ ವರ್ಣಿಸಿದ್ದಾರೆ. ಆದರೆ ಅವರು ಭಾರತದ ದೌರ್ಬಲ್ಯಗಳ ವಿಷಯದಲ್ಲಿಯೂ ಎಚ್ಚರದಿಂದಿದ್ದರು. ಏಕಾಂಗಿತೆ, ಕಾಲಬಾಹ್ಯಯತೆ ಮತ್ತು ನಿಹಿತ ಸ್ವಾರ್ಥತೆ– ಈ ರೋಗಗಳು ಭಾರತವನ್ನು ಒಳಗಿನಿಂದಲೇ ಟೊಳ್ಳುಮಾಡುತ್ತಿವೆ, ಆದ್ದರಿಂದ ಸಾಂಸ್ಕೃತಿಕ ಶ್ರೇಷ್ಠತೆಯ ಹೆಸರಿನಲ್ಲಿ ಮುಂದೆಮಾಡುವ ಯಥಾಸ್ಥಿತಿವಾದಕ್ಕೆ ಅವರು ವಿರುದ್ಧವಾಗಿದ್ದರು. ಅವರು ಹೀಗೆಂದು ಬರೆದಿದ್ದಾರೆ:

"ನಾವು ನಮ್ಮ ಪ್ರಾಚೀನ ಸಂಸ್ಕೃತಿಯ ಬಗ್ಗೆ ಚಿಂತನೆ ಮಾಡಿದ್ದೇವೆ, ಆದರೆ ನಾವು ಪುರಾತತ್ವವೇತ್ತರೇನೂ ಅಲ್ಲ. ನಾವು ಯಾವುದೋ ಪುರಾತತ್ವ ಸಂಗ್ರಹಾಲಯದ ಸಂರಕ್ಷಕರಾಗಿ ಕುಳಿತುಕೊಳ್ಳಲು ಬಯಸುವುದಿಲ್ಲ. ನಮ್ಮ ಧ್ಯೇಯ ಸಂಸ್ಕೃತಿಯ ಸಂರಕ್ಷಣೆಯಲ್ಲ. ಅದಕ್ಕೆ ವೇಗವನ್ನು ಕೊಟ್ಟು ಅದನ್ನು ಜೀವಂತವಾಗಿಸಬೇಕು ಮತ್ತು ಸಕ್ಷಮಗೊಳಿಸಬೇಕು. ನಾವು ಅನೇಕ ರೂಢಿಗಳನ್ನು ಕೊನೆಗಾಣಿಸಬೇಕಾಗಿದೆ, ಅನೇಕ ಸುಧಾರಣೆಯನ್ನು ತರಬೇಕಾಗಿದೆ. .......................ಇಂದು ಸಮಾಜದಲ್ಲಿ ಅಸ್ಪೃಶ್ಯತೆ ಮತ್ತು ಭೇದ–ಭಾವ ಮನೆಮಾಡಿಕೊಂಡಿವೆ. ಯಾವುದರಿಂದ ಜನರು ಮಾನವನನ್ನು ಮಾನವನೆಂದು ತಿಳಿದು ನಡೆಯುವುದಿಲ್ಲವೋ ಮತ್ತು ಯಾವ ಸಂಗತಿಗಳು ರಾಷ್ಟ್ರದ ಏಕತೆಗೆ ಘಾತಕವಾಗಿ ಪರಿಣಮಿಸುತ್ತಿವೆಯೋ ಅವನ್ನು ನಾವು ಕೊನೆಗಾಣಿಸುತ್ತೇವೆ."

ಹಳೆಯ ಸಂಸ್ಥೆಗಳಲ್ಲಿ ತಲೆದೋರಿರುವ ಸ್ವಾರ್ಥದ ವಿಷಯದಲ್ಲಿ ಉಪಾಧ್ಯಾಯರು ಹೀಗೆಂದು ಹೇಳಿದ್ದಾರೆ:

"ಹಳೆಯ ಸಂಸ್ಥೆಗಳಲ್ಲಿ ಯಾರ ಸ್ವಾರ್ಥ ನಿಹಿತವಾಗಿರುತ್ತದೆಯೋ,



ಅವರಿಗೆ ಪೆಟ್ಟು ಬೀಳುತ್ತದೆ. ತಮ್ಮ ಸ್ವಭಾವದಿಂದಾಗಿ ಯಾರು ಅಪರಿವರ್ತನವಾದಿಗಳಾಗಿದ್ದರೋ, ಅವರಿಗೂ ಈ ಸುಧಾರಣೆ ಮತ್ತು ಸೃಜನಶೀಲತೆಯ ಪ್ರಯತ್ನಗಳಿಂದ ಸ್ವಲ್ಪ ಕಷ್ಟವಾಗಬಹುದು. ಆದರೆ ಔಷಧಿಯಿಲ್ಲದೆ ರೋಗವು ವಾಸಿಯಾಗುವುದಿಲ್ಲ. ವ್ಯಾಯಾಮದ ಕಷ್ಟ ಸಹಿಸಿಕೊಳ್ಳದೆ ಇದ್ದರೆ ಶಕ್ತಿ ಬರುವುದಿಲ್ಲ. ಆದ್ದರಿಂದ ನಾವು ಯಥಾಸ್ಥಿತಿಯ ಮೋಹವನ್ನು ತ್ಯಜಿಸಿ ನವನಿರ್ಮಾಣ ಮಾಡಬೇಕಾಗಿದೆ".

ದೀನ್ ದಯಾಳರು ಪಶ್ಚಿಮದ ವಿಕೃತಿಯ ಬಗ್ಗೆ ಎಚ್ಚರವಾಗಿದ್ದರು. ಭಾರತೀಯ ಸಂಸ್ಕೃತಿಯ ಉಪಾಸಕರಾಗಿದ್ದರು. ಅವರ ಭಾರತೀಯ ಮನೋಧರ್ಮ ಸಮನ್ವಯ ದೃಷ್ಟಿಯದಾಗಿತ್ತು. ಆದ್ದರಿಂದ ಅವರು ಯಾವುದೇ ವಿದೇಶೀ ವಿಚಾರವನ್ನು ಶುದ್ಧಾಂಗದಿಂದಾಗಿ ಹೀನವೆಂದು ಭಾವಿಸುತ್ತಿರಲಿಲ್ಲ; ಪ್ರತಿಯೊಂದು ಸ್ವದೇಶೀ ವಿಚಾರವನ್ನೂ ಸ್ವೀಕಾರಾರ್ಹವೆಂದು ಭಾವಿಸುತ್ತಿರಲಿಲ್ಲ.

"ನಾವು ಮಾನವನ ಜ್ಞಾನ ಮತ್ತು ಅದರ ಸಾಧನೆಗಳನ್ನು ಕುರಿತು ವಿಚಾರ ಮಾಡಬೇಕು. ಈ ತತ್ವಗಳಲ್ಲಿ ಯಾವುದು ನಮ್ಮದೋ, ಅದನ್ನು ಯುಗಧರ್ಮಕ್ಕನುಕೂಲವಾಗಿಸಿಕೊಂಡು ಮತ್ತು ಯಾವುದು ಹೊರಗಿನದೋ ಅದನ್ನು ದೇಶಾನುಕೂಲವಾಗಿ ಅಳವಡಿಸಿಕೊಂಡು ಮುಂದೆ ನಡೆಯುವ ಬಗ್ಗೆ ಚಿಂತನೆಮಾಡಬೇಕು". 'ಸ್ವದೇಶಿ'ಯನ್ನು ಯುಗಧರ್ಮಕ್ಕನುಕೂಲವಾಗಿಸಿಕೊಳ್ಳುವುದರ ಬಗ್ಗೆ ಮತ್ತು 'ವಿದೇಶಿ'ಯನ್ನು 'ಸ್ವದೇಶಾನುಕೂಲ'ವಾಗಿಮಾಡಿಕೊಳ್ಳುವುದರ ಬಗ್ಗೆ ತಮ್ಮ ಮನೋಧರ್ಮದಿಂದಾಗಿ ಅವರು ಹೀಗೆಂದು ಹೇಳಿದ್ದರು, "ನಾವು ಭಾರತವನ್ನು ಯಾವುದೋ ಹಳೇ ಕಾಲದ ಪ್ರತಿಛಾಯೆ ಮಾಡಬೇಕೆಂದೂ ಬಯಸುವುದಿಲ್ಲ; ರಷ್ಯಾ ಅಥವಾ ಅಮೆರಿಕಾದ ಅನುಕೃತಿಯಾಗಿಸಲೂ ಬಯಸುವುದಿಲ್ಲ."

ಪಾಶ್ಚಾತ್ಯ ಚಿಂತನೆಗಳ ವಿಷಯದಲ್ಲಿಯೂ ಅವರು ಅಸ್ಪೃಶ್ಯತಾವಾದೀಯಾಗಿರಲಿಲ್ಲ. ಅವರು ಪ್ರಜಾತಂತ್ರ ಮತ್ತು ಸಮಾಜವಾದದ ನಡುವೆ ಸಮನ್ವಯ ಸಾಧ್ಯವೆಂದು ಭಾವಿಸಿದ್ದರು. ಪಶ್ಚಿಮದ ಪ್ರವೃತ್ತಿಗಳು ಸಮನ್ವಯಕ್ಕೆ ಆಧಾರವಾಗಲಾರವು. ಭಾರತೀಯತೆಯೇ ಇದಕ್ಕೆ ಸಮರ್ಥವಾಗಿ ಪರಿಣಮಿಸಬಹುದು ಎಂದು ಅವರು ಭಾವಿಸಿದ್ದರು. ಅವರು ಹೀಗೆಂದು ಹೇಳಿದ್ದಾರೆ:

"ಭಾರತದ ಮೇಲೆ ಪಶ್ಚಿಮದ ರಾಜನೀತಿಯನ್ನು ಹೊರಿಸುವುದಕ್ಕೆ ಬದಲಾಗಿ ನಮ್ಮದೇ ಆದ ರಾಜಕೀಯ ದರ್ಶನದ ಬಗ್ಗೆ ಚಿಂತನೆ ನಡೆಸಬೇಕು. ಇದರಲ್ಲಿ ನಾವು ಪಶ್ಚಿಮದ ಚಿಂತನೆಯ ಲಾಭವನ್ನು ಪಡೆದುಕೊಳ್ಳಬಹುದು. ಆದರೆ, ನಾವು ಅದರಿಂದ ಅಭಿಭೂತರಾಗಬಾರದು, ಅದನ್ನು ಶಾಶ್ವತ ಸತ್ಯವೆಂದು ತಿಳಿದು ನಡೆಯಬಾರದು. ಇದು ದೇಶ ಮತ್ತು ಕಾಲ, ಎರಡೂ ದೃಷ್ಟಿಗಳಿಂದ ಸರಿದೋರುವುದಿಲ್ಲ".

"ಪ್ರಜಾತಂತ್ರ ಮತ್ತು ಸಮಾಜವಾದ, ಎರಡೂ ಪರಸ್ಪರ ವಿರೋಧಿಗಳಾಗಿರದೆ ಸಮನ್ವಿತವಾಗಿರಬಹುದು. ಆದರೆ ಈ ಸಮಾಜವಾದ ರಾಜ್ಯಾಧಿಷ್ಠಿತವಾಗಿ ಅಥವಾ ಆಡಳಿತ ಕೇಂದ್ರಿತವಾಗಿ ಇರುವುದಿಲ್ಲ. ರಾಜ್ಯವನ್ನು ಸಮಾಜದ ಏಕೈಕ ಪ್ರತಿನಿಧಿ ಸಂಸ್ಥೆ ಎಂದು ಭಾವಿಸುವುದು ದೊಡ್ಡ ತಪ್ಪು. ಇದೇ ಭಾವನೆಯಿಂದಾಗಿ ರಾಜ್ಯವೆಂಬ ಸಂಸ್ಥೆಯನ್ನು ಮುಗಿಸಿಬಿಡಬೇಕೆಂದು ಪಣ ತೊಟ್ಟಿದ್ದರೂ, ಸಾಮ್ಯವಾದ (ಕಮ್ಯುನಿಜಮ್) 'ರಾಜ್ಯ'ವನ್ನು ಸರ್ವಗ್ರಾಹಿಯಾಗಿಸಿಬಿಟ್ಟಿತು. ಸಮಾಜವು ತನ್ನ ಹಿತಕ್ಕಾಗಿ ಕುಟುಂಬದಿಂದ ಹಿಡಿದು ಸನ್ಯಾಸದವರೆಗೂ ಅನೇಕ ಸಂಸ್ಥೆಗಳನ್ನು ನಿರ್ಮಿಸಿಬಿಡುತ್ತದೆ. ........ಸಮಾಜವಾದ ಮತ್ತು ಪ್ರಜಾತಂತ್ರ ಈ ಎರಡರ ಸಾಫಲ್ಯವೂ, ಸರ್ಕಾರೇತರ ಮತ್ತು ರಾಜಕೀಯ ನಿರಪೇಕ್ಷ ಆಂದೋಳನಗಳನ್ನು ಮತ್ತು ಶಿಕ್ಷಣವನ್ನು ಅವಲಂಬಿಸಿರುತ್ತದೆ. ಜನತಾ ಸಂಸ್ಕಾರಕ್ಕೆ ತುಂಬ ಹೆಚ್ಚಿನ ಮಹತ್ವವಿದೆ. ದಯಾನಂದ, ಗಾಂಧೀ ಮತ್ತು ಹೆಡ್ಗೇವಾರ್ ಅವರು ಯಾವ ಬಗೆಯ ಪ್ರೇರಣೆಯನ್ನು ಕೊಟ್ಟರೋ ಅದರ ಕಡೆಗೆ ದೇಶದ ಗಮನ ಹರಿದರೆ ಸಮಾಜದ ಧಾರಣಾಶಕ್ತಿ ಪ್ರಬಲವಾಗುತ್ತದೆ. ಇದರಿಂದಲೇ ರಾಷ್ಟ್ರದ 'ಚಿತಿ' ಜಾಗೃತವಾಗಿ ಅದರ 'ವಿರಾಟ್' ಪ್ರಬಲವಾಗುತ್ತದೆ".

ಸಮನ್ವಯದ ಈ ಚಿಂತನ–ಯಾತ್ರೆಯಿಂದ 'ಏಕಾತ್ಮವಾದ' ಜನ್ಮತಾಳಿತು. ಉಪಾಧ್ಯಾಯರು ಬಹುಶಃ ಎರಡು ಕಾರಣಗಳಿಂದಾಗಿ 'ಪ್ರಜಾತಂತ್ರಾತ್ಮಕ ಸಮಾಜವಾದ' ವನ್ನು ತಮ್ಮ ಚಿಂತನೆಗೆ ಆಧಾರವಾಗಿಸಿಕೊಳ್ಳಲಿಲ್ಲ. ಮೊದಲನೆಯದಾಗಿ, ಕಾಂಗ್ರೆಸ್ ಪಕ್ಷ ಪ್ರಜಾತಂತ್ರಾತ್ಮಕ ಸಮಾಜವಾದದ ಪಾಶ್ಚಾತ್ಯ ಅವಧಾರಣೆಯ 'ರಾಜ್ಯವಾದೀ' ಸ್ವರೂಪವನ್ನು ಅಂದು ಒತ್ತಾಯಪೂರ್ವಕವಾಗಿ ಪ್ರತಿಪಾದಿಸುತ್ತಿತ್ತು. ಉಪಾಧ್ಯಾಯರು ಇದನ್ನು ಒಪ್ಪಿರಲಿಲ್ಲ ಮತ್ತು ಕಾಂಗ್ರೆಸ್ ಮತ್ತು ಇತರ ಪಕ್ಷಗಳು ಭಾರತೀಯ ಚಿಂತನೆಗಳನ್ನು ಉಪೇಕ್ಷಿಸುತ್ತಿದ್ದುದರಿಂದ ಅವುಗಳ ಚಿಂತನ ಪ್ರಕ್ರಿಯೆಯ ಬಗ್ಗೆ ಸ್ವಲ್ಪ ಮಟ್ಟಿಗೆ ಅಸಮಾಧಾನಗೊಂಡಿದ್ದರು. ಎರಡನೆಯ ಕಾರಣ ಭಾರತದ ಮೇಲೆ ಪಾಶ್ಚಾತ್ಯ ಚಿಂತನೆಗಳನ್ನು ಹೊರಿಸುವುದನ್ನು ಒಪ್ಪದಿರುವಂಥ ಹಾಗೂ ಜಗತ್ತಿನಲ್ಲಿ ಭಾರತದ ಕೀರ್ತಿಯನ್ನು ಎತ್ತಿಹಿಡಿಯುವಂಥ ಸ್ವತಂತ್ರ ಅನನ್ಯತೆಯನ್ನುಳ್ಳ ರಾಜಕೀಯ ಪಕ್ಷವನ್ನು ಕಟ್ಟುವ ಅವರ ಧ್ಯೇಯ.

ತಮ್ಮ ಪಕ್ಷದ ಬಗ್ಗೆ ಅವರು ಹೀಗೆಂದಿದ್ದರು:

"ನಾವು ಜ್ಞಾನದ ಕೊಳುಕೊಡೆಗಾಗಿ, ಆದಾನ–ಪ್ರದಾನಕ್ಕಾಗಿ ವಿಶ್ವದ ಪ್ರತಿಯೊಂದು ದೇಶದೊಂದಿಗೂ ಸಂಬಂಧವನ್ನು ಏರ್ಪಡಿಸಿಕೊಳ್ಳುವುದಕ್ಕೆ ಯಾವುದೇ ರೀತಿಯಲ್ಲೂ ಸಂಕೋಚಪಡಬಾರದು. ಆದರೆ ಹೀಗೆ ಮಾಡುವಾಗ, ನಾವು ನಮ್ಮ ಜೀವನ ಮೌಲ್ಯಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ..........ಭಾರತೀಯ ಜನಸಂಘ ತಮ್ಮ ಆತ್ಮವನ್ನು ಸಾಕ್ಷಾತ್ಕಾರಿಸಿಕೊಳ್ಳುವಂತಹ ಜನಗಳ ಆಂದೋಳನವಾಗಿದೆ. ಅವರು ಕೇವಲ ವಿರೋಧಿಸುವುದಕ್ಕಾಗಿ ಜೀವಿಸಿರುವುದಿಲ್ಲ. ದೇಶವನ್ನು ನಿರ್ಮಾಣದ



ಹೊಸ ಹಾದಿಯಲ್ಲಿ ತೀವ್ರ ವೇಗದೊಡನೆ ಕರೆದೊಯ್ಯ ಬಯಸುತ್ತಾರೆ."

ಮುಂಬಯಿಯ ತಮ್ಮ ಐತಿಹಾಸಿಕ ಭಾಷಣದಲ್ಲಿ ಉಪಾಧ್ಯಾಯರು 'ಏಕಾತ್ಮ ಮಾನವವಾದ'ದ ವ್ಯಾಖ್ಯಾನವನ್ನು ಮುಂದಿರಿಸಿದಾಗ, ಅತ್ಯಂತ ಭಾವಪೂರ್ಣ ಶಬ್ದಗಳೊಂದಿಗೆ ಅವರು ತಮ್ಮ ವ್ಯಾಖ್ಯಾನವನ್ನು ಕೊನೆಗೊಳಿಸಿದ್ದರು:

"ವಿಶ್ವದ ಜ್ಞಾನದ ಆಧಾರದ ಮೇಲೆ, ಇಂದಿನವರೆಗಿನ ನಮ್ಮ ಸಂಪೂರ್ಣ ಪರಂಪರೆಯ ಆಧಾರದ ಮೇಲೆ ನಾವು ಎಂತಹ ಭಾರತವನ್ನು ನಿರ್ಮಿಸುತ್ತೇವೆ ಎಂದರೆ, ಅದು ನಮ್ಮ ಪೂರ್ವಜರ ಭಾರತಕ್ಕಿಂತಲೂ ಹೆಚ್ಚು ಗೌರವಾನ್ವಿತ ರಾಷ್ಟವಾಗಿರುತ್ತದೆ. ಅದರಲ್ಲಿ ಹುಟ್ಟಿದ ಮನುಷ್ಯ ತನ್ನ ವ್ಯಕ್ತಿತ್ವವನ್ನೇ ವಿಕಾಸಗೊಳಿಸಿಕೊಳ್ಳುತ್ತಾ, ಸಂಪೂರ್ಣ ಮಾನವತೆಯೊಂದಿಗೆ ಮಾತ್ರವಲ್ಲದೆ ಇಡೀ ಸೃಷ್ಟಿಯ ಜೊತೆಗೆ ಏಕಾತ್ಮಕತೆಯನ್ನು ಸಾಕ್ಷಾತ್ಕರಿಸಿಕೊಂಡು 'ನರನಿಂದ ನಾರಾಯಣ' ಆಗಲು ಸಮರ್ಥನಾಗಬಲ್ಲ. ಇದು ನಮ್ಮ ಸಂಸ್ಕೃತಿಯ ಶಾಶ್ವತವಾದ ದೈವೀ ಹಾಗೂ ಪ್ರವಾಹರೂಪೀ ಸ್ವರೂಪವಾಗಿರುತ್ತದೆ. ನಾಲ್ಕು ಬೀದಿಗಳು ಕೂಡುವೆಡೆಯಲ್ಲಿ ನಿಂತಿರುವ ವಿಶ್ವ ಮಾನವನಿಗೆ ನಾವು ನೀಡುವ ದಿಗ್ದರ್ಶನವಾಗಿರುತ್ತದೆ. ಈ ಕಾರ್ಯದಲ್ಲಿ ಸಫಲರಾಗಲು ಅಗತ್ಯವಾದ ಶಕ್ತಿಯನ್ನು ಪರಮಾತ್ಮ ನಮಗೆ ನೀಡಲಿ ಎಂಬುದೇ ನಮ್ಮ ಪ್ರಾರ್ಥನೆ".

ಇದೇ ದೀನ್‌ದಯಾಳ್ ಉಪಾಧ್ಯಾಯರು ಮುಂದಿರಿಸಿದ ಏಕಾತ್ಮ ಮಾನವವಾದ ಐತಿಹಾಸಿಕ ಮತ್ತು ತಾತ್ವಿಕ ಹಿನ್ನೆಲೆಯಾಗಿದೆ. ಇದೇ ಇತಿಹಾಸದ ಆಧಾರ; ಅದರಿಂದಾಗಿಯೇ ಯೂರೋಪ್ ಮತ್ತು ಏಷ್ಯಾ ಖಂಡಗಳಲ್ಲಿ ಪುನರ್‌ಜಾಗೃತಿ ಉಂಟಾಯಿತು. ಅದರ ಪರಿಣಾಮವಾಗಿ ಪಾಶ್ಚಾತ್ಯ ಮತ್ತು ಭಾರತೀಯ ಚಿಂತನೆಗಳ ನಡುವೆ ಪರಸ್ಪರ ಮಂಥನ ನಡೆಯಿತು. ಪಾಶ್ಚಾತ್ಯ ಚಿಂತನೆ ಮತ್ತು ಭಾರತೀಯ ಸಂಸ್ಕೃತಿಯ ತಾತ್ವಿಕ ಹಿನ್ನೆಲೆಯಲ್ಲಿ ಒಂದೆಡೆ ಪಾಶ್ಚಾತ್ಯ ಪ್ರಯೋಗಗಳಿಗೆ ಮತ್ತು ಭಾರತದ ಪ್ರಾಚೀನ ಸಂಸ್ಕೃತಿಗೆ ಮಹತ್ವ ದೊರೆತಿದ್ದರೆ, ಇನ್ನೊಂದೆಡೆ ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಚಿಂತನೆ ನಿರ್ಣಾಯಕ ರೂಪದಲ್ಲಿ 'ಏಕಾತ್ಮ ಮಾನವವಾದ' ಮೂಡಿಬರಲು ಕಾರಣವಾಯಿತು.

ಪಾಶ್ಚಾತ್ಯ ಮತ್ತು ಭಾರತೀಯ ಚಿಂತನೆಗಳ ಸಂದರ್ಭದಲ್ಲಿ ಮೂಡಿಬಂದ 'ಏಕಾತ್ಮ ಮಾನವವಾದ'ದ ಐತಿಹಾಸಿಕ ಮತ್ತು ತಾತ್ವಿಕ ಹಿನ್ನೆಲೆಯ ವಿಷಯದಲ್ಲಿ ಉಪಾಧ್ಯಾಯರು ಪ್ರಾರಂಭಿಕ ನೆಲೆಯಲ್ಲಿ ಆಧಾರಭೂತ ಕಾರ್ಯವನ್ನು ಮಾಡಿದ್ದಾರೆ. ಅದನ್ನು ವಿಕಾಸಗೊಳಿಸುವ ಜವಾಬ್ದಾರಿಯನ್ನು ಮುಂಬರುವ ಪೀಳಿಗೆ ಹೊತ್ತುಕೊಳ್ಳಬೇಕಾಗಿದೆ. ಏಕಾತ್ಮ ಮಾನವವಾದದ ತಾತ್ವಿಕ ಸಾರವನ್ನು ಉಪಾಧ್ಯಾಯರ ಮಾತುಗಳಲ್ಲಿಯೇ ಹೀಗೆ ಹೇಳಬಹುದಾಗಿದೆ:

"ಮಾನವನೇ ನಮ್ಮ ಸಂಪೂರ್ಣ ವ್ಯವಸ್ಥೆಯ ಕೇಂದ್ರವಾಗಿರಬೇಕು. ಏಕೆಂದರೆ

ಅವನೇ 'ಯತ್ ಪಿಂಡೇ ತತ್ ಬ್ರಹ್ಮಾಂಡೇ' ಎಂಬ ನ್ಯಾಯಕ್ಕೆ ಅನುಗುಣವಾಗಿ ಸಮಷ್ಟಿಯ ಜೀವಂತ ಪ್ರತಿನಿಧಿಯೂ ಅದರ ಉಪಕರಣವೂ ಆಗಿದ್ದಾನೆ. ಭೌತಿಕ ಉಪಕರಣಗಳು ಮಾನವನ ಸುಖದ 'ಸಾಧನ'ಗಳಾಗಿರುತ್ತವೆ, 'ಸಾಧ್ಯ'ವಾಗಿರುವುದಿಲ್ಲ. ಯಾವ ವ್ಯವಸ್ಥೆಯಲ್ಲಿ, ಭಿನ್ನ ರುಚಿ ಲೋಕದ ಚಿಂತನೆ ಕೇವಲ ಒಬ್ಬ ಸಾಮಾನ್ಯ ಮಾನವನ ಅಥವಾ ಅವನ ಶರೀರ, ಮನಸ್ಸು, ಬುದ್ಧಿ ಮತ್ತು ಆತ್ಮಯುಕ್ತ ಅನೇಕ ಅಭೀಪ್ಸೆಗಳಿಂದ ಪ್ರೇರಿತವಾಗಿರುವ ಪುರುಷಾರ್ಥವು ಚಾತುಷ್ಟ್ಯಶೀಲ, ಪೂರ್ಣ ಮಾನವನಿಗೆ ಬದಲಾಗಿ ಏಕಾಂಗಿ ಮಾನವನನ್ನೇ ಕುರಿತು ಚಿಂತನೆ ನಡೆಯುತ್ತದೆಯೋ ಅದು ಅಪೂರ್ಣವಾದುದಾಗಿರುತ್ತದೆ. ಏಕಾತ್ಮ ಮಾನವನೇ ನಮಗೆ ಆಧಾರ. ಅವನು ಏಕಾತ್ಮನಾಗಿಯೂ ಏಕಕಾಲದಲ್ಲಿ ಸಮಷ್ಟಿಯನ್ನು ಪ್ರತಿನಿಧಿಸುವ ಸಾಮಾರ್ಥ್ಯವನ್ನು ಉಳ್ಳವನಾಗಿರುತ್ತಾನೆ. ಏಕಾತ್ಮ ಮಾನವವಾದದ ಆಧಾರದ ಮೇಲೆ ನಾವು ಜೀವನದ ಎಲ್ಲ ವ್ಯವಸ್ಥೆಗಳನ್ನೂ ವಿಕಾಸಗೊಳಿಸಿಕೊಳ್ಳಬೇಕು.

* * * *



## ಅಧ್ಯಾಯ ೯

# ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಅಧ್ಯಕ್ಷರಾಗಿ

ಡಿಸೆಂಬರ್ ೧೯೫೧ರಲ್ಲಿ ಕಾನ್ಪುರದಲ್ಲಿ ನಡೆದ ಭಾರತೀಯ ಜನಸಂಘದ ಮೊದಲ ಅಧಿವೇಶನದಿಂದ ಹಿಡಿದು ಡಿಸೆಂಬರ್ ೧೯೬೭ರಲ್ಲಿ ಕಲ್ಲಿಕೋಟೆಯಲ್ಲಿ ನಡೆದ ಹದಿನಾಲ್ಕನೆಯ ಅಧಿವೇಶನದವರೆಗೆ ದೀನ್‌ದಯಾಳರು ಸತತವಾಗಿ ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿಯಾಗಿದ್ದರು.

ಜನಸಂಘದ ಅಧಿವೇಶನಗಳು ಆಂದೋಳನಗಳು, ತರಬೇತಿ ಶಿಬಿರದ ತರಗತಿಗಳು ಹಾಗೂ ಪ್ರಸ್ತಾಪಗಳು – ಇವೆಲ್ಲವೂ ದೀನ್‌ದಯಾಳ್ ಉಪಾಧ್ಯಾಯರ ವ್ಯಕ್ತಿತ್ವದಿಂದ ಆಪ್ಲಾವಿತವಾಗಿದ್ದವು. ದೇಶದಾದ್ಯಂತ ಅವರು ಕೈಗೊಂಡಿದ್ದ ಅವಿರತ ಪ್ರವಾಸಗಳಿಂದಾಗಿ ದೇಶದಾದ್ಯಂತ ಇದ್ದ ಕಾರ್ಯಕರ್ತರಿಗೆ ಅವರು ಸುಲಭವಾಗಿ ಲಭ್ಯವಾಗುತ್ತಿದ್ದರು. ಅಧಿವೇಶನದಲ್ಲಿ ಮಂಡಿಸಲಾಗುತ್ತಿದ್ದ ಪ್ರಧಾನ ಕಾರ್ಯದರ್ಶಿಯವರ ವರದಿಗಳು ಕೇವಲ ಔಪಚಾರಿಕವಾದ ಅಂಕಿಅಂಶಗಳನ್ನೊಳಗೊಂಡಿದ್ದ ವರದಿಗಳಾಗಿರದೆ ಸಂಘಟನೆಯ ಗತಿಶೀಲತೆಯ ಉತ್ಸಾಹಪೂರ್ಣ ಹಾಗೂ ಆತ್ಮಾವಲೋಕನದ ಮಹತ್ವಪೂರ್ಣ ದಾಖಲೆಗಳಾಗಿರುತ್ತಿದ್ದುವು; ಸವಲುಗಳನ್ನೊಳಗೊಂಡ ಕರೆಗಳಾಗಿರುತ್ತಿದ್ದುವು. ಪ್ರಧಾನ ಕಾರ್ಯದರ್ಶಿಯ ವರದಿ ಜನಸಂಘದ ವಿಕಾಸ ಯಾತ್ರೆಯ ಸಮಗ್ರ ಚಿತ್ರಣವನ್ನು ಮುಂದಿರಿಸುವ ಸಾಹಿತ್ಯವೇ ಆಗಿರುತ್ತಿತ್ತು. ಪ್ರಧಾನ ಕಾರ್ಯದರ್ಶಿಯ ಈ ವರದಿಗಳು ಜನಸಂಘದ ಕಾರ್ಯಚಟುವಟಿಕೆಗಳ, ಆಗುಹೋಗುಗಳ ದಾಖಲೆ ಮಾತ್ರವಾಗಿರದೆ, ಇಡೀ ರಾಷ್ಟ್ರದಲ್ಲಿ ನಡೆಯುತ್ತಿದ್ದ ಘಟನಾವಳಿಗಳ ದಿನಚರಿಯೂ ಆಗಿರುತ್ತಿದ್ದುವು. ೧೯೫೭, ೧೯೬೨ ಮತ್ತು ೧೯೬೭ರ ಸಾರ್ವತ್ರಿಕ ಚುನಾವಣೆಗಳ ಬಗೆಗಿನ ಪ್ರಧಾನ ಕಾರ್ಯದರ್ಶಿಯ ವರದಿಗಳು ಯಾವುದೇ ವಿಶ್ವವಿದ್ಯಾನಿಲಯದ ಸಂಶೋಧನ ವಿಭಾಗದ ಉಚ್ಚ ಸ್ತರದ ಅಕಾಡೆಮಿಕ್ ಅಧ್ಯಯನದ ಮೂಲಕ ಸಾದರ ಪಡಿಸಬಹುದಾಗಿದ್ದಂಥ ಕಿರು ಸಂಶೋಧನಾತ್ಮಕ ಪ್ರಬಂಧಗಳನ್ನುಸರಿಗಟ್ಟುವಂಥ ಪುಸ್ತಕಗಳೇ ಆಗಿವೆ. ಇವುಗಳಲ್ಲಿ ರಾಜಕೀಯ ಪರಿಸ್ಥಿತಿ, ಪಕ್ಷಗಳ ರಾಜಕೀಯ ಮತ್ತು ಸಂಖ್ಯಾಶಾಸ್ತ್ರೀಯ ನೆಲೆ–ಬೆಲೆಗಳು,

ಘಟನಾವಳಿಗಳ ಬಗೆಗಿನ ಟಿಪ್ಪಣಿಗಳು, ಸಮಗ್ರ ಅಂಕಿ–ಅಂಶಗಳು ಹಾಗೂ ರೇಖಾಚಿತ್ರಗಳು [diagrams] – ಇವುಗಳನ್ನೆಲ್ಲ ಮಾಹಿತಿಪೂರ್ಣವಾಗಿ ಹಾಗೂ ಜ್ಞಾನವರ್ಧಕ ರೀತಿಯಲ್ಲಿ ಸಂಕಲಿಸಲಾಗಿದೆ. ಯಾವನೇ ಐತಿಹಾಸಿಕ ಸಂಶೋಧಕನಿಗೆ ಈ ದಾಖಲೆಗಳು ಅಮೂಲ್ಯ ನಿಧಿಗಳಾಗಿ ಪರಿಣಮಿಸುತ್ತವೆ. ಈ ವರದಿಗಳು ರಾಜಕೀಯ ಕಾರ್ಯಕರ್ತರಿಗೆ ಅಗತ್ಯವಾಗಿರುವ ಮಾರ್ಗದರ್ಶಕ ಸಿದ್ಧಾಂತಗಳನ್ನೊಳಗೊಂಡಿರುವ ಆಕರ ಗ್ರಂಥಗಳೇ ಆಗಿವೆ.

೧೯೫೨ ರಿಂದ ೫೭ರ ವರೆಗಿನ ಅವಧಿ ಜನಸಂಘದ ಶೈಶವ ಕಾಲ ಮಾತ್ರವಾಗಿರದೆ, ಜೀವಂತವಾಗಿ ಉಳಿದುಕೊಂಡಿರುವ ಬಗೆಗಿನ ಅದರ ಆಂತರಿಕ ಶಕ್ತಿಯನ್ನು ತೋರಿಸಿಕೊಡುವ ಕಾಲವೂ ಆಗಿತ್ತು. ಡಾ. ಮುಖರ್ಜಿ ಅವರ ಅಕಾಲಿಕ ನಿಧನ,ಹಿಂದೂ ಮಹಾಸಭೆ ಮತ್ತು ರಾಮರಾಜ್ಯ ಪರಿಷತ್ತುಗಳೊಂದಿಗೆ ವಿಲೀನಗೊಳ್ಳುವ ಪ್ರಶ್ನೆ, ಜನಸಂಘದ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ್ದಂಥ ವ್ಯಕ್ತಿಗಳ ಕೊರತೆ, ಅನುಭವವೇನೂ ಇಲ್ಲದೆ ಇದ್ದಂಥ ತರುಣರು ರಾಷ್ಟ್ರೀಯ ಮತ್ತು ಪ್ರಾಂತೀಯ ಮಟ್ಟಗಳಲ್ಲಿ ನೇತೃತ್ವವಹಿಸಿಕೊಂಡಿದ್ದುದು – ಇವೆಲ್ಲ ಎಂಥ ಸಂಗತಿಗಳಾಗಿದ್ದುವೆಂದರೆ ಜನಸಂಘ ಜೀವಂತವಾಗಿ ಉಳಿದಿರಬಲ್ಲುದೇ ಅಥವಾ ಇಲ್ಲವೇ ಎಂಬ ಅನುಮಾನ ಜನರ ಮನಸ್ಸಿನಲ್ಲಿ ಮೂಡಿನಿಲ್ಲುತ್ತಿತ್ತು.

"ಭಾರತೀಯ ಜನಸಂಘದ ಸಂಸ್ಥಾಪಕರಾಗಿದ್ದ ಡಾ. ಶ್ಯಾಮಾಪ್ರಸಾದ ಮುಖರ್ಜಿ ಅವರು ನಿಧನರಾಧ ಬಳಿಕ ಇನ್ನು ಜನಸಂಘ ಕಾರ್ಯಶೀಲವಾಗಿ ಇರಲಾರದು ಎಂಬ ಭಾವನೆ ರಾಜಕೀಯ ಕ್ಷೇತ್ರಗಳಲ್ಲಿ ಮೂಡಿಬಿಟ್ಟಿತ್ತು. ಕಳೆದ ಐದು ವರ್ಷಗಳನ್ನು ನಾವು ಇದೇ ಭಾವನೆಯೊಂದಿಗೆ ಹೋರಾಡುತ್ತ ಕಳೆದಿದ್ದೇವೆ. ಭಾರತೀಯ ಜನಸಂಘ ಜೀವಂತವಾಗಿ ಉಳಿದಿರುವುದಲ್ಲದೆ ಪ್ರಗತಿಯತ್ತಲೂ ಸಾಗುತ್ತಿದೆ ಎಂಬುದನ್ನು ಎರಡನೆಯ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶಗಳು ತೋರಿಸಿಕೊಟ್ಟಿವೆ. ಹಾಗಾಗಿರದಿದ್ದರೆ, ನಾವು ನಮ್ಮ ನೇತಾರರ ವಿಷಯದಲ್ಲಿ ಸತ್ಯ– ನಿಷ್ಠರಾಗಿರಲು ಸಾಧ್ಯವೇ ಆಗುತ್ತಿರಲಿಲ್ಲ.

"ಈ ಐದು ವರ್ಷಗಳಲ್ಲಿ ಮೊದಲನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಮತ್ತು ಕಾಶ್ಮೀರ ಆಂದೋಳನದ ವಿಷಯದಲ್ಲಿ ವ್ಯಸ್ತರಾಗಿದ್ದರೂ, ದೀನ್‌ದಯಾಳ್ ಉಪಾಧ್ಯಾಯರ ಮತ್ತು ಅವರ ಸಹಚರರ ದೇಶವ್ಯಾಪಿ ಪ್ರವಾಸಗಳಿಂದಾಗಿ ಈ ಸಂಘಟನೆಯ ಒಂದು ಸ್ವರೂಪವೇ ಎದ್ದು ನಿಲ್ಲುವಂತಾಯಿತು. ೧೯೫೭ರಲ್ಲಿ ಜನಸಂಘದ ೨೪೩ ಮಂಡಲ ಸಮಿತಿಗಳು ಹಾಗೂ ೮೮೯ ಸ್ಥಳೀಯ ಸಮಿತಿಗಳು ಮಾತ್ರವೇ ಅಸ್ತಿತ್ವಕ್ಕೆ ಬಂದಿದ್ದುವು, ಸದಸ್ಯರ ಸಂಖ್ಯೆ ೭೪,೮೬೩ ಮಾತ್ರವಾಗಿತ್ತು, ೧೯೫೨ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯ ಫಲಿತಾಂಶಗಳು ಜನಸಂಘಕ್ಕೆ ಉತ್ಸಾಹದಾಯಕವಾಗಿಯೇನೂ ಇರಲಿಲ್ಲ. ಲೋಕಸಭೆಗೆ ಡಾ. ಮುಖರ್ಜಿಯವರು ಮತ್ತು ಅವರ ಇನ್ನಿಬ್ಬರು ಗೆಳೆಯರು ಮಾತ್ರವೇ ಚುನಾಯಿತರಾಗಿ ಬಂದಿದ್ದರು. ಚುನಾವಣೆಯ ಫಲಿತಾಂಶಗಳ ದೃಷ್ಟಿಯಿಂದ ನೋಡಿದಾಗ ಜನಸಂಘದ ಸಂಘಟನಶಕ್ತಿ ಅಷ್ಟೊಂದು ಪರಿಣಾಮಕಾರಿಯಾಗಿಯೇನೂ ಕಾಣಿಸಿಕೊಂಡಿರಲಿಲ್ಲ. ಆದರೆ ಶೇ. ೩.೦೬ರಷ್ಟು ಮತಗಳಿಸಿ ಜನಸಂಘ ರಾಷ್ಟ್ರೀಯ ಪಕ್ಷದ ಸ್ಥಾನ–ಮಾನವನ್ನು ಪಡೆದು ಕೊಂಡಿತ್ತು. ಜನತಂತ್ರದ ವಿಷಯದಲ್ಲಿ ತಮ್ಮ ಕಾರ್ಯಕರ್ತರ ಶ್ರದ್ಧೆ ಮತ್ತು ಉತ್ಸಾಹಗಳನ್ನು ಉಳಿಸಿಕೊಂಡು ಬರುವ ಸಲುವಾಗಿ, ಉಪಾಧ್ಯಾಯರು ಮುಂಬಯಿಯ ಅಧಿವೇಶನದಲ್ಲಿ [ಜನವರಿ ೧೯೫೪] ಮಂಡಿಸಿದ ತಮ್ಮ ವರದಿಯಲ್ಲಿ ಹೀಗೆಂದು ಹೇಳಿದ್ದರು. "....ಜನತೆಗೆ ರಾಜಕೀಯ ದೃಷ್ಟಿಯಿಂದ ಶಿಕ್ಷಣವನ್ನು ನೀಡಲು ವಯಸ್ಕರ ಮತದಾನದ ಹಕ್ಕೂ ಒಂದು ಬಹು ದೊಡ್ಡ ಸಾಧನವೇ ಆಗಿದೆ. ಜನತಂತ್ರದ ಯಶಸ್ಸಿಗಾಗಿ ನಾವು ಜನತೆಗೆ ಸೂಕ್ತ ಶಿಕ್ಷಣವನ್ನು ನೀಡಬೇಕಾಗಿದೆ. ಸಾವಿರ ವರ್ಷಗಳ ದಾಸ್ಯ ನಮ್ಮ ದೃಷ್ಟಿಕೋನವನ್ನು ಹಾಳುಮಾಡಿಬಿಟ್ಟಿದೆ... ಸಂಕೀರ್ಣತೆ ಮತ್ತು ಸಂಪ್ರದಾಯವಾದಗಳು ಪ್ರಗತಿಯನ್ನು ತಡೆಹಿಡಿದುಬಿಟ್ಟಿವೆ. ಸ್ಪಶ್ಯಾಸ್ಪೃಶ್ಯತೆಯ ಭೇದಭಾವಗಳು ಸಮಾಜದ ಬೇರುಗಳನ್ನೇ ಟೊಳ್ಳುಮಾಡಿಬಿಟ್ಟಿವೆ. ಆಂಗ್ಲ ಶಿಕ್ಷಣ ಸುಳ್ಳು ಜೀವನ ಮೌಲ್ಯಗಳನ್ನು ನಮ್ಮ ಬಾಳಿನಲ್ಲಿ ನೆಲೆಗೊಳಿಸಿಬಿಟ್ಟಿದೆ. ಶಿಸ್ತು ಮತ್ತು ಸಂಯಮಗಳ ಕೊರತೆ ಕಾಣಬರುತ್ತಿದೆ. ಕಾಯಕದ ಹಿರಿಮೆ ಕಡಿಮೆಯಾಗಿ ಬಿಟ್ಟಿದೆ. ನಾಡಿಗೆ ಒಳ್ಳೆಯ ಶಿಕ್ಷಣವನ್ನು ನೀಡಿ ನಿಜವಾದ ಜೀವನ ಮೌಲ್ಯಗಳನ್ನು ನೆಲೆಗೊಳಿಸಬೇಕಾಗಿದೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಹರಡಿಕೊಂಡಿರುವ ವಿಶಾಲ ರಾಷ್ಟ್ರದಲ್ಲಿ ಏಕಾತ್ಮಕತೆಯ ಅನುಭವವನ್ನು, ಭಾವನೆಯನ್ನು ಮೂಡಿಸಬೇಕಾಗಿದೆ, ....ಜಾಗರೂಕವಾಗಿರುವ ಜನತೆ ನಾಡಿನ ಉಜ್ವಲ ಭವಿಷ್ಯದ ಬಗ್ಗೆ ಖಾತರಿಯನ್ನು ನೀಡುತ್ತದೆ.... ಎಲ್ಲ ಕಡೆಗಳಲ್ಲೂ ಹಣಕಾಸಿನ ಕೊರತೆ ಕಂಡುಬರುತ್ತಿದೆ. ಈ ಕೊರತೆಯನ್ನು ಹೊರಗಿನಿಂದ ತುಂಬಿಕೊಳ್ಳಲು ಸಾಧ್ಯವಿಲ್ಲ, ಸಮಾಜದ ವತಿಯಿಂದಲೇ ನಾವು ಅದನ್ನು ಒಂದುಗೂಡಿಸಿಕೊಳ್ಳಬೇಕಾಗಿದೆ. ಸ್ವತಃ ಹೊಟ್ಟೆಬಟ್ಟೆಯನ್ನು ಕಟ್ಟಿ ನಾವು ಉಳಿತಾಯ ಮಾಡಬೇಕಾಗಿದೆ. ಮಿತವ್ಯಯದೊಂದಿಗೆ ಖರ್ಚುಮಾಡಬೇಕಾಗಿದೆ. ನಮ್ಮ ಗುರಿಯತ್ತ ನಮ್ಮ ಗಮನವನ್ನು ಕೇಂದ್ರೀಕರಿಸಿ, ಆತ್ಮವಿಶ್ವಾಸದೊಂದಿಗೆ ಹಾಗೂ ನಿಷ್ಠೆಯೊಂದಿಗೆ ನಾವು ಮುಂದೆ ಹೆಜ್ಜೆ ಹಾಕೋಣ."

ತಮ್ಮ ಕಾರ್ಯಕರ್ತರು ಮತ್ತು ಪ್ರತಿನಿಧಿಗಳ ಮುಂದೆ ದೀನ್‌ದಯಾಳ್ ಉಪಾಧ್ಯಾಯರು ಚುನಾವಣೆಯ ಗೆಲುವಿನ ಯಾವುದೇ ಕಿರುದಾರಿಯನ್ನು ಮುಂದಿಡುವುದಕ್ಕೆ ಬದಲಾಗಿ, ಮೂಲಗಾಮೀ ಸಿದ್ಧಂತಗಳ ಸುದೀರ್ಘ ಮಾರ್ಗದಲ್ಲಿಯೇ ಮುನ್ನಡೆಯುವಂತೆ ಪ್ರೇರಣೆಯನ್ನು ನೀಡಿದರು; ಯಾವುದೇ ಬಗೆಯ ಆವೇಶವನ್ನು ಮೂಡಿಸುವುದಕ್ಕೆ ಬದಲಾಗಿ, ನಿಷ್ಠೆಯನ್ನು ಮೂಡಿಸುವ ಪ್ರಯತ್ನ ಮಾಡಿದರು.

ಸಾಂಸ್ಕೃತಿಕ ರಾಷ್ಟ್ರವಾದದ ಯಾವ ಕಲ್ಪನೆಯನ್ನು ಜನಸಂಘ ನಾಡಿನ ಮುಂದೆ ಇರಿಸಿತೋ, ಅದರ ಪರಿಣಾಮವಾಗಿ ಭಾರತದ ಮಹತ್ವಪೂರ್ಣ ಸಾಂಸ್ಕೃತಿಕ ಕೇಂದ್ರಗಳು ಮೊದಲ ವರ್ಷದಲ್ಲಿಯೇ ಜನಸಂಘಕ್ಕೆ ಉತ್ಸಾಹವರ್ಧಕ ಸ್ವಾಗತವನ್ನೇ ನೀಡಿದುವು. ಸ್ಥಳೀಯ ನಗರ ಪಾಲಿಕೆಗೆ ಜನಸಂಘದ ಸದಸ್ಯರೇ ಅಧ್ಯಕ್ಷರಾಗಿ ಚುನಾಯಿತರಾದರು, ಉತ್ತರ ಪ್ರದೇಶವೇ ಸ್ವತಃ ದೀನ್ ದಯಾಳ್ ಉಪಾಧ್ಯಾಯರ ಪ್ರಾರಂಭಿಕ ಕಾರ್ಯಕ್ಷೇತ್ರವಾಗಿತ್ತು. ಇದರತ್ತ ಕಾರ್ಯಕರ್ತರನ್ನು ಅವರು ವಿಶೇಷ ರೂಪದಲ್ಲಿ ಪ್ರವೃತ್ತರನ್ನಾಗಿಸಿದರು. ತಮ್ಮ ವರದಿಯಲ್ಲಿ ಅವರು ಹೀಗೆಂದು ಹೇಳಿದ್ದರು: “ದೇವರ ದಯೆಯಿಂದ ಅಯೋಧ್ಯಾ, ಮಥುರಾ, ವೃಂದಾವನ, ಗೋಕುಲ, ಬಲದಾಊ, ಹರಿದ್ವಾರ, ಋಷಿಕೇಶ ಮೊದಲಾದ ಪವಿತ್ರ ಕ್ಷೇತ್ರಗಳಲ್ಲಿ ಜನಸಂಘದವರೇ ಅಧ್ಯಕ್ಷರಾಗಿ ಚುನಾಯಿತರಾಗಿ ಬಂದಿದ್ದಾರೆ. ಅಹಿಂಸೆಯ ಡೋಲನ್ನು ಬಾರಿಸದೆಯೇ, ನಮ್ಮ ಅಧ್ಯಕ್ಷರು ಮಥುರಾದಲ್ಲಿ ಗೋವಧೆಯನ್ನು ಮಾತ್ರವಲ್ಲದೆ, ಪಶುವಧೆಯನ್ನೂ ನಿಲ್ಲಿಸಿಬಿಟ್ಟಿದ್ದಾರೆ. ಪ್ರಾಂತೀಯ ಸರ್ಕಾರಗಳು ನಮ್ಮ ಹಾದಿಗೆ ಅಡೆತಡೆಗಳನ್ನೊಡ್ಡುವುದಾಗಿ ಘೋಷಣೆಯನ್ನು ಹೊರಡಿಸಿವೆಯಾದರೂ, ಜನತಾ–ಜನಾರ್ದನನು ಜನಸಂಘದ ಪ್ರತಿನಿಧಿಗಳಿಗೆ ಸೇವೆಯ ಅವಕಾಶವನ್ನು ಒದಗಿಸಿದ್ದಾನೆ. ಅವರು ದೃಢತೆಯೊಂದಿಗೆ ಸೇವೆಯ ಹಾದಿಯಲ್ಲಿ ಮುನ್ನಡೆಯಲ್ಲಿದ್ದಾರೆ, ಇಲ್ಲವಾದಲ್ಲಿ, ಅಧಿಕಾರದ ಕುರ್ಚಿಯನ್ನು ಒದ್ದು ಹಾಕಿ, ಜನತೆಯ ಭುಜದೊಂದಿಗೆ ಭುಜವನ್ನು ಸೇರಿಸಿ, ನಾಗರಿಕ ಹಕ್ಕುಗಳನ್ನು ರಕ್ಷಿಸುವ ಸಲುವಾಗಿ ಹೋರಾಡಲಿದ್ದಾರೆ.

“ಉತ್ತರ ಭಾರತದ ಅನೇಕ ಭಾಗಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಜನಸಂಘಕ್ಕೆ ಯಶಸ್ಸು ದೊರೆತಿದೆ. ಉತ್ತರ ಪ್ರದೇಶದಲ್ಲಿ ಅತ್ಯಂತ ಗಮನಾರ್ಹವಾದ ಯಶಸ್ಸು ದೊರೆತಿದ್ದು, ಅಲ್ಲಿನ ನಗರ ಪಾಲಿಕೆಗಳಲ್ಲಿ ೬೭೦ ಮಂದಿ ಉಮೇದುವಾರರಾಗಿ ಸ್ಪರ್ಧಿಸಿದ್ದು. ಅವರಲಿ ೫೮೧ ಮಂದಿ ಚುನಾಯಿತರಾಗಿದ್ದಾರೆ.”

ಜನಸಂಘದ ಕಾರ್ಯಕರ್ತರು ಈಚೆಗಷ್ಟೇ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದ್ದರು. ಅವರು ವಿರೋಧ ಪಕ್ಷವಾಗಿ ರಾಜಕೀಯ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಬೇಕಾಗಿತ್ತು. ಜನರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಸಲುವಾಗಿ ಆಡಳಿತ ಪಕ್ಷದೊಂದಿಗೆ ಹೋರಾಡುವುದು ವಿರೋಧ ಪಕ್ಷದ ಕರ್ತವ್ಯವಾಗಿರುತ್ತದೆ. ಆಗ ವಿರೋಧ ಪಕ್ಷವಾಗಿ ಸಾಮ್ಯವಾದೀ ಪಕ್ಷ ಪ್ರಭಾವ ಬೀರುತ್ತಿತ್ತು. ಅವರ ಆಂದೋಳನದ ರೀತಿ ಹಾಗೂ ದೃಷ್ಟಕೋನ ಉಪಾಧ್ಯಾಯರಿಗೆ ಹಿಡಿಸಿರಲಿಲ್ಲ ಆದ್ದರಿಂದ ಅವರು ತಮ್ಮ ಕಾರ್ಯಕರ್ತರಿಗೆ ಹೀಗೆಂದು ಒತ್ತಾಯಪೂರ್ವಕವಾಗಿ ಹೇಳಿದರು: “ಸಾಮ್ಯವಾದಿ ಪಕ್ಷ ಮುಂತಾದವುಗಳ ಕಾರ್ಯಕರ್ತರು ಈ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳುತ್ತಾರೆ ಎಂಬುದೇನೋ ನಿಜ. ಆದರೆ ಸಮಸ್ಯೆಯನ್ನು ಬಗೆಹರಿಸುವುದು ಅವರ ಉದ್ದೇಶವಾಗಿರದೆ,



ಅಸಂತೋಷವನ್ನು, ತಿಕ್ಕಾಟವನ್ನು ಉಂಟುಮಾಡುವುದೇ ಅವರ ಗುರಿಯಾಗಿರುತ್ತದೆ, ಅವರ ಆಂದೋಳನದ ಫಲವಾಗಿ ಜನತೆಗೆ ಸಮಾಧಾನವಂತೂ ಉಂಟಾಗುವುದಿಲ್ಲ. ಅವರ ಮನಸ್ಸಿನಲ್ಲಿ ಮತ್ತಷ್ಟು ಕಹಿಯ ಹಾಗೂ ವೈಫಲ್ಯದ ಭಾವನೆ ತುಂಬಿಕೊಳ್ಳುತ್ತದೆ. ದುಃಖದ ಹೊತ್ತಿನಲ್ಲಿ ಜೊತೆಗೆ ನಿಂತಿರುವಂಥ ವ್ಯಕ್ತಿಯೇ ನಿಜವಾದ ಗೆಳೆಯ ಎನ್ನಿಸಿಕೊಳ್ಳುತ್ತಾನೆ. ಅನ್ಯಾಯ ಮತ್ತು ಅತ್ಯಾಚಾರಗಳಿಂದ ಜನತೆಗೆ ಮುಕ್ತಿಯನ್ನು ತಂದು ಕೊಡುವಂಥವನೇ ದೇವದೂತ ಎನ್ನಿಸಿಕೊಳ್ಳುತ್ತಾನೆ. ಶಕ್ತಿ ಮತ್ತು ಸಂಘಟನೆಗೆ ಇದೇ ಕೀಲಿಕೈಯಾಗಿರುತ್ತದೆ. “ ಈ ರೀತಿ ದೀನ್ ದಯಾಳ್ ಉಪಾಧ್ಯಾಯರು ಈ ಬಗೆಯ ವರದಿಗಳ ಮುಖಾಂತರ ತಮ್ಮ ಕಾರ್ಯಕರ್ತರ ವಿಷಯದಲ್ಲಿ ಅಧ್ಯಾಪಕರ ಕಾರ್ಯವನ್ನೂ ನಿರ್ವಹಿಸುತ್ತಿದ್ದರು. ಸಂಘಟನೆಯ, ಆಂದೋಳನದ ಮತ್ತು ಚುನಾವಣೆಯ ದೃಷ್ಟಿಗಳಿಂದ ಜನಸಂಘದ ಕಾರ್ಯಕರ್ತರು ೧೯೫೭ರ ವರೆಗೂ ದೇಶದಲ್ಲಿ ತಮ್ಮ ಊರ್ಜಸ್ವಿತೆಯಿಂದ ಕೂಡಿದ ಅಸ್ತಿತ್ವವನ್ನು ಸಾರಿ ತೋರಿಸಿದರು. ಇದರ ಫಲವಾಗಿ ೧೯೫೭ರ ಎರಡನೆಯ ಸಾರ್ವತ್ರಿಕ ಚುನಾವಣೆಗೆ ೧೨೩ ಮಂದಿ ಲೋಕಸಭೆಯ ಹಾಗು ೬೫೦ ಮಂದಿ ವಿಧಾನ ಸಭೆಗಳ ಉಮೇದುವಾರರನ್ನು ನಿಲ್ಲಿಸಲು ಜನಸಂಘಕ್ಕೆ ಸಾಧ್ಯವಾಯಿತು. ಇದರಲ್ಲಿ ಲೋಕಸಭೆಗೆ ೪ಮಂದಿ ಹಾಗೂ ವಿಧಾನ ಸಭೆಗೆ ೫೧ ಮಂದಿ ಚುನಾಯಿತರಾದರು. ಗಳಿಸಿದ ಮತಗಳ ಶೇಕಡಾವಾರು ೬ ಆಗಿದ್ದು, ಇದು ೧೯೫೨ರ ಗಳಿಕೆಯೊಂದಿಗೆ ಹೋಲಿಸಿದರೆ. ಇಮ್ಮಡಿಯಾಗಿತ್ತು.

೧೯೫೭ರ ಹೊತ್ತಿಗೆ ಜನಸಂಘ ಉತ್ತರ ಭಾರತದಲ್ಲಿ ತೌಲನಿಕವಾಗಿ ಒಳ್ಳೆಯ ಸಂಘಟನೆಯನ್ನು ಏರ್ಪಡಿಸಿಕೊಂಡಿತ್ತು. ೧೯೫೮ ಅಧಿವೇಶನದ ಯೋಜನೆಯನ್ನೂ ಉಪಾಧ್ಯಾಯರು ಬೆಂಗಳೂರಿನಲ್ಲಿಯೇ ಸಿದ್ಧಪಡಿಸಿದರು. ಇದು ದಕ್ಷಿಣ ಭಾರತದಲ್ಲಿ ಅದರ ಚಟುವಟಿಕೆಗಳನ್ನು ಹರಡುವ ಪ್ರಯತ್ನವೇ ಆಗಿತ್ತು. ಕಾರ್ಯಕರ್ತರಲ್ಲಿ ಅಖಿಲ ಭಾರತೀಯ ದೃಷ್ಟಿಕೋನ ಮೂಡಿಬರುವಂತಾಗಬೇಕೆಂಬುದೇ ಬೆಂಗಳೂರಿನಲ್ಲಿ ಅಧೀವೇಶನವನ್ನು ನಡೆಸುವುದಕ್ಕೆ ಒಂದು ಕಾರಣವಾಗಿತ್ತು. ಉತ್ತರ ಭಾರತದಲ್ಲಿನ ವಾತಾವರಣದಿಂದಾಗಿ ಜನಸಂಘದ ಕಾರ್ಯಕರ್ತರು ಹಿಂದೀ ಭಾಷೆಯನ್ನು ಅತ್ಯುತ್ಸಾಹದಿಂದ ರಾಷ್ಟ್ರೀಯತೆಯೊಂದಿಗೆ ಮತ್ತು ರಾಷ್ಟ್ರಭಾಷೆಯೊಂದಿಗೆ ಒಂದುಗೂಡಿಸಿಬಿಡುತ್ತಿದ್ದರು. ಬೆಂಗಳೂರಿನಲ್ಲಿಯೇ ಏಕೆ ಎಂಬುದಕ್ಕೆ ಉತ್ತರವನ್ನು ನೀಡುತ್ತ ಉಪಾಧ್ಯಾಯರು ಹೀಗೆಂದು ಬರೆದಿದ್ದಾರೆ: “ಅಧಿವೇಶನದ ಬಳಿಕ ಪಂಜಾಬಿನ ಕೆಲವು ಪ್ರತಿನಿಧಿಗಳು ಹೀಗೆಂದು ಹೇಳಿದರು. ದಕ್ಷಿಣದ ಈ ಪ್ರವಾಸ ಅಖಿಲ ಭಾರತೀಯ ಭಾಷೆಯ ಅಥವಾ ಆಡಳಿತ ಭಾಷೆಯ ರೂಪದಲ್ಲಿ ಹಿಂದಿಯನ್ನು ಜಾರಿಗೆ ಕೊಡುವ ಹುಚ್ಚಾಟಕ್ಕೆ ಅಂಕುಶವನ್ನು ಹಾಕಿರುವಂತೆಯೇ, ದಕ್ಷಿಣ ಭಾರತದಲ್ಲಿ ಹಿಂದಿಯ ವಿರೋಧದ ಬಗೆಗಿನ ಅತಿರಂಜಿತವಾದ ಸುದ್ದಿಗಳನ್ನು ಕೇಳಿದ್ದರಿಂದ

ಉಂಟಾಗಿದ್ದ ಚಿಂತೆಗೂ ಮಂಗಳವನ್ನು ಹಾಡಿಬಿಟ್ಟಿದೆ."

ಬೆಂಗಳೂರು ಅಧಿವೇಶನದಲ್ಲಿ ಮಂಡಿಸಿದ ತಮ್ಮ ವರದಿಯಲ್ಲಿ ಉಪಾಧ್ಯಾಯರು ತಮ್ಮ ಪಕ್ಷದ ವಿಕಾಸದ ಪ್ರಕ್ರಿಯೆಗೆ ಅಗತ್ಯವಾದ ವಿಚಾರಗಳನ್ನು ಕ್ರಮವಾಗಿ ಪ್ರತಿಪಾದಿಸಿದ್ದಾರೆ. ಸಾರ್ವದೇಶಿಕವಾದ ಅಥವಾ ರಾಷ್ಟ್ರೀಯ ವಿಚಾರಗಳೊಂದಿಗೆ ಜನಸಂಘದ ಕಾರ್ಯಕರ್ತರಿಗೆ ಸಹಜವಾದ ಭಾವನಾತ್ಮಕ ಒಲವು ಇದ್ದೇ ಇತ್ತು. ಗೋಹತ್ಯೆ ನಿಷೇಧ, ಅಖಂಡ ಭಾರತ, ಕಾಶ್ಮೀರ ಮತ್ತು ಬೇರೂಬಾಡಿ ಮೊದಲಾದ ಪ್ರಶ್ನೆಗಳು ಕಾರ್ಯಕರ್ತರನ್ನು ರಂಜಿಸುತ್ತಿದ್ದುವಲ್ಲದೆ ಉತ್ಸಾಹಗೊಳಿಸುತ್ತಲೂ ಇದ್ದವು. ಆದರೆ, ಸಂಘಟನೆಯನ್ನು ಸ್ಥಳೀಯ ಜನ ಸಮುದಾಯದಲ್ಲಿ ನೆಲೆಗೊಳಿಸುವ ವಿಚಾರದಲ್ಲಿ ಈ ಸಂಗತಿಗಳಿಗೆ ತಮ್ಮವೇ ಆದ ಸೀಮಿತಗಳಿದ್ದವು. ಹೀಗಾಗಿ, ಅವರು ಕಾರ್ಯಕರ್ತರಿಗೆ ಈ ರೀತಿ ನಿರ್ದೇಶನ ನೀಡಿದರು: "ಯಾವುದೇ ರಾಜಕೀಯ ಪಕ್ಷ ರಾಷ್ಟ್ರೀಯ ಪ್ರಶ್ನೆಗಳನ್ನು ತನ್ನ ಆಂದೋಳನದ ಪರಿಧಿಯಿಂದ ಹೊರಗೆ ಇರಿಸಲಾರದು. ಆದರೆ, ನಾವು ಸ್ಥಳೀಯ ಸಮಸ್ಯೆಗಳತ್ತಲೂ ಹೆಚ್ಚಿನ ಗಮನ ಕೊಡಬೇಕಾಗುತ್ತದೆ." ಪ್ರಜಾತಂತ್ರದ ಆಂದೋಳನದ ಶಾಸ್ತ್ರವನ್ನು ಕೊನೆಗಾಣಿಸುತ್ತ, ಅವರು ಹೀಗೆಂದಿದ್ದಾರೆ: "ಪ್ರಜಾತಂತ್ರದಲ್ಲಿ ಆಂದೋಳನವನ್ನು ನಡೆಸುವುದೆಂದರೆ ಯುದ್ಧವನ್ನು ಸಾರುವುದಲ್ಲ, ಕ್ರಾಂತಿಯನ್ನೆ-ಸಗುವುದಲ್ಲ; ಅದು ಜನರ ಭಾವನೆಗಳನ್ನು ಪ್ರಕಟಿಸುವ ವಿಧಾನವಾಗಿರುತ್ತದೆ. ಆಡಳಿತದ ದಮನಕಾರಿ ನೀತಿಯಿಂದಾಗಿ ಜನತೆ ಮತ್ತು ಆಡಳಿತ ವ್ಯವಸ್ಥೆಯ ನಡುವೆ ಏರ್ಪಡುವ ಕಂದಕ ವಿರೋಧ ಪಕ್ಷಗಳಿಗೆ ಕ್ಷಣಿಕ ಲಾಭವನ್ನು ಉಂಟುಮಾಡಬಹುದು. ಆದರೆ, ಅದರಿಂದ ದೇಶಕ್ಕೆ ಒಳಿತೇನೂ ಉಂಟಾಗುವುದಿಲ್ಲ ಆಡಳಿತ ವ್ಯವಸ್ಥೆ ಜನರ ಬೇಡಿಕೆಗಳಿಗೆ ಕಿವುಡಾಗಿಬಿಟ್ಟಿದ್ದರೆ ಜನರು ಬೇಜವಾಬ್ದಾರರಾಗಿ ಬಿಡುತ್ತಾರೆ. ಕೆಲವು ರಾಜಕೀಯ ಪಕ್ಷಗಳು ಜನರಲ್ಲಿನ ಈ ಬೇಜವಾಬ್ದಾರಿತನದ ಭಾವನೆಯನ್ನು ಬೆಳೆಸುವ ಕಾರ್ಯಕ್ರಮವನ್ನೇ ಕೈಗೆತ್ತಿಕೊಂಡು ಸಾಗುತ್ತಿವೆ. ನಾವು ಈ ಸಂದರ್ಭದಲ್ಲಿ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ ಹಾಗೂ ಎಲ್ಲ ಪಕ್ಷಗಳು ಮತ್ತು ಆಡಳಿತ ವ್ಯವಸ್ಥೆ ಪರಂಪರೆಗಳನ್ನು ಹಾಕಿಕೊಡಬೇಕು ಹಾಗೂ ಇತಿಮಿತಿಗಳನ್ನು ಗೊತ್ತುಪಡಿಸಿಕೊಳ್ಳಬೇಕು."

ಒಳ್ಳೆಯ ರಾಜಕೀಯ ಕಾರ್ಯಕರ್ತನಲ್ಲಿ ರಾಜಕೀಯದ ಸಕಾರಾತ್ಮಕ ಸಾಮರ್ಥ್ಯ ಇರುವುದು ಅಗತ್ಯವಾಗುತ್ತದೆ. ವಿಕಾಸೋನ್ಮುಖಿಯಾದ ಯಾವುದೇ ಪಕ್ಷವೂ ಆಡಳಿತದ ಹೊಣೆಗಾರಿಕೆಯನ್ನು ನಿರ್ವಹಿಸಲು ತನ್ನನ್ನು ಸನ್ನದ್ಧವಾಗಿಸಿ ಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಆಡಳಿತದ ವಿವಿಧ ಪ್ರಕ್ರಿಯೆಗಳ ಹಾಗೂ ಕಾನೂನಿನ ಪರಿಜ್ಞಾನ ಪಕ್ಷದ ಕಾರ್ಯಕರ್ತನಿಗೆ ಇರಬೇಕಾಗುತ್ತದೆ. ಆಡಳಿತದ ನೀತಿಗಳು ಜನತೆಯಲ್ಲಿ ಉಂಟುಮಾಡುವ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವ ಹಾಗೂ ಅದನ್ನು



ಪ್ರತಿನಿಧಿಸುವುದು ಹಾಗೂ ಆಡಳಿತ ವವ್ಯಸ್ಥೆಯ ಮೇಲೆ ಪ್ರಭಾವ ಬೀರುವುದು, ಅವುಗಳ ಬಗ್ಗೆ ಸಹಾನುಭೂತಿ ಪೂರ್ಣವಾದ ಹಾಗೂ ರಚನಾತ್ಮಕವಾದ ದೃಷ್ಟಿಕೋನವನ್ನು ತಳೆದು ಪರಿಹಾರಗಳನ್ನು ಕಂಡುಕೊಳ್ಳವುದು ಅಗತ್ಯವಾಗುತ್ತದೆ. ಈ ಕಾರಣದಿಂದಾಗಿ ನಾವು ಹೆಚ್ಚು ಹೆಚ್ಚು ಅಧ್ಯಯನ ಮಾಡಬೇಕಾಗುತ್ತದೆ. ಆಡಳಿತ ವ್ಯವಸ್ಥೆಯ ದೃಷ್ಟಿಕೋನವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ನಾವು ಸತತವಾಗಿ ಪ್ರಯತ್ನಿಸುತ್ತ ಇರಬೇಕಾಗಿದೆ.

ರಾಷ್ಟ್ರೀಯ ಅಖಂಡತೆ ಮತ್ತು ಯುದ್ಧ ಸಂಬಂಧಿ ಸುರಕ್ಷತೆ– ಇವು ಸಂಘಕ್ಕೆ ಪ್ರಿಯವಾದ ವಿಷಯಗಳೇ ಆಗಿದ್ದುವು. ಪಾಕಿಸ್ತಾನದ ಬಗ್ಗೆ ಅವರ ದೃಷ್ಟಿಕೋನ ಇತರ ಪಕ್ಷಗಳಿಗಿಂತಲೂ ಭಿನ್ನವಾದುದೇ ಆಗಿತ್ತು. ಅವರು ಹೀಗೆಂದು ಹೇಳಿದ್ದರು: "ಆಕ್ರಮಣವೆಸ್ನೆಸಗುವ ಪಾಕಿಸ್ತಾನದ ಉದ್ದೇಶ ಸ್ಪಷ್ಟವಾಗಿಯೇ ಇದೇ. ಅದು ಭಾರತದ ಗಡಿಯ ಮೇಲೆ ನಡೆಸುವ ಆಕ್ರಮಣ ಭಾರತದ ಪ್ರಭುತ್ವಕ್ಕೆ ಸವಾಲೇ ಆಗಿದೆ ಹಾಗೂ ಗೌರವಕ್ಕೆ ಧಕ್ಕೆ ತರುವಂಥದೂ ಆಗಿದೆ. ಜನಸಂಘವನ್ನು ಬಿಟ್ಟು ಬೇರೆ ಯಾವ ಪಕ್ಷವೂ ಈ ಪ್ರಶ್ನೆಯ ಬಗ್ಗೆ ಬಾಯಿಬಿಡುತ್ತಲೇ ಇಲ್ಲ. ಪಾಕಿಸ್ತಾನದ ಬೆಂಬಲಿಗರಾಗಿರುವ ಮುಸಲ್ಮಾನರು ಚುನಾವಣೆಗಳಲ್ಲಿ ತಮಗೆ ಬೆಂಬಲನೀಡದೆ ಹೋಗಬಹುದೆಂಬ ಭಯ ಆ ಪಕ್ಷಗಳಿಗೆ ಇದೆ. ಪಾಕಿಸ್ತಾನದ ವಿಷಯದಲ್ಲಿ ಮಾತ್ರವಲ್ಲದೆ, ಮುಸ್ಲಿಮರ ಕೋಮುವಾದೀ ವಿಸ್ಫೋಟಕ ತತ್ವಗಳ ಪಂಚಮಸ್ವರೂಪದ ಕಾರ್ಯಚಟುವಟಿಕೆಗಳ ವಿಷಯದಲ್ಲಿಯೂ ಅವು ಮೌನವಾಗಿದ್ದು ಬಿಡುತ್ತವೆ. ಇದು ಪಕ್ಷನಿಷ್ಠ ಸ್ವಾರ್ಥಕ್ಕಾಗಿ ರಾಷ್ಟ್ರದ ಹಿತವನ್ನು ಬಲಿಗೊಡುವ ನಿಂದ್ಯವಾದ ಉದಾಹರಣೆಯೇ ಆಗಿದೆ."

ತಮ್ಮ ವರದಿಗಳ ಮೂಲಕ ವರ್ಷವಿಡೀ ನಡೆಸುವ ಕಾರ್ಯಕ್ರಮಗಳಲ್ಲಿ ಹೊಸ ವಿಚಾರಗಳು ಸಂಘಟನೆಯಲ್ಲಿ ಸೇರಿಕೊಳ್ಳುವಂತೆ ಮಾಡುತ್ತಿದ್ದರು ಎಂಬುದೂ ಉಲ್ಲೇಖನೀಯವಾದ ಸಂಗತಿಯೇ ಆಗಿದೆ. ೧೯೫೭ರ ಚುನಾವಣೆಗಳಲ್ಲಿ ಜನಸಂಘ ಅನೇಕ ಪ್ರದೇಶಗಳ ವಿಧಾನಮಂಡಲಗಳಿಗೆ ತನ್ನ ಸದಸ್ಯರನ್ನು ಆಯ್ದು ಕಳುಹಿಸಿತ್ತು. ೧೯೬೨ರ ಚುನಾವಣೆಗಳಲ್ಲಿ ಈ ಸಂಖ್ಯೆ ಹೆಚ್ಚಲಿತ್ತು. ಶಾಸಕರ ನಡೆನುಡಿಗಳು ಪ್ರಜಾತಂತ್ರದ ಹಿರಿಮೆ–ಗರಿಮೆಗಳಿಗೆ ಹೊಂದುವಂತೆ ಇರಬೇಕಾಗಿತ್ತು: ಶಾಸಕರಾಗಿ ಸಮರ್ಥ ರೀತಿಯಲ್ಲಿ ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾಗಿತ್ತು. ಇದಕ್ಕಾಗಿ ಅವರಿಗೆ ತರಬೇತಿಯನ್ನು ನೀಡುವುದು ಹಾಗೂ ನೀತಿಸಂಹಿತೆಯನ್ನು ಗೊತ್ತು ಪಡಿಸುವುದು ಅಗತ್ಯವಾಗಿತ್ತು. ಹೀಗಾಗಿ ಜೂನ್ ೨೮ರಿಂದ ಜುಲೈ ೭ರವರೆಗೆ ಶಾಸಕರ ಮತ್ತು ಪ್ರತಿನಿಧಿಗಳ ಸಭೆಯ ಒಂದು ಸ್ವಾಧ್ಯಾಯ ಶಿಬಿರವನ್ನು ಪುಣೆಯಲ್ಲಿ ಆಯೋಜಿಸಲಾಯಿತು. ಜನವರಿ ೧೯೬೦ರಲ್ಲಿ ನಾಗಪುರದಲ್ಲಿ ನಡೆಸಲಾದ ಎಂಟನೆಯ ವಾರ್ಷಿಕ ಅಧಿವೇಶನದಲ್ಲಿ ಈ ಶಿಬಿರದ ಬಗೆಗಿನ ವರದಿಯನ್ನು

ಮಂಡಿಸುತ್ತ ಉಪಾಧ್ಯಾಯರು ಹೀಗೆಂದು ಹೇಳಿದ್ದರು: "ಜನಸಂಘದ ಸಂಘಟನೆಯ ಮೂಲ ಆಧಾರ ಸೈದ್ಧಾಂತಿಕವಾಗಿರುವುದರಿಂದ ಈ ಬಗೆಯ ಶಿಬಿರಗಳು ಹಾಗೂ ಸ್ವಾಧ್ಯಾಯ ಮಂಡಳಿಗಳು ತುಂಬ ಅಗತ್ಯವಾಗುತ್ತವೆ. ಇದು ಇಲ್ಲವಾದಲ್ಲಿ ನಾವು ಇತರ ಪಕ್ಷಗಳಿಗಿಂತ ಭಿನ್ನವಾಗಿ ನಮ್ಮ ವೈಶಿಷ್ಟ್ಯವನ್ನು ಮೆರೆಸಲು ಸಾಧ್ಯವಾಗುವುದಿಲ್ಲ." ಪುಣೆಯಲ್ಲಿ ನಿರ್ಧರಿಸಲಾಗಿದ್ದ ಶಾಸಕರ ನೀತಿ ಸಂಹಿತೆಯ ವಿಷಯಗಳು ಇಂತಿದ್ದುವು: ಪತ್ರಿಕೆಗಳಲ್ಲಿ ಪ್ರಚಾರ ಪಡೆಯುವ ದೃಷ್ಟಿಯಿಂದ ನಡೆಸಲಾಗುವ ಸಭಾತ್ಯಾಗ ಹಾಗೂ ಅರಚಾಟ–ಕಿರುಚಾಟಗಳನ್ನು ಜನಸಂಘ ಸರಿಯೆಂದು ಒಪ್ಪುವುದಿಲ್ಲ. ನಮ್ಮ ಸದಸ್ಯರು ಈ ಪ್ರವೃತ್ತಿಯಿಂದ ದೂರ ಉಳಿದಿರಬೇಕೆಂದೂ, ರಾಜ್ಯಪಾಲರ ಮತ್ತು ರಾಷ್ಟ್ರಪತಿಗಳ ಭಾಷಣದ ಸಂದರ್ಭದಲ್ಲಿ ಈ ಬಗೆಯ ಕಾರ್ಯಚಟುವಟಿಕೆಗಳ ಮೂಲಕ ವಿರೋಧವನ್ನು ವ್ಯಕ್ತಪಡಿಸಲು ಹೋಗಬಾರದೆಂದೂ ನಾವೂ ನಿರ್ಧರಿಸಿದ್ದೇವೆ. ಪ್ರಜಾತಂತ್ರದ ಬಗೆಗಿನ ನಿಷ್ಠೆ ಎಂದರೆ ಸಂಸದೀಯ ಕಾರ್ಯವಿಧಾನದ ಪರಂಪರೆಗಳನ್ನು ನಿಷ್ಠೆಯೊಂದಿಗೆ ಪಾಲಿಸಿಕೊಂಡು ಬರಬೇಕು ಎಂಬುದೇ ಆಗಿರುತ್ತದೆ. ಈ ಪರಂಪರೆಗಳನ್ನು ಪಾಲಿಸಿಕೊಂಡು ಬರದೇ ಇದ್ದಲ್ಲಿ, ಪ್ರಜಾತಂತ್ರ ಮುನ್ನಡೆಯಲಾರದು."

ಆಡಳಿತ ಪಕ್ಷವಾಗಿದ್ದ ಕಾಂಗ್ರೆಸ್ ಪಕ್ಷದೊಂದಿಗೆ ಜನಸಂಘ ಹೋರಾಟವನ್ನು ನಡೆಸಿಕೊಂಡು ಬರುತ್ತಿದೆ. ಇದಕ್ಕಿಂತ ಮಿಗಿಲಾಗಿ ಸಾಮ್ಯವಾದೀ ಪಕ್ಷದ ಧ್ಯೇಯ–ಧೋರಣೆಗಳು ನಾಡಿಗೆ ಅಪಾಯಕಾರಿಯಾಗಿವೆ ಎಂದು ಜನಸಂಘ ಭಾವಿಸುತ್ತಿತ್ತು. ಸಾಮ್ಯವಾದಿಗಳ ಪ್ರಭಾವವನ್ನು ಎದುರಿಸಿ ನಿಲ್ಲಬೇಕೆಂದು ಉಪಾಧ್ಯಾಯರು ಕಾರ್ಯಕರ್ತರಿಗೆ ಕರೆ ನೀಡಿದ್ದರು: "ಅವರ ಸಂಘಟನೆಯ ಬೇರುಗಳನ್ನು ಅಲುಗಾಡಿಸಬೇಕಾದರೆ ನಾವು ಸಮಾಜದಲ್ಲಿ ಆಳದವರೆಗೂ ಇಳಿಯಬೇಕಾಗುತ್ತದೆ, ಜಾತಿ, ಪ್ರಾಂತ್ಯ ಮತ್ತು ಹೊಟ್ಟೆ–ಬಟ್ಟೆಯ ವಿಚಾರಗಳನ್ನು ಮಾತ್ರವೇ ಅರ್ಥಮಾಡಿಕೊಳ್ಳ ಬಲ್ಲಂಥ ಆ ಜನರನ್ನು ನಮ್ಮೊಡನೆ ಕರೆದೊಯ್ಯುತ್ತ. ಅವರಿಗೆ ರಾಷ್ಟ್ರದ ಮತ್ತು ಧರ್ಮದ ನಿಜವಾದ ಅರ್ಥವೇನೆಂಬುದನ್ನು ತಿಳಿಯಹೇಳಬೇಕು."

ಇದೇ ವರ್ಷ[೧೯೫೯] ಸ್ವತಂತ್ರ ಪಕ್ಷ ಸ್ಥಾಪನೆಗೊಂಡಿತ್ತು. ವಿವಿಧ ಪ್ರಾಂತೀಯ ಪಕ್ಷಗಳನ್ನು, ರಾಜ–ಮಹಾರಾಜರುಗಳನ್ನು, ಜಮೀನುದಾರರನ್ನು, ಬಂಡವಳಾಶಾಹಿಗಳನ್ನು ಮತ್ತು ಪಕ್ಷಾಂತರ ಪ್ರವೃತ್ತಿಯವರನ್ನು ಸ್ವತಂತ್ರ ಪಕ್ಷ ಸ್ವಾಗತಿಸಿತು. ಇದರ ಪರಿಣಾಮವಾಗಿ ಅದು ಹುಟ್ಟಿನಿಂದಲೇ ಪ್ರಭಾವಶಾಲೀ ವ್ಯಕ್ತಿಗಳನ್ನು ಒಳಗೊಂಡಿರುವ ರಾಜಕೀಯ ಪಕ್ಷವೆಂಬುದಾಗಿ ತೋರತೊಡಗಿತ್ತು. ಈ ಬಗೆಯ ಕಿರುಹಾದಿಯ ಮೂಲಕ ಪ್ರಭಾವ ಬೀರಲು ಯತ್ನಿಸುವಂಥ ರಾಜಕೀಯ ಪ್ರವೃತ್ತಿಯ ಅಪಾಯಗಳ ಬಗ್ಗೆ ಎಚ್ಚರಿಕೆಯನ್ನು ನೀಡುತ್ತ ದೀನ್‌ದಯಾಳ್ ಉಪಾಧ್ಯಾಯರು ಹೀಗೆಂದು ಹೇಳಿದ್ದರು. "ಒಂದು ಪಕ್ಷವಾಗಿ ನಾವು ಹೆಚ್ಚು ಸಂಘಟಿತವೂ, ಶಿಸ್ತುಬದ್ಧವೂ ಆಗಿರಬೇಕಾಗಿದೆ. ಶಿಸ್ತು ಉಲ್ಲಂಘನೆಯ ಒಂದೇ ಒಂದು ಪ್ರಸಂಗವೂ ನಮ್ಮ ಸಂಘಟನೆಯನ್ನು ದುರ್ಬಲಗೊಳಿಸಿಬಿಡುತ್ತದೆ. ಜನರ ಮನಸ್ಸಿನಲ್ಲಿ ಜುಗುಪ್ಸೆಯನ್ನು ಉಂಟುಮಾಡಿಬಿಡಬಹುದು. ನಾವು ಸ್ವತಃ ಶಿಸ್ತುಬದ್ಧರಾಗಿದ್ದಲ್ಲಿ ಮಾತ್ರವೇ ಜನರನ್ನೂ ಶಿಸ್ತುಪ್ರಿಯರನ್ನಾಗಿಸಬಲ್ಲೆವು. ಇಂದು ಸಿದ್ಧಾಂತ ಮತ್ತು ಪಕ್ಷಗಳ ಜೊತೆಗೆ ವ್ಯಕ್ತಿಗಳ ವಿಷಯದಲ್ಲಿಯೂ ಜನರು ನಂಬಿಕೆಯನ್ನಿರಿಸಿಕೊಳ್ಳಬೇಕಾಗಿದೆ. ದಿನವೂ ಪಕ್ಷವನ್ನು ಬದಲಿಸುವಂಥ ವ್ಯಕ್ತಿಗಳು ಪ್ರಜಾತಂತ್ರ ವ್ಯವಸ್ಥೆಯ ವಿಷಯದಲ್ಲಿ ಜುಗುಪ್ಸೆಯನ್ನು ಉಂಟುಮಾಡುತ್ತಿದ್ದಾರೆ. ಅವರ ಕಾರ್ಯ ಚಟುವಟಿಕೆಗಳ ಕೇಂದ್ರಬಿಂದು ಸಮಾಜವಾಗಿರದೆ, ಸ್ವಾರ್ಥ ಮಾತ್ರವಾಗಿಬಿಟ್ಟಿದೆ... ಈ ವಿಶ್ವಾಸಘಾತದಿಂದಾಗಿ ಅದಕ್ಕೆ [ಅಂದರೆ ಸಮಾಜಕ್ಕೆ] ಭಾರೀ ಧಕ್ಕೆಯೇ ಉಂಟಾಗಿಬಿಟ್ಟಿದೆ. ಈ ವಿಶ್ವಾಸವನ್ನು ಮತ್ತೆ ಮೂಡಿಸುವ, ದೃಢಪಡಿಸುವ ಸಲುವಾಗಿ, ನಾವು ತ್ಯಾಗ ಮತ್ತು ಪರಿಶ್ರಮ ಪೂರ್ವಕವಾಗಿ ಸಮಾಜಸೇವೆಯಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕಾಗಿದೆ."

ತಮ್ಮ ವಿಚಾರಧಾರೆಯ ಪ್ರತಿಪಾದನೆಗಾಗಿ ಉಪಾಧ್ಯಾಯರು ಒಂದು ಘೋಷಣಾ– ಮಾಲಿಕೆಯನ್ನೇ ಮುಂದಿರಿಸಿದ್ದರು: "ನಾಡಿನ ಸೈನೀಕೀಕರಣಕ್ಕಾಗಿ, ಜನತೆಯ ರಾಷ್ಟ್ರೀಯಕರಣಕ್ಕಾಗಿ, ಪ್ರಭುತ್ವದ ಪ್ರಜಾತಾಂತ್ರೀಕರಣಕ್ಕಾಗಿ ಹಾಗೂ ಪ್ರಜಾತಂತ್ರದ ವಿಕೇಂದ್ರೀಕರಣಕ್ಕಾಗಿ ಜನಸಂಘ ಕಾರ್ಯೋನ್ಮುಖವಾಗಬೇಕಾಗಿದೆ. ನಮ್ಮ ಮಾತಿನ ಕಡೆ ಯಾರೂ ಗಮನಹರಿಸದಂತೆ ಇರಕೂಡದು ಎನ್ನುವುದಾದರೆ, ನಾವೂ ನಮ್ಮನ್ನು ಅಷ್ಟರ ಮಟ್ಟಿಗೆ ಪ್ರಭಾವಶಾಲಿಗಳನ್ನಾಗಿಸಿಕೊಳ್ಳಬೇಕು. ಸತ್ಯದ ಜೊತೆಗೆ ಶಕ್ತಿ ಕೂಡಿ ನಡೆಯಬೇಕು." ಉಪಾಧ್ಯಾಯರು ತಮ್ಮ ವರದಿಗಳನ್ನು ಸಾಕಷ್ಟು ಭಾವಪೂರ್ಣವೂ, ಪ್ರೇರಕವೂ ಆಗಿರವಂಥ ಶಬ್ದಗಳೊಂದಿಗೆ ಸಮಾಪನಗೊಳಿಸುತ್ತಿದ್ದರು.

೧೯೬೨ರಲ್ಲಿ ಮೂರನೆಯ ಸಾರ್ವತ್ರಿಕ ಚುನಾವಣೆ ನಡೆಯಲಿತ್ತು. ಭಾರತದ ರಾಜಕಾರಣದಲ್ಲಿ ಜವಾಹರಲಾಲ್ ನೆಹರೂ ಅವರ ಮಾಂತ್ರಿಕ ಪ್ರಭಾವ ಕ್ರಮೇಣ ಕಮ್ಮಿಯಾಗ ತೊಡಗಿತ್ತು. ಪಾಕಿಸ್ತಾನ ಮತ್ತು ಚೀಣಾಗಳ ವಿಷಯದಲ್ಲಿ ಭಾರತೀಯ ಜನಸಂಘ ಬಹಳ ಹಿಂದಿನಿಂದಲೇ ಜನತೆಗೆ ಮತ್ತು ಸರ್ಕಾರಕ್ಕೆ ಎಚ್ಚರಿಕೆಯನ್ನು ನೀಡುತ್ತಲೇ ಬಂದಿತ್ತು. ಚೀಣೀ ಆಕ್ರಮಣದ ತರುವಾಯ ನಾಡಿನ ಜನರು ಜನಸಂಘದ ಎಚ್ಚರಿಕೆಯ ಮಾತುಗಳನ್ನು ಗಂಭೀರವಾಗಿ ಪರಿಗಣಿಸತೊಡಗಿದರು. ಅತ್ತ ಕಾಂಗ್ರೆಸ್ ಪಕ್ಷದ ಮೇಲಿನ ನೆಹರೂ ಅವರ ಹಿಡಿತ ಸಡಿಲಗೊಳ್ಳುತ್ತ ಬಂದಿದ್ದರಿಂದ, ಶಿಸ್ತಿನ ಕೊರತೆ ಹಾಗೂ ಗುಂಪುಗಾರಿಕೆ ಹೆಚ್ಚತೊಡಗಿತ್ತು. ವಿರೋಧ ಪಕ್ಷಗಳು ಕಾಂಗ್ರೆಸ್ ಪಕ್ಷ ಒಡೆದು ಛಿದ್ರವಾಗುವುದನ್ನೇ ಎದುರು ನೋಡುತ್ತಿದ್ದವು. ಕಾಂಗ್ರೆಸ್ ಪಕ್ಷ ಒಡೆದು ಹೋಗುವುದು ಹೊರನೋಟಕ್ಕೆ ವಿರೋಧ ಪಕ್ಷಗಳಿಗೆ

ಲಾಭವನ್ನುಂಟುಮಾಡುವಂತೆ ತೋರುತ್ತಿತ್ತು. ಆದರೆ ಇದು ನಾಡಿಗೆ ಹಿತಕಾರಿಯಾಗುವಂಥದಲ್ಲ ಎಂದು ಉಪಾಧ್ಯಾಯರು ಭಾವಿಸಿದ್ದರು. ಛಿದ್ರವಾದ ಕಾಂಗ್ರೆಸ್ ಪಕ್ಷವನ್ನು ದೂರ ಸರಿಸಿ ಅಧಿಕಾರದ ಗದ್ದುಗೆಯನ್ನೇರುವ ಮನೋಭಾವ ನಕಾರಾತ್ಮಕವಾಗಿರುವಂಥದು. ಪಕ್ಷಗಳ ಆಂತರಿಕ ಛಿದ್ರತೆ ಮತ್ತು ಶಿಸ್ತುಹೀನತೆ ಅದು ಯಾವುದೇ ಪಕ್ಷದ ವಿಷಯದಲ್ಲಾದರೂ ಸರಿ, ಪ್ರಜಾತಂತ್ರದ ರಾಜಕೀಯ ವ್ಯವಸ್ಥೆಯನ್ನು ದುರ್ಬಲಗೊಳಿಸುವಂಥದೇ ಆಗಿರುತ್ತದೆ. ತಮ್ಮ ವಿಧಾಯಕ ಪ್ರಯತ್ನಗಳ ಮೂಲಕವೇ ಸಮರ್ಥವೂ, ಸಕ್ಷಮವೂ ಆಗಿರುವಂಥ ಕಾಂಗ್ರೆಸ್ ಪಕ್ಷವನ್ನು ಸೋಲಿಸುವಂತಾಗಬೇಕು ಎಂಬುದು ದೀನ್ ದಯಾಳ್ ಉಪಾಧ್ಯಾಯರ ಬಯಕೆಯಾಗಿತ್ತು. ಇದಕ್ಕಾಗಿ ತಮ್ಮ ಕಾರ್ಯಕರ್ತರಿಗೆ ಎಚ್ಚರಿಕೆಯನ್ನು ನೀಡುತ್ತ ಅವರು ಹೀಗೆಂದಿದ್ದರು: "ಕಾಂಗ್ರೆಸ್ ಪಕ್ಷದಲ್ಲಿ ಗುಂಪುಗಾರಿಕೆ ತುಂಬ ಗಂಭೀರವಾಗುತ್ತ ಬರುತ್ತಿದೆ. ೧೯೬೭ರ ಚುನಾವಣೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಪ್ರತಿಯೊಂದು ಗುಂಪೂ ತನ್ನದೇ ಆದ ಪಟ್ಟುಗಳನ್ನು ಹಾಕತೊಡಗಿದೆ. ಸಾರ್ವತ್ರಿಕ ಚುನಾವಣೆಗೆ ಮುನ್ನ ಟಿಕೆಟ್ ನೀಡಿಕೆಯ ಪ್ರಶ್ನೆಯನ್ನೆತ್ತಿಕೊಂಡು ಬಹಳಷ್ಟು ಜನರು ಕಾಂಗ್ರೆಸ್ ಪಕ್ಷವನ್ನು ತ್ಯಜಿಸಿ ಹೊರಬರಲಿದ್ದಾರೆ ಎಂಬುದು ಖಂಡಿತ. ಕಾಂಗ್ರೆಸ್ ಪಕ್ಷದಿಂದ ಹೊರಬಂದ ಈ ಜನಗಳ ನೆರವಿನಿಂದ ತಮ್ಮ ರಾಜಕೀಯ ನೌಕೆಯನ್ನು ದಡಕ್ಕೆ ಕೊಂಡೆಯ್ಯುವ ನೀತಿಯನ್ನು ತಮ್ಮದಾಗಿಸಿಕೊಂಡಿರುವ ಪಕ್ಷಗಳು ಈ ಅವಕಾಶಕ್ಕಾಗಿ ಕಾತುರದಿಂದ ಕಾಯುತ್ತ ಇವೆ. ಆದರೆ, ನಾವು ನಮ್ಮ ಸಂಘಟನೆಯನ್ನು ಬಲಪಡಿಸಿಕೊಳ್ಳಬೇಕಾಗಿದೆ." ಈ ಉದ್ದೇಶದಿಂದ ಉಪಾಧ್ಯಾಯರು ತಮ್ಮ ವರದಿಯಲ್ಲಿ ವ್ಯಾವಹಾರಿಕ ಯೋಜನೆಯನ್ನೂ ರೂಪಿಸಿಕೊಟ್ಟಿದ್ದರು.

ಜನಸಂಘ ರೂಪದಳೆದಿದ್ದು ೧೯೫೨ರಲ್ಲಿ, ೧೯೫೩ರಲ್ಲಿ ಅದು ನಾಡಿನ ರಾಜಕೀಯ ಜೀವನದಲ್ಲಿ ತನ್ನ ಅಸ್ಮಿತೆಯನ್ನು ಗಂಭೀರವಾಗಿಯೇ ಉದ್ಘೋಷಿಸಿತು. ೧೯೬೭ರಲ್ಲಿ ಅದು ನಾಡಿನ ಸಮರ್ಥ ರಾಜಕೀಯ ಪಕ್ಷವಾಗಿ ಬೆಳೆದು ನಿಂತಿತು. ೧೯೬೭ರ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಹೇಗಾದರೂ ಮಾಡಿ ಸೋಲಿಸುವ ಸಲುವಾಗಿ, ಕಾಂಗ್ರೆಸ್ಸೇತರ ಒಕ್ಕೂಟ ತನ್ನ ದನಿಯನ್ನು ಜೋರಾಗಿಯೇ ಮೊಳಗಿಸ ತೊಡಗಿತ್ತು. ಉಪಾಧ್ಯಾಯರಿಗೆ ಇದು ಒಪ್ಪಿಗೆಯಾಗಿರಲಿಲ್ಲ. ವಾರಾಣಸಿಯಲ್ಲಿ ನವೆಂಬರ್ ೧೪ರಂದು ನಡೆದ ಭಾರತೀಯ ಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಹಾಗೂ ತನ್ನ ಹಿಂದಿನ ಅಧಿವೇಶನದಲ್ಲಿ ಮೂರನೆಯ ಸಾರ್ವತ್ರಿಕ ಚುನಾವಣೆಗಳಿಗೆ ಸಂಬಂಧಿಸಿದಂತೆ ಈ ರೀತಿ ತೀರ್ಮಾನವನ್ನು ಕೈಗೊಂಡಿತ್ತು....ನಾವು ಆದಷ್ಟು ಹೆಚ್ಚು ಸ್ಥಾನಗಳಲ್ಲಿ ಚುನಾವಣೆಗೆ ಸ್ಪರ್ಧಿಸೋಣ, ಇತರ ಪಕ್ಷಗಳೊಂದಿಗೆ ಯಾವುದೇ ಬಗೆಯ ಚುನಾವಣಾ ಒಪ್ಪಂದವನ್ನಾಗಲಿ, ಸಂಯುಕ್ತ ರಂಗವನ್ನಾಗಲೀ ಏರ್ಪಡಿಸಿಕೊಳ್ಳದೆ ನಮ್ಮ ಕಾರ್ಯಕ್ರಮಗಳ ಮತ್ತು ನೀತಿಗಳ ಆಧಾರದ ಮೇಲೆ



ಜನಾಭಿಪ್ರಾಯದ ಬೆಂಬಲವನ್ನು ಪಡೆದುಕೊಳ್ಳಲು ಪ್ರಯತ್ನಿಸೋಣ.... ಈ ನೀತಿಗೆ ಅನುಗುಣವಾಗಿ ಜನಸಂಘ ವಿಧಾನಸಭೆಗಳ ೧೧೬೭ ಸ್ಥಾನಗಳಿಗೆ ಹಾಗೂ ಲೋಕಸಭೆಯ ೧೯೮ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ನಿಲ್ಲಿಸಿತು. ಕಾಂಗ್ರೆಸ್ಸೇತರ ಪಕ್ಷಗಳಲ್ಲಿ ಜನಸಂಘವೇ ಅತ್ಯಂತ ಹೆಚ್ಚಿನ ಸಂಖ್ಯೆಯ ಸ್ಥಾನಗಳಿಗೆ ಸ್ಪರ್ಧಿಗಳನ್ನು ನಿಲ್ಲಿಸಿ ಚುನಾವಣಾ ಹೋರಾಟವನ್ನು ನಡೆಸುವ ಪ್ರಯತ್ನಮಾಡಿತು".

೧೯೬೭ರ ಚುನಾವಣೆಗಳ ಬಳಿಕ ಸಲ್ಲಿಸಿದ ತಮ್ಮ ವರದಿಯಲ್ಲಿ ಉಪಾಧ್ಯಾಯರು ಕ್ರಮವಾಗಿ ಪ್ರತಿಯೊಂದು ಪಕ್ಷದ ಸೋಲು–ಗೆಲುವುಗಳನ್ನು ವಿಶ್ಲೇಷಿಸಿದ್ದಾರೆ. ಮೂಡಿಬರುತ್ತಿದ್ದ ಹೊಸ ಪ್ರವೃತ್ತಿಗಳನ್ನು ವಿಶ್ಲೇಷಣೆಯನ್ನು ಮುಂದಿರಿಸಿದ್ದಾರೆ. ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಪ್ರಜಾತಂತ್ರದ ಹಿರಿಮೆಯನ್ನು ಎತ್ತಿಹಿಡಿಯುವ ತಮ್ಮ ಚಿಂತನೆಯನ್ನು ಮತ್ತು ಆಕಾಂಕ್ಷೆಯನ್ನು ವ್ಯಕ್ತಪಡಿಸುತ್ತ, ಅವರು ಹೀಗೆಂದು ವರದಿ ಮಾಡಿದ್ದರು:

"ಭಾರತೀಯ ಜನಸಂಘ ರಾಜಕಾರಣಕ್ಕೆ ವಿಧಾಯಕ ಸ್ವರೂಪವನ್ನೂ ನೀಡಬಯಸುತ್ತದೆ. ಹೀಗಾಗಿ, ಅದರ ಪ್ರಚಾರ ಮತ್ತು ಆಂದೋಳನಗಳು ಯಾವತ್ತೂ ವಿಧಾಯಕ ದೃಷ್ಟಿಕೋನದಿಂದಲೇ ನಡೆದು ಬರುತ್ತಿರುತ್ತವೆ. ಈ ಚುನಾವಣೆಗಳಲ್ಲಿಯೂ ನಾವೂ ನಮ್ಮ ನೆಲೆಯನ್ನು ಕಾಯ್ದುಕೊಂಡು ಬಂದಿದ್ದೇವೆ. ನಮ್ಮ ವಕ್ತಾರರು ಮುಖ್ಯವಾಗಿ ತಮ್ಮ ವಿಚಾರಗಳನ್ನು ಮುಂದಿರಿಸಿದ್ದಾರೆ. ಇತರ ಪಕ್ಷಗಳ ಬಗ್ಗೆ ಅವರು ಮಾಡಿರುವ ಟೀಕೆ–ಟಿಪ್ಪಣಿಗಳು ನಮ್ಮ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಆಧಾರಪೂರ್ವಕವೂ, ತರ್ಕಪೂರ್ಣವೂ ಆಗಿರುತ್ತಿದ್ದವು. ಕಾಂಗ್ರೆಸ್ ಪಕ್ಷದೊಂದಿಗೆ ಹಾಗೂ ಅದರಿಂದ ಹೊರಬಂದಿರುವ ಇತರ ಪಕ್ಷಗಳೊಂದಿಗೆ ನಮಗೆ ಮೂಲಭೂತವಾದ ಮತ್ತು ಸೈದ್ಧಾಂತಿಕವಾದ ಭಿನ್ನಭಿಪ್ರಾಯ ಇರುವುದರಿಂದ ಹಾಗೂ ನಮ್ಮನಾಡಿನ ನೆಲದಲ್ಲಿ ಹಾಗೂ ಸಂಸ್ಕೃತಿಯಲ್ಲಿ ಬೇರುಬಿಟ್ಟಿರುವಂಥ ಪರ್ಯಾಯ ನೀತಿ ಹಾಗೂ ಕಾರ್ಯಕ್ರಮ ನಮ್ಮಲ್ಲಿರುವುದರಿಂದಾಗಿ, ನಮ್ಮ ಟೀಕೆ–ಟಿಪ್ಪಣಿಗಳು ಆಧಾರಪೂರ್ವಕವೂ, ಇತರ ಪಕ್ಷಗಳ ಬೇರುಗಳನ್ನು ಕಿತ್ತೆಸೆಯುವಂಥವೂ ಆಗಿರುತ್ತದೆ. ನಿರ್ಭಯ ಮತ್ತು ನಿಸ್ವಾರ್ಥ ಮನಃಪ್ರವೃತ್ತಿಯಿಂದಾಗಿ ಅದರ ಅಲಗು ಕೆಲವೊಮ್ಮೆ ಹರಿತವಾದುದಾಗಿದ್ದಿರಬಹುದು. ಆದರೆ ಜನಸಂಘ ತನ್ನ ಇಡೀ ವಿಚಾರಧಾರೆಯಲ್ಲಿ ಎಲ್ಲಿಯೂ ವೈಯಕ್ತಿಕವಾದ ಆಕ್ಷೇಪಗಳಿಗಾಗಲೀ, ಕೋಮುವಾದಿ ಹಾಗೂ ಜಾತಿವಾದಿ ಭಾವನೆಗಳಿಗಾಗಲೀ, ಪ್ರಾದೇಶಿಕವಾದ ಅಥವಾ ವರ್ಗನಿಷ್ಠವಾದ ಸಿದ್ಧಾಂತಗಳಿಗಾಗಲೀ ಎಡೆಗೊಟ್ಟಿಲ್ಲ."

ದೀನ್ ದಯಾಳ್ ಉಪಾಧ್ಯಾಯ ಅವರ ಈ ಹೇಳಿಕೆ ಕೆಳ ಹಂತದವರೆಗೆ ಹಾಗೂ ವ್ಯಾವಹಾರಿಕ ಸ್ವರೂಪದಲ್ಲಿ ಎಷ್ಟರಮಟ್ಟಿಗೆ ಸತ್ಯವಾಗಿದ್ದಿರಬಹುದು ಎಂದು ಹೇಳುವುದು ಕಷ್ಟ. ಆದರೆ ಅವರು ತಮ್ಮ ಕಾರ್ಯಕರ್ತರಲ್ಲಿ ಹಾಗೂ ಸಂಘಟನೆಯಲ್ಲಿ

ಯಾವ ಬಗೆಯ ವಾತಾವರಣವನ್ನು ನಿರ್ಮಿಸಲು ಪ್ರಯತ್ನಿಸುತ್ತಿದ್ದರು ಎಂಬುದನ್ನು ಮೇಲಿನ ಹೇಳಿಕೆಯ ಆಧಾರದ ಮೇಲೆ ಸಹಜವಾಗಿಯೇ ಕಲ್ಪಿಸಿಕೊಳ್ಳಬಹುದಾಗಿದೆ. ಚುನಾವಣೆಗಳ ಸಂದರ್ಭದಲ್ಲಿ ಜನಸಂಘ ಕಾಂಗ್ರೆಸ್ ಪಕ್ಷ ಹಾಗೂ ಸಾಮ್ಯವಾದೀ ಪಕ್ಷಗಳ ನಡುವೆ ಪರಸ್ಪರ ಘರ್ಷಣೆಯ ಕೆಲವೊಂದು ಗೌರವಪ್ರಾಯವಲ್ಲದ ಘಟನೆಗಳು ಸಂಭವಿಸಿವೆ. ಆ ವಿಷಯಕ್ಕೆ ಸಂಬಂಧಿಸಿದಂತೆ ದೀನ್ ದಯಾಳ್ ಉಪಾಧ್ಯಾಯರು ಹೀಗೆಂದು ಹೇಳಿದರು: "ವಿವಿಧ ಪಕ್ಷಗಳು ನಡೆಸಿರುವ ಚುನಾವಣಾ ಪ್ರಚಾರದ ಕಾರ್ಯಗಳ ಬಗ್ಗೆ ನಿಷ್ಪಕ್ಷಪಾತಪೂರ್ವಕವಾದ ವಿಚಾರಣೆ ನಡೆಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಇದು ಇಂದಿನ ತಂಟೆ–ತಕರಾರುಗಳನ್ನು ಕೊನೆಗಾಣಿಸಲು ಮಾತ್ರವಲ್ಲದೆ ಮುಂದೆ ಚುನಾವಣಾ ಪ್ರಚಾರದ ಗುಣಮಟ್ಟವನ್ನು ಎತ್ತರಿಸುವ ದೃಷ್ಟಿಯಿಂದಲೂ ಅಗತ್ಯ."

ಈ ಚುನಾವಣೆಯಲ್ಲಿ ಪಾಲ್ಗೊಂಡಿದ್ದ ವಿವಿಧ ಪಕ್ಷಗಳ ಹಿನ್ನೆಲೆಯ ಬಗ್ಗೆ ತಮ್ಮ ವಿವೇಚನೆಯನ್ನು ಮುಂದಿರಿಸುತ್ತ, ದೀನ್ ದಯಾಳ್ ಉಪಾಧ್ಯಾಯರು ಹೀಗೆಂದು ಹೇಳಿದ್ದಾರೆ: "ಕಾಂಗ್ರೆಸ್ ಪಕ್ಷ, ಸಾಮ್ಯವಾದಿ ಪಕ್ಷ ಹಾಗೂ ಪ್ರಜಾಸಮಜವಾದಿ [ಸೋಷಿಯಲಿಸ್ಟ್] ಪಕ್ಷ – ಈ ಮೂರು ಪಕ್ಷಗಳು ಮುಸಲ್ಮಾನರ ಒಟ್ಟಾರೆ ಬೆಂಬಲವನ್ನು ಪಡೆದುಕೊಳ್ಳದ ಸ್ಪರ್ಧೆಯ ಅಂಗವಾಗಿ ಮುಸಲ್ಮಾನರಲ್ಲಿ ಪ್ರತ್ಯೇಕತೆಯ ಹಾಗೂ ಕೋಮುವಾದದ ಪ್ರವೃತ್ತಿಗೆ ಸಾಕಷ್ಟು ಉತ್ತೇಜನವನ್ನು ನೀಡುತ್ತಿವೆ... ಅವರ ಮನಸ್ಸಿನಲ್ಲಿ ಭಯವನ್ನು ಮೂಡಿಸುವ ಸಲುವಾಗಿ ಜನಸಂಘದ ವರ್ಚಸ್ಸನ್ನು ಎತ್ತಿನಿಲ್ಲಿಸಿವೆ ಹಾಗೂ ಜನಸಂಘದ್ದೆಂದು ಹೇಳಲಾಗಿರುವ ಸಂಕಷ್ಟವನ್ನು ಮುಂದೊಡುತ್ತಾ, ಅದರ ರಾಜಕೀಯ ಮತ್ತು ಆರ್ಥಿಕ ಕಾರ್ಯಕ್ರಮಗಳನ್ನೇ ಆಧಾರವಾಗಿಸಿಕೊಂಡು, ಸ್ವತಂತ್ರ ನಿರ್ಣಯವನ್ನು ಕೈಗೊಂಡು ಅವರು ಮತದಾನದಲ್ಲಿ ಭಾಗವಹಿಸಲು ಸಾಧ್ಯವಾಗದಂತೆ ಮಾಡಲು ಪ್ರಯತ್ನಿಸುತ್ತಿವೆ."

ಚುನಾವಣೆಯ ಸಂದರ್ಭದಲ್ಲಿ ವಿವಿಧ ರಾಜಕೀಯ ಪಕ್ಷಗಳು ಏರ್ಪಡಿಸಿಕೊಂಡಿರುವ ಒಕ್ಕೂಟಗಳು ಆಶ್ಚರ್ಯವನ್ನುಂಟುಮಾಡುವಂಥವಾಗಿರುವುದು ಮಾತ್ರವಲ್ಲ, ವಿಷಾದಪೂರ್ಣವೂ, ದುಃಖದಾಯಕವೂ ಆಗಿದೆ. ಅಧಿಕಾರ ವ್ಯಾಮೋಹದಿಂದಾಗಿ ಅವರು ಎಲ್ಲಿಯ ತನಕ ಹೋಗಬಲ್ಲರು ಎಂಬುದನ್ನು ಒಕ್ಕೂಟಗಳ ಸ್ವರೂಪದಿಂದಲೇ ಊಹಿಸಿಕೊಳ್ಳಬಹುದಾಗಿದೆ. "ಜನಸಂಘವನ್ನು ಸೋಲಿಸುವ ಸಲುವಾಗಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುವುದಾಗಿ ಸಾಮ್ಯವಾದಿ ಪಕ್ಷ ತೀರ್ಮಾನಿಸಿಕೊಂಡಿತ್ತು ಹಾಗೂ ಕೇರಳದಲ್ಲೂ ಅದು ಇದೇ ಪ್ರಸ್ತಾಪವನ್ನು ಮುಂದುವರಿಸಿತ್ತು. ಪಶ್ಚಿಮ ಬಂಗಾಳದಲ್ಲಿ ಅವರು ವಾಮಪಂಥೀಯ ಪಕ್ಷಗಳ ಸಂಯುಕ್ತ ಒಕ್ಕೂಟವನ್ನು ಸ್ಥಾಪಿಸಿಕೊಳ್ಳುವ ತಮ್ಮ ಹಿಂದಿನ ನೀತಿಯನ್ನೇ ಅಂಗೀಕರಿಸಿ, ಪರ್ಯಾಯ ಸರ್ಕಾರವನ್ನು ಅಸ್ತಿತ್ವಕ್ಕೆ ತರುವ ಘೋಷಣೆಗಳನ್ನು ಹಾಕಿತ್ತು.



ಈ ಸಲ ಪ್ರಜಾಸಮಾಜವಾದಿ ಪಕ್ಷ ಅದರೊಡನೆ ಸೇರಿಸಿಕೊಳ್ಳಲಿಲ್ಲ....... ಪಂಜಾಬಿನಲ್ಲಿ ಅಕಾಲಿ ದಳದೊಡನೆ ಹಾಗೂ ಆಂಧ್ರದಲ್ಲಿ ಸ್ವತಂತ್ರ ಪಕ್ಷದೊಡನೆ ಅದು ತೆರೆಮರೆಯ ಒಪ್ಪಂದಗಳನ್ನು ಮಾಡಿಕೊಂಡಿತ್ತು. ಬಹುಶಃ ಈ ಎರಡು ಪಕ್ಷಗಳು ಅಲ್ಲಿಯ ಜಾತಿನಿಷ್ಠ ಪರಿಸ್ಥಿತಿಯಿಂದಾಗಿ ಹಾಗೆ ಮಾಡಿಕೊಂಡಿದ್ದಿರಬೇಕು. ಮಹಾರಾಷ್ಟ್ರದಲ್ಲಿ ಅವರು ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಹೆಸರಿನಲ್ಲಿಯೇ ಹಿಂದೂ ಮಹಾಸಭೆ, ರಿಪಬ್ಲಿಕನ್ ಪಾರ್ಟಿ ಹಾಗೂ ಶೇತ್ಕರಿ ಕಾರ್ಮಿಕ ಪಕ್ಷದೊಂದಿಗೆ ಒಪ್ಪಂದ ಮಾಡಿಕೊಂಡು ಚುನಾವಣೆಗೆ ಸ್ಪರ್ಧಿಸಿದರು.

"ಕಾಂಗ್ರೆಸ್ ಪಕ್ಷದೊಂದಿಗೆ ಮಾತ್ರವಲ್ಲದೆ ಎಲ್ಲ ಪಕ್ಷಗಳೊಂದಿಗೆ – ಇವುಗಳಲ್ಲಿ ಅಕಾಲಿ ದಳ, ದ್ರಾವಿಡ ಮುನ್ನೇತ್ರ ಕಳಗಮ್ ಮತ್ತು ಸಾಮ್ಯವಾದಿ ಪಕ್ಷಗಳು ಸೇರಿದ್ದುವು ಸ್ವತಂತ್ರ ಪಕ್ಷ ಒಂದಲ್ಲ ಒಂದು ಬಗೆಯ ಒಡಂಬಡಿಕೆಯನ್ನು ಮಾಡಿಕೊಂಡಿತು.

"ಹಿಂದೂ ಮಹಾಸಭೆ ಮತ್ತು ರಾಮರಾಜ್ಯ ಪರಿಷತ್ತು ಪರಸ್ಪರ ಚುನಾವಣೆ ಒಪ್ಪಂದವನ್ನು ಏರ್ಪಡಿಸಿಕೊಂಡು ಚುನಾವಣೆಗಳಲ್ಲಿ ಪಾಲ್ಗೊಂಡವು. ರಿಪಬ್ಲಿಕನ್ ಪಕ್ಷದ ಎರಡೂ ಬಣಗಳು ಕ್ರಮಶಃ ಪ್ರಜಾಸಮಜವಾದೀ ಪಕ್ಷದೊಂದಿಗೆ ಸೇರಿಕೊಂಡು ಚುನಾವಣೆಯನ್ನು ಎದುರಿಸದುವು. ಉತ್ತರ ಪ್ರದೇಶದಲ್ಲಿ ಹಿಂದಿನ ಮುಸ್ಲಿಮ ಲೀಗ್‌ನ ತತ್ವಗಳು ಹಗೂ ರಿಪಬ್ಲಿಕನ್ ಪಕ್ಷಗಳ ನಡುವೆ ಒಪ್ಪಂದ ಏರ್ಪಟ್ಟಿತ್ತು. ಘೋರ ಕೋಮುವಾದಿ ಪಕ್ಷವಾದ ಮುಸ್ಲಿಂ ಲೀಗ್‌ನ ಹುರಿಯಾಳುಗಳು ರಿಪಬ್ಲಿಕನ್ ಪಕ್ಷದ ಹೆಸರಿನಲ್ಲಿ ಚುನಾವಣೆಯ ಕಣಕ್ಕೆ ಇಳಿದರು. ಕಾಂಗ್ರೆಸ್ ಪಕ್ಷ ಝಾರ್ಖಂಡ್ ಪಕ್ಷದೊಂದಿಗೆ ಚುನಾವಣೆ ಒಪ್ಪಂದವನ್ನು ಏರ್ಪಡಿಸಿಕೊಳ್ಳಲು ಪ್ರಯತ್ನಿಸಿತ್ತಾದರೂ, ಅದರಲ್ಲಿ ಅದು ಯಶಸ್ವಿಯಾಗಲಿಲ್ಲ. ಯಾವುದೇ ಪಕ್ಷದೊಂದಿಗೆ ಒಪ್ಪಂದವನ್ನು ಏರ್ಪಡಿಸಿಕೊಳ್ಳದೆ ತಮ್ಮ ನೀತಿಗಳ ಆಧಾರದ ಮೇಲೆ ಚುನಾವಣೆಯನ್ನು ಎದುರಿಸಿದ ಪಕ್ಷಗಳೆಂದರೆ ಭಾರತೀಯ ಜನಸಂಘ ಮತ್ತು ಸಮಾಜವಾದಿ ಪಕ್ಷ ಮಾತ್ರವೇ.

"ಕಾಂಗ್ರೆಸ್ ತೀವ್ರಗತಿಯಲ್ಲಿ ಪತನಾಭಿಮುಖಿಯಾಗುತ್ತಲಿದೆ, ಕಮ್ಯೂನಿಸ್ಟರು ತಮ್ಮ ಭದ್ರ ಕೋಟೆಗಳಲ್ಲಿ ಪೆಟ್ಟುತಿಂದರೂ, ಇತರ ಕ್ಷೇತ್ರಗಳಲ್ಲಿ ಆ ಕೊರತೆಯನ್ನು ತುಂಬಿಕೊಂಡು ಅದು ಸಾರ್ವದೇಶಿಕ ನೆಲೆಯಲ್ಲಿ ಸ್ವಲ್ಪ ಮಟ್ಟಿಗೆ ತನ್ನ ಸ್ಥಿತಿಯನ್ನು ಉತ್ತಮಪಡಿಸಿಕೊಂಡು ನೆಲೆನಿಂತಿದೆ. ಪ್ರಜಾಸಮಾಜವಾದಿ ಪಕ್ಷ ಕೊನೆಯುಸಿರೆಳೆಯುವ ಅಥವಾ ಇಲ್ಲವಾಗಿಬಿಡುವ ಅಧ್ಯಾಯ ಪ್ರಾರಂಭವಾಗಿದೆ. ಭಾರತೀಯ ಜನಸಂಘ ಸಾಕಷ್ಟು ಮುಂದೆ ಹೆಜ್ಜೆಯನ್ನಿಟ್ಟಿದೆ. ಆದರೆ ಯಾವ ಐತಿಹಾಸಿಕ ಕಾರ್ಯವನ್ನು ಈಡೇರಿಸುವ ಸಲುವಾಗಿ ಅದು ಜನ್ಮ ತಾಳಿದೆಯೋ, ಆ ಉದ್ದೇಶದ ಈಡೇರಿಕೆಯಲ್ಲಿ ಅದು ಇನ್ನೂ ಬಹಳ ಹಿಂದೆಯೇ ಉಳಿದಿದೆ."

ಒಳದಾರಿಯ ಮೂಲಕ ಚುನಾವಣೆಗಳನ್ನು ಗೆಲ್ಲುವುದನ್ನು ಹಾಗೂ ಸಮಯ–

ಸಾಧಕ ಒಕ್ಕೂಟಗಳ ರಾಜಕೀಯವನ್ನು ದೀನ್ ದಯಾಳ್ ಉಪಾಧ್ಯಾಯರು ಸಾಮಾಜಿಕ ದೌರ್ಬಲ್ಯವೆಂದೇ ಭಾವಿಸುತ್ತಿದ್ದರು. ಅವರು ಸಿದ್ಧಾಂತನಿಷ್ಠ ರಾಜಕೀಯದ ಪರವಾಗಿ ಇದ್ದಂಥವರು. ಹೀಗಾಗಿ, ಸೈದ್ಧಾಂತಿಕವಾದ ಹಾಗೂ ಆರೋಗ್ಯಪೂರ್ಣವಾದ ರಾಜಕೀಯ ವ್ಯವಹಾರದ ದೃಷ್ಟಿಯಿಂದ ಈ ಮೂರನೆಯ ಮಹಾ ಚುನಾವಣೆಗೆ ಬೆಲೆಕಟ್ಟುವ ಪ್ರಯತ್ನವನ್ನು ಮಾಡಿದರು: “ಈ ಚುನಾವಣೆಯ ಫಲಿತಾಂಶಗಳನ್ನು ಆಧಾರವಾಗಿ ಇಟ್ಟುಕೊಂಡು ಭಾರತದ ರಾಜಕೀಯದ ಸೈದ್ಧಾಂತಿಕ ನಿಲುವಿನ ವಿಷಯದಲ್ಲಿ ಯಾವುದೇ ತೀರ್ಮಾನಕ್ಕೆ ಬರುವುದು ಕಷ್ಟವಾಗುತ್ತದೆ. ಏಕೆಂದರೆ ಮತದಾರನ ತೀರ್ಮಾನ ಅನೇಕ ಸಂಗತಿಗಳಿಂದ ಪ್ರಭಾವಿತವಾಗಿರುತ್ತದೆ. ಅದರಲ್ಲಿ ಸೈದ್ಧಾಂತಿಕ ನಿಲುವು ತೀರ ಕಮ್ಮಿಯಾಗಿರುತ್ತದೆ. ಆದ್ದರಿಂದಲೇ ಬಹುಶಃ ಅನೇಕ ಪಕ್ಷಗಳ ದೊಡ್ಡ ದೊಡ್ಡ ನಾಯಕರುಗಳು ಕೂಡ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ತಮ್ಮ ಸಿದ್ಧಾಂತಗಳನ್ನು ಕುರಿತ ವಿವೇಚನೆಯನ್ನು ಮುಂದಿರಿಸುವುದು ಅಗತ್ಯವೆಂದು ಭಾವಿಸಲಿಲ್ಲ. ತನ್ನದು ಇತರ ಎಲ್ಲ ಪಕ್ಷಗಳಿಗಿಂತಲೂ ದೊಡ್ಡದಾದ ಪಕ್ಷವಾಗಿರುವುದರಿಂದಲೂ, ಇತರ ಯಾವ ಪಕ್ಷಗಳಲ್ಲಿಯೂ ಜವಾಹರ್‌ಲಾಲ್ ನೆಹರೂ ಅವರಂತ ಹೆಸರಾಂಥ ನಾಯಕರು ಇಲ್ಲದಿರುವುದರಿಂದಲೂ ಜನರ ಮತಗಳನ್ನು ಪಡೆದುಕೊಳ್ಳುವ ಹಕ್ಕು ತನಗೆ ಮಾತ್ರ ಇದೆ ಎಂದು ಹೇಳಿಕೊಳ್ಳುತ್ತ ಬಂದಿದೆ. ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಪಕ್ಷ ವಿಫಲವಾಗಿದೆ ಅಥವಾ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳೊಂದಿಗೆ ಹೋಲಿಸಿ ನೋಡಿದರೆ ಸಮುದಾಯದ ದೃಷ್ಟಿಯಿಂದ ಹಾಗೂ ಪ್ರಾದೇಶಿಕ ಹಿತದೃಷ್ಟಿಯಿಂದ ಉತ್ಕೃಷ್ಟರಾಗಿರುವಂಥ ವ್ಯಕ್ತಿಗಳಿಗೆ ನಾವು ಟಿಕೆಟ್ ನೀಡಿದ್ದೇವೆ ಎಂದು ಉಳಿದ ಪಕ್ಷಗಳು ಹೇಳಿಕೊಳ್ಳುತ್ತಾ ಇವೆ. ಇದಕ್ಕೆ ಎಷ್ಟರ ಮಟ್ಟಿನ ಯಶಸ್ಸು ದೊರೆಯಿತು ಎಂದು ಹೇಳುವುದು ನನ್ನ ಮಟ್ಟಿಗೆ ಸಾಧ್ಯವಿಲ್ಲ. ಜನರು ಬೆದರಿಕೆಗೆ ಅಥವಾ ಪ್ರಚೋದನೆಗಳಿಗೆ ಬಲಿಯಾಗಿಬಿಟ್ಟಿದ್ದಾರೆ ಅಥವಾ ಕೋಮುವಾದಿ ಅಥವಾ ಜಾತಿಯ ಭಾವನೆಗಳಲ್ಲಿ ಕೊಚ್ಚಿಹೋಗಿಬಿಟ್ಟಿದ್ದಾರೆ ಎಂದಾದರೆ, ನಮ್ಮ ಪ್ರಜಾತಂತ್ರನಿಷ್ಠ ಅಧಿಕಾರಗಳನ್ನು ಸರಿಯಾದ ಅರ್ಥದಲ್ಲಿ ಬಳಸಿಕೊಳ್ಳುವುದಕ್ಕೆ ನಮ್ಮ ಜನರನ್ನು ನಾವು ಸುಸಜ್ಜಿತರನ್ನಾಗಿಸಿಲ್ಲ ಎಂದೇ ಹೇಳಬೇಕಾಗುತ್ತದೆ.” ಈ ವಿಷಯದ ಬಗ್ಗೆ ಸಮೀಕ್ಷೆಯನ್ನು ನಡೆಸುವ ಸಲುವಾಗಿ ಅಥವಾ ಸಮಸ್ಯೆಯನ್ನು ಇಲ್ಲವಾಗಿಸುವ ದಾರಿಯನ್ನು ಕಂಡುಕೊಳ್ಳುವ ಸಲುವಾಗಿ, ಅವರು ತಮ್ಮ ಪಕ್ಷದಲ್ಲಿ ಒಂದು ಉಪ ಸಮಿತಿಯನ್ನು ರಚಿಸಿದರು.

೧೯೬೭ರ ಸಾರ್ವತ್ರಿಕ ಚುನಾವಣೆ ಭಾರತೀಯ ರಾಜಕೀಯದಲ್ಲಿ ಜನಸಂಘವನ್ನು ಒಂದು ಉಲ್ಲೇಖನೀಯ ಶಕ್ತಿಯನ್ನಾಗಿಸಿತು. ಅಂತೆಯೇ ಈ ಸಂಘಟನೆಯ ಹಿಂದೆ ಕಾರ್ಯಶೀಲವಾಗಿದ್ದ ವ್ಯಕ್ತಿತ್ವ ಮತ್ತು ಪ್ರತಿಭೆ ದೀನ್ ದಯಾಳ್ ಉಪಾಧ್ಯಾಯರದೇ ಆಗಿತ್ತು ಎಂಬುದು ಮುಂಚೂಣಿಗೆ ಬರತೊಡಗಿತು.



ಹೀಗೆ ಮುಂಚೂಣಿಗೆ ಬರುವುದು ಕಷ್ಟವೇ ಆಗಿತ್ತು. ಏಕೆಂದರೆ, ಸಂಘಟನೆಯ ಹೊರಗೆ ವ್ಯಕ್ತಿತ್ವವನ್ನು ಬೆಳಕಿಗೆ ತರುವಂಥ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅವರು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತಿರಲಿಲ್ಲ. ಸಂಘ ಮತ್ತು ಜನಸಂಘಗಳು ಮಾತ್ರವೇ ಅವರ ಸಾರ್ವಜನಿಕ ವೇದಿಕೆಗಳಾಗಿದ್ದವು.

ಸಂಘಟನೆಯ ಶಕ್ತಿವರ್ಧನೆ ಒಂದೆಡೆ ಕಾರ್ಯಕರ್ತರಲ್ಲಿ ಉತ್ಸಾಹವನ್ನು ಮೂಡಿಸಿದರೆ ಇನ್ನೊಂದೆಡೆ ಅವರನ್ನು ಅಹಂಕಾರಿಗಳನ್ನಾಗಿಸಿ, ಬೇರೆ ದಾರಿಯಲ್ಲಿ ಹೋಗುವಂತೆಯೂ ಮಾಡಿಬಿಡುತ್ತದೆ. ಆಂದೋಳನವನ್ನು ಮತ್ತು ವಿರೋಧ ಪಕ್ಷದ ಕಾರ್ಯಕರ್ತರನ್ನು ನೆಪವಾಗಿಸಿಕೊಂಡು, ನಿಯಮಗಳನ್ನು ಉಲ್ಲಂಘಿಸುವುದನ್ನು ತಮ್ಮ ಹಕ್ಕು ಎಂದು ಭಾವಿಸತೊಡಗಿದ್ದಾರೆ. ಅನೇಕ ರಾಜಕೀಯ ಪಕ್ಷಗಳೂ ತಮ್ಮ ಆಂದೋಳನಕಾರಿ ಅಥವಾ ಕ್ರಾಂತಿಕಾರಿ ಸ್ವರೂಪದ ಹಿನ್ನೆಲೆಯಲ್ಲಿ, ತಮ್ಮ ಕಾರ್ಯಕರ್ತರ ಈ ಬಗೆಯ ಮನೋವೃತ್ತಿಗೆ ಪ್ರೋತ್ಸಾಹವನ್ನು ನೀಡುತ್ತಿವೆ. ದೀನ್ ದಯಾಳ್ ಉಪಾಧ್ಯಾಯರು ಈ ವಿಚಾರದಲ್ಲಿ ಯವಾಗಲೂ ಎಚ್ಚರದಿಂದ ಇರುತ್ತಿದ್ದರು. ಅವರು ಜನಸಂಘದ ವತಿಯಿಂದ ಆಯೋಜಿಸಲಾಗುತ್ತಿದ್ದ ಹಾಗೂ ಶಿಸ್ತುಬದ್ಧವಾದ ಆಂದೋಳನದ ತಮ್ಮ ರಾಜಕೀಯ ರೀತಿನೀತಿಗಳ ಬಗ್ಗೆ ಅವರು ಹೀಗೆಂದು ತಿಳಿಸಿದ್ದರು : “ಜುಲೈ ೧ ೧೯೬೨ ರಿಂದ ರೈಲು ಪ್ರಯಣದ ದರಗಳಲ್ಲಿ ಏರಿಕೆ ಉಂಟಾಗಲಿತ್ತು. ಅಂದು ಈ ಏರಿಕೆಯ ವಿರುದ್ಧವಾಗಿ ಹಾಗೂ ಸಾಮಾನ್ಯವಾಗಿ ಹೊಸ ತೆರಿಗೆಗಳ ವಿರುದ್ಧವಾಗಿ ರೈಲು ನಿಲ್ದಾಣಗಳಲ್ಲಿ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು. ಪ್ರದರ್ಶನ ಶಾಂತಿಯುತವಾಗಿರಬೇಕು ಹಾಗೂ ಪ್ರಯಣಿಕರಿಗಾಗಲೀ ರೈಲ್ವೆ ಸಿಬ್ಬಂದಿಗಾಗಲಿ ಯಾವುದೇ ರೀತಿಯ ತೊಂದರೆ ಉಂಟುಮಾಡಬಾರದೆಂದು, ಕಾನೂನು ಉಲ್ಲಂಘಿಸಬಾರದೆಂದು ತೀರ್ಮಾನಿಸಲಾಗಿತ್ತು. ಇದಕ್ಕನುಗುಣವಾಗಿ ಇಡೀ ದೇಶದಲ್ಲಿನ ಸಣ್ಣ–ದೊಡ್ಡ ಎಲ್ಲ ರೈಲು ನಿಲ್ದಾಣಗಳಲ್ಲಿ ಹಾಗೂ ರೈಲುಗಳ ಎದುರಿಗೆ ಪ್ರದರ್ಶನಗಳು ನಡೆದುವು. ಅಲ್ಲಲ್ಲಿ ಪ್ರಯಾಣಿಕರಿಗೆ ಕರಪತ್ರಗಳನ್ನು ಹಂಚಿ, ಈ ತೆರಿಗೆಗಳ ಬಗ್ಗೆ ಅರಿವನ್ನು ಉಂಟುಮಾಡಲಾಯಿತು. ರೈಲ್ವೇ ಸಿಬ್ಬಂದಿ ಪ್ಲಾಟ್‌ಪಾರಂ ಟಿಕೆಟ್ಟುಗಳನ್ನು ನೀಡದೆ ಇದ್ದಂಥ ಅಥವಾ ಪ್ಲಾಟ್‌ಫಾರಂ ಟಿಕೆಟ್ಟುಗಳನ್ನು ಪಡೆದಿದ್ದರೂ ಪೋಲಿಸರು ಕೆಲವು ಪ್ರದರ್ಶನಕಾರರನ್ನು ಬಂಧಿಸಿದ್ದಂಥ ಒಂದೆರಡು ಸಂದರ್ಭಗಳನ್ನು ಬಿಟ್ಟರೆ, ಯಾವುದೇ ಅಹಿತಕರ ಘಟನೆ ನಡೆದಿರಲಿಲ್ಲ. ದೀನ್ ದಯಾಳ್ ಉಪಾಧ್ಯಾಯರು ತಮ್ಮ ವರದಿಯಲ್ಲಿ ಈ ಬಗೆಯ ವರ್ಣನೆಗಳನ್ನು ಸಾಮಾನ್ಯವಾಗಿ ಸೇರಿಸುತ್ತಿದ್ದರು. ಇದರಿಂದ ಕೆಳಹಂತಗಳಲ್ಲಿ ಇದಕ್ಕೆ ವಿರುದ್ಧವಾದ ವರ್ತನೆಗಳು ನಡೆಯುತ್ತಿದ್ದಂಥ ಎಡೆಗಳಲ್ಲಿ ತಮ್ಮಿಂದ ತಪ್ಪಾಗಿದೆ ಎಂಬ ಅಂಶದತ್ತ ಅವರ ಗಮನಹರಿಯುತ್ತಿತ್ತು ಹಾಗೂ ಹೊಸ ಕಾರ್ಯಕರ್ತರು ಸಂಘಟನೆಯ

ಆಂದೋಳನಾತ್ಮಕ ಸಂಸ್ಕೃತಿಯನ್ನು ಅರಿತುಕೊಂಡು, ಜವಾಬ್ದಾರಿಯಿಂದ ಕೂಡಿದ ಹಾಗೂ ಸಕಾರಾತ್ಮಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತಿತ್ತು.

ದೀನ್ ದಯಾಳ್ ಉಪಾಧ್ಯಾಯರು ಸಮಯ–ಸಾಧಕ ಒಕ್ಕೂಟಗಳನ್ನು ವಿರೋಧಿಸುತ್ತಿದ್ದಂತೆಯೇ, ರಾಜಕೀಯ ಅಸ್ಪೃಶ್ಯತೆಯನ್ನು ಅನಪೇಕ್ಷಣೀಯವೆಂದು ಭಾವಿಸುತ್ತಿದ್ದರು. ವಿವಿಧ ರಾಷ್ಟ್ರೀಯ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಎಲ್ಲ ಪಕ್ಷಗಳ ರಾಜಕೀಯ ಕಾರ್ಯಕರ್ತರು ಒಂದುಗೂಡಿ ಕೆಲಸಮಾಡಬೇಕೆಂದು ಅವರು ಬಯಸುತ್ತಿದ್ದರು: ಸಾಮ್ಯವಾದಿ ಚೀಣಾದ ಭಾರೀ ಆಕ್ರಮಣದಿಂದಾಗಿ ಹಾಗೂ ರಾಷ್ಟ್ರಪತಿಗಳು ಹೊರಡಿಸಿರುವ ತುರ್ತು ಪರಿಸ್ಥಿತಿಯ ಘೋಷಣೆಯಿಂದಾಗಿ ನಾಡಿನ ರಾಜಕೀಯ ಪರಿಸ್ಥಿತಿ ಸಾಮಾನ್ಯವಾಗಿ ಉಳಿದಿಲ್ಲ. ಜನರಲ್ಲಿ ಸುಪ್ತವಾಗಿದ್ದ ರಾಜಕೀಯ ಭಾವನೆ ಈಗ ಎಚ್ಚರಗೊಂಡಿದೆ. ಈಗ ಏಕತೆಯ ವಾತವರಣ ಮೂಡಿದೆ. ವಿವಿಧ ಪಕ್ಷಗಳು ಒಂದೇ ವೇದಿಕೆಯ ಮೇಲೆ ಕಾಣಿಸಿಕೊಳ್ಳುತ್ತಿರುವುದರಿಂದ, ಪರಸ್ಪರರನ್ನು ಅರಿತುಕೊಳ್ಳುವ ಹಾಗೂ ಪೂರ್ವಾಗ್ರಹಗಳಿಂದ ಮುಕ್ತವಾಗುವ ಅವಕಾಶ ದೊರೆತಂತಾಗಿದೆ. ಸಹಕಾರ ಮತ್ತು ಸದ್ಭಾವನೆಗಳ ಈ ವಾತಾವರಣ ಉಳಿದುಕೊಂಡು ಬಂದಿದ್ದೇ ಆದಲ್ಲಿ, ಅದು ಖಂಡಿತವಾಗಿಯೂ ನಾಡಿನ ರಾಜಕೀಯ ಪ್ರಗತಿಗೆ ಆರೋಗ್ಯದಾಯಕವಾದ ಬೆಳವಣಿಗೆಯೇ ಆಗುತ್ತದೆ."

ಚೀಣಿಯರ ಆಕ್ರಮಣಕ್ಕೆ ವಿರುದ್ಧವಾಗಿ ಹಾಗೂ ಹಿಂದಿ ಭಾಷೆಯ ಬಗೆಗಿನ ಬೆಂಬಲದ ವಿಷಯದಲ್ಲಿ ನಾಡಿನ ಸಾಮ್ಯಾವಾದೀತರ ಪಕ್ಷಗಳ ನಡುವೆ– ಅದರಲ್ಲೂ ಭಾರತೀಯ ಜನಸಂಘ ಹಾಗೂ ಡಾ. ಲೋಹಿಯಾ ಅವರ ಸಮಾಜವಾದಿ ಪಕ್ಷಗಳ ನಡುವೆ– ಒಂದು ಬಗೆಯ ನಿಕಟತೆ ಹಾಗೂ ರಾಜಕೀಯ ಸದ್ಭಾವನೆ ಉಂಟಾಗಿತ್ತು. ೧೯೬೩ರಲ್ಲಿ ಉತ್ತರ ಪ್ರದೇಶದ ೩ ಚುನಾವಣಾ ಕ್ಷೇತ್ರಗಳಲ್ಲಿ ಈ ಪಕ್ಷಗಳು ಚುನವಣಾ ಹೋರಾಟವನ್ನು ನಡೆಸುತ್ತಿದ್ದವು. ಹೀಗಾಗಿ ಈ ಎರಡೂ ಪಕ್ಷಗಳು ಒಂದುಗೂಡಿ ಒಂದು ಸ್ಥಿರವಾದ ಹಾಗೂ ಕಾಂಗ್ರೇಸ್ಸೇತರ ಪಕ್ಷಗಳ ಸಮಾನ ವೇದಿಕೆಯನ್ನು ರೂಪಿಸಬೇಕೆಂಬ ಭಾವನೆ ಬಲಗೊಳ್ಳತೊಡಗಿತ್ತು. ಈ ಬಗೆಯ ವೇದಿಕೆ ಯಶಸ್ವಿಯಾಗಬಹುದೆಂಬುದಕ್ಕೆ ಯಾವುದೇ ದೃಢವಾದ ಆಧಾರ ದೀನ್ ದಯಾಳ್ ಉಪಾಧ್ಯಾಯರಿಗೆ ಗೋಚರಿಸುತ್ತಿರಲಿಲ್ಲ. ಆದ್ದರಿಂದ, ರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಏಕಾಭಿಪ್ರಾಯವನ್ನಿರಿಸಿ ಕೊಂಡಿರುವಂಥ ವಿಷಯಗಳ ಬಗ್ಗೆ ಒಂದುಗೂಡಿ ಕೆಲಸ ಮಾಡುತ್ತಲೇ ತಮ್ಮ ತಮ್ಮ ವೇದಿಕೆಗಳಲ್ಲಿ ತಮ್ಮ ತಮ್ಮ ಸಿದ್ಧಾಂತ ಮತ್ತು ನೀತಿಗಳಿಗೆ ಅನುಗುಣವಾಗಿ ಪಕ್ಷನಿಷ್ಠ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರಬೇಕೆಂದು ಅವರು ಸಲಹೆ ನೀಡಿದರು: "ಬೇರೆ ಬೇರೆ ಪಕ್ಷಗಳು ತಮ್ಮದೇ ಆದ ದೃಷ್ಟಿಕೋನಗಳನ್ನು ಇರಿಸಿಕೊಂಡಿರುತ್ತವೆ. ಜನರು ಆ ಆದರ್ಶಗಳ ಬಗ್ಗೆ ಚಿಂತನೆ ಮಾಡುವುದಿಲ್ಲ. ಸದ್ಭಾವನೆಯ ನೆಲೆಯಲ್ಲಿ ಅವರು



ಎಲ್ಲ ಪಕ್ಷಗಳೂ ಒಂದೂಗೂಡಿದರೆ ಎಷ್ಟು ಚೆನ್ನಾಗಿರುತ್ತದೆ ಎಂದು ಯೋಚಿಸುತ್ತಾರೆ. ಆದರೆ ವಿವಿಧ ಪಕ್ಷಗಳು ರೂಪುಗೊಂಡಿರುತ್ತವೆ ಹಾಗೂ ತಮ್ಮದೇ ಆದ ಕೆಲವೊಂದು ಮೂಲಭೂತ ಸಿದ್ಧಾಂತಗಳನ್ನು ಒಳಗೊಂಡಿರುತ್ತವೆ; ಅವುಗಳ ಆಧಾರದ ಮೇಲೆಯೇ ಅವು ಅಸ್ತಿತ್ವಕ್ಕೆ ಬಂದಿರುತ್ತವೆ. ಇದಕ್ಕೆ ಸದ್ಭಾವನೆ ಮಾತ್ರವೇ ಸಾಕಾಗುವುದಿಲ್ಲ. ಆದ್ದರಿಂದ ನಾವು ಕೇವಲ ಕಲ್ಪನೆಗೆ ಮಾತ್ರವೇ ನಮ್ಮನ್ನು ಸೀಮಿತಗೊಳಿಸಿಕೊಂಡಿರಬಾರದೆಂದೂ, ಸಫಲತೆಯ ಸಾಧ್ಯತೆ ಗೋಚರಿಸದಿರುವಂಥ ಯಾವುದೇ ಕಾರ್ಯವನ್ನು ಕೈಗೊಳ್ಳಕೂಡದೆಂದೂ ನಾವು ತೀರ್ಮಾನಿಸಿದ್ದೇವೆ. ಏಕಾಭಿಪ್ರಾಯ ಇರುವ ವಿಚಾರಗಳಲ್ಲಿ ಒಂದುಗೂಡಿ ಕೆಲಸಮಾಡುವುದು ಹಾಗೂ ಅಂಥ ಏಕಾಭಿಪ್ರಾಯ ಇಲ್ಲದಿರುವ ವಿಚಾರಗಳಲ್ಲಿ ನಮ್ಮ ವೇದಿಕೆಗಳನ್ನೇ ಆಶ್ರಯಿಸಿಕೊಳ್ಳುವುದು ಇದಕ್ಕಿಂತಲೂ ಉತ್ತಮವಾದ ಕಾರ್ಯವಾಗುತ್ತದೆ."

೧೯೬೩ರಲ್ಲಿ ಜನಸಂಘದ ಹಾಗೂ ನಾಡಿನ ವಿಷಯದಲ್ಲಿ ಎರಡು ಮಹತ್ವಪೂರ್ಣ ಘಟನೆಗಳು ನಡೆದುವು. ಮೊದಲನೆಯದು ರಾಷ್ಟ್ರೀಯ ಮಹತ್ವವನ್ನು ಪಡೆದುಕೊಂಡಿದ್ದ ಮೂರು ಸಂಸದೀಯ ಉಪ–ಚುನಾವಣೆಗಳು ನಡೆದದ್ದು. ಇದಕ್ಕೆ ಎರಡು ಕಾರಣಗಳಿದ್ದವು. ಒಂದು ಈ ಉಪ–ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ಕಾಂಗ್ರೆಸ್ ಮತ್ತು ಸಾಮ್ಯವಾದಿ ಪಕ್ಷಗಳು ಹಾಗೂ ಕಾಂಗ್ರೆಸ್ಸೇತರ ಮತ್ತು ಸಾಮ್ಯವಾದೀತರ ಪಕ್ಷಗಳು ಎಂಬುದಾಗಿ ಧ್ರುವೀಕರಣಗೊಂಡಿದ್ದುವು ಹಾಗೂ ಮೂರು ಕ್ಷೇತ್ರಗಳಲ್ಲಿ ವಿರೋಧ ಪಕ್ಷಗಳ ವತಿಯಿಂದ ಮೂವರು ಹಿರಿಯ ರಾಷ್ಟ್ರೀಯ ನಾಯಕರು ಹುರಿಯಾಳುಗಳಾಗಿದ್ದರು ಎಲ್ಲ ವಿರೋಧ ಪಕ್ಷಗಳೂ ಒಂದಾಗಿ ಆಚಾರ್ಯ ಕೃಪಲಾನಿ, ಪಂ. ದೀನ್‌ದಯಾಳ್ ಉಪಾಧ್ಯಾಯ ಮತ್ತು ಡಾ. ರಾಮ್‌ಮನೋಹರ್ ಲೋಹಿಯಾ ಅವರನ್ನು ತಮ್ಮ ಉಮೇದುವಾರರನ್ನಾಗಿಸಿ ಕೊಂಡಿದ್ದುವು. ಈ ವರ್ಷದ ಎರಡನೆಯ ಮಹತ್ವಪೂರ್ಣ ಘಟನೆ ಎಂದರೆ ಈ ಚುನಾವಣೆಗಳಿಗೆ ಸಂಬಂಧಿಸಿದ ಪ್ರಚಾರ ಕಾರ್ಯವನ್ನು ನಡೆಸುತ್ತಿದ್ದ ಅವಧಿಯಲ್ಲಿ ಜನಸಂಘದ ರಾಷ್ಟ್ರೀಯ ಅಧ್ಯಕ್ಷರೂ, ಶ್ರೇಷ್ಠ ಭಾಷಾವಿದರೂ ಆಗಿದ್ದ ಡಾ. ರಘುವೀರ್ ಅವರು ಕಾರು ಅಪಘಾತದಲ್ಲಿ ತೀರಿಕೊಂಡಿದ್ದು. ೧೯೫೩ರಲ್ಲಿ ಡಾ. ಮುಖರ್ಜಿಯವರು ತೀರಿಕೊಂಡ ಒಂದು ದಶಕದ ಬಳಿಕ ಜನಸಂಘಕ್ಕೆ ಆಚಾರ್ಯ ರಘುವೀರ್ ಅವರಂಥ ಖ್ಯಾತಿವೆತ್ತ ರಾಷ್ಟ್ರೀಯ ಪ್ರಸಿದ್ಧಿಯ ವ್ಯಕ್ತಿಯೊಬ್ಬರು ಅಧ್ಯಕ್ಷರಾಗಿ ದೊರೆತಿದ್ದರು. ಅವರ ಸಾವು ಜನಸಂಘಕ್ಕೆ ಅಪಾರ ನಷ್ಟವನ್ನುಂಟುಮಾಡಿತು. ತಮ್ಮ ವಾರ್ಷಿಕ ವರದಿಯಲ್ಲಿ ಉಪಾಧ್ಯಾಯರು ಆಚಾರ್ಯ ರಘುವೀರ್ ಅವರನ್ನು ಗೌರವದೊಂದಿಗೆ ಹಾಗೂ ಶ್ರದ್ಧಾಪೂರ್ವಕವಾಗಿ ಸ್ಮರಿಸಿದ್ದಾರೆ. ಆದರೆ ನಾಡಿನಲ್ಲಿ ನಡೆದ ಇಷ್ಟೊಂದು ಮಹತ್ವಪೂರ್ಣ ಉಪಚುನಾವಣೆಗಳ ಬಗೆಗಿನ ಯಾವುದೇ ವಿಶ್ಲೇಷಣೆಯನ್ನೂ [ಜನಸಂಘದ ಪ್ರಧಾನ ಕಾರ್ಯದರ್ಶಿಯಾಗಿ

ತಾವು ಸಲ್ಲಿಸಿದ ವರದಿಗಳಲ್ಲಿ ಇದೇ ಮೊದಲ ಬಾರಿಗೆ] ಅವರು ಕೊಡಲಿಲ್ಲ. ಆ ಚುನಾವಣೆಗೂ ತಮಗೂ ಸಂಬಂಧ ಇದ್ದಿತೆಂಬುದೇ ಬಹುಶಃ ಇದಕ್ಕೆ ಕಾರಣವಾಗಿದ್ದಿರಬೇಕು. ಕಾರಣ ಯಾವುದಾದರೂ ಆಗಿರಲಿ, ಅವರ ವರದಿಯಲ್ಲಿನ ವಿಶ್ಲೇಷಣೆಯ ಈ ಕೊರತೆ ಮನಸ್ಸಿಗೆ ಚುಚ್ಚುತ್ತದೆ.

೧೯೬೪ ಭಾರತೀಯ ಇತಿಹಾಸದಲ್ಲಿನ ಒಂದು ಮೈಲಿಗಲ್ಲು. ಆ ವರ್ಷದಲ್ಲಿ ಪಂ. ಜವಾಹರ್‌ಲಾಲ್ ನೆಹರೂ ಅವರ ಜೀವನಲೀಲೆ ಕೊನೆಗೊಂಡಿತ್ತು. ಕಾಂಗ್ರೆಸ್ ಪಕ್ಷಕ್ಕೆ ಇದೊಂದು ಭಾರಿ ಆಘಾತವಾಗಿತ್ತು. ಒಂದು ಯುಗವೇ ಕೊನೆಗೊಂಡಿತ್ತು. ಭಾರತೀಯ ಜನಸಂಘದ ಇತಿಹಾಸದಲ್ಲಿ ಈ ವರ್ಷ ಸಂಘಟನಾತ್ಮಕ ಹಾಗೂ ಸೈದ್ಧಾಂತಿಕ ದೃಷ್ಟಿಯಿಂದ ಪರೀಕ್ಷೆಯ ವರ್ಷವೇ ಆಗಿತ್ತು. ಆಗಸ್ಟ್ ೧೧ ರಿಂದ ೧೫, ೧೯೬೪ರ ವರೆಗೆ ಗ್ವಾಲಿಯರ್‌ನಲ್ಲಿ ಜನಸಂಘದ ಪ್ರತಿನಿಧಿ ಸಭೆಯ ಐತಿಹಾಸಿಕ ತರಬೇತಿ ಶಿಬಿರ ನಡೆಯಿತು ಉಪಾಧ್ಯಾಯರು ಸಿದ್ಧಪಡಿಸಿದ್ದ ಸಿದ್ಧಾಂತ ಮತ್ತು ನೀತಿ ಸಂಬಂಧವಾದ ದಸ್ತಾವೇಜಿಗೆ ಈ ಶಿಬಿರದಲ್ಲಿ ಅಂತಿಮ ರೂಪವನ್ನು ನೀಡಲಾಯಿತು. ೧೯೫೨ರಲ್ಲಿ ಸಿದ್ಧಪಡಿಸಲಾಗಿದ್ದ ಸಾಂಸ್ಕೃತಿಕ ಪುನರುತ್ಥಾನದ ಪ್ರಸ್ತಾವದೊಂದಿಗೆ ಜನಸಂಘದ ವಿಚಾರಸರಣಿಗೆ ನಾಂದಿಯನ್ನು ಹಾಡಲಾಗಿದೆ. 'ಸಿದ್ಧಾಂತ ಮತ್ತು ನೀತಿ' ಎಂಬ ಈ ದಸ್ತಾವೇಜು ಅದರ ಚರಮ ಪರಿಣತಿಯೇ ಆಗಿದೆ.

ಈ ದಸ್ತಾವೇಜೇ 'ಏಕಾತ್ಮ ಮಾನವವಾದ'ವನ್ನು ಜನಸಂಘದ ಅಧಿಕೃತ ವಿಚಾರಧಾರೆಯೆಂದು ಘೋಷಿಸಿತು. ಇದರ ವ್ಯಾಖ್ಯಾನದ ರೂಪದಲ್ಲಿ ಉಪಾಧ್ಯಾಯರು ಮುಂಬಯಿಯಲ್ಲಿ ನಾಲ್ಕು ಐತಿಹಾಸಿಕ ಉಪನ್ಯಾಸಗಳನ್ನು ನೀಡಿದರು.

೧೯೬೫ರ ಜನವರಿ ೨೩ ಮತ್ತು ೨೪ರಂದು ವಿಜಯವಾಡದಲ್ಲಿ ಜನಸಂಘದ ಅಧಿವೇಶನ ನಡೆಯಿತು, ಇದು ಜನಸಂಘದ ಇತಿಹಾಸದಲ್ಲಿ ಹೊಸ ಯುಗವೊಂದಕ್ಕೆ ನಾಂದಿಯೇ ಆಗಿತ್ತು. ಬೃಹದ್ ರೂಪದಲ್ಲಿ ದಕ್ಷಿಣ ಭಾರತದಲ್ಲಿ ನಡೆದ ಮೊಟ್ಟಮೊದಲ ಅಧಿವೇಶನ ಇದಾಗಿತ್ತು. ಈ ಅಧಿವೇಶನದಲ್ಲಿಯೇ ಔಪಚಾರಿಕವಾಗಿ ಇದನ್ನು ಜನಸಂಘದ ಸಿದ್ಧಾಂತ ಮತ್ತು ನೀತಿಯ ಆಧಿಕಾರಿಕ ದಸ್ತಾವೇಜು ಎಂದು ಸ್ವೀಕರಿಸಲಾಯಿತು. ಇದರೊಂದಿಗೆ ಜನಸಂಘದ ಅಧ್ಯಕ್ಷರ ಪರಂಪರೆಯಲ್ಲಿ ಹೊಸದೊಂದು ಅಧ್ಯಾಯವೇ ಆರಂಭಗೊಂಡಿತು. ಅಲ್ಲಿಯವರೆಗೆ ಯರಾದರೊಬ್ಬ ಹೆಸರಾಂತ ವಯೋವೃದ್ಧ ಗೌರವಾರ್ಹ ಅಥವಾ ಪ್ರಸಿದ್ಧ ನಾಯಕರು ಜನಸಂಘದದ ಅಧ್ಯಕ್ಷರಾಗಿರುತ್ತಿದ್ದರು. ಸಂಘದಲ್ಲಿಯೇ ಬೆಳೆದು ಬಂದ ಕಾರ್ಯಕರ್ತರಾಗಿದ್ದ ಬಚ್ಛರಾಜ್ ವ್ಯಾಸ್ ಅವರನ್ನು ಇದೇ ಮೊದಲ ಬಾರಿಗೆ ಅಧ್ಯಕ್ಷರಾಗಿ ಚುನಾಯಿಸಲಾಯಿತು. ವ್ಯಾಸ್‌ರು ಹೋಲಿಕೆಯಲ್ಲಿ ತರುಣರೂ, ಮೊದಲ ಪೀಳಿಗೆಯ



ಕಾರ್ಯಕರ್ತರ ಒಬ್ಬರೂ ಆಗಿದ್ದರು. ಜನಸಂಘವನ್ನು ಕಟ್ಟಿ ಬೆಳೆಸುವ ಸಲುವಾಗಿ ಡಾ. ಮುಖರ್ಜಿ ಅವರು ಶ್ರೀ ಗೋಳ್‌ವಳ್ಕರ್ ಅವರಿಗೆ ಇವರನ್ನು ಕೊಡುಗೆಯಾಗಿ ನೀಡಿದ್ದರು. ವ್ಯಾಸರ ಇಡೀ ರಾಜಕೀಯ ಜೀವನ ಜನಸಂಘದ ಮೂಲಕವೇ ವಿಕಾಸಗೊಂಡಿತ್ತು. ಅವರು ಜನಸಂಘದ ಮೊಟ್ಟಮೊದಲ ಕಾರ್ಯಕರ್ತ ಅಧ್ಯಕ್ಷರಾಗಿದ್ದು, ಉಪಾಧ್ಯಾಯರು ಸಂಘದ ಕಾರ್ಯಕರ್ತರಿಗಾಗಿ ರಾಜಕೀಯ ದೃಷ್ಟಿಯಿಂದ ಯಾವ ನೇತೃತ್ವ ಯಾದಿಯನ್ನು ಸಿದ್ಧಪಡಿಸಿದ್ದರೋ, ಅದೇ ಈಗ ಪೂರ್ಣ ರೂಪದಲ್ಲಿ ಸಂಘಟನೆಯ ಪ್ರಭುತ್ವವನ್ನು ನಿರ್ವಹಿಸತೊಡಗಿತ್ತು. ಅಖಿಲ ಭಾರತೀಯ ಅಧ್ಯಕ್ಷರಾಗಿದ್ದ ಬಚ್ಛರಾಜ್ ವ್ಯಾಸ್, ಸಂಘಟನೆಯ ಕಾರ್ಯದರ್ಶಿಯಾಗಿದ್ದ ಸುಂದರಸಿಂಹ ಭಂಡಾರಿ, ಕಾರ್ಯದರ್ಶಿಯರಾಗಿದ್ದ ಜಗನ್ನಾಥರಾವ್ ಜೋಶಿ ಹಾಗೂ ಚುನಾವಣಾ ಸಂಚಾಲಕರಾಗಿದ್ದ ನಾನಾಜೀ ದೇಶ್‌ಮುಖ್ – ಇವೆರೆಲ್ಲರೂ ಜನಸಂಘಕ್ಕೆ ಬಂದಿದ್ದ ಮೊದಲನೆಯ ತಲೆಮಾರಿನ ಸಂಘ ಪ್ರಚಾರಕರಾಗಿದ್ದರು. ಅವರೆಲ್ಲರೂ ಈಗ ಪಕ್ಷದ ಅಖಿಲ ಭಾರತೀಯ ನೇತಾರರ ರೂಪದಲ್ಲಿ ಮೂಡಿಬಂದಿದ್ದರು. ಉಪಾಧ್ಯಾಯರು ತಮ್ಮ ವರದಿಯಲ್ಲಿ ಸಂಘಟನೆಯ ಸ್ತಂಭಗಳೆಂಬುದಾಗಿ ಸಂತೋಷದಿಂದ ಈ ಹೆಸರುಗಳನ್ನು ಉಲ್ಲೇಖಿಸಿದ್ದರು. ಅಟಲ್ ಬಿಹಾರೀ ವಾಜಪೇಯಿ ಅವರೂ ಮಹತ್ವದ ಜನಪ್ರಿಯ ನಾಯಕರಾಗಿ ಹೆಸರುಗಳಿಸಿದ್ದರು; ಇನ್ನೊಬ್ಬ ಮಹತ್ವದ ಲೇಖಕರೆಂದರೆ ಬಲರಾಜ್ ಮಧೋಕ್. ಈ ಇಬ್ಬರೂ ವಿಜಯವಾಡದ ಅಧಿವೇಶನಕ್ಕೆ ಹೋಗಿರಲಿಲ್ಲ. ಇವರ ಗೈರುಹಾಜರಿಯೂ ಜನಸಂಘದ ಇತಿಹಾಸದಲ್ಲಿನ ಒಂದು ಹೊಸ ಪ್ರಕರಣವೇ ಆಗಿತ್ತು. ಬಚ್ಛರಾಜ್ ವ್ಯಾಸ್‌ರನ್ನು ಅಧ್ಯಕ್ಷರನ್ನಾಗಿಸುವುದು ಇವರಿಬ್ಬರಿಗೂ ಒಪ್ಪಿಗೆಯಾಗಿರಲಿಲ್ಲ.

ಇಂಗ್ಲಿಷ್ ಅನ್ನು ಕೇಂದ್ರ ಸರ್ಕಾರದ ಅಧಿಕೃತ ಭಾಷೆಯನ್ನಾಗಿ ಉಳಿಸಿಕೊಳ್ಳುವ ಸಂವಿಧಾನದತ್ತವಾದ ವಿನಾಯಿತಿಯ ಅವಧಿ ೧೯೬೫ರ ಜನವರಿ ೨೬ರಂದು ಕೊನೆಗೊಂಡು, ಹಿಂದಿಗೆ ಆ ಸ್ಥಾನ ದೊರೆಯಬೇಕಾಗಿತ್ತು. ಆ ಹೊತ್ತಿಗೆ ದಕ್ಷಿಣ ಭಾರತದಲ್ಲಿ ಇಂಗ್ಲಿಷ್‌ನ ಪರವಾದ ಹಾಗೂ ಹಿಂದಿಗೆ ವಿರುದ್ಧವಾದ ಗಲಭೆಗಳು ಆರಂಭವಾದವು. ಪಾಂಡಿಚೇರಿಯಲ್ಲಿನ ಶ್ರೀ ಅರವಿಂದ ಆಶ್ರಮದ ಹಾಗೂ ತಿರುಪತಿಯಲ್ಲಿನ ರಾಷ್ಟ್ರಪತಿ ಡಾ. ರಾಧಾಕೃಷ್ಣನ್ ಅವರ ಹೆಸರಿನ ಗ್ರಂಥಾಲಯಗಳಿಗೂ ಬೆಂಕಿ ಹಚ್ಚಲಾಯಿತು. ತಮಿಳು ನಾಡಿನಲ್ಲಿ ಹಿಂಸಾಚರ ವ್ಯಾಪಕ ಸ್ವರೂಪವನ್ನು ಪಡೆದುಕೊಂಡಿತು. ಜಾಲಂಧರ್‌ನಲ್ಲಿ ತಮ್ಮ ವರದಿಯನ್ನು ಮಂಡಿಸುತ್ತ ಉಪಾಧ್ಯಾಯರು ಹೀಗೆಂದು ಹೇಳಿದರು: "ಆಂದೋಲನಕ್ಕೆ ಮೂಲ ಕಾರಣವಾಗಿದ್ದುದು ಭಾಷೆಯ ಸಮಸ್ಯೆಯಲ್ಲ, ರಾಜಕೀಯ. ಚಕ್ರವರ್ತಿ ರಾಜಗೋಪಾಲಾಚಾರ್ಯರು ಮತ್ತು ದ್ರಾವಿಡ ಮುನ್ನೇಟ್ರ ಕಳಗಂನ ನೇತಾರರು

ಜನರ ಭಾವನೆಗಳನ್ನು ಬಡಿದೆಬ್ಬಿಸಲು ಸಾಧ್ಯವಿದ್ದ ಎಲ್ಲ ವಿಧಾನಗಳನ್ನೂ ಆಶ್ರಯಿಸಿದರು. ಕಾಂಗ್ರೆಸ್‌ನಲ್ಲಿದ್ದ ಒಳಗಿನ ಗುಂಪುಗಾರಿಕೆಯೂ ಇದಕ್ಕೆ ನೆರವಾಯಿತು. ಮದ್ರಾಸಿನ ಹಟದ ಸ್ವಭಾವದ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಪಕ್ಷದ ಮುಖ್ಯಸ್ಥರಾಗಿದ್ದವರ 'ಹಿಂದಿಯ ಕಾಗದಗಳನ್ನು ಕಸದ ಬುಟ್ಟಿಗೆ ಎಸೆಯಿರಿ' ಎಂಬ ಘೋಷಣೆ ಬೆಂಕಿಗೆ ತುಪ್ಪವನ್ನೆರೆಯುವ ಕೆಲಸವನ್ನು ಮಾಡಿತು. ಆಂದೋಳನ ಸೂತ್ರಬದ್ಧವಾಗಿ ಪರಿಣಮಿಸಿದ ಬಳಿಕ ಅದರ ನೇತೃತ್ವ ವಾಮಪಂಥೀಯರಾದ ಸಾಮ್ಯವಾದಿಗಳ ಹಾಗೂ ಹಿಂದಿನ ಮುಸ್ಲಿಮ್ ಲೀಗ್‌ನ ನಾಯಕರ ಕೈಗೆ ವರ್ಗಾವಣೆಗೊಂಡಿತು. ಕೆಲವು ಮಂದಿ ವಿದೇಶದ ಪಾದ್ರಿಗಳೂ ಆ ಆಂದೋಳನಕ್ಕೆ ಪ್ರೋತ್ಸಾಹವನ್ನಿತ್ತರು." ತಮ್ಮ ಈ ಹೇಳಿಕೆಯ ಮೂಲಕ ವಾಸ್ತವವಾಗಿ ತಮಿಳರು ಹಿಂದೀ ವಿರೋಧಿಗಳಲ್ಲ ಎಂಬ ಅಭಿಪ್ರಾಯವನ್ನು ಉಪಾಧ್ಯಾಯರು ತಿಳಿಸಬಯಸಿದ್ದರು. ಪಟ್ಟಭದ್ರ ಹಿತಾಸಕ್ತಿಗಳು ಹಾಗೂ ಪ್ರತ್ಯೇಕತಾವಾದಿಗಳು ಈ ವಿಚಾರವನ್ನು ದುರುಪಯೋಗಪಡಿಸಿಕೊಂಡರು. ಜನಸಂಘದ ಪ್ರತಿನಿಧಿಗಳ ಹಿಂದಿಯ ಬಗೆಗಿನ ನಿಷ್ಠೆಯನ್ನು ಬೆಂಬಲಿಸಲು ಬಹುಶಃ ಉಪಾಧ್ಯಾಯರ ಈ ಹೇಳಿಕೆ ಉಪಯುಕ್ತವಾಗಬಹುದೇನೋ. ಆದರೆ, ಭಾರತದ ಭಾಷಾ ಸಮಸ್ಯೆಯ ವಿಶ್ಲೇಷಣೆ ಇಷ್ಟು ಸರಳವಾದುದೇನೂ ಅಲ್ಲ. ದೀನ್ ದಯಾಳ್ ಉಪಾಧ್ಯಾಯರು ಸಂಘಟನೆಯ ತಮ್ಮ ದೌರ್ಬಲ್ಯವನ್ನು ಹೊರಹಾಕಿದರು: "ತಮಿಳುನಾಡಿನಲ್ಲಿ ಜನಸಂಘದ ಕಾರ್ಯ ಹೊಸದೂ, ಅಲ್ಪ ಪ್ರಮಾಣದ್ದೂ ಆಗಿದೆ. ಆದ್ದರಿಂದ ಅಲ್ಲಿ ಪ್ರಭಾವ ಬೀರಲು ನಮಗೆ ಸಾಧ್ಯವಾಗಲಿಲ್ಲ."

ಜನಸಂಘವನ್ನು ಹಿರಿಮೆಯಿಂದ ಕೂಡಿದ, ಸುಸಂಸ್ಕೃತವಾದ, ಶಿಸ್ತುಬದ್ಧವಾದ ಹಾಗೂ ಪ್ರಜಾತಂತ್ರಾತ್ಮಕ ವರ್ತನೆಯ ಗೌರವಪೂರ್ಣವಾದ ಸಂಘಟನೆಯನ್ನಾಗಿಸಲು ಉಪಾಧ್ಯಾಯರು ಶ್ರಮಿಸುತ್ತಿದ್ದರು. ಅವರ ಸಂಘಟನೆಗೆ ಸೇರಿದವರೇ ಆಗಿದ್ದ ಮಧ್ಯ ಪ್ರದೇಶ ವಿಧಾನ ಸಭೆಯ ಸದಸ್ಯರಲ್ಲಿ ಒಬ್ಬರಾಗಿದ್ದ ಪಂಢರೀರಾವ್ ಕೃದಂತ ಎಂಬುವರು ವಿಧಾನ ಸಭೆಯ ಉಪಾಧ್ಯಕ್ಷರತ್ತ ಚಪ್ಪಲಿಯನ್ನು ಎಸೆದಿದ್ದರು. ಉಪಾಧ್ಯಾಯರಿಗೆ ಇದೊಂದು ತುಂಬ ಪೇಚಿನ ಪ್ರಸಂಗವಾಗಿತ್ತು. ಈ ಪ್ರಸಂಗವನ್ನು ತಮ್ಮ ವರದಿಯಲ್ಲಿ ಉಲ್ಲೇಖಿಸುತ್ತ ಅವರು ಹೀಗೆಂದಿದ್ದರು: "ಆವೇಶಕ್ಕೊಳಗಾಗಲು ಅಥವಾ ಕ್ಷೋಭೆಗೆ ಒಳಗಾಗಲು ಎಷ್ಟೇ ಕಾರಣಗಳಿದ್ದರೂ, ಈ ನಡೆವಳಿಕೆ ಸಂಸತ್ತಿನ ಪರಂಪರೆಗೆ ಹಾಗೂ ಜನಸಂಘ ಅಂಗೀಕರಿಸಿರುವ ನೀತಿ–ಸಂಹಿತೆಗೆ ವಿರುದ್ಧವಾದುದೇ ಆಗಿದೆ. ಹೀಗಾಗಿ ನಮ್ಮ ಕಾರ್ಯಕರ್ತರು ಯಾರೂ ಹೀಗೆ ವರ್ತಿಸಬಾರದು. ನಾವು ಸಂಯಮವನ್ನು ಕಾಯ್ದುಕೊಳ್ಳಬೇಕು."

ಪ್ರಜಾತಂತ್ರಾತ್ಮಕ ಪದ್ಧತಿಯನ್ನು ಅಂಗೀಕರಿಸುವುದರಿಂದ ಮಾತ್ರವೇ ಸಮಾಜದ ಸ್ವಭಾವ ಮತ್ತು ಸಂಸ್ಕಾರಗಳು ಪ್ರಜಾತಂತ್ರಾತ್ಮಕವಾಗಿ ಬಿಡುವುದಿಲ್ಲ. ವಿಶೇಷ



ಘಟನೆಗಳಿಂದ ಕೂಡಿದ್ದ ೧೯೬೨–೬೭ರ ಅವಧಿಯಲ್ಲಿ ಆಡಳಿತ ವ್ಯವಸ್ಥೆಯ ಎಲ್ಲ ಅಂಗಗಳೂ ಪ್ರಜಾತಂತ್ರಾತ್ಮಕ ಸ್ವಭಾವಕ್ಕೆ ಬಹುಮಟ್ಟಿಗೆ ಹೊರತಾಗಿವೆ ಎಂಬ ಸಂಗತಿ ಜನರ ಗಮನವನ್ನು ವಿಶೇಶವಾಗಿ ಸೆಳೆಯ ತೊಡಗಿತ್ತು. ತಮ್ಮ ವರದಿಯಲ್ಲಿ ಆ ಘಟನೆಗಳನ್ನು ಉಲ್ಲೇಖಿಸುತ್ತ ಉಪಾಧ್ಯಾಯರು ಈ ಸಲಹೆಯನ್ನು ಮುಂದಿರಿಸಿದರು: "ಪ್ರಧಾನ ಮಂತ್ರಿಗಳು ಎಲ್ಲ ಪಕ್ಷಗಳ ಸಭೆಯನ್ನು ಕರೆಯಬೇಕು ಹಾಗೂ ರಾಷ್ಟ್ರೀಯ ಏಕತಾ ಪರಿಷತ್ತಿನಂತಹ ಇನ್ನೊಂದು ಪರಿಷತ್ತನ್ನು ರಚಿಸಿ, ಪ್ರಜಾತಂತ್ರ ಪರಂಪರೆಯನ್ನು ಕಾಯ್ದುಕೊಂಡು ಬರಲು ಹಾಗೂ ಅದು ಗಟ್ಟಿಯಾಗಿ ಬೇರೂರಿ ನಿಲ್ಲುವಂತೆ ಮಾಡಲು ಪ್ರಯತ್ನಿಸಬೇಕು. ಆಡಳಿತ ವ್ಯವಸ್ಥೆ ರಾಜಕೀಯ ಪಕ್ಷಗಳು ಹಾಗೂ ಪತ್ರಿಕೆಗಳು ಇವೆಲ್ಲಕ್ಕೂ ನೀತಿ ಸಂಹಿತೆಯನ್ನು ರೂಪಿಸಬೇಕು. ಆಡಳಿತ ವ್ಯವಸ್ಥೆಯೂ ಒಂದು ಸಾರ್ವತ್ರಿಕ ಚುನಾವಣೆ ಮತ್ತು ಇನ್ನೊಂದು ಸಾರ್ವತ್ರಿಕ ಚುನವಣೆಯ ನಡುವಣ ಅವಧಿಯಲ್ಲಿ, ಜನಾಭಿಪ್ರಾಯದ ಬದಲಾವಣೆಯ ಆಧಾರದ ಮೇಲೆ, ತನ್ನ ನೀತಿಗಳನ್ನು ಬದಲಾಯಿಸಿಕೊಳ್ಳವಂಥ ಒಂದು ಪ್ರಕ್ರಿಯೆಯ ಕಟ್ಟುಪಾಡನ್ನು ಅಂಗೀಕರಿಸಬೇಕು. ಪ್ರಜಾತಂತ್ರ ಮತ್ತು ಹಟವಾದಿಗಳು ಒಂದುಗೂಡಿ ನಡೆಯಲು ಸಾಧ್ಯವಾಗುವುದಿಲ್ಲ. "ಇಂಥ ಯಾವುದಾದರೂ ಒಂದು ಪರಿಷತ್ತಿನ ರಚನೆಯಾಗಿ, ಅದು ಈ ವಿಷಯದ ಬಗ್ಗೆ ಪರ್ಯಾಲೋಚನೆ ಮಾಡಿದ್ದರೆ ಒಳಿತಾಗುತ್ತಿತ್ತು. ಜನಾಭಿಪ್ರಾಯ ಬದಲಾದಂತೆ [ಆಡಳಿತ ವ್ಯವಸ್ಥೆಯೂ] ತನ್ನ ನೀತಿಯನ್ನು ಬದಲಾಯಿಸಿಕೊಳ್ಳಬೇಕು ಎಂಬುದು ವಿಚಾರ–ವಿಮರ್ಶೆಯ ಒಳ್ಳೆಯ ವಸ್ತುವಾಗ ಬಲ್ಲದು. ಕಾರ್ಯಪಾಲಿಕೆ ಮತ್ತು ಪಕ್ಷನಿಷ್ಠ ವಾದಗಳಿಂದ ಪೆಟ್ಟುತಿಂದಿರುವ ವಿಧಾನ ಪಾಲಿಕೆಯ ಶಕ್ತಿಗೆ ವ್ಯಾವಹಾರಿಕ ಸ್ವರೂಪವನ್ನು ನೀಡುವ ಮಾರ್ಗವನ್ನು ಅರಸುವುದು ಪ್ರಜಾತಂತ್ರಾತ್ಮಕ ಸಮಾಜಗಳು ಇನ್ನೂ ಮಾಡಬೇಕಾಗಿರುವ ಕಾರ್ಯವಾಗಿಯೇ ಉಳಿದಿದೆ."

೧೯೬೭ರ ನಾಲ್ಕನೆಯ ಸಾರ್ವತ್ರಿಕ ಚುನಾವಣೆಗೆ ಸಂಬಂಧಿಸಿದಂತೆ ಜನಸಂಘದ ತರುಣ ಮುಂದಾಳುಗಳು ಸಾಕಷ್ಟು ಒಳ್ಳೆಯ ಸಿದ್ಧತೆಯನ್ನೇ ನಡೆಸಿದ್ದರು. ೧೯೬೭ರ ಚುನಾವಣೆಗಳಲ್ಲಿ ಜನಸಂಘವೇ ಕಾಂಗ್ರೆಸ್ ಪಕ್ಷದ ಅನಂತರ ಬಹು ದೊಡ್ಡ ಪಕ್ಷವಾಗಿ ಹೊರಬಂದಿತ್ತು. ಈ ಸಾರ್ವತ್ರಿಕ ಚುನಾವಣೆಯ ಬಗೆಗಿನ ವರದಿಯೇ ಜನಸಂಘದ ಪ್ರದಾನ ಕಾರ್ಯದರ್ಶಿಯಾಗಿ ಉಪಾಧ್ಯಾಯರು ಮಂಡಿಸಿದ ಕೊನೆಯ ಹಾಗೂ ಅತ್ಯಂತ ಮಹತ್ವಪೂರ್ಣ ದಸ್ತಾವೇಜಾಗಿದೆ. ನಾಲ್ಕನೆಯ ಸಾರ್ವತ್ರಿಕ ಚುನಾವಣೆಯ ಮೂಲಕ ನಮ್ಮ ನಾಡು ಪ್ರಜಾತಂತ್ರದ ಒಂದು ಚರಣವನ್ನು ಪೂರ್ಣಗೊಳಿಸಿಕೊಂಡಿತ್ತು. ಭಾರತದಲ್ಲಿ ಸಂಸದೀಯ ಪ್ರಜಾತಂತ್ರ ವ್ಯವಸ್ಥೆಯ ಪ್ರವರ್ತಕರಾಗಿದ್ದ ನೆಹರೂ ಅವರ ಅನುಪಸ್ಥಿತಿಯಲ್ಲಿ ನಡೆದ ಮೊಟ್ಟಮೊದಲ ಸಾರ್ವತ್ರಿಕ ಚುನಾವಣೆ ಇದಾಗಿತ್ತು. ಕಾಂಗ್ರೆಸ್ ಪಕ್ಷದಲ್ಲಿ

ಒಡಕಿನ ಲಕ್ಷಣಗಳು ಗೋಚರಿಸತೊಡಗಿದ್ದವು. ಕಾಂಗ್ರೆಸ್ಸೇತರ ಸಿದ್ಧಾಂತವಾದಿ ಪಕ್ಷಗಳ ಯುಗ ರೂಪುಗೊಳ್ಳತೊಡಗಿತ್ತು. ದೀನ್ ದಯಾಳ್ ಉಪಾಧ್ಯಾಯರು ಭಾರತದ ಅತ್ಯಂತ ದೊಡ್ಡ ವಿರೋಧ ಪಕ್ಷದ ಗೌರವಾರ್ಹ ನಾಯಕರಾಗಿದ್ದರು. ಡಾ. ರಾಮ್‌ಮನೋಹರ್ ಲೋಹಿಯಾ ಅವರು ಕಾಂಗ್ರೆಸೇತರ ಸಿದ್ಧಾಂತವಾದಿ ಪಕ್ಷಗಳ ಸೂತ್ರಧಾರರಾಗಿ ಹೊರಹೊಮ್ಮಿದ್ದರು. ಭಾರತದಲ್ಲಿ ಏಕಛತ್ರದ ಅಡಿಯಲ್ಲಿನ, ಏಕ ಪಕ್ಷದ ಆಡಳಿತದ ರಾಜನೀತಿ ಕೊನೆಗೊಳ್ಳತೊಡಗಿತ್ತು.

"೧೯೬೨ ರಿಂದ ೧೯೬೭ರ ವರೆಗಿನ ಐದು ವರ್ಷಗಳ ಅವಧಿ ಅದೆಷ್ಟು ವೈಶಿಷ್ಟ್ಯಪೂರ್ಣ ಘಟನೆಗಳಿಂದ ಕೂಡಿದ್ದು ಆಂದೋಲನಾತ್ಮಕ ಆಗಿದ್ದಿತೆಂದರೆ ನಾಲ್ಕನೆಯ ಸಾರ್ವತ್ರಿಕ ಚುನಾವಣೆಯ ಬಗ್ಗೆ ಜನರ ಮನಸ್ಸಿನಲ್ಲಿ ಅನೇಕ ಅನುಮಾನಗಳು ತುಂಬಿಕೊಂಡಿದ್ದವು. ಈ ಎಲ್ಲ ಶಂಕೆ ಅನುಮಾನಗಳು ಬೇರಿಲ್ಲದವುಗಳೆಬುಂದು ದೃಢಪಟ್ಟಿತು. ಅಷ್ಟೇ ಅಲ್ಲ, ಜನರು ತುಂಬ ಉತ್ಸಾಹದಿಂದ ಹಾಗೂ ವಿವೇಚನೆಯಿಂದ ಮತದಾನದಲ್ಲಿ ಭಾಗವಹಿಸಿದರು. ಇದರಿಂದ ಭಾರತೀಯ ಪ್ರಜಾತಂತ್ರದ ಶಕ್ತಿಯ ಅರಿವು ನಮಗೆ ಉಂಟಾಗುತ್ತದೆ.

ಈ ಚುನಾವಣೆಗಳಿಗೆ ಮುನ್ನ, ಕಾಂಗ್ರೆಸೇತರ ರಾಜಕೀಯ ಸಿದ್ಧಾಂತಗಳ ಆಧಾರದ ಮೇಲೆ ವಿರೋಧ ಪಕ್ಷಗಳು ಒಕ್ಕೂಟವನ್ನು ಏರ್ಪಡಿಸಿಕೊಳ್ಳುವ ಪ್ರಯತ್ನ ಮಾಡಿದುವು. ಇದು ಉಪಾಧ್ಯಾಯರಿಗೆ ಒಪ್ಪಿಗೆಯಾಗಿರಲಿಲ್ಲ. ಅವರು ತಮ್ಮ ವರದಿಯಲ್ಲಿ ಹೀಗೆಂದು ಹೇಳಿದ್ದರು: "....ಕಾಂಗ್ರೆಸ್ ಪಕ್ಷಕ್ಕೆ ಹೊರತಾದ ಇತರ ರಾಜಕೀಯ ಪಕ್ಷಗಳ ದೌರ್ಬಲ್ಯ ಮತ್ತು ಆತ್ಮವಿಶ್ವಾಸದ ಕೊರತೆಯಿಂದಾಗಿ, ಚುನಾವಣೆಗೆ ಮುನ್ನ ಕಾಂಗ್ರೆಸ್ಸೇತರ ಪಕ್ಷಗಳು ಒಂದೂಗೂಡಿ ಕಾಂಗ್ರೆಸ್ ಪಕ್ಷಕ್ಕೆ ಎದುರಾಗಿ ಚುನಾವಣೆಗಳಲ್ಲಿ ಸ್ಪರ್ಧಿಸುವುದು ಅಗತ್ಯ ಎಂಬಂಥ ವಾತಾವರಣ ಸೃಷ್ಟಿಯಾಗಿತ್ತು. ನೇರವಾದ ಸ್ಪರ್ಧೆಯಲ್ಲಿ ಕಾಂಗ್ರೆಸ್ ಪಕ್ಷ ನೆಲಕಚ್ಚುವಂತೆ ಮಾಡಬಹುದೆಂಬುದು ಅವುಗಳ ಭಾವನೆಯಾಗಿತ್ತು. ಈ ಬಗೆಯ ಯಾವುದೇ ಒಡಂಬಡಿಕೆ ತಮಗೆ ಪ್ರಯೋಜನಕಾರಿಯಾಗಲಾರದೆಂಬುದು ಭಾರತೀಯ ಜನಸಂಘದ ಅನುಭವವೇ ಆಗಿತ್ತು. ಏಕೆಂದರೆ, ನೇರವಾದ ಸ್ಪರ್ಧೆಯಲ್ಲಿ ಇತರ ಕಾಂಗ್ರೆಸ್ಸೇತರ ಪಕ್ಷಗಳು ಜನಸಂಘಕ್ಕೆ ಬೆಂಬಲವಾಗಿ ನಿಲ್ಲುವುದಕ್ಕೆ ಬದಲಾಗಿ ಕಾಂಗ್ರೆಸ್ ಪಕ್ಷದೊಂದಿಗೇ ಕೈಗೂಡಿಸುತ್ತಲಿದ್ದವು. ಈ ಚುನಾವಣೆಗಳೂ ಇದೇ ಅನುಭವವನ್ನು ಪುಷ್ಟಿಗೊಳಿಸಿದುವು."

ಪರ್ಯಾಯ ಪಕ್ಷವೊಂದನ್ನು ರೂಪಿಸುವ ವಿಷಯದ ಬಗ್ಗೆ ಅವರ ಅಭಿಪ್ರಾಯ ಹೀಗಿತ್ತು: "ರಾಜಕೀಯ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ನಿಷ್ಪ್ರಭಾವಿಯಾಗುವ ಹಾಗೂ ಕ್ರಮೇಣ ದೂರಸರಿಯುವ ಪರಿಸ್ಥಿತಿಯಿಂದಾಗಿ, ಅದಕ್ಕೆ ಪರ್ಯಾಯವಗಿ ಒಂದು ರಾಷ್ಟ್ರೀಯ ಹಾಗೂ ಪ್ರಜಾತಂತ್ರಾತ್ಮಕ ಪಕ್ಷ ಮೂಡಿಬರುವುದು ತುಂಬ ಅಗತ್ಯವಾಗಿದೆ."



ಈ ಕಾರ್ಯ ಒಡೆದು ಕೂಡಿಸಿ ಮಾಡುವುದರಿಂದ ಆಗುವುದು ಸಾಧ್ಯವಿರಲಿಲ್ಲ. ಅದಕ್ಕೆ ಸ್ಪಷ್ಟವಾದ ಕಾರ್ಯಕ್ರಮ, ಸುನಿಶ್ಚಿತವಾದ ನೀತಿ, ಸರಿಯಾದ ಸಿದ್ಧಾಂತ ಮತ್ತು ಸದೃಢವಾದ ಸಂಘಟನೆ ಅಗತ್ಯವಾಗುತ್ತದೆ. "ಈ ಚುನಾವಣೆಗಳಲ್ಲಿ ಜನಸಂಘಕ್ಕೆ ಲೋಕಸಭೆಯ ೩೫ ಸ್ಥಾನಗಳಲ್ಲಿ ಗೆಲುವು ಲಭಿಸಿತ್ತು. ಗೆಲುವು ಸಾಧಿಸಲಾಗಿದ್ದ ಈ ೩೫ ಸ್ಥಾನಗಳೇ ಅಲ್ಲದೆ, ೩೫ ಸ್ಥಾನಗಳಲ್ಲಿ ಜನಸಂಘದ ಅಭ್ಯರ್ಥಿಗಳು ಗೆದ್ದ ಉಮ್ಮೇದುವಾರರಿಗೆ ಪ್ರಬಲ ಸ್ಪರ್ಧೆಯನ್ನು ನೀಡಿದ್ದರು. ಇವುಗಳಲ್ಲಿ ೧೫ ಸ್ಥಾನಗಳಲ್ಲಿ ಜನಸಂಘದ ಹುರಿಯಾಳುಗಳು ೨೦೦ ರಿಂದ ೫೦೦೦ ಮತಗಳ ಅಂತರದಲ್ಲಿ ಸೋಲನ್ನಪ್ಪಿದ್ದರು. ತಮ್ಮ ಪಕ್ಷದ ಪ್ರಗತಿಯ ವಿಷಯದಲ್ಲಿ ಉಪಾಧ್ಯಾಯರಿಗೆ ಅಸಮಾಧಾನವೇನೂ ಇರಲಿಲ್ಲ. "ಜನಸಂಘ ಕಾಂಗ್ರೆಸ್ಸೇತರ ಪಕ್ಷಗಳಲ್ಲಿ ಎಲ್ಲ ಪಕ್ಷಗಳಿಗಿಂತಲೂ ಮುಂದೆ ಇರುವುದು ಮಾತ್ರವಲ್ಲ, ಎರಡು ಸಾಮ್ಯವಾದಿ ಪಕ್ಷಗಳಿಗಿಂತಲೂ ಹಾಗೂ ಸಂಯುಕ್ತ ಸಮಾಜವಾದಿ ಪಕ್ಷ ಹಾಗೂ ಪ್ರಜಾಸಮಾಜವಾದಿ ಪಕ್ಷಗಳು ಒಟ್ಟಾರೆಯಾಗಿ ಗಳಿಸಿರುವುದಕ್ಕಿಂತಲು ಹೆಚ್ಚಿನ ಮತಗಳನ್ನು ಪಡೆದುಕೊಂಡಿದೆ ಎಂಬುದು ಸ್ಪಷ್ಟವಾಗಿದೆ." ಈ ವರದಿಯಲ್ಲಿ ಉಪಾಧ್ಯಾಯರು ಸಂಸದೀಯ ಹಾಗೂ ವಿಧಾನ ಮಂಡಳೀಯ ಪಕ್ಷಗಳ ಸ್ಥಿತಿಗತಿಗಳ ಬಗ್ಗೆ ತುಂಬ ವಿಸ್ತಾರವಾದ ವಿವರಣೆಯನ್ನೇ ಮುಂದಿರಿಸಿದ್ದಾರೆ.

ಸಾಂಖ್ಯಿಕ ವಿಶ್ಲೇಷಣೆಯ ಬಳಿಕ ಉಪಾಧ್ಯಾಯರು ಈ ಚುನಾವಣೆಯಿಂದ ಮೂಡಿಬಂದ ರಾಜಕೀಯ ಪ್ರವೃತ್ತಿಗಳ ವಿಶ್ಲೇಷಣೆಯನ್ನು ನೀಡಿದ್ದಾರೆ: "ಬಹಳಷ್ಟು ಸ್ಥಾನಗಳಲ್ಲಿ ಮುಸಲ್ಮಾನರು ಕಾಂಗ್ರೆಸ್ ಪಕ್ಷಕ್ಕೆ ವಿರುದ್ಧವಾಗಿ ಮತದಾನ ಮಾಡಿದ್ದಾರೆ. ಆದರೆ ಅವರು ಆರ್ಥಿಕ, ರಾಜಕೀಯ ವಿಚಾರಗಳ ಆಧಾರದ ಮೇಲೆ ವಿವಿಧ ಪಕ್ಷಗಳಿಗೆ ಮತ ನೀಡಿದ್ದಾರೆಂದು ಹೇಳುವುದು ಈಗಲೇ ಸರಿಯಾಗಲಾರದು. ಮಜಲಿಸ್–ಏ–ಮುಶವ್ವರತ್–ಏ–ಮುಸಲ್‌ಮೀನ್ ಸಂಘಟನೆ ಕೋಮುವಾರು ಆಧಾರದ ಮೇಲೆ ರೂಪಿತವಾಗಿರುವಂಥದು ಹಾಗೂ ಆ ಸಂಘಟನೆಯ ಸೂಚನೆಗೆ ಅನುಗುಣವಾಗಿ ಅವರು ಮತದಾನ ಮಾಡಿದ್ದಾರೆ. ಮುಶವ್ವರತ್ ಸಂಘಟನೆಯ ನೇತಾರರು ಖಂಡಿತವಾಗಿಯೂ ತಮ್ಮ ರಾಜಕೀಯ ಫಾಯಿದೆ ವ್ಯವಹಾರಕ್ಕಾಗಿ ಅವರನ್ನು ಬಳಸಿಕೊಳ್ಳುತ್ತಿದ್ದಾರೆ. ಆಂಧ್ರದಲ್ಲಿನ ಇತ್ತೇಹಾದುಲ್ ಮುಸಲ್‌ಮೀನ್ ಸಂಘಟನೆಯೂ ಕೋಮುವಾದಿ ನೆಲೆಯಲ್ಲಿಯೇ ಅಖಾಡಕ್ಕೆ ಇಳಿದಿದೆ.... ಕೇರಳ ಮತ್ತು ಮದ್ರಾಸ್ ಪ್ರಾಂತ್ಯಗಳಲ್ಲಿ ಮುಸ್ಲಿಮ್ ಲೀಗ್ ಕೂಡ ಸಂಯುಕ್ತ ರಂಗದ ಪ್ರಯೋಜನವನ್ನು ಪಡೆದುಕೊಂಡು ತನ್ನ ಪ್ರಭಾವವನ್ನು ಬೆಳೆಸಿಕೊಳ್ಳುತ್ತಿದೆ. ಈ ಸಂಘಟನೆಗಳ ಪ್ರಭಾವ ಮತ್ತು ವಿಸ್ತರಣೆ ಭಾರತೀಯ ಮುಸಲ್ಮಾನರ ರಾಷ್ಟ್ರೀಯ ಏಕೀಕರಣ ಹಾಗೂ ನಾಡಿನ ಆರೋಗ್ಯಪೂರ್ಣ ರಾಜಕೀಯ ಬೆಳವಣಿಗೆಯ ಹಾದಿಗೆ ಅಡ್ಡಿಯನ್ನುಂಟುಮಾಡುವಂಥವೇ ಆಗಿವೆ."

ಈ ವಿಷಯಕ್ಕೆ ಸಂಬಂಧಿಸಿದಮತೆ ದೀನ್‌ದಯಾಳ್ ಉಪಾಧ್ಯಾಯರು ಈ ಮಾತುಗಳನ್ನು ಬರೆದಿದ್ದಾರೆ: "ಚುನಾವಣೆಗಳ ಪರಿಣಾಮವಾಗಿ ಕೆಲವು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಪಕ್ಷ ಬಹುಮತವನ್ನು ಕಳೆದುಕೊಂಡಿದೆ. ಆದರೆ, ದೆಹಲಿ ಮತ್ತು ಮದ್ರಾಸ್ ಪ್ರಾಂತ್ಯಗಳನ್ನು ಬಿಟ್ಟು ಬೇರಾವುದೇ ಕಡೆಯಲ್ಲೂ ಯಾವುದೇ ಒಂದು ಪಕ್ಷಕ್ಕೂ ಬಹುಮತ ಲಭಿಸಿಲ್ಲ. ಇದರ ಪರಿಣಾಮವಗಿ ಸಂಯುಕ್ತ ಸರ್ಕಾರಗಳ ಯುಗ ಪ್ರಾರಂಭಗೊಂಡಿದೆ. ಆಡಳಿತವನ್ನು ನಡೆಸುವುದಕ್ಕೆ ವಿಧಾನಸಭೆಯಲ್ಲಿ ಬಹುಮತವನ್ನು ಕಾಯ್ದುಕೊಂಡು ಬರುವುದಕ್ಕೆ ಮಾತ್ರವೇ ಈ ಒಕ್ಕೂಟದ ಸಂಬಂಧ ಸೀಮಿತವಾಗಿರುತ್ತದೆ. ಈ ಒಕ್ಕೂಟದ ಪರಿಣಾಮವಾಗಿ ಯಾವುದೇ ಪಕ್ಷ ತನ್ನ ವಿಚಾರಧಾರೆಯಲ್ಲಿ ಬದಲಾವಣೆಯನ್ನು ತಂದುಕೊಳ್ಳುವ ಅಗತ್ಯವೂ ಇರುವುದಿಲ್ಲ, ಪಕ್ಷಗಳ ವಿಚಾರಧಾರೆಯನ್ನು ಆಧಾರವಾಗಿಟ್ಟುಕೊಂಡು, ಬಿಡಿಯಾಗಿಯೇ ಒಕ್ಕೂಟಕ್ಕೆ ಸಂಬಂಧಿಸಿದಂತೆ ತೀರ್ಮಾನವನ್ನು ಕೈಗೊಳ್ಳುವುದು ಸಾಧ್ಯವಾಗುವುದಿಲ್ಲ. ಇದೊಂದು ವ್ಯಾವಹಾರಿಕ ಪ್ರಶ್ನೆ. ಈ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸರ್ಕಾರವನ್ನು ರಚಿಸಲು ಅವಕಾಶ ಮಾಡಿಕೊಡುವ ಅಥವಾ ವಿಧಾನ ಸಭೆಗಳನ್ನು ವಿಸರ್ಜಿಸಿ ರಾಷ್ಟ್ರಪತಿಗಳ ಆಡಳಿತವನ್ನು ಜಾರಿಗೆಕೊಡುವ ಪರ್ಯಾಯಗಳಿಂದ ಪಾರಾಗಿ, ಸಂಯುಕ್ತ ಸರ್ಕಾರವನ್ನು ರಚಿಸಿಕೊಳ್ಳುವುದೇ ಉಚಿತವೆಂದು ಕಾಂಗ್ರೆಸ್ಸೇತರ ಸರ್ಕಾರಗಳು ಭಾವಿಸಿದುವು. ಅದರಂತೆ ಆ ಸರ್ಕಾರಗಳು ರಚಿತವಾಗಿವೆ. ಅವುಗಳ ಅಂಗವಾಗಿರುವ ಪಕ್ಷಗಳು ವ್ಯಾವಹಾರಿಕ ನೆಲೆಯಲ್ಲಿ ಆಡಳಿತವನ್ನು ನಡೆಸಿಕೊಂಡು ಹೋಗುವ ತತ್ಪರತೆಯನ್ನು ತೋರಿಸುತ್ತಿರುವವರೆಗೂ. ಆ ಸರ್ಕಾರಗಳು ನಡೆಯುತ್ತ ಇರುತ್ತವೆ."

ದೀನ್ ದಯಾಳ್ ಉಪಾಧ್ಯಾಯರು ಸಂಯುಕ್ತ ಆಡಳಿತ ಪಕ್ಷಗಳಿಂದ ರಚಿತವಾದಂಥ ಸರ್ಕಾರಗಳ ವಿಷಯದಲ್ಲಿ ಹೆಚ್ಚಿನ ಉತ್ಸಾಹವನ್ನೇನೂ ತೋರಿರಲಿಲ್ಲ. ಹೀಗಾಗಿ ಅವರು ತಮ್ಮ ಕಾರ್ಯಕರ್ತರಿಗೆ ಈ ವಿಚಾರವನ್ನು ಒತ್ತಿಹೇಳಿದರು: "...ನಾಲ್ಕೂ ಕಡೆಗಳಲ್ಲಿ ಸಂಯುಕ್ತ ಸರ್ಕಾರಗಳ ಬಗೆಗಿನ ಕಲ್ಪನೆ ರಾಜಕಾರಣಿಗಳಲ್ಲಿ ಜಾಗೃತಗೊಂಡಿದೆ. ಎಲ್ಲ ಕಡೆಗಳಲ್ಲಿಯೂ ಕಾಂಗ್ರೆಸ್ ಪಕ್ಷದ ಸರ್ಕಾರಗಳು ಕೊನೆಗೊಳ್ಳಬೇಕೆಂಬುದು ನಮ್ಮ ಇಚ್ಛೆಯಾಗಿದೆ. ಆದರೆ ನಮ್ಮ ಇಚ್ಛೆಯನ್ನು ಈಡೇರಿಸಿಕೊಳ್ಳುವ ಯತ್ನದಲ್ಲಿ ಆರೋಗ್ಯಪೂರ್ಣ ರಾಜಕೀಯ ಪರಂಪರೆಗಳಿಗೆ ವಿರುದ್ಧವಾಗಿರುವಂಥ ಯಾವುದೇ ಕ್ರಮವನ್ನು ಕೈಗಳ್ಳಬಾರದು."

ಪ್ರಧಾನ ಕಾರ್ಯದರ್ಶಿಯಾಗಿ ಉಪಾಧ್ಯಾಯರು ತಮ್ಮ ಕಾರ್ಯಕರ್ತರಿಗೆ ಹಾಗೂ ವಿರೋಧ ಪಕ್ಷಗಳಿಗೆ ನೀಡಿದ ಸಂದೇಶ ಇದೇ. ಆದರೆ ಅವರ ಈ ಸಂದೇಶವನ್ನು ಅವರ ಪಕ್ಷವೂ ಕೇಳಿಸಿಕೊಳ್ಳಲಿಲ್ಲ, ಇತರ ವಿರೋಧ ಪಕ್ಷಗಳೂ ಕೇಳಿಸಿಕೊಳ್ಳಲಿಲ್ಲ ಎಂಬುದನ್ನು ಅನಂತರದ ಘಟನೆಗಳು ತೋರಿಸಿಕೊಟ್ಟವು. ಇದರ ಪರಿಣಾಮವಾಗಿ ಭಾರತದ ರಾಜಕೀಯ ಇತಿಹಾಸದಲ್ಲಿ ನಾಲ್ಕನೆಯ ಸಾರ್ವತ್ರಿಕ



ಚುನಾವಣೆಯ ಬಳಿಕ ನಮ್ಮ ನಾಡಿನ ನೇತಾರರು ನಡೆದುಕೊಂಡ ರೀತಿ ಆರೋಗ್ಯ-ಪೂರ್ಣ ರಾಜಕೀಯ ಪರಂಪರೆಗಳಿಗೆ ವಿರುದ್ಧವಾದುದೇ ಆಗಿತ್ತು.

ಭಾರತೀಯ ಜನಸಂಘದ ಹದಿನಾಲ್ಕನೆಯ ಅಧಿವೇಶನ ಕಲ್ಲಿಕೋಟೆಯಲ್ಲಿ ನಡೆಯಿತು. ದೀನ್‌ದಯಾಳ್ ಉಪಾಧ್ಯಾಯರನ್ನು ಭಾರತೀಯ ಜನಸಂಘದ ಅಧ್ಯಕ್ಷರಾಗಿ ಚುನಾಯಿಸಲಾಯಿತು. ಉಪಾಧ್ಯಾಯರ ಜಾಗದಲ್ಲಿ ಸುಂದರಸಿಂಹ ಭಂಡಾರಿ ಅವರು ಪ್ರಧಾನ ಕಾರ್ಯದರ್ಶಿಗಳಾಗಿ ಚುನಾಯಿತರಾದರು.

**ಭಾರತೀಯ ಜನಸಂಘದ ಅಧ್ಯಕ್ಷ**

೧೯೬೫ರಲ್ಲಿ ನಡೆದ ವಿಜಯವಾಡ ಅಧೀವೇಶನದಲ್ಲಿ ಜನಸಂಘದ ಅಧ್ಯಕ್ಷರ ಹುದ್ದೆಗೆ ಆಯ್ಕೆ ಮಾಡುವ ಸಲುವಾಗಿ ಹೊಸ ಪ್ರಕ್ರಿಯೆಯನ್ನು ಪ್ರಾರಂಭಿಸಲಾಯಿತು. ಇದರ ಪರಿಣಾಮವಾಗಿ ಬಚ್ಚರಾಜ್ ವ್ಯಾಸ್ ಅವರು ಜನಸಂಘದ ಅಧ್ಯಕ್ಷರಾದರು. ೧೯೬೬ರಲ್ಲಿ ಬಲರಾಜ್ ಮಧೋಕ್ ಅವರಿಗೆ ಈ ಅವಕಾಶ ದೊರೆಯಿತು. ೧೯೬೭ರಲ್ಲಿ ಕಲ್ಲಿಕೋಟೆಯಲ್ಲಿ ನಡೆದ ಐತಿಹಾಸಿಕ ಅಧಿವೇಶನದಲ್ಲಿ ದೀನ್‌ದಯಾಳ್ ಉಪಾಧ್ಯಾಯರನ್ನು ಜನಸಂಘದ ಅಧ್ಯಕ್ಷರಾಗಿ ಚುನಾಯಿಸಲಾಯಿತು. ಈ ಅಧಿವೇಶನದಲ್ಲಿ ದೀನ್‌ದಯಾಳ್ ಉಪಾಧ್ಯಾಯರು ಮತ್ತು ಜನಸಂಘ ತಮ್ಮ ಪ್ರತಿಷ್ಠೆ ಹಾಗೂ ಪ್ರಭಾವಗಳ ದೃಷ್ಟಿಯಿಂದ ಅತ್ಯುಚ್ಚ ನೆಲೆಯನ್ನು ತಲುಪಿದ್ದುವು.

ಜನಸಂಘದ ೧೪ನೆಯ ಅಧಿವೇಶನ ಡಿಸೆಂಬರ್ ೨೯, ೩೦ ಮತ್ತು ೩೧ರಂದು ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಫೆಬ್ರುವರಿ ೧೧ರಂದು ಮಧ್ಯ ರಾತ್ರಿಯಲ್ಲಿ ಮೊಗಲ್‌ಸರಾಯ್ ರೈಲ್ವೆ ನಿಲ್ದಾಣದಲ್ಲಿ ಅವರ ಹತ್ಯೆ ನಡೆಯಿತು. ದೀನ್‌ದಯಾಳ್ ಅವರು ಕೇವಲ ೪೩ ದಿನಗಳ ಕಾಲ ಭಾರತೀಯ ಜನಸಂಘದ ಅಧ್ಯಕ್ಷರಾಗಿದ್ದರು. ಈ ೪೩ ದಿನಗಳಲ್ಲಿ ಅವರು ಮಾಡಿದ ಅತ್ಯಂತ ಮಹತ್ವಪೂರ್ಣ ಕಾರ್ಯವೆಂದರೆ ಜನಸಂಘದ ರಾಷ್ಟ್ರೀಯ ಅಧ್ಯಕ್ಷರಾಗಿ ಅವರು ಮಾಡಿದ ಭಾಷಣ. ಅದು ಆ ವರೆಗಿನ ಜನಸಂಘದ ಹಾಗೂ ದೀನ್ ದಯಾಳ್ ಉಪಾಧ್ಯಾಯ ಅವರ ಅಲ್ಲಿಯ ವರೆಗಿನ ಚಿಂತನೆಯ ನವನೀತ ಸ್ವರೂಪವೇ ಆಗಿದ್ದಿತೆಂದು ಹೇಳಬಹುದಾಗಿದೆ. ಒಂದು ಕಾಲಘಟ್ಟದ ವಿಶೇಷ ಪರಿಸ್ಥಿತಿಯಲ್ಲಿ ಇಂಥ ಭಾಷಣವನ್ನು ಮಾಡಲಾಗಿರುತ್ತದೆ. ೧೯೬೭ರ ಚುನಾವಣೆಗಳಲ್ಲಿನ ಬದಲಾದ ಪರಿಸ್ಥಿತಿಯೇ ಉಪಾಧ್ಯಾಯರ ಈ ವಿವೇಚನೆ ಅಥವಾ ಚಿಂತನೆಗೆ ಹಿನ್ನೆಲೆಯಾಗಿದ್ದಿತು.

ಸ್ವಾತಂತ್ರ್ಯಾನಂತರ ಏರ್ಪಟ್ಟ ಸಾಮಾಜಿಕ-ರಾಜಕೀಯ ಪ್ರಯತ್ನಗಳ ಪರಿಣಾಮವಾಗಿ "ಜನಸಾಮಾನ್ಯರಲ್ಲಿ ರಾಜಕೀಯ ಪ್ರಜ್ಞೆ ಉದಿಸಿರುವದೇ ಈ ಯುಗದ ಬಹುದೊಡ್ಡ ಕಾಣಿಕೆ" ಎಂಬುದಾಗಿ ಉಪಾಧ್ಯಾಯರು ಭಾವಿಸಿದ್ದರು. "ತಾತ್ಕಾಲಿಕ ರಾಜಕೀಯ ಲಾಭಗಳಿಗಾಗಿ ಅದನ್ನು ಸಾಧನವಾಗಿಸಿಕೊಳ್ಳುವುದು

ಒಳ್ಳೆಯದಲ್ಲ" ಎಂದೂ ಅವರು ಎಚ್ಚರಿಸಿದ್ದರು.

ಯುಗ–ಸಂಕ್ರಮಣದತ್ತ ಬೆರಳು ತೋರುತ್ತ ಅವರು ಹೀಗೆಂದಿದ್ದಾರೆ: "೧೯೬೫ರ ಆಗಸ್ಟ್ – ಸೆಪ್ಟೆಂಬರ್ ನಡುವಣ ಅವಧಿಯಲ್ಲಿ.... ಭಾರತದ ವೀರ ಸೈನಿಕ ಪಡೆಗಳು ಪಾಕೀಸ್ತಾನದ ಆಕ್ರಮಣವನ್ನು ಎದುರಿಸಿ ತಮ್ಮ ಪರಾಕ್ರಮ ಮತ್ತು ವಿಜಗೀಷತ್ವವನ್ನು ಮೆರೆದಾಗಲೇ ಯುಗ–ಪರಿವರ್ತನೆಗೆ ನಾಂದಿಯಾಯಿತು. ಯುಗ ಪರಿವರ್ತನೆಯ ಗಳಿಗೆ ಸಂಕ್ರಮಣಕಾಲವನ್ನುಂಟುಮಾಡುತ್ತದೆ. ಅದು ಸಮಸ್ಯೆಗಳ ಕಾಲವೇ ಆಗಿರುತ್ತದೆ. " ಮೊದಲ ಸಮಸ್ಯೆ ಸಂಯುಕ್ತ ಮಂತ್ರಿಮಂಡಲದ ರಚನೆಗೆ ಸಂಬಂಧಿಸಿದ್ದು; ಎರಡನೆಯದು ಸಂವಿಧಾನಾತ್ಮಕ ಚೌಕಟ್ಟಿಗೆ ಸಂಬಂದಿಸಿದ್ದು; ಮೂರನೆಯದು ಹಣಕಾಸು ವ್ಯವಸ್ಥೆ ಹಾಗೂ ರಕ್ಷಣಾ ವ್ಯವಸ್ಥೆಗೆ ಸಂಬಂಧಿಸಿದ್ದು ಎಂಬುದಾಗಿ ಉಪಾಧ್ಯಾರು ತಮ್ಮ ಚಿಂತನೆಯನ್ನು ಮುಂದಿರಿಸಿದ್ದರು.

### [ಅ] ರಾಜ್ಯಪಾಲರುಗಳ ನೇಮಕ

ಸಂಯುಕ್ತ ಮಂತ್ರಿಮಂಡಲದ ಅಸ್ಥಿರ ರಾಜಕೀಯ ಪರಿಸ್ಥಿತಿಯಿಂದಾಗಿ ಈ ಅವಧಿಯಲ್ಲಿ ರಾಜ್ಯಪಾಲರ ಹುದ್ದೆ ತುಂಬ ವಿವಾದದ ವಿಷಯವೇ ಆಗಿಬಿಟ್ಟಿತ್ತು. ರಾಜ್ಯಪಾಲರುಗಳು ಪ್ರಜಾತಾಂತ್ರಿಕ ಹಿರಿಮೆಗೆ ಅನುಗುಣವಾಗಿ ನಡೆದುಕೊಳ್ಳದೆ ಇದ್ದ ಹಿನ್ನೆಲೆಯಲ್ಲಿ, ಚುನಾಗಿತರಾಗಿರುವಂಥ ರಾಜ್ಯಪಾಲರುಗಳೇ ಬೇಕೆಂಬ ಬೇಡಿಕೆ ಕೆಲವು ವಲಯಗಳಲ್ಲಿ ಕೇಳಬಂದಿತ್ತು. "ಇದು ಉಪಯುಕ್ತವಾದುದೆಂದು ನಾನು [ಉಪಾಧ್ಯಾಯರು] ಭಾವಿಸಿಲ್ಲ. ಇದು ರೋಗಕ್ಕೆ ಸೂಕ್ತ ಚಿಕಿತ್ಸೆಯೇನೂ ಅಲ್ಲ. ಇದರಿಂದ ಕೇಂದ್ರದಿಂದ ದೂರವಾಗುವ ಪ್ರವೃತ್ತಿ ಹೆಚ್ಚುವ ಸಾಧ್ಯತೆ ಇದೆ. ವಿಶೇಷ ಸಂದರ್ಭಗಳನ್ನು ಹೊರತುಪಡಿಸಿದರೆ ರಾಜ್ಯಪಾಲರದು ಸಂವಿಧಾನಾತ್ಮಕವಾದ ಪ್ರಮುಖ ಪಾತ್ರವೇ ಆಗಿದೆ. ಅವರು ಪ್ರಾಂತದ ಮುದ್ರೆಯೂ ಆಗಬಾರದು ಅಥವಾ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷದ ಕೈಗೊಂಬೆಯೂ ಆಗಿರಬರದು" ಎಂದು ಅವರು ಸೂಚಿಸಿದ್ದರು. "ಚುನಾವಣೆಗಳಲ್ಲಿ ಸೋತುಹೋಗಿರುವಂಥ ರಾಜಕಾರಣಿಗಳಿಗೆ ಅಥವಾ ಸರ್ಕಾರೀ ಸೇವೆಯಿಂದ ನಿವೃತ್ತರಾಗಿರುವಂಥ ಅಧಿಕಾರಿಗಳಿಗೆ ಬದಲಾಗಿ ಸರ್ವೋಚ್ಚ ನ್ಯಾಯಾಲಯದ ಸೇವಾ ನಿವೃತ್ತ ನ್ಯಾಯಾಧೀಶರಿಗೆ ಈ ಹುದ್ದೆಯನ್ನು ನೀಡಲಿ" ಎಂಬುದು ಉಪಾಧ್ಯಾಯರು ನೀಡಿದ ಸಲಹೆಯಾಗಿತ್ತು.

### [ಆ] ಸಂಯುಕ್ತ ಮಂತ್ರಿಮಂಡಲಗಳು

"ಸಂಯುಕ್ತ ಮಂತ್ರಿಮಂಡಲಗಳು ಕಾಂಗ್ರೆಸ್ ಆಡಳಿತಕ್ಕೆ ಪರ್ಯಾಯ ವ್ಯವಸ್ಥೆಯೊಂದನ್ನೇನೋ ಒದಗಿಸಿದುವು. ಆದರೆ [ಕಾಂಗ್ರೆಸ್ ಆಡಳಿತ] ನೀತಿಗಳಿಗೆ



ಮತ್ತು ಕಾರ್ಯಕ್ರಮಗಳಿಗೆ ಪರ್ಯಾಯವೊಂದನ್ನು ಮುಂದಿರಿಸುವುದು ಅವಕ್ಕೆ ಸಾಧ್ಯವಿರಲಿಲ್ಲ. ಅಷ್ಟೇ ಅಲ್ಲ, ಈ ಉದ್ದೇಶವನ್ನು ಈಡೇರಿಸುವ ದೃಷ್ಟಿಯಿಂದ ಅದನ್ನು ರಚಿಸಿಯೂ ಇರಲಿಲ್ಲ..... ಈ ಪ್ರಯೋಗದಿಂದಾಗಿ. ಒಂದಿಷ್ಟು ವಾಸ್ತವಿಕ ಪ್ರಜ್ಞೆ, ರಾಜಕೀಯ ವಿಶ್ಲೇಷಣೆ ಹಾಗೂ ವಿವೇಚನೆಯ ಪ್ರವೃತ್ತಿ ಮೂಡಿಬಂದಿದ್ದರೆ, ಅದರಿಂದ ಒಂದಿಷ್ಟು ಲಾಭವಾದರೂ ಆಗುತ್ತಿತ್ತು. ಈ ಮಂತ್ರಿಮಂಡಲಗಳ ರಚನೆಯಿಂದಾಗಿ ರಾಜಕೀಯ ಅಸ್ಪೃಶ್ಯತೆಯ ಹಾಗೂ ಪ್ರತ್ಯೇಕತೆಯ ಮನೋವೃತ್ತಿಯನ್ನು ಇಲ್ಲವಾಗಿಸುವ ದಿಕ್ಕಿನಲ್ಲಿ ಸ್ತುತ್ಯವಾದ ಹೆಚ್ಚೆಯನ್ನು ಇಡಲಾಗಿದೆ... ಸಂಯುಕ್ತ ಮಂತ್ರಿಮಂಡಲದ ಭವಿಷ್ಯ ಏನಾದರೂ ಆಗಲಿ, ನಮ್ಮೆಲ್ಲರ ಈ ಸಾಧನೆ ನಮ್ಮ ಕೈಯಿಂದ ನುಣುಚಿಕೊಂಡು ಹೋಗದಿರಲಿ ಎಂಬುದೇ ನನ್ನ ಇಚ್ಛೆಯಾಗಿದೆ."

### [ಇ] ಹೊಸ ಪರಂಪರೆಗಳ ವಿಕಾಸದ ಅಗತ್ಯ

ಸಂಯುಕ್ತ ಮಂತ್ರಿ ಮಂಡಲಗಳ ಬಿಕ್ಕಟ್ಟಿನ ಪರಿಸ್ಥಿತಿಯಿಂದಾಗಿ ಉಂಟಾಗಿರುವ ರಾಜಕೀಯ ಅಸ್ಥಿರತೆಯಿಂದಾಗಿ, ಸಂಸದೀಯ ಪ್ರಜಾತಂತ್ರ ವ್ಯವಸ್ಥೆಯನ್ನು ಕೈಬಿಟ್ಟು ಅಧ್ಯಕ್ಷೀಯ ಆಡಳಿತ ವ್ಯವಸ್ಥೆಯನ್ನು ಅಂಗೀಕರಿಸಬೇಕೆಂದು ಕೆಲವರು ಸಲಹೆ ನೀಡಿದ್ದಾರೆ. ಬ್ರಿಟನ್ ಮತ್ತು ಅಮೆರಿಕೆಯ ಆಡಳಿತ ವ್ಯವಸ್ಥೆಗಳು ಅಲ್ಲಿಯ ಇತಿಹಾಸದೊಂದಿಗೆ ವಿಕಾಸಗೊಂಡಿವೆ ಎಂಬುದು ವಾಸ್ತವ ಸಂಗತಿ. ನಾವು ಅವುಗಳನ್ನು ಅನುಸರಿಸುವುದಕ್ಕೆ ಬದಲಾಗಿ, ನಮ್ಮ ಸ್ವಭಾವಕ್ಕೆ ಅನುಗುಣವಾದ ಪ್ರಜಾತಂತ್ರ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು. ಕಳೆದ ಐವತ್ತು ವರ್ಷಗಳಿಂದು ನಾವು ಒಂದಲ್ಲ ಒಂದು ರೂಪದಲ್ಲಿ ಸಂಸದೀಯ ಆಡಳಿತ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರುತ್ತಲೇ ಬಂದಿದ್ದೇವೆ. ಬದಲಾಗುತ್ತಿರುವ ರಾಜಕೀಯ ಸ್ವರೂಪಕ್ಕೆ ಅನುಗುಣವಾಗಿ ನಾವು ಇದನ್ನು ರೂಪಿಸಿಕೊಳ್ಳಬೇಕು.

ಉದಾಹರಣೆಗೆ ಮಂತ್ರಿಮಂಡಲಕ್ಕೆ ವಿರುದ್ಧವಾಗಿ ವಿಧಾನ ಸಭೆಯಲ್ಲಿ ಅವಿಶ್ವಾಸ ನಿರ್ಣಯ ಅಂಗೀಕೃತವಾಗುವವರೆಗೆ ಯಾವುದೇ ಮಂತ್ರಿಮಂಡಲವೂ ರಾಜೀನಾಮೆಯನ್ನು ನೀಡತಕ್ಕದಲ್ಲ ಎಂಬ ಒಂದು ಪರಂಪರೆಯನ್ನು ರೂಪಿಸಿಕೊಳ್ಳಬಹುದಾಗಿದೆ. ಈ ದೃಷ್ಟಿಯಲ್ಲಿ, ವಿಧಾನ ಸಭೆಯ ಬಹುಸಂಖ್ಯೆಯ ಸದಸ್ಯರು ವಿಧಾನ ಸಭೆಯ ಅಧಿವೇಶವನ್ನು ಕರೆಯುವಂತೆ ಅಧ್ಯಕರನ್ನು ಒತ್ತಾಯಿಸಬಹುದು ಎಂಬ ಪರಂಪರೆಯನ್ನೂ ಹಾಕಿಕೊಡಬಹುದು.

### (ಈ) ಪಕ್ಷಾಂತರ

ಪಕ್ಷಾಂತರ ಮಾಡುವವರಲ್ಲಿ ಶೇ. ತೊಂಬತ್ತೊಂಬತ್ತರಷ್ಟು ಮಂದಿ ಕಾಂಗ್ರೆಸ್

ಪಕ್ಷವನ್ನು ತ್ಯಜಿಸಿ ಬೇರೊಂದು ಪಕ್ಷಕ್ಕೆ ಬಂದಿರುವವರೇ ಆಗಿದ್ದಾರೆ ಹಾಗೂ ಮತ್ತೆ ಆ ಪಕ್ಷವನ್ನು ಬಿಟ್ಟು ಇನ್ನೊಂದು ಪಕ್ಷಕ್ಕೆ ಹೋಗಿರುವವರೇ ಆಗಿದ್ದಾರೆ ಎಂಬುದು ಉಪಾಧ್ಯಾಯರ ಅಭಿಪ್ರಾಯ. ಈ ವಿಷಯದಲ್ಲಿ ಕಾನೂನಿನ ಆಶ್ರಯವನ್ನು ಪಡೆಯುವ ಬೆದರಿಕೆಗೆ ಬದಲಾಗಿ ಜನಾಭಿಪ್ರಾಯದ ಒತ್ತಡವನ್ನು ಹೇರುವುದು ಹಾಗೂ ಪರಂಪರೆಯನ್ನು ಪಾಲಿಸಿಕೊಂಡು ಬರುವುದು ಹೆಚ್ಚು ಉಪಯುಕ್ತವಾಗುತ್ತದೆ ಎಂದು ಉಪಾಧ್ಯಾಯರು ಭಾವಿಸಿದ್ದರು. ಅವರು ಈ ವಿಷಯದ ಬಗ್ಗೆ ಹೀಗೆಂದು ಹೇಳಿದ್ದರು: “ರಾಜಕೀಯ ಪಕ್ಷಗಳು ನೀತಿ –ಸಂಹಿತೆಯೊಂದನ್ನು ಅಂಗೀಕರಿಸಬೇಕು. ಹಾಗೆ ಮಾಡಿದರೆ ಈ ಪ್ರವೃತ್ತಿಗೆ ಸಾಕಷ್ಟು ಅಂಕುಶವನ್ನು ಹಾಕಬಹುದು. ವ್ಯಕ್ತಿಯನ್ನು ಆರಿಸುವ ಬ್ರಿಟಿಷ್ ಪದ್ಧತಿಗೆ ಬದಲಾಗಿ, ಪಕ್ಷಕ್ಕೆ ಮತದಾನಮಾಡುವ ಪದ್ಧತಿಯನ್ನು ಅಳವಡಿಸಿಕೊಂಡಿದ್ದೇ ಆದರೆ ಪಕ್ಷಾಂತರದ ಪಿಡುಗಿನಿಂದ ಮಾತ್ರವಲ್ಲದೆ, ಇತರ ದೋಷಗಳನ್ನು ದೂರಮಾಡಬಹುದು. ಪಶ್ಚಿಮ ಜರ್ಮನಿಯಲ್ಲಿ ಮಾಡಿರುವಂತೆ, ನಾವು ಎರಡೂ ಪದ್ಧತಿಗಳ ಸಮನ್ವಯವನ್ನು ಸಾಧಿಸಬಹುದು. ಆದರೆ ಈ ಸಮಸ್ಯೆಗೆ ಇನ್ನೂ ಹೆಚ್ಚು ನ್ಯಾಯಸಮ್ಮತವಾದ ಪರಿಹಾರವೆಂದರೆ ಇದು : ‘ಸುನಿಶ್ಚತವಾದ ನೀತಿ ಮತ್ತು ಸಿದ್ಧಾಂತಗಳ ಆಧಾರದ ಮೇಳೆ ಪಕ್ಷಗಳನ್ನು ಕಟ್ಟುತ್ತ ಬಂದದ್ದೇ ಆದಲ್ಲಿ, ಸಂಘಟನೆಯೂ ದೃಢವಾಗುತ್ತದೆ ಹಾಗೂ ಜನತೆಗೂ ರಾಜಕೀಯ ಶಿಕ್ಷಣ ದೊರೆತಂತಾಗಿ, ಪಕ್ಷದ ಕಾರ್ಯಕ್ರಮಗಳ ಬಗ್ಗೆ ಚಿಂತನೆಮಾಡಿ ಅದು ತನ್ನ ಮತವನ್ನು ನೀಡತೊಡಗುತ್ತದೆ ಹಾಗೂ (ಪಕ್ಷಾಂತರದ) ಈ ಪ್ರವೃತ್ತಿ ಕಡಿಮೆಯಾಗಿಬಿಡುತ್ತದೆ.”

**(ಉ) ಏಕೀಕೃತ ಆಡಳಿತ**

ನಾಡಿನ ಏಕತೆಗೆ ಅಪಾಯ ತಟ್ಟಬಾರದು ಎಂಬ ದೃಷ್ಟಿಯಿಂದ, ನಾವು ನಮ್ಮ ಸಂವಿಧಾನದ ಸ್ವರೂಪವನ್ನು ಏಕೀಕೃತಗೊಳಿಸುವುದು ಅಗತ್ಯವಾಗತ್ತದೆ. ಇನ್ನೊಂದು ಕಡೆ ಪ್ರಾಂತ್ಯ ಅಥವಾ ಪ್ರದೇಶಗಳಿಗೆ ಹೊಣೆಗಾರಿಕೆಯಿಂದ ಕೂಡಿದ ಸ್ವಾಯತ್ತತೆಯನ್ನು ನೀಡಿ, ಹಣಕಾಸಿನ ಮೂಲಗಳ ಮತ್ತು ಇತರ ಅಧಿಕಾರಗಳ ವಿಕೇಂದ್ರೀಕರಣ ಮಾಡುವುದೂ ಅಗತ್ಯವಾಗುತ್ತದೆ.

ಹಣಕಾಸಿನ ದೃಷ್ಟಿಯಿಂದ ಪ್ರಾಂತ್ಯಗಳು ಅತಿಯಾಗಿ ಕೇಂದ್ರವನ್ನೇ ಅವಲಂಬಿಸಿಕೊಂಡಿವೆ. ಅಧಿಕಾರಗಳನ್ನು ಮತ್ತು ಹೊಣೆಗಾರಿಕೆಗಳನ್ನು ಸಂವಿಧಾನದಲ್ಲಿ ಹೇಗೆ ಹಂಚಿಬಿಡಲಾಗಿದೆ ಎಂದರೆ ಜನತೆಯ ಒಳಿತು ಮತ್ತು ಪ್ರಗತಿಯ ಹಾಗೂ ಆಡಳಿತದ ಸಂಪೂರ್ಣ ಹೊಣೆಗಾರಿಕೆಯನ್ನು ಪ್ರಾಂತ್ಯಗಳಿಗೆ ಹೊರಿಸಲಾಗಿದೆ. ಆದರೆ, ಆದಾಯದ ಆಕರ್ಷಕವಾದ ಹಾಗೂ ಫಲವತ್ತಾದ ಮೂಲಗಳೆಲ್ಲ ಕೇಂದ್ರದ ಅಧೀನದಲ್ಲಿವೆ. ಈ ವಿಷಯದ ಬಗ್ಗೆ ಸಂವಿಧಾನಕ್ಕೆ ತಿದ್ದುಪಡಿಯನ್ನು



ತರುವುದಕ್ಕೆ ಬದಲಾಗಿ ವ್ಯಾವಹಾರಿಕವಾದ ಮಾರ್ಗವೊಂದನ್ನು ಕಂಡುಕೊಳ್ಳುವುದೇ ಒಳ್ಳೆಯದು ಎಂಬುದು ಉಪಾಧ್ಯಾಯರ ಅಭಿಪ್ರಾಯವಾಗಿತ್ತು. ಹಣಕಾಸು ಆಯೋಗಕ್ಕೆ ಐದು ವರ್ಷಗಳ ಅವಧಿಯನ್ನು ಗೊತ್ತುಪಡಿಸುವುದಕ್ಕೆ ಬದಲಾಗಿ ಅದಕ್ಕೆ ಸ್ಥಾಯೀರೂಪವನ್ನು ನೀಡಬೇಕು” ಎಂಬುದಾಗಿ ಅವರು ಸಲಹೆ ನೀಡಿದ್ದರು.

ಪ್ರಾಂತ್ಯಗಳು ಕೇಂದ್ರವನ್ನು ಅವಲಂಬಿಸಿಕೊಂಡು ಇರಬೇಕಾಗಿರುವಂಥ ಈ ಪರಿಸ್ಥಿತಿಯಲ್ಲಿ ಸಂವಿಧಾನಾತ್ಮಕ ಕಾರ್ಯನೀತಿಗಳ ವಿಷಯದಲ್ಲಿ ಕೇಂದ್ರದೊಂದಿಗೆ ಪ್ರಾಂತ್ಯಗಳೂ ಹೊಣೆಗಾರಿಕೆಯನ್ನು ಹಂಚಿಕೊಳ್ಳಬೇಕಾಗಿದೆ. ಇದು ಅನುಚಿತವಾದುದೆಂಬುದು ಉಪಾಧ್ಯಾಯರ ಅಭಿಪ್ರಾಯವಾಗಿತ್ತು. “ಅನೇಕ ಪ್ರಾಂತ್ಯಗಳಲ್ಲಿ ತೆರಿಗೆ–ನೀತಿಗಳನ್ನು ನಿರ್ಧರಿಸುವ ವಿಚಾರದಲ್ಲಿ ರಾಜಕೀಯ ಘೋಷಣೆಗಳ ವಿಚಾರವೇ ಪ್ರಮುಖವಾಗಿದ್ದು, ಆಡಳಿತಾತ್ಮಕ ಹೊಣೆಗಾರಿಕೆಗಳ ವಿಚಾರ ಅಪ್ರಮುಖವಾಗಿರುವಂತೆ ತೋರುತ್ತದೆ. ಭೂ–ಕಂದಾಯ, ಆದಾಯ ತೆರಿಗೆ, ಮಾರಾಟ ತೆರಿಗೆ ಮುಂತಾದವುಗಳ ವಿಷಯದಲ್ಲಿ ಪ್ರಾಂತ್ಯಗಳು ವ್ಯಾವಹಾರಿಕ ರೀತಿಯಲ್ಲಿ ಹಾಗೂ ಹೊಣೆಗಾರಿಕೆಯಿಂದ ಕೂಡಿದ ರೀತಿಯಲ್ಲಿ ವರ್ತಿಸಬೇಕು” ಎಂದು ಅವರು ಭಾವಿಸಿದ್ದರು.

“ಆರ್ಥಿಕ ಪ್ರಗತಿ, ಬಂಡವಾಳ ಸೃಷ್ಟಿ, ಜನ–ಹಿತ, ವೈಷಮ್ಯಗಳನ್ನು ಕಮ್ಮಿಮಾಡುವುದು ಮತ್ತು ವಿಕೇಂದ್ರೀಕೃತ ಆಡಳಿತದ ಅಗತ್ಯಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಇಡೀ ತೆರಿಗೆ ಪದ್ಧತಿಗೆ ಹಾಗೂ ವಿವಿಧ ತೆರಿಗೆಗಳಿಗೆ ಸಂಬಂಧಿಸಿದಂತೆ ತನ್ನ ವರದಿಯನ್ನು ಸಲ್ಲಿಸಲು ಅನುಕೂಲವಾಗುವಂತೆ ತೆರಿಗೆ ಪರಿಶೀಲನಾ ಆಯೋಗವೊಂದನ್ನು ರಚಿಸಬೇಕು” ಎಂಬುದಾಗಿ ಉಪಾಧ್ಯಾಯರು ಒತ್ತಾಯಮಾಡಿದ್ದರು.

**(ಊ) ಗಮನ ಸೆಳೆಯುವ ಸೂಚನೆ**

“ಇಂದು ಹಣಕಾಸಿನ ನೀತಿಗಳ ವಿಷಯದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರುವುದು ಅಗತ್ಯವಾಗಿರುವಾಗ ಕೇಂದ್ರದಲ್ಲಿನ ಕಾಂಗ್ರೆಸ್ ಆಡಳಿತ, ಪರಿಶೀಲನ ಯೋಗ್ಯವಾಗಿದ್ದರೂ, ಇಂದಿನ ಸಮಸ್ಯೆಗಳನ್ನು ಪರಿಹರಿಸುವ ದೃಷ್ಟಿಯಿಂದ ಮಹತ್ವಪೂರ್ಣವಲ್ಲದಿರುವಂಥ ವಿಷಯಗಳ ಬಗ್ಗೆ ತನ್ನ ಇಡೀ ಸಮಯವನ್ನು ಮತ್ತು ಶಕ್ತಿಯನ್ನು ವಿನಿಯೋಗಿಸುತ್ತಿದೆ. ನಾಡಿನ ಚಿಂತಾಜನಕ ಆಹಾರ ಧಾನ್ಯಗಳ ಸ್ಥಿತಿ, ಇಳಿಮುಖವಾಗುತ್ತಿರುವ ಆಹಾರೋತ್ಪಾದನೆ, ಹೆಚ್ಚುತ್ತಿರುವ ನಿರುದ್ಯೋಗ, ಬೆಲೆ ಏರಿಕೆಯಂಥ ವಿಷಯಗಳು ನಮ್ಮನ್ನು ಕಾಡುತ್ತಿರುವಾಗ ರಾಜಧನಪದ್ಧತಿ ವಿಚಾರ, ಹಜಾರಿ ಆಯೋಗದ ವರದಿಯ ಬಗೆಗಿನ ಚರ್ಚೆ, ಬ್ಯಾಂಕ್‌ಗಳ ಮತ್ತು ವಿಮೆಯ ರಾಷ್ಟ್ರೀಕರಣದ ಪ್ರಸ್ತಾವನೆ ಮೊದಲಾದ ಇಂದಿನ ಬಹು ಚರ್ಚೆಯ

ಹಾಗೂ ಜ್ವಲಂತವೆಂದು ಭಾವಿಸಲಾಗಿರುವ ಪ್ರಶ್ನೆಗಳು ದೂರಗಾಮೀ ಪರಿಣಾಮವನ್ನು ಹೊಂದಿರುವಂಥವಾಗಿ ಖಂಡಿತವಾಗಿಯೂ ತೋರುವುದಿಲ್ಲ. ಈ ವಿಚಾರಗಳ ಬಗ್ಗೆ ಮತ್ತೆ ಮತ್ತೆ ಚರ್ಚೆ ನಡೆಯಲಿ. ಆದರೆ, ಇವುಗಳ ಬಗ್ಗೆ ಕಡ್ಡಿಮುರಿದಂಥ ನಿರ್ಣಯವನ್ನು ಕೈಗೊಳ್ಳದೆ ಇದ್ದರೆ, ಇಡೀ ಚರ್ಚೆಯ ಉದ್ದೇಶ ಜನರ ಗಮನವನ್ನು ಜಲಂತ ಸಮಸ್ಯೆಗಳತ್ತಣಿಂದ ಬೇರೆಡೆ ಸೆಳೆಯುವುದೇ ಆಗಿದೆ ಅಥವಾ ರಾಜಕೀಯ ಒತ್ತಡವನ್ನು ತರುವುದೇ ಆಗಿದೆ ಎಂದು ಅನಿವಾರ್ಯವಾಗಿ ಭಾವಿಸಬೇಕಾಗುತ್ತದೆ."

"ಸಾಧನಸಂಪನ್ಮೂಲಗಳು ಇಲ್ಲವೆಂಬ ರಾಗವನ್ನು ಯಾವಾಗಲೂ ಹಾಡುತ್ತ ಇರುತ್ತೇವೆ. ನಮ್ಮ ನಾಡಿನಲ್ಲಿ ಸಾಧನಸಂಪನ್ಮೂಲಗಳ ಕೊರತೆ ಇದೆಯೆಂದು ನಾನು ನಂಬುವುದಿಲ್ಲ. ನಮ್ಮ ಬಳಿ ಮಾನವ, ಪ್ರಾಕೃತಿಕ ಹಾಗೂ ಹಣಕಾಸಿನ ಸಂಪನ್ಮೂಲಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗಿವೆ. ಲಭ್ಯವಿರುವ ಹಾಗೂ ವಿಕಾಸಾಶೀಲವಾಗಿರುವ ಸಂಪನ್ಮೂಲಗಳಿಗೆ ಅನುಗುಣವಾಗಿ ಯೋಜನೆಗಳನ್ನು ರೂಪಿಸಬೇಕಾಗಿದೆ."

**(ಖ) ಭಾಷೆಯ ಪ್ರಶ್ನೆ**

ಭಾಷೆಯು ಎಂಥ ಪ್ರಶ್ನೆಯಾಗಿದೆ ಎಂದರೆ ಕಲ್ಲಿಕೋಟೆಯ ಅಧಿವೇಶನದಲ್ಲಿ ಅಂಗೀಕರಿಸಲಾದ ನಿರ್ಣಯವನ್ನೇ ಆಧಾರವಾಗಿರಿಸಿಕೊಂಡು ಜನಸಂಘ ಬದಲಾಗಿಬಿಟ್ಟಿದೆ ಎಂದು ಜನರು ಹೇಳತೊಡಗಿದ್ದಾರೆ. ಜನಸಂಘ ಹಿಂದಿಯನ್ನು ನಿರ್ದಿಷ್ಟ ರೂಪದಲ್ಲಿ ಇಡೀ ರಾಷ್ಟ್ರದ ವ್ಯಾವಹಾರಿಕ ಭಾಷೆಯನ್ನಾಗಿಸಬೇಕು ಹಾಗೂ ಇಂಗ್ಲಿಷ್ ಭಾಷೆಯನ್ನು ಕೈ ಬಿಡಬೇಕು ಎಂಬುದಾಗಿ ಪ್ರಬಲವಾದ ಆಂದೋಳನವನ್ನೇ ನಡೆಸಿಕೊಂಡು ಬಂದಿತ್ತು. ಬಹುಶಃ ಇದೇ ಮೊದಲ ಬಾರಿಗೆ, ಜನಸಂಘ ದಕ್ಷಿಣ ಭಾರತವನ್ನು ಪ್ರವೇಶಿಸಿದ್ದರಿಂದ, ಅದರ ಧ್ವನಿ ಬದಲಾಯಿತು. ಈ ಸನ್ನಿವೇಶದಲ್ಲಿ ದೀನ್‌ದಯಾಳ್ ಉಪಾಧ್ಯಾಯರು ಹೇಳಿದ ಮಾತುಗಳು ಉಲ್ಲೇಖನೀಯವಾಗಿವೆ." ಹಿಂದೀ ಗೊತ್ತಿಲ್ಲದೆ ಇರುವಂಥವರು ಯಾವುದೇ ಅಧಿಕಾರದಿಂದ ವಂಚಿತರಾಗುವಂತೆ ಮಾಡುವಂಥ ಯಾವುದೇ ಕ್ರಮಕ್ಕೆ ಜನಸಂಘ ಬೆಂಬಲವನ್ನು ನೀಡುವುದಿಲ್ಲ. ಈ ಕಾರಣದಿಂದಾಗಿಯೇ ಲೋಕ ಸೇವಾ ಆಯೋಗದ ಎಲ್ಲ ಪರೀಕ್ಷೆಗಳೂ ಪ್ರಾದೇಶಿಕ ಭಾಷೆಗಳ ಮಾಧ್ಯಮದ ಮೂಲಕ ನಡೆಯಬೇಕು ಹಾಗೂ ನೇಮಕಾತಿಗೆ ಯಾವುದೇ ಭಾಷಾವಿಶೇಷದ ಅರಿವನ್ನು ಒತ್ತಾಯಿಸುವಂತಿರಬಾರದು ಎಂಬುದಾಗಿ ಜನಸಂಘ ತನ್ನ ಬೇಡಿಕೆಯನ್ನು ಮುಂದಿರಿಸಿದೆ. ಈ ಸ್ಥಿತ್ಯಂತರದ ಅವಧಿಯಲ್ಲಿ ಇಂಗ್ಲಿಷ್ ಭಾಷೆಯನ್ನು ಬಳಸಬಯಸುವಂಥವರಿಗೆ ಆ ಸೌಲಭ್ಯವನ್ನು ಒದಗಿಸಿಕೊಡಬೇಕು."



ಇದೊಂದು ಬಹು ಆಯಾಮದ ಸುದೀರ್ಘ ಭಾಷಣವಾಗಿತ್ತು. ಜನಸಾಮಾನ್ಯರ ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸುವ ಆಶಾವಾದದೊಂದಿಗೆ ಅವರು ಈ ಭಾಷಣವನ್ನು ಕೊನೆಗೊಳಿಸಿದ್ದರು. ತಮ್ಮ ಭಾಷಣದ ಮೊದಲಲ್ಲೇ ಅವರು ಈ ಅಂಶವನ್ನು ಉಲ್ಲೇಖಿಸಿದ್ದರು. ಪ್ರತಿಯೊಂದು ಆಂದೋಳನದ ಹಿಂದೆಯೂ ಸಾಮ್ಯವಾದಿಗಳ ಕೈವಾಡವನ್ನು ಕಾಣುವಂಥ ಹಾಗೂ ಅದನ್ನು ಮೆಟ್ಟಿಹಾಕಬೇಕೆಂಬ ಸಲಹೆಯನ್ನು ನೀಡುವಂಥ ವ್ಯಕ್ತಿಗಳ ವಿಷಯದಲ್ಲಿ ನಾವು ಎಚ್ಚರದಿಂದ ಇರಬೇಕು. ಬದಲಾಗುತ್ತಿರುವ ವ್ಯವಸ್ಥೆಯ ಯುಗದಲ್ಲಿ ಜನಾಂದೋಳನ ಸಹಜವೂ ಹೌದು, ಅಗತ್ಯವೂ ಹೌದು. ವಾಸ್ತವವಾಗಿ ಇದು ಸಮಾಜ ಎಚ್ಚರಗೊಂಡಿರುವುದರ ಪ್ರತೀಕವೇ ಆಗಿರುತ್ತದೆ. ಹೀಗಾಗಿ, ಅವುಗಳೊಂದಿಗೆ ಸಹಕರಿಸಲು ಸಾಧ್ಯವಿಲ್ಲದಿರುವುದಕ್ಕಾಗಿ ನಾವು ವಿಷಾದಿಸುತ್ತೇವೆ. ಅವರು ಕಾಲಚಕ್ರದ ಓಟವನ್ನು ತಡೆದುನಿಲ್ಲಿಸಬಯಸುತ್ತಾರೆ. ಭಾರತದ ಹಣೆಬರೆಹವನ್ನು ಬದಲಾಯಿಸ ಬಯಸುತ್ತಾರೆ. ಇದು ಸಾಧ್ಯವಾಗುವುದಿಲ್ಲ."

ನಾವು ನಮ್ಮ ಹಿಂದಿನ ಪರಂಪರೆಯ ಬಗೆಗಿನ ಅಭಿಮಾನದಿಂದಲೇ ಉಸಿರಾಡುತ್ತಿದ್ದೇವೆ. ಆದರೆ ಅದನ್ನೇ ಭಾರತದ ರಾಷ್ಟ್ರಜೀವನದ ಚರಮ–ಬಿಂದುವೆಂದು ಒಪ್ಪಲಾರೆವು. ನಾವು ಇಂದಿನ ವಿಷಯದಲ್ಲಿ ಯಥಾರ್ಥವಾದಿಗಳಾಗಿದ್ದೇವೆ. ಆದರೆ ಅದರಿಂದಲೇ ಬಂಧಿತರಾಗಿಲ್ಲ. ನಮ್ಮ ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸುಗಳಿವೆ, ಆದರೆ, ನಾವು ನಿದ್ರಾಲೀನರಾಗಿಲ್ಲ. ಅದಕ್ಕೆ ಬದಲಾಗಿ ಆ ಕನಸುಗಳನ್ನು ಸಾಕಾರಗೊಳಿಸುವ ಕರ್ಮಯೋಗಿಗಳೇ ಆಗಿದ್ದೇವೆ. ನಾವು ಅನಾದಿಯೂ, ಮೆಟ್ಟನಿಂತಿರುವ ಅತೀತವೂ ಅಗಿರುವ ಅಸ್ಥಿರ ವರ್ತಮಾನ ಹಾಗೂ ಚಿರಂತನ–ಭವಿಷ್ಯಗಳನ್ನು ಕಾಲಾತೀತ ಸನಾತನ ಸಂಸ್ಕೃತಿಯ ಆರಾಧಕರೇ ಆಗಿದ್ದೇವೆ.. ವಿಜಯವನ್ನು ಸಾಧಿಸುವ ವಿಶ್ವಾಸ ನಮ್ಮಲ್ಲಿದೆ; ತಪಸ್ಸುಮಾಡುವ ದೃಢನಿರ್ಧಾರದೊಂದಿಗೆ ಮುನ್ನಡೆಯೋಣ."

ಭಾರತೀಯ ಜನಸಂಘದ ಅಧ್ಯಕ್ಷರಾಗಿ ಉಪಾಧ್ಯಾಯರು ನಾಡಿನಲ್ಲಿ ಹಾಗೂ ಪಕ್ಷದಲ್ಲಿ ಆಶಾವಾದವನ್ನು ಮೂಡಿಸಿದ್ದರು. ಕಲ್ಲಿಕೋಟೆ ಅಧಿವೇಶನದ ಜೀವಂತಿಕೆಯನ್ನು ಎಲ್ಲ ಪತ್ರಿಕೆಗಳೂ ಅಸಂದಿಗ್ಧ ರೂಪದಲ್ಲಿ ಒಪ್ಪಿ ಬಣ್ಣಿಸಿದ್ದುವು. ಉಪಾಧ್ಯಾಯರು ಪಕ್ಷದ ಅಧ್ಯಕ್ಷರಾಗಬಯಸಿರಲಿಲ್ಲ; ಆದರೆ, ಅವರನ್ನು ಅಧ್ಯಕ್ಷ ಪದವಿಗೆ ಒಪ್ಪಿಸಲೇಬೇಕಾದಂಥ ಪರಿಸ್ಥಿತಿ ಉಂಟಾಗಿತ್ತು.

* * * *

# ಅಧ್ಯಾಯ ೧೦

# ಮಹಾಪ್ರಯಾಣ

ಪಂ. ದೀನ್ ದಯಾಳ್ ಉಪಾಧ್ಯಾಯರು ೧೯೩೭ ರಿಂದ ೧೯೬೮ರವರೆಗೂ ಭಾರತದ ರಾಷ್ಟ್ರೀಯ ಜೀವನದಲ್ಲಿ ಸಕ್ರಿಯರಾಗಿದ್ದರು. ಅವರು ೧೯೩೭ರಲ್ಲಿ ಸಂಘದ ಸಂಪರ್ಕಕ್ಕೆ ಬಂದರು. ಐದು ವರ್ಷಗಳವರೆಗೆ ಅವರು ಸ್ಥಳೀಯ ಕಾರ್ಯಕರ್ತರಾಗಿ ತಮ್ಮ ಕರ್ತವ್ಯ ನಿರ್ವಹಿಸಿದರು. ೧೯೪೨ರಲ್ಲಿ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಆಜೀವ ಪ್ರಚಾರಕರಾದರು. ಹಾಗೂ ೧೯೫೧ರವರೆಗೂ ಅವರು ಉತ್ತರ ಪ್ರದೇಶದಲ್ಲಿ ನೇರವಾಗಿ ಸಂಘದ ಕಾರ್ಯಗಳ ಜವಾಬ್ದಾರಿಯನ್ನು ನಿರ್ವಹಿಸಿದರು. ಈ ಒಂಬತ್ತು ವರುಷಗಳ ಕಾರ್ಯಾನುಭವ ಅವರ ಸಂಘಟನಾತ್ಮಕ ಹಾಗೂ ಸಾಹಿತ್ಯಿಕ ಪ್ರತಿಭೆಯನ್ನು ಪ್ರಖರಗೊಳಿಸಿತು. ೧೯೫೧ ರಿಂದ ೧೯೬೭ರವರೆಗೆ ೧೬ ವರುಷಗಳ ಕಾಲ ಅವರು ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಅವರು ಸಾಂಗೋಪಾಂಗವಾಗಿ ರಾಷ್ಟ್ರೀಯ ನಾಯಕತ್ವವನ್ನು ನಿರ್ವಹಿಸಿದರು. ಈ ಪರಿಪಕ್ವ ನಾಯಕತ್ವ ಎಂದು ಭಾರತೀಯ ಜನಸಂಘದ ಅಧ್ಯಕ್ಷರ ರೂಪದಲ್ಲಿ ಮುಂದೆ ಬಂದಿತೋ ಆಗ, ವಿಧಿಯು ಬಹಳ ರಹಸ್ಯಾತ್ಮಕವಾಗಿ ಹಾಗೂ ನಿರ್ಮಮ ರೀತಿಯಲ್ಲಿ ಅವರ ಜೀವನ ರೇಖೆಯನ್ನು ಅಳಿಸಿಬಿಟ್ಟಿತು. ಅವರು ಕೇವಲ ೪೪ ದಿನ ಅಂದರೆ ೨೯ ಡಿಸೆಂಬರ್, ೧೯೬೭ ರಿಂದ ೧೦ ಫೆಬ್ರವರಿ, ೧೯೬೮ ರವರೆಗೆ ಭಾರತೀಯ ಜನಸಂಘದ ಅಧ್ಯಕ್ಷರಾಗಿದ್ದರು.

೧೧ ಫೆಬ್ರವರಿ, ೧೯೬೮ರ (ಬೆಳಗಿನ ಜಾವ) ಸುಮಾರು ಮೂರೂ ಮುಕ್ಕಾಲು ಘಂಟೆಗೆ ಮುಗಲ್‌ಸರಾಯ್ ಸ್ಟೇಶನ್‌ನ ಲಿವರ್‌ಮ್ಯಾನ್‌ನು ಸ್ಟೇಶನ್ನಿಗೆ ಸುಮಾರು ೧೫೦ ಗಜದಷ್ಟು ಹಿಂದೆ, ಲೈನ್‌ನಿಂದ ದಕ್ಷಿಣದೆಡೆ ವಿದ್ಯುತ್ ಕಂಬ ನಂ. ೧೨೭೬ ರ ಸಮೀಪ ಒಂದು ಶವ ಜಲ್ಲಿ ಕಲ್ಲುಗಳ ಮೇಲೆ ಬಿದ್ದಿದೆ ಎಂಬುದಾಗಿ ದೂರವಾಣಿಯ ಮೂಲಕ ಸಹಾಯಕ ಸ್ಟೇಶನ್ ಮಾಸ್ಟರ್‌ರಿಗೆ ತಿಳಿಸಿದನು. ಕಾವಲಿರುವುದಕ್ಕಾಗಿ ಪೋಲಿಸ್ ಪೇದೆಗಳನ್ನು ಗೊತ್ತುಪಡಿಸಲಾಯಿತು. ಸಹಾಯಕ ಸ್ಟೇಶನ್ ಮಾಸ್ಟರರು ಪೋಲಿಸರಿಗೆ ಕಳುಹಿಸಿದ ಮೆಮೋನಲ್ಲಿ 'ಆಲ್‌ಮೋಸ್ಟ್ ಡೆಡ್' ಎಂದು ಬರೆಯಲಾಗಿತ್ತು. ಬೆಳಗಿನ ಜಾವ ಡಾಕ್ಟರು ಪರೀಕ್ಷೆ ನಡೆಸಿ ಅವರನ್ನು ಸಂಪೂರ್ಣವಾಗಿ ಮೃತರಾಗಿದ್ದಾರೆಂದು ಘೋಷಿಸಿದರು. ಆ



ಶವವನ್ನು ಪ್ಲಾಟ್‌ಫಾರಂನ ಮೇಲೆ ಇಟ್ಟಾಗ ಅದನ್ನು ನೋಡುವ ಸಲುವಾಗಿ ಅಲ್ಲಿ ಜನರ ಗುಂಪುಗೂಡಿತು. ಅಲ್ಲಿಯ ತನಕ ಆ ಶವ ಅನಾಥವಾಗಿತ್ತು. ಆ ಗುಂಪಿನಲ್ಲಿದ್ದ ಒಬ್ಬ ವ್ಯಕ್ತಿ ಅಕಸ್ಮಾತ್ "ಅರೆ ಇವರು ಭಾರತೀಯ ಜನಸಂಘದ ಅಧ್ಯಕ್ಷ ಪಂ. ದೀನ್ ದಯಾಳ್ ಉಪಾಧ್ಯಾಯರು" ಎಂದು ಕೂಗಿಹೇಳಿದ.

ಈ ಸುದ್ದಿಯು ವಿದ್ಯುತ್ ಅಲೆಗಳ ಹಾಗೆ ಎಲ್ಲೆಡೆ ಹಬ್ಬಿತು ಹಾಗೂ ದೇಶಾದ್ಯಂತ ವಿಷಾದ ಆವರಿಸಿತು.

ಫೆಬ್ರವರಿ ತಿಂಗಳಲ್ಲಿ ಸಂಸತ್ತಿನ ಬಜೆಟ್ ಅಧಿವೇಶನ ಪ್ರಾರಂಭವಾಗುತ್ತದೆ. ೧೧ ಫೆಬ್ರವರಿ, ೧೯೬೮ರಂದು ಭಾರತೀಯ ಜನಸಂಘದ ಸಂಸತ್ತಿನ ಸಭೆಯನ್ನು ದೆಹಲಿಯಲ್ಲಿ ಆಯೋಜಿಸಲಾಗಿತ್ತು. ಹೊಸದಾಗಿ ಆಯ್ಕೆಯಾದ ಅಧ್ಯಕ್ಷರು ಮೊಟ್ಟಮೊದಲ ಬಾರಿಗೆ ಸಂಸದೀಯ ಪಕ್ಷದ ಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ೧೦ ಫೆಬ್ರವರಿಯಂದು ದೀನ್ ದಯಾಳರು ಲಖನೌದಲ್ಲಿದ್ದರು. ಬೆಳಗಿನ ಜಾವ ದೀನ್ ದಯಾಳರಿಗೆ ಪಟ್ನಾದಿಂದ ಬಿಹಾರ ಪ್ರದೇಶ ಜನಸಂಘದ ಸಂಘಟನಾ ಕಾರ್ಯದರ್ಶಿ ಅಶ್ವಿನಿಕುಮಾರರ ದೂರವಾಣಿ ಕರೆ ಬಂದಿತು, ಸಂಸತ್ತಿನ ಬಜೆಟ್ ಅಧಿವೇಶನ ಬಹಳ ಸಮಯದ ವರೆಗೂ ನಡೆಯುತ್ತದೆ. ಹೀಗಾಗಿ ೧೧ ಫೆಬ್ರವರಿಯಂದು ಪಟ್ನಾದಲ್ಲಿ ನಡೆಯುವ ಬಿಹಾರ ಪ್ರದೇಶದ ಕಾರ್ಯಕಾರಿಣಿ ಸಭೆಯಲ್ಲಿ ಭಾಗವಹಿಸಬೇಕೆಂದು ಅವರು ಒತ್ತಾಯಪಡಿಸಿದರು. ದೀನ್ ದಯಾಳರು ಹೊಸದಾಗಿ ಆಯ್ಕೆಯಾಗಿದ್ದ ಪ್ರಧಾನ ಕಾರ್ಯದರ್ಶಿ ಸುಂದರಸಿಂಹ ಭಂಡಾರಿಗಳೊಡನೆ ಚರ್ಚಿಸಿ ದಿನಾಂಕ ೧೧ ಫೆಬ್ರವರಿಯಂದು ದೆಹಲಿಗೆ ಹೋಗುವುದಕ್ಕೆ ಬದಲಾಗಿ ಪಟಾಕ್ಕೆ ತೆರಳುವ ಕಾರ್ಯಕ್ರಮವನ್ನು ಹಮ್ಮಿಕೊಂಡರು.

ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿ ದೀನ್ ದಯಾಳ ಉಪಾಧ್ಯಾಯರು ರೈಲಿನ ಮೂರನೇ ದರ್ಜೆಯ ಬೋಗಿಯಲ್ಲಿಯೇ ಪ್ರಯಾಣವನ್ನು ಕೈಗೊಳ್ಳುತ್ತಿದ್ದರು. ಹಾಗೂ ಎಕ್ಸ್‌ಪ್ರೆಸ್ ಟ್ರೇನ್‌ಗೆ ಬದಲಾಗಿ ಪ್ಯಾಸೆಂಜರ್ ಟ್ರೇನಿನಲ್ಲಿ ಪ್ರಯಾಣ ಮಾಡುವುದಕ್ಕೆ ಅವರು ಆದ್ಯತೆ ನೀಡುತ್ತಿದ್ದರು. ಪ್ಯಾಸೆಂಜರ್ ಟ್ರೇನ್‌ನಲ್ಲಿ ಅವರಿಗೆ ಓದಲು–ಬರೆಯಲು ಸಮಯ ಸಿಗುತ್ತಿತ್ತು. ಹಾಗೂ ಚಿಕ್ಕ–ಪುಟ್ಟ ನಿಲ್ದಾಣಗಳಲ್ಲಿಯೂ ಕಾರ್ಯಕರ್ತರನ್ನು ಭೇಟಿಮಾಡುವ ಅವಕಾಶ ದೊರೆಯುತ್ತಿತ್ತು. ಅಧ್ಯಕ್ಷರಾದ ಮೇಲೆ ಜನರೆಲ್ಲಾ ಒಟ್ಟುಗೂಡಿ ದೀನ್‌ದಯಾಳರು ಪ್ರಥಮ ದರ್ಜೆ ಬೋಗಿಯಲ್ಲಿ ಪ್ರಯಾಣ ಕೈಗೊಳ್ಳಬೇಕೆಂದು ತೀರ್ಮಾನಿಸಿದರು. ಹೀಗಾಗಿ, ಪಠಾನ್‌ಕೋಟ್ ಸ್ಯಾಲ್‌ದಹ ಎಕ್ಸ್‌ಪ್ರೆಸ್ ರೈಲಿನಲ್ಲಿ ಅವರಿಗೆ ಪ್ರಥಮ ದರ್ಜೆಯ ಟಿಕೆಟ್ಟನ್ನು ಕೊಳ್ಳಲಾಯಿತು. ಈ ರೈಲು ೧೦ ಫೆಬ್ರವರಿಯಂದು ಸಂಜೆ ೭ ಗಂಟೆಗೆ ಲಖನೌ ಸ್ಟೇಶನ್ ಬಿಡುತ್ತಿತ್ತು. ಉತ್ತರ ಪ್ರದೇಶದ ಅಂದಿನ ಉಪಮುಖ್ಯಮಂತ್ರಿ ರಾಮ್‌ಪ್ರಕಾಶ್‌ಗುಪ್ತ, ಭಾರತೀಯ ಜನಸಂಘದ ಹಿಂದಿನ ಅಧ್ಯಕ್ಷರಾಗಿದ್ದ

ಪೀತಾಂಬರದಾಸ್ ಅವರುಗಳು ಅಧ್ಯಕ್ಷರನ್ನು ಬೀಳ್ಕೊಡಲು ನಿಲ್ದಾಣಕ್ಕೆ ಬಂದಿದ್ದರು. ಅವರ ಹಾಸಿಗೆ ಹಾಗೂ ಪುಸ್ತಕಗಳ ಜೋಳಿಗೆಯನ್ನು ಸಹ ಬೋಗಿಯಲ್ಲಿರಿಸಲಾಗಿತ್ತು. ರೈಲು ಸ್ಟೇಶನ್‌ನಿಂದ ಹೊರಟಿತು; ಅವರು ಕೈಜೋಡಿಸಿ ಮುಗಿದು ಎಲ್ಲರನ್ನೂ ಬೀಳ್ಕೊಟ್ಟರು. ರಾತ್ರಿ ಹನ್ನೆರಡು ಘಂಟೆಗೆ ಜೌನ್‌ಪುರ ನಿಲ್ದಾಣದಲ್ಲಿ ಜೌನ್‌ಪುರದ ರಾಜಾ ಸಾಹೇಬರ ಆಪ್ತ ಕಾರ್ಯದರ್ಶಿಗಳಾದ ಕನ್ಹೈಯಲಾಲ್ ಪಂಡಿತರು ಅವರನ್ನು ಭೇಟಿಮಾಡಲು ಬಂದಿದ್ದರು. ಅವರು ದೀನ್ ದಯಾಳರಿಗೆ ರಾಜಸಾಹೇಬರ ಪತ್ರವನ್ನು ನೀಡಿದರು. ರಾತ್ರಿ ೧೨ ಘಂಟೆ ೧೨ ನಿಮಿಷಕ್ಕೆ ರೈಲು ಜೌನ್‌ಪುರದಿಂದ ಹೊರಟಿತು. ರೈಲು ಮುಘಲ್‌ಸರಾಯ್ ತಲುಪಿತು. ಸ್ಯಾಲ್‌ದಹ–ಪಠಾನ್‌ಕೋಟ್ ಎಕ್ಸ್‌ಪ್ರೆಸ್ ನೇರವಾಗಿ ಪಟನಾಗೆ ಹೋಗುತ್ತಿರಲಿಲ್ಲ. ಈ ರೈಲು ರಾತ್ರಿ ಸುಮಾರು ೨.೧೫ ರ ಹೊತ್ತಿಗೆ ಪ್ಲಾಟ್‌ಫಾರಂ. ನಂ. ೧ ಕ್ಕೆ ತಲುಪಿತು. ದೀನ್ ದಯಾಳರು ಪ್ರಯಾಣ ಮಾಡುತ್ತಿದ್ದ ಬೋಗಿಯನ್ನು ಆ ರೈಲಿನಿಂದ ಬೇರ್ಪಡಿಸಿ, ಶಂಟಿಂಗ್ ಆನಂತರ ದೆಹಲಿ–ಹಾವಡಾ ಎಕ್ಸ್‌ಪ್ರೆಸ್‌ಗೆ ಜೋಡಿಸಲಾಯಿತು. ಅದು ಸುಮಾರು ೨.೫೦ಕ್ಕೆ. ಮುಘಲ್‌ಸರಾಯ್‌ದಿಂದ ಹೊರಟಿತು. ಬೆಳಗಿನ ಜಾವ ರೈಲು ಪಟ್ನಾ ತಲುಪಿದಾಗ ದೀನ್ ದಯಾಳರು ಆ ರೈಲಿನಲ್ಲಿ ಇರಲಿಲ್ಲ.

ಅಲ್ಲಿ, ಮುಘಲ್‌ಸರಾಯದಲ್ಲಿ ಅವರ ಶವವನ್ನು ಗುರುತಿಸಲಾಗಿತ್ತು. ಪರಮ ಪೂಜ್ಯರಾದ ಶ್ರೀ ಗುರೂಜಿ (ಮಾ.ಸ. ಗೋಳ್‌ವಳ್ಕರ್) ಸಹಿತ ಎಲ್ಲ ಸಂಬಂಧಪಟ್ಟ ವ್ಯಕ್ತಿಗಳಿಗೆ ಸುದ್ದಿ ತಿಳಿಸಲಾಯಿತು. ದೆಹಲಿಯಲ್ಲಿ ಸಂಸತ್ತಿನ ಸಭೆ ನಡೆಯುತ್ತಿತ್ತು. ಆ ಸಭೆಯನ್ನು ಸ್ಥಗಿತಗೊಳಿಸಿ ಎಲ್ಲ ವರಿಷ್ಠ ನಾಯಕರು ವಿಶೇಷ ವಿಮಾನದಲ್ಲಿ ವಾರಾಣಸಿಗೆ ಬಂದರು. ಅವರ ಪಾರ್ಥಿವ ಶರೀರವನ್ನು ದೆಹಲಿಗೆ ತರಲಾಯಿತು. ದೀನ್ ದಯಾಳರು ದೆಹಲಿಯಲ್ಲಿ ಸಂಸತ್ತಿನ ವತಿಯಿಂದ ಅಟಲ್ ಬಿಹಾರಿ ವಾಜಪೇಯರಿಗೆ ಹಂಚಿಕೆಮಾಡಲಾಗಿದ್ದ ೩೦, ರಾಜೇಂದ್ರ ಪ್ರಸಾದ ಮಾರ್ಗದ ನಿವಾಸದಲ್ಲಿ ತಂಗುತ್ತಿದ್ದರು. ಇಂದು ಅದೇ ನಿವಾಸದಲ್ಲಿ ಅವರ ಶವವನ್ನು ಇಡಲಾಯಿತು. ದೇಶದ ಮೂಲೆ–ಮೂಲೆಗಳಿಂದ ಜನರು ದೆಹಲಿಗೆ ಬರತೊಡಗಿದರು. ಶ್ರೀಗುರೂಜಿಯವರಾದರೋ ವಾರಾಣಸಿಗೇ ಬಂದು ತಲುಪಿದ್ದರು. ಶ್ರೀ ಗುರೂಜಿ ಹಾಗೂ ದೀನ್ ದಯಾಳರ ನಡುವೆ ಅನಿರ್ವಚನೀಯ ಸಂಬಂಧವೇ ಇತ್ತು. ಶ್ರೀ ಗುರೂಜಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಂಚಾಲಕರಷ್ಟೇ ಅಲ್ಲದೆ, ಓರ್ವ ಮಹಾನ್ ಆಧ್ಯಾತ್ಮಿಕ ಸಾಧಕರೂ ಆಗಿದ್ದರು. ದೀನ್ ದಯಾಳರು ಅವರ ಅನುಯಾಯಿಗಳಾಗಿದ್ದರು. ಆದರೆ ಶ್ರಿ ಗುರೂಜಿಯವರು ದೀನ್ ದಯಾಳರ ಪಾರ್ಥಿವ ಶರೀರದ ಬಳಿ ಬಂದಾಗ, ಅವರ ಕಣ್ಣು ತುಂಬಿ ಬಂತು, ದುಃಖದಿಂದ ಅವರು 'ಅರೆ, ಇವರಿಗೇನಾಗಿ ಹೋಯಿತು', ಎಂದರು.



ದೀನ್ ದಯಾಳರ ಶವವನ್ನು ವಿಮಾನದಲ್ಲಿ ಇರಿಸಲಾಯಿತು. ಶ್ರೀ ಗುರೂಜಿಯವರು ವಿಮಾನದ ಮೆಟ್ಟಿಲುಗಳನ್ನು ಹತ್ತಿ ಮೇಲೆ ಬಂದರು. ಅವರು ತಮ್ಮ ಎರಡೂ ಕೈಗಳಿಂದ ದೀನ್ ದಯಾಳರ ಮುಖವನ್ನು ಸ್ಪರ್ಶಿಸಿ ತಮ್ಮ ಕಣ್ಣುಗಳಿಗೆ ಒತ್ತಿಕೊಂಡರು. ಹೀಗೆ ಅವರು ಮೂರು ಬಾರಿ ಮಾಡಿದರು; ವಿಷಾದದಿಂದ ಹೀಗೆಂದು ಹೇಳಿದರು: "ಬಹಳ ಜನ ತಮ್ಮ ಕುಟುಂಬಗಳನ್ನು ನಡೆಸುತ್ತಾರೆ. ಆದುದರಿಂದ ಅವರು ಈ ಅಗಲಿಕೆ ಏನೆಂಬುದನ್ನು ಕಲ್ಪಿಸಿಕೊಳ್ಳಬಹುದು. ನಾನು ಕುಟುಂಬವನ್ನು ನಡೆಸುತ್ತಿಲ್ಲ. ಆದುದರಿಂದ ನನ್ನ ದುಃಖದ ಭಾವನೆ ನೂರುಪಾಲು ಹೆಚ್ಚಾಗಿದೆ. ಆದುದರಿಂದ ವ್ಯಕ್ತಿಶಃ ಅವರನ್ನು ಕುರಿತು ನಾನು ಏನೂ ಹೇಳುವುದಿಲ್ಲ. ದೀನ್ ದಯಾಳರನ್ನು ಈಶ್ವರನೇ ಕೊಂಡೊಯ್ದಿದ್ದಾನೆ ಎಂದು ಮಾತ್ರ ಹೇಳುತ್ತೇನೆ. ಒಂದು ಹಳೆಯ ಗಾದೆ ಮಾತನ್ನು ಇಂಗ್ಲಿಷ್‌ನಲ್ಲಿ ಓದಿದ್ದೆನು: "ದೇವತೆಗಳು ಯಾರನ್ನು ಪ್ರೀತಿಸುತ್ತಾರೆಯೋ, ಅವರು ಚಿಕ್ಕವಯಸ್ಸಿನಲ್ಲಿಯೇ ಸ್ವರ್ಗ ಸೇರುತ್ತಾರೆ."

ಇತ್ತ ದೆಹಲಿ ಶೋಕಸಾಗರದಲ್ಲಿ ಮುಳುಗಿತ್ತು. ಪೇಟೆ ಬಂದ್ ಆಗಿತ್ತು. ಕಾರ್ಯಾಲಯಗಳು ಬಂದ್ ಆಗಿದ್ದವು. ೩೦, ರಾಜೇಂದ್ರ ಪ್ರಸಾದ್ ರೋಡ್‌ನ ಕಡೆ ಜನ ಹರಿದುಸಾಗುತ್ತಿದ್ದರು. ವ್ಯವಸ್ಥೆ ಮಾಡುವುದು ಪೋಲಿಸರಿಗೆ ಹಾಗೂ ಸ್ವಯಂ ಸೇವಕರಿಗೆ ಕಷ್ಟವಾಯಿತು.. ಜನರು ಗುಂಪು ಗುಂಪಾಗಿ ಬರತೊಡಗಿದ್ದರು. ಪುಷ್ಪಗಳ ಸುರಿಮಳೆ, ಮಾಲಾರ್ಪಣೆ, ಭಾವಪೂರ್ಣ ಶ್ರದ್ಧಾಂಜಲಿ ಹಾಗೂ ಅಳು–ಬಿಕ್ಕಳಿಕೆ ನಿರಂತರವಾಗಿ ನಡೆಯುತ್ತಿತ್ತು. ಈ ವಜ್ರಾಘಾತವು ಎಲ್ಲರನ್ನೂ ಕಿಂಕರ್ತವ್ಯವಿಮೂಢರನ್ನಾಗಿಸಿಬಿಟ್ಟಿತು. ಇಂತಹ ಋಷಿತುಲ್ಯ ಅಜಾತಶತ್ರುವಿನ ಪ್ರಾಣ ತೆಗೆದು, ಅವರ ಪಾವನ ಶರೀರಕ್ಕೆ ಯಾತನೆ ನೀಡಿ ಹೊಸಕಿ ಹಾಕಿದ ಆ ಕೊಲೆಗಾರ ಯಾರು? ಇದಕ್ಕೆ ಜವಾಬು ಕೊಡುವವರಾರು? ಎಲ್ಲರೂ ಮರ್ಮಾಹತರಾಗಿದ್ದರು.

ಫೆಬ್ರವರಿ ೧೨ ರಂದು ಬೆಳಗಿನ ಜಾವ ಭಾರತದ ಘನತೆವೆತ್ತ ರಾಷ್ಟ್ರಪತಿ ಡಾ. ಜಾಕಿರ್ ಹುಸೇನ್ ಅವರು ಶ್ರದ್ಧಾಂಜಲಿ ಅರ್ಪಿಸಲು ಬಂದರು. ಪ್ರಧಾನ ಮಂತ್ರಿ ಇಂದಿರಾಗಾಂಧಿ ಹಾಗೂ ಉಪಪ್ರಧಾನಿ ಮೊರಾರ್ಜಿ ದೇಸಾಯಿ ಅವರು ಸಹ ಪುಷ್ಪ–ಮಾಲೆಯನ್ನು ಅರ್ಪಿಸಿದರು. ಮುಖಂಡರು, ಸಾಮಾಜಿಕ ಕಾರ್ಯಕರ್ತರು, ಸಾಂಸ್ಕೃತಿಕ ಮಹತ್ವದ ವ್ಯಕ್ತಿಗಳು ಸಾಲುಗಟ್ಟಿ ನಿಂತಿದ್ದರು. ದೆಹಲಿಯಲ್ಲಿ ತಮ್ಮ ಶ್ರದ್ಧಾಂಜಲಿ ಅರ್ಪಿಸಲು ಜನಸಮುದ್ರವೇ ಉಕ್ಕಿ ಬಂದಿತು.

ಮಧ್ಯಾಹ್ನ ಒಂದು ಘಂಟೆಗೆ ಮಹಾಮಾನವ ದೀನ್ ದಯಾಳರ ಪಾರ್ಥಿವ ದೇಹವನ್ನು ಶವವಾಹನದಲ್ಲಿ ಇರಿಸಲಾಯಿತು. ಮಹಾಪ್ರಸ್ಥಾನದ ಸಿದ್ಧತೆ ನಡೆಯಿತು. ನಾಲ್ವರು ಅಶ್ವಾರೋಹಿ ಸೈನಿಕರು ಶವ–ಯಾತ್ರೆಯ ಮುಂದೆ ಮುಂದೆ ಚಲಿಸತೊಡಗಿದ್ದರು. ಶವ–ವಾಹನದ ಮುಂದೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ–

ಜನಸಂಘದ ವರಿಷ್ಠ ಅಧಿಕಾರಿಗಳು ಚಲಿಸತೊಡಗಿದ್ದರು. ರಸ್ತೆಯ ಎರಡೂ ಕಡೆ ಶ್ರದ್ಧಾಳುಗಳು ಅಂತಿಮ ದರ್ಶನವನ್ನು ಪಡೆಯಲು, ಪುಷ್ಪಾರ್ಪಣೆ ಮಾಡಲು ಬಂದಿದ್ದರು. ಹಿಂದೆ ಮಹಿಳೆಯರು ಗಾಯಿತ್ರಿ ಮಂತ್ರವನ್ನು ಜಪಿಸುತ್ತಿದ್ದರು. ಶ್ರದ್ಧಾಂಜಲಿಯ ಪುಷ್ಪಗಳ ಸುರಿಮಳೆಯಿಂದಾಗಿ ಶವಯಾತ್ರೆ ನಿಧಾನವಾಗಿ ಚಲಿಸತೊಡಗಿತು. ಈ ಯಾತ್ರೆ ಸಂಜೆ ಆರು ಗಂಟೆಗೆ ನಿಗಮಬೋಧ್ ಘಾಟ್‌ಗೆ ಬಂದಿತು. ಸಂಜೆ ೬.೪೫ ಕ್ಕೆ ಅಂತಿಮ ಶ್ರದ್ಧಾಂಜಲಿಯ ಕಾರ್ಯಕ್ರಮ ಆರಂಭವಾಯಿತು. ೭ ಗಂಟೆ ೬ ನಿಮಿಷಕ್ಕೆ ಮಂತ್ರೋಚ್ಚಾರಣೆಯ ನಡುವೆ ಅವರ ಸೋದರ ಮಾವನ ಮಗ ಶ್ರೀ ಪ್ರಭುದಯಾಳ್ ಶುಕ್ಲರು ಅಗ್ನಿಯನ್ನು ಪ್ರಜ್ವಲಿಸಿದರು. ೭ ಗಂಟೆ ೨೫ ನಿಮಿಷಕ್ಕೆ ಕಪಾಲಕ್ರಿಯೆ ನಡೆಯಿತು. ದೀನ್ ದಯಾಳರ ಪಾರ್ಥಿವ ಶರೀರ ಪಂಚಭೂತಗಳಲ್ಲಿ ವಿಲೀನಗೊಂಡಿತು.

ಅವರ ಹತ್ಯೆ ಹೃದಯವಿದ್ರಾವಕವಾಗಿಯೇ ಇತ್ತು. ಅದು ರಹಸ್ಯಮಯವಾಗಿಯೂ ಇತ್ತು. ಆ ರಹಸ್ಯದ ಪರದೆ ಇನ್ನೂ ಹಾಗೆಯೇ ಉಳಿದಿದೆ. ಎಂದಾದರೂ ಈ ರಹಸ್ಯ ಬಯಲಾದೀತೆ? ಅವರ ಮಹಾಪ್ರಸ್ಥಾನ ಹೃದಯವನ್ನಿರಿಯುವಂಥ ನೋವನ್ನುಂಟುಮಾಡಿತು. ಶಬ್ದಗಳಲ್ಲಿ ಅದನ್ನು ವರ್ಣಿಸುವುದು ಬಹಳ ಕಷ್ಟ ಆದ್ದರಿಂದ ಶ್ರೀ ಗುರೂಜಿ ಅವರ ಮಾರ್ಗದರ್ಶಕರಾಗಿದ್ದ ಹಾಗೂ ಆನಂತರದಲ್ಲಿ ಉಪಾಧ್ಯಾಯರ ಉತ್ತರಾಧಿಕಾರಿಗಳಾಗಿ ಪರಿಣಮಿಸಿದ ಶ್ರೀ ವಾಜಪೇಯಿ ಅವರ ಹೇಳಿಕೆಯನ್ನು ಇಲ್ಲಿ ಯಥಾವತ್ತಾಗಿ ಮುಂದಿರಿಸುವುದು ಉತ್ತಮ.

"ಮನಸ್ಸಿನಲ್ಲಿ ವಿಷಾದ ತುಂಬಿಕೊಂಡಿದೆ. ಏನಾಗಿರಬಹುದು ಹಾಗೂ ಯಾವ ರೀತಿ ಈ ಹೃದಯವಿದ್ರಾವಕ ಘಟನೆ ನಡೆದಿರಬಹುದು ಎಂಬುದನ್ನು ಪತ್ತೆ ಹಚ್ಚುವವರು ಪತ್ತೆ ಮಾಡುತ್ತಾರೆ. ಏನಾದರೂ ಪತ್ತೆ ಹಚ್ಚಲಿ, ನಮ್ಮ ಸಂಘದ ಓರ್ವ ನಿಷ್ಠಾವಂತ ಕಾರ್ಯಕರ್ತ ಇನ್ನಿಲ್ಲ. ಜೀವನದ ಯೌವ್ವನಕಾಲದಲ್ಲಿ, ಮುಂದೆ ಅನೇಕ ಬಗೆಯಲ್ಲಿ ಕಾರ್ಯನಿರ್ವಹಿಸುವ ಅವರ ಸಾಮರ್ಥ್ಯ ಹೆಚ್ಚುತ್ತಲೇ ಇತ್ತು. ಆದರೆ ಈಗ ಆ ಸಮೃದ್ಧ ಸಾಮರ್ಥ್ಯದ ಲಾಭ ಪಡೆಯುವ ಸಾಧ್ಯತೆಯೇ ಇಲ್ಲವಾಗಿದೆ. ಎರಡು-ಮೂರು ದಿನಗಳ ಹಿಂದೆ ನಾನು ಅವರನ್ನು ಭೇಟಿ ಮಾಡಿದ್ದೆ. ಬಹಳ ಸಂತೋಷದಿಂದ ಹಾಗೂ ಪ್ರೀತಿಯಿಂದ ಮಾತುಕತೆ ನಡೆದಿತ್ತು. ಆಗ ನಾನು ಅವರನ್ನು 'ನಿಮ್ಮ ಮುಂದಿನ ಕಾರ್ಯಕ್ರಮವೇನು? ಎಲ್ಲಿ ಸಿಕ್ಕುತ್ತೀರಿ?' ಎಂದು ಕೇಳಿದ್ದೆನು. ಅದಕ್ಕೆ ಅವರು 'ನಾನು ಪಟ್ನಾಕ್ಕೆ ಹೋಗುತ್ತಿದ್ದೇನೆ. ಕೆಲವು ದಿನಗಳ ಬಳಿಕ ಕಾನಪುರದಲ್ಲಿ ಸಿಗುತ್ತೇನೆ' ಎಂದು ಹೇಳಿದ್ದರು. ಪಟ್ನಾಗೆ ಬಂದು ಸೇರುವ ಮುನ್ನ ಈ ಕಾಂಡ ನಡೆದು ಹೋಗಿದೆ."



**ಆದರ್ಶ ಸ್ವಯಂ ಸೇವಕ**

ಬಾಲ್ಯ ಕಾಲದಿಂದಲೇ- ಅಂದರೆ ವಿದ್ಯಾರ್ಥಿಜೀವನದಿಂದಲೇ- ಸ್ವಯಂಸೇವಕನಾಗಿ ತಮ್ಮ ಕರ್ತವ್ಯಗಳನ್ನು ಅರಿತುಕೊಂಡುಬಿಡುವಂಥ ಹಾಗೂ ಸಮಗ್ರ ಜೀವನದ ಶಕ್ತಿಯನ್ನು ಸಂಘ ಕಾರ್ಯಾರ್ಥವಾಗಿ ಸಮರ್ಪಿಸುವಂಥ ಕೆಲವೇ ಕೆಲವು ಜನರಲ್ಲಿ ಅವರ ಸ್ಥಾನ ಮಹತ್ತರವಾದುದಾಗಿದೆ. ಸಂಘದ ಸ್ವಯಂ ಸೇವಕನಿಂದ ಅಪೇಕ್ಷಿಸುವುದು ಏನೆಂದರೆ ಅವನು ತನ್ನೊಳಗೆ ಸ್ವಯಂಸೇವಕನ ಎಲ್ಲ ಗುಣಗಳನ್ನು ಉಳಿಸಿಕೊಂಡು ಬರಬೇಕು. ತನ್ನ ಸಂಘಟನೆಯನ್ನು ಗಮನದಲ್ಲಿರಿಸಿಕೊಳ್ಳಬೇಕು ಹಾಗೂ ಅದರ ವಿಭಿನ್ನ ಕಾರ್ಯಕ್ರಮಗಳ ಮಹತ್ವವನ್ನು ತನ್ನ ಹೃದಯದಲ್ಲಿ ಜಾಗೃತವಾಗಿರಿಸಿಕೊಂಡು ಅವುಗಳಲ್ಲಿ ಭಾಗವಹಿಸುತ್ತಿರಬೇಕು. ಹಾಗೂ ಅವನಿಗೆ ಬೇರೆ ಯಾವುದೇ ಅನ್ಯ ಕಾರ್ಯವನ್ನು ವಹಿಸಿದಲ್ಲಿ ಅದನ್ನು ಪರಿಶ್ರಮಪೂರ್ವಕವಾಗಿ ನಿಭಾಯಿಸಬೇಕು- ಆ ಕೆಲಸ ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿದಾಗಿರಲ್ಲಿ ರಾಜಕೀಯ ಕ್ಷೇತ್ರದಲ್ಲಿ ಕಾರ್ಯವನ್ನು ಕೈಗೊಳ್ಳಲು ದೀನ್ ದಯಾಳ ಅವರಿಗೆ ಹೇಳಲಾಯಿತು. ಹಾಗೂ ಅವರು ಹಾಗೆಯೇ ಮಾಡಿದರು. ಎಷ್ಟು ಸಮರ್ಥರೀತಿಯಲ್ಲಿ ಆ ಕಾರ್ಯವನ್ನು ನಿರ್ವಹಿಸಿದರೆಂಬುದನ್ನು ಕೆಲವರು ಮಾತ್ರವೇ ಕಲ್ಪಿಸಿಕೊಳ್ಳಬಲ್ಲರು. ಕೆಲವರಿಗೆ ಅದರ ಕಲ್ಪನೆಯೂ ಇರುವುದಿಲ್ಲ; ಆದರೆ ಭಾರತೀಯ ಜನಸಂಘದ ಹೆಸರಿನಲ್ಲಿ ಇಂದು ದೇಶದಲ್ಲಿ ಯಾವ ರೀತಿಯ ರಾಜಕೀಯ ಸಂಘಟನೆ ಮೂಡಿ ನಿಂತಿದೆಯೋ ಅದು ಅವರ ಯೋಜನಾಬದ್ಧ ಪರಿಶ್ರಮದ ಪರಿಣಾಮವೇ ಎಂದು ಹೇಳಿದರೆ, ಅದೇನೂ ಅತಿಶಯೋಕ್ತಿಯಾಗಲಾರದು. ಜನಸಂಘದಲ್ಲಿ ಬಹಳ ಮಂದಿ ಮಾತನಾಡುವವರಿದ್ದರು. ಬಹಳಷ್ಟು ಮಂದಿ ಸಡಗರಿಸುವವರು ಇದ್ದರು. ಬಹಳಷ್ಟು ಮಂದಿ ಕೇವಲ ಅಲಂಕಾರಕ್ಕೆ ಮಾತ್ರವಿದ್ದರು. ಆದರೆ ತಳಹದಿಯೂ ಮೊದಲ ಕಲ್ಲನ್ನು ಹಾಕುವುದರಿಂದ ಹಿಡಿದು ಅದನ್ನು ಇಷ್ಟು ಒಳ್ಳೆಯ ನೆಲೆಗೆ ತಲುಪಿಸುವ ಹೆಗ್ಗಳಿಕೆ ವಿಶೇಷವಾಗಿ ಯಾವುದಾದರೂ ವ್ಯಕ್ತಿಗೆ ಸಲ್ಲುವುದಿದ್ದರೆ, ಅದು ದೀನ್ ದಯಾಳ್ ಅವರಿಗೇ ಸಲ್ಲಬೇಕು.

ಅವರು ಅದರ ಸರ್ವೋಚ್ಚ ಸ್ಥಾನಕ್ಕೂ ಏರಿದರು. ಅವರು ಅಧ್ಯಕ್ಷರಾಗುವುದು ನನಗೆ ಇಷ್ಟವಿರಲಿಲ್ಲ ಹಾಗೂ ಅವರಿಗೂ ಅದು ಇಷ್ಟವಿರಲಿಲ್ಲ. ಸ್ವಲ್ಪ ಸಮಯದವರೆಗೂ, ಒಂದು ವರ್ಷ ಆಪದ್‌ಧರ್ಮಕ್ಕಾಗಿ, ಅಧ್ಯಕ್ಷ ಪದವಿಯನ್ನು ಸ್ವೀಕರಿಸು ಎಂದು ನಾನು ಕೇಳಿಕೊಂಡ ಕಾರಣದಿಂದಲೇ ಅವರು ಆ ಪದವಿಯನ್ನು ಸ್ವೀಕರಿಸಿದರೇ ಹೊರತು, ತಾವಾಗಿಯೇ ಅದನ್ನು ಸ್ವೀಕರಿಸುತ್ತಿರಲಿಲ್ಲ. ಅವರಿಗೆ ಮಾನ-ಸಮ್ಮಾನ ಅಥವಾ ಪದವಿಯ ಆಸೆಯಿರಲಿಲ್ಲ ಹಾಗೂ ಇದರಿಂದಾಗಿಯೇ ಅವರ ಮನಸ್ಸಿನಲ್ಲಿ ಈ ಅಧ್ಯಕ್ಷ ಪದವಿಯನ್ನು ಅಲಂಕರಿಸುವ ಬಗ್ಗೆ ಯಾವುದೇ

ಆಸೆಯೂ ಇರಲಿಲ್ಲ. ನನಗೂ ಅದು ಇಷ್ಟವಿರಲಿಲ್ಲ. ಆದರೆ ಯಾವುದೋ ಪರಿಸ್ಥಿತಿಗಳಿಂದಾಗಿ ನಾನು ಸಹ ಒತ್ತಾಯಕ್ಕೊಳಗಾಗಿ ಆ ಹುದ್ದೆಯನ್ನು ಸ್ವೀಕರಿಸುವಂತೆ ಅವರಿಗೆ ಹೇಳಬೇಕಾಯಿತು ಹಾಗೂ ನಾನು ಹೇಳಿದುದರಿಂದಾಗಿಯೇ, ಸ್ವಯಂಸೇವಕನು ಹೇಗೆ ನಿರ್ದೇಶನ–ಆದರ್ಶಗಳನ್ನು ಪರಿಪಾಲಿಸುತ್ತಾನೆಯೋ ಹಾಗೆಯೇ, ಆ ನಿಯಮಕ್ಕನುಗುಣವಾಗಿ ಅವರು ಅದನ್ನು ಪಾಲಿಸಿದ್ದರು.

ಅವರ ಅಧ್ಯಕ್ಷತೆಯ ಅವಧಿಯಲ್ಲಿ ಕೆಲವೇ ದಿನಗಳಲ್ಲಿ ಜನಮಾನಸದ ಮೇಲೆ ಅವರು ಒಳ್ಳೆಯ ಪ್ರಭಾವ ಬೀರತೊಡಗಿದ್ದರು. ಕೊನೆಗೆ ದೊಡ್ಡ ದೊಡ್ಡ ವಿರೋಧಿಗಳು ಸಹ ದೇಶದ ಲಗಾಮನ್ನು ನಿಭಾಯಿಸುವಂಥ ಪಕ್ಷ (ಜನಸಂಘ) ಇದೇ ಆಗಿರುತ್ತದೆ ಎಂದು ಯೋಚಿಸತೊಡಗಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಕ್ತಿ ಈ ವ್ಯಕ್ತಿಯ ರೂಪದಲ್ಲಿ ಮೂರ್ತಿವತ್ತಾಗಿ ನಿಂತಿದೆ ಎಂದೂ ಹಲವರು ಹೇಳತೊಡಗಿದ್ದರು.

## ಮೂರು ಬಲಿದಾನ

ಸ್ವಲ್ಪ ಕಠಿಣ ಪರಿಸ್ಥಿಯಲ್ಲಿ ಜನಸಂಘ ಮೂಡಿಬಂದಿರುವಂತೆ ಕಂಡುಬರುತ್ತದೆ. ಅದರ ಭಾಗ್ಯ ಕೆಟ್ಟದಾಗಿತ್ತು. ಮೊದಲು ಅದರ ಅಧ್ಯಕ್ಷರಾಗಿ ಡಾ. ಶ್ಯಾಮಾಪ್ರಸಾದ್ ಮುಖರ್ಜಿರವರಿದ್ದರು; ಒಂದು ರೀತಿಯಲ್ಲಿ ಅವರ ರಾಜನೈತಿಕ ಹತ್ಯೆಯೇ ನಡೆಯಿತು. ಆನಂತರ ಅದೃಷ್ಟವಶಾತ್ ಡಾ. ರಘುವೀರ್ ಅವರು ದೊರೆತರು. ಅವರು ಸಹ ತುಂಬ ಸಮರ್ಥರಾಗಿದ್ದರು. ಅವರಿಂದಾಗಿಯೇ ವಿದೇಶಗಳಲ್ಲಿಯೂ ಈ ರಾಜಕೀಯ ಪಕ್ಷ ವರ್ಚಸ್ವಿಯಾಗಬಹುದಾಗಿತ್ತು ಹಾಗೂ ಅದು ಪ್ರಭಾವ ಬೀರಬಹುದಾಗಿತ್ತು. ಆದರೆ ಕೆಲವೇ ದಿನಗಳಲ್ಲಿ ಅವರು ಅಪಘಾತಕ್ಕೊಳಗಾದರು. ಇದಾದ ಬಳಿಕ ಸರ್ವಾಂಗ ಪರಿಪೂರ್ಣ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸಬಲ್ಲಂತಹ ಅಧ್ಯಕ್ಷರು (ದೀನ್ ದಯಾಳರು) ದೊರೆತರು. ಅವರು ಈ ರೀತಿಯಲ್ಲಿ ವಿಧಿವಶರಾದರು.

ಅವರ ಪಾರ್ಥಿವ ಶರೀರವನ್ನು ನೋಡುವ ಸಲುವಾಗಿ ನಾನು ಕಾಶಿಗೆ ಹೋಗಿದ್ದೆನು. ವಿಮಾನದಲ್ಲಿ ಶರೀರವನ್ನು ಬೀಳ್ಕೊಟ್ಟ ಬಳಿಕ ನಾನು ಇಲ್ಲಿಗೆ ಬಂದೆ. ಆದರೆ ನಾನು ಕಣ್ಣೀರಿಡಲಿಲ್ಲ. ಜನ ನನ್ನ ಬಗ್ಗೆ ಏನೆಂದು ಭಾವಿಸಿದರೋ ನನಗೆ ತಿಳಿಯದು. ನಮ್ಮ ಹಳೆಯ ಸುಭಾಷಿತಗಳಲ್ಲಿ ಒಂದು ಮಾತು ಬರುತ್ತದೆ: ಕಾರ್ಯಾರ್ಥಿಯಾಗಿರುವಂಥ ವ್ಯಕ್ತಿ ದುಃಖ ಹಾಗೂ ಸುಖ ಇವರೆಡನ್ನೂ ಲೆಕ್ಕಿಸದೆ ಕೆಲಸ ಮಾಡುತ್ತಾನೆ. ("ಮನಸ್ವೀ ಕಾರ್ಯಾರ್ಥೀ ಗಣಯತಿ ನ ದುಃಖಮ್ ನ ಚ ಸುಖಂ") ಭಗವಂತನ ಕೃಪೆಯಿಂದ ನನ್ನ ಮನಸ್ಸಿನ ಸ್ಥಿತಿಯೂ ಬಹುಮಟ್ಟಿಗೆ ಹೀಗಾಗಿ ಹೋಗಿದೆ ಹಾಗೂ ನಾನು ಅದನ್ನು ಅರಗಿಸಿಕೊಂಡು ಮುಂದೆ ಸಾಗಲು



ಯತ್ನಿಸುತ್ತಿದ್ದೇನೆ. ಈಗ ಅಷ್ಟೇ ಸಮರ್ಥವಾಗಿ ಕಾರ್ಯನಿರ್ವಹಿಸಿಕೊಳ್ಳಬಲ್ಲಂಥ ಮತ್ತೊಬ್ಬ ವ್ಯಕ್ತಿ ಬರುವುದಿಲ್ಲ ಎಂದೇನೂ ಅಲ್ಲ. ಕಾರ್ಯ ದೊಡ್ಡದಾಗಿದೆ. ಅದು ಸಂಘಟನೆಯ ಕಾರ್ಯವಾಗಿದೆ. ಅನೇಕ ಕಾರ್ಯಕರ್ತರ ಪರಂಪರೆಯೇ ಇದೆ. ಒಬ್ಬರಾದ ಅನಂತರ ಮತ್ತೊಬ್ಬರು ಮುಂದೆಬರುತ್ತಲೇ ಇರುತ್ತಾರೆ.

ಯಾವುದೇ ಸ್ಥಾನ ಖಾಲಿಯಾಗಿ ಉಳಿದಿರುವುದಿಲ್ಲ; ಹಾಗೆ ಆಗುತ್ತದೆಂಬ ಸಂಪೂರ್ಣ ಭರವಸೆಯೂ ನನಗಿದೆ. ಈ ಕುರಿತು ಹೆಚ್ಚಾಗಿ ಮಾತನಾಡುವುದಿಲ್ಲ. ಎಷ್ಟು ಹೇಳಿದರೂ, ಅದು ಕಡಿಮೆಯೇ ಆಗುತ್ತದೆ; ಸಹಿಸಿಕೊಳ್ಳಲೇಬೇಕಾಗುತ್ತದೆ.

ಇಷ್ಟು ಹೇಳುವ ಸಲುವಾಗಿ ಮನಸ್ಸನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ತುಂಬ ಕಷ್ಟಪಡಬೇಕಾಯಿತು. ಭಗವಂತನ ಕೃಪೆಯಿಂದಾಗಿ ನಿಯಂತ್ರಿಸಿಕೊಳ್ಳಲು ಸಾಧ್ಯವಾಯಿತು. ಇದರಿಂದಾಗಿ ಶರೀರ ಬಹಳ ಬಳಲಿದಂತಾಯಿತು. ನಾನು ಪ್ರತ್ಯಕ್ಷವಾಗಿ ಈ ಕರುಣಾಪೂರ್ಣ ದೃಶ್ಯವನ್ನು ನೋಡಿ ಬಂದಿದ್ದೇನೆ. ಆದ್ದರಿಂದ ಅದನ್ನು ಎಲ್ಲರ ಮುಂದೆ ಉಲ್ಲೇಖಿಸುತ್ತೇನೆ:

## ಸರ್ವಾಂಗ ಪರಿಪೂರ್ಣ ಯೋಗ್ಯತೆ

ನಮ್ಮಲ್ಲಿರುವ ಪ್ರತಿಯೊಬ್ಬರೂ ತಿಳಿಯಬೇಕಾದುದೇನೆಂದರೆ ಅವರ ಇಂತಹ ಒಂದು ಸರ್ವಾಂಗ ಪರಿಪೂರ್ಣ ಸಾಮರ್ಥ್ಯವನ್ನು ಪ್ರತಿಯೊಬ್ಬರೂ ತಮ್ಮಲ್ಲಿ ಬೆಳೆಸಿಕೊಳ್ಳಬೇಕು. ಎಲ್ಲರನ್ನೂ ರಾಜಕೀಯದೆಡೆಗೆ ಸೆಳೆಯುವ ಸಲುವಾಗಿ ಹೀಗೆ ಹೇಳುತ್ತಿದ್ದೇನೆ ಎಂದು ನನ್ನ ಹೇಳಿಕೆಯನ್ನು ಅರ್ಥೈಸಬಾರದು, ನಿಜಕ್ಕೂ ಇತ್ತ ಒಲವು ಎಳ್ಳಷ್ಟೂ ಇರಬಾರದು. ಯಾವ ವ್ಯಕ್ತಿಯನ್ನು ಕುರಿತು ಇಲ್ಲಿ ಹೇಳುತ್ತಿರುವೆನೋ ಅವರಿಗೆ ರಾಜಕೀಯ ಕ್ಷೇತ್ರದ ಕಡೆ ಎಳ್ಳಷ್ಟೂ ಒಲವಿರಲಿಲ್ಲ. ಕಳೆದ ವರ್ಷಗಳಲ್ಲಿ ಎಷ್ಟೋ ಬಾರಿ ನನ್ನೊಂದಿಗೆ ಅವರು ಹೀಗೆಂದು ಹೇಳಿದ್ದರು: "ಯಾವ ಸುಳಿಗೆ ನನ್ನನ್ನು ಸಿಲುಕಿಸುತ್ತಿದ್ದೀರಿ? ಪುನಃ ನನ್ನ ಪ್ರಚಾರಕ ಕೆಲಸ ಮಾಡಲು ನನ್ನನ್ನು ಬಿಡಿ", ಅದಕ್ಕೆ ನಾನು ಹೇಳಿದೆ: "ನಿಮ್ಮನ್ನು ಬಿಟ್ಟರೆ ಈ ಸುಳಿಗೆ ಮತ್ತಾರನ್ನು ಸಿಲುಕಿಸಬಹುದು?" ಸಂಘಟನೆಯ ಕಾರ್ಯದ ಬಗ್ಗೆ ಯಾರ ಮನಸ್ಸಿನಲ್ಲಿ ಇಷ್ಟು ಅವಿಚಲ ಶ್ರದ್ಧೆ ಹಾಗು ದೃಢನಿಷ್ಠೆಯಿರುತ್ತದೆಯೋ ಅವರೇ ಈ ಸುಳಿಯಲ್ಲಿ ಸಿಲುಕಿದ್ದು, ಕೊಳಚೆಯಲ್ಲಿದ್ದು ಸಹ ಅಂಟಿಕೊಳ್ಳದಂತೆ ಇದ್ದುಕೊಂಡು, ಅದನ್ನು ಚೆನ್ನಾಗಿ ಸ್ವಚ್ಛ ಮಾಡಬಲ್ಲಂಥ ಕೆಲಸವನ್ನೂ ಮತ್ತಾರೂ ಮಾಡಲಾರರು. ಆದ್ದರಿಂದಲೇ ಅತ್ತ (ರಾಜಕೀಯ ಕ್ಷೇತ್ರದತ್ತ) ಗಮನ ಹರಿಸುವಂತೆ ನಾನು ಯಾರಿಗೂ ಹೇಳುತ್ತಿಲ್ಲ. ಎಂದು ಹೇಳಿದ್ದೇನೆ.

'ನಾವು ಈ ಸವಾಲನ್ನು ಸ್ವೀಕರಿಸುತ್ತೇವೆ' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಲಾದ ಶ್ರೀ ಅಟಲ್‌ಬಿಹಾರೀ ವಾಜಪೇಯಿ ಅವರ ಹೇಳಿಕೆ ಹೀಗಿದೆ:

"ಬನ್ನಿ, ಪಂಡಿತ್‌ಜೀ ಅವರ ರಕ್ತದ ಒಂದೊಂದು ಹನಿಯನ್ನು ಹಣೆಯ ಗಂಧವನ್ನಾಗಿಸಿಕೊಂಡು ನಮ್ಮ ಗುರಿಯತ್ತ ಸಾಗೋಣ. ಅವರ ಚಿತೆಯಿಂದ ಹೊರಬರುತ್ತಿರುವ ಒಂದೊಂದು ಕಿಡಿಯನ್ನು ಹೃದಯದಲ್ಲಿರಿಸಿಕೊಂಡು ಪರಿಶ್ರಮದ ಪರಾಕಾಷ್ಠೆಯನ್ನು ಹಾಗೂ ಪ್ರಯತ್ನಗಳ ಎಲ್ಲೆಯನ್ನು ತಲುಪೋಣ. ಈ ದಧೀಚಿಯ ಅಸ್ತಿಗಳ ವಜ್ರಾಯುಧವನ್ನು ತಯಾರಿಸಿಕೊಂಡು ವೃತ್ರಾಸುರರ ಮೇಲೆ ಆಕ್ರಮಣ ಮಾಡೋಣ ಹಾಗೂ ಪವಿತ್ರ ಭೂಮಿಯನ್ನು ನಿಷ್ಕಂಟಕವನ್ನಾಗಿಸೋಣ".

ಚಿಕ್ಕ ದೀಪ ಆರಿ ಹೋಗಿದೆ, ನಾವು ನಮ್ಮ ಜೀವನ ದೀಪವನ್ನು ಬೆಳಗಿಸಿಕೊಂಡು ಅಂಧಕಾರದೊಂದಿಗೆ ಹೋರಾಡಬೇಕಾಗಿದೆ. ಸೂರ್ಯ ಮರೆಯಾಗಿದ್ದಾನೆ. ನಾವು ನಕ್ಷತ್ರಗಳ ಬೆಳಕಿನಲ್ಲಿಯೇ ನಮ್ಮ ದಾರಿಯನ್ನು ಹುಡುಕಿಕೊಳ್ಳಬೇಕಾಗಿದೆ.

ನಮ್ಮ ಮಿತ್ರ, ಸಖ, ಮುಖಂಡ ಹಾಗೂ ಮಾರ್ಗದರ್ಶಕ ನಮ್ಮಿಂದ ದೂರವಾಗಿದ್ದಾರೆ. ನಾವು ಅವರ ಪವಿತ್ರ ಸ್ಮೃತಿಯನ್ನು ಹೃದಯದಲ್ಲಿ ಜೋಪಾನವಾಗಿರಿಸಿಕೊಂಡು ನಮ್ಮ ಗುರಿಯ ಹಾದಿಯಲ್ಲಿ ಮುಂದೆ ನಡೆಯಬೇಕಾಗಿದೆ.

**ಸಮರ್ಪಿತ ಜೀವನ**

ಪಂಡಿತ್‌ಜೀ ಅವರ ಜೀವನ ನಾಡಿಗಾಗಿ ಸಮರ್ಪಿತವಾದ ಜೀವನವಾಗಿತ್ತು. ಶರೀರದ ಕಣ-ಕಣವನ್ನು ಹಾಗೂ ಜೀವನದ ಪ್ರತಿ ಕ್ಷಣವನ್ನು ಅವರು ರಾಷ್ಟ್ರದೇವನ ಚರಣಗಳಿಗೆ ಅರ್ಪಿಸಿದ್ದರು. ಇಡೀ ದೇಶವೇ ಅವರ ಮನೆಯಾಗಿದ್ದಿತು. ಇಡೀ ಸಮಾಜವೇ ಅವರ ಕುಟುಂಬವಾಗಿದ್ದಿತು. ಅವರ ಕಣ್ಣುಗಳಲ್ಲಿ ಒಂದೇ ಒಂದು ಕನಸಿದ್ದಿತು. ಅವರ ಜೀವನದಲ್ಲಿ ಒಂದೇ ಒಂದು ವ್ರತ ಇತ್ತು.

**ಅವರ ಕನಸು**

ರಾಜಕೀಯ ಅವರಿಗೆ ಸಾಧನವಾಗಿದ್ದಿತು, ಸಾಧ್ಯವಲ್ಲ. ಇದು ಮಾರ್ಗವಾಗಿತ್ತೇ ಹೊರತು ಗುರಿಯಾಗಿರಲಿಲ್ಲ. ಅವರು ರಾಜಕೀಯವನ್ನು ಆಧ್ಯಾತ್ಮೀಕರಿಸ ಬಯಸುತ್ತಿದ್ದರು. ಅವರು ಭಾರತದ ಉಜ್ವಲ ಅತೀತದಿಂದ ಪ್ರೇರಣೆಯನ್ನು ಪಡೆದುಕೊಳ್ಳುತ್ತಿದ್ದರು. ಹಾಗು ಅತ್ಯುಜ್ವಲವಾದ ಭವಿಷ್ಯವನ್ನು ರೂಪಿಸಬಯಸುತ್ತಿದ್ದರು. ಅವರ ಆಸ್ಥೆಗಳು ಶತಮಾನಗಳಷ್ಟು ಹಳೆಯದಾದ ಅಕ್ಷಯ-ರಾಷ್ಟ್ರಜೀವನದ ಬೇರುಗಳಿಂದ ಪುಷ್ಟಿಯನ್ನು ಪಡೆದುಕೊಳ್ಳುತ್ತಿದ್ದವು. ಆದರೆ ಅವರು ಸಂಪ್ರದಾಯವಾದಿಗಳಾಗಿರಲಿಲ್ಲ. ಭವಿಷ್ಯವನ್ನು ರೂಪಿಸುವ ಸಲುವಾಗಿ ಭಾರತವನ್ನು ಸಮೃದ್ಧಿಶೀಲ ಆಧುನಿಕ ರಾಷ್ಟ್ರವನ್ನಾಗಿಸುವ ಕಲ್ಪನೆಯನ್ನು ಹೊತ್ತು ಅವರು



ಮುನ್ನೆಡೆದಿದ್ದರು.

ಅವರು ಮಹಾನ್ ಚಿಂತಕರಾಗಿದ್ದರು. ಚಿಂತನೆಯ ಕ್ಷೇತ್ರದಲ್ಲಿ ಅವರು ಕಟ್ಟುಪಾಡುಗಳ ಹಾದಿಯಲ್ಲಿ ಸಾಗಬಯಸುತ್ತಿರಲಿಲ್ಲ. ಆದುದರಿಂದಲೇ ಅವರು ಭಾರತೀಯ ಜನಸಂಘವನ್ನು ಅತೀತದ ಗೌರವ-ಗರಿಮೆಗಳನ್ನು ಧರಿಸಿಕೊಂಡು ಮುಂದೆ ಸಾಗುವ ಹಾಗೂ ಮುಂದಿನ ದಿನಗಳಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸುವ ಪಕ್ಷವನ್ನಾಗಿ ಬೆಳೆಸಿದರು. ಇಂದು ಜನಸಂಘ ಯಾವ ಮಟ್ಟಕ್ಕೇರಿದೆಯೋ ಅದು ಅವರ ಕೊಡುಗೆಯೇ ಆಗಿದೆ.

**ಈ ಗಾಯ ಎಂದಿಗೂ ಹಸುರಾಗಿರುತ್ತದೆ**

ಅವರನ್ನು ಎಂದೂ ಯಾವ ಅಧಿಕಾರವೂ ಆಕರ್ಷಿಸಲಿಲ್ಲ. ಅವರು ಸಂಸತ್ತಿನ ಸದಸ್ಯರಾಗಿರಲಿಲ್ಲ. ಆದರೆ ಸಂಸತ್ ಸದಸ್ಯರುಗಳ ನಿರ್ಮಾಪಕರಾಗಿದ್ದರು. ಅವರು ಎಂದೂ ಅಧಿಕಾರ ಸ್ಥಾನವನ್ನು ಬಯಸಲಿಲ್ಲ. ಅಧ್ಯಕ್ಷ ಪದವಿಯ ಹೊಣೆಯನ್ನು ಹೊರುವುದಕ್ಕಾಗಿ ತುಂಬ ಕಷ್ಟದಿಂದ ಅವರನ್ನು ಒಪ್ಪಿಸಬೇಕಾಯಿತು. ವಿಂಧ್ಯಾಚಲವನ್ನು ಧಾಟಿ, ಭಾರತಮಾತೆಯ ಚರಣಕಮಲಗಳನ್ನು ಸಾಗರವು ತೊಳೆಯುತ್ತಿರುವ ಕನ್ಯಾಕುಮಾರಿಯಲ್ಲಿಗೆ ಹೋಗಿ, ಭಾರತದ ಐಕ್ಯದ ಜಾಗರಣೆ ಮಂತ್ರವನ್ನು ಉಸಿರಬೇಕೆಂದು ಅವರು ಪ್ರೇರಣೆ ನೀಡಿದರು. ಅವರ ನೇತೃತ್ವದಲ್ಲಿ ನಾವು ಆಸೇತುಹಿಮಾಚಲಪರ್ಯಂತ ಭಾರತದ ಏಕಾತ್ಮಕತೆಯನ್ನು ಪ್ರತಿಧ್ವನಿಸುವ ಸಂಕಲ್ಪವನ್ನು ಕೈಗೊಂಡೆವು. ಕಲ್ಲಿಕೋಟೆಯಲ್ಲಿ ಅಧಿವೇಶನ ನಡೆದಿತ್ತು. ನಾವು ಅಲ್ಲಿಗೆ ಹೋದೆವು. ಅವರ ಅಧ್ಯಕ್ಷತೆಯಲ್ಲಿ ಅಧಿವೇಶನ ಸಫಲಗೊಂಡಿತ್ತು. ಜನಸಂಘವು ಕಾರ್ಯಸಿದ್ಧಿಯ ಒಂದು ಐತಿಹಾಸಿಕ ದೃಶ್ಯವನ್ನು ಮುಂದಿರಿಸಿತು ಎಂದು ಜನರೆಲ್ಲಾ ಹೇಳಿದರು. ಜನತೆಯ ಕಣ್ಣುಗಳು ಆಸೆ ಮತ್ತು ವಿಶ್ವಾಸದ ಜೊತೆಗೆ ಅವರಲ್ಲಿಯೇ ನೆಟ್ಟಿದ್ದವು. ಕಲ್ಲಿಕೋಟೆಯಲ್ಲಿ ಜನಸಂಘವು ಹೊಸರೂಪವನ್ನು ಪಡೆದುಕೊಂಡಿತು ಎಂದು ದೇಶ-ವಿದೇಶಗಳ ಜನರೆಲ್ಲ ಹೇಳಿದರು. ಆದರೆ ಜನಸಂಘವು ಹೊಸರೂಪವನ್ನು ಪಡೆದುಕೊಂಡಿರಲಿಲ್ಲ. ನೋಡುವವರ ಕಣ್ಣುಗಳಲ್ಲಿ ಬದಲಾವಣೆ ಬಂದಿತ್ತು. ಆ ಕಣ್ಣುಗಳಲ್ಲಿ ಕೆಲವು ಕಣ್ಣುಗಳಲ್ಲಿ ಪಾಪ ತುಂಬಿತ್ತು, ಅಸೂಯೆ ಇತ್ತು; ಅವುಗಳಲ್ಲಿ ಹಿಂಸೆಯ ಕಿಡಿ ಹೊತ್ತಿ ಉರಿಯುತ್ತಿತ್ತು; ಆ ಕಣ್ಣುಗಳನ್ನು ಈ ದೃಶ್ಯ ಕುಕ್ಕಿತ್ತು ಮತ್ತು ಇಂದು ಅದು ಪಂಡಿತ್ ದೀನ್ ದಯಾಳ್‌ಜೀಯವರನ್ನು ನಮ್ಮಿಂದ ಅಗಲಿಸಿಬಿಟ್ಟಿತು. ಯಾವ ಪರಿಸ್ಥಿತಿಯಲ್ಲಿ ಅವರು ಮೃತರಾದರೆಂದು ಯಾರೂ ವಿಶ್ವಾಸಪೂರ್ವಕವಾಗಿ ಹೇಳಲಾರರು. ಯಾರ ಸಂಕೇತ ಮಾತ್ರದಿಂದ ಲಕ್ಷ ಲಕ್ಷ ಜನರು ತಮ್ಮ ಪ್ರಾಣವನ್ನು ಬಲಿಕೊಡಲಿಕ್ಕೆ ತಯಾರಿದ್ದರೋ, ಕಟಿಬದ್ಧರಾಗಿದ್ದರೋ ಅಂತಹವರನ್ನು ರಾತ್ರಿಯ ಅಂಧಕಾರದಲ್ಲಿ ತಮ್ಮ ಅನುಯಾಯಿಗಳಿಂದ ದೂರವಾಗಿಸಿ,

ದೇಶವಾಸಿಗಳಿಂದ ಬೇರೆಯಾಗಿಸಿ, ಮೃತ್ಯುವಿನ ಬಾಯಿಗೆ ನೂಕಿಬಿಟ್ಟಿತು. ಈ ಗಾಯ ಸದಾ ಹಸಿರಾಗಿ ಉಳಿದಿರುತ್ತದೆ. ಈ ಮುಳ್ಳು ಎಂದೆಂದಿಗೂ ನಮ್ಮ ಹೃದಯವನ್ನು ಚುಚ್ಚುತ್ತಲೇ ಇರುತ್ತದೆ.

**ಅಪೂರ್ಣ ಕನಸು**

ಪಂಡಿತ್‌ಜೀಯವರು ಯಾವ ಕಾರ್ಯಕ್ಕಾಗಿ ಜನ್ಮವೆತ್ತಿದರೋ, ಬಾಳಿದರೋ ಮತ್ತು ಹೆಣಗಿದರೋ ಅದೇ ಕಾರ್ಯಕ್ಕೆ ಹುತಾತ್ಮರಾಗಿ ತಮ್ಮ ಜೀವನವ್ರತವನ್ನು ಪೂರ್ಣಗೊಳಿಸಿದರು. ಆದರೆ ಅವರ ಕನಸು ಇಂದಿಗೂ ಅಪೂರ್ಣವಾಗಿಯೇ ಉಳಿದಿದೆ. ಅವರ ಕಾರ್ಯ ಇಂದಿಗೂ ಅಪೂರ್ಣವಾಗಿಯೇ ಇದೆ.

**ಸವಾಲು ಸ್ವೀಕಾರ**

ಅವರ ಬಾಳಿನ ಮೇಲೆ ನಡೆದ ಹಲ್ಲೆ, ರಾಷ್ಟ್ರೀಯತೆಯ ಮೇಲೆ ನಡೆದ ಹಲ್ಲೆಯೇ ಆಗಿದೆ. ಅವರ ಶರೀರದ ಮೇಲೆ ಆಗಿರುವ ಪೆಟ್ಟುಗಳು ಪ್ರಜಾತಂತ್ರದ ಮೇಲೆ ಆಗಿರುವ ಪೆಟ್ಟುಗಳೇ ಆಗಿವೆ. "ರಾಷ್ಟ್ರವಿರೋಧಿಗಳ ಮತ್ತು ಪ್ರಜಾತಂತ್ರದ ಶತ್ರುಗಳ ಈ ಸವಾಲನ್ನು ನಾವು ಸ್ವೀಕರಿಸುತ್ತೇವೆ".

* * * *

# ಅನುಬಂಧಗಳು

BLANK PAGE



# ಅನುಬಂಧ – ೧

## ಪ್ರಮುಖ ವರ್ಷಗಳು

೧೯೧೬ : ಸೋಮವಾರ ಸೆಪ್ಟೆಂಬರ್ ೨೫ರಂದು (ಭಾದ್ರಪದ ಬಹುಳ ತ್ರಯೋದಶಿ) ಮಥುರಾದಲ್ಲಿ ಜನನ. (ತಾಯಿ: ರಾಮ್‌ಪ್ಯಾರೀ; ತಂದೆ: ಭಗವತೀ ಪ್ರಸಾದ್)

೧೯೧೯ : ತಂದೆಯ ಮರಣ

೧೯೨೩ : ತಾಯಿಯ ಮರಣ

೧೯೨೫ : ಚಿಕ್ಕಪ್ಪನವರಾದ ರಾಧಾರಮಣರವರ ಮನೆಗೆ ಆಗಮನ

೧೯೩೨ : ಮುಲ್ಕಿ ಪರೀಕ್ಷೆ (ಪ್ರಥಮ ದರ್ಜೆ)

೧೯೩೪ : ಒಬ್ಬನೇ ಅಣ್ಣ ಶಿಬು ದಯಾಳ್ ಮರಣ

೧೯೩೫ : ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ (ಪ್ರಥಮ ದರ್ಜೆ); ಮಹಾರಾಜರಿಂದ ಶಿಷ್ಯವೇತನ

೧೯೩೭ : ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪರಿಚಯ; ಬಿ.ಎ. ಶಿಕ್ಷಣಕ್ಕೆಂದು ಕಾನ್ಪುರಕ್ಕೆ ಆಗಮನ

೧೯೩೯ : ಬಿ.ಎ. ಪ್ರಥಮ ದರ್ಜೆ

೧೯೪೨ : ಆರೆಸ್ಸೆಸ್‌ನ ಪ್ರಚಾರಕರಾಗಿ ಸೇರ್ಪಡೆ

೧೯೪೫ : ಉತ್ತರ ಪ್ರದೇಶದ ಸಹ ಪ್ರಾಂತ–ಪ್ರಚಾರಕರಾಗಿ

೧೯೪೮ : 'ಸಂಕ್ರಾಂತಿ', 'ಪಾಂಚಜನ್ಯ' ಪತ್ರಿಕೆಗಳ ಸಂಪಾದಕತ್ವ

೧೯೪೯ : 'ಜಗದ್ಗುರು ಶ್ರೀ ಶಂಕರಾಚಾರ್ಯ'ದ ಪ್ರಕಟಣೆ

೧೯೫೧ : ಅಕ್ಟೋಬರ್ ೨೧; ದೆಹಲಿಯಲ್ಲಿ ಜನಸಂಘದ ಉದಯ

೧೯೫೨ : ಉತ್ತರ ಪ್ರದೇಶದ ಕಾನ್ಪುರದಲ್ಲಿ ಭಾರತೀಯ ಜನಸಂಘದ ಪ್ರಥಮ ಅಖಿಲ ಭಾರತ ಅಧಿವೇಶನ; ಜನಸಂಘದ ಪ್ರಧಾನ ಕಾರ್ಯದರ್ಶಿಯ ಪದವಿ

೧೯೬೩ : ಯು.ಎಸ್.ಎ., ಯು.ಕೆ., ಯೂರೋಪಿನ ಮತ್ತು ಆಫ್ರಿಕಾದ ರಾಷ್ಟ್ರಗಳಿಗೆ ಪ್ರವಾಸ

೧೯೬೭ : ಭಾರತೀಯ ಜನಸಂಘದ ಅಖಿಲ ಭಾರತೀಯ ಅಧ್ಯಕ್ಷರಾಗಿ ಆಯ್ಕೆ

**೧೯೬೭ :** ಕೇರಳದ ಕಲ್ಲಿಕೋಟೆಯಲ್ಲಿ ಭಾರತೀಯ ಜನಸಂಘದ ಮೂರು ದಿನಗಳ ಚಾರಿತ್ರಿಕ ಮಹಾ ಅಧಿವೇಶನ

**೧೯೬೮ :** ಫೆಬ್ರುವರಿ ೧೧. ಬೆಳಗಿನ ಜಾವ ೩ ಗಂಟೆಗೆ ಉತ್ತರ ಪ್ರದೇಶದ ಮೊಘಲ್ ಸರಾಯ್‌ನಲ್ಲಿ ಹತ್ಯೆ



# ಅನುಬಂಧ – ೨

## ಕೃತಿಗಳ ವಿವರಣಾತ್ಮಕ ಸೂಚಿ*

**೧. ಸಮ್ರಾಟ್ ಚಂದ್ರಗುಪ್ತ** – ಪುಟಗಳು ೬೬, ಬೆಲೆ: ರೂ. ೧೦. ಲೋಕಹಿತ ಪ್ರಕಾಶನ, ಸಂಸ್ಕೃತಿ ಭವನ, ರಾಜೇಂದ್ರನಗರ, ಲಖ್ನೋ.

ಸಮಾಜದಲ್ಲಿನ ಸಮಷ್ಟಿ ಜೀವನದ ಭಾವನೆ ರಾಷ್ಟ್ರಜೀವನದ ಮೂಲಾಧಾರವೆಂಬುದನ್ನು ಮನಗಂಡಿದ್ದ ಚಂದ್ರಗುಪ್ತ ರಾಜ. ಭಾರತವನ್ನು ವೈಭವದ ಶಿಖರಕ್ಕೆ ಒಯ್ಯಲು ಕಾರಣಕರ್ತ ಚಂದ್ರಗುಪ್ತ. ಇಡೀ ರಾಷ್ಟ್ರಶಕ್ತಿಯ ಸೂತ್ರ ಚಾಲಕನಾಗಿ ಜಗತ್ತಿನೆದುರು ಕಂಗೊಳಿಸಿದ ಚಕ್ರಾಧಿಪತಿ ಚಂದ್ರಗುಪ್ತ ಮೌರ್ಯನ ಚರಿತ್ರೆ ಈ ಕೃತಿಯಲ್ಲಿದೆ. ರಾಷ್ಟ್ರೋತ್ಥಾನ ಸಾಹಿತ್ಯವು ೧೯೬೬ ರಲ್ಲಿ ಈ ಕೃತಿಯನ್ನು 'ಯವನವಿಜೇತ ಚಂದ್ರಗುಪ್ತ' ಎಂಬ ಹೆಸರಿನಲ್ಲಿ ಪ್ರಕಟಿಸಿತ್ತು. ಕನ್ನಡ ಕೃತಿಯ ಅನುವಾದಕರು ಶಿವರಾಮು.

**೨. ಪೊಲಿಟಿಕಲ್ ಡೈರಿ** – ಪುಟಗಳು ೨೦೧, ೧೯೬೨; ಸುರುಚಿ ಪ್ರಕಾಶನ, ಕೇಶವ ಕುಂಜ, ಝಂಡೇವಾಲಾ, ನವದೆಹಲಿ–೧೧೦೦೫೫. ಬೆಲೆ: ರೂ. ೫೫

'ಆರ್ಗನೈಸರ್' ಇಂಗ್ಲಿಷ್ ವಾರಪತ್ರಿಕೆಯಲ್ಲಿ ದೀನ್ ದಯಾಳ್ ಅವರು ಬರೆದ ಒಟ್ಟು ೪೫ ಲೇಖನಗಳ ಸಂಗ್ರಹವಿದು. ಏಪ್ರಿಲ್ ೨೭, ೧೯೫೯ರಿಂದ ಏಪ್ರಿಲ್ ೧೦,೧೯೬೬ರ ವರೆಗಿನ ಲೇಖನಗಳು ಇದರಲ್ಲಿವೆ. ಅಂದಿನ ಕಾಂಗ್ರೆಸ್ಸಿನ ಹಿರಿಯರೂ, ರಾಷ್ಟ್ರೀಯವಾದಿಗಳೂ ಆದ ಡಾ. ಸಂಪೂರ್ಣಾನಂದರ ಮುನ್ನುಡಿಯೂ ಸೇರಿದೆ. ೧೯೬೮ರಲ್ಲಿ ಜೈಕೊ ಪಬ್ಲಿಷಿಂಗ್ ಹೌಸ್ ಕೂಡ ಇದನ್ನು ಪ್ರಕಟಿಸಿತ್ತು.

**೩. ವಿಚಾರ ರಶ್ಮಿ** – ೧೪೩ ಪುಟಗಳು, ಬೆಲೆ: ರೂ. ೨.೫೦. ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ೧೯೭೯.

ರಾಷ್ಟ್ರವೈಭವದ ಜೊತೆಗೆ ವ್ಯಕ್ತಿವಿಕಾಸವನ್ನು ಸಾಧಿಸಬಲ್ಲ ಅನೇಕ ವಿಚಾರಗಳನ್ನು

* ಅಸಮಗ್ರ

ಈ ಕೃತಿಯಲ್ಲಿ ಕಾಣಬಹುದು. ರಾಷ್ಟ್ರೀಯತೆ, ನಮ್ಮ ಸಂಸ್ಕೃತಿಯ ಒಳನೋಟ, ಸ್ವರಾಷ್ಟ್ರದರ್ಶನ, ನಮ್ಮ ರಾಷ್ಟ್ರದ ಆತ್ಮ ಇತ್ಯಾದಿ ವಿಚಾರಗಳ ಬಗೆಗೆ ಇಲ್ಲಿ ವಿಶದವಾಗಿ ತಿಳಿಸಲಾಗಿದೆ. ಒಟ್ಟು ೧೪ ಲೇಖನಗಳಿವೆ. ಇದು ದೀನ್ ದಯಾಳ್ ಅವರ ವಿಚಾರಗಳ ಕನ್ನಡ ಅವತರಣಿಕೆ.

**೪. ಭಾರತೀಯ ಅರ್ಥನೀತಿ :** ೧೨೬ ಪುಟಗಳು, ಬೆಲೆ: ರೂ. ೩೦. ಲೋಕಹಿತ ಪ್ರಕಾಶನ, ಸಂಸ್ಕೃತಿ ಭವನ, ರಾಜೇಂದ್ರನಗರ, ಲಖ್ನೊ–೨೨೩೦೦೪.

ಭಾರತದ ಆರ್ಥಿಕ ವ್ಯವಸ್ಥೆ ಬಗ್ಗೆ ಹಿಂದೀ ಭಾಷೆಯಲ್ಲಿ ಬರೆದಿರುವ ಕೃತಿ ಇದು. ಒಟ್ಟು ೧೨ ಲೇಖನಗಳಿವೆ. ಮನುಷ್ಯ ಮತ್ತು ಯಂತ್ರ, ಔದ್ಯೋಗಿಕ ವಿಚಾರಗಳು, ಹಣಕಾಸಿನ ವ್ಯವಸ್ಥೆ, ಕೃಷಿ ವ್ಯವಸ್ಥೆ, ಭಾರತೀಯ ಸಂಸ್ಕೃತಿಯಲ್ಲಿ ಅರ್ಥವ್ಯವಸ್ಥೆ– ಈ ವಿಚಾರಗಳನ್ನು ಕುರಿತು ಇಲ್ಲಿ ಉಪಾಧ್ಯಾಯರು ಚರ್ಚಿಸಿದ್ದಾರೆ. ಅವರದ್ದೇ ಮುನ್ನುಡಿಯೂ ಇದೆ.

**೫. Integral Humanism :** ೮೧ ಪುಟಗಳು, ಬೆಲೆ: ರೂ. ೧.೫೦. ಪ್ರಕಾಶಕರು : ಭಾರತೀಯ ಜನಸಂಘ, ಸೆಂಟ್ರಲ್ ಆಫೀಸ್, ವಿಠಲ್‌ಬಾಯಿ ಪಟೇಲ್ ಭವನ, ನವದೆಹಲಿ–೧.

ರಾಜಕೀಯ, ಆರ್ಥಿಕ, ಸಾಮಾಜಿಕ ಚಿಂತನೆಗಳ ಸಾರ ಈ ಕೃತಿಯಲ್ಲಿದೆ. ಭಾರತೀಯ ಸಂಸ್ಕೃತಿಯ ತಳಹದಿ, ಏಕಾತ್ಮಕತೆ. ದೇಹ, ಮನಸ್ಸು, ಬುದ್ಧಿ, ಆತ್ಮ ಇವೆಲ್ಲವುಗಳ ಒಟ್ಟು ಮುನ್ನಡೆಯೇ ಭಾರತೀಯ ಆದರ್ಶ. ಈ ಎಲ್ಲದರ ಕುರಿತು ಈ ಕೃತಿಯಲ್ಲಿ ತಿಳಿಸಲಾಗಿದೆ. ದೀನ್ ದಯಾಳ್ ಅವರ ಆಚಾರ್ಯ ಕೃತಿ. ಅವರ ಚಿಂತನೆಯ ಬೀಜರೂಪ ಇದರಲ್ಲಿದೆ. ಇದನ್ನು ಕುರಿತು ದತ್ತೋಪಂತ ಠೇಂಗಡಿ, ಗೋಳ್‌ವಾಳ್ಕರ್, ದೇವೇಂದ್ರ ಸ್ವರೂಪ್ ಮುಂತಾದವರ ವ್ಯಾಖ್ಯಾನ ರೂಪದ ಕೃತಿಗಳೂ ಹೊರಬಂದಿವೆ.

**೬. Devaluation - A Great Fall :** ೪೪ ಪುಟಗಳು, ೭೫ ಪೈಸೆ ಪ್ರಕಾಶಕರು : ಭಾರತೀಯ ಜನಸಂಘ, ಆಂಧ್ರಪ್ರದೇಶ, ವಿಜಯವಾಡ–೨.

೧೯೬೬ರ ಸುಮಾರಿನ ದೇಶದಲ್ಲಿನ ಹಣದುಬ್ಬರದಿಂದಾದ ಗ್ರಾಹಕನ ಪರಿಸ್ಥಿತಿ ಬಗ್ಗೆ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ವೈಫಲ್ಯವನ್ನು ತಿಳಿಸಿದ್ದಾರೆ. ದೀನ್ ದಯಾಳ್ ಅವರ ಆರ್ಥಿಕ ವಿಶ್ಲೇಷಣೆಯ ಸ್ವರೂಪವನ್ನು ಇದು ತಿಳಿಸುತ್ತದೆ.



**೭. The Two Plans : Promises, Performnnces, Prospects :** ೧೯೫೮, ೨೮೨ ಪುಟಗಳು, ಬೆಲೆ: ರೂ. ೭.೫೦. ರಾಷ್ಟ್ರಧರ್ಮ ಪ್ರಕಾಶನ ಲಿಮಿಟೆಡ್, ಗೌತಮಬುದ್ಧ ಮಾರ್ಗ, ಲಖ್ನೋ.

ಈ ಕೃತಿಯು ಭಾರತದ ಮೊದಲನೆಯ ಎರಡು ಪಂಚವಾರ್ಷಿಕ ಯೋಜನೆಗಳ ವಿಮರ್ಶೆಯಾಗಿದೆ. ಅರ್ಥಶಾಸ್ತ್ರದ ಅಧ್ಯಯನಕ್ಕೆ ಅಮೂಲ್ಯ ಕೊಡುಗೆ. ೨೧ ಅಧ್ಯಾಯಗಳಿವೆ.

**೮. ಅಖಂಡ್ ಭಾರತ್ ಔರ್ ಮುಸ್ಲಿಂ ಸಮಸ್ಯಾಯೇಂ :** ೧೯೮೮; ೩೧ ಪುಟಗಳು, ಬೆಲೆ: ರೂ. ೨. ಪ್ರಕಾಶಕರು : ಜಾಗೃತಿ ಪ್ರಕಾಶನ, ಎಫ್–೧೦೬, ಸೆಕ್ಟರ್–೨೭, ನೋಯ್ಡಾ – ೨೦೧೩೦೧, ಗಾಜಿಯಾಬಾದ್ ಜಿಲ್ಲೆ (ಉತ್ತರ ಪ್ರದೇಶ)

ಭಾರತ ವಿಭಜನೆಗೊಂಡ ಅನಂತರ ಉಂಟಾದ ದುಷ್ಪರಿಣಾಮಗಳನ್ನು ಕುರಿತ ವಿವರಗಳು ಈ ಕೃತಿಯಲ್ಲಿವೆ.

**೯. ರಾಷ್ಟ್ರಜೀವನ್ ಕೀ ಸಮಸ್ಯಾಯೇಂ** : ೨೮–೧೧–೨೦೦೯; ೩೪ ಪುಟಗಳು, ಬೆಲೆ: ರೂ. ೧೦. ಪ್ರಕಾಶಕರು : ಲೋಕಹಿತ ಪ್ರಕಾಶನ, ಸಂಸ್ಕೃತಿ ಭವನ, ರಾಜೇಂದ್ರನಗರ, ಲಕ್ನೋ ೨೨೬೦೦೪

ಭಾರತೀಯ ರಾಜಕೀಯದ ಮೌಲಿಕತೆ ಬಗ್ಗೆ, ರಾಷ್ಟ್ರಭಾಷೆಯ ಸಮಸ್ಯೆ, ಅಖಂಡ ಭಾರತ, ಭಾರತೀಯ ಸಂವಿಧಾನದ ವಿಮರ್ಶೆ, ಸಮಾಜವಾದ, ಪ್ರಜಾಪ್ರಭುತ್ವ ಮತ್ತು ಹಿಂದುತ್ವ – ಇವುಗಳನ್ನು ಕುರಿತು ಈ ಕೃತಿಯಲ್ಲಿ ಚರ್ಚಿಸಲಾಗಿದೆ.

**೧೦. ರಾಷ್ಟ್ರಜೀವನ್ ಕೀ ದಿಶಾ :** ೨೨–೧–೨೦೦೮; ೧೯೦ ಪುಟಗಳು, ಬೆಲೆ: ರೂ. ೪೦. ಲೋಕಹಿತ ಪ್ರಕಾಶನ, ಸಂಸ್ಕೃತಿ ಭವನ, ರಾಜೇಂದ್ರ ನಗರ(ಪೂರ್ವ) ಲಖ್ನೋ.

ರಾಷ್ಟ್ರ ಮತ್ತು ರಾಜ್ಯ, ರಾಷ್ಟ್ರದ ಆತ್ಮದ ಸ್ವರೂಪ, ಜಾತ್ಯತೀತದ ಅರ್ಥ ಮತ್ತು ಅನರ್ಥ, ವ್ಯಕ್ತಿ ಮತ್ತು ಸಮಾಜದ ಸಂಬಂಧ, ವಿಕೇಂದ್ರೀಕರಣ, ನಮ್ಮ ರಾಷ್ಟ್ರಧ್ವಜ, ರಾಷ್ಟ್ರದ ಪ್ರಕೃತಿ ಮತ್ತು ವಿಕೃತಿ, ರಾಷ್ಟ್ರವಾದ, ಸ್ವದೇಶಿ ಮತ್ತು ವಿದೇಶಿ : ಗುರುಪೂಜೆ–ಇವುಗಳನ್ನು ಕುರಿತ ಚರ್ಚೆ. ಒಟ್ಟು ೧೮ ಲೇಖನಗಳಿವೆ.

**೧೧. ಸ್ವತಂತ್ರತಾ ಕೀ ಸಾಧನಾ ಔರ್ ಸಿದ್ಧಿ :** ೧೯೮೭; ೧೫ ಪುಟಗಳು, ಬೆಲೆ: ರೂ. ೧. ಪ್ರಕಾಶಕರು : ಜಾಗೃತಿ ಪ್ರಕಾಶನ, ಎಫ್–೧೦೬, ಸೆಕ್ಟರ್–೨೮, ನೋಯ್ಡಾ–೨೦೧೩೦೧. ಗಾಜಿಯಾಬಾದ್ ಜಿಲ್ಲೆ, ಉತ್ತರ ಪ್ರದೇಶ

ಸ್ವರಾಜ್ಯದ ಕಲ್ಪನೆ, ಪ್ರಜಾಪ್ರಭುತ್ವ ಮತ್ತು ಸಮಾಜವಾದ, ಸ್ವಾತಂತ್ರ್ಯೋತ್ತರ ಭಾರತೀಯ ಚಿಂತನೆ, ರಾಜನೀತಿ ಮತ್ತು ಸಂಸ್ಕೃತಿ, ಪ್ರಜಾತಂತ್ರ ಮತ್ತು ಸಮಾಜವಾದದಲ್ಲಿನ ಸಮನ್ವಯ ಮತ್ತು ಸಂಬಂಧಗಳನ್ನು ಕುರಿತು ಹಾಗೂ ವಿದೇಶಿಯ ಪ್ರಭಾವದಿಂದ ಮುಕ್ತಗೊಂಡ ಹೊಸ ಆರೋಗ್ಯ ಪೂರ್ಣ ಮತ್ತು ಚೈತನ್ಯಮಯೀ ರಾಷ್ಟ್ರ ನಿರ್ಮಾಣದ ಆವಶ್ಯಕತೆಯನ್ನು ಕುರಿತು ಈ ಕೃತಿಯಲ್ಲಿ ವಿವರವಾಗಿ ತಿಳಿಸಲಾಗಿದೆ.

**೧೨. ಜಗದ್ಗುರು ಶ್ರೀ ಶಂಕರಾಚಾರ್ಯ** : ೨೦೦೪; ೧೦೩ ಪುಟಗಳು, ಬೆಲೆ: ರೂ. ೧೨. ಪ್ರಕಾಶಕರು : ಲೋಕಹಿತ ಪ್ರಕಾಶನ, ಸಂಸ್ಕೃತಿ ಭವನ, ರಾಜೇಂದ್ರ ನಗರ, ಲಖ್ನೋ–೨೨೬೦೦೪.

ಆದಿ ಶಂಕರಾಚಾರ್ಯರ ಬಾಲ್ಯಜೀವನ, ಶಿಕ್ಷಣ ಮತ್ತು ಜೀವನ ಧ್ಯೇಯ ಮತ್ತು ಪಂಥದ ವಿಚಾರ, ಜ್ಞಾನ, ಕರ್ಮ ಮತ್ತು ಭಕ್ತಿಯ ಸಮನ್ವಯದ ಜೊತೆಗೆ ವಿವಿಧತೆಯಲ್ಲಿ ಏಕತೆಯ ಸೂತ್ರ ಅಳವಡಿಸಿಕೊಂಡು ಸಮಾಜ ಮತ್ತು ರಾಷ್ಟ್ರ ಸಂಘಟನೆಯನ್ನು ನಡೆಸಿದ ಕಥನವಿದು. ಕರ್ನಾಟಕದ ರಾಷ್ಟ್ರೋತ್ಥಾನ ಸಾಹಿತ್ಯದವರು ಇದನ್ನು ಕನ್ನಡದಲ್ಲಿ ಪ್ರಕಟಿಸಿದ್ದಾರೆ.



# ಅನುಬಂಧ – ೩

## ದೀನ್ ದಯಾಳ್ ಉಪಾಧ್ಯಾಯ ಅವರನ್ನು ಕುರಿತ ಕೃತಿಗಳ ವಿವರಣಾತ್ಮಕ ಸೂಚಿ*

**Pandit Deen Dayal Upadhyaya : Ideology and Perception :** ಒಟ್ಟು ಏಳು ಸಂಪುಟಗಳಿವೆ. ಆರ್ಥಿಕ ನೀತಿ, ಕೃಷಿ ಮತ್ತು ಸ್ವಾವಲಂಬನೆ, ಕೈಗಾರೀಕರಣದ ಮಾರ್ಗಸೂಚಿ, ಯೋಜನೆಗಳು, ರಾಷ್ಟ್ರದ ಪರಿಕಲ್ಪನೆ ಇತ್ಯಾದಿ ಕುರಿತಂತೆ ವಿವಿಧ ಲೇಖಕರ ಚರ್ಚೆ ಇದೆ.

೧. **Pandit Deen Dayal Upadhyaya : Ideology and Perception (Vol. 1) – An Inquest :** ಲೇಖಕರು : ಡಿ.ಬಿ. ಠೇಂಗಡಿ; ಅನುವಾದ : ಎಂ.ಕೆ. ಪರಾಂಜಪೆ, ೧೫೨ ಪುಟಗಳು, ಬೆಲೆ: ರೂ. ೮೦.
ಪ್ರಕಾಶಕರು : ಸುರುಚಿ ಪ್ರಕಾಶನ, ನವದೆಹಲಿ ೧೧೦೦೫೫.
ದೀನ್ ದಯಾಳ್ ಅವರ ಜೀವನ–ಮರಣದ ಬಗ್ಗೆ ಈ ಕೃತಿಯಲ್ಲಿ ತಿಳಿಸಲಾಗಿದೆ.

೨. **Pandit Deen Dayal Upadhyaya : Ideology and Perception (Vol. 2) – Integral Humanism :**
ವಿವಿಧ ಲೇಖಕರು ; ಅನುವಾದಕರು : ಎಂ.ಕೆ. ಪರಾಂಜಪೆ ; ಡಿ.ಆರ್. ಕುಲಕರ್ಣಿ, ೯೯ ಪುಟಗಳು, ಬೆಲೆ: ರೂ. ೭೦.
ಪ್ರಕಾಶಕರು : ಸುರುಚಿ ಪ್ರಕಾಶನ, ನವದೆಹಲಿ ೧೧೦೦೫೫.

ಏಕಾತ್ಮ ಮಾನವದರ್ಶನವನ್ನು ಕುರಿತು ವಿಶದವಾಗಿ ವಿವರಿಸಲಾಗಿದೆ. ಧರ್ಮ, ಕಾಮ, ಅರ್ಥ, ಮೋಕ್ಷಗಳನ್ನು ಅರಿಯಬೇಕಾದ ರೀತಿಯನ್ನು ಇಲ್ಲಿ ತಿಳಿಸಲಾಗಿದೆ. ಸಮಷ್ಟಿ ಪುರುಷಾರ್ಥ, ಸಮಷ್ಟಿ ವ್ಯಕ್ತಿಗತವಾಗಿ ಹಾಗೂ ಸಾಮಾಜಿಕವಾಗಿ ಬೀರುವ ಪರಿಣಾಮವನ್ನು ತಿಳಿಯಬಹುದು. ಏಕಾತ್ಮಕತೆಯು ಸಾಮಾಜಿಕ ಪದ್ಧತಿಯಲ್ಲಿ ಬೀರುವ ಪಾತ್ರವನ್ನು ಇಲ್ಲಿ ತಿಳಿಸಲಾಗಿದೆ.

* ಅಸಮಗ್ರ

**೩. Pandit Deen Dayal Upadhyaya : Ideology and Perception (Vol. 3) - Political Thought**

ಲೇಖಕರು : ಬಿ.ಕೆ.ಕೇಳ್ಕರ್ ; ಅನುವಾದ : ಎಲ್.ಎಂ. ಮಾಥುರ್, ೧೫೪ ಪುಟಗಳು, ಬೆಲೆ: ರೂ. ೮೦.
ಪ್ರಕಾಶಕರು : ಸುರುಚಿ ಪ್ರಕಾಶನ, ಕೇಶವ್ ಕುಂಜ, ಝಂಡೇವಾಲಾ, ನ್ಯೂ ಡೆಲ್ಲಿ – ೧೧೦೦೫೫.

ರಾಜಕೀಯ ಪಕ್ಷವಾಗಿ ಜನಸಂಘ, ಜನಸಂಘದ ಉದಯ, ಜನಸಂಘದ ರಾಷ್ಟ್ರೀಯ ದೃಷ್ಟಿಕೋನ, ಪಕ್ಷದ ಸಂಘಟಕರಾಗಿ ಉಪಾಧ್ಯಾಯರ ಕಾರ್ಯಗಳು ಇತ್ಯಾದಿ ವಿಷಯಗಳ ಬಗ್ಗೆ ಈ ಕೃತಿ ತಿಳಿಸುತ್ತದೆ.

**೪. Pandit Deen Dayal Upadhyaya : Ideology and Perception (Vol. 4) – Integral Ecomic Policy**

ಲೇಖಕರು : ಶರದ್ ಆನಂದ್ ಕುಲಕರ್ಣಿ, ೧೫೦ ಪುಟಗಳು, ಬೆಲೆ: ರೂ. ೭೦.
ಪ್ರಕಾಶಕರು : ಸುರುಚಿ ಪ್ರಕಾಶನ, ಕೇಶವ್ ಕುಂಜ, ಝಂಡೇವಾಲಾ, ನ್ಯೂಡೆಲ್ಲಿ – ೧೧೦೦೫೫.

ಕೃಷಿ ಮತ್ತು ಸ್ವಾವಲಂಬನೆ, ಆರ್ಥಿಕನೀತಿ–ನಿಯಮ ಹಾಗೂ ಭಾರತೀಯ ಸಂಸ್ಕೃತಿಯಲ್ಲಿ ಮೌಲ್ಯ ನ್ಯಾಯಾಧಿಕರಣ, ಕೈಗಾರೀಕರಣದ ಮಾರ್ಗಸೂಚಿ, ಸ್ವದೇಶಿ ಮತ್ತು ಸ್ವಾವಲಂಬನೆಯ ಮೇಲೆ ವಿದೇಶಿ ನೆರವಿನ ಗ್ರಹಣ, ಯೋಜನೆಗಳು ಇತ್ಯಾದಿ ವಿಷಯಗಳನ್ನು ಕುರಿತ ವಿವರಗಳು ಈ ಕೃತಿಯಲ್ಲಿ ದಾಖಲಾಗಿದೆ.

**೫. Pandit Deen Dayal Upadhyaya : Ideology and Perception (Vol. 5) – Concept of Rashtra**

ಲೇಖಕರು : ಸಿ.ಪಿ. ಭಿಷೀಕರ್; ಅನುವಾದ : ಯಶವಂತ್‌ರಾವ್ ಕೇಳ್ಕರ್, ೯೨ ಪುಟಗಳು, ಬೆಲೆ: ರೂ. ೯೦.
ಪ್ರಕಾಶಕರು : ಸುರುಚಿ ಪ್ರಕಾಶನ, ನವದೆಹಲಿ – ೧೧೦೦೫೫.

ರಾಷ್ಟ್ರ ಮತ್ತು ರಾಷ್ಟ್ರೀಯತೆಯನ್ನು ಕುರಿತು ದೀನ್ ದಯಾಳ್ ಅವರ ದೃಷ್ಟಿಕೋನವನ್ನು ಇಲ್ಲಿ ತಿಳಿಸಲಾಗಿದೆ. ಭಾರತವು ಹಿಂದೂ ರಾಷ್ಟ್ರವೆನ್ನುವುದು ಪ್ರಶ್ನಾತೀತ. ರಾಷ್ಟ್ರ ಮತ್ತು ರಾಜ್ಯ, ವಿವಿಧತೆಯಲ್ಲಿ ಏಕತೆ, ಇಡೀ ಲೋಕವೇ ನನ್ನ ಮನೆ, ಅಲ್ಪಸಂಖ್ಯಾತರ ಸಮಸ್ಯೆಯ ಪರಿಹಾರಗಳು, ಹಿಂದೂಗಳೆಲ್ಲರೂ ಒಂದೇ– ಇತ್ಯಾದಿ ವಿಷಯುಗಳನ್ನು ಕುರಿತು ಇಲ್ಲಿ ವಿಶದವಾಗಿ ಚರ್ಚಿಸಲಾಗಿದೆ.



**೬. Pandit Deen Dayal Upadhyaya : Ideology and Perception (Vol. 6) – Politics for Nation's Sake**

ಲೇಖಕರು : ಬಿ.ಎನ್. ಜೋಗ್ ; ಅನುವಾದ : ಪ್ರೊ. ಎಂ.ಕೆ. ಪರಂಜಾಪೆ, ೧೫೮ ಪುಟಗಳು, ಬೆಲೆ: ರೂ. ೯೦. ಪ್ರಕಾಶಕರು : ಸುರುಚಿ ಪ್ರಕಾಶನ, ನವದೆಹಲಿ – ೧೧೦೦೫೫.

ರಾಷ್ಟ್ರ ರಾಜಕಾರಣವನ್ನು ಕುರಿತು ತಿಳಿಸಲಾಗಿದೆ. ಬ್ರಿಟಿಷರ ಆಡಳಿತ ವರವೋ–ಶಾಪವೋ, ಭಾಷೆ–ಮಾತೃಭಾಷೆ, ಜನಸಂಘ ಏಕೆ?, ಪಾಕಿಸ್ತಾನ ಒಂದು ಸವಾಲು ಇತ್ಯಾದಿ ವಿಷಯಗಳನ್ನು ಈ ಕೃತಿ ಚರ್ಚಿಸುತ್ತದೆ.

**೭. Pandit Deen Dayal Upadhyaya : Ideology and Perception (Vol. 7) – A Profile**

ಲೇಖಕರು : ವಿ.ಎನ್. ದೇವಧರ್ ; ಅನುವಾದಕರು : ಸಿ.ಕೆ. ಭಾರದ್ವಾಜ್, ಎಂ.ಕೆ. ಪರಾಂಜಪೆ, ೧೦೮ ಪುಟಗಳು, ಬೆಲೆ: ರೂ. ೬೦. ಪ್ರಕಾಶಕರು : ಸುರುಚಿ ಪ್ರಕಾಶನ, ಕೇಶವ ಕುಂಜ, ಝಂಡೇವಾಲಾ, ನವದೆಹಲಿ – ೧೧೦೦೫೫.

ದೀನ್ ದಯಾಳ್ ಅವರ ಕಲ್ಲಿಕೋಟೆಯ ಅಧ್ಯಕ್ಷ ಭಾಷಣ, ಮತದಾನದ ಪ್ರಾಮುಖ್ಯ, ಮೂಲಭೂತ ತತ್ವಗಳು, ರಾಷ್ಟ್ರೀಯತೆಯ ಪವಿತ್ರಧಾರೆಯ ಕುರಿತು ಇಲ್ಲಿ ಚಿಂತನೆಗಳಿವೆ.

**೮. Economic Philosophy of Deen Dayal Upadhyaya** ಲೇಖಕರು : ಡಾ. ಮಹೇಶ್ ಚಂದ್ರ ಶರ್ಮಾ. ೧೦೦ ಪುಟಗಳು, ಬೆಲೆ: ರೂ. ೧೫೦. ಪ್ರಕಾಶಕರು : ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಫೌಂಡೇಶನ್ ಫಾರ್ ಇಂಟೆಗ್ರಲ್ ಹ್ಯೂಮನಿಸಮ್, ೧೩ ಬಿ ಫಿರೋಜ್ ಶಾಹ್ ರಸ್ತೆ, ನವದೆಹಲಿ–೧.

ಆರ್ಥಿಕತೆ ಎಂದರೆ ಹಣಕಾಸು, ವ್ಯವಹಾರ ವಸ್ತುಗಳು ಮಾತ್ರವೇ ಅಲ್ಲದೆ ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳ ವಿವೇಚನೆಯೂ ಹೌದು. ಭಾರತದ ಅರ್ಥವ್ಯವಸ್ಥೆಯ ಪರಿಸ್ಥಿತಿ, ಆರ್ಥಿಕ ತತ್ವಜ್ಞಾನವನ್ನು ಕುರಿತು ಉಪಾಧ್ಯಾಯರು ನೀಡಿರುವ ಅರ್ಥಾಯಾಮ ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಲೇಖಕರು ಚರ್ಚಿಸಿದ್ದಾರೆ.

**೯. ಯುಗದ್ರಷ್ಟಾ ಪಂ. ದೀನ್ ದಯಾಲ್ ಉಪಾಧ್ಯಾಯ**

ಲೇಖಕರು : ರಘೋತ್ತಮ ಶುಕ್ಲಾ, ೧೬೬ ಪುಟಗಳು, ಬೆಲೆ: ರೂ. ೬೦, ೨೦೦೬.
ಪ್ರಕಾಶಕರು : ದೀನ್ ದಯಾಲ್ ಉಪಾಧ್ಯಾಯ ಪ್ರಕಾಶನ, ೧೩ ಬಿ, ದಾರೋಲ್‌ಶಫಾ, ಲಖ್ನೋ ೨೨೬೦೦೧

ದೀನ್ ದಯಾಳ್ ಅವರ ಬಾಲ್ಯ, ಶಿಕ್ಷಣ, ಆರೆಸ್ಸೆಸ್ ಪರಿಚಯ, ರಾಜಕೀಯ ಆಂದೋಳನಗಳು, ಅವರ ಅಂತಿಮ ಭಾಷಣ ಇತ್ಯಾದಿ ವಿಚಾರಗಳ ಕುರಿತು ಈ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಒಟ್ಟು ೨೩ ಲೇಖನಗಳಿವೆ.

**೧೦. Pandit Deen Dayal Upadhyaya : A Profile**
ಸಂಪಾದಕರು : ಸುಧಾಕರ್ ರಾಜೇ, ೨೧೨ ಪುಟಗಳು, ಬೆಲೆ: ರೂ. ೧೨. ೧೯೭೨, ೧೯೯೨.
ಪ್ರಕಾಶಕರು : ದೀನ್ ದಯಾಳ್ ರಿಸರ್ಚ್ ಇನ್ಸ್‌ಟಿಟ್ಯೂಟ್, ೭– ಇ, ಝುಂಡೇವಾಲಾ ಎಕ್ಸ್‌ಟೆನ್ಷನ್, ನವದೆಹಲಿ–೫೫.

ಪಂ. ದೀನ್‌ದಯಾಳ್ ಅವರ ಜೀವನ ದರ್ಶನ, ಅವರ ಮರಣ ಮತ್ತು ಶ್ರದ್ಧಾಂಜಲಿಗೆ ಸಂಬಂಧಿಸಿದ ಲೇಖನಗಳಿವೆ. ನಾನಾಜೀ ದೇಶಮುಖ್, ಸತ್ಯವ್ರತ ಸಿನ್ಹಾ, ಕೆ.ಆರ್. ಮಲ್ಕಾನಿ, ಅಟಲ್ ಬಿಹಾರಿ ವಾಜಪೇಯಿ, ಎಂ. ಎಸ್. ಗೋಳ್‌ವಾಳ್ಕರ್, ಡಿ. ಬಿ. ಠೇಂಗಡಿ, ಜಗದೀಶ್ ಪ್ರಸಾದ್ ಮಾಥುರ್ ಅವರ ಲೇಖನಗಳಿವೆ.

**೧೧. ಪಂಡಿತ್ ದೀನ್ ದಯಾಲ್ ಉಪಾಧ್ಯಾಯ : ವ್ಯಕ್ತಿತ್ವ್ ಔರ್ ಜೀವನ್ ದರ್ಶನ್**
ಲೇಖಕರು : ಡಾ. ಹರಿಶ್ಚಂದ್ರ ಬತರ್‌ವಾಲಾ, ೨೦ ಪುಟಗಳು, ಪ್ರಕಾಶಕರು : ದೀನ್ ದಯಾಳ್ ಶೋಧ ಸಂಸ್ಥಾನ, ನವದೆಹಲಿ–೫೫

ಏಕಾತ್ಮ ಮಾನವವಾದ, ದೀನ್ ದಯಾಳ್ ಅವರ ಜೀವನದರ್ಶನ, ಸ್ವದೇಶಿ, ಸ್ವರಾಜ್ಯ, ಸ್ವಭಾಷೆ ಇತ್ಯಾದಿ ವಿಚಾರಗಳ ಬಗೆಗೆ ಈ ಕೃತಿಯಲ್ಲಿದೆ.

**೧೨. His Legacy : Our Mission :** ಲೇಖಕರು : ಡಿ.ಬಿ.ಠೇಂಗಡಿ, ೨೪ ಪುಟಗಳು, ಬೆಲೆ ೮೦ ಪೈಸೆ, ೧೯೭೩.
ಪ್ರಕಾಶಕರು : ಜಯಭಾರತ ಪಬ್ಲಿಕೇಶನ್ಸ್, ಕಲಾಯಿ ರೋಡ್, ಕಲ್ಲಿಕೋಟೆ – ೨.

ದೀನ್ ದಯಾಳ್ ಅವರ ಸಂದೇಶ, ಜೀವನದ ಪ್ರಮುಖ ಘಟ್ಟಗಳು, ಅವರು ಬರೆದ ಕೃತಿಗಳ ಬಗೆಗೆ ಇಲ್ಲಿ ತಿಳಿಸಲಾಗಿದೆ.

**೧೩. ಪಂ. ದೀನ್ ದಯಾಲ್ ಉಪಾಧ್ಯಾಯ: ಕರ್ತೃತ್ವ್ ಏವಂ ವಿಚಾರ್**
ಲೇಖಕರು : ಡಾ. ಮಹೇಶ್ ಚಂದ್ರ ಶರ್ಮಾ, ೪೭೪ ಪುಟಗಳು, ಬೆಲೆ: ರೂ. ೪೦೦. ಪ್ರಕಾಶಕರು : ವಸುಧಾ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ೮೧೦ ಅರುಣಾಚಲ, ೧೯ ಬಾರಹ್ ಖಂಭಾ ಮಾರ್ಗ, ನವದೆಹಲಿ – ೧೧೦೦೦೧.



ಡಾ. ಮಹೇಶ್ ಚಂದ್ರ ಶರ್ಮಾರ ಪಿ.ಎಚ್.ಡಿ ಸಂಶೋಧನ ಗ್ರಂಥ, ದೀನ್‌ದಯಾಳ್ ಅವರ ಪ್ರಾರಂಭಿಕ ಜೀವನ, ರಾಷ್ಟ್ರೀಯ ಸ್ವಯಂ ಸೇವಕ ಸಂಘದೊಂದಿಗಿನ ಸಂಬಂಧ, ಜನಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ ರೀತಿ, ಸಕ್ರಿಯ ರಾಜಕಾರಣ, ಆರ್ಥಿಕ ದೃಷ್ಟಿಕೋನ ಹಾಗೂ ಚಿಂತನೆ, ಸಾಮಾಜಿಕ ಚಿಂತನೆಗಳು, ದಾರ್ಶನಿಕತೆ, ಏಕಾತ್ಮ ಮಾನವವಾದದ ಕುರಿತು ವಿಸ್ತಾರವಾಗಿ ತಿಳಿಸಲಾಗಿದೆ. ಒಟ್ಟು ೧೨ ಅಧ್ಯಾಯಗಳು, ಪರಾಮರ್ಶನ ಸಾಹಿತ್ಯವೂ ಸೇರಿದೆ. ಇದರ ಅನುವಾದವನ್ನು ಮೊದಲನೆಯ ಸಂಪುಟದ ೨ನೆಯ ಭಾಗವಾಗಿ ಸೇರಿಸಿದೆ.

**೧೪. ತತ್ವದರ್ಶೀ ಪಂ. ದೀನ್‌ದಯಾಳ್ ಉಪಾಧ್ಯಾಯ**
ಲೇಖಕರು : ಹೃದಯ ನಾರಾಯಣ ದೀಕ್ಷಿತ್, ೧೨೫ ಪುಟಗಳು, ಬೆಲೆ: ರೂ. ೫೫. ಪ್ರಕಾಶಕರು : ದೀನ್‌ದಯಾಳ್ ಉಪಾಧ್ಯಾಯ ಪ್ರಕಾಶನ, ೧೨–ಬಿ, ದಾರುಲ್ ಶಫಾ, ಲಖ್ನೋ–೨೨೬೦೦೧.

ಉಪಾಧ್ಯಾಯರ ಜನ್ಮ, ಬಾಲ್ಯ, ಯೌವನದ ಕುರಿತು ಮಾಹಿತಿ ಇದೆ. ನಪಾಸಾಗುತ್ತಿದ್ದ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಜೀರೋ ಅಸೋಸಿಯೇಷನ್, ರಾಷ್ಟ್ರೀಯ ಪರಮವೈಭವದ ಪ್ರತಿಜ್ಞೆ, ರಾಷ್ಟ್ರಧರ್ಮ, ಭಾರತೀಯ ಜನಸಂಘದ ಧ್ಯೇಯ, ಆದರ್ಶ ಚುನಾವಣಾ ಅಭಿಯಾನ, ಅಖಂಡ ಭಾರತವೇ ನಮ್ಮ ಶ್ರದ್ಧೆ, ಏಕಾತ್ಮ ಮಾನವವಾದವೇ ಪರಿಪೂರ್ಣ ಮಾನವವಾದ ಇತ್ಯಾದಿ ದೀನ್‌ದಯಾಳ್ ಅವರ ವಿಚಾರಧಾರೆಗಳನ್ನು ಇಲ್ಲಿ ವಿವರಿಸಲಾಗಿದೆ. ೨೦ ಅಧ್ಯಾಯಗಳಿರುವ ವಿಮರ್ಶಾತ್ಮಕ ಕೃತಿ ಇದು.

**೧೫. ಪಂ. ದೀನ್ ದಯಾಲ್ ಉಪಾಧ್ಯಾಯ : ದರ್ಶನ್, ಅರ್ಥ್‌ನೀತಿ ಔರ್ ರಾಜನೀತಿ**
ಲೇಖಕರು : ಹೃದಯ ನಾರಾಯಣ ದೀಕ್ಷಿತ್, ೧೯೮ ಪುಟಗಳು, ಬೆಲೆ: ರೂ. ೧೫೦. ಪ್ರಕಾಶಕರು : ಪುಸ್ತಕ ಪಥ, ೮೩/೪, ೪ನೇ ಮಹಡಿ, ಭಾರತ ನಗರ, ನವದೆಹಲಿ – ೨೫.

ದೀನ್ ದಯಾಳ್ ಅವರನ್ನು ಕುರಿತಂತೆ ವಿದ್ವಾಂಸರ ಹೇಳಿಕೆಗಳು, ಅವರ ಜೀವನರೀತಿ, ಆರ್ಥಿಕ ಹಾಗೂ ರಾಜಕೀಯ ದೃಷ್ಟಿಕೋನ, ಅಂಬೇಡ್ಕರ್ ಹಾಗೂ ದೀನ್ ದಯಾಳ್ ಅವರ ವಿಚಾರದಲ್ಲಿ ರಾಷ್ಟ್ರೀಯತೆಯನ್ನು ಕುರಿತ ಏಕಾತ್ಮ ಮಾನವದರ್ಶನ ಹಾಗೂ ಶಂಕರಾಚಾರ್ಯರ ಅದ್ವೈತ ನಿಲುವುಗಳು ಇತ್ಯಾದಿ ವಿಚಾರಗಳಿವೆ. ಒಟ್ಟು ೧೨ ಅಧ್ಯಾಯಗಳಿರುವ ಗ್ರಂಥ.

**೧೬. ಧರ್ಮ್ ಔರ್ ವಿಜ್ಞಾನ್ ತಥಾ ಏಕಾತ್ಮ ಮಾನವದರ್ಶನ್ : ೨೫ ಸೆಪ್ಟೆಂಬರ್ ೨೦೦೪, ದೀನ್ ದಯಾಳ್ ಸ್ಮೃತಿ ವ್ಯಾಖ್ಯಾನ**
ಲೇಖಕರು : ಸುರೇಶ್ ಸೋನಿ, ೩೨ ಪುಟಗಳು, ಪ್ರಕಾಶಕರು : ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಫೌಂಡೇಶನ್ ಫಾರ್, ಇಂಟೆಗ್ರಲ್ ಹ್ಯೂಮನಿಸಂ ಕಾರ್ಯಲಯ, ೭– 'ಇ', ಸ್ವಾಮಿ ರಾಮತೀರ್ಥ ನಗರ, ಝಂಡೇವಾಲಾ, ನವದೆಹಲಿ–೧೧೦೦೫೫.

ದೀನ್ ದಯಾಳ್ ಅವರ ಜೀವನದ ವಿಚಾರ ಸಂಕಿರಣದಲ್ಲಿ ಧರ್ಮ ಮತ್ತು ವಿಜ್ಞಾನ ಅಥವಾ ಏಕಾತ್ಮ ಮಾನವದರ್ಶನವನ್ನು ಕುರಿತು ನಡೆದ ವಿಚಾರ ಸಂಕಿರಣದಲ್ಲಿನ ಪ್ರಮುಖ ಅಂಶಗಳನ್ನು ಈ ಕೃತಿಯಲ್ಲಿ ಒಗ್ಗೂಡಿಸಲಾಗಿದೆ.

**೧೭. ಪಂ. ದೀನ್ ದಯಾಲ್ ಉಪಾಧ್ಯಾಯ ಔರ್ ವ್ಯಾವಹಾರಿಕ್ ರಾಜನೀತಿ: ೨೫ ಜನವರಿ ೨೦೦೮, (ಪರಿಸಂವಾದ)** ೪೦ ಪುಟಗಳು,
ಪ್ರಕಾಶಕರು : ಏಕಾತ್ಮ ಮಾನವದರ್ಶನ ಅನುಸಂಧಾನ ಮತ್ತು ವಿಕಾಸ ಪ್ರತಿಷ್ಠಾನ, ನವದೆಹಲಿ.

ಏಕಾತ್ಮ ಮಾನವದರ್ಶನ ಅನುಸಂಧಾನ ಮತ್ತು ವಿಕಾಸ ಪ್ರತಿಷ್ಠಾನದ ಸ್ಥಾಪನೆಯ ದಿವಸದ ಅಂಗವಾಗಿ ದಿನಾಂಕ ೨೫–೧–೨೦೦೮ ರಂದು ಆಯೋಜಿಸಿದ ಸಂವಾದದ ಭಾಷಣಗಳನ್ನು ಈ ಕೃತಿಯಲ್ಲಿ ದಾಖಲಿಸಲಾಗಿದೆ.

**೧೮. His Last Message :** ೧೭ ಪುಟಗಳು, ಬೆಲೆ: ೨೫ ಪೈಸೆ, ೧೯೬೮
ಪ್ರಕಾಶಕರು : ಪ್ರಕಾಶನ ವಿಭಾಗ, ರಾಷ್ಟ್ರೀಯ ಸ್ವಯಂಸೇವಕ ಸಂಘ, ಕರ್ನಾಟಕ.

ದಿನಾಂಕ ೨–೧–೧೯೬೮ ರಂದು ಕರ್ನಾಟಕದ ದೊಡ್ಡಬಳ್ಳಾಪುರದಲ್ಲಿ ಸ್ವಯಂಸೇವಕರನ್ನು ಉದ್ದೇಶಿಸಿ ಮಾತನಾಡಿದ ೮೦ ನಿಮಿಷಗಳ ಭಾಷಣವನ್ನು ಈ ಪುಸ್ತಕದಲ್ಲಿ ದಾಖಲಿಸಲಾಗಿದೆ.

**೧೯. ಪಂ. ದೀನ್ ದಯಾಲ್ ಸ್ಮೃತಿ ವ್ಯಾಖ್ಯಾನ್ – ವಿಚಾರಧಾರಾ ಏವಂ ಶಾಸನ್**
ಲೇಖಕರು : ಪ್ರೊ. ಬಲವಂತ ಪರಶುರಾಮ ಆಪ್ಟೆ, ೨೦೦೯. ಪ್ರಕಾಶಕರು : ದೀನ್ ದಯಾಳ್ ಶೋಧ ಸಂಸ್ಥಾನ ಹಾಗೂ ಏಕಾತ್ಮ ಮಾನವದರ್ಶನ್ ಅನುಸಂಧಾನ್ ಏವಂ ವಿಕಾಸ್ ಪ್ರತಿಷ್ಠಾನ್, ನವದೆಹಲಿ. ಪುಟ: ೪೮, ಪ್ರಕಟಣೆ : ೨೦೦೯.

ದೀನ್ ದಯಾಳ್ ಅವರ ವಿಚಾರಧಾರೆಯನ್ನು ಕುರಿತು ನಡೆದ ವಿಚಾರಗೋಷ್ಠಿಯ ಹಲವು ಭಾಷಣಗಳನ್ನು ಇದರಲ್ಲಿ ಸಂಗ್ರಹಿಸಲಾಗಿದೆ.



**೨೦. ಏಕಾತ್ಮ ಮಾನವ್‌ವಾದ ಕೇ ಪ್ರಣೇತಾ ಪಂ. ದೀನ್ ದಯಾಲ್ ಉಪಾಧ್ಯಾಯ**
ಪ್ರಕಾಶಕರು : ಜನಸಂಪರ್ಕ ವಿಭಾಗ, ಲಖ್ನೋ ಉತ್ತರ ಪ್ರದೇಶ್, ೧೯೯೮, ಪುಟ: ೮, ಬೆಲೆ: ನಮೂದಿಸಿಲ್ಲ.
**೨೧. ಪಂ. ದೀನ್ ದಯಾಲ್ ಉಪಾಧ್ಯಾಯ ಸ್ಮೃತಿ – ವ್ಯಾಖ್ಯಾನ್, ಭಿವಾನಿ (ಹರಿಯಾಣ) ೨೦೦೬, ಜಯಪುರ (ರಾಜಸ್ಥಾನ) ೨೦೦೭,** ಏಕಾತ್ಮ ಮಾನವದರ್ಶನ್ ಏವಂ ವಿಕಾಸ್ ಪ್ರತಿಷ್ಠಾನ, ಪುಟ: ೪೦.

**೨೨. Encyclopaedia of Eminent Thinkers (Vol. 23) – The Political Thought of Pandit Deen Dayal Upadhyaya**
ಲೇಖಕರು : ಡಾ. ಜಯನಾರಾಯಣ ಶರ್ಮ, ಪುಟ ೧೪೪, ಬೆಲೆ ರೂ.೨೫೦, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪನಿ, ನವದೆಹಲಿ ೫೯.

**೨೩. Life- An Outline**
ಪ್ರಕಾಶಕರು : ಆರೋಗ್ಯ ಧಾಮ, ದೀನ್ ದಯಾಳ್ ರಿಸರ್ಚ್ ಇನ್ಸ್‌ಟಿಟ್ಯೂಟ್, ಚಿತ್ರಕೂಟ, ಸಂತಾ ಜಿಲ್ಲೆ, ಮಧ್ಯಪ್ರದೇಶ. ಪುಟ:೧೦.

**೨೪. Virāṭ Puruṣ and Puruṣārth (Cosmic Life and Ends of Life)** – ಡಾ. ವಿದ್ಯಾನಿವಾಸ ಮಿಶ್ರಾ, ೨೦೦೧.

**೨೫. Patrakār Deen Dayāl Upādhyāy :** ದೀನ್ ದಯಾಳ್ ಅವರ ಪತ್ರಕರ್ತ ಜೀವನ, ಧೋರಣೆ ಕುರಿತ ವಿಚಾರಗೋಷ್ಠಿಯ ಲೇಖನ ರೂಪದ ಪುಸ್ತಕ. ಇಂಗ್ಲಿಷಿನಲ್ಲಿದೆ. ಪುಟಗಳು ೪೦, ೨೦೦೩.

**೨೬. ಸಾಹಿತ್ಯಕಾರ್ ದೀನ್ ದಯಾಲ್ :** ದೀನ್ ದಯಾಳ್ ಅವರ ಜಗದ್ಗುರು ಶ್ರೀ ಶಂಕರಾಚಾರ್ಯ, ಸಮ್ರಾಟ್ ಚಂದ್ರಗುಪ್ತ ಎಂಬ ಎರಡು ಕೃತಿಗಳ ಮೇಲಿನ ವಿಚಾರಗೋಷ್ಠಿಯ ಲೇಖನಗಳ ಪುಸ್ತಕ ರೂಪ. ಹಿಂದಿಯಲ್ಲಿದೆ.

**೨೭. ಪಂ. ದೀನ್ ದಯಾಳ್ ಉಪಾಧ್ಯಾಯ : ಸಮಾಜವಿಜ್ಞಾನ್ ಕೋ ದೇನ್ :** ಮುನೀಂದ್ರ ಮೋಹನ ಚತುರ್ವೇದಿ, ಶೋಧ ಪ್ರಕಾಶನ ಗೃಹ, ಇಟಾವಾ, ೧೯೮೦, ೧೯೮೮, ಪುಟ: ೩೦, ಬೆಲೆ: ರೂ. ೧೦
**೨೮. 'ಸಮಗ್ರ ದೃಷ್ಟಿ' ಹಿಂದೀ ಪತ್ರಿಕೆಯ ವಿವಿಧ ಸಂಚಿಕೆಗಳು**